DAMAGE BOOK

THE BOOK WAS DRENCHED

UNIVERSAL
LIBRARY
OU_202083
UNIVERSAL
LIBRARY

॥ ಶ್ರೀಃ ॥

ಏಳನೇ ಅಧ್ಯಾಯವು.

ಪೀ—(1) ಆರನೇ ಅಧ್ಯಾಯದಲ್ಲಿ ಪರಬ್ರಹ್ಮನ ಅಪರೋಕ್ಷಜ್ಞಾನಕ್ಕೆ ಮುಖ್ಯಸಾಧನವಾದ ಧ್ಯಾನ ರೂಪ ಯೋಗವನ್ನು ನಿರೂಪಿಸಿರುವರು ಆ ಧ್ಯಾನವನ್ನು ಭಕ್ತಿಪೂರ್ವಕವಾಗಿ ಮಾಡಿದರೇನೇ ಅದು ಜ್ಞಾನಕ್ಕೆ ಸಾಧನವಾಗುತ್ತದೆ ಆದಕಾರಣ ಧ್ಯಾನಕಾರಣವಾದ ಭಕ್ತಿಯು ಹುಟ್ಟುವುದಕ್ಕಾಗಿ ಶ್ರೀಹರಿಯ ಮಾಹಾತ್ಮ್ಯವನ್ನು ಮುಂದಿನ ಆರು ಅಧ್ಯಾಯಗಳಲ್ಲಿ ಹೇಳುತ್ತಾರೆ (2) ಹಿಂದಿನ ೬ ಅಧ್ಯಾಯಗಳಲ್ಲಿಯೂ ಶ್ರೀಹರಿಯ ಮಾಹಾತ್ಮ್ಯವನ್ನು ಹೇಳಿದ್ದರೂ ಅವುಗಳಲ್ಲಿ ಸಾಧನವನ್ನೇ ಹೆಚ್ಚಾಗಿ ಹೇಳಿರುವರು ಮುಂದಿನ ೬ ಅಧ್ಯಾಯಗಳಲ್ಲಿ ಕ್ವಚಿತ್ ಸಾಧನವನ್ನು ಹೇಳುವುದಾದರೂ ಹೆಚ್ಚಾಗಿ ಶ್ರೀಹರಿಯ ಮಹಿಮೆಯನ್ನೇ ಹೇಳುವರು ಆದಕಾರಣ ಹಿಂದಿನ ೬ ಅಧ್ಯಾಯದಲ್ಲಿ ಸಾಧನವನ್ನು ಹೇಳಿದ್ದಿಂತಲೂ, ಮುಂದಿನ ೬ ಅಧ್ಯಾಯಗಳಲ್ಲಿ ಮಹಾತ್ಮ್ಯವನ್ನು ಹೇಳುತ್ತಾರೆಂಬುವುದೂ ಕೂಡುತ್ತದೆ (3) ಪ್ರಕೃತ ಶ್ರೀಹರಿಯ ಮಹಿಮೆಯನ್ನು ಹೇಳುವುದಕ್ಕಾಗಿ ಪ್ರತಿಜ್ಞೆ ಮಾಡುತ್ತಾರೆ—

ಗೀ ॥ ॥ ಶ್ರೀಭಗವಾನುವಾಚ ॥

ಓಂ ॥ ಮಯ್ಯಾಸಕ್ತಮನಾಃ ಪಾರ್ಥ ಯೋಗಂ ಯುಂಜನ್ಮದಾಶ್ರಯಃ ।
ಅಸಂಶಯಂ ಸಮಗ್ರಂ ಮಾಂ ಯಥಾ ಜ್ಞಾಸ್ಯಸಿ ತಚ್ಛೃಣು ॥ ೧ ॥

ಅ ॥ ಶ್ರೀಭಗವಾನ್ = ಶ್ರೀಕೃಷ್ಣನು, ಉವಾಚ = ಉಪದೇಶಿಸಿದನು, ಪಾರ್ಥ = ಅರ್ಜುನನೇ, ಮಯಿ = ನನ್ನಲ್ಲಿ, (ಶ್ರೀಕೃಷ್ಣನಲ್ಲಿ) ಆಸಕ್ತಮನಾಃ = ಅತ್ಯಂತ ಸ್ನೇಹದಿಂದೊಡಗೂಡಿದ ಮನಸ್ಸುಳ್ಳವನಾಗಿ, ಯೋಗಂ = ಜ್ಞಾನಸಾಧನವಾದ ಕರ್ಮರೂಪಯೋಗವನ್ನೂ ಧ್ಯಾನರೂಪಯೋಗವನ್ನೂ, ಯುಂಜನ್ = ಮಾಡುವವನಾಗಿ, ಮದಾಶ್ರಯಃ = ಶ್ರೀಪರಮಾತ್ಮನೇ ನನ್ನಿಂದ ಎಲ್ಲಾ ಕಾರ್ಯವನ್ನು ಮಾಡಿಸುತ್ತಾನೆ, ಅವನೇ ನನಗೆ ರಕ್ಷಕನು, ಶ್ರೀಹರಿಯನ್ನು ಆಶ್ರಯಿಸಿಯೇ ನಾನು ಇರುವುದು, ಎಂಬ ಜ್ಞಾನವುಳ್ಳವನಾಗಿ, ಮಾಂ = ಶ್ರೀಕೃಷ್ಣನೆನಿಸಿದ ನನ್ನನ್ನು, ಸಮಗ್ರಂ = ನಿನಗೆ ತಿಳಿದುಕೊಳ್ಳಲಿಕ್ಕೆ ಎಷ್ಟು ಶಕ್ಯವಾಗುವುದೋ, ಅಷ್ಟು ಸಂಪೂರ್ಣವಾಗಿ, ಅಸಂಶಯಂ = ಸಂದೇಹವಿಲ್ಲದ, ಯಥಾ = ಯಾವ ಪ್ರಕಾರವಾಗಿ, ಜ್ಞಾಸ್ಯಸಿ = ತಿಳಿದುಕೊಳ್ಳುವಿಯೋ, ತತ್ = ಹಾಗೆಯೇ, ತತ್ = ಆ ಪ್ರಕಾರವಾಗಿಯೇ ನನ್ನ ಜ್ಞಾನವನ್ನು ಹುಟ್ಟಿಸುವ ಮಾತನ್ನು, ಶೃಣು = ಕೇಳು (ಅಂದರೆ ಕೇಳಿ ಆ ಮಾತಿನಲ್ಲಿ ಆಸಕ್ತಿಯನ್ನು (ವಿಶ್ವಾಸವನ್ನು) ಮಾಡು) ॥ ೧ ॥

ಭಾ ॥ ಓಂ ॥ (೧) ಸಾಧನಂ ಪ್ರಾಧಾನ್ಯೇನೋಕ್ತಮತೀತೈರಧ್ಯಾಯೈಃ । ಉತ್ತರೈಸ್ತು ಷಡ್ಭಿರ್ಭಗವನ್ಮಾಹಾತ್ಮ್ಯಂ ಪ್ರಾಧಾನ್ಯೇನಾಹ ॥ (೨) ಆಸಕ್ತಮನಾಃ ಅತೀವ ಸ್ನೇಹಯುಕ್ತಮನಾಃ । ಮದಾಶ್ರಯಃ ಭಗವಾನೇವ ಮಯಾ ಸರ್ವಂ ಕಾರಯತಿ । ಸ ಏವ ಚ ಮೇ ಶರಣಂ । ತಸ್ಮಿನ್ನೇವ ಚಾಹಂ ಸ್ಥಿತ ಇತಿ ಸ್ಥಿತಃ ॥ (೩) ಅಸಂಶಯಂ ಸಮಗ್ರಮಿತಿ ಕ್ರಿಯಾವಿಶೇಷಣಂ ॥ ೧ ॥

ಅ ॥ (೧) (ಹಿಂದಿನ ಅಧ್ಯಾಯಗಳಲ್ಲಿಯೂ ಅಲ್ಲಲ್ಲಿ ಶ್ರೀಹರಿಯ ಮಹಿಮೆಯನ್ನು ಹೇಳಿದ್ದರೂ) ಪ್ರಚುರವಾಗಿ (ಹೆಚ್ಚು ಗ್ರಂಥಗಳಿಂದ) ಹಿಂದಿನ ಆರು ಅಧ್ಯಾಯಗಳಿಂದ ಜ್ಞಾನಸಾಧನವೇ ಹೇಳಲ್ಪಟ್ಟಿದೆ ಇನ್ನು ಮುಂದಿನ ಆರು ಅಧ್ಯಾಯಗಳಿಂದ ಪ್ರಚುರವಾಗಿ (ಹೆಚ್ಚು ಗ್ರಂಥಗಳಿಂದ) ಶ್ರೀಪರಮಾತ್ಮನ ಮಹಿಮೆಯನ್ನೇ ಹೇಳುತ್ತಾರೆ (೨) (ಆಸಕ್ತಮನಾಃ=ಸಂಬದ್ಧವಾದ ಮನಸ್ಸುಳ್ಳವನು, ಎಂಬುವ ಪ್ರತೀತಿಯನ್ನು ಹೋಗಲಾಡಿಸುತ್ತಾರೆ—)ಆಸಕ್ತಮನಾಃ=ಅತ್ಯಂತ ಸ್ನೇಹಯುಕ್ತವಾದ ಮನಸ್ಸುಳ್ಳವನು, ಮದಾಶ್ರಯಃ=ಶ್ರೀಪರಮಾತ್ಮನೇ ನನ್ನಿಂದ ಎಲ್ಲವನ್ನು ಮಾಡಿಸುತ್ತಾನೆ, ಅವನೇ ನನಗೆ ರಕ್ಷಕನು, ಅವನನ್ನಾಶ್ರಯಿಸಿಯೇ ನಾನು ಇರುವುದು ಎಂದು ತಿಳಿದವನು (೩) ((1) ಅಸಂಶಯಂ (ಸಂಶಯವಿಲ್ಲದಿರುವ) ಸಮಗ್ರಂ (ಸಂಪೂರ್ಣ) ಇವೆರಡೂ ಶ್ರೀಪರಮಾತ್ಮನಿಗೆ ವಿಶೇಷಣವೆಂದು ಭಾಷ್ಯಕಾರಾಚಾರ್ಯರು ವ್ಯಾಖ್ಯಾನಿಸಿರುವರು (2) ಆದ್ಯೈತಭಾಷ್ಯದಲ್ಲಿ ಸಮಗ್ರಂ=ಸಮಸ್ತ ವಿಭೂತಿ ಬಲ ಶಕ್ತಿ ಐಶ್ವರ್ಯ ಮೊದಲಾದ ಗುಣಗಳಿಂದೊಡಗೂಡಿದ ಮಾಂ=ನನ್ನನ್ನು ಸಂದೇಹವಿಲ್ಲದೆ ಎಂದು ಅರ್ಥ ಹೇಳಿರುವರು ಇವೆರಡು ಆಯುಕ್ತವೆಂಬುವ ಅಭಿಪ್ರಾಯದಿಂದ ಹೇಳುತ್ತಾರೆ—) ಅಸಂಶಯಂ ಸಮಗ್ರಂ ಇವೆರಡೂ ಕ್ರಿಯಾವಿಶೇಷಗಳು (ಅಂದರೆ ಸಂಶಯರೂಪವಾಗದಿರುವ ಹಾಗೆ ನಿನ್ನ ಯೋಗ್ಯತೆಗೆ ಅನುಗುಣವಾಗಿ ತಿಳಿದುಕೊಳ್ಳಲಿಕ್ಕೆ ಯೋಗ್ಯವಾದುದೆಂದೂ ಎಂದರ್ಥವು) ಶ್ರೀಹರಿಗೆ ಯಾವಾಗಲೂ ಸಂಶಯವಿಲ್ಲದಿರುವುದರಿಂದ ಸಂಶಯವಿಲ್ಲದವನೆಂದು ಹೇಳುವುದು ಅನುಪಯುಕ್ತವು ಶ್ರೀಹರಿಯು ಸಂಪೂರ್ಣವಾಗಿ ತಿಳಿದುಕೊಳ್ಳಲಿಕ್ಕೆ ಯಾರಿಗೂ ಅಶಕ್ಯನಾಗಿರುವುದರಿಂದ **ಸಮಗ್ರಂ** ಸಂಪೂರ್ಣನಾದ ನನ್ನನ್ನು ತಿಳಿಯಬೇಕೆಂದು ಹೇಳಿದ್ದು ಆಯುಕ್ತವು ॥ ೧ ॥

ಗೀ ॥ ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ ।
ಯಜ್ಜ್ಞಾತ್ವಾ ನೇಹ ಭೂಯೋಽನ್ಯಜ್ಜ್ಞಾತವ್ಯಮವಶಿಷ್ಯತೇ ॥ ೨ ॥

ಅ ॥ ಅಹಂ=ನಾನು (ಅರ್ಜುನನೇ) ತೇ=ನಿನಗಾಗಿ, ಇದಂ=ನನ್ನದ್ದಾದ, ಸವಿಜ್ಞಾನಂ=ವಿಶೇಷವಾಗಿ ತಿಳಿದುಕೊಳ್ಳಲಿಕ್ಕೆ ಯೋಗ್ಯವಾದ ಮಹಿಮೆಯಿಂದ ಕೂಡಿದ, ಜ್ಞಾನಂ=ಸಾಮಾನ್ಯ ರೂಪವಾಗಿ ತಿಳಿಯಲು ಯೋಗ್ಯವಾದ ಮಾಹಾತ್ಮ್ಯವನ್ನು (ಅಂದರೆ ಶ್ರೀಪರಿಯ ಸಾಮಾನ್ಯ ಮಾಹಾತ್ಮ್ಯವನ್ನೂ ವಿಶೇಷ ಮಾಹಾತ್ಮ್ಯವನ್ನೂ ಕೂಡ,) ಅಶೇಷತಃ=ನಿನಗೆ ತಿಳಿದುಕೊಳ್ಳಲಿಕ್ಕೆ ಎಷ್ಟು ಯೋಗ್ಯತೆಯು ಇದೆಯೋ ಅವೆಲ್ಲವನ್ನು, ವಕ್ಷ್ಯಾಮಿ=ಹೇಳುವೆನು ಯತ್=ಯಾವ ಮಾಹಾತ್ಮ್ಯೆಯನ್ನು, ಜ್ಞಾತ್ವಾ=ತಿಳಿದುಕೊಂಡು, ಭೂಯಃ=ತಿರುಗಿ, ಇಹ=ತಿಳಿಯಲು ಯೋಗ್ಯವಾದ ಮಾಹಾತ್ಮ್ಯಗಳ ಮಧ್ಯದಲ್ಲಿ, ಅನ್ಯತ್ ಜ್ಞಾತವ್ಯಂ=ಬೇರೆ ಯಾವುದೊಂದೂ ನಿನಗೆ ತಿಳಿಯಲು ಯೋಗ್ಯವಾದ ಮಾಹಾತ್ಮ್ಯಯು, ನಾವಶಿಷ್ಯತೇ=ಉಳಿಯುವಂತಾದ್ದು ಇಲ್ಲ (ಅಂದರೆ ನಾನು ಮುಂದೆ ಹೇಳುವ ಮಹಿಮೆಯನ್ನು ತಿಳಿದರೆ ನಿನಗೆ ತಿಳಿಯಲು ಯೋಗ್ಯವಾದ ಸರ್ವವನ್ನು ತಿಳಿದಂತೆಯೇ ಆಗುವುದು) ॥೨॥

ಭಾ ॥ ಇದಂ ಮದ್ವಿಷಯಂ ಜ್ಞಾನಂ । ವಿಜ್ಞಾನಂ ವಿಶೇಷಜ್ಞಾನಂ ॥ ೨ ॥

ಅ ॥ ಇದಂ=ನನ್ನ ವಿಷಯಕವಾದ ಜ್ಞಾನವು ವಿಜ್ಞಾನಂ=ವಿಶೇಷಜ್ಞಾನವು (ಅಂದರೆ ನನ್ನ ಸಾಮಾನ್ಯ ಮಹಿಮೆಯನ್ನೂ ವಿಶೇಷ ಮಹಿಮೆಯನ್ನೂ ಎಂದರ್ಥವು ॥ ೨ ॥

ಪೀ—ಈ ಮಹಿಮೆಯನ್ನು ಕೇಳಲಿಕ್ಕೆ ವಿಶ್ವಾಸ ಹುಟ್ಟುವುದಕ್ಕಾಗಿ ಆ ಮಾಹಾತ್ಮ್ಯಜ್ಞಾನವು ಸುಲಭಸಾಧ್ಯವಲ್ಲವೆನ್ನುತ್ತಾರೆ—

ಗೀ॥ ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥ ೩ ॥

ಅ ॥ ಮನುಷ್ಯಾಣಾಂ ಸಹಸ್ರೇಷು = ಸಾವಿರಾರು ಮನುಷ್ಯರ ಮಧ್ಯದಲ್ಲಿ, ಕಶ್ಚಿತ್ = ಪುಣ್ಯವಂತನಾದ ಒಬ್ಬ ಪುರುಷನು, ಸಿದ್ಧಯೇ = ಮಾಹಾತ್ಮ್ಯಜ್ಞಾನವನ್ನು ಹೊಂದುವುದಕ್ಕಾಗಿ, ಯತತಿ = ಪ್ರಯತ್ನಿಸುತ್ತಾನೆ ಯತತಾಮಪಿ = ಮಾಹಾತ್ಮ್ಯಜ್ಞಾನಕ್ಕಾಗಿ ಪ್ರಯತ್ನಿಸುವ ಜನರ ಮಧ್ಯದಲ್ಲಿಯೂ, ಕಶ್ಚಿತ್ = ಪುಣ್ಯವಂತನೊಬ್ಬನೇ, (ಜ್ಞಾನವನ್ನು ಹೊಂದುತ್ತಾನೆ) ಸಿದ್ಧಾನಾಂ = ಜ್ಞಾನವನ್ನು ಹೊಂದಿದವರ ಮಧ್ಯದಲ್ಲಿಯೂ, ಕಶ್ಚಿತ್ = ಒಬ್ಬನೇ, ತತ್ತ್ವತಃ = ಯಥಾರ್ಥವಾಗಿ (ಯೋಗ್ಯತಾನುಗುಣವಾಗಿ) ವೇತ್ತಿ = ತಿಳಿದುಕೊಳ್ಳುತ್ತಾನೆ ॥ ೩ ॥

ಭಾ ॥ ದೌರ್ಲಭ್ಯಂ ಜ್ಞಾನಸ್ಯಾಹ । ಮನುಷ್ಯಾಣಾಮಿತಿ ॥ ೩ ॥

ಅ ॥ (ಶ್ರೋತೃಗಳಿಗೆ ವಿಶ್ವಾಸ ಹುಟ್ಟುವುದಕ್ಕಾಗಿ) ಮನುಷ್ಯಾಣಾಂ ಎಂಬುವ ಶ್ಲೋಕದಿಂದ ಶ್ರೀಪರಮಾತ್ಮನ ಮಹಾತ್ಮ್ಯಜ್ಞಾನವು ಅತಿ ದುರ್ಲಭವೆನ್ನುತ್ತಾರೆ ॥ ೩ ॥

ತಾ ॥ ಓಂ ॥ (೧) ಭಗವನ್ಮಹಿಮಾ ವಿಶೇಷತ ಉಚ್ಯತೇ ॥ (೨) ಅನಂತಾನಾಂ ತು ಜೀವಾನಾಂ ಯತಂತೇ ಕೇಚಿದೇವ ತು । ಮುಕ್ತ್ಯೈ ತೇಷು ಚ ಮುಚ್ಯಂತೇ ಕೇಚಿನ್ಮುಕ್ತೇಷು ಚ ಸ್ಫುಟಂ । ಕೇಚನ್ತ್ಸೈವ ಹರಿಂ ಸಮ್ಯಗ್ಪ್ರಹ್ಮರುದ್ರಾದಯೋ ವಿದುಃ । ಅನ್ಯೇಷಾಂ ಯಾವತಾ ಮುಕ್ತಿಸ್ತಾವಜ್ಜ್ಞಾನಂ ಪರೌ ಪರಮಿತಿ ಪಾದ್ಮೇ ॥ (೩) ಮುಕ್ತಾನಾಮಪಿ ಸಿದ್ಧಾನಾಂ ನಾರಾಯಣಪರಾಯಣಃ । ಸುದುರ್ಲಭಃ ಪ್ರಶಾಂತಾತ್ಮಾ ಕೋಟಿಷ್ವಪಿ ಮಹಾಮತ ಇತಿ ಭಾಗವತೇ ॥ (೪) ಸರ್ವೇ ಮುಕ್ತಾ ಪರೌ ಭಕ್ತಾಸ್ತೇಷು ಬ್ರಹ್ಮೈವ ಮುಖ್ಯತಃ । ವಿಷ್ಣೋಃ ಪರಮಭಕ್ತಸ್ತು ತಸ್ಮಾಜ್ಜೀವಫಲೋ ಮತ ಇತಿ ಸತ್ತತ್ತ್ವೇ ॥ ೧,೨,೩ ॥

ಅ ॥ (೧) ಹಿಂದೆ ಹೇಳಿದ ಧ್ಯಾನವನ್ನು ಭಕ್ತಿಪೂರ್ವಕವಾಗಿ ಮಾಡಿದರೇನೇ ಅದು ಅಪರೋಕ್ಷ ಜ್ಞಾನಕ್ಕೆ ಸಾಧನವಾಗುತ್ತದೆ ಇಲ್ಲವಾದರೆ ಆಗಲಾರದು ಆದಕಾರಣ ಭಕ್ತಿಯು ಹುಟ್ಟುವುದಕ್ಕಾಗಿ ಹಿಂದೆ ಸಂಕ್ಷೇಪವಾಗಿ ಹೇಳಿದ ಭಗವನ್ಮಹಿಮೆಯನ್ನೇ ಈ ಅಧ್ಯಾಯದಲ್ಲಿ ವಿಸ್ತರವಾಗಿ ಹೇಳುತಾರೆ (೨) (ಜ್ಞಾನವನ್ನು ಸಂಪಾದಿಸುವ ವಿಷಯದಲ್ಲಿ ವಿಶ್ವಾಸವನ್ನು ಹುಟ್ಟಿಸುವುದಕ್ಕಾಗಿ ಜ್ಞಾನಕ್ಕೆ ದೌರ್ಲಭ್ಯವನ್ನು ಹೇಳುತಾರೆ–) ಅನಂತಾನಂತ ಜೀವರ ಮಧ್ಯದಲ್ಲಿ ಕೆಲವರೇ ಮೋಕ್ಷಸಾಧನವಾದ ಜ್ಞಾನವನ್ನು ಹೊಂದುವುದಕ್ಕಾಗಿ ಪ್ರಯತ್ನಿಸುತ್ತಾರೆ ಪ್ರಯತ್ನಿಸುವವರ ಮಧ್ಯದಲ್ಲಿ, ಕೆಲವರೇ ಜ್ಞಾನವನ್ನು ಸಂಪಾದಿಸಿ ಜೀವನ್ಮುಕ್ತರಾಗುತ್ತಾರೆ (ಜೀವನ್ಮುಕ್ತರಾದವರೆಲ್ಲರೂ ಮೋಕ್ಷವನ್ನು ಹೊಂದುತ್ತಾರೆ ಮುಕ್ತರಾದವರೆಲ್ಲರೂ ಶ್ರೀಹರಿಯನ್ನು ತಿಳಿಯುತ್ತಾರೆ) ಬ್ರಹ್ಮ ರುದ್ರ ಮೊದಲಾದ ಕೆಲವು ದೇವತೆಗಳು ಉತ್ತಮಾಧಿಕಾರಿಗಳು ಮಾತ್ರ ಮಧ್ಯಮಾಧಿಕಾರಿಗಳಿಗಿಂತ ಹೆಚ್ಚಾಗಿ ಸಂಪೂರ್ಣವಾಗಿ(ಚೆನ್ನಾಗಿ ಅಂದರೆ ಅವರವರ ಯೋಗ್ಯತಾನುಸಾರವಾಗಿಯೇ) ತಿಳಿಯುತ್ತಾರೆ ಬೇರೆ ಅಧಿಕಾರಿಗಳಿಗೆ ಎಷ್ಟು ಜ್ಞಾನದಿಂದ ಮೋಕ್ಷವಾಗುತ್ತದೋ ಅಷ್ಟೇ ಭಗವದ್ವಿಷಯಕವಾದ ಜ್ಞಾನವಿದೆ, ಎಂದು ಪಾದ್ಮದಲ್ಲಿದೆ (೩) ಜೀವನ್ಮುಕ್ತರಾದವರೆಲ್ಲರೂ ಮೋಕ್ಷವನ್ನು ಹೊಂದುತ್ತಾರೆ (ಮುಕ್ತರಾದವರೆಲ್ಲರೂ ಶ್ರೀಹರಿಯ ಜ್ಞಾನಾದಿಗಳುಳ್ಳವರಾದುದರಿಂದ ಶ್ರೀನಾರಾಯಣನೇ

ಆಶ್ರಯನಾಗಿ ಉಳ್ಳವರು ಆದರೆ) ಕೋಟಿ ಸಂಖ್ಯೆ ಮುಕ್ತರ ಮಧ್ಯದಲ್ಲಿಯೂ ಚೆನ್ನಾಗಿ ಶಾಂತಚಿತ್ತನಾಗಿ ಶ್ರೀನಾರಾಯಣನೇ ಮುಖ್ಯಾಶ್ರಯನೆಂದು ತಿಳಿದವನು ಅತಿದುರ್ಲಭನು, ಎಂದು ಭಾಗವತದಲ್ಲಿದೆ ಮುಕ್ತರೆಲ್ಲರೂ ಶ್ರೀಹರಿಯಲ್ಲಿ ಭಕ್ತಿಯುಳ್ಳವರೇ ಆಗಿರುತ್ತಾರೆ ಅವರಲ್ಲಿ ಮುಖ್ಯವಾಗಿ ಶ್ರೀವಿಷ್ಣುವಿನ ಅತ್ಯುತ್ತಮವಾದ ಭಕ್ತಿಯುಳ್ಳವನು ಚತುರ್ಮುಖಬ್ರಹ್ಮನೇ (ಇದರಿಂದ ಮಹಾಜ್ಞಾನಿಗಳು ಮಾತ್ರ ದುರ್ಲಭನೆಂದಲ್ಲ ಮಹಾಭಕ್ತ್ಯಾದಿಗಳುಳ್ಳವನೂ ದುರ್ಲಭನೆಂದುಕ್ತವಾಯ್ತು) (೪) ಆದಕಾರಣ ಚತುರ್ಮುಖಬ್ರಹ್ಮನು ಜೀವೋತ್ತಮನೆಂದು ಪ್ರಸಿದ್ಧನು, ಎಂದು ಸತ್ತತ್ತ್ವವೆಂಬುವ ಗ್ರಂಥದಲ್ಲಿದೆ ॥ ೧೧, ೨, ೩ ॥

ಪೀ—ಹೀಗೆ ಉಪಯುಕ್ತ ಪ್ರಮೇಯವನ್ನು ಹೇಳಿ ಸಾಮಾನ್ಯತಃ ತಿಳಿಯಲು ಯೋಗ್ಯವಾದ ಮಾಹಾತ್ಮ್ಯವನ್ನು ನಾಲ್ಕು ಶ್ಲೋಕಗಳಿಂದ ಹೇಳುತ್ತಾರೆ—

ಗೀ ॥ ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ ।
ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ ॥ ೪ ॥

ಅ ॥ ಭೂಮಿಃ=ಪೃಥಿವಿಯು, ಆಪಃ=ಜಲವು ಅನಲಃ=ತೇಜಸ್ಸು, ವಾಯುಃ=ಗಾಳಿಯು, ಖಂ=ಆಕಾಶವು (ಹೀಗೆ ಪಂಚಮಹಾಭೂತಗಳೂ) ಮನಃ=ಮನಸ್ತತ್ತ್ವವು, ಬುದ್ಧಿಃ=ಬುದ್ಧಿತತ್ತ್ವವು, ಅಹಂಕಾರಶ್ಚ=ಅಹಂಕಾರತತ್ತ್ವ (ಮಹತ್ತತ್ತ್ವ)ಗಳೂ, ಇತಿ=ಹೀಗೆ, ಮೇ=ನನ್ನ ಅಧೀನದಲ್ಲಿರುವ, ಇಯಂ ಪ್ರಕೃತಿಃ=ಈ ಜಡಪ್ರಕೃತಿಯು, ಅಷ್ಟಧಾ ಭಿನ್ನಾ=ಎಂಟು ಪ್ರಕಾರವಾಗಿ ಭೇದವುಳ್ಳದ್ದು (ಏವಂಚ ನನ್ನಿಂದ ಪ್ರೇರೇಪಿಸಲ್ಪಟ್ಟ ಪ್ರಕೃತಿಯು ಪೃಥಿವೀ ಮೊದಲಾದ ಕಾರ್ಯರೂಪದಿಂದಲೇ ಬೇರೆ ಬೇರೆಯಾಗಿರುವುದು) ॥ ೪ ॥

ಭಾ ॥ ಪ್ರತಿಜ್ಞಾತಂ ಜ್ಞಾನಮೂಹ । ಭೂಮಿರಿತ್ಯಾದಿನಾ । ಮಹತೋಽಹಂಕಾರ ಏವಾಂತರ್ಭಾವಃ ॥ ೪ ॥

ಅ ॥ ಪ್ರತಿಜ್ಞಾತವಾದ ತಿಳಿಯಲು ಯೋಗ್ಯವಾದ ಸಾಮಾನ್ಯ ಮಹಿಮೆಯನ್ನು **ಭೂಮಿರಾಪಃ** ಇತ್ಯಾದಿಗಳಿಂದ ಹೇಳುತ್ತಾರೆ (ಮಹತ್ತತ್ತ್ವವನ್ನು ಇಲ್ಲಿ ಹೇಳದಿದ್ದುದರಿಂದ ಅದಿಲ್ಲವೋ ಎಂದರೆ—) **ಮಹತ್ತತ್ತ್ವವು** ಅಹಂಕಾರ ಶಬ್ದಾರ್ಥದಲ್ಲಿ ಸೇರುತ್ತದೆ (ಅಂದರೆ ಕಾರ್ಯವಾಚಕವಾದ ಅಹಂಕಾರ ಶಬ್ದದಿಂದ ಅಹಂಕಾರತತ್ತ್ವಕ್ಕೆ ಕಾರಣವಾದ ಮಹತ್ತತ್ತ್ವವನ್ನೂ ಇಟ್ಟುಕೊಳ್ಳಬೇಕು) ॥ ೪ ॥

ಪೀ—ಜಡಪ್ರಕೃತಿ ಅದರ ಕಾರ್ಯಗಳಾದ ಪೃಥಿವ್ಯಾದಿ ಇವುಗಳು ಮಾತ್ರ ನನ್ನ ಅಧೀನದಲ್ಲಿ ಇರತಕ್ಕವುಗಳೆಂದಲ್ಲ ಮತ್ತೆ ಬ್ರಹ್ಮಾದಿ ಜಗತ್ತಿಗೆ ಮಾತೆಯಾದ ಲಕ್ಷ್ಮೀದೇವಿಯೂ ಕೂಡ ನನ್ನ ಅಧೀನದಲ್ಲಿಯೇ ಇರುವವಳೆನ್ನುತ್ತಾರೆ—

ಗೀ ॥ ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಂ ।
ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥ ೫ ॥

ಅ ॥ ಮಹಾಬಾಹೋ=ಅರ್ಜುನನೇ, ಇಯಂ=ಹಿಂದೆ ಹೇಳಿದ ಜಡಪ್ರಕೃತಿಯು, ಅಪರಾ=ಅಧಮವಾದುದು, (ಜೀವರೂ ಕೂಡ ಅಧಮರು) ಯಯಾ=ಯಾವಲಕ್ಷ್ಮೀದೇವಿಯಿಂದ, ಇದಂ ಜಗತ್=ಈ

ಬ್ರಹ್ಮರುದ್ರ ಮೊದಲಾದ ಜಗತ್ತು, ಧಾರ್ಯತೇ = ಧರಿಸಲ್ಪಡುತ್ತದೋ, (ತಾಂ=ಅಂತಹ) ಇತಸ್ತು=ಜಡ ಪ್ರಕೃತ್ಯಾದಿಗಳಿಗಿಂತ, ಅನ್ಯಾಂ = ಇತರಳಾದ, ಜೀವಭೂತಾಂ=ಎಲ್ಲಾ ಜೀವರ ದೇಹಗಳಲ್ಲಿದ್ದು ಆವರವರ ಪ್ರಾಣಗಳನ್ನು ಆವಾವ ದೇಹಗಳಲ್ಲಿ ಧರಿಸಿಕೊಂಡಿರುವುದರಿಂದ ಜೀವ ಎನಿಸಿಕೊಂಡವಳೂ, ಸರ್ವದಾ ಇರುವವಳೂ ಆದ, ಮೇ = ನನ್ನ ಅಧೀನದಲ್ಲಿರುವ, ಪ್ರಕೃತಿಂ = ಲಕ್ಷ್ಮೀದೇವಿಯನ್ನು (ಮುಕ್ತರನ್ನು ಕೂಡ) ಪರಾಂ = ಉತ್ತಮರನ್ನಾಗಿ, ವಿದ್ಧಿ = ತಿಳಿದುಕೊಳ್ಳು ॥ ೫ ॥

ಪೀ – ಅಪರಶಬ್ದಕ್ಕೆ ಅನೇಕಾರ್ಥಗಳು ಇದ್ದುದರಿಂದ ಪ್ರಕೃತದಲ್ಲಿ ವಿವಕ್ಷಿತವಾದ ಅರ್ಥವನ್ನು ಹೇಳುತ್ತಾರೆ—

ಭಾ ॥ (೧) ಅಪರಾ ಅನುತ್ತಮಾ । ವಕ್ಷ್ಯಮಾಣಾಮಪೇಕ್ಷ್ಯ ॥ (೨) ಜೀವಭೂತಾ ಶ್ರೇಃ । ಜೀವಾನಾಂ ಪ್ರಾಣಧಾರಿಣೀ । ಚಿದ್ರೂಪಭೂತಾ ಸರ್ವದಾ ಸತೀ । ಏತನ್ಮಹದ್ಭೂತಮಿತಿ ಶ್ರುತಿಃ ॥ (೩) ಜಗಾದ ಚ । ಪ್ರಕೃತೀ ದ್ವೇ ತು ದೇವಸ್ಯ ಜಡಾ ಚೈವಾಜಡಾ ತಥಾ । ಅವ್ಯಕ್ತಾಖ್ಯಾ ಜಡಾ ಸಾ ಚ ಸೃಷ್ಟ್ಯಾ ಭಿನ್ನಾಽಷ್ಟಧಾ ಪುನಃ । ಮಹಾನ್ ಬುದ್ಧಿರ್ಮನಶ್ಚೈವ ಪಂಚ ಭೂತಾನಿ ಚೇತಿ ಹಿ । ಅವರಾ ಸಾ ಜಡಾ ಶ್ರೇಶ್ಚ ಪರೇಯಂ ಧಾರ್ಯತೇ ಯಯಾ । ಚಿದ್ರೂಪಾ ಸಾ ತ್ವನಂತಾ ಚ ಅನಾದಿನಿಧನಾ ಪರಾ । ಯತ್ಸಮಂ ತು ಪ್ರಿಯಂ ಕಿಂಚಿನ್ನಾಸ್ತಿ ವಿಷ್ಣೋರ್ಮಹಾತ್ಮನಃ । ನಾರಾಯಣಸ್ಯ ಮಹಿಷೀ ಮಾತಾ ಸಾ ಬ್ರಹ್ಮಣೋಽಪಿ ಹಿ । ತಾಭ್ಯಾಮಿದಂ ಜಗತ್ಸರ್ವಂ ಹರಿಃ ಸೃಜತಿ ಭೂತರಾಡಿತಿ ನಾರದೀಯೇ ॥ ೫ ॥

ಅ ॥ (೧) (ಜಡಪ್ರಕೃತಿಯು) ಮುಂದೆ ಹೇಳುವ ಶ್ರೇಷ್ಠವಾದ ಚಿತ್ಪ್ರಕೃತಿ (ಲಕ್ಷ್ಮೀದೇವಿ)ಗಿಂತ, ಅಪರಾ = ನಿಕೃಷ್ಟವು (೨) (ಜೀವಭೂತಾಂ ಎಂಬುವುದಕ್ಕೆ ಜೀವಭಾವವನ್ನು ಹೊಂದಿದ ಎಂಬೀ ಪರರ ವ್ಯಾಖ್ಯಾನವು ಅಯುಕ್ತವೆಂಬುವ ಅಭಿಪ್ರಾಯದಿಂದ ಯೋಗ್ಯವಾದ ಅರ್ಥವನ್ನು ಹೇಳುತ್ತಾರೆ—) ಜೀವ ಭೂತಾ = ಲಕ್ಷ್ಮೀದೇವಿಯು ಎಲ್ಲಾ ಜೀವರ ಶರೀರಗಳಲ್ಲಿದ್ದು ಆವರ ಪ್ರಾಣಗಳನ್ನು ಧರಿಸಿಕೊಂಡಿರುವುದರಿಂದ ಜೀವ ಎನಿಸಿಕೊಳ್ಳುವವಳು ಜ್ಞಾನಾನಂದಾತ್ಮಕ ಶರೀರವುಳ್ಳವಳು. ಸರ್ವದಾ ಅಂದರೆ ಭೂತ ಭವಿಷ್ಯದ್ವರ್ತಮಾನ ಕಾಲಗಳಲ್ಲಿಯೂ ಇರುವವಳು (ಸರ್ವದಾ ಇರತಕ್ಕದು ಎಂಬುವ ಅರ್ಥದಲ್ಲಿ ಭೂತ ಶಬ್ದಕ್ಕೆ ಪ್ರಾಮಾಣಿಕ ಪ್ರಯೋಗವನ್ನು ತೋರಿಸುತ್ತಾರೆ—) ಏತತ್ = ಶ್ರೀತತ್ವವು ಜಡಪ್ರಕೃತಿಗಿಂತಲೂ ಬ್ರಹ್ಮಾದಿಗಳಿಗಿಂತಲೂ ಶ್ರೇಷ್ಠವು ಸರ್ವದಾ ಇರತಕ್ಕುದು, ಎಂದು ವೇದವು. (ಇದರಿಂದ ಜಡಪ್ರಕೃತಿಗಿಂತ ಲಕ್ಷ್ಮೀದೇವಿಯು ಉತ್ತಮಳೆಂದುಕ್ತವಾಯ್ತು) (೩) (ಭೂಮಿರಾಪಃ ಇತ್ಯಾದಿಗಳಿಗೆ ಅಭಿಮತವಾದ ಅರ್ಥವನ್ನು ಪುರಾಣವಾಕ್ಯದಿಂದ ದೃಢೀಕರಿಸುತ್ತಾರೆ) ಜಡ ಅಜಡ (ಅಚೇತನ ಚೇತನ) ಎಂಬುವ ಎರಡು ಪ್ರಕೃತಿಗಳು ಶ್ರೀಪರಮಾತ್ಮನ ಅಧೀನಗಳು ಜಡಪ್ರಕೃತಿಯು ಅವ್ಯಕ್ತ ಎನಿಸಿಕೊಳ್ಳುತ್ತದೆ. ಆ ಜಡಪ್ರಕೃತಿಯು, ಮಹತ್ತತ್ವ, ಬುದ್ಧಿತತ್ವ ಮನಸ್ತತ್ವ, ಪೃಥ್ವಿ ವ್ಯಾದಿ ಪಂಚಭೂತಗಳು ಈ ಪ್ರಕಾರ ಕಾರ್ಯರೂಪದಿಂದ ಎಂಟು ಪ್ರಕಾರ ಭಿನ್ನವಾಗಿದೆ ಆ ಜಡ ಪ್ರಕೃತಿಯು ನಿಕೃಷ್ಟವಾದುದು ಅಜಡಪ್ರಕೃತಿಯು ಲಕ್ಷ್ಮೀದೇವಿಯು ಉತ್ಕೃಷ್ಟಗಳು, ಅವಳಿಂದ ಜಡ ಪ್ರಕೃತಿಯು ಧರಿಸಲ್ಪಡುತ್ತದೆ (ಅವಳ ಅಧೀನವಾಗಿದೆ) ಆ ಚಿತ್ಪ್ರಕೃತಿಯು ಜ್ಞಾನಾನಂದಸ್ವರೂಪ ದೇಹವುಳ್ಳವಳು ನಾಶವಿಲ್ಲದವಳು, ಸರ್ವದೇಶಕಾಲಗಳಲ್ಲಿರುವವಳು ಬ್ರಹ್ಮಾದಿಗಳಿಂದ ಕೋಟಿ ಪಾಲು ಹೆಚ್ಚು ಗುಣ ಉಳ್ಳವಳು ಉತ್ಪತ್ತಿನಾಶವಿಲ್ಲದವಳು ಬ್ರಹ್ಮಾದಿಗಳಿಗಿಂತ ಉತ್ತಮಳು ಸರ್ವೋತ್ತಮನಾದ

ಶ್ರೀವಿಷ್ಣುವಿಗೆ, ಇಷ್ಟವಾದುದು, ಲಕ್ಷ್ಮೀದೇವಿಗೆ ಸಮಾನವಾದುದು, ಯಾವುದೊಂದೂ ಇಲ್ಲವೇ ಇಲ್ಲ ಅವಳು ಶ್ರೀನಾರಾಯಣನ ಪತ್ನಿಯು, ಆ ಲಕ್ಷ್ಮಿಯು ಚತುರ್ಮುಖಬ್ರಹ್ಮನಿಗೂ ಕೂಡ ತಾಯಿಯು ಸಮಸ್ತಪ್ರಾಣಿಗಳಿಗೆ ನಿಯಾಮಕನಾದ ಶ್ರೀಹರಿಯು ಆ ಜಡಪ್ರಕೃತಿ ಚಿತ್ಪ್ರಕೃತಿಯರಿಂದ ಈ ಎಲ್ಲಾ ಜಗತ್ತನ್ನು ಸೃಷ್ಟಿಸುತ್ತಾನೆ ಎಂದು ನಾರದೀಯ ಪುರಾಣದಲ್ಲಿದೆ ॥ ೫ ॥

ಪೀ—ದೇಹ ಇಂದ್ರಿಯಾದಿ ಅನೇಕ ಪದಾರ್ಥಗಳು ಇದ್ದಪ್ರಯುಕ್ತ ಜಡ ಅಜಡ ಪ್ರಕೃತಿಗಳು ಮಾತ್ರ ಶ್ರೀಪರಮಾತ್ಮನ ಅಧೀನಗಳೆಂದು ಹೇಗೆ ಹೇಳಿದ್ದು ಎಂದರೆ ದೇಹ ಮೊದಲಾದ ಸಮಸ್ತ ಕಾರ್ಯಗಳೂ ಜಡಾಜಡಪ್ರಕೃತಿಗಳಲ್ಲಿಯೇ ಸೇರಿವೆ ಎನ್ನುತ್ತಾರೆ—

ಗೀ ॥ ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ ।
ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ॥ ೬ ॥

ಅ ॥ ಸರ್ವಾಣಿ = ಎಲ್ಲಾ, ಭೂತಾನಿ = ಶರೀರ ಇಂದ್ರಿಯ ವಿಷಯರೂಪಗಳಾದ ಕಾರ್ಯಗಳಿಂದ ಕೂಡಿದ ಚತುರ್ಮುಖನೇ ಮೊದಲಾದ ಜೀವರು, ಏತದ್ಯೋನೀನಿ = ಜಡಪ್ರಕೃತಿ ಚಿತ್ಪ್ರಕೃತಿಯಾದ ಲಕ್ಷ್ಮೀದೇವಿಯೇ ಕಾರಣವಾಗಿ ಉಳ್ಳವರು (ಅಂದರೆ ಆ ಜಡಪ್ರಕೃತಿ ಚಿತ್ಪ್ರಕೃತಿಗಳಿಂದಲೇ ಹುಟ್ಟಿದವರು) ಇತಿ = ಹೀಗೆ, ಉಪಧಾರಯ = ತಿಳಿದುಕೊಳ್ಳು (ಜೀವನಾಜೀವನಗಳಿಗೆ ಕಾರಣಗಳಾದ ಈ ಪ್ರಕೃತಿಗಳು ಮಾತ್ರ ನನ್ನ ಅಧೀನಗಳು, ಸಮಸ್ತ ವಸ್ತುಗಳ ಉತ್ಪತ್ಯಾದಿಗಳು ಆ ಪ್ರಕೃತಿಗಳ ಅಧೀನಗಳೇ, ಶ್ರೀಕೃಷ್ಣನ ಅಧೀನಗಳಲ್ಲವೆಂದು ತಿಳಿದುಕೂಳ್ಳುವುದು ಬೇಡ, ಮತ್ತೆ ಎಲ್ಲವೂ ಶ್ರೀಹರಿಯ ಅಧೀನಗಳೆಂದೇ ತಿಳಿದುಕೊಳ್ಳು ಎನ್ನುತ್ತಾರೆ—) ಅಹಂ = ನಾನು, ಕೃತ್ಸ್ನಸ್ಯ ಜಗತಃ = ಬ್ರಹ್ಮ ರುದ್ರಾದಿ ಸಮಸ್ತ ಜಗತ್ತಿಗೂ, ಪ್ರಭವಃ = ಪ್ರಕೃತಿದ್ವಾರಾ ಸೃಷ್ಟಿಕರ್ತನು ತಥಾ = ಹಾಗೆಯೇ, ಪ್ರಲಯಃ = ವಿನಾಶಕನು ॥ ೬ ॥

ಭಾ ॥ (೧) ನ ಕೇವಲಂ ತೇ ಜಗತ್ಪ್ರಕೃತೀ ಮದ್ವಶೇ ಇತ್ಯೇತಾವನ್ಮದ್ಭೈಶ್ವರ್ಯಮಿತ್ಯಾಹ । ಅಹಮಿತಿ ॥ (೨) ಪ್ರಭವಾದೇಃ ಸತ್ತಾಪ್ರತೀತ್ಯಾದಿಕಾರಣತ್ವಾತ್ತದ್ಭೋಕ್ತೃತ್ವಾಚ್ಚ ಪ್ರಭವ ಇತ್ಯಾದಿ ॥ (೩) ತಥಾ ಚ ಶ್ರುತಿಃ । ಸರ್ವಕಾಮಃ ಸರ್ವಕರ್ಮಾ ಸರ್ವಗಂಧಃ ಸರ್ವರಸಃ ಸರ್ವಮಿದಮಭ್ಯಾತ್ತೋಽವಾಕ್ಯನಾದರ ಇತಿ ॥ (೪) ಅಹ ಚ । ಸ್ರಷ್ಟಾ ಪಾತಾ ಚ ಸಂಹರ್ತಾ ನಿಯಂತಾ ಚ ಪ್ರಕಾಶಿತಾ । ಯತಃ ಸರ್ವಸ್ಯ ತೇನಾಹಂ ಸರ್ವೋಽಸೀತ್ಯೃಷಿಭಿಃ ಸ್ತುತಃ । ಸುಖರೂಪಸ್ಯ ಭೋಕ್ತೃತ್ವಾನ್ನ ತು ಸರ್ವಸ್ವರೂಪತಃ । ಅಗಮಿಷ್ಯತ್ಸುಖಂ ಚಾಪಿ ತಚ್ಚಾಸ್ಯೈವ ಸದಾಽಪಿ ತು । ತಥಾಽಪ್ಯಚಿಂತ್ಯಶಕ್ತಿತ್ವಾಜ್ಜಾತಂ ಸುಖಮತೀವ ಚೇತಿ ನಾರದೀಯೇ ॥ ೬ ॥

ಅ ॥ (೧) ಆ ಪ್ರಕೃತಿಗಳು ಮಾತ್ರ ನನ್ನ ಅಧೀನದಲ್ಲಿರತಕ್ಕವುಗಳು, ಇಷ್ಟೇ ನನ್ನ ಐಶ್ವರ್ಯವು ಎಂದಲ್ಲ, ಎಂದು **ಅಹಂ** ಎಂಬುವ ಶ್ಲೋಕದಿಂದ ಹೇಳುತ್ತಾರೆ (ಅಂದರೆ ಪ್ರಕೃತಿಗಳೇ ನನ್ನ ಅಧೀನಗಳು, ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳು ಪ್ರಕೃತ್ಯಧೀನಗಳೇ, ಶ್ರೀಪರಮಾತ್ಮನ ಅಧೀನಗಳಲ್ಲ, ಎಂಬುವ ಪ್ರತೀತಿಯನ್ನು ನಿರಾಕರಿಸುವುದಕ್ಕಾಗಿ **ಅಹಂ ಕೃತ್ಸ್ನಸ್ಯ** ಎಂದು ಹೇಳಿದ್ದು ಪ್ರಕೃತಿಗಳಿಗೆ ಕಾರಣತ್ವಾದಿಗಳೂ ನನ್ನ ಅಧೀನಗಳೇ) (೨) (ಜಗತ್ತಿನ ಧರ್ಮಗಳಾದ ಉತ್ಪತ್ತಿನಾಶಗಳಿಗೆ ಸಾಕ್ಷಾತ್ತಾಗಿ

ಶ್ರೀಪರಮಾತ್ಮನಿಂದ ಐಕ್ಯವು ಹೇಳಲ್ಪಡುತ್ತದೆ, ಎಂಬುವ ಪ್ರತೀತಿಯನ್ನು ನಿರಾಕರಿಸುತ್ತಾರೆ—) ಉತ್ಪತ್ತ್ಯಾದಿಗಳಿಗೆ ಕಾರಣನಾದುದರಿಂದಲೂ ಅವುಗಳಿಗೆ ಭೋಕ್ತನಾದುದರಿಂದಲೂ **ಪ್ರಭವಃ** ಇತ್ಯಾದಿಗಳನ್ನು **ಹೇಳಿದ್ದು** (೩) (ಶ್ರೀಪರಮಾತ್ಮನಿಗೆ ಸರ್ವಭೋಕ್ತೃತ್ವವು ಹೇಗೆಂದರೆ-) ಹಾಗೆಯೇ ಶ್ರುತಿಯು ಹೇಳುತ್ತದೆ ಸಮಸ್ತ ಇಷ್ಟಾರ್ಥಗಳನ್ನು ಹೊಂದಿದವನು ಅವರವರಿಗೆ ನಿಯಾಮಕನಾಗಿ ಸರ್ವಕರ್ಮಗಳನ್ನು ಮಾಡಿಸುವವನು ಚಿದಾನಂದಾತ್ಮಕವಾದ ಸರ್ವ ಶುಭಗಂಧಸ್ವರೂಪನು ಚಿದಾನಂದಾತ್ಮಕವಾದ ಸರ್ವ ಶುಭರಸಸ್ವರೂಪನು ಸಮಸ್ತ ಜಗತ್ತನ್ನು ಅಧೀನವಾಗಿ ಧರಿಸಿಕೊಂಡಿರುತ್ತಾನೆ ಸಾಮಾನ್ಯ ಜನರಂತೆ ಅರ್ಥವಿಲ್ಲದ ಮಾತನ್ನಾಡದಿರುವವನು ತನ್ನನ್ನು ತಾನೇ ಹೊಗಳದಿರುವವನು ಅಥವಾ ಶ್ರೀಪರಮಾತ್ಮನ ಅನುಗ್ರಹವಿಲ್ಲದ ವಾಕ್ಯದಿಂದ ತಿಳಿಯಲಶಕ್ಯನು ತಾನೇ ಆಶ್ಚರ್ಯರೂಪನಾದುದರಿಂದ ಬೇರೆ ಕಡೆ ಆಶ್ಚರ್ಯಬುದ್ಧಿಯಿಲ್ಲದವನು ಎಂದು (ಛಾಂದೋಗ್ಯ ಪು ೧೬೮) (ಈ ವಾಕ್ಯದಿಂದ ಚಿದಾನಂದಾತ್ಮಕವಾದ ಸರ್ವಗಂಧಾದಿರೂಪತ್ವವೂ, ಸುಗಂಧಾದಿಭೋಕ್ತೃತ್ವವೂ, ಹೇಳಲ್ಪಡುತ್ತದೆ **ಸರ್ವಗಂಧಾದಿರೂಪಶ್ಚ ಭೋಕ್ತಾ ಚೈಷಾಂ ಸದೈವ ಹಿ** ಎಂದುಕ್ತವಾಗಿದೆ (೪) (ಜಗತ್ತಿನ ಉತ್ಪತ್ತ್ಯಾದಿಗಳಿಗೆ ಕಾರಣನಾದುದರಿಂದಲೇ ಐಕ್ಯವನ್ನು ಹೇಳಿದ್ದೆಂಬುವುದು ಹೇಗೆಂದರೆ—) ಸರ್ವಜಗತ್ತಿಗೂ ಸೃಷ್ಟಿಕರ್ತನು, ರಕ್ಷಕನು, ಸಂಹಾರಕನು, ನಿಯಾಮಕನು, ಪ್ರಕಾಶಕನೂ ಆದಕಾರಣ ನಾನು **ಸರ್ವಃ ಅಸ್ಮಿ** ಎಂದು ಋಷಿಗಳಿಂದ ಸ್ತುತಿಸಿಕೊಳ್ಳಲ್ಪಟ್ಟಿದ್ದೇನೆ. ಸರ್ವಸುಖ ಕಾರಣವನ್ನು ಭೋಗಿಸುವುದರಿಂದಲೇ **ಸರ್ವೋಽಸ್ಮಿ** ಎಂದು ಅನಿಸಿಕೊಳ್ಳುತ್ತೇನೆ ಸರ್ವ ವಸ್ತುಗಳ ಸ್ವರೂಪನಾದುದರಿಂದ ಐಕ್ಯವನ್ನು ಹೇಳಿದ್ದೆಂದು ಹೇಳಕೂಡದು (೫) (ಭೋಗದಿಂದ ಸುಖವು ಆಗುವುದಾದರೆ ಅದು ಮೊದಲು ಇಲ್ಲದಿರುವುದರಿಂದ ಅಪೂರ್ಣತಾ ಬರಬೇಕಾಗುವುದು ಎಂದರೆ—) ಭೋಗದಿಂದ ಬರುವ ಸುಖವೂ ಸರ್ವದಾ ಉಂಟೇ ಉಂಟು, ಕ್ರಿಯೆಗಳೂ ಕೂಡ ಶಕ್ತಿರೂಪದಿಂದ ಸರ್ವದಾ ಇವೆ. (ಹಾಗಾದರೆ ಭೋಗದಿಂದ ಹುಟ್ಟುತೆಂದು ಹೇಗೆ ಹೇಳುವುದೆಂದರೆ—) ಅದರೂ ಅಚಿಂತ್ಯ ಶಕ್ತಿಯು ಇದ್ದುದರಿಂದ ಅತ್ಯಂತ ಸುಖವು ಹುಟ್ಟುತೆಂದು ಹೇಳುವುದು ಎಂದು ನಾರದೀಯ ಪುರಾಣದಲ್ಲಿದೆ ॥ ೬ ॥

ಪೀ—ಸರ್ವಜಗತ್ತಿಗೂ ನಾನೇ ಉತ್ಪಾದಕನು ಇತ್ಯಾದಿಗಳು ಹೇಗೆ ಕೂಡುತ್ತವೆಂದರೆ—

ಗೀ ॥ ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥ ೭ ॥

ಅ ॥ ಧನಂಜಯ=ಅರ್ಜುನನೇ, ಮತ್ತಃ=ನನಗಿಂತ, ಅನ್ಯತ್=ಬೇರೆ ಒಂದು, ಪರತರಂ=ಸರ್ವೋತ್ತಮವಾದ ವಸ್ತುವು, ಕಿಂಚಿತ್=ಯಾವುದೊಂದೂ, ನಾಸ್ತಿ=ಇಲ್ಲವೇ ಇಲ್ಲ ಇದಂ ಸರ್ವಂ=ಈ ಪ್ರಕೃತಿ ಮೊದಲಾದ ಸರ್ವ ಜಗತ್ತು, ಸೂತ್ರೇ=ಹಗ್ಗದಲ್ಲಿ, ಮಣಿಗಣಾ ಇವ=ಮಣಿಗಳ ಸಮುದಾಯಗಳು (ಆಶ್ರಯಿಸಿಕೊಂಡಿರುವಂತೆ) ಮಯಿ=ನನ್ನಲ್ಲಿ, ಪ್ರೋತಂ=ಆಶ್ರಿತವಾಗಿದೆ (ಅಂದರೆ ಜಗತ್ತಿನ ಉತ್ಪತ್ತಿ ಸಂಹಾರಗಳನ್ನು ಮಾತ್ರ ಮಾಡುವವನಲ್ಲ ರಕ್ಷಣೆಯನ್ನು ಸಹ ನಾನೇ ಮಾಡುವವನು) ॥ ೭ ॥

ಭಾ ॥ ಅಹಮೇವ ಪರತರಃ । ಮತ್ತೋಽನ್ಯತ್ಪರತರಂ ನ ಕಿಂಚಿದಪಿ । ॥ ೭ ॥

ಅ ॥ ನಾನೇ ಸರ್ವೋತ್ತಮನು ನನಗಿಂತ ಬೇರೆ ಯಾವುದೊಂದೂ ಸರ್ವೋತ್ತಮವಾದುದು ಯಾವುದೂ ಇಲ್ಲ ॥೭॥

ಪೀ—ಭೂಮಿರಾಪಃ ಇತ್ಯಾದಿಗಳ ಅರ್ಥವನ್ನು ಸ್ಮೃತಿಯಿಂದಲೇ ಹೇಳುತ್ತಾರೆ--

ತಾ ॥ (೧) ಅಚೇತನಾ ಚೇತನೇತಿ ದ್ವಿವಿಧಾ ಪ್ರಕೃತಿರ್ಮತಾ । ತ್ರಿಗುಣಾಽಚೇತನಾ ತತ್ರ ಚೇತನಾ ಶ್ರೀರ್ಹರಿಪ್ರಿಯಾ । ತೇ ಉಭೇ ವಿಷ್ಣುವಶಗೇ ಜಗತಃ ಕಾರಣೇ ಮತೇ ॥ (೨) ಪಿತಾ ವಿಷ್ಣುಃ ಸ ಜಗತೋ ಮಾತಾ ಶ್ರೀರ್ಯಾ ತ್ವಚೇತನಾ । ಉಪಾದಾನಂ ತು ಜಗತಃ ಸೈವ ವಿಷ್ಣುಬಲೇರಿತೇತಿ (ಚ) ॥ ೧ ॥

ಅ ॥ (೧) ಅಚೇತನಪ್ರಕೃತಿ, ಚೇತನಪ್ರಕೃತಿ ಎಂದು ಪ್ರಕೃತಿಯು ಎರಡು ವಿಧವು ಅದರಲ್ಲಿ ಅಚೇತನಪ್ರಕೃತಿಯು ಸತ್ವರಜಸ್ತಮೋಗುಣಗಳುಳ್ಳದ್ದು ಚೇತನಪ್ರಕೃತಿಯಾದ ಲಕ್ಷ್ಮೀದೇವಿಯು ಶ್ರೀಪರಮಾತ್ಮನಿಗೆ ಪತ್ನಿಯು ಆ ಚೇತನಾಚೇತನ ಪ್ರಕೃತಿಗಳೆರಡು ಶ್ರೀಪರಮಾತ್ಮನ ಅಧೀನದಲ್ಲಿರ ತಕ್ಕವುಗಳು ಜಗತ್ತಿಗೆ ಕಾರಣಗಳು (೨) ಆ ಶ್ರೀಪರಮಾತ್ಮನು ಬ್ರಹ್ಮಾದಿ ಜಗತ್ತಿಗೆ ಪಿತನು ಲಕ್ಷ್ಮೀದೇವಿಯು ತಾಯಿಯು ಅಚೇತನಪ್ರಕೃತಿಯೇ ಶ್ರೀವಿಷ್ಣುವಿನ ಬಲದಿಂದ ಪ್ರೇರೇಪಿಸಲ್ಪಟ್ಟ ದ್ದಾಗಿ ಜಗತ್ತಿಗೆ ಉಪಾದಾನಕಾರಣವಾಗುತ್ತದೆ

ವಿ ॥ (1) ಚೇತನಾ ಶ್ರೀಃ ಎಂಬುದರಿಂದ ಜೀವಭೂತಾಂ ಎಂಬುದರ ಅರ್ಥವನ್ನು ಹೇಳಿದಂತೆಯೇ ಆಯಿತು (2) ತೇ ಉಭೇ ಎನ್ನುವುದರಿಂದ ಮೇ ಪ್ರಕೃತಿಂ ಎಂಬುದರ ಅರ್ಥವನ್ನು ಹೇಳಿದಂತೆ ಆಯಿತು (3) ಜಗತಃ ಕಾರಣೇ ಎಂಬುವುದರಿಂದ ಏತದ್ಯೋನೀನಿ ಎಂಬುದರ ಅರ್ಥವು ಉಕ್ತವಾಯಿತು (4) ಪಿತಾ ವಿಷ್ಣುಃ ಎಂಬುದರಿಂದ ಅಹಂ ಕೃತ್ಸ್ನಸ್ಯ ಎಂಬುದು ವ್ಯಾಖ್ಯಾತವಾಯಿತು (5) ವಿಷ್ಣುಬಲೇರಿತಾ ಎಂಬುದರಿಂದ ಅಚೇತನಪ್ರಕೃತಿಗೆ ಉಪಾದಾನತ್ವಶಕ್ತಿಯು ಭಗವಂತನ ಅಧೀನವೆಂದು ಉಕ್ತವಾಯಿತು ॥ ೧ ॥

ಪೀ—ನಿನ್ನಂತೆಯೇ ಸರ್ವೋತ್ತಮನು ಬೇರೆಯೂ ಇದ್ದಾರೆ ಅವನಿಗೂ ಪಿತೃತ್ವಾದಿಗಳು ಕೂಡುವುದರಿಂದ **ಕೃತ್ಸ್ನಸ್ಯ** ಎಂದದ್ದು ಹೇಗೆಂದರೆ—

ತಾ ॥ (೧) ಮತ್ತೋಽನ್ಯತ್ಪರತರಂ ನಾಸ್ತಿ ಪರತರಸ್ತ್ವಹಮೇವೇತ್ಯರ್ಥಃ । ಅನ್ಯಥಾನ್ಯದಿತಿ ವ್ಯರ್ಥಂ ॥ (೨) ಅವರಾ ದುಃಖಿಸಂಬಂಧಾಜ್ಜೀವಾ ಏವ ಪ್ರಕೀರ್ತಿತಾಃ । ನಿತ್ಯನಿರ್ದುಃಖಿರೂಪತ್ವಾತ್ಪರಾ ಶ್ರೀರೇಕಲೈವ ತು । ದುಃಖಾಸಂಪೀಡಿತತ್ವಾತ್ತು ಮಧ್ಯಮೋ ವಾಯುರುಚ್ಯತೇ ॥ (೩) ಅನನ್ಯಾಧೀನರೂಪತ್ವಾದಸಮಾಧಿಕಸೌಖ್ಯತಃ । ತತ್ತಂತ್ರತ್ವಾಚ್ಚ ಸರ್ವಸ್ಯ ವಿಷ್ಣುಃ ಪರತರೋ(ಮೋ) ಮತಃ ॥ (೪) ಅಭಾವಾದಂತರಾನ್ಯಸ್ಯ ಶ್ವಿಯೈಕಾರ್ಥಾ ತರಪ್ತಮೌ ॥ (೫) ಯಸ್ಯಾಃ ಸಂಬಂಧಯೋಗ್ಯತ್ವಾಜ್ಜೀವಾ ಅವ್ಯವರಾ ಮತಾಃ । ತಸ್ಯಾ ಜಡಾಯಾಃ ಪ್ರಕೃತೇರವರತ್ವೇ ಕ್ವ ಸಂಶಯಃ ॥ (೬) ಅಥಾವರತರಾ ಯೇ ತು ವಿಮುಖಾಶ್ಚೇತನಾ ಹರೇಃ । ನಿತ್ಯದುಃಖೈಕಯೋಗ್ಯತ್ವಾನ್ನ ಹ್ಯೇತತ್ಸ್ಯಾದಚೇತನೇ ॥ (೭) ಅತಃ ಪರತರಂ(ಮಂ) ವಿಷ್ಣುಂ ಯೋ ವೇತ್ತಿ ಸ ವಿಮುಚ್ಯತೇ ॥ (೮) ಮುಕ್ತಸ್ತು ನ್ಯಾತ್ಪರಾಭಾಸಃ ಸುನಿತ್ಯಸುಖಭೋಜನಾತ್ ॥ (೯) ತತ್ರಾಪಿ ತಾರತಮ್ಯಂ ಸ್ಯಾತ್ತೇಷು ಬ್ರಹ್ಮಾಧಿಕೋ ಮತಃ ॥ (೧೦)

ವಿಷ್ಣೋರಾಧಿಕ್ಯಸಂವಿತ್ತಿಃ ಸರ್ವಸ್ಮಾಜ್ಜ್ಞಾನಮುಚ್ಯತೇ । ಏವಂ ವಿವಿಚ್ಯ ತಜ್ಜ್ಞಾನಂ ವಿಜ್ಞಾನಮಿತಿ ಕೀರ್ತಿತಂ ॥ (೧೧) ಏತಚ್ಚ ತಾರತಮ್ಯೇನ ವರ್ತತೇ ಕೇಶವಾದಿಷು । ಮುಖ್ಯವಿಜ್ಞಾನ್ಯತೋ ವಿಷ್ಣುಃ ಕಂಚಿದ್ವಿಜ್ಞಾನಿನೋಽಪರೇ ॥ ೨ ॥ ೪–೬ ॥

ಅ ॥ (೧)ನನಗಿಂತ ಬೇರೆ ಯಾವ ವಸ್ತುವೂ ಸರ್ವೋತ್ಕೃಷ್ಟವಾದುದು ಇಲ್ಲ ನಾನೇ ಸರ್ವೋತ್ತಮನು **(ಅದಕಾರಣ ಅಹಂ ಕೃತ್ಸ್ನಸ್ಯ** ಎಂದು ಹೇಳಿದ್ದು ಯುಕ್ತವೇ) (ತನಗಿಂತ ಬೇರೆ ಯಾವುದೂ ಇಲ್ಲ ವೆಂದು ನಿಷೇಧಿಸಿದ್ದೆಂದು ಏಕೆ ಆಗಲಾರದೆಂದರೆ—) ಇಲ್ಲಿ ತನಗಿಂತ ಬೇರೆ ವಸ್ತುವಿಲ್ಲವೆಂದು ಹೇಳಿದ್ದೆಂದಾದರೆ **ಪರತರ** ಎಂಬುವುದರಿಂದಲೇ ತನಗಿಂತ ಇತರವಸ್ತುವನ್ನು ಹೇಳಿದ ಕಾರಣ **ಅನ್ಯತ್** ಎಂಬುವುದು ವ್ಯರ್ಥವಾಗುವುದು **ಅನ್ಯತ್** ಎಂಬುವುದಕ್ಕೆ ತನಗಿಂತ ಬೇರೆ ಎಂದು ಅರ್ಥವನ್ನು ಒಡಂಬಟ್ಟರೆ **ಪರ ತರಂ** ಎಂಬುವುದು ವ್ಯರ್ಥವಾಗುವುದು (೨) (ಶ್ರೀವಿಷ್ಣುವೇ ಪರತರನೆಂದಾದರೆ ಪರ ಅವರ ಮೊದಲಾದುವುಗಳು ಯಾವುವು? ಎಂದರೆ ಈ ಅರ್ಥದಲ್ಲಿ ಸ್ಮೃತಿಪ್ರಮಾಣವನ್ನು ಹೇಳ್ಕತ್ತಾರೆ–) ದುಃಖ ಸಂಬಂಧವುಳ್ಳವರಾದುದರಿಂದ ಜೀವರೇ ಅವರರು ಎನಿಸುತ್ತಾರೆ ನಿತ್ಯದಲ್ಲಿಯೂ ನಿರ್ದುಃಖ ಸ್ವರೂಪಳಾದುದರಿಂದ ಲಕ್ಷ್ಮೀದೇವಿಯೊಬ್ಬಳೇ **ಪರಾ** (ಶ್ರೇಷ್ಠಳು) ಎನಿಸುತ್ತಾಳೆ ವಾಯುದೇವರು ದುಃಖ ಸಂಬಂಧವುಳ್ಳವರಾದುದರಿಂದ **ಪರ** ಎನಿಸಿಕೊಳ್ಳುವುದಿಲ್ಲ ದುಃಖದಿಂದ ಚೆನ್ನಾಗಿ ಪೀಡಿಸಿಕೊಳ್ಳಲ್ಪಡದಿರುವುದರಿಂದ **ಅವರ** ಎಂದೂ ಅನಿಸಿಕೊಳ್ಳುವುದಿಲ್ಲ **ಅದಕಾರಣ ಮಧ್ಯನು** ಎನಿಸುತ್ತಾನೆ (೩) ಶ್ರೀವಿಷ್ಣುವು **ಅನ್ಯಾಧೀನಸ್ವರೂಪವುಳ್ಳವನಾಗದಿರುವುದರಿಂದಲೂ** ಶ್ರೀಹರಿಯ ಸುಖಕ್ಕೆ ಸಮಾನವಾದ ಸುಖವೂ ಹೆಚ್ಚು ಸುಖವೂ ಯಾರಿಗೂ ಇಲ್ಲದಿರುವುದರಿಂದಲೂ, ಬ್ರಹ್ಮಾದಿಗಳೆಲ್ಲರೂ ಶ್ರೀಹರಿಯ ಆಧೀನದಲ್ಲಿರುವುದರಿಂದಲೂ ಶ್ರೀವಿಷ್ಣುವು **ಪರತರನೆನಿಸುತ್ತಾನೆ** (೪) (**ಪರಃ**=ಉತ್ತಮನು **ವರತರಃ**=ಇಬ್ಬರಲ್ಲಿ ಉತ್ತಮನು **ಪರತಮಃ**=ಬಹು ಮಂದಿಯಲ್ಲಿ ಉತ್ತಮನು ಆದಕಾರಣ ಶ್ರೀವಿಷ್ಣುವು **ಪರತರನಾದರೆ ಪರತಮನು** ಯಾರು? ಎಂದರೆ–)ಇಲ್ಲಿ **ಪರತರ ಪರತಮ** ಪದಗಳಿಂದ ವಿಷ್ಣು ಒಬ್ಬನೇ ಹೇಳಲ್ಪಡುತ್ತಾನೆ ಪರಳು ಶ್ರೀದೇವಿಯು ಪರತಮನು ಶ್ರೀವಿಷ್ಣುವು ಇವರ ಮಧ್ಯದಲ್ಲಿ ಪರತಂನು ಇನ್ನೊಬ್ಬನಿಲ್ಲದಿರುವುದರಿಂದ ಈ ವಿಷ್ಣುವು ಪರತರನೇ ವಿಷ್ಣುವಿನಿಂದ ದೊಡ್ಡವನು ಇನ್ನೊಬ್ಬನಿಲ್ಲದಿರುವುದರಿಂದ ವಿಷ್ಣುವು ಪರತಮನೂ ಅವನೇ ಆದಕಾರಣ ಇಲ್ಲಿ ತರಪ್ ತಮಪ್ ಪ್ರತ್ಯಯಗಳಿಗೆ ಒಂದೇ ಅರ್ಥಗಳು (೫) ಜೀವರಿಗೆ ಪ್ರಕೃತಿಯ ಸಂಬಂಧವಿದ್ದುದರಿಂದ ಜೀವರು ಅವರರು (ನಿಕೃಷ್ಟರು) ಎಂದಾಗುವಾಗ ಅಂತಹ ಜಡಭೂತವಾದ ಪ್ರಕೃತಿಯು ನಿಕೃಷ್ಟವು (ಅವರವು) ಎಂಬುವಲ್ಲಿ ಸಂಶಯವೇನು? (ಜಡಪ್ರಕೃತಿಗೆ ದುಃಖವಿಲ್ಲದಿದ್ದರೂ ದುಃಖಕ್ಕೆ ಕಾರಣವಾಗಿರುವುದರಿಂದ ಅವರತ್ವವು ನಿಸ್ಸಂಶಯವಾಗಿ ಇದ್ದೇ ಇದೆ) (೬) ಯಾವ ಚೇತನರು ಶ್ರೀಹರಿಗೆ ವಿಮುಖರಾಗಿರುತ್ತಾರೋ. ಅವರು ಕೇವಲ ನಿತ್ಯ ದುಃಖಕ್ಕೆ ಮಾತ್ರ ಯೋಗ್ಯರಾಗಿರುವುದರಿಂದ ಅವರತರರು (ಅಚೇತನಕ್ಕಿಂತಲೂ ಚೇತನವು ಉತ್ತಮವಾಗಿರುವುದರಿಂದ ಶ್ರೀಹರಿಗೆ ವಿಮುಖರಾದ ಚೇತನರಿಗೆ ಅವರತರತ್ವವಿದ್ದರೆ ಅಚೇತನವಾದ ಪ್ರಕೃತಿಗೆ ಅವರತ್ವವು ಹೇಗೆಂದರೆ—) ಅಚೇತನದಲ್ಲಿ ನಿತ್ಯದುಃಖ ಸಂಬಂಧವಿಲ್ಲದಿರುವುದರಿಂದ ಅವರತ್ವವೇ ಅವರತರತ್ವವಾಗಲೀ, ಅವರತಮತ್ವವಾಗಲೀ ಇಲ್ಲ (೭) (ಜೀವರಿಗೆ ದುಃಖಸಂಬಂಧವು ಸ್ವಾಭಾವಿಕವಾದರೆ **ಮೋಕ್ಷವು ಹೇಗೆ ಆಗುವುದು ಎಂದರೆ**–) ಹಿಂದೆ ಹೇಳಿದ ಪ್ರಕಾರ ಸರ್ವೋತ್ತಮನಾದ ಶ್ರೀವಿಷ್ಣುವನ್ನು ಯಾವನು ತಿಳಿಯುತ್ತಾನೋ ಆತನು **ಮುಕ್ತನಾಗುತ್ತಾನೆ** (೮) (ಶ್ರೀಪರಮಾತ್ಮನ ಜ್ಞಾನದಿಂದ ದುಃಖ ನಿವೃತ್ತಿಯಾಗುವುದಾದರೆ **ಮುಕ್ತನು ಪರನೆಂದಾಗುವುದು** ಲಕ್ಷ್ಮ್ಯಾಯೊಬ್ಬಳೇ ಪರಳೆಂದು ಹೇಳಿದ್ದು ಅಯುಕ್ತವೆಂದರೆ–)ಮುಕ್ತನಾದರೂ ನಿತ್ಯಸುಖವನ್ನನುಭವಿಸುವುದರಿಂದ **ಪರಾಭಾಸನೆನಿಸುತ್ತಾನೆ** ಮುಕ್ತನು **ಅವರನಾಗದಿದ್ದರೂ ಸಂಸಾರದಶೆಯಲ್ಲಿ** ದುಃಖನನ್ನನುಭವಿಸಿದುದರಿಂದ ಪರಾಭಾಸನೆಂದೇ ಅನಿಸಿ

ಕೊಳ್ಳುತ್ತಾನೆ ಲಕ್ಷ್ಮೀದೇವಿಯಂತೆ ಹರ ಎಂದು ಅನ್ನಿಸಿಕೊಳ್ಳುವುದಿಲ್ಲ) (೯) (ಸರ್ವ ಮುಕ್ತರಿಗೆ ದುಃಖಾಭಾವವು ಸಮಾನವಾದರೂ ಸುಖಾದಿಗಳಲ್ಲಿ ಸಾಮ್ಯವು ಇಲ್ಲವೇ ಇಲ್ಲವೆನ್ನುತ್ತಾರೆ—) ಮುಕ್ತರಲ್ಲಿಯೂ ತಾರತಮ್ಯವು ಇದೆ ಮುಕ್ತರಲ್ಲಿ ಬ್ರಹ್ಮನು ಉತ್ತಮನೆಂದು ಸಮ್ಮತನು (೧೦) (ವೇದಾದಿಗಳಲ್ಲಿ **ಜ್ಞಾನ ವಿಜ್ಞಾನ**ಗಳಿಂದ ಮೋಕ್ಷವನ್ನು ಹೇಳಿದಕಾರಣ ಶ್ರೀವಿಷ್ಣುವು **ಪರತರ** ಎಂಬುವ ಜ್ಞಾನದಿಂದ ಮೋಕ್ಷವಾಗುತ್ತದೆಂದು ಹೇಳಿದ್ದು **ಹೇಗೆ** ಎಂದರೆ—) ಬ್ರಹ್ಮ ರುದ್ರಾದಿಗಳಿಗೆಲ್ಲರಿಗಿಂತ ವಿಷ್ಣುವೇ **ಸರ್ವೋತ್ತಮನು**, ಎಂದು ತಿಳಿದುಕೊಳ್ಳುವುದು **ಜ್ಞಾನವೆನಿಸುತ್ತದೆ** ಹೀಗೆ ಲಕ್ಷ್ಮೀದೇವಿಯು **ವರಳೆನಿಸುತ್ತಾಳೆ** ಶ್ರೀಪರಮಾತ್ಮನು, **ಪರತರನು** ಇತ್ಯಾದಿ ರೀತಿಯಾಗಿ ಪ್ರತ್ಯೇಕ ಪ್ರತ್ಯೇಕ ಬಿಡಿಸಿ ತಿಳಿದುಕೊಳ್ಳುವುದು **ವಿಜ್ಞಾನವೆನಿಸುತ್ತದೆ** (**ಜ್ಞಾನಂ ತೇऽಹಂ** ಎಂಬುದರ ಅರ್ಥವನ್ನು **ಹೇಳಿದಂತೆಯೇ ಆಯಿತು**) (೧೧) ಈ ಜ್ಞಾನವು ಕೇಶವಾದಿಗಳಲ್ಲಿ ತರತಮಭಾವದಿಂದಲೇ ಇರುತ್ತದೆ ಆದಕಾರಣ ಶ್ರೀವಿಷ್ಣುವು ಮುಖ್ಯವಾಗಿ **ವಿಜ್ಞಾನೀ** ಎನಿಸುತ್ತಾನೆ ಬ್ರಹ್ಮಾದಿಗಳು ಯಥಾಯೋಗ್ಯವಾಗಿ ವಿಜ್ಞಾನಿಗಳು ॥ ೨ ॥ ॥ ೭ ॥

ಪೀ—ಜ್ಞಾನಂ ತೇऽಹಂ ಎಂದು ಜ್ಞಾನಪದದಿಂದ ಹೇಳಲ್ಪಟ್ಟ ಸಾಮಾನ್ಯ ಮಹಿಮೆಯನ್ನು **ಭೂಮಿರಾಪಃ** ಇದು ಮೊದಲಾದ ನಾಲ್ಕು ಶ್ಲೋಕಗಳಿಂದ ಹೇಳಿ ಈಗ ವಿಜ್ಞಾನಪದದಿಂದ ಹೇಳಲ್ಪಟ್ಟ ವಿಶೇಷವಾಗಿ ತಿಳಿಯಲು ಯೋಗ್ಯವಾದ ಶ್ರೀಹರಿಯ ಅಲೌಕಿಕವಾದ ಮಹಿಮೆಯನ್ನು ಹೇಳುತ್ತಾನೆ—

ಗೀ ॥ ರಸೋऽಹಮಪ್ಸು ಕೌಂತೇಯ ಪ್ರಭಾಸ್ಮಿ ಶಶಿಸೂರ್ಯಯೋಃ ।
ಪ್ರಣವಃ ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು ॥ ೮ ॥

ಅ ॥ ಕೌಂತೇಯ = ಅರ್ಜುನನೇ, ಅಹಂ — ನಾನು ಅಪ್ಸು = ಜಲಗಳಲ್ಲಿ ಶ್ರೇಷ್ಠವಾದುದು, ರಸಃ = ಯಾವುದು ರಸವೋ ಅಂತಹ ರಸಕ್ಕೆ ಶ್ರೇಷ್ಠತ್ವಾದಿ ಬರಲಕ್ಕೆ ವಿಶೇಷವಾಗಿ ಶ್ರೀಹರಿಯು ಕಾರಣನಾದುದರಿಂದಲೂ, ರಸಭೋಕ್ತನಾದ ದರಿಂದಲೂ **ರಸ**ಕ್ಕೆ ನಿಯಾಮಕನಾಗಿರುವುದರಿಂದಲೂ **ರಸಃ** ಎಂದು ಹೆಸರುಳ್ಳವನಾಗುತ್ತೇನೆ ಅಥವಾ ಜಲಗಳಲ್ಲಿದ್ದು ರಸವನ್ನು ತೆಗೆದುಕೊಳ್ಳುವುದರಿಂದಲೂ ರಸಕ್ಕೆ ಪ್ರೇರಕನಾಗಿರುವುದರಿಂದಲೂ **ರಸಃ** ಎಂದು ಹೆಸರುಳ್ಳವನಾಗಿರುತ್ತೇನೆ ಶಶಿಸೂರ್ಯಯೋಃ = ಚಂದ್ರಸೂರ್ಯರಲ್ಲಿರತಕ್ಕ ಕಾಂತಿಗೆ ಶ್ರೇಷ್ಠತ್ವವು ಬರಲಿಕ್ಕೆ ವಿಶೇಷವಾಗಿ ಕಾರಣನಾಗಿರುವುದರಿಂದ, **ಪ್ರಭಾಸ್ಮಿ** = ಪ್ರಭೆಯೆಂದು ಹೆಸರುಳ್ಳವನಾಗಿರುತ್ತೇನೆ ಅಥವಾ ಚಂದ್ರ ಸೂರ್ಯರಲ್ಲಿದ್ದು ತಾನು ಪ್ರಕಾಶಿಸುವುದರಿಂದ **ಪ್ರಭಾ** ಎಂದು ಹೆಸರುಳ್ಳವನಾಗಿರುತ್ತೇನೆ ಸರ್ವವೇದೇಷು = ಸಮಸ್ತ ವೇದಗಳಲ್ಲಿ ಶ್ರೇಷ್ಠವಾದ, ಪ್ರಣವಃ = ಪ್ರಣವ ಮಂತ್ರಕ್ಕೆ ನಿಯಾಮಕನಾಗಿ **ಪ್ರಣವ** ಎಂದು ಹೆಸರುಳ್ಳವನಾಗಿರುತ್ತೇನೆ ಅಥವಾ ಶ್ರೀಹರಿಯು ಸಮಸ್ತ ವೇದಗಳಲ್ಲಿದ್ದು ತನ್ನನ್ನು ಸ್ತುತಿಸಿಕೊಳ್ಳುತ್ತಾನೆ ವೇದಪುರುಷನು ಮಾಡುವ ಸ್ತುತಿಗೆ ಪ್ರೇರಕನಾಗಿರುತ್ತಾನೆ ಆಗಕಾರಣ **ಪ್ರಣವ** ಎಂದು ಹೆಸರುಳ್ಳವನು ಖೇ = ಆಕಾಶದಲ್ಲಿರತಕ್ಕ, ಶಬ್ದಃ = ಧ್ವನ್ಯಾತ್ಮಕ ಶಬ್ದಕ್ಕೆ ನಿಯಾಮಕನಾಗಿರುವುದರಿಂದ **ಶಬ್ದ**ನೆಂದು ಹೆಸರುಳ್ಳವನು ಮತ್ತು ಆಕಾಶದಲ್ಲಿದ್ದು ಶಬ್ದಕ್ಕೆ ಪ್ರೇರಕನಾಗಿರುವುದರಿಂದ **ಶಬ್ದ**ನೆಂದು ಹೆಸರುಳ್ಳವನು ನೃಷು = ಮನುಷ್ಯರಲ್ಲಿರತಕ್ಕ, ಪೌರುಷಂ = ಪುರುಷತ್ವಕ್ಕೆ ನಿಯಾಮಕನಾಗಿರುವುದರಿಂದಲೂ ಸ್ತ್ರೀಯರಲ್ಲಿಲ್ಲದಿರುವ, ಪುರುಷರಲ್ಲಿರತಕ್ಕ ವೀರ್ಯಕ್ಕೆ ಅಥವಾ ಸಾಮರ್ಥ್ಯ ವಿಶೇಷಕ್ಕೆ ಕಾರಣನಾದುದರಿಂದ **ಪೌರುಷ**ನೆಂದು ಹೆಸರುಳ್ಳವನಾಗಿರುತ್ತೇನೆ ॥ ೮ ॥

ತಾ ॥ (೧) ಸೋऽಪ್ಸು ಸ್ಥಿತ್ವಾ ರಸಯತಿ ರಸನಾಮಾ ತತಃ ಸ್ಮೃತಃ । ಸೂರ್ಯಚಂದ್ರಾದಿಷು ಸ್ಥಿತ್ವಾ ಪ್ರಭಾನಾಮಾ ಪ್ರಭಾಸನಾತ್ ॥ (೨) ವೇದಸ್ಥಃ ಪ್ರಣವಾಖ್ಯೋऽಸಾ-

ವಾತ್ಮಾನಂ ಯತ್ಪೃಣೌತ್ಯತಃ । ಏೇ ಸ್ಥಿತಃ ಶಬ್ದನಾಮಾಽಸೌ ಯಚ್ಛಬ್ದಯತಿ ಕೇ-
ಶವಃ ॥ ೪ ॥

ಅ ॥ (೧) ಶ್ರೀ ಹರಿಯು ಜಲದಲ್ಲಿದ್ದು ಅದರ ಸಾರವನ್ನು ತೆಗೆದುಕೊಳ್ಳುವುದರಿಂದಲೂ, ರಸಕ್ಕೆ ಪ್ರೇರಕನಾಗಿರುವುದರಿಂದಲೂ **ರಸ**ನೆಂದು ಹೆಸರುಳ್ಳವನು, ಸೂರ್ಯ ಚಂದ್ರಾದಿಗಳಲ್ಲಿದ್ದು ತಾನು ಪ್ರಕಾಶಿಸುವುದರಿಂದಲೂ, ಅವರ ಪ್ರಭೆ(ಕಾಂತಿ)ಗೆ ಪ್ರೇರಕನಾದುದರಿಂದಲೂ **ಪ್ರಭಾ** ಎಂದು ಹೆಸರುಳ್ಳವನು (೨) ಶ್ರೀಪರಮಾತ್ಮನು ಸಮಸ್ತವೇದಗಳಲ್ಲಿದ್ದು ತನ್ನನ್ನೇ ಜೆನ್ನಾಗಿ ಸ್ತುತಿಸಿಕೊಳ್ಳುವುದರಿಂದಲೂ, ವೇದವು ಮಾಡುವ ಸ್ತುತಿಗೆ ಪ್ರೇರಕನಾದುದರಿಂದಲೂ **ಪ್ರಣವ**ನೆಂದು ಹೆಸರುಳ್ಳವನು ಶ್ರೀ ಹರಿಯು ಆಕಾಶದಲ್ಲಿದ್ದು ಅದರಲ್ಲಿದ್ದ ಶಬ್ದಕ್ಕೆ ಪ್ರೇರಕನಾದುದರಿಂದಲೂ, ಮಾತನ್ನಾಡಿಸುವುದರಿಂದಲೂ **ಶಬ್ದ**ನೆಂದು ಹೆಸರುಳ್ಳವನು. ॥ ೪ ॥

ಗೀ ॥ ಪುಣ್ಯೋ ಗಂಧಃ ಪೃಥಿವ್ಯಾಂ ಚ ತೇಜಶ್ಚಾಸ್ಮಿ ವಿಭಾವಸೌ ।
ಜೀವನಂ ಸರ್ವಭೂತೇಷು ತಪಶ್ಚಾಸ್ಮಿ ತಪಸ್ವಿಷು ॥ ೯ ॥

ಅ ॥ ಪೃಥಿವ್ಯಾಂ = ಭೂಮಿಯಲ್ಲಿರತಕ್ಕ, ಪುಣ್ಯಃ = ಉತ್ತಮವಾದ, ಗಂಧಃ = ಗಂಧವು ಶ್ರೇಷ್ಠವಾಗಲಿಕ್ಕೆ ಕಾರಣನೂ ಸುಗಂಧಭೋಕ್ತನೂ ಆಗಿರುವುದರಿಂದಲೂ, ತಾನು ಭೂಮಿಯಲ್ಲಿದ್ದು ಸುರಭ್ಯಸುರಭಿ ಗಂಧಳಿಗೆ ಪ್ರೇರಕನಾದುದರಿಂದಲೂ **ಗಂಧ**ನೆಂದು ಹೆಸರುಳ್ಳವನು ವಿಭಾವಸೌ = ಅಗ್ನಿಯಲ್ಲಿರುವ, ತೇಜಶ್ಚಾಸ್ಮಿ = ಸುಡತಕ್ಕ ಸಾಮರ್ಥ್ಯಕ್ಕೆ ಕಾರಣನಾದುದರಿಂದ **ತೇಜಃ** ಎಂದು ಹೆಸರುಳ್ಳವನಾಗಿರುತ್ತೇನೆ ಸರ್ವಭೂತೇಷು = ಸಮಸ್ತ ಪ್ರಾಣಿಗಳ, ಜೀವನಂ = ಜೀವನಕ್ಕೆ ನಿಯಾಮಕನಾಗಿರುವುದರಿಂದಲೂ ಸಮಸ್ತ ಪ್ರಾಣಿಗಳಲ್ಲಿದ್ದು ಅವುಗಳಿಗೆ ಜೀವನವನ್ನು ಕೊಡುವುದರಿಂದಲೂ **ಜೀವನ**ನೆಂದು ಹೆಸರುಳ್ಳವನು ತಪಸ್ವಿಷು = ತಪಸ್ಸು ಮಾಡುವವರ, ತಪಶ್ಚ = ಕೃಚ್ಛ್ರ ಚಾಂದ್ರಾಯಣಾದಿ ತಪಸ್ಸುಗಳಿಗೆ ನಿಯಾಮಕನಾಗಿ ಇರುವುದರಿಂದಲೂ, ತಪಸ್ವಿಗಳಲ್ಲಿದ್ದು ತಪಸ್ಸು ಮಾಡುವುದರಿಂದಲೂ, ತಪಸ್ವಿಗೆ ಪ್ರೇರಕನಾಗಿರುವುದರಿಂದಲೂ **ತಪಃ** ಎಂದು ಹೆಸರುಳ್ಳವನಾಗಿರುತ್ತೇನೆ ॥ ೯ ॥

ತಾ ॥ ಪುಣ್ಯಾಪುಣ್ಯಂ ಗಂಧಯತಿ ಸ್ವಯಂ ಪುಣ್ಯೋ ಧರಾಸ್ಥಿತಃ । ತೇಜಯತ್ಯಗ್ನಿಸಂಸ್ಥಃ
ಸನ್ಭೂ(ಭೂ)ತಸ್ಥೋ ಜೀವನಪ್ರದಃ । ತಪಸ್ಸ್ಥಿಸ್ಥಸ್ತಪಯತಿ ॥ ೯ ॥

ಅ ॥ ಶ್ರೀಪರಮಾತ್ಮನು ತಾನು ಭೂಮಿಯಲ್ಲಿದ್ದು ಅಪ್ರಾಕೃತ ಗಂಧಸ್ವರೂಪನಾಗಿ ಸುವಾಸನೆ ದುರ್ವಾಸನೆಗಳಿಗೆ ಪ್ರೇರಕನಾದುದರಿಂದ ಪುಣ್ಯಗಂಧನೆಂದು ಹೆಸರುಳ್ಳವನು. ಅಗ್ನಿಯಲ್ಲಿದ್ದು ತೇಜಸ್ಸುಳ್ಳವನೂ, ತೇಜಸ್ಸಿಗೆ ಪ್ರೇರಕನೂ ಆಗಿರುವುದರಿಂದ **ತೇಜಃ** ಎಂದು ಹೆಸರುಳ್ಳವನು ಸಮಸ್ತ ಪ್ರಾಣಿಗಳಲ್ಲಿದ್ದವನಾಗಿ ಜೀವನವನ್ನು ಕೊಡತಕ್ಕವನಾದುದರಿಂದ **ಜೀವನ**ವೆನಿಸುತ್ತಾನೆ ತಪಸ್ವಿಗಳಲ್ಲಿದ್ದು ನಿತ್ಯಜ್ಞಾನಾತ್ಮಕವಾದ ತಪಸ್ಸನ್ನು ಮಾಡುತ್ತಾ ತಪಸ್ವಿಗೆ ಪ್ರೇರಕನಾಗಿರುವಕಾರಣ **ತಪಃ** ಎನಿಸುತ್ತಾನೆ ॥ ೯ ॥

ಗೀ ॥ ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ಪಾರ್ಥ ಸನಾತನಂ ।
ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಂ ॥ ೧೦ ॥

ಅ ॥ ಪಾರ್ಥ = ಅರ್ಜುನನೇ, ಸನಾತನಂ = ಶಶ್ವದೇಕಪ್ರಕಾರನಾದ, ಮಾಂ = ನನ್ನನ್ನು, ಸರ್ವ ಭೂತಾನಾಂ = ಸಮಸ್ತಪ್ರಾಣಿಗಳಿಗೆ, ಬೀಜಂ = ಕಾರಣನನ್ನಾಗಿ, ವಿದ್ಧಿ = ತಿಳಿದುಕೊಳ್ಳು, ಬುದ್ಧಿಮತಾಂ = ಜ್ಞಾನಿಗಳ, ಬುದ್ಧಿರಸ್ಮಿ = ಬುದ್ಧಿಗೆ ನಿಯಾಮಕನಾಗಿರುವುದರಿಂದ ಬುದ್ಧಿ ಎಂದು ಹೆಸರುಳ್ಳವನಾಗಿರುತ್ತೇನೆ ಅಹಂ = ನಾನು ತೇಜಸ್ವಿನಾಂ = ತೇಜಸ್ಸುಳ್ಳವರ, ತೇಜಃ = ತೇಜಸ್ಸಿಗೆ. ನಿಯಾಮಕನಾಗಿ ತೇಜಸ್ಸಿಗೆ ಪ್ರೇರಕನಾದುದರಿಂದ ತೇಜಃ ಎಂದು ಹೆಸರುಳ್ಳವನಾಗಿರುತ್ತೇನೆ (ಮತ್ತು ಜಲ ಮೊದಲಾದ ಸರ್ವ ವಸ್ತುಗಳಿಗೆ, ರಸ ಗಂಧ ಪ್ರಭೆ ಮೊದಲಾದ ಧರ್ಮಗಳನ್ನು ವ್ಯವಸ್ಥೆಯಿಂದ ಮಾಡುವುದರಿಂದ ಶ್ರೀ ಹರಿಯು ರಸ ಗಂಧ ಪ್ರಭೆ ಮೊದಲಾದ ಹೆಸರುಳ್ಳವನು) ॥ ೧೦ ॥

ತಾ ॥ ವ್ಯಂಜನಾದ್ಬೀಜಸಂಜ್ಞಿತಃ । ಬೋಧನಾದ್ಬುದ್ಧಿನಾಮಾಽಸೌ ಬುದ್ಧಿಮತ್ಸು ವ್ಯವಸ್ಥಿತಃ ॥ ೧೦ ॥

ಅ ॥ ಬೀಜದಲ್ಲಿದು ಅಂಕುರ (ಮೊಳಕೆ)ವನ್ನು ಹೊರಡಿಸುವುದರಿಂದ ಅಥವಾ ಜಗತ್ತನ್ನು ಸೃಷ್ಟಿಸುವುದರಿಂದಲೂ ಬೀಜಕ್ಕೆ ಶಕ್ತಿಯನ್ನು ಪ್ರೇರೇಪಿಸುವುದರಿಂದಲೂ ಶ್ರೀಪರಮಾತ್ಮನು ಬೀಜನೆಂದು ಹೆಸರುಳ್ಳವನು ಜ್ಞಾನಿಗಳಲ್ಲಿದ್ದು ತಿಳಿಯುವುದರಿಂದಲೂ ಬುದಿಗೆ ಪ್ರೇರಕನಾದುದರಿಂದಲೂ ಬುದ್ಧಿಯೆಂದು ಹೆಸರುಳ್ಳವನು ॥ ೧೦ ॥

ಗೀ ॥ ಬಲಂ ಬಲವತಾಮಸ್ಮಿ ಕಾಮರಾಗವಿವರ್ಜಿತಂ ।
ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ ॥ ೧೧ ॥

ಅ ॥ಭರತರ್ಷಭ = ಭರತಕುಲದಲ್ಲಿ ಶ್ರೇಷ್ಠನಾದ ಅರ್ಜುನನೇ, ಅಹಂ = ನಾನು, ಬಲವತಾಂ = ಬಲವುಳ್ಳ ಜನರಲ್ಲಿದ್ದು, ಕಾಮರಾಗವಿವರ್ಜಿತಂ = ಕಾಮರಾಗಗಳಿಲ್ಲದ ಬಲಮಸ್ಮಿ = ಬಲವೆಂದು ಹೆಸರುಳ್ಳವನಾಗಿರುತ್ತೇನೆ ಭೂತೇಷು = ಪ್ರಾಣಿಗಳಲ್ಲಿ ಧರ್ಮಾವಿರುದ್ಧಃ = ಧರ್ಮಗಳಿಗೆ ವಿರುದ್ಧವಾಗದಿರುವ, ಕಾಮಃ ಅಸ್ಮಿ = ಇಚ್ಛೆಗೆ ಪ್ರೇರಕನಾಗಿರುವುದರಿಂದ ಕಾಮನೆಂದು ಹೆಸರುಳ್ಳವನಾಗಿರುತ್ತೇನೆ. ॥ ೧೧ ॥

ತಾ ॥ (೧) ನಿತ್ಯಪೂರ್ಣಬಲತ್ವಾತ್ತು ಬಲಂ ಕಾಮವಿವರ್ಜಿತಂ । ಅರಾಗಜ(ಜಸ) ಬಲಶ್ಚೈವ ಸ್ವಾನೇಭ್ಯೋಽನ್ಯೇಷ್ವಯೋಜನಾತ್ ॥ (೨) ಏತಾದೃಶಬಲಾತ್ಕಾಮಸೌ ಬಲಿನಾಂ ಬಲದಃ ಸ್ವಯಂ । ವೇತಿ ಪೂರ್ಣತ್ವವಾಚೀ ಸ್ಯಾತ್ತದ್ರತೇರ್ಬಲಮುಚ್ಯತೇ ॥ (೩) ಪ್ರಾಯೋ ಹಿ ಕಾಮಿತಾ ಆರ್ಧಾ ಧರ್ಮಂ ಹನ್ಯುರ್ಪರಿಃ ಪುನಃ । ನ ಧರ್ಮಹಾನಿಕೃತ್ಕಿಂತು ಕಾಮಿತೋ ಧರ್ಮಬುದ್ಧಿಕೃತ್ । ಧರ್ಮಾವಿರುದ್ಧಕಾಮೋಽತೋ ವಿಷ್ಣುರ್ಭೂತೇಷು ಸಂಸ್ಥಿತಃ ॥ (೪) ಏವಂ ಸ ಸರ್ವತಶ್ಚಾನ್ಯಃ ಸ್ವತಂತ್ರಶ್ಚೈವ ಸರ್ವಗಃ । ವ್ಯವಸ್ಥಯೈವ ಸರ್ವೇಷಾಂ ಸರ್ವದಾ ಸರ್ವದಃ ಪ್ರಭುಃ ॥ ೧೧ ॥

ಅ ॥ (೧) ವಿಷಯಭೋಗಾಪೇಕ್ಷೆಯಿಲ್ಲದೆ ನಿತ್ಯವಾದ ಪೂರ್ಣಬಲವಿದ್ದುದರಿಂದ ಕಾಮವಿರಹಿತವಾದ ಬಲರೂಪನು ಅಯೋಗ್ಯಸ್ಥಾನಗಳಲ್ಲಿ ತನ್ನ ಬಲವನ್ನು ಪಯೋಗಿಸದಿರುವುದರಿಂದ ಕಾಮದಿಂದ ಉಂಟಾದ ಬಲವಿಲ್ಲದವನು (ಅಂದರೆ ಇತರರ ದ್ರವ್ಯ ಸ್ತ್ರೀ ಮೊದಲಾದವರ ಅನುರಾಗವುಳ್ಳವರು ಬಲಪ್ರಯೋಗಕ್ಕೆ ಅನರ್ಹರಾದ ಧನ ಸ್ತ್ರೀ ಮೊದಲಾದವರ ಸ್ವಾಮಿಗಳಲ್ಲಿ ಅವರ ಸಂಹಾರಕ್ಕಾಗಿ ಬಲವನ್ನು

ಪ್ರಯೋಗಿಸುತ್ತಾರೆ) ಹಾಗೆ ಶ್ರೀ ಪರಮಾತ್ಮನು ಮಾಡುವುದಿಲ್ಲ (೨) (ಆರ್ಥಾಂತರವನ್ನು ಹೇಳುತ್ತಾರೆ-) ಇಂತಹ ಬಲರೂಪನಾದ ಶ್ರೀಪರಮಾತ್ಮನು ತಾನು ಬಲಿಷ್ಠರಿಗೂ ಬಲಪ್ರದನು (ಆರ್ಥಾಂತರವನ್ನು ಹೇಳುತ್ತಾರೆ—) ವ (ಬ) ಎಂಬುವುದು ಪೂರ್ಣವೆಂಬುವ ಅರ್ಥವನ್ನು ಹೇಳುತ್ತದೆ (ರ. ಲ) ಪೂರ್ಣರತಿಯಿರುವುದರಿಂದ ಬಲನೆಂದು ಹೇಳಲ್ಪಡುತ್ತಾನೆ (ಇದರಿಂದ ಬಲವುಳ್ಳ ಭೀಮಾದಿಗಳಿಗೂ ಅತಿಶಯವಾಗಿ ಬಲವನ್ನು ಕೊಡುವವನು, ಎಂದು ಉಕ್ತವಾಯಿತು.) (೩) ಪ್ರಾಯಶಃ ಇಚ್ಛಿಸಲ್ಪಟ್ಟ ಅರ್ಥಗಳು ಧರ್ಮವನ್ನು ಕಡಿಸುತ್ತವೆ ಶ್ರೀಪರಮಾತ್ಮನಾದರೂ ಧರ್ಮವನ್ನು ಕೆಡಿಸುವುದಿಲ್ಲ ಮತ್ತೆ ಧರ್ಮಾದಿಗಳಿಂದ ಶ್ರೀಪರಮಾತ್ಮನನ್ನು ವಶೀಕರಿಸಿದರೆ ಧರ್ಮವೃದ್ಧಿಯನ್ನೇ ಮಾಡುತ್ತಾನೆ ಆದಕಾರಣ ಶ್ರೀಪರಮಾತ್ಮನು ಪ್ರಾಣಿಗಳಲ್ಲಿದ್ದು ಧರ್ಮಕ್ಕೆ ಅವಿರುದ್ಧವಾದ ಕಾಮವನ್ನು ಕೊಡುವವನು. (೪) ಹೀಗೆ ಶ್ರೀ ಪರಮಾತ್ಮನು ಸರ್ವ ವಸ್ತುಗಳಿಂದಲೂ ಭಿನ್ನನು ಸರ್ವ ಸ್ವತಂತ್ರನು ಸರ್ವರಿಗೂ ಸ್ವಾಮಿಯಾದ ಶ್ರೀಪರಮಾತ್ಮನು ಜಲಗಳಲ್ಲಿ ರಸವೇ, ಭೂಮಿಯಲ್ಲಿ ಗಂಧವೇ, ಇದು ಮೊದಲಾದ ವ್ಯವಸ್ಥೆಯಿಂದಲೇ ಜಲಾದಿಗಳಿಗೆ ಅಸಾಧಾರಣವಾದ ರಸಮೊದಲಾದ ಗುಣಗಳನ್ನು ಕೊಡತಕ್ಕವನು ಆದ ಕಾರಣ ರಸಾದಿನಾಮಗಳುಳ್ಳವನು ॥ ೧೮ ॥

ಪೀ—ಶ್ರೀಪರಮಾತ್ಮನು ರಸಮೊದಲಾದ ಧರ್ಮಗಳಿಗೆ ಮಾತ್ರ ಪ್ರೇರಕನೆಂದಲ್ಲ, ಮತ್ತೆ ಜಲ ಮೊದಲಾದ ಸರ್ವ ಧರ್ಮಿಗಳಿಗೆ ಪ್ರೇರಕನೂ ಆಗಿರುತ್ತಾನೆನ್ನುತ್ತಾರೆ—

ಗೀ॥ ಯೇ ಚೈವ ಸಾತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚ ಯೇ।
ಮತ್ತ ಏವೇತಿ ತಾನ್ವಿದ್ಧಿ ನ ತ್ವಹಂ ತೇಷು ತೇ ಮಯಿ ॥ ೧೨ ॥

ಅ ॥ ಯೇ ಚ ಭಾವಾಃ=ಯಾವ ಪದಾರ್ಥಗಳು, ಸಾತ್ವಿಕಾಃ= ಸತ್ವಗುಣದ ವಿಕಾರಗಳೋ, ರಾಜಸಾಃ=ರಜೋಗುಣದ ವಿಕಾರಗಳೋ ತಾಮಸಾಶ್ಚ = ತಮೋಗುಣದ ವಿಕಾರಗಳೋ, ತಾನ್ ಸರ್ವಾನ್ = ಆ ಎಲ್ಲಾ ಪದಾರ್ಥಗಳನ್ನು, ಮತ್ತ ಏವ = ನನ್ನಿಂದಲೇ ಹುಟ್ಟಿದವುಗಳನ್ನಾಗಿ, ವಿದ್ಧಿ = ತಿಳಿದುಕೊಳ್ಳು (ಹಾಗೆಯೇ) ತೇ=ನನ್ನಿಂದ ಹುಟ್ಟಿವ ಆ ಪದಾರ್ಥಗಳು, ಮಯಿ=ನನ್ನನ್ನೇ ಆಶ್ರಯಿಸಿಕೊಂಡು, (ನನ್ನನ್ನೇ ಉಪಜೀವಿಸಿಕೊಂಡು) ಇರುತ್ತವೆ ಇತಿ ವಿದ್ಧಿ = ಹೀಗೆ ತಿಳಿದುಕೊಳ್ಳು, ಅಹಂ ತು – ನಾನಾದರೂ, ತೇಷು = ಆ ಪದಾರ್ಥಗಳನ್ನು ಪಜೀವಿಸಿಕೊಂಡು ನ್ಯವ = ಇರುವವನೇ ಅಲ್ಲ ॥ ೧೨ ॥

ಭಾ ॥ (೧) ಇದಂ ಜ್ಞಾನಂ ॥ (೨) ರಸೋಽಹಮಿತಿ ವಿಜ್ಞಾನಂ ॥ (೩) ಅಬಾದಯೋಽಪಿ ಹಿ ತತ ಏವ । ತಥಾಽಪಿ ರಸಾದಿಸ್ವಭಾವಾನಾಂ ಸಾರಾಣಾಂ ಚ ಸ್ವಭಾವತ್ವೇ ಸಾರತ್ವೇ ಚ ವಿಶೇಷತೋಽಪಿ ಸ ಏವ ನಿಯಾಮಕಃ । ನ ತ್ವಬಾದಿನಿಯಮಾನುಬದ್ಧೋ ರಸಾದಿಸ್ತತ್ಸಾರತ್ವಾದಿಶ್ಚೇತಿ ದರ್ಶಯತಿ । ಅಪ್ಸು ರಸ ಇತ್ಯಾದಿವಿಶೇಷಶಬ್ದೈಃ ॥ (೪) ಭೋಗಶ್ಚ ವಿಶೇಷತೋ ರಸಾದೇರಿತಿ । ಉಪಾಸನಾರ್ಥಂ ಚ ॥ ೧ ॥

ಅ ॥ (೧) ಭೂಮಿರಾಪಃ ಇತ್ಯಾದಿ ಶ್ಲೋಕಗಳಿಂದ ಸಾಮಾನ್ಯತಃ ತಿಳಿಯಲು ಯೋಗ್ಯವಾದ ಮಾಹಾತ್ಮ್ಯವು ಹೇಳಲ್ಪಟ್ಟಿತು. (೨) ರಸೋಽಹಂ ಇತ್ಯಾದಿಗಳು ವಿಶೇಷತಃ ತಿಳಿಯಲು ಯೋಗ್ಯವಾದ ಮಾಹಾತ್ಮ್ಯಪ್ರತಿಪಾದಕಗಳು (ಅಲೌಕಿಕ ಮಾಹಾತ್ಮ್ಯವನ್ನು ಹೇಳುವುದರಿಂದ ಇದು ವಿಶೇಷ ಮಹಿಮಾ ಪ್ರತಿಪಾದಕವೆಂದು ತಿಳಿಯುತ್ತದೆ) (ರಸ ಪ್ರಭಾ ಇತ್ಯಾದಿಗಳ ಸತ್ತಾ ಪ್ರತೀತಿ ಇತ್ಯಾದಿಗಳಿಗೆ

ಕಾರಣನಾದುದರಿಂದಲೂ ರಸಾದಿಗಳ ಭೋಕ್ತನಾದುದರಿಂದಲೂ ಶ್ರೀಪರಮಾತ್ಮನು ರಸಾದಿಶಬ್ದಗಳಿಂದ ಹೇಳಲ್ಪಡುತ್ತಾನೆ) (೩) ಜಲಮೊದಲಾದ ಧರ್ಮಗಳೂ ಶ್ರೀಪರಮಾತ್ಮನ ಅಧೀನಗಳೇ ಆಗಿವೆ ಶ್ರೀಹರಿಗೆ ಭೋಗ್ಯಗಳೂ ಆಗಿವೆ ಆದರೂ ಜಲಾದಿಗಳ ಸ್ವಾಭಾವಿಕ ಧರ್ಮಗಳಾದ ರಸವೇ ಮೊದಲಾದವುಗಳಿಗೂ ಜಲಾದಿಗಳ ಧರ್ಮಗಳಾದ ಸಂಖ್ಯೆ ಮೊದಲಾದವುಗಳಲ್ಲಿ ಶ್ರೇಷ್ಠವಾದ ರಸಾದಿಗಳಿಗೂ, (ಅಂದರೆ — ಜಲಾದಿಗಳ ಸ್ವಾಭಾವಿಕ ಧರ್ಮಭೂತಗಳಾದ ರಸಾದಿಗಳೂ ಜಲಾದಿಗಳ ಧರ್ಮಗಳಲ್ಲಿ ಶ್ರೇಷ್ಠಗಳಾದ ರಸಾದಿಗಳೂ) ಜಲಾದಿಗಳ ಸ್ವಭಾವವೇ ಬುವ ವಿಷಯದಲ್ಲಿಯೂ ಜಲಾದಿಗಳ ಧರ್ಮಗಳಲ್ಲಿ ಶ್ರೇಷ್ಠವೆಂಬುವ ವಿಷಯದಲ್ಲಿಯೂ ರಸ ಮೊದಲಾದವುಗಳಿಗೆ ರಸತ್ವ ಮೊದಲಾದುದು ಇದೆ, ಎಂಬುವ ವಿಷಯದಲ್ಲಿಯೂ ಶ್ರೀಪರಮಾತ್ಮನೇ ವಿಶೇಷ (ಮುಖ್ಯ) ವಾಗಿಯೂ ನಿಯಾಮಕನು (ಯದ್ಯಪಿ ಧರ್ಮಿಗಳೂ ಶ್ರೀಹರಿಯ ಅಧೀನಗಳೇ ಆದಾಗ್ಯೂ ಜಲಾದಿರೂಪ ಧರ್ಮಿಗಳಿಂದಲೂ ಜಲಾದಿಗಳಲ್ಲಿರುವ ರಸಾದಿಧರ್ಮಗಳಿಗೆ ವಿಶೇಷತಃ ನಿಯಾಮಕನಾಗಿರುವುದರಿಂದ **ಅಪ್ಸು ರಸಃ** ಎಂದು ಪ್ರತ್ಯೇಕ ಹೇಳಿದ್ದು ಯುಕ್ತವು) ರಸ ಮೊದಲಾದುದೂ ಆ ರಸಾದಿಗಳಿಗೆ ಜಲಾದಿ ಧರ್ಮಗಳಲ್ಲಿ ಸಾರತ್ವವೂ, ಜಲಾದಿಗಳ ಸ್ವಭಾವತ್ವವೂ ರಸತ್ವಾದಿಗಳೂ ಜಲಾದಿಗಳ ನಿಯಮಾನುಬದ್ಧವಲ್ಲವೆಂದು **ಅಪ್ಸು ರಸಃ** ಇತ್ಯಾದಿ ವಿಶೇಷ ಶಬ್ದಗಳಿಂದ ತೋರಿಸುತ್ತಾರೆ (ಅಂದರೆ ಲೋಕದಲ್ಲಿ ಕುಂಬಾರ ನೇಕಾರ ಮೊದಲಾದವರು ಮಡಿಕೆ ಬಟ್ಟೆ ಮೊದಲಾದ ವಸ್ತುಗಳನ್ನು ಮಾಡುತ್ತಾರೆ. ಅವುಗಳಲ್ಲಿರುವ ಗಂಧ ರಸ ಮೊದಲಾದ ಗುಣಗಳಲ್ಲಿಯೂ ಅವುಗಳ ಧರ್ಮಗಳಾದ ಗಂಧತ್ವಾದಿಗಳನ್ನು ಮಾಡುವ ವಿಷಯದಲ್ಲಿಯೂ ಪ್ರತ್ಯೇಕವಾಗಿ ಕರ್ತೃತ್ವವುಳ್ಳವರಲ್ಲ ಆದರೂ ಮಡಿಕೆ ಮೊದಲಾದವುಗಳು ಹುಟ್ಟುವಾಗ ಅದರೊಂದಿಗೆ ಅವುಗಳ ಧರ್ಮಗಳೂ ಹುಟ್ಟುತ್ತವೆ ಶ್ರೀಪರಮಾತ್ಮನಾದರೂ ಹಾಗಲ್ಲ ಮತ್ತೆ ಜಲಾದಿಗಳ ಧರ್ಮಗಳಾದ ರಸಾದಿ ಗುಣಗಳಲ್ಲಿಯೂ ಜಲಾದಿ ಧರ್ಮಗಳಾದ ಸ್ವಭಾವತ್ವಾದಿ ವಿಷಯದಲ್ಲಿಯೂ ಅವುಗಳಲ್ಲಿರುವ ಗಂಧತ್ವಾದಿ ಧರ್ಮಗಳಲ್ಲಿಯೂ ಪ್ರತ್ಯೇಕವಾಗಿ ಸೃಷ್ಟಿ ಮಾಡತಕ್ಕ ಶಕ್ತಿಯಿದ್ದವನೇ ಪ್ರತ್ಯೇಕ ವ್ಯಾಪಾರವುಳ್ಳವನೇ ನಿಯಮದಿಂದ ಇರುತ್ತಾನೆ ಕುಂಬಾರಾದಿಗಳಿಗೆ ಅಂತಹ ಶಕ್ತಿಯಿಲ್ಲ ಮಡಿಕೆ ಮಾತ್ರ ಮಾಡುತ್ತಾನೆ ಅದರಲ್ಲಿರುವ ಎಲ್ಲಾ ಧರ್ಮಗಳನ್ನು ಪ್ರತ್ಯೇಕ ಹುಟ್ಟಿಸುವ ಶಕ್ತಿಯೂ ಅವುಗಳನ್ನು ಪ್ರೇರಣೆ ಮಾಡುವ ಶಕ್ತಿಯೂ ಇರುವುದಿಲ್ಲ ಶ್ರೀಪರಮಾತ್ಮನಿಗಾದರೂ ಧರ್ಮಗಳನ್ನು ಪ್ರತ್ಯೇಕ ಸೃಷ್ಟಿಸುವ ಶಕ್ತಿಯೂ ನಿಯಮಿಸುವ ಶಕ್ತಿಯೂ ಇದೆ ಎಂದು ತೋರಿಸುವುದಕ್ಕಾಗಿ **ಅಪ್ಸು ರಸಃ** ಇತ್ಯಾದಿ ವಿಶೇಷ ಶಬ್ದಗಳನ್ನು ತೆಗೆದುಕೊಂಡಿದ್ದು) (೪)(ರಸಾದಿ, ಭೋಕ್ತೃತ್ವ ಪಕ್ಷದಲ್ಲಿಯೂ ಪ್ರಯೋಜನವನ್ನು ತೋರಿಸುತ್ತಾರೆ) ಜಲಾದಿಗಳ ಭೋಗಕ್ಕಿಂತಲೂ ಅತಿಶಯವಾಗಿ ರಸಾದಿಗಳ ಭೋಗವು ಶ್ರೀಪರಮಾತ್ಮನಿಗೆ ಎಂದು **ಅಪ್ಸು ರಸಃ** ಇತ್ಯಾದಿ ವಿಶೇಷಶಬ್ದಗಳಿಂದ ತೋರಿಸುತ್ತಾರೆ ಜಲಾದಿಗಳಿಗಿಂತ ವಿಶೇಷವಾಗಿ ರಸ ಗಂಧ ಮೊದಲಾದವುಗಳಲ್ಲಿ ಶ್ರೀಪರಮಾತ್ಮನನ್ನು ಉಪಾಸನಾವಮಾಡುವುದಕ್ಕಾಗಿ **ಅಪ್ಸು ರಸಃ** ಇತ್ಯಾದಿ ವಿಶೇಷತಃ ಪ್ರತ್ಯೇಕ ಉಕ್ತಿಯು ಕೂಡುತ್ತದೆ

ವಿ ॥ (1) ಜಲಗಳಲ್ಲಿ ಸಾರಭೂತವಾದುದು ಯಾವುದು ರಸವೋ, ರಸಕ್ಕೆ ಜಲದ ಸ್ವಾಭಾವಿಕವಾದ ಧರ್ಮ ಸ್ವಭಾವತ್ವದಲ್ಲಿಯೂ ರಸಾದಿಗಳಿಗೆ ಜಲಧರ್ಮಗಳಾದ ಸಂಖ್ಯಾ ಮೊದಲಾದವುಗಳಲ್ಲಿ ಶ್ರೇಷ್ಠತ್ವದಲ್ಲಿಯೂ ರಸತ್ವದಲ್ಲಿಯೂ ಶ್ರೀಪರಮಾತ್ಮನು ವಿಶೇಷವಾಗಿ ಕಾರಣನಾಗಿರುವುದರಿಂದಲೂ ರಸಾದಿಗಳಿಗೆ ಭೋಕ್ತನಾಗಿರುವುದರಿಂದಲೂ ಅವುಗಳಲ್ಲಿ ಪರಮಾತ್ಮನನ್ನೇ ವಿಶೇಷತಃ ಉಪಾಸನೆ ಮಾಡುವುದಕ್ಕಾಗಿ ರಸೋऽಹಂ ಎಂದು ಜಲಾದಿಗಳಿಗಿಂತ ಪ್ರತ್ಯೇಕ ಹೇಳಿದ್ದು ಯುಕ್ತವು ಹೀಗೆಯೇ (2) ಚಂದ್ರಸೂರ್ಯರದ್ದು ಯಾವುದು ಪ್ರಭೆಯು ಇದೆಯೋ, ಆ ಕಾಂತಿಗೆ ಚಂದ್ರಸೂರ್ಯರ ಸ್ವಾಭಾವಿಕ ಧರ್ಮದಲ್ಲಿಯೂ ಆ ಪ್ರಭೆಗೆ ಚಂದ್ರಸೂರ್ಯರ ಧರ್ಮಗಳಲ್ಲಿ ಶ್ರೇಷ್ಠತ್ವದಲ್ಲಿಯೂ, ಆ ಪ್ರಭೆಗೆ ಪ್ರಭಾತ್ವರೂಪಧರ್ಮತ್ವದಲ್ಲಿಯೂ ಶ್ರೀಪರಮಾತ್ಮನು ವಿಶೇಷವಾಗಿ ಕಾರಣನಾದುದರಿಂದ **ಪ್ರಭಾऽಸ್ಮಿ** ಎಂದು ವಿಶೇಷವಾಗಿ

ಹೇಳಿದ್ದು. (3) ಸಮಸ್ತ ವೇದಗಳಲ್ಲಿ ಸಾರಭೂತವಾದುದು ಯಾವುದು ಪ್ರಣವವು ಇದೆಯೋ, ಅದಕ್ಕೆ ವೇದಗಳ ಸಾರತ್ವವೂ, ಪ್ರಣವಕ್ಕೆ ಪ್ರಣವತ್ವವೂ ಇದೆ ಇವೆಲ್ಲವೂ ಶ್ರೀಹರಿಯ ಅಧೀನಗಳು. ಆದ ಕಾರಣ ಪ್ರಣವಃ ಅಸ್ಮಿ ಎಂದದ್ದು (4) ಆಕಾಶದಲ್ಲಿದ್ದ ಧ್ವನ್ಯಾತ್ಮಕ ಶಬ್ದವು ಅದಕ್ಕೆ ಆಕಾಶದ್ದು ಸ್ವಾಭಾವಿಕ ಧರ್ಮತ್ವವೂ ಆ ಶಬ್ದಕ್ಕೆ ಸಂಖ್ಯಾ ಮೊದಲಾದ ಆಕಾಶಧರ್ಮಗಳಲ್ಲಿ ಶ್ರೇಷ್ಠತ್ವವೂ ಶಬ್ದದಲ್ಲಿ ಶಬ್ದತ್ವರೂಪ ಧರ್ಮವೂ ಇವೆಲ್ಲವೂ ಶ್ರೀಹರಿಯ ಅಧೀನಗಳು ಶಬ್ದವು ಶ್ರೀಹರಿಗೆ ಭೋಗ್ಯವೂ ಆಗಿದೆ. ಅದಕಾರಣ ಶಬ್ದೋಽಹಮಸ್ಮಿ ಎಂದು ಹೇಳಿದ್ದು. (5) ಪೃಥಿವಿಯಲ್ಲಿದ್ದ ಸುಗಂಧವು ಭೂಮಿದ್ದು ಸ್ವಾಭಾವಿಕ ಧರ್ಮವು ಆದು ಪೃಥಿವೀಧರ್ಮಗಳಲ್ಲಿ ಶ್ರೇಷ್ಠವು. ಗಂಧದಲ್ಲಿ ಗಂಧತ್ವವಿದೆ, ಶ್ರೀಹರಿಯು ಗಂಧಭೋಕ್ತನು. ಇವು ಎಲ್ಲಾದಕ್ಕೂ ಶ್ರೀಪರಮಾತ್ಮನೇ ಕಾರಣನು ಸುಗಂಧವನ್ನು ಅನುಭವಿಸುವವನೂ ಆಗಿರುತ್ತಾನೆ ಆದಕಾರಣ ಗಂಧಃ ಅಹಮಸ್ಮಿ ಎಂದು ಹೇಳಿದ್ದು ಇದೇರೀತಿಯಾಗಿ ಎಲ್ಲಾ ಕಡೆ ತಿಳಿಯತಕ್ಕದ್ದು (6) ರಸೋಽಹಮಸ್ಮೀತ್ಯುಪಾಸೀತ ಇತ್ಯಾದಿ ರೂಪವಾಗಿ ರಸಾದಿಗಳು ಶ್ರೀಹರಿಯ ಉಪಾಸನೆಕ್ಕಾಗಿ ಪ್ರತಿಮಾಸ್ಥಾನೀಯಗಳು ಏವಂಚ ಜಲಾದಿಗಳಲ್ಲಿ ಶ್ರೀಪರಮಾತ್ಮನನ್ನು ಉಪಾಸನೆಮಾಡುವುದಕ್ಕಿಂತ ರಸಾದಿಗಳಲ್ಲಿ ಶ್ರೀಪರಮಾತ್ಮನ ಉಪಾಸನೆಯು ಶ್ರೇಷ್ಠವಾಗಿರುವುದರಿಂದ ಪ್ರತ್ಯೇಕ ಹೇಳಿದ್ದು ॥ ೧ ॥

ಹೀ— ಶ್ರೀಪರಮಾತ್ಮನು ಸತ್ತಾದಿಗಳಿಗೆ ಕಾರಣನಾಗಿರುವುದರಿಂದಲೂ ಸರ್ವಭೋಕ್ತನಾಗಿರುವುದರಿಂದಲೂ, ರಸಾದಿಗಳಲ್ಲಿ ಜಲಾದಿಗಳಿಗಿಂತಲೂ ವಿಶೇಷವಾಗಿ ಉಪಾಸನೆಮಾಡಬೇಕೆಂಬುವುದಕ್ಕಾಗಿಯೂ **ಅಪ್ಸು ರಸಃ ಅಹಂ** ಇದುಮೊದಲಾದುದನ್ನು ಹೇಳಿದ್ದು, ಎಂಬ ಮೂರು ಅರ್ಧಗಳಲ್ಲಿ ಪ್ರಮಾಣವನ್ನು ಹೇಳುತ್ತಾರೆ—

ಭಾ ॥ (೧) ಉಕ್ತಂ ಚ ಗೀತಾಕಲ್ಪೇ । ರಸಾದೀನಾಂ ರಸಾದಿತ್ವೇ ಸ್ವಭಾವತ್ವೇ ತಥೈವ ಚ । ಸಾರತ್ವೇ ಸರ್ವಧರ್ಮೇಷು ವಿಶೇಷೇಣಾಪಿ ಕಾರಣಂ । ಸಾರಭೋಕ್ತಾ ಚ ಸರ್ವತ್ರ ಯತೋಽತೋ ಜಗದೀಶ್ವರಃ ॥ (೨) ರಸಾದಿಮಾನಿನಾಂ ದೇಹೇ ಸ ಸರ್ವತ್ರ ವ್ಯವಸ್ಥಿತಃ । ಅಬಾದಯಃ ಪಾರ್ಷದಾ ಧ್ಯೇಯಃ ಸ ಜ್ಞಾನಿನಾಂ ಹರಿಃ । ರಸಾದಿಸಂಪತ್ತ್ಯಾ ಅನ್ಯೇಷಾಂ ವಾಸುದೇವೋ ಜಗತ್ಪತಿರಿತಿ ॥ (೩) ಸ್ವಭಾವೋ ಜೀವ ಏವ ಚ । ಸರ್ವಸ್ವಭಾವೋ ನಿಯತಸ್ತೇನೈವ ಕಿಮುತಾಪರಂ । ನ ತದಸ್ತಿ ವಿನಾ ಯತ್ಸ್ಯಾತ್ ಮಯಾ ಭೂತಂ ಚರಾಚರಮಿತಿ ಚ ॥ (೪) ಧರ್ಮಾವಿರುದ್ಧಃ ಕಾಮರಾಗವಿವರ್ಜಿತಮಿತ್ಯಾದ್ಯುಪಾಸನಾರ್ಥಂ ॥ (೫) ಉಕ್ತಂ ಚ ಗೀತಾಕಲ್ಪೇ । ಧರ್ಮಾವಿರುದ್ಧಕಾಮೇಽಸಾವುಪಾಸ್ಯಃ ಕಾಮಮಿಚ್ಛತಾ । ವಿಹೀನೇ ಕಾಮರಾಗಾದೇರ್ಬಲೇ ಚ ಬಲಮಿಚ್ಛತಾ । ಧ್ಯಾತಸ್ತತ್ರ ತ್ವನಿಚ್ಛದ್ಭಿರ್ಜ್ಞಾನಮೇವ ದದಾತಿ ಸ ಇತ್ಯಾದಿ । ಪುಷ್ಣೋ ಗಂಧ ಇತಿ ಭೋಗಾಪೇಕ್ಷಯಾ ಚ । ತಥಾ ಚ ಶ್ರುತಿಃ ॥ (೬) ಪುಣ್ಯಮೇವಾಮುಂ ಗಚ್ಛತಿ ನ ಹ ವೈ ದೇವಾನ್ಪಾಪಂ ಗಚ್ಛತಿ । ಋತಂ ಪಿಬಂತೌ ಸುಕೃತಸ್ಯ ಲೋಕ ಇತ್ಯಾದಿಕಾ ॥ ೨ ॥

ಆ ॥ (೧) ಗೀತಾಕಲ್ಪದಲ್ಲಿ ಈ ಪ್ರಮೇಯವು ಹೇಳಲ್ಪಟ್ಟಿದೆ ರಸ ಗಂಧ ಮೊದಲಾದುವುಗಳಲ್ಲಿರುವ ರಸತ್ವ ಗಂಧತ್ವ ಮೊದಲಾದ ಧರ್ಮಗಳಲ್ಲಿಯೂ ಹಾಗೆಯೇ ರಸಾದಿಗಳಿಗೆ ಜಲಾದಿಗಳ ಸ್ವಭಾವತ್ವ

ದಲ್ಲಿಯೂ, ರಸಾದಿಗಳಿಗೆ ಜಲಾದಿಗಳಲ್ಲಿರುವ ಸಂಖ್ಯಾ ಮೊದಲಾದ ಎಲ್ಲಾ ಧರ್ಮಗಳಿಗಿಂತ ಶ್ರೇಷ್ಠತ್ವ ದಲ್ಲಿಯೂ ಶ್ರೀಪರಮಾತ್ಮನೇ ವಿಶೇಷತಃ ಕಾರಣನು ಅಲ್ಲದೆ ಶ್ರೀಪರಮಾತ್ಮನೇ ಜಲಾದಿಗಳಲ್ಲಿರತಕ್ಕ ರಸಾದಿಸಾರಭೋಕ್ತನೂ ಆಗಿರುತ್ತಾನೆ ಆದಕಾರಣ ಶ್ರೀಪರಮಾತ್ಮನು **ರಸಾದಿ**ರೂಪವಾದ ಜಗತ್ತನ್ನು ಹೇಳುವ ರಸಾದಿಶಬ್ದಗಳಿಂದ ಹೇಳಲ್ಪಡುತ್ತಾನೆ (೨) ಶ್ರೀಪರಮಾತ್ಮನು ರಸಾದಿಗಳಿಗೆ ಅಭಿಮಾನಿಗಳಾದ ದೇವತೆಗಳ ದೇಹಗಳಲ್ಲಿ ಸರ್ವತ್ರ ಇರುತ್ತಾನೆ ಜಲಾದಿಗಳಿಗೆ ಅಭಿಮಾನಿಗಳಾದ ದೇವತೆಗಳು ವಿಷ್ವಕ್ಸೇನಾದಿಗಳು (ಪರಿವಾರಭೂತರು) ಆ ಜಗತ್ಪತಿಯಾದ ಪಾಪಪರಿಹಾರಕನಾದ ಶ್ರೀಪರಮಾತ್ಮನು ಜ್ಞಾನವನ್ನು ಅಪೇಕ್ಷಿಸುವವರಿಗೆ ಜ್ಞಾನದ ಪ್ರಾಪ್ತಿಗಾಗಿಯೂ, ರಸವನ್ನ ಪೇಕ್ಷಿಸುವವರಿಗೆ ರಸಾದಿಗಳ ಪ್ರಾಪ್ತಿಗಾಗಿಯೂ ಧ್ಯಾನಿಸಲ್ಪಡಬೇಕು (೩) (ಸ್ವಭಾವವೂ ಶ್ರೀಪರಮಾತ್ಮನ ಅಧೀನವು ಎಂಬುವಲ್ಲಿ ಬೇರೆ ಪ್ರಮಾಣಗಳನ್ನು ಹೇಳುತ್ತಾರೆ–) (1) ಸರ್ವ ವಸ್ತುಗಳ ಸ್ವಭಾವವೂ ಜೀವನೂ (ಎಲ್ಲರೂ ಶ್ರೀಪರಮಾತ್ಮನ ಅನುಗ್ರಹದಿಂದಲೇ ಇರುತ್ತಾರೆ ಅನುಗ್ರಹವಿಲ್ಲದೆ ಇರಲು ಸಾಧ್ಯವೇ ಇಲ್ಲ.) ಎಲ್ಲಾ ವಸ್ತುಗಳ ಸ್ವಭಾವವೂ ಶ್ರೀಪರಮಾತ್ಮನಿಂದಲೇ ಪ್ರೇರಿಸಲ್ಪಡುತ್ತದೆ (ಶ್ರೀಪರಮಾತ್ಮನ ಅಧೀನವೇ) ಅಸ್ವಾಭಾವಿಕವಾದ ಬೇರೆ ಧರ್ಮಗಳು ಶ್ರೀಪರಮಾತ್ಮನ ಅಧೀನವೆಂದು ಸುತರಾಂ ಸಿದ್ಧಿಸುತ್ತದೆ ಚೇತನಾಚೇತನ ವಸ್ತುಗಳೆಲ್ಲವೂ ನನ್ನ ಅಧೀನವಾಗಿ ಇಲ್ಲದಿರುವುದು ಯಾವುದೂ ಇಲ್ಲವೇ ಇಲ್ಲ (೪) ಉತ್ತಮಗಳಾದ ಬಲಕಾಮಾದಿಗಳಲ್ಲಿಯೇ ಶ್ರೀಪರಮಾತ್ಮನನ್ನು ಉಪಾಸನೆ ಮಾಡಬೇಕು ಧರ್ಮವಿರುದ್ಧಗಳಾದ ಅಶುಚಿಗಳಾದ ಕಾಮಾದಿ ಪದಾರ್ಥಗಳಲ್ಲಿ ಉಪಾಸನೆಮಾಡಕೂಡದೆಂದು ತಿಳಿಸಿಕೊಡುವುದಕ್ಕಾಗಿ ೧೧ನೇ ಶ್ಲೋಕದಲ್ಲಿ ಕಾಮಕ್ಕೆ **ಧರ್ಮಾವಿರುದ್ಧಃ** ಎಂದು ವಿಶೇಷಣವು ಬಲದಲ್ಲಿ **ಕಾಮರಾಗವಿವ ಜೃತಂ** ಎಂದು ವಿಶೇಷಣವು (೫) (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ–) ಪುರುಷಾರ್ಥವನ್ನು ಇಚ್ಛಿಸುವವನು ಧರ್ಮಕ್ಕೆ ಅವಿರುದ್ಧವಾದ ಕಾಮದಲ್ಲಿ ಶ್ರೀಪರಮಾತ್ಮನನ್ನು ಪ್ರಾಪ್ತನೆ ಮಾಡಬೇಕು ಬಲವನ್ನು ಇಚ್ಛಿಸುವವನು ಕಾಮ ರಾಗ ಇತ್ಯಾದಿಗಳಿಂದ ವಿರಹಿತವಾದ ಬಲದಲ್ಲಿ ಶ್ರೀಪರಮಾತ್ಮನನ್ನು ಧ್ಯಾನಿಸಬೇಕು ಕಾಮಾದಿಗಳನ್ನು ಇಚ್ಛಿಸದೆ ಇದ್ದವರು ಕಾಮಾದಿಗಳಲ್ಲಿ ಶ್ರೀಪರಮಾತ್ಮನನ್ನು ಧ್ಯಾನಿಸಿದರೆ ಶ್ರೀಪರಮಾತ್ಮನು ಜ್ಞಾನವನ್ನೇ ಕೊಡುತ್ತಾನೆ. ಇತ್ಯಾದಿ ಪ್ರಮೇಯವು ಗೀತಾಕಲ್ಪದಲ್ಲಿ ಹೇಳಿದೆ (೬) (ಗಂಧಕ್ಕೆ ಪುಣ್ಯಃ ಎಂದು ವಿಶೇಷಣ ಕೊಟ್ಟದ್ದಕ್ಕೆ ಪ್ರಯೋಜನಾಂತರವನ್ನು ಹೇಳುತ್ತಾರೆ–) ಶ್ರೀಪರಮಾತ್ಮನಿಗೆ ಪುಣ್ಯವಾದ ಗಂಧದ್ದೇ (ಸುಗಂಧದ್ದೇ) ಭೋಗವು ದುರ್ಗಂಧದ್ದು ಭೋಗವಿಲ್ಲ, ಎಂದು ತಿಳಿಸುವುದಕ್ಕಾಗಿ ಗಂಧದಲ್ಲಿ **ಪುಣ್ಯಃ** ಎಂದು ವಿಶೇಷಣವನ್ನು ಕೊಟ್ಟದ್ದು (ಶ್ರೀಪರಮಾತ್ಮನಿಗೆ ದುರ್ಗಂಧಾನುಭವವಿಲ್ಲವಾದರ ಸರ್ವಜ್ಞನು ಆಗದೆ ಹೋದಾನು ಇದ್ದರೆ ಭೋಗವಿಲ್ಲವೆಂದದ್ದು ಹೇಗೆ ಎಂದರೆ–ದುರ್ಗಂಧಾದಿಗಳ ಅನುಭವವಿದ್ದರೂ ಅದು ದುಃಖರೂಪವಾದ ಫಲಕ್ಕೆ ಕಾರಣಗಳಾಗುವುದಿಲ್ಲ ಸುಗಂಧವು ಸುಖಾಭಿವ್ಯಕ್ತಿಗೆ ಕಾರಣವಾಗುವುದು ॥ ೨ ॥

ಪೀ—ಶುಚಿಯಾದ ವಸ್ತುವೇ ಶ್ರೀಪರಮಾತ್ಮನಿಗೆ ಭೋಗ್ಯವು ಎಂಬುವ ವಿಷಯದಲ್ಲಿಯೇ ಪ್ರಮಾಣವನ್ನು ಹೇಳುತ್ತಾರೆ—

ಭಾ ॥ (೧) ಋತಂ ಚ ಪುಣ್ಯಂ । ಋತಂ ಸತ್ಯಂ ತಥಾ ಧರ್ಮಃ ಸುಕೃತಂ ಚಾಭಿದೀಯತ ಇತ್ಯಭಿಧಾನಾತ್ । ಋತಂ ತು ಮಾನಸೋ ಧರ್ಮಃ ಸತ್ಯಂ ಸ್ಯಾತ್ಸ ಪ್ರಯೋಗಗ ಇತಿ ಚ ॥ (೨) ನ ಚಾನಶ್ನನ್ನನ್ಯೋ ಅಭಿಚಾಕಶೀತಿ । ಅನ್ಯೋ ನಿರನ್ನೋಽಪಿ ಬಲೇನ ಭೂಯಾನಿತ್ಯಾದಿವಿರೋಧಃ । ಸ್ಥೂಲಾನಶನೋಕ್ತೇಃ ॥ (೩) ಆಹ ಚ ಸೂಕ್ಷ್ಮಾನ್ನಶನಂ । ಪ್ರವಿವಿಕ್ತಾಹಾರತರ ಇವೈಷ ಭವತ್ಯನ್ನಾಚ್ಛಾರೀರಾದಾತ್ಮನ ಇತಿ ॥ (೪) ನ

ಚಾತ್ರ ಜೀವ ಉಚ್ಯತೇ । ಶರೀರಾದಾತ್ಮನ ಇತಿ ಭೇದಾಭಿಧಾನಾತ್ । ಸ್ವಪ್ನಾದಿಶ್ಚ ಶಾರೀರ ಏವ । ಶಾರೀರಸ್ತು ತ್ರಿಧಾ ಭಿನ್ನೋ ಜಾಗ್ರದಾದಿಷ್ವವಸ್ಥಿತೇರಿತಿ ವಚನಾದ್ಗಾರುಡೇ । ಅಸ್ಮಾದಿತೀಶ್ವರವ್ಯಾವೃತ್ತ್ಯರ್ಥಂ ॥ ೩ ॥

ಅ ॥ (೧) (1) ಹಾಗೆ ಹೇಳತಕ್ಕ ವೇದವು ಇದೆ ನುನುಷ್ಯರಿಂಗೆ ಭೋಗ್ಯವಾದ ಅನ್ನ, ವೈಶ್ವದೇವ ಬಲಿಹರಣ ಮೊದಲಾದ ದೇವಾನ್ನ, ಇದು ಮೊದಲಾದ ಸಪ್ತಾನ್ನ ವಿದ್ಯೆಯನ್ನು ಪಾವನಮಾಡತಕ್ಕ ಚತುರ್ಮುಖ ಬ್ರಹ್ಮನಿಗೆ ಪುಣ್ಯವೇ ಬರುತ್ತದೆ ದೇವತೆಗಳಿಗೆ ಪಾಪವು ಬರುವುದಿಲ್ಲ (ಸಾಮಾನ್ಯ ದೇವತೆಗಳಿಗೆ ಮಾತ್ರ ಪುಣ್ಯಭೋಗವು ನಿಯಮದಿಂದ ಇದೆ, ಎಂದಾಗುವಾಗ ದೇವೋತ್ತಮನಾದ ಶ್ರೀಪರಮಾತ್ಮನಿಗೆ ಪುಣ್ಯಭೋಗವೇ ಇರುವುದು ಪಾಪಫಲಭೋಗವು ಬರುವುದಿಲ್ಲವೆಂದು ಸುತರಾಂ ಸಿದ್ಧವಾಗುತ್ತದೆ) (2) ಸುಕೃತನಿರ್ಮಿತವಾದ ಶರೀರದಲ್ಲಿ ಪುಣ್ಯಫಲವನ್ನು ಅನುಭವಿಸುತ್ತಿರುವವರು **ಆತ್ಮಾ ಅಂತರಾತ್ಮಾ** ಎಂಬುವ ಎರಡು ಭಗವದ್ರೂಪಗಳು. ಇದು ಮೊದಲಾದ ಶ್ರುತಿಗಳಿಂದ ಶ್ರೀಪರಮಾತ್ಮನಿಗೆ ಶುಭಭೋಗವೇ ಇರುವುದೆಂದು ಸಿದ್ಧವಾಗುತ್ತದೆ ಋತ ಸತ್ಯ ಶಬ್ದಗಳಿಂದ ಪುಣ್ಯವು, ಸತ್ಕರ್ಮವೂ ಕೂಡ ಹೇಳಲ್ಪಡುತ್ತದೆ ಎಂದು ಪದಗಳಿಗೆ ಶಕ್ತಿಯನ್ನು ತೋರಿಸಿಕೊಡುವ ಪ್ರಮಾಣವಿದೆ ಋತವೆಂದರೆ ಮನಸ್ಸಿನಿಂದ ಹುಟ್ಟತಕ್ಕ ಧರ್ಮವು ಒಳ್ಳೇ ಶಬ್ದಪ್ರಯೋಗದಿಂದುಂಟಾಗತಕ್ಕ ಪುಣ್ಯವು **ಸತ್ಯ**ವೆನಿಸುತ್ತದೆ (೨) (ಶ್ರೀಪರಮಾತ್ಮನಿಗೆ ವಿಷಯಭೋಗವನ್ನು ಒಡಂಬಟ್ಟರೆ ವೇದಾದಿಗಳಿಂದ ವಿರೋಧವು ಬರುವುದು ಎಂದರೆ—) (ದೇಹದಲ್ಲಿ ಜೀವಪರಮಾತ್ಮರಿಬ್ಬರು ಇದ್ದಾರೆ ಇಬ್ಬರಲ್ಲಿ ಒಬ್ಬ ಜೀವನು ಕರ್ಮಫಲವನ್ನು ಉಣ್ಣುತ್ತಿದ್ದಾನೆ) ಇನ್ನೊಬ್ಬ ಶ್ರೀಹರಿಯು ಕರ್ಮಫಲವನ್ನುಣ್ಣದೆ ಪ್ರಕಾಶಿಸುತ್ತಿದ್ದಾನೆ (೩) ಇನ್ನೊಬ್ಬನು ಅನ್ನವನ್ನುಣ್ಣದಿದ್ದರೂ ಬಲದಿಂದ ಶ್ರೇಷ್ಠನಾಗಿದ್ದಾನೆ, ಇದು ಮೊದಲಾದ ಪ್ರಮಾಣಗಳಿಂದ ವಿರೋಧವು ಬರುವುದಿಲ್ಲ (ಏಕೆ ವಿರೋಧವಿಲ್ಲವೆಂದರೆ—) ಶ್ರುತ್ಯಾದಿಗಳಲ್ಲಿ ಸ್ಥೂಲವಾದ ಜೀವಭೋಗ್ಯವಾದ ದುಷ್ಕರ್ಮದ ಫಲವನ್ನು ಶ್ರೀಹರಿಯು ಭೋಗಿಸುವುದಿಲ್ಲವೆಂದು ಹೇಳಿದ್ದು ಶ್ರೀಪರಮಾತ್ಮನಿಗೆ ಸೂಕ್ಷ್ಮವಾದ ಶುಭಭೋಗವಿದೆ (೩) (ಅದು ಹೇಗೆಂದರೆ-) ಶ್ರುತಿಯು ಹೇಳುತ್ತದೆ ಗಂಧ ಮೊದಲಾದುವುಗಳಲ್ಲಿ ಜೀವನ ಇಂದ್ರಿಯಕ್ಕೆ ಗೋಚರವಾಗದಿರುವ ಯಾವುದು ಸಾರಭಾವವಿದೆಯೋ, ಅದರ ಭೋಗವನ್ನು ಶ್ರೀಪರಮಾತ್ಮನಿಗೆ ಹೇಳುತ್ತದೆ ಶ್ರೀಪರಮಾತ್ಮನು ಈ ಶರೀರದಲ್ಲಿರತಕ್ಕ ಜೀವನಿಗಿಂತ ಅತಿಶಯವಾಗಿ ವಿಲಕ್ಷಣವಾದ ಭೋಗವುಳ್ಳವನೇ ಆಗುತ್ತಾನೆ (೪) (ಇಲ್ಲಿ ಹೇಳಿದ ಸೂಕ್ಷ್ಮಭೋಗವು ಜೀವನಿಗೆ ಎಂದು ಹೇಳಕೂಡದು. ಏಕೆಂದರೆ ಜೀವನಿಗಿಂತ ಜೀವನು ವಿಲಕ್ಷಣ ಆಹಾರವುಳ್ಳವನೆಂಬುವುದು ಕೂಡಲಾರದಷ್ಟೆ. ಶರೀರದಲ್ಲಿರತಕ್ಕ ಜೀವನದ್ದೆಶೆಯಿಂದ ಎಂದು ಸೂಕ್ಷ್ಮಭೋಕ್ತನಾದ ಪರಮಾತ್ಮನಿಗೆ ಭೇದವನ್ನು ಹೇಳಿದ್ದಾರೆ. ಸ್ವಪ್ನ ಸುಷುಪ್ತ್ಯಾದಿಗಳು ಶರೀರದಲ್ಲಿರತಕ್ಕ ಜೀವನಲ್ಲಿಯೇ ಜಾಗ್ರದಾದ್ಯವಸ್ಥೆಗಳುಳ್ಳ ಶರೀರದಲ್ಲಿರತಕ್ಕ ಜೀವನು ಮೂರು ಪ್ರಕಾರ ಭಿನ್ನನಾಗಿರುತ್ತಾನೆ, ಎಂದು ಗಾರುಡದಲ್ಲಿದೆ (೫) ಈ ಶಾರೀರಾತ್ಮನು ಶ್ರೀಪರಮಾತ್ಮನಲ್ಲವೆಂದು ತೋರಿಸುವುದಕ್ಕಾಗಿ **ಅಸ್ಮಾತ್** ಎಂದು ವಿಶೇಷಣವು (ಅಂದರೆ ಜೀವನನ್ನು ಮಾತ್ರ ತೆಗೆದುಕೊಳ್ಳಬೇಕೆಂದು ಸೂಚಿಸುವುದಕ್ಕಾಗಿ **ಅಸ್ಮಾತ್** ಎಂದು ವಿಶೇಷಣವು)॥ ೩ ॥

ಪೀ—ಶಾರೀರ ಶಬ್ದದಿಂದ ಶ್ರೀಪರಮಾತ್ಮನನ್ನು ತೆಗೆದುಕೊಳ್ಳಲಿಕ್ಕೇನೇ ಬರುವುದಿಲ್ಲ ಆದಕಾರಣ **ಅಸ್ಮಾತ್** ಎಂಬುವ ವಿಶೇಷಣವು ಏತಕ್ಕೆಂದರೆ—

ಭಾ ॥ (೧) **ಶಾರೀರೌ ತಾವುಭೌ ಜ್ಞೇಯೌ ಜೀವಶ್ಚೇಶ್ವರಸಂಜ್ಞಿತಃ । ಅನಾದಿಬಂಧನಸ್ತ್ವೇಕೋ ನಿತ್ಯಮುಕ್ತಸ್ತಥಾ ಪರ ಇತಿ ವಚನಾನ್ನಾರದೀಯೇ ॥ (೨) ಭೇದಶ್ರುತೇಶ್ಚ ।**

ಸತಿ ಗತ್ಯಂತರೇ ಪುರುಷಭೇದ ಏವ ಕಲ್ಪ್ಯೋ ನ ತ್ವವಸ್ಥಾಭೇದಃ ॥ (೩) ಆಹ ಚ । ಪ್ರವಿವಿಕ್ತಭುಗ್ಯತೋ ಹ್ಯಸ್ಮಾಚ್ಛಾರೀರಾತ್ಪುರುಷೋತ್ತಮಃ । ಅತೋಽಭೋಕ್ತಾ ಚ ಭೋಕ್ತಾ ಚ ಸ್ಥೂಲಾಭೋಗಾತ್ಸ ಏವ ತ್ವಿತಿ ಗೀತಾಕಲ್ಪೇ ॥ (೪) ನ ತ್ವಹಂ ತೇಷ್ವಿತಿ ತದನಾಧಾರತ್ವಮುಚ್ಯತೇ । ಉಕ್ತಂ ಚ । ತದಾಶ್ರಿತಂ ಜಗತ್ಸರ್ವಂ ನಾಸೌ ಕುತ್ರ-ಚಿದಾಶ್ರಿತ ಇತಿ ಗೀತಾಕಲ್ಪೇ ॥ ೪ ॥ ॥ ೪—೧೨ ॥

ಅ ॥ (೧) ಜೀವ ಶ್ರೀಪರಮಾತ್ಮ ಇಬ್ಬರೂ ಶರೀರದಲ್ಲಿರತಕ್ಕವರೆಂದು ತಿಳಿಯಬೇಕು. ಆದರಲ್ಲಿ ಜೀವನು ಅನಾದಿಕಾಲದಿಂದಲೂ ಸಂಸಾರಬಂಧವಿರುವವನು ಶ್ರೀಪರಮಾತ್ಮನು ನಿತ್ಯಮುಕ್ತನು (ಯಾವಾಗಲೂ ಸಂಸಾರಸಂಬಂಧವೇ ಇಲ್ಲದವನು) ಎಂದು ನಾರದೀಯಪುರಾಣದಲ್ಲಿದೆ (೨) (**ಪ್ರವಿವಿಕ್ತಾಹಾರತರಃ** ಎಂಬುವ ಶಬ್ದದಿಂದ ಅವಸ್ಥಾಭೇದದಿಂದ ಜೀವನನ್ನೇ ತೆಗೆದುಕೊಳ್ಳಲಿಕ್ಕೆ ಬಂದರೂ ಆ ವಾಕ್ಯದಿಂದ ಈಶ್ವರನನ್ನೇ ತೆಗೆದುಕೊಳ್ಳುವುದು ಏತಕ್ಕೆ ಜೀವನನ್ನೇ ಏಕೆ ತೆಗೆದುಕೊಳ್ಳಬಾರದೆಂದರೆ-) **ಅಸ್ಮಾಚ್ಛಾರೀರಾದಾತ್ಮನಃ** ಎಂದು ಪರಮಾತ್ಮನಿಗೆ ಜೀವನಿಂದ ಭೇದವನ್ನು ಹೇಳುವ ಶಬ್ದವಿದೆ ಭೇದಶ್ರುತಿಗೆ ಸ್ವಾಭಾವಿಕ ಭೇದರೂಪವಾದ ಅರ್ಥವು ಕೂಡುತ್ತಿರುವಾಗ ಜೀವಪರಮಾತ್ಮರೂಪ ಪುರುಷ ಭೇದವನ್ನೇ ಹೇಳಬೇಕು ಅವಸ್ಥಾಭೇದವನ್ನೇ ಇಟ್ಟುಕೊಂಡು ಈ ಜೀವನೇ ಎರಡು ಶಬ್ದಗಳಿಂದ ಹೇಳಲ್ಪಡುತ್ತಾನೆಂದು ಹೇಳಕೂಡದು (೩) ಈ ಶರೀರದಲ್ಲಿರತಕ್ಕ ಜೀವನಿಗಿಂತ ಶ್ರೀಪರಮಾತ್ಮನು ಸಾರ ಭಾಗವನ್ನು ಣ್ಣುವವನು ಆದಕಾರಣ ಶ್ರೀಪರಮಾತ್ಮನೇ ಸ್ಥೂಲಪದಾರ್ಥಗಳನ್ನು ಣ್ಣದಿರುವುದರಿಂದ ಅಭೋಕ್ತನೆಂದೂ ಸಾರಪದಾರ್ಥವನ್ನು ಣ್ಣುವುದರಿಂದ ಭೋಕ್ತಾ ಎಂದೂ ಅನಿಸುತ್ತಾನೆ, ಎಂದು ಗೀತಾಕಲ್ಪದಲ್ಲಿ ಹೇಳಿದೆ (೪) (**ಸರ್ವಭೂತಸ್ಥಮಾತ್ಮಾನಂ** ಎಂದು ಹೇಳಿದ್ರಿಂದ **ನ ತ್ವಹಂ ತೇಷು** ಎಂದು ಹೇಳಿದ್ದು ಹೇಗೆ ಕೂಡುತ್ತದೆ, ಎಂದರೆ—) **ನ ತ್ವಹಂ ತೇಷು** ಎಂದು ಹೇಳಿದ್ರಿಂದ ಆ ಜೀವರನ್ನು ಪಜೀವಿಸಿಕೊಂಡು ಶ್ರೀಪರಮಾತ್ಮನು ಇರುವುದಿಲ್ಲವೆಂದುಕ್ತವಾಯಿತು. ಈ ಪ್ರಮೇಯವು ಹೇಳಲ್ಪಟ್ಟದೆ ಸಂಪೂರ್ಣ ಜಗತ್ತೂ ಶ್ರೀಪರಮಾತ್ಮನನ್ನೇ ಆಶ್ರಯಿಸಿಕೊಂಡಿದೆ ಶ್ರೀಪರಮಾತ್ಮನು ತನ್ನ ಉಪಜೀವನಕ್ಕೆ ಎಲ್ಲಿಯೂ ಆಶ್ರಯಿಸಿಕೊಂಡಿಲ್ಲ ಎಂದು ಗೀತಾಕಲ್ಪದಲ್ಲಿ ಹೇಳಿದೆ ॥ ೪ ॥ ॥ ೪-೧೨ ॥

ಹೀ—ಶ್ರೀ ಪರಮಾತ್ಮನು ರಸ ಮೊದಲಾದ ಧರ್ಮಗಳಿಗೆ ಮಾತ್ರ ಪ್ರೇರಕನೆಂದಲ್ಲ ಮತ್ತೆ ಜಲಾದಿಧರ್ಮಗಳಿಗೆಲ್ಲದಕ್ಕೂ ಪ್ರೇರಕನೆನ್ನುತ್ತಾರೆ –

ತಾ ॥ ಯೇ ಚೈವ ಸಾತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚ ಯೇ । ತತ ಏವ ನ ಚಾನ್ಯ-ಸ್ಮಾತ್ತದಾಯತ್ತಮಿದಂ ನ ಸಃ । ಅನ್ಯಾಯತ್ತಃ ॥ ೧೨ ॥

ಅ ॥ ಸಾತ್ವಿಕ, ರಾಜಸ, ತಾಮಸ ಪದಾರ್ಥಗಳೆಲ್ಲವೂ ಶ್ರೀ ಪರಮಾತ್ಮನಿಂದಲೇ ಹುಟ್ಟಿದವುಗಳು ಇತರರಿಂದ ಹುಟ್ಟಿದವುಗಳಲ್ಲ. ಶ್ರೀ ಪರಮಾತ್ಮನ ಅಧೀನಗಳೇ ಆ ಶ್ರೀ ಪರಮಾತ್ಮನು ಮತ್ತೊಬ್ಬನ ಅಧೀನದಲ್ಲಿಲ್ಲದಿರುವವನು ॥ ೧೨ ॥

**ಗೀ ॥ ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮಿದಂ ಜಗತ್ ।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಂ ॥ ೧೩ ॥**

ಅ ॥ ತ್ರಿಭಿಃ ಗುಣಮಯೈಃ = ಸತ್ತ್ವ ರಜಸ್ತಮಸ್ಸುಗಳೆಂಬ ಮೂರು ಗುಣಸ್ವರೂಪಗಳಾದ, ಏಭಿಃ ಭಾವೈಃ = ಈ ಪದಾರ್ಥಗಳಿಂದ, ತ್ರಿಗುಣ ತ್ರಿಗುಣಕಾರ್ಯರೂಪ ಪದಾರ್ಥಗಳಿಂದ, ಅಥವಾ ಸಾತ್ವಿಕಾದಿ ರೂಪಗಳಾದ ಪದಾರ್ಥಗಳಿಂದ, ಇದಂ ಸರ್ವಂ ಜಗತ್ = ಜ್ಞಾನಿಗಳು ಹೊರತು ಬೇರೆಯಾದ ಎಲ್ಲಾ ಅಜ್ಞಾನಿಸಮೂಹವು, ಮೋಹಿತಂ = ಮೋಹವನ್ನು ಹೊಂದಿದ್ದಾಗಿ, ಏಭ್ಯಃ = ಸಾತ್ವಿಕಾದಿ ಗುಣ-ಗುಣ ವಿಕಾರಗಳ ದೆಶೆಯಿಂದ, ಪರಂ = ಬೇರೆಯಾದ, ಅವ್ಯಯಂ = ದೇಹದಿಂದಲೂ ನಾಶವಿಲ್ಲದಿರುವ, ಮಾಂ = ನನ್ನ ನ್ನು, ನಾಭಿಜಾನಾತಿ = ತಿಳಿಯುವುದಿಲ್ಲ ವಿಪರೀತವಾಗಿಯೇ ತಿಳಿಯುತ್ತದೆ ॥ ೧೩ ॥

ಪೀ—ವಿಜ್ಞಾನವನ್ನು ಹೇಳುತ್ತೇನೆಂದು ಪ್ರಾರಂಭಿಸಿ ತ್ರಿಭಿಃ ಇತ್ಯಾದಿಗಳನ್ನು ಹೇಳಲು ಕಾರಣ ವೇನೆಂದರೆ—

ಭಾ ॥ (೧) ತರ್ಹಿ ಕಥಮೇವಂ ನ ಜ್ಞಾಯಸ ಇತ್ಯತ ಆಹ । ತ್ರಿಭಿರಿತಿ ॥ (೨) ತಾದಾತ್ಮ್ಯೇರ್ಥೇ ಮಯಟ್ । ತಚ್ಚೋಕ್ತಂ । ತಾದಾತ್ಮ್ಯೇರ್ಥೇ ವಿಕಾರಾರ್ಥೇ ಪ್ರಾಚುರ್ಯಾರ್ಥೇ ಮಯಟ್ರ್ತ್ಯಧೇತಿ ॥ (೩) ನ ಹಿ ಗುಣಕಾರ್ಯಭೂತಾ ಮಾಯಾ । ಗುಣಮಯಿಂತಿ ಚ ವಕ್ಷ್ಯತಿ ॥ (೪) ಸಿದ್ಧಂ ಚ ಕಾರ್ಯಸ್ಯಾಪಿ ತಾದಾತ್ಮ್ಯಂ । ತಾದಾತ್ಮ್ಯಂ ಕಾರ್ಯಧರ್ಮಾದೇಸ್ಸಂಯೋಗೋ ಭಿನ್ನವಸ್ತು ನೋರಿತಿ ವ್ಯಾಸಯೋಗೇ॥೧॥

ಅ ॥ (೧) ಹಿಂದೆ ಹೇಳಿದ ಅಲೌಕಿಕ ಮಹಿಮೆಯುಳ್ಳವನಾದರೆ ನಿನ್ನನ್ನೇ ಎಲ್ಲಾ ಜನರೂ ಸತ್ತ್ವಾದಿ ಗುಣರಹಿತನನ್ನಾಗಿಯೂ, ಅಲೌಕಿಕ ಮಾಹಾತ್ಮ್ಯವುಳ್ಳವನನ್ನಾಗಿಯೂ ಏಕೆ ತಿಳಿಯುವುದಿಲ್ಲ? ಎಂದರೆ ತ್ರಿಭಿಃ ಎಂಬುವ ಶ್ಲೋಕದಿಂದ ಸಮಾಧಾನಹೇಳುತ್ತಾರೆ (೨) ಗುಣಮಯೈಃ ಎಂಬುವಲ್ಲಿದ್ದ ಮಯಟ್ ಪ್ರತ್ಯಯವು ತಾದಾತ್ಮ್ಯವೆಂಬುವ ಅರ್ಥದಲ್ಲಿದೆ (ಈ ವಿಷಯದಲ್ಲಿ ಪ್ರಮಾಣ ಹೇಳುತ್ತಾರೆ-) ತಾದಾತ್ಮ್ಯ (ತತ್ಸ್ವರೂಪ)ವೆಂಬುವ ಅರ್ಥದಲ್ಲಿಯೂ, ವಿಕಾರವೆಂಬುವ ಅರ್ಥದಲ್ಲಿಯೂ, ಪ್ರಾಚುರ್ಯವೆಂಬುವ ಅರ್ಥದಲ್ಲಿಯೂ ಹೀಗೆ ಮಯಟ್ ಪ್ರತ್ಯಯವು ಮೂರು ಅರ್ಥವನ್ನು ಹೇಳುತ್ತದೆ (೩) ಮಾಯಾಶಬ್ದದಿಂದ ವಾಚ್ಯವಾದ ದುರ್ಗಾದೇವಿಗೆ ಗುಣವಿಕಾರತ್ವಾದಿಗಳು ಕೂಡಲಾರವು **ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ** ಎಂದು ದುರ್ಗಾದೇವಿಯು ಸತ್ತ್ವಾದಿಗುಣಗಳಿಗೆ ಅಭಿಮಾನಿನಿಯೆಂದು ಮುಂದಕ್ಕೆ ಹೇಳುವರು. (೪) ಗುಣಗಳಿಂದ ಹುಟ್ಟಿದ ಪದಾರ್ಥಗಳಿಗೆ ಗುಣಗಳಿಂದ ಅಭೇದವು ಸಿದ್ಧವಾಗಿದೆ (ಆದಕಾರಣ ಶ್ರೀ ಪರಮಾತ್ಮನಿಗೆ ಗುಣಗಳಿಂದ ಮಾತ್ರ ಉತ್ತಮತ್ವವಲ್ಲ ಗುಣಕಾರ್ಯಗಳಾದ ಪದಾರ್ಥಗಳಿಂದಲೂ ಉತ್ತಮತ್ವವು ಸಿದ್ಧವಾಯಿತು. (ಕಾರ್ಯಕ್ಕೆ ಕಾರಣದಿಂದ ಅಭೇದವೆಂಬುವ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ-) ಕಾರ್ಯದ್ರವ್ಯಕ್ಕೆ ಉಪಾದಾನಕಾರಣದಿಂದಲೂ ಗುಣ ಕ್ರಿಯಾ ಜಾತಿ ಮೊದಲಾದ ಧರ್ಮಗಳಿಗೆ ಗುಣ್ಯಾದಿ ದ್ರವ್ಯಗಳಿಂದಲೂ ಅಭೇದವಿದೆ ಘಟಪಟಾದಿರೂಪಗಳಾದ ಪರಸ್ಪರ ಭಿನ್ನವಸ್ತುಗಳಿಗೆ ಸಂಯೋಗಸಂಬಂಧವು ಅಭೇದವಲ್ಲ ಇತ್ಯಾದಿ ಪ್ರಮೇಯವು ವ್ಯಾಸಯೋಗದಲ್ಲಿದೆ ॥ ೧ ॥

ಪೀ—ಭಾವಶಬ್ದಕ್ಕೆ ಅನೇಕಾರ್ಥಗಳು ಇದ್ದುದರಿಂದ ಇಲ್ಲಿ ವಿವಕ್ಷಿತವಾದ ಅರ್ಥವನ್ನು ಹೇಳುತ್ತಾರೆ-

ಭಾ ॥ (೧) ಭಾವೈಃ ಪದಾರ್ಥೈಃ । ಸರ್ವೇ ಭಾವಾ ದೃಶ್ಯಮಾನಾ ಗುಣಮಯಾ ಏತ ಇತಿ ದರ್ಶಯತಿ । ಏಭಿರಿತಿ ॥ (೨) ಜ್ಞಾನಿವ್ಯಾವೃತ್ತ್ಯರ್ಥಮಿದಮಿತಿ ।ಗುಣಮಯಾದೇಹಾದಿಕಂ ದೃಷ್ಟ್ವೇಶ್ವರದೇಹೋಽಪಿ ತಾದೃಶ ಇತಿ ಮಾಯಾಮೋಹಿತ ಇತ್ಯರ್ಥಃ ॥ (೩) ಜಗಾದ ಚ ವ್ಯಾಸಯೋಗೇ । ಗೌಣಾನ್ ಬ್ರಹ್ಮಾದಿದೇಹಾದೀನ್ ದೃಷ್ಟ್ವಾ

ವಿಷ್ಣೋರಪೀದೃಶಃ । ದೇಹಾದಿರಿತಿ ಮನ್ವಾನೋ ನೋಹಿತೋಽಜ್ಞೋ ಜನೋ ಭೃಶಮಿತಿ ॥ (೪) ಏಭ್ಯೋ ಗುಣಮಯೇಭ್ಯಃ । (1) ಗುಣೇಭ್ಯಶ್ಚ ಪರಮಿತಿ ವಕ್ಷ್ಯ-ಮಾಣತ್ವಾತ್ । (2) ಕೇವಲೋ ನಿರ್ಗುಣಶ್ಚೇತ್ಯಾದಿಶ್ರುತಿಭ್ಯಶ್ಚ ।(೩)ತ್ರೈಗುಣ್ಯವರ್ಜಿತಮಿತಿ ಚೋಕ್ತಂ ॥ ೨ ॥ ॥ ೧೩ ॥

ಅ ॥ (೧) ಭಾವೈಃ = ಪದಾರ್ಥಗಳಿಂದ (ಏಭಿಃ ಎಂದು ಹೇಳಿದ್ರಿಂದ ಎದುರು ಇರುವ ವಸ್ತುಗಳನ್ನೇ ತೆಗೆದುಕೊಳ್ಳಬೇಕಾದ ಕಾರಣ **ಸರ್ವ** ಎಂಬುವ ಅರ್ಥವು ಸಿದ್ಧಿಸುವುದಿಲ್ಲ ಎಂದರೆ-) ಪ್ರಮಾಣ ಸಿದ್ಧಗಳಾದ ಎಲ್ಲಾ ವಸ್ತುಗಳೂ ಗುಣಮಯಗಳೇ ಎಂದು ಏಭಿಃ ಎಂಬುದರಿಂದ ತೋರಿಸುತ್ತಾರೆ (೨) (ಇದಂ ಎಂದು ಅಜ್ಞಾನಿಗಳ ಸಮುದಾಯವನ್ನೇ ಹೇಳಿದ್ರಿಂದ ಜ್ಞಾನಿಗಳಿಗೆ ಅಜ್ಞಾನವಿಲ್ಲವೆಂದು ಸಿದ್ಧವಾಯಿತು ತ್ರೈಪರಮಾತ್ಮನು ಸತ್ವಾದಿಗುಣಾತ್ಮಕ ದೇಹವುಳ್ಳವನು, ಎಂಬುವ ಭ್ರಮೆಗೆ ಗುಣಾತ್ಮಕಗಳಾದ ಪದಾರ್ಥಗಳು ಹೇಗೆ ಕಾರಣಗಳೆಂದರೆ -)ಲೋಕದಲ್ಲಿ ಸತ್ವರಜಸ್ತಮೋಗುಣಾತ್ಮಕಗಳಾದ ಜೈತ್ರಾದಿಗಳ ದೇಹಾದಿಗಳನ್ನು ನೋಡಿ, ಶ್ರೀಪರಮಾತ್ಮನ ಶರೀರವೂ ಗುಣಾತ್ಮಕವು ದೇಹವಾದುದರಿಂದ ಗುಣಮಯ್ಯವಾದ ಜೈತ್ರಾದಿಗಳ ಶರೀರದಂತೆ, ಎಂಬುವ ಅನುಮಾನದಿಂದ ತತ್ವಜ್ಞಾನವಿಲ್ಲದಿರುವ ಅಜ್ಞಾನಿ ಜನರು ಮೋಹಿತರಾಗುತ್ತಾರೆ (೩) (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ--)ಚತುರ್ಮುಖ ಬ್ರಹ್ಮನೇ ಮೊದಲಾದ ದೇವತೆಗಳ ಸತ್ವ ಮೊದಲಾದ ಗುಣಾತ್ಮಕಗಳಾದ ದೇಹ ಇಂದ್ರಿಯಾದಿಗಳನ್ನು ನೋಡಿ **ಶ್ರೀ ಪರಮಾತ್ಮನ** ಶರೀರವೂ ಇಂತಹದೆಂದು ತಿಳಿಯುವ ಅಜ್ಞಜನರು ಜೆನ್ನಾಗಿ ಮೋಹಿತರಾಗುತ್ತಾರೆ (ಪರಮಾತ್ಮನು ಅಪ್ರಾಕೃತ ದಿವ್ಯಜ್ಞಾನಾನಂದಾತ್ಮಕ ಶರೀರವುಳ್ಳವನೆಂಬುವ ತತ್ವಜ್ಞಾನವಿಲ್ಲದವರಾಗಿರುತ್ತಾರೆ,) ಎಂದು ವ್ಯಾಸಯೋಗವೆಂಬುವ ಗ್ರಂಥದಲ್ಲಿ ಹೇಳಿದೆ (೪) ಏಭ್ಯಃ = ಗುಣ, ಗುಣವಿಕಾರಗಳಾದ ಪದಾರ್ಥಗಳಿದ್ದೆಶೆಯಿಂದ (1) ಗುಣೇಭ್ಯಃ = ಸತ್ವಾದಿಗುಣಗಳದೆಶೆಯಿಂದ ಪರಂ ವ್ಯತಿರಿಕ್ತನು, ಎಂದು ಮುಂದೆ ಹೇಳುವರು (2) ಜಡಸಂಸರ್ಗವಿಲ್ಲದವನು, ಜ್ಞಾನಾನಂದಸ್ವರೂಪನು, ಸತ್ವರಜಸ್ತಮೋಗುಣರಹಿತನು, ಇದು ಮೊದಲಾದ ವೇದಗಳಿಂದಲೂ (3) ಸತ್ವಾದಿ ಮೂರು ಗುಣಗಳಿಂದ ವಿರಹಿತನೆಂಬುವ ಭಾರತವಾಕ್ಯದಿಂದಲೂ ಪರಮಾತ್ಮನು ಗುಣಾತ್ಮಕ ಶರೀರವಿಲ್ಲದವನೆಂದು ಸಿದ್ಧವಾಗುವುದು ॥೩॥ ॥೧೩॥

ಪೀ— ಶ್ರೀಶರಮಾತ್ಮನು ಅಪ್ರಾಕೃತ ದಿವ್ಯಶರೀರವುಳ್ಳವನಾಗಿರುವುದರಿಂದ ಜ್ಞಾನವು ಬಾರದಿರಲಿಕ್ಕೂ ನಮ್ಮಂತ ಪ್ರಾಕೃತಶರೀರವುಳ್ಳವನೆಂಬ ವಿಪರೀತ ಜ್ಞಾನಕ್ಕೂ, ಗುಣಗಳಿಗೆ ಅಭಿಮಾನಿನಿಯಾದ ದುರ್ಗಾದೇವಿಯೇ ಮುಖ್ಯ ಕಾರಣಳು ಎಂದು ಹಿಂದೆ ಹೇಳಿದ ದೇಹತ್ವಾತ್=ದೇಹವಾದುದರಿಂದ. ಎಂಬುವ ಅನುಮಾನವು ನಿಮಿತ್ತಮಾತ್ರವು ಎನ್ನುತ್ತಾರೆ—

ಗೀ ॥ ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ ॥ ೧೪ ॥

ಅ ॥ ದೈವೀ=ಸೃಷ್ಟ್ಯಾದಿರೂಪ ಕ್ರೀಡಾದಿಗುಣಗಳಿಂದ ವಿಶಿಷ್ಟನಾದ ಶ್ರೀಪರಮಾತ್ಮನ ಸಂಬಂಧಿನಿಯಾದ, ಮಮ = ನನ್ನ ವಳಾದ, (ಅಂದರೆ ನನಗೆ ಅತ್ಯಂತ ಪ್ರಿಯಳಾದ) ಏಷಾ = ಪ್ರಮಾಣಸಿದ್ಧಳಾದ, ಗುಣಮಯೀ = ಸತ್ವಾದಿಗುಣಗಳಿಗೆ ಅಭಿಮಾನಿನಿಯಾದ, ಮಾಯಾ = ದುರ್ಗಾದೇವಿಯು, (ಹಿಂದೆ ಹೇಳಿದ ವಿಪರೀತ ಜ್ಞಾನವನ್ನು ಹೊಂದಿಸಿಕೊಡುವವಳು) ದುರತ್ಯಯಾ = ದಾಟಲಶಕ್ಯಳು (ಅಂದರೆ ಅವಳು ಕೊಟ್ಟ ಮೋಹವನ್ನು ಯಾರಿಗೂ ಅತಿಕ್ರಮಿಸಲು ಸಾಧ್ಯವಿಲ್ಲ) (ಏವಂಚ ಸೃಷ್ಟಿ ಸ್ಥಿತಿ ಲಯ

ಮೊದಲಾದ ಗುಣಗಳಿಂದ ಕೂಡಿರುವ ಅತಿಸಮರ್ಥನಾದ ನನಗೆ ದುರ್ಗಾದೇವಿಯು ಅತ್ಯಂತ ಪ್ರಿಯಳಾಗಿರುವುದರಿಂದ ಅವರಿಗೂ ಅಂತಹ ಅಪರಿಮಿತ ಶಕ್ತಿಯಿದೆ, ಎಂದು ತಿಳಿಸಿಕೊಡುವುದಕ್ಕಾಗಿ **ದೈವೀ** ಎಂದು ಹೇಳಿದ್ದು.) (ಮೂರು ಗುಣಗಳ ಮಧ್ಯದಲ್ಲಿ ತಮೋಗುಣದಿಂದಲೇ ಇಂತಹ ಮೋಹವನ್ನು ಹುಟ್ಟಿಸುವುದೆಂದು ತಿಳಿಸುವುದಕ್ಕಾಗಿ **ಗುಣಮಯೀ** ಎಂದು ಹೇಳಿದ್ದು.) ಯೇ = ಯಾರು, ಮಾಮೇವ = ನನ್ನನ್ನೇ, ಪ್ರಪದ್ಯಂತೇ = ಶರಣುಹೊಂದುತ್ತಾರೋ, ತೇ = ಅವರು, ಏತಾಂ ಮಾಯಾಂ = ಈ ದುರ್ಗಾದೇವಿಯಿಂದುಂಟಾದ ಮೋಹವನ್ನು. ತರಂತಿ = ದಾಟುತ್ತಾರೆ ॥ ೧೪ ॥

ಭಾ ॥ (೧) ಕಥಮನಾದಿಕಾಲೇ ಮೋಹಾನತ್ಯಯೋ ಬಹೂನಾಮಿತ್ಯತ ಆಹ । ದೈವೀತಿ ॥ (೨) ಅಯಮಾಶಯಃ । ಮಾಯಾ ಹ್ಯೇಷಾ ಮೋಹಿಕಾ । ಸಾ ಚ ಸೃಷ್ಟ್ಯಾದಿಕ್ರೀಡಾದಿಮದ್ದೇವಸಂಬಂಧಿತ್ವಾದತಿಶಕ್ತೀರ್ದುರತ್ಯಯಾ ॥ (೩) ತಥಾ ಹಿ ದೇವಶಬ್ದಾರ್ಥಂ ಪಠಂತಿ । ದಿವು ಕ್ರೀಡಾವಿಜಿಗೀಷಾವ್ಯವಹಾರದ್ಯುತಿಸ್ತುತಿಮೋದಮದಸ್ವಪ್ನಕಾಂತಿಗತಿಷ್ವಿತಿ ॥ (೪) ಕಥಂ ದೈವೀ ಮದೀಯತ್ವಾತ್ ಅಹಂ ದೇವ ಇತಿ ॥ (೫) ಅಬ್ರುವೀಚ್ಚ । ಶ್ರೀರ್ಭೂರ್ದುರ್ಗೇತಿ ಯಾ ಭಿನ್ನಾ ಮಹಾಮಾಯಾ ತು ವೈಷ್ಣವೀ । ಕಚ್ಚಿತ್ಕ್ವನಂತಾಂಶಹೀನಾಽಥಾಪಿ ತಸ್ಯಾಶ್ರಯಾತ್ಪ್ರಭೋಃ । ಅನಂತಬ್ರಹ್ಮರುದ್ರಾದೇರ್ನಾಸ್ಯಾಃ ಶಕ್ತಿಕಲಾಽಪಿ ಹಿ । ತೇಷಾಂ ದುರತ್ಯಯಾಽಸ್ಯೇಷಾ ವಿನಾ ವಿಷ್ಣೂಪ್ರಸಾದತ ಇತಿ ವ್ಯಾಸಯೋಗೇ ॥ ೧ ॥

ಅ ॥ (೧) (ಶ್ರೀಪರಮಾತ್ಮನಿಗೆ ಸತ್ವರಜಸ್ತಮೋರೂಪವಾದ ಗುಣಾತ್ಮಕ ಶರೀರವು ಇದೆ, ಎಂಬುವ **ಮೋಹವು** ಬಹುಮಂದಿಗೂ ಅನಾದಿಕಾಲವನ್ನಾರಂಭಿಸಿ ಇತಲು ಕಾರಣವೇನು? ಎಂದರೆ- **ದೈವೀ** ಎಂಬುವ ಶ್ಲೋಕದಿಂದ ಸಮಾಧಾನ ಹೇಳುತ್ತಾರೆ.(೨) ಸತ್ವಾದಿಗುಣಗಳಿಗೆ ಅಭಿಮಾನಿನಿಯಾದ ದುರ್ಗಾದೇವಿಯು ಮುಖ್ಯವಾಗಿ ತನ್ನ ಅಧೀನವಾದ ತಮೋಗುಣದಿಂದಲೇ ಇಂತಹ ಮೋಹವನ್ನು ಹುಟ್ಟಿಸುತ್ತಾಳೆ (ಅನುಮಾನವು ಮೋಹಹೇತುವೆಂದು ಹೇಳಿದ್ದು ನಿಮಿತ್ತಮಾತ್ರವು) ಆ ದುರ್ಗಾದೇವಿಯು ಸೃಷ್ಟಿ ಸ್ಥಿತಿ ಮೊದಲಾದ ಕ್ರೀಡಾ ವಿಜಿಗೀಷಾದಿಗುಣಗಳುಳ್ಳ ಶ್ರೀಪರಮಾತ್ಮನಿಗೆ ಪರಮಪ್ರಿಯಳಾಗಿರುವುದರಿಂದ ಅಪರಿಮಿತ ಶಕ್ತಿಯಿರುವವಳಾದ ಕಾರಣ ಆ ದುರ್ಗಾದೇವಿಯು ಕೊಟ್ಟ ಮೋಹವನ್ನು ಯಾರಿಗೂ ಅತಿಕ್ರಮಿಸಲು ಸಾಧ್ಯವಿಲ್ಲ (೩) ಅದನ್ನೇ ಹೇಳುತ್ತಾರೆ ದಿವ್‌ಧಾತುವು ಕ್ರೀಡಾ, ವಿಶೇಷತಃ ಗೆಲ್ಲಲಿಚ್ಛೆ ವ್ಯವಹಾರ ಪ್ರಕಾಶ, ಸ್ತುತಿ, ಮದ, ಸಂತೋಷ, ಸ್ವಪ್ನ, ಕಾಂತಿ, ಗತಿ ಈ ಅರ್ಥಗಳಲ್ಲಿದ್ದ ಕಾರಣ **ದೇವಶಬ್ದವು** ಕ್ರೀಡಾದ್ಯನೇಕ ಗುಣಗಳುಳ್ಳ ಪರಮಾತ್ಮನನ್ನು ತಿಳಿಸುತ್ತದೆ ಆದಕಾರಣ ಶ್ರೀಪರಮಾತ್ಮನೇ ಕ್ರೀಡಾದಿಗುಣವಿಶಿಷ್ಟನಾದ ಪ್ರಯುಕ್ತ **ದೇವ** ಎನಿಸುತ್ತಾನೆ. ಅಂತಹ ಶ್ರೀಪರಮಾತ್ಮನಿಗೆ ಅತ್ಯಂತ ಪ್ರಿಯಪತ್ನಿಯಾಗಿರುವುದರಿಂದ ಲಕ್ಷ್ಮೀದೇವಿಯು ದೇವೀ ಎನಿಸುತ್ತಾಳೆ (೪) ಮಹಾಮಾಯಾ ಎನಿಸಿಕೊಂಡ ಶ್ರೀವಿಷ್ಣುವಿನ ಪತ್ನಿಯಾದ ಲಕ್ಷ್ಮೀದೇವಿಯು ಶ್ರೀ, ಭೂ, ದುರ್ಗಾ, ಎಂದು ಮೂರು ರೂಪವುಳ್ಳವಳು ಅವಳು ಶ್ರೀಪರಮಾತ್ಮನ ಶಕ್ತಿಗಿಂತ ಅನಂತಾಂಶಗಳಿಂದ ಕಡಿಮೆಯಾದವಳು ಆದರೂ ಸರ್ವಸಮರ್ಥನಾದ ಶ್ರೀಪರಮಾತ್ಮನ ಆಶ್ರಯದಿಂದ ಶ್ರೀ ಲಕ್ಷ್ಮೀದೇವಿಯ ಶಕ್ತಿಗಳಲ್ಲಿ ಏಕದೇಶವೂ ಕೂಡ ಶೇಷ ಚತುರ್ಮುಖ ರುದ್ರಾದಿಗಳಿಗೆ ಇಲ್ಲ ಶ್ರೀಪರಮಾತ್ಮನ ಅನುಗ್ರಹವಿಲ್ಲದೆ ಈ ಮಾಯೆಯೆನಿಸಿದ ದುರ್ಗಾದೇವಿಯನ್ನು ಬ್ರಹ್ಮರುದ್ರಾದಿಗಳಿಗೆ ಅತಿಕ್ರಮಿಸಲು ಸಾಧ್ಯವೇ ಇಲ್ಲ, ಎಂದು ವ್ಯಾಸಯೋಗ

ವೆಂಬುವ ಗ್ರಂಥದಲ್ಲಿ ಹೇಳಿರುವರು (ಶ್ರೀಪರಮಾತ್ಮನ ಅನುಗ್ರಹದಿಂದ ದುರ್ಗೆಯು ಕೊಟ್ಟ ಭ್ರಮೆಯನ್ನು ಕಳೆದುಕೊಂಡು ಭಗವತ್ತತ್ವಜ್ಞಾನವನ್ನು ಸಂಪಾದಿಸುತ್ತಾರೆ) ॥ ೧ ॥

ಭಾ ॥ (೧) ತರ್ಹಿ ನ ಕಥಂಚಿದತ್ಯೇತುಂ ಶಕ್ಯತ ಇತ್ಯತ ಆಹ । ಮಾಮೇವೇತಿ । ಅನ್ಯತ್ ಸರ್ವಂ ಪರಿತ್ಯಜ್ಯ ಮಾಮೇವ ಯೇ ಪ್ರಪದ್ಯಂತೇ । ಗುರ್ವಾದಿವಂದನಂ ಚ ಮಯ್ಯೇವ ಸಮರ್ಪಯಂತಿ । ಸ ಏವ ಚ ತತ್ರ ಸ್ಥಿತ್ವಾ ಗುರ್ವಾದಿಭ್ಯೋ ವತೀತ್ಯಾದಿ ಪಶ್ಯಂತಿ ॥ (೨) ಆಹ ಚ ನಾರದೀಯೇ । ಮತ್ಸಂಪತ್ತ್ಯಾ ತು ಗುರ್ವಾದೀನ್ಭಜಂತೇ ಮಧ್ಯಮಾ ನರಾಃ । ಮದುಪಾಧಿತಯಾ ತಾಂಶ್ಚ ಸರ್ವಭೂತಾನಿ ಚೋತ್ತಮಾ ಇತಿ॥ (೩) ಆಚಾರ್ಯಚೈತ್ಯವಪುಷಾ ಸ್ವಗತಿಂ ವ್ಯನಂಕ್ಷೀತಿ ಚ ॥ ೨ ॥ ॥ ೧೪ ॥

ಅ ॥(೧) ಹಾಗಾದರೆ ಆ ಭ್ರಮೆಯನ್ನು ಎಷ್ಟು ಪ್ರಯತ್ನ ಪಟ್ಟರೂ ಅತಿಕ್ರಮಿಸಲು ಸಾಧ್ಯವಿಲ್ಲವೋ ಎಂದರೆ **ಮಾಮೇವ ಯೇ** ಎಂದು ಹೇಳಿರುವರು ಬ್ರಹ್ಮ ರುದ್ರ ಮೊದಲಾದ ಎಲ್ಲಾ ಜಗತ್ತನ್ನು ಬಿಟ್ಟು (ಅಂದರೆ ಸರ್ವೋತ್ತಮತ್ವ ಬುದ್ಧಿಯಿಂದ ಅವರನ್ನು ಭಜಿಸದೆ)ನನ್ನನ್ನೇ ಯಾರು ಶರಣು ಹೊಂದುತ್ತಾರೋ ಗುರುಗಳು ತಂದೆ ತಾಯಿ ಮೊದಲಾದವರ ನಮಸ್ಕಾರವನ್ನು ನನ್ನಲ್ಲಿಯೇ ಸಮರ್ಪಿಸುತ್ತಾರೋ, (ಅಂದರೆ ಗುರು ತಂದೆ ತಾಯಿ ಮೊದಲಾದವರು ಭಗವದ್ಭಕ್ತರೇ ಇದು ಮೊದಲಾದ ಬುದ್ಧಿಯಿಂದ ಅವರಿಗೆ ನಮಸ್ಕಾರಾದಿಗಳನ್ನು ಮಾಡುತ್ತಾರೋ) (ಇದು ಮಧ್ಯಮ ಭಕ್ತರ ವಿಷಯಕವು) ಆ ಶ್ರೀಪರಮಾತ್ಮನೇ ಗುರು ಮೊದಲಾದವರಲ್ಲಿ ಅಂತರ್ಯಾಮಿಯಾಗಿದ್ದು ತತ್ವಜ್ಞಾನವನ್ನು ಹುಟ್ಟಿಸುತ್ತಾನೆ. ಇತ್ಯಾದಿ ಪ್ರಕಾರ ತಿಳಿಯುತ್ತಾರೋ (ಇದು ಉತ್ತಮ ಭಕ್ತರ ವಿಷಯಕವು) (ಅಂತಹವರು ಈ ಮಾಯೆಯನ್ನು ದಾಟುತ್ತಾರೆ) (ಆಂದರೆ ದುರ್ಗಾದೇವಿಯು ಕೊಟ್ಟ ಭ್ರಮೆಯನ್ನು ಕಳೆದುಕೊಂಡು ಶ್ರೀಪರಮಾತ್ಮನ ತತ್ವಜ್ಞಾನವನ್ನು ಹೊಂದುತ್ತಾರೆ) (೨) ಈ ವಿಷಯವು ನಾರದೀಯಪುರಾಣದಲ್ಲಿ ಹೇಳಿದೆ ಮಧ್ಯಮ ಭಕ್ತರು, ಗುರು ಪಿತೃ ಮೊದಲಾದವರಲ್ಲಿ ಶ್ರೀವಿಷ್ಣುವು ಇದ್ದಾನೆಂದು ತಿಳಿದುಕೊಂಡು ಗುರು ಮೊದಲಾದವರಲ್ಲಿರತಕ್ಕ ಶ್ರೀವಿಷ್ಣುವನ್ನೂ ಗುರು ಮೊದಲಾದವರನ್ನೂ ಸೇವಿಸುತ್ತಾರೆ ಉತ್ತಮ ಭಕ್ತರಾದ ಭೀಮಾದಿಗಳು, ಗುರು ಮೊದಲಾದವರು ಶ್ರೀಪರಮಾತ್ಮನ ಪೂಜೆಗೆ ಸಾಲಿಗಾ ಮಾದಿಗಳಂತೆಯೇ ಪ್ರತಿಮಾಸ್ಥಾನೀಯರೆಂದು ತಿಳಿದು ಗುರು ಮೊದಲಾದವರಲ್ಲಿರುವ ಶ್ರೀವಿಷ್ಣುವನ್ನೇ ಸೇವಿಸುತ್ತಾರೆ ಗುರುಗಳಾದ ದ್ರೋಣಾದಿಗಳನ್ನು ಸೇವಿಸುವುದಿಲ್ಲ ಹೀಗೆ ನಾರದೀಯ ಪುರಾಣದಲ್ಲಿ ಹೇಳಿರುವರು (೩) ಆಚಾರ್ಯರ ಚಿತ್ತದಲ್ಲಿರತಕ್ಕ ರೂಪದಿಂದ ನಿನ್ನ ಜ್ಞಾನವನ್ನು ನೀನೇ ಪ್ರಕಟಿಸುತ್ತಿ (ಎಂದು ಭಾಗವತದಲ್ಲಿ ಶ್ರೀಕೃಷ್ಣನೊಡನೆ ಉದ್ಧವನ ಮಾತು) ॥ ೧೪ ॥

ಪೀ— ನಿನ್ನ ಶರಣಾಗತಿಯಿಂದ ಮಾಯೆಯು ಬಿಟ್ಟುಹೋಗುತ್ತದೆಂದಾದರೆ ಎಲ್ಲರೂ ನಿನ್ನ ಶರಣಾಗತಿಯಿಂದ ಮಾಯೆಯಿಂದುಂಟಾದ ಮೋಹವನ್ನು ಏಕೆ ಕಳೆದುಕೊಳ್ಳುವುದಿಲ್ಲವೆಂದರೆ -

ಗೀ ॥ ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇ ನರಾಧಮಾಃ ।
ಮಾಯಯಾಪಹೃತಜ್ಞಾನಾ ಆಸುರಂ ಭಾವಮಾಶ್ರಿತಾಃ ॥ ೧೫ ॥

ಅ ॥ ದುಷ್ಕೃತಿನಃ = ಪಾಪಜನಕವಾದ ಕರ್ಮವನ್ನು ಮಾಡುವ ಸ್ವಭಾವವುಳ್ಳ, (ಪಾಪಶೀಲರಾದುದರಿಂದ) ಮೂಢಾಃ = ವಿವೇಕವಿಲ್ಲದಿರುವ, ನರಾಧಮಾಃ = ಮನುಷ್ಯಾಧಮರು, ಮಾಯಯಾ = ಶ್ರೀಹರಿಯ ಇಚ್ಛೆಯಿಂದಲೂ ಸ್ವಭಾವದಿಂದಲೂ, ಅಪಹೃತಜ್ಞಾನಾಃ = ಅಭಭೂತವಾದ ಯಥಾರ್ಥಜ್ಞಾನ

ವುಳ್ಳವರಾಗಿ ಅಥವಾ ತತ್ವಜ್ಞಾನವಿಲ್ಲದವರಾಗಿ, ಮೂಢಾಃ = ಮಿಥ್ಯಾಜ್ಞಾನವುಳ್ಳವರಾಗಿ, ಆಸುರಂ ಭಾವಂ = ಆಸುರರ ಸ್ವಭಾವವನ್ನು, ಆಶ್ರಿತಾಃ = ಆಶ್ರಯಿಸಿದವರಾಗಿ ಅಥವಾ ಇಂದ್ರಿಯಗಳಿಗೆ ಗೋಚರಗಳಾದ ವಿಷಯಭೋಗಗಳಲ್ಲಿಯೇ ಆಸಕ್ತರಾಗಿ, ಮಾಂ = ನನ್ನನ್ನು, ನ ಪ್ರಪದ್ಯಂತೇ = ಶರಣು ಹೊಂದುವುದಿಲ್ಲ ॥ ೧೫ ॥

ಪೀ—ಸುಕೃತಿಗಳು ನನ್ನನ್ನು ಭಜಿಸುತ್ತಾ ಹೊಂದುತ್ತಾರೆ ಆವರಲ್ಲಿಯೂ ತಾರತಮ್ಯವು ಇದೆ ಎನ್ನುತ್ತಾರೆ—

ಗೀ ॥ ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥ ೧೬ ॥

ಅ ॥ ಭರತರ್ಷಭ = ಭರತಕುಲದಲ್ಲಿ ಶ್ರೇಷ್ಠನಾದ, ಅರ್ಜುನ = ಅರ್ಜುನನೇ ಆರ್ತಃ = ರೋಗಾದಿಗಳಿಂದ ಪೀಡಿತನಾದವನು, ಜಿಜ್ಞಾಸುಃ = ಶ್ರೀ ಪರಮಾತ್ಮನ ಜ್ಞಾನವನ್ನು ಹೊಂದಲಿಚ್ಛಿಸುವವನು, ಅರ್ಥಾರ್ಥೀ = ದ್ರವ್ಯಾಭಿಲಾಷಿಯು, ಜ್ಞಾನೀ ಚ = ಶ್ರೀ ಪರಮಾತ್ಮನ ತತ್ವವನ್ನರಿತವನು, ಹೀಗೆ ಚತುರ್ವಿಧಾಃ = ನಾಲ್ಕು ವಿಧರಾದ, ಸುಕೃತಿನಃ = ಪೂರ್ವಜನ್ಮದಲ್ಲಿ ಪುಣ್ಯವನ್ನು ಸಂಪಾದಿಸಿರುವ, ಜನಾಃ = ಜನರು, ಭಜಂತೇ = ಸೇವಿಸುತ್ತಾರೆ. ॥ ೧೬ ॥

ಭಾ ॥ (೧) ತರ್ಹಿ ಕಿಮಿತಿ ಸರ್ವೇ ನಾತ್ಯಾಯನ್ನಿತ್ಯತ ಆಹ । ನ ಮಾಮಿತಿ ॥ (೨) ದುಷ್ಕೃತಿತ್ವಾನ್ಮೂಢಾಃ । ಅತ ಏವ ನರಾಧಮಾಃ । ಅಪಹೃತಜ್ಞಾನತ್ವಾಚ್ಚ ಮೂಢಾಃ । ಅತ ಏವಾಸುರಂ ಭಾವಮಾಶ್ರಿತಾಃ ॥ (೩) ಸ ಚ ವಕ್ಷ್ಯತೇ ಪ್ರವೃತ್ತಿಂ ಚ ನಿವೃತ್ತಿಂ ಚೇತ್ಯಾದಿನಾ ॥ (೪) ಅಪಹಾರೋಽಭಿಭವಃ । ಉಕ್ತಂ ಚೈತದ್ವ್ಯಾಸಯೋಗೇ । ಜ್ಞಾನಂ ಸ್ವಭಾವೋ ಜೀವಾನಾಂ ಮಾಯಯಾ ಹ್ಯಭಿಭೂಯತ ಇತಿ ॥ (೫) ಅಸುಷು ರತಾ ಅಸುರಾಃ । ತಚ್ಚೋಕ್ತಂ ನಾರದೀಯೇ । ಜ್ಞಾನಪ್ರಧಾನಾ ದೇವಾಸ್ತು ಅಸುರಾಸ್ತು ರತಾ ಅಸಾವಿತಿ ॥ ೧೫,೧೬ ॥

ಅ ॥ (೧) ನಿನ್ನನ್ನು ಶರಣುಹೊಂದಿದ ಕಾರಣ ಮಾಯೆಯು ಅತಿಕ್ರಮಿಸಲು ಶಕ್ಯವಾದಾದರೆ ಸರ್ವರೂ ಕೂಡ ಏತಕ್ಕೆ ಮಾಯೆಯಿಂದುಂಟಾಗುವ ಭ್ರಮೆಯನ್ನು ಕಳೆದುಕೊಳ್ಳುವುದಿಲ್ಲವೆಂದರೆ, **ನ ಮಾಂ** ಎಂಬುವ ಶ್ಲೋಕದಿಂದ ಸಮಾಧಾನ ಹೇಳುತ್ತಾರೆ (೨) ಪಾಪಮಾಡತಕ್ಕ ಸ್ವಭಾವವುಳ್ಳವರಾದುದರಿಂದ ವಿವೇಕ ಶೂನ್ಯರು ಮಿಥ್ಯಾಜ್ಞಾನವುಳ್ಳವರು. ಮೂಢರಾಗಿರುವುದರಿಂದಲೇ ಮನುಷ್ಯಾಧಮರು ನಷ್ಟವಾದ ಜ್ಞಾನವುಳ್ಳವರಾದುದರಿಂದಲೂ ವಿವೇಕವಿಲ್ಲದವರು ನರಾಧಮರಾದುದರಿಂದಲೇ ಆಸುರಸ್ವಭಾವವನ್ನು ಆಶ್ರಯಿಸಿದವರು. (ಅಂತಹವರು ಆಸುರಸ್ವಭಾವವನ್ನಾಶ್ರಯಿಸಿದವರಾದುದರಿಂದ ನನ್ನನ್ನು ತಿಳಿಯುವುದಿಲ್ಲ) (೩) ಆ ಆಸುರಭಾವವು **ಪ್ರವೃತ್ತಿಂ ಚ ನಿವೃತ್ತಿಂ ಚ** ಇತ್ಯಾದಿಗಳಿಂದ ಮುಂದೆ ಹೇಳಲ್ಪಡುವುದು. (೪) (ಶ್ರೀಪರಮಾತ್ಮನನ್ನು ಹೊಂದದಿರುವ ಮುಕ್ತಿಯೋಗ್ಯರೂ ಅಯೋಗ್ಯರೂ ಇವರ ಧರ್ಮಗಳೆಂದೂ ಹೇಳಬೇಕು ಅದರಲ್ಲಿ ಮುಕ್ತಿಯೋಗ್ಯರಿಗೆ ಯಥಾರ್ಥಜ್ಞಾನವೇ ಸ್ವಭಾವವಾಗಿರುವುದರಿಂದ ಜ್ಞಾನವು ನಷ್ಟವಾಗಿದೆ, ಎಂಬುವುದು ಹೇಗೆ? ಎಂದರೆ-) ಅಪಹಾರಃ = ಅಭಿಭವವು. (**ಅಪಹೃತಜ್ಞಾನಾಃ** ಎಂಬುವಲ್ಲಿ ಮುಕ್ತಿಯೋಗ್ಯಜೀವರ ಜ್ಞಾನದಲ್ಲಿ **ಅಪಹಾರ**ವೆಂದರೆ **ಅಭಿಭವವು** (ತಿರಸ್ಕಾರವು) ಎಂದು ತಿಳಿಯತಕ್ಕುದು) ಸಜ್ಜೀವರ ಜ್ಞಾನವು ಸ್ವಭಾವಭೂತವಾದುದು. ಅದು ಮಾಯೆಯಿಂದ ಕದಾಚಿತ್

ತಿರಸ್ಕರಿಸಲ್ಪಡುತ್ತದೆ, ಎಂದು ವ್ಯಾಸಯೋಗವೆಂಬುವ ಗಂಧದಲ್ಲಿ ಹೇಳಲ್ಪಡುತ್ತದೆ. (೫) ಅಸುರಾಃ= ಇಂದ್ರಿಯಗಳನ್ನು ಸಂತೋಷಗೊಳಿಸುವುದರಲ್ಲಿಯೇ ಆಸಕ್ತರಾದವರು ದೇವತೆಗಳು ಜ್ಞಾನವೇ ಪ್ರಧಾನವಾಗಿ ಉಳ್ಳವರು ಅಸುರರು ಇಂದ್ರಿಯವಿಷಯಗಳಲ್ಲಿಯೇ ಆಸಕ್ತರಾದವರು ಎಂದು ನಾರದೀಯ ಪುರಾಣದಲ್ಲಿ ಹೇಳಿದೆ ॥ ೧೫, ೧೬ ॥

ಗೀ ॥ ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।
ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ ॥೧೭॥

ಅ ॥ ತೇಷಾಂ=ಆ ನಾಲ್ಕು ವಿಧರಾದ ಜನರ ಮಧ್ಯದಲ್ಲಿ, ನಿತ್ಯಯುಕ್ತಃ= ಸರ್ವದಾ ಶ್ರೀಪರಮಾತ್ಮನಲ್ಲಿ ಮನಸ್ಸಿಟ್ಟು ಧ್ಯಾನಮಾಡುತ್ತಿರುವ, ಏಕಭಕ್ತಿಃ=ಶ್ರೀಕೃಷ್ಣನಾದ ನನ್ನಲ್ಲಿಯೇ ಭಕ್ತಿಯುಳ್ಳ, ಜ್ಞಾನೀ= ಭಗವಂತನ ತತ್ವವನ್ನು ತಿಳಿದವನು, ವಿಶಿಷ್ಯತೇ= ಉತ್ಕೃಷ್ಟನಾಗಿರುತ್ತಾನೆ ಹಿ=ಏಕೆಂದರೆ, ಅಹಂ= ನಾನು, ಜ್ಞಾನಿನಃ=ಜ್ಞಾನಿಗೆ, ಅತ್ಯರ್ಥಂ=ಅತಿಶಯವಾಗಿ, ಪ್ರಿಯಃ=ಪ್ರೀತಿಪಾತ್ರನು ಸ ಚ=ಆ ಜ್ಞಾನಿಯು, ಮಮ= ನನಗೆ, ಪ್ರಿಯಃ= ಪ್ರಿಯನು ॥ ೧೭ ॥

ಗೀ ॥ ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಂ ।
ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಂ ॥ ೧೮ ॥

ಅ ॥ ಏತೇ ಸರ್ವೇ ಏವ ಉದಾರಾಃ = ಈ ನಾಲ್ಕು ಜನರೂ ಉತ್ಕೃಷ್ಟರೇ ಜ್ಞಾನೀತು= ಜ್ಞಾನಿಯಾದರೂ, ಮೇ= ನನ್ನ ಆತ್ಮೈವ= ನನಗೆ ಅತ್ಯಂತ ಪ್ರಿಯನಾಗಿರುವುದರಿಂದ ಬೇರೆ ಮೂವರು ಹೊಂದಿದ್ದರೂ ಇವನು ನನ್ನನ್ನು ನಿಶ್ಚಯವಾಗಿಯೂ ಹೊಂದುತ್ತಾನೆ ಅಥವಾ ತನ್ನ ಸ್ಥಿತಿ ಮೊದಲಾದುದೆಲ್ಲವೂ ನನ್ನ (ಶ್ರೀಕೃಷ್ಣನ) ಅಧೀನವೇ, ಎಂದು ತಿಳಿದು ನನ್ನನ್ನೆ ಪೈಕುಂಠಾದಿ ಲೋಕಗಳನ್ನು ಹೊಂದುವವನು ಜ್ಞಾನಿ, ಮೇ= ನನ್ನ, ಮತಂ= ಸಿದ್ಧಾಂತವು ಸ ಹಿ= ಆ ಜ್ಞಾನಿಯು, ಅನುತ್ತಮಾಂ= ಅಸದೃಶವಾದ, ಗತಿಮೇವ= ಗತಿಯನ್ನುದ್ದೇಶಿಸಿಯೇ, ಯುಕ್ತಾತ್ಮಾ= ಶ್ರೀಹರಿಯ ಧ್ಯಾನದಿಂದೊಡಗೂಡಿದ ಮನಸ್ಸುಳ್ಳವನಾಗಿ, ಮಾಂ= ನನ್ನನ್ನು, ಆಸ್ಥಿತಃ = ಹೊಂದುತ್ತಾನೆ ॥ ೧೮ ॥

ಭಾ ॥ (೧) ಏಕಸ್ಮಿನ್ನೇವ ಭಕ್ತಿರೇಕಭಕ್ತಿಃ ॥ (೨) ತಚ್ಚೋಕ್ತಂ ಗಾರುಡೇ । ಮಯ್ಯೇವ ಭಕ್ತಿರ್ನಾನ್ಯತ್ರ ಏಕಭಕ್ತಿಃ ಸ ಉಚ್ಯತ ಇತಿ ॥ ೧೭,೧೮ ॥

ಅ ॥ ಸರ್ವೋತ್ತಮನಾದ ಶ್ರೀಪರಮಾತ್ಮನೊಬ್ಬನಲ್ಲಿಯೇ ಮಾಹಾತ್ಮ್ಯಜ್ಞಾನಪೂರ್ವಕ ಸುದೃಢ ಸ್ನೇಹವುಳ್ಳವನು, ಏಕಭಕ್ತಿಃ ಎನಿಸುತ್ತಾನೆ (೨) ನನ್ನಲ್ಲಿಯೇ ಸುದೃಢಸ್ನೇಹವುಳ್ಳವನು, ಇತರರಲ್ಲಿ ಸುದೃಢಸ್ನೇಹವಿಲ್ಲದವನು, ಅಂತಹನು ಏಕಭಕ್ತಿಃ ಎನಿಸುತ್ತಾನೆ, ಎಂಬೀ ಪ್ರಮೇಯವು ಗಾರುಡದಲ್ಲಿ ಹೇಳಿದೆ ॥ ೧೭, ೧೮ ॥

ಪೀ—ಇಂತಹ ಜ್ಞಾನಿಯು ದುರ್ಲಭನೆನ್ನುತ್ತಾರೆ—

ಗೀ ॥ ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಮಾಂ ಪ್ರಪದ್ಯತೇ ।
ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥ ೧೯ ॥

ಅ ॥ ಬಹೂನಾಂ ಜನ್ಮನಾಂ=ಬಹು ಜನ್ಮಗಳ, ಅಂತೇ=ಕೊನೆಗೆ, ವಾಸುದೇವಃ ಸರ್ವಮಿತಿ= ಎಲ್ಲಾ ವಸ್ತುಗಳ ಸ್ಥಿತಿ ಮೊದಲಾದುದು ಶ್ರೀಕೃಷ್ಣನ ಅಧೀನವೇ ಅಥವಾ ಸರ್ವಗುಣ ಪರಿಪೂರ್ಣನಾದ ವನು ಶ್ರೀಕೃಷ್ಣನು, ಇತಿ ಜ್ಞಾನವಾನ್=ಹೀಗೆ ತಿಳಿದವನೇ, ಮಾಂ=ನನ್ನ ನ್ನು, ಪ್ರಪದ್ಯತೇ=ಶರಣುಹೊಂದು ತ್ತಾನೆ. ಸ ಮಹಾತ್ಮಾ=ಅಂತಹ ಜ್ಞಾನವುಳ್ಳವನು, ಸುದುರ್ಲಭಃ=ಅತ್ಯಂತ ದುರ್ಲಭನು.

ವಿ ॥ ಶ್ರೀಕೃಷ್ಣನ ತತ್ವಜ್ಞಾನದಿಂದ ಮೋಕ್ಷವಾಗುವುದಾದರೂ ಎಲ್ಲರಿಗೆ ಶ್ರೀಕೃಷ್ಣನ ಜ್ಞಾನವೇ ಇಲ್ಲ. ಆದಕಾರಣ ಸರ್ವರಿಗೆ ಮೋಕ್ಷವಾಗುವುದಿಲ್ಲ ॥ ೧೯ ॥

ಭಾ ॥ ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಭವತಿ । ತಚ್ಚೋಕ್ತಂ ಬ್ರಾಹ್ಮೇ । ಜನ್ಮ-ಭಿರ್ಬಹುಭಿರ್ಜ್ಞಾತ್ವಾ ತತೋ ಮಾಂ ಪ್ರತಿಪದ್ಯತ ಇತಿ ॥ ೧೯ ॥

ಅ ॥ ಬಹುಜನ್ಮಗಳ ಅಂತ್ಯದಲ್ಲಿ ಜ್ಞಾನವುಳ್ಳವನಾಗುತ್ತಾನೆ ಬಹು ಜನ್ಮಗಳಿಂದ ನನ್ನನ್ನು ತಿಳಿದುಕೊಂಡು ಆ ಮೇಲೆ ಆವಾಗಲೇ ನನ್ನನ್ನು ಹೊಂದುತ್ತಾನೆ, ಎಂದು ಬ್ರಾಹ್ಮಪುರಾಣದಲ್ಲಿ ಹೇಳಿದೆ. (ಆದಕಾರಣ ಜ್ಞಾನವು ಹುಟ್ಟಿದ ಮೇಲೆ ಶ್ರೀಪರಮಾತ್ಮನನ್ನು ಹೊಂದಲಿಕ್ಕೆ ಅನೇಕ ಜನ್ಮಗಳು ಆವಶ್ಯಕವು ಎಂಬುದು ಅಯುಕ್ತವೆಂದುಕ್ತವಾಯಿತು) ॥ ೧೯ ॥

ಪೀ—ಲೋಕದಲ್ಲಿ ಬ್ರಹ್ಮಜ್ಞಾನಿಗಳು ಬಹುಮಂದಿ ಕಾಣುವುದರಿಂದ ದೌರ್ಲಭ್ಯವು ಹೇಗೆ ಎಂದರೆ–

ಗೀ ॥ ಕಾಮೈಸ್ತೈಸ್ತೈರ್ಹೃಜ್ಞಾನಾಃ ಪ್ರಪದ್ಯಂತೇಽನ್ಯದೇವತಾಃ ।
ತಂ ತಂ ನಿಯಮಮಾಸ್ಥಾಯ ಪ್ರಕೃತ್ಯಾ ನಿಯತಾಃ ಸ್ವಯಾ ॥ ೨೦ ॥

ಅ ॥ ತೈಸ್ತೈಃ ಕಾಮೈಃ=ತಂತಮ್ಮ ಇಚ್ಛೆಗಳಿಂದ ಹೃತಜ್ಞಾನಾಃ=ಜ್ಞಾನವಿರಹಿತವಾಗಿ ಅಥವಾ ಅಪಹೃತಜ್ಞಾನವುಳ್ಳವರಾಗಿ, ತಂ ತಂ ನಿಯಮಂ=ಬ್ರಾಹ್ಮಶೈವ ಮೊದಲಾದ ಆವಾವ ಆಗಮಗಳಲ್ಲಿ ಹೇಳಿದ ನಿಯಮವನ್ನು, ಆಸ್ಥಾಯ=ಆಶ್ರಯಿಸಿಕೊಂಡು ಸ್ವಯಾ ಪ್ರಕೃತ್ಯಾ=ತಮ್ಮ ಸ್ವಭಾವದಿಂದ, ನಿಯತಾಃ= ವಶೀಕರಿಸಲ್ಪಟ್ಟವರಾಗಿ, ಅನ್ಯದೇವತಾಃ=ತನಗಿಂತ ಭಿನ್ನರಾದ ಬ್ರಹ್ಮ, ಶಕ್ತಿ ರುದ್ರಾದಿ ದೇವತೆಗಳನ್ನು, ಪ್ರಪದ್ಯಂತೇ=ಶರಣು ಹೊಂದುತ್ತಾರೆ

ವಿ ॥ ಜ್ಞಾನಿಗಳಾಗಿ ತೋರುವವರು ಅನೇಕ ವಿಧಗಳಾದ ಅಭಿಲಾಷೆಗಳಿಂದ ಶ್ರೀಪರಮಾತ್ಮನು ಉತ್ತಮನೆಂಬುವ ಜ್ಞಾನವಿಲ್ಲದವರಾಗಿ ಬೇರೆ ದೇವತೆಗಳನ್ನು ಪೂಜಿಸುತ್ತಾ ಆ ದೇವತೆಗಳನ್ನೇ ಹೊಂದು ತ್ತಾರೆ. ಮುಖ್ಯವಾಗಿ ಭಗವದ್ಭಕ್ತನು ದುರ್ಲಭನು. ॥ ೨೦ ॥

ಭಾ ॥ ಪ್ರಕೃತ್ಯಾ ಸ್ವಭಾವೇನ । ಸ್ವಭಾವಃ ಪ್ರಕೃತಿಶ್ಚೈವ ಸಂಸ್ಕಾರೋ ವಾಸನೇತಿ ಚೇತ್ಯಭಿ-ಧಾನಾತ್ ॥ ೨೦ ॥

ಅ ॥ ಪ್ರಕೃತ್ಯಾ=ಸ್ವಭಾವದಿಂದ ಸ್ವಭಾವವೇ ಪ್ರಕೃತಿ ಎಂಬ ಶಬ್ದದಿಂದಲೂ ಸಂಸ್ಕಾರವು ವಾಸನಾ ಎಂಬುವ ಶಬ್ದದಿಂದಲೂ ಹೇಳಲ್ಪಡುತ್ತದೆ ಎಂದು ಶಬ್ದಶಕ್ತಿಯನ್ನು ತಿಳಿಸುವ ಪ್ರಮಾಣ ವಿದೆ. ॥ ೨೦ ॥

ಗೀ ॥ ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ।
ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಂ ॥ ೨೧ ॥

ಅ ॥ ಯೋ ಯಃ = ಮುಖ್ಯವಾಗಿ ಭಗವದ್ಭಕ್ತ ತಮೋಯೋಗ್ಯ ಇವರಿಗಿಂತ ಭಿನ್ನನೂ, ವಿಷ್ಣು ಸರ್ವೋತ್ತಮತತ್ವಜ್ಞಾನ ವಿಪರೀತಜ್ಞಾನಗಳಲ್ಲದಿರುವ ಯಾರು ಯಾರು, ಭಕ್ತಃ = ಬ್ರಹ್ಮರುದ್ರಾದಿಗಳಲ್ಲಿ ಭಕ್ತಿಯುಳ್ಳವರಾಗಿ, ಯಾಂ ಯಾಂ ತನುಂ = ಕಾರಣವಿಶೇಷಗಳಿಂದ ಯಾವ ಯಾವ ಬ್ರಹ್ಮರುದ್ರಾದಿಗಳ ಶರೀರವನ್ನು, ಶ್ರದ್ಧಯಾ = ಆಸ್ತಿಕ್ಯಬುದ್ಧಿಯಿಂದ, ಆರ್ಚಿತುಂ — ಪೂಜಿಸಲಿಕ್ಕೆ, ಇಚ್ಛತಿ = ಇಚ್ಛಿಸುತ್ತಾನೋ, ತಸ್ಯ ತಸ್ಯ = ಅವರವರಿಗೆ, ತಾಮೇವ ಶ್ರದ್ಧಾಂ = ಆ ಆಸ್ತಿಕ್ಯಬುದ್ಧಿಯನ್ನೇ, ಅಚಲಾಂ = ಸ್ಥಿರವಾದುದನ್ನಾಗಿ, (ಚಲನೆಯಿಲ್ಲದಿರುವುದನ್ನಾಗಿ), ಅಹಂ = ನಾನು, ವಿದಧಾಮಿ = ಕೊಡುತ್ತೇನೆ ॥ ೨೧ ॥

ಗೀ ॥ ಸ ತಯಾ ಶ್ರದ್ಧಯಾ ಯುಕ್ತಸ್ತಸ್ಯಾರಾಧನಮೀಹತೇ ।
ಲಭತೇ ಚ ತತಃ ಕಾಮಾನ್ಮಯೈವ ವಿಹಿತಾನ್ಹಿತಾನ್ ॥ ೨೨ ॥

ಅ ॥ ಸ ಚ = ಬ್ರಹ್ಮರುದ್ರಾದಿ ದೇವತೆಗಳಲ್ಲಿ ವಿಶೇಷತಃ ಭಕ್ತಿಯಿದ್ದವನು ತಯಾ ಶ್ರದ್ಧಯಾ = ಆ ಬ್ರಹ್ಮ ಶಿವ ಶಕ್ರಾದಿ ವಿಷಯಕವಾದ ಆಸ್ತಿಕ್ಯಬುದ್ಧಿಯಿಂದ, ಯುಕ್ತಃ = ಕೂಡಿದವನಾಗಿ, ತಸ್ಯ = ಆ ಬ್ರಹ್ಮರುದ್ರಾದಿ ದೇವತೆಗಳ, ಆರಾಧನಂ = ಪೂಜಾದಿಗಳನ್ನು, ಈಹತೇ = ಮಾಡುತ್ತಾನೆ ತತಃ = ಆ ದೇವತೆಗಳನ್ನು ಪೂಜಿಸುವುದರಿಂದ, ಮಯೈವ = ಆ ದೇವತಗಳಲ್ಲಿ ಅಂತರ್ಯಾಮಿಯಾದ ನನ್ನಿಂದಲೇ, ವಿಹಿತಾನ್ ತಾನ್ = ಕೊಡಲ್ಪಟ್ಟ ಅವರವರಿಗೆ ಅಭಿಪ್ರೇತಗಳಾದ ಪದಾರ್ಥಗಳನ್ನು, ಲಭತೇ ಚ = ಹೊಂದುತ್ತಾನೆ (ನಾನು ಹೊರತು ಬೇರೆ ಯಾರಿಗೂ ಫಲವನ್ನು ಕೊಡಲಿಕ್ಕೆ ಸಾಮರ್ಥ್ಯವೇ ಇಲ್ಲ ॥ ೨೨ ॥

ಅ ಥವಾ

ಪೀ ವಸ್ತುತಃ ಭಗವದ್ಭಕ್ತನೇ ಆಗಿದ್ದವನು ಉಪದೇಶ ಮಾಡುವವರಿಲ್ಲದಿರುವುದರಿಂದ ಬ್ರಹ್ಮಾದಿ ದೇವತೆಗಳನ್ನು ಪೂಜಿಸುವವನೆಂದಾದರೆ—

ಅ ॥ ಸ್ವತಃ ವಿಷ್ಣುಭಕ್ತನಾದವನು ಶ್ರೀ ವಿಷ್ಣುವನ್ನು ಸರ್ವೋತ್ತಮನೆಂದು ತಿಳಿದರೂ ಕಾರಣಾಂತರದಿಂದಲೇ ಬ್ರಹ್ಮಾದಿಗಳನ್ನು ಪೂಜಿಸುತ್ತಿದ್ದರೆ ಅಂತಹವರಿಗೆ ಅಂತಹ ಶ್ರದ್ಧೆಯನ್ನೇ ಕೊಡುತ್ತೇನೆ. ಆ ಮೇಲೆ ಕ್ರಮದಿಂದ ಶ್ರೀ ಪರಮಾತ್ಮನ ಅನುಗ್ರಹದಿಂದ ಬಂದ ಗುರುಗಳ ಉಪದೇಶದ್ವಾರಾ ಶ್ರೀ ಪರಮಾತ್ಮನನ್ನು ಪೂಜಿಸುತ್ತಾನೆ ಆಮೇಲೆ ನನ್ನ (ಶ್ರೀ ಪರಮಾತ್ಮನ) ಪೂಜೆಯಿಂದ ಸಂತೋಷಗೊಂಡ ನನ್ನಿಂದಲೇ ಕೊಡಲ್ಪಟ್ಟ ಮೋಕ್ಷಾದಿ ಕಾಮಗಳನ್ನು ಹೊಂದುತ್ತಾನೆ ॥ ೨೧,೨೨ ॥

ಪೀ— ಬ್ರಹ್ಮರುದ್ರಾದಿ ದೇವತೆಗಳನ್ನು ಪೂಜಿಸುವವರಿಗೂ ನೀನೇ ಫಲವನ್ನು ಕೊಡುವುದಾದರೆ ಅವರ ಪೂಜಾದಿಗಳನ್ನು ಬಿಟ್ಟು ನಿನ್ನ ಪೂಜಾದಿಗಳನ್ನು ಏಕೆ ಮಾಡಬೇಕೆಂದರೆ—

ಗೀ ॥ ಅಂತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಂ ।
ದೇವಾನ್ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪಿ ॥೨೩॥

ಅ ॥ ತೇಷಾಂ = ಶ್ರೀಪರಮಾತ್ಮನು, ಲಕ್ಷ್ಮೀಬ್ರಹ್ಮರುದ್ರ ಮೊದಲಾದ ದೇವತೆಗಳಿಗಿಂತ ಉತ್ತಮನು ಎಂದು ತಿಳಿದು ಯತ್ಕಿಂಚಿತ್ ಐಹಿಕಫಲಕ್ಕಾಗಿ ಆ ಇತರ ದೇವತೆಗಳಾದ ಲಕ್ಷ್ಮೀ ಬ್ರಹ್ಮಾದಿಗಳನ್ನು ಪೂಜಿ

ಸುವಫರಿಗೆ, ಅಲ್ಪಮೇಧಸಾಂ = ಅಲ್ಪವಾದ ಫಲದಲ್ಲಿಯೇ ಬುದ್ಧಿಯಿರುವುದರಿಂದ, ತತ್ = ಇತರ ದೇವತೆಗಳ ಪೂಜೆಯಿಂದುಂಟಾದ, ಫಲಂ = ಫಲವು, ಅಂತವತ್ತು ಭವತಿ = ನಾಶವುಳ್ಳದ್ದೇ (ಅನಿತ್ಯವೇ) ಆಗುತ್ತದೆ. (ಹೇಗೆಂದರೆ) ದೇವಯಜಃ = ಪರಮಾತ್ಮನು ಸರ್ವೋತ್ತಮನೆಂದು ತಿಳಿದು ಬ್ರಹ್ಮರುದ್ರಾದಿಗಳನ್ನು ಪೂಜಿಸುವವರು, ದೇವಾನ್ = ಬ್ರಹ್ಮರುದ್ರಾದಿ ದೇವತೆಗಳನ್ನು, ಯಾಂತಿ = ಹೊಂದುತ್ತಾರೆ. (ಅವರು ನನ್ನನ್ನು ಹೊಂದುವುದಿಲ್ಲ. ಆದಕಾರಣ ಅವರಿಗೆ ಸಿಗುವ ಫಲವು ನಾಶವುಳ್ಳದ್ದೇ) ಮದ್ಭಕ್ತಾಸ್ತು = ನನ್ನನ್ನೇ ಸರ್ವೋತ್ತಮನೆಂದು ತಿಳಿದು ನನ್ನನ್ನು ಪೂಜಿಸುವವರಾದರೂ, ಮಾಮಪಿ = ಮೊದಲು ದೇವತೆಗಳನ್ನು ಹೊಂದಿ ಕೊನೆಗೆ ನನ್ನನ್ನು ಕೂಡ, ಯಾಂತಿ = ಹೊಂದುತ್ತಾರೆ (ಆದಕಾರಣ ಅವರ ಫಲಕ್ಕೆ ನಾಶವಿಲ್ಲ ಆದುದರಿಂದ ನನ್ನನ್ನು ಸರ್ವೋತ್ತಮನೆಂದೂ, ಬ್ರಹ್ಮರುದ್ರಾದಿ ದೇವತೆಗಳನ್ನು ನನ್ನ ಪರಿವಾರರೆಂದೂ ತಿಳಿದು ಪೂಜಿಸಬೇಕು) ॥ ೨೩ ॥

ಪೀ—ರಾಮಕೃಷ್ಣಾದಿರೂಪವಾದ ಶ್ರೀಪರಮಾತ್ಮನ ಶರೀರವನ್ನು ಎಂಬುವ ಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ಭಾ ॥ (೧) ಯಾಂ ಯಾಂ ಬ್ರಹ್ಮಾದಿರೂಪಾಂ ತನುಂ । ಉಕ್ತಂ ಚ ನಾರದೀಯೇ । ಅಂತೋ ಬ್ರಹ್ಮಾದಿಭಕ್ತಾನಾಂ ಮದ್ಭಕ್ತಾನಾಮನಂತತೇತಿ ॥ (೨) ಮುಕ್ತಶ್ಚ ಕಾಂ ಗತಿಂ ಗಚ್ಛೇನ್ಮೋಕ್ಷಶ್ಚೈವ ಕಿಮಾತ್ಮಕ ಇತ್ಯಾದೇಃ ಪರಿಹಾರಸಂದರ್ಭಾಚ್ಚ ಮೋಕ್ಷಧರ್ಮೇಷು ॥ (೩) ಅವತಾರೇ ಮಹಾವಿಷ್ಣೋರ್ಭಕ್ತಃ ಕುತ್ರ ಚ ಮುಚ್ಯತ ಇತ್ಯಾದೇಶ್ಚ ಬ್ರಹ್ಮವೈವರ್ತೇ ॥ ೨೧,೨೨,೨೩ ॥

ಅ ॥ (೧) ಬ್ರಹ್ಮರುದ್ರಾದಿರೂಪವಾದ ಯಾವಯಾವ ಶರೀರವನ್ನು (ಅಂತವತ್ತು ಫಲಂ ತೇಷಾಂ ಎಂದು ಬ್ರಹ್ಮರುದ್ರಾದಿಗಳ ಭಕ್ತರಿಗೆ ನಾಶಶಿರಸ್ಕವಾದ ಫಲವು ಹೇಳಲ್ಪಟ್ಟಿದೆ ಆದ ಬ್ರಹ್ಮಾದಿಗಳನ್ನು ತೆಗೆದುಕೊಂಡರೆ ಕೂಡುತ್ತದೆ ಶ್ರೀ ಪರಮಾತ್ಮನೆಂದು ತೆಗೆದುಕೊಂಡರೆ ಕೂಡುವುದಿಲ್ಲ, ಎನ್ನುತ್ತಾರೆ—) ಬ್ರಹ್ಮಾದಿಗಳನ್ನು ಸೇವಿಸಿದ ಜನರಿಗೆ ನಾಶಶಿರಸ್ಕವಾದ ಫಲವಾಗುತ್ತದೆ ನನ್ನನ್ನೇ ಸೇವಿಸಿದವರಿಗೆ ನಾಶವಿಲ್ಲ. ಮೋಕ್ಷಾದಿರೂಪ ಫಲವಾಗುತ್ತದೆ, ಎಂದು ನಾರದೀಯ ಪುರಾಣದಲ್ಲಿದೆ (೨) ಮುಕ್ತನಾದವನು ಯಾವ ಗತಿಯನ್ನು ಹೊಂದುವನು? ಮೋಕ್ಷದ ಸ್ವರೂಪವು ಯಾವುದು? ಇದುಮೊದಲಾದ ಪ್ರಶ್ನೆಗೆ ಪರಿಹಾರರೂಪವಾದ ವಾಕ್ಯಸಂದರ್ಭ ವಾಕ್ಯದಿಂದಲೂ ಈ ಅರ್ಥವು ಅಂದರೆ ಶ್ರೀ ಪರಮಾತ್ಮನ ಭಕ್ತರಿಗೆ ಮೋಕ್ಷಾದಿರೂಪವಾದ ಪುರುಷಾರ್ಥವಾಗುತ್ತದೆಂದು ತಿಳಿಯುತ್ತದೆ ಹೀಗೆ ಮೋಕ್ಷಧರ್ಮಗಳಲ್ಲಿದೆ (೩) (ಶ್ರೀ ಪರಮಾತ್ಮನ ಮೂಲರೂಪವನ್ನು ಭಜಿಸಿದವರಿಗೆ ನಾಶವಿಲ್ಲದ ಫಲವು ಬರಲಿ, ರಾಮಕೃಷ್ಣಾದಿ ಅವತಾರರೂಪವನ್ನು ಭಜಿಸುವವರಿಗೆ ನಾಶವಿರುವ ಫಲವನ್ನೊಡಂಬಟ್ಟರೆ ಬಾಧಕವೇನೆಂದರೆ—) ಸರ್ವೋತ್ತಮನಾದ ಶ್ರೀವಿಷ್ಣುವಿನ ಯಾವುದಾದರೊಂದು ಅವತಾರರೂಪದ ಜ್ಞಾನದಿಂದಲೂ ಮುಕ್ತನಾಗುತ್ತಾನೆ ಇದುಮೊದಲಾದ ಪ್ರಮೇಯವು ಬ್ರಹ್ಮವೈವರ್ತದಲ್ಲಿದೆ ॥ ೨೧,೨೨,೨೩ ॥

ಪೀ—ಸರ್ವರಿಗೂ ಪ್ರೇರಕನಾಗಿ ಎಲ್ಲಾ ದೇಹಗಳಲ್ಲಿ ಶ್ರೀಪರಮಾತ್ಮನು ಇದ್ದರೆ ಆಯಾಯ ದೇಹದಲ್ಲಿರುವ ಜೀವರಿಗೆ ಏಕೆ ಕಾಣಿಸಿಕೊಳ್ಳುವುದಿಲ್ಲ ಎಂದರೆ—

ತಾ ॥ (೧) ಅಚೇತನಯಾ (ನಾ ಯಾ) ತನ್ಮೇಯತ್ತಾತ್ತು ಮಾಯಯಾ । ಲಕ್ಷ್ಮ್ಯಾ ವಶೀಗಯಾ ಲೋಕೋ ವಿಷ್ಣುನೈವ ವಿಮೋಹಿತಃ ॥ (೨) ಯೇ ತು ವಿಷ್ಣುಂ ಪ್ರಪದ್ಯಂತೇ

ತೇ ಮಾಯಾಂ ತಾಂ (ತು) ತರಂತಿ ಹಿ ॥ (೩) ಲಕ್ಷ್ಮೀಃ ಸಾ ಜಡಮಾಯಾ ಯಾ ದೇವತಾ ತೇ ಉಭೇ ಅಪಿ । ವಿಷ್ಣೋರ್ವಶೇ ತತೋಽನನ್ಯಭಕ್ತ್ಯಾ ತಂ ಶರಣಂ ವ್ರಜೇತ್ ॥ (೪) ಯಾದೃಶೀ ತತ್ರ ಭಕ್ತಿಃ ಸ್ಯಾತ್ತಾದೃಶ್ಯನ್ಯತ್ರ ನೈವ ಚೇತ್ । ಅನನ್ಯಭಕ್ತಿಃ ಸಾ ಜ್ಞೇಯಾ ವಿಷ್ಣಾವೇವ ತು ಸಾ ಭವೇತ್ । ಅನ್ಯೇಷು ವೈಷ್ಣವತ್ವೇನ ಲಕ್ಷ್ಮ್ಯಬ್ರಹ್ಮಹರಾದಿಷು । ಕುರ್ಯಾದ್ಭಕ್ತಿಂ ನಾನ್ಯಥಾ ತು ತದ್ವಶಾ ಏವ ತೇ ಯತಃ॥ (೫) ಏವಂ ಜಾನಂಸ್ತಮಾಪ್ನೋತಿ ನಾನ್ಯಥಾ ತು ಕಥಂಚನ ॥ ೧ ॥

ಅ ॥ (೧) ಅಚೇತನವಾದ ಪ್ರಕೃತಿಯಿಂದಲೂ, ಶ್ರೀಪರಮಾತ್ಮನ ಅಧೀನದಲ್ಲಿಯೇ ಇರುವ ಶ್ರೀವಿಷ್ಣುವಿನಿಂದಲೇ ಚೆನ್ನಾಗಿ ತಿಳಿಯಲ್ಪಡುವುದರಿಂದ ಮಾಯೆಯೆನಿಸಿಕೊಂಡ ಲಕ್ಷ್ಮೀರೂಪಳಾದ ದುರ್ಗಾದೇವಿಯಿಂದಲೂ ಕೂಡ ಮುಖ್ಯವಾಗಿ ಶ್ರೀಪರಮಾತ್ಮನ ಸಾಮರ್ಥ್ಯದಿಂದಲೂ ಜನರು ಮನಸ್ಸಿನ ಅಜ್ಞಾನದಿಂದ ಅವೃತರಾಗಿರುವುದರಿಂದ ಶ್ರೀಪರಮಾತ್ಮನನ್ನು ತಿಳಿಯುವುದಿಲ್ಲ (1) **ಅಚೇತನಯಾ** ಇತ್ಯಾದಿಗಳಿಂದ ತ್ರಿಭಿರ್ಗುಣಮಯೈಃ (೧೩, ೧೪) ಇತ್ಯಾದಿಗಳ ಅರ್ಥವು ಉಕ್ತವಾಯಿತು) (2) **ವಿಷ್ಣುನೈವ** ಎಂಬುವುದರಿಂದ **ನಾಹಂ ಪ್ರಕಾಶಃ** ಎಂಬ (೨೫)ನೇ ಶ್ಲೋಕದ ಅರ್ಥವು ಉಕ್ತವಾಯಿತು) (೩) (ಹೀಗೆ ಜನರು ಮೋಹಿತರಾಗಿದ್ದಾರೆಂದಾದರೆ ಯಾರಿಗೂ ಶ್ರೀಪರಮಾತ್ಮನ ಜ್ಞಾನವು ಬಾರದೆ ಹೋಗುವುದು ಎಂದರೆ—) ಯಾರು ವಿಷ್ಣುವನ್ನೇ ಶರಣು ಹೊಂದುತ್ತಾರೋ, ಅವರು ದುರ್ಗಾದೇವಿಯುಂದುಂಟಾದ ಮೇಲೆ ಹೇಳಿದ ಅಜ್ಞಾನರೂಪವಾದ ಆವರಣವನ್ನೇ ಕಳೆದುಕೊಳ್ಳುತ್ತಾರೆ (ಇದರಿಂದ **ಮಾಮೇವ** ಎಂಬುವ ೧೪ನೇ ಶ್ಲೋಕವು ವ್ಯಾಖ್ಯಾತವಾಯಿತು) (೩) (ಶ್ರೀಪರಮಾತ್ಮನನ್ನು ಶರಣು ಹೊಂದಿದ್ದರಿಂದ ದುರ್ಗೆಯಿಂದುಂಟಾದ ಮೇಲೆ ಹೇಳಿದ ಅಜ್ಞಾನವನ್ನು ಹೇಗೆ ಕಳೆದುಕೊಳ್ಳುವುದು ಎಂದರೆ-) ಆ ಲಕ್ಷ್ಮೀರೂಪಳಾದ ದುರ್ಗಾದೇವಿಯು ಜಡಭೂತವಾದ ಮಾಯೆಯೆನಿಸಿದ ಪ್ರಕೃತಿಗೆ ಅಭಿಮಾನಿನಿಯು. ಆ ಅಚೇತನಪ್ರಕೃತಿ ಚೇತನಪ್ರಕೃತಿ (ಲಕ್ಷ್ಮೀದೇವಿಯು) ಇವರಿಬ್ಬರೂ ಪರಮಾತ್ಮನ ಅಧೀನದಲ್ಲಿರುವವರು ಆದಕಾರಣ ಅನನ್ಯಭಕ್ತಿಯಿಂದ ಆ ಶ್ರೀಪರಮಾತ್ಮನನ್ನು ಶರಣು ಹೊಂದಬೇಕು (ಲಕ್ಷ್ಮೀದೇವಿಯು ಜಡಭೂತವಾದ ಮಾಯೆಗೆ ಅಭಿಮಾನಿನಿಯು ಆ ಅಚೇತನ ಪ್ರಕೃತಿಯು ಲಕ್ಷ್ಮೀದೇವಿಯ ಅಧೀನವು ಆ ಲಕ್ಷ್ಮೀದೇವಿಯು ಶ್ರೀಪರಮಾತ್ಮನ ಅಧೀನದಲ್ಲಿರುವವಳು ಆದಕಾರಣ ಇಬ್ಬರೂ ಪರಮಾತ್ಮನ ಅಧೀನದಲ್ಲಿರುವವರು ಆದಕಾರಣ ಪರಮಾತ್ಮನನ್ನು ಶರಣುಹೊಂದಿ ಮಾಯೆಯನ್ನು ಅತಿಕ್ರಮಿಸಿಕೊಳ್ಳಬೇಕು) (ಅಂದರೆ ಶ್ರೀಪರಮಾತ್ಮನನ್ನು ಶರಣು ಹೊಂದಿದವರು ಶ್ರೀಹರಿಯ ಅಧೀನದಲ್ಲಿರುವ ಪ್ರಕೃತಿಯುಂದುಂಟಾದ ಅಜ್ಞಾನರೂಪವಾದ ಆವರಣವನ್ನು ಅತನ ಅನುಗ್ರಹದಿಂದ, ತೆರದುಕೊಂಡು, ಶ್ರೀಪರಮಾತ್ಮನನ್ನು ತಿಳಿಯುತ್ತಾರೆ) (ಇದರಿಂದ **ಗುಣಮಯೀ** ಎಂಬುವುದು ವ್ಯಾಖ್ಯಾತವಾಯಿತು) (**ಅನನ್ಯಭಕ್ತ್ಯಾ** ಎಂಬುವುದರಿಂದ **ವಿಕಭಕ್ತಿಃ** ಎಂಬೀ ೧೭ನೇ ಶ್ಲೋಕದ ತಾತ್ಪರ್ಯವು ಉಕ್ತವಾಯಿತು) (೪) (**ಅನನ್ಯಭಕ್ತಿಃ** ಎಂದರೆ ಎಂತಹ ಭಕ್ತಿಯೆಂದರೆ—) ಬೇರೆ ದೇವತೆಗಳಲ್ಲಿಯೂ ವಿಶೇಷ ಭಕ್ತಿಯು ಹುಟ್ಟದೆ ಶ್ರೀಪರಮಾತ್ಮನಲ್ಲಿಯೇ ಇರುವ ಮುಖ್ಯ ಭಕ್ತಿಯು **ಅನನ್ಯಭಕ್ತಿ**ಯೆನಿಸುತ್ತದೆ ಶ್ರೀಪರಮಾತ್ಮನಿಂದ ಇತರರಾದ ಲಕ್ಷ್ಮೀ ಬ್ರಹ್ಮ ರುದ್ರ ಮೊದಲಾದ ದೇವತೆಗಳು ಶ್ರೀವಿಷ್ಣುವಿನ ಭಕ್ತರು ಎಂದು ತಿಳಿದುಕೊಂಡು ಅವರಲ್ಲಿ ತಾರತಮ್ಯಾನುಸಾರವಾಗಿ ಭಕ್ತಿಯನ್ನು ಮಾಡಬೇಕು ಏಕೆಂದರೆ ಆ ದೇವತೆಗಳೆಲ್ಲರೂ ಶ್ರೀಪರಮಾತ್ಮನ ಅಧೀನದಲ್ಲಿಯೇ ಇರುವವರು (ಅಂದರೆ-ಪರಮಾತ್ಮನು ಸರ್ವೋತ್ತಮನೆಂದು ತಿಳಿದು ಅವನಲ್ಲಿಯೇ ನಿರವಧಿಕ ಭಕ್ತಿಯನ್ನು ಮಾಡಬೇಕು) (೫) (ಶ್ರೀವಿಷ್ಣುವು ಸರ್ವೋತ್ತಮನು, ಇತರರಾದ ಬ್ರಹ್ಮರುದ್ರಾದಿಗಳು ಶ್ರೀಪರಮಾತ್ಮನ ಅಧೀನದಲ್ಲಿರುವವರು, ಎಂದು ತಿಳಿದು

ಭಕ್ತಿಮಾಡುವವರಿಗೆ ಫಲವೇನೆಂದರೆ—) ಶ್ರೀವಿಷ್ಣುವು ಸರ್ವೋತ್ತಮನು, ಬ್ರಹ್ಮಾದಿಗಳು ಪರಿವಾರಭೂತರೆಂದು ತಿಳಿದು ಸೇವಿಸುವವರು ಶ್ರೀಪರಮಾತ್ಮನ ವೈಕುಂಠಾದಿ ಲೋಕಗಳಿಗೆ ಹೋಗುತ್ತಾರೆ ಹೀಗೆ ಭಜಿಸದಿದ್ದರೆ ಬೇರೆ ಯಾವ ಪ್ರಕಾರದಿಂದಲೂ ವೈಕುಂಠಾದಿ ಲೋಕವನ್ನು ಹೊಂದಲಾರರು (ಇದರಿಂದ **ಜ್ಞಾನೀ ತ್ವಾತ್ಮೈವ ಮೇ ಮತಂ** ಎಂಬೀ ೧೪ನೇ ಶ್ಲೋಕವು ವ್ಯಾಖ್ಯಾತವಾಯಿತು) ॥ ೧ ॥

ಪೀ—ಭಗವಜ್ಜ್ಞಾನಿಗಳಿಗೇನೇ ಮೋಕ್ಷವು ಶ್ರೀಪರಮಾತ್ಮನ ಜ್ಞಾನವನ್ನು ಸಂಪಾದಿಸದೆ ಕೇವಲ ಕರ್ಮಾದಿಗಳನ್ನು ಮಾಡುವವರಿಗೆ ಮೋಕ್ಷವಾಗುವುದಿಲ್ಲವೆಂಬುವುದು ಹೇಗೆ? ಎಂದರೆ—

ತಾ ॥ (೧) ಪೂರ್ಣಂ ವಸ್ತು ಯತೋ ಹ್ಯೇಕೋ ವಾಸುದೇವೋ ನ ಚಾಪರಃ॥ (೨) ಏವಂ ವಿದ್ದುರ್ಲಭೋ ಲೋಕೇ ಯತ್ಸರ್ವೇ ವಿಶ್ರಯಾಜಿನಃ ॥ (೩) ವಿಷ್ಣುಂ ತತ್ಪರಮಂ (ಮ)ಜ್ಞಾತ್ವಾ ರಮಾಬ್ರಹ್ಮಹರಾದಿಕಾನ್ । ಯಜನ್ನಪಿ ತಮೋ ಘೋರಂ ನಿತ್ಯ-ದುಃಖಂ ಪ್ರಯಾತಿ ಹಿಂ ॥ (೪) ಅಜ್ಞಾನಾಂ ತು ಕುಲೇ ಜಾತೋ ಯಾವದ್ವಿಷ್ಣೋಃ ಸಮರ್ಚನಂ । ವಿಷ್ಣುತತ್ತ್ವಂ ನ ಜಾನೀಯಾತ್ತಾವತ್ಸೇವಾ ಪೃಥಕ್ಕೃತಾ ॥ (೫) ವಿದ್ಯಾದ್ಯೈಹಿಂಕಭೋಗಾಯ ಯದಿ ಬುಧ್ವಾ ಪುನರ್ನ ತು । ಪರಿವಾರತಾಮೃತೇ ಕುರ್ಯಾದನ್ಯದೇವಾರ್ಚನಂ ಕ ಚಿತ್ ॥ (೬) ಅಜಾನತಾ ಕೃತಂ ಕ್ಮಕ್ತಂ ನ ದೋಷಾಯ ಭವಿಷ್ಯತಿ । ಜನ್ಮಾದಿಪ್ರದಮೇವ ಸ್ಯಾದತ್ಯಾಗೇ ಪುನರೇವ ತು । ಕ್ಷಿಪ್ರಂ ಚ ಜ್ಞಾಪಯತ್ಯೇವ ಭಗವಾನ್ ಸ್ವಯಮೇವ ತು । ಯದಿ ಜನ್ಮಾಂತರೇ ಸ್ವೀಯೋ ನಿಮಿತ್ತೀಕೃತ್ಯ ಕಂಚನೇತ್ಯಾದಿ ಚ ॥ ೨ ॥

ಅ ॥ (೧) ಸರ್ವಗುಣಪರಿಪೂರ್ಣನಾದವನು ವಾಸುದೇವನೊಬ್ಬನೇ ಬೇರೆ ಯಾರೂ ಗುಣ ಪರಿಪೂರ್ಣರಾದವರು ಇಲ್ಲ. (ಶ್ರೀಪರಮಾತ್ಮನೇ ಸರ್ವಗುಣಪರಿಪೂರ್ಣನಂದುದರಿಂದ ಅವನಿಗೇನೇ ಮೋಕ್ಷವನ್ನು ಕೊಡತಕ್ಕ ಶಕ್ತಿಯು ಇತರರಿಗೆ ಅಂತಹ ಶಕ್ತಿಯು ಮುಖ್ಯವಾಗಿ ಇಲ್ಲ ಇದರಿಂದ **ವಾಸುದೇವಃ ಸರ್ವಂ** ಎಂಬೀ ೧೯ನೇ ಶ್ಲೋಕವು ವ್ಯಾಖ್ಯಾತವಾಯ್ತು) (೨) (ಶ್ರೀಪರಮಾತ್ಮನ ಜ್ಞಾನದಿಂದ ಮೋಕ್ಷವಾಗುವುದಾದರೆ – ಸರ್ವರಿಗೂ ಮೋಕ್ಷವಾಗಬೇಕಾಗುವುದು, ಎಂದರೆ—) ಶ್ರೀಪರಮಾತ್ಮನು ಸರ್ವೋತ್ತಮನೆಂದು ತಿಳಿದ ಜ್ಞಾನಿಯು ಲೋಕದಲ್ಲಿ ಬಹಳ ದುರ್ಲಭನು (ಅಂದರೆ ಶ್ರೀಪರಮಾತ್ಮನ ಜ್ಞಾನದಿಂದ ಮೋಕ್ಷವಾಗುವುದಾದರೂ ಎಲ್ಲರಿಗೆ ಪರಮಾತ್ಮನು ಸರ್ವೋತ್ತಮನೆಂದು ಜ್ಞಾನವು ಇರುವುದಿಲ್ಲ ಆದಕಾರಣ ಸರ್ವರಿಗೆ ಮೋಕ್ಷವಾಗುವುದಿಲ್ಲ) (ಇದರಿಂದ **ಸ ಮಹಾತ್ಮಾ** ಎಂಬುವುದು ವ್ಯಾಖ್ಯಾತವಾಯ್ತು) (ಲೋಕದಲ್ಲಿ ಭಗವಜ್ಜ್ಞಾನಿಗಳು ಬಹುಮಂದಿ ಇದ್ದ ಪ್ರಯುಕ್ತ ದೌರ್ಲಭ್ಯವು ಹೇಗೆಂದರೆ-) ಎಲ್ಲರೂ ವಿಪರೀತವಾಗಿಯೇ ಪೂಜಿಸುವರು (ಶ್ರೀಪರಮಾತ್ಮನನ್ನು ಸರ್ವೋತ್ತಮನೆಂದು ತಿಳಿದುಕೊಳ್ಳದೆ ವಿಪರೀತವಾಗಿ ತಿಳಿದುಕೊಂಡು, ತನಗೆ ಅಯೋಗ್ಯ ದೇವಾದಿಗಳ ಪದವನ್ನು ಇಚ್ಛಿಸಿಯೂ ಯಜ್ಞ ಮಾಡುವವರು) (ಇದರಿಂದ **ಕಾಮೈಸ್ತೈಸ್ತೈಃ** ಇತ್ಯಾದಿಗಳ ತಾತ್ಪರ್ಯವು ಉಕ್ತವಾಯ್ತು.) (೩) (ಆ ರೀತಿಯಾಗಿ ಯಜ್ಞ ಮಾಡುವವರಿಗೆ ಫಲವು ಯಾವುದೆಂದರೆ-) ಶ್ರೀಪರಮಾತ್ಮನನ್ನು ಲಕ್ಷ್ಮೀಬ್ರಹ್ಮಾದಿಗಳಿಗಿಂತ ಉತ್ತಮನೆನ್ನಾಗಿ ತಿಳಿಯದೆ ವಿಪರೀತವಾಗಿ ತಿಳಿದು ಲಕ್ಷ್ಮೀ ಬ್ರಹ್ಮ ರುದ್ರ ಮೊದಲಾದವರನ್ನು ಸರ್ವೋತ್ತಮರೆಂದು ತಿಳಿದು ಯಾಗ ಮಾಡುವವರೂ ಕೂಡ ನಿತ್ಯದುಃಖಾತ್ಮಕವಾದ ಭಯಂಕರವಾದ ಅಂಧಂತಮಸ್ಸನ್ನು ಹೊಂದುತ್ತಾರೆ (೪) (ಉಪದೇಶಕರಿಲ್ಲದೆ ಯಥಾರ್ಥ ಜ್ಞಾನವಿಲ್ಲ. ವಿಪರೀತಜ್ಞಾನವೂ ಇಲ್ಲ. ಅಂತಹವನಿಗೆ ಬೇರೆ ದೇವತೆಗಳನ್ನು ಪೂಜಿಸಿದ್ರಿಂದ ಏನು ಫಲವಾಗು

ವುದು? ಎಂದರೆ—) ಅಜ್ಞರ ಕುಲದಲ್ಲಿ ಹುಟ್ಟಿದವನು ಗುರುಗಳು ಸಿಗದೆ ತತ್ವಜ್ಞಾನವಿಲ್ಲದವನಾಗಿ ಶ್ರೀಪರಮಾತ್ಮನಿಗೆ ಪೂಜೆಯನ್ನು ಮಾಡಬೇಕೆಂದೂ ಶ್ರೀಪರಮಾತ್ಮನ ತತ್ವವನ್ನು ತಿಳಿಯಬೇಕೆಂದೂ ಆತನ ಜ್ಞಾನವು ಸಿಗುವ ಪರ್ಯಂತ ಬ್ರಹ್ಮಾದಿಗಳು ಪರಿವಾರಭೂತರು ಎಂದು ತಿಳಿಯದೆ ಮಾಡಿದ ಅವರ ಸೇವೆಯೂ, ಆ ದೇವತೆಗಳನ್ನು ದ್ವೇಶಿಸಿ ಮಾಡಿದ ಯಜ್ಞವೂ, ವಿದ್ಯಾ ಮೊದಲಾದುದೂ, ಆ ದೇವತೆಗಳ ಜ್ಞಾನ ಸ್ತೋತ್ರ ಮೊದಲಾದುದೂ ಐಹಿಕಭೋಗವನ್ನು ಕೊಂದಿಸಿಕೊಡಲಿಕ್ಕೇನೇ ಸಮರ್ಥವಾಗುತ್ತದೆ ಶ್ರೀವಿಷ್ಣುವು ಸರ್ವೋತ್ತಮನೆಂದು ತಿಳಿದುಕೊಳ್ಳದೆ ಬೇರೆ ದೇವತೆಗಳ ಉದ್ದೇಶದಿಂದ ಯಜ್ಞವನ್ನು ಮಾಡಿ ಪುನಃ ವಿಷ್ಣುವು ಸರ್ವೋತ್ತಮನೆಂದು ತಿಳಿದುಕೊಂಡು ಮೇಲೆ ತಿರುಗಿ ಬ್ರಹ್ಮಾದಿಗಳನ್ನು ಪರಿವಾರ ಭೂತರೆಂದು ತಿಳಿಯದೆ ಅಂದರೆ ಸ್ವತಂತ್ರರೆಂದು ತಿಳಿದು ಆ ಬ್ರಹ್ಮಾದಿಗಳ ಪೂಜೆಯನ್ನು ಸರ್ವಥಾ ಎಲ್ಲಿಯೂ ಮಾಡುವುದೇ ಇಲ್ಲ ಅಂತೂ ಪೂರ್ವದಲ್ಲಿ ಶ್ರೀಹರಿಯು ಸರ್ವೋತ್ತಮನೆಂದು ತಿಳಿಯದೆ ಮಾಡಿದ ಕರ್ಮವೂ ವಿದ್ಯಾದಿಗಳೂ ಇವೆಲ್ಲವೂ ಐಹಿಕಭೋಗಗಳನ್ನು ಕೊಡಲಿಕ್ಕೇನೇ ಸಮರ್ಥವಾಗುತ್ತವೆ ಮೊದಲು ಪರಮಾತ್ಮನು ಸರ್ವೋತ್ತಮನೆಂದು ತಿಳಿಯದೆ ಮಾಡಿದ ಬ್ರಹ್ಮಾದಿ ದೇವತೆಗಳ ಪೂಜೆಯು ಪುನಃ ಶ್ರೀಪರಮಾತ್ಮನು ಸರ್ವೋತ್ತಮನೆಂದು ತಿಳಿದುಬಿಟ್ಟರೆ ಆದರಿಂದ ದೋಷ (ಪಾಪ)ವು ಬರುವುದಿಲ್ಲ ಪುನಃ ಸತ್ಕುಲದಲ್ಲಿ ಜನ್ಮಾದಿಗಳನ್ನು ಹೊಂದಿಸಿಕೊಡಲಿಕ್ಕೇನೇ ಕಾರಣವಾಗುತ್ತದೆ (ಸ್ವತಃ ಭಗವದ್ಭಕ್ತನೇ ಆಗಿದ್ದವನು ಶ್ರೀಭಗವತ್ತತ್ವವನ್ನು ತಿಳಿದರೂ ಕಾರಣವಿಶೇಷದಿಂದ ಹಿಂದಿನ ಮಾರ್ಗವನ್ನು ಬಿಡದಿದ್ದರೆ ಅಂತಹನಿಗೆ ಏನು ಫಲವಾಗುವುದು ಎಂದರೆ—) ಶ್ರೀವಿಷ್ಣುವಿನ ತತ್ವವನ್ನರಿತವನು ವಿಶೇಷವಾಗಿ ಸ್ವಾಭಾವಿಕವಾಗಿಯೇ ಭಗವದ್ಭಕ್ತನಾಗಿದ್ದರೆ ಆದರಿಂದಲೇ ಪೂರ್ವಮಾರ್ಗವನ್ನು ಕಾರಣಾಂತರದಿಂದ ಬಿಡದಿದ್ದರೆ ಶ್ರೀಪರಮಾತ್ಮನು ತಾನೇ ಒಬ್ಬ ಗುರುವನ್ನು ನಿಮಿತ್ತೀಕರಿಸಿಕೊಂಡು ಅದೇ ಜನ್ಮದಲ್ಲಿ ಶೀಘ್ರವಾಗಿ ಅಥವಾ ಜನ್ಮಾಂತರದಲ್ಲಿ ಹಿಂದಿನ ಮಾರ್ಗವನ್ನು ಬಿಡುವುದಕ್ಕಾಗಿ ಅದು ಹೇಯವೆಂದೂ ಶ್ರೀಭಗವನ್ಮಾರ್ಗವು ಅವಶ್ಯವಾಗಿ ಸ್ವೀಕರಿಸಬೇಕೆಂದೂ ತಿಳಿಸುತ್ತಾನೆ, ಇತ್ಯಾದಿ ಪ್ರಮೇಯವು ಹೇಳಲ್ಪಟ್ಟಿದೆ (ಇದರಿಂದ **ಲಭತೇ ಚ** ಇತ್ಯಾದಿಗಳ ತಾತ್ಪರ್ಯವು ಉಕ್ತವಾಯ್ತು) ॥ ೨ ॥

ಪೀ—ಶ್ರೀಪರಮಾತ್ಮನು ರಸಾದಿಗಳಿಗೆ ಕಾರಣನಾದುದರಿಂದ ಆತನಿಗೆ **ರಸ** ಮೊದಲಾದ ನಾಮವು. ರಸಕ್ಕೂ ಪರಮಾತ್ಮನಿಗೂ ಅಭೇದದಿಂದ ಅಲ್ಲ, ಎಂದು ಹಿಂದೆ ಹೇಳಿರುವರು ಏವಂಚ **ಮಯಿ ಸರ್ವಮಿದಂ** ಎಂಬುವ ಉಪಕ್ರಮ ವಾಕ್ಯ, **ಮತ್ತ ಏವ** ಎಂಬುವ ಉಪಸಂಹಾರ ವಾಕ್ಯಗಳಿಂದಲೂ ಎಲ್ಲವೂ ಶ್ರೀಪರಮಾತ್ಮನ ಅಧೀನವೇ ಎಂದು ತಿಳಿಯುತ್ತದೆ ಎನ್ನುತ್ತಾರೆ—

ತಾ ॥ (೧) ಮತ್ತ ಏವೇತಿ ತಾನ್ವಿಧ್ವೇತ್ಯುಪಸಂಹಾರಾಚ್ಚ । ತತ್ತತ್ಕಾರಣತ್ವಾತ್ತತ್ತನ್ನಾಮೇತ್ಯವಸೀಯತೇ ॥ (೨) ಮಯಿ ಸರ್ವಮಿದಂ ಪ್ರೋತಮಿತಿ ಭೇದೇನೈವೋಪಕ್ರಮಾಚ್ಚ ॥ (೩) ಆಪ್ನೋತಿ ವಿಷ್ಣುಮಿತ್ಯೇವಾತ್ಮಶಬ್ದೋ ಜ್ಞಾನಿನಿ । ಯಚ್ಚಾಪ್ನೋತಿ ಯದಾದತ್ತ ಇತ್ಯಾದೇಃ ॥ (೪) ಆಸ್ಥಿತಃ ಸ ಹಿ ಮಾಂ ಪ್ರಪದ್ಯತೇ ಇತ್ಯಾದಿವಾಕ್ಯಶೇಷಾಚ್ಚ ॥ (೫) ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಮಾಂ ಭವತಿ । ತತೋ ಮಾಂ ಪ್ರಪದ್ಯತೇ । ವಾಸುದೇವಃ ಸರ್ವಮಿತಿ ಪೂರ್ಣಮಿತಿ ಜಾನನ್ಮಾಂ ಪದ್ಯಂತೇಽನ್ಯದೇವತಾ ಇತಿ(ಇತ್ಯಾದಿ)ವಾಕ್ಯಶೇಷೇ ಭೇದದರ್ಶನಾಚ್ಚ । ದೇವಾನ್ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪೀತಿ ಚ ॥ (೬) ಜ್ಞಾತ್ವಾ ಪರತ್ವಂ ವಿಷ್ಣೋಸ್ತು ಪೃಥಗ್ದೇವಾನ್ ಯಜನ್ನರಃ । ಯಾತಿ ದೇವಾಂಸ್ತದಜ್ಞಾತ್ವಾ ತಮು ಏವ ಪ್ರಪದ್ಯತೇ ॥ (೭) ತಥಾ

ಽಪಿ ಯಾವದನ್ಯೈಸ್ತು ಸಾಮ್ಯಂ ಹೀನತ್ವಮೇಕತಾಂ । ನ ನಿಶ್ಚಿನ್ವಂತಿ ಜಾಯಂತೇ ಸಂಸಾರೇ ತೇ ಪುನಃಪುನರಿತಿ ಚ ॥ ೩ ॥ ॥ ೨೩ ॥

ಅ ॥ (೧) ಮತ್ತ ಏವ **ತಾನ್** ಎಂಬೀ ಉಪಸಂಹಾರ ವಾಕ್ಯದಿಂದಲೂ ರಸ ಗಂಧ ಮೊದಲಾದ **ವುಗಳಿಗೆ** ಕಾರಣನಾಗಿರುವುದರಿಂದ ರಸ ಗಂಧ ಮೊದಲಾದ ಆವಾವ ನಾಮಧೇಯವುಳ್ಳವನೆಂದು ನಿಶ್ಚಿತ ವಾಗುತ್ತದೆ. (೨) ನನ್ನಲ್ಲಿ ಈ ಎಲ್ಲಾ ಜಗತ್ತೂ ಆಶ್ರಿತವಾಗಿದೆ, ಎಂದು ಭೇದವೇ ಆದಿಭಾಗದಲ್ಲಿ ಉಕ್ತ ವಾಗಿದೆ. (೩) (**ಜ್ಞಾನೀ ತ್ವಾತ್ಮೈವ ಮೇ ಮತಂ** ಎಂಬುವುದಕ್ಕೆ ಶ್ರೀಪರಮಾತ್ಮನನ್ನು ತಿಳಿದವನು ಪರಮಾತ್ಮನನ್ನು ಹೊಂದುತ್ತಾನೆಂದು ವ್ಯಾಖ್ಯಾನಮಾಡಿರುವರು ಯುಕ್ತಿಯಿಂದಲೂ ಹಿಂದೆ ಹೇಳಿದ ಅರ್ಥವೇ ಯುಕ್ತವು, ಅಭೇದಾರ್ಥಕವಲ್ಲವೆಂದು ಸಾಧಿಸುತ್ತಾರೆ–) ಶ್ರೀವಿಷ್ಣುವನ್ನು ಜ್ಞಾನಿಯು ಹೊಂದು **ವುದರಿಂದ** ಜ್ಞಾನಿಯು ಆತ್ಮನೆಂದು ಅನ್ನಿಸಿಕೊಳ್ಳುತ್ತಾನೆ (೪)(ಅದು ಹೇಗೆಂದರೆ–) ಯಾವ ಕಾರಣದಿಂದ ಶ್ರೀಪರಮಾತ್ಮನು ಎಲ್ಲವನ್ನೂ ಹೊಂದುತ್ತಾನೋ, ತೆಗೆದುಕೊಳ್ಳುತ್ತಾನೋ, ವಿಷಯಗಳನ್ನು ಭೋಗಿ ಸುತ್ತಾನೋ, ಇತ್ಯಾದಿ ಭಾರತ ಪ್ರಮಾಣದಿಂದಲೂ ಶ್ರೀಪರಮಾತ್ಮನಲ್ಲಿಯೇ ಭಕ್ತಿಯನ್ನು ಮಾಡಿರುವ ಆ ಜ್ಞಾನಿಯೇ ನನ್ನನ್ನು ಶರಣು ಹೊಂದುತ್ತಾನೆ, ಇದು ಮೊದಲಾದ ವಾಕ್ಯ ಶೇಷದಿಂದಲೂ ಆತ್ಮಾ ಎಂಬುವುದಕೆ ಪರಮಾತ್ಮನನ್ನು ಹೊಂದಿದವನೆಂದು ಅರ್ಥವನ್ನೇ ಇಟ್ಟುಕೊಳ್ಳಬೇಕೆಂದು ಸಿದ್ಧವಾಗುತ್ತದೆ (ಏವಂಚ ಮೋಕ್ಷಪ್ರಾಪ್ತಿಗಾಗಿ ಶ್ರೀಪರಮಾತ್ಮನನ್ನು ಧ್ಯಾನಿಸುವ ಜ್ಞಾನಿಗೆ ಮೋಕ್ಷವು ಸಿಗುತ್ತದೆಂದು ಹೇಳಿದ ಕಾರಣ **ಜ್ಞಾನೀ ತ್ವಾತ್ಮೈವ ಮೇಮತಂ** ಎಂಬುವಲ್ಲಿಯೂ ನನ್ನನ್ನು ಹೊಂದುತ್ತಾನೆಂದೇ ಅರ್ಥಮಾಡಬೇಕು ಸ್ವರೂಪನೆಂಬುವ ಅರ್ಥವಲ್ಲ. (೫) (ಜ್ಞಾನವು ಹುಟ್ಟಿದೊಡನೆ ಮೋಕ್ಷವು ನಿಶ್ಚಿತ ವಾಗಿರುವುದರಿಂದ **ಬಹೂನಾಂ ಜನ್ಮನಾಂ** ಎಂದು ಹೇಳಿದ್ದು ಹೇಗೆ ಎಂದರೆ—) ಬಹು ಜನ್ಮಗಳ ಅಂತ್ಯ ದಲ್ಲಿ ಜ್ಞಾನವುಳ್ಳವನಾಗುತ್ತಾನೆ ಆಮೇಲೆ ನನ್ನನ್ನು ಹೊಂದುತ್ತಾನೆ ವಾಸುದೇವನು ಸರ್ವಮಿತಿ= ಸರ್ವಗುಣ ಪರಿಪೂರ್ಣನೆಂದು ತಿಳಿದವನು. (ಇಲ್ಲಿ ಶ್ರೀಪರಮಾತ್ಮನಿಗೆ ಸರ್ವಗುಣಪರಿಪೂರ್ಣತ್ವವೇ ಹೇಳಲ್ಪಡುತ್ತದೆ. ಸರ್ವೈಕ್ಯವಲ್ಲ) (ಈ ವಾಕ್ಯವು ಅಭೇದವನ್ನು ಹೇಳುತ್ತದೆಂದೇ ಏಕೆ ಆಗಬಾರದೆಂದರೆ–) ವಿಷ್ಣುವಿಗಿಂತ ಇತರರಾದ ಬ್ರಹ್ಮಾದಿ ದೇವತೆಗಳನ್ನು ಹೊಂದುತ್ತಾರೆಂದು ವಾಕ್ಯಶೇಷದಲ್ಲಿ ಭೇದವೇ ಸ್ಪಷ್ಟವಾಗಿ ಕಂಡದೆ. ದೇವತೆಗಳನ್ನು ಪೂಜಿಸುವವರು ದೇವತೆಗಳನ್ನು ಹೊಂದುತ್ತಾರೆ ನನ್ನ ಭಕ್ತರು ನನ್ನನ್ನು ಹೊಂದುತ್ತಾರೆ, ಎಂದೂ (ಭೇದವನ್ನೇ ಸ್ಪಷ್ಟವಾಗಿ ಹೇಳಿರುತ್ತಾರೆ) (೬) ಶ್ರೀವಿಷ್ಣುವು ಸರ್ವೋತ್ತಮನೆಂದು ತಿಳಿದುಕೊಂಡು ದೇವತೆಗಳನ್ನು ಪ್ರತ್ಯೇಕ ಪೂಜಿಸುವವರು ದೇವತೆಗಳನ್ನು ಹೊಂದು ತ್ತಾರೆ ಶ್ರೀವಿಷ್ಣುವು ಸರ್ವೋತ್ತಮನೆಂದು ತಿಳಿಯದೆ ಬೇರ ದೇವತೆಗಳೇ ಸರ್ವೋತ್ತಮರೆಂದು ತಿಳಿದು ಪೂಜಿಸುವವರು ಅಂಧಂತಮಸ್ಸನ್ನು ಹೊಂದುತ್ತಾರೆ (೭) ಓಗೆ ವಿಪರೀತ ಜ್ಞಾನವಿಲ್ಲದೆ ಶ್ರೀಪರಮಾತ್ಮ ನಿಗೆ ಬ್ರಹ್ಮಾದಿಗಳಿಂದ ಸಾಮ್ಯವನ್ನೂ, ನೀಚತ್ವವನ್ನೂ, ಐಕ್ಯವನ್ನಾಗಲೀ ನಿಶ್ಚಯಿಸಿಕೊಳ್ಳುವುದಿಲ್ಲವೋ, ಅವರು ಪುನಃಪುನಃ ಸಂಸಾರದಲ್ಲಿ ಹುಟ್ಟುತ್ತಾರೆ (ಆ ಮೇಲೆ ಅಸುರಯೋನಿಯನ್ನು ಹೊಂದಿ ಮೂಢ ರಾಗಿ ಕೊನೆಗೆ ಅಂಧಂತಮಸ್ಸನ್ನು ಹೊಂದುತ್ತಾರೆ) ॥ ೨೩ ॥

ಹೀ—ಬ್ರಹ್ಮಾದಿಗಳನ್ನು ಪೂಜಿಸುವವರಿಗೆ ನಾಶವುಳ್ಳ ಸ್ವರ್ಗಾದಿರೂಪ ಫಲವು, ಪರಮಾತ್ಮನನ್ನು ಪೂಜಿಸುವವರಿಗೆ ನಾಶವಿಲ್ಲದ ಮೋಕ್ಷರೂಪ ಫಲವೆಂಬುದು ಹೇಗೆ? ಬ್ರಹ್ಮಾದಿಗಳಿಗಿಂತ ಶ್ರೀಪರಮಾತ್ಮನಿಗೆ ವಿಶೇಷವೇನು? ಎಂದರೆ—

ಗೀ ॥ ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಮಬುದ್ಧಯಃ ।
ಪರಂ ಭಾವಮಜಾನಂತೋ ಮಮಾವ್ಯಯಮನುತ್ತಮಂ ॥ ೨೪ ॥

ಅ ॥ ಅಬುದ್ಧಯಃ = ಅಜ್ಞಾನಿಗಳು, ಪರಂ = ಬ್ರಹ್ಮಾದಿಗಳಿಗಿಂತ ವಿಲಕ್ಷಣವೂ, ಅನುತ್ತಮಂ = ಅತ್ಯುತ್ಕೃಷ್ಟವೂ, ಅವ್ಯಯಂ = ನಾಲ್ಕುವಿಧನಾಶ ಇಲ್ಲದಿರುವುದೂ, ಆದ, ಮಮ = ನನ್ನ, ಭಾವಂ = ಯಥಾರ್ಥ ಸ್ವರೂಪವನ್ನು, ಅಜಾನಂತಃ = ತಿಳಿಯದವರಾಗಿ ಅವ್ಯಕ್ತಂ = ಜಡಪ್ರಕೃತಿ ಕಾರ್ಯಗಳಾದ ದೇಹಾದಿಗಳಲ್ಲದಿರುವ, ಮಾಂ = ನನ್ನನ್ನು ವ್ಯಕ್ತಿಮಾಪನ್ನಂ = ಪ್ರಾಕೃತ ದೇಹಾದಿಗಳನ್ನು ಹೊಂದಿದವನನ್ನಾಗಿ, ಮನ್ಯಂತೇ = ತಿಳಿಯುತ್ತಾರೆ (ಏವಂಚ ಬ್ರಹ್ಮರುದ್ರಾದಿ ದೇವತೆಗಳು ಪ್ರಾಕೃತ ದೇಹಾದಿಗಳುಳ್ಳವರು ಶ್ರೀಪರಮಾತ್ಮನು ಪ್ರಾಕೃತ ಶರೀರಾದಿಗಳು ಇಲ್ಲದವನು ಅಪ್ರಾಕೃತ ಚಿದಾನಂದಾತ್ಮಕ ಶರೀರವುಳ್ಳವನು ಹೀಗೆ ಶ್ರೀಪರಮಾತ್ಮನಿಗೆ ಬ್ರಹ್ಮಾದಿಗಳಿಗಿಂತ ವಿಶೇಷವು) ಅಥವಾ ನನ್ನ ಸ್ವರೂಪವನ್ನು ತಿಳಿಯದಿರುವ ಅಲ್ಪಜ್ಞಾನಿಗಳು ಅವ್ಯಕ್ತನಾದ ನನ್ನನ್ನು ಸರ್ವಾತ್ಮನಾ ವ್ಯಕ್ತನಾದ ಜೀವನನ್ನಾಗಿ ತಿಳಿಯುತ್ತಾರೆ (ಜೀವೈಕ್ಯವನ್ನು ತಿಳಿಯುತ್ತಾರೆ) ಹೀಗೆ ತಿಳಿಯುವವರು ತಮೋಯೋಗ್ಯರು ॥ ೨೪ ॥

ಭಾ ॥ (೧) ಕೋ ವಿಶೇಷಸ್ತವಾನ್ಯೇಭ್ಯ ಇತ್ಯತ ಆಹ । ಅವ್ಯಕ್ತಮಿತಿ । ಕಾರ್ಯದೇಹಾದಿವರ್ಜಿತಂ ॥ (೨) ತದ್ಪ್ರಾನಿವ ಪ್ರತೀಯಸ ಇತ್ಯತ ಆಹ । ವ್ಯಕ್ತಿಮಾಪನ್ನಮಿತಿ । ಕಾರ್ಯದೇಹಾದ್ಯಾಪನ್ನಂ ॥ (೩) ತಚ್ಚೋಕ್ತಂ । (1) ಸದಸತಃ ಪರಂ । (2) ನ ತಸ್ಯ ಕಾರ್ಯಂ । (3) ಅಪಾಣಿಪಾದಃ । (4) ಆನಂದದೇಹಂ ಪುರುಷಂ ಮನ್ಯಂತೇ ಗೌಣದೈಹಿಕಮಿತ್ಯಾದೌ ॥ (೪) ಭಾವಂ ಯಾಥಾರ್ಥ್ಯಂ । ತಥಾಽಬ್ರವೀಚ್ಚ । ಯಾಥಾತಥ್ಯಮಜಾನಂತಃ ಪರಂ ತಸ್ಯ ವಿಮೋಹಿತಾ ಇತ್ಯಾದಿ ॥ ೨೪ ॥

ಅ ॥ (೧) ನಿನಗೆ ಬ್ರಹ್ಮಾದಿಗಳಿಗಿಂತ ವಿಶೇಷವು ಯಾವುದು? (ಬ್ರಹ್ಮಾದಿಗಳನ್ನು ಹೊಂದಿದವರಿಗೆ ನಾಶವುಳ್ಳ ಸ್ವರ್ಗಾದಿರೂಪವಾದ ಫಲವು ನಿನ್ನನ್ನು ಹೊಂದಿದವರಿಗೆ ನಾಶವಿಲ್ಲದ ಮೋಕ್ಷಾದಿರೂಪವಾದ ಫಲವು ಹೇಗೆ? ಎಂದರೆ) ಅವ್ಯಕ್ತಂ ಎಂಬುವುದರಿಂದ ಸಮಾಧಾನ ಹೇಳುತ್ತಾರೆ -) ಅವ್ಯಕ್ತಂ = ಪ್ರಕೃತಿಕಾರ್ಯ ದೇಹಾದಿಗಳು ಇಲ್ಲವನು (೨) ಪ್ರಾಕೃತ ಶರೀರವಿರುವವನಂತೆ ತೋರುತ್ತಿ ಎಂದರೆ ವ್ಯಕ್ತಿಮಾಪನ್ನಂ ಎಂದು ಹೇಳಿದ್ದಾರೆ ಪ್ರಕೃತಿಕಾರ್ಯಗಳಾದ ದೇಹಾದಿಗಳನ್ನು ಹೊಂದಿದವನು (೩) (ಈ ವಿಷಯದಲ್ಲಿ ಪ್ರಮಾಣಗಳನ್ನು ಹೇಳುತ್ತಾರೆ—) ಆ ಪ್ರಮೇಯವು ಹೇಳಲ್ಪಟ್ಟದೆ (1) ಶ್ರೀಪರಮಾತ್ಮನು ಕಾರ್ಯವಾದ ದೇಹಾದಿ, ಕಾರಣವಾದ ಪ್ರಕೃತಿ ಇವುಗಳಿಂದ ವಿಲಕ್ಷಣನು (2) ಶ್ರೀಪರಮಾತ್ಮನಿಗೆ ಪ್ರಾಕೃತ ಶರೀರವಿಲ್ಲ (3) ಪ್ರಾಕೃತ ಕೈಕಾಲುಗಳಿಲ್ಲದವನು (4) ಆನಂದಾತ್ಮಕ ಶರೀರವುಳ್ಳ ಪರಮಾತ್ಮನನ್ನು ಸತ್ವರಜಸ್ತಮೋಗುಣಾತ್ಮಕ ದೇಹವುಳ್ಳವನನ್ನಾಗಿ ತಿಳಿಯುತ್ತಾರೆ, ಇತ್ಯಾದಿಗಳಲ್ಲಿ ಹೇಳಿದ್ದಾರೆ (೪) ಭಾವಂ = ಯಾಥಾರ್ಥ್ಯವನ್ನು, ಹಾಗೆಯೇ ಹೇಳಿರುವನು ಆ ಶ್ರೀಪರಮಾತ್ಮನ ಉತ್ತಮವಾದ ಯಥಾರ್ಥಸ್ವರೂಪವನ್ನು ತಿಳಿಯದವರಾಗಿ ವಿಮೋಹಿತರಾಗಿರುತ್ತಾರೆ, ಇತ್ಯಾದಿ ವಿಷಯವು ನಿರೂಪಿಸಲ್ಪಟ್ಟದ ॥ ೨೪ ॥

ಗೀ ॥ ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ ।
ಮೂಢೋಽಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಂ ॥
॥ ೨೫ ॥

ಅ ॥ ಯೋಗಮಾಯಾಸಮಾವೃತಃ = ನನ್ನ ಸಾಮರ್ಥ್ಯರೂಪ ಉಪಾಯದಿಂದಲೂ ದುರ್ಗಾದೇವಿಯಿಂದಲೂ, ಸಮಾವೃತಃ = ಮರೆ ಮಾಡಲ್ಪಟ್ಟ, ಅಹಂ = ನಾನು, ಸರ್ವಸ್ಯ = ಎಲ್ಲಾ ಜನರಿಗೆ, ಪ್ರಕಾಶಃ =

ಜ್ಞಾನವಿಷಯನು, ನ = ಆಗುವುದಿಲ್ಲ. (ಈ ಕಾರಣದಿಂದ) ಮೂಢಃ = ನನ್ನಿಂದಲೇ ಮೋಹವನ್ನು ಹೊಂದಿದ, ಅಯಂ ಲೋಕಃ = ಈ ಜನರು, ಮಾಂ = ನನ್ನ ನ್ನು, ಅಜಂ = ಉತ್ಪತ್ತಿರಹಿತನನ್ನಾ ಗಿಯೂ, ಅವ್ಯಯಂ = ವಿನಾಶರಹಿತನನ್ನಾಗಿಯೂ, ನಾಭಿಜಾನಾತಿ = ತಿಳಿಯುವುದಿಲ್ಲ. ॥ ೨೫ ॥

ಭಾ ॥ (೧) ಅಜ್ಞಾನಂ ಚ ಮದಿಚ್ಛಯೇತ್ಯಾಹ । ನಾಹಮಿತಿ । ಯೋಗೇನ ಸಾಮರ್ಥ್ಯೋ-ಪಾಯೇನ ಮಾಯಯಾ ಚ ॥ (೨) ಮಯೈವ ಮೂಢೋ ನಾಭಿಜಾನಾತಿ । ತಥಾऽऽಹ ಪಾದ್ಮೇ । ಆತ್ಮನಃ ಪ್ರಕೃತಿಂ ಚೈವ ಲೋಕಚಿತ್ತಸ್ಯ ಬಂಧನಂ । ಸ್ವಸಾಮರ್ಥ್ಯೇನ ದೇವ್ಯಾ ಚ ಕುರುತೇ ಸ ಮಹೇಶ್ವರ ಇತಿ ॥ ೨೫ ॥

ಅ ॥ (೧) ನಾಹಂ ಎಂಬುವ ಶ್ಲೋಕದಿಂದ ನನ್ನ ಇಚ್ಛೆಯಿಂದಲೇ ನನ್ನ ವಿಷಯದಲ್ಲಿ ಅಜ್ಞಾನವೆನ್ನು ತ್ತಾರೆ—)ಯೋಗೇನ = ನನ್ನ ಸಾಮಾರ್ಥ್ಯರೂಪವಾದ ಉಪಾಯದಿಂದ. ಮಾಯಾರೂಪಳಾದ ದುರ್ಗಾ ದೇವಿಯಿಂದಲೂ (೨) ನನ್ನಿಂದಲೇ ಮೋಹ ಹೊಂದಿದವರಾಗಿ ತಿಳಿಯುವುದಿಲ್ಲ ಹಾಗೆಯೇ ಪಾದ್ಮ ದಲ್ಲಿದೆ ಆ ಶ್ರೀಪರಮಾತ್ಮನು ತನ್ನ ಸಾಮರ್ಥ್ಯದಿಂದಲೂ, ದುರ್ಗಾದೇವಿಯಿಂದಲೂ, ತನ್ನ ಅಧೀನ ವಾದ ಪ್ರಕೃತಿಯನ್ನು ಜನರ ಮನಸ್ಸಿಗೆ ಬಂಧಕವನ್ನಾಗಿ ಮಾಡುತ್ತಾನೆ, ಎಂದೂ ಇದೆ ॥ ೨೫ ॥

ತಾ ॥ ಅವ್ಯಕ್ತಃ ಪರಮಾತ್ಮಾऽಸೌ ವ್ಯಕ್ತೋ ಜೀವ ಉದಾಹೃತಃ । ಮನ್ಯತೇ ಯಸ್ತಯೋ-ರೈಕ್ಯಂ ಸತು ಯಾತ್ಯಧರಂ ತಮು ಇತಿ ಚ ॥ ೨೪,೨೫ ॥

ಅ ॥ ಪರಮಾತ್ಮನು ಅವ್ಯಕ್ತನೆನಿಸುತ್ತಾನೆ ಜೀವನು ವ್ಯಕ್ತನೆನಿಸುತ್ತಾನೆ ಜೀವಬ್ರಹ್ಮರಿಗೆ ಐಕ್ಯ ವನ್ನು ಯಾವನು ತಿಳಿಯುತ್ತಾನೋ, ಅವನು ಅಂಧಂತಮಸ್ಸನ್ನು ಹೊಂದುತ್ತಾನೆ ॥ ೨೪, ೨೫ ॥

ಗೀ ॥ ವೇದಾಹಂ ಸಮತೀತಾನಿ ವರ್ತಮಾನಾನಿ ಚಾರ್ಜುನ ।
ಭವಿಷ್ಯಾಣಿ ಚ ಭೂತಾನಿ ಮಾಂ ತು ವೇದ ನ ಕಶ್ಚನ ॥ ೨೬ ॥

ಅ ॥ ಅರ್ಜುನ = ಅರ್ಜುನನೇ, ಅಹಂ = ನಾನು, ಸಮತೀತಾನಿ = ಕಳೆದು ಹೋದ, ವರ್ತಮಾನಾ ನಿ ಚ = ಈಗ ಇರುವ, ಭವಿಷ್ಯಾಣಿ ಚ = ಇನ್ನು ಮುಂದೆ ಉಂಟಾಗುವ, ಭೂತಾನಿ ಚ = ಪ್ರಾಣಿಗಳನ್ನು, ವೇದ = (ಮಾಯಾನಿಮಿತ್ತ ಬಂಧವು, ನನಗೆ ಇಲ್ಲದಿರುವುದರಿಂದ) ತಿಳಿಯುತ್ತೇನೆ ಮಾಂ ತು = ನನ್ನ ನ್ನಾದರೂ, ಕಶ್ಚನ = ಯಾರೊಬ್ಬನೂ, ನ ವೇದ = (ಮಾಯಾನಿಮಿತ್ತ ಬಂಧವಿರುವುದರಿಂದ) ಯಥಾರ್ಥ ವಾಗಿ ತಿಳಿಯುವುದಿಲ್ಲ (ಬ್ರಹ್ಮರುದ್ರಾದಿಗಳೂ ಸಹ ಸಂಪೂರ್ಣ ತಿಳಿಯುವುದಿಲ್ಲ) ॥ ೨೬ ॥

ಭಾ ॥ ನ ಚ ಮಾಂ ಮಾಯಾ ಬಧ್ನಾತೀತ್ಯಾಹ । ವೇದೇತಿ । ನ ಕಶ್ಚನಾತಿಸಮರ್ಥೋऽಪಿ ಸ್ವಸಾಮರ್ಥ್ಯಾತ್ ॥ ೨೬ ॥

ಅ ॥ ವೇದ ಎಂಬುವ ಶ್ಲೋಕದಿಂದ ನನ್ನನ್ನು ಮಾಯೆಯು (ದುರ್ಗಾದೇವಿಯು) ಬಂಧಿಸುವುದಿಲ್ಲ ವೆನ್ನುತ್ತಾರೆ (ನನಗೆ ಮಾಯಾಕೃತವಾದ ಬಂಧವಿಲ್ಲ) ಅತಿಸಮರ್ಥರಾದ ಬ್ರಹ್ಮಾದಿಗಳೂ ಕೂಡ ನನ್ನ ಅನುಗ್ರಹವಿಲ್ಲದೆ ತಮ್ಮ ಸಾಮರ್ಥ್ಯದಿಂದ ಮಾತ್ರ ಸಂಪೂರ್ಣ ತಿಳಿಯುವುದಿಲ್ಲ. ॥ ೨೬ ॥

ತಾ ॥ ಯಥಾಽತ್ಮಾನಂ ಹರಿರ್ವೇತ್ತಿ ತಥಾಽನ್ಯೇ ನೈವ ತಂ ವಿದುಃ । ಜಾನಂತಿ ಕಿಂಚಿತ್ ಕ್ರಮಶೋ ರಮಾದ್ಯಾಸ್ತತ್ಪ್ರಸಾದತ ಇತಿ ಚ ॥ ೨೬ ॥

ಅ ॥ ಶ್ರೀಪರಮಾತ್ಮನು ಹೇಗೆ ತನ್ನನ್ನು ಚೆನ್ನಾಗಿ ತಿಳಿದುಕೊಳ್ಳುತ್ತಾನೋ, ಹಾಗೆ ಇತರರು ಶ್ರೀ ಪರಮಾತ್ಮನನ್ನು ಚೆನ್ನಾಗಿ ತಿಳಿಯುವುದಿಲ್ಲ ಲಕ್ಷ್ಮೀಬ್ರಹ್ಮಾದಿಗಳೂ ಕೂಡ ಶ್ರೀಪರಮಾತ್ಮನ ಅನುಗ್ರಹದಿಂದಲೇ ತಾರತಮ್ಯದಿಂದ ಕ್ರಮವಾಗಿ ಸ್ವಲ್ಪಸ್ವಲ್ಪ (ಅವರವರ ಯೋಗ್ಯತಾನುಸಾರ) ತಿಳಿಯುತ್ತಾರೆ ॥ ೨೬ ॥

ಪೀ — ಪೂರ್ವದಲ್ಲಿ ಮಾಯೆಯೂ ಶ್ರೀಪರಮಾತ್ಮನೂ ಜೀವಬ್ರಹ್ಮೈಕ್ಯ ವಿಷಯಕ ಮಿಥ್ಯಾಜ್ಞಾನಕ್ಕೆ ಮುಖ್ಯ ಕಾರಣರೆಂದು ಹೇಳಿದೆ. ಈಗ ಇಚ್ಛಾ ದ್ವೇಷಗಳಿಂದ ಹುಟ್ಟಿದ ಸುಖದುಃಖಾದಿ ವಿಷಯಕ ಮಿಥ್ಯಾಜ್ಞಾನವೂ ಕೂಡ ಅವಾಂತರ ಕಾರಣವೆನ್ನುತ್ತಾರೆ--

ಗೀ॥ ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಭಾರತ ।
ಸರ್ವಭೂತಾನಿ ಸಮ್ಮೋಹಂ ಸರ್ಗೇ ಯಾಂತಿ ಪರಂತಪ ॥ ೨೭ ॥

ಅ ॥ ಪರಂತಪ = ಶತ್ರುಗಳಿಗೆ ತಾಪವನ್ನು ಹುಟ್ಟಿಸುವ, ಭಾರತ = ಅರ್ಜುನನೇ, ಸರ್ವಭೂತಾನಿ = ಎಲ್ಲಾ ಪ್ರಾಣಿಗಳು ಇಚ್ಛಾದ್ವೇಷಸಮುತ್ಥೇನ = ಇಚ್ಛೆಯೂ ದ್ವೇಷವೂ ಇವುಗಳ ಅಭಿವೃದ್ಧಿಯಿಂದ ಹುಟ್ಟಿದ, ದ್ವಂದ್ವಮೋಹೇನ = ಸುಖದುಃಖ ಲಾಭಾಲಾಭಾದಿ ವಿಷಯಕ ಮಿಥ್ಯಾಜ್ಞಾನದಿಂದ ಅಥವಾ ಜೀವೇಶ್ವರಾದಿ ವಿಷಯಕವಾದ ಮಿಥ್ಯಾಜ್ಞಾನದಿಂದ, ಸರ್ಗೇ = ಸೃಷ್ಟಿಕಾಲವನ್ನಾರಂಭಿಸಿಕೊಂಡೇ, ಸಮ್ಮೋಹಂ = ಮಿಥ್ಯಾಜ್ಞಾನದಾರ್ಢ್ಯವನ್ನು, ಯಾಂತಿ = ಹೊಂದುತ್ತಾರೆ ॥ ೨೭ ॥

ಭಾ ॥ (೧) ದ್ವಂದ್ವಮೋಹೇನ ಸುಖದುಃಖಾದಿನಿಷಯಮೋಹೇನ । ಇಚ್ಛಾದ್ವೇಷಯೋಃ ಪ್ರವೃದ್ಧಯೋಃ ನ ಹಿ ಕಿಂಚಿಜ್ಜ್ಞಾತುಂ ಶಕ್ಯಂ ॥ (೨) ಕಾರಣಾಂತರಮೇತತ್ । ಸರ್ಗೇ ಸರ್ಗಕಾಲೇ ಆರಭ್ಯೈವ । ಶರೀರೇ ಹಿ ಸತೀಚ್ಛಾದಯಃ । ಪೂರ್ವಂ ತ್ವಜ್ಞಾನಮಾತ್ರಂ ॥ ೨೭ ॥

ಅ ॥ (೧) ದ್ವಂದ್ವಮೋಹೇನ = ಸುಖದುಃಖಾದಿ ವಿಷಯಕವಾದ ಮಿಥ್ಯಾಜ್ಞಾನದಿಂದ (ವಿಷಯೇಚ್ಛಾದ್ವೇಷಗಳು ಅಭಿವೃದ್ಧಗಳಾದರೆ ಯಾವುದೊಂದೂ) ತಿಳಿಯಲು ಶಕ್ಯವಾಗುವುದಿಲ್ಲ (ಅಂದರೆ ದುಃಖವು ಹೇಗೆ ಹೇಯವೋ, ಅದರಂತ ವೈಷಯಿಕ ಸುಖಾದಿಗಳಲ್ಲಿ ಹೇಯತ್ವಾದಿ ಜ್ಞಾನವು ಬರುವುದಿಲ್ಲ) (೨) (ಶ್ರೀಪರಮಾತ್ಮನೂ ಪರಮಾತ್ಮನ ಅಧೀನವಾದ ಮಾಯೆಯೂ ಮೋಹಕವೆಂದು ಹಿಂದೆ ಹೇಳಿರುತ್ತಾರೆ ಆದ ಕಾರಣ ಭಗವದ್ವಿಷಯಕವಾದ ಮಿಥ್ಯಾಜ್ಞಾನಕ್ಕೆ ಇಚ್ಛಾದ್ವೇಷಗಳಿಂದ ಹುಟ್ಟಿದ ದ್ವಂದ್ವಮೋಹವು ಕಾರಣಗಳೆಂದು ಹೇಳಿದ್ದು ಹೇಗೆ? ಎಂದರೆ—) ಭಗದ್ವಿಷಯಕವಾದ ಮಿಥ್ಯಾಜ್ಞಾನಕ್ಕೆ ಇಚ್ಛಾದ್ವೇಷಗಳಿಂದ ಹುಟ್ಟಿದ ದ್ವಂದ್ವಮೋಹವು ಅವಾಂತರಕಾರಣವೆಂದು ಹೇಳಲ್ಪಡುತ್ತದೆ (ಅದು ಹೇಗೆಂದರೆ) ಇದು ಸರ್ಗೇ = ಸೃಷ್ಟಿಕಾಲವನ್ನಾರಂಭಿಸಿಯೇ, ಜೀವರ ಭಗವದ್ವಿಷಯಕ ಮಿಥ್ಯಾಜ್ಞಾನಕ್ಕೆ ಕಾರಣವಾಗುತ್ತದೆ ಶರೀರವು ಹುಟ್ಟಿದ ಮೇಲೆ ಇಚ್ಛಾದಿಗಳು ಹುಟ್ಟುತ್ತವೆ ಶರೀರವು ಹುಟ್ಟುವುದಕ್ಕಿಂತ ಮೊದಲು ಅಜ್ಞಾನ ಮಾತ್ರವಿರುತ್ತದೆ ॥ ೨೭ ॥

ಹೀ—ನಾಹಂ ಪ್ರಕಾಶಃ ಎಂಬುದರಿಂದ ಕೆಲವರಿಗೆ ಬರತಕ್ಕ ಐಕ್ಯಜ್ಞಾನವೂ ನನ್ನ ಇಚ್ಛೆಯಿಂದಲೇ ಎಂದು ಹೇಳಿದ್ದಾರೆ ಅದಯುಕ್ತವು. **ಏಕಾತ್ಮಂ ನಾಮ ಯದಿದಂ ಬ್ರೂಯುಃ** ಇತ್ಯಾದಿಗಳಲ್ಲಿ ಇಚ್ಛಾದ್ವೇಷಾದಿಗಳೇ ಅದ್ವೈತಜ್ಞಾನಕ್ಕೆ ಕಾರಣಗಳೆಂದು ಹೇಳಿದ್ದಾರೆ ಎಂದರೆ **ಇಚ್ಛಾದ್ವೇಷಸಮುತ್ಥೇನ** ಎಂದು ಹೇಳಿದೆ ಆ ಶ್ಲೋಕದಲ್ಲಿದ್ದ ಮೋಹ ಸಮ್ಮೋಹ ಶಬ್ದಗಳಿಗೆ ಬೇರೆ ಬೇರೆ ಅರ್ಥಗಳನ್ನು ಹೇಳುತ್ತಾರೆ—

ತಾ ॥ (೧) ದ್ವಂದ್ವಮೋಹೋ ಮಿಥ್ಯಾಜ್ಞಾನಂ । ತಮಸ್ತು ಶಾರ್ವರಂ ವಿದ್ಯಾನ್ಮೋಹಶ್ಚೈವ ವಿಪರ್ಯಯ ಇತಿ (ಚ) ಭಾರತೇ ॥ (೨) ಜೀವೇಶ್ವರಾದಿಕಂ ದ್ವಂದ್ವಂ ತದ್ವಿಷಯೋ ಮೋಹೋ ದ್ವಂದ್ವಮೋಹಃ । ಸಮ್ಮೋಹಸ್ತದಾಗ್ರಹಃ । ತದಾಗ್ರಹೋ ಮಹಾಮೋಹಃ । ಕ್ರೋಧಸ್ತಾಮಿಸ್ರ (ತಾಮಿಸ್ರಃ ಕ್ರೋಧ) ಉಚ್ಯತ ಇತ್ಯುಕ್ತತ್ವಾತ್ । ಸರ್ಗೇ ಸರ್ಗಕಾಲ ಏವ । ಜೀವಧರ್ಮಾನೀಶ್ವರೇ ತು ಯೋಜೀವೇಷ್ವೈಶ್ವರಾನ ಪಿ । ವಿದ್ಯಾಜ್ಜೀವೇಶ್ವರೈಕ್ಯಂ ವಾದ್ವಂದ್ವಮೋಹೀ ಸ ಉಚ್ಯತ ಇತ್ಯಾಗ್ನೇಯೇ ॥ ೨೭ ॥

ಅ ॥ (೧) ದ್ವಂದ್ವಮೋಹಃ=ಮಿಥ್ಯಾಜ್ಞಾನವು (ಮೋಹ ಶಬ್ದಕ್ಕೆ ಮಿಥ್ಯಾಜ್ಞಾನವೆಂಬುವ ಅರ್ಥವು ಹೇಗೆಂದರೆ—) ರಾತ್ರಿಸಂಬಂಧಿಯಾದ ಕಗ್ಗತ್ತಲೆಯಂತೆ ಆವರಕವಾದ ಅಜ್ಞಾನವು ತಮಃ ಎನಿಸುತ್ತದೆ ಇದ್ದುದನ್ನು ಇದ್ದಹಾಗೆ ತಿಳಿದುಕೊಳ್ಳದೆ ವಿಪರೀತವಾಗಿ ತಿಳಿದುಕೊಳ್ಳುವುದು **ಮೋಹ**ವೆನಿಸುತ್ತದೆ **(೨) (ದ್ವಂದ್ವಮೋಹ** ಶಬ್ದಾರ್ಥವನ್ನು ಹೇಳುತ್ತಾರೆ—) ಜೀವೇಶ್ವರರು ಮತ್ತು ಅವರ ಧರ್ಮಗಳಾದ ಸರ್ವಜ್ಞತ್ವ ಅಲ್ಪಜ್ಞತ್ವ, ಸ್ವಾತಂತ್ರ್ಯ ಪಾರತಂತ್ರ್ಯ, ಸರ್ವಶಕ್ತಿ ಅಲ್ಪಶಕ್ತಿ ಮೊದಲಾದುವುಗಳು **ದ್ವಂದ್ವ**ಗಳು ಎನಿಸಿಕೊಳ್ಳುತ್ತವೆ ಅವುಗಳ ವಿಷಯಗಳಲ್ಲಿರತಕ್ಕ ಮಿಥ್ಯಾಜ್ಞಾನವು **ದ್ವಂದ್ವಮೋಹ**ವೆನಿಸುತ್ತದೆ (ಸಮ್ಮೋಹಶಬ್ದಾರ್ಥವನ್ನು ಹೇಳುತ್ತಾರೆ–) ಮಿಥ್ಯಾಜ್ಞಾನದ ದಾರ್ಢ್ಯವು **ಸಮ್ಮೋಹ**ವೆನಿಸುತ್ತದೆ ಮಿಥ್ಯಾಜ್ಞಾನದಾರ್ಢ್ಯವೇ **ಮಹಾಮೋಹ**ವೆನಿಸುತ್ತದ ಜೀವೈಕ್ಯವನ್ನು ನಿರಾಕರಿಸುವ ಯಥಾರ್ಥಜ್ಞಾನಿಗಳಲ್ಲಿ ಉಂಟಾಗತಕ್ಕ ಕ್ರೋಧವು **ತಾಮಿಸ್ರ**ವೆನಿಸುತ್ತದೆ ಎಂದು ಹೇಳಿದೆ (೩) ಸರ್ಗೇ ಸೃಷ್ಟಿಕಾಲವನ್ನಾರಂಭಿಸಿಯೇ (ದ್ವಂದ್ವಮೋಹವು) ಭಗವದ್ವಿಷಯಕ ಮಿಥ್ಯಾಜ್ಞಾನಕ್ಕೆ ಕಾರಣವು ಯಾವನು ಜೀವನ ಧರ್ಮಗಳನ್ನು ಶ್ರೀಪರಮಾತ್ಮನಲ್ಲಿಯೂ, ಜೀವರಲ್ಲಿ ಶ್ರೀಪರಮಾತ್ಮನ ಧರ್ಮಗಳನ್ನೂ ಜೀವೇಶ್ವರರಿಗೆ ಐಕ್ಯವನ್ನಾಗಲೀ ತಿಳಿಯುವನೋ, ಅವನು **ದ್ವಂದ್ವಮೋಹೀ** ಎನಿಸುತ್ತಾನೆ, ಎಂದು ಆಗ್ನೇಯಪುರಾಣದಲ್ಲಿದೆ ॥ ೨೭ ॥

ಹೀ—ಎಲ್ಲಾ ಜೀವರೂ ಅಜ್ಞಾನವನ್ನೇ ಹೊಂದಿರುವುದಾದರೆ ಮುಕ್ತಿಮಾರ್ಗವೇ ಇಲ್ಲವೆಂದಾಗ ಬೇಕಾಗುವುದು, ಎಂದರೆ ಕೆಲವರು ಅಜ್ಞಾನವಿಲ್ಲದವರೂ ಇರುತ್ತಾರೆನ್ನುತ್ತಾರೆ—

ಗೀ ॥ ಯೇಷಾಂ ತ್ವಂತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಂ ।
ತೇ ದ್ವಂದ್ವಮೋಹನಿರ್ಮುಕ್ತಾ ಭಜಂತೇ ಮಾಂ ದೃಢವ್ರತಾಃ ॥೨೮॥

ಅ ॥ ಯೇಷಾಂ=ಯಾವ, **ಪುಣ್ಯಕರ್ಮಣಾಂ**= ಸತ್ಕರ್ಮವನ್ನು ಮಾಡುವ **ಜನಾನಾಂ**=ಜನರ **ಪಾಪಂ**=ಪಾಪವು, **ಅಂತಗತಂ** ನಷ್ಟವಾಗಿದೆಯೋ, **ತೇ** ತು=ಅವರೇ, **ದ್ವಂದ್ವಮೋಹನಿರ್ಮುಕ್ತಾಃ**=ಹಿಂದೆ ಹೇಳಿದ ಮಿಥ್ಯಾಜ್ಞಾನರಹಿತರಾಗಿ, **ದೃಢವ್ರತಾಃ**= ಶ್ರೀಪರಮಾತ್ಮನನ್ನೇ ಸೇವಿಸಬೇಕೆಂಬುವ ದೃಢವಾದ ಸಂಕಲ್ಪವುಳ್ಳವರಾಗಿ, **ಮಾಂ**= ನನ್ನನ್ನು, **ಭಜಂತೇ**= ಸೇವಿಸುತ್ತಾರೆ ॥ ೨೮ ॥

ಭಾ ॥ ವಿಪರೀತಾಶ್ಚ ಕೇಚಿತ್ಸಂತೀತ್ಯಾಹ । ಯೇಷಾಮಿತಿ ॥ ೨೮ ॥

ಅ ॥ ಅಜ್ಞಾನವಿಲ್ಲದವರೂ (ಅಂದರೆ ಶ್ರೀಪರಮಾತ್ಮನನ್ನು ತಿಳಿಯತಕ್ಕವರೂ) ಕೆಲವರು ಇರುತ್ತಾರೆಂದು **ಯೇಷಾಂ** ಎಂಬುವ ಶ್ಲೋಕದಿಂದ ಹೇಳುತ್ತಾರೆ ॥ ೨೮ ॥

ಪೀ— ಶ್ರೀಪರಮಾತ್ಮನನ್ನು ಸೇವಿಸುವವರಿಗೆ ಫಲವು ಯಾವುದೆಂದರೆ—

ಗೀ ॥ ಜರಾಮರಣಮೋಕ್ಷಾಯ ಮಾಮಾಶ್ರಿತ್ಯ ಯತಂತಿ ಯೇ ।
ತೇ ಬ್ರಹ್ಮ ತದ್ವಿದುಃ ಕೃತ್ಸ್ನಮಧ್ಯಾತ್ಮಂ ಕರ್ಮ ಚಾಖಿಲಂ ॥ ೨೯ ॥

ಅ ॥ ಯೇ = ಯಾವ ಸತ್ಪ್ರಭಾವವುಳ್ಳ ಜನರು, ಜರಾಮರಣಮೋಕ್ಷಾಯ = ಮುಪ್ಪು ಸಾವುಗಳು ಇಲ್ಲದ ಮೋಕ್ಷವನ್ನು ಹೊಂದುವುದಕ್ಕಾಗಿ, ಸ್ವರ್ಗಾದಿಗಳ ಅಭಿಲಾಷೆಯು ನಿವೃತ್ತಿಯಾಗುವುದಕ್ಕಾಗಿಯೂ ಮಾಂ = ನನ್ನನ್ನು, ಆಶ್ರಿತ್ಯ = ಆಶ್ರಯಿಸಿಕೊಂಡು, ಯತಂತಿ = ಪ್ರಯತ್ನಿಸುತ್ತಾರೋ, (ಸೇವಿಸುತ್ತಾರೋ) ತೇ = ಅವರು, ತದ್ಬ್ರಹ್ಮ = ಆ ಪರಬ್ರಹ್ಮನನ್ನು ತಿಳಿಯುತ್ತಾರೆ ಕೃತ್ಸ್ನಂ = ಎಲ್ಲಾ, ಅಧ್ಯಾತ್ಮಂ = ಅಧ್ಯಾತ್ಮನನ್ನು, ತಿಳಿಯುತ್ತಾರೆ ಅಖಿಲಂ = ಎಲ್ಲಾ, ಕರ್ಮ ಚ = ಕರ್ಮವನ್ನು, ವಿದುಃ = ತಿಳಿದುಕೊಳ್ಳುತ್ತಾರೆ ಅಂದರೆ — ಬ್ರಹ್ಮ = ವ್ಯಾಪ್ತವಾದ ಆ ನನ್ನ ರೂಪವನ್ನು ಅವರು ತಿಳಿಯುತ್ತಾರೆ ಕೃತ್ಸ್ನಮಧ್ಯಾತ್ಮಂ = ಜೀವರಿಗೆ ಉಪಕಾರಕವಾದ ದೇಹ ಇಂದ್ರಿಯ ಅಂತಃಕರಣರೂಪ ವಸ್ತು, ಅಥವಾ ಜೀವರಾಶಿ ಇವುಗಳನ್ನು ತಿಳಿಯುತ್ತಾರೆ ಸೃಷ್ಟಿರೂಪ ಭಗವತ್ಕರ್ಮವನ್ನು ತಿಳಿಯುತ್ತಾರೆ ॥ ೨೯ ॥

ಗೀ ॥ ಸಾಧಿಭೂತಾಧಿದೈವಂ ಮಾಂ ಸಾಧಿಯಜ್ಞಂ ಚ ಯೇ ವಿದುಃ ।
ಪ್ರಯಾಣಕಾಲೇಽಪಿ ಚ ಮಾಂ ತೇ ವಿದುರ್ಯುಕ್ತಚೇತಸಃ ॥ ೩೦ ॥

ಅ ॥ ಯೇ = ಯಾರು, ಸಾಧಿಭೂತಾಧಿದೈವಂ — ಅಧಿಭೂತ ಅಧಿದೈವಗಳಿಂದ ಕೂಡಿದ, ಸಾಧಿಯಜ್ಞಂ ಚ = ಅಧಿಯಜ್ಞದಿಂದಕೂಡಿದ, ಮಾಂ = ನನ್ನನ್ನು, ವಿದುಃ = ತಿಳಿದುಕೊಳ್ಳುತ್ತಾರೋ, ಪ್ರಯಾಣಕಾಲೇ ಚ = ಮರಣಕಾಲದಲ್ಲಿಯೂ, ಮಾಂ = ನನ್ನನ್ನು, ವಿದುಃ = ತಿಳಿದುಕೊಳ್ಳುತ್ತಾರೋ, ತೇ = ಅವರು, ಯುಕ್ತಚೇತಸಃ = ಶ್ರೀಪರಮಾತ್ಮನಲ್ಲಿಯೇ ಮನಸ್ಸನ್ನು ಇಟ್ಟು, ಧ್ಯಾನಮಾಡುವವರು ಆಂದರೆ—(1) **ಸಾಧಿಭೂತಂ** ಎಂಬುವುದಕ್ಕೆ ಅಧಿಭೂತ ಎನಿಸಿಕೊಂಡ ದೇಹಸಹಿತರಾದ ಜೀವರಿಗೆ, ಉಪಕಾರಕವಾಗಿ ಇರುವ ಉತ್ಪತ್ತಿ, ವಿನಾಶಗಳುಳ್ಳ ಪೃಥಿವ್ಯಾದಿ ಸದಾರ್ಥಗಳಲ್ಲಿ ನಿಯಾಮಕವಾಗಿ ಇರತಕ್ಕ ರೂಪವಿಶೇಷದಿಂದ ಕೂಡಿರುವ ನನ್ನನ್ನು ಅಥವಾ ಪೃಥಿವೀ ಮೊದಲಾದ ಪಂಚಭೂತಗಳಿಗಿಂತ ಶ್ರೇಷ್ಠವಾಗಿಯವುದರಿಂದ ಅಧಿಭೂತ ಎನಿಸಿಕೊಂಡ ಸಮಸ್ತ ಜೀವರಾಶಿಯಲ್ಲಿ ನಿಯಾಮಕವಾಗಿರತಕ್ಕ ರೂಪವಿಶೇಷದಿಂದ ಕೂಡಿರುವ ನನ್ನನ್ನು (2) **ಸಾಧಿದೈವಂ** ಎಂಬುವುದಕ್ಕೆ **ಅಧಿದೈವ** ಎನಿಸಿಕೊಂಡ ಸಮಸ್ತ ಜೀವಾಧಿಪತಿಯಾದ ಚತುರ್ಮುಖ ಬ್ರಹ್ಮ, ಅಥವಾ ಸಂಕರ್ಷಣನಲ್ಲಿರುವ ರೂಪವಿಶೇಷದಿಂದ ಕೂಡಿರುವ ಅಥವಾ ಅಧಿದೈವ ಎನಿಸಿಕೊಂಡ ಲಕ್ಷ್ಮೀದೇವಿಯಿಂದ ಕೂಡಿರುವ ರೂಪವಿಶೇಷವನ್ನು, (3) **ಸಾಧಿಯಜ್ಞಂ** ಎಂಬುವುದಕ್ಕೆ **ಅಧಿಯಜ್ಞ** ಎನಿಸಿಕೊಂಡ ಸಮಸ್ತ ಪ್ರಾಣಿಗಳಲ್ಲಿರುವ ರೂಪವಿಶೇಷದಿಂದ ಕೂಡಿರುವ, ನನ್ನನ್ನು ತಿಳಿಯುತ್ತಾರೆ ಎಂಬೀ ಅಭಿಪ್ರಾಯವು ಅಧ್ಯಾ ೮, ಶ್ಲೋಕ ೩ ಳಗಳಿಂದ ಲಭಿಸುವುದು ॥ ೩೦ ॥

ಗೀ ॥ ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗ ಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಜ್ಞಾನವಿಜ್ಞಾನಯೋಗೋ ನಾಮ ಸಪ್ತಮೋಽಧ್ಯಾಯಃ ॥ ೭ ॥

ಅ ॥ ಹೀಗೆ ಶ್ರೀಮದ್ಭಗವದ್ಗೀತೆಯಲ್ಲಿ ಬ್ರಹ್ಮವಿದ್ಯೆಯಲ್ಲಿ ಯೋಗಶಾಸ್ತ್ರದಲ್ಲಿ ಶ್ರೀಕೃಷ್ಣಾರ್ಜುನರ ಸಂವಾದದಲ್ಲಿ ಜ್ಞಾನವಿಜ್ಞಾನಯೋಗವೆಂಬ ಏಳನೇ ಅಧ್ಯಾಯವು ಮುಗಿಯಿತು ॥ ೭ ॥

ಭಾ ॥ (೧) ಜರಾಮರಣಮೋಕ್ಷಾಯೇತ್ಯನ್ಯಕಾಮನಿವೃತ್ತ್ಯರ್ಥಂ ಮೋಕ್ಷೇ ಸಕ್ತಿಸ್ತುತ್ಯರ್ಥಂ ವಾ ನ ವಿಧಿಃ । (1) ಮುಮುಕ್ಷೋರಮುಮುಕ್ಷುಸ್ತು ವರೋ ಹ್ಯೇಕಾಂತಭಕ್ತಿಭಾಗಿತೀತರಸ್ತು ತೇನಾರ್ಥರದೀಯೇ । (2) ನಾತ್ಯಂತಿಕಮಿತಿ ಚ ॥ (೨) ದೇವಾನಾಂ ಗುಣಲಿಂಗಾನಾಮಾನುಸ್ರಾವಿಕಕರ್ಮಣಾಂ । ಸತ್ತ್ವ ಏವೈಕಮನಸೋ ವೃತ್ತಿಃ ಸ್ವಾಭಾವಿಕೀ ತು ಯಾ । ಅನಿಮಿತ್ತಾ ಭಗವತಿ ಭಕ್ತಿಃ ಸಿದ್ಧೇರ್ಗರೀಯಸೀ । ಜರಯತ್ಯಾಶು ಯಾ ಕೋಶಂ ನಿಗೀರ್ಣಮನಲೋ ಯಥೇತಿ ಭಾಗವತೇ ಲಕ್ಷಣಾಚ್ಚ ॥ (೩) ಆಹ ಚ । ಸರ್ವೇ ವೇದಾಸ್ತು ದೇವಾರ್ಥಾ ದೇವಾ ನಾರಾಯಣಾರ್ಥಕಾಃ ನಾರಾಯಣಸ್ತು ಮೋಕ್ಷಾರ್ಥೋ ಮೋಕ್ಷೋ ನಾನ್ಯಾರ್ಥ ಇಷ್ಯತೇ । ಏವಂ ಮಧ್ಯಮಭಕ್ತಾನಾಮೇಕಾಂತಾನಾಂ ನ ಕಸ್ಯಚಿತ್ । ಅರ್ಥೋ ನಾರಾಯಣೋ ದೇವಃ ಸರ್ವಮನ್ಯತ್ತದರ್ಥಕಮಿತಿ ಗೀತಾಕಲ್ಪೇ ॥ (೪) (1) ತ ಏವ ಚ ವಿದುಃ । (2) ಯಮೇವೈಷವೃಣುತ ಇತಿ ಶ್ರುತೇಃ ॥ ೭೯,೩೦ ॥

ಅ ॥ (೧) **ಜರಾಮರಣಮೋಕ್ಷಾಯ** ಎಂದು ಹೇಳಿದ್ದು ಮೋಕ್ಷದಿಂದ ಬೇರೆಯಾದ ಸ್ವರ್ಗಾದಿ ವಿಷಯಕ ಕಾಮುಗಳ ನಿವೃತ್ತಿಗಾಗಿಯೂ ಮೋಕ್ಷವಿಷಯದಲ್ಲಿ ಆಸಕ್ತಿಯು ಇತರ ವಿಷಯಾಸಕ್ತಿಯಿಂದ ಪ್ರಶಸ್ತವು ಎಂದು ಮೋಕ್ಷವನ್ನು ಸ್ತುತಿಸುವುದಕ್ಕಾಗಿಯೂ ಹೇಳಿದ್ದು ಸರ್ವಥಾ ವಿಧಿಯಲ್ಲ ಏಕೆಂದರೆ (1) **ಮೋಕ್ಷವನ್ನು** ಇಚ್ಛಿಸುವವನಿಗಿಂತ ಮೋಕ್ಷವನ್ನು ಇಚ್ಛಿಸದಿರುವ ಏಕಾಂತಭಕ್ತನು ಶ್ರೇಷ್ಠನು, ಎಂದು ನಾರದೀಯಪುರಾಣದಲ್ಲಿ ಮೋಕ್ಷವನ್ನು ಇಚ್ಛಿಸದಿರುವ ಏಕಾಂತಭಕ್ತನನ್ನು ಸ್ತುತಿಸಿರುವರು (2) ಮತ್ತು **ನಾತ್ಯಂತಿಕಂ ವಿಗಣಯಂತ್ಯಪಿ ತೇ ಪ್ರಸಾದಂ** ಏಕಾಂತಭಕ್ತರು ನಿನ್ನ ಮೋಕ್ಷರೂಪ ಪ್ರಸಾದವನ್ನು ಗಣನೆಮಾಡುವುದಿಲ್ಲವೆಂದೂ ಏಕಾಂತಭಕ್ತರನ್ನು ಸ್ತುತಿಸಿರುತ್ತದೆ (೨) ಸರ್ವಗುಣಭರಿತನಾದ ಶ್ರೀಪರಮಾತ್ಮನಲ್ಲಿಯೇ ಸಂಪೂರ್ಣ ಮನಸ್ಸನ್ನು ಇಟ್ಟಿರುವ ಅಂದರೆ ಶುದ್ಧ ಸಾತ್ವಿಕನಾದ ಚತುರ್ಮುಖನ, ಗಂಧರಸಾದಿಗಳ ಅನುಭವರೂಪ ಗುಣಗಳಿಂದ ಅನುಮೇಯಗಳೂ, ವಚನಾದಿಕ್ರಿಯೆಗಳಿಂದ ಅನುಮೇಯಗಳೂ, ವೇದಗಳಲ್ಲಿ ಹೇಳಿದ ಕರ್ಮಗಳನ್ನು ಮಾಡಲಿಕ್ಕೆ ಕಾರಣಗಳೂ ಆದ ಇಂದ್ರಿಯಗಳಿಗೆ ಪರಮಾತ್ಮನಲ್ಲಿ ಫಲೋದ್ದೇಶವಿಲ್ಲದೆ ಕೇವಲ ನಿರವಧಿಕ ಸ್ನೇಹರೂಪವಾದ ಸ್ವಭಾವದಿಂದಲೇ ಉಂಟಾಗುವ ಯಾವ ವ್ಯಾಪಾರವೋ, ಅದೇ ಭಕ್ತಿಯು. ಆ ಭಕ್ತಿಯು ಕಾಮಸಹಿತವಾದ ಭಕ್ತಿಯಿಂದುಂಟಾದ ಅಲ್ಪಾಧಿಕಾರಿಗಳಿಗೆ ಇರುವ ಮುಕ್ತಿಗಿಂತಲೂ ಶ್ರೇಷ್ಠವಾದುದು ಇಂತಹ ಭಕ್ತಿಯು ಮೋಕ್ಷಕಾಮನಾ ಇಲ್ಲದಿದ್ದರೂ ಲಿಂಗಶರೀರವನ್ನು ಸ್ವಭಾವದಿಂದಲೇ ಭುಕ್ತವಾದ ಅನ್ನವನ್ನು ಜಾಠರಾಗ್ನಿಯಂತೆ ಜೀರ್ಣೀಕರಿಸುತ್ತದೆ (೩) ಸಮಸ್ತವೇದಗಳು ದೇವತೆಗಳ ಜ್ಞಾನವನ್ನು ಹುಟ್ಟಿಸಲಿಕ್ಕೆ ಉಪಯುಕ್ತವಾದವುಗಳು ತಿಳಿಯಲ್ಪಟ್ಟ

ಇಂದ್ರಿಯಾದಿಗಳಿಗೆ ಪ್ರೇರಕರಾದ ದೇವತೆಗಳು ನಾರಾಯಣನ ಜ್ಞಾನಕ್ಕೆ ಉಪಯುಕ್ತರು ಮೋಕ್ಷವನ್ನು ಪಡೆಯುವುದಕ್ಕಾಗಿ ಶ್ರೀನಾರಾಯಣನ ಜ್ಞಾನವನ್ನು ಸಂಪಾದಿಸಬೇಕು ಮೋಕ್ಷವು ಬೇರೆ ಪ್ರಯೋಜನಕ್ಕಾಗಿ ಅಲ್ಲ ಹೀಗೆ ಮಧ್ಯಮಭಕ್ತರ ಮನೋವ್ಯಾಪಾರವು ಏಕಾಂತಭಕ್ತರಿಗೆ ಯಾವ ಫಲೋದ್ದೇಶದಿಂದಲೂ ಜ್ಞೇಯನಲ್ಲ ಶ್ರೀನಾರಾಯಣನೇ ಪರಮ ಪುರುಷಾರ್ಥನು ಬೇರೆ ಎಲ್ಲವೂ ನಾರಾಯಣನ ಜ್ಞಾನಕ್ಕಾಗಿಯೇ. ಹೀಗೆ ಗೀತಾಕಲ್ಪದಲ್ಲಿ ಹೇಳಿದೆ (೪) (1) ಆ ಏಕಾಂತಭಕ್ತರೇ ಶ್ರೀಪರಮಾತ್ಮನನ್ನು ಮುಖ್ಯವಾಗಿ ತಿಳಿದಿರುವರು (2) ಶ್ರೀಪರಮಾತ್ಮನು ಯಾರನ್ನು ಭಕ್ತರನ್ನಾಗಿ ಅಂಗೀಕರಿಸುತ್ತಾನೋ, ಅವನಿಂದಲೇ ಪರಮಾತ್ಮನು ಹೊಂದಲ್ಪಡುವನು (ತಿಳಿಯಲ್ಪಡತಕ್ಕವನು) ಎಂಬ ಶ್ರುತಿಯಿಂದ ॥ ೨೯, ೩೦ ॥

ಭಾ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ಭಾಷ್ಯೇ ಸಪ್ತಮೋಽಧ್ಯಾಯಃ ॥ ೭ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಭಗವದ್ಗೀತಾ ಭಾಷ್ಯದಲ್ಲಿ ಏಳನೇ ಅಧ್ಯಾಯವು ಮುಗಿಯಿತು ॥ ೭ ॥

ತಾ ॥ ತದ್ಬ್ರಹ್ಮೇತ್ಯುಕ್ತೇಽನ್ಯತ್ವಾಶಂಕಾಂ ನಿವಾರಯತಿ । ಸಾಧಿಭೂತಾಧಿದೈವ ಮಂ ಮಾಮಿತಿ ॥ ೨೮,೨೯,೩೦ ॥

ಅ ॥ ತದ್ಬ್ರಹ್ಮ ಎಂದು ಹೇಳಿದಾಗ ಉಂಟಾಗತಕ್ಕ **ಪರಮಾತ್ಮನಿಂದ** ಭಿನ್ನನೆಂಬುವ ಶಂಕೆಯನ್ನು **ಸಾಧಿಭೂತಾಧಿದೈವಂ** ಎಂಬುದರಿಂದ ನಿವಾರಣಮಾಡುತ್ತಾರೆ ॥ ೨೮, ೨೯, ೩೦ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾತಾತ್ಪರ್ಯನಿರ್ಣಯೇ ಸಪ್ತಮೋಽಧ್ಯಾಯಃ ॥ ೭ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಭಗವದ್ಗೀತಾತಾತ್ಪರ್ಯನಿರ್ಣಯದಲ್ಲಿ ಏಳನೇ ಅಧ್ಯಾಯವು ಮುಗಿಯಿತು ॥ ೭ ॥

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಎಂಟನೇ ಅಧ್ಯಾಯವು.

ಪೀ—(1) **ತೇ ಬ್ರಹ್ಮ ತದ್ವಿದುಃ** ಮತ್ತು **ಪ್ರಯಾಣಕಾಲೇಽಪಿ ಚ ಮಾಂ ವಿದುಃ** ಇವುಗಳ ಅರ್ಥವನ್ನು ಇಲ್ಲಿ ಪ್ರಧಾನವಾಗಿ ಹೇಳುತ್ತಾರೆ (2) ಆ ಪ್ರಸಂಗದಿಂದ ಅಂತ್ಯಕಾಲದ ಸ್ಮರಣಫಲವೂ, ಅದರ ಸಾಧನಪ್ರಕಾರವೂ, ಬ್ರಹ್ಮಪ್ರಾಪ್ತಿ ಮಾರ್ಗವೂ, ಇಲ್ಲಿ ಹೇಳಲ್ಪಡುತ್ತದೆ (3) ಹಾಗೆಯೇ **ಸಾಧಿಭೂತಾಧಿದೈವಂ** ಎಂಬುವುದರಿಂದ ಶ್ರೀಕೃಷ್ಣರೂಪ ಶ್ರೀಪರಮಾತ್ಮನ ಜ್ಞಾನದಿಂದ ಬ್ರಹ್ಮಜ್ಞಾನವು ಬೇರೆ ಎಂದು ತೋರುತ್ತದೆ **ವಾಸುದೇವಾತ್ಮಕಂ ಬ್ರಹ್ಮ** ಎಂಬುವಲ್ಲಿ ಶ್ರೀಕೃಷ್ಣನೇ ಬ್ರಹ್ಮನೆಂದು ತೋರುತ್ತದೆ. ಈ ಎರಡು ವಾಕ್ಯಗಳಿಂದ ಸಂಶಯ ಉಂಟಾಗಿ ಪ್ರಶ್ನಿಸುತ್ತಾನೆ—

ಗೀ ॥ ॥ ಅರ್ಜುನ ಉವಾಚ ॥

ಓಂ ॥ ಕಿಂ ತದ್ಬ್ರಹ್ಮ ಕಿಮಧ್ಯಾತ್ಮಂ ಕಿಂ ಕರ್ಮ ಪುರುಷೋತ್ತಮ ।
ಅಧಿಭೂತಂ ಚ ಕಿಂ ಪ್ರೋಕ್ತಮಧಿದೈವಂ ಕಿಮುಚ್ಯತೇ ॥ ೧ ॥

ಅ ॥ ಅರ್ಜುನಃ=ಅರ್ಜುನನು, ಉವಾಚ=ಪ್ರಶ್ನೆ ಮಾಡುತ್ತಾನೆ ಪುರುಷೋತ್ತಮ=ಕ್ಷರಾಕ್ಷರ ಪುರುಷರಿಂದುತ್ತಮನಾದ ಶ್ರೀಕೃಷ್ಣನೇ, ತತ್=ನೀನು ಹಿಂದಿನ ಅಧ್ಯಾಯದಲ್ಲಿ ಹೇಳಿದ ಬ್ರಹ್ಮ=ಬ್ರಹ್ಮನು, ಕಿಂ=ಯಾವುದು? ಅಧ್ಯಾತ್ಮಂ=ಅಧ್ಯಾತ್ಮವು, ಕಿಂ=ಯಾವುದು? ಕರ್ಮ=ಕರ್ಮವು, ಕಿಂ=ಯಾವುದು? ಅಧಿಭೂತಂ=ಅಧಿಭೂತವು, ಕಿಂ ಪ್ರೋಕ್ತಂ=ಯಾವುದು ಹೇಳಲ್ಪಟ್ಟಿದ ಅಧಿದೈವಂ=ಅಧಿದೈವವು, ಕಿಂ=ಯಾವುದೆಂದು, ಉಚ್ಯತೇ=ಹೇಳಲ್ಪಡುತ್ತದೆ ॥ ೧ ॥

ಗೀ ॥ ಅಧಿಯಜ್ಞಃ ಕಥಂ ಕೋಽತ್ರ ದೇಹೇಽಸ್ಮಿನ್ಮಧುಸೂದನ ।
ಪ್ರಯಾಣಕಾಲೇ ಚ ಕಥಂ ಜ್ಞೇಯೋಽಸಿ ನಿಯತಾತ್ಮಭಿಃ ॥ ೨ ॥

ಅ ॥ ಮಧುಸೂದನ=ಶ್ರೀಕೃಷ್ಣನೇ, ಅಸ್ಮಿನ್ ದೇಹೇ=ಈ ಶರೀರದಲ್ಲಿ ಅಧಿಯಜ್ಞಃ=ಅಧಿಯಜ್ಞನು, ಕಃ=ಯಾವನು? ಅತ್ರ=ದೇಹದಲ್ಲಿ, ಅಧಿಯಜ್ಞಃ=ಅಧಿಯಜ್ಞನು, ಕಥಂ=ಹೇಗೆ ಇರುತ್ತಾನೆ ಪ್ರಯಾಣಕಾಲೇಚ=ಮರಣಕಾಲದಲ್ಲಿ, ನಿಯತಾತ್ಮಭಿಃ=ಮನಸ್ಸನ್ನು ನಿಗ್ರಹಿಸಿಕೊಂಡಿರುವ ಪುರುಷರಿಂದ, ಕಥಂ=ಯಾವ ಪ್ರಕಾರದಿಂದ, ಜ್ಞೇಯಃ=ಸ್ಮರಿಸಲ್ಪಡತಕ್ಕವನು ನೀನು, ಅಸಿ=ಆಗಿರುತ್ತಿ ॥ ೨ ॥

ಪೀ— ಈ ಎಂಟು ಪ್ರಶ್ನೆಗಳಿಗೂ ಶ್ರೀಪರಮಾತ್ಮನು ಕ್ರಮವಾಗಿ ಉತ್ತರವನ್ನು ಕೊಡುತ್ತಾನೆ—

ಗೀ ॥ ॥ ಶ್ರೀಭಗವಾನುವಾಚ ॥

ಅಕ್ಷರಂ ಬ್ರಹ್ಮ ಪರಮಂ ಸ್ವಭಾವೋಽಧ್ಯಾತ್ಮಮುಚ್ಯತೇ ।
ಭೂತಭಾವೋದ್ಭವಕರೋ ವಿಸರ್ಗಃ ಕರ್ಮಸಂಜ್ಞಿತಃ ॥ ೩ ॥

ಅ ॥ ಶ್ರೀಭಗವಾನ್=ಶ್ರೀಕೃಷ್ಣನು, ಉವಾಚ=ಉತ್ತರವನ್ನು ಕೊಟ್ಟನು. ಪರಂ=ಸರ್ವೋತ್ತಮನಾದ, ಅಕ್ಷರಂ=ಸರ್ವಥಾ ನಾಶವಿಲ್ಲದಿರುವ ಶ್ರೀಪರಮಾತ್ಮನು, ಬ್ರಹ್ಮ=ಬ್ರಹ್ಮನೆನಿಸಿಕೊಳ್ಳುತ್ತಾನೆ (ಅಕ್ಷರಳು ಲಕ್ಷ್ಮೀದೇವಿಯೂ ಆಗುತ್ತಾಳೆ ಇಲ್ಲಿ ಅಕ್ಷರಶಬ್ದದಿಂದ ಲಕ್ಷ್ಮೀದೇವಿಯನ್ನು ತೆಗೆದುಕೊಳ್ಳಬಾರದೆಂಬುದಕ್ಕಾಗಿ ಪರಮಾಕ್ಷರನೆಂದು ಹೇಳಿದ್ದು) (2) ಸ್ವಭಾವಃ=ಜೀವರಿಗೆ ಉಪಕಾರಕವಾಗಿರುವ, ಶರೀರ ಇಂದ್ರಿಯ ಅಂತಃಕರಣ ಮೊದಲಾದ ವಸ್ತುಗಳು, ಅಥವಾ ಜೀವರಾಶಿಯೂ, ಅಧ್ಯಾತ್ಮಂ ಉಚ್ಯತೇ= ಅಧ್ಯಾತ್ಮವೆನಿಸುತ್ತವೆ (ಆತ್ಮಾನಂ ಅಧಿಕೃತ್ಯ ಯದಸ್ತಿ ಜೀವರಿಗೆ ಉಪಕಾರಕವಾಗಿರುವ ದೇಹಾದಿಗಳು) ಅಥವಾ ಆತ್ಮಾಧಿಕಾರ ಗ್ರಂಥಪ್ರತಿಪಾದ್ಯವಾದುದು ಯಾವುದು ಎಂಬ ಪ್ರಶ್ನೆಗೆ ಆತ್ಮಾಧಿಕಾರ ಗ್ರಂಥಪ್ರತಿಪಾದ್ಯನಾದವನು ಜೀವನು, ಯಾವಾಗಲೂ ಒಂದೇ ಪ್ರಕಾರದಿಂದ ಇರುತ್ತಾನೆ (3) ಭೂತಭಾವೋದ್ಭವಕರಃ=ಜೀವರನ್ನೂ ಜಡಪದಾರ್ಥಗಳನ್ನೂ ಸೃಷ್ಟಿಮಾಡುವ, ವಿಸರ್ಗಃ=ಶ್ರೀಪರಮಾತ್ಮನ ಸೃಷ್ಟಿವ್ಯಾಪಾರವು ಕರ್ಮಸಂಜ್ಞಿತಃ= ಕರ್ಮವೆಂದು ಎನಿಸಿಕೊಳ್ಳುತ್ತದೆ ॥ ೩ ॥

ಭಾ ॥ ಓಂ ॥ (೧) ಮರಣಕಾಲೇ ಕರ್ತವ್ಯಗತ್ಯಾದ್ಯಸ್ಮಿನ್ನಧ್ಯಾಯ ಉಪದಿಶತಿ । ಪರಮಮಕ್ಷರಂ ಬ್ರಹ್ಮ । ವೇದಾದಿರಂಕಾನಿವೃತ್ತ್ಯರ್ಥಮೇತತ್ ॥ (೨) ಆತ್ಮನ್ಯಧಿ ಯತ್ತದಧ್ಯಾತ್ಮಂ । ಆತ್ಮಾಧಿಕಾರೇ ಯತ್ತದಿತಿ ವಾ ॥ (೩) ತಥಾ ಹಿ । ಜೈವಃ ಸ್ವಭಾವಃ । ನ್ಯಾಖ್ಯೋ ಭಾವಃ ಸ್ವಭಾವ ಇತಿ ವ್ಯುತ್ಪತ್ತ್ಯಾ ಜೀವೋ ವಾ ಸ್ವಭಾವಃ । ಸರ್ವದಾಽಸ್ಯೈವೈಕಪ್ರಕಾರೇಣೇತಿ ಭಾವಃ । ಅಂತಃಕರಣಾದಿವ್ಯಾವೃತ್ತ್ಯರ್ಥೋ ಭಾವಶಬ್ದಃ । ನ ಹ್ಯೇಕಪ್ರಕಾರೇಣ ಸ್ಥಿತಿರಂತಃಕರಣಾದೇಃ । ವಿಕಾರಿತ್ವಾತ್ । ಸ್ವಶಬ್ದ ಈಶ್ವರವ್ಯಾವೃತ್ತ್ಯರ್ಥಃ ॥ (೪) ಭೂತಾನಾಂ ಜೀವಾನಾಂ ಭಾವಾನಾಂ ಜಡಪದಾರ್ಥಾನಾಂ ಜೋದ್ಭವಕರೇಶ್ವರಕ್ರಿಯಾ ವಿಸರ್ಗಃ । ವಿಶೇಷೇಣ ಸರ್ಜನಂ ವಿಸರ್ಗ ಇತ್ಯರ್ಥಃ ॥ ೧,೨,೩ ॥

ಅ ॥ (೧) ಮರಣಕಾಲದಲ್ಲಿ ಮಾಡಬೇಕಾದ ಸ್ಮರಣಾದಿಗಳೂ ಸ್ಮರಣಸಾಧನವೂ, ಗಮ್ಯವಾದ ವಸ್ತುವೂ, ಬ್ರಹ್ಮಪ್ರಾಪ್ತಿನಿಮಿತ್ತವೂ ಇವುಗಳನ್ನು ಈ ಅಧ್ಯಾಯದಲ್ಲಿ ಉಪದೇಶಿಸುತ್ತಾನೆ ಸರ್ವೋತ್ತಮನಾದ ಅಕ್ಷರನು ಬ್ರಹ್ಮನು (ಅಕ್ಷರಂ ಬ್ರಹ್ಮ ಎಂದಿಷ್ಟೇ ಹೇಳಿದರೆ ಪರಮಂ ಎಂಬುವ ವಿಶೇಷಣ ಕೊಡದಿದ್ದರೆ) ಅಕ್ಷರಶಬ್ದವಾಚ್ಯತ್ವವು ವೇದ ಸ್ಮೃತಿ ಮೊದಲಾದುವುಗಳಲ್ಲಿಯೂ ಇದ್ದುದರಿಂದ ಆ ವೇದಾದಿಗಳನ್ನು ಇಲ್ಲಿ ಅಕ್ಷರಶಬ್ದದಿಂದ ತಗೆದುಕೊಳ್ಳಬಾರದೆಂಬುವುದಕ್ಕಾಗಿ ಅಕ್ಷರದಲ್ಲಿ ಪರಮಂ ಎಂಬುವ ವಿಶೇಷಣವು (ಸರ್ವೋತ್ತಮನಾದ ಅಕ್ಷರನು ಪರಬ್ರಹ್ಮನೇ ವೇದಾದಿಗಳು ಆಗುವುದೇ ಇಲ್ಲ) (೨) ಕೇವಲ ಜೀವರಿಗೆ ಉಪಕಾರಕನಾದ ದೇಹಾಂತಃಕರಣ ಮೊದಲಾದ ವಸ್ತುಗಳು ಅಧ್ಯಾತ್ಮವೆನಿಸುತ್ತವೆ ಅಥವಾ ಆತ್ಮಾ (ಜೀವ)ಧಿಕಾರವೆಂಬುವ ಗ್ರಂಥವಿಶೇಷದಲ್ಲಿ ಪ್ರತಿಪಾದ್ಯನಾದ ಜೀವನು ಅಧ್ಯಾತ್ಮವೆನಿಸುತ್ತಾನೆ (೩) (ಹಾಗಾದರೆ ಸ್ವಭಾವಃ ಎಂಬುವ ಶಬ್ದದಿಂದ ದೇಹಾದಿ ಜೀವ, ಎಂಬುವ ಎರಡು ಅರ್ಥಗಳು ಸಿಗುವುದು ಹೇಗಂದರೆ -) ಅದನ್ನು ಪಪಾದಿಸುತ್ತಾರೆ. ಜೀವರ ಸಂಬಂಧಿಯಾದ (ಅಂದರೆ ಜೀವರಿಗೆ ಉಪಕಾರಕವಾಗಿರುವ) ಅಂತಃಕರಣವನ್ನಾರಂಭಿಸಿ ದೇಹಪರ್ಯಂತ ಪದಾರ್ಥವು ಸ್ವಭಾವವು ಸ್ವಸ್ಯ= ಜೀವನಿಗೆ ಉಪಕಾರಕವಾಗಿರುವ, ಭಾವಃ= ಪದಾರ್ಥವು, ಸ್ವಭಾವವು) (ಎರಡನೇದಕ್ಕೆಉತ್ತರವು-) ಸ್ವಃ=ಜೀವನೆಂಬ, ಭಾವಃ=ಸರ್ವದಾ ಏಕಪ್ರಕಾರವಾಗಿರುವ ವಸ್ತುವು ಸ್ವಭಾವವು, ಎಂಬುವ ವ್ಯುತ್ಪತ್ತಿಯಿಂದ ಜೀವನು ಸ್ವಭಾವವೆನಿಸುತ್ತಾನೆ ಸರ್ವದಾ ಒಂದೇ ಪ್ರಕಾರವಾಗಿಯೇ ಇರತಕ್ಕವನು (ಆತ್ಮಾಧಿಕಾರ ಗ್ರಂಥದಲ್ಲಿ ಹೇಳಲ್ಪಟ್ಟವನೂ, ಸದಾ ಏಕಪ್ರಕಾರನಾಗಿರುವನೂ, ಜೀವನು) ಸ್ವಃ

ಎಂದಿಷ್ಟೇ ಹೇಳಿದರೆ ಸ್ವೀಯವಾದ ಅಂತಃಕರಣಾದಿಗಳೆಂದೂ ಅರ್ಥವಾಗುವುದು. ಅದನ್ನು ತೆಗೆದುಕೊಳ್ಳಬಾರದೆಂಬುವುದಕ್ಕಾಗಿ **ಭಾವ**ಶಬ್ದವು **ಅನ್ನಮಯಂ ಹಿ ಸೌಮ್ಯ ಮನಃ** ಇತ್ಯಾದಿ ಪ್ರಮಾಣಗಳಿಂದ ಅಂತಃಕರಣ ಮೊದಲಾದವುಗಳು ಅನ್ನದ ವಿಕಾರಗಳಾಗಿರುವುದರಿಂದ ಅವುಗಳು ಒಂದೇ ಪ್ರಕಾರ ಇರುವುದೇ ಇಲ್ಲ ಆದಕಾರಣ ಸರ್ವದಾ ಏಕಪ್ರಕಾರವಾಗಿರುವ ವಸ್ತುಗಳು ಅಂತಃಕರಣಾದಿಗಳು ಆಗುವುದಿಲ್ಲ. (ಹೀಗಾದರೆ **ಭಾವಃ** ಎಂದಿಷ್ಟೇ ಸಾಕು **ಸ್ವ**ಶಬ್ದವು ಏಕೆಂದರೆ—) ಶ್ರೀಪರಮಾತ್ಮನೂ ಕೂಡ ಸರ್ವದಾ ಒಂದೇ ಪ್ರಕಾರವೇ ಇದ್ದಾನೆ. ಆದಕಾರಣ **ಭಾವಃ** ಎಂದಿಷ್ಟೇ ಹೇಳಿದರೆ ಶ್ರೀಪರಮಾತ್ಮನ ಪ್ರತೀತಿಯೇ ಬರುವುದು ಆಗ ಎರಡನೇ ಪ್ರಶ್ನೆಗೆ ಉತ್ತರವು ಸಿಗುವುದಿಲ್ಲ ಪ್ರಕೃತ **ಭಾವ**ಶಬ್ದದಿಂದ ಶ್ರೀಪರಮಾತ್ಮನನ್ನು ತೆಗೆದುಕೊಳ್ಳಬಾರದೆಂಬುವುದಕ್ಕಾಗಿ **ಸ್ವ**ಶಬ್ದವು (ಪರಮಾತ್ಮನು ಜೀವನ (**ಸ್ವ**ಃ=)ಸ್ವರೂಪ ಭೂತನಲ್ಲವಷ್ಟೆ) ಆದಕಾರಣ ಸ್ವಭಾವಶಬ್ದದಿಂದ ಜೀವನನ್ನೇ ಇಟ್ಟುಕೊಳ್ಳಬೇಕು. (೪) **ಭೂತಾನಾಂ**=ಜೀವರಿಗೂ, **ಭಾವಾನಾಂ**=ಜಡಪದಾರ್ಥಗಳಿಗೂ, ಸೃಷ್ಟ್ಯಾದಿಗಳನ್ನು ಮಾಡತಕ್ಕ ಶ್ರೀಹರಿಯ ವ್ಯಾಪಾರಭೂತವಾದ ವಿಸರ್ಗವು (ಅಂದರೆ ವಿಶೇಷವಾಗಿ ಪರಮಾತ್ಮನು ಮಾಡತಕ್ಕ ಸೃಷ್ಟ್ಯಾದಿ ವ್ಯಾಪಾರವು) **ಕರ್ಮ** ಎನಿಸುತ್ತದೆ. (ವಿಸರ್ಗಪದಕ್ಕೆ ತ್ಯಾಗವೆಂದರ್ಥವಲ್ಲ) ॥ ೧, ೨, ೩ ॥

ಗೀ॥ ಅಧಿಭೂತಂ ಕ್ಷರೋ ಭಾವಃ ಪುರುಷಶ್ಚಾಧಿದೈವತಂ ।
ಅಧಿಯಜ್ಞೋಽಹಮೇವಾತ್ರ ದೇಹೇ ದೇಹಭೃತಾಂ ವರ ॥ ೪ ॥

ಅ ॥ **ದೇಹಭೃತಾಂ ವರ**=ಶರೀರಧಾರಿಗಳಲ್ಲಿ ಶ್ರೇಷ್ಠನಾದ ಅರ್ಜುನನೇ, **ಕ್ಷರಃ**=ದೇಹಸಹಿತರಾದ ಜೀವರಿಗೆಉಪಕಾರಕವಾಗಿರುವ ಉತ್ಪತ್ತಿ ವಿನಾಶಗಳುಳ್ಳ, **ಭಾವಃ**=ಕಾರ್ಯಭೂತವಾದ ಪದಾರ್ಥವು, **ಅಧಿಭೂತಂ**= ಅಧಿಭೂತವೆನಿಸಿಕೊಳ್ಳುತ್ತದೆ (ಅಂದರೆ ದೇಹಸಹಿತರಾದ ಜೀವರಿಗೆ ಉಪಕಾರಿಯಾಗಿರುವ ಉತ್ಪತ್ತಿ ವಿನಾಶವುಳ್ಳ ಪದಾರ್ಥವು) (5) **ಪುರುಷಶ್ಚ**=ಸರ್ವಜೀವರಿಗೆ ಅಭಿಮಾನಿಯಾದ ಸಂಕರ್ಷಣ (ಶೇಷ)ನು **ಅಥವಾ** ಚತುರ್ಮುಖ ಬ್ರಹ್ಮನು **ಅಧಿದೈವ**ತವೆನಿಸುತ್ತಾನೆ (ಅಂದರೆ ಸಮಸ್ತ ದೇವತೆಗಳಿಗೆ ಸ್ವಾಮಿಯಾಗಿದೇವತಾಪ್ರತಿಪಾದಕ ಗ್ರಂಥದಲ್ಲಿ ಮುಖ್ಯವಾಗಿ ಪ್ರತಿಪಾದ್ಯರಾದ ಶೇಷಬ್ರಹ್ಮರು ಅಧಿದೈವತರು) **ಅತ್ರ ದೇಹೇ**=ಈ ಜೀವರ ಶರೀರದಲ್ಲಿ, **ಅಧಿಯಜ್ಞಃ**=ಅಧಿಯಜ್ಞನು, **ಅಹಮೇವ**=ನಾನೇ ಜೀವರ ದೇಹದಲ್ಲಿದ್ದು ಯಜ್ಞಗಳಿಗೆ ಪ್ರವರ್ತಕನಾದುದರಿಂದ **ಅಧಿಯಜ್ಞ** ಎನಿಸಿಕೊಂಡ ರೂಪವಿಶೇಷವು ನಾನೇ ॥ ೪ ॥

ಭಾ ॥ **(೧) ಭೂತಾನಿ ಸಶರೀರಾನ್ ಜೀವಾನಧಿಕೃತ್ಯ ಯತ್ತದಧಿಭೂತಂ । ಕ್ಷರೋ ಭಾವಃ ವಿನಾಶಿಕಾರ್ಯಪದಾರ್ಥಃ ॥ (೨) ಅವ್ಯಕ್ತಾಂತರ್ಭಾವೇಽಪಿ ತಸ್ಯಾವ್ಯನ್ಯಥಾಭಾವಾಖ್ಯೋ ವಿನಾಶೋಽಸ್ತ್ಯೇವ ॥ (೩) ತಚ್ಚೋಕ್ತಂ । (1) ಅವ್ಯಕ್ತಂ ಪರಮೇ ವ್ಯೋಮ್ನಿ ನಿಷ್ಕ್ರಿಯೇ ಸಂಪ್ರಲೀಯತ ಇತಿ । (೭) ತನ್ಮಾದವ್ಯಕ್ತಮುತ್ಪನ್ನಂ ತ್ರಿಗುಣಂ ದ್ವಿಜಸತ್ತಮೇತಿ ಚ । (3) ವಿಕಾರೋಽವ್ಯಕ್ತಜನ್ಮೇತಿ ಚ ಸ್ಕಾಂದೇ ॥ ೧ ॥**

ಅ ॥ (೧) ದೇಹಸಹಿತರಾದ ಜೀವರಿಗೆ ಉಪಕಾರಕವಾಗಿರುವ, **ಕ್ಷರಃ ಭಾವಃ**=ಉತ್ಪತ್ತಿ ವಿನಾಶಗಳುಳ್ಳ ಪೃಥಿವ್ಯಾದಿ ಪದಾರ್ಥವು **ಅಧಿಭೂತ**ವೆನಿಸುತ್ತದೆ (೨) (ಹಾಗಾದರೆ ಜಡ ಪ್ರಕೃತಿಯೂ ಕೂಡು ದೇಹ ಸಹಿತರಾದ ಜೀವರಿಗೆ ಉಪಕಾರಕವಾಗಿರುತ್ತದೆ ಅದೂ ಅಧಿಭೂತದಲ್ಲಿ ಸೇರುತ್ತದೆ ಅದಕ್ಕೆ ಉತ್ಪತ್ತಿ ವಿನಾಶಗಳಿಲ್ಲ ಆದಕಾರಣ ಸರ್ವಾಧಿಭೂತಗಳಲ್ಲಿ ಕ್ಷರಃ ಭಾವಃ ಎಂಬುವ ಉತ್ಪತ್ತಿ ವಿನಾಶಗಳು ಕೂಡುವುದಿಲ್ಲವೆಂದರೆ—) ಜಡಪ್ರಕೃತಿಯೂ ಕೂಡ ಅಧಿಭೂತದಲ್ಲಿ ಸೇರಿದರೂ (ಕ್ಷರಃ ಭಾವಃ ಉತ್ಪತ್ತಿ ವಿನಾಶಗಳಿವೆ ಎಂಬುವುದು ಎಲ್ಲಾ ಅಧಿಭೂತಗಳಲ್ಲಿಯೂ ಇದೆ) (ಹೇಗೆಂದರೆ) ಜಡಪ್ರಕೃತಿಗೂ

ಕೂಡ ಅನ್ಯಥಾಭಾವವೆಂಬುವ ವಿನಾಶವು (ಅಂದರೆ ಗುಣಪ್ರಧಾನಭಾವವಿಲ್ಲದೆ ಸತ್ವರಜಸ್ತಮಸ್ಸುಗಳೆಂಬ ಮೂರುಗಳೂ ಪ್ರಧಾನಭಾವದಿಂದಲೇ ಇರುವುದೆಂಬ ಸಾಮ್ಯಾವಸ್ಥಾರೂಪವಾದ ವಿನಾಶವು ಉಂಟೇ ಉಂಟು) (ಹಾಗೆಯೇ ವಿಕಾರರೂಪವಾದ ಉತ್ಪತ್ತಿಯೂ ಇದೆ) (ಅಂದರೆ ಹಿಂದೆ ಹೇಳಿದ ಸಾಮ್ಯಾವಸ್ಥೆಯನ್ನು ಬಿಟ್ಟು ಗುಣಪ್ರಧಾನಭಾವವಿದ್ದು ಮಹದಾದಿಕಾರ್ಯರೂಪದಿಂದ ವಿಕಾರರೂಪವಾದ ಗುಣವೈಷಮ್ಯವೆಂಬುವ ಸೃಷ್ಟಿಯೂ ಇದೆ) (೩) (ಜಡಪ್ರಕೃತಿಗೆ ಉತ್ಪತ್ತಿ ನಾಶಗಳಿವೆ, ಎಂಬುವ ಎರಡು ವಿಷಯದಲ್ಲಿಯೂ ಪ್ರಮಾಣಗಳನ್ನು ಹೇಳುತ್ತಾರೆ--) (1) ಅವ್ಯಕ್ತತತ್ವವು (ಜಡಪ್ರಕೃತಿಯು) ಪ್ರಲಯಕಾಲದಲ್ಲಿ ಕ್ಷಣಲವಾದಿ ಸೃಷ್ಟಿ ಹೊರತು ಜಗತ್ತಿನ ಸೃಷ್ಟ್ಯಾದಿ ವ್ಯಾಪಾರಗಳಿಲ್ಲದಿರುವುದರಿಂದ ನಿಷ್ಕ್ರಿಯನೆನಿಸಿದ, ಸರ್ವತ್ರ ವ್ಯಾಪ್ತನಾದ, ಸರ್ವೋತ್ತಮನಾದ ಶ್ರೀಪರಮಾತ್ಮನಲ್ಲಿ ಲಯಹೊಂದುತ್ತದೆ (ಅಂದರೆ ಸಾಮ್ಯಾವಸ್ಥೆ ಎಂಬ ಲಯವನ್ನು ಹೊಂದುತ್ತದೆ) (2) ಎಲೋ ಬ್ರಾಹ್ಮಣೋತ್ತನೇ ಆ ಶ್ರೀಪರಮಾತ್ಮನಿಂದ ಸತ್ವರಜಸ್ತಮೋಗುಣಾತ್ಮಕವಾದ ಜಡಪ್ರಕೃತಿಯು ವಿಕಾರರೂಪ ಉತ್ಪತ್ತಿಯುಳ್ಳದ್ದು ಆಯಿತು (ಅಂದರೆ ಜಡಪ್ರಕೃತಿಯು ವಿಕಾರವನ್ನು ಹೊಂದಿತು) (3) ಅವ್ಯಕ್ತಕ್ಕೆ ಉತ್ಪತ್ತಿಯೆಂದರೆ ಮಹದಾದಿರೂಪದಿಂದ ವಿಕಾರಹೊಂದುವುದು ಎಂದು ಸ್ಕಾಂದಪುರಾಣದಲ್ಲಿದೆ ॥ ೧ ॥

ಭಾ ॥ (೧) ಪುರಿ ಶರೀರನಾತ್ಪುರುಷೋ ಜೀವಃ । ಸ ಚ ಸಂಕರ್ಷಣೋ ಬ್ರಹ್ಮಾ ವಾ । ಸ ಸರ್ವದೇವಾನಧಿಕೃತ್ಯ ವರ್ತತೇ ಪತಿರಿತ್ಯಧಿದೈವತಂ । ದೇವಾಧಿಕಾರಸ್ಥ ಇತಿ ವಾ ॥ (೨) ಸರ್ವಯಜ್ಞಭೋಕ್ತೃತ್ವಾದೇರಧಿಯಜ್ಞಃ । ಅನ್ಯೋಽಧಿಯಜ್ಞೋಽಗ್ನ್ಯಾದಿಃ ಪ್ರಸಿದ್ಧ ಇತಿ ದೇಹ ಇತಿ ವಿಶೇಷಣಂ । ಭೋಕ್ತಾರಂ ಯಜ್ಞತಪಸಾಂ ॥ (೩) (1) ತ್ರೈವಿದ್ಯಾ ಮಾಂ । (2) ಯೇಽಪ್ಯನ್ಯದೇವತಾಭಕ್ತಾಃ । (3) ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ । ದದತೋ ಮನುಷ್ಯಾಃ ಪ್ರಶಂಸಂತಿ ಯಜಮಾನಂ ದೇವಾ ಇತ್ಯಾದೇಃ ॥ (೪) ಕುತೋ ಹ್ಯನ್ಯ ಧ್ರುವಃ ಸ್ವರ್ಗಃ ಕುತೋ ನೈಶ್ರೇಯಸಂ ಪದಮಿತ್ಯಾದಿಪರಿಹಾರಾಚ್ಚ ಮೋಕ್ಷಧರ್ಮೇ ॥ ೨ ॥

ಅ ॥ (೧) ಎಲ್ಲರ ದೇಹದಲ್ಲಿ ಅಭಿಮಾನಿಯಾಗಿ ಇರುವುದರಿಂದ, ಪುರುಷಃ = ಜೀವನು ಅಂದರೆ ಸಮಸ್ತ ಜೀವರಿಗೆ ಅಭಿಮಾನಿಯಾಗಿರುವುದರಿಂದ ಸಂಕರ್ಷಣನು (ಶೇಷನು) ಅಥವಾ ಚತುರ್ಮುಖ ಬ್ರಹ್ಮನು ಈ ಇಬ್ಬರೂ ಎಲ್ಲಾ ದೇವತೆಗಳಿಗೆ ಅಧಿಪತಿಯೂ ಸ್ವಾಮಿಯೂ ಆಗಿರುವ ಕಾರಣ ಅಧಿದೈವತನು ಎನಿಸಿಕೊಳ್ಳುತ್ತಾರೆ ಅಥವಾ ದೇವಾಧಿಕಾರಪ್ರಕರಣದಲ್ಲಿ ಅಂದರೆ ದೇವತಾಪ್ರಕರಣಗಳಲ್ಲಿ ಮುಖ್ಯವಾಗಿ ಪ್ರತಿಪಾದ್ಯರಾಗಿರುವವರು (೨) ಸಮಸ್ತ ಯಜ್ಞಗಳನ್ನು ಭೋಗಿಸುವುದರಿಂದಲೂ, ಸಮಸ್ತ ಯಜ್ಞಗಳಿಗೆ ಸ್ವರ್ತಕನಾದುದರಿಂದಲೂ, ಯಜ್ಞಗಳಿಗೆ ಫಲವನ್ನು ಕೊಡತಕ್ಕವನಾದುದರಿಂದಲೂ ಇದುಮೊದಲಾದ ಕಾರಣಗಳಿಂದ ಶ್ರೀಪರಮಾತ್ಮನು ಅಧಿಯಜ್ಞನೆನಿಸುತ್ತಾನೆ ಪರಬ್ರಹ್ಮನಿಂದ ಇತರರಾದ ಅಗ್ನ್ಯಾದಿಗಳೂ ಯಜ್ಞಭೋಕ್ತೃಗಳೆಂದು ಪ್ರಸಿದ್ಧರಾಗಿರುವ ಕಾರಣ ಆ ಅಗ್ನ್ಯಾದಿಗಳನ್ನು ತೆಗೆದುಕೊಳ್ಳಬಾರದಂಬುವುದಕ್ಕಾಗಿ **ದೇಹೇ** ಎಂದು ವಿಶೇಷಣವು ಅಂದರೆ ಕರ್ತೃ ಭೋಕ್ತೃ ಫಲದಾತೃಗಳ ದೇಹದಲ್ಲಿ ಪ್ರೇರಕನಾಗಿರುವ ಶ್ರೀಪರಮಾತ್ಮನೇ ಅಧಿಯಜ್ಞನು (ಮತ್ತು **ಸಾಧಿಯಜ್ಞಂ ಚ ಮಾಂ ವಿದುಃ** ಎಂದು ಶ್ರೀಕೃಷ್ಣನು ಅಧಿಯಜ್ಞನಿಂದ ಕೂಡಿದ್ದಾನೆಂದು ಹೇಳಿದ್ರಿಂದ ಅಧಿಯಜ್ಞನು ಶ್ರೀಕೃಷ್ಣನಿಗಿಂತ ಬೇರೆಯಾದ ಅಗ್ನ್ಯಾದಿಗಳೆಂದು ಶಂಕೆಯು ಬರುವುದು ಅದನ್ನು ಪರಿಹರಿಸುವುದಕ್ಕಾಗಿಯೂ **ದೇಹೇ** ಎಂದು ಹೇಳಿದ್ದು) (ಶ್ರೀಪರಮಾತ್ಮನಿಗೆ ಸರ್ವ ಯಜ್ಞಭೋಕ್ತೃತ್ವವು ಹೇಗೆ ಎಂದರೆ—)

ಯಜ್ಞ ತಪಸ್ಸುಗಳನ್ನು ಭೋಗಿಸುವವನು. (೩) (ತ್ರೈವಿದ್ಯರು ಮಾಡತಕ್ಕ ಯಜ್ಞಗಳ ಭೋಕ್ತೃತ್ವವು ಶ್ರೀಪರಮಾತ್ಮನಿಗೆ ಇಲ್ಲದಿರುವುದರಿಂದ **ಸರ್ವಯಜ್ಞಭೋಕ್ತೃತ್ವಾದೇಃ** ಎಂದು ಹೇಳಿದ್ದು ಅಯುಕ್ತ ವೆಂದರೆ–) (1) ತ್ರೈವಿದ್ಯರೂ ಕೂಡ ನನ್ನ ನ್ನುದ್ದೇಶಿಸಿಯೇ ಯಜ್ಞ ಮಾಡುತ್ತಾರೆ (2) ಯಾರು ಅನ್ಯ ದೇವತೆಗಳ ಭಕ್ತರಾಗಿ ನನ್ನನ್ನುದ್ದೇಶಿಸಿ ಯಜ್ಞ ಮಾಡುತ್ತಾರೋ ಆ ಯಜ್ಞಭೋಕ್ತನೂ ನಾನೇ (ಆದ ಕಾರಣ ಸರ್ವಯಜ್ಞಭೋಕ್ತೃತ್ವವೂ ಶ್ರೀಪರಮಾತ್ಮನಿಗೆ ಇದೆ) (ಶ್ರೀಪರಮಾತ್ಮನು ಸರ್ವಪ್ರವರ್ತಕ ನೆಂಬುವ ವಿಷಯದಲ್ಲಿ ಶ್ರುತಿಯನ್ನು ಹೇಳುತ್ತಾರೆ-) (3)ಗಾರ್ಗಿಯೇ ಮನುಷ್ಯರು ದ್ರವ್ಯಾದಿಗಳನ್ನು ಕೊಡ ತಕ್ಕ ಜನರನ್ನು ಹೊಗಳುತ್ತಾರೆ ದೇವತೆಗಳು ಯಜ್ಞಮಾಡತಕ್ಕ ಯಜಮಾನನ್ನು ಹೊಗಳುತ್ತಾರೆ ಇವೆಲ್ಲವೂ ಈ ಅಕ್ಷರಶಬ್ದವಾಚ್ಯನಾದ ಶ್ರೀಪರಮಾತ್ಮನ ಪ್ರೇರಣೆಯು ಇದ್ದರೇನೇ ಆಗುತ್ತದೆ ಇಲ್ಲವಾದರೆ ಆಗಲಾರದು, ಇತ್ಯಾದಿ ಪ್ರಮಾಣಗಳಿಂದ ಶ್ರೀಹರಿಗೆ ಸರ್ವಪ್ರವರ್ತಕತ್ವವು ಸಿದ್ಧವಾಗುತ್ತದೆ (೪)(ಶ್ರೀಪರ ಮಾತ್ಮನೇ ಯಜ್ಞಫಲವನ್ನು ಕೊಡುವವನು ಇತ್ಯಾದಿ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ–) ಇವ ನಿಗೆ ಪ್ರಾಚೀನವಾದ ಸ್ವರ್ಗವು ಯಾರಿಂದ ಆಗುತ್ತದೆ. ಮೋಕ್ಷದಲ್ಲಿ ಉಂಟಾಗತಕ್ಕ ಸುಖವೂ ಯಾರಿಂದ ಆಗುತ್ತದೆ **ಸ್ವರ್ಗತಶ್ಚೈವ ಕಂ ಕುರ್ಯಾತ್** ಇದುಮೊದಲಾದ ಪ್ರಶ್ನೆಗೆ **ಸ್ವರ್ಗಸ್ಥಾ ಅಪಿ ಯೇ ಕೇಚಿತ್ ತಂ ನಮಸ್ಯಂತಿ ದೇಹಿನಃ** ಎಂದು ಪರಮಾತ್ಮನೇ ಫಲಕೊಡತಕ್ಕವನೆಂದು ಪರಿಹಾರವು ಮೋಕ್ಷ ಧರ್ಮದಲ್ಲಿ ಹೇಳಿದೆ ॥ ೨ ॥

ಹೀ—ಅಧಿಯಜ್ಞಃ ಕಥಂ ಎಂಬುವ ಪ್ರಶ್ನೆಗೆ ಸರ್ವಯಜ್ಞಭೋಕ್ತೃತ್ವವಿದ್ದುದರಿಂದ ಅಧಿಯ ಜ್ಞತ್ವವು ಪರಮಾತ್ಮನಿಗೆ ಎಂಬುವ ಉತ್ತರವನ್ನು ಶ್ರೀಕೃಷ್ಣನೇ ಏಕೆ ಹೇಳಲಿಲ್ಲ ಎಂದರೆ—

ಭಾ ॥ (೧) ಭಗವಾಂಶ್ಚೇತ್ತದ್ಭೋಕ್ತೃತ್ವಾದೇರಧಿಯಜ್ಞತ್ವಂ ಸಿದ್ಧಮಿತಿ ಕಥಮಿತ್ಯಸ್ಯ ಪರಿ-ಹಾರಃ ಪೃಥಙ್ನೋಕ್ತಃ॥ (೨) ಸರ್ವಪ್ರಾಣಿದೇಹಸ್ಥರೂಪೇಣಾಧಿಯಜ್ಞಃ। ಅತ್ರೇತಿ ಸ್ವದೇಹನಿವೃತ್ತ್ಯರ್ಥಂ । ನ ಹಿ ತತ್ರೇಶ್ವರಸ್ಯ ನಿಯಂತೃತ್ವಂ ಪೃಥಗಸ್ತಿ । ನಾತ್ರೋಕ್ತಂ ಬ್ರಹ್ಮ ಭಗವತೋಽನ್ಯತ್ । ತೇ ಬ್ರಹ್ಮೇತ್ಯುಕ್ತ್ವಾ ಸಾಧಿಭೂತಾಧಿದೈವಂ ಮಾಂ ಸಾಧಿಯಜ್ಞಂ ಚ ಯೇ ವಿದುರಿತಿ ಪರಾಮರ್ಶಾತ್ । ತಸ್ಯೈವ ಚ ಪ್ರಶ್ನಾತ್ ॥ (೩) ಸಾಧಿಯಜ್ಞಮಿತಿ ಭೇದಪ್ರತೀತೇಸ್ತನ್ನಿವೃತ್ತ್ಯರ್ಥಮಧಿಯಜ್ಞೋಽಹಮಿತ್ಯುಕ್ತಂ । ಮಾಮಿತ್ಯಭೇದಸಿದ್ಧೇರಕ್ಷರಮಿತ್ಯೇವೋಕ್ತಂ ॥ ೩ ॥

ಅ ॥ (೧) ಯಾವಾಗ ಅಧಿಯಜ್ಞಃ ಅಹಂ ಎಂದು ಶ್ರೀಪರಮಾತ್ಮನು ಯಜ್ಞಭೋಕ್ತನಾದುದರಿಂದ ಅಧಿ ಯಜ್ಞನೆಂದು ಹೇಳಲ್ಪಟ್ಟನ್ನಾನೋ, ಆಗ ಶ್ರೀಪರಮಾತ್ಮನಿಗೆ ಸರ್ವಯಜ್ಞಭೋಕ್ತೃತ್ವಾದಿಗಳು ಇದ್ದುದ ರಿಂದ ಅಧಿಯಜ್ಞತ್ವವಿದೆ ಎಂದು ಭೋಕ್ತಾರಂ ಯಜ್ಞತಪಸಾಂ ಇತ್ಯಾದಿಗಳ ಅರ್ಥವನ್ನು ಅರ್ಜುನನು ಕೇಳಿದ್ರಿಂದ ಅರ್ಜುನನಿಗೆ ಸಿದ್ಧವೇ ಆಗಿದೆ ಹೀಗೆ ಆಲೋಚಿಸಿಯೇ ಶ್ರೀಕೃಷ್ಣನು **ಕಥಂ ಅಧಿಯಜ್ಞಃ** ಎಂಬುವ ಪ್ರಶ್ನೆಗೆ **ಅಧಿಯಜ್ಞೋಽಹಂ** ಎಂಬುವುದಕ್ಕಿಂತ ಪ್ರತ್ಯೇಕ ಪರಿಹಾರವನ್ನು ಹೇಳಲಿಲ್ಲ (ಅಜ್ಜ ರಿಗೆ ತಿಳಿಯುವುದಕ್ಕಾಗಿ ಭಾಷ್ಯದಲ್ಲಿ ಪ್ರತ್ಯೇಕ ಪರಿಹಾರ ಹೇಳಿದ್ದು) (೨) ಸಮಸ್ತ ಪ್ರಾಣಿಗಳ ದೇಹ ದಲ್ಲಿರತಕ್ಕ ರೂಪವಿಶೇಷದಿಂದ ಕೂಡಿರುವುದರಿಂದ ಸಾಧಿಯಜ್ಞಃ ಎನಿಸುತ್ತಾನೆ (ಅತ್ರ ಎಂದು ದೇಹಕ್ಕೆ ವಿಶೇಷಣ ಕೊಟ್ಟದ್ದು ಏತಕ್ಕೆಂದರೆ—) ಅತ್ರ ಎಂದು ಹೇಳಿದ್ದು ತನ್ನ (ಶ್ರೀಕೃಷ್ಣನ) ದೇಹವನ್ನು ತೆಗೆದು ಕೊಳ್ಳಬಾರದೆಂಬುವುದಕ್ಕಾಗಿ ಅತ್ರ=ಈಶ್ವರಶರೀರಾತಿರಿಕ್ತವಾದ ಜೀವರ ದೇಹದಲ್ಲಿ ಎಂದರ್ಥವು (ಶ್ರೀ ಕೃಷ್ಣನ ಶರೀರವನ್ನು ಏಕೆ ತೆಗೆದುಕೊಳ್ಳಬಾರದೆಂದರೆ—) ಶ್ರೀಪರಮಾತ್ಮನಿಗೆ ತನ್ನ ಶರೀರದಲ್ಲಿ

ನಿಯಾಮಕತ್ವವು ಪ್ರತ್ಯೇಕವಿಲ್ಲ (ಅಂದರೆ ಬೇರೆ ರೂಪದಿಂದ ಇರುವುದಿಲ್ಲ) **(ಅಧಿಯಜ್ಞೋಽಹಂ** ಎಂದು ಹೇಳಿದಂತೆಯೇ **ಬ್ರಹ್ಮ ಅಹಂ** ಎಂದು ಹೇಳಲಿಲ್ಲ ಆದಕಾರಣ ಬ್ರಹ್ಮನು ಶ್ರೀಪರಮಾತ್ಮನಿಂದ ಬೇರೆಯೇ ಎಂದರೆ—) ಇಲ್ಲಿ ಹೇಳಲ್ಪಟ್ಟ ಬ್ರಹ್ಮನು ಶ್ರೀಪರಮಾತ್ಮನಿಂದ ಬೇರೆಯಲ್ಲ **ತೇ ಬ್ರಹ್ಮ ತದ್ವಿದುಃ** (ಅ ೭. ಶ್ಲೋ ೨೯) ಎಂದು ಹೇಳಿ **ಸಾಧಿಭೂತಾಧಿದೈವಂ ಮಾಂ** ಎಂದು ಹಿಂದೆ ಹೇಳಿದ ಬ್ರಹ್ಮನನ್ನೇ **ಮಾಂ** ಎಂದು ಪರಾಮರ್ಶಮಾಡಿದ್ದಾರೆ (ಬ್ರಹ್ಮನೆಂದರೆ ಪರಮಾತ್ಮ ಎಂದೇ ಏಕೆ ಹೇಳಬೇಕು? ಎಂದರೆ—) ಆ ಬ್ರಹ್ಮನನ್ನೇ ಪ್ರಶ್ನೆಮಾಡಿದ್ದು (ಪ್ರಶ್ನೆಮಾಡಿದ್ದಕ್ಕೇನೇ ಉತ್ತರ ಕೊಟ್ಟದ್ದು) (೩) (ಹಾಗಾದರೆ ಅಧಿಯಜ್ಞನೂ ಬ್ರಹ್ಮನೂ ಇಬ್ಬರೂ ಪರಬ್ರಹ್ಮರಾದುದರಿಂದ ಒಂದು ಕಡೆ **ಮಾತ್ರ ಅಧಿಯಜ್ಞೋಽಹಮೇವ** ಎಂದು ಹೇಳಲು ಕಾರಣವೇನು? ಇನ್ನೊಂದು ಕಡೆ **ಬ್ರಹ್ಮ ಅಹಮೇವ** ಎಂದು ಏಕ ಹೇಳಲಿಲ್ಲ? ಎಂದರೆ—) ಸಾಧಿಯಜ್ಞಂ ಎಂದು ಅಧಿಯಜ್ಞನು ಬೇರೆ ಅಧಿಯಜ್ಞನಿಂದ **ಕೂಡಿ** ದವನು ಬೇರೆ ಎಂದು ಭೇದವು ತೋರುವುದರಿಂದ ಆ ಭೇದಭ್ರಮೆಯನ್ನು ಅಧಿಯಜ್ಞನಿಂದ **ಕೂಡಿದ್ದೇ** ನೆಂದು **ಹೇಳಿದ್ರಿಂದ** ನಿವೃತ್ತಿಗೊಳಿಸುವುದಕ್ಕಾಗಿ (ಅಂದರೆ ಅಧಿಯಜ್ಞನೂ ಅಧಿಯಜ್ಞನಿಂದ **ಕೂಡಿದ** ವನೂ ಒಬ್ಬನೇ ಎಂದು ತೋರಿಸುವುದಕ್ಕಾಗಿ) **ಅಧಿಯಜ್ಞೋಽಹಂ** ಎಂದು ಹೇಳಿದ್ದು **ಮಾಂ** ಎಂಬುವುದರಿಂದ ಅಭೇದವು ಪ್ರಸಿದ್ಧವಾಗಿ ತೋರುವದರಿಂದ **ಅಕ್ಷರಂ** ಎಂದಿಷ್ಟೇ ಹೇಳಿರುವರು ॥ ೩ ॥

ಪೀ—ಹಿಂದೆ ಹೇಳಿದ ಪ್ರವೇಯವನ್ನು ಆಗಮ ಹೇಳಿ ದೃಢೀಕರಿಸುತ್ತಾರೆ—

ಭಾ ॥ (೧) ಆಹ ಚ ಗೀತಾಕಲ್ಪೇ । ದೇಹಸ್ಥವಿಷ್ಣುರೂಪಾಣಿ ಅಧಿಯಜ್ಞ ಇತೀರಿತಃ । ಕರ್ಮೇಶ್ವರಸ್ಯ ಸೃಷ್ಟ್ಯಾಖ್ಯಂ ತಚ್ಚಾಪೀಚ್ಛಾದ್ಯಮುಚ್ಯತೇ । ಅಧಿಭೂತಂ ಜಡಂ ಪ್ರೋಕ್ತಮಧ್ಯಾತ್ಮಂ ಜೀವ ಉಚ್ಯತೇ । ಹಿರಣ್ಯಗರ್ಭೋಽಧಿದೈವಂ ದೇವಃ ಸಂಕರ್ಷಣೋಽಪಿ ವಾ । ಬ್ರಹ್ಮ ನಾರಾಯಣೋ ದೇವಃ ಸರ್ವದೇವೇಶ್ವರೇಶ್ವರ ಇತಿ ॥ (೨) ಯಥಾಪ್ರತೀತಂ ವಾ ಸರ್ವಮತ್ರ ನೈವ ವಿರುದ್ಧ್ಯತ ಇತಿ ॥ ೪ ॥

ಅ ॥ ಸರ್ವರ ದೇಹಗಳಲ್ಲಿರತಕ್ಕ ಶ್ರೀವಿಷ್ಣುರೂಪಗಳು **ಅಧಿಯಜ್ಞಃ** ಎನಿಸುತ್ತವೆ ಶ್ರೀಪರಮಾತ್ಮನ ಸೃಷ್ಟಿರೂಪವಾಯಿದು ಕರ್ಮವು ಸೃಷ್ಟ್ಯಾಖ್ಯ ಕರ್ಮವೂ ಕೂಡ ಇಚ್ಛಾಪ್ರಯತ್ನಾದಿ ರೂಪನೇ (ಪರಿಣಾಮರೂಪವಾದುದಲ್ಲ) ದೇಹದಿಂದ ಬಾಹ್ಯವಾದ ಜಡಪದಾರ್ಥವು ಅಧಿಭೂತವೆನಿಸುತ್ತದೆ ಜೀವನು ಅಧ್ಯಾತ್ಮನೆನಿಸುತ್ತಾನೆ ಚತುರ್ಮುಖನು ಅಥವಾ ಶೇಷನು **ಅಧಿದೈವತನೆನಿಸುತ್ತಾನೆ** ಸಮಸ್ತ ದೇವತೆಗಳಿಗೆ ಅಧಿಪತಿಗಳಾದ ಬ್ರಹ್ಮಾದಿಗಳಿಗೆ ಸ್ವಾಮಿಯಾದ ಶ್ರೀನಾರಾಯಣದೇವರು **ಬ್ರಹ್ಮ** ಎನಿಸಿಕೊಳ್ಳುತ್ತಾರೆ ಹೀಗೆ ಗೀತಾಕಲ್ಪದಲ್ಲಿ ಹೇಳಿದೆ (೨) ಈ ಪದಗಳಿಗೆ ಇಷ್ಟು ಮಾತ್ರ ಅರ್ಥವೆಂದಲ್ಲ ಮತ್ತೆ ಪ್ರಮಾಣಾವಿರುದ್ಧವಾದ ಶಬ್ದ ಶಕ್ತಿಯಿಂದ ತೋರುವ ಬೇರೆ ಅರ್ಥವನ್ನು, ಹೇಳಿದರೆ ವಕ್ತೃಗಳ ಅಭಿಪ್ರಾಯಕ್ಕೆ ವಿರೋಧಿಯಾಗುವುದಿಲ್ಲ ॥ ೪ ॥

ಪೀ —ಈ ಅಭಿವ್ಯಾಯವನ್ನೇ ವಾಕ್ಯಾಂತರದಿಂದ ಸ್ಪಷ್ಟೀಕರಿಸುತ್ತಾರೆ—

ಭಾ ॥ (೧) ಸ್ಕಾಂದೇ ಚ । ಆತ್ಮಾಭಿಮಾನಾಧಿಕಾರಸ್ಥಿತಮಧ್ಯಾತ್ಮಮುಚ್ಯತೇ । ದೇಹಾದ್ಬಾಹ್ಯಂ ವಿನಾಽತೀವ ಬಾಹ್ಯತ್ವಾದಧಿದೈವತಂ ॥ (೨) ದೇವಾಧಿಕಾರಗಂ ಸರ್ವಂ ಮಹಾಭೂತಾಧಿಕಾರಗಂ । ತತ್ಕಾರಣಂ ತಥಾ ಕಾರ್ಯಮಧಿಭೂತಂ ತದಂತಿಕಾದಿತಿ ॥

(೩) ಮಹಾಕೌರ್ಮೇ ಚ। ಅಧ್ಯಾತ್ಮಂ ದೇಹಪರ್ಯಂತಂ ಕೇವಲಾತ್ಮೋಪಕಾರಕಂ। ಸದೇಹಜೀವಾ ಭೂತಾನಿ ಯತ್ತೇಷಾಮುಪಕಾರಕೃತ್। ಅಧಿಭೂತಂ ತು ಮಾಯಾಂತಂ ದೇವಾನಾಮಧಿದೈವತಮಿತಿ ॥ ೫ ॥ ॥ ೪ ॥

ಅ ॥ (೧) ದೇಹಾದಿಗಳಲ್ಲಿ ಇದ್ದಂತೆ ಪೃಥಿವೀ ಮೊದಲಾದ ಭೂತಗಳಲ್ಲಿ ಅತ್ಯಭಿಮಾನ ವಿಷಯತ್ವ ವಿಲ್ಲದಿರುವುದರಿಂದ ದೇಹಸಹಿತನಾದ ಜೀವನಿಗೆ ಉಪಕಾರಕವಾಗಿರುವ, ದೇಹದಿಂದ ಭಿನ್ನವಾಗಿರುವ ಪೃಥಿವೀ ಮೊದಲಾದ ಭೂತಾದಿಗಳನ್ನು ಬಿಟ್ಟು ಜೀವರ ವಿಶೇಷಾಭಿಮಾನಕ್ಕೆ ವಿಷಯವಾದ ಅಂತಃಕರಣವನ್ನು ಆರಂಭಿಸಿ ದೇಹಪರ್ಯಂತವಾದ ವಸ್ತುವೂ, ಮತ್ತು ಆತ್ಮಾಧಿಕಾರ ಎಂಬುವ ಗ್ರಂಥದಲ್ಲಿ ಹೇಳಲ್ಪಡತಕ್ಕ ಜೀವನೂ ಕೂಡ ಅಧ್ಯಾತ್ಮನೆನಿಸುತ್ತಾನೆ (೨) ದೇವಾಧಿಕಾರ ಗ್ರಂಥಪ್ರತಿಪಾದ್ಯವಾದುದೆಲ್ಲವೂ ಅಧಿದೈವತವೆನಿಸುತ್ತದೆ. ಹಾಗೆಯೇ ಮಹಾಭೂತಾಧಿಕಾರ ಗ್ರಂಥಪ್ರತಿಪಾದ್ಯವಾದುದು ಪಂಚ ಮಹಾಭೂತವೂ, ಕಾರ್ಯ ಕಾರಣಗಳಿಗೆ ಅಭೇದವಿದ್ದ ಪ್ರಯುಕ್ತ ಮಹಾಭೂತಗಳಿಗೆ ಕಾರಣಗಳಾದ ಅಹಂಕಾರ ತತ್ವಾದಿಗಳೂ, ಮಹಾಭೂತಕಾರ್ಯವಾದ ಭೌತಿಕ ಪದಾರ್ಥವೂ, **ಅಧಿಭೂತವೆನಿಸುತ್ತದೆ**, ಎಂದು ಸ್ಕಾಂದಪುರಾಣದಲ್ಲಿದೆ (೩) ಅಂತಃಕರಣವನ್ನಾರಂಭಿಸಿ ದೇಹಪರ್ಯಂತವಾದುದು ಕೇವಲ ಜೀವನಿಗೆ ಉಪಕಾರಕವಾದುದು **ಅಧ್ಯಾತ್ಮವೆನಿಸುತ್ತದೆ** ದೇಹಸಹಿತರಾದ ಜೀವರೂ ಭೂತಗಳೂ ಯಾವುದೋ ಅವುಗಳಿಗೆ ಉಪಕಾರಕವಾದುದು ಜಡಪ್ರಕೃತಿಪರ್ಯಂತವಾದ ವಸ್ತುವು **ಅಧಿಭೂತವೆನಿಸುತ್ತದೆ**. ಇಂದ್ರಾದಿದೇವತೆಗಳಿಗೆ ಉಪಕಾರವನ್ನು ಮಾಡತಕ್ಕ ಶೇಷನು ಅಥವಾ ಚತುರ್ಮುಖ ಬ್ರಹ್ಮನು **ಅಧಿದೈವತವೆನಿಸುತ್ತಾನೆ**. ॥ ೫ ॥ ॥ ೪ ॥

ಶಾ ॥ ಓಂ ॥ (೧) ಉಕ್ತವ್ಯಾಖ್ಯಾನಪೂರ್ವಕಂ ಬ್ರಹ್ಮಪ್ರಾಪ್ತಿರುಚ್ಯತೇ ॥ (೨) ತದಿತಿ ವಿಶೇಷಣಾದ್ಬ್ರಹ್ಮೇತ್ಯುಕ್ತಮನ್ಯದೇವ ॥ (೩) ಪ್ರಕೃತ್ಯಾದೀನಾಂ ಮಧ್ಯೇ ಯತ್ಕಿಂಚಿತ್ ॥ (೪) ಉಪರಿ ಸಾಧಿಯಜ್ಞಂ ಚೇತಿ ಚಶಬ್ದಾದಧಿಭೂತಾದಿಸಹಿತತ್ವೇನ ವಿಷ್ಣುಜ್ಞಾನಮನ್ಯದೇವೇತಿ ಸಂಶಯಃ । ಕಿಂ ತದ್ಬ್ರಹ್ಮೇತಿ ಪ್ರಶ್ನಕಾರಣಂ ॥ (೫) ಪರಮೋಕ್ಷರೋ(ರಂ) ವಿಷ್ಣುರೇವ ಮುಖ್ಯತ ಇತಿ ಸಿದ್ಧತ್ವಾತ್ । ತಧ್ಯೆವ ಪರಿಹರತಿ ॥೧॥

ಅ ॥ (೧) ಹಿಂದೆ **ತೇ ಬ್ರಹ್ಮ ತದ್ವಿದುಃ** ಎಂದು ಹೇಳಿರುತ್ತಾರೆ ಅದರ ವ್ಯಾಖ್ಯಾನವನ್ನು ಈ ಅಧ್ಯಾಯದಲ್ಲಿ ಮಾಡುತ್ತಾರೆ **ಪ್ರಯಾಣಕಾಲೇಽಪಿ ಚ ಮಾಂ** ಎಂದು ಹೇಳಿದ ವ್ಯಾಖ್ಯಾನಪ್ರಸಂಗದಿಂದ **ಸ ತಂ ಪರಂ ಪುರುಷಮುಪೈತಿ ದಿವ್ಯಂ** ಎಂಬುವುದರಿಂದ ಅಂತ್ಯಕಾಲದಲ್ಲಿ ಸ್ಮರಣ ಮಾಡಿದ್ದಕ್ಕೆ ಫಲವನ್ನೂ, **ಅನನ್ಯಚೇತಾಃ ಸತತಂ** ಇತ್ಯಾದಿಗಳಿಂದ ಮರಣಕಾಲದಲ್ಲಿ ಮಾಡುವ ಸ್ಮರಣೋಪಾಯ ಪ್ರಕಾರವನ್ನೂ, **ಅಗ್ನಿರ್ಜ್ಯೋತಿಃ** ಇತ್ಯಾದಿಗಳಿಂದ ಪರಬ್ರಹ್ಮಪ್ರಾಪ್ತಿ ಮಾರ್ಗವನ್ನೂ ಹೇಳುತ್ತಾರೆ (೨) (ಅರ್ಜುನನು ಜ್ಞಾನಿಯಾಗಿರುವುದರಿಂದ ಬ್ರಹ್ಮ ಎಂದರೆ ಭಗವಂತನೇ ಎಂದು ನಿಶ್ಚಯವಾಗಿಯೂ ತಿಳಿದಿರುತ್ತಾನೆ ಆದಕಾರಣ **ಕಿಂ ತದ್ಬ್ರಹ್ಮ** ಎಂದು ಪ್ರಶ್ನೆ ಮಾಡಿದ್ದು ಹೇಗೆ ಕೂಡುತ್ತದೆ? ಎಂದರೆ-) (ಅರ್ಜುನನು ಜ್ಞಾನಿಯಾಗಿದ್ದಾಗ್ಯೂ ಈ ಪ್ರಶ್ನೆಯು ಕೂಡುತ್ತದೆ) **ತದ್ಬ್ರಹ್ಮ** ಎಂಬುವಲ್ಲಿ ಶ್ರೀಕೃಷ್ಣನು ಪರಬ್ರಹ್ಮನಲ್ಲಿ ಪರೋಕ್ಷವಾಚಕವಾದ **ತತ್** ಎಂಬುವುದನ್ನು ವಿಶೇಷಣ ಕೊಟ್ಟ ಪ್ರಯುಕ್ತ ಇಲ್ಲಿ ಹೇಳಿದ ಬ್ರಹ್ಮನು ಭಗವಂತನಲ್ಲ ಮತ್ತೊಬ್ಬನೇ, ಎಂದು ತೋರುತ್ತದೆ **(ವಾಸುದೇವಾತ್ಮಕಂ ಬ್ರಹ್ಮ** ಇತ್ಯಾದಿ ಪ್ರಮಾಣಗಳಿಂದ ಈ ಬ್ರಹ್ಮನು ಭಗವಂತನೇ, ಎಂದು ತೋರುತ್ತದೆ ಹೀಗೆ ಎರಡು ವಿಧ ಪ್ರಮಾಣಗಳಿಂದ ಸಂಶಯವುಂಟಾದ ಕಾರಣ **ಕಿಂ ತದ್ಬ್ರಹ್ಮ** ಎಂದು ಪ್ರಶ್ನೆಮಾಡಿದ್ದು) (೩) (ಬ್ರಹ್ಮ ಶಬ್ದವು

ಭಗವಂತನಲ್ಲಿ ಮಾತ್ರ ಇರುವುದರಿಂದ **ತತ್** ಎಂದು ವಿಶೇಷಣ ಕೊಟ್ಟರೂ ಬ್ರಹ್ಮನು ಭಗವಂತನಿಂದ ಬೇರೆ ಎಂದು ಪ್ರತೀತಿಯು ಹೇಗೆ ಬರುವುದು? ಎಂದರೆ—) (ಬ್ರಹ್ಮಶಬ್ದಕ್ಕೆ ಪರಮಾತ್ಮನಲ್ಲಿ ಮುಖ್ಯತ್ವ ವಿದ್ದರೂ ಪ್ರಕೃತಿ ವೇದ ಮೊದಲಾದುವುಗಳೂ ಅಮುಖ್ಯವಾಗಿ ಬ್ರಹ್ಮಶಬ್ದದ ಅರ್ಥವಾಗುವುದರಿಂದ **ತತ್** ಎಂದು ವಿಶೇಷಣ ಕೊಟ್ಟರುವುದರಿಂದ ಮುಖ್ಯವಾದ ಅರ್ಥವು ಕೂಡದಿದ್ದರೂ ಅಮುಖ್ಯವಾದ ಅರ್ಥವು ಕೂಡಬಹುದು) ಆದಕಾರಣ ಪ್ರಕೃತಿ ವೇದ ಮೊದಲಾದವುಗಳ ಮಧ್ಯದಲ್ಲಿ ಯಾವುದಾದರೊಂದು ಇಲ್ಲಿ ಬ್ರಹ್ಮಶಬ್ದಾರ್ಥವು ಆಗುವುದು (ಆದಕಾರಣ ಹೀಗೆ ಪ್ರತೀತಿಯು ಯುಕ್ತವೇ) (೪) (**ತತ್** ಎಂಬುವ ವಿಶೇಷಣದಿಂದ ಬ್ರಹ್ಮನು ಭಗವಂತನಿಂದ ಭಿನ್ನನು ಎಂದು ಶಂಕೆಯನ್ನು **ಸಾಧಿಭೂತಾಧಿದೈವಂ ಮಾಂ** ಎಂಬುವ ಮೇಲಿನ ವಾಕ್ಯದಲ್ಲಿ **ಬ್ರಹ್ಮ** ಎಂದು ಹೇಳದೆ **ಮಾಂ** ಎಂದು ಹೇಳಿದ ಕಾರಣ ಶ್ರೀಕೃಷ್ಣನೇ ಪರಿಹರಿಸಿರುತ್ತಾನೆ. ಆದುದರಿಂದ ಬ್ರಹ್ಮನು ಭಗವಂತನಿಂದ ಭಿನ್ನನೆಂಬುವ ಪ್ರತೀತಿಯು ಹೇಗೆ ಬರುವುದು? ಎಂದರೆ-) ಮೇಲೆ **ಸಾಧಿಯಜ್ಞಂ ಚ** ಎಂದು ಚಶಬ್ದದಿಂದ ಅಧಿಭೂತಾದಿಗಳಿಂದ ಕೂಡಿರುವುದರಿಂದ ಶ್ರೀವಿಷ್ಣುವಿನ ಜ್ಞಾನವು ಬ್ರಹ್ಮಜ್ಞಾನದಿಂದ ಬೇರೆಯೇ ಎಂದು ಬರತಕ್ಕ ಸಂಶಯವು **ಕಿಂ ತದ್ಬ್ರಹ್ಮ** ಎಂಬುವ ಪ್ರಶ್ನೆಗ ಕಾರಣವು (ಆಂದರೆ-ಯದ್ಯಪಿ ಈ ಪ್ರತೀತಿಯನ್ನು ಮೇಲಿನ ವಾಕ್ಯದಲ್ಲಯೇ ಪರಿಹರಿಸಿರುವರು ಆದರೂ ಸಂಶಯವು ಬಂದೇ ಬರುವುದು **ಹೇಗೆಂದರೆ** **ಸಾಧಿಯಜ್ಞಂ ಚ** ಎಂಬುವಲ್ಲಿ ಚಶಬ್ದದಿಂದ **ಸಾಧಿಭೂತಾಧಿಯಜ್ಞಂ ಮಾಂ ಚ** ಎಂದು ಹೇಳುವುದರಿಂದ ಅಧಿಭೂತಾದಿಗಳಿಂದ ಕೂಡಿರುವ ಕಾರಣ ಬ್ರಹ್ಮಜ್ಞಾನಕ್ಕಿಂತ ಶ್ರೀವಿಷ್ಣುವಿನ ಜ್ಞಾನವು ಬೇರೆಯೇ ಎಂದು **ತತ್** ಎಂಬುವ ವಿಶೇಷಣದಿಂದಲೇ ತೋರುತ್ತದೆ (೫) **ಸಾಧಿಭೂತಾಧಿದೈವಂ ಮಾಂ** ಎಂದು ಶ್ರೀಕೃಷ್ಣನೇ ಬ್ರಹ್ಮನೆಂದು ಹೇಳಿದ್ರಿಂದ **ಕಿಂ ತದ್ಬ್ರಹ್ಮ** ಎಂಬುವ ಪ್ರಶ್ನೆಗೆ **ಅಹಂ ಬ್ರಹ್ಮ** ಎಂದೇ ಪರಿಹಾರ ಹೇಳಬೇಕಿತ್ತು **ಅಕ್ಷರಂ ಬ್ರಹ್ಮ ಪರಮಂ** ಎಂದು ಹೇಳಿದ್ದು ಹೇಗೆ ಕೂಡುತ್ತದೆ? ಎಂದರೆ—) ಮುಖ್ಯವಾಗಿ ಶ್ರೀವಿಷ್ಣುವೇ ಪರಮಾಕ್ಷರನೆನಿಸುತ್ತಾನೆ ಹೀಗೆ ಪರಮಾಕ್ಷರಶಬ್ದವು ಶ್ರೀವಿಷ್ಣುವಿನಲ್ಲಯೇ ಪ್ರಸಿದ್ಧವಾದ ಕಾರಣ **ಪರಮಾಕ್ಷರಂ ಬ್ರಹ್ಮ** ಎಂದೇ ಪರಿಹರಿಸುತ್ತಾರೆ ॥ ೧ ॥

ಖೀ—ಪರಮಾಕ್ಷರ ಶಬ್ದವು ಶ್ರೀವಿಷ್ಣುವಿನಲ್ಲಿಯೇ ಪ್ರಸಿದ್ಧವಾದ ಕಾರಣ **ಪರಮಾಕ್ಷರಂ ಬ್ರಹ್ಮ** ಎಂದು ಹೇಳಿದ್ರಿಂದ **ಅಹಂ ಬ್ರಹ್ಮ** ಎಂದು ಹೇಳಿದಂತೆಯೇ ಆಯಿತೆಂದಾಗಲಿ, ಆದಾಗ್ಯೂ **ಅಹಂ ಬ್ರಹ್ಮ** ಎಂದು ಸಾಕ್ಷಾತ್ತಾಗಿ ಹೇಳದೆ ಹೀಗೆ ಹೇಳಲು ಕಾರಣವೇನು? ಎಂದರೆ—

ತಾ ॥ (೧) ಅಜ್ಞಾನಾಂ ತದಪಿ ಜ್ಞಾಪಯಿತುಂ ತಥೈವ ಪರಿಹಾರಃ ॥ (೨) ವುನರಪಮಿತಿ ನೋಕ್ತಮಿತ್ಯಾಶಂಕಾಽವ್ಯಕ್ತಂ ವ್ಯಕ್ತಿಮಾವನ್ನಮಿತಿ ವಿಷ್ಣೋವೇವ ಪ್ರಯುಕ್ತತ್ವೇನಾವ್ಯಕ್ತಶಬ್ದೇನಾವ್ಯಕ್ತೋಽಕ್ಷರ ಇತ್ಯುಕ್ತ ಇತಿ ಪರಿಹ್ರಿಯತೇ ॥ (೩) ಯೇ ಚಾಪ್ಯಕ್ಷರಮವ್ಯಕ್ತಮಿತ್ಯತ್ರ ತು ಪೃಥಸ್ಪ್ರಶ್ನಾದುಪಾಸಕಯೋಃ ಫಲತಾರತಮ್ಯಕಥನಾತ್ ಕೂಟಸ್ಥೋಽಕ್ಷರ ಉಚ್ಯತ ಇತ್ಯುಕ್ತಾಕ್ಷರಾದಪಿ ಚೋತ್ತಮ ಇತಿ ವಿಷ್ಣೋರುತ್ತಮತ್ವಕಥನಾಚ್ಚಾನ್ಯದೇವೇತ್ಯವಸೀಯತೇ ॥ ೨ ॥

ಆ ॥ (೧) ಶ್ರೀಕೃಷ್ಣನಿಗೆ ಪರಮಾಕ್ಷರತ್ವವೂ ಕೂಡ ಇದೆ, ಎಂದು ಅಜ್ಞರಿಗೆ ತಿಳಿಸಿಕೊಡುವುದಕ್ಕಾಗಿ ಹಾಗೆಯೇ ಪರಿಹಾರಮಾಡಿದ್ದಾರೆ (೨) (ಯಾರು ಪರಮಾಕ್ಷರನು ಶ್ರೀವಿಷ್ಣುವೆಂದು ತಿಳಿದುಕೊಳ್ಳುವುದಿಲ್ಲವೋ ಅವರಿಗಾಗಿ **ಅಕ್ಷರಂ ಬ್ರಹ್ಮ** ಎಂದೇ ಹೇಳಿರುತ್ತಾರೆ **ಅಹಂ ಬ್ರಹ್ಮ** ಎಂದು ಹೇಳಲಿಲ್ಲ ಆದುದರಿಂದ ಬ್ರಹ್ಮನು ಅಕ್ಷರನೂ ಕೂಡ ಶ್ರೀಪರಮಾತ್ಮನಿಗಿಂತ ಭಿನ್ನನೇ ಎಂಬೀ ಆಶಂಕೆಯೇ ಬರು

ವುದು. ಅಲ್ಲದೆ ಪರಮಾಕ್ಷರನೂ ಬ್ರಹ್ಮನೂ ಕೂಡ ಪರಮಾತ್ಮನೇ ಎಂದು ಜ್ಞಾನವು ಬರುವುದಿಲ್ಲ, ಎಂದರೆ –) ಪುನಃ **ಅಹಂ** ಎಂದು ಹೇಳಲಿಲ್ಲ, ಎಂಬೀ ಆಶಂಕೆಯು **ಅವ್ಯಕ್ತಂ ವ್ಯಕ್ತಿಮಾಪನ್ನಂ** ಎಂದು ಶ್ರೀವಿಷ್ಣುವಿನಲ್ಲಿಯೇ ಪ್ರಯುಕ್ತವಾದ ಅವ್ಯಕ್ತಶಬ್ದದಿಂದ **ಅವ್ಯಕ್ತೋಽಕ್ಷರ ಇತ್ಯುಕ್ತಃ** ಎಂದು ಮೇಲೆ ಅಕ್ಷರನಿಗೆ ಅವ್ಯಕ್ತತ್ವವನ್ನು ಹೇಳಿ ಪರಿಹರಿಸುತ್ತಾರೆ (ಅಂದರೆ—ಈ ಶಂಕೆಯು ಹುಟ್ಟುತ್ತದೆಂಬುವುದು ಸತ್ಯವೇ ಆದರೆ ಆ ಶಂಕೆಯು, **ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಂ** ಎಂದು **ಅವ್ಯಕ್ತ** ಶಬ್ದವು ಶ್ರೀಪರಮಾತ್ಮನಲ್ಲಿ ಪ್ರಯುಕ್ತವಾಗಿರುವುದರಿಂದ, **ಅವ್ಯಕ್ತೋಽಕ್ಷರ ಇತ್ಯುಕ್ತಃ** ಎಂದು ಮೇಲೆ ಅಕ್ಷರನು ಅವ್ಯಕ್ತನೆಂದು ಹೇಳಿದ್ರಿಂದ ಪರಿಹರಿಸಲ್ಪಡುತ್ತದೆ ಆದಕಾರಣ ಬ್ರಹ್ಮನು ಪರಮಾಕ್ಷರನೆಂದು ಪರಿಹಾರ ಮಾಡುವಾಗ ಅಹಂ ಬ್ರಹ್ಮ ಎಂದು ಹೇಳುವುದಕ್ಕಿಂತಲೂ ಹೆಚ್ಚು ವಿಶೇಷಾರ್ಥವೇ ಸಿಗುವುದರಿಂದ ಹಾಗೆ ಪರಿಹಾರ ಮಾಡಿದ್ದೇ ಯುಕ್ತವು. (ಅಂದರೆ **ಅಹಂ ಬ್ರಹ್ಮ** ಎಂದು ಹೇಳಿದರೆ ಶ್ರೀಕೃಷ್ಣನಲ್ಲಿ **ಬ್ರಹ್ಮ** ಎಂಬ ಶಬ್ದವಿದೆ, ಎಂದು ಇಷ್ಟುಮಾತ್ರ ಅರ್ಥವು ಸಿಗುತ್ತಿತ್ತು **ಅಕ್ಷರಂ ಬ್ರಹ್ಮ** ಎಂದು ಹೇಳಿದರೆ—ಶ್ರೀಕೃಷ್ಣನಲ್ಲಿ **ಅಕ್ಷರಶಬ್ದವೂ ಬ್ರಹ್ಮ**ಶಬ್ದವೂ ಎರಡೂ ಇದೆ, ಎಂದು ಸಿಗುವುದರಿಂದ ಅಧಿಕಲಾಭವಾಯಿತು) (೩) (ಅಕ್ಷರಶಬ್ದವು ಶ್ರೀವಿಷ್ಣುವಿನಲ್ಲಿಯೇ ಮುಖ್ಯವೆಂದಾದರೆ–**ಯೇ ಚಾಪ್ಯಕ್ಷರಮವ್ಯಕ್ತಂ** ಎಂಬುವಲ್ಲಿಯೂ **ಕೂಟಸ್ಥೋಽಕ್ಷರ ಉಚ್ಯತೇ** ಎಂಬುವಲ್ಲಿಯೂ ಅಕ್ಷರಶಬ್ದವಾಚ್ಯನು ಶ್ರೀವಿಷ್ಣುವೇ ಆಗಬೇಕಾಗುವುದು ಎಂದರೆ—) **ಯೇ ಚಾಪ್ಯಕ್ಷರಮವ್ಯಕ್ತಂ** ಎಂಬುವಲ್ಲಿ ಪ್ರತ್ಯೇಕ ಪ್ರಶ್ನೆ **ಮಾಡಿದ್ರಿಂದಲೂ** ಉಪಾಸಕರಿಗೆ ಫಲದಲ್ಲಿ ತಾರತಮ್ಯವನ್ನು ಹೇಳಿದ್ರಿಂದಲೂ **ಕೂಟಸ್ಥೋಽಕ್ಷರ ಉಚ್ಯತೇ** ಎಂದು ಹೇಳಿ **ಅಹಂ ಅಕ್ಷರಾದಪಿ ಚೋತ್ತಮಃ** ಎಂದು ಶ್ರೀವಿಷ್ಣುವಿಗೆ ಅಕ್ಷರನಿಂದ ಉತ್ತಮತ್ವವನ್ನು ಹೇಳಿದ್ರಿಂದಲೂ ಆಲ್ಲಿ ಹೇಳಿದ ಅಕ್ಷರಳು ಶ್ರೀವಿಷ್ಣುವಿಗಿಂತ ಭಿನ್ನವಾದ ಲಕ್ಷ್ಮೀದೇವಿಯೇ ಎಂದು ನಿಶ್ಚಿತವಾಗುತ್ತದೆ (ಅಂದರೆ—ಅಕ್ಷರಶಬ್ದವು ಶ್ರೀವಿಷ್ಣುವಿನಲ್ಲಿಯೇ ಮುಖ್ಯವಾದುದಾಗೂ **ಯೇ ಭಕ್ತಾಸ್ತ್ವಾಂ ಪರ್ಯುಪಾಸತೇ ಯೇ ಚಾಪ್ಯಕ್ಷರಂ** ಎಂದು ಶ್ರೀಕೃಷ್ಣನಿಗೂ ಅಕ್ಷರನಿಗೂ ಭೇದವನ್ನು ಹೇಳಿದ್ರಿಂದ ಅವರನ್ನು ಉಪಾಸನೆಮಾಡುವವರಿಗೆ ತಾರತಮ್ಯವನ್ನು ಪ್ರಶ್ನೆ ಮಾಡಿದ್ರಿಂದಲೂ **ಯೇ ತ್ವಕ್ಷರಮನಿರ್ದೇಶ್ಯಂ, ಯೇ ತು ಸರ್ವಾಣಿ ಕರ್ಮಾಣಿ** ಇತ್ಯಾದಿಗಳಿಂದ ಅಕ್ಷರನನ್ನು ಪಾಸನೆ ಮಾಡಿದವರಿಗೂ ಶ್ರೀಕೃಷ್ಣನನ್ನು ಪಾಸನೆ ಮಾಡಿದವರಿಗೂ ಫಲತಾರತಮ್ಯವನ್ನು ಹೇಳಿದ್ರಿಂದಲೂ **ಯೇ ಚಾಪ್ಯಕ್ಷರಮವ್ಯಕ್ತಂ** ಎಂಬುವಲ್ಲಿ ಅಕ್ಷರಶಬ್ದವಾಚ್ಯವಾದುದು ಶ್ರೀವಿಷ್ಣುವಿನಿಂದ ಭಿನ್ನವೇ, ಎಂದೇ ನಿಶ್ಚಿತವಾಗುತ್ತದೆ ಹಾಗೆಯೇ **ಕೂಟಸ್ಥೋಽಕ್ಷರ ಉಚ್ಯತೇ** ಎಂಬುವಲ್ಲಿಯೂ ಅಕ್ಷರನು ಶ್ರೀವಿಷ್ಣುವಿನಿಂದ ಭಿನ್ನನೇ ಎಂದೇ ನಿಶ್ಚಯವಾಗುತ್ತದೆ **ಅಹಮಕ್ಷರಾದಪಿ ಚೋತ್ತಮಃ** ಎಂದು ಶ್ರೀವಿಷ್ಣುವಿಗೆ ಅಕ್ಷರಳಿಂದ ಉತ್ತಮತ್ವವನ್ನು ಹೇಳಿದ್ರಿಂದ ಮುಖ್ಯವಾದ ಅರ್ಥವು ಕೂಡದಿರುವಾಗ ಅಮುಖ್ಯವಾದ ಲಕ್ಷ್ಯಾರ್ಥವಿರೂಪ ಅರ್ಥವನ್ನು ಅಂಗೀಕರಿಸುವುದು ನ್ಯಾಯವಾಗಿದೆ ಪ್ರಕೃತದಲ್ಲಿ ಬಾಧಕವಿಲ್ಲದಿರುವುದರಿಂದ ಅಕ್ಷರಶಬ್ದಕ್ಕೆ ಶ್ರೀವಿಷ್ಣುವೆಂದೇ ಅರ್ಥ ಹೇಳಬೇಕು ಪ್ರಕೃತದಲ್ಲಿ ಲಕ್ಷ್ಯಾರ್ಥವಿರೂಪವಾದ ಅರ್ಥವಲ್ಲ) ॥ ೨ ॥

ಪೀ—ಅಧಿಯಜ್ಞನಂತೆ ಬ್ರಹ್ಮನೂ ವಿಷ್ಣುವಾದರೆ **ಬ್ರಹ್ಮಾಹಮೇವ** ಎಂದು ಹೇಳದೆ **ಅಧಿಯಜ್ಞೋಽಹಮೇವ** ಎಂದು ವಿತಕ್ಕೆ ಹೇಳುವುದು ಕಾರಣವಿಶೇಷವಿಲ್ಲದೆ ಹೀಗೆ ಹೇಳಲಾರರಷ್ಟೆ? ಆದಕಾರಣ ಅಧಿಯಜ್ಞನೇ ಶ್ರೀವಿಷ್ಣುವು ಬ್ರಹ್ಮನು ವಿಷ್ಣುವಲ್ಲ ಎಂದರೆ –

ತಾ॥ (೧) ಅಧಿಯಜ್ಞೋಽಹಮೇವೇತಿ ಸಾಧಿಯಜ್ಞಮಿತ್ಯುಕ್ತ್ಯಾ ಪ್ರಾಪ್ತಭೇದನಿವೃತ್ಯರ್ಥಂ॥
(೨) ತಸ್ಯೈವ ಸರ್ವಪ್ರಾಣಿದೇಹಸ್ಥಿತರೂಪಾಂತರಾಪೇಕ್ಷಯಾ ಸಹಿತತ್ವಂ ಯುಜ್ಯತೇ ॥ (೩) ಪ್ರಾಣಿನಾಂ ದೇಹಗೋ ವಿಷ್ಣುರಧಿಯಜ್ಞ ಇತೀರಿತಃ । ಸ ಏವ ವ್ಯಾಪ್ತ-

ರೂಪೇಣ ಬ್ರಹ್ಮೇತಿ ಪರಿಕೀರ್ತ್ಯತೇ । ತೈಸ್ತೈರಧಿಕಯಾಜ್ಯತ್ವಾದ್ಬೃಂಹಿತತ್ವಾಚ್ಚ ಹೇತುತಃ । ಅಧ್ಯಾತ್ಮಂ ತತ್ಸ್ವಭಾವೋ ಯದಧಿಕಃ ಪರಮಾತ್ಮಗಃ । ಪುಂಸಾಂ ಸ ಜಡಭಾವಾನಾಂ ಸರ್ಗಃ ಕರ್ಮ ಹರೇಃ ಸ್ಮೃತಂ । ಭೂತಾಧಿಕತ್ವತೋ ಜೀವಾ ಅಧಿಭೂತಮಿತೀರಿತಾಃ । ಅಧಿಕೋ ದೈವತಂ ವಿಷ್ಣುರೇವ ಯಸ್ಯಾಸ್ತು ಸಾ ರಮಾ । ಪುರುಪ್ರಾಣಾಽಧಿದೈವಾಖ್ಯಾ ತ್ವಿತಿ ಜ್ಞೇಯಮಿದಂ ನರೈರಿತಿ ತತ್ತ್ವವಿವೇಕೇ ॥ (೪) ಕಥಂರೂಪೋಽಧಿಯಜ್ಞ ಇತಿ ಪ್ರಶ್ನಸ್ತ್ವಹಮೇವೇತ್ಯುಕ್ತತ್ವಾತ್ತಲ್ಲಕ್ಷಣೋಕ್ತ್ಯೈವ ಪರಿಹೃತಃ ॥ ೩ ॥

॥ ೧,೨,೩,೪ ॥

ಅ ॥ (೧) **ಸಾಧಿಯಜ್ಞಂ** ಎಂದು ಹೇಳಿದ್ರಿಂದ ಪ್ರಾಪ್ತವಾದ ಭೇದವು ಇಲ್ಲವೆಂದು ತೋರಿಸುವುದ ಕ್ಕಾಗಿ **ಅಧಿಯಜ್ಞಃ ಅಹಮೇವ** ಎಂದು ಹೇಳಿದ್ದು (ಅಂದರೆ ಬ್ರಹ್ಮ ಅಧಿಯಜ್ಞರು ಇಬ್ಬರೂ ಪರ ಬ್ರಹ್ಮರಾದಾಗ್ಯೂ **ಬ್ರಹ್ಮ ಅಹಮೇವ** ಎಂದು ಹೇಳದೆ **ಅಧಿಯಜ್ಞಃ ಅಹಮೇವ** ಎಂದು ಹೇಳಿದ್ದು **ಕೂಡುತ್ತದೆ ಸಾಧಿಯಜ್ಞಂ ಮಾಂ** ಅಧಿಯಜ್ಞನಿಂದ ಕೂಡಿದ ನನ್ನನ್ನು ಎಂದು ಶ್ರೀಕೃಷ್ಣನು ಹೇಳಿ ದ್ರಿಂದ ಅಧಿಯಜ್ಞನು ಶ್ರೀಕೃಷ್ಣನಿಂದ ಬೇರೆ ಎಂದು ಬರುವ ಆಶಂಕೆಯನ್ನು ಪರಿಹರಿಸುವುದಕ್ಕಾಗಿ **ಅಹಮೇವ** ಅಧಿಯಜ್ಞನು ನಾನೇ ಎಂದು ಹೇಳಿದ್ದು) (೨) (ಪರಮಾತ್ಮನೇ ಅಧಿಯಜ್ಞನೆಂದಾದರೆ ಸಾಧಿಯಜ್ಞಂ=ಅಧಿಯಜ್ಞನಿಂದ ಕೂಡಿದ, ಶ್ರೀಕೃಷ್ಣನನ್ನು ಎಂಬುದು ಹೇಗೆ ಕೂಡುತ್ತದೆ? ಎಂದರೆ-) ಶ್ರೀ ಪರಮಾತ್ಮನೇ ಸಮಸ್ತ ಪ್ರಾಣಿಗಳ ದೇಹಗಳಲ್ಲಿರತಕ್ಕ ರೂಪಾಂತರದಿಂದ ಕೂಡಿರುವುದರಿಂದ ಅಧಿಯಜ್ಞನಿಂದ ಸಹಿತತ್ವವು ಕೂಡುತ್ತದೆ (ಅಂದರೆ ಪರಮಾತ್ಮನೇ ಅಧಿಯಜ್ಞನಾದಾಗ್ಯೂ, ಅಧಿಯಜ್ಞನು ಸಮಸ್ತ ಪ್ರಾಣಿಗಳ ದೇಹದಲ್ಲಿರತಕ್ಕ ರೂಪಾಂತರವಾದುದರಿಂದ ಪರಮಾತ್ಮನು ಅಧಿಯಜ್ಞನಿಂದ ಕೂಡಿದ್ದಾನೆಂಬುವುದು ಯಕ್ತವಾಗುತ್ತದೆ) (೩) (ಸ್ಮೃತಿಯಿಂದಲೇ ಆಕ್ಷರಂ ಬ್ರಹ್ಮ ಪರಮಂ ಇತ್ಯಾದಿ ೩ ಳ ಶ್ಲೋಕಗಳ ಅರ್ಧವನ್ನು ಹೇಳುತ್ತಾರೆ—) ಪ್ರಾಣಿಗಳ ದೇಹದಲ್ಲಿರತಕ್ಕ ಶ್ರೀವಿಷ್ಣುವು **ಅಧಿಯಜ್ಞ** ನೆನಿಸುತ್ತಾನೆ ಶ್ರೀಪರಮಾತ್ಮನೇ ಸರ್ವ ಜಗತ್ತಿನಲ್ಲಿ ವ್ಯಾಪ್ತವಾದ ರೂಪದಿಂದ **ಬ್ರಹ್ಮ** ಎನಿಸಿಕೊಳ್ಳುತ್ತಾನೆ ಆವಾವ ಸರ್ವ ಸಜ್ಜನರಿಂದ ಹೆಚ್ಚು ಹೋಮಿಸಲ್ಪಡುವುದರಿಂದ **ಅಧಿಯಜ್ಞಃ** ಎನಿಸಿ ಕೊಳ್ಳುತ್ತಾನೆ ಸರ್ವಗುಣ ಪರಿಪೂರ್ಣನಾದುದರಿಂದ ಬ್ರಹ್ಮ ಎನಿಸಿಕೊಳ್ಳುತ್ತಾನೆ ಪರಮಾತ್ಮನಲ್ಲಿರ ತಕ್ಕ ಸರ್ವ ಸ್ವತಂತ್ರ್ಯಾದಿರೂಪವಾದ ಸ್ವಭಾವವು ಅಧಿಕವಾಗಿರುವ ಕಾರಣ ಅಧ್ಯಾತ್ಮವೆನಿಸುತ್ತದೆ ಜಡ ಪದಾರ್ಥಗಳಿಂದ ಕೂಡಿರುವ ಮನುಷ್ಯರನ್ನು ಸೃಷ್ಟಿಮಾಡುವ ಶ್ರೀಪರಮಾತ್ಮನ ಸಂಬಂಧಿಯಾದ ಸೃಷ್ಟಿ ರೂಪ ವ್ಯಾಪಾರವು **ಕರ್ಮ**ಎನಿಸುತ್ತದೆ ಸೃಧಿವೀ ಮೊದಲಾದ ಪಂಚಭೂತಗಳಿಂದ ಜೀವರು ಶ್ರೇಷ್ಠ ರಾಗಿರುವುದರಿಂದ **ಅಧಿಭೂತ**ರೆನಿಸುತ್ತಾರೆ **ಲಕ್ಷ್ಮೀದೇವಿಗಿಂತ ವಿಷ್ಣುವ್ಯಧಿದೇವತೆಯೇ** ಶ್ರೇಷ್ಠವಾಗಿ ರುವ ಕಾರಣ ಆ ಲಕ್ಷ್ಮೀದೇವಿಯು **ಪುರುಪ್ರಾಣಾ, ಅಧಿದೈವಾ** ಎನಿಸಿಕೊಳ್ಳುತ್ತಾಳೆ ಹೀಗೆ ಈ ಪ್ರಮೇ ಯವನ್ನು ಮನುಷ್ಯರು ತಿಳಿಯಬೇಕು, ಎಂದು ತತ್ವವಿವೇಕವೆಂಬುವ ಗ್ರಂಥದಲ್ಲಿದೆ (೪) (**ಅಧಿಯಜ್ಞಃ ಕಥಂ ಕೋಽತ್ರ** ಎಂಬುವಲ್ಲಿ **ಅಧಿಯಜ್ಞಃ ಕಥಂ** ಅಧಿಯಜ್ಞನು ಎಂತಹ ರೂಪವುಳ್ಳವನೆಂಬುವ ಪ್ರಶ್ನೆಯು ಏಕೆ ಪರಿಹೃತವಾಗಿಲ್ಲವೆಂದರೆ—) ಅಧಿಯಜ್ಞನು ಎಂತಹ ರೂಪವುಳ್ಳವನೆಂಬುವ ಪ್ರಶ್ನೆಯು **ಅಹಮೇವ** ಎಂದು ಹೇಳಿ **ಕವಿಂ ಪುರಾಣಂ** ಎಂಬುವಲ್ಲಿ ಶ್ರೀಪರಮಾತ್ಮನಿಗೆ ಲಕ್ಷಣವನ್ನು ಹೇಳಿದ್ರಿಂದಲೇ ಪರಿಹರಿಸಲ್ಪಟ್ಟದೆ ॥ ೩ ॥

॥ ೧, ೨, ೩, ೪ ॥

ಗೀ॥ ಅಂತಕಾಲೇ ಚ ಮಾಮೇವ ಸ್ಮರನ್ಮುಕ್ತ್ವಾ ಕಲೇವರಂ ।
ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ ॥ ೫ ॥

ಅ ॥ ಯಃ=ಯಾವಾತನು, ಅಂತಕಾಲೇ ಚ=ಮರಣಕಾಲದಲ್ಲಿಯೂ ಕೂಡ, ಮಾಮೇವ=ನನ್ನನ್ನೇ, (ಶ್ರೀಕೃಷ್ಣನನ್ನೇ) ಸ್ಮರನ್=ಸ್ಮರಿಸುವವನಾಗಿ, ಕಲೇವರಂ=ದೇಹವನ್ನು, ತ್ಯಕ್ತ್ವಾ=ಬಿಟ್ಟು, ಪ್ರಯಾತಿ=ಹೊರಟುಹೋಗುತ್ತಾನೋ, ಸಃ=ಆತನು, ಮದ್ಭಾವಂ=ನನ್ನಲ್ಲಿ ನಿರ್ದುಃಖ ನಿರತಿಶಯ ಆನಂದಾನುಭವರೂಪವಾದ ಸ್ಥಿತಿಯನ್ನು, (ಅಂದರೆ ಮೋಕ್ಷವನ್ನು) ಯಾತಿ=ಹೊಂದುತ್ತಾನೆ ಅತ್ರ=ಈ ವಿಷಯದಲ್ಲಿ, ಸಂಶಯಃ=ಸಂದೇಹವು, ನಾಸ್ತಿ=ಇಲ್ಲ

ವಿ ॥ ನಿರ್ದುಃಖ ನಿರತಿಶಯಾನಂದಾಭಿವ್ಯಕ್ತಿರೂಪವಾದ ಮೋಕ್ಷವನ್ನು ಹೊಂದುವುದಕ್ಕಾಗಿ ಮರಣಕಾಲದಲ್ಲಿ ನನ್ನನ್ನು (ಶ್ರೀಕೃಷ್ಣನನ್ನು) ಸ್ಮರಿಸುತ್ತಾ ಇರಬೇಕು ॥ ೫ ॥

ಹೀ—ಮದ್ಭಾವಂ ಎಂಬುವುದಕ್ಕೆ ನನ್ನ ಸ್ವರೂಪವನ್ನು ಎಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ಭಾ ॥ (೧) ಮದ್ಭಾವಂ ಮಯಿ ಸತ್ತಾಂ । ನಿರ್ದುಃಖನಿರತಿಶಯಾನಂದಾತ್ಮಿಕಾಂ ॥ (೨) ತಚ್ಚೋಕ್ತಂ । ಮುಕ್ತಾನಾಂ ಚ ಗತಿರ್ಬ್ರಹ್ಮನ್ ಕ್ಷೇತ್ರಜ್ಞ ಇತಿ ಕಲ್ಪಿತ ಇತಿ ಮೋಕ್ಷಧರ್ಮೇ ॥ ೫ ॥

ಅ ॥ (೧) ಮದ್ಭಾವಂ=ನನ್ನಲ್ಲಿ ನಿರ್ದುಃಖ ನಿರತಿಶಯಾನಂದರೂಪವಾದ ಸ್ಥಿತಿಯನ್ನು (೨) ಈ ವಿಷಯವು ಪ್ರಮಾಣದಲ್ಲಿ ಉಕ್ತವಾಗಿದೆ ಎಲೋ ಬ್ರಹ್ಮನೇ ಮುಕ್ತರಿಗೆ ಶ್ರೀಪರಮಾತ್ಮನೇ ಆಶ್ರಯನೆಂದು ಸಮರ್ಥಿಸಲ್ಪಟ್ಟಿದೆ, ಎಂದು ಮೋಕ್ಷಧರ್ಮದಲ್ಲಿದೆ. ॥ ೫ ॥

ತಾ ॥ (೧) ಮದ್ಭಾವಂ ಮಯಿ ಭಾವಂ ॥ (೨) ಸದಾ ತದ್ಭಾವಭಾವಿತಾನಾಮೇವ ಸ್ಮರಂಸ್ಯಜತೀತಿ ಕೇವಲಂ ತತ್ಕಾಲಸ್ಮರಣಂ ಭವತಿ ॥ (೩) ನ ಚೇತ್ಸ್ಮರತೋಽಪಿ ಸಮಾಧಿಷ್ಠಸ್ಖಲನವತ್ಪೂರ್ವಕರ್ಮಾನುಸಾರಿಸ್ಮೃತ್ಯಾ ತತ್ಪಾಪ್ತಿರೇವ ಭವತಿ ॥ (೪) ಅಪರೋಕ್ಷಜ್ಞಾನಾಂ ಪ್ರಾರಬ್ಧಕರ್ಮಾವಸಾನೇ ಸ್ಮರಂಸ್ಯಜತೀತಿ ಭವತ್ಯೇವ ॥ ೧ ॥

ಅ ॥ (೧) ಮದ್ಭಾವಂ=ವೈಕುಂಠಾದಿ ಸ್ಥಾನವಿಶೇಷಗಳಲ್ಲಿ ನನ್ನ ಆಶ್ರಯದಿಂದಲೇ ಇರೋಣವನ್ನು (ಮೋಕ್ಷವನ್ನು) (ಪರಕೀಯರು ಹೇಳುವಂತೆ ಐಕ್ಯವೆಂಬುವ ಅರ್ಥವನ್ನು ಇಟ್ಟುಕೊಂಡರೆ ಅಂತ್ಯಕಾಲದಲ್ಲಿ ಯಾವ ಪದಾರ್ಥವನ್ನು ಸ್ಮರಿಸುತ್ತಾರೋ, ಆವಾವ ಪದಾರ್ಥವನ್ನು ಹೊಂದುತ್ತಾರೆಂದು ಹೇಳುವ ತಂತನೋನೇತಿ ಎಂಬುವ ವಾಕ್ಯದಿಂದ ವಿರೋಧವು) (ಅಂತ್ಯಕಾಲದಲ್ಲಿ ಶ್ರೀಪರಮಾತ್ಮನ ಸ್ಮರಣದಿಂದಲೇ ಮೋಕ್ಷವು ಸಿಗುವುದರಿಂದ ಸದಾ ಶ್ರೀಪರಮಾತ್ಮನಲ್ಲಿ ಮನಸ್ಸನ್ನು ಇಡಬೇಕೆಂಬುವದು ಏತಕ್ಕೆಂದರೆ—) ಶ್ರೀಪರಮಾತ್ಮನನ್ನು ಸ್ಮರಿಸಿಕೊಂಡು ಶರೀರವನ್ನು ಬಿಡುತ್ತಾನೆಂದು ಹೇಳಿದ ಸಾಕ್ಷಾತ್ ಅಂತ್ಯಕಾಲ ಸ್ಮರಣವು ಸರ್ವದಾ ಶ್ರೀಪರಮಾತ್ಮನಲ್ಲಿ ಮನಸ್ಸನ್ನು ಇಟ್ಟು ಧ್ಯಾನಿಸುವವರಿಗೇನೇ ಉಂಟಾಗುತ್ತದೆ (ಸರ್ವದಾ ಧ್ಯಾನಿಸಿಕೊಂಡು ಇಲ್ಲದವರಿಗೆ ಅಂತ್ಯಕಾಲದಲ್ಲಿ ಶ್ರೀಹರಿಯ ಸ್ಮರಣೆಯುಂಟಾಗಲಾರದು ಏವಂಚ ಮೋಕ್ಷಪ್ರಾಪ್ತಿಗೆ ಕಾರಣವಾದ ಅಂತ್ಯಕಾಲ ಸ್ಮರಣಕ್ಕಾಗಿಯೇ ಸರ್ವದಾ ಶ್ರೀಪರಮಾತ್ಮನಲ್ಲಿ ಮನಸ್ಸನ್ನು ಇಡಬೇಕೆಂದು ಹೇಳಿದ್ದು) (೩) (ಹಾಗಾದರೆ ಅಂತ್ಯಕಾಲದಲ್ಲಿಯೇ ಮಹಾಪ್ರಯತ್ನದಿಂದ ಶ್ರೀಪರಮಾತ್ಮನ ಸ್ಮರಣೆಯನ್ನು ಮಾಡಲು ಶಕ್ಯವಾಗುವುದರಿಂದ ಸರ್ವದಾ ಶ್ರೀಪರಮಾತ್ಮನಲ್ಲಿ ಮನಸ್ಸನ್ನು ಇಡಬೇಕೆಂಬುವುದು ಏತಕ್ಕೆಂದರೆ—) ಸರ್ವದಾ ಶ್ರೀಪರಮಾತ್ಮನಲ್ಲಿ ಮನಸ್ಸನ್ನು

ಇಡದಿದ್ದರೆ ಮಹಾಪ್ರಯತ್ನದಿಂದ ಧ್ಯಾನಿಸುವವನಿಗೂ ಕೂಡ ಪ್ರಾರಬ್ಧಕರ್ಮವಶದಿಂದ ಧ್ಯಾನವು ಕೆಟ್ಟು ಹೋಗುವಂತೆ ಮಹಾಪ್ರಯತ್ನದಿಂದ ಸ್ಮರಣೆಮಾಡುವವನಿಗೂ ಪ್ರಾರಬ್ಧಕರ್ಮವಶದಿಂದ ಬೇರೆ ವಿಷಯದಲ್ಲಿಯೇ ಸ್ಮರಣೆಯು ಬಂದು ಅವುಗಳ ಪ್ರಾಪ್ತಿಯೇ ಆಗುತ್ತದೆ (ಅಂತ್ಯಕಾಲದಲ್ಲಿ ಶ್ರೀಪರಮಾತ್ಮನ ಸ್ಮರಣೆಯೇ ಬರುವುದಕ್ಕಾಗಿ ಸದಾ ಶ್ರೀಪರಮಾತ್ಮನಲ್ಲಿಯೇ ಮನಸ್ಸನ್ನು ಇಡಬೇಕು) (೪) (ಪ್ರಾರಬ್ಧಕರ್ಮಾನುಸಾರವಾಗಿ ಅಂತ್ಯಕಾಲದಲ್ಲಿ ಪರಬ್ರಹ್ಮನ ಸ್ಮರಣೆಯು ಬಾರದೆ ಹೋದರೆ ಜ್ಞಾನಿಗಳಿಗೂ ಪ್ರಾರಬ್ಧಕರ್ಮವು ಇದ್ದುದರಿಂದ ಅಂತ್ಯಕಾಲದಲ್ಲಿ ಪರಬ್ರಹ್ಮನ ಸ್ಮರಣೆಯು ಬಾರದಿರುವುದರಿಂದ ಮೋಕ್ಷವು ಸಿಗದೆ ಹೋಗುವುದು ಎಂದರೆ—) ಅಪರೋಕ್ಷಜ್ಞಾನಿಗಳಿಗೆ ಪ್ರಾರಬ್ಧಕರ್ಮವು ಅವಸಾನವಾಗೋಣ **ಸ್ಮರನ್ ತ್ಯಜತಿ** ಎಂದು ಹೇಳಿದ ಸಾಕ್ಷಾತ್ ಅಂತ್ಯಕಾಲಸ್ಮರಣವು ನಿಶ್ಚಯವಾಗಿಯೂ ಬರುತ್ತದೆ ಆದಕಾರಣ ಮೋಕ್ಷವು ಲಭಿಸುವುದು (ಅಂದರೆ ಅಪರೋಕ್ಷಜ್ಞಾನಿಗೆ ಜ್ಞಾನಸಾಮರ್ಥ್ಯದಿಂದ ಅಪ್ರಾರಬ್ಧವಾದ ಪೂರ್ವಕರ್ಮಕ್ಕೆ ನಾಶವು ಉತ್ತರಕರ್ಮಕ್ಕೆ ಸಂಬಂಧವಿಲ್ಲವೆಂದಾಗುವುದು ಉಳಿದ ಪ್ರಾರಬ್ಧಕರ್ಮಗಳು ಅಲ್ಪಗಳಾಗಿರುವುದರಿಂದ ಅವುಗಳನ್ನು ಭೋಗಿಸಿ ಅವುಗಳಿಗೆ ಅವಸಾನವು ಬರುವುದು) ॥ ೧ ॥

ಪೀ - ಹೀಗೆ ಅರ್ಥ ಹೇಳಲಿಕ್ಕೆ ಶ್ರೀಕೃಷ್ಣನ ವಾಕ್ಯಸಮ್ಮತಿಯಿದೆ ಎನ್ನುತ್ತಾರೆ—

ತಾ ॥ (೧) ಪ್ರಯಾಣಕಾಲೇಽಪಿ ಚ ಮಾಂ ತೇ ವಿದುರಿತ್ಯುಕ್ತತ್ವಾತ್ ॥ (೨) ಯುಕ್ತಚೇತಸ ಇತಿ ವಿಶೇಷಣಾನ್ನಿತ್ಯಂ ಸ್ಮರತಾಮೇವಾಪರೋಕ್ಷಜ್ಞಾನಂ ಜಾಯತೇ ॥ (೩) ಭಕ್ತ್ಯಾ ಜ್ಞಾನಾನ್ನಿಷಿದ್ಧಾನಾಂ ತ್ಯಾಗಾನ್ನಿತ್ಯಂ (ತ್ಯ)ಹರಿಸ್ಮೃತೇಃ । ಅರಾಗಾದ್ವಿಹಿತಾತ್ಯಾಗಾದಿತ್ಯೇತೈರೇವ ಸಂಯುತೈಃ । ಅಪರೋಕ್ಷದರ್ಶನಂ ವಿಷ್ಣೋರ್ಜಾಯತೇ ನಾನ್ಯಥಾ ಕ್ವಚಿದಿತಿ ಸತ್ತತ್ತ್ವೇ ॥ ೨ ॥ ॥ ೫ ॥

ಅ ॥ (೧) ಮರಣಕಾಲದಲ್ಲಿಯೂ ಅವರು ನನ್ನನ್ನು ತಿಳಿಯುತ್ತಾರೆ ಎಂದು ಹೇಳಿರುತ್ತಾರೆ (೨) (ಹೀಗಾದರೆ ಅಂತ್ಯಕಾಲದ ಸ್ಮರಣೆಗೆ ಪ್ರಾರಬ್ಧಕರ್ಮಾವಸಾನವೇ ಕಾರಣವು ಪ್ರಾರಬ್ಧಕರ್ಮಾವಸಾನಕ್ಕೆ ಅಪರೋಕ್ಷಜ್ಞಾನವು ಕಾರಣವು ತಥಾಚ ಸದಾ ಅವನಲ್ಲಿ ಮನಸ್ಸನ್ನು ಇಡಬೇಕೆಂಬುವುದು ಏತಕ್ಕೆ ಎಂದರೆ -) **ಯುಕ್ತಚೇತಸಃ** ಎಂದು ವಿಶೇಷಣ ಕೊಟ್ಟ ಸ್ರಯುಕ್ತ ನಿತ್ಯದಲ್ಲಿಯೂ ಸ್ಮರಣ ಮಾಡುವವರಿಗೇನೇ ಅಪರೋಕ್ಷಜ್ಞಾನ ಉಂಟಾಗುತ್ತದೆ (ಅಂದರೆ ಸಾಕ್ಷಾತ್ ಅಂತ್ಯಕಾಲ ಸ್ಮರಣೆಗೆ ಪ್ರಾರಬ್ಧಕರ್ಮಾವಸಾನವೇ ಕಾರಣವು ಅದಕ್ಕೆ ಕಾರಣವಾಗಿ ಅಪರೋಕ್ಷಜ್ಞಾನವು ಬೇಕೆಂದನಂತ್ಯವೇ ಆದರೂ ಸದಾ ಶ್ರೀಹರಿಯಲ್ಲಿ ಮನಸ್ಸನ್ನು ಇಟ್ಟು ಧ್ಯಾನಿಸುವುದು ಅಪರೋಕ್ಷಜ್ಞಾನಕ್ಕೆ ಸಾಧನವಾಗಿರುವುದರಿಂದ ಅಂತ್ಯಕಾಲದಲ್ಲಿ ಶ್ರೀಹರಿಯ ಸ್ಮರಣೆಗೂ ಕಾರಣವಾಗುವುದು) (೩) (ನಿತ್ಯದಲ್ಲಿಯೂ ಹರಿಸ್ಮರಣೆಯು ಭಕ್ತ್ಯಾದಿಗಳಿಂದ ಯುಕ್ತವಾದರೇನೇ ಅಪರೋಕ್ಷಜ್ಞಾನಕ್ಕೆ ಸಾಧನವಾಗುತ್ತದೆ ಭಕ್ತ್ಯಾದಿಗಳು ಇಲ್ಲವಾದರೆ ಸಾಧನವಾಗಲಾರದೆನ್ನುತ್ತಾರೆ-) ಭಕ್ತಿಯಿಂದಲೂ ಜ್ಞಾನದಿಂದಲೂ ನಿಷಿದ್ಧಪದಾರ್ಥಗಳನ್ನು ಬಿಡೋಣದರಿಂದಲೂ ನಿತ್ಯದಲ್ಲಿಯೂ ಶ್ರೀಹರಿಯ ಸ್ಮರಣೆಯಿಂದಲೂ ವಿಷಯೇಚ್ಛೆಯು ಇಲ್ಲದಿರುವುದರಿಂದಲೂ ಶಾಸ್ತ್ರದಲ್ಲಿ ವಿಹಿತಗಳಾದ ನಿತ್ಯ ನೈಮಿತ್ತಿಕ ಕರ್ಮಗಳನ್ನು ಬಿಡದಿರೋಣದರಿಂದಲೂ ಇವುಗಳೆಲ್ಲ ಒಟ್ಟಿಗೆ ಕೂಡಿದರೇನೇ ಶ್ರೀಪರಮಾತ್ಮನ ಅಪರೋಕ್ಷಜ್ಞಾನವು ಉಂಟಾಗುತ್ತದೆ ಇಲ್ಲವಾದರೆ ಸರ್ವಥಾ ಅಪರೋಕ್ಷಜ್ಞಾನವು ಹುಟ್ಟಲಾರದು, ಎಂದು ಸತ್ತತ್ವವೆಂಬುವ ಗ್ರಂಥದಲ್ಲಿ ಹೇಳಿದೆ ॥೨॥ ॥ ೫ ॥

ಗೀ ॥ ಯಂ ಯಂ ವಾಽಪಿ ಸ್ಮರನ್ಭಾವಂ ತ್ಯಜತ್ಯಂತೇ ಕಲೇವರಂ ।
ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ ॥ ೬ ॥

ಅ ॥ ವಾಪಿ=ಅಥವಾ, ಕೌಂತೇಯ=ಅರ್ಜುನನೇ, ಸದಾ=ನಿರಂತರದಲ್ಲಿಯೂ, ತದ್ಭಾವಭಾವಿತಃ=ಆ ಶ್ರೀಪರಮಾತ್ಮನಲ್ಲಿಟ್ಟ ಮನಸ್ಸಿನಿಂದ, ಭಾವಿತಃ=ನಿರಂತರದಲ್ಲಿಯೂ ಶ್ರೀಹರಿಯ ಧ್ಯಾನದಿಂದುಂಟಾದ ಭಗವದ್ವಿಷಯಕವಾದ ಸ್ಮರಣೆಯನ್ನುಂಟುಮಾಡುವ ಸಂಸ್ಕಾರವುಳ್ಳ ಮನುಷ್ಯನು, ಯಂ ಯಮಪಿ ಭಾವಂ=ಯಾವ ಯಾವ ಪದಾರ್ಥವನ್ನು, ಅಂತೇ=ಮರಣಕಾಲದಲ್ಲಿ, ಸ್ಮರನ್=ಸ್ಮರಣೆ ಮಾಡುವವನಾಗಿ, ಕಲೇವರಂ=ದೇಹವನ್ನು, ತ್ಯಜತಿ=ಬಿಡುತ್ತಾನೋ, ತಂ ತಮೇವ=ಆವಾವ ಪದಾರ್ಥವನ್ನು, ಏತಿ=ಹೊಂದುತ್ತಾನೆ.

ವಿ ॥ ಶ್ರೀ ಪರಮಾತ್ಮನಲ್ಲಿ ಮನಸ್ಸನ್ನು ಇಟ್ಟು, ನಿರಂತರದಲ್ಲಿಯೂ ಶ್ರೀಪರಮಾತ್ಮನ ಸ್ಮರಣವು ಅಪರೋಕ್ಷಜ್ಞಾನವನ್ನು ಹುಟ್ಟಿಸಿ ಭೋಗದಿಂದ ಪ್ರಾರಬ್ಧಕರ್ಮವು ಅನಸಾನವಾದ ಮೇಲೆ ಅಂತ್ಯಕಾಲದಲ್ಲಿ ಸ್ಮರಣೆಗೆ ಕಾರಣವಾಗುತ್ತದೆ. ಸಾಕ್ಷಾತ್ಕಾರಣವಲ್ಲವೆಂದು ತಿಳಿಯಬೇಕು ॥ ೬ ॥

ಗೀ ॥ ತಸ್ಮಾತ್ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ।
ಮಯ್ಯರ್ಪಿತಮನೋಬುದ್ಧಿರ್ಮಾಮೇವೈಷ್ಯಸ್ಯಸಂಶಯಂ ॥ ೭ ॥

ಅ ॥ ತಸ್ಮಾತ್=ಆದಕಾರಣ, ಸರ್ವೇಷು ಕಾಲೇಷು=ಎಲ್ಲಾ ಕಾಲಗಳಲ್ಲಿ, ಮಾಂ=ನನ್ನನ್ನೇ, ಅನುಸ್ಮರ=ಸ್ಮರಣೆಮಾಡು. ತಸ್ಮಾತ್=ಸರ್ವದಾ ನನ್ನ ಸ್ಮರಣೆಯು ನೋಕ್ಷವನ್ನು ಹೊಂದಲಿಕ್ಕೆ ಕಾರಣವಾದ ಅಂತ್ಯಕಾಲದಲ್ಲಿ ಬರತಕ್ಕ ನನ್ನ ಸ್ಮರಣೆಗೆ ಕಾರಣವಾಗಿರುವುದರಿಂದ, ಮಯಿ=ನನ್ನಲ್ಲಿ, ಅರ್ಪಿತಮನೋಬುದ್ಧಿಃ=ಮನಸ್ಸನ್ನೂ ಬುದ್ಧಿಯನ್ನೂ ಸಂಪೂರ್ಣ ಇಟ್ಟವನಾಗಿ, ಯುಧ್ಯ ಚ=ಯುದ್ಧಮಾಡು ಅಸಂಶಯಂ=ನಿಸ್ಸಂಶಯವಾಗಿ, ಮಾಮೇವ=ನನ್ನನ್ನೇ, ಏಷ್ಯಸಿ=ಹೊಂದುವಿ ॥ ೭ ॥

ಭಾ ॥ (೧) ಸ್ಮರನ್ಪುರುಷಸ್ಯಜತೀತಿ ಭಿನ್ನಕಾಲೀನತ್ವೇಽಪ್ಯವಿರೋಧ ಇತಿ ಮಂದಮತೇಃ ಶಂಕಾ ಮಾ ಭೂದಿತ್ಯಂತ ಇತಿ ವಿಶೇಷಣಂ । ಸುಮತೇರ್ನೈವ ಶಂಕಾವಕಾಶಃ । ಸ್ಮರಂಸ್ಯಜತೀತ್ಯೇಕಕಾಲೀನತ್ವಪ್ರತೀತೇಃ ॥ (೨) ದುರ್ಮತೇರ್ದುಃಖಾನ್ನ ಸ್ಮರಂಸ್ಯಜತೀತಿ ಭವಿಷ್ಯತಿ ಶಂಕಾ ॥ (೩) ತ್ಯಜನ್ದೇಹಂ ನ ಕಶ್ಚಿತ್ತು ಮೋಹಮಾಪ್ನೋತ್ಯಸಂಶಯಮಿತಿ ಸ್ಯಾದಂದೇ ॥ (೪) ತಸ್ಯ ಹೈತಸ್ಯ ಹೃದಯಸ್ಯಾಗ್ರಂ ಪ್ರದ್ಯೋತತೇ ತೇನ ಪ್ರದ್ಯೋತೇನೈಷ ಆತ್ಮಾ ನಿಷ್ಕ್ರಾಮತೀತಿ ಹಿ ಶ್ರುತಿಃ ॥ (೫) ಸದಾ ತದ್ಭಾವಭಾವಿತ ಇತ್ಯಂತಕಾಲೇ ಸ್ಮರಣೋಪಾಯಮಾಹ । ಭಾವೋಽಂತರ್ಗತಂ ಮನಃ । ತಥಾಽಭಿಧಾನಾತ್ । ಭಾವಿತತ್ವಮತಿವಾಸಿತತ್ವಂ । ಭಾವನಾ ತ್ವತಿವಾಸನೇತ್ಯಭಿಧಾನಾತ್ ॥
॥ ೬,೭ ॥

ಅ ॥ (೧) ಸ್ಮರನ್ ತ್ಯಜತಿ ಎಂದು ಶ್ರೀಪರಮಾತ್ಮನನ್ನು ಸ್ಮರಣೆಮಾಡಿದವನಿಗೆ ದೇಹತ್ಯಾಗ ಹೇಳಿದ್ದು. ಶ್ರೀಪರಮಾತ್ಮನ ಸ್ಮರಣೆಯು ದೇಹತ್ಯಾಗಕಾಲದಿಂದ ಬೇರೆ ಕಾಲದಲ್ಲಿ (ಅಂದರೆ ಮೊದಲು ಯಾವಾಗಲಾದರೂ) ಇದ್ದರೂ ಸಾಕೆಂದು ಮಂದಮತಿಗೆ ಬರತಕ್ಕ ಶಂಕೆಯನ್ನು ಪರಿಹರಿಸುವುದಕ್ಕಾಗಿ

ದೇಹತ್ಯಾಗ ಕಾಲದಲ್ಲಿಯೇ ಶ್ರೀಹರಿಯ ಸ್ಮರಣೆಯು ಆವಶ್ಯಕವೆಂದು ತಿಳಿಸುವುದಕ್ಕಾಗಿ ಅಂತೇ ಎಂದು ಹರಿಸ್ಮರಣೆಗೆ ವಿಶೇಷಣವನ್ನು ಕೊಟ್ಟಿರುವರು (ಅಂತೇ ಎಂಬುವುದರಿಂದ ಸ್ಮರಣ ಶರೀರತ್ಯಾಗಗಳು ಒಂದೇ ಕಾಲದಲ್ಲಿರತಕ್ಕುವುಗಳೆಂದು ಸಿದ್ಧಿಸುವುದು) ಪ್ರಕೃತಿ ಪ್ರತ್ಯಯಾರ್ಥವನ್ನು ತಿಳಿದ ವಿಚಾರ ಶೀಲನಾದ ಪುರುಷನಿಗೆ ದೇಹತ್ಯಾಗದಿಂದ ಪೂರ್ವದಲ್ಲಿ ಯಾವಾಗಲಾದರೂ ಹರಿಸ್ಮರಣೆಯು ಇದ್ದರೆ ಸಾಕೆಂಬುವ ಶಂಕೆಯೇ ಬರುವುದಿಲ್ಲ ಏಕೆಂದರೆ **ಸ್ಮರನ್ ತ್ಯಜತಿ** ಎಂದು ಸ್ಮರಣಕ್ಕೂ ದೇಹತ್ಯಾಗಕ್ಕೂ ಒಂದೇ ಕಾಲವು ಶಬ್ದಮರ್ಯಾದೆಯಿಂದಲೇ ತೋರುವುದರಿಂದ ಜ್ಞಾನಿಗೆ ಅಂತಹ ಶಂಕೆಗೆ ಅವಕಾಶವೇ ಇಲ್ಲ (೨) (ದುರ್ಮತಿಯೂ ಕೂಡ ಶಬ್ದನ್ಯಾಯವನ್ನು ತಿಳಿದಿದ್ದರೆ ಅವನಿಗೂ ಹಿಂದೆ ಹೇಳಿದ ಶಂಕೆಯು ಹುಟ್ಟಲಾರದು ಆದಕಾರಣ ಆತನನ್ನು ಕುರಿತು **ಅಂತೇ** ಎಂಬುವುದು ವ್ಯರ್ಥವೇ, ಎಂದರೆ--) ದುರ್ಮತಿಗೆ (ಶ್ರೀಹರಿಯ ಸ್ಮರಣೆಗೆ ಕಾರಣವಾದ ಸಂಸ್ಕಾರವನ್ನು ನಾಶಮಾಡುವ ಮಹಾದುಃಖವು ಮರಣಕಾಲದಲ್ಲಿ ಉಂಟಾಗುವುದರಿಂದ ಆ ಕಾಲದಲ್ಲಿ ಹರಿಯ ಸ್ಮರಣೆಯು ಬರಲಾರದು ಆದಕಾರಣ ಶಂಕೆಯು ಬರುವುದು ಆದಕಾರಣ ದುಃಖದೆಶೆಯಿಂದ ಸಂಸ್ಕಾರವು ಲೋಪವಾಗಿ ಸ್ಮರಿಸಿಕೊಂಡು ದೇಹವನ್ನು ಬಿಡುವುದಿಲ್ಲ ಅಂದರೆ ದೇಹಾಭಿಮಾನವುಳ್ಳ ಅಜ್ಞಾನಿಗೆ ಮರಣಕಾಲದಲ್ಲಿ ದುಃಖ ಉಂಟಾಗಿ ಸ್ಮರಣವು ಬರುವುದಿಲ್ಲ) (ದೇಹಾಭಿಮಾನವುಳ್ಳ ಅಜ್ಞಾನಿಯು ದೇಹತ್ಯಾಗವನ್ನು ಆತ್ಮತ್ಯಾಗವನ್ನೆಂಬಂತೆ ತಿಳಿದುಕೊಂಡುದರಿಂದ ಮರಣಕಾಲದಲ್ಲಿ ಆತನಿಗೆ ದುಃಖ ಉಂಟಾಗುತ್ತದೆ ಜ್ಞಾನಿಯಾದರೂ ಸರ್ವದಾ ದೇಹವನ್ನು ಹೇಯವನ್ನಾಗಿಯೇ ತಿಳಿದ ಕಾರಣ ಸ್ವಲ್ಪವೂ ಆ ಕಾಲದಲ್ಲಿ ದುಃಖವುಂಟಾಗುವುದಿಲ್ಲ. ಜ್ಞಾನಿಯ ಉತ್ಕ್ರಮಣವು ಅಜ್ಞಾನಿಯ ಮರಣಕ್ಕಿಂತ ಅತ್ಯಂತ ವಿಲಕ್ಷಣವೆಂದು ಶಾಸ್ತ್ರದಿಂದ ತಿಳಿದ ಜ್ಞಾನಿಗೆ ಈ ಶಂಕೆಯು ಬರುವುದಿಲ್ಲ ಜ್ಞಾನಿಯು ಮರಣಕಾಲದಲ್ಲಿ ಶ್ರೀಹರಿಯನ್ನು ಸ್ಮರಣೆಮಾಡಿ ಮೋಕ್ಷವನ್ನು ಹೊಂದುತ್ತಾನೆ ಅಜ್ಞಾನಿಯು ಇತರರನ್ನು ಸ್ಮರಿಸಿ ಇತರರನ್ನು ಹೊಂದುತ್ತಾನೆ.) (೩) ಜ್ಞಾನಿಯಾಗಲೀ ಅಜ್ಞಾನಿಯಾಗಲೀ ಯಾವನೊಬ್ಬನೂ ದೇಹವನ್ನು ಬಿಡುವವನು ಮರಣಕಾಲದಲ್ಲಿ ಮೋಹವನ್ನು ಹೊಂದುವುದಿಲ್ಲ ಸಂಶಯವಿಲ್ಲ ಹೀಗೆ ನ್ಯಾಯದರ್ಶನದಲ್ಲಿ ಹೇಳಿದೆ (೪) ಆ ಈ ಅಪರೋಕ್ಷ ಜ್ಞಾನಿಯ ಹೃದಯದ ಅಗ್ರಭಾಗವು ಪ್ರಕಾಶಿಸುತ್ತದೆ ಆ ಪ್ರಕಾಶದಿಂದ ಈ ಜೀವನು ಶರೀರದಿಂದ ಹೊರಟು ಹೋಗುತ್ತಾನೆ, ಎಂದು ಜ್ಞಾನಿಯ ಉತ್ಕ್ರಮಣಕ್ಕೆ ಅಜ್ಞರ ಮರಣಕ್ಕಿಂತ ವೈಲಕ್ಷಣ್ಯವನ್ನು ಹೇಳತಕ್ಕ ಶ್ರುತಿಯು (೫) **ಸದಾ ತದ್ಭಾವಭಾವಿತಃ** ಎಂಬುವುದರಿಂದ ಅಂತ್ಯಕಾಲದ ಸ್ಮರಣೋಪಾಯವನ್ನು ಹೇಳುತ್ತಾರೆ. ಭಾವಃ=ಜೀವರ ಅಂತರ್ಗತವಾದ ಮನಸ್ಸು ಹೀಗೆ ಶಬ್ದಶಕ್ತಿಗ್ರಾಹಕವಾದ ಪ್ರಮಾಣವಿದೆ ಭಾವಿತತ್ವಂ=ಅತ್ಯಂತವಾಗಿ ಸಂಸ್ಕಾರದಿಂದ ಕೂಡಿರುವಿಕೆಯು. ಭಾವನಾ=ಅತ್ಯಂತ ಸಂಸ್ಕಾರವು, ಎಂದು ಅಭಿಧಾನವು ॥ ೬, ೭ ॥

ಗೀ ॥ ಅಭ್ಯಾಸಯೋಗಯುಕ್ತೇನ ಚೇತಸಾನನ್ಯಗಾಮಿನಾ ।
ಪರಮಂ ಪುರುಷಂ ದಿವ್ಯಂ ಯಾತಿ ಪಾರ್ಥಾನುಚಿಂತಯನ್ ॥ ೮ ॥

ಅ ॥ ಪಾರ್ಥ=ಅರ್ಜುನ, ಅಭ್ಯಾಸಯೋಗಯುಕ್ತೇನ=ಪುನಃಪುನಃ ಆವೃತ್ತಿರೂಪವಾದ ಉಪಾಯದಿಂದ ಕೂಡಿದ, ಅನನ್ಯಗಾಮಿನಾ=ಶ್ರೀಪರಮಾತ್ಮನನ್ನು ಬಿಟ್ಟು ಬೇರೆ ವಿಷಯಗಳ ಕಡೆಗೆ ಹೋಗದಿರುವ, ಚೇತಸಾ=ಮನಸ್ಸಿನಿಂದ, ದಿವ್ಯಂ=ಜಗತ್ಸೃಷ್ಟ್ಯಾದಿರೂಪ ಕ್ರೀಡಾದಿಗುಣಗಳಿಂದ ಕೂಡಿದ, ಪರಮಂ=ಸರ್ವೋತ್ತಮನಾದ, ಪುರುಷಂ=ಸಮಸ್ತ ಪ್ರಾಣಿಗಳ ಶರೀರಗಳಲ್ಲಿ ನಿಯಾಮಕನಾಗಿರುವ, ಅಥವಾ ಸರ್ವಗುಣಪರಿಪೂರ್ಣನಾದ ಶ್ರೀಕೃಷ್ಣನನ್ನು, ಅನುಚಿಂತಯನ್=ನಿರಂತರದಲ್ಲಿಯೂ ಧ್ಯಾನಮಾಡುವವನಾಗಿ, ಯಾತಿ=ಶ್ರೀಪರಮಾತ್ಮನನ್ನು (ಅಂದರೆ ಮೋಕ್ಷವನ್ನು) ಹೊಂದುತ್ತಾನೆ ॥ ೮ ॥

ಭಾ ॥ (೧) ಸದಾ ತದ್ಭಾವಭಾನಿತತ್ವಂ ಸ್ಪಷ್ಟಯತಿ । ಅಭ್ಯಾಸೇತಿ । ಅಭ್ಯಾಸ ಏವ ಯೋಗೋಽಭ್ಯಾಸಯೋಗಃ । ದಿವ್ಯಂ ಪುರುಷಂ ಪುರಿಶಯಂ ಪೂರ್ಣಂ ಚ ॥ (೨) ಸ ವಾ ಅಯಂ ಪುರುಷಃ ಸರ್ವಾಸು ಪೂರ್ಷು ಪುರಿಶಯೋ ನೈನೇನ ಕಿಂ ಚ ನಾನಾವೃತಂ ನೈನೇನ ಕಿಂ ಚ ನಾಸಂವೃತಮಿತಿ ಶ್ರುತೇಃ । ದಿವ್ಯಂ ಸೃಷ್ಟ್ಯಾದಿಕ್ರೀಡಾಯುಕ್ತಂ । ದಿವು ಕ್ರೀಡೇತಿ ಧಾತೋಃ ॥ ೮ ॥

ಆ ॥ (೧) ಸದಾ ಶ್ರೀಪರಮಾತ್ಮನಲ್ಲಿಯೇ ಮನಸ್ಸು ಇಟ್ಟು, ಧ್ಯಾನಿಸಬೇಕೆಂಬುವುದನ್ನು ಅಭ್ಯಾಸ ಎಂಬುವ ಶ್ಲೋಕದಿಂದ ಸೃಷ್ಟೀಕರಿಸುತ್ತಾರೆ ಅಭ್ಯಾಸಯೋಗವೆಂದರೆ ಧ್ಯಾನಕ್ಕೆ ಪುನಃಪುನಃ ಆವರ್ತನರೂಪವಾದ ಉಪಾಯವೆಂದರ್ಥವು ದಿವ್ಯಂ = ಕ್ರೀಡಾದಿಗುಣವಿಶಿಷ್ಟನಾದ, ಪುರುಷಂ = ಸರ್ವರ ದೇಹಗಳಲ್ಲಿ ನಿಯಾಮಕನಾಗಿರುವ, ಅಥವಾ ಸರ್ವಗುಣಪರಿಪೂರ್ಣನಾದ, ಶ್ರೀಪರಮಾತ್ಮನನ್ನು (೨) ಆ ಈ ಶ್ರೀಪರಮಾತ್ಮನು ಸರ್ವರ ಶರೀರಗಳಲ್ಲಿ ನಿಯಾಮಕನಾಗಿರುತ್ತಾನೆ ಆದಕಾರಣ ಪುರುಷಃ ಎನಿಸುತ್ತಾನೆ ಈ ಶ್ರೀಪರಮಾತ್ಮನಿಂದ ಯಾವುದೊಂದೂ ಅಂತರ್ವ್ಯಾಪ್ತವಾಗದಿದ್ದುದು ಇಲ್ಲ ಮತ್ತೆ ಇವನು ಎಲ್ಲಾ ವಸ್ತುಗಳ ಒಳಗೇನೇ ವ್ಯಾಪಿಸಿಕೊಂಡಿದ್ದಾನೆ ಅಂದರೆ ಸರ್ವಾಂತರ್ಯಾಮಿಯು ಮತ್ತು ಇವನಿಂದ ಯಾವುದೊಂದೂ ಹೊರಗೆ ವ್ಯಾಪಿಸಿಕೊಳ್ಳದೆ ಇದ್ದುದು ಇಲ್ಲ ಎಲ್ಲವೂ ಶ್ರೀಹರಿಯಿಂದ ವ್ಯಾಪಿಸಿಕೊಂಡಿದ್ದೇ ಆಗಿದೆ. (ಆಂದರೆ ಪರಮಾತ್ಮನು ಎಲ್ಲಾ ವಸ್ತುಗಳ ಒಳಗೂ ಹೊರಗೂ ವ್ಯಾಪಿಸಿಕೊಂಡಿದ್ದಾನೆ) ಎಂದು ಶ್ರುತಿಯು ದಿವ್ಯಂ = ಜಗತ್ಸೃಷ್ಟ್ಯಾದಿರೂಪ ಕ್ರೀಡಾದಿಗುಣಗಳಿಂದ ಕೂಡಿದವನು. ದಿವ್ ಧಾತುವು ಕ್ರೀಡಾ ಎಂಬುವ ಅರ್ಥದಲ್ಲಿದೆ. ॥ ೮ ॥

ಗೀ ॥ ಕವಿಂ ಪುರಾಣಮನುಶಾಸಿತಾರ-
ಮಣೋರಣೀಯಾಂಸಮನುಸ್ಮರೇದ್ಯಃ ।
ಸರ್ವಸ್ಯ ಧಾತಾರಮಚಿಂತ್ಯರೂಪ-
ಮಾದಿತ್ಯವರ್ಣಂ ತಮಸಃ ಪರಸ್ತಾತ್ ॥ ೯ ॥

ಆ ॥ಯಃ = ಯಾವಾತನು, ಕವಿಂ = ಸರ್ವಜ್ಞನಾದ, ಪುರಾಣಂ = ಅನಾದಿಯಾದ, ಅನುಶಾಸಿತಾರಂ = ಸರ್ವ ಜಗತ್ತಿಗೂ ಶಿಕ್ಷಕನಾದ, ಅಣೋಃ = ಸೂಕ್ಷ್ಮವಾದ ವಸ್ತುವಿಗಿಂತಲೂ, ಅಣೀಯಾಂಸಂ = ಅತ್ಯಂತ ಅಣುಪರಮಾಣವುಳ್ಳ ಸರ್ವಸ್ಯ = ಜೀವನ ಅಜೀವನ ಎಲ್ಲಾ ವಸ್ತುಗಳಿಗೂ, ಧಾತಾರಂ = ಧಾರಕನೂ ರಕ್ಷಕನೂ ಆದ, ಅಚಿಂತ್ಯರೂಪಂ = ಸಂಪೂರ್ಣವಾಗಿ ಮನಸ್ಸಿಗೂ ತಿಳಿಯಲಶಕ್ಯ ರೂಪವುಳ್ಳ ಆದಿತ್ಯವರ್ಣಂ = ಸೂರ್ಯನಂತೆ ಪ್ರಭೆಯುಳ್ಳ, ತಮಸಃ ಪರಸ್ತಾತ್ = ಸತ್ವರಜಸ್ತಮೋಗುಣ ರೂಪವಾದ ಪ್ರಕೃತಿಯನ್ನೂ, ಮೃತ್ಯುವನ್ನೂ ಮೀರಿ ಇರುವ, (ಅಂದರೆ ಪ್ರಕೃತಿ ಮರಣಗಳ ಸಂಬಂಧವೂ ಇಲ್ಲದಿರುವ) ಶ್ರೀಪರಮಾತ್ಮನನ್ನು, ಅನುಸ್ಮರೇತ್ = ಚೆನ್ನಾಗಿ ಸ್ಮರಿಸುತ್ತಾನೊ, (ಆತನು ಮುಕ್ತನಾಗುತ್ತಾನೆ) ॥ ೯ ॥

ಭಾ ॥ (೧) ಧ್ಯೇಯಮಾಹ । ಕವಿಮಿತಿ । ಕವಿಂ ಸರ್ವಜ್ಞಂ । ಯಃ ಸರ್ವಜ್ಞ ಇತಿ ಶ್ರುತಿಃ । ತ್ವಂ ಕವಿಃ ಸರ್ವವೇದನಾದಿತಿ ಬ್ರಾಹ್ಮೇ ॥ (೨) ಧಾತಾರಂ ಧಾರಣಪೋಷಣಕರ್ತಾರಂ । ಡುಧಾಞ್ ಧಾರಣಪೋಷಣಯೋರಿತಿ ಧಾತೋಃ ॥ (೩) ಧಾತಾ ವಿಧಾತಾ ಪರಮೋಽತ ಸಂದೃಗಿತಿ ಶ್ರುತಿಃ ॥ (೪) ಬ್ರಹ್ಮಾ ಸ್ಥಾಣುರಿತ್ಯಾರಭ್ಯ ತಸ್ಯ ಪ್ರಸಾದಾದಿಚ್ಛಂತಿ ತದಾದಿಷ್ಟಫಲಾಂ ಗತಿಮಿತ್ಯಾದಿ ಚ ಮೋಕ್ಷಧರ್ಮೇ ॥ (೫) (1)

ತಮಸೋಽವ್ಯಕ್ತಾತ್ಪರತಃ ಸ್ಥಿತಂ । ತಮಸಃ ಪರಸ್ತಾದಿತಿ । (2) ಅವ್ಯಕ್ತಂ ವೈ ತಮಃ ಪರಸ್ತಾದ್ಧಿ ಸ ತತ ಇತಿ ಪಿಪ್ಪಲಾದಶಾಖಾಯಾಂ ।(3) ಮೃತ್ಯುರ್ವಾವ ತಮಃ ಮೃತ್ಯುರ್ವೈ ತಮೋ ಜ್ಯೋತಿರಮೃತಮಿತಿ ಶ್ರುತೇಃ ॥ ೯ ॥

ಅ ॥ (೧) ಧ್ಯೇಯವಾದ ಭಗವದ್ರೂಪವನ್ನು ಕವಿಂ ಎಂಬುವ ಶ್ಲೋಕದಿಂದ ವಿವರಿಸುತ್ತಾರೆ ಕವಿಂ=ಸರ್ವಜ್ಞನನ್ನು, ಯಾವನು ಸರ್ವಜ್ಞನೋ, ಎಂಬುವ ಶ್ರುತಿಯಂದ ಶ್ರೀಹರಿಗೆ ಸರ್ವಜ್ಞತ್ವವು ಸಿದ್ಧವಾಗುತ್ತದೆ ಸಮಸ್ತವನ್ನು ತಿಳಿದಿರುವುದರಿಂದ ನೀನು ಸರ್ವಜ್ಞನಾದುದರಿಂದ ಕವಿಃ ಎನಿಸಿಕೊಳ್ಳುತ್ತಿ, ಎಂದು ಬ್ರಾಹ್ಮಪುರಾಣದಲ್ಲಿದೆ (೨) ಧಾಞ್ ಧಾತುವು ಧಾರಣ ಪೋಷಣಗಳೆಂಬುವ ಅರ್ಥಗಳಲ್ಲಿದೆ, ಎಂಬುವ ಧಾತುವ್ಯಾಖ್ಯಾನದಿಂದ ಧಾತಾರಂ=ಧಾರಣ ಪೋಷಣಗಳನ್ನು ಮಾಡುವವನನ್ನು (೩) (ಶ್ರೀಪರಮಾತ್ಮನು ಸರ್ವಜಗದ್ಧಾರಕನೆಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ಶ್ರೀಪರಮಾತ್ಮನು ಸರ್ವಜಗದ್ಧಾರಕನು, ಸರ್ವ ಜಗತ್ತಿನ ಸೃಷ್ಟಿಕರ್ತನು, ಮತ್ತು ಉತ್ತಮ ಜ್ಞಾನಸ್ವರೂಪನು, ಎಂದು ಶ್ರುತಿಯು (೪) (ಸರ್ವ ಜಗದ್ಧಾರಕನು ಶ್ರೀಪರಮಾತ್ಮನೇ. ಬೇರೆಯವರು ಅಲ್ಲ ಎಂಬುವಲ್ಲಿ ಪ್ರಮಾಣ ಹೇಳುತ್ತಾರೆ–)ಚತುರ್ಮುಖ ಬ್ರಹ್ಮ, ರುದ್ರ ಎಂದಾರಂಭಿಸಿ ಅವರು ಆ ಶ್ರೀಪರಮಾತ್ಮನ ಅನುಗ್ರಹದಿಂದ ಶ್ರೀಪರಮಾತ್ಮನಿಂದ ಕೊಡಲ್ಪಟ್ಟ ಸುಖವುಳ್ಳ (ಅಂದರೆ ಕೇವಲ ಸುಖರೂಪವಾದ) ಮೋಕ್ಷರೂಪ ಗತಿಯನ್ನು ಇಚ್ಛಿಸುತ್ತಾರೆ, ಎಂದು ಮೋಕ್ಷಧರ್ಮದಲ್ಲಿ ಹೇಳಿದೆ (೫) (1) ತಮಸಃ=ಜಡಪ್ರಕೃತಿಯ ದೆಶೆಯಿಂದ, ಪರತಃ ಸ್ಥಿತಂ=ಅತಿಕ್ರಮಿಸಿ ಇರತಕ್ಕವನು (ಅಂದರೆ ಅಪ್ರಾಕೃತವಾದ ಶರೀರವುಳ್ಳವನು) (2) ಪ್ರಕೃತಿಯನ್ನು ವಿಾರಿದವನು, (ಜಡಪ್ರಕೃತಿಯ ಸಂಬಂಧವಿಲ್ಲದವನು) ತಮಃ ಅಂದರೆ ಜಡ ಪ್ರಕೃತಿಯು ಆ ಶ್ರೀಪರಮಾತ್ಮನು ಆ ಜಡಪ್ರಕೃತಿಯಿಂದ ವಿಾರಿದವನು, ಎಂದು ಪಿಪ್ಪಲಾದ ಶಾಖೆಯಲ್ಲಿ ಹೇಳಿದೆ (3) ಮರಣವು ತಮಃ ಎನಿಸುತ್ತದೆ ಪ್ರಕಾಶಸ್ವರೂಪನಾದ ಶ್ರೀಪರಬ್ರಹ್ಮನು (ಅಮೃತನು) ಮರಣರಹಿತನಾಗಿರುತ್ತಾನೆ ॥ ೯ ॥

ತಾ ॥ ತಮಸಃ ಪರಸ್ತಾದಪ್ರಾಕೃತದೇಹಃ(ಹಂ) ॥ ೯ ॥

ಅ ॥ ತಮಸಃ ಪರಸ್ತಾತ್=ಅಪ್ರಾಕೃತ ದೇಹವುಳ್ಳವನು ॥ ೯ ॥

ಗೀ ॥ ಪ್ರಯಾಣಕಾಲೇ ಮನಸಾಽಚಲೇನ
ಭಕ್ತ್ಯಾ ಯುಕ್ತೋ ಯೋಗಬಲೇನ ಚೈವ ।
ಭ್ರುವೋರ್ಮಧ್ಯೇ ಪ್ರಾಣಮಾವೇಶ್ಯ ಸಮ್ಯಕ್
ಸ ತಂ ಪರಂ ಪುರುಷಮುಪೈತಿ ದಿವ್ಯಂ ॥ ೧೦ ॥

ಅ ॥ ಭಕ್ತ್ಯಾ ಯುಕ್ತಃ=ಯಾವನು ಭಕ್ತಿಯಿಂದ ಕೂಡಿದವನಾಗಿ, ಪ್ರಯಾಣಕಾಲೇ—ಮರಣ ಕಾಲದಲ್ಲಿ, ಯೋಗಬಲೇನ=ಯೋಗಸಾಮರ್ಥ್ಯದಿಂದ, ಭ್ರುವೋಃ=ಹುಬ್ಬುಗಳ, ಮಧ್ಯೇ=ಮಧ್ಯದಲ್ಲಿ, ಪ್ರಾಣಂ=ಪ್ರಾಣವಾಯುವನ್ನು, ಆವೇಶ್ಯ=ಪ್ರವೇಶಮಾಡಿಸಿ, ಅಚಲೇನ=ಶ್ರೀಪರಮಾತ್ಮನಿಂದ ಕದಲದಿರುವ, ಮನಸಾ=ಮನಸ್ಸಿನಿಂದ, ಸಮ್ಯಕ್=ಚೆನ್ನಾಗಿ, ಅನುಸ್ಮರೇತ್=ಶ್ರೀಪರಮಾತ್ಮನನ್ನು ಸ್ಮರಣೆಮಾಡುತ್ತಾನೋ, ಸಃ=ಆತನು, ದಿವ್ಯಂ=ಕ್ರೀಡಾದಿಗುಣವಿಶಿಷ್ಟನಾದ ಪರಂ=ಸರ್ವೋತ್ತಮನಾದ, ತಂ ಪುರುಷಂ=ಆ ಶ್ರೀಪರಮಾತ್ಮನನ್ನು, ಉಪೈತಿ=ಹೊಂದುತ್ತಾನೆ ॥ ೧೦ ॥

ಭಾ ॥ (೧) ವಾಯುಜಯಾದಿಯೋಗಯುಕ್ತಾನಾಂ ಮೃತಿಕಾಲೇ ಕರ್ತವ್ಯಮಾಹ ವಿಶೇಷತಃ ಪ್ರಯಾಣಕಾಲ ಇತಿ ॥ (೨) ವಾಯುಜಯಾದಿರಹಿತಾನಾಮಪಿ ಜ್ಞಾನಭಕ್ತಿವೈರಾಗ್ಯಾದಿಸಂಪೂರ್ಣಾನಾಂ ಭವತ್ಯೇವ ಮುಕ್ತಿಃ ॥ (೩) ತದ್ವತಾಂ ತ್ವೀಷಜ್ಜ್ಞಾನಾದ್ಯಸಂಪೂರ್ಣಾನಾಮಪಿ ನಿಪುಣಾನಾಂ ತದ್ಬಲಾತ್ಕೃಥಂಚಿದ್ಭವತೀತಿ ವಿಶೇಷಃ ॥ (೪) ಉಕ್ತಂ ಚ ಭಾಗವತೇ । ಪಾನೇನ ತೇ ದೇವ ಕಥಾಸುಧಾಯಾಃ ಪ್ರವೃದ್ಧಭಕ್ತ್ಯಾ ವಿಶದಾಶಯಾ ಯೇ । ವೈರಾಗ್ಯಸಾರಂ ಪ್ರತಿಲಭ್ಯ ಬೋಧಂ ಯಥಾಂಜಸಾ ತ್ವಾಽಽಪುರಕುಂಠಧಿಷ್ಣ್ಯಂ । ತಥಾಽಪರೇ ತ್ವಾತ್ಮಸಮಾಧಿಯೋಗಬಲೇನ ಜಿತ್ವಾ ಪ್ರಕೃತಿಂ ಬಲಿಷ್ಠಾಂ । ತ್ವಾಮೇವ ಧೀರಾಃ ಪುರುಷಂ ವಿಶಂತಿ ತೇಷಾಂ ಶ್ರಮಃ ಸ್ಯಾನ್ನ ತು ಸೇವಯಾ ತ ಇತಿ ॥ ೧ ॥

ಅ ॥ (೧) ಶ್ವಾಸನಿರೋಧಾದಿರೂಪವಾದ ಯೋಗದಿಂದ ಕೂಡಿರುವ ಉಪಾಸಕರಿಗೆ ಮರಣಕಾಲದ ಕರ್ತವ್ಯವನ್ನು ವಿಶೇಷವಾಗಿ ಪ್ರಯಾಣಕಾಲೇ ಎಂಬುವ ಶ್ಲೋಕದಿಂದ ಹೇಳುತ್ತಾರೆ (೨) ಶ್ವಾಸನಿರೋಧಾದಿರೂಪವಾದ ಯೋಗವಿಲ್ಲದವರಿಗೂ ಜ್ಞಾನ ಭಕ್ತಿ ವೈರಾಗ್ಯಾದಿಗುಣಗಳಿಂದ ಸಂಪೂರ್ಣರಾದವರಿಗೆ ಮೋಕ್ಷವಾಗಿಯೇ ಆಗುತ್ತದೆ. (೩) ಶ್ವಾಸನಿರೋಧಾದಿರೂಪ ಉಪಾಯವನ್ನು ಮಾಡುತ್ತಿದ್ದು ಜ್ಞಾನಭಕ್ತ್ಯಾದಿಗುಣಗಳು ಸ್ವಲ್ಪ ಕಡಿಮೆಯಾಗಿ ಶ್ವಾಸನಿರೋಧಾದಿಗಳನ್ನು ಮಾಡುವುದರಲ್ಲಿ ಸಮರ್ಥರಾದ ಉಪಾಸಕರಿಗೂ ಕೂಡ ಶ್ವಾಸನಿರೋಧಾದಿರೂಪ ಯೋಗಾಭ್ಯಾಸ ಬಲದಿಂದ ಶೀಘ್ರದಲ್ಲಿ ಅಲ್ಪ ಆನಂದವುಳ್ಳ ಮುಕ್ತಿಯು ಆಗುತ್ತದೆ (೪) ಶ್ರೀಪರಮಾತ್ಮನೇ ನಿನ್ನ ಮಾಹಾತ್ಮ್ಯಪ್ರತಿಪಾದಕವಾದ ಕಥೆಯೆಂಬ ಅಮೃತಪಾನದಿಂದ (ಶ್ರವಣಮನನಾದಿಗಳಿಂದ) ಅಭಿವೃದ್ಧವಾದ ಭಕ್ತಿಯಿಂದ ನಿರ್ಮಲವಾದ ಅಂತಃಕರಣವುಳ್ಳವರು, ಯಾರು ಉತ್ತಮಭಕ್ತರು ಇದ್ದಾರೋ, ಅವರು ವಿಷಯವೈರಾಗ್ಯಕ್ಕೆ ಫಲಭೂತವಾದ ಅಪರೋಕ್ಷಜ್ಞಾನವನ್ನು ಹೊಂದಿ ನಾಶವಿಲ್ಲದ ವೈಕುಂಠಾದಿ ಮಂದಿರವುಳ್ಳ ಶ್ರೀಪರಮಾತ್ಮನಾದ ನಿನ್ನನ್ನು ಸಂಪೂರ್ಣ ಹೊಂದಿರುತ್ತಾರೋ, (ಅಂದರೆ ಸಾಯುಜ್ಯಾದಿರೂಪವಾದ ಮುಕ್ತಿಯನ್ನು ಹೊಂದಿರುತ್ತಾರೋ) ಹಾಗೆಯೇ ಇಂತಹ ಪೂರ್ಣ ಭಕ್ತಿಯುಳ್ಳವರಿಗಿಂತ ಇತರರಾದ ಶ್ವಾಸನಿರೋಧದಲ್ಲಿ ಪ್ರಧಾನರಾದ ಅಪರೋಕ್ಷಜ್ಞಾನಿಗಳು ಅಲ್ಪವಾದ ಭಗವದ್ವಿಷಯಕ ಧ್ಯಾನ, ಹೆಚ್ಚು ಶ್ವಾಸನಿರೋಧಾದಿರೂಪವಾದ ಯೋಗಬಲ ಇವುಗಳಿಂದ ಬಲಿಷ್ಠವಾದ (ಅಲ್ಪ ಸಾಧನಗಳಿಂದ ಗೆಲ್ಲಲಿಕ್ಕೆ ಅಶಕ್ಯವಾದ) ಪ್ರಕೃತಿಯನ್ನು ಗೆದ್ದು (ಲಿಂಗದೇಹವನ್ನು ಬಿಟ್ಟು) ಗುಣಪೂರ್ಣನಾದ ನಿನ್ನನ್ನು ಪ್ರವೇಶಮಾಡಿಯೇ ಮಾಡುತ್ತಾರೆ. ಉತ್ತಮಭಕ್ತರಂತೆ ಚೆನ್ನಾಗಿ ಅಲ್ಲ ಇಂತಹ ಯೋಗಾಭ್ಯಾಸವುಳ್ಳವರಿಗೆ ಸಾಧನಕಾಲದಲ್ಲಿ ಬಹಳ ಕ್ಲೇಶವುಂಟಾಗುತ್ತದೆ ನಿನ್ನ ಶ್ರವಣಾದಿರೂಪವಾದ ಸೇವೆಯನ್ನು ಮಾಡುವವರಿಗೆ ಅಂತಹ ಕ್ಲೇಶವು ಬರುವುದಿಲ್ಲ ॥ ೧ ॥

ಭಾ ॥ (೧) ಯೇ ತು ತದ್ಭಾವಿತಾ ಲೋಕಾ ಏಕಾಂತಿತ್ವಂ ಸಮಾಶ್ರಿತಾಃ । ಏತದಭ್ಯಧಿಕಂ ತೇಷಾಂ ತತ್ತೇಜಃ ಪ್ರವಿಶಂತ್ಯುತೇತಿ ಮೋಕ್ಷಧರ್ಮೇ ॥ (೨) ಸಂಪೂರ್ಣಾನಾಂ ಭವೇನ್ಮೋಕ್ಷೋ ವಿರಕ್ತಿಜ್ಞಾನಭಕ್ತಿಭಿಃ । ನಿಯಮೇನ ತಥಾಽಪೀರಜಯಾದಿಯುತಯೋಗಿನಾಂ । ವಶ್ಯತ್ವಾನ್ನನಸಸ್ತ್ವೀಷತ್ಪೂರ್ವಮಪ್ಯಾಪ್ಯತೇ ಧ್ರುವಮಿತಿ ವ್ಯಾಸಯೋಗೇ ॥ ೨ ॥ ॥ ೧೦ ॥

ಅ ॥ (೧) ಯಾವ ಜನರು ಶ್ರೀಪರಮಾತ್ಮನ ಪ್ರಸಾದದಿಂದ ಶ್ರೀಪರಮಾತ್ಮನನ್ನು ಧ್ಯಾನಿಸುವವರಾಗಿ ಏಕಾಂತಭಕ್ತತ್ವವನ್ನು ಹೊಂದಿರುತ್ತಾರೋ, ಅವರಿಂದ ಹೊಂದಲ್ಪಡತಕ್ಕ ಮುಕ್ತಿರೂಪ ಫಲವು ಇತರರು ಹೊಂದುವ ಮುಕ್ತಿಗಿಂತ ಅತ್ಯುತ್ಕೃಷ್ಟವು ಮತ್ತು ಅವರು ಸರ್ವತ್ರ ವ್ಯಾಪ್ತನಾದ ತೇಜೋರೂಪನಾದ ಶ್ರೀನಾರಾಯಣನನ್ನು ಪ್ರವೇಶಮಾಡುತ್ತಾರೆ, ಎಂದು ಮೋಕ್ಷ ಧರ್ಮದಲ್ಲಿ ಹೇಳಿದೆ (ವೈರಾಗ್ಯ ಜ್ಞಾನ ಭಕ್ತಿ ಎಂಬ ಸಾಧನಗಳಿಂದ ಸಂಪೂರ್ಣರಾದ ಉತ್ತಮಾಧಿಕಾರಿಗಳಿಗೆ ನಿಶ್ಚಯವಾಗಿ ಮೋಕ್ಷವಾಗುವುದು ಆದರೂ ಶ್ವಾಸನಿರೋಧಾದಿಗಳಿಂದ ಯುಕ್ತರಾದ ಯೋಗಿಗಳಿಗೆ ಮನಸ್ಸು ಅಧೀನವಾಗಿಯೇ (ಮನೋನಿಗ್ರಹ) ಇರುವುದರಿಂದ ಭಕ್ತ್ಯಾದಿಪ್ರಧಾನರಾದ ಯೋಗಿಗಳಿಗಿಂತಲೂ ಸ್ವಲ್ಪ ಮೊದಲೇ ಶ್ವಾಸನಿರೋಧಾದಿಗಳಿಂದ ಯುಕ್ತರಾದ ಯೋಗಿಗಳಿಂದ ಪರಬ್ರಹ್ಮನು (ಮೋಕ್ಷವು) ನಿಶ್ಚಯವಾಗಿಯೂ ಹೊಂದಲ್ಪಡುತ್ತದೆ, ಎಂದು ವ್ಯಾಸಯೋಗದಲ್ಲಿದೆ (ಅಂದರೆ ಭಕ್ತ್ಯಾದಿ ಪ್ರಧಾನರಾದ ಯೋಗಿಗಳಿಂದ ಹೊಂದಲ್ಪಡುವ ಮುಕ್ತಿಗಿಂತ ಇತರರ ಮುಕ್ತಿಯು ನಿಕೃಷ್ಟವಾದುದು) ॥ ೧೦ ॥

ಪೀ—ಶ್ವಾಸನಿರೋಧಾದಿಗಳನ್ನು ಮಾಡಿಕೊಂಡಿರುವ ಯೋಗಿಗಳ ಮರಣಕಾಲದಲ್ಲಿ ಕರ್ತವ್ಯವನ್ನು ಧ್ಯೇಯವನ್ನೂ ಸ್ಪಷ್ಟೀಕರಿಸುತ್ತಾರೆ—

ಗೀ ॥ ಯದಕ್ಷರಂ ವೇದವಿದೋ ವದಂತಿ
ವಿಶಂತಿ ಯದ್ಯತಯೋ ವೀತರಾಗಾಃ ।
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ
ತತ್ತೇ ಪದಂ ಸಂಗ್ರಹೇಣ ಪ್ರವಕ್ಷ್ಯೇ ॥ ೧೧ ॥

ಅ ॥ ಯತ್ಪದಂ=ಯಾವ ಭಗವತ್ಸ್ವರೂಪವನ್ನು, ಅಕ್ಷರಂ=ನಾಲ್ಕು ವಿಧ ನಾಶವೂ ಇಲ್ಲದಿರುವುದನ್ನಾಗಿ, ವೇದವಿದಃ=ವೇದಾರ್ಥಜ್ಞಾನಿಗಳು ವದಂತಿ=ಹೇಳುತ್ತಾರೋ, ಯತ್=ಯಾವ ಭಗವತ್ಸ್ವರೂಪವನ್ನು, ವೀತರಾಗಾಃ=ಕಾಮ ಕ್ರೋಧ ಮೊದಲಾದ ದೋಷಗಳು ಇಲ್ಲದಿರುವ, ಯತಯಃ=ಪ್ರಯತ್ನಶೀಲರಾದವರು, ವಿಶಂತಿ=ಪ್ರವೇಶಮಾಡುತ್ತಾರೋ, ಯತ್=ಯಾವ ಭಗವತ್ಸ್ವರೂಪವನ್ನು, ಇಚ್ಛಂತಃ=ತಿಳಿಯಲಿಚ್ಛಿಸುವವರಾಗಿ, ಬ್ರಹ್ಮಚರ್ಯಂ=ಮನಸ್ಸು ಮೊದಲಾದ ಇಂದ್ರಿಯಗಳನ್ನು ಪರಬ್ರಹ್ಮನಲ್ಲಿ ಸ್ಥಿರವಾಗಿ ಇಡುವಿಕೆಯನ್ನು, ಚರಂತಿ=ಮಾಡುತ್ತಾರೋ, ತತ್ಪದಂ=ಮೋಕ್ಷೇಚ್ಛೆಗಳಿಂದ ಹೊಂದಲ್ಪಡತಕ್ಕ, ಆ ಪರಬ್ರಹ್ಮಸ್ವರೂಪವನ್ನು ತೇ=ನಿನಗಾಗಿ, ಸಂಗ್ರಹೇಣ=ಸಂಕ್ಷೇಪವಾಗಿ, ಪ್ರವಕ್ಷ್ಯೇ=ಹೇಳುವೆನು. (ಪರಬ್ರಹ್ಮನನ್ನು ಸ್ಮರಣೆಮಾಡುವ ಪ್ರಕಾರವನ್ನು ಹೇಳುವೆನು) ॥ ೧೧ ॥

ಭಾ ॥ (೧) ತದೇವ ಸಧ್ಯೇಯಂ ಪ್ರವಂಚಯತಿ । ಯದಕ್ಷರಮಿತ್ಯಾದಿನಾ । ಪ್ರಾಪ್ಯತೇ ಮುಮುಕ್ಷುಭಿರಿತಿ ಪದಂ ಸ್ವರೂಪಂ । ಪದ ಗತಾವಿತಿ ಧಾತೋಃ । ತದ್ವಿಷ್ಣೋಃ ಪರಮಂ ಪದಮಿತಿ ಶ್ರುತೇಶ್ಚ ॥ (೨) ಗೀಯಸೇ ಪದಮಿತ್ಯೇವ ಮುನಿಭಿಃ ಪದ್ಯಸೇ ಯತ ಇತಿ ಚ ನಾರದೀಯೇ ॥ ೧೧ ॥

ಅ ॥ ಆ ಧ್ಯೇಯವಾದ ಭಗವತ್ಸ್ವರೂಪನನ್ನೇ **ಯದಕ್ಷರಂ** ಇತ್ಯಾದಿಗಳಿಂದ ವಿವರಿಸುತ್ತಾರೆ **ಮೋಕ್ಷೇಚ್ಛುಗಳಿಂದ ಹೊಂದಲ್ಪಡುವುದರಿಂದ ಪದಂ** ಭಗವತ್ಸ್ವರೂಪವು. **ಗತಿ** ಎಂಬುವ ಅರ್ಥದಲ್ಲಿ **ಪದ** ವೆಂಬುವ ಧಾತುವಿದೆ ಹೀಗೆ ಧಾತುವ್ಯಾಖ್ಯಾನದಿಂದಲೂ ಶ್ರೀವಿಷ್ಣುವಿನ ಸರ್ವೋತ್ಕೃಷ್ಟವಾದ ಸ್ವರೂ

ಪವನ್ನು ಜ್ಞಾನಿಗಳು ನೋಡುತ್ತಾರೆ, ಎಂಬುವ ಶ್ರುತಿಯಿಂದಲೂ, (೨) ಎಲೋ ಪರಬ್ರಹ್ಮನೇ ನೀನು ಮುನಿಗಳಿಂದ ಹೊಂದಲ್ಪಡುತ್ತಿ ಆದಕಾರಣ ಪದಂ ಎನಿಸುತ್ತಿ, ಎಂದು ನಾರದೀಯ ಪುರಾಣವಾಕ್ಯ ದಿಂದಲೂ ಪದಂ ಎಂಬುವುದಕ್ಕೆ ಸ್ವರೂಪವೆಂಬುವ ಅರ್ಥವು ಸಿದ್ಧವಾಗುತ್ತದೆ. ॥ ೧೧ ॥

ಭಾ ॥ ಮನಆದೀನಾಂ ಬ್ರಹ್ಮಣಿ ಚರಣಂ ಬ್ರಹ್ಮಚರ್ಯಂ ॥ ೧೧ ॥

ಅ ॥ ಮನಸ್ಸು ಮೊದಲಾದ ಇಂದ್ರಿಯಗಳಿಗೆ ಪರಬ್ರಹ್ಮನಲ್ಲಿ ಇರುವಿಕೆಯು ಬ್ರಹ್ಮಚರ್ಯವೆನಿಸುತ್ತದೆ. ॥೧೧॥

ಪೀ— ಧ್ಯಾನಿಸುವ ಪ್ರಕಾರವನ್ನು ಹೇಳುತ್ತಾರೆ —

ಗೀ ॥ ಸರ್ವದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುದ್ಧ್ಯ ಚ ।
ಮೂರ್ಧ್ನ್ಯಾಧಾಯಾSSತ್ಮನಃ ಪ್ರಾಣಮಾಸ್ಥಿತೋ ಯೋಗಧಾರಣಾಂ ॥
ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ಮಾಮನುಸ್ಮರನ್ ।
ಯಃ ಪ್ರಯಾತಿ ತ್ಯಜನ್ದೇಹಂ ಸ ಯಾತಿ ಪರಮಾಂ ಗತಿಂ ॥ ೧೨,೧೩ ॥

ಅ ॥ ಸರ್ವದ್ವಾರಾಣಿ = ವಾಯುವಿನ ಸಂಚಾರಸ್ಥಾನಗಳಾದ ಸುಷುಮ್ನಾನಾಡಿ ಹೊರತು ಬೇರೆ ಎಲ್ಲಾ ನಾಡಿ(ಇಂದ್ರಿಯಮಾರ್ಗ)ಗಳನ್ನು, ಸಂಯಮ್ಯ = ನಿರೋಧಮಾಡಿ, ಹೃದಿ = ಪ್ರಲಯಕಾಲದಲ್ಲಿ ಜಗತ್ತನ್ನು ನಾಶಪಡಿಸುವುದರಿಂದ ಹೃತ್ ಎನಿಸಿಕೊಳ್ಳುವ ಶ್ರೀಮನ್ನಾರಾಯಣನಲ್ಲಿ, ಮನಃ = ಮನಸ್ಸನ್ನು, ನಿರುದ್ಧ್ಯ = ನಿರೋಧಿಸಿ, (ಅಂದರೆ ಬೇರೆ ಕಡೆ ಹೋಗದಂತೆ ಮಾಡಿ ಶ್ರೀಪರಮಾತ್ಮನಲ್ಲಿಯೇ ಸ್ಥಿರವಾಗಿ ಇರಿಸಿ) ಆತ್ಮನಃ = ತನ್ನ, ಪ್ರಾಣಂ = ಪ್ರಾಣವಾಯುವನ್ನು, ಮೂರ್ಧ್ನಿ = ಸುಷುಮ್ನಾನಾಡಿಯ ಮಾರ್ಗವಾಗಿ ಬ್ರಹ್ಮರಂಧ್ರದಲ್ಲಿ, ಆಧಾಯ = ಇಟ್ಟು, ಯೋಗಧಾರಣಾಂ ಆಸ್ಥಿತಃ = ಅಖಂಡ ಸ್ಮೃತಿರೂಪವಾದ ಯೋಗಧಾರಣದಲ್ಲಿಯೇ ಆಗ್ರಹಯುಕ್ತನಾಗಿ, ಓಮಿತ್ಯೇಕಾಕ್ಷರಂ = ಓಂ ಎಂಬುವ ಒಂದು ಅಕ್ಷರದಿಂದ ಹೇಳಲ್ಪಡತಕ್ಕ, ಬ್ರಹ್ಮ = ಪರಬ್ರಹ್ಮಸ್ವರೂಪನಾದ, ಮಾಂ = ನನ್ನನ್ನು, ವ್ಯಾಹರನ್ = ಹೇಳುತ್ತಾ, ಅನುಸ್ಮರನ್ = ಸ್ಮರಣೆ ಮಾಡುತ್ತಾ, (ಅಂದರೆ ಓಂ ಎಂದು ಉಚ್ಚರಿಸಿ ಆ ಪ್ರಣವಪ್ರತಿಪಾದ್ಯನಾದ ಪರಬ್ರಹ್ಮನನ್ನು ಸ್ಮರಿಸಿಕೊಂಡು) ಯಃ = ಯಾವಾತನು, ದೇಹಂ = ಶರೀರವನ್ನು, ತ್ಯಜನ್ = ಬಿಡುವವನಾಗಿ, ಪ್ರಯಾತಿ = ಹೊರಟುಹೋಗುತ್ತಾನೋ, ಸಃ = ಆತನು, ಪರಮಾಂ ಗತಿಂ = ಮೋಕ್ಷವನ್ನು, ಯಾತಿ = ಹೊಂದುತ್ತಾನೆ ॥ ೨೨, ೧೩ ॥

ಪೀ— ಮನೋ ನಿರುದ್ಧ್ಯ ಎಂಬುವುದರಿಂದಲೇ ಸಮಸ್ತ ಇಂದ್ರಿಯಗಳನ್ನು ಸ್ವಾಧೀನೀಕರಿಸಿಕೊಳ್ಳಬೇಕೆಂದು ಹೇಳಿದ್ರಿಂದ ತಿರುಗಿ ಏಕೆ ಹೇಳುವುದೆಂದರೆ ವಾಯುಸಂಚರಿಸುವ ಸಮಸ್ತನಾಡಿಗಳನ್ನು (ಇಂದ್ರಿಯಮಾರ್ಗಗಳನ್ನು) ನಿರೋಧಿಸಬೇಕೆಂದು ಇಲ್ಲಿ ಹೇಳುತ್ತಾರೆ ಆ ನಾಡಿಗಳನ್ನು ತಡೆಯುವುದು ಏತಕ್ಕೆಂದರೆ—

ಭಾ ॥ (೧) ಬ್ರಹ್ಮನಾಡೀಂ ವಿನಾ ಯದ್ಯನ್ಯತ್ರ ಗಚ್ಛತಿ ತರ್ಹಿ ವಿನಾ ಮೋಕ್ಷಂ ಸ್ಥಾನಾಂತರಂ ಪ್ರಾಪ್ನೋತೀತಿ ಸರ್ವದ್ವಾರಾಣಿ ಸಂಯಮ್ಯ ॥ (೨) ನಿರ್ಗಚ್ಛಂಶ್ಚ ಷ್ಣಷಾ ಸೂರ್ಯಂ ದಿಶಃ ಶ್ರೋತ್ರೇಣ ಚೈವ ಹೀತ್ಯಾದಿವಚನಾದ್ವ್ಯಸಯೋಗೇ । ಮೋಕ್ಷ-

ಧರ್ಮೇ ಚ ॥ (೩) ಹೃದಿ ನಾರಾಯಣೇ । ಹ್ರಿಯತೇ ತ್ವಯಾ ಜಗದ್ಯಸ್ಮಾದ್ಧೃದಿ-ತ್ಯೇವಂ ಪ್ರಭಾಷಸ ಇತಿ ಹಾದ್ಮೇ ॥ (೪) ನಹಿ ಮೂರ್ಧ್ನಿ ಪ್ರಾಣೇ ಹೃದಿ ಮನಸಃ ಸ್ಥಿತಿಃ ಸಂಭವತಿ । ಯತ್ರ ಪ್ರಾಣೋ ಮನಸ್ತತ್ರ ತತ್ರ ಜೀವಃ ಪರಸ್ತಥೇತಿ ವ್ಯಾಸ ಯೋಗೇ ॥ (೫) ಯೋಗಧಾರಣಾಮಾಸ್ಥಿತಃ । ಯೋಗಭರಣ ಏವಾಭಿಯುಕ್ತ ಇತ್ಯರ್ಥಃ ॥ ೧೨, ೧೩ ॥

ಅ ॥ (೧) ಬ್ರಹ್ಮನಾಡಿಯನ್ನು ಬಿಟ್ಟು ಬೇರೆ ನಾಡಿಗಳಲ್ಲಿ ಜೀವನು ಹೋದರೆ ಆ ಜೀವನು ಮೋಕ್ಷ ಹೊಂದದೆ ಬೇರೆ ಸ್ಥಾನಗಳಿಗೆ ಹೋಗುವ ಕಾರಣ **ಸರ್ವದ್ವಾರಾಣಿ ಸಂಯಮ್ಯ** ಎಂದುಕ್ತವಾಗಿದೆ. (೨) (ಬ್ರಹ್ಮನಾಡಿ ಹೊರತು ಬೇರೆ ನಾಡೀಮಾರ್ಗದಿಂದ ಉತ್ಕ್ರಾಂತನಾದ ಜೀವನು ಸ್ಥಾನಾಂತರವನ್ನು (ಸೂರ್ಯಾದಿಗಳನ್ನು) ಹೊಂದುತ್ತಾನೆ ಮೋಕ್ಷವನ್ನು ಹೊಂದುವುದಿಲ್ಲ, ಎಂಬುವ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ಕಣ್ಣಿನಿಂದ ಹೋಗುವ ಜೀವನು ಸೂರ್ಯನನ್ನೂ, ಕಿವಿಯಿಂದ ಹೋದವನು ದಿಗಭಿಮಾನಿದೇವತೆಗಳನ್ನೂ ಹೊಂದುತ್ತಾನೆ ಇದುಮೊದಲಾದ, ಪ್ರಮಾಣಗಳಿಂದ ದ್ವಾರಾಂತರದಿಂದ ಹೋದವನು ಸ್ಥಾನಾಂತರವನ್ನು (ಬೇರೆ ದೇವತೆಗಳನ್ನು) ಹೊಂದುತ್ತಾನೆಂದು ವ್ಯಾಸಯೋಗವೆಂಬುವ ಗ್ರಂಥದಲ್ಲಿ ಹೇಳಿದೆ ಮೋಕ್ಷಧರ್ಮದಲ್ಲಿಯೂ ಈ ಅರ್ಥವೇ ಸ್ಪಷ್ಟವಾಗಿ ಹೇಳಲ್ಪಟ್ಟಿದೆ (೩) ಹೃದಿ= ಶ್ರೀನಾರಾಯಣನಲ್ಲಿ (ಈ ಅರ್ಥವು ಹೇಗೆ ಸಿಗುತ್ತದೆಂದರೆ-) ಎಲೋ ಶ್ರೀಪರಮಾತ್ಮನೇ ನಿನ್ನಿಂದ ಜಗತ್ತು ಸಂಹರಿಸಲ್ಪಡುವುದರಿಂದ ನೀನು ಹೃತ್ ಎನಿಸಿಕೊಳ್ಳುತ್ತಿ, ಎಂದು ವಾದ್ಮದಲ್ಲಿದೆ (೪) (ಹೃತ್ ಎಂಬುವುದಕ್ಕೆ ಹೃದಯವೆಂದು ಪ್ರಸಿದ್ಧವಾದ ಅರ್ಥವನ್ನೇ ಏಕೆ ಹೇಳಬಾರದೆಂದರೆ) ಶಿರಸ್ಸಿನಲ್ಲಿ ಮುಖ್ಯಪ್ರಾಣ ನಿರುವಾಗ ಹೃದಯದಲ್ಲಿ ಮನಸ್ಸು ಇರುತ್ತದೆಂಬುವುದು ಕೂಡುವುದಿಲ್ಲವಷ್ಟೆ (ಏಕೆ ಕೂಡುವುದಿಲ್ಲವೆಂದರೆ—) ಎಲ್ಲಿ ಪ್ರಾಣನಿರುತ್ತಾನೋ, ಅಲ್ಲಿ ಮನಸ್ಸು ಇರುತ್ತದೆ ಅಲ್ಲಿಯೇ ಜೀವನೂ ಹಾಗೆಯೇ ಶ್ರೀಪರಮಾತ್ಮನೂ ಇರುತ್ತಾನೆ, ಎಂದು ವ್ಯಾಸಯೋಗದಲ್ಲಿ ಹೇಳಿದೆ (೫) ಯೋಗಧಾರಣಾಮಾಸ್ಥಿತಃ= ಶ್ವಾಸನಿರೋಧ ಮೊದಲಾದ ಯೋಗಸಂಪೂರ್ತಿಯಲ್ಲಿಯೇ ಆಗ್ರಹವುಳ್ಳವನು ಎಂದರ್ಥವು ॥೧೨, ೧೩॥

ತಾ ॥ ಏಕಾಕ್ಷರವಾಚ್ಯತ್ವಾದೇಕಾಕ್ಷರಂ ಪರಂ ಬ್ರಹ್ಮ ॥ ೧೨,೧೩ ॥

ಅ ॥ ಓಂ ಎಂಬುವ ಒಂದು ಅಕ್ಷರದಿಂದ ಹೇಳಲ್ಪಡುವುದರಿಂದ ಏಕಾಕ್ಷರಂ= ಎಂಬುವ ಶಬ್ದವಾಚ್ಯನು ಪರಬ್ರಹ್ಮನು ॥ ೧೨, ೧೩ ॥

ಪೀ—ನಿತ್ಯದಲ್ಲಿಯೂ ಧ್ಯಾನದಲ್ಲಿ ಅಭ್ಯಾಸವುಳ್ಳವನಿಗೇನೇ ಮರಣಕಾಲದಲ್ಲಿ ನನ್ನ ಸ್ಮರಣೆಯುಂಟಾಗುತ್ತದೆ ನಿತ್ಯಾಭ್ಯಾಸವಿಲ್ಲದವನಿಗೆ ಸ್ಮರಣೆಯು ಬರಲಾರದು, ಎಂದು ಸ್ಪಷ್ಟವಾಗಿ ಹೇಳುತ್ತಾರೆ—

ಗೀ ॥ ಅನನ್ಯಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।
ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥ ೧೪ ॥

ಅ ॥ ಪಾರ್ಥ= ಅರ್ಜುನನೇ, ಯಃ= ಯಾವಾತನು, ಸತತಂ= ನಿರಂತರದಲ್ಲಿಯೂ, ಅನನ್ಯಚೇತಾಃ= ಪರಮಾತ್ಮನು ಹೊರತು ಬೇರೆ ವಿಷಯಗಳಲ್ಲಿ ಮನಸ್ಸನ್ನು ಇಡದಿರುವವನಾಗಿ, ನಿತ್ಯಶಃ= ನಿರಂತರದಲ್ಲಿ, ಮಾಂ= ನನ್ನನ್ನು, ಸ್ಮರತಿ= ಸ್ಮರಣೆಮಾಡುತ್ತಾನೋ, ತಸ್ಯ=ಅಂತಹ, ನಿತ್ಯಯುಕ್ತಸ್ಯ= ನಿತ್ಯದಲ್ಲಿಯೂ ನನ್ನನ್ನು ಹೊಂದಲಿಕ್ಕೆ ಅವಶ್ಯಕವಾದ ವ್ಯಾಪಾರವುಳ್ಳ, ಯೋಗಿನಃ= ಸಂಪೂರ್ಣ ಉಪಾ

ಯವುಳ್ಳ ಯೋಗಿಗೆ, ಅಹಂ=ನಾನು, ಸುಲಭಃ=ಮರಣಕಾಲದಲ್ಲಿ ಸುಖದಿಂದ ಸ್ಮೃತಿವಿಷಯನಾಗುತ್ತೇನೆ ಅಥವಾ ಅನಾಯಾಸದಿಂದ ಹೊಂದಲ್ಪಡತಕ್ಕವನು. ॥ ೧೪ ॥

ಭಾ ॥ ನಿತ್ಯಯುಕ್ತಸ್ಯ ನಿತ್ಯೋಪಾಯವತಃ । ಯೋಗಿನಃ ಪರಿಪೂರ್ಣಯೋಗಸ್ಯ ॥ ೧೪ ॥

ಅ ॥ ನಿತ್ಯಯುಕ್ತಸ್ಯ=ಪ್ರತಿನಿತ್ಯವೂ ಶ್ವಾಸನಿರೋಧ ಮೊದಲಾದ ಯೋಗರೂಪವಾದ ಉಪಾಯವನ್ನು ಮಾಡಿದ್ರಿಂದ ಸಂಪೂರ್ಣ ಉಪಾಯವುಳ್ಳವನಿಗೆ ಯೋಗಿನಃ=ಪರಿಪೂರ್ಣ ಉಪಾಯವುಳ್ಳವನಿಗೆ॥ ೧೪ ॥

ಗೀ ॥ ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಂ ।
ನಾಪ್ನುವಂತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ಗತಾಃ ॥ ೧೫ ॥

ಅ ॥ ಮಹಾತ್ಮಾನಃ=ಜ್ಞಾನಿಗಳು, ಪರಮಾಂ=ಉತ್ತಮವಾದ, ಸಂಸಿದ್ಧಿಂ=ಮೋಕ್ಷವನ್ನು ಗತಾಃ=ಹೊಂದಿದಕಾರಣ, ಮಾಂ=ನನ್ನನ್ನು, ಉಪೇತ್ಯ=ಹೊಂದಿ, ದುಃಖಾಲಯಂ=ದುಃಖಕ್ಕೆ ಕಾರಣವಾದ, ಅಶಾಶ್ವತಂ=ಅನಿತ್ಯವಾದ, (ನಾಶವುಳ್ಳ) ಜನ್ಮ=ದೇಹಸಂಬಂಧವನ್ನು, ನಾಪ್ನುವಂತಿ=ತಿರುಗಿ ಹೊಂದುವುದಿಲ್ಲ ॥ ೧೫ ॥

ಭಾ ॥ ತತ್ಪ್ರಾಪ್ತಿಂ ಸ್ತೌತಿ । ಮಾಮಿತಿ । ಪರಮಾಂ ಸಿದ್ಧಿಂ ಗತಾ ಹಿ ತ ಇತಿ ತತ್ರ ಹೇತುಃ ॥
॥ ೧೫ ॥

ಅ ॥ ಮಾಂ ಎಂಬುವ ಶ್ಲೋಕದಿಂದ ಭಗವತ್ಪ್ರಾಪ್ತಿಯನ್ನು ಸ್ತುತಿಸುತ್ತಾರೆ ಪರಮಾಂ ಸಿದ್ಧಿಂ ಗತಾಃ ಎಂಬುವುದು ತಿರುಗಿ ಜನ್ಮವಿಲ್ಲವೆಂಬುವಲ್ಲಿ ಹೇತುವು ॥ ೧೫ ॥

ಗೀ ॥ ಆಬ್ರಹ್ಮಭವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।
ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ ॥ ೧೬ ॥

ಅ ॥ ಅರ್ಜುನ=ಅರ್ಜುನನೇ, ಆಬ್ರಹ್ಮಭವನಾತ್=ಮೇರುಪರ್ವತದಲ್ಲಿರತಕ್ಕ ಚತುರ್ಮುಖ ಬ್ರಹ್ಮನ ಲೋಕವನ್ನಾರಂಭಿಸಿ (ಲೋಕದೆಶೆಯಿಂದ), ಲೋಕಾಃ=ಕೆಳಗಿನ ಲೋಕಗಳಲ್ಲಿರತಕ್ಕ ಜನರು, ಪುನರಾವರ್ತಿನಃ=ತಿರುಗಿ ಭೂಲೋಕದಲ್ಲಿ ಹುಟ್ಟು ಸಾವುಳ್ಳವರು. ಕೌಂತೇಯ=ಅರ್ಜುನನೇ ಮಾಂ=ನನ್ನನ್ನು, ಉಪೇತ್ಯ=ಹೊಂದಿ (ಇರುವವರಿಗೆ) ಪುನಃ=ತಿರುಗಿ, ಜನ್ಮ=ಉತ್ಪತ್ತಿಯು, ನ ತು ವಿದ್ಯತೇ=ಇರುವುದೇ ಇಲ್ಲ. ॥ ೧೬ ॥

ಟೀ—ಆ ಬ್ರಹ್ಮಭವನಾಲ್ಲೋಕಾಃ ಪುನರಾವರ್ತಿನಃ ಎಂಬುವುದರಿಂದ ಸತ್ಯಲೋಕದಲ್ಲಿದ್ದವರಿಗೂ ತಪೋಲೋಕ ಜನಲೋಕದಲ್ಲಿದ್ದವರಿಗೂ ಜನ್ಮವು ಹೇಳಲ್ಪಡುತ್ತದೆಂಬ ಅಪವ್ಯಾಖ್ಯಾನವನ್ನು ನಿರಾಕರಿಸುತ್ತಾರೆ—

ಭಾ ॥ (೧) ಮಹಾಮೇರುಸ್ಥಬ್ರಹ್ಮಸದನಮಾರಭ್ಯ ನ ಪುನರಾವೃತ್ತಿಃ ॥ (೨) ತಚ್ಚೋಕ್ತಂ
ನಾರಾಯಣಗೋಪಾಲಕಲ್ಪೇ । ಆ ಮೇರುಬ್ರಹ್ಮಸದನಾದಾ ಜನಾನ್ನ ಜನಿರ್ಭವಿ ।
ತಥಾಽಸ್ಯಭಾವಃ ಸರ್ವತ್ರ ಹ್ಯಾಸ್ಯೈವ ವಸುದೇವಜಮಿತಿ ॥ ೧೬ ॥

ಅ ॥ ಪೃಥಿವ್ಯಾಂ ಬ್ರಹ್ಮಣೋ ಮೇರೌ ಜಯಂತಂ ತ್ವಂತರಿಕ್ಷಗಂ । ತೃತೀಯಂ ಸತ್ಯ ಲೋಕೇ ವೈ ಸದನಂ ತ್ರಿವಿಧಂ ಸ್ಮೃತಂ ಎಂಬುವ ಪ್ರಮಾಣದಿಂದ ಮಹಾಮೇರು ಪರ್ವತದಲ್ಲಿರತಕ್ಕ ಚತುರ್ಮುಖನ **ಶತಕೋಟಿ** ಎಂದು ಹೆಸರುಳ್ಳ ಮನೆಯನ್ನಾರಂಭಿಸಿ (ಅಂದರೆ ಆ ಮನೆಯಿಂದ ಮೇಲೆ ಇರತಕ್ಕ ಅನಂತಾಸನ ಶ್ವೇತದ್ವೀಪಗಳಲ್ಲಿರುವವರಿಗೂ ಜನಲೋಕಕ್ಕಿಂತ ಮೇಲೆ ಇರುವ ಎಲ್ಲಾ ಲೋಕಗಳಲ್ಲಿರುವವರಿಗೂ) ತಿರುಗಿ ಭೂಲೋಕದಲ್ಲಿ ಹುಟ್ಟು ಸಾವುಗಳು ಇಲ್ಲ (೨) ಈ ವಿಷಯವು ನಾರಾಯಣಗೋಪಾಲಕಲ್ಪವೆಂಬುವ ಗ್ರಂಥದಲ್ಲಿ ಉಕ್ತವಾಗಿದೆ ಮೇರುಪರ್ವತದಲ್ಲಿರತಕ್ಕ ಚತುರ್ಮುಖ ಬ್ರಹ್ಮನ ಮಂದಿರವನ್ನು ಆರಂಭಿಸಿಯೂ ಮತ್ತು ಜನಲೋಕವನ್ನಾರಂಭಿಸಿಯೂ (ಅಂದರೆ ಆ ಲೋಕಗಳಿಗಿಂತ) ಮೇಲಿನ ಲೋಕಗಳಲ್ಲಿರುವವರಿಗೆ ಯದ್ಯಪಿ ತಿರುಗಿ ಭೂಮಿಯಲ್ಲಿ ಹುಟ್ಟು ಸಾವುಗಳು ಬರುವುದಿಲ್ಲ ಆದರೂ ಈ ಎಲ್ಲಾ ಲೋಕಗಳಲ್ಲಿಯೂ ಇರುವ ಪರಮಾತ್ಮನನ್ನು ಹೊಂದಿ ಇರುವವರಿಗೇನೇ ಹುಟ್ಟು ಸಾವು ಇಲ್ಲದಿರುವುದು (ಕೇವಲ ಲೋಕ ಸಾಮರ್ಥ್ಯದಿಂದ ಹುಟ್ಟು ಸಾವುಗಳು ಇಲ್ಲವೆಂದಲ್ಲ) ॥ ೧೬ ॥

ಪೀ - ಬ್ರಹ್ಮಾದಿಗಳನ್ನು ಹೊಂದಿದವರಿಗೂ ತಿರುಗಿ ಉತ್ಪತ್ತಿಯಿಲ್ಲದಿರುವುದರಿಂದ **ಮಾಮುಪೇತ್ಯ** ಎಂದು ವಿಶೇಷ್ಯ ಹೇಳಿದ್ದು ಏತಕ್ಕೆಂದರೆ– **ಆಬ್ರಹ್ಮಭವನಾತ್** ಎಂಬುವುದರಿಂದ ಸಮಾಧಾನವನ್ನು ಹೇಳಿರುವರು ಆದರಲ್ಲಿ **ಆಜನಾನ್ನಿ ಜನಿರ್ಭುವಿ** ಎಂಬುವ ಪ್ರಮಾಣದಿಂದ ಸತ್ಯಲೋಕದಶೆಯಿಂದ ಕೆಳಗಿನದ್ದಾದ ಜನಲೋಕಾದಿಗಳಲ್ಲಿದ್ದವರಿಗೂ ಹುಟ್ಟು ಸಾವುಗಳಿಲ್ಲದಿರುವುದರಿಂದ ಚತುರ್ಮುಖನ ಲೋಕವನ್ನಾರಂಭಿಸಿ ಇರುವ ಲೋಕಗಳಲ್ಲಿದ್ದವರಿಗೆ ಜನ್ಮಾದಿಗಳಿಲ್ಲವೆಂದದ್ದು ಹೇಗೆ? ಎಂಬುವ ಆಶಂಕೆಯನ್ನು ಸ್ಮೃತಿಯಿಂದಲೇ ಪರಿಹರಿಸುತ್ತಾರೆ–

ತಾ ॥ (೧) ನಿಯಮಾಜ್ಜನ್ಮನೋ ಭಾವೋ ಮುಕ್ತಸ್ಯೈವ ॥ (೨) ತಥಾಽಪಿ ತು । ಮಹ-ಲೋಕಮತೀತಾನಾಂ ನ ಜನ್ಮಾಂಶಲಯೌ ವಿನಾ ॥ (೩) ತತ್ಪ್ರಾಪ್ಯವಶ್ಯಂ ತತ್ಸ್ಥಾನಂ ತೈಃ ಕ್ಷಿಪ್ರಂ ಪುನರಾಪ್ಯತ ಇತಿ ವಾದ್ಮೇ ॥ ೧೬ ॥

ಅ ॥ ಲಿಂಗದೇಹಭಂಗವಾಗಿ ಪರಬ್ರಹ್ಮನನ್ನು ಹೊಂದಿದ ಮುಕ್ತನಿಗೇನೇ **ನ ಚ ಪುನರಾವರ್ತತೇ** ಎಂದು ಶಾಸ್ತ್ರದಲ್ಲಿ ಹೇಳಿದ ನಿಯಮಾನುಸಾರವಾಗಿ **ಪುನರ್ಜನ್ಮ ನ ವಿದ್ಯತೇ** ಎಂದು ಹೇಳಿದ ಪ್ರಕಾರ ವಿಶೇಷಾಕಾರವಾಗಿ ಜನನಮರಣಗಳು ಇಲ್ಲದಿರುವುದು (೨) ಆದರೂ ಮಹಲೋಕವನ್ನು ದಾಟಿ ಜನಾದಿಲೋಕಗಳಲ್ಲಿ ಆವಾಸಮಾಡುವವರಿಗೆ ಅಂಶದಿಂದ ಅವತಾರವಿದ್ದರೂ ಅಂಶವನ್ನು ಬಿಟ್ಟ ಸಂಪೂರ್ಣ ಅಂಶಿರೂಪದಿಂದ ಆವರು ಹುಟ್ಟುವುದಿಲ್ಲ ಪ್ರಲಯಾಂತದಲ್ಲಿ ಹುಟ್ಟಿದರೂ ಲಯವಾಗದೆ ಹುಟ್ಟುವುದಿಲ್ಲ **ಪ್ರಲಯೋಪಕ್ರಮದಲ್ಲಿ ಮರಣವಿದ್ದರೂ ಲಯವಿಲ್ಲದೆ ಮೊದಲು ಮರಣವಿಲ್ಲ.** (ಅಂದರ ಮಹಲೋಕಕ್ಕಿಂತ ಮೇಲಿನ ಲೋಕಕ್ಕೆ ಹೋಗಿರುವ ಅಂಶಿಗಳಾದ ವಾಯುಮೊದಲಾದ ದೇವತೆಗಳಿಗೆ ಭೀಮಾದ್ಯಂಶಗಳಿಂದ ಭೂಮಿಯಲ್ಲಿ ಉತ್ಪತ್ತಿಯು ಬ್ರಹ್ಮನ ಲಯಾಂತದಲ್ಲಿ ವಾಯುವು ಬ್ರಹ್ಮನಾಗಿಯೂ, ಭಾರತಿಯು ಸರಸ್ವತಿಯಾಗಿಯೂ, ರುದ್ರನು ಶೇಷನಾಗಿಯೂ, ಪಾರ್ವತಿಯು ವಾರುಣಿಯಾಗಿಯೂ ಹುಟ್ಟುತ್ತಾರೆ ಸರ್ವರಿಗೂ ಲಯೋಪಕ್ರಮದಲ್ಲಿ ಮರಣವೂ ಇದೆ) (೩) ಅವರು ಅಂಶದಿಂದ ಅವತಾರ ಮಾಡಿದರೂ ತಿರುಗಿ ಶೀಘ್ರವಾಗಿ ಆವಾವ ಅಂತಿಯ ಸ್ಥಾನವನ್ನು ಹೊಂದಿ ಅಂಶಿರೂಪರೇ ಆಗುತ್ತಾರೆ, ಎಂದು ಪಾದ್ಮದಲ್ಲಿ ಹೇಳಿದೆ

ವಿ ॥ (1) ಮೇರುಪರ್ವತದಲ್ಲಿರತಕ್ಕ ಬ್ರಹ್ಮನ ಮನೆಗಿಂತ ಕೆಳಗಿನ ಲೋಕಗಳಲ್ಲಿರತಕ್ಕ ಜನರು ಪುನಃ ಭೂಮಿಗೆ ಬಂದು ಹುಟ್ಟುಸಾವುಗಳಳ್ಳವರಾಗುತ್ತಾರೆ (2) ಮೇರುಪರ್ವತದಲ್ಲಿರತಕ್ಕ ಚತು

ರ್ಮುಖನ ಮುಂದಿರಕ್ಕಿಂತಲೂ ಜನೋಲೋಕಕ್ಕಿಂತಲೂ ಮೇಲಿನ ಲೋಕಗಳಲ್ಲಿದ್ದವರಿಗೆ ಹುಟ್ಟು ಸಾವುಗಳು ಇಲ್ಲದಿರಲಿಕ್ಕೆ ಆ ಲೋಕಗಳಲ್ಲಿರುವುದು ಮಾತ್ರ ಕಾರಣವಲ್ಲ ಮತ್ತೆ ಅಲ್ಲಿದ್ದ ಭಗವದ್ಭಾವವನ್ನು ಹೊಂದಿರುವುದೇ ಜನನಾದಿಗಳು ಇಲ್ಲದಿರಲಿಕ್ಕೆ ಕಾರಣವು. (3) ಸರ್ವಥಾ ಜನನಾಭಾವವು ಮುಕ್ತನಿಗೆ ಮಾತ್ರ. ॥ ೧೬ ॥

ಗೀ ॥ ಸಹಸ್ರಯುಗಪರ್ಯಂತಮಹರ್ಯದ್ಬ್ರಹ್ಮಣೋ ವಿದುಃ ।
ರಾತ್ರಿಂ ಯುಗಸಹಸ್ರಾಂತಾಂ ತೇಽಹೋರಾತ್ರವಿದೋ ಜನಾಃ ॥೧೭॥

ಅ ॥ (ಯಾವ ಜನರು) ಬ್ರಹ್ಮಣಃ ಯತ್ ಅಹಃ = ಪರಬ್ರಹ್ಮನ ಹಗಲನ್ನು, ಸಹಸ್ರಯುಗ ಪರ್ಯಂತಂ = ಬಹುಯುಗ ಪರ್ಯಂತವನ್ನಾಗಿ, (ಅಂದರೆ ಪರಬ್ರಹ್ಮನ *ದ್ವಿಪರಾರ್ಧಾತ್ಮಕವನ್ನಾಗಿ) ವಿದುಃ = ತಿಳಿಯುತ್ತಾರೋ, ರಾತ್ರಿಂ = (ಪರಬ್ರಹ್ಮನ) ರಾತ್ರಿಯನ್ನು, ಯುಗಸಹಸ್ರಾಂತಾಂ = ಬಹುಯುಗ ಪರ್ಯಂತವನ್ನಾಗಿ. (ಬ್ರಹ್ಮನದ್ವಿಪರಾರ್ಧಪರ್ಯಂತವಾದುದನ್ನಾಗಿಯೇ) ವಿದುಃ = ತಿಳಿಯುತ್ತಾರೋ, ತೇ ಜನಾಃ = ಆ ಜನರು, ಅಹೋರಾತ್ರವಿದಃ = ಶ್ರೀಪರಮಾತ್ಮನ ಹಗಲು ರಾತ್ರಿಗಳನ್ನು ತಿಳಿದವರು

ವಿ ॥ ಪರಬ್ರಹ್ಮನು ನಿರ್ವಿಕಾರನೂ ನಿತ್ಯನೂ ಆದಾಗ್ಯೂ ಆತನ ಜಗತ್ತಿನ ಸೃಷ್ಟ್ಯಾದಿವ್ಯಾಪಾರಗಳು ನಡೆಯುತ್ತಿರುವಾಗ ಅಹಃ ಎಂದೂ ಸೃಷ್ಟ್ಯಾದಿಗಳು ನಡೆಯದಿರುವಾಗ ರಾತ್ರಿ ಎಂದೂ ಜನರು ಅನ್ನುತ್ತಾರೆ ॥ ೧೭ ॥

ಗೀ ॥ ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವಂತ್ಯಹರಾಗಮೇ ।
ರಾತ್ರ್ಯಾಗಮೇ ಪ್ರಲೀಯಂತೇ ತತ್ರೈವಾವ್ಯಕ್ತಸಂಜ್ಞಕೇ ॥ ೧೮ ॥

ಅ ॥ ಅಹರಾಗಮೇ = ಪರಬ್ರಹ್ಮನಿಗೆ ಹಗಲು ಬರೋಣ (ಮಹಾ ಪ್ರಲಯದ ಅಂತ್ಯಕಾಲದಲ್ಲಿ) ಅವ್ಯಕ್ತಾತ್ = ಶ್ರೀಪರಮಾತ್ಮನ ದೆಶೆಯಿಂದ, ಸರ್ವಾಃ ವ್ಯಕ್ತಯಃ = ಗುಣವೈಷಮ್ಯ ಮೊದಲಾದ ಎಲ್ಲಾ ಕಾರ್ಯಪದಾರ್ಥಗಳು ಪ್ರಭವಂತಿ = ಹುಟ್ಟುತ್ತವೆ ರಾತ್ರ್ಯಾಗಮೇ = ರಾತ್ರಿಯು ಬರೋಣ (ಪ್ರಲಯಕಾಲವು ಬರೋಣ) ಅವ್ಯಕ್ತಸಂಜ್ಞಕೇ = ತನ್ನ (ಶ್ರೀಪರಮಾತ್ಮನ) ಅನುಗ್ರಹವಿಲ್ಲದೆ ಯಾರಿಗೂ ಕಾಣಿಸಿಕೊಳ್ಳದಿರುವುದರಿಂದ ಅವ್ಯಕ್ತ ಎಂದು ಹೆಸರುಳ್ಳ, ತತ್ರೈವ = ಶ್ರೀಪರಮಾತ್ಮನಲ್ಲಿಯೇ, ಪ್ರಲೀಯಂತೇ = ಲಯ (ನಾಶ) ಹೊಂದುತ್ತವೆ. ॥ ೧೮ ॥

ಪೀ — ಮಹಾಮಹಿಮೆಯನ್ನು ತೋರಿಸುವುದಕ್ಕಾಗಿ ಸೃಷ್ಟಿ ಪ್ರಲಯಗಳಿಗೆ ವಿಚ್ಛೇದವಿಲ್ಲವೆನ್ನುತ್ತಾರೆ-

ಗೀ ॥ ಭೂತಗ್ರಾಮಃ ಸ ಏವಾಯಂ ಭೂತ್ವಾ ಭೂತ್ವಾ ಪ್ರಲೀಯತೇ ।
ರಾತ್ರ್ಯಾಗಮೇಽವಶಃ ಪಾರ್ಥ ಪ್ರಭವತ್ಯಹರಾಗಮೇ ॥ ೧೯ ॥

ಅ ॥ ಪಾರ್ಥ = ಅರ್ಜುನನೇ, ಸ ಏವಾಯಂ ಭೂತಗ್ರಾಮಃ = ಮೊದಲು ಉತ್ಪತ್ತಿ ನಾಶವುಳ್ಳವುಗಳೆಂದು ಹೇಳಲ್ಪಟ್ಟ ಚೇತನಾಚೇತನ ವಸ್ತುಗಳ ಸಮುದಾಯವು, ಅಹರಾಗಮೇ = ಪರಬ್ರಹ್ಮನಿಗೆ ಹಗಲು

* ಮನುಷ್ಯರ ಎಂಟುನೂರ ಅರ್ವತ್ತನಾಲ್ಕು ಕೋಟಿ (8640000000) ವರ್ಷಗಳು ಚತುರ್ಮುಖ ಬ್ರಹ್ಮನಿಗೆ ಒಂದು ದಿನವು. ಇಂತಹ ಮುನ್ನೂರ ಅರವತ್ತು (360) ದಿವಸಗಳು ಚತುರ್ಮುಖನಿಗೆ ಒಂದು ವರ್ಷವು ಬ್ರಹ್ಮನ ಇಂತಹ ಒಂದು ನೂರು (100) ವರ್ಷಗಳು ದ್ವಿಪರಾರ್ಧಾತ್ಮಕ ಕಾಲವೆನಿಸುತ್ತದೆ.

ಆಗುವಾಗ, (ಪ್ರತಿನಿತ್ಯವೂ.) ಪ್ರಭವತಿ = ಹುಟ್ಟುತ್ತದೆ ಭೂತ್ವಾಭೂತ್ವಾ = ಬ್ರಹ್ಮದೇವರ ಹಗಲಿನಲ್ಲಿ ಪ್ರತಿನಿತ್ಯವೂ ಹುಟ್ಟಿ ಹುಟ್ಟಿ, ರಾತ್ರ್ಯಾಗಮೇ — ರಾತ್ರಿಯು ಬರುವಾಗ, ಅವಶಃ = ವಿಶೇಷತಃ ಪರಮಾತ್ಮನ ಅಧೀನವಾಗಿಯೇ, ಪ್ರಲೀಯತೇ = ನಾಶಹೊಂದುತ್ತದೆ ಪುನಃ ಹಗಲು ಬರುವಾಗ ಹುಟ್ಟುತ್ತದೆ ॥ ೧೯ ॥

ಗೀ ॥ ಪರಸ್ತಸ್ಮಾತ್ತು ಭಾವೋಽನ್ಯೋಽವ್ಯಕ್ತೋವ್ಯಕ್ತಾತ್ಸನಾತನಃ ।
ಯಃ ಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ ॥ ೨೦ ॥

ಅ ॥ ಅವ್ಯಕ್ತಸ್ತು = ಅವ್ಯಕ್ತ ಶಬ್ದವಾಚ್ಯನಾದ ಶ್ರೀಪರಮಾತ್ಮನಾದರೂ, ತಸ್ಮಾತ್ = ಉತ್ಪತ್ತಿನಾಶಗಳಿಂದ ಯುಕ್ತವಾದ, ವ್ಯಕ್ತಾತ್ = ಚೇತನಾಚೇತನಗಳ ಸಮುದಾಯಃಕ್ಕಿಂತ, ಅನ್ಯಃ = ವಿಲಕ್ಷಣನು, ಭಾವಃ = ಸರ್ವಸ್ವತಂತ್ರನು ಪರಃ = ಸರ್ವೋತ್ತಮನು, ಸನಾತನಃ = ಅನಾದಿಯು, ಯಃ ಸಃ = ಇಂತಹ ಶ್ರೀಪರಮಾತ್ಮನು, ಸರ್ವೇಷು ಭೂತೇಷು = ಎಲ್ಲಾ ಚೇತನಾಚೇತನ ವಸ್ತುಗಳು, ನಶ್ಯತ್ಸು = ನಾಶಹೊಂದಿದರೂ, ನ ವಿನಶ್ಯತಿ = ನಾಶಹೊಂದುವುದಿಲ್ಲ ॥ ೨೦ ॥

ಪೀ — ಉತ್ತರ ಪ್ರಕರಣಕ್ಕೆ ಸಂಗತಿಯನ್ನು ಹೇಳುತ್ತಾರೆ —

ಭಾ ॥ **(೧) ಮಾಂ ಪ್ರಾಪ್ಯ ನ ಪುನರಾವೃತ್ತಿರಿತಿ ಸ್ಥಾಪಯಿತುಮವ್ಯಕ್ತಾಖ್ಯಾತ್ಮಸಾಮರ್ಥ್ಯಂ ದರ್ಶಯಿತುಂ ಪ್ರಲಯಾದಿ ದರ್ಶಯತಿ (೨) ಸಹಸ್ರಯುಗೇತ್ಯಾದಿನಾ ॥ ಸಹಸ್ರಶಬ್ದೋಽತ್ರಾನೇಕವಾಚೀ । ಬ್ರಹ್ಮವರಂ ॥ (೩) ಸಾ ವಿಶ್ವರೂಪಸ್ಯ ರಜನೀತಿ ಶ್ರುತಿಃ । ದ್ವಿಪರಾರ್ಧಪ್ರಲಯ ಏವಾತ್ರ ವಿವಕ್ಷಿತಃ । ಅವ್ಯಕ್ತಾದ್ವ್ಯಕ್ತಯಃ ಸರ್ವಾ ಇತ್ಯುಕ್ತೇಃ ॥ (೪) ಉಕ್ತಂ ಚ ಮಹಾಕೌರ್ಮೇ । ಅನೇಕಯುಗಪರ್ಯಂತಮಹರ್ವಿಷ್ಣೋಸ್ತಥಾ ನಿಶಾ । ರಾತ್ರ್ಯಾದೌ ಲೀಯತೇ ಸರ್ವಮಹರಾದೌ ಚ ಜಾಯತ ಇತಿ ॥ (೫) ಯಃ ಸರ್ವೇಷು ಭೂತೇಷ್ವಿತಿ ವಾಕ್ಯಶೇಷಾಚ್ಚ ॥ ೧೬,೧೮,೧೯,೨೦ ॥**

ಅ ॥ (೧) ನನ್ನನ್ನು ಹೊಂದಿ ಇರುವವರಿಗೆ ಪುನರಾವೃತ್ತಿಯಿಲ್ಲ (ಅಂದರೆ ಜನನ ಮರಣಗಳು ಇಲ್ಲ-) ಎಂಬುವುದನ್ನು ಸ್ಥಾಪಿಸುವುದಕ್ಕಾಗಿ **ಅವ್ಯಕ್ತ** ಎಂದು ಹೆಸರುಳ್ಳ ತನ್ನ ಸಾಮರ್ಥ್ಯವನ್ನು ತೋರಿಸುತ್ತಾ ತನ್ನಿಂದಲೇ ಪ್ರಲಯ ಸೃಷ್ಟಿ ಮೊದಲಾದುವುಗಳು ಆಗುತ್ತವೆಂಬುವುದನ್ನು **ಸಹಸ್ರಯುಗ** ಇತ್ಯಾದಿಗಳಿಂದ ತೋರಿಸುತ್ತಾರೆ (೨) **ಸಹಸ್ರಯುಗ** ಎಂಬುವ ಈ ಶ್ಲೋಕದಲ್ಲಿದ್ದ ಸಹಸ್ರ ಶಬ್ದವು ಪ್ರಸಿದ್ಧ ಸಹಸ್ರ ಸಂಖ್ಯಾವಾಚಕವಲ್ಲ, ಎಂಬುವ ಅಭಿಪ್ರಾಯದಿಂದ ಸಹಸ್ರಶಬ್ದವು ಇಲ್ಲಿ ಬಹು ಎಂಬುವ ಅರ್ಥವನ್ನು ಹೇಳುತ್ತದೆ ಇಲ್ಲಿದ್ದ ಬ್ರಹ್ಮಶಬ್ದಕ್ಕೆ ಚತುರ್ಮುಖ ಬ್ರಹ್ಮನೆಂದು ಅರ್ಥವಲ್ಲ ಮತ್ತೆ ಪರಬ್ರಹ್ಮನೆಂದು ಅರ್ಥವು (೩) (ಪರಬ್ರಹ್ಮನು ನಿತ್ಯನಾದುದರಿಂದ ಆತನಿಗೆ ಹಗಲು ರಾತ್ರಿಗಳೇ ಇಲ್ಲ ಆದಕಾರಣ ಪರಬ್ರಹ್ಮನನ್ನು ಇಟ್ಟುಕೊಳ್ಳುವುದು ಹೇಗೆಂದರೆ —) ಗುಣಪರಿಪೂರ್ಣನಾದ ಶ್ರೀಪರಮಾತ್ಮನಿಗೆ ಪ್ರಲಯಕಾಲದಲ್ಲಿರುವ ನಿರ್ವ್ಯಾಪಾರಾವಸ್ಥೆಯು **ರಾತ್ರಿ** ಎನಿಸಿಕೊಳ್ಳುತ್ತದೆ (ಹೀಗೆ ಸೃಷ್ಟಿಕಾಲದಲ್ಲಿರುವ ಸೃಷ್ಟ್ಯಾದಿವ್ಯಾಪಾರಾವಸ್ಥೆಯು **ಅಹಃ** ಎನಿಸುತ್ತದೆ) ಇಲ್ಲಿ ಹೇಳಿದ ಪ್ರಲಯವು ಬ್ರಹ್ಮನ ದೈನಂದಿನ ಪ್ರಲಯವಲ್ಲ ಮತ್ತೆ ದ್ವಿಪರಾರ್ಧ ಪ್ರಲಯವೇ, (ಅಂದರೆ ಚತುರ್ಮುಖ ಬ್ರಹ್ಮನಿಗೆ 100 ವರ್ಷವಾದ ಮೇಲೆ ಆಗುವ ಮಹಾಪ್ರಲಯವೇ ವಿವಕ್ಷಿತವು) (ಹೀಗೆ ಸೃಷ್ಟಿಯೂ ಆದಿಸೃಷ್ಟಿಯೆಂದೇ ಇಟ್ಟುಕೊಳ್ಳಬೇಕು) ಏಕೆಂದರೆ — ಅವ್ಯಕ್ತನೆನಿಸಿದ ಶ್ರೀಪರಮಾತ್ಮನಿಂದ ಆದಿಸೃಷ್ಟಿಯಲ್ಲಿ ಎಲ್ಲಾ ಗುಣ

ವೈಷಮ್ಯಾದಿ ಪದಾರ್ಥಗಳೂ ಹುಟ್ಟುತ್ತವೆಂದು ಹೇಳಿರುತ್ತಾರೆ (೪) ಈ ವಿಷಯವು ಮಹಾಕೌರ್ಮ ಪುರಾಣದಲ್ಲಿ ಉಕ್ತವಾಗಿದೆ ಬಹುಯುಗಪರ್ಯಂತವಾಗಿ ಪರಮಾತ್ಮನ ನಿರ್ವ್ಯಾಪಾರಾವಸ್ಥೆಯು ರಾತ್ರಿ ಎನಿಸಿಕೊಳ್ಳುತ್ತದೆ ರಾತ್ರಿಯ ಆದಿಯಲ್ಲಿ ಎಲ್ಲವೂ ನಾಶಹೊಂದುತ್ತದೆ ಹಗಲಿನ ಆದಿಯಲ್ಲಿ ಎಲ್ಲವೂ ಹುಟ್ಟುತ್ತದೆ (೫) ಮತ್ತು ಪಂಚಮಹಾಭೂತಗಳು ನಾಶಹೊಂದಿದರೂ ಯಾವ ಶ್ರೀಪರಮಾತ್ಮನು ನಾಶ ಹೊಂದುವುದಿಲ್ಲವೆಂಬುವ ವಾಕ್ಯದಿಂದಲೂ ಶ್ರೀಪರಮಾತ್ಮನಿಗೆ ನಾಶವಿಲ್ಲವೆಂದು ಸಿದ್ಧವಾಗುತ್ತದೆ

ವಿ ॥ ಬ್ರಹ್ಮಾಂಡಕ್ಕೆ ಆವರಣಭೂತಗಳಾದ ಪೃಥಿವೀ ಮೊದಲಾದ ಪಂಚಮಹಾಭೂತಗಳು ನಾಶ ಹೊಂದಿದ ಮೇಲೆ ಅಹಂಕಾರತತ್ವಕ್ಕೆ ನಾಶವು ಆ ಮೇಲೆ ಚತುರ್ಮುಖಬ್ರಹ್ಮನಿಗೆ ಶರೀರಭೂತವಾದ ಮಹತ್ತತ್ತ್ವವೂ ನಾಶಹೊಂದುತ್ತದೆ ಅಂತೂ ಪ್ರಲಯಕಾಲದಲ್ಲಿ ಚತುರ್ಮುಖನ ದೇಹಕ್ಕೆ ನಾಶವಾಗುತ್ತದೆ ಆದಕಾರಣ ಚತುರ್ಮುಖನಿಗೆ ಶ್ರೀಪರಮಾತ್ಮನಂತೆ ಪ್ರಲಯಕಾಲದಲ್ಲಿ ನಾಶವಿಲ್ಲವೆಂದಲ್ಲ. ॥ ೧೭, ೧೮, ೧೯, ೨೦ ॥

ಗೀ ॥ ಅವ್ಯಕ್ತೋಽಕ್ಷರ ಇತ್ಯುಕ್ತಸ್ತಮಾಹುಃ ಪರಮಾಂ ಗತಿಂ ।
ಯಂ ಪ್ರಾಪ್ಯ ನ ನಿವರ್ತಂತೇ ತದ್ಧಾಮ ಪರಮಂ ಮಮ ॥ ೨೧ ॥

ಅ ॥ ಅವ್ಯಕ್ತಃ=ಶ್ರೀಪರಮಾತ್ಮನು, ಅಕ್ಷರಃ ಇತ್ಯುಕ್ತಃ=ಸರ್ವಾತ್ಮನಾ ನಾಶವಿಲ್ಲದಿರುವುದರಿಂದಲೇ ಅಕ್ಷರನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ (ಆದುದರಿಂದ) ತಂ=ಅಂತಹ ಶ್ರೀಪರಮಾತ್ಮನನ್ನು, ಪರಮಾಂ ಗತಿಂ=**ತಸ್ಮಾದಕ್ಷರಂ** ಎಂಬುವ ವೇದಾದಿಗಳಲ್ಲಿ ಮುಖ್ಯ ಪ್ರಾಪ್ಯನನ್ನಾಗಿ ಆಹುಃ=ಹೇಳುತ್ತಾರೆ ಯಂ=ಯಾವ ಪರಬ್ರಹ್ಮಸ್ವರೂಪವನ್ನು, ಪ್ರಾಪ್ಯ=ಹೊಂದಿ, ನ ನಿವರ್ತಂತೇ=ಹಿಂತಿರುಗುವುದಿಲ್ಲವೋ, ತತ್=ಅದು, ಮಮ=ನನ್ನ, ಪರಮಂ ಧಾಮ=ಮುಖ್ಯ ಸ್ವರೂಪವು ॥ ೨೧ ॥

ಭಾ ॥ (೧) ಅವ್ಯಕ್ತೋ ಭಗವಾನ್ । ಯಂ ಪ್ರಾಪ್ಯ ನ ನಿವರ್ತಂತ ಇತಿ ಮಾಮುಪೇತ್ಯೇತ್ಯುಕ್ತಸ್ಯ ಪರಾಮರ್ಶಾತ್ । ಅವ್ಯಕ್ತಂ ಪರಮಂ ವಿಷ್ಣುಮಿತಿ ಪ್ರಯೋಗಾಚ್ಚ ಗಾರುಡೇ ॥ (೨) ಧಾಮ ಸ್ವರೂಪಂ । ತೇಜಃ ಸ್ವರೂಪಂ ಚ ಗೃಹಂ ಪ್ರಾಜ್ಞೈರ್ಧಾಮೇತಿ ಗೀಯತ ಇತ್ಯಭಿಧಾನಾತ್ ॥ ೨೧ ॥

ಆ ॥ (೧) ಅವ್ಯಕ್ತಃ=ಶ್ರೀಪರಮಾತ್ಮನು **ಮಾಮುಪೇತ್ಯ** ಎಂದು ಹೇಳಿದ ಅರ್ಧವನ್ನು **ಯಂ ಪ್ರಾಪ್ಯ ನ ನಿವರ್ತಂತೇ** ಎಂದು ಅವ್ಯಕ್ತವಿಷಯವಾಗಿ ಪರಾಮರ್ಶೆಮಾಡಿದ್ದಾರೆ ಮತ್ತು ಸರ್ವೋತ್ತಮನಾದ ಶ್ರೀವಿಷ್ಣುವನ್ನು **ಅವ್ಯಕ್ತ**ಶಬ್ದವಾಚ್ಯನನ್ನಾಗಿ ಹೇಳುತ್ತಾರೆ, ಎಂದು ಗಾರುಡದಲ್ಲಿ ಅವ್ಯಕ್ತಶಬ್ದವನ್ನು ವಿಷ್ಣುವಿನಲ್ಲಿ ಪ್ರಯೋಗಿಸಿರುವರು (೨) ಪ್ರಾಜ್ಞರು **ಧಾಮ** ಶಬ್ದಕ್ಕೆ ತೇಜಸ್ಸು, ಸ್ವರೂಪವು, ಮನೆಯು, ಇಷ್ಟ ಅರ್ಥಗಳವೆ, ಎಂದು ಹೇಳುತ್ತಾರೆ, ಎಂದು ಶಬ್ದಶಕ್ತಿಗ್ರಾಹಕವಾದ ಪ್ರಮಾಣದಿಂದ **ಧಾಮ** ಶಬ್ದಕ್ಕೆ ಸ್ವರೂಪವೆಂದರ್ಥವು ॥ ೨೧ ॥

ಪೀ—ಮೋಕ್ಷಸಾಧನಗಳ ಮಧ್ಯದಲ್ಲಿ ಭಕ್ತಿಯು ಮುಖ್ಯಸಾಧನವೆನ್ನುತ್ತಾರೆ—

ಗೀ ॥ ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ ।
ಯಸ್ಯಾಂತಃಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಂ ॥ ೨೨ ॥

ಅ ॥ ಪಾರ್ಥ = ಅರ್ಜುನನೇ, ಭೂತಾನಿ=ಜೇತನಾಜೇತನ ಎಲ್ಲಾವಸ್ತುಗಳೂ, ಯಸ್ಯ=ಯಾವ ಶ್ರೀಪರಮಾತ್ಮನ, ಅಂತಃಸ್ಥಾನಿ=ಒಳಗೆ ಇರುತ್ತವೋ, ಸರ್ವಮಿದಂ=ಈ ಸಂಪೂರ್ಣ ಜಗತ್ತೂ ಯೇನ= ಯಾರಿಂದ ತತಂ=ವ್ಯಾಪ್ತವಾಗಿದೆಯೋ, ಸ ಪರಃ=ಆ ಸರ್ವೋತ್ತಮನಾದ ಪುರುಷಃ = ಗುಣಪೂರ್ಣನಾದ ಶ್ರೀಪರಮಾತ್ಮನು, ಅನನ್ಯಯಾ = ಇತರಾಸಾಧಾರಣವಾದ, ಭಕ್ತ್ಯಾ ತು=ಭಕ್ತಿಯಿಂದಲೇ, ಲಭ್ಯಃ= ಹೊಂದಲ್ಪಡತಕ್ಕವನು ॥ ೨೨ ॥

ಭಾ ॥ ವರಮಸಾಧನಮಾಹ । ಪುರುಷ ಇತಿ ॥ ೨೨ ॥

ಅ ॥ ಮೋಕ್ಷಸಾಧನಗಳ ಮಧ್ಯದಲ್ಲಿ ಭಕ್ತಿಯು ಮುಖ್ಯಸಾಧನವೆಂದು **ಪುರುಷಃ** ಎಂಬುವ ಶ್ಲೋಕದಿಂದ ಹೇಳುತ್ತಾರೆ ॥ ೨೨ ॥

ಪೀ—ಶ್ರೀಪರಮಾತ್ಮನನ್ನು ಹೊಂದಿದರೇನೇ ಪುನರಾವೃತ್ತಿಯಿಲ್ಲದಿರುವುದು, ಎಂದು ಹೇಳಿದ್ದನ್ನು ದೃಢಪಡಿಸುವುದಕ್ಕಾಗಿ ಶ್ರೀಪರಮಾತ್ಮನೇ ಸೃಷ್ಟಿ ಪ್ರಲಯಾದಿ ಕರ್ತನೆಂದು **ಸಹಸ್ರ** ಎಂಬುವ ಶ್ಲೋಕದಿಂದ ಹೇಳುತ್ತಾರೆ ಆ ಶ್ಲೋಕದಲ್ಲಿದ್ದ **ಸಹಸ್ರ** ಎಂಬುವ ಪದವು ಹತ್ತುನೂರನ್ನು ಹೇಳುತ್ತದೆಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ತಾ ॥ (೧) ಸಹಸ್ರಮಿತಿ ಬಹ್ವೇವ । ಬ್ರಹ್ಮಣಃ ಪರಬ್ರಹ್ಮಣಃ । ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವಂತ್ಯಹರಾಗಮೇ । ರಾತ್ರ್ಯಾಗಮೇ ಪ್ರಲೀಯಂತೇ ತತ್ರೈವಾವ್ಯಕ್ತ-ಸಂಜ್ಞಕ ಇತಿ ವಾಕ್ಯಶೇಷಾತ್ ॥ (೨) ನ ಹಿ ವಿರಿಂಚಾಹನ್ಯೇವ ಸರ್ವವ್ಯಕ್ತಿ-(ಕ್ತ)ಲಯಃ ॥ (೩) ನಿತ್ಯಸ್ಯಾಪಿ ಹರೇಃ ಕಾಲೋ ದ್ವಿಪರಾರ್ಧಾತ್ಮಕಸ್ತ್ವಯಂ । ಅಹಶ್ಚಾಸೌ ನಿಮೇಷಶ್ಚೇತ್ಯಪ್ರಮೃತ್ಯೋಪಚರ್ಯತ ಇತಿ ಚ ॥ ೧೬,೨೨ ॥

ಅ ॥ (೧) ಸಹಸ್ರ ಎಂಬುವ ಪದಕ್ಕೆ ಬಹು ಎಂದೇ ಅರ್ಥವು (**ಚತುರ್ಯುಗಸಹಸ್ರಾಣಿ ಬ್ರಹ್ಮಣೋ ದಿನಮುಚ್ಯತೇ** ಇತ್ಯಾದಿಗಳಲ್ಲಿ ನಾಲ್ಕು ಸಹಸ್ರಯುಗಗಳು ಚತುರ್ಮುಖನ ದಿನವೆಂದು ಹೇಳಿದ್ರಿಂದ **ಸಹಸ್ರ**ಪದಕ್ಕೆ ಬಹು (ಅದಕ್ಕಿಂತಲೂ ಹೆಚ್ಚು) ಎಂಬುವ ಅರ್ಥವು ಹೇಗೆ ಆಗುವುದು ಎಂದರೆ--) **ಅವ್ಯಕ್ತಾದ್ವ್ಯಕ್ತಯಃ** ಎಂಬುವ ವಾಕ್ಯಶೇಷದಿಂದ **ಬ್ರಹ್ಮಣಃ** ಎಂಬುವುದಕ್ಕೆ ಪರ ಬ್ರಹ್ಮನ ಎಂದರ್ಥವು (ಅಂದರೆ ಇಲ್ಲಿ ಚತುರ್ಮುಖ ಬ್ರಹ್ಮನ ಅಹೋರಾತ್ರವನ್ನು ಹೇಳುವುದಲ್ಲ ಮತ್ತೆ ಪರಬ್ರಹ್ಮನ ದ್ವಿಪರಾರ್ಧಾತ್ಮಕವಾದ ಅಹೋರಾತ್ರವು) (ಇಲ್ಲಿ ಬ್ರಹ್ಮಪದದಿಂದ ಪರಬ್ರಹ್ಮನನ್ನು ಇಟ್ಟುಕೊಳ್ಳದೆ, ಚತುರ್ಮುಖ ಬ್ರಹ್ಮನ ಅಹೋರಾತ್ರವೆಂದು ಇಟ್ಟುಕೊಂಡರೆ **ಅವ್ಯಕ್ತಾದ್ವ್ಯಕ್ತಯಃ** ಎಂಬುವ ಪ್ರಮಾಣವಿರೋಧವು ಬರುವುದು) (೨) (**ಅವ್ಯಕ್ತಾತ್** ಎಂಬುವ ವಾಕ್ಯವಿದ್ದರೂ ಚತುರ್ಮುಖನ ಅಹೋರಾತ್ರವೆಂದು ಏಕೆ ಅರ್ಥಮಾಡಕೂಡದೆಂದರೆ—) ಚತುರ್ಮುಖ ಬ್ರಹ್ಮನ ಹಗಲಿನ ಅವಸಾನದಲ್ಲಿಯೇ ಸಮಸ್ತವಸ್ತುಗಳಿಗೆ ಲಯವಾಗುವುದಿಲ್ಲವಷ್ಟೇ (ಹೀಗೆಯೇ ಚತುರ್ಮುಖನಿಗೆ ಹಗಲು ಆಗುವಾಗ ಸಮಸ್ತ ವಸ್ತುಗಳು ಹುಟ್ಟುವುದೂ ಇಲ್ಲವಷ್ಟೆ) (೩) (ಶ್ರೀಪರಮಾತ್ಮನಿಗೆ ಕಾಲಪ್ರಯುಕ್ತ ವಿಕಾರವಿಲ್ಲದಿರುವುದರಿಂದಲೂ ಮತ್ತು **ಪರನಾಮನಿನಿಮೇಷಕಾಂತೇ** ಇತ್ಯಾದಿಗಳಲ್ಲಿ ದ್ವಿಪರಾರ್ಧಾತ್ಮಕ ಕಾಲವನ್ನು ನಿಮೇಷವೆಂದು ಹೇಳಿದ್ರಿಂದಲೂ, ಅದು ಅಹೋರಾತ್ರರೂಪಕಾಲವು ಹೇಗೆ ಆಗುವುದು, ಎಂಬುವ ಆಶಂಕೆಯನ್ನು ಸ್ಮೃತಿಯಿಂದಲೇ ಪರಿಹರಿಸುತ್ತಾರೆ) ಶ್ರೀಪರಮಾತ್ಮನು ನಿರ್ವಿಕಾರನಾಗಿ ಯಾವಾ

ಗಲೂ ಒಂದೇ ಪ್ರಕಾರವಿರುವವನಾದರೂ ದ್ವಿಪರಾರ್ಧಾತ್ಮಕವಾದ ಕಾಲವು ಆತನ ಹಗಲು ನಿಮೇಷ ವೆಂದೂ ಪ್ರವೃತ್ತಿಯಿಲ್ಲದಿರುವುದರಿಂದ ಅಮುಖ್ಯವಾಗಿ ಹೇಳಲ್ಪಡುತ್ತದೆ

ವಿ ॥ ರಾತ್ರಿಯಲ್ಲಿ ಹೇಗೋ ಹಾಗೆಯೇ ಪ್ರಲಯಕಾಲದಲ್ಲಿ ವಿಶೇಷವಾಗಿ ಸೃಷ್ಟ್ಯಾದಿ ವ್ಯಾಪಾರ ವಿಷಯದಲ್ಲಿ ಪ್ರವೃತ್ತಿಯಿಲ್ಲದಿರುವುದರಿಂದಲೂ, ಹಗಲಿನಲ್ಲಿದ್ದಂತೆಯೇ ಇತರ ಕಾಲದಲ್ಲಿ ಪ್ರವೃತ್ತಿಯಿದ್ದುದ ರಿಂದಲೂ ಪ್ರಲಯಾದಿಕಾಲವು ರಾತ್ರಿ ಮೊದಲಾದ ರೂಪದಿಂದ ಹೇಳಲ್ಪಡುತ್ತದೆ ॥ ೧೭—೨೨ ॥

ಪೀ—ಯಾವ ದೇವತಾಧಿಷ್ಠಿತವಾದ ಮಾರ್ಗದಲ್ಲಿ ಹೋದವರಿಗೆ ಅಪುನರಾವೃತ್ತಿ ಪುನರಾವೃತ್ತಿ ಗಳಾಗುತ್ತವೋ, ಅಂತಹ ದೇವತೆಗಳನ್ನು ಹೇಳುತ್ತಾರೆ—

ಗೀ ॥ ಯತ್ರ ಕಾಲೇ ತ್ವನಾವೃತ್ತಿಮಾವೃತ್ತಿಂ ಚೈವ ಯೋಗಿನಃ ।
ಪ್ರಯಾತಾ ಯಾಂತಿ ತಂ ಕಾಲಂ ವಕ್ಷ್ಯಾಮಿ ಭರತರ್ಷಭ ॥ ೨೩ ॥

ಅ ॥ ಭರತರ್ಷಭ=ಅರ್ಜುನನೇ, ಯತ್ರ ಕಾಲೇ=ಯಾವ ಕಾಲಾಭಿಮಾನಿಗಳಾದ ದೇವತೆಗ ಳಿಂದ ನಿಯಮ್ಯವಾದ ಮಾರ್ಗದಲ್ಲಿ, ಮತ್ತು ಕಾಲಾನಭಿಮಾನಿಯಾದ ದೇವತಾಧಿಷ್ಠಿತ ಮಾರ್ಗದಲ್ಲಿ, ಪ್ರಯಾತಾಃ=ದೇಹ ಬಿಟ್ಟು ಹೋಗಿರುವ, ಯೋಗಿನಃ=ಯೋಗಿಗಳು, ಅನಾವೃತ್ತಿಂ=ಹಿಂತೆರಳಿ ಈ ಲೋಕಕ್ಕೆ ಬಾರದಿರುವಿಕೆಯನ್ನೂ, ಮತ್ತು ಆವೃತ್ತಿಂ ಚೈವ=ಹಿಂತೆರಳಿ ಪುನಃ ಈ ಲೋಕಕ್ಕೆ ಬರುವಿಕೆ ಯನ್ನೂ, ಯಾಂತಿ ಏವ=ಹೊಂದಿಯೇ ಹೊಂದುತ್ತಾರೋ, ಭರತರ್ಷಭ=ಭರತಕುಲದಲ್ಲಿ ಶ್ರೇಷ್ಠನಾದ ಅರ್ಜುನನೇ, ತಂ ಕಾಲಂ=ಅಂತಹ ಕಾಲಕ್ಕೆ ಅಭಿಮಾನಿಗಳಾದ ದೇವತೆಗಳನ್ನೂ, ಕಾಲಕ್ಕೆ ಅಭಿಮಾನಿ ಗಳಾಗದ ದೇವತೆಗಳನ್ನೂ, ವಕ್ಷ್ಯಾಮಿ=ಹೇಳುವೆನು. ॥ ೨೩ ॥

ಪೀ—ಯಾವ ಕಾಲದಲ್ಲಿ ಮೃತರಾದವರು, ಆವೃತ್ತ್ಯನಾವೃತ್ತಿಗಳನ್ನು (ಅಂದರೆ ಮೇಲಿನ ಲೋಕ ಗಳಿಗೆ ಹೋದವರು ಹಿಂತೆರಳಿ ಬರುವುದು, ಬಾರದಿರುವುದು ಇವುಗಳನ್ನು) ಹೊಂದುತ್ತಾರೋ, ಆ ಕಾಲ ವನ್ನು ಪ್ರತಿಪಾದಿಸುವುದಕ್ಕಾಗಿ ಮೇಲಿನ ಗ್ರಂಥವು ಎಂಬೀ ಅನ್ಯಥಾಪ್ರತೀತಿಯನ್ನು ಹೋಗಲಾಡಿಸು ತ್ತಾರೆ—

ಭಾ ॥ (೧) ಯತ್ಕಾಲಾದ್ಯಭಿಮಾನಿದೇವತಾ ಗತಾ ಆವೃತ್ತ್ಯನಾವೃತ್ತೀ ಗಚ್ಛಂತಿ ತಾ ಆಹ ।
ಯತ್ರೇತ್ಯಾದಿನಾ ॥ (೨) ಕಾಲ ಇತ್ಯುಪಲಕ್ಷಣಂ । ಅಗ್ನ್ಯಾದೇರಪಿ ವಕ್ಷ್ಯಮಾಣ-
ತ್ವಾತ್ ॥ ೨೩ ॥

ಅ ॥ (೧) ಕಾಲಾದಿಗಳಿಗೆ ಅಭಿಮಾನಿಗಳಾದ ಯಾವ ದೇವತೆಗಳಿಂದಲೂ, ಅಭಿಮಾನಿಗಳಾಗದ ದೇವತೆಗಳಿಂದಲೂ ಆಧಿಷ್ಠಿತವಾದ ಮಾರ್ಗಗಳಿಂದ ಹೋದವರು ಆವೃತ್ತ್ಯನಾವೃತ್ತಿಗಳನ್ನು ಹೊಂದು ತ್ತಾರೋ, ಅಂತಹ ಎರಡುವಿಧ ಮಾರ್ಗಾಭಿಮಾನಿ ದೇವತೆಗಳನ್ನು ಯತ್ರ ಎಂಬುವ ಶ್ಲೋಕದಿಂದ ಹೇಳು ತ್ತಾರೆ. (೨) ಮಾರ್ಗಾಭಿಮಾನಿ ದೇವತೆಗಳಾದ ಅಗ್ನಿ ಜ್ಯೋತಿರ್ಧೂಮರೆಂಬುವ ಕಾಲಾನಭಿಮಾನಿ ದೇವತೆಗಳನ್ನು ಮುಂದೆ ಹೇಳುವುದರಿಂದ **ಕಾಲ** ಎಂಬುವ ಶಬ್ದದಿಂದ ಕಾಲಾಭಿಮಾನಿ ದೇವತೆಗಳನ್ನೂ ಕಾಲಾನಭಿಮಾನಿ ದೇವತೆಗಳನ್ನೂ ಇಟ್ಟುಕೊಳ್ಳಬೇಕು. ॥ ೨೩ ॥

ಪೀ—ಶ್ರೀಪರಮಾತ್ಮನನ್ನು ಹೊಂದಿದವರಿಗೆ ಪುನರಾವೃತ್ತಿಯಿಲ್ಲ ಶ್ರೀಹರಿಯನ್ನು ಹೊಂದದೆ ಇತರ ದೇವತೆಗಳನ್ನು ಹೊಂದಿದವರಿಗೆ ಪುನರಾವೃತ್ತಿಯಿದೆಯೆಂದು ಹೇಳಿದೆ ಅದರಲ್ಲಿ ಪುನರಾವೃತ್ತಿಯುಳ್ಳ

ವರೂ, ಪುನರಾವೃತ್ತಿಯಿಲ್ಲದವರೂ ಯಾವ ಮಾರ್ಗದಿಂದ ಹೋಗುತ್ತಾರೆಂದರೆ **ಯತ್ರ** ಎಂಬುವ ಶ್ಲೋಕದಿಂದ ಸಮಾಧಾನ ಹೇಳುತ್ತಾರೆ ಯಾವ ಕಾಲದಲ್ಲಿ ಮರಣ ಹೊಂದಿದವರು ಹಿಂತೆರಳದೆ ಅಲ್ಲಿಯೇ ಇರುತ್ತಾರೋ ಯಾವ ಕಾಲದಲ್ಲಿ ಮೃತರಾದವರು ಪುನರಾವೃತ್ತಿಯನ್ನು ಹೊಂದುತ್ತಾರೋ, ಅಂತಹ ಕಾಲವನ್ನು ಹೇಳುತ್ತೇನೆಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ತಾ ॥ (೧) ಯತ್ರ ಕಾಲಾಭಿಮಾನಿದೇವತಾಸು ಮೃತ್ಯನಂತರಂ ಪ್ರಯಾತಾಃ ॥ (೨) ಅಗ್ನಿ-ಜ್ಯೋತಿರ್ಧೂಮಾನಾಮಕಾಲಾಭಿಮಾನಿತ್ವೇಽಪಿ ಕಾಲಪ್ರಾಚುರ್ಯಾತ್ಕಾಲ ಇತ್ಯು-ಚ್ಯತೇ ॥ (೩) ಅಗ್ನಿರ್ಜ್ಯೋತಿರಿತಿ ದ್ವೇಧಾ ವಹ್ನೇಃ ಪುತ್ರೋ ವ್ಯವಸ್ಥಿತಃ । ತಂ ಪ್ರಾಪ್ಯ ಯಾತಿ ಬ್ರಹ್ಮಜ್ಞೋ ದಿವಸಾದ್ಯಭಿಮಾನಿನ ಇತಿ ಸತ್ತತ್ತ್ವೇ ॥ (೪) ತತ್ಕಾಲ-ಮರಣವಿವಕ್ಷಾಯಾಮಗ್ನಿರ್ಜ್ಯೋತಿರ್ಧೂಮಾನಾಮಯೋಗಃ ॥ ೧ ॥

ಅ ॥ (೧) ಮರಣ (ದೇಹವಿಯೋಗ)ವಾದ ಮೇಲೆ ಯಾವ ಕಾಲಾಭಿಮಾನಿಗಳಾದ ದೇವತೆಗಳಿಂದ ನಿಯಮ್ಯ ಮಾರ್ಗಗಳಲ್ಲಿ ಹೋದವರು (೨) ಪ್ರಾಪ್ಯರೆಂದು ಹೇಳಲ್ಪಡತಕ್ಕ ಅಗ್ನಿಃ ಜ್ಯೋತಿಃ ಧೂಮರು ಕಾಲಕ್ಕೆ ಅಭಿಮಾನಿಗಳಾಗದಿದ್ದರೂ ಕಾಲಕ್ಕೆ ಪ್ರಾಚುರ್ಯವಿದ್ದುದರಿಂದ ಅವರು ಕಾಲವೆಂದು ಹೇಳಲ್ಪಡುತ್ತಾರೆ (ಅಂದರೆ ಮಾರ್ಗದಲ್ಲಿ ಪ್ರಾಪ್ಯರೆಂದು ಹೇಳಲ್ಪಡುವ ದೇವತೆಗಳಲ್ಲಿ ಕಾಲಾಭಿಮಾನಿ ದೇವತೆಗಳು ಹೆಚ್ಚು ಇದ್ದ ಪ್ರಯುಕ್ತ ಕಾಲಪದದಿಂದ ಕಾಲಾಭಿಮಾನಿಗಳಾಗದೆ ಇದ್ದ ಮಾರ್ಗಕ್ಕೆ ಅಭಿಮಾನಿಗಳಾದ ಅಗ್ನ್ಯಾದಿಗಳನ್ನು ಇಟ್ಟುಕೊಳ್ಳಬೇಕು ಅಂದರೆ ಮರಣಾನಂತರದಲ್ಲಿ ಪ್ರಾಪ್ಯರಾದ ದೇವತೆಗಳಲ್ಲಿ ಕಾಲಾನಭಿಮಾನಿ ದೇವತೆಗಳಿಂದಲೂ, ಕಾಲಾಭಿಮಾನಿ ದೇವತೆಗಳು ಬಹಳ ಇರುವುದರಿಂದ ಗೀತಾದಲ್ಲಿ ಕಾಲ ಎಂಬುವ ಪದದಿಂದ ಕಾಲಾಭಿಮಾನಿಗಳನ್ನು ಕಂರತಃ ಹೇಳಿದ್ದು) (೩) **ತೇಽರ್ಚಿಷಮಭಿಸಂಭ-ವಂತಿ, ಅರ್ಚಿರಾದಿನಾ ತತ್ಪ್ರಥಿತೇಃ** ಇತ್ಯಾದಿಗಳಲ್ಲಿ ಜ್ಯೋತಿರಭಿಮಾನಿ ದೇವತಾನಿಯಮ್ಯ ಲೋಕವು ಪ್ರಥಮಪ್ರಾಪ್ಯವೆಂದು ಹೇಳಿದ್ರಿಂದ ಜ್ಯೋತಿರ್ಲೋಕಕ್ಕಿಂತ ಪ್ರಥಮತಃ ಅಗ್ನಿಲೋಕಪ್ರಾಪ್ತಿಯು ಹೇಗೆ ಹೇಳಲ್ಪಡುತ್ತದೆ? ಮತ್ತು ಆಹಃ ಮೊದಲಾದ ಪದಗಳಿಂದ ಅಹರಾದ್ಯಭಿಮಾನಿ ದೇವತೆಗಳನ್ನು ಇಟ್ಟುಕೊಳ್ಳುವುದು ಹೇಗೆ? ಎಂಬುವ ಆಶಂಕೆಯನ್ನು ಸ್ಮೃತಿಯಿಂದಲೇ ಪರಿಹರಿಸುತ್ತಾರೆ—) ಪ್ರಧಾನ ವಹ್ನಿಯ ಪುತ್ರನು, ಅಗ್ನಿ, ಜ್ಯೋತಿಃ, ಎಂದು ಎರಡು ಪ್ರಕಾರವಿರುವವನು ಬ್ರಹ್ಮಜ್ಞಾನಿಯು ಕ್ರಮವಾಗಿ ಆ ಅಗ್ನಿಲೋಕ ಜ್ಯೋತಿ ಲೋಕಗಳನ್ನು ಹೊಂದಿ ದಿವಸಾದಿಗಳಿಗೆ ಅಭಿಮಾನಿಗಳಾದ ದೇವತೆಗಳ ಲೋಕಗಳನ್ನು ಹೊಂದುತ್ತಾನೆಂದು ಸತ್ತತ್ವವೆಂಬುವ ಗ್ರಂಥದಲ್ಲಿವೆ (೪) (ಹೀಗೆ ಸ್ಮೃತಿಯಿಂದ ಹಿಂದೆ ಹೇಳಿದ ಅರ್ಥವನ್ನೇ ಇಟ್ಟುಕೊಳ್ಳಬೇಕು ಅಹರಾದಿಕಾಲದಲ್ಲಿ ಮರಣ ಹೊಂದಿದವರಿಗೆ ಪುನರಾವೃತ್ತಿಯಿದೆ ಎಂದು ಸಮರ್ಥಿಸಿದರು. (ಕಾಲಾಭಿಮಾನಿ ದೇವತೆಗಳನ್ನು ಇಟ್ಟುಕೊಳ್ಳದೆ ಅಹರಾದಿ ಕಾಲವನ್ನು ಇಟ್ಟುಕೊಂಡರೆ ಬಾಧಕವನ್ನು ಹೇಳುತ್ತಾರೆ—) ಅಹರಾದಿಕಾಲಗಳಲ್ಲಿ ಮರಣವಾದರೆ ಅಪುನರಾವೃತ್ತ್ಯಾದಿಗಳು ಆಗುವವು, ಎಂದು ವಿವಕ್ಷೆಯಿದ್ದರೆ ಅಗ್ನಿಃ ಜ್ಯೋತಿಃ ಧೂಮಗಳು ಮರಣಕಾಲಗಳು ಆಗದೆ ಇದ್ದುದರಿಂದ ಅಗ್ನಿಃ ಜ್ಯೋತಿಃ ಧೂಮಃ ಎಂದು ಹೇಳಿದ್ದು ಕೂಡದೆ ಹೋಗುವುದು ಏಕೆಂದರೆ ಅಹರಾದಿಕಾಲಗಳಲ್ಲಿ ಮರಣವು ಇದ್ದಂತೆ ಅಗ್ನಿಃ ಜ್ಯೋತಿಃ ಧೂಮಗಳಲ್ಲಿ ಮರಣವೆಂಬುವುದು ಇಲ್ಲವಷ್ಟೆ ॥ ೧ ॥

ಪೀ— ಪ್ರಮಾಣಾಂತರದಿಂದಲೂ ಹಿಂದೆ ಹೇಳಿದ ಅರ್ಥವನ್ನೇ ದೃಢೀಕರಿಸುತ್ತಾರೆ—

ತಾ ॥ (೧) ಅಥ ಯೋ ದಕ್ಷಿಣೇ ಪ್ರಮಾಯತೇ ಪಿತೃಣಾಮೇವ ಮಹಿಮಾನಂ ಗತ್ವಾ ಚಂದ್ರಮಸಃ ಸಾಯುಜ್ಯಂ ಸಲೋಕತಾಮಾಪ್ನೋ(ತಾಂಗಚ್ಛ)ತ್ಯೇತೌ ವೈ ಸೂರ್ಯಾ-

ಚಂದ್ರಮಸೋರ್ಮಹಿಮಾನೌ ಬ್ರಾಹ್ಮಣೋ ವಿದ್ವಾನಭಿಜಯತಿ ತಸ್ಮಾದ್ಬ್ರಾಹ್ಮ-ಣೋ ಮಹಿಮಾನಮಾಪ್ನೋತೀತಿ ವಿದುಷೋ ದಕ್ಷಿಣಾಯನಮರಣೇಽಪ್ಯಪುನರಾ-ವೃತ್ತ್ಯಾ ಬ್ರಹ್ಮಪ್ರಾಪ್ತಿಶ್ರುತೇಃ ॥ (೨) ವಿದ್ವಾನ್ಬ್ರಾಹ್ಮ ಸಮಾಪ್ನೋತಿ ಯತ್ರ ತತ್ರ ಮೃತೋಽಪಿ ಸನ್ನಿತಿ ಚ ಪಾದ್ಮೇ ॥ ೨ ॥ ॥ ೨೩ ॥

ಅ ॥ (೧) ಯಾವನು ದಕ್ಷಿಣಾಯನದಲ್ಲಿ ಮೃತನಾಗುತ್ತಾನೋ, ಅವನು ಪಿತೃಗಳ ಪೂಜೆಯನ್ನೇ ಹೊಂದಿ ಚಂದ್ರನ ಸಾಯುಜ್ಯನನ್ನೂ ಸಮಾನಲೋಕವನ್ನೂ ಹೊಂದುತ್ತಾನೆ ಪರಬ್ರಹ್ಮನನ್ನು ಹೊಂದಲು ಯೋಗ್ಯನಾದ ಅಪರೋಕ್ಷಜ್ಞಾನಿಯು ಸೂರ್ಯಚಂದ್ರರಿಂದ ತನ್ನ ಯೋಗ್ಯತಾನುಸಾರ ಪೂಜೆಗಳನ್ನು ಹೊಂದುತ್ತಾನೆ ಆದುದರಿಂದ ಅಪರೋಕ್ಷಜ್ಞಾನಿಯು ಆ ಲೋಕದ್ದೆಶೆಯಿಂದ ಪರಬ್ರಹ್ಮನನ್ನು ಹೊಂದಿ ತನ್ನಿಂದ ಅಪರೋಕ್ಷೀಕೃತ ಬ್ರಹ್ಮನಿಂದ ಯಥೋಚಿತವಾದ ಮರ್ಯಾದೆಯನ್ನು ಹೊಂದುತ್ತಾನೆ ಹೀಗೆ ಅಪರೋಕ್ಷಜ್ಞಾನಿಗೆ ದಕ್ಷಿಣಾಯನದಲ್ಲಿ ಮರಣಬಂದರೂ ಪುನರಾವೃತ್ತಿಯಿಲ್ಲದೆ ಪರಬ್ರಹ್ಮಪ್ರಾಪ್ತಿಯಾಗುತ್ತದೆಂದು ಹೇಳುವ ವೇದರೂಪವಾದ ಪ್ರಮಾಣವಿದೆ (೨) (ಈ ವಿಷಯದಲ್ಲಿ ಸ್ಮೃತಿರೂಪ ಪ್ರಮಾಣವನ್ನು ಹೇಳುತ್ತಾರೆ—) ಅಪರೋಕ್ಷಜ್ಞಾನಿಯು ಅಹರಾದಿಗಳಲ್ಲಿ ಆಗಲೀ ರಾತ್ರ್ಯಾದಿಗಳಲ್ಲಿ ಆಗಲೀ ಯಾವಾಗ ಮರಣಹೊಂದಿದರೂ ಪರಬ್ರಹ್ಮನನ್ನು ಹೊಂದಿಯೇ ಹೊಂದುತ್ತಾನೆ, ಎಂದು ಪಾದ್ಮಪುರಾಣದಲ್ಲಿ ಅಪರೋಕ್ಷಜ್ಞಾನಿಗೆ ಮೋಕ್ಷವು ನಿಶ್ಚಿತವೇ ಎಂದು ಹೇಳಿದೆ

ವಿ ॥ **(1) ಯ ಏವಂ ವಿದ್ವಾನುದಗಯನೇ ಪ್ರಮಿಯತೇ ದೇವಾನಾಮೇವ ಮಹಿಮಾನಂ ಗತ್ವಾऽऽದಿತ್ಯಸ್ಯ ಸಾಯುಜ್ಯಂ ಗಚ್ಛತ್ಯಥ ಯೋ ದಕ್ಷಿಣೇ ಪ್ರಮಿಯತೇ** ಎಂಬುವ ಶ್ರುತಿಯಲ್ಲಿ ಉತ್ತರಾಯಣದಲ್ಲಿ ಮರಣಹೊಂದಿದ ಅಪರೋಕ್ಷ ಜ್ಞಾನಿಯು ಪುನಃ ಹಿಂತೆರಳದೆ ಪರಬ್ರಹ್ಮನನ್ನು, ದಕ್ಷಿಣಾಯನದಲ್ಲಿ ಮರಣ ಹೊಂದಿದ ಕರ್ಮಿಯು ಹಿಂತೆರಳಿ ಚಂದ್ರನನ್ನು ಹೊಂದುತ್ತಾನೆಂದು ಹೇಳಿ ಪುನಃ ಜ್ಞಾನಿಯಾದವನು ಉತ್ತರಾಯಣದಲ್ಲಿ ಆಗಲೀ ದಕ್ಷಿಣಾಯನದಲ್ಲಿ ಆಗಲೀ ಮೃತನಾದವನು ಹಿಂತೆರಳದೆ ಪರಬ್ರಹ್ಮನನ್ನು ಹೊಂದುತ್ತಾನೆಂದು ಹೇಳಿದೆ ಆದಕಾರಣ ಉತ್ತರಾಯಣದಲ್ಲಿ ಮೃತರಾದವರು ಅಪುನರಾವೃತ್ತಿಯನ್ನು ಹೊಂದುತ್ತಾರೆಂದು ನಿಯಮವಿಲ್ಲದಿರುವುದರಿಂದ ಬೇರೆ ಅರ್ಥವನ್ನು ಅಂಗೀಕರಿಸ ಕೂಡದು. ॥ ೨೩ ॥

ಗೀ ॥ ಅಗ್ನಿರ್ಜ್ಯೋತಿರಹಃ ಶುಕ್ಲಃ ಷಣ್ಮಾಸಾ ಉತ್ತರಾಯಣಂ ।
ತತ್ರ ಪ್ರಯಾತಾ ಗಚ್ಛಂತಿ ಬ್ರಹ್ಮ ಬ್ರಹ್ಮವಿದೋ ಜನಾಃ ॥ ೨೪ ॥

ಅ ॥ ಅಗ್ನಿಃ=ಅಗ್ನಿ ಎಂಬ ದೇವತೆಯು, ಜ್ಯೋತಿಃ=ಅರ್ಚಿರ್ನಾಮಕ ದೇವತೆಯು, ಅಹಃ=ಅಭಿಜಿದ್ದೇವತೆಯಿಂದ ಕೂಡಿದ ಅಹಃ (ಹಗಲಿಗೆ) ಅಭಿಮಾನಿದೇವತೆಯೂ, ಶುಕ್ಲಃ=ಪೌರ್ಣಮಾಸ್ಯಭಿಮಾನಿಯಾದ ದೇವತೆಯಿಂದ ಕೂಡಿಕೊಂಡು ಇದ್ದ ಶುಕ್ಲಪಕ್ಷಾಭಿಮಾನಿ ದೇವತೆಯೂ, ಷಣ್ಮಾಸಾಃ=ಆರು ತಿಂಗಳಿಗೆ ಅಭಿಮಾನಿಯಾದ ದೇವತೆಯೂ, ಉತ್ತರಾಯಣಂ=ವಿಷುವಿಗೆ ಅಭಿಮಾನಿಯಾದ ದೇವತೆಯಿಂದ ಕೂಡಿಕೊಂಡು ಇದ್ದ ಉತ್ತರಾಯಣಾಭಿಮಾನಿ ದೇವತೆಯು (ಹೀಗೆ ಈ ದೇವತೆಗಳು ಇರುತ್ತಾರೆ) ತತ್ರ=ಕ್ರಮದಿಂದ ನಿರ್ದಿಷ್ಟರಾದ ಅಗ್ನ್ಯಾದಿ ದೇವತೆಗಳಿಂದ ನಿಯಮ್ಯಗಳಾದ ಮಾರ್ಗಗಳಲ್ಲಿ, ಪ್ರಯಾತಾಃ=ಹೋಗಿರುವ, ಬ್ರಹ್ಮವಿದಃ= ಪರಬ್ರಹ್ಮನ ಜ್ಞಾನಿಗಳಾದ, ಜನಾಃ= ಜನರು, ಬ್ರಹ್ಮ= ಪರಬ್ರಹ್ಮನನ್ನು, ಗಚ್ಛಂತಿ= ಹೊಂದುತ್ತಾರೆ ॥ ೨೪ ॥

ಗೀ ॥ ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಂ ।
ತತ್ರ ಚಾಂದ್ರಮಸಂ ಜ್ಯೋತಿರ್ಯೋಗೀ ಪ್ರಾಪ್ಯ ನಿವರ್ತತೇ ॥ ೨೫ ॥

ಅ ॥ ಧೂಮಃ=ಧೂಮಾಭಿಮಾನಿ ದೇವತೆಯೂ, ರಾತ್ರಿಃ=ರಾತ್ರ್ಯಭಿಮಾನಿ ದೇವತೆಯೂ, ತಥಾ=ಹಾಗೆಯೇ, ಕೃಷ್ಣಃ=ಕೃಷ್ಣಪಕ್ಷಾಭಿಮಾನಿ ದೇವತೆಯೂ, ಷಣ್ಮಾಸಾಃ=ಆರು ತಿಂಗಳಿಗೆ ಅಭಿಮಾನಿಯಾದ ದೇವತೆಯೂ ದಕ್ಷಿಣಾಯನಂ=ದಕ್ಷಿಣಾಯನಾಭಿಮಾನಿ ದೇವತೆಯೂ, (ಇರುತ್ತಾರೆ) ತತ್ರ=ಆ ಧೂಮಾದ್ಯಭಿಮಾನಿದೇವತೆಗಳಿಂದ ನಿಯಮ್ಯುಗಳಾದ ಮಾರ್ಗಗಳಲ್ಲಿ ಹೋಗುವ, ಯೋಗೀ=ಕರ್ಮಯೋಗಿಯು, ಚಾಂದ್ರಮಸಂ ಜ್ಯೋತಿಃ=ಚಂದ್ರನಿಂದ ನಿಯಮ್ಯವಾದ ಲೋಕವನ್ನು, ಪ್ರಾಪ್ಯ=ಹೊಂದಿ, ನಿವರ್ತತೇ=ಪುನಃ ಆ ಲೋಕದಿಂದ ಹಿಂತೆರಳಿ ಸಂಸಾರಕ್ಕೆ ಬರುತ್ತಾನೆ ॥ ೨೫ ॥

ಗೀ॥ ಶುಕ್ಲಕೃಷ್ಣೇ ಗತೀ ಹ್ಯೇತೇ ಜಗತಃ ಶಾಶ್ವತೇ ಮತೇ ।
ಏಕಯಾ ಯಾತ್ಯನಾವೃತ್ತಿಮನ್ಯಯಾಽಽವರ್ತತೇ ಪುನಃ ॥ ೨೬ ॥

ಅ ॥ ಏತೇ=ಹಿಂದೆ ಹೇಳಿದ ಶುಕ್ಲಕೃಷ್ಣೇ=ಶುಕ್ಲಪಕ್ಷಾಭಿಮಾನಿ ದೇವತೆಯಿಂದಲೂ, ಕೃಷ್ಣಪಕ್ಷಾಭಿಮಾನಿ ದೇವತೆಯಿಂದಲೂ, ನಿಯಮ್ಯಗಳಾದ, ಗತೀ=ಮಾರ್ಗಗಳು, ಜಗತಃ=ಜ್ಞಾನಿಯೋಗಿ ಕರ್ಮಯೋಗಿಗಳಾದ ಜನರಿಗೆ ಸಂಬಂಧ ಪಟ್ಟವುಗಳು ಶಾಶ್ವತೇ ಮತೇ=ಶಾಶ್ವತವಾದವುಗಳೆಂದು ಸಮ್ಮತಗಳಾಗಿವೆ ಏಕಯಾ=ಶುಕ್ಲಪಕ್ಷಾಭಿಮಾನಿದೇವತೆಯಿಂದ ನಿಯಮ್ಯವಾದ ಮಾರ್ಗದಿಂದ ಹೋಗುವವನು ಅನಾವೃತ್ತಿಂ=ಪುನಃ ಹಿಂತೆರಳಿ ಭೂಲೋಕಕ್ಕೆ ಬಾರದಿರುವಿಕೆಯನ್ನು, ಯಾತಿ=ಹೊಂದುತ್ತಾನೆ. (ಅಂದರೆ ದುಃಖಮಯವಾದ ಸಂಸಾರವನ್ನ ಹೊಂದದೆ ಮೋಕ್ಷವನ್ನು ಹೊಂದುತ್ತಾನೆ) ಅನ್ಯಯಾ=ಕೃಷ್ಣಪಕ್ಷಾಭಿಮಾನಿಯಾದ ದೇವತೆಯಿಂದ ನಿಯಮ್ಯವಾದ ಮಾರ್ಗದಿಂದ ಹೋಗುವ ಕರ್ಮಯೋಗಿಯು ಪುನಃ=ತಿರುಗಿ, ಆವರ್ತತೇ=ಹಿಂತೆರಳಿ ಭೂಲೋಕಕ್ಕೆ ಬರುತ್ತಾನೆ (ಜನನಮರಣ ರೂಪವಾದ ಸಂಸಾರವನ್ನು ಹೊಂದುತ್ತಾನೆ) ॥ ೨೬ ॥

ಟೀ—ಜ್ಯೋತಿಃಶಬ್ದಕ್ಕೆ ಅನೇಕಾರ್ಥಗಳು ಇದ್ದುದರಿಂದ ವಿವಕ್ಷಿತವಾದ ಅರ್ಥವನ್ನು ಹೇಳುತ್ತಾರೆ—

ಭಾ ॥ (೧) ಜ್ಯೋತಿರರ್ಚಿಃ । ತೇಽರ್ಚಿಷಮಭಿಸಂಭವಂತೀತಿ ಹಿ ಶ್ರುತಿಃ ॥ (೨) ತಥಾ ಚ ನಾರದೀಯೇ । ಅಗ್ನಿಂ ಪ್ರಾಪ್ಯ ತತಶ್ಚಾರ್ಚಿಸ್ತತಶ್ಚಾಹ್ನಃ ಪರಾದಿಕಮಿತಿ ॥ (೩) ಅಭಿಮಾನಿದೇವತಾಶ್ಚಾಗ್ನ್ಯಾದಯಃ । ಕಥಮನ್ಯಥಾ ಅಹ್ನ ಆಪೂರ್ಯಮಾಣಪಕ್ಷಮಿತಿ ಯುಜ್ಯತೇ ॥ (೪) ದಿವಾದಿದೇವತಾಭಿಸ್ತು ಪೂಜಿತೋ ಬ್ರಹ್ಮ ಯಾತಿ ಹೀತಿ ಚ ಬ್ರಾಹ್ಮೇ ॥ (೫) ಮಾಸಾಭಿಮಾನಿಭ್ಯೋಽಯನಾಭಿಮಾನೀ ಚ ಪೃಥಕ್ ॥ ೧ ॥

ಅ ॥ (೧) ಆ ಜ್ಞಾನಿಗಳು ಅರ್ಚಿರ್ಲೋಕವನ್ನು ಹೊಂದುತ್ತಾರೆ, ಅರ್ಚಿಷೋಽಹಃ ಅರ್ಚಿರ್ಲೋಕದಿಂದ ಅಹರ್ಲೋಕಕ್ಕೆ ಹೋಗುತ್ತಾರೆ ಎಂದು ಶ್ರುತಿಯಲ್ಲಿ ಹೇಳಿದ್ದಿಂದ ಜ್ಯೋತಿಃ=ಅಂದರೆ ಅರ್ಚಿರ್ನಾಮಕ ದೇವತೆಯು (೨) ಅಗ್ನಿಲೋಕವನ್ನು ಹೊಂದಿ ಅಲ್ಲಿಂದ ಅರ್ಚಿರ್ಲೋಕಕ್ಕೆ ಅಲ್ಲಿಂದ ಅಹರಾದಿ ಲೋಕಗಳಿಗೆ ಹೋಗುತ್ತಾನೆ ಎಂದು ನಾರದೀಯಪುರಾಣದಲ್ಲಿ ಹಾಗೆಯೇ ಹೇಳಿದೆ (೩) (ಅಭಿಮಾನಿ ದೇವತೆಗಳೆಂದು ಏಕೆ ಹೇಳ ಬೇಕು? ಸಾಮಾನ್ಯವಾಗಿ ತೋರುವ ಅರ್ಥವೇ ಏಕೆ ಆಗಬಾರದು ಎಂದರೆ—)

ಅಗ್ನಿ ಮೊದಲಾದ ಶಬ್ದಗಳಿಂದ ಅಭಿಮಾನಿ ದೇವತೆಗಳನ್ನೇ ಇಟ್ಟುಕೊಳ್ಳಬೇಕು. ಹೀಗೆ ಇಟ್ಟುಕೊಳ್ಳದೆ **ಮರಣಕಾಲವನ್ನು** ತೆಗೆದುಕೊಂಡರೆ (ಅಹೋರಾತ್ರ ಬಿಟ್ಟು ಬೇರೆ ಪಕ್ಷವು ಇಲ್ಲದಿರುವುದರಿಂದ) ಹಗಲಿನ ದ್ದೆಶೆಯಿಂದ ಶುಕ್ಲಪಕ್ಷವನ್ನು ಹೊಂದುತ್ತಾನೆಂಬುವುದು ಹೇಗೆ ಕೂಡುತ್ತದೆ? (ದೇವತೆಯೆಂದು ಇಟ್ಟು ಕೊಂಡರೆ ಕೂಡುತ್ತದೆ ಹೇಗೆಂದರೆ ಹಗಲಿಗೆ ಅಭಿಮಾನಿಯಾದ ದೇವತೆಯ ಲೋಕದಿಂದ ಶುಕ್ಲಪಕ್ಷಾಭಿ ಮಾನಿಯಾದ ದೇವತೆಯ ಲೋಕವನ್ನು ಹೊಂದುತ್ತಾನೆಂದು ಸಂಗತವಾಗುತ್ತದೆ) (೪) ದಿವಸಾದಿಗಳಿಗೆ ಅಭಿಮಾನಿಗಳಾದ ದೇವತೆಗಳಿಂದ ಜ್ಞಾನಿಯು ಪೂಜಿಸಿಕೊಳ್ಳಲ್ಪಟ್ಟವನಾಗಿ ಪರಬ್ರಹ್ಮನನ್ನು ಹೊಂದುತ್ತಾನೆಂದು ಬ್ರಾಹ್ಮಪುರಾಣದ ವಾಕ್ಯದಿಂದಲೂ ಅಹರಾದಿ ಶಬ್ದಗಳು (ದೇವತಾಪರಗಳೇ ಆಗಬೇಕೆಂದು ಸ್ಪಷ್ಟವಾಗುತ್ತದೆ) (೫) (ಮಾಸಗಳನ್ನು ಬಿಟ್ಟು ಅಯನಗಳು ಪ್ರತ್ಯೇಕ ಇಲ್ಲದಿರುವುದರಿಂದ **ಷಣ್ಮಾಸಾ ಉತ್ತರಾಯಣಂ, ಷಣ್ಮಾಸಾ ದಕ್ಷಿಣಾಯನಂ** ಎಂಬುವ ಉಕ್ತಿಯೂ ಮಾಸ ಅಯನ ಶಬ್ದಗಳು ಅಭಿಮಾನಿ ದೇವತಾಪರಗಳೆಂದು ತಿಳಿಸುತ್ತದೆ ಮಾಸ, ಅಯನಗಳಿಗೆ ಅಭಿಮಾನಿಗಳಾದ ದೇವತಗಳು ಪ್ರತ್ಯೇಕ ಪ್ರತ್ಯೇಕವಿದ್ದ ಪ್ರಯುಕ್ತ **ಷಣ್ಮಾಸಾಃ ಉತ್ತರಾಯಣಂ** ಎಂಬೀ ಪ್ರತ್ಯೇಕ ಉಕ್ತಿಯೂ ಕೂಡುತ್ತದೆನ್ನುತ್ತಾರೆ–) ಮಾಸಗಳಿಗೆ ಅಭಿಮಾನಿಗಳಾದ ದೇವತೆಗಳಿಗಿಂತ ಅಯನಗಳಿಗೆ ಅಭಿಮಾನಿಗಳಾದ ದೇವತೆಗಳು ಪ್ರತ್ಯೇಕವೇ ಇದ್ದಾರೆ (ಇದರಿಂದ ಷಣ್ಮಾಸಗಳೇ ಅಯನವು ಎಂಬೀ ಪರರ ವ್ಯಾಖ್ಯಾನವು ಪುರಾಣವಿರೋಧವಿದ್ದಪ್ರಯುಕ್ತ ಅಯುಕ್ತವೆಂದುಕ್ತವಾಯ್ತು) ॥೧॥

ಭಾ ॥ (೧) ತಚ್ಚೋಕ್ತಂ ಗಾರುಡೇ । ಪೂಜಿತಸ್ತ್ವಯನೇನಾಸೌ ಮಾಸ್ಯೈಃ ಪರಿವೃತೇನ ಹೀತಿ । ಅಹರಭಿಜಿತಾ ಶುಕ್ಲಪೌರ್ಣಮಾಸ್ಯಾ ಅಯನಂ ವಿಷುವಾ ಸಹ ॥ (೨) ತಚ್ಚೋಕ್ತಂ ಬ್ರಹ್ಮವೈವರ್ತೇ । ಸಾಹ್ನಾ ಮಧ್ಯಂದಿನೇನಾಥ ಶುಕ್ಲೇನ ಚ ಸಪೂರ್ಣಿಮಾ । ಸವಿಷ್ಣಾ ಚಾಯನೇನಾಸೌ ಪೂಜಿತಃ ಕೇಶವಂ ವ್ರಜೇದಿತಿ ॥೨॥೨೪-೨೬॥

ಅ ॥ (೧) ಮಾಸಾಭಿಮಾನಿದೇವತೆಗಳಿಂದ ಕೂಡಿದ ಅಯನಾಭಿಮಾನಿದೇವತೆಗಳಿಂದ ಅಪರೋಕ್ಷ ಜ್ಞಾನಿಯು ಯಥಾಯೋಗ್ಯವಾಗಿ ಬಹುಮಾನಿಸಿಕೊಳ್ಳಲ್ಪಟ್ಟವನಾಗಿ (ಅಭಿಜಿತಾ=) ಮಧ್ಯಾಹ್ನಾಭಿಮಾನಿಯಾದ ದೇವತೆಯಿಂದ ಕೂಡಿರತಕ್ಕ ಹಗಲಿಗೆ ಅಭಿಮಾನಿನಿಯಾದ ದೇವತೆಯಿಂದ ನಿಯಮ್ಯವಾದ ಲೋಕವನ್ನು, ಪೂರ್ಣಮಾತಿಥಿಗೆ ಅಭಿಮಾನಿನಿಯಾದ ದೇವತೆಯಿಂದ ಕೂಡಿರತಕ್ಕ ಶುಕ್ಲಪಕ್ಷಕ್ಕೆ ಅಭಿಮಾನಿನಿಯಾದ ದೇವತೆಯಿಂದ ನಿಯಮ್ಯವಾದ ಲೋಕವನ್ನು ‡ **ವಿಷುವಿಗೆ** ಅಭಿಮಾನಿನಿಯಾದ ದೇವತೆಯಿಂದ ಕೂಡಿದ ಅಯನಕ್ಕೆ ಅಭಿಮಾನಿನಿಯಾದ ದೇವತೆಯಿಂದ ನಿಯಮ್ಯವಾದ ಲೋಕವನ್ನು ಅಂದರೆ ಮೇಷ ಸಂಕ್ರಮಣಾಭಿಮಾನಿ ದೇವತೆಯಿಂದ ಕೂಡಿರತಕ್ಕ ಉತ್ತರಾಯಣ ಕಾಲಾಭಿಮಾನಿ ದೇವತೆಯಿಂದ ನಿಯಮ್ಯವಾದ ಲೋಕವನ್ನೂ ತುಲಾಸಂಕ್ರಮಣಾಭಿಮಾನಿ ದೇವತೆಯಿಂದ ಕೂಡಿರತಕ್ಕ ದಕ್ಷಿಣಾಯನಕ್ಕೆ ಅಭಿಮಾನಿನಿಯಾದ ದೇವತೆಯಿಂದ ನಿಯಮ್ಯವಾದ ಲೋಕವನ್ನೂ ಹೊಂದುತ್ತಾನೆ, ಎಂದು ಗಾರುಡಪ್ರಮಾಣದಿಂದ (ಅಭಿಮಾನಿ ದೇವತೆಗಳನ್ನು ಇಟ್ಟುಕೊಳ್ಳಬೇಕೆಂದು ಸಿದ್ಧವಾಯ್ತು) (೨) ಹಾಗೆಯೇ ಹಗಲಿಗೆ ಅಭಿಮಾನಿಯಾದ ದೇವತೆಯಿಂದ ಕೂಡಿದ ಮಧ್ಯಂದಿನಕ್ಕೆ ಅಭಿಮಾನಿಯಾದ ದೇವತೆಯಿಂದಲೂ, ಪೂರ್ಣಮಾತಿಥಿಗೆ ಅಭಿಮಾನಿಯಾದ ದೇವತೆಯಿಂದ ಕೂಡಿರತಕ್ಕ ಶುಕ್ಲಪಕ್ಷಾಭಿಮಾನಿ ದೇವತೆ

‡ ಯಾವ ಸಂಕ್ರಮಣದಲ್ಲಿ ಅಹೋರಾತ್ರಿಗಳಿಗೆ ಸಾಮ್ಯವಿದೆಯೋ, ಅದು ವಿಷು ಎನಿಸುತ್ತದೆ ಅದು ಉತ್ತರಾಯಣದಲ್ಲಿ ಮೇಷಸಂಕ್ರಮಣವಾಗುವುದು ದಕ್ಷಿಣಾಯನದಲ್ಲಿ ತುಲಾಸಂಕ್ರಮಣವಾಗುವುದು ಏನಂಚ ಉತ್ತರಾಯಣ ಕಾಲಾಭಿಮಾನಿ ದೇವತೆಯನ್ನಿಟ್ಟುಕೊಂಡರೆ ವಿಷು ಎಂಬುವುದಕ್ಕೆ ಮೇಷಸಂಕ್ರಮಣಾಭಿಮಾನಿ ದೇವತೆಯೆಂಬುವ ಅರ್ಥವನ್ನು ದಕ್ಷಿಣಾಯನಾಭಿಮಾನಿ ದೇವತೆಯನ್ನು ಇಟ್ಟುಕೊಂಡರೆ ವಿಷು ಎಂಬುವುದಕ್ಕೆ ತುಲಾ ಸಂಕ್ರಮಣಾಭಿಮಾನಿದೇವತೆಯು ಎಂದು ಅರ್ಥ ಇಟ್ಟುಕೊಳ್ಳಬೇಕು

ಯಿಂದಲೂ, ವಿಷ್ಣುವಿಗೆ ಅಭಿಮಾನಿಯಾದ ದೇವತೆಯಿಂದ ಕೂಡಿದ ಆಯನಾಭಿಮಾನಿ ದೇವತೆಯಿಂದಲೂ ಅಪರೋಕ್ಷಜ್ಞಾನಿಯು ಪೂಜಿಸಿಕೊಳ್ಳಲ್ಪಟ್ಟವನಾಗಿ ಪರಮಾತ್ಮನನ್ನು ಹೊಂದುತ್ತಾನೆಂದು ಬ್ರಹ್ಮವೈವರ್ತ ಪುರಾಣದಿಂದಲೂ ಆ ಅರ್ಥವು ಸಿದ್ಧವಾಗುತ್ತದೆ ॥ ೨ ॥ ॥ ೨೪, ೨೫, ೨೬ ॥

ಗೀ ॥ ನೈತೇ ಸೃತೀ ಪಾರ್ಥ ಜಾನನ್ ಯೋಗೀ ಮುಹ್ಯತಿ ಕಶ್ಚನ ।
ತಸ್ಮಾತ್ಸರ್ವೇಷು ಕಾಲೇಷು ಯೋಗಯುಕ್ತೋ ಭವಾರ್ಜುನ ॥ ೨೭ ॥

ಅ ॥ ಪಾರ್ಥ=ಅರ್ಜುನನೇ, ಏತೇ=ಹಿಂದೆ, ಹೇಳಿದ ಸೃತೀ=ಮಾರ್ಗಗಳನ್ನು, ಜಾನನ್=ತಿಳಿಯತಕ್ಕ, ಯೋಗೀ=ಮಾರ್ಗಕ್ಕೆ ಕಾರಣಗಳಾದ ಜ್ಞಾನಕರ್ಮಗಳನ್ನು ಮಾಡಿಕೊಂಡಿರುವವನು, ಕಶ್ಚನ=ಯಾವನೊಬ್ಬನೂ, ಅಥವಾ ಯೋಗೀ=ಬ್ರಹ್ಮಪರೋಕ್ಷಜ್ಞಾನವುಳ್ಳ, ಏತೇ ಸೃತೀ=ಹಿಂದೆ ಹೇಳಿದ ಮಾರ್ಗಗಳನ್ನು, ಜಾನನ್=ಪ್ರತ್ಯಕ್ಷೀಕರಿಸುವ ಕಶ್ಚನ=ಯಾವನೊಬ್ಬನೂ, ನ ಮುಹ್ಯತಿ=ಶ್ರೀಪರಮಾತ್ಮನ ವಿಸ್ಮರಣರೂಪವಾದ ಮೋಹವನ್ನು ಹೊಂದುವುದಿಲ್ಲ ತಸ್ಮಾತ್=ಯೋಗವು ಪುರುಷಾರ್ಥಕ್ಕೆ ಕಾರಣವಾಗಿರುವುದರಿಂದ, ಸರ್ವೇಷು ಕಾಲೇಷು=ಎಲ್ಲಾ ಕಾಲಗಳಲ್ಲಿ ಅರ್ಜುನ=ಅರ್ಜುನನೇ ಯೋಗಯುಕ್ತ=ಶ್ರೀಪರಮಾತ್ಮನ ಜ್ಞಾನಭಕ್ತಿಪೂರ್ವಕವಾಗಿ ತಮಗೆ (ಕ್ಷತ್ರಿಯರಿಗೆ) ಯೋಗ್ಯವಾದ ನಿವೃತ್ತಕರ್ಮಾನುಷ್ಠಾನರೂಪವಾದ ಯೋಗದಿಂದ ಕೂಡಿದವನು ಭವ=ಆಗು ॥ ೨೭ ॥

ಗೀ ॥ ವೇದೇಷು ಯಜ್ಞೇಷು ತಪಸ್ಸು ಚೈವ
ದಾನೇಷು ಯತ್ಪುಣ್ಯಫಲಂ ಪ್ರದಿಷ್ಟಂ ।
ಅತ್ಯೇತಿ ತತ್ಸರ್ವಮಿದಂ ವಿದಿತ್ವಾ
ಯೋಗೀ ಪರಂ ಸ್ಥಾನಮುಪೈತಿ ಚಾದ್ಯಂ ॥ ೨೮ ॥

ಅ ॥ ಯೋಗೀ=ಜ್ಞಾನೋಪಾಯವುಳ್ಳವನು, ಇದಂ=ಹಿಂದೆ ಹೇಳಿದ ಅಧ್ಯಾತ್ಮಾದಿಸ್ವರೂಪಗಳನ್ನೂ, ಪರಮಾತ್ಮನು ಸರ್ವ ಜಗತ್ತಿಗೂ, ಸೃಷ್ಟಿಕರ್ತನು ಎಂಬುದನ್ನೂ ಶುಕ್ಲಪಕ್ಷ ಕೃಷ್ಣಪಕ್ಷ ಮಾರ್ಗಾದಿಗಳನ್ನೂ, ವಿದಿತ್ವಾ=ತಿಳಿದುಕೊಂಡು, ವೇದೇಷು=ವೇದಾಧ್ಯಯನದಲ್ಲಿಯೂ, ಯಜ್ಞೇಷು=ಯಾಗಾನುಷ್ಠಾನದಲ್ಲಿಯೂ ತಪಸ್ಸು ಕೃಚ್ಛ್ರ ಚಾಂದ್ರಾಯಣ ಮೊದಲಾದ ತಪಸ್ಸನ್ನು ಮಾಡುವ ವಿಷಯದಲ್ಲಿಯೂ, ದಾನೇಷು=ಸತ್ಪಾತ್ರರಲ್ಲಿ ದ್ರವ್ಯದಾನವನ್ನು ಮಾಡುವುದರಲ್ಲಿಯೂ, ಯದೇವ ಪುಣ್ಯಫಲಂ=ಯಾವುದೇ ಪುಣ್ಯಫಲವು, ಪ್ರದಿಷ್ಟಂ=ಹೇಳಲ್ಪಟ್ಟದ್ದೋ, ತತ್ಸರ್ವಮೇವ=ಆ ಎಲ್ಲಾ ಫಲವನ್ನೇ, ಅತ್ಯೇತಿ=ಅತಿಕ್ರಮಿಸುತ್ತಾನೆ (ಅಂದರೆ ವೇದಾಧ್ಯಯನಾದಿಗಳಿಂದುಂಟಾಗತಕ್ಕ ಫಲಕ್ಕಿಂತಲೂ ಹೆಚ್ಚು ಫಲವನ್ನು ಹೊಂದುತ್ತಾನೆ) ಯೋಗೀ=ಜ್ಞಾನೋಪಾಯವುಳ್ಳವನು ಆದ್ಯಂ=ಅತಿಪ್ರಾಚೀನವಾದ, ಪರಂ=ಸರ್ವೋತ್ತಮವಾದ, ಸ್ಥಾನಂ=ವೈಕುಂಠಾದಿ ಸ್ಥಾನವನ್ನು, ಉಪೈತಿ ಚ=ಹೊಂದುತ್ತಾನೆ ॥ ೨೮ ॥

ಗೀ ॥ ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಅಕ್ಷರಪರಬ್ರಹ್ಮಯೋಗೋ ನಾಮ ಅಷ್ಟಮೋಽಧ್ಯಾಯಃ ॥ ೮ ॥

ಅ ॥ ಹೀಗೆ ಶ್ರೀಮದ್ಭಗವದ್ಗೀತೆಯಲ್ಲಿ ಬ್ರಹ್ಮವಿದ್ಯೆಯಲ್ಲಿ ಯೋಗಶಾಸ್ತ್ರದಲ್ಲಿ ಶ್ರೀಕೃಷ್ಣಾರ್ಜುನರ ಸಂವಾದದಲ್ಲಿ ಅಕ್ಷರಪರಬ್ರಹ್ಮಯೋಗವೆಂಬ ಎಂಟನೇ ಅಧ್ಯಾಯವು ಮುಗಿಯಿತು ॥ ೮ ॥

ಪೀ—ಮಾರ್ಗವನ್ನು ತಿಳಿಯೋಣಮಾತ್ರದಿಂದ ಮೋಹವಿಲ್ಲವೆಂದಾಗುತ್ತದೆಂಬುವ ಪ್ರತೀತಿಯನ್ನು ಹೋಗಲಾಡಿಸುತ್ತಾರೆ–

ಭಾ ॥ (೧) ಏತೇ ಸೃತೀ ಸೋಪಾಯೇ ಜ್ಞಾತ್ವಾನುಷ್ಠಾಯ ನ ಮುಹ್ಯತಿ ॥ (೨) ತಚ್ಚಾಹ ಸ್ಕಾಂದೇ । ಸೃತೀ ಜ್ಞಾತ್ವಾ ತು ಸೋಪಾಯೇ ಅನುಷ್ಠಾಯ ಚ ಸಾಧನಂ । ನ ಕಶ್ಚಿನ್ಮೋಹಮಾಪ್ನೋತಿ ನ ಚಾನ್ಯಾ ತತ್ರ ವೈ ಗತಿರಿತಿ ॥ ೨೬,೨೮ ॥

ಅ ॥ (೧) ಮಾರ್ಗದ ಉಪಾಯಭೂತಗಳಾದ ಜ್ಞಾನಕರ್ಮಗಳಿಂದ ಕೂಡಿದ ಈ ಮಾರ್ಗಗಳನ್ನು ತಿಳಿದು (ಬ್ರಹ್ಮಾಪರೋಕ್ಷಜ್ಞಾನಿಯಾದುದರಿಂದ) ಮಾರ್ಗಪ್ರಾಪ್ತಿಯ ಉಪಾಯವನ್ನು ಅನುಷ್ಠಾನಮಾಡಿ ಪರಮಾತ್ಮನನ್ನು ಮರೆಯುವುದಿಲ್ಲ (೨) ಮಾರ್ಗದ ಉಪಾಯದಿಂದ ಕೂಡಿರುವ ಮಾರ್ಗಗಳನ್ನು ತಿಳಿದು ಮಾರ್ಗಸಾಧನವನ್ನು ಮಾಡಿ ಯಾವನೊಬ್ಬನೂ ಶ್ರೀಪರಮಾತ್ಮನನ್ನು ಮರೆಯುವುದಿಲ್ಲ ಭಗವದ್ವಿಷಯಕ ಮೋಹವನ್ನು ದಾಟಲಿಕ್ಕೆ ಭಗವತ್ಪ್ರಾಪ್ತಿಯಿಂದ ಬೇರೆ ಸಾಧನವಿಲ್ಲ (ಏವಂಚ ಶ್ರೀಪರಮಾತ್ಮನ ವಿಸ್ಮರಣರೂಪವಾದ ಮೋಹವು ಹೋದಮೇಲೆ ಅವರಿಗೆ ಭಗವತ್ಪ್ರಾಪ್ತಿಯಿಂದ ಬೇರೆ ಗತಿಯು ಇಲ್ಲ, ಮತ್ತೆ ಭಗವತ್ಪ್ರಾಪ್ತಿಯೇ ಆಗುತ್ತದೆ) ॥ ೨೬, ೨೮ ॥

ಭಾ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ಭಾಷ್ಯೇ ಅಷ್ಟಮೋಽಧ್ಯಾಯಃ ॥ ೮ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಶ್ರೀಭಗವದ್ಗೀತಾ ಭಾಷ್ಯದಲ್ಲಿ ಎಂಟನೇ ಅಧ್ಯಾಯವು ಮುಗಿಯಿತು ॥ ೮ ॥

ತಾ ॥ ಮಾರ್ಗೌ ಬ್ರಹ್ಮ ಚ ಯಃ ಪಶ್ಯೇತ್ತಾಸ್ಕಾಂದೇನಾಪರೋಕ್ಷತಃ । ಸರ್ವಪುಣ್ಯಾತಿಗೋಽಮುಹ್ಯನ್ನಾತ್ಯಸೌ ಬ್ರಹ್ಮ ತತ್ಪರಮಿತಿ ಚ ॥ ೨೬,೨೮ ॥

ಅ ॥ ಯಾವನು ಮಾರ್ಗಗಳನ್ನೂ ಗಮ್ಯನಾದ ಪರಬ್ರಹ್ಮನನ್ನೂ ಮರೆಯದೆ ಸರ್ವದಾ ಶ್ರೀಪರಮಾತ್ಮನ ಸ್ಮರಣೆಮಾಡುತ್ತಾ ಮಾರ್ಗಗಳನ್ನೂ ಪರಬ್ರಹ್ಮನನ್ನೂ ಮುಖ್ಯವಾಗಿಯೇ ಪ್ರತ್ಯಕ್ಷವಾಗಿಯೇ ನೋಡುತ್ತಾನೋ, ಇಂತಹ ಅಪರೋಕ್ಷಜ್ಞಾನಿಯು ವೇದಾದಿಗಳಲ್ಲಿ ಹೇಳಲ್ಪಟ್ಟ ಪುಣ್ಯಫಲವನ್ನು ಹೊಂದಿ ಅದಕ್ಕಿಂತಲೂ ಹೆಚ್ಚು ಫಲವನ್ನು ಹೊಂದಿದವನಾಗಿ ಶ್ರೀಪರಮಾತ್ಮನನ್ನು ಮರೆಯದವನಾಗಿ ಆ ಪರಬ್ರಹ್ಮನನ್ನು ಹೊಂದುತ್ತಾನೆ, ಎಂದೂ ಹೇಳಿದೆ ॥ ೨೬, ೨೮ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ತಾತ್ಪರ್ಯನಿರ್ಣಯೇ ಅಷ್ಟಮೋಽಧ್ಯಾಯಃ ॥ ೮ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಭಗವದ್ಗೀತಾ ತಾತ್ಪರ್ಯನಿರ್ಣಯದಲ್ಲಿ ಎಂಟನೇ ಅಧ್ಯಾಯವು ಮುಗಿಯಿತು ॥ ೮ ॥

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಒಂಭತ್ತನೇ ಅಧ್ಯಾಯವು.

ಪೀ—ಏಳನೇ ಅಧ್ಯಾಯದಲ್ಲಿ **ಸಾಧಿಭೂತಾಧಿದೈವಂ ಮಾಂ** ಇತ್ಯಾದಿಗಳಿಂದ ಹೇಳಲ್ಪಟ್ಟ ಶ್ರೀಹರಿಯ ಮಹಿಮೆಯನ್ನು ಈ ಅಧ್ಯಾಯದಲ್ಲಿ ವಿವರಿಸುತ್ತಾರೆ ಆ ಮಹಿಮೆಗಳಲ್ಲಿ ಅತಿವಿಚಿತ್ರವಾದ ಮಹಿಮೆಯನ್ನು ಹೇಳುವುದಕ್ಕೋಸ್ಕರ ಅದರಲ್ಲಿ ಜನರಿಗೆ ವಿಶ್ವಾಸ ಹುಟ್ಟುವುದಕ್ಕಾಗಿ ಅದನ್ನು ಹೊಗಳುತ್ತಾರೆ—

ಗೀ ॥ ॥ ಶ್ರೀಭಗವಾನುವಾಚ ॥
ಓಂ ॥ ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ ।
ಜ್ಞಾನಂ ವಿಜ್ಞಾನಸಹಿತಂ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥ ೧ ॥

ಅ ॥ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸುತ್ತಾನೆ (ಎಲೋ ಅರ್ಜುನನೇ) **ಯತ್**=ಯಾವ ಸಾಮಾನ್ಯತಃ ತಿಳಿಯಲರ್ಹವಾದ ಮಹಿಮೆ ವಿಶೇಷತಃ ತಿಳಿಯಲರ್ಹವಾದ ಮಹಿಮೆ ಇವುಗಳನ್ನು **ಜ್ಞಾತ್ವಾ**=ತಿಳಿದುಕೊಂಡು, **ಅಶುಭಾತ್**=ಜನನಮರಣಾದಿರೂಪವಾದ ದುಃಖಮಯ ಸಂಸಾರದಿಂದ, **ಮೋಕ್ಷ್ಯಸೇ**=ಬಿಡುಗಡೆ ಹೊಂದುವಿಯೋ, **ಇದಂ**=ಇಂತಹ ಮುಂದೆ ಹೇಳುವ, **ಗುಹ್ಯತಮಂ**=ಅತಿಗೋಪ್ಯವಾದ, **ವಿಜ್ಞಾನಸಹಿತಂ**=ವಿಶೇಷವಾಗಿ ತಿಳಿಯಬೇಕಾದ ಮಹಿಮೆಯಿಂದ ಕೂಡಿರುವ, **ಜ್ಞಾನಂ ತು**=ತಿಳಿಯಲು ಯೋಗ್ಯವಾದ ಸಾಮಾನ್ಯ ಭಗವನ್ಮಹಿಮೆಯನ್ನು, **ಅನಸೂಯವೇ**=ಅಸೂಯಾ ಮೊದಲಾದ ದೋಷಗಳಿಲ್ಲದ, **ತೇ**=ನಿನಗಾಗಿ **ಪ್ರವಕ್ಷ್ಯಾಮಿ**=ಹೇಳುವೆನು ॥ ೧ ॥

ಭಾ ॥ ಓಂ ॥ ಸಪ್ತಮೋಧ್ಯಾಯೋಕ್ತಂ ಸ್ಪಷ್ಟಯತ್ಯಸ್ಮಿನ್ನಧ್ಯಾಯೇ ॥ ೧ ॥

ಅ ॥ ಏಳನೇ ಅಧ್ಯಾಯದಲ್ಲಿ ಹೇಳಿದ ಶ್ರೀಪರಮಾತ್ಮನ ಮಹಿಮೆಯನ್ನು (ಅಂದರೆ ಏನೇ ಅಧ್ಯಾಯದಲ್ಲಿ ಹೇಳಿದ ಬ್ರಹ್ಮ ಅಧ್ಯಾತ್ಮ ಮೊದಲಾದ ಪದಾರ್ಥಗಳನ್ನು ಎನೇ ಅಧ್ಯಾಯದಲ್ಲಿ ವ್ಯಾಖ್ಯಾನಮಾಡಿ) ಈ ಎನೇ ಅಧ್ಯಾಯದಲ್ಲಿ (**ತೇ ಬ್ರಹ್ಮ ತದ್ವಿದುಃ** ಇತ್ಯಾದಿ ವಾಕ್ಯಗಳ ಅರ್ಥಭೂತವಾದ ಭಗವನ್ಮಹಿಮೆಯನ್ನು) ಸ್ಪಷ್ಟೀಕರಿಸುತ್ತಾರೆ ॥ ೧ ॥

ತಾ ॥ ಓಂ ॥ ನವಮೋಕ್ತಂ ಪ್ರವಂಚಯತಿ ॥ ೧ ॥

ಅ ॥ ಒನೇ ಅಧ್ಯಾಯದಲ್ಲಿ ಹೇಳಿದ ಭಗವನ್ಮಹಿಮೆಯನ್ನು ವಿವರಿಸುತ್ತಾರೆ ॥ ೧ ॥

ಗೀ ॥ ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಂ ।
ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಂ ॥ ೨ ॥

ಅ ॥ **ಇದಂ**=ಮುಂದೆ ಹೇಳುವುದು **ರಾಜವಿದ್ಯಾ**=ವಿದ್ಯೆಗಳಲ್ಲಿ ಪ್ರಧಾನ ವಿದ್ಯೆಯು, **ರಾಜಗುಹ್ಯಂ**=ಗೋಪ್ಯಗಳಲ್ಲಿ ಅತಿಗೋಪ್ಯವು, **ಪವಿತ್ರಂ**=ಪಾವಿತ್ರ್ಯವನ್ನು ಹೊಂದಿಸಿಕೊಡುವುದು, **ಉತ್ತಮಂ**=

ಅತ್ಯುತ್ತಮವು, ಪ್ರತ್ಯಕ್ಷಾವಗಮಂ=ಸರ್ವೇಂದ್ರಿಯಗಳಿಗೆ ಪ್ರೇರಕನಾದ ಶ್ರೀಪರಮಾತ್ಮನ ಅಪರೋಕ್ಷಜ್ಞಾನಕ್ಕೆ ಸಾಧನವಾದುದು, ಅವ್ಯಯಂ=ನಾಶರಹಿತವಾದುದು ಧರ್ಮ್ಯಂ=ಸರ್ವಧಾರಕನಾದ ಶ್ರೀಪರಮಾತ್ಮನ ವಿಷಯಕವಾದ ಅಪರೋಕ್ಷಜ್ಞಾನಕ್ಕೆ ಸಾಧನವಾದ ಪರೋಕ್ಷಜ್ಞಾನವನ್ನು, ಕರ್ತುಂ=ಸಂಪಾದಿಸುವುದಕ್ಕೆ, ಸುಸುಖಂ=ಅತಿಶಯ ಸುಖಸಾಧನವಾದುದು. ॥ ೨ ॥

ಪೀ-ಇಂತಹ ಭಗವದ್ವಿಷಯಕವಾದ ಪರೋಕ್ಷಜ್ಞಾನವು ಸುಲಭಸಾಧ್ಯವೇಂದಾದರೆ ಯಾರೊಬ್ಬನೂ ಸಂಸಾರಿಯಾಗದೆ ಹೋದಾನು ಎಂದರೆ—

ಗೀ ॥ ಅಶ್ರದ್ದಧಾನಾಃ ಪುರುಷಾ ಧರ್ಮ್ಯಸ್ಯಾಸ್ಯ ಪರಂತಪ ।
ಅಪ್ರಾಪ್ಯ ಮಾಂ ನಿವರ್ತಂತೇ ಮೃತ್ಯುಸಂಸಾರವರ್ತ್ಮನಿ ॥ ೩ ॥

ಅ ॥ ಪರಂತಪ=ಎಲೋ ಅರ್ಜುನನೇ, ಧರ್ಮ್ಯಸ್ಯ=ಭಗವದ್ವಿಷಯಕವಾದ, ಅಸ್ಯ=ಈ ಜ್ಞಾನವನ್ನ (ದಲ್ಲಿ), ಅಶ್ರದ್ದಧಾನಾಃ=ಮೋಕ್ಷಾದಿರೂಪ ಪುರುಷಾರ್ಥಕ್ಕೆ ಕಾರಣವೆಂದು ಶ್ರದ್ಧೆಮಾಡದಿರುವ, ಪುರುಷಾಃ=ಜನರು, ಮಾಂ=ನನ್ನನ್ನು, ಅಪ್ರಾಪ್ಯ=ಹೊಂದದೆ, ಮೃತ್ಯುಸಂಸಾರವರ್ತ್ಮನಿ=ಜನನ ಮರಣಾದಿರೂಪವಾದ ಸಂಸಾರಮಾರ್ಗದಲ್ಲಿ, ನಿವರ್ತಂತೇ=ಬೀಳುತ್ತಾರೆ ॥ ೩ ॥

ಪೀ—ಅಶ್ವಪತಿ ಜನಕ ಮೊದಲಾದ ರಾಜರ ವಿದ್ಯೆಯು ರಾಜವಿದ್ಯೆಯೆನಿಸುತ್ತದೆ, ಎಂಬೀ ಪರರ ವ್ಯಾಖ್ಯಾನವು ಅಯುಕ್ತವೆಂಬುವ ಅಭಿಪ್ರಾಯದಿಂದ ಸರಿಯಾದ ಅರ್ಥವನ್ನು ಹೇಳುತ್ತಾರೆ--

ಭಾ ॥ (೧) ರಾಜವಿದ್ಯಾ ಪ್ರಧಾನವಿದ್ಯಾ ॥ (೨) ಪ್ರತ್ಯಕ್ಷಂ ಬ್ರಹ್ಮಾವಗಮ್ಯತೇ ಯೇನ ತತ್ಪ್ರತ್ಯಕ್ಷಾವಗಮಂ । ಅಕ್ಷೇಷ್ವಿಂದ್ರಿಯೇಷು ಪ್ರತಿ ಪ್ರತಿಸ್ಥಿತ ಇತಿ ಪ್ರತ್ಯಕ್ಷಃ ॥ (೩) ತಥಾ ಚ ಶ್ರುತಿಃ । (1) ಯಃ ಪ್ರಾಣೇ ತಿಷ್ಠನ್ಪ್ರಾಣಾದಂತರೋ ಯಂ ಪ್ರಾಣೋ ನ ವೇದ ಯಸ್ಯ ಪ್ರಾಣಃ ಶರೀರಂ ಯಃ ಪ್ರಾಣಮಂತರೋ ಯಮಯತ್ಯೇಷ ತ ಆತ್ಮಾಂತರ್ಯಾಮ್ಯಮೃತಃ । (೭) ಯೋ ವಾಚಿ ತಿಷ್ಠನ್..... । (3) ಯಶ್ಚಕ್ಷುಷಿ ತಿಷ್ಠನ್....ಇತ್ಯಾದೇಃ । (4) ಯ ಏಷೋಽಂತರಕ್ಷಿಣಿ ಪುರುಷೋ ದೃಶ್ಯತ ಇತಿ ಚ । (5) ಅಂಗುಷ್ಠಮಾತ್ರಃ ಪುರುಷೋಽಂಗುಷ್ಠಂ ಚ ಸಮಾಶ್ರಿತ ಇತಿ ಚ । (6) ತ್ವಂ ಮನಸ್ತ್ವಂ ಚಂದ್ರಮಾಸ್ತ್ವಂ ಚಕ್ಷುರಾದಿತ್ಯ ಇತ್ಯಾದೇಶ್ಚ ಮೋಕ್ಷಧರ್ಮೇ ॥ ೧ ॥

ಅ ॥ (೧) ರಾಜವಿದ್ಯಾ=ವಿದ್ಯೆಗಳಲ್ಲಿ ಪ್ರಧಾನ ವಿದ್ಯೆಯು (೨) (ಭಗವಂತನ ಮಹಿಮೆಯನ್ನು ಕೇವಲ ಶಾಸ್ತ್ರಗಳಿಂದಲೇ ತಿಳಿಯಬೇಕಾದುದರಿಂದ ಪ್ರತ್ಯಕ್ಷೇಣಾವಗಮೋ ಯಸ್ಯ ಪ್ರತ್ಯಕ್ಷದಿಂದ ತಿಳಿಯಲ್ಪಡತಕ್ಕವನು ಎಂಬುವ ಪರರ ವ್ಯಾಖ್ಯಾನವು ಅಯುಕ್ತವೆಂಬುವ ಅಭಿಪ್ರಾಯದಿಂದ ಸರಿಯಾದ ಅರ್ಥವನ್ನು ಹೇಳುತ್ತಾರೆ--) ಪ್ರತ್ಯಕ್ಷನೆನಿಸಿದ ಪರಬ್ರಹ್ಮನು ಯಾವ ಶಾಸ್ತ್ರಜನ್ಯ ಪರೋಕ್ಷಜ್ಞಾನದಿಂದ ಹುಟ್ಟುವ ಅಪರೋಕ್ಷಜ್ಞಾನಕ್ಕೆ ವಿಷಯನಾಗುತ್ತಾನೋ, ಅಂತಹ ಅಪರೋಕ್ಷಜ್ಞಾನಕ್ಕೆ ಸಾಧನವಾದ ಪರೋಕ್ಷಜ್ಞಾನವು ಪ್ರತ್ಯಕ್ಷಾವಗಮವೆನಿಸುತ್ತದೆ (ಕೇವಲ ಶಾಸ್ತ್ರಗಳಿಂದಲೇ ತಿಳಿಯಲ್ಪಡುವ ಬ್ರಹ್ಮನು ಪ್ರತ್ಯಕ್ಷ ಎಂದು ಎನಿಸಿಕೊಳ್ಳುವುದು ಹೇಗೆ ಎಂದರೆ—) ಶ್ರೀಪರಮಾತ್ಮನು ಪ್ರತಿ ಇಂದ್ರಿಯಗಳಿಗೆ ಅಭಿಮಾನಿಗಳಾದ ದೇವತೆಗಳಲ್ಲಿ ಪ್ರತ್ಯೇಕಪ್ರತ್ಯೇಕವಾಗಿ ನಿಯಾಮಕನಾಗಿರುವುದರಿಂದ ಪ್ರತ್ಯಕ್ಷನೆನಿಸಿಕೊ

ಳ್ಳುತ್ತಾನೆ (೩) ಪರಮಾತ್ಮನು ಎಲ್ಲಾ ಇಂದ್ರಿಯಾಭಿಮಾನಿ ದೇವತೆಗಳಲ್ಲಿಯೂ ನಿಯಾಮಕನಾಗಿದ್ದಾನೆಂಬುವ ವಿಷಯದಲ್ಲಿ ಶ್ರುತಿಯಿದೆ. (1) ಯಾವ ಶ್ರೀಪರಮಾತ್ಮನು (ಪ್ರಾಣೇ=) (ಮೂಗು ಎಂಬುವ ಇಂದ್ರಿಯಕ್ಕೆ ಅಭಿಮಾನಿಯಾದ **ಅಹಂಕಾರಿಕ ಪ್ರಾಣ** ಎನಿಸಿಕೊಂಡ ನಾಸಿಕ್ಯವಾಯುವಿನಲ್ಲಿ, ಇರುತ್ತಾನೋ, ಯಾವ ಶ್ರೀಹರಿಯು ಅಂತಹ ನಾಸಿಕ್ಯವಾಯುವಿನಿಂದ ಭಿನ್ನನೋ, ಯಾವ ಶ್ರೀಹರಿಯನ್ನು ನಾಸಿಕಾಭಿಮಾನಿ ದೇವತೆಯು ತಿಳಿಯುವುದಿಲ್ಲವೋ, ಯಾವ ಶ್ರೀಹರಿಗೆ ನಾಸಿಕಾಭಿಮಾನಿಯಾದ ದೇವತೆಯು ಶರೀರಸ್ಥಾನೀಯವೋ ಯಾವ ಶ್ರೀಹರಿಯು ನಾಸಿಕಾಭಿಮಾನಿ ದೇವತೆಯೊಳಗೆ ಇದ್ದು ಆ ದೇವತೆಯನ್ನು ನಿಯಮಿಸುತ್ತಾನೋ ಗರುಡನಿಗೆ ಸ್ವಾಮಿಯಾದ ಅಂತಹ ಶ್ರೀಪರಮಾತ್ಮನೇ ನಿನಗೆ (ಉದ್ದಾಲಕರಿಗೆ) ಸ್ವಾಮಿಯು, ಅಂತರ್ಯಾಮಿಯು, ನಿತ್ಯನು, ಸರ್ವಸ್ವತಂತ್ರನಾಗಿ ನಿಯಮಿಸುವವನು. (2) ಯಾವ ಶ್ರೀಹರಿಯು ವಾಗಿಂದ್ರಿಯಾಭಿಮಾನಿ ದೇವತೆಯಲ್ಲಿ ನಿಯಾಮಕನಾಗಿರುತ್ತಾನೋ (3) ಯಾವ ಶ್ರೀಹರಿಯು ಚಕ್ಷುರಿಂದ್ರಿಯಕ್ಕೆ ಅಭಿಮಾನಿಯಾದ ದೇವತೆಯಲ್ಲಿರುತ್ತಾನೋ ಇದು ಮೊದಲಾದ (ಬೃಹ ೨೬೦) ವೇದ ಪ್ರಮಾಣಗಳಿಂದಲೂ (4) ಯಾವ ಶ್ರೀಪರಮಾತ್ಮನು ಕಣ್ಣಿನೊಳಗೆ ನಿಯಾಮಕನಾಗಿದ್ದು ದಿವ್ಯ ದೃಷ್ಟಿಯಿಂದ ಕಾಣಿಸಿಕೊಳ್ಳಲ್ಪಡುತ್ತಾನೋ ಎಂದೂ (5) ಯಾವ ಶ್ರೀ ಪರಮಾತ್ಮನು ರೂಪವಿಶೇಷದಿಂದ ಜೀವರ ಅಂಗುಷ್ಠದ ಪರಿಮಾಣದಷ್ಟು ಪರಿಮಾಣವಳ್ಳವನು ಜೀವರ ಅಂಗುಷ್ಠವನ್ನಾಶ್ರಯಿಸಿಕೊಂಡಿದ್ದಾನೆ ಅಂತರೆ ಎಲ್ಲಾ ಜೀವರ ಕರ್ಮೇಂದ್ರಿಯಗಳಲ್ಲಿ ನಿಯಾಮಕನಾಗಿರುತ್ತಾನೆ ಎಂದೂ, (6) ಮತ್ತು ನೀನು ಮನಸ್ಸಿಗೆ ನಿಯಾಮಕನು ಪ್ರೇರಕನು ನೀನು ಚಂದ್ರಾಂತರ್ಯಾಮಿಯು ಚಕ್ಷುರಂತರ್ಗತನು ಸೂರ್ಯಾಂತರ್ಯಾಮಿಯು, ಇದು ಮೊದಲಾದ ಮೋಕ್ಷಧರ್ಮದಲ್ಲಿ ಹೇಳಿದ ಪ್ರಮಾಣಗಳಿಂದಲೂ ಎಲ್ಲಾ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೂ ಅವುಗಳಿಗೆ ಅಭಿಮಾನಿಗಳಾದ ದೇವತೆಗಳಿಗೂ ನಿಯಾಮಕನೆಂಬುವುದು ಸಿದ್ಧವಾಗುತ್ತದೆ ॥ ೧ ॥

ಹೀಗೆ ಪ್ರತ್ಯಕ್ಷವೆಂಬುವ ಶಬ್ದವು ಪರಮಾತ್ಮನನ್ನು ಹೇಳುತ್ತದೆ, ಎಂಬುವ ವಿಷಯದಲ್ಲಿ ಶ್ರುತಿಯನ್ನು ಹೇಳುತ್ತಾರೆ—

ಭಾ ॥ (೧) ಸ ಪ್ರತ್ಯಕ್ಷಃ ಪ್ರತಿನ್ಯತಿ ಓಂ ಸೋಽಕ್ಷೇಷ್ವಕ್ಷವಾನ್ಹಿ ಸ ಭವತಿ ಯ ಏವಂ ವಿದ್ವಾನ್ಪ್ರತ್ಯಕ್ಷಂ ವೇದೇತಿ ನಾಮವೇದೇ ವಾರುಣಶಾಖಾಯಾಂ ॥ (೨) ಧರ್ಮೋ ಭಗವಾನ್ ತದ್ವಿಷಯಂ ಧರ್ಮ್ಯಂ। ಸರ್ವಂ ಜಗದ್ಬತ್ತ ಇತಿ ಧರ್ಮಃ । (೩) ಪೃಥಿವೀ ಧರ್ಮಮೂರ್ಧನೀತಿ ಪ್ರಯೋಗಾನ್ಮೋಕ್ಷಧರ್ಮೇ ॥ (೪) ಭಾರಭೃತ್ಕಥಿತೋ ಯೋಗೀತಿ ಚ । (೫) ಭರ್ತಾ ಸನ್ ಭ್ರಿಯಮಾಣೋ ಬಿಭರ್ತೀತಿ ಚ ಶ್ರುತಿಃ ॥ (೬) ಧರ್ಮೋ ವಾ ಇದಮಗ್ರ ಆಸೀನ್ನ ಪೃಥಿವೀ ನ ವಾಯುರ್ನಾಽಽಕಾಶೋ ನ ಬ್ರಹ್ಮಾ ನ ರುದ್ರೋ ನ ದೇವಾ ನ ಋಷಯಃ ಸೋಽಧ್ಯಾಯದಿತಿ ಚ ನಾಮವೇದೇ ಬಾಭ್ರವ್ಯಶಾಖಾಯಾಂ ॥ ೨ ॥ ॥ ೨,೩ ॥

ಅ ॥ (೧) ಆ ಶ್ರೀಹರಿಯು ಎಲ್ಲಾ ಇಂದ್ರಿಯ ಇಂದ್ರಿಯಾಭಿಮಾನಿ ದೇವತೆಗಳಲ್ಲಿ ಪ್ರತ್ಯೇಕಪ್ರತ್ಯೇಕ ನಿಯಾಮಕನಾಗಿದ್ದು ಪ್ರಶಸ್ತ ಇಂದ್ರಿಯಗಳುಳ್ಳವನು ಆದುದರಿಂದ ಪ್ರತ್ಯಕ್ಷ ಎಂದು ಹೇಳಿಸಿಕೊಳ್ಳಲ್ಪಡುತ್ತಾನೆ ಯಾವನು ಹೀಗೆ ಪ್ರತ್ಯಕ್ಷಶಬ್ದದ ಅರ್ಥವನ್ನು ತಿಳಿಯುತ್ತಾನೋ, ಹೀಗೆ ನಾಮವೇದದಲ್ಲಿ ಬಾಭ್ರವ್ಯಶಾಖೆಯಲ್ಲಿ (ಪ್ರತ್ಯಕ್ಷಶಬ್ದವು ಭಗವದ್ವಾಚಕವೆಂದು ಹೇಳಿದೆ) (೨) ಚೇತನಾಚೇತನಾತ್ಮಕವಾದ ಎಲ್ಲಾ ಜಗತ್ತನ್ನು ಧರಿಸಿಕೊಂಡಿರುವುದರಿಂದ ಶ್ರೀಪರಮಾತ್ಮನು ಧರ್ಮ ಎನಿಸಿಕೊಳ್ಳುತ್ತಾನೆ

ಅಂತಹ ಭಗವದ್ವಿಷಯಕವಾದ ಪರೋಕ್ಷಜ್ಞಾನವು **ಧರ್ಮ್ಯ**ವು ಎನಿಸಿಕೊಳ್ಳುತ್ತದೆ (೩) (ಧಾರಕವಸ್ತು ವಿನಲ್ಲಿ ಧರ್ಮಶಬ್ದಪ್ರವೃತ್ತಿಯು ಹೇಗೆ? ಎಂದರೆ—) ಪೃಥಿವಿಯು ಪರ್ವತದ ಮೇಲೆ ಇದೆ ಪೃಥಿವಿಯು ಪರ್ವತವೇ ಆಧಾರವಾಗಿ ಉಳ್ಳದ್ದಾಗಿದೆ ಅಂದರೆ ಪರ್ವತವು ಪೃಥಿವಿಗೆ ಆಧಾರವಾಗಿರುವುದರಿಂದ ಭೂಧರ ವೆಂದು ಪ್ರಸಿದ್ಧವಾಗಿದೆ ಹೀಗೆ ಮೋಕ್ಷ ಧರ್ಮದಲ್ಲಿ ಧಾರಕವಸ್ತುವಿನಲ್ಲಿ ಧರ್ಮಶಬ್ದಪ್ರಯೋಗವು ಇದೆ (೪) (ಶ್ರೀಪರಮಾತ್ಮನು ಸರ್ವಧಾರಕನೆಂಬುವಲ್ಲಿ ಪ್ರಮಾಣವೇನೆಂದರೆ-) ಶ್ರೀಪರಮಾತ್ಮನು ಸಮಸ್ತ ಭೂಭಾರ ಗಳನ್ನು ಹೊತ್ತುಕೊಂಡಿರುವವನು. **ಸರ್ವೇ ವೇದಾ ಯತ್ಪದಮಾಮನಂತಿ** ಇತ್ಯಾದಿ ಪ್ರಮಾಣಗಳಿಂದ ಸಮಸ್ತವೇದಗಳಿಂದಲೂ ಇತಿಹಾಸ ಪುರಾಣಗಳಿಂದಲೂ ಪ್ರತಿವಾದಿಸಿಕೊಳ್ಳಲ್ಪಟ್ಟವನು ತನ್ನನ್ನು ತಾನೇ ಧ್ಯಾನಿಸಿಕೊಂಡಿರುವವನು (೫) (ಶ್ರೀಪರಮಾತ್ಮನು ಸರ್ವತ್ರ ಇರುವವನಾದುದರಿಂದ ಎಲ್ಲರಿಂದ ಧರಿಸಲ್ಪಡು ತ್ತಾನೆ ಆದಕಾರಣ ಶ್ರೀಪರಮಾತ್ಮನು ಸರ್ವಧಾರಕನು ಎಂಬುವುದು ಹೇಗೆ ಎಂದರೆ-) ಸರ್ವಧಾರಕನಾಗಿ ಯೇ ಇತರರಿಂದ ಧರಿಸಲ್ಪಟ್ಟವನಾಗಿ ಸರ್ವರನ್ನು ಧರಿಸುತ್ತಾನೆ (ತನ್ನ ಸ್ಥಿತಿಗಾಗಿ ಇನ್ನೊಬ್ಬರಲ್ಲಿರುವುದಲ್ಲ) ಎಂದು ಶ್ರುತಿಯಿದೆ (೬) (ಧರ್ಮಶಬ್ದವು ಭಗವದ್ವಾಚಕವು ಹೇಗೆ ಆಗುವುದೆಂದರೆ-) ಸರ್ವಧಾರಕನಾಗಿರು ವುದರಿಂದ **ಧರ್ಮ್ಯ** ಎನಿಸಿದ ಶ್ರೀಪರಮಾತ್ಮನೇ ಪ್ರಳಯಕಾಲದಲ್ಲಿ ಇರುತ್ತಿದ್ದನು ಪೃಥಿವಿಯೂ, ಆಕಾಶವೂ, ಚತುರ್ಮುಖ ಬ್ರಹ್ಮನೂ, ರುದ್ರನೂ, ದೇವತೆಗಳೂ ಋಷಿಗಳೂ, ಯಾರೂ ಇರಲಿಲ್ಲ ಆ ಶ್ರೀಹರಿಯೊಬ್ಬನೇ ಆಲೋಚಿಸುತ್ತಿದ್ದನು, ಎಂದು ಸಾಮವೇದ ಶಾಖೆಯಲ್ಲಿ ಹೇಳಿದೆ ॥ ೨ ॥ ॥ ೨, ೩ ॥

ಪೀ—ಆ ಜ್ಞಾನವಿಜ್ಞಾನಗಳ ಮಧ್ಯದಲ್ಲಿ ಜ್ಞಾನ ಎನಿಸಿದ ತಿಳಿಯಲು ಯೋಗ್ಯವಾದ ಮಹಿಮೆ ಯನ್ನು ಹೇಳುತ್ತಾರೆ—

ಗೀ ॥ ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥ ೪ ॥

ಅ ॥ ಇದಂ ಸರ್ವಂ ಜಗತ್=ಜೀವತನಾಜೀವತನಾತ್ಮಕವಾದ ಈ ಎಲ್ಲಾ ಜಗತ್ತು, ಅವ್ಯಕ್ತ ಮೂರ್ತಿನಾ=ಎಲ್ಲರಿಗೆ ಪ್ರಕಟವಾಗದಿರುವ ದೇಹವುಳ್ಳ, ಮಯಾ=ನನ್ನಿಂದ, ತತಂ=ವ್ಯಾಪ್ತವಾಗಿದೆ ಸರ್ವಭೂತಾನಿ=ಜಡಸಹಿತರಾದ ಜೀವರ ಸಮುದಾಯಗಳು, ಮತ್ಸ್ಥಾನಿ=ನನ್ನನ್ನು ಆಶ್ರಯಿಸಿಯೇ ಇರುತ್ತವೆ ತೇಷು ಚ=ಜಡಸಹಿತರಾದ ಆ ಜೀವರಲ್ಲಿ ಅಹಂ=ನಾನು, ನಾವಸ್ಥಿತಃ=ಇರುವುದಿಲ್ಲ (ಅಂದರೆ ಅಂತಹ ಜೀವರನ್ನು ಉಪಜೀವಿಸಿಕೊಂಡು ನಾನು ಇರುವವನಲ್ಲ) ॥ ೪ ॥

ಭಾ ॥ ಪ್ರತ್ಯಕ್ಷಾವಗಮಶಬ್ದೇನಾಪರೋಕ್ಷಜ್ಞಾನಸಾಧನತ್ವಮುಕ್ತಂ । ತಜ್ಜ್ಞಾನಾದ್ಯಾವದ ಮಯೇತಿ । ತರ್ಹಿ ಕಿಮಿತಿ ನ ದೃಶ್ಯತ ಇತ್ಯತ ಆಹ । ಅವ್ಯಕ್ತಮೂರ್ತಿನೇತಿ ॥ ೪ ॥

ಅ ॥ ಪ್ರತ್ಯಕ್ಷಾವಗಮ ಶಬ್ದದಿಂದ ಪರೋಕ್ಷಜ್ಞಾನಕ್ಕೆ ಅಪರೋಕ್ಷಜ್ಞಾನಸಾಧನತ್ವವು ಹೇಳಲ್ಪ ಟ್ಟಿದೆ **ಮಯಾ** ಎಂಬುವ ಶ್ಲೋಕದಿಂದ ಹಿಂದೆ ಪ್ರತಿಜ್ಞೆಮಾಡಿದ ಅಪರೋಕ್ಷಜ್ಞಾನಕ್ಕೆ ಸಾಧನವಾದ ಭಗವಂತನ ಸಾಮಾನ್ಯ ಮಹಿಮೆಯನ್ನೂ ವಿಶೇಷ ಮಹಿಮೆಯನ್ನೂ ಹೇಳುತ್ತಾರೆ ಶ್ರೀಪರಮಾತ್ಮನು ಸರ್ವವ್ಯಾಪಿಯಾದರೆ ಎಲ್ಲರಿಂದ ಎಲ್ಲ ಕಡೆ ಏಕೆ ಕಾಣಿಸಿಕೊಳ್ಳಲ್ಪಡುವುದಿಲ್ಲ, ಎಂದರೆ **ಅವ್ಯಕ್ತ ಮೂರ್ತಿನಾ** ಎಂದು ಹೇಳಿದ್ದಾರೆ ॥ ೪ ॥

ಪೀ—ನಿನ್ನಲ್ಲಿ (ಶ್ರೀಕೃಷ್ಣನಲ್ಲಿ) ಸಮಸ್ತ ಪ್ರಾಣಿಗಳೂ ಇರುತ್ತವೆ ಎಂದಾದರೆ ಭೂಮಿಯಲ್ಲಿ ನಾವು ಇರುತ್ತೇವೆ ಎಂದು ಹೇಳಿದಂತೆಯೇ ಶ್ರೀಕೃಷ್ಣನಲ್ಲ ನಾವು ಇರುತ್ತೇವೆಂದು ಜ್ಞಾನವು ಬರಬೇಕಾಗುವುದು

ಹಾಗೆಯೇ ಶೀತಲವಾದ ನೀರಿನಲ್ಲಿ ಅಗ್ನಿಯ ಸಂಬಂಧದಿಂದ (ಔಷ್ಣ್ಯವಿದೆ) ಬಿಸಿ ಎಂದು ಹೇಳಿದಂತೆಯೇ ಶ್ರೀಕೃಷ್ಣನಲ್ಲಿ ಇತರ ವಸ್ತುವಿನಲ್ಲಿರುವ ಉಷ್ಣತ್ವ ಮೊದಲಾದ ಧರ್ಮವೂ ಸೇರಬೇಕಾಗುವುದು, ಎಂದರೆ—

ಗೀ ॥ ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಂ ।
ಭೂತಭೃನ್ನ ಚ ಭೂತಸ್ಥೋ ಮಮಾssತ್ಮಾ ಭೂತಭಾವನಃ ॥ ೫ ॥

ಅ ॥ ಭೂತಾನಿ = ಸಮಸ್ತ ಪ್ರಾಣಿಗಳೂ ಮತ್ಸ್ಥಾನಿ = ನನ್ನಲ್ಲಿರುವವುಗಳು ನ ಚ = ಅಲ್ಲ (ಅಂದರೆ ಬೆಂಕಿ ಮೊದಲಾದವುಗಳು ಇತರ ವಸ್ತುಗಳಲ್ಲಿ ತಮ್ಮ ಧರ್ಮವನ್ನು ಹೊಂದಿಸಿಕೊಡುವಂತೆ ಈ ಪ್ರಾಣಿಗಳು ನನ್ನಲ್ಲಿ ತಮ್ಮ ಧರ್ಮಗಳನ್ನು ಹೊಂದಿಸಿಕೊಡುವವುಗಳಲ್ಲ) (ಮತ್ತು ಶ್ರೀಕೃಷ್ಣನಿಗೆ ಪ್ರಾಕೃತ ಸ್ಪರ್ಶವು ಇಲ್ಲದಿರುವುದರಿಂದ ತ್ವಗಿಂದ್ರಿಯದಿಂದ ಶ್ರೀಕೃಷ್ಣನನ್ನು ತಿಳಿದು ಜೀವರು ಪರಸ್ಪರ ಧರ್ಮ ಸಂಬಂಧವನ್ನು ಹೊಂದಿ ಇರುವುದಿಲ್ಲ) (ಭೂತಗಳಿಗೆ ಆಧಾರನಾಗಿದ್ದಾಗ್ಯೂ ಶ್ರೀಹರಿಯು ಭೂತಗಳಿಗೆ ಆಧಾರನಲ್ಲವೆಂಬುವುದು ಹೇಗೆಂದರೆ—) ಐಶ್ವರಂ = ಈಶ್ವರ ಸಂಬಂಧಿಯಾದ, ಮೇ = ನನ್ನ, ಯೋಗಂ = ಅಂತಹ ಸಾಮರ್ಥ್ಯವನ್ನು, ಪಶ್ಯ = ನೋಡು ಭೂತಭಾವನಃ = ಜಡಸಹಿತಗಳಾದ ಸಮಸ್ತ ಪ್ರಾಣಿಗಳನ್ನು ಸೃಷ್ಟಿಮಾಡುವ, ಮಮ = ನನ್ನ, ಆತ್ಮಾ = ದೇಹವೂ (ನನ್ನಂತೆಯೇ) ಭೂತಭೃತ್ = ಸಮಸ್ತ ಪ್ರಾಣಿಗಳನ್ನ ಪೋಷಿಸುವಂತಾದ್ದು ಭೂತಸ್ಥಶ್ಚ = ಸಮಸ್ತ ಪ್ರಾಣಿಗಳಲ್ಲಿರುವಂಥದ್ದು, ನ ಚ = ಅಲ್ಲ. (ಏಂದರೆ ನಾನು ಭೂತಗಳಲ್ಲಿದ್ದರೂ ಭೂತಗಳಲ್ಲಿರುವ ಪ್ರಾಕೃತಗುಣಗಳ ಸಂಬಂಧವು ನನಗೆ ಬರುವುದಿಲ್ಲ ನನ್ನಲ್ಲಿರುವ ಅಪ್ರಾಕೃತ ದಿವ್ಯಗುಣಗಳು ಭೂತಗಳಿಗೆ ಬರುವುದಿಲ್ಲ) ॥ ೫ ॥

ಭಾ ॥ (೧) ಮತ್ಸ್ಪರ್ಶೇಽಪಿ ಯಥಾ ಪೃಥಿವ್ಯಾಂ ಸ್ಪೃಷ್ಟ್ವಾ ಸ್ಥಿತಾನಿ ನ ತಥಾ ಮಯಿಾ-
ತ್ಮಾಹ । ನ ಚೇತಿ । ನ ದೃಶ್ಯತ್ವಕ್ಪ್ರಸಙ್ಗಾ ಚಾಸೌ ನ ಸ್ಪೃಶ್ಯಃ ಸ್ಪರ್ಶನೇನ ಚೇತಿ ಹಿ ಮೋಕ್ಷಧರ್ಮೇ ।। (೨) ಸಂಜ್ಞಾ ಸಂಜ್ಞಾ ಇತಿ ಚ । ಮಮಾssತ್ಮಾ ದೇಹ ಏವ ಭೂ-
ತಭಾವನಃ । ಮಹಾವಿಭೂತೇ ಮಾಹಾತ್ಮ್ಯಶರೀರ ಇತಿ ಹಿ ಮೋಕ್ಷಧರ್ಮೇ ॥ ೫ ॥

ಅ ॥ (೧) ಸಮಸ್ತ ಪ್ರಾಣಿಗಳು ನನ್ನಲ್ಲಿದ್ದರೂ ಪೃಥಿವಿಯಲ್ಲಿದ್ದವರು ತ್ವಗಿಂದ್ರಿಯದಿಂದ ಪೃಥಿವಿಯನ್ನು ಮುಟ್ಟಿಕೊಂಡು (ಅಂದರೆ ಪೃಥಿವಿಯನ್ನು ತಿಳಿದುಕೊಂಡು ಮತ್ತು ಪರಸ್ಪರ ಧರ್ಮಸಂಬಂಧಗಳನ್ನು ಹೊಂದಿಕೊಂಡು) ಹೇಗೆ ಇರುತ್ತಾರೋ, ಹಾಗೆಯೇ ನನ್ನಲ್ಲಿ ಇದ್ದವರು ಅಲ್ಲ, ಎಂದು **ನಚ** ಎಂಬುವ ಶ್ಲೋಕದಿಂದ ಹೇಳುತ್ತಾರೆ (ಶ್ರೀಪರಮಾತ್ಮನೇ ತ್ವಗಾದಿ ಇಂದ್ರಿಯಗಳಿಂದ ತಿಳಿಯಲಿಕ್ಕೆ ಸಾಧ್ಯನಲ್ಲವೆಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ಶ್ರೀಪರಮಾತ್ಮನು ಕಣ್ಣಿನಿಂದ ನೋಡಲರ್ಹನಲ್ಲ, ತ್ವಗಿಂದ್ರಿಯದಿಂದ ತಿಳಿಯಲ್ಪಡತಕ್ಕವನಲ್ಲ, ಎಂದು ಮೋಕ್ಷಧರ್ಮದಲ್ಲಿದೆ (೨) ಆಗಮ ಪ್ರಮಾಣಗಳಿಂದಲೇ ತಿಳಿಯಲ್ಪಡತಕ್ಕವನು (ಮೊದಲು ಶ್ರೀಪರಮಾತ್ಮನು ಸಮಸ್ತ ಪ್ರಾಣಿಗಳಿಗೆ ಆಧಾರನೆಂದು ಹೇಳಿರುತ್ತಾರೆ ಈಗ ಅವ್ಯಕ್ತಮೂರ್ತಿನಾ ಎಂಬುದರಿಂದ ಶ್ರೀಪರಮಾತ್ಮನ ದೇಹಕ್ಕೆ ಭೂತಾಧಾರತ್ವವನ್ನು ಹೇಳುವಾಗ ನಮ್ಮ ದೇಹವು ನಮ್ಮಿಂದ ಹೇಗ ಭಿನ್ನವೋ, ಹಾಗೆಯೇ ಶ್ರೀಹರಿಯ ದೇಹವು ಶ್ರೀಹರಿಯಿಂದ ಭಿನ್ನವೆಂಬುವ ಭ್ರಾಂತಿಯನ್ನು ಕಳೆಯುವುದಕ್ಕಾಗಿ ತನ್ನ ಲಕ್ಷಣವನ್ನು ತನ್ನ ದೇಹಕ್ಕೆ ಹೇಳುತ್ತಾರೆ—) ನನ್ನ ದೇಹವೇ ಸಮಸ್ತ ಪ್ರಾಣಿಗಳನ್ನು ಸೃಷ್ಟಿಸಿರುತ್ತದೆ ಮಹಾ ಐಶ್ವರ್ಯವುಳ್ಳವನೇ ಮಾಹಾತ್ಮ್ಯ (ಸಮಸ್ತ ಜಗತ್ತನ್ನು ಸೃಷ್ಟಿಮಾಡುವ) ಶರೀರವುಳ್ಳವನೇ ಎಂದು ಮೋಕ್ಷಧರ್ಮದಲ್ಲಿ (ಹೇಳಿದ

ಪ್ರಕಾರ ಶ್ರೀಹರಿಯ ಶರೀರವೂ ಚೇತನಾಚೇತನ ಜಗತ್ತನ್ನು ಸೃಷ್ಟಿಸುವಂಥಾದ್ದು ಎಂದು ಸಿದ್ಧವಾಗುತ್ತದೆ.) ॥ ೫ ॥

ಪೀ— ಶ್ರೀಪರಮಾತ್ಮನು ಸರ್ವರಿಗೆ ಆಶ್ರಯನಾದಾಗ್ಯೂ ಹಿಂದೆ ಹೇಳಿದ ಪ್ರಕಾರ ಪರಸ್ಪರ ಧರ್ಮ ಸಂಬಂಧಾದಿಗಳು ಇಲ್ಲ, ಎಂಬುದನ್ನು ದೃಷ್ಟಾಂತಕೊಟ್ಟು ತೋರಿಸುತ್ತಾರೆ—

ಗೀ ॥ ಯಥಾಽಽಕಾಶಸ್ಥಿತೋ ನಿತ್ಯಂ ವಾಯುಃ ಸರ್ವತ್ರಗೋ ಮಹಾನ್ ।
ತಥಾ ಸರ್ವಾಣಿ ಭೂತಾನಿ ಮತ್ಸ್ಥಾನೀತ್ಯುಪಧಾರಯ ॥ ೬ ॥

ಅ ॥ ಯಥಾ=ಹೇಗೆ, ನಿತ್ಯಂ=ನಿತ್ಯದಲ್ಲಿಯೂ, ಆಕಾಶಸ್ಥಿತಃ—ಆಕಾಶದಲ್ಲಿರತಕ್ಕ, ಮಹಾನ್ ವಾಯುಃ=ದೊಡ್ಡ ಗಾಳಿಯು, ಸರ್ವತ್ರಗಃ=ಎಲ್ಲಾ ಕಡೆಗಳಲ್ಲಿದ್ದರೂ, (ಆಯಾಯ ವಸ್ತುಗಳ ಧರ್ಮಗಳನ್ನು ಹೊಂದುವುದಿಲ್ಲವೋ) (ಶೈತ್ಯ ಸೌರಭಾದಿಗಳು ವಾಯುಸಂಬದ್ಧಗಳಾದ ಜಲಾದ್ಯವಯವಗಳಲ್ಲಿಯೇ ಇರುವುವು. ವಾಯುವಿನಲ್ಲಿರತಕ್ಕುದಲ್ಲವೋ) ತಥಾ=ಹಾಗೆಯೇ, ಸರ್ವಾಣಿ ಭೂತಾನಿ= ಸಮಸ್ತ ಪ್ರಾಣಿಗಳೂ, ಮತ್ಸ್ಥಾನಿ=ನನ್ನಲ್ಲಿಯೇ ಇರುವವುಗಳು, (ಹಿಂದೆ ಹೇಳಿದ ಪ್ರಕಾರ ಪರಸ್ಪರ ಧರ್ಮ ಸಂಬಂಧವುಳ್ಳವುಗಳಲ್ಲ.) ಇತಿ=ಹೀಗೆ ಉಪಾಧಾರಯ=ನಿಶ್ಚಯಮಾಡಿಕೊಳ್ಳು ॥ ೬ ॥

ಭಾ ॥ ಮತ್ಸ್ಥಾನಿ ನ ಚ ಮತ್ಸ್ಥಾನೀತ್ಯಸ್ಯ ದೃಷ್ಟಾಂತಮಾಹ । ಯಥಾಽಽಕಾಶಸ್ಥಿತ ಇತಿ ।
ನ ಹ್ಯಾಕಾಶಸ್ಥಿತೋ ವಾಯುಃ ಸ್ಪರ್ಶಾದ್ಯಾಪ್ನೋತಿ ॥ ೬ ॥

ಅ ॥ **ಮತ್ಸ್ಥಾನಿ ಸರ್ವಭೂತಾನಿ, ನ ಚ ಮತ್ಸ್ಥಾನಿ** ಎಂದು ಹಿಂದೆ ಹೇಳಿದ ಪ್ರಕಾರ ಅನ್ಯೋನ್ಯ ಧರ್ಮಸಂಬಂಧವಿಲ್ಲವೆಂಬುವ ವಿಷಯದಲ್ಲಿ **ಯಥಾಽಽಕಾಶಸ್ಥಿತಃ** ಎಂಬುವ ಶ್ಲೋಕದಿಂದ ದೃಷ್ಟಾಂತವನ್ನು ಹೇಳುತ್ತಾರೆ. ಆಕಾಶದಲ್ಲಿರತಕ್ಕ ವಾಯುವು ಸ್ಪರ್ಶಾದಿಗಳನ್ನು ಹೊಂದುವುದಿಲ್ಲವಷ್ಟೆ

ವಿ ॥ ಆಕಾಶದಲ್ಲಿರತಕ್ಕ ನೀಲರೂಪತ್ವ ಮೊದಲಾದ ಧರ್ಮಗಳ ಸಂಬಂಧವನ್ನು ಹೊಂದುವುದಿಲ್ಲ ಹಾಗೆಯೇ ಆಕಾಶವು ವಾಯುವಿನಲ್ಲಿರತಕ್ಕ ಸ್ಪರ್ಶ ನೀರೂಪತ್ವಾದಿ ಸಂಬಂಧಗಳನ್ನು ಹೊಂದುವುದಿಲ್ಲ ತಥಾಚ ಪರಸ್ಪರ ಧರ್ಮಗಳ ಸಂಬಂಧವು ಆಗುವುದಿಲ್ಲವೆಂಬುವಲ್ಲಿ ಇದು ದೃಷ್ಟಾಂತವು ॥ ೬ ॥

ಪೀ—ಶ್ರೀಪರಮಾತ್ಮನು ಪ್ರಲಯಾದಿಗಳಿಗೆ ಕಾರಣನೆನ್ನುತ್ತಾರೆ—

ಗೀ ॥ ಸರ್ವಭೂತಾನಿ ಕೌಂತೇಯ ಪ್ರಕೃತಿಂ ಯಾಂತಿ ಮಾಮಿಕಾಂ ।
ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಂ ॥ ೭ ॥

ಅ ॥ ಕೌಂತೇಯ=ಅರ್ಜುನನೇ ಕಲ್ಪಕ್ಷಯೇ=ಪ್ರಲಯಕಾಲದಲ್ಲಿ, ಸರ್ವಭೂತಾನಿ=ಜಡಸಹಿತ ಜೀವರ ಸಮುದಾಯಗಳು, ಮಾಮಿಕಾಂ=ನನ್ನ ಅಧೀನವಾದ, ಪ್ರಕೃತಿಂ=ಸತ್ವರಜಸ್ತಮೋಗುಣಾತ್ಮಕವಾದ ಪ್ರಕೃತಿಯನ್ನು, ಯಾಂತಿ=ಹೊಂದುತ್ತವೆ. (ಅಂದರೆ ಜಡಪ್ರಕೃತಿಯಲ್ಲಿ ಲಯಹೊಂದುತ್ತವೆ.) ಪುನಃ=ತಿರುಗಿ ತಾನಿ=ಆ ಜಡಸಹಿತ ಜೀವರ ಸಮುದಾಯಗಳನ್ನು, ಕಲ್ಪಾದೌ=ಸೃಷ್ಟಿಕಾಲದ ಆದಿಯಲ್ಲಿ, ವಿಸೃಜಾಮಿ=ನಾನು ವಿಶೇಷವಾಗಿಯೂ ಅನೇಕ ಪ್ರಕಾರವಾಗಿಯೂ ಸೃಷ್ಟಿಸುವಾಡುತ್ತೇನೆ ॥ ೭ ॥

ಭಾ ॥ ಜ್ಞಾನಪ್ರದರ್ಶನಾರ್ಥಂ ಪ್ರಲಯಾದಿ ಪ್ರಪಂಚಯತಿ । ಸರ್ವಭೂತಾನೀತ್ಯಾದಿನಾ ॥ ೭ ॥

ಅ ॥ ಪ್ರತಿಜ್ಞಾತವಾದ ಮಹಿಮೆಯನ್ನು ತೋರಿಸುವುದಕ್ಕಾಗಿ ಶ್ರೀಪರಮಾತ್ಮನು ಪ್ರಲಯಾದಿಗಳಿಗೆ ಕಾರಣನೆಂಬುವುದನ್ನು **ಸರ್ವಭೂತಾನಿ** ಇತ್ಯಾದಿಗಳಿಂದ ವಿವರಿಸುತ್ತಾರೆ. ॥ ೭ ॥

ಪೀ—ಹಿಂದೆ ಹೇಳಿದ್ದನ್ನು ವಿವರಿಸುತ್ತಾರೆ—

ಗೀ ॥ ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃಪುನಃ ।
ಭೂತಗ್ರಾಮಮಿಮಂ ಕೃತ್ಸ್ನಮವಶಂ ಪ್ರಕೃತೇರ್ವಶಾತ್ ॥ ೮ ॥

ಅ ॥ ಸ್ವಾಂ=ತನ್ನ ಅಧೀನವಾದ, ಪ್ರಕೃತಿಂ=ಸತ್ವರಜಸ್ತಮೋರೂಪವಾದ ಜಡ ಪ್ರಕೃತಿಯನ್ನು, ಅವಷ್ಟಭ್ಯ=ಉಪಾದಾನಕಾರಣವನ್ನಾಗಿ ಇಟ್ಟುಕೊಂಡು ಪ್ರಕೃತೇರ್ವಶಾತ್=ನನ್ನ ಅಧೀನವಾದ ಪ್ರಕೃತಿಗೂ ಅಧೀನವಾಗಿರುವುದರಿಂದ, ಅವಶಂ=ಅತ್ಯಂತ ಪರಾಧೀನವಾದ, ಅಥವಾ ನನ್ನ ಅಧೀನದಲ್ಲಿರುವ ಪ್ರಕೃತಿಯ ಅಧೀನವಾಗಿರುವುದರಿಂದಲೇ ಅ ಎನಿಸಿಕೊಂಡ ಪರಬ್ರಹ್ಮರೂಪನಾದ ನನ್ನ ಅಧೀನದಲ್ಲಿರುವ, ಇಮಂ=ಈ ದಾವ, ಕೃತ್ಸ್ನಂ=ಎಲ್ಲ, ಭೂತಗ್ರಾಮಂ=ಜಡಸಹಿತ ಜೀವರ ಸಮುದಾಯವನ್ನು, ಪುನಃಪುನಃ=ತಿರುಗಿತಿರುಗಿ, ವಿಸೃಜಾಮಿ=ಬಹುಪ್ರಕಾರ ಸೃಷ್ಟಿಮಾಡುತ್ತೇನೆ. ॥ ೮ ॥

ಪೀ—**ಪ್ರಕೃತಿಂ ಸ್ವಾಮವಷ್ಟಭ್ಯ** ಎಂಬುವ ವಚನದಿಂದ ಪ್ರಕೃತಿಯ ಆಶ್ರಯವು ಇಲ್ಲವಾದರೆ ಶ್ರೀಪರಮಾತ್ಮನಿಗೆ ಜಗತ್ಸೃಷ್ಟಿಯಲ್ಲಿ ಸಾಮರ್ಥ್ಯವಿಲ್ಲ ಎಂಬುವ ಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ಭಾ ॥ (೧) ಪ್ರಕೃತ್ಯವಷ್ಟಂಭಸ್ತು ಯಥಾ ಕಶ್ಚಿತ್ಸಮರ್ಥೋಽಪಿ ಪಾದೇನ ಗಂತುಂ ಲೀಲಯಾ ದಂಡಮವಷ್ಟಭ್ಯ ಗಚ್ಛತಿ । ಸರ್ವಭೂತಗುಣೈರ್ಯುಕ್ತಂ ನೈವಂ ತ್ವಂ ಜ್ಞಾತುಮರ್ಹಸೀತಿ ಮೋಕ್ಷಧರ್ಮೇ ॥ (೨) ಸರ್ವಭೂತಗುಣೈರ್ಯುಕ್ತಂ ದೈವಂ ಮಾಂ ಜ್ಞಾತುಮರ್ಹಸೀತಿ ಚ ॥ (೩) ವಿದಿತ್ವಾ ಸಪ್ತ ಸೂಕ್ಷ್ಮಾಣಿ ಷಡಂಗಂ ಚ ಮಹೇಶ್ವರಂ । ಪ್ರಧಾನವಿನಿಯೋಗಸ್ಥಃ ಪರಂ ಬ್ರಹ್ಮಾಧಿಗಚ್ಛತೀತಿ ಚ ॥ (೪) ನ ಕುತ್ರಚಿಚ್ಛಕ್ತಿರನಂತರೂಪಾ ವಿಹನ್ಯತೇ ತಸ್ಯ ಮಹೇಶ್ವರಸ್ಯ । ತಥಾಽಪಿ ಮಾಯಾಮಧಿರುಹ್ಯ ದೇವಃ ಪ್ರವರ್ತತೇ ಸೃಷ್ಟಿನಿಲಾಪನೇಷ್ವಿತ್ಯೃಗ್ವೇದಖಿಲೇಷು ॥ ೧ ॥

ಅ ॥ (೧) ಹೇಗೆ ಒಬ್ಬನು ಪಾದಚಾರಿಯಾಗಿ ಹೋಗಲು ಸಮರ್ಥನಾದಾಗ್ಯೂ ಕ್ರೀಡೆಯಿಂದ ಕೋಲನ್ನು ಹಿಡಿದುಕೊಂಡು ಹೋಗುತ್ತಾನೋ, ಹಾಗೆಯೇ ಕ್ರೀಡಾರ್ಥವಾಗಿಯೇ ಪ್ರಕೃತಿಯನ್ನು ಆಶ್ರಯಿಸಿ ಉಪಾದಾನಕಾರಣವನ್ನಾಗಿ ಇಟ್ಟುಕೊಂಡು ಪರಮಾತ್ಮನು ಸೃಷ್ಟಿಮಾಡುತ್ತಾನೆ (ಪ್ರಕೃತಿಯನ್ನು ಬಿಟ್ಟು ಸೃಷ್ಟಿಮಾಡಲಿಕ್ಕೆ ಕೇವಲ ತನಗೇನೇ ಸಾಮರ್ಥ್ಯವಿಲ್ಲವೆಂದಲ್ಲ) (೨) (ಏಕೆ ಹೀಗೆ ಅರ್ಥವನ್ನು ಹೇಳಬೇಕೆಂದರೆ) ಶ್ರೀಪರಮಾತ್ಮನಿಗೆ ಸರ್ವ ಸಾಮರ್ಥ್ಯವೂ ಪರಿಪೂರ್ಣವಾಗಿದೆ, ಎಂಬುವುದು ಪ್ರಮಾಣಸಿದ್ಧವಾಗಿದೆ ಎನ್ನುತ್ತಾರೆ-) ನೀನು ಸಮಸ್ತ ವಸ್ತುಗಳ ಸಾಮರ್ಥ್ಯದಿಂದೊಡಗೂಡಿದ ಶ್ರೀಪರಮಾತ್ಮನನ್ನು ಭೂತಗಳಂತೆ ಪಾರತಂತ್ರ್ಯಾದಿಗಳಿಂದೊಡಗೂಡಿದವನನ್ನಾಗಿ ತಿಳಿಯಲು ಯೋಗ್ಯನಾಗುವುದಿಲ್ಲ,

ಎಂದು. ಮತ್ತು ಸರ್ವ ವಸ್ತುಗಳ ಸಾಮರ್ಥ್ಯಗಳಿಂದ ಕೂಡಿದ ಬ್ರಹ್ಮರುದ್ರಾದಿ ದೇವತೆಗಳಿಂದುತ್ತಮ ನಾದ ನನ್ನನ್ನು ತಿಳಿಯಲು ಯೋಗ್ಯನಾಗಿರುತ್ತಿ, ಎಂದು ಮೋಕ್ಷಧರ್ಮದಲ್ಲಿದೆ (೩) ಪೃಥಿವೀ ಮೊದಲಾದ ಐದು ಮಹಾ ಭೂತಗಳೂ ಮಹತ್ತತ್ವ ಅಹಂಕಾರತತ್ವಗಳೆರಡು ಹೀಗೆ ಏಳು ಸೂಕ್ಷ್ಮಗಳನ್ನು, **ಸರ್ವಜ್ಞತಾ ತೃಪ್ತಿರನಾದಿಬೋಧಃ ಸ್ವತಂತ್ರತಾ ನಿತ್ಯಮಲುಪ್ತಶಕ್ತಿಃ । ಅನಂತಶಕ್ತಿಶ್ಚ ವಿಭೋರ್ವಿಧಿಜ್ಞಾಃ ಸಂತಃ ಷಡಂಗಾನಿ ವದಂತಿ ವಿಷ್ಣೋಃ** ಎಂದು ಹೇಳಿದ ಪ್ರಕಾರ ಆರು ಅಂಗಗಳುಳ್ಳ ಶ್ರೀ ಪರಮಾತ್ಮನನ್ನು ತಿಳಿದು ಮೂಲಪ್ರಕೃತಿಯ ಕಾರ್ಯಗಳಲ್ಲಿರತಕ್ಕ ವ್ಯಾಪಾರವನ್ನು ತಿಳಿದವನು ಪರ ಬ್ರಹ್ಮನನ್ನು ಹೊಂದುತ್ತಾನೆ. (೪) ಸರ್ವೋತ್ತಮನಾದ ಶ್ರೀಪರಮಾತ್ಮನ ಬಹುವಿಧವಾದ ಶಕ್ತಿಯು ಎಲ್ಲಿಯೂ ಹಾಳಾಗುವುದಿಲ್ಲ. (ವ್ಯರ್ಥವಾಗುವುದಿಲ್ಲ) ಆದರೂ ಶ್ರೀಪರಮಾತ್ಮನು ಪ್ರಕೃತಿಯನ್ನಾಶ್ರಯಿಸಿ ಸೃಷ್ಟಿನಾಶಗಳನ್ನು ಪ್ರವರ್ತಿಸುತ್ತಾನೆಂದು ಋಗ್ವೇದಪಿಲಗಳಲ್ಲಿದೆ ॥ ೧ ॥

ಭಾ ॥ (೧) ಮಯ್ಯನಂತಗುಣೇಽನಂತೇ ಗುಣತೋಽನಂತವಿಗ್ರಹ ಇತಿ ಭಾಗವತೇ ॥ (೨) (1) ಅಥ ಕಸ್ಮಾದುಚ್ಯತೇ ಪರಂ ಬ್ರಹ್ಮ ಬೃಹತಿ ಬೃಂಹಯತಿ ಚೇತ್ಯಥರ್ವಣೇ । (2) ಪರಾऽಸ್ಯ ಶಕ್ತಿರ್ವಿವಿಧೈವ ಶ್ರೂಯತ ಇತಿ ಚ ॥ (೩) ವಿಷ್ಣೋರ್ನು ಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾನಿ ವಿಮಮೇ ರಜಾಂಸಿ ॥ (೪) ನ ತೇ ವಿಷ್ಣೋ ಜಾಯಮಾನೋ ನ ಜಾತೋ ದೇವ ಮಹಿಮ್ನಃ ಪರಮಂತಮಾಪೇತ್ಯಾದೇಶ್ಚ ॥ (೫) ಪ್ರಕೃತೇರ್ವಶಾದವಶಂ । ತ್ವಮೇವೈತತ್ಸರ್ಜನೇ ಸರ್ವಕರ್ಮಣ್ಯನಂತರಕ್ತೋಽಪಿ ಸ್ವಮಾಯಯೈವ । ಮಾಯಾವಶಂ ಚಾವಶಂ ಲೋಕಮೇತತ್ತಸ್ಮಾತ್ ಸ್ರಕ್ಷ್ಯಸ್ಯತ್ಸಿ ಪಾಸೀಶ ವಿಷ್ಣೋ । ಇತಿ ಗೌತಮಪಿಲೇಷು ॥ ೨ ॥ ॥ ೪ ॥

ಅ ॥ (೧) ಅಪರಿಮಿತಗುಣಗಳುಳ್ಳ ಪ್ರತ್ಯೇಕವಾಗಿಯೂ ನಿರವಧಿಕ ಗುಣಗಳುಳ್ಳ, ಅನಂತರೂಪಗಳುಳ್ಳ ನನ್ನಲ್ಲಿ (ಬ್ರಹ್ಮನು ಹುಟ್ಟುವದನು) ಎಂದು ಭಾಗವತದಲ್ಲಿದೆ (೨) (1) ಪರಂಬ್ರಹ್ಮನೆಂದು ಯಾವ ಕಾರಣದಿಂದ ಹೇಳಲ್ಪಡುತ್ತಾನೆ ತಾನು ಗುಣಪೂರ್ಣನಾಗಿದ್ದಾನೆ ಇತರರನ್ನು ಯಥಾಯೋಗ್ಯವಾದ ಗುಣಗಳಿಂದ ಪೂರ್ಣೀಕರಿಸುತ್ತಾನೆ ಆದುದರಿಂದ ಬ್ರಹ್ಮ ಎನಿಸುತ್ತಾನೆ ಹೀಗೆ ಅಥರ್ವಣದಲ್ಲಿದೆ (2) ಶ್ರೀಪರಮಾತ್ಮನ ಶಕ್ತಿಯು ಉತ್ಕೃಷ್ಟವಾದುದು ಬಹುವಿಧವಾದುದು ಎಂದು ಶ್ರುತಿಸಿದ್ಧವಾಗಿದೆ (೩) ಶ್ರೀವಿಷ್ಣುವಿನ ಸಾಮರ್ಥ್ಯಗಳನ್ನು ಯಾರು ಸಂಪೂರ್ಣ ಹೇಳುವನು? ಯಾವ ಚತುರ್ಮುಖನು ಪೃಥಿವಿಯಲ್ಲಿರುವ ಧೂಲಿಗಳನ್ನು ಗಣನೆ ಮಾಡುವನೋ. (ಅವನು ಸಹಾ ಸಂಪೂರ್ಣವಾಗಿ ಪರಮಾತ್ಮನ ಸಾಮರ್ಥ್ಯವನ್ನು ಹೇಳಲಿಕ್ಕೆ ಶಕ್ತನಲ್ಲ) (೪) ಎಲೋ ಶ್ರೀವಿಷ್ಣುವೇ, ಹುಟ್ಟುವವನೂ ಹುಟ್ಟಿದವನೂ ಹುಟ್ಟಲಿರುವವನನೂ ಯಾರೊಬ್ಬನೂ ನಿನ್ನ ಮಹಿಮೆಯ ಅಂತ್ಯವನ್ನು ತಿಳಿಯಲಿಲ್ಲ ಇದು ಮೊದಲಾದ ಪ್ರಮಾಣಗಳಿಂದ ಪರಮಾತ್ಮನಿಗೆ ಸಂಪೂರ್ಣ ಸಾಮರ್ಥ್ಯವು ಪ್ರಮಾಣಸಿದ್ಧವಾಗಿದೆ (೫) ನನ್ನ ಅಧೀನವಾದ ಪ್ರಕೃತಿಯ ಅಧೀನದಲ್ಲಿರುವುದರಿಂದ ಅತ್ಯಂತ ಪರಾಧೀನವಾದುದು (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ-) ಸರ್ವಸಾಮರ್ಥ್ಯನಾದ ಶ್ರೀಪರಮಾತ್ಮನೇ, ನೀನೇ ಸರ್ವ ಜಗತ್ತನ್ನು ಸೃಷ್ಟಿಸುವ ವಿಷಯದಲ್ಲಿಯೂ, ಸೃಷ್ಟಿಗಿಂತ ಇತರವಾದ ಪಾಲನ ಮೊದಲಾದ ಸರ್ವಕರ್ಮಗಳಲ್ಲಿಯೂ ಅಪರಿಮಿತ ಶಕ್ತಿಯುಳ್ಳವನಾದಾಗ್ಯೂ ತನ್ನ ಇಚ್ಛೆಯಿಂದಲೇ ಪ್ರಕೃತ್ಯಧೀನವಾದ, ಪ್ರಕೃತ್ಯಧೀನವಾಗಿರುವುದರಿಂದಲೇ ಅತ್ಯಂತ ಪರಾಧೀನವಾದ, ಈ ೧೪ ಲೋಕಗಳನ್ನು ಸೃಷ್ಟಿಮಾಡುತ್ತಿ ಸಂಹರಿಸುತ್ತಿ ರಕ್ಷಿಸುತ್ತಿ ಹೀಗೆ ಗೌತಮಪಿಲಗ್ರಂಥಗಳಲ್ಲಿ (ಹೇಳಿದ ಪ್ರಕಾರ ಶ್ರೀಪರಮಾತ್ಮನೇ ಸರ್ವ ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರಗಳನ್ನು ಮಾಡುವವನೆಂದು ಸಿದ್ಧವಾಗುತ್ತದೆ) ॥ ೪ ॥

ಹೀ—ಶ್ರೀಪರಮಾತ್ಮನು ನಾನಾವಿಧಗಳಾದ ಸೃಷ್ಟಿಗಳನ್ನು ಮಾಡಿದರೂ ಶ್ರೀಪರಮಾತ್ಮನಿಗೆ ಜೀವರಿಗೆ ಇದ್ದಂತೆ ಕರ್ಮಬಂಧವಿಲ್ಲವೆನ್ನುತ್ತಾರೆ—

ಗೀ॥ ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ ।
ಉದಾಸೀನವದಾಸೀನಮಸಕ್ತಂ ತೇಷು ಕರ್ಮಸು ॥ ೯ ॥

ಅ ॥ ಧನಂಜಯ=ಅರ್ಜುನನೇ, **ತಾನಿ ಕರ್ಮಾಣಿ**=ಸೃಷ್ಟಿ ಮೊದಲಾದ ಆ ಕರ್ಮಗಳು, **ತೇಷು ಕರ್ಮಸು**=ಸೃಷ್ಟ್ಯಾದಿಕರ್ಮಗಳಲ್ಲಿ, **ಅಸಕ್ತಂ**=ಆಸಕ್ತಿಯಿಲ್ಲದಿರುವ, (ಕರ್ಮಗಳಲ್ಲಿ ಸ್ನೇಹವು ಇಲ್ಲದ ಕಾರಣ) **ಉದಾಸೀನವದಾಸೀನಂ**=ವಸ್ತುತಃ ಉದಾಸೀನನಾಗದಿರುವವನಾದರೂ ಉದಾಸೀನನಿಗೆ ಸದೃಶನಾಗಿರುವ, **ಮಾಂ**=ನನ್ನನ್ನು, **ನ ಚ ನಿಬಧ್ನಂತಿ**=ಬಂಧಿಸುವುದಿಲ್ಲ (ಅಂದರೆ ಉದಾಸೀನನಿಗೆ ಹೇಗೆ ಕರ್ಮದಲ್ಲಿ ಆಸಕ್ತಿಯಿಲ್ಲವೋ, ಹಾಗೆಯೇ ನನಗೂ ಸೃಷ್ಟಿ ಮೊದಲಾದ ಕರ್ಮಗಳಲ್ಲಿ ಆದರವಾಗಲೀ ಅಯಾಸವಾಗಲೀ ಇಲ್ಲ) ಆದಕಾರಣ ಅವುಗಳಿಂದ ನನಗೆ ಸುಖದುಃಖಗಳು ಹುಟ್ಟುವುದಿಲ್ಲ ॥ ೯ ॥

ಹೀ ಶ್ರೀಪರಮಾತ್ಮನು ಸರ್ವ ಜಗತ್ತನ್ನು ಸೃಷ್ಟಿಸುವವನೆಂದಾದರೆ ಅವನನ್ನು ಉದಾಸೀನನೆಂದು ಹೇಳಿದ್ದು ಹೇಗೆಂದರೆ —

ಭಾ ॥ (೧) ಉದಾಸೀನವನ್ನ ತೂದಾಸೀನಃ । ತದರ್ಥಮಾಹ । ಅಸಕ್ತಮಿತಿ । ಅವಾಕ್ಯನಾದರ ಇತಿ ಹಿ ಶ್ರುತಿಃ ॥ (೨) ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ । ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯೇತಿ ಭಾಗವತೇ । (೩) ಯಸ್ಯಾಸಕ್ತ್ಯೈವ ಸರ್ವಕರ್ಮಶಕ್ತಿಃ ಕುತಸ್ತಸ್ಯ ಸರ್ವಕರ್ಮಬಂಧ ಇತಿ ಭಾವಃ । ನ ಕರ್ಮಣಾ ವರ್ಧತೇ ನೋ ಕನೀಯಾನಿತಿ ಹಿ ಶ್ರುತಿಃ । ಯಃ ಕರ್ಮಾಪಿ ನಿಯಾಮಯತಿ ಕಥಂ ಚ ತತ್ತಂ ಬಧ್ನಾತಿ ॥ ೯ ॥

ಅ ॥ (೧) ಉದಾಸೀನನಾದ ಮನುಷ್ಯನಿಗೆ ಸದೃಶನಾಗಿರುತ್ತಾನೆ. ಉದಾಸೀನನಲ್ಲ ಉದಾಸೀನವತ್ ಎಂಬುವಲ್ಲಿದ್ದ **ವತಿ**ಪ್ರತ್ಯಯದ ಅರ್ಥವಾದ ಸಾದೃಶ್ಯವನ್ನು **ಅಸಕ್ತಂ** ಎಂಬುವುದರಿಂದ ತಾನೇ ವಿವರಿಸುತ್ತಾರೆ (ಪರಮಾತ್ಮನಿಗೆ ಸೃಷ್ಟ್ಯಾದಿ ಕರ್ಮಗಳಲ್ಲಿ ಆಸಕ್ತಿಯಿಲ್ಲ ಎಂಬುವಲ್ಲಿ ಪ್ರಮಾಣ ಹೇಳುತ್ತಾರೆ—) ಶ್ರೀಪರಮಾತ್ಮನು ಅತನ ಅನುಗ್ರಹವಿಲ್ಲದೆ ವಾಕ್ಯದಿಂದ ತಿಳಿಯದವನು, ಸೃಷ್ಟ್ಯಾದಿಕರ್ಮಗಳಲ್ಲಿ ಆಸಕ್ತಿಯಿಲ್ಲದವನು, ಎಂದು ಶ್ರುತಿಯು (೨) (ಶ್ರೀಪರಮಾತ್ಮನು ಸರ್ವದಾ ಉದಾಸೀನನಲ್ಲ. ನಿತ್ಯಪದಾರ್ಥಗಳ ಸ್ಥಿತಿಯು ಸಹ ಅವನ ಅಧೀನವೇ, ಎಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ-) ಪ್ರಕೃತಿ ಮೊದಲಾದ ತತ್ವಗಳೂ, ಧರ್ಮ ಅಧರ್ಮಗಳೂ, ಕಾಲವೂ, ಪ್ರಕೃತ್ಯಾದಿಗಳ ಪರಿಣಾಮಾದಿಗಳೂ, ಪ್ರಕೃತ್ಯಾದಿ ತತ್ವಗಳ ಮತ್ತು ಅದರ ಪರಿಣಾಮಗಳ ಅಭಿಮಾನಿಯು ಅಂದರೆ ಎಲ್ಲಾ ಜೀವರೂ ಇವೆಲ್ಲವೂ, ಯಾವ ಶ್ರೀಪರಮಾತ್ಮನ ಅನುಗ್ರಹದಿಂದಲೇ ಇರುತ್ತವೋ ಯಾವ ಶ್ರೀಪರಮಾತ್ಮನ ಅನುಗ್ರಹವಿಲ್ಲದೆ ಇರುವುದಿಲ್ಲವೋ, ಎಂದು ಭಾಗವತದಲ್ಲಿ ಹೇಳಿದ ಪ್ರಕಾರ (ಉತ್ಪತ್ತಿಯುಳ್ಳ ವಸ್ತುಗಳ ಉಪಾದಾನ ಕಾರಣ ನಿಮಿತ್ತಕಾರಣಗಳ ಸ್ಥಿತಿಯೂ ಕೂಡ ಶ್ರೀಪರಮಾತ್ಮನ ಅಧೀನವೇ, ಎಂದು ಉಕ್ತವಾಯಿತು.) (೩) (ಶ್ರೀಪರಮಾತ್ಮನಿಗೆ ಸ್ವತಃ ಕರ್ತೃತ್ವವಿದ್ದರೆ - **ಉದಾಸೀನವದಾಸೀನಂ**=ಕರ್ಮದಲ್ಲಿ ಆಸಕ್ತಿಯಿಲ್ಲವೆಂಬುವುದು **ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ** ಎಂಬುವಲ್ಲಿ ಹೇತುವಾಗುವುದು ಹೇಗೆ?

ಎಂದರೆ—) ಯಾವ ಶ್ರೀಪರಮಾತ್ಮನಿಗೆ ಅನಾದರದಿಂದ (ಅನಾಯಾಸದಿಂದಲೇ) ಜಗತ್ತಿನ ಸೃಷ್ಟಿ ಮೊದಲಾದ ಕರ್ಮಗಳಲ್ಲಿ ಸಾಮರ್ಥ್ಯವಿದೆಯೋ, ಅಂತಹ ಶ್ರೀಪರಮಾತ್ಮನಿಗೆ ಎಲ್ಲಾ ಕರ್ಮಗಳ ಬಂಧವು ಹೇಗೆ ಬರುವುದು, ಎಂದಭಿಪ್ರಾಯವು (೪)(ಶ್ರೀಪರಮಾತ್ಮನಿಗೂಕರ್ಮಬಂಧವಿದೆ, ಎಂದು ವಿಮಾಮಾಂಸಕರು **ಬ್ರಹ್ಮಾಯೇನ ಕುಲಾಲವನ್ನಿಯಮಿತೋ ಬ್ರಹ್ಮಾಂಡಭಾಂಡೋದರೇ ವಿಷ್ಣುರ್ಯೇನ ದಶಾವತಾರಗಹನೇ ಕ್ಷಿಪ್ತೋ ಮಹಾಸಂಕಟೇ। ರುದ್ರೋ ಯೇನ ಕಪಾಲಪಾಣಿಪುಟಕೇ ಭಿಕ್ಷಾಟನಂ ಕಾರಿತಃ ಸೂರ್ಯೋ ಭ್ರಾಮ್ಯತಿ ನಿತ್ಯಮೇವ ಗಗನೇ ತಸ್ಮೈ ನಮಃ ಕರ್ಮಣೇ** ಇತ್ಯಾದಿ ಪ್ರಕಾರ ಹೇಳುವರು. ಅದನ್ನು ನಿರಾಕರಿಸುವುದಕ್ಕಾಗಿ ಶ್ರುತಿಯುಕ್ತಿಗಳನ್ನು ಹೇಳುತ್ತಾರೆ–) (೧) ಶ್ರೀಪರಮಾತ್ಮನಿಗೆ ಒಳ್ಳೆ ಕರ್ಮಗಳಿಂದ ಹೊಂದಲು ಯೋಗ್ಯ ಪ್ರಯೋಜನವಿಶೇಷವೂ (ವೃದ್ಧಿಯು) ಇಲ್ಲ ಕರ್ಮಮಾಡದಿರೋಣದರಿಂದ ಆಗತಕ್ಕ ಹ್ರಾಸವೂ ಇಲ್ಲ (ಆಂತೂ ಕರ್ಮಬಂಧವಿಲ್ಲ)(೭)ಯಾವ ಶ್ರೀಹರಿಯು ಕರ್ಮಗಳನ್ನು ನಿಯಮಿಸುತ್ತಾನೋ, ಅಂತಹ ಶ್ರೀಹರಿಯನ್ನು ಹೇಗೆ ಶ್ರೀಹರಿಯಿಂದ ನಿಯಮ್ಯವಾದ ಕರ್ಮವು ಬಂಧಿಸುತ್ತದೆ (ಆಂತೂ ಬಂಧಕವಾಗಲಾರದು) ॥ ೯ ॥

ಪೀ—ಪ್ರತಿಜ್ಞಾತವಾದ ಶ್ರೀವಿಷ್ಣುವಿನ ಸಾಮಾನ್ಯ ಮಹಿಮೆಯನ್ನು **ಮಯಾ** ಎಂಬುವ ಶ್ಲೋಕದಿಂದ ಹೇಳುತ್ತಾರೆ ಆದರಲ್ಲಿ **ಮತ್ಸ್ಥಾನಿ ಸರ್ವಭೂತಾನಿ ನ ಚ ಮತ್ಸ್ಥಾನಿ ಭೂತಾನಿ** ಎಂಬುವುದು ವ್ಯಾಹತವಾಗಿದೆ, ಎಂಬುವ ಆಶಂಕೆಯನ್ನು ಸ್ವಯಂತಿಯಿಂದಲೇ ಪರಿಹರಿಸುತ್ತಾರೆ—

ತಾ ॥ (೧) ವಿಷ್ಣುರಾನ್ಯಪ್ಯತತ್ಸ್ಥಾನಿ ಭೂತಾನ್ಯೇಷಹ್ಯಸಂಗತ ಇತಿ ಚ ॥ (೨) ಮಮಾಽಽತ್ಮಾ ಮಮ ದೇಹ ಏವ। ತದನನ್ಯತ್ವಾತ್ ॥ (೩) ದೇಹಸ್ಯಾಚೇತನತ್ವಶಂಕಾನಿವೃತ್ತಯೇ ಮಮಾತ್ಮೇತ್ಯಾಹ ॥ ೨—೯ ॥

ಅ ॥ (೧)ಯಾವ ಕಾರಣದಿಂದ ಶ್ರೀಪರಮಾತ್ಮನು ತನ್ನನ್ನು ಆಶ್ರಯಿಸುತ್ತಿರುವ ಜೀವರ ತ್ವಗಿಂದ್ರಿಯದಿಂದ ಸಂಬದ್ಧನಾಗುವುದಿಲ್ಲವೋ, (ತ್ವಗಿಂದ್ರಿಯದಿಂದ ಗ್ರಾಹ್ಯನಲ್ಲವೋ,) ಆದಕಾರಣ ಜೀವರ ಸಮುದಾಯಗಳು ಶ್ರೀಪರಮಾತ್ಮನಲ್ಲಿರತಕ್ಕವುಗಳಾದಾಗ್ಯೂ (ಪರಮಾತ್ಮನನ್ನಾಶ್ರಯಿಸುತ್ತಿರುವವುಗಳಾದಾಗ್ಯೂ) ಪರಮಾತ್ಮನಲ್ಲಿರತಕ್ಕವುಗಳಲ್ಲ (ಅಂದರೆ ಶ್ರೀಪರಮಾತ್ಮನಿಗೆ ಪ್ರಾಕೃತಸ್ಪರ್ಶವಿಲ್ಲದಿರುವುದರಿಂದ ತ್ವಗಿಂದ್ರಿಯದಿಂದ ಶ್ರೀಹರಿಯನ್ನು ಜೀವರು ತಿಳಿಯುವುದಿಲ್ಲ ಮತ್ತೆ ಅನ್ಯೋನ್ಯ ಧರ್ಮಸಂಬಂಧವನ್ನು ಹೊಂದುವುದಿಲ್ಲ ಅಂದರೆ ಜೀವಾದಿಗಳಲ್ಲಿರುವ ಪ್ರಾಕೃತಗುಣಗಳು ಶ್ರೀಪರಮಾತ್ಮನಿಗೂ, ಪರಮಾತ್ಮನಲ್ಲಿರುವ ದಿವ್ಯ ಗುಣಗಳು ಜೀವಾದಿಗಳಿಗೂ ಬರುವುದಿಲ್ಲ) (೨)(**ಮತ್ಸ್ಥಾನಿ ಸರ್ವಭೂತಾನಿ,** (೩) **ನ ಚಾಹಂ ತೇಷ್ವವಸ್ಥಿತಃ** (೪) ಎಂದು ಹೇಳಿದ **ಭೂತಭೃನ್ನ ಚ ಭೂತಸ್ಥೋ ಮಮಾತ್ಮಾ** (೫) ಎಂದು ಹೇಳಿದ್ರಿಂದ ಎರಡು ಸಲ ಹೇಳಿದಂತೆಯೇ ಆಯಿತು ಆದಕಾರಣ ಪುನರುಕ್ತವಾಯಿತೆಂದರೆ—) ಮಮ ಆತ್ಮಾ= ನನ್ನ ದೇಹವೇ, (ಮೊದಲು ಶ್ರೀಪರಮಾತ್ಮನು ಪ್ರಾಣಿಗಳಿಗೆ ಆಧಾರನೆಂದು ಹೇಳಿದ್ದು. ಈಗ ಶ್ರೀಪರಮಾತ್ಮನ ಶರೀರವು ಭೂತಾಧಾರನೆಂದು ಹೇಳಿದ ಕಾರಣ ಪುನರುಕ್ತಿದೋಷವಿಲ್ಲ) (ಶ್ರೀಪರಮಾತ್ಮನಿಗೆ ಹೇಳಿದ ಭೂತಾಧಾರತ್ವ ಮೊದಲಾದ ಲಕ್ಷಣವು ಶ್ರೀಹರಿಯ ದೇಹಕ್ಕೆ ಹೇಗೆ ಕೂಡುವುದೆಂದರೆ—) ಪರಮಾತ್ಮನ ದೇಹಕ್ಕೂ ಪರಮಾತ್ಮನಿಗೂ ಸರ್ವದಾ ಭೇದವಿಲ್ಲದಿರುವುದರಿಂದ ಪರಮಾತ್ಮನಿಗೆ ಹೇಳಿದ ಲಕ್ಷಣವು ಆತನ ದೇಹಕ್ಕೂ ಕೂಡುತ್ತದೆ (೩) (ಪರಮಾತ್ಮನಿಗೂ ಪರಮಾತ್ಮನ ದೇಹಕ್ಕೂ ಭೇದವಿಲ್ಲವೆಂದಾದರೆ ಎರಡು ಸಲ ಹೇಳಿದಂತೆಯೇ ಆಯಿತು ಆದಕಾರಣ ಪುನರುಕ್ತಿದೋಷವು ತಪ್ಪಿದ್ದಲ್ಲ ಎಂದರೆ–) ಪರಮಾತ್ಮನಿಗೂ ಪರಮಾತ್ಮನ ದೇಹಕ್ಕೂ ನಮ್ಮ ದೇಹದಂತೆ ಭೇದವಿದೆ ಮತ್ತು ಆದೂ ಅಚೇತನವು ಎಂದುಂಟಾಗತಕ್ಕ ಶಂಕೆಯನ್ನು

ಹೋಗಲಾಡಿಸುವುದಕ್ಕಾಗಿ ಪರಮಾತ್ಮನ ದೇಹದಲ್ಲಿಯೂ ಭೂತಾಧಾರತ್ವ ಮೊದಲಾದ ಶ್ರೀಹರಿಯ ಲಕ್ಷಣವಿದ್ದ ಪ್ರಯುಕ್ತ ಅಭೇದವೂ ಜೀವತನತ್ವವೂ ಇದೆ, ಎಂಬುವ ಅಭಿಪ್ರಾಯದಿಂದ **ಮಮ ಆತ್ಮಾ** ಎಂದು ಹೇಳಿದ್ದಾರೆ. (ಆದಕಾರಣ ಪುನರುಕ್ತಿ ದೋಷವಿಲ್ಲ) (ಅಥವಾ ಇಲ್ಲಿ ದೇಹವು ವಿವಕ್ಷಿತವಾಗಿದ್ದರೆ **ಮಮ ದೇಹಃ** ಎಂಬುವ ಪ್ರಸಿದ್ಧ ಶಬ್ದವನ್ನು ಬಿಟ್ಟು **ಆತ್ಮಾ** ಎಂದು ಶಬ್ದ ಪ್ರಯೋಗಕ್ಕೆ **ಕಾರಣವೇನೆಂದರೆ—**) **ಮಮ ದೇಹಃ** ಎಂದಿಷ್ಟೇ ಹೇಳಿದರೆ ಅಚೇತನವಾದ ದೇಹಕ್ಕೆ ಭಗವಲ್ಲಕ್ಷಣವು ಹೇಗೆ ಬರುವುದು ಎಂಬುವ ಆಶಂಕೆಯು ಬರುವುದು ಆದನ್ನು ಪರಿಹರಿಸುವುದಕ್ಕಾಗಿ ದೇಹವೂ ಚೇತನರೂಪವೇ ಎಂದು ತೋರಿಸುವುದಕ್ಕಾಗಿ **ಆತ್ಮಾ** ಎಂದು ಹೇಳಿರುವರು ಆತ್ಮಶಬ್ದದಿಂದ ಚೇತನರೂಪವಾದ ದೇಹವೆಂಬುವ ಅರ್ಥವು ಆವಶ್ಯಕವೆಂದು ತೋರಿಸುವುದಕ್ಕಾಗಿ ಮಮಾತ್ಮಾ ಎಂದು ಹೇಳಿರುವರು ॥ ೨—೯ ॥

ಪೀ—'**ಪ್ರಕೃತಿಂ ಸ್ವಾಮವಷ್ಟಭ್ಯ**' ಮತ್ತು **ಉದಾಸೀನವದಾಸೀನಂ** ಎಂಬುವ ಉಕ್ತಿಯಿಂದ ಶ್ರೀಪರಮಾತ್ಮನು ನಿಷ್ಕ್ರಿಯನೆಂದು ತೋರುತ್ತದೆ ಹೀಗಾದರೆ ಪ್ರಕೃತಿಯೇ ಸ್ವತಂತ್ರವಾಗಿ ಜಗತ್ತನ್ನು ಸೃಷ್ಟಿಸುತ್ತದೆ ಶ್ರೀಕೃಷ್ಣನಲ್ಲಿ ಪ್ರಕೃತಿಯ ಸನ್ನಿಧಾನದಿಂದಲೇ ಕರ್ತೃತ್ವವು, ವಾಸ್ತವಿಕವಾಗಿ ಇಲ್ಲ ಕರ್ತೃತ್ವವಿದೆ ಎಂದು ಹೇಳಿದ್ದು ಔಪಚಾರಿಕವೆಂದಾಯಿತು, ಎಂದರೆ -

ಗೀ॥ ಮಯಾಽಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಂ ।
ಹೇತುನಾಽನೇನ ಕೌಂತೇಯ ಜಗದ್ವಿಪರಿವರ್ತತೇ ॥ ೧೦ ॥

ಅ ॥ ಕೌಂತೇಯ = ಅರ್ಜುನನೇ, ಅಧ್ಯಕ್ಷೇಣ = ಸ್ವಾಮಿಯಾದ, ಮಯಾ = ನನ್ನಿಂದ ಪ್ರೇರಿತವಾಗಿ ಪ್ರಕೃತಿಃ = ಜಡಪ್ರಕೃತಿಯು, ಸಚರಾಚರಂ = ಚೇತನಾಚೇತನ ಜಗತ್ತನ್ನು, ಸೂಯತೇ = ಹುಟ್ಟಿಸುತ್ತದೆ. ಅನೇನ ಹೇತುನಾ = ನನ್ನಿಂದ ಪ್ರೇರಿಸಲ್ಪಟ್ಟ ಪ್ರಕೃತಿರೂಪ ಉಪಾದಾನ **ಕಾರಣ**ದಿಂದ, ಮತ್ತು ಸರ್ವದಾ ಎಲ್ಲಾ ವಸ್ತುಗಳನ್ನು ನೋಡಿಕೊಂಡಿರುವ ಸರ್ವಜಗತ್ಕರ್ತನಾದ ನನ್ನಿಂದ, ಜಗತ್ = ಜಗತ್ತು, ವಿಪರಿವರ್ತತೇ = ವಿಶೇಷವಾಗಿ ತಿರುಗಿತಿರುಗಿ ಹುಟ್ಟುತ್ತದ ॥ ೧೦ ॥

ಭಾ ॥ (೧) ಉದಾಸೀನವದಿತಿ ಚೇತ್ ಸ್ವಯಮೇವ ಪ್ರಕೃತಿಃ ಸೂಯತ ಇತ್ಯತ ಆಹ ಮಯೇತಿ । ಪ್ರಕೃತಿಸೂತಿದ್ರಷ್ಟಾ ಕರ್ತಾಽಹಮೇವೇತ್ಯರ್ಥಃ ॥ (೨) ತಥಾ ಚ ಶ್ರುತಿಃ । ಯತಃ ಪ್ರಸೂತಾ ಜಗತಃ ಪ್ರಸೂತೀ ತೋಯೇನ ಜೀವಾನ್ ವ್ಯಸಸರ್ಜ ಭೂಮ್ಯಾಮಿತಿ ॥ ೧೦ ॥

ಅ ॥ (೧) ಶ್ರೀಪರಮಾತ್ಮನು ಉದಾಸೀನನಂತೆ ಆದರೆ ಜಡಪ್ರಕೃತಿಯು ತಾನೇ ಸ್ವತಂತ್ರವಾಗಿ ಜಗತ್ತನ್ನು ಹುಟ್ಟಿಸುತ್ತದೆ, ಎಂದರೆ **ಮಯಾ** ಎಂಬುವ ಶ್ಲೋಕದಿಂದ ಸಮಾಧಾನ ಹೇಳುತ್ತಾರೆ **ಜಡ ಪ್ರಕೃತಿಯಿಂದ** ಹುಟ್ಟುತಕ್ಕ ಎಲ್ಲಾ ಕಾರ್ಯಗಳನ್ನು ನೋಡುವವನೂ ಜಡಪ್ರಕೃತಿಯಿಂದ ಜಗತ್ತು ಹುಟ್ಟುವಂತೆ ಮಾಡುವವನೂ ಸರ್ವಜ್ಞನೂ ಸರ್ವಸ್ವಾಮಿಯೂ ಆದವನು ನಾನೇ, ಎಂದು **ಅಧ್ಯಕ್ಷೇಣ** ಎಂಬುದರಿಂದ ಉಕ್ತವಾಯಿತು (ಅಂತೂ ಜಡಪ್ರಕೃತಿಗೆ ಸ್ವತಂತ್ರವಾಗಿ ಯಾವ ಕಾರ್ಯವನ್ನು ಮಾಡುವ ಶಕ್ತಿಯಿಲ್ಲವೆಂದು ಉಕ್ತವಾಯಿತು) (ನಾನು ನೋಡುವವನೇ ಜಡಪ್ರಕೃತಿಯೇ ಸ್ವತಂತ್ರವಾಗಿ ಚೇತನಾಚೇತನ ಜಗತ್ತನ್ನು ಹುಟ್ಟಿಸುತ್ತದೆ, ಎಂದು ಆಪಾತತಃ ತೋರುವ ಅರ್ಥವನ್ನಂಗೀಕರಿಸಿದರೆ **ಅಧ್ಯಕ್ಷೇಣ ಮಯಾ** = ಸರ್ವಸ್ವಾಮಿಯಾದ ನನ್ನಿಂದ ಪ್ರೇರೇಪಿಸಲ್ಪಟ್ಟಿದ್ದಾಗಿ ಜಡಪ್ರಕೃತಿಯು **ಜಗತ್ತನ್ನು** ಹುಟ್ಟಿಸುತ್ತದೆ, ಎಂದು ಪ್ರಕೃತಿಗೆ ತನ್ನ (ಶ್ರೀಕೃಷ್ಣನ) ಅಧೀನತ್ವವನ್ನು ಹೇಳಿದ್ದು ಅಯುಕ್ತ

ವಾಗುವುದು. (೨) ಶ್ರೀಪರಮಾತ್ಮನು ಪ್ರಕೃತಿಗೂ, ಪ್ರಕೃತ್ಯಭಿಮಾನಿನಿಯಾದ ಲಕ್ಷ್ಮೀದೇವಿಗೂ ಪ್ರೇರಕನು, ಎಂದು ಹೇಳುವ ಶ್ರುತಿಯಿದೆ ಜಗತ್ತಿಗೆ ಉಪಾದಾನಕಾರಣವಾದ ಜಡಪ್ರಕೃತಿಯು ಯಾವ ಶ್ರೀಹರಿಯಿಂದ ಸೃಷ್ಟಿಕಾರ್ಯದಲ್ಲಿ ಉದ್ಯುಕ್ತವಾಗಿದೆಯೋ, ಯಾವ ಶ್ರೀಹರಿಯು ಅವಾವ ಜೀವರ ಕರ್ಮದಿಂದ, ಅಥವಾ ತನ್ನ ವೀರ್ಯದಿಂದ, ಅಥವಾ ಜಲ ಮೊದಲಾದ ಪಂಚಭೂತಗಳಿಂದ ಪೃಥಿವ್ಯಾದಿಲೋಕಗಳಲ್ಲಿ ಜೀವರನ್ನು ಅನೇಕ ಪ್ರಕಾರ ಸೃಷ್ಟಿಮಾಡಿರುವನೋ. ಜಗಜ್ಜನನಿಯಾದ ಲಕ್ಷ್ಮೀದೇವಿಯು ಯಾವ ಶ್ರೀಹರಿಯಿಂದ ಪ್ರಾದುರ್ಭೂತಳಾಗಿ ಜಗತ್ಸೃಷ್ಟಿಮಾಡುವ ವಿಷಯದಲ್ಲಿ ಅಭಿಮುಖೀಭೂತಳಾಗಿದ್ದಾಳೋ, ಎಂದು ಹೇಳಿದೆ ॥ ೧೦ ॥

ಪೀ—ಅಧ್ಯಕ್ಷಪದದ ಅರ್ಥವನ್ನು ಹೇಳುತ್ತಾರೆ—

ತಾ ॥ ಅಧ್ಯಕ್ಷೋಽಧಿಪತಿಃ ಪ್ರೋಕ್ತೋ ಯದಕ್ಷಾಣ್ಯಸ್ಯ ಚೋಪರೀತಿ ಶಬ್ದನಿರ್ಣಯೇ ೧೦

ಅ ॥ ಚೇತನಾಚೇತನಾತ್ಮಕವಾದ ಸರ್ವ ಜಗತ್ತಿನ ಮೇಲೆ ಶ್ರೀಪರಮಾತ್ಮನ ಚಕ್ಷುರಿಂದ್ರಿಯಗಳಿರುವುದರಿಂದ ಅಂದರೆ ಎಲ್ಲಾ ಜಗತ್ತನ್ನು ಪ್ರತ್ಯಕ್ಷವಾಗಿಯೇ ತಿಳಿಯುವುದರಿಂದ ಶ್ರೀಪರಮಾತ್ಮನು ಅಧ್ಯಕ್ಷನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ. ಅಧ್ಯಕ್ಷಃ = ಸರ್ವಾಧಿಪತಿಯು, ಎಂದು ಶಬ್ದನಿರ್ಣಯದಲ್ಲಿ ಹೇಳಿದೆ. ॥ ೧೦ ॥

ಪೀ—ಸರ್ವಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರಗಳನ್ನು ನೀನು ಮಾಡಿದ್ದೆಂದಾದರೆ ಏಕೆ ನಿನ್ನನ್ನು ಕೆಲವರು ತಿರಸ್ಕರಿಸುವರು ತಿರಸ್ಕರಿಸುತ್ತಿದ್ದರೂ ಅವರಿಗೆ ಅನರ್ಥವಾಗದಿರುವುದರಿಂದ ಸರ್ವಕರ್ತನು ನಾನೇ ಎಂದು ನೀನು (ಶ್ರೀಕೃಷ್ಣನು) ಹೇಳಿದ್ದು ಅಯುಕ್ತವೆಂದರೆ—

ಗೀ ॥ ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಂ ।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಂ ॥ ೧೧ ॥

ಅ ॥ ಮೂಢಾಃ = ತಾಮಸರು, ಭೂತಮಹೇಶ್ವರಂ = ಸದಾ ಒಂದೇ ರೀತಿಯಾಗಿ ಇರತಕ್ಕುದೂ, ಶ್ರೇಷ್ಠವೂ, ಸರ್ವಗುಣಪರಿಪೂರ್ಣವೂ ಆದ, ಪರಂ = ಸರ್ವೋತ್ಕೃಷ್ಟವಾದ ಮಮ = ನನ್ನ, ಭಾವಂ = ಯಥಾರ್ಥ ಸ್ವರೂಪವನ್ನು, ಅಜಾನಂತಃ = ತಿಳಿಯದವರಾಗಿ, ಮಾನುಷೀಂ ತನುಮಾಶ್ರಿತಂ = ಶ್ರೀಕೃಷ್ಣನು ಮನುಷ್ಯರ ದೇಹವನ್ನು ಹೊಂದಿದ್ದಾನೆಂಬುವ ಮೂಢಜನರ ಭ್ರಮೆಗೆ ವಿಷಯನಾದ, ಅಥವಾ ಮನುಷ್ಯರ ದೇಹದಂತೆ ತೋರುವ ದೇಹವನ್ನು ಹೊಂದಿರುವ, ಮಾಂ = ನನ್ನನ್ನು, ಅವಜಾನಂತಿ = ಅಧಮನೆಂದು ತಿಳಿಯುತ್ತಾರೆ. (ಸರ್ವೋತ್ತಮನೆಂದು ತಿಳಿಯುವುದಿಲ್ಲ) ॥ ೧೧ ॥

ಭಾ ॥ (೧) ತರ್ಹಿ ಕೇಚಿತ್ಕ್ಷಥಂ ತ್ವಾಮವಜಾನಂತಿ । ಕಾ ಚ ತೇಷಾಂ ಗತಿರಿತ್ಯತ ಆಹ । ಅವಜಾನಂತೀತ್ಯಾದಿನಾ ॥ (೨) ಮಾನುಷೀಂ ತನುಂ ಮೂಢಾನಾಂ ಮಾನುಷವತ್ ಪ್ರತೀತಾಂ ನ ತು ಮನುಷ್ಯರೂಪಾಂ ॥ (೩) ಉಕ್ತಂ ಚ ಮೋಕ್ಷಧರ್ಮೇ । ಯತ್ ಕಿಂಚಿದಿಹ ಲೋಕೇ ವೈ ದೇಹಬದ್ಧಂ ವಿಶಾಂಪತೇ । ಸರ್ವಂ ಪಂಚಭಿರಾವಿಷ್ಟಂ ಭೂತೈರೀಶ್ವರಬುದ್ಧಿ ಜೈಃ ॥ (೪) ಈಶ್ವರೋ ಹಿ ಜಗತ್ಸ್ರಷ್ಟಾ ಪ್ರಭುರ್ನಾರಾಯಣೋ ವಿರಾಟ್ । ಭೂತಾಂತರಾತ್ಮಾ ವರದಃ ಸಗುಣೋ ನಿರ್ಗುಣೋಽಪಿ ಚ । ಭೂತಪ್ರಲಯಮವ್ಯಕ್ತಂ ಶುಶ್ರೂಷುರ್ನೃಪಸತ್ತಮೇತಿ ॥ ೧ ॥

ಅ ॥ (೧) ನೀನೇ ಸರ್ವಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರಗಳನ್ನು ಮಾಡಿದವನು, ಸರ್ವೋತ್ತಮ ನೆಂದಾದರೆ - ಕೆಲವರು ಏಕೆ ನಿನ್ನನ್ನು ಅವಮಾನಿಸುತ್ತಾರೆ? ಅವರಿಗೆ ಗತಿಯು ಯಾವುದು? ಎಂದರೆ— **ಅವಜಾನಂತಿ** ಇತ್ಯಾದಿಗಳಿಂದ ಸಮಾಧಾನವನ್ನು ಹೇಳುತ್ತಾರೆ. (೨) ಮಾನುಷೀಂ ತನುಂ=ಮೂಢರಿಗೆ ಮನುಷ್ಯರ ಶರೀರದಂತೆ ತೋರುವ ಶರೀರವನ್ನು ಮನುಷ್ಯರೂಪ ಶರೀರವನ್ನು ಎಂದರ್ಥವಲ್ಲ (೩) (ಏಕೆ ಅಲ್ಲವೆಂದರೆ—) ಮೋಕ್ಷಧರ್ಮದಲ್ಲಿ ಸ್ಪಷ್ಟವಾಗಿ ಹೇಳಿದೆ ಎಲೋ ರಾಜನೇ ಈ ಭೂಮಿಯಲ್ಲಿರುವ ಈ ಜನರಲ್ಲಿ ದೇಹಸಂಬದ್ಧವಾದುದು ಯಾವುದಿದೆಯೋ, ಅವೆಲ್ಲವೂ ಶ್ರೀಪರಯ ಬುದ್ಧಿಯಿಂದ ಹುಟ್ಟಿರುವ ಪೃಥಿವೀ ಮೊದಲಾದ ಪ ಚಭೂತಗಳಿಂದ ಸಂಬದ್ಧವಾಗಿಯೇ ಇವೆ. (ಅಂದರೆ ಲೋಕದಲ್ಲಿರುವ ಎಲ್ಲಾ ಜನರ ಶರೀರಗಳು ಪಂಚಭೂತಗಳಿಂದ ಹುಟ್ಟಿದವುಗಳೇ ಆಗಿವೆ ಪಂಚಭೂತಗಳು ಶ್ರೀಹರಿಯ ಬುದ್ಧಿಯಿಂದ ಹುಟ್ಟಿದವುಗಳು ಆದಕಾರಣ ಪಂಚಭೂತಗಳು ಶ್ರೀಹರಿಗೆ ಹೇಗ ಬಂಧಕಗಳಾಗುವವು?) (೪) (ಶ್ರೀಪರಮಾತ್ಮನಿಗೆ ಪಂಚಭೂತಗಳು ಬಂಧಕಗಳಾಗುವುದಿಲ್ಲವೆಂಬುವಲ್ಲಿ ಬೇರೆ ಪ್ರಮಾಣಗಳನ್ನು ಹೇಳುತ್ತಾರೆ—) ಸರ್ವಸ್ವಾಮಿಯಾದ ಶ್ರೀನಾರಾಯಣನು ಸರ್ವೈಶ್ವರ್ಯವುಳ್ಳವನು ಚೇತನಾಚೇತನ ಜಗತ್ತನ್ನು ಸೃಷ್ಟಿಸಿದವನು ವಿಶೇಷವಾಗಿ ಪ್ರಕಾಶಿಸಿಕೊಂಡಿರುವವನು (ಅಂದರೆ ನಿತ್ಯದಲ್ಲಿಯೂ ಅಭಿವ್ಯಕ್ತವಾದ ರೂಪವುಳ್ಳವನು) ಸಮಸ್ತ ಪ್ರಾಣಿಗಳೊಳಗಿದ್ದು ನಿಯಾಮಕನು ಮೋಕ್ಷವನ್ನು ಕೊಡುವವನು ಸ್ವಾತಂತ್ರ್ಯ ಮೊದಲಾದ ಶುಭಗುಣಗಳುಳ್ಳವನು ಸತ್ವರಜಸ್ತಮೋಗುಣರಹಿತನು ಇಂತಹ ಶ್ರೀಪರಮಾತ್ಮನನ್ನು ಎಲೋ ರಾಜಶ್ರೇಷ್ಠನೇ ಪಂಚಿಬೂತಗಳ ಲಯಕ್ಕೆ ಅಧಿಕಾರಣವಾದ ಮೂಲಪ್ರಕೃತಿಗೆ ಅಭಿಮಾನಿನಿಯಾದ ಲಕ್ಷ್ಮೀದೇವಿಯು ಸೇವಿಸುತ್ತಾ ಇರುತ್ತಾಳೆ ॥ ೧ ॥

ಪೀ— ಶ್ರೀಪರಮಾತ್ಮನಿಗೆ ಭೌತಿಕಶರೀರವಿಲ್ಲವೆಂದು ಹೇಳಿದ್ದು ಮೂಲರೂಪವಿಷಯಕವಾಗಲಿ, ಶ್ರೀಕೃಷ್ಣನು ಅವತಾರರೂಪನಾಗಿರುವುದರಿಂದ ಅವನಿಗೆ ಮನುಷ್ಯ ಶರೀರವಿದೆ, ಎಂದಾಗಲಿ, ಎಂದರೆ —

ಭಾ ॥ (೧) ಅವತಾರಪ್ರಸಂಗೇ ಚೈತದುಕ್ತಂ । ಅತೋ ನಾವತಾರಾರ್ಚಾ ವೃಥಕ್ಕರ್ಮಕೃತಃ ॥ (೨) ರೂಪಾಣ್ಯನೇಕಾನ್ಯಸೃಜತ್ಪ್ರಭುರ್ಹಿ ಅವಭವಾಯ ಸಃ । ವಾರಾಹಂ ನಾರಸಿಂಹಂ ಚ ವಾಮನಂ ಮಾನುಷಂ ತಥೇತಿ ॥ (೩) ತತ್ರೈವ ಪ್ರಥಮಸರ್ಗಕಾಲ ಏವಾವತಾರರೂಪವಿಭಕ್ತ್ಯುಕ್ತೇಃ । ಅತಸ್ತೇ ನ ತೇಷಾಂ ಮಾನುಷತ್ವಾದಿರ್ನಿನಾ ಬ್ರಾಂತಿಂ ॥ (೪) ಭೂತಂ ಮಹದೀಶ್ವರಂ ಚೇತಿ ಭೂತಮಹೇಶ್ವರಂ ॥ (೫) ತಥಾ ಹಿ ಬಾಭ್ರವ್ಯಶಾಖಾಯಾಂ । ಅನಾದ್ಯನಂತಂ ಪರಿಪೂರ್ಣರೂಪಮಿತರಂ ವರಾಣಾಮಪಿ ದೇವವೀರ್ಯಮಿತಿ ॥ (೬)(1) ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮಿತಿ ಚ । (2)ಬ್ರಹ್ಮವುರೋಹಿತ ಬ್ರಹ್ಮ ಕಾಯಿಕ ಮಹಾರಾಜಿಕೇತಿ ಚ ಮೋಕ್ಷಧರ್ಮೇ ॥ ೨ ॥ ೧೧ ॥

ಅ ॥ (೧) ಯತ್ತದ್ದದೃಶಿವಾನ್ ಬ್ರಹ್ಮಾ ರೂಪಂ ಹಯಶಿರೋಧರಂ ಎಂದು ಹಯಗ್ರೀವಾವತಾರ ಪ್ರಸಂಗದಲ್ಲಿ ಅವತಾರರೂಪಗಳಿಗೇನೇ ಭೌತಿಕದೇಹವಿಲ್ಲವೆಂದು ಉಕ್ತವಾಗಿದೆ ಆದಕಾರಣ ಕೃಷ್ಣರಾಮಾದ್ಯವತಾರಗಳು ಮೂಲರೂಪದಿಂದ ಭಿನ್ನಗಳೆಂದೂ ಭೌತಿಕಶರೀರವುಳ್ಳವುಗಳೆಂದೂ ಶಂಕಿಸಕೂಡದು (೨) (ಹಯಗ್ರೀವರೂಪಿಯಾದ ಶ್ರೀಪರಮಾತ್ಮನಂತೆ ಶ್ರೀಕೃಷ್ಣಾದಿಗಳಿಗೂ ಮೂಲರೂಪದಿಂದ ವ್ಯತ್ಯಾಸವಿಲ್ಲವೆಂಬುವಲ್ಲಿ ವಿಶೇಷಪ್ರಮಾಣವನ್ನು ಹೇಳುತ್ತಾರೆ—) (ಬ್ರಹ್ಮಾಂಡೋತ್ಪತ್ತಿಯಾದ ಮೇಲೆ ಬ್ರಹ್ಮನ ದೈನಂದಿನ ಕಲ್ಪದಲ್ಲಿ ಆವಾವ ದೈತ್ಯರಿಂದುಂಟಾಗತಕ್ಕ ಪೀಡಾಪರಿಹಾರಕ್ಕಾಗಿ) ಶ್ರೀನಾರಾಯಣನು ಅವತಾರ ಮಾಡುವುದಕ್ಕಾಗಿ ವಾರಾಹ, ನಾರಸಿಂಹ ವಾಮನ ಶ್ರೀಕೃಷ್ಣ, ರಾಮ ಮೊದ

ಲಾದ ಅನೇಕ ಅವತಾರಗಳನ್ನು **ಪಂಚಾತ್ಮಕಃ ಸ ಭಗವಾನ್ ದ್ವಿಷಡಾತ್ಮಕೋಽಭೂತ್** ಎಂದು ಹೇಳಿದ ಪ್ರಕಾರ ಆದಿಸೃಷ್ಟಿಯಲ್ಲಿಯೇ ವ್ಯಕ್ತಪಡಿಸಿರುವನು. (೩) ಮೋಕ್ಷಧರ್ಮದಲ್ಲಿಯೇ ಆದಿಸೃಷ್ಟಿಯು ಕಾಲದಲ್ಲಿಯೇ (ಮನುಷ್ಯ ಮೊದಲಾದ ಜಾತಿಯು ಹುಟ್ಟುವುದಕ್ಕಿಂತ ಮೊದಲೇ) ವರಾಹ ಮೊದಲಾದ ಅವತಾರ ರೂಪಗಳ ವಿಭಾಗವನ್ನು (ಅಂದರೆ ಇಂತಹವುಗಳು ಅವತಾರರೂಪಗಳೆಂದು ಪ್ರತ್ಯೇಕ) ಹೇಳಿದ್ದಾರೆ (ಕೃಷ್ಣಾದಿಗಳ ದೇಹವು ಮಾನುಷದೇಹವಲ್ಲ) ಆದುದರಿಂದ ಆ ಅವತಾರಾದಿಗಳಿಗೆ ಭ್ರಾಂತಿಯಿಲ್ಲದೆ ಮನುಷ್ಯತ್ವಾದಿಗಳನ್ನು ಹೇಳಲಾಗುವುದಿಲ್ಲ (ಅಂದರೆ ರಾಮಕೃಷ್ಣಾದಿಗಳ ದೇಹಗಳಲ್ಲಿ ಮನುಷ್ಯದೇಹದ ಸಾದೃಶ್ಯವಿದ್ದುದರಿಂದ ಮೂಢರಿಗೆ ಮಾತ್ರ ಮನುಷ್ಯದೇಹವೇ ಎಂದು ಭ್ರಮೆಯು ಬರುವುದು) (೪) ಭೂತಂ = ಸರ್ವದಾ ಇರತಕ್ಕುದು (ಸರ್ವಕಾಲದಲ್ಲಿರತಕ್ಕುದು) ಮಹತ್ = ಸರ್ವದೇಶಗಳಲ್ಲಿರತಕ್ಕುದು, ಈಶ್ವರಂ = ಸರ್ವಗುಣಪರಿಪೂರ್ಣವೂ ಆದ ಯಥಾರ್ಥಸ್ವರೂಪವನ್ನು, (೫) ಉತ್ಪತ್ತಿ ನಾಶಗಳಿಲ್ಲದವನು ಗುಣಪರಿಪೂರ್ಣ ಸ್ವರೂಪವುಳ್ಳವನು ಇಂದ್ರಾದಿದೇವತೆಗಳಿಂದ ಶ್ರೇಷ್ಠರಾದ ರುದ್ರಾದಿಗಳಿಗೂ ಸ್ವಾಮಿಯು ಬ್ರಹ್ಮಾದಿಗಳೇ ಪುತ್ರರಾಗಿವುಳ್ಳವನು ಎಂದು ಬಾಭ್ರವ್ಯಶಾಖೆಯಲ್ಲಿ ಶ್ರೀಹರಿಗೆ ಗುಣಪರಿಪೂರ್ಣತ್ವ, ನಿತ್ಯತ್ವ, ವ್ಯಾಪ್ತತ್ವ ಮೊದಲಾದುವುಗಳು ಉಕ್ತವಾಗಿವೆ (೬) (1) ಸರ್ವದೇಶಕಾಲಗಳಲ್ಲಿ ವಾಪ್ತನಾದ ಸರ್ವೋತ್ತಮನಾದ ಶ್ರೀಪರಮಾತ್ಮನಿಂದ ಅನಾಯಾಸದಿಂದಲೇ (ಋಗ್ವೇದಾದಿಗಳೂ ಸರ್ವಜಗತ್ತೂ) ಹುಟ್ಟಿದವು (2) **ಪುರೋಹಿತವೆಂಬುವ** ದೇವಗಣಗಳೂ, **ಕಾಯಿಕ** ವೆಂಬುವ ದೇವಗಣಗಳೂ **ಮಹಾರಾಜಿಕವೆಂಬುವ** ದೇವಗಣಗಳೂ, ಇವೆಲ್ಲವೂ ಪರಬ್ರಹ್ಮನಾದ ನಿನ್ನ ಅಧೀನಗಳೇ ಆಗಿವೆ, ಎಂದು ಮೋಕ್ಷಧರ್ಮದಲ್ಲಿ ಹೇಳಿದೆ ॥ ೧೧ ॥

ಹೀ—ಶ್ರೀಪರಮಾತ್ಮನನ್ನು ನಿಂದಿಸುವವರಿಗೆ ಅನರ್ಥ ಫಲವನ್ನು ಹೇಳುತ್ತಾರೆ--

ಗೀ ॥ ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ।
ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ॥ ೧೨ ॥

ಅ ॥ ಮೋಘಾಶಾಃ = ವ್ಯರ್ಥವಾದ ಆಶೆಯುಳ್ಳವರು, (ಅಂದರೆ ಭಗವದ್ದ್ವೇಷಿಗಳು ಅಪೇಕ್ಷಿಸುವ ಪಾರಲೌಕಿಕ ಯಾವುದೊಂದು ಫಲವನ್ನು ಹೊಂದದಿರುವವರು) ಮೋಘಕರ್ಮಾಣಃ = ವ್ಯರ್ಥಗಳಾದ ಯಜ್ಞಾದಿ ಕರ್ಮಗಳುಳ್ಳವರು (ಯಜ್ಞಾದಿಕರ್ಮಗಳಿಂದ ಪಾರತ್ರಿಕ ಪ್ರಯೋಜನವನ್ನು ಹೊಂದದಿರುವವರು) ಮೋಘಜ್ಞಾನಾಃ = ಭಗವತ್ತತ್ವವಿಷಯಕ ಜ್ಞಾನವಿಲ್ಲದವರು ವಿಚೇತಸಃ = ವಿರುದ್ಧವಾದ ವಾದ ಮನಸ್ಸುಳ್ಳವರು (ಅಂತೂ ಯಾವುದೊಂದೂ ಅಮುಷ್ಮಿಕ ಪುರುಷಾರ್ಥವಿಲ್ಲದವರು) ಇಂತಹ, ಮೋಹಿನೀಂ = ಬುದ್ಧಿಯನ್ನು ಕೆಡಿಸುವ, ರಾಕ್ಷಸೀಂ = ರಾಕ್ಷಸರ ಸಂಬಂಧಿಯಾದ, ಚ = ಮತ್ತು, ಆಸುರೀಂ = ಆಸುರರ ಸಂಬಂಧಿಯಾದ, ಪ್ರಕೃತಿಮೇವ = ಸ್ವಭಾವವನ್ನೇ ಶ್ರಿತಾಃ = ಆಶ್ರಯಿಸಿಕೊಂಡಿರುವ ತಮೋಯೋಗ್ಯರು, (ಮಾಂ = ನನ್ನ ನ್ನು, ಅವಜಾನಂತಿ = ಸರ್ವೋತ್ತಮನೆಂದು ತಿಳಿಯದೆ ಅಧಮನೆಂದು ತಿಳಿಯುತ್ತಾರೆ) ॥ ೧೨ ॥

ಭಾ ॥ (೧) ತೇಷಾಂ ಫಲಮಾಹ । ಮೋಘಾಶಾ ಇತಿ । ವೃಥಾಶಾಃ । ಭಗವದ್ದ್ವೇಷಿಭಿ-
ರಾಶಾಸಿತಮಾಮುಷ್ಮಿಕಂ ನ ಕಿಂಚಿದಾಪ್ಯತೇ ॥ (೨) ಯಜ್ಞಾದಿಕರ್ಮಾಣಿ ಚ
ತೇಷಾಂ ವೃಥೈವ । ಜ್ಞಾನಂ ಚ । ಕೇನಾಪಿ ಬ್ರಹ್ಮರುದ್ರಾದಿಭಕ್ತ್ಯಾದ್ಯುಪಾಯೇನ
ನ ಕಶ್ಚಿತ್ಪುರುಷಾರ್ಥ ಆಮುಷ್ಮಿಕಸ್ತೈರಾಪ್ಯತ ಇತ್ಯರ್ಥಃ ॥ (೩) ವಕ್ಷ್ಯತಿ ಚ । (1)
ತಾನಹಂ ದ್ವಿಷತಃ ಕ್ರೂರಾನ್ಸಂಸಾರೇಷ್ವಿತ್ಯಾದಿ ॥(೨)ಮೋಕ್ಷಧರ್ಮೇ ಚ । ಕರ್ಮಣಾ

ಮನಸಾ ವಾಚಾ ಯೋ ದ್ವಿಷ್ಯಾದ್ದ್ವಿಷ್ಣು ಮವ್ಯಯಂ । ಮಜ್ಜಂತಿ ಪಿತರಸ್ತಸ್ಯ ನರಕೇ ಶಾಶ್ವತೀಃ ಸಮಾಃ ॥ (3) ಯೋ ದ್ವಿಷ್ಯಾದ್ವಿಬುಧಶ್ರೇಷ್ಠಂ ದೇವಂ ನಾರಾಯಣಂ ಹರಿಂ । ಕಥಂ ಸ ನ ಭವೇದ್ವೈಷ್ಣವ ಆಲೋಕಾಂತಸ್ಯ ಕಸ್ಯಚಿದಿತಿ ॥ (4) ಸರ್ವೋತ್ಕೃಷ್ಟೇ ಜ್ಞಾನಭಕ್ತೀ ಹಿ ಯಸ್ಯ ನಾರಾಯಣೇ ಪುಷ್ಕರವಿಷ್ಟರಾದ್ಯೇ । ಸರ್ವಾವಮೋ ದ್ವೇಷಯುತಶ್ಚ ತಸ್ಮಿನ್ ಭ್ರೂಣಾನಂತಘ್ನೋಽಸ್ಯ ಸಮೋ ನ ಚೈವೇತಿ ಸಾಮವೇದೇ ಶಾಂಡಿಲ್ಯಶಾಖಾಯಾಂ ॥ (5) ದ್ವೇಷಾಚ್ಚೈದ್ಯಾದಯೋ ನೃಪಾಃ ॥ (6) ವೈರೇಣ ಯನ್ನೃಪತಯಃ ಶಿಶುಪಾಲಪೌಂಡ್ರಶಾಲ್ವಾದಯೋ ಗತಿವಿಲಾಸವಿಲೋಕನಾದ್ಯೈಃ । ಧ್ಯಾಯಂತ ಆಕೃತಧಿಯಃ ಶಯನಾಸನಾದೌ ತತ್ಸಾಮ್ಯಮಾಪುರನುರಕ್ತಧಿಯಃ ಪುನಃ ಕಿಮುತ್ಯಾದಿ ತು ಭಗವತೋ ಭಕ್ತಪ್ರಿಯತ್ವಜ್ಞಾಪನಾರ್ಥಂ ॥ (೪) ನಿತ್ಯಧ್ಯಾನಸ್ತುತ್ಯರ್ಥಂ ಚ ॥ (೫) ಸ್ವಭಕ್ತಸ್ಯ ಕದಾಚಿಚ್ಛಾಪಬಲಾದ್ದ್ವೇಷಿಣೋಽಪಿ ಭಕ್ತಿಫಲಮೇವ ಭಗವಾನ್ಪ್ರದಾತೀತಿ । ಭಕ್ತಾ ಏವ ಹಿ ತೇ ಪೂರ್ವಂ ವಿಷ್ಣುಪಾಲಾದಯಃ ಶಾಪಬಲಾದೇವ ದ್ವೇಷಿಣಃ ॥ (೬) ತತ್ಪ್ರಶ್ನೇ ಪೂರ್ವಪಾರ್ಷದಸ್ಯ ಶಾಪಾದಿಕಥನಾಚ್ಚೈತಜ್ಜ್ಞಾಯತೇ । ಅನ್ಯಥಾ ಕಿಮಿತಿತದಪ್ರಸ್ತುತಮುಚ್ಯತೇ॥ (೭) ಭಗವತಃ ಸಾಮ್ಯಕಥನಂ ತು ದ್ವೇಷಿಣಾಮಪಿ ದ್ವೇಷಮನಿರೂಪ್ಯ ಪೂರ್ವತನಭಕ್ತಿಫಲಮೇವ ದದಾತೀತಿ ಜ್ಞಾಪಯಿತುಂ ॥ (೮) ನ ಮೇ ಭಕ್ತಃ ಪ್ರಣಶ್ಯತೀತಿ ವಕ್ಷ್ಯತಿ ॥ ೧ ॥

ಅ ॥ ಮೋಘಾಶಾಃ ಎಂಬುವ ಶ್ಲೋಕದಿಂದ ಭಗವದ್ದ್ವೇಷಿಗಳಿಗೆ ಆಗುವ ಅನರ್ಥಫಲವನ್ನು ಹೇಳುತ್ತಾರೆ ಮೋಘಾಶಾಃ = ವ್ಯರ್ಥವಾದ ಆಶಯುಳ್ಳವರು ಅಂದರೆ ಭಗವದ್ದ್ವೇಷಿಗಳಿಂದ ಅವೇಕ್ಷಿಸಲ್ಪಡುವ ಯಾವುದೊಂದು ವಾರತ್ರಿಕ ಫಲವೂ ಅವರಿಗೆ ಸಿಗುವುದಿಲ್ಲ (೨) ಅವರು ಮಾಡುವ ಯಜ್ಞಾದಿ ಕರ್ಮಗಳೂ ವ್ಯರ್ಥಗಳೇ ಅವರ ಜ್ಞಾನವೂ ವ್ಯರ್ಥವೇ, ಅಂದರೆ-ಬ್ರಹ್ಮರುದ್ರಾದಿಗಳಲ್ಲಿ ಮಾಡತಕ್ಕ ಜ್ಞಾನ ಭಕ್ತಿ ಮೊದಲಾದ ಯಾವುದೊಂದು ಸಾಧನದಿಂದಲೂ ಭಗವದ್ದ್ವೇಷಿಗಳಿಗೆ ಆಮುಷ್ಮಿಕವಾದ ಯಾವುದೊಂದು ಪುರುಷಾರ್ಥವೂ ಸಿಗುವುದಿಲ್ಲ (೩) (ಪೋಕ್ತವಾದಿರೂಪ ಪುರುಷಾರ್ಥಪ್ರಾಪ್ತಿಯು ಮಾತ್ರ ಆಗದಿರುವುದು ಅಲ್ಲ ಮತ್ತೆ ಮಹಾದುಃಖಪ್ರಾಪ್ತಿಯೂ ಆಗುತ್ತದೆಂಬುವ ಅಭಿಪ್ರಾಯದಿಂದ ಆ ವಿಷಯದಲ್ಲಿ ಪ್ರಮಾಣಗಳನ್ನು ಹೇಳುತ್ತಾರೆ (1) ನಾನು ಕ್ರೂರರಾದ ಅಂತಹ ಭಗವದ್ದ್ವೇಷಿಗಳನ್ನು ಸಂಸಾರಗಳಲ್ಲಿ (ಅದರಲ್ಲಿಯೂ ಅಸುರಯೋನಿಗಳಲ್ಲಿ ಕೆಡಹಾಕುವೆನು) ಇತ್ಯಾದಿ ಪ್ರಮೇಯವನ್ನು (ಮುಂದಕ್ಕೆ ಹೇಳುವರು) (2) (ಈ ವಿಷಯವನ್ನು ಮೋಕ್ಷಧರ್ಮದಲ್ಲಿಯೂ ಹೇಳಿರುತ್ತಾರೆ-) ಕರ್ಮದಿಂದಲೂ ಮನಸ್ಸಿನಿಂದಲೂ ವಚನದಿಂದಲೂ ಯಾವನು ನಾಶವಿಲ್ಲದ ಶ್ರೀವಿಷ್ಣುವನ್ನು ದ್ವೇಷಿಸುವನೋ, ಅಂತಹವನ ಪಿತೃಗಳು ನರಕದಲ್ಲಿ ಬಹು ಸಂವತ್ಸರಗಳಲ್ಲಿ ಬೀಳುತ್ತಾರೆ (3) ಬ್ರಹ್ಮರುದ್ರಾದಿ ದೇವತೆಗಳಿಗಿಂತಲೂ ಶ್ರೇಷ್ಠನೂ, ಕ್ರೀಡಾದಿಗುಣವಿಶಿಷ್ಟನೂ, ಪಾಪಪರಿಹಾರಕನೂ ಆದ ಶ್ರೀನಾರಾಯಣನನ್ನು ಯಾವನು ದ್ವೇಷಿಸುವನೋ, ಅತನು ಚಂಡಾಲಪರ್ಯಂತನಾದ ಯಾವ ಮನುಷ್ಯನಿಗೆ ಜೆನ್ನಾಗಿ ದ್ವೇಷ್ಯನು ಆಗದೆ ಹೋದಾನು? (ಸರ್ವಥಾ ಎಲ್ಲರಿಗೂ ದ್ವೇಷ್ಯನೇ ಆಗುವನು) (4) ಸರ್ವರಿಗಿಂತಲೂ ಉತ್ತಮನಾದ, ಚತುರ್ಮುಖ ಬ್ರಹ್ಮನಿಗೂ ತಂದೆಯಾದ ಶ್ರೀನಾರಾಯಣನಲ್ಲಿ ಯಾರಿಗೆ ಜ್ಞಾನಭಕ್ತಿಗಳು ಇವೆಯೋ ಅತನಲ್ಲಿ ದ್ವೇಷಮಾಡತಕ್ಕವನು ಸರ್ವರಿಗಿಂತಲೂ ಅತ್ಯಂತ ಅಧಮನು

ಅನಂತಭ್ರೂಣಹತ್ಯಮಾಡಿದವನು ಸಹ ಭಗವದ್ಭಕ್ತದ್ವೇಷಿಗೆ ಸಮಾನಿಕನಲ್ಲವೇ ಅಲ್ಲ. (ಅಂದರೆ ಭ್ರೂಣ ಹತ್ಯಮಾಡಿದವನಿಗಿಂತಲೂ ಭಗವದ್ಭಕ್ತದ್ವೇಷಿಯು ಅಧಮನು) ಎಂದು ಸಾಮವೇದದಲ್ಲಿ ಶಾಂಡಿಲ್ಯಶಾಖೆಯಲ್ಲಿದೆ (5) (ಭಗವದ್ದ್ವೇಷವು ಅನರ್ಥಸಾಧನವಾದರೆ ಶ್ರೀಪರಮಾತ್ಮನ ದ್ವೇಷವು ಮೋಕ್ಷಕ್ಕೆ ಸಾಧನವೆಂದು ಭಾಗವತಾದಿಗಳಲ್ಲಿ ಹೇಳಿದ್ದು ಹೇಗೆಂದರೆ—) **ಗೋಪ್ಯಃ ಕಾಮಾದ್ಭಯಾತ್ಕಂಸೋ ದ್ವೇಷಾಚ್ಚೈದ್ಯಾದಯೋ ನೃಪಾಃ । ಸಂಬಂಧಾದ್ವೃಷ್ಣಯಃ ಸ್ನೇಹಾದ್ಯೂಯಂ ಭಕ್ತ್ಯಾ ವಯಂ ವಿಭೋ ।** ದ್ವೇಷದಿಂದ ಚೈದ್ಯ ಮೊದಲಾದ ರಾಜರು ಎಂಬುವ ವಾಕ್ಯಕ್ಕೆ **ಕಾಮಾತ್ ಸ್ನೇಹಾತ್ ಭಯಾದ್ದ್ವೇಷಾದ್ಯಥಾ ಭಕ್ತ್ಯೇಶ್ವರೇ ಮನಃ । ಆವೇಶ್ಯ ತದಘಂ ಹಿತ್ವಾ ಬಹವಸ್ತದ್ಗತಿಂ ಗತಾಃ** ಎಂಬುವಲ್ಲಿ ಹೇಳಿದ ಪ್ರಕಾರ ದ್ವೇಷದಿಂದಲಾದರೂ ಶ್ರೀಪರಮಾತ್ಮನಲ್ಲಿಯೇ ಮನಸ್ಸನ್ನು ಇಟ್ಟು ಪಾಪವನ್ನು ಕಳೆದುಕೊಂಡು ವೈಕುಂಠವನ್ನು ಹೊಂದಿರುತ್ತಾರೆ ಎಂದರ್ಥವು ದ್ವೇಷದಿಂದ ಮೋಕ್ಷವು ಸರ್ವಥಾ ಆಗಲಾರದು ಸರ್ವದಾ ಹರಿಸ್ಮರಣರೂಪ ಧ್ಯಾನವು ಮೋಕ್ಷಕ್ಕೆ ಸಾಧನವು ಎಂಬುವಲ್ಲಿ ತಾತ್ಪರ್ಯವು) (6) ಶಿಶುಪಾಲ ಪೌಂಡ್ರಕ ವಾಸುದೇವ, ಸಾಲ್ವ, ಮೊದಲಾದವರು ದ್ವೇಷದಿಂದ ಯಾವ ಶ್ರೀಪರಮಾತ್ಮನ ವಿಚಿತ್ರ ಗತಿ, ವಿಲಾಸ, ದರ್ಶನ, ಮೊದಲಾದುವುಗಳಿಂದ ಆಕೃಷ್ಟವಾದ ಬುದ್ಧಿಯುಳ್ಳವರಾಗಿ, ಯಾವ ಕಾರಣದಿಂದ ಶಯನ, ಆಸನ ಮೊದಲಾದುವುಗಳಲ್ಲಿಯೂ ಶ್ರೀಪರಮಾತ್ಮನನ್ನು ಸ್ಮರಿಸುವವರಾಗಿ ಆ ಶ್ರೀಹರಿಯ ಸಾಮ್ಯವನ್ನು (ವೈಕುಂಠವನ್ನು) ಹೊಂದಿರುತ್ತಾರೋ, ಹೀಗೆ ಇರಲು ಶ್ರೀಪರಮಾತ್ಮನಲ್ಲಿಯೇ ಭಕ್ತಿಯಿಂದ ಸಂಬದ್ಧವಾದ ಬುದ್ಧಿಯುಳ್ಳವರು ಶ್ರೀಹರಿಯ ಸಾಮ್ಯವನ್ನು ಹೊಂದುತ್ತಾರೆಂದು ಏನು ಹೇಳಬೇಕು, ಎಂದು ಶ್ರೀಪರಮಾತ್ಮನು ಭಕ್ತರಿಗೆ ಪ್ರಿಯನೆಂದು ತಿಳಿಸುವುದಕ್ಕಾಗಿ ಹೇಳಿದ್ದು (೪) (ಶಿಶುಪಾಲ ಮೊದಲಾದವರು ಪೂರ್ವದಲ್ಲಿಯೇ ಭಕ್ತರಾಗಿದ್ದುದರಿಂದ ಅವರ ವಿಷಯದಲ್ಲಿ ಹೀಗೆ ಹೇಳಬಹುದು ಆದರೆ ಭಕ್ತರಾಗದೆ ಇದ್ದ ಪೌಂಡ್ರಕವಾಸುದೇವ ಸಾಲ್ವ ಮೊದಲಾದವರ ವಿಷಯದಲ್ಲಿ ಹೀಗೆ ಹೇಳಲಾಗುವುದಿಲ್ಲ ವೆಂದರೆ —) ನಿತ್ಯದಲ್ಲಿಯೂ ಧ್ಯಾನಮಾಡುವುದು ಅತಿಪ್ರಶಸ್ತವು, ಎಂದು ಧ್ಯಾನವನ್ನು ಸ್ತುತಿಸುವುದಕ್ಕಾಗಿಯೂ ಹೀಗೆ ಹೇಳಿದ್ದು (ಅಂದರೆ–ಶಿಶುವಾಲಾದಿಗಳ ದೇಹಗಳು ಜಯ ಮೊದಲಾದ ಶುಭಜೀವರ ಕರ್ಮಗಳಿಂದ ನಿರ್ಮಿತಗಳಾಗಿರುವುದರಿಂದ ಅವರು ಅಸುರರ ಆವೇಶನಿಮಿತ್ತವಾಗಿ ಕದಾಚಿತ್ ದ್ವೇಷಮಾಡಿದರೂ ದ್ವೇಷದ ಫಲವು ಜಯವಿಜಯರಿಗೆ ಆಗುವುದಿಲ್ಲ ಅವರು ಮಾಡಿದ ಸ್ವಾಭಾವಿಕವಾದ ಭಕ್ತಿಯ ಫಲವೇ ಆಗುತ್ತದೆ ಅವರಲ್ಲಿ ಪ್ರವೇಶಿಸಿರುವ ಅಸುರರಿಗೇನೇ ದ್ವೇಷಫಲವಾದ ತಮಸ್ಸು ಹೀಗೆ ಭಕ್ತರಲ್ಲಿ ಶ್ರೀಪರಮಾತ್ಮನು ಪ್ರೀತಿಯನ್ನೇ ಮಾಡುತ್ತಾನೆಂದು ತಾತ್ಪರ್ಯವನ್ನು ತಿಳಿಸಿಕೊಡುವುದಕ್ಕಾಗಿ **ದ್ವೇಷಾಚ್ಚೈದ್ಯಾದಯೋ ನೃಪಾಃ** ಎಂಬುವ ವಾಕ್ಯವು ಹೊರಟಿದ್ದು ದ್ವೇಷವು ಮೋಕ್ಷಕ್ಕೆ ಸಾಧನವೆಂದು ಹೇಳಲಿಕ್ಕೆ ಹೊರಟಿದ್ದಲ್ಲ) **ಪೌಂಡ್ರಕೇ ನರಕೇ ಚೈವ ಸಾಲ್ವೇ ಕಂಸೇ ಚ ರುಗ್ಮಿಣಿ । ಅವಿಷ್ಟಾಸ್ತು ಹರೇರ್ಭಕ್ತಾಸ್ತದ್ಭಕ್ತ್ಯಾ ಹರಿಮಾಪಿರೇ ॥** ಇತ್ಯಾದಿ ಪ್ರಮಾಣಗಳಿಂದ ಪೌಂಡ್ರಕ ವಾಸುದೇವಾದಿಗಳಲ್ಲಿಯೂ ಸಜ್ಜೀವರ ಪ್ರವೇಶವಿದೆ ಆದರೂ ಪೌಂಡ್ರಕಾದಿಗಳ ದೇಹಗಳು ವೇನ ಮೊದಲಾದ ಅಸುರರ ಕರ್ಮಗಳಿಂದ ನಿರ್ಮಿಸಲ್ಪಟ್ಟಿರುವುದರಿಂದ ಅವರಲ್ಲಿ ಪ್ರವಿಷ್ಟರಾದ ಶುಭಜೀವರೀಗೇನೇ ಶುಭಫಲವು ಪೌಂಡ್ರಕಾದ್ಯಸುರರು ಮಾಡಿದ ದ್ವೇಷಕ್ಕೆ ತಮಸ್ಸೇ ಫಲವು ಆದರೂ ನಿರಂತರದಲ್ಲಿಯೂ ದ್ವೇಷದಿಂದಲಾದರೂ ಶ್ರೀಹರಿಯನ್ನು ಸ್ಮರಿಸಿಕೊಂಡಿರುವುದರಿಂದ ನಿತ್ಯಧ್ಯಾನವು ಪ್ರಶಸ್ತವೆಂಬುವಲ್ಲಿಯೇ. **ವೈರೇಣ ಯಂ ನೃಪತಯಃ** ಎಂಬುವ ವಾಕ್ಯಕ್ಕೆ ತಾತ್ಪರ್ಯ ಹೊರತು ದ್ವೇಷದಿಂದ ಮೋಕ್ಷವಾಗುತ್ತದೆಂಬುವಲ್ಲಿ ತಾತ್ಪರ್ಯವಲ್ಲ (೫) (ಹಿಂದೆ ಹೇಳಿದ ಅಭಿಪ್ರಾಯವನ್ನೇ ವಿವರಿಸುತ್ತಾರೆ—) ಶ್ರೀಪರಮಾತ್ಮನು ತನ್ನ ಭಕ್ತರಾದ ಜಯ ವಿಜಯಾದಿಗಳು ಕದಾಚಿತ್ ಸನಕಾದಿಗಳ ಶಾಪಬಲದಿಂದಲೇ ಅಸುರಾವೇಶದಿಂದ ಶ್ರೀಪರಮಾತ್ಮನಲ್ಲಿ ಕದಾಚಿತ್ ದ್ವೇಷ ಮಾಡಿದರೂ ವಸ್ತುತಃ ಭಕ್ತವತ್ಸಲನಾದ ಶ್ರೀಪರಮಾತ್ಮನು ಆ ದ್ವೇಷವನ್ನು ಗಣನೆಮಾಡದೆ ಭಕ್ತರಾದ ಜಯಾದಿಗಳಿಗೆ ಅವರು ಮಾಡಿದ ಭಕ್ತಿಯ ಫಲಭೂತನಾದ ಮೋಕ್ಷಾದಿಗಳನ್ನೇ

ಶ್ರೀಪರಮಾತ್ಮನು ಕೊಡುತ್ತಾನೆ (ಹೀಗೆ ಭಕ್ತರಲ್ಲಿ ಮಹಾಪ್ರೀತಿಯಿರುವವನೆಂದು ತಿಳಿಸುವುದಕ್ಕಾಗಿಯೇ ಆ ವಾಕ್ಯವು ಹೊರಟಿದ್ದು) ಶಿಶುಪಾಲ ಮೊದಲಾದವರು ಪೂರ್ವದಲ್ಲಿ ಜಯವಿಜಯಾದಿರೂಪದಿಂದ ಭಕ್ತರೇ ಆಗಿದ್ದರು, ಎಂದು ಭಾಗವತಾದಿಗಳಲ್ಲಿ ಪ್ರಸಿದ್ಧವೇ ಆಗಿದೆ ಸನಕಾದಿಗಳ ಶಾಪಬಲದಿಂದಲೇ ಕದಾಚಿತ್ ದ್ವೇಷಮಾಡಿದ್ದು. **(ಯೋ ದ್ವಿಷ್ಯಾದ್ವಿಬುಧಶ್ರೇಷ್ಠಂ** ಇತ್ಯಾದಿದ್ವೇಷಕ್ಕೆ ತಮಸ್ಸಾಧನತ್ವವನ್ನು ಹೇಳುವ ನಿರವಕಾಶ ಪ್ರಮಾಣಾನುಸಾರ ಆಪಾತತಃ ದ್ವೇಷಕ್ಕೆ ಮೋಕ್ಷಸಾಧನತ್ವವನ್ನು ಹೇಳುವಂತೆ ತೋರುವ **ದ್ವೇಷಾಚ್ಚೈದಾದಯಃ** ಇದು ಮೊದಲಾದಭಾಗವತವಾಕ್ಯಕ್ಕೂ ಹೀಗೆಯೇ ಅರ್ಥವನ್ನು ಹೇಳಬೇಕು)(೬) (ಈ ವಾಕ್ಯಗಳಿಗೆ ಹೀಗೆಯೇ ಅರ್ಥವನ್ನು ಹೇಳಬೇಕೆನ್ನುವಲ್ಲಿ ಬೇರೆ ಜ್ಞಾಪಕವನ್ನು ಹೇಳುತ್ತಾರೆ--)(**ಅಹೋ ಅತ್ಯದ್ಭುತಂ ಹ್ಯೇತತ್ ದುರ್ಲಭೈಕಾಂತಿನಾಮಪಿ । ವಾಸುದೇವೇ ಭಗವತಿ ಗತಿಶ್ಚೈದ್ಯಸ್ಯ ವಿದ್ವಿಷಃ** ಎಂದು ಧರ್ಮರಾಜನು ದ್ವೇಷಿಯಾದ ಶಿಶುಪಾಲನಿಗೆ ಮುಕ್ತಿಯು ಹೇಗೆಂದು) ಆ ವಿಷಯದಲ್ಲಿ ಪ್ರಶ್ನೆಯನ್ನು ಮಾಡೋಣ ನಾರದರು **ಮಾತೃಷ್ವಸೇಯೋ ವಶ್ಚೈದ್ಯೋ ದಂತವಕ್ತ್ರಶ್ಚ ಪಾಂಡವ । ಪಾರ್ಷದಪ್ರವರೌ ವಿಷ್ಣೋರ್ವಿಪ್ರಶಾಪಾತ್ಪದಚ್ಯುತೌ** ಎಂದು ಪೂರ್ವದಲ್ಲಿ ಜಯವಿಜಯರೆಂಬುವ ದ್ವಾರಪಾಲಕರು ಶಾಪಾದಿಗಳನ್ನು ಹೊಂದಿರುವರು, ಎಂದು ಹೇಳಿದ್ರಿಂದಲೂ ದ್ವೇಷವು ಮೋಕ್ಷಸಾಧನವಲ್ಲವೆಂಬುವುದು ತಿಳಿಯುತ್ತದೆ ದ್ವೇಷವು ಮೋಕ್ಷಸಾಧನವೆಂದಾಗಿದ್ದರೆ ಆಗ ಈ ವಿಷಯದಲ್ಲಿ ಆಶ್ಚರ್ಯವೇನು? ದ್ವೇಷವು ಭಕ್ತಿಯಂತೆ ಮೋಕ್ಷಕ್ಕೆ ಸಾಧನವೇ (ಮೋಕ್ಷಮಾರ್ಗವೇ) ಎಂದುತ್ತರಕೊಡಬೇಕಿತ್ತು ಪೂರ್ವದಲ್ಲಿ ದ್ವಾರಪಾಲಕರಾಗಿದ್ದವರಿಗೆ ಶಾಪಾದಿಗಳ ಬಲದಿಂದ ನೀಚಯೋನಿಪ್ರಾಪ್ತಿಯು, ಇತ್ಯಾದಿಗಳು ಆಪ್ರಸ್ತುತಗಳೂ ಅನುಪಯುಕ್ತಗಳೂ ಆದ ವಿಷಯಗಳನ್ನು ಹೇಳಬೇಕಾಗಿರಲಿಲ್ಲ (೭)(**ನಿಂದನಸ್ತವಸತ್ಕಾರ ನ್ಯಕ್ಕಾರಾರ್ಥಂ ಕಲೇವರಂ** ಇತ್ಯಾದಿ ಶ್ಲೋಕಗಳಿಂದ ಶ್ರೀಪರಮಾತ್ಮನು ತನ್ನನ್ನು ನಿಂದಿಸುವವರಲ್ಲಿಯೂ ಸ್ತುತಿಸುವವರಲ್ಲಿಯೂ ಸಮನಾಗಿಯೇ ಇರುತ್ತಾನೆಂದು ನಾರದರು ಹೇಳಿದ್ದಾರೆ ನಿಂದೆಯು ಸ್ತುತಿಯಂತೆ ಮೋಕ್ಷಸಾಧನವೆಂದಾಗಿದ್ದರೆ ನಾರದರು ಹೇಳಿದ್ದು ಅಯುಕ್ತವಾಗುವುದು ಎಂದರೆ -) ಭಕ್ತವತ್ಸಲನಾದ ಶ್ರೀಪರಮಾತ್ಮನು ನಿಂದಾದಿಗಳನ್ನು ಮಾಡಿದವರಲ್ಲಿಯೂ ನಿರ್ವಿಕಾರನಾಗಿಯೇ ಇರುತ್ತಾನೆಂದು ಹೇಳಿದ್ದು ಭಕ್ತರಾಗಿದ್ದವರು ಅಸುರರ ಆವೇಶನಿಮಿತ್ತವಾಗಿ ಕದಾಚಿತ್ ದ್ವೇಷಮಾಡಿದ್ದಾಗ್ಯೂ ಅವರು ಮಾಡಿದ ದ್ವೇಷರೂಪವಾದ ಅಪರಾಧನನ್ನು ಲೆಕ್ಕಿಸದೆ ಹಿಂದಿನ ಭಕ್ತಿಯ ಫಲವನ್ನೇ ಕೊಡುತ್ತಾನೆಂದು ತಿಳಿಸುವುದಕ್ಕಾಗಿಯೇ ಹೇಳಿದ್ದ ದ್ವೇಷವು ಮೋಕ್ಷಸಾಧನವೆಂಬುವ ಅಭಿಪ್ರಾಯದಿಂದಲ್ಲ (ಶ್ರೀಪರಮಾತ್ಮನು ಭಕ್ತರ ಅಪರಾಧನನ್ನು ಎಣಿಸುವುದಿಲ್ಲ ಸಹಿಸಿಕೊಳ್ಳುತ್ತಾನೆಂಬುವುದು ಗೀತೆಯಲ್ಲಿಯೇ ಹೇಳಿದ್ದಾರೆಂದು ಹೇಳುತ್ತಾರೆ--) (೮) ನನ್ನ ಭಕ್ತನು ಹಾಳಾಗುವುದಿಲ್ಲ. ಎಂದು ಮುಂದಕ್ಕೆ ಈ ಗ್ರಂಥದಲ್ಲಿಯೇ ಹೇಳುವರು ॥ ೧ ॥

ಪೀ—ದ್ವೇಷವು ಮುಕ್ತಿಗೆ ಸಾಧನವಲ್ಲವೆಂದು ಹೇಳುವುದಾದರೆ ಭಕ್ತಿಯಿಂದಾಗಲೀ ದ್ವೇಷದಿಂದಲಾಗಲೀ ಮಾಡಿದ ಸ್ಮರಣೆಯು ಮೋಕ್ಷಕ್ಕೆ ಕಾರಣವಾಗುತ್ತದೆಂದು ಹೇಳುವ **ಭಾವೋ ಹಿ** ಇದು ಮೊದಲಾದ ವಚನಗಳಿಂದ ವಿರೋಧವು ಬರುವುದು ಎಂದರೆ--

ಭಾ ॥ (೧) ನ ಚ ಭಾವೋ ಭವಕಾರಣಮಿತ್ಯಾದಿವಿರೋಧಃ । ದ್ವೇಷಭಾವಿನಾಂ ದ್ವೇಷ ಏವ ಭವತೀತಿ ಹಿ ಯುಕ್ತಂ ॥ (೨) ಅನ್ಯಥಾ ಗುರುದ್ವೇಷಿಣೋಽಪಿ ಗುರುತ್ವಂ ಭವತೀತ್ಯಾದ್ಯನಿಷ್ಟಮಾಪದ್ಯತೇ ॥ (೩) ನ ಚಾಕೃತಧೀಸ್ತ್ವೇಽವಿಶೇಷಃ । ತೇಷಾಮೇವ ಹಿರಣ್ಯಕಶಿಪ್ವಾದೀನಾಂ ಪಾಪಪ್ರತೀತೇಃ ॥ (೪) ಹಿರಣ್ಯಕಶಿಪುಶ್ಚಾಪಿ ಭಗವನ್ನಿಂದಯಾ ತಮಃ । ವಿವಿಕ್ಷುರತ್ಯಗಾತ್ಸೂನೋಃ ಪ್ರಹ್ಲಾದಸ್ಯಾನುಭಾವತ ಇತಿ ॥ (೫)

ಯದನಿಂದತ್ಪಿತಾ ಮಹ್ಯಂ ತ್ವದ್ಭಕ್ತೇ ಮಯಿ ಚಾಘವಾನಿತ್ಯಾರಭ್ಯ ತಸ್ಮಾತ್ಪಿತಾ ಮೇ ಪೂಯೇತ ದುರಂತಾದ್ದುಸ್ತರಾದಘಾದಿತಿ ಪ್ರಹ್ಲಾದೇನ ಭಗವತೋ ವರಯಾಚನಾಚ್ಚ ॥ ೨ ॥

ಅ ॥ (೧) **ಭಾವ್ಯೋ ಹಿ ಭವಕಾರಣಂ** ಇತ್ಯಾದಿ ವಚನಗಳಿಂದ ವಿರೋಧವು ಬರ ತ್ತದೆಂದು ಹೇಳ ಕೂಡದು (ಏಕೆ ಹೇಳಕೂಡದೆಂದರೆ –) ದ್ವೇಷದಿಂದ ಶ್ರೀಕೃಷ್ಣನನ್ನು ಧ್ಯಾನಿಸುವವರಿಗೆ ಶ್ರೀಕೃಷ್ಣನಲ್ಲಿ ದ್ವೇಷವೇ ಉಂಟಾಗುತ್ತದೆಂಬುವ ವಚನಕ್ಕೆ ದ್ವೇಷಭಾವವು (ದ್ವೇಷದಿಂದ ಮಾಡುವ ಧ್ಯಾನವು) ದ್ವೇಷಾಭಿವೃದ್ಧಿಗೇನೇ ಕಾರಣವಾಗುತ್ತದೆಂಬುವ ಅರ್ಥವನ್ನೇ ಹೇಳುವುದರಿಂದ ದ್ವೇಷವು ಮೋಕ್ಷಸಾಧನವೆಂಬುವ ಅರ್ಥವನ್ನು ಹೇಳುವುದೇ ಇಲ್ಲ **(ಯಾದೃಶೀ ಭಾವನಾ ಜ್ಞೇಯಾ ಸಿದ್ಧಿರ್ಭವತಿ ತಾದೃಶೀ** ಎಂದು ಉಕ್ತವಾಗಿದೆ) (೨) ದ್ವೇಷದಿಂದ ಭಗವಂತನ ಧ್ಯಾನವು ದ್ವೇಷವಿಷಯವಾಗಿ ಶ್ರೀಪರಮಾತ್ಮನ ಸ್ವರೂಪತ್ವರೂಪ ಮೋಕ್ಷಕ್ಕೆ ಕಾರಣವು ಎಂದು ಅರ್ಥವನ್ನು ಇಟ್ಟುಕೊಂಡರೆ ಲೋಕದಲ್ಲಿ ಗುರುದ್ವೇಷಿಗಳಿಗೂ ಗುರುತ್ವವು ಬರಬೇಕಾಗುವುದು, ಎಂಬುವ ಅನಿಷ್ಟವು ಪ್ರಾಪ್ತವಾದೀತು (ಆದಕಾರಣ ನಾವು ಹೇಳಿದಂತೆಯೇ ಆ ವಾಕ್ಯಕ್ಕೆ ಅರ್ಥವನ್ನು ಹೇಳಬೇಕು) (೩) (ಭಗವದ್ಭಕ್ತನು ಶ್ರೀಪರಮಾತ್ಮನಿಂದ ಆಕೃಷ್ಟವಾದ ಬುದ್ಧಿಯುಳ್ಳವನಾದುದರಿಂದ (ಅಂದರೆ–ಶ್ರೀಹರಿಯಲ್ಲಿಯೇ ಬುದ್ಧಿಯನ್ನು ಇಟ್ಟುರುವುದರಿಂದ) ಹೇಗೆ ಮುಕ್ತಿಯನ್ನು ಹೊಂದುತ್ತಾನೋ ಹಾಗೆಯೇ ಪರಮಾತ್ಮನ ದ್ವೇಷಿಯು ಶ್ರೀಪರಮಾತ್ಮನಲ್ಲಿಯೇ ಬುದ್ಧಿಯನ್ನು ಇಟ್ಟುರುವುದರಿಂದ ಮೋಕ್ಷವನ್ನು ಹೊಂದುತ್ತಾನೆ ಎಂದರೆ–) ಭಗವದ್ದ್ವೇಷಿ ಭಗವದ್ಭಕ್ತರಿಬ್ಬರೂ ಶ್ರೀಪರಮಾತ್ಮನಿಂದ ಆಕೃಷ್ಟವಾದ ಬುದ್ಧಿಯುಳ್ಳವರಾದರೂ ಅವರಿಬ್ಬರಿಗೂ ಸಿಗುವ ಫಲದಲ್ಲಿಯೂ ವಿಶೇಷ (ವ್ಯತ್ಯಾಸ) ವಿಲ್ಲವೆಂದು ಹೇಳಕೂಡದು ದ್ವೇಷದಿಂದ ಪರಮಾತ್ಮನಲ್ಲಿಯೇ ಬುದ್ಧಿಯನ್ನು ಇಟ್ಟರುವ ಹಿರಣ್ಯಕಶಿಪು ಮೊದಲಾದವರಿಗೆ ಪಾಪವು ಇದೆ, ಎಂದು **ಹಿರಣ್ಯಕಶಿಪುಃ** ಇತ್ಯಾದಿ ವಾಕ್ಯಗಳಿಂದ ಹೇಳಿದ್ದಾರೆ. (೪) ಹಿರಣ್ಯಕಶಿಪುವೂ ಕೂಡ ಶ್ರೀಪರಮಾತ್ಮನ ನಿಂದೆಯಿಂದ ಅಂಧಂತಮಸ್ಸನ್ನು ಹೊಂದ ಬೇಕಾದ ಸಾಧನಗಳಿದ್ದರೂ ತನ್ನ ಮಗನಾದ ಪ್ರಹ್ಲಾದನ ಪ್ರಭಾವದಿಂದ ಅಂಧಂತಮಸ್ಸನ್ನು ಅತಿಕ್ರಮಿಸಿದನು. (ಅಂದರೆ ಅನರ್ಥವನ್ನು ಕಳೆದುಕೊಂಡನು) (೫) ನನ್ನ (ಪ್ರಹ್ಲಾದನ) ತಂದೆಯು ಶ್ರೀಪರಮಾತ್ಮನನ್ನು ಯಾವುದು ನಿಂದಿಸಿದನೋ, (ಪರಮಾತ್ಮನ ಭಕ್ತನಾದ ನನ್ನಲ್ಲಿ ಮಹಾಪರಾಧವನ್ನು ಮಾಡಿದನೋ,) ಎಂದಾರಂಭಿಸಿ, ಆದಕಾರಣ ನನ್ನ ತಂದೆಯಾದ ಹಿರಣ್ಯಕಶಿಪುವು ಅಂತವಿಲ್ಲದಿರುವ ತೀರಿಸಲಶಕ್ಯವಾದ ಪಾಪರಾಶಿಯಿಂದ ಬಿಡುಗಡೆಹೊಂದಿ ಪವಿತ್ರನಾಗಲಿ, ಎಂದು ಪ್ರಹ್ಲಾದನು ಶ್ರೀಪರಮಾತ್ಮನಿಂದ ವರವನ್ನು ಬೇಡಿದ್ದಾನೆ. (ಇದರಿಂದ ವಿಷ್ಣು ವೈಷ್ಣವದ್ವೇಷಿಗಳಿಗೆ ಮಹಾಪಾಪವಿದೆ, ಎಂದು ತಿಳಿಯುತ್ತದೆ) ॥ ೨ ॥

ಪೀ—**ಯೋ ದ್ವಿಷ್ಯಾತ್** ಇತ್ಯಾದಿಗಳು **ದ್ವೇಷಾಚ್ಚೈದ್ಯಾದಯಃ** ಇತ್ಯಾದಿಗಳನ್ನು ಬಾಧಿಸುವುದು ಹೇಗೆ? ಎಂದರೆ –

ಭಾ ॥ (೧) ಬಹುಷು ಗ್ರಂಥೇಷು ನಿಷೇಧಃ । ಕುತ್ರಚಿದೇವ ತದುಕ್ತಿರಿತಿ ವಿಶೇಷಃ ॥ (೨) ಯಸ್ಮಿಂಸ್ತದುಚ್ಯತೇ ತತ್ರೈವ ನಿಷೇಧ ಉಕ್ತಃ । ಮಹಾತಾತ್ಪರ್ಯವಿರೋಧಶ್ಚೋಕ್ತಃ ಪುರಸ್ತಾತ್ ॥ (೩) ಅಯುಕ್ತಿಮದ್ಭ್ಯೋ ಯುಕ್ತಿಮದ್ಭ್ಯೋ ಬಲವಂತಿ ವಾಕ್ಯಾನಿ । ಯುಕ್ತಯಶ್ಚೋಕ್ತಾ ಅನ್ಯೇಷಾಂ । ನ ಚೈತೇಷಾಂ ಕಾಚಿದ್ಗತಿಃ । (೪) ಸಾಮ್ಯೇಽಪಿ ವಾಕ್ಯಯೋರ್ಲೋಕಾನುಕೂಲಮೇವ ಬಲವತ್ । ಲೋಕಾನುಕೂಲಂ

ಚ ಭಕ್ತಪ್ರಿಯತ್ವಂ ನೇತರತ್ರ । ಉಕ್ತಂ ಚ ತೇಷಾಂ ಪೂರ್ವಭಕ್ತತ್ವಂ ॥ (೫) ಮನ್ಯೇ ಸುರಾನ್ಭಾಗವತಾಂಸ್ತ್ರ್ಯಧೀಶೇ ಸಂರಂಭಮಾರ್ಗಾಭಿನಿವಿಷ್ಟಚಿತ್ತಾನಿತ್ಯಾದಿ ॥ (೬) ಅತೋ ನ ಭಗವದ್ದ್ವೇಷಿಣಾಂ ಕಾಚಿದ್ಗತಿರಿತಿ ಸಿದ್ಧಂ । ದ್ವೇಷಕಾರಣಮಾಹ । ರಾಕ್ಷಸೀಮಿತಿ ॥ ೩ ॥ ॥ ೧೨ ॥

ಅ ॥ (೧) ಬಹುಗ್ರಂಥಗಳಲ್ಲಿ ದ್ವೇಷವು ಮುಕ್ತಿಗೆ ಸಾಧನವೆಂಬುವುದನ್ನು ನಿಷೇಧಿಸಿಯದೆ ಕೆಲವು ಕಡೆ ಮಾತ್ರ ದ್ವೇಷವು ಮುಕ್ತಿಗೆ ಸಾಧನವೆಂದು ಹೇಳಿದ್ದು ಹೀಗೆ ವಿಶೇಷವಿದೆ (ಅಂದರೆ ದ್ವೇಷದಿಂದ ಮೋಕ್ಷವಾಗುವುದಿಲ್ಲ ತಮಸ್ಸೇ ಆಗುತ್ತದೆ, ಎಂದು ಹೇಳುವ **ಯೋ ದ್ವಿಷ್ಯಾತ್** ಇತ್ಯಾದಿ ವಚನಗಳು ಬಹಳ ಇವೆ ದ್ವೇಷವು ಮೋಕ್ಷಸಾಧನವೆಂದು ಹೇಳುವ ವಚನಗಳು ಅತ್ಯಲ್ಪವು ಕೆಲವು ಕಡೆ ಮಾತ್ರ ಕಂಡುಬರುತ್ತದೆ (೨) ಭಾಗವತ ಮೊದಲಾದ ಯಾವ ಗ್ರಂಥದಲ್ಲಿ ದ್ವೇಷದಿಂದ ಮುಕ್ತಿಯಾಗುತ್ತದೆ ಎಂದು ಹೇಳಿಯದೋ, ಆ ಗ್ರಂಥದಲ್ಲಿಯೇ **ಭಗವನ್ನಿಂದಯಾ** ತಮಃ ಎಂದು ಅಂಥಂತನುಸ್ಸು ಆಗುತ್ತದೆಂದು ಹೇಳಿದೆ (ಆದಕಾರಣ ಆ ವಾಕ್ಯಗಳಿಗೆ ಯಥಾಶ್ರುತಾರ್ಥವನ್ನು ಇಟ್ಟುಕೊಳ್ಳಬಾರದು) ಶ್ರೀಪರಮಾತ್ಮನು ಸರ್ವಗುಣಪರಿಪೂರ್ಣನು, ಸರ್ವೋತ್ತಮನು ಎಂಬುವಲ್ಲಿಯೇ ಸಮಸ್ತ ವೇದಶಾಸ್ತ್ರಗಳಿಗೆ ಮಹಾತಾತ್ಪರ್ಯವು ಇದೆ, ಎಂದು ಪ್ರಮಾಣಸಿದ್ಧವಾಗಿದೆ ದ್ವೇಷದಿಂದ ಮುಕ್ತಿಯಾಗುತ್ತದೆಂದು ಹೇಳುವವರಿಗೆ ಮಹಾತಾತ್ಪರ್ಯ ವಿರೋಧವು ಬರುವುದು (೩) ಯುಕ್ತಿಸಿದ್ಧವಾಗಿರುವ ಅರ್ಥವನ್ನು ಹೇಳುವ ವಾಕ್ಯಗಳಿಗಿಂತ ಯುಕ್ತಿಸಿದ್ಧವಾದ ಅರ್ಥವನ್ನು ಹೇಳುವ ವಾಕ್ಯಗಳೇ ಪ್ರಬಲಗಳು ಆದಕಾರಣ ಪರಮಾತ್ಮನ ಪರಮಾನ ಗ್ರಹದಿಂದಲೇ ಮೋಕ್ಷಾದಿ ಪುರುಷಾರ್ಥಗಳಾಗುತ್ತವೆ. ಪರಮಾತ್ಮನ ದ್ವೇಷದಿಂದ ಮಹಾನರ್ಥವೇ ಉಂಟಾಗುತ್ತದೆ, ಇದೇ ಮೊದಲಾದ ಅರ್ಥವನ್ನು ಸಾಧಿಸಿಕೊಡುವ ಯುಕ್ತಿಗಳ ಸಹಾಯಗಳು ನಾವು ಹೇಳಿದ ವಚನಗಳಿಗೆ ಇವೆ ಪರರು ಹೇಳಿರುವ ವಚನಗಳಿಗೆ ಇಂತಹ ಯುಕ್ತಿಗಳ ಸಹಾಯಗಳು ಇಲ್ಲ ದ್ವೇಷಕ್ಕೆ ತಮಸ್ಸಾಧನತ್ವವಿದೆ, ಎಂದು ಸ್ಪಷ್ಟವಾಗಿ ಹೇಳುವ ವಾಕ್ಯಗಳಿಗೆ ಬೇರೆ ಯಾವ ವಿಧದಿಂದಲೂ ಅರ್ಥವನ್ನು ಹೇಳಲಿಕ್ಕೆ ಬರುವುದಿಲ್ಲ ದ್ವೇಷದಿಂದ ಮೋಕ್ಷವಾಗುತ್ತದೆಂದು ಹೇಳುವ ಕೆಲವು ವಚನಗಳಿಗೆ ನಾವು ಅರ್ಥಾಂತರವನ್ನು ಹೇಳಿರುತ್ತೇವೆ (೪) ಮತ್ತು ಭಗವದ್ದ್ವೇಷವು ಅನರ್ಥಸಾಧನವೆಂದು ಹೇಳುವ ವಾಕ್ಯಗಳಿಗೂ ಭಗವದ್ದ್ವೇಷವು ಮೋಕ್ಷಕ್ಕೆ ಸಾಧನವೆಂದು ಹೇಳುವ ವಾಕ್ಯಗಳಿಗೂ ಕಥಂಚಿತ್ ಗುಣಾಂತರದಿಂದ ಸಾಮ್ಯವಿದೆ, ಎಂದು ಹೇಳಿದರೂ ಲೋಕಾನುಭವಸಿದ್ಧವಾಗಿ ಅರ್ಥವನ್ನು ಹೇಳುವ ವಾಕ್ಯಗಳಿಗೇನೇ ಲೋಕಾನುಭವವಿರುದ್ಧಾರ್ಥವನ್ನು ಹೇಳುವ ವಾಕ್ಯಗಳಿಗಿಂತ ಪ್ರಾಬಲ್ಯವೇ ಕಂಡುಬಂದದೆ ಲೋಕದಲ್ಲಿ ತನ್ನನ್ನೇ ದ್ವೇಷಿಸುವವನಲ್ಲಿ ಯಾರೂ ಅನುಗ್ರಹ ಮಾಡುವುದಿಲ್ಲ ತನ್ನಲ್ಲಿ ವಿಶ್ವಾಸ ಮಾಡುವವನಲ್ಲಿಯೇ ಅನುಗ್ರಹ ಮಾಡುತ್ತಾನೆ ಎಂಬುವುದು ಸರ್ವಾನುಭವಸಿದ್ಧವು ಲೋಕಾನುಕೂಲ ಲೋಕಾನನುಕೂಲ ವಾಕ್ಯಗಳಿಗೆ ಕಥಂಚಿತ್ ಗುಣಾಂತರದಿಂದ ಸಾಮ್ಯವಿದ್ದರೂ ಲೋಕಾನುಕೂಲವಾಕ್ಯವೇ ಪ್ರಬಲವು ಭಕ್ತರಲ್ಲಿ ಪ್ರೀತಿಯಿರುವವನು, ಎಂಬುವುದು ಲೋಕಾನುಕೂಲವೂ ಆಗಿದೆ ದ್ವೇಷಿಗಳಲ್ಲಿ ಪ್ರೀತಿಯಿದೆ, ಎಂಬುವುದು ಲೋಕಾನುಕೂಲವಲ್ಲ (ಶ್ರೀಪರಮಾತ್ಮನ ಪ್ರೀತಿಯಿಂದಲೇ ಮೋಕ್ಷವೆಂಬುವುದು ಪ್ರಸಿದ್ಧವೇ ಆಗಿದೆ.) ಶಿಶುಪಾಲಾದಿಗಳು ಪೂರ್ವದಲ್ಲಿ ದ್ವಾರಪಾಲಕರಾದುದರಿಂದ ಭಕ್ತರೆಂಬುವುದು ಪ್ರಸಿದ್ಧವೇ ಆಗಿದೆ, ಎಂದು ಮೊದಲೇ ಉಕ್ತವಾಗಿದೆ (೬) (ಮತ್ತು ಅವರು ದೇವತೆಗಳು ಎಂಬುವ ವಿಷಯದಲ್ಲಿ ಪ್ರಮಾಣವಿದೆ, ಎನ್ನುತ್ತಾರೆ-) ಮೂರು ಲೋಕಗಳಿಗೆ ಸ್ವಾಮಿಯಾದ ಶ್ರೀಪರಮಾತ್ಮನಲ್ಲಿ ದ್ವೇಷದಿಂದ ಯುದ್ಧಮಾಡುವುದೆಂಬುವ (ಶ್ರೀಪರಮಾತ್ಮನಲ್ಲಿ ಮನಸ್ಸನ್ನು ಇಡುವುದರಲ್ಲಿ) ಮಾರ್ಗಮಾತ್ರದಿಂದ ಸಂಬಂಧವಾದ ಮನಸ್ಸುಳ್ಳ ಭಗವದ್ಭಕ್ತರಾದ ಶಿಶುಪಾಲಾದಿಗಳನ್ನು ದೇವತೆಗಳನ್ನಾಗಿ ತಿಳಿಯುತ್ತೇನೆ, ಇತ್ಯಾದಿ (ಅಂದರೆ ದ್ವೇಷಾದಿಗಳಿಂದಲಾಗಲೀ ಶ್ರೀಪರ

ಮಾತ್ರನನ್ನೇ ಸ್ಮರಿಸುತ್ತಿದ್ದರು ಆ ಶ್ರೀಹರಿಯಲ್ಲಿಯೇ ಚೆನ್ನಾಗಿ ಮನಸ್ಸನ್ನು ಇಟ್ಟಿದ್ದರಿಂದ ಮರಣಕಾಲದಲ್ಲಿ ಪರಮಾತ್ಮನಲ್ಲಿ ದ್ವೇಷವು ಕಳೆದುಹೋಗಿ ಭಕ್ತಿಯು ಅಭಿವೃದ್ಧಿಯಾಗೋಣ, ಶ್ರೀಪರಮಾತ್ಮನನ್ನು ಪ್ರವೇಶಮಾಡುತ್ತಾರೆ) (೬) ಆದಕಾರಣ ಭಗವದ್ದ್ವೇಷಿಗಳಿಗೆ ಸರ್ವಥಾ ಸದ್ಗತಿಯು ಆಗಲಾರದು, ಎಂದು ಸಿದ್ಧವಾಯ್ತು (ತಮ್ಮ ವೌಢ್ಯದಿಂದಲೇ ನನ್ನನ್ನು ಅಧಮನೆಂದು ತಿಳಿಯುತ್ತಾರೆ. ನನ್ನಲ್ಲಿ ದೋಷವಿದ್ದಪ್ರಯುಕ್ತ ಎಂದಲ್ಲ ಅವರಿಗೆ ಮಹಾ ಅನರ್ಥವುಂಟಾಗುವುದು) **ರಾಕ್ಷಸೀಂ** ಎಂಬುವ ಶ್ಲೋಕದಿಂದ ದ್ವೇಷಕ್ಕೆ ಮೂಲಕಾರಣವನ್ನು ಹೇಳುತ್ತಾರೆ ॥ ೩ ॥ ॥ ೧೨ ॥

ಗೀ॥ ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ ।
ಭಜಂತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಂ ॥ ೧೩ ॥

ಅ ॥ ಪಾರ್ಥ = ಅರ್ಜುನನೇ, ದೈವೀಂ = ಮೋಕ್ಷಕ್ಕೆ ಯೋಗ್ಯರಾದ ಉತ್ತಮಜೀವರ ಸಂಬಂಧಿಯಾದ, ಪ್ರಕೃತಿಂ — ಸ್ವಭಾವವನ್ನು, ಆಶ್ರಿತಾಃ = ಆಶ್ರಯಿಸಿರುವ, ಮಹಾತ್ಮಾನಃ = ಪರಿಶುದ್ಧವಾದ ಮನಸ್ಸುಳ್ಳವರಾದರೂ, ಭೂತಾದಿಂ = ಸಮಸ್ತ ಜಗತ್ತಿಗೆ ಕಾರಣನಾದ, ಅವ್ಯಯಂ = ನಾಲ್ಕುವಿಧ ನಾಶವಿಲ್ಲದ, ಮಾಂ = ನನ್ನನ್ನು, ಜ್ಞಾತ್ವಾ = ತಿಳಿದುಕೊಂಡು, ಅನನ್ಯಮನಸಃ = ಇತರ ವಿಷಯದಲ್ಲಿ ಮನಸ್ಸನ್ನು ಇಡದೆ ನನ್ನಲ್ಲಿಯೇ ಮನಸ್ಸನ್ನು ಇಟ್ಟವರಾಗಿ, ಮಾಂ = ನನ್ನನ್ನು, ಭಜಂತಿ = ಸೇವಿಸುತ್ತಾರೆ ॥ ೧೩ ॥

ಪೀ — ಭಜಿಸುವ ಪ್ರಕಾರವನ್ನು ಹೇಳುತ್ತಾರೆ —

ಗೀ॥ ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾಃ ।
ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥ ೧೪ ॥

ಅ ॥ ಮಾಂ = ನನ್ನನ್ನು, ಸತತಂ = ನಿರಂತರದಲ್ಲಿಯೂ, ಕೀರ್ತಯಂತಃ = ಕೃಷ್ಣ ಕೃಷ್ಣ ಇತ್ಯಾದಿ ನಾಮಗಳನ್ನು ಹೇಳುತ್ತಾ ಯತಂತಃ = ನನ್ನ ಪೂಜಾದಿಗಳಲ್ಲಿಯೇ ಪ ಯತ್ನಮಾಡುತ್ತಿರುವ ದೃಢವ್ರತಾಃ = ದೃಢವಾದ ಉಪವಾಸಾದಿ ನಿಯಮ ವ್ರತಗಳುಳ್ಳ, ನಿತ್ಯಯುಕ್ತಾಃ = ಯಾವಾಗಲೂ ನನ್ನಲ್ಲಿ ಮನಸ್ಸನ್ನು ಇಟ್ಟಿರುವ, ಅಥವಾ ನಿತ್ಯದಲ್ಲಿಯೂ ಕರ್ಮಜ್ಞಾನೋಪಾಯವುಳ್ಳ ಸಜ್ಜನರು, ಭಕ್ತ್ಯಾ = ಭಕ್ತಿಯಿಂದ, ಮಾಂ = ನನ್ನನ್ನು, ನಮಸ್ಯಂತಶ್ಚ = ನಮಸ್ಕಾರಮಾಡುತ್ತಾ, ಉಪಾಸತೇ = ಸೇವಿಸುತ್ತಾರೆ ॥ ೧೪ ॥

ಭಾ ॥ ನೇತರೇ ದ್ವಿಷಂತೀತಿ ದರ್ಶಯಿತುಂ ದೇವಾನಾಹ । ಮಹಾತ್ಮಾನ ಇತ್ಯಾದಿನಾ ॥
॥ ೧೩,೧೪ ॥

ಅ ॥ ಹಿಂದೆ ಹೇಳಿದ ತಾಮಸರಿಗಿಂತ ಇತರರಾದ ಉತ್ತಮಜೀವರು ನನ್ನನ್ನು ದ್ವೇಷಿಸುವುದಿಲ್ಲ, ಎಂದು ತೋರಿಸುವುದಕ್ಕಾಗಿ **ಮಹಾತ್ಮಾನಃ** ಎಂಬುದರಿಂದ ದೇವತಗಳನ್ನು (ಉತ್ತಮ ಜೀವರನ್ನು) ಹೇಳುತ್ತಾರೆ. ॥ ೧೩, ೧೪ ॥

ತಾ ॥ (೧) ಮಾನುಷೀಂ ಮನುಷ್ಯಸದೃಶೀಂ ॥ (೨) ತನ್ತಾ ವಿಷ್ಣೂರನನ್ಯೋಽಪಿ ಸ್ವಾಧೀನತ್ವಾತ್ತದಾಶ್ರಿತ ಇತಿ ಚ ॥ (೩) ಬ್ರಹ್ಮರುದ್ರರಮಾದೀನಾಂ ಸಾಮ್ಯದೃಷ್ಟಿರನನ್ಯತಾ ।
ಪ್ರಾದುರ್ಭಾವಗತಸ್ಯಾಪಿ ದೋಷದೃಷ್ಟಿರಪೂರ್ಣತಾ ॥ (೪) ಧರ್ಮದೇಹಾವತಾ-

ರಾದೇರ್ಭೇದದೃಷ್ಟಿಶ್ಚ ಸಂಕರಃ । ಅವತಾರೇಷ್ವಿತಿ ಜ್ಞೇಯಮವಜ್ಞಾನಂ ಜನಾರ್ದನೇ ॥ (೫) ಸರ್ವಂ ಮೋಘಂ ಶುಭಂ ತಸ್ಯ ಯೋಽವಜಾನಾತಿ ಕೇಶವಂ । ಅಧ(ವ)ರಂ ಯಾತಿ ಚ ತಮಃ ಪ್ರಾದುರ್ಭಾವಗತೋಽಪ್ಯತಃ । ಜ್ಞೇಯಃ ಕೇವಲಚಿದ್ದೇಹೋ ನಿರ್ದೋ(ವಿದೋ)ಷಃ ಪೂರ್ಣಸದ್ಗುಣ ಇತಿ ಚ ಭವಿಷ್ಯತ್ಪರ್ವಣಿ ॥

॥ ೧೧—೧೪ ॥

ಅ ॥ (೧) (11ನೇ ಶ್ಲೋಕದಲ್ಲಿದ್ದ) **ಮಾನುಷೀಂ** ಎಂಬುವುದಕ್ಕೆ ಮನುಷ್ಯಶರೀರಕ್ಕೆ ಸದೃಶವಾದುದು ಎಂದರ್ಥವು (೨) ಶ್ರೀವಿಷ್ಣುವಿಗೂ ಅವನ ಶರೀರಕ್ಕೂ ಭೇದವಿಲ್ಲದಿದ್ದರೆ ಆ ಶ್ರೀಹರಿಯ ಅಧೀನದಲ್ಲಿದ್ದ ಪ್ರಯುಕ್ತ ಆ ಶರೀರವನ್ನು ಶ್ರೀಹರಿಯು ಆಶ್ರಯಿಸಿರುತ್ತಾನೆಂದು ಹೇಳಿದ್ದು **(೩) (ಅವಜಾನಂತಿ** ಎಂದು ಹೇಳಿದ ಅವಜ್ಞಾನಶಬ್ದಾರ್ಥವನ್ನು ಹೇಳುತ್ತಾರೆ—) ಶ್ರೀಪರಮಾತ್ಮನಿಗೆ ಬ್ರಹ್ಮರುದ್ರಾದಿ ದೇವತೆಗಳ ಸಾಮ್ಯವನ್ನು ತಿಳಿದುಕೊಳ್ಳುವುದೂ ಬ್ರಹ್ಮರುದ್ರಾದಿಗಳಿಂದ ಅಭೇದವೆಂದು ತಿಳಿದುಕೊಳ್ಳುವುದೂ, ಅವತಾರಮಾಡಿದ ರಾಮಕೃಷ್ಣಾದಿ ರೂಪಗಳಲ್ಲಿ ದೋಷವದೆ ಎಂದು ತಿಳಿದುಕೊಳ್ಳುವುದೂ, ಗುಣಾದಿಗಳಿಂದ ದೇವರು ಪೂರ್ಣರಲ್ಲವೆಂದು ತಿಳಿದುಕೊಳ್ಳುವುದೂ, (೪) ಶ್ರೀಪರಮಾತ್ಮನ ಧರ್ಮ, ದೇಹ ಅವತಾರ ಮೊದಲಾದುವುಗಳಿಗೆ ಶ್ರೀಪರಮಾತ್ಮನಿಂದ ಭೇದವಿದೆ, ಎಂದು ತಿಳಿದುಕೊಳ್ಳುವುದೂ, (ಸಂಕರಃ=) ಶ್ರೀಪರಮಾತ್ಮನ ಸಾಕ್ಷಾತ್ ಅವತಾರಗಳಲ್ಲದ ಬಲರಾಮಾದಿಗಳನ್ನು ಸಾಕ್ಷಾತ್ ಅವತಾರಗಳೆಂದು ತಿಳಿದುಕೊಳ್ಳುವುದೂ, ಸಾಕ್ಷಾತ್ ಅವತಾರರೂಪಗಳಾದ ವೇದವ್ಯಾಸಾದಿಗಳನ್ನು ಅವತಾರರೂಪಗಳಲ್ಲವೆಂದು ತಿಳಿದುಕೊಳ್ಳುವುದೂ, ಇತ್ಯಾದಿಗಳು ಶ್ರೀಪರಮಾತ್ಮನಲ್ಲಿ **ಅವಜ್ಞಾನ**ವೆನಿಸುತ್ತದೆ (೫) ಯಾರು ಹಿಂದೆ ಹೇಳಿದಪ್ರಕಾರ ಶ್ರೀಪರಮಾತ್ಮನನ್ನು ಅವಮಾನಿಸುತ್ತಾರೋ, ಅವರು ಮಾಡುವ ಎಲ್ಲಾ ಶುಭಕರ್ಮವೂ ವ್ಯರ್ಥವು ಅವರು ಅಂಧಂತಮಸ್ಸನ್ನು ಹೊಂದುತ್ತಾರೆ ಆದಕಾರಣ ಪ್ರಾದುರ್ಭಾವದಲ್ಲಿರತಕ್ಕ ರೂಪಗಳು ಕೇವಲ ಚಿದಾನಂದಾತ್ಮಕಗಳೆಂದೂ ದೋಷಲೇಶರಹಿತಗಳೆಂದೂ ಪರಿಪೂರ್ಣ ನಿರ್ದುಷ್ಟ ಗುಣಾತ್ಮಕಗಳೆಂದೂ ತಿಳಿಯಬೇಕು, ಎಂದು ಭವಿಷ್ಯತ್ಪರ್ವದಲ್ಲಿದೆ ॥ ೧೧—೧೪ ॥

ಗೀ॥ ಜ್ಞಾನಯಜ್ಞೇನ ಚಾಪ್ಯನ್ಯೇ ಯಜಂತೋ ಮಾಮುಪಾಸತೇ ।
ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋಮುಖಂ ॥ ೧೫ ॥

ಅ ॥ ಅನ್ಯೇಽಪಿ ಚ=ಇನ್ನಿತರ ಕೆಲವು ಮಹಾನುಭಾವರು, ವಿಶ್ವತೋಮುಖಂ=ಮುಖ ಮೊದಲಾದ ಸರ್ವಾಯವಗಳಿಂದ ಕೂಡಿಕೊಂಡೇ ಸಮಸ್ತ ದಿಕ್ಕುಗಳಲ್ಲಿಯೂ ವ್ಯಾಪಿಸಿಕೊಂಡಿರುವ, ಮಾಂ=ನನ್ನನ್ನು, ಜ್ಞಾನಯಜ್ಞೇನ=ಜ್ಞಾನರೂಪವಾದ ಯಜ್ಞದಿಂದ, ಯಜಂತಃ=ಪೂಜಿಸುವವರಾಗಿ (ಅಂದರೆ ಶ್ರವಣ ಮನನ ಧ್ಯಾನಾದಿಗಳನ್ನು ಮಾಡುತ್ತಾ ಇತರರಿಗೆ ಉಪದೇಶಿಸುತ್ತಾ ಯಾವಾಗಲೂ ಶ್ರೀಹರಿಯ ಮಾಹಾತ್ಮ್ಯಜ್ಞಾನದಲ್ಲಿಯೇ ಆಸಕ್ತರಾದವರಾಗಿ,) ಏಕತ್ವೇನ=ಎಲ್ಲಾ ಪ್ರಾಣಿಗಳಲ್ಲಿ ಭಗವದ್ರೂಪಗಳಿದ್ದರೂ ಆ ರೂಪಗಳಿಗೆ ಭೇದವಿಲ್ಲವೆಂದೂ, ಪೃಥಕ್ತ್ವೇನ=ಜೀವತನಾಜೀವತನಾತ್ಮಕ ಸಮಸ್ತ ಜಗತ್ತಿಗಿಂತ ವಿಲಕ್ಷಣ (ಭಿನ್ನ)ವೆಂದೂ, ಬಹುಧಾ ಚ=ಶುಕ್ಲ ನೀಲ ಪೀತಾದಿರೂಪಗಳುಳ್ಳವನೆಂದೂ, ಅಥವಾ ಕೇಶವಾದ್ಯನೇಕ ರೂಪಗಳುಳ್ಳವನೆಂದೂ, ಉಪಾಸತೇ=ಉಪಾಸನೆ ಮಾಡುತ್ತಾರೆ ॥ ೧೫ ॥

ಪೀ—ಏಕತ್ವೇನ ಎಂಬುವುದರಿಂದ ಜೀವಬ್ರಹ್ಮೈಕ್ಯವನ್ನು ತಿಳಿದುಕೊಂಡು ಉಪಾಸನೆ ಮಾಡಬೇಕೆಂಬುವುದು ಮಿಥ್ಯೋಪಾಸನೆಯಾಗಿರುವುದರಿಂದ ಅಯುಕ್ತವೆಂಬುವ ಅಭಿಪ್ರಾಯದಿಂದ ಸರಿಯಾದ ಅರ್ಥವನ್ನು ಹೇಳುತ್ತಾರೆ—

ಭಾ ॥ (೧) ಸರ್ವತ್ರೈಕ ಏವ ನಾರಾಯಣಃ ಸ್ಥಿತ ಇತ್ಯೇಕತ್ವೇನ । ಪೃಥಕ್ತ್ವೇನ । ಸರ್ವತೋ ವೈಲಕ್ಷಣ್ಯೇನ ॥ (೨) ಬಹುಧಾ ಹಿ ತಸ್ಯ ರೂಪಮಾಭಾತಿ । ಶುಕ್ಲಮಿವ ಲೋಹಿತಮಿವಾಥೋ ನೀಲಮಥಾರ್ಜುನಮಿತಿ ಹಿ ಸನತ್ಸುಜಾತೇ ॥ (೩) ದೈವಮೇವಾಪರ ಇತ್ಯುಕ್ತಪ್ರಕಾರೇಣ ಬಹವೋ ವಾ ಬಹುಧಾ ॥ ೧೫ ॥

ಅ ॥ (೧) ಚೇತನಾಚೇತನಸಮಸ್ತವಸ್ತುಗಳಲ್ಲಿ ನಿಯಾಮಕನಾಗಿರುವವನು ಶ್ರೀನಾರಾಯಣನೊಬ್ಬನೇ, ಎಂದು ಭಗವದ್ರೂಪಗಳಿಗೆ ಐಕ್ಯಾಭಿಪ್ರಾಯದಿಂದಲೂ, ಪೃಥಕ್ತ್ವೇನ = ಚೇತನಾಚೇತನ ವಸ್ತುಗಳಿಂದ ಶ್ರೀಪರಮಾತ್ಮನು ಅತ್ಯಂತ ಭಿನ್ನನೆಂದೂ, ಉಪಾಸನಾ ಮಾಡುತ್ತಾರೆ (ಶ್ರೀಪರಮಾತ್ಮನು ಆದಿತ್ಯಚಂದ್ರಾದಿ ನಾನಾರೂಪಗಳಿಂದ ಎಂದು ಅರ್ಥವಲ್ಲ.) (೨) ಆ ಶ್ರೀಪರಮಾತ್ಮನಿಗೆ ಶುಕ್ಲ ನೀಲಾದಿಭೇದದಿಂದ ಬಹುಪ್ರಕಾರ ರೂಪವು ತೋರುತ್ತದೆ (ಆದಿತ್ಯ ಮೊದಲಾದ ಬಹುರೂಪವಿದೆ ಎಂದರ್ಥವಲ್ಲ) (ಅದನ್ನು ಆಗಮದಿಂದಲೇ ತೋರಿಸುತ್ತಾರೆ—) ಶ್ರೀಪರಮಾತ್ಮನನ್ನು ಶುಕ್ಲರೂಪವುಳ್ಳವನನ್ನಾಗಿಯೂ, ಲೋಹಿತ ಮತ್ತು ನೀಲರೂಪವುಳ್ಳವನನ್ನಾಗಿಯೂ, ಶುಭ್ರರೂಪವಿಶೇಷವುಳ್ಳವನನ್ನಾಗಿಯೂ ಎಂದು ಸನತ್ಸುಜಾತವೆಂಬುವ ಗ್ರಂಥದಲ್ಲಿದೆ (೩) ಅಥವಾ **ದೈವಮೇವ** ಎಂದು ಹೇಳಿದ ಪ್ರಕಾರ ಬಹುಮಂದಿಜನರು ಯಜ್ಞಭೇದದಿಂದ ನನ್ನನ್ನು ಉಪಾಸನೆ ಮಾಡುತ್ತಾರೆ ॥ ೧೫ ॥

ಪೀ— ಏಕತ್ವೇನ = ಸರ್ವರಿಂದ ಅಭಿನ್ನನೆಂದೂ, ಪೃಥಕ್ತ್ವೇನ = ಭಿನ್ನನೆಂದೂ, ಬಹುಧಾ = ಆದಿತ್ಯಾದಿರೂಪದಿಂದ ಎಂದೂ, ಅಥವಾ ಪೃಥಕ್ತ್ವೇನ = ಆದಿತ್ಯಾದಿಗಳಿಗೆ ದೇಹನೆಂದೂ ಬಹುಧಾ = ಬಹು ಜೀವರೂಪದಿಂದ, ಎಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುವುದಕ್ಕಾಗಿ ಸ್ಮೃತಿಪ್ರಮಾಣ ಹೇಳಿ ಸರಿಯಾದ ಅರ್ಥವನ್ನು ಹೇಳುತ್ತಾರೆ—

ತಾ ॥ ಏಕಮೂರ್ತಿಶ್ಚತುರ್ಮೂರ್ತಿರಥವಾ ಪಂಚಮೂರ್ತಿಕಃ । ದ್ವಾದಶಾದಿಪ್ರಭೇದೋ ವಾ ಪೂಜ್ಯತೇ ಸಜ್ಜನೈರ್ಹರಿರಿತಿ ಚ ॥ ೧೫ ॥

ಆ ॥ ಸರ್ವರೂಪಾತ್ಮಕ ಶ್ರೀನಾರಾಯಣನೆಂಬುವ ಒಂದು ಮೂರ್ತಿಯುಳ್ಳ, ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಎಂಬುವ ನಾಲ್ಕು ಮೂರ್ತಿಯುಳ್ಳ, ಅಥವಾ ನಾರಾಯಣ ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಎಂಬುವ ಐದು ಮೂರ್ತಿಗಳುಳ್ಳ, ಅಥವಾ ಕೇಶವಾದಿ, ಸಂಕರ್ಷಣಾದಿ ಹನ್ನೆರಡು ಮೂರ್ತಿಗಳುಳ್ಳ ಮತ್ಸ್ಯಾದಿ ೧೦ ರೂಪಗಳುಳ್ಳ ಆ ಶ್ರೀಹರಿಯು ಸಜ್ಜನರಿಂದ ಪೂಜಿಸಿಕೊಳ್ಳಲ್ಪಡುತ್ತಾನೆ ॥ ೧೫ ॥

ಪೀ— ಸಾಮಾನ್ಯ ಮಹಿಮೆಯನ್ನು ಹೇಳಿ ವಿಶೇಷ ಮಹಿಮೆಯನ್ನು ಹೇಳುತ್ತಾರೆ—

ಗೀ ॥ ಅಹಂ ಕ್ರತುರಹಂ ಯಜ್ಞಃ ಸ್ವಧಾಽಹಮಹಮೌಷಧಂ ।
ಮಂತ್ರೋಽಹಮಹಮೇವಾಜ್ಯಮಹಮಗ್ನಿರಹಂ ಹುತಂ ॥ ೧೬ ॥

ಆ ॥ ಅಹಂ = ನಾನು, ಕ್ರತುಃ = ಯಜ್ಞದೀಕ್ಷೆಯನ್ನಾರಂಭಿಸಿ ಅವಭೃಥಪರ್ಯಂತ ಕರ್ಮಗಳ ಸಮೂಹಗಳಾದ ಜ್ಯೋತಿಷ್ಟೋಮ ಮೊದಲಾದವುಗಳಿಗೆ ನಿಯಾಮಕನು ಮತ್ತೆ ಕ್ರತುವಿನ ಅಂಗಗ

ಳಾದ ಹವಿಸ್ಸು ಮೊದಲಾದವುಗಳನ್ನು ಭೋಗಿಸುವವನು, ಅಹಂ=ನಾನು, ಯಜ್ಞಃ=ದೇವತೆಗಳನ್ನುದ್ದೇಶಿಸಿ ದ್ರವ್ಯತ್ಯಾಗರೂಪವಾದ ಪ್ರಧಾನ ಕರ್ಮಕ್ಕೆ ನಿಯಾಮಕನು, ಮತ್ತು ಅದರ ಸಾರಭೋಕ್ತನು. ಸ್ವಧಾ=ಪಿತೃಗಳಿಗೆ ತಿಲೋದಕಾದಿಗಳನ್ನು ಕೊಡಲಿಕ್ಕೆ ಪ್ರೇರಕನು ಅಹಂ=ನಾನು, ಔಷಧಂ=ಔಷಧಿಗಳಿಗೆ ನಿಯಾಮಕನಾಗಿ ಔಷಧದಲ್ಲಿರುವವನು, ಅಹಂ=ನಾನು, ಮಂತ್ರಃ=ಮಂತ್ರಪ್ರತಿಪಾದ್ಯನು, ಮಂತ್ರಗಳಿಗೆ ನಿಯಾಮಕನು. ಅಹಮೇವ=ನಾನೇ, ಆಜ್ಯಂ=ಆಜ್ಯಸಾರಭೋಕ್ತನು, ಆಜ್ಯನಿಯಾಮಕನು, ಅಹಂ=ನಾನು, ಅಗ್ನಿಃ=ಅಗ್ನಿಯಲ್ಲಿದ್ದು ಅಗ್ನಿಗೆ ಪ್ರೇರಕನು ಅಹಂ=ನಾನು, ಹುತಂ=ಹೋಮಿಸಲ್ಪಟ್ಟ ಹವಿರಾದಿಗಳನ್ನೇ ಭೋಗಿಸುವವನು, ಹೋಮಕ್ರಿಯೆಗೆ ನಿಯಾಮಕನು ಅಥವಾ ಪ್ರಯತ್ನ ಸ್ವರೂಪನಾದುದರಿಂದ **ಕ್ರತುಃ** ಎಂದೂ, ಪ್ರಮಾಣಸಿದ್ಧವಾದ ವಸ್ತುವನ್ನು ತಿಳಿಯುವುದರಿಂದ **ಯಜ್ಞ**ನೆಂದೂ, ತನ್ನನ್ನು ತಾನೇ ಧರಿಸಿಕೊಳ್ಳುವುದರಿಂದ **ಸ್ವಧಾ** ಎಂದೂ, ಆಧ್ಯಾತ್ಮಿಕ ಆಧಿಭೌತಿಕ ಆಧಿದೈವಿಕ ಎಂಬೀ ತಾಪತ್ರಯಗಳಿಂದ ನರಳುವವರಿಗೆ ಆಶ್ರಯನಾಗಿರುವುದರಿಂದ **ಔಷಧ**ನೆಂದೂ, ಜ್ಞಾನ ಕೊಟ್ಟು ರಕ್ಷಿಸುವುದರಿಂದ **ಮಂತ್ರ**ನೆಂದೂ, ಬ್ರಹ್ಮಾದಿಗಳಿಂದ ಜೀನ್ಯಾಗಿ ಶ್ರೇಷ್ಠನಾಗಿರುವುದರಿಂದ **ಆಜ್ಯ**ನೆಂದೂ ಸ್ವತಃ ಗಮನಶಕ್ತಿಯಿಲ್ಲದಿರುವ ಜಗತ್ತಿಗೆ ಪ್ರೇರಕನಾಗಿರುವುದರಿಂದ ಅಗ್ನಿಯೆಂದೂ, ಯಜ್ಞಾದಿಗಳಲ್ಲಿ ಕರೆಯಲ್ಪಡುವುದರಿಂದ **ಹುತ**ನೆಂದೂ ಅನ್ನಿಸಿಕೊಳ್ಳುತ್ತಾನೆ

K294.4 N215.6576

॥ ೧೬ ॥

ಗೀ ॥ ಪಿತಾಽಹಮಸ್ಯ ಜಗತೋ ಮಾತಾ ಧಾತಾ ಪಿತಾಮಹಃ ।
ವೇದ್ಯಂ ಪವಿತ್ರಮೋಂಕಾರ ಋಕ್ಸಾಮ ಯಜುರೇವ ಚ ॥ ೧೭ ॥

ಅ ॥ ಅಹಂ=ನಾನು, ಅಸ್ಯ ಜಗತಃ=ಈ ಜಗತ್ತನ್ನು, ಪಿತಾ=ಸೃಷ್ಟಿಸಿದವನು, ಅಹಂ=ನಾನು, ಮಾತಾ=ತಾಯಿಯಂತೆ ಪೋಷಕನು, ಧಾತಾ=ಧಾರಕನು, ಪಿತಾಮಹಃ=ಸರ್ವಪೂಜ್ಯನು, ವೇದ್ಯಂ=ಸರ್ವೋತ್ತಮನೆಂದು ತಿಳಿಯಲ್ಪಡುವವನೂ, ಪವಿತ್ರಂ=ಎಲ್ಲಾದಕ್ಕೂ ಪಾವಿತ್ರ್ಯಸಂಪಾದಕನೂ, ಅಹಮೇವ=ನಾನೇ, ಅಥವಾ ವೇದ್ಯಪವಿತ್ರವಸ್ತುಗಳಿಗೆ ವೇದ್ಯತ್ವವನ್ನೂ ಪಾವಿತ್ರ್ಯವನ್ನೂ ಕೊಡತಕ್ಕವನು ನಾನೇ. ಓಂಕಾರಃ ಋಕ್ ಸಾಮ ಯಜುರೇವ=ಓಂಕಾರದಿಂದಲೂ, ಋಕ್ಕಿನಿಂದಲೂ, ಸಾಮದಿಂದಲೂ, ಯಜುರ್ವೇದದಿಂದಲೂ ಪ್ರತಿಪಾದ್ಯನು ನಾನೇ. ಅಥವಾ ಓಂ ಎಂದು ಹೇಳಲ್ಪಡುವುದರಿಂದ **ಓಂಕಾರ**ನೆಂದು ಪೂಜಿಸಿಕೊಳ್ಳಲ್ಪಡುವುದರಿಂದ **ಋಕ್** ಎಂದೂ ಸರ್ವರೂಪಗಳಲ್ಲಿ ಸಮನಾಗಿರುವುದರಿಂದ **ಸಾಮ**ನೆಂದೂ, ಪೂಜಿಸಿಕೊಳ್ಳಲ್ಪಡುವುದರಿಂದ **ಯಜುಃ** ಎಂದೂ ಹೆಸರುಳ್ಳವನು ॥ ೧೭ ॥

ಭಾ ॥ (೧) ಪ್ರತಿಜ್ಞಾತಂ ವಿಜ್ಞಾನಮಾಹ । ಅಹಂ ಕ್ರತುರಿತ್ಯಾದಿನಾ ॥ (೨) ಕ್ರತವೋಽಗ್ನಿಷ್ಟೋಮಾದಯಃ । ಯಜ್ಞೋ ದೇವತಾಮುದ್ದಿಶ್ಯ ದ್ರವ್ಯತ್ಯಾಗಃ । ಉದ್ದಿಶ್ಯ ದೇವಾನ್ ದ್ರವ್ಯಾಣಾಂ ತ್ಯಾಗೋ ಯಜ್ಞ ಇತೀರಿತ ಇತ್ಯಭಿಧಾನಾತ್ ॥ ೧೬,೧೭ ॥

ಅ ॥ (೧) ಅಹಂ ಕ್ರತುಃ ಇತ್ಯಾದಿಗಳಿಂದ ಪ್ರತಿಜ್ಞಾತವಾದ ವಿಜ್ಞಾನಶಬ್ದದಿಂದ ಹೇಳಲ್ಪಟ್ಟ ವಿಶೇಷ ಮಹಿಮೆಯನ್ನು ಹೇಳುತ್ತಾರೆ (೨) ಕ್ರತು ಯಜ್ಞಶಬ್ದಗಳಿಗೆ ಬೇರೆ ಬೇರೆ ಅರ್ಥವನ್ನು ಹೇಳುತ್ತಾರೆ ಕ್ರತವಃ=ಅಗ್ನಿಷ್ಟೋಮ ಮೊದಲಾದವುಗಳು, ಯಜ್ಞಃ=ದೇವತೆಯನ್ನುದ್ದೇಶಿಸಿ ದ್ರವ್ಯಪರಿತ್ಯಾಗವು ದೇವತೆಗಳನ್ನುದ್ದೇಶಿಸಿ ದ್ರವ್ಯಗಳತ್ಯಾಗವು **ಯಜ್ಞ**ವೆಂದು ಹೇಳಲ್ಪಡುತ್ತದೆ, ಎಂದು ಶಬ್ದಶಕ್ತಿಗ್ರಾಹಕ ಪ್ರಮಾಣವಿದೆ ॥ ೧೬, ೧೭ ೧ ॥

ಗೀ ॥ ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್ ।
ಪ್ರಭವಃ ಪ್ರಲಯಃ ಸ್ಥಾನಂ ನಿಧಾನಂ ಬೀಜಮವ್ಯಯಂ ॥ ೧೮ ॥

ಅ ॥ ಅಹಂ=ನಾನು, ಗತಿಃ=ಮುಮುಕ್ಷುಗಳಿಂದ ಹೊಂದಲ್ಪಡುವವನು, ಭರ್ತಾ=ಪೋಷಕನು, ಪ್ರಭುಃ=ಸರ್ವಸ್ವಾಮಿಯು. ಸಾಕ್ಷೀ=ಸರ್ವವನ್ನು ಪ್ರತ್ಯಕ್ಷವಾಗಿ ನೋಡುವವನು, ನಿವಾಸಃ=ಸರ್ವಾಶ್ರಯನು. ಶರಣಂ=ಭೀತರಕ್ಷಕನು (ಅಂದರೆ ಮುಕ್ತರಿಗೆ ಆಶ್ರಯನು) ಸುಹೃತ್=ಪ್ರತ್ಯುಪಕಾರವನ್ನ ಪೇಕ್ಷಿಸದೆ ಉಪಕಾರ ಮಾಡುವವನು ಪ್ರಭವಃ=ಜಗತ್ತಿಗೆ ಸೃಷ್ಟಿಕರ್ತನು, ಪ್ರಲಯಃ=ಜಗತ್ತಿಗೆ ನಾಶಕರ್ತನು, ಸ್ಥಾನಂ=ಸರ್ವರಿಗೂ ಆಧಾರನು ನಿಧಾನಂ=ಜೆನ್ನಾಗಿ ಧಾರಕನು, ಅಥವಾ ಪ್ರಲಯಕಾಲದಲ್ಲಿ ಪ್ರಕೃತ್ಯಾದಿ ಜಗತ್ತನ್ನು ಹೊಟ್ಟೆಯಲ್ಲಿ ಧರಿಸಿಕೊಂಡಿರುವವನು ಬೀಜಂ=ಜಗತ್ತನ್ನು ಪ್ರಕಟೀಕರಿಸುವವನು, ಅವ್ಯಯಂ=ವಿಕಾರವಿಲ್ಲದವನು ॥ ೧೮ ॥

ಪೀ – ಗತಿಃ=ಕರ್ಮಫಲವು, ಎಂಬೀ ವ್ಯಾಖ್ಯಾನವು ಅಯುಕ್ತವೆನ್ನುತ್ತಾರೆ—

ಭಾ ॥ (೧) ಗಮ್ಯತೇ ಮುಮುಕ್ಷುಭಿರಿತಿ ಗತಿಃ । ತಥಾ ಹಿ ಸಾಮವೇದೇ ವಾಸಿಷ್ಠಶಾಖಾಯಾಂ । ಅಥ ಕಸ್ಮಾದುಚ್ಯತೇ ಗತಿರಿತಿ । ಬ್ರಹ್ಮೈವ ಗತಿಸ್ತದ್ದಿ ಗಮ್ಯತೇ ಪಾಪವಿಮುಕ್ತೈರಿತಿ ॥ (೨) ಸಾಕ್ಷಾದೀಕ್ಷತ ಇತಿ ಸಾಕ್ಷೀ । ತಥಾ ಹಿ ಬಾಷ್ಕಲಶಾಖಾಯಾಂ । ಸ ಸಾಕ್ಷಾದಿದಮದ್ರಾಕ್ಷೀದ್ಯದದ್ರಾಕ್ಷೀತ್ತತ್ಸಾಕ್ಷಿಣಃ ಸಾಕ್ಷಿತ್ವಮಿತಿ ॥ (೩) ಶರಣಮಾಶ್ರಯಃ ಸಂಸಾರಭೀತಸ್ಯ । ಪರಮಂ ಯಃ ಪರಾಯಣಮಿತಿ ಹ್ಯುಕ್ತಂ । ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಮಿತಿ ಚ ॥ (೪) ಸಂಹಾರಕಾಲೇ ಪ್ರಕೃತ್ಯಾ ಜಗದತ್ರ ನಿಧೀಯತ ಇತಿ ನಿಧಾನಂ । ತಥಾ ಹ್ಯೃಗ್ವೇದಖಿಲೇಷು । ಅಪಶ್ಯಮಸ್ಯಯೇ ಮಾಯಯಾ ವಿಶ್ವಕರ್ಮಣ್ಯದೋ ಜಗನ್ನಿಹಿತಂ ಶುಭ್ರಚಕ್ಷುರಿತಿ॥೧೮॥

ಅ ॥ (೧) ಮೋಕ್ಷವನ್ನು ಇಚ್ಛಿಸುವವರಿಂದ ಹೊಂದಲ್ಪಡುವುದರಿಂದ **ಗತಿಃ** ಎನಿಸುತ್ತಾನೆ ಹಾಗೆಯೇ ಸಾಮವೇದದಲ್ಲಿ ವಾಸಿಷ್ಠಶಾಖೆಯಲ್ಲಿ ಹೇಳಿದೆ **ಗತಿಃ** ಎಂದು ಯಾವ ಕಾರಣದಿಂದ ಹೇಳಲ್ಪಡುತ್ತಾನೆ, ಎಂಬುವ ಪ್ರಶ್ನೆಗೆ ಆ ಪರಬ್ರಹ್ಮನು ಪಾಪಗಳಿಂದ ಬಿಡುಗಡೆ ಹೊಂದಿದ ಮುಕ್ತರಿಂದ ಹೊಂದಲ್ಪಡುವುದರಿಂದ ಪರಬ್ರಹ್ಮನೇ **ಗತಿಃ** ಎನಿಸುತ್ತಾನೆ (೨) ಪ್ರತ್ಯಕ್ಷದಿಂದ ಎಲ್ಲವನ್ನೂ ನೋಡುವುದರಿಂದ **ಸಾಕ್ಷಿ** ಎನಿಸಿಕೊಳ್ಳುತ್ತಾನೆ ಹಾಗೆಯೇ ಬಾಷ್ಕಲಶಾಖೆಯಲ್ಲಿ ಹೇಳಿದೆ ಆ ಶ್ರೀಪರಮಾತ್ಮನು ಪ್ರತ್ಯಕ್ಷವಾಗಿ ಈ ಜಗತ್ತನ್ನು ಕಂಡನು ಯಾವ ಕಾರಣದಿಂದ ಕಂಡಿರುವನೋ, ಆದಕಾರಣ ಸರ್ವದ್ರಷ್ಟನಾದ ಪರಮಾತ್ಮನು ಸಾಕ್ಷಿ ಎಂಬ ಶಬ್ದದಿಂದ ವಾಚ್ಯನಾಗುತ್ತಾನೆ (೩) (**ಶರಣ** ಶಬ್ದದ ಅರ್ಥ ಹೇಳುತ್ತಾರೆ–) ಸಂಸಾರದಿಂದ ಭೀತನಾದ ಮುಕ್ತನಿಗೆ ಶರಣಂ=ಆಶ್ರಯನು (ಶ್ರೀಪರಮಾತ್ಮನು ಮುಕ್ತರಿಗೆ ಆಶ್ರಯನೆಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ-) ಸರ್ವೋತ್ತಮನು, ಮುಕ್ತರಿಗೂ ಆಶ್ರಯನು, ಇತ್ಯಾದಿ ಪ್ರಕಾರ ಉಕ್ತವಾಗಿದೆ ಶ್ರೀನಾರಾಯಣನು ಲಕ್ಷ್ಮಿಗೂ ಆಶ್ರಯನು ಬ್ರಹ್ಮಾದಿಗಳಿಂದಲೂ ತಿಳಿಯಲ್ಪಡುವವನು ಸರ್ವರಿಗೂ ಸ್ವಾಮಿಯು, ಅಂತರ್ಯಾಮಿಯು ಮುಕ್ತರಿಗೂ ಆಶ್ರಯನು, ಎಂದೂ ಹೇಳಿದೆ (೪) ಸಂಹಾರಕಾಲದಲ್ಲಿ ಪ್ರಕೃತಿದ್ವಾರಾ ಜಗತ್ತು ಶ್ರೀಹರಿಯಲ್ಲಿ ಇರಿಸಲ್ಪಡುವುದರಿಂದ ಶ್ರೀಪರಮಾತ್ಮನು **ನಿಧಾನ**ನೆನಿಸುತ್ತಾನೆ (ಅಂದರೆ ಜಗತ್ತು ಪ್ರಥಮತಃ ಪ್ರಕೃತಿಯನ್ನು ಹೊಂದಿ ಆ ಮೇಲೆ ಆ ಪ್ರಕೃತಿದ್ವಾರಾ ಶ್ರೀಪರಮಾತ್ಮನಲ್ಲಿ ಇರುತ್ತದೆ) ಹಾಗೆಯೇ ಋಗ್ವೇದಖಿಲಗಳಲ್ಲಿ ಹೇಳಿದೆ ಪರಿಶುದ್ಧವಾದ ದೃಷ್ಟಿಯುಳ್ಳ ನಾನು ಸರ್ವ ಜಗತ್ಕರ್ತನಾದ ಶ್ರೀಪರಮಾತ್ಮನಲ್ಲಿ ಮಾಯೆಯಿಂದ ಇಡಲ್ಪಟ್ಟ ಈ ಜಗತ್ತನ್ನು ನೋಡಿರುವೆನು ॥ ೧೮ ॥

ಗೀ ॥ ತಪಾಮ್ಯಹಮಹಂ ವರ್ಷಂ ನಿಗೃಹ್ಣಾಮ್ಯುತ್ಸೃಜಾಮಿ ಚ ।
ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ ॥ ೧೯ ॥

ಅ ॥ ಅರ್ಜುನ=ಅರ್ಜುನನೇ, ಅಹಂ=ನಾನು, ತಪಾಮಿ=ಆದಿತ್ಯನಲ್ಲಿದ್ದವನಾಗಿ ತಾಪವನ್ನುಂಟು ಮಾಡುತ್ತೇನೆ ಅಹಂ=ನಾನು, (ಮೇಘಚಕ್ರದಲ್ಲಿದ್ದವನಾಗಿ) ವರ್ಷಂ=ವೃಷ್ಟಿಯನ್ನು, ಉತ್ಸೃಜಾಮಿ=ಸುರಿಸುತ್ತೇನೆ ನಿಗೃಹ್ಣಾಮಿ=ಮಳೆಯನ್ನು ನಿಲ್ಲಿಸುತ್ತೇನೆ ಅಮೃತಂ=ನಾನು ದೇಹೇಂದ್ರಿಯಗಳಲ್ಲಿ ಇದ್ದು ಜೀವರ ದೇಹವನ್ನು ಧರಿಸಿಕೊಂಡು ಮರಣ ಬಾರದಂತೆ ಕಾಪಾಡಿಕೊಂಡಿರುವುದರಿಂದ **ಅಮೃತಂ** ಎನಿಸುತ್ತೇನೆ ಮೃತ್ಯುಶ್ಚ=ಪ್ರಲಯಕಾಲಕ್ಕಿಂತ ಇತರ ಕಾಲದಲ್ಲಿಯೂ ಸಂಹಾರಕನಾದುದರಿಂದ **ಮೃತ್ಯು** ಎನಿಸುತ್ತೇನೆ ಸತ್=ಕಾರ್ಯಗಳ ಸಮುದಾಯಕ್ಕೆ ನಿಯಾಮಕನು ಅಸತ್=ಕಾರಣಗಳ ಸಮುದಾಯಕ್ಕೆ ಪ್ರೇರಕನು ಅಥವಾ ಸಾಧುಗುಣಗಳಿಂದ ಪೂರ್ಣನಾದುದರಿಂದ **ಸತ್** ಎನಿಸುತ್ತೇನೆ ಅಸತ್=ಸಾಧುಗುಣಗಳಿಂದ ಪೂರ್ಣರಾದ ಬೇರೆ ಪುರುಷರು ಇಲ್ಲದಿರುವುದರಿಂದ **ಅಸತ್** ಎನಿಸಿಕೊಂಡವನೂ ಅಹಮೇವ=ನಾನೇ ॥ ೧೯ ॥

ಭಾ ॥ ಸತ್ಕಾರ್ಯಂ ಅಸತ್ಕಾರಣಂ । ಸದಭಿವ್ಯಕ್ತರೂಪತ್ವಾತ್ಕಾರ್ಯಮಿತ್ಯುಚ್ಯತೇ ಬುಧೈಃ।
ಅಸದವ್ಯಕ್ತರೂಪತ್ವಾತ್ಕಾರಣಂ ಚಾಪಿ ಶಬ್ದಿತಮಿತ್ಯಭಿಧಾನಾತ್ ॥ ಅಸಚ್ಚ ಸಚ್ಚೈವ ಚ ಯದ್ವಿಶ್ವಂ ಸದಸತಃ ಪರಮಿತಿ ಚ ಭಾರತೇ ॥ ೧೯ ॥

ಅ ॥ ಕಾರ್ಯವು ಸತ್ ಎಂದೂ, ಕಾರಣವು ಅಸತ್ ಎಂದೂ ಹೇಳಿಸಿಕೊಳ್ಳಲ್ಪಡುತ್ತದೆ ಅಭಿವ್ಯಕ್ತ ಸ್ವರೂಪವಾಗಿರುವುದರಿಂದ ಕಾರ್ಯವು ಸತ್ ಎಂದು ಪ್ರಾಜ್ಞರಿಂದ ಹೇಳಿಸಿಕೊಳ್ಳಲ್ಪಡುತ್ತದೆ ಅಸ್ಪಷ್ಟ ರೂಪವುಳ್ಳದ್ದಾಗಿರುವುದರಿಂದ ಕಾರಣವು ಅಸತ್ ಎಂದು ಹೇಳಿಸಿಕೊಳ್ಳಲ್ಪಡುತ್ತದೆ, ಎಂದು ಶಬ್ದ ಶಕ್ತಿಗ್ರಾಹಕ ಪ್ರಮಾಣವು (ಕಾರ್ಯಕಾರಣಗಳಲ್ಲಿ ಸದಸತ್ಶಬ್ದಗಳ ಪ್ರಯೋಗವನ್ನು ತೋರಿಸುತ್ತಾರೆ-) ಯಾವುದು ಕಾರಣರೂಪವಾದ ಜಗತ್ ಇದೆಯೋ, ಅದು **ಅಸತ್** ಎಂದೂ, ಕಾರ್ಯರೂಪವಾದ ಜಗತ್ **ಸತ್** ಎಂದೂ ಹೇಳಿಸಿಕೊಳ್ಳಲ್ಪಡುತ್ತದೆ ಅಂತಹ ಕಾರ್ಯಕಾರಣರೂಪವಾದ ಜಗತ್ತಿಗಿಂತ ಶ್ರೀ ಪರಮಾತ್ಮನು ಭಿನ್ನನು ಎಂದು ಭಾರತದಲ್ಲಿದೆ ॥ ೧೯ ॥

ಪೀ—**ಅಹಂ ಕ್ರತುಃ** ಇತ್ಯಾದಿಗಳಲ್ಲಿ ಶ್ರೀ ಹರಿಯು ಕ್ರತ್ವಾದಿಸ್ವರೂಪನೆಂದು ಹೇಳಲ್ಪಡುತ್ತಾನೆ, ಎಂಬೀ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುವುದಕ್ಕಾಗಿ ಸ್ಮೃತಿಪ್ರಮಾಣವನ್ನು ಹೇಳಿ ಸರಿಯಾದ ಅರ್ಥವನ್ನು ಹೇಳುತ್ತಾರೆ—

ತಾ ॥ (೧) ಅಚ್ಯೇತ್ವಾದ್ಯೈಕ್ಷಮತ್ವಾಚ್ಚ ನಿಜರೂಪೇಷು ಸಾಮು ಸಃ । ಯಾಜ್ಯತ್ವಾತ್ಸ ಯಜುರ್ಯಜ್ಞಃ ಸಾರ್ವಜ್ಞ್ಯಾತ್ಪುರುಷೋತ್ತಮಃ ॥ (೨) ಕ್ರತುಃ ಕೃತಿಸ್ವರೂಪತ್ವಾತ್ ಸ್ವಧಾಽನನ್ಯಧೃತೋ ಯತಃ । ಮಾನಾತ್ತ್ವಾತೀತಿ ಮಂತ್ರೋಽಯಮುಷ್ಟಾನಾಂ ನಿಧಿರೌಷಧಂ ॥ (೩) ಆಜ್ಯಾಯಸ್ತ್ವದಾಜ್ಯನಾಮಾ ದರ್ಭೋ ದರಧರೋ ಯತಃ । ಆಹೂತತ್ವಾದ್ಧುತಂ ಚಾಯಮಗ್ನಿರ್ನೇತಾಽಗತೇರ್ಯತ ಇತ್ಯಾದಿ ಚ ॥ (೪) ತತ್ತತ್ಪದಾರ್ಥಭಿನ್ನೋಽಪಿ ತತ್ತನ್ನಾಮೈವಮಚ್ಯುತಃ। ಸ್ವಾತಂತ್ರ್ಯಾತ್ಸರ್ವಕರ್ತೃತ್ವಾದ್ಸ್ಮ-

ಣಾನಂತ್ಯಾಚ್ಚ ಕೇವಲಮಿತಿ ಚ ॥ (ಖ) ಓಮಿತ್ಯಾಕ್ರಿಯತೇ ಯಸ್ಮಾದೋಂಕಾರೋ ಭಗವಾನ್ಹರಿತಿ (ಪರ ಇತಿ) ಚ ॥ ೧ ॥

ಅ ॥ (೧) ಶ್ರೀ ಪರಮಾತ್ಮನು ಸಮಸ್ತರಿಂದ ಪೂಜಿಸಿಕೊಳ್ಳಲ್ಪಡುವುದರಿಂದ **ಋಕ್** ಎಂದೂ, ತನ್ನ ರೂಪಗಳಲ್ಲಿ ಸರ್ವದಾ ವ್ಯತ್ಯಾಸವಿಲ್ಲದೆ ಇರುವುದರಿಂದ **ಸಾಮ**ನೆಂದೂ ಹೇಳಿಸಿಕೊಳ್ಳಲ್ಪಡುತ್ತಾನೆ ಕ್ಷರಾಕ್ಷರ ಪುರುಷರಿಂದುತ್ತಮನಾದ ಆ ಶ್ರೀ ಹರಿಯು **ಸರ್ವಪೂಜ್ಯ**ನಾಗಿರುವುದರಿಂದ **ಯಜುಃ** ಎಂದೂ, ಸರ್ವಜ್ಞನಾದುದರಿಂದ **ಯಜ್ಞಃ** ಎಂದೂ ಅನಿಸಿಕೊಳ್ಳುತ್ತಾನೆ (೨) ಶ್ರೀ ಪರಮಾತ್ಮನು ಸರ್ವಜಗತ್ತಿನ ಸೃಷ್ಟಿಗೆ ಅನುಕೂಲವಾದ ಪ್ರಯತ್ನ ಸ್ವರೂಪನಾಗಿರುವುದರಿಂದ **ಕ್ರತುಃ** ಎಂದೂ ಇತರರಿಂದ ಧರಿಸಲ್ಪಡದಿರುವವನಾದುದರಿಂದ **ಸ್ವಧಾ** ಎಂದೂ, ಭಕ್ತರ ಜ್ಞಾನಕ್ಕೆ ವಿಷಯನಾಗಿ ಭಕ್ತರನ್ನು ರಕ್ಷಿಸುವುದರಿಂದ **ಮಂತ್ರಃ** ಎಂದೂ, ತಾಪತ್ರಯದಿಂದ ಬಳಲಿದವರಿಗೆ ಆಶ್ರಯನಾಗಿರುವುದರಿಂದ **ಔಷಧ**ನೆಂದೂ ಹೇಳಿಸಿಕೊಳ್ಳಲ್ಪಡುತ್ತಾನೆ (೩) ಚೆನ್ನಾಗಿ ಬ್ರಹ್ಮಾದಿಗಳಿಗಿಂತಲೂ ಶ್ರೇಷ್ಠನಾಗಿರುವುದರಿಂದ **ಆಜ್ಯ**ನೆಂದೂ, ಶಂಖವನ್ನು ಧರಿಸಿಕೊಂಡಿರುವುದರಿಂದ **ದರ್ಭ**ನೆಂದೂ, ಯಜ್ಞಾದಿಗಳಲ್ಲಿ ಚೆನ್ನಾಗಿ ಕರೆಯಲ್ಪಡುವುದರಿಂದ **ಹುತ**ನೆಂದೂ, ತನ್ನ ಶಕ್ತಿಯಿಂದ ಸ್ವತಂತ್ರವಾಗಿ ಹೋಗಲಿಕ್ಕೆ ಸಾವಧ್ರ್ಯವಿಲ್ಲದಿರುವ ಜಗತ್ತಿಗೆ ಪ್ರೇರಕನಾಗಿರುವುದರಿಂದ **ಅಗ್ನಿಃ** ಎಂದೂ ಅನಿಸಿಕೊಳ್ಳುತ್ತಾನೆ. (೪) (ಪ್ರಸಿದ್ಧ ಕ್ರತು ಮೊದಲಾದವುಗಳಿಂದ ಭಿನ್ನನೇ ಆಗಿರತಕ್ಕ ಶ್ರೀಹರಿಗೆ ಶಕ್ತಿವೃತ್ತಿಯಿಂದ **ಕ್ರತು** ಮೊದಲಾದ **ನಾಮ**ಗಳವೆ ಎಂಬುವಲ್ಲಿ ಇನ್ನೊಂದು ಸ್ಮೃತಿಯನ್ನು ಹೇಳುತ್ತಾರೆ —) ಶ್ರೀಪರಮಾತ್ಮನಿಗೆ ಸರ್ವಸ್ವಾತಂತ್ರ್ಯವಿದ್ದುದರಿಂದಲೂ ಸರ್ವಕರ್ತನಾಗಿರುವುದರಿಂದಲೂ ಶ್ರೀಪರಮಾತ್ಮನು ಆವಾವ ಪದಾರ್ಥಗಳಿಂದ ಭಿನ್ನನಾದಾಗ್ಯೂ ಮುಖ್ಯವಾಗಿ ಆವಾವ ಶಬ್ದಗಳ ಪ್ರವೃತ್ತಿಗೆ ಕಾರಣಗಳಾದ ಅನಂತಗುಣಗಳು ಇದ್ದುದರಿಂದಲೇ ಆವಾವ ಕ್ರತು ಮೊದಲಾದ ನಾಮಗಳುಳ್ಳವನು (ಖ) ಐಶ್ವರ್ಯಾದಿಗುಣಗಳುಳ್ಳ ಶ್ರೀಹರಿಯು ಓಂ ಎಂದು ಯಜ್ಞದಲ್ಲಿ ಕರೆಯಲ್ಪಡುವುದರಿಂದ **ಓಂಕಾರಃ** ಎನಿಸುತ್ತಾನೆ ॥ ೧ ॥

ತಾ ॥ (೧) ಪಾತೀತಿ ಸ ಪಿತಾ ಮಾನಾನ್ಮಾತಾ ಯತ್ಸ ಪಿತುರ್ಮಹಾನ್ । ಪಿತಾಮಹೋ ನಿಧಾತೃತ್ವಾನ್ನಿಧಾನಂ ಭೀತರಕ್ಷಣಾತ್ । ಶರಣಂ ವ್ಯಂಜನಾಚ್ಚೈವ ಬೀಜಮಿತ್ಯುಚ್ಯತೇ ಪ್ರಭುರಿತಿ ಚ ॥ (೨) ಪ್ರಲಯಕಾಲೇ ಸಂಹರ್ತೃತ್ವಾತ್ಪ್ರಲಯಃ । ಅನ್ಯದಾಽಪೀತಿ ಮೃತ್ಯುಃ । ಪ್ರಾಣಗಃ ಪ್ರಾಣಧರ್ತಾ ಯದಮೃತಂ ಪ್ರವಿಲಾಪಯನ್ । ವಿಶ್ವಂ ಪ್ರಲಯ ಇತ್ಯುಕ್ತೋ ಮೃತ್ಯುರನ್ಯತ್ರ ಮಾರಣಾದಿತಿ ಚ ॥ (೩) ಸತ್ಸಾಧುಗುಣಪೂರ್ಣತ್ವಾದಸ್ಮಾನ್ನಾನ್ಯೋ ಗುಣಾಧಿಕಃ । ಯತೋಽತೋ ಸದಿತಿ ಪ್ರೋಕ್ತಂ ವಿಷ್ಣ್ವಾಖ್ಯಂ ಪರಮಂ ಪದಮಿತಿ ಶಬ್ದನಿರ್ಣಯೇ ॥ ೨ ॥ ॥ ೧೯ ॥

ಅ ॥ (೧) ಶ್ರೀಪರಮಾತ್ಮನು ಸರ್ವಜಗತ್ತನ್ನು ರಕ್ಷಿಸುವುದರಿಂದ **ಪಿತಾ** ಎಂದೂ, ಜ್ಞಾನಕ್ಕೆ ವಿಷಯನಾಗಿ ರಕ್ಷಿಸುವುದರಿಂದ **ಮಾತಾ** ಎಂದೂ, ಜಗತ್ತನ್ನು ಸೃಷ್ಟಿಸುವ ಚತುರ್ಮುಖನಿಗಿಂತಲೂ ಶ್ರೇಷ್ಠನಾಗಿರುವುದರಿಂದ **ಪಿತಾಮಹ**ನೆಂದೂ, ಜಗತ್ತನ್ನು ಧರಿಸಿಕೊಂಡಿರುವುದರಿಂದ **ನಿಧಾನ**ನೆಂದೂ, ಭಯಗ್ರಸ್ತರನ್ನು ರಕ್ಷಿಸುವುದರಿಂದ **ಶರಣ**ನೆಂದೂ, ಜಗತ್ತನ್ನು ಅಭಿವ್ಯಕ್ತೀಕರಿಸುವುದರಿಂದ **ಬೀಜ**ನೆಂದೂ ಹೇಳಿಸಿಕೊಳ್ಳಲ್ಪಡುತ್ತಾನೆ (೨) (**ಪ್ರಲಯ ಮೃತ್ಯು** ಶಬ್ದಗಳಿಗೆ ಬೇರೆ ಬೇರೆ ಅರ್ಥಗಳನ್ನು ಹೇಳುತ್ತಾರೆ—) ಪ್ರಲಯಕಾಲದಲ್ಲಿ ಸಂಹಾರಕನಾದುದರಿಂದ **ಪ್ರಲಯ**ನೆಂದೂ, ಪ್ರಲಯಕಾಲಕ್ಕಿಂತ ಬೇರೆ ಕಾಲದಲ್ಲಿಯೂ ಸಂಹಾರಕನಾದುದರಿಂದ **ಮೃತ್ಯು** ಎಂದೂ ಅನಿಸಿಕೊಳ್ಳುತ್ತಾನೆ ಇಂದ್ರಿಯಗಳಲ್ಲಿದ್ದು

ಜೀವರ ದೇಹವನ್ನು ಧರಿಸಿಕೊಂಡು ಮರಣವನ್ನು ಪರಿಹರಿಸುವುದರಿಂದ **ಅಮೃತ**ನೆಂದೂ, ಪ್ರಲಯಕಾಲದಲ್ಲಿ ಜಗತ್ತನ್ನು ನಾಶಮಾಡುವುದರಿಂದ **ಪ್ರಲಯ**ನೆಂದೂ, ಪ್ರಲಯಕಾಲಕ್ಕಿಂತ ಬೇರೆ ಕಾಲದಲ್ಲಿ ಜಗತ್ತನ್ನು ಸಂಹರಿಸುವುದರಿಂದ **ಮೃತ್ಯು** ಎಂದೂ ಅನಿಸಿಕೊಳ್ಳುತ್ತಾನೆ (೩) ಸರ್ವೋತ್ತಮನೂ, ಬ್ರಹ್ಮಾದಿಗಳಿಂದ ಹೊಂದಲ್ಪಡುವವನೂ ಆದ ಶ್ರೀವಿಷ್ಣುವೆಂದು ಹೆಸರುಳ್ಳ ಪರಬ್ರಹ್ಮನು ಸಾಧುಗುಣಗಳಿಂದ ಪೂರ್ಣನಾದುದರಿಂದ **ಸತ್** ಎಂದೂ, ಶ್ರೀಹರಿಗಿಂತ ಇನ್ನೊಬ್ಬನು ಹೆಚ್ಚು ಗುಣಗಳುಳ್ಳವನಿಲ್ಲದಿರುವುದರಿಂದ **ಅಸತ್** ಎಂದೂ ಹೇಳಿಸಿಕೊಳ್ಳಲ್ಪಡುತ್ತಾನೆ, ಎಂದು ಶಬ್ದನಿರ್ಣಯದಲ್ಲಿದೆ.॥ ೨ ॥ ॥ ೧೯ ॥

ಗೀ॥ ತ್ರೈವಿದ್ಯಾ ಮಾಂ ಸೋಮಪಾಃ ಪೂತಪಾಪಾ
ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯಂತೇ ।
ತೇ ಪುಣ್ಯಮಾಸಾದ್ಯ ಸುರೇಂದ್ರಲೋಕ-
ಮಶ್ನಂತಿ ದಿವ್ಯಾನ್ದಿವಿ ದೇವಭೋಗಾನ್ ॥ ೨೦ ॥

ಅ ॥ ತ್ರೈವಿದ್ಯಾಃ=ಶ್ರೀವಿಷ್ಣುವನ್ನು ಸರ್ವೋತ್ತಮನನ್ನಾಗಿ ತಿಳಿದರೂ, ಸ್ವರ್ಗಾದಿಗಳನ್ನು ಪಡೆಯುವುವಕ್ಕಾಗಿ ಋಗಾದಿ ಮೂರು ವೇದಗಳಲ್ಲಿ ಸಾಮಾನ್ಯತಃ ತೋರುವ ಇತರ ದೇವತೆಗಳ ತೃಪ್ತಿಗಾಗಿ ಮಾಡತಕ್ಕ ಯಾಗವನ್ನು ತಿಳಿದು ಹಾಗೆಯೇ ಮಾಡಿ ಅಂತ್ಯದಲ್ಲಿ ವಿಷ್ಣುವಿನಲ್ಲಿ ಸಮರ್ಪಿಸುವವರು, ಮಾಂ=ನನ್ನನ್ನು, ಯಜ್ಞೈಃ=ಯಾಗಗಳಿಂದ, ಇಷ್ಟ್ವಾ=ಪೂಜೆ ಮಾಡಿ, (ಕೊನೆಗೆ ನನ್ನಲ್ಲಿಯೇ ಯಾಗ ಪೂಜಾದಿಗಳನ್ನು ಸಮರ್ಪಿಸಿ) ಸೋಮಪಾಃ=ಹೋಮಿಸಿ ಅವಶಿಷ್ಟವಾದ ಸೋಮರಸವನ್ನು ಕುಡಿಯುವವರಾಗಿಯೇ, ಪೂತಪಾಪಾಃ=ಪಾಪಗಳನ್ನು ಕಳೆದುಕೊಂಡವರಾಗಿಯೇ, ಸ್ವರ್ಗತಿಂ=ಸ್ವರ್ಗಮಾರ್ಗವನ್ನು, ಅಥವಾ ಸ್ವರ್ಗ ಎನಿಸಿಕೊಂಡ ಪ್ರಾಪ್ಯವಾದ ಸ್ಥಾನವನ್ನು ಪಡೆಯುವುದಕ್ಕಾಗಿ, ಮಾಂ=ನನ್ನನ್ನು, ಪ್ರಾರ್ಥಯಂತೇ=ಪ್ರಾರ್ಥಿಸುತ್ತಾರೆ ತೇ=ಅವರು, ಪುಣ್ಯಂ=ಪುಣ್ಯದಿಂದ ಸಿಗುವ, ಸುರೇಂದ್ರಲೋಕಂ=ದೇವೇಂದ್ರನ ಸ್ಥಾನವಾದ ಸ್ವರ್ಗವನ್ನು, ಆಸಾದ್ಯ=ಹೊಂದಿ ದಿವಿ=ಸ್ವರ್ಗಲೋಕದಲ್ಲಿ, ದಿವ್ಯಾನ್=ಸ್ವರ್ಗದಲ್ಲಿ ಸಿಗುವ, ಅಥವಾ ಅಲೌಕಿಕಗಳಾದ, ದೇವಭೋಗಾನ್=ದೇವತೆಗಳಿಗೆ ಭೋಗ್ಯಗಳಾದ ಪದಾರ್ಥಗಳನ್ನು ಅಶ್ನಂತಿ=ಅನುಭವಿಸುತ್ತಾರೆ ॥ ೨೦ ॥

ಗೀ॥ ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ
ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ ।
ಏವಂ ತ್ರಯೀಧರ್ಮಮನುಪ್ರಪನ್ನಾ
ಗತಾಗತಂ ಕಾಮಕಾಮಾ ಲಭಂತೇ ॥ ೨೧ ॥

ಅ ॥ ತೇ=ಸ್ವರ್ಗವನ್ನು ಪಡೆಯಬೇಕೆಂಬುವ ಇಚ್ಛೆಯಿಂದ ಇತರ ದೇವತೆಗಳ ತೃಪ್ತಿಗಾಗಿ ಯಜ್ಞ ಮಾಡುವವರು, ತಂ=ಆದಾವ, ವಿಶಾಲಂ=ಬಹಳವಾದ ಸ್ವರ್ಗಲೋಕಂ=ಸ್ವರ್ಗದಲ್ಲಿ ಸಿಗುವ ಸುಖವನ್ನು, ಭುಕ್ತ್ವಾ=ಅನುಭವಿಸಿ, ಕ್ಷೀಣೇ ಪುಣ್ಯೇ=ಪುಣ್ಯವು ಹ್ರಾಸವಾದಾಗ ಮರ್ತ್ಯಲೋಕಂ=ಭೂಲೋಕವನ್ನು, ವಿಶಂತಿ=(ಅನುಭವಿಸಿ ಉಳಿದ ಪುಣ್ಯದಿಂದ ಕೂಡಿದವರಾಗಿ,) ಹೊಂದುತ್ತಾರೆ (ಭೂಲೋಕದಲ್ಲಿ ಹುಟ್ಟುತ್ತಾರೆ) ಏವಂ=ಹೀಗೆಯೇ, ತ್ರಯೀಧರ್ಮಂ= ಮೂರು ವೇದಗಳಲ್ಲಿ ಅಮುಖ್ಯವಾಗಿ ಹೇಳಿದ ಕಾಮ್ಯಕರ್ಮವನ್ನು, ಅನುಪ್ರಪನ್ನಾಃ=ಮಾಡುತ್ತಾ, ಕಾಮಕಾಮಾಃ=ವಿಷಯಭೋಗಗಳನ್ನು ಇಚ್ಛಿಸುವವ

ರಾಗಿ, ಗತಾಗತಂ=ಭೂಲೋಕದಿಂದ ಸ್ವರ್ಗಕ್ಕೆ ಹೋಗುವುದು, ಸ್ವರ್ಗದಿಂದ ಭೂಲೋಕಕ್ಕೆ ಬರುವುದು. ಎಂಬೀ ಗಮನಾಗಮನಗಳನ್ನು, ಲಭಂತೇ=ಹೊಂದುತ್ತಾರೆ (ಇಂತಹ ಕಾಮ್ಯಕರ್ಮಿಗಳು ಯಾವಾಗಲೂ ಜನನ ಮರಣಾದಿರೂಪವಾದ ಸಂಸಾರವನ್ನು ಬಿಟ್ಟು ಮೋಕ್ಷವನ್ನು ಹೊಂದುವುದಿಲ್ಲ.) ॥ ೨೧ ॥

ಭಾ ॥ ತಥಾಽಪಿ ಮದ್ಭಜನಮೇವಾನ್ಯದೇವತಾಭಜನಾದ್ವರಮಿತಿ ದರ್ಶಯತಿ । ತ್ರೈವಿದ್ಯಾ ಇತ್ಯಾದಿನಾ ॥ ೨೦,೨೧ ॥

ಆ ॥ ಎಲ್ಲಾ ಜೀವನರಲ್ಲಿ ಶ್ರೀಪರಮಾತ್ಮನೇ ಇದ್ದು ಆವರು ಮಾಡುವ ಯಾಗಾದಿಗಳನ್ನು ಭೋಗಿಸುವವನಾದಾಗ್ಯೂ ಬೇರೆ ದೇವತೆಗಳೂ, ಪಿತ್ರಾದಿಗಳೂ, ಇವರನ್ನು ಸೇವಿಸುವುದಕ್ಕಿಂತ ಭಗವದ್ಭಕ್ತರು ಮಾಡತಕ್ಕ ನನ್ನ ಸೇವೆಯೇ ಶ್ರೇಷ್ಠವು ಎಂದು **ತ್ರೈವಿದ್ಯಾ** ಇತ್ಯಾದಿ ಮೂರು ಶ್ಲೋಕಗಳಿಂದ ತೋರಿಸುತ್ತಾರೆ ॥ ೨೦, ೨೧ ॥

ಪೀ-ತ್ರೈವಿದ್ಯರಿಗೆ ಆಗುವ ಫಲವನ್ನು ಹೇಳಿ ಭಗವದ್ಭಕ್ತರಿಗೆ ಉಂಟಾಗುವ ಫಲವನ್ನು ಹೇಳುತ್ತಾರೆ

ಗೀ ॥ ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥೨೨॥

ಆ ॥ ಯೇ ಜನಾಃ=ಯಾವ ಜನರು, ಅನನ್ಯಾಃ ಮಾಂ ಚಿಂತಯಂತಃ=ಇತರ ದೇವತೆಗಳನ್ನು ಸರ್ವೋತ್ತಮರೆಂದು ಧ್ಯಾನಮಾಡದೆ ನನ್ನನ್ನೇ ಸ್ಮರಿಸುವವರಾಗಿ, ಪರ್ಯುಪಾಸತೇ=ಭಕ್ತಿಪೂರ್ವಕವಾಗಿ ಸರ್ವೋತ್ತಮನೆಂದು ಉಪಾಸನೆಮಾಡುತ್ತಾರೋ, ತೇಷಾಂ=ಅಂತಹ, ನಿತ್ಯಾಭಿಯುಕ್ತಾನಾಂ=ಸರ್ವದಾ ಎಲ್ಲಾ ದೇಶಗಳಲ್ಲಿಯೂ ಶ್ರೀಪರಮಾತ್ಮನು ವ್ಯಾಪಿಸಿಕೊಂಡಿರುತ್ತಾನೆಂದು ಆ ಶ್ರೀಹರಿಯಲ್ಲಿ ಶರೀರ, ಇಂದ್ರಿಯ, ಮನಸ್ಸುಗಳನ್ನು ಇಟ್ಟಿರುವ, ಅಂದರೆ ಶ್ರೀಪರಮಾತ್ಮನ ಸೇವೆಯಲ್ಲಿಯೇ ಉದ್ಯುಕ್ತರಾದ, ಅಥವಾ ಸರ್ವದಾ ಶ್ರೀಪರಮಾತ್ಮನನ್ನೇ ಸ್ಮರಿಸಿಕೊಂಡಿರುವ ಭಗವದ್ಭಕ್ತರ, ಯೋಗಕ್ಷೇಮಂ=ಯೋಗಕ್ಷೇಮಗಳನ್ನು (ಸಿಗದಿರುವ ವಸ್ತುವನ್ನು ಪಡೆಯುವುದು, ಇದ್ದುದನ್ನು ಕಾಪಾಡಿಕೊಂಡಿರುವುದು, ಇವುಗಳನ್ನು) ವಹಾಮಿ=ಕೊಡುತ್ತೇನೆ ಅಥವಾ ಲಭಿಸಿರುವ ಮೋಕ್ಷಕ್ಕೆ ಕೆಡುಕು ಬಾರದಂತೆ ಮಾಡುತ್ತೇನೆ (ಅಂದರೆ ನಾನು ನನ್ನನ್ನೇ ಸರ್ವೋತ್ತಮನೆಂದು ಉಪಾಸನೆಮಾಡುವವರಿಗೆ ಪುನರಾವೃತ್ತಿಯಾಗದಿರುವ ಮೋಕ್ಷವನ್ನು ಕೊಡುತ್ತೇನೆ) ॥ ೨೨ ॥

ಪೀ—ಆದ್ವೈತ ಜ್ಞಾನಿಗಳು ಅನನ್ಯರು ಎಂಬುವ ಪ್ರತೀತಿಯನ್ನು ಹೋಗಲಾಡಿಸುವುದಕ್ಕಾಗಿ ಸರಿಯಾದ ಅರ್ಥವನ್ನು ಹೇಳುತ್ತಾರೆ—

ಭಾ ॥ (೧) ಅನನ್ಯಾಃ ಅನ್ಯದಚಿಂತಯಿತ್ವಾ । ತಥಾ ಹಿ ಗೌತಮಖಿಲೇಷು । ಸರ್ವಂ ವರಿತ್ಯಜ್ಯ ಮನೋಗತಂ ಯದ್ವಿನಾ ದೇವಂ ಕೇವಲಂ ಶುದ್ಧಮಾದ್ಯಂ । ಯೇ ಚಿಂತಯಂತೀಹ ತನೈವ ಧೀರಾ ಅನನ್ಯಾಸ್ತೇ ದೇವಮೇವಾವಿಶಂತೀತಿ ॥ (೨) ಕಾಮಂ ಕಾಲೇನ ಮಹತಾ ಏಕಾಂತಿತ್ವಾತ್ಸಮೂಹಿತೈಃ । ಶಕ್ಯೋ ದ್ರಷ್ಟುಂ ಸ ಭಗವಾನ್ ಪ್ರಭಾಸಂದೃಶ್ಯಮಂಡಲ ಇತಿ ಮೋಕ್ಷಧರ್ಮೇ । ನಿತ್ಯಮಭಿತಃ ಸರ್ವತೋ ಯುಕ್ತಾನಾಂ ॥ ೨೨ ॥

ಅ ॥ (೧) ಅನನ್ಯಾಃ=ಬ್ರಹ್ಮರುದ್ರಾದಿದೇವತೆಗಳನ್ನು ಸರ್ವೋತ್ತಮರೆಂದು ಧ್ಯಾನಿಸದಿರುವವರು ಹೀಗೆಯೇ ಅರ್ಥ ಮಾಡಬೇಕೆಂದು ಗೌತಮಪ್ರಭೃತಿಗಳು ಎಂಬುವ ಗ್ರಂಥದಲ್ಲಿ ಹೇಳಿದೆ ಶ್ರೀಪರಮಾತ್ಮನನ್ನು ಬಿಟ್ಟು (ಅಂದರೆ ಪರಮಾತ್ಮನಿಂದ ಭಿನ್ನರಾದ) ಮನಸ್ಸಿಗೆ ವಿಷಯರಾದ ಎಲ್ಲಾ ಬ್ರಹ್ಮಾದಿಗಳ ಸಮುದಾಯವನ್ನು ಬಿಟ್ಟು (ಅಂದರೆ ಬ್ರಹ್ಮರುದ್ರಾದಿ ದೇವತೆಗಳನ್ನು ಸರ್ವೋತ್ತಮರೆಂದು ತಿಳಿಯದೆ) ಜಡ ಸಂಬಂಧವಿಲ್ಲದವನೂ, ಪರಿಶುದ್ಧನೂ, ಸರ್ವರಿಗೆ ಆದಿಭೂತನೂ, ಕ್ರೀಡಾದಿಗುಣವಿಶಿಷ್ಟನೂ ಆದ ಶ್ರೀಹರಿಯನ್ನೇ ಯಾರು ಸರ್ವೋತ್ತಮನೆಂದು ಸ್ಮರಣೆ ಮಾಡಿಕೊಂಡಿರುತ್ತಾರೋ, ಅಂತಹವರು ಅನನ್ಯರೆನಿಸುತ್ತಾರೆ ಅಂತಹ ಧೀರರು ಆ ಶ್ರೀಹರಿಯನ್ನೇ (ಮೋಕ್ಷವನ್ನೇ) ಹೊಂದುತ್ತಾರೆ (೨) ಬಹುಕಾಲಗಳನ್ನಾರಂಭಿಸಿ ಏಕಾಂತಭಕ್ತರಾಗಿರುವುದರಿಂದ ಇಚ್ಛಾನುಸಾರ ಪ್ರಶಸ್ತಮನಸ್ಸುಳ್ಳ ಭಕ್ತರಿಂದ ಜ್ಞಾನ ದೇಹಕಾಂತಿ ಇವುಗಳಿಂದ ಅತ್ಯಾದರದಿಂದ ನೋಡಲರ್ಹಸ್ವರೂಪವುಳ್ಳ ಶ್ರೀಪರಮಾತ್ಮನು ನೋಡಲು ಶಕ್ಯನು, ಎಂದು ಮೋಕ್ಷಧರ್ಮದಲ್ಲಿದೆ ನಿತ್ಯಾಭಿಯುಕ್ತಾನಾಂ=ಸರ್ವದಾ ಎಲ್ಲಾ ದೇಶಗಳಲ್ಲಿಯೂ ಶರೀರ ಇಂದ್ರಿಯ, ಮನಸ್ಸುಗಳಿಂದ ಶ್ರೀಪರಮಾತ್ಮನನ್ನೇ ಸೇವಿಸುವುದರಲ್ಲಿ ಉದ್ಯುಕ್ತರಾದ ಭಕ್ತರಿಗೆ ॥ ೨೨ ॥

ಪೀ—ಇತರ ದೇವತೆಗಳ ಪ್ರೀತಿಗಾಗಿ ಯಾಗ ಮಾಡುವವರಿಗೆ ಭಗವದ್ಭಕ್ತರಿಗೆ ಆಗತಕ್ಕ ಫಲಕ್ಕಿಂತ ಬೇರೆ ಫಲವು ಸಿಗುವುದು ಎಂಬುವುದನ್ನು ವಿವರಿಸುತ್ತಾರೆ—

ಗೀ ॥ ಯೇಽಪ್ಯನ್ಯದೇವತಾಭಕ್ತಾ ಯಜಂತೇ ಶ್ರದ್ಧಯಾನ್ವಿತಾಃ ।
ತೇಽಪಿ ಮಾಮೇವ ಕೌಂತೇಯ ಯಜಂತ್ಯವಿಧಿಪೂರ್ವಕಂ ॥ ೨೩ ॥

ಅ ॥ ಅನ್ಯದೇವತಾಭಕ್ತಾಃ=ಶ್ರೀವಿಷ್ಣುವಿನಿಂದ ಇತರರಾದ ಬ್ರಹ್ಮಾದಿ ದೇವತೆಗಳಲ್ಲಿ ಭಕ್ತಿಯುಕ್ತರಾದ ಯೇಽಪಿ=ಯಾವ ಜನರು, ಶ್ರದ್ಧಯಾ=ವಿಶ್ವಾಸದಿಂದ ಅನ್ವಿತಾಃ=ಕೂಡಿದವರಾಗಿ, ಅನ್ಯದೇವತಾಃ ಯಜಂತೇ=ಬೇರೆ ದೇವತೆಗಳನ್ನುದ್ದೇಶಿಸಿ ಹವಿಸ್ಸು ಮೊದಲಾದವುಗಳ ತ್ಯಾಗವನ್ನು ಮಾಡುತ್ತಾ ಅನ್ಯ ದೇವತೆಗಳನ್ನು ಸೇವಿಸುತ್ತಾರೋ, ತೇಽಪಿ=ಅವರೂ ಕೂಡ, ಕೌಂತೇಯ=ಅರ್ಜುನನೇ, ಅವಿಧಿಪೂರ್ವಕಂ=ಶಾಸ್ತ್ರದಲ್ಲಿ ಹೇಳಿದ ವಿಧಿಯನ್ನು ಬಿಟ್ಟು, ಮಾಮೇವ=ನನ್ನನ್ನೇ, ಯಜಂತಿ=ಹೋಮಿಸುತ್ತಾರೆ (ಅಂದರೆ ನನ್ನನ್ನು ಉದ್ದೇಶಿಸಿಯೇ ಕರ್ಮಗಳನ್ನು ಮಾಡಬೇಕಾಗಿದ್ದರೂ ಹಾಗೆ ಮಾಡದೆ ಬೇರೆ ದೇವತೆಗಳ ಉದ್ದೇಶದಿಂದ ಮಾಡಿ ಆ ಕರ್ಮವನ್ನು ಕೊನೆಗೆ ನನಗೆ ಅರ್ಪಿಸುತ್ತಾರೆ ಆದಕಾರಣ ಅವಿಧಿಪೂರ್ವಕವಾಯ್ತು) ॥ ೨೩ ॥

ಭಾ ॥ ತರ್ಹ್ಯಹಂ ಕ್ರತುರಿತ್ಯಾದ್ಯಸತ್ಯಮಿತ್ಯತ ಆಹ । ಯೇಽಪೀತಿ ॥ ೨೩ ॥

ಅ ॥ ಎಲ್ಲಾ ದೇವತೆಗಳಲ್ಲಿದ್ದ ಶ್ರೀಪರಮಾತ್ಮನೇ ಯಾಗವನ್ನು ಭೋಗಿಸುವವನೆಂದಾದರೆ ತ್ರೈವಿದ್ಯರಿಗೂ ಭಗವದ್ಭಕ್ತರಿಗೂ ಫಲವು ಸಮವಾಗಬೇಕಾಗುವುದು ಫಲದಲ್ಲಿ ವೈಲಕ್ಷಣ್ಯವಿದ್ದರೆ ಅಹಂ ಕ್ರತುಃ ಇತ್ಯಾದಿಗಳಿಂದ ಸರ್ವಯಜ್ಞಭೋಕ್ತೃತ್ವವನ್ನು ಹೇಳಿದ್ದು ಅಯುಕ್ತವಾಗುವುದು ಯೇಽಪಿ ಎನ್ನುವುದರಿಂದ ಸಮಾಧಾನವನ್ನು ಹೇಳುತ್ತಾರೆ. ॥ ೨೩ ॥

ಪೀ—ಇತರ ದೇವತೆಗಳನ್ನುದ್ದೇಶಿಸಿ ಮಾಡುವ ಯಜ್ಞವು ಶ್ರೀಪರಮಾತ್ಮನಿಗೇನೇ ಭೋಗ್ಯವಾದರೆ ಅದು ಅವಿಧಿಪೂರ್ವಕವಾಗುವುದು ಹೇಗೆ? ಎಂದರೆ—

ಗೀ॥ ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ।
ನ ತು ಮಾಮಭಿಜಾನಂತಿ ತತ್ತ್ವೇನಾತಶ್ಚ್ಯವಂತಿ ತೇ ॥ ೨೪ ॥

ಅ॥ ಅಹಂ=ನಾನೇ, ಸರ್ವಯಜ್ಞಾನಾಂ=ಎಲ್ಲಾ ಯಜ್ಞಗಳನ್ನು, ಭೋಕ್ತಾ=ಭೋಗಿಸುವವನು, ಪ್ರಭುರೇವ=ಪ್ರವರ್ತಕನು, ಯಜ್ಞಗಳಿಗೆ ಉದ್ದೇಶ್ಯನು, ಮಾಂ ತುಂ=ಅಂತಹ ನನ್ನನ್ನಾದರೂ, ತತ್ತ್ವೇನ=ಯಥಾರ್ಥವಾಗಿ, ನಾಭಿಜಾನಂತಿ=ಚೆನ್ನಾಗಿ ತಿಳಿಯುವುದಿಲ್ಲ. (ಅಂದರೆ ಸರ್ವೋತ್ತಮನೆಂದು ನನ್ನನ್ನು ತಿಳಿದರೂ ಯಜ್ಞಾದಿಗಳಿಗೂ ಶ್ರೀಹರಿಯೇ ಮುಖ್ಯವಾಗಿ ಉದ್ದೇಶ್ಯನು, ಇತ್ಯಾದಿ ಪ್ರಕಾರ ಮತ್ತು ಬ್ರಹ್ಮರುದ್ರಾದಿ ದೇವತೆಗಳು ಶ್ರೀಹರಿಯ ಪರಿವಾರಭೂತರೆಂದೂ ಚೆನ್ನಾಗಿ ತಿಳಿಯುವುದಿಲ್ಲ) ಅತಃ=ಅದಕಾರಣ, ತೇ=ಅಂತಹರು, ಚ್ಯವಂತಿ=ಸ್ವರ್ಗಲೋಕದಿಂದ ಭೂಲೋಕಕ್ಕೆ ತಿರುಗಿ ಬರುತ್ತಾರೆ ॥೨೪॥

ಭಾ॥ ಕಾರಣಮಾಹಾವಿಧಿಪೂರ್ವಕತ್ವೇ । ಅಹಂ ಹೀತಿ ॥ ೨೪ ॥

ಅ॥ (ತ್ರೈವಿದ್ಯಾದಿಗಳು ಮಾಡಿರತಕ್ಕ ಯಜ್ಞಗಳನ್ನು ಶ್ರೀಹರಿಯೇ ಭೋಗಿಸುವವನೆಂದಾದರೆ ಅದು ಅವಿಧಿಪೂರ್ವಕವೆಂಬುವುದು ಹೇಗೆಂದರೆ–)**ಅಹಂ ಹಿ** ಎಂಬುವ ಶ್ಲೋಕದಿಂದ ವಿಧಿಪೂರ್ವಕವಾಗದಿರಲಿಕ್ಕೆ ಕಾರಣವನ್ನು ಸ್ಪಷ್ಟವಾಗಿ ಹೇಳುತ್ತಾರೆ ॥ ೨೪ ॥

ಪೀ—ಅಂತಹವರಿಗೆ ಆಗುವ ಫಲಭೇದವನ್ನು ವಿವರಿಸುತ್ತಾರೆ—

ಗೀ॥ ಯಾಂತಿ ದೇವವ್ರತಾ ದೇವಾನ್ ಪಿತೃನ್ಯಾಂತಿ ಪಿತೃವ್ರತಾಃ ।
ಭೂತಾನಿ ಯಾಂತಿ ಭೂತೇಜ್ಯಾ ಯಾಂತಿ ಮದ್ಯಾಜಿನೋಽಪಿ ಮಾಂ ॥
॥ ೨೫ ॥

ಅ॥ ದೇವವ್ರತಾಃ=ಇಂದ್ರಾದಿ ದೇವತೆಗಳಲ್ಲಿ ನಿಯಮವಿದ್ದು ಇಂದ್ರಾದಿದೇವತೆಗಳ ತೃಪ್ತಿಗಾಗಿ ಯಾಗಮಾಡುವವರು (ದೇವತೆಗಳನ್ನು ಪೂಜಿಸುವವರು) ದೇವಾನ್=ಇಂದ್ರಾದಿ ದೇವತೆಗಳನ್ನು, ಯಾಂತಿ=ಹೊಂದುತ್ತಾರೆ ಪಿತೃವ್ರತಾಃ=ಪಿತೃಗಳನ್ನುದ್ದೇಶಿಸಿ ಶ್ರಾದ್ಧಾದಿ ಕ್ರಿಯೆಗಳನ್ನು ಮಾಡುವವರು.(ಪಿತೃಗಳನ್ನು ಪೂಜಿಸುವವರು) ಪಿತೄನ್=ಪಿತೃಗಳನ್ನು, ಯಾಂತಿ=ಹೊಂದುತ್ತಾರೆ ಭೂತೇಜ್ಯಾಃ=ಯಕ್ಷಾದಿಗಳನ್ನು ಸಪ್ತಮಾತೃಕಾದಿಗಳನ್ನು ಪೂಜಿಸಿಕೊಂಡಿರುವವರು, ಭೂತಾನಿ=ಅಂತಹ ಯಕ್ಷಾದಿಗಳನ್ನೇ, ಯಾಂತಿ=ಹೊಂದುತ್ತಾರೆ. ಮದ್ಯಾಜಿನೋಽಪಿ=ನನ್ನನ್ನೇ ಪೂಜಿಸುವವರು, ಮಾಂ=ನನ್ನನ್ನು, ಯಾಂತಿ=ಹೊಂದುತ್ತಾರೆ ॥ ೨೫ ॥

ಭಾ॥ ಫಲಂ ವಿವಿಚ್ಯಾಹ । ಯಾಂತೀತಿ ॥ ೨೫ ॥

ಅ॥ ಯಾಂತಿ ಎಂಬುವ ಶ್ಲೋಕದಿಂದ ಆಯಾಯ ದೇವತೆಗಳು ಪಿತ್ರಾದಿಗಳು ಇವರನ್ನು ಪಾಸನಾ ಮಾಡುವವರಿಗೆ ಆಗುವ ಫಲವನ್ನು ಹೇಳುತ್ತಾರೆ. ॥ ೨೫ ॥

ಪೀ—ಬ್ರಹ್ಮರುದ್ರಾದಿದೇವತೆಗಳನ್ನು ಭಜನಮಾಡಿದಕ್ಕೆ ಫಲವು ಅಲ್ಪವಾದುದಾಗ್ಯೂ ಅದು ಸುಲಭಸಾಧ್ಯವಾದುದರಿಂದ ಅದನ್ನೇ ಮಾಡಲು ಶಕ್ಯವು, ನಿನಗೆ ಬಹಳ ಮಹಿಮೆಗಳು ಇದ್ದುದರಿಂದ ನಿನ್ನ ಭಜನೆಯು ಹೆಚ್ಚು ಸಾಮರ್ಥ್ಯವಿಲ್ಲದವರಿಗೆ ಮಾಡಲಶಕ್ಯವು, ಎಂದರೆ—

ಗೀ ॥ ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥ ೨೬ ॥

ಅ ॥ ಯಃ= ಯಾವಾತನು, ಪತ್ರಂ= ಶಾಸ್ತ್ರಗಳಲ್ಲಿ ನಿಷಿದ್ಧವಾಗದಿರುವ ಶಾಸ್ತ್ರವಿಹಿತ ಬಿಲ್ವಪತ್ರ ಮೊದಲಾದ ಪತ್ರಗಳನ್ನು, ಪುಷ್ಪಂ= ಪುಷ್ಪವನ್ನು, ಫಲಂ=ಫಲವನ್ನು, ತೋಯಂ= ನೀರನ್ನು, ಭಕ್ತ್ಯಾ= ಭಕ್ತಿಪೂರ್ವಕವಾಗಿ, ಮೇ= ನನಗೆ, ಪ್ರಯಚ್ಛತಿ= ಕೊಡುತ್ತಾನೋ, ಪ್ರಯತಾತ್ಮನಃ= ವಿಷಯಗಳಲ್ಲಿ ವಿರಕ್ತನಾದ ಅಂತಹ ಭಗವದ್ಭಕ್ತನ, ಭಕ್ತ್ಯುಪಹೃತಂ= ಭಕ್ತಿಯಿಂದ ಸಮರ್ಪಿಸಲ್ಪಟ್ಟ, ತತ್= ಅಂತಹ ಪತ್ರಾದಿಗಳನ್ನು, ಅಹಂ=ನಾನು, ಅಶ್ನಾಮಿ= ಸ್ವೀಕರಿಸುತ್ತೇನೆ (ಅಂದರೆ ಭಕ್ತಿಯಿಂದಲೇ ಸಂತುಷ್ಟನಾಗುತ್ತೇನೆ ದ್ರವ್ಯಾದಿಗಳಿಂದ ಸಂತುಷ್ಟನಾಗಲಾರೆನು) ॥ ೨೬ ॥

ಭಾ ॥ (೧) ದುರ್ಬಲೈಸ್ತ್ವಂ ಪೂಜಯಿತುಮಶಕ್ಯೋ ಮಹತ್ತ್ವಾದಿತ್ಯಾಶಂಕ್ಯಾಽಽಹ । ಪತ್ರಮಿತಿ । ನ ತ್ವವಿಹಿತಪತ್ರಾದಿ । ತಸ್ಯಾಪರಾಧತ್ವೋಕ್ತೇರ್ವಾರಾಹಾದೌ । ಭಕ್ತ್ಯೈವಾಹಂ ತುಷ್ಟ ಇತಿ ಭಾವಃ ॥ (೨) ಭಕ್ತಪ್ರಿಯಂ ಸಕಲಲೋಕನಮಸ್ಕೃತಂ ಚೇತಿ ಭಾರತೇ । ಏತಾವಾನೇವ ಲೋಕೇಽಸ್ಮಿನ್ಪುಂಸಃ ಸ್ವಾರ್ಥಃ ಪರಃ ಸ್ಮೃತಃ ॥ (೩) ಏಕಾಂತಭಕ್ತಿರ್ಗೋವಿಂದೇ ಯತ್ಸರ್ವತ್ರಾತ್ಮದರ್ಶನಂ ॥ ೨೬ ॥

ಅ ॥ (೧) ಬೇರೆ ದೇವತೆಗಳ ಸೇವೆಯಿಂದ ಫಲವು ಅಲ್ಪವಾದುದಾಗ್ಲೂ ಅದು ಸುಲಭಸಾಧ್ಯವಾಗಿರುವುದರಿಂದ ಬೇರೆ ದೇವತೆಗಳ ಪೂಜಯನ್ನು ಮಾಡುವುದು ಪ್ರಶಸ್ತವು ನೀನು ಶ್ರೇಷ್ಠ ಮಹಿಮೆಗಳಿಂದ ಕೂಡಿದವನಾಗಿರುವುದರಿಂದ ದುರ್ಬಲರಿಗೆ (ಧನಾದ್ಯಾನುಕೂಲ್ಯವಿಲ್ಲದವರಿಗೆ) ನಿನ್ನನ್ನು ಪೂಜಿಸಲಿಕ್ಕೆ ಸಾಧ್ಯವಿಲ್ಲ, ಎಂದರೆ ಪತ್ರಂ ಎಂಬುವ ಶ್ಲೋಕದಿಂದ ಸಮಾಧಾನ ಹೇಳುತ್ತಾರೆ ಶಾಸ್ತ್ರದಲ್ಲಿ ವಿಹಿತಗಳಾದ ಬಿಲ್ವಪತ್ರ ಮೊದಲಾದವುಗಳನ್ನೇ ಸಮರ್ಪಿಸಬೇಕು ಶಾಸ್ತ್ರ ನಿಷಿದ್ಧಗಳಾದ ಪತ್ರ ಮೊದಲಾದವುಗಳನ್ನು ಸಮರ್ಪಿಸಬಾರದು. ಶಾಸ್ತ್ರದಲ್ಲಿ ನಿಷಿದ್ಧಗಳಾದ ಪತ್ರಾದಿಗಳ ಸಮರ್ಪಣೆಯು ಅಪರಾಧವೇ, ಎಂದು ವಾರಾಹಪುರಾಣಾದಿಗಳಲ್ಲಿ ಹೇಳಿದೆ ಪರಮಭಕ್ತಿಯಿಂದಲೇ ನಾನು ಸಂತೋಷವನ್ನು ಹೊಂದತಕ್ಕವನು (೨) ಭಕ್ತರಿಗೆ ಪ್ರಿಯನೂ, ಸಕಲ ಜನರಿಂದ ನಮಸ್ಕರಿಸಲ್ಪಟ್ಟವನೂ, ಆದ ಶ್ರೀಹರಿಯನ್ನು (ನಮಸ್ಕರಿಸುತ್ತೇನೆ) ಎಂದು ಭಾರತದಲ್ಲಿ ಭಕ್ತಪ್ರಿಯತ್ವವನ್ನು ಹೇಳಿದ್ದಾರೆ (೩) ಶ್ರೀಪರಮಾತ್ಮನಲ್ಲಿ ನಿರವಧಿಕ ಪರಮಭಕ್ತಿಯು, ಎಲ್ಲಾ ಕಡೆಗಳಲ್ಲಿಯೂ ಪರಮಾತ್ಮನು ನಿಯಾಮಕನಾಗಿದ್ದಾನೆಂದು ತಿಳಿದುಕೊಳ್ಳುವುದು ಇಷ್ಟೇ ಈ ಲೋಕದಲ್ಲಿ ಪುರುಷನಿಗೆ ಶ್ರೇಷ್ಠವಾದ ಸ್ವರೂಪಭೂತವಾದ ಆನಂದಾಭಿವ್ಯಕ್ತಿರೂಪವಾದ ಮೋಕ್ಷವನ್ನು ಸಂಪಾದಿಸುವುದರಲ್ಲಿ ಉಪಾಯವು, ಎಂದು ಸ್ಮೃತವಾಗಿದೆ ॥ ೨೬ ॥

ಪೀ—ಭಕ್ತಿಪೂರ್ವಕವಾಗಿ ಕೊಟ್ಟದ್ದು ಅತ್ಯಲ್ಪವಾದುದಾಗ್ಲೂ ನನಗೆ ಪ್ರೀತಿಯನ್ನು ಹೊಂದಿಸಿಕೊಡುತ್ತದೆ ಆದಕಾರಣ ನೀನೂ ಕೂಡ ಭಕ್ತಿಯಿಂದ ನೀನು ಮಾಡುವ ಎಲ್ಲಾ ಕರ್ಮಗಳನ್ನು ಸಮರ್ಪಿಸು ಎನ್ನುತ್ತಾರೆ—

ಗೀ ॥ ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ ॥ ೨೭ ॥

ಅ ॥ ಕೌಂತೇಯ=ಅರ್ಜುನನೇ, ತ್ವಂ=ನೀನು, ಯತ್=ಶಾಸ್ತ್ರದಲ್ಲಿ ವಿಹಿತವಾದ ಯಾವ ಕರ್ಮವನ್ನು, ಕರೋಷಿ=ಮಾಡುತ್ತೀಯೋ, ಯತ್=ಯಾವುದು ವಿಹಿತವಾದುದನ್ನು, ಅಶ್ನಾಸಿ=ತಿನ್ನುತ್ತಿಯೋ, ಯತ್=ಯಾವುದನ್ನು, ಜುಹೋಷಿ=ಹೋಮಿಸುತ್ತಿಯೋ, ಯತ್=ಯಾವ ದ್ರವ್ಯಾದಿಗಳನ್ನು, ದದಾಸಿ=ಸತ್ಪಾತ್ರದಲ್ಲಿ ದಾನಮಾಡುತ್ತಿಯೋ, ಯತ್=ಯಾವುದನ್ನು, ತಪಸ್ಯಸಿ=ತಪಸ್ಸನ್ನು ಮಾಡುತ್ತಿಯೋ, ತತ್=ಅವೆಲ್ಲವನ್ನು, ಮದರ್ಪಣಂ=ನನಗೆ ಸಮರ್ಪಣೆಯನ್ನು, ಕುರುಷ್ವ=ಮಾಡು, (ಅಂತೂ ಶಾಸ್ತ್ರಗಳಲ್ಲಿ ನಿಷಿದ್ಧವಾದವುಗಳನ್ನು ಮಾಡುವುದರಿಂದ ಪಾಪವು ಬರುವುದರಿಂದ ಶಾಸ್ತ್ರಗಳಲ್ಲಿ ವಿಹಿತಗಳಾದ ಎಲ್ಲಾ ಕರ್ಮಗಳನ್ನು ಮಾಡಿ ನನ್ನಲ್ಲಿಯೇ ಸಮರ್ಪಿಸು) ॥ ೨೭ ॥

ಗೀ ॥ ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ ।
ಸನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ ॥ ೨೮ ॥

ಅ ॥ ಏವಂ=ಹಿಂದೆ ಹೇಳಿದ ಪ್ರಕಾರ, ಎಲ್ಲಾ ಕರ್ಮ ಮೊದಲಾದವುಗಳನ್ನು ನನ್ನಲ್ಲಿಯೇ ಅರ್ಪಣ ಮಾಡಿದರೆ ಶುಭಾಶುಭಫಲೈಃ=ಶುಭ ಅಶುಭ ಫಲಗಳನ್ನು ಕೊಡುವ, ಕರ್ಮಬಂಧನೈಃ=ಕರ್ಮಬಂಧಗಳಿಂದ, (ಸಂಸಾರಬಂಧಕಗಳಾದ ಕರ್ಮಗಳಿಂದ) ಮೋಕ್ಷ್ಯಸೇ=ಬಿಡುಗಡೆ ಹೊಂದುವಿ. (ಅದನ್ನೇ ವಿವರಿಸುತ್ತಾರೆ—) ಸನ್ಯಾಸಯೋಗಮುಕ್ತಾತ್ಮಾ=ಕಾಮ್ಯಕರ್ಮಗಳನ್ನು ಮಾಡದೆ ಇರುವುದು, ಅಕಾಮ್ಯಕರ್ಮಗಳನ್ನು ಮಾಡುವುದು, ಇವುಗಳಿಂದ ಯುಕ್ತವಾದ ಮನಸ್ಸುಳ್ಳವನಾಗಿ, ವಿಮುಕ್ತಃ=ಸಂಸಾರಬಂಧದಿಂದ ಬಿಡುಗಡೆ ಹೊಂದಿದವನಾಗಿ, ಮಾಂ=ನನ್ನನ್ನು, ಉಪೈಷ್ಯಸಿ=ಹೊಂದುವಿ ॥೨೮॥

ಭಾ ॥ ಅತೋ ಯತ್ಕರೋಷಿ ॥ ೨೭,೨೮ ॥

ಅ ॥ ನಾನು ಭಕ್ತಿಯಿಂದಲೇ ಸಂತೋಷವನ್ನು ಹೊಂದತಕ್ಕವನಾದುದರಿಂದ ಸಮಸ್ತ ಕರ್ಮಗಳನ್ನು ಮಾಡುವಾಗಲೂ ಭಕ್ತಿಯೇ ಆವಶ್ಯಕವಾದ ಕಾರಣ ಯತ್ಕರೋಷಿ ಇತ್ಯಾದಿಗಳಿಂದ ಯಜ್ಞ ಆಶನಾದಿ ಕ್ರಿಯಾವಿಶೇಷಗಳನ್ನು ಭಕ್ತಿಪೂರ್ವಕವಾಗಿಯೇ ಶ್ರೀಹರಿಯಲ್ಲಿ ಅರ್ಪಣ ಮಾಡಬೇಕೆಂದು ವಿಶೇಷವಾಗಿಯೂ ಹೇಳುತ್ತಾರೆ ॥ ೨೭, ೨೮ ॥

ಪೀ—ಶ್ರೀಪರಮಾತ್ಮನೇ ಸಮಸ್ತ ಯಜ್ಞಾದಿಗಳನ್ನು ಭುಜಿಸುವವನೆಂದಾದರೆ ತ್ರೈವಿದ್ಯರಿಗೂ ಭಗವದ್ಭಕ್ತರಿಗೂ ಬೇರೆಬೇರೆ ಫಲವು ಆಗದೆ ಹೋಗುವುದೆಂಬುವ ಶಂಕೆಯನ್ನು ತ್ರೈವಿದ್ಯಾಃ ಎಂಬುವುದರಿಂದ ಪರಿಹರಿಸಿ ಯೇಽಪಿ ಎಂಬುವುದರಿಂದ ಪರಿಹಾರವನ್ನು ವಿವರಿಸಿದರು. ಅದರಲ್ಲಿ ತ್ರೈವಿದ್ಯರಿಗೂ ಭಗವದ್ಭಕ್ತರಿಗೂ ಬೇರೆಬೇರೆ ಫಲವೆಂಬುವುದನ್ನು ಸ್ಪಷ್ಟವಾಗಿ ಹೇಳುತ್ತಾರೆ—

ತಾ ॥ (೧) ಅನನ್ಯದೇವತಾಯಾಗಾದ್ಭಕ್ತ್ಯೇಕಾದಕಾಮನಾತ್ । ಸದಾಯೋಗಾಚ್ಚ ವೈಶಿಷ್ಟ್ಯಂ ತ್ರೈವಿದ್ಯಾದ್ವೈಷ್ಣವಾದಪಿ । ಸ್ಯಾದ್ಧಿ ಭಾಗವತಸ್ಯೈವ ॥ (೨) ತೇನ ಬ್ರಹ್ಮಾದಯೋಽಖಿಲಾಃ । ಅಶ್ವಮೇಧಾದಿಭಿರ್ಯಜ್ಞೈರಪಿ ಕೇಶವಯಾಜಿನಃ ॥ (೩) ವೈಷ್ಣವಾ ಇತಿ ಬುದ್ಧ್ಯೈವ ಮಾನಯಂತ್ಯನ್ಯದೇವತಾ ಇತ್ಯಾಗ್ನೇಯೇ ॥ ೧ ॥

ಅ ॥ (೧) ಬ್ರಹ್ಮರುದ್ರಾದಿ ದೇವತೆಗಳು ಸರ್ವೋತ್ತಮರಲ್ಲ, ಶ್ರೀಹರಿಯ ಪರಿವಾರಭೂತರು, ಶ್ರೀಹರಿಯೇ ಸರ್ವೋತ್ತಮನು, ಎಂದು ತಿಳಿದು ಶ್ರೀಪರಮಾತ್ಮನ ಪ್ರೀತಿಗಾಗಿ ಯಾಗ ಪೂಜಾದಿಗಳನ್ನು

ಮಾಡುವುದರಿಂದಲೂ, ಪರಮಭಕ್ತಿಯಿಂದ ಶ್ರೀ ಹರಿಯನ್ನೇ ಉಪಾಸನೆಮಾಡುವುದರಿಂದಲೂ ಫಲೇಚ್ಛೆಯನ್ನು ತೊರೆದು ಶ್ರೀಹರಿಯನ್ನೇ ಉಪಾಸನೆ ಮಾಡುವುದರಿಂದಲೂ ಸರ್ವದಾ ಎಲ್ಲಾ ಕರ್ಮಗಳನ್ನು ಮಾಡುವಾಗಲೂ ಶ್ರೀ ಹರಿಯಸ್ಮರಣೋದ್ದೇಶಾದಿರೂಪ ಯೋಗವಿದ್ದುದರಿಂದಲೂ, ಭಗವದ್ಭಕ್ತನಾದವನಿಗೇನೇ ವಿಷ್ಣುಭಕ್ತನಾದ ತ್ರೈವಿದ್ಯನಿಗಿಂತಲೂ (ಅಂದರೆ ತ್ರೈವಿದ್ಯನೂ ಶ್ರೀ ಪರಮಾತ್ಮನನ್ನು ದ್ವೇಶಿಸಿ ಪೂಜಿಸುವವನಾದಾಗ್ಯೂ ಅವನಿಗಿಂತಲೂ) ಉತ್ತಮತ್ವವು (ಹೆಚ್ಚು ಫಲ ಸಿಗುವುದು) (೨) ಭಗವದ್ಭಕ್ತರಿಗೂ ತ್ರೈವಿದ್ಯರಿಗೂ ಭಗವದ್ವಿಷಯಕ ಯಜ್ಞಾದಿಗಳಲ್ಲಿ ವ್ಯತ್ಯಾಸವಿಲ್ಲದಿದ್ದರೂ ಹಿಂದೆ ಹೇಳಿದ ಅನನ್ಯದೇವತಾಯಾಜಿತ್ವ ಮೊದಲಾದ ಸಾಧನವಿಶೇಷಗಳಿಂದಲೇ ತ್ರೈವಿದ್ಯನಿಗಿಂತಲೂ ಭಗವದ್ಭಕ್ತನಿಗೇನೇ ಫಲಾಧಿಕ್ಯವಿದ್ದುದರಿಂದಲೇ ಬ್ರಹ್ಮರುದ್ರಮೊದಲಾದ ಎಲ್ಲಾ ದೇವತೆಗಳೂ (ಕೃತಯುಗದಲ್ಲಿದ್ದ ಎಲ್ಲಾ ಭಗವದ್ಭಕ್ತರೂ ಕೂಡ ಇಂದ್ರಾದಿ ಎಲ್ಲಾ ನಾಮಗಳಿಲ್ಲವೂ ಕೇವಲ ಭಗವದ್ವಾಚಕಗಳೇ ಎಂದನುಸಂಧಾನ ಮಾಡಿಕೊಂಡು) ಅಶ್ವಮೇಧಮೊದಲಾದ ಯಜ್ಞಗಳಿಗೂ ಶ್ರೀ ಪರಮಾತ್ಮನೇ ಮುಖ್ಯ ಉದ್ದೇಶ್ಯ ದೇವತೆಯೆಂದು ಆ ಯಜ್ಞಗಳಿಂದ ಶ್ರೀ ಪರಮಾತ್ಮನನ್ನೇ ಪೂಜಿಸುತ್ತಿದ್ದರು ಇತರ ದೇವತೆಗಳು ಶ್ರೀ ಪರಮಾತ್ಮನ ಭಕ್ತರೆಂಬುವ ಬುದ್ಧಿಯಿಂದಲೇ ಆ ಬ್ರಹ್ಮಾದಿಗಳನ್ನು ಮಾನನಾಮಾಡುತ್ತಿದ್ದರು. ಆ ಬ್ರಹ್ಮರುದ್ರಾದಿಗಳನ್ನು ಮುಖ್ಯ ಉದ್ದೇಶ್ಯ ದೇವತೆಗಳೆಂಬ ಭಾವನೆಯಿಂದ ಪೂಜಿಸುತ್ತಿರಲಿಲ್ಲ, ಎಂದು ಆಗ್ನೇಯಪುರಾಣದಲ್ಲಿ ಹೇಳಿದೆ ॥ ೧ ॥

ಪೀ – ೨೨ನೇ ಶ್ಲೋಕದಲ್ಲಿದ್ದ ಪರ್ಯುಪಾಸನಾಶಬ್ದಾರ್ಥವನ್ನು ಹೇಳುತ್ತಾರೆ –

ತಾ ॥ (೧) ಸಮ್ಯಗ್ಜ್ಞಾನಗಣಜ್ಞಾನಾದುಪಾಸಾ ಪರ್ಯುಪಾಸನೇತಿ ಚ ॥ (೨) ಮಾಮಿಷ್ಟ್ವಾ ಸ್ವರ್ಗಪ್ರಾರ್ಥಯೆಂತ ಇತ್ಯುಕ್ತತ್ವಾಜ್ಞಾನಂತೋಽಪಿ ನಾಭಿತೋ ಜಾನಂತಿ ತತ್ತ್ವೇನ ॥ (೩) ಸರ್ವದೇವವರತ್ವೇನ ಯೋ ನ ಜಾನಾತಿ ಕೇಶವಂ । ತಸ್ಯ ಪುಣ್ಯಾನಿ ಮೋಘಾನಿ ಯಾತಿ ಚಾಂಧಂ ತಮೋ ಧ್ರುವಮಿತಿ ಚ ॥ (೪) ಮೋಘಾಶಾ ಮೋಘಕರ್ಮಾಣ ಇತ್ಯುಕ್ತತ್ವಾಚ್ಚ ನ ಕೇವಲಾಜ್ಞವಿಷಯಂ ಮಿಥ್ಯಾಜ್ಞಾನವಿಷಯಂ ವಾ ಚ್ಯವಂತಿ ತ ಇತ್ಯಾದಿ ।' (೫)ಅತಃ ಸರ್ವಾಧಿಕ್ಯಂ ವಿಷ್ಣೋರ್ಜ್ಞಾತ್ವಾಽಪಿ ಬ್ರಹ್ಮಾದೀನಾಂ ತತ್ಪರಿವಾರತ್ವಾದಿಕಮಜಾನತಾಮಿದಂ ಫಲಂ ॥ ೨ ॥ ॥ ೨೦—೨೪ ॥

ಅ ॥ (೧) ಜೆನ್ನಾಗಿ ಶಾಸ್ತ್ರಗಳಲ್ಲಿ ಹೇಳಿದ ಪ್ರಕಾರ ಶ್ರೀ ಪರಮಾತ್ಮನ ಗುಣಗಳ ಸಮೂಹವನ್ನು ತಿಳಿದುಕೊಂಡು ಮಾಡುವ ಉಪಾಸನೆಯು **ಪರ್ಯುಪಾಸನಾ** ಎನಿಸುತ್ತದೆ (೨) **ಮಾಮಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯಂತೇ** ಎಂದು ತ್ರೈವಿದ್ಯರಿಗೆ ಸ್ವರ್ಗಪ್ರಾರ್ಥನೆಯನ್ನು ಹೇಳಿದ್ರಿಂದ ರಾಜನಿಗೆ ಪ್ರಜೆಗಳಿಂದ ಶ್ರೇಷ್ಠತ್ವವಿದ್ದಂತೆಯೇ ಶ್ರೀ ಪರಮಾತ್ಮನಿಗೆ ಬ್ರಹ್ಮರುದ್ರಾದಿ ದೇವತೆಗಳಿಂದ ಶ್ರೇಷ್ಠತ್ವವನ್ನು ತಿಳಿದವರಾದಾಗ್ಯೂ ಶ್ರೀ ಪರಮಾತ್ಮನು ಸರ್ವಸ್ವತಂತ್ರನು, ಸರ್ವಗುಣಪರಿಪೂರ್ಣನು ಬ್ರಹ್ಮರುದ್ರಾದಿ ದೇವತೆಗಳು ಶ್ರೀಹರಿಯ ಶ್ರೀಪರಿವಾರಭೂತರು ಶ್ರೀಪರಮಾತ್ಮನ ಅಧೀನರಾಗಿಯೇ ಇರುವವರು, ಇತ್ಯಾದಿಗಳನ್ನು ಸಂಪೂರ್ಣ ಜೆನ್ನಾಗಿ ತಿಳಿಯದೆ ಇದ್ದುದರಿಂದ **ತತ್ತ್ವೇನ ನಾಭಿಜಾನಂತಿ** ಎಂದು ಹೇಳಿದ್ದು (ಹೊರತು ತ್ರೈವಿದ್ಯರುಸರ್ವಥಾ ಅಜ್ಞಾನಿಗಳೂ ಅಲ್ಲ ಮಿಥ್ಯಾಜ್ಞಾನಿಗಳೂ ಅಲ್ಲ) (ಏತಕ್ಕೆ ಹೀಗೆ ಅರ್ಥವನ್ನು ಕಲ್ಪಿಸಬೇಕು ಎಂದರೆ–) ತ್ರೈವಿದ್ಯಾ ಮಾಂ. **ಪ್ರಾರ್ಥಯಂತೇ** ಎಂದು ತ್ರೈವಿದ್ಯರು ಕೊನೆಗೆ ಎಲ್ಲವನ್ನೂ ಶ್ರೀ ಹರಿಗೆ ಸಮರ್ಪಿಸುತ್ತಾ ವಿಷ್ಣೂದ್ದೇಶ್ಯಕವಾದ ಯಾಗ, ಶ್ರೀ ವಿಷ್ಣುವಿನ ಪ್ರಾರ್ಥನೆಯನ್ನೂ ಮಾಡುತ್ತಾರೆ ಎಂದು ಹೇಳಿದ್ದಾರೆ ಶ್ರೀ ಪರಮಾತ್ಮನು ಸಮಸ್ತ ದೇವತೆಗಳಿಗಿಂತ ಶ್ರೇಷ್ಠನೆಂದು ತ್ರೈವಿದ್ಯರು ತಿಳಿಯದಿದ್ದರೆ ಶ್ರೀ ಹರಿಯ ಪ್ರಾರ್ಥನಾದಿಗಳನ್ನು ಮಾಡಿದ್ದು ಕೂಡದೆಹೋಗುವುದು (೩) ಯಾವನು ಶ್ರೀಪರ

ಮಾತ್ರ ನನ್ನು ಸಮಸ್ತ ದೇವತೆಗಳಿಗಿಂತಲೂ ಶ್ರೇಷ್ಠನೆಂದು ತಿಳಿಯುವುದಿಲ್ಲವೋ, ಅವನು ಮಾಡುವ ಎಲ್ಲ ಪುಣ್ಯಕರ್ಮಗಳೂ ವ್ಯರ್ಥಗಳೇ ನಿಶ್ಚಯವಾಗಿಯೂ ಅಂಧಂತಮಸ್ಸನ್ನು ಹೊಂದುತ್ತಾನೆ (೪) (ಅಜ್ಞರು ಮಾಡತಕ್ಕ ಯಜ್ಞಾದಿ ಕರ್ಮಗಳು ವ್ಯರ್ಥಗಳು ಮತ್ತು ಮಿಥ್ಯಾಜ್ಞಾನಿಗಳು ಮಾಡತಕ್ಕ ಯಜ್ಞಾದಿ ಕರ್ಮಗಳಿಗೆ ವಿಪರೀತಫಲಗಳು ಬರುತ್ತವೆಂದು ಹೇಳಿದ್ರಿಂದ) ಮೋಘಾಶಾಃ ಎಂಬುವುದರಿಂದ ವಿಪರೀತ ಜ್ಞಾನಿಗಳು ಮಾಡುವ ಕರ್ಮಗಳು ವ್ಯರ್ಥಗಳೆಂದು ಹೇಳಿದ ಕಾರಣ ಸ್ವರ್ಗಭೋಗಾನಂತರದಲ್ಲಿ ಭೂಲೋಕಕ್ಕೆ ಅಜ್ಞರು ಬರುತ್ತಾರೆ ಮಿಥ್ಯಾಜ್ಞಾನಿಯಾದರೆ ಅಂಧಂತಮಸ್ಸನ್ನು ಹೊಂದುತ್ತಾನೆ (೫) ಆದಕಾರಣ ಶ್ರೀವಿಷ್ಣುವೇ ಸರ್ವೋತ್ತಮನೆಂದು ತಿಳಿದರೂ ಬ್ರಹ್ಮರುದ್ರಾದಿಗಳು ಶ್ರೀವಿಷ್ಣುವಿನ ಪರಿವಾರಭೂತರು ಸೇವಕರು ಇತ್ಯಾದಿಗಳನ್ನು ಚೆನ್ನಾಗಿ ತಿಳಿಯದವರಿಗೆ ಹಿಂದೆ ಹೇಳಿದ ಸ್ವರ್ಗದಿಂದ ಭೂಲೋಕಪ್ರಾಪ್ತಿ ರೂಪ ಫಲವು ॥ ೨ ॥ ॥ ೨೦—೨೪ ॥

ಗೀ॥ ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಂ॥೨೯॥

ಅ ॥ ಅಹಂ = ನಾನು, ಸರ್ವಭೂತೇಷು = ಸಮಸ್ತಪ್ರಾಣಿಗಳಲ್ಲಿಯೂ, ಸಮಃ = ಸಮನು (ವೈಷಮ್ಯಾದಿಗಳುಳ್ಳವನಲ್ಲ.) (ಸಮನೆಂಬುವುದನ್ನು ವಿವರಿಸುತ್ತಾರೆ-) ಮೇ = ನನಗೆ ದ್ವೇಷ್ಯಃ = ಅವರವರು ಮಾಡಿದ ದ್ವೇಷಕ್ಕಿಂತ ಹೆಚ್ಚಿಗೆ ದ್ವೇಷಕ್ಕೆ ಪಾತ್ರನು, ನ ಅಸ್ತಿ = ಇಲ್ಲ ಪ್ರಿಯಃ = ಅವರವರು ಮಾಡಿದ ಭಕ್ತಿಗಿಂತ ಹೆಚ್ಚು ಪ್ರೀತಿಪಾತ್ರನೂ, ನ = ಇಲ್ಲ ಅಂದರೆ (ಅವರವರ ದ್ವೇಷಭಕ್ತಿಗಳನ್ನನುಸರಿಸಿ ಅವುಗಳಿಗೆ ಸದೃಶವಾದ ಫಲವನ್ನೇ ಕೊಡುವೆನು ಆದಕಾರಣ ನಾನು ಸಮನು) ಯೇ = ಯಾವ ಭಕ್ತರು, ಮಾಂ = ನನ್ನನ್ನು, ಭಕ್ತ್ಯಾ = ಸುದೃಢಸ್ನೇಹದಿಂದ, ಭಜಂತಿ = ಸೇವಿಸುತ್ತಾರೋ, ತೇ = ಅವರು ಮಯಿ = ನನ್ನ ಅಧೀನರೆಂದು ಜ್ಞಾನವುಳ್ಳವರಾಗುತ್ತಾರೆ ಚ = ಮತ್ತು, ಅಹಂ = ನಾನು, ತೇಷು ಅಪಿ = ಭಕ್ತರ ವಶನಾಗಿ ಭಕ್ತರಿಗೆ ಅನುಗ್ರಹಮಾಡುತ್ತಿರುತ್ತೇನೆ ಅಥವಾ ಸರ್ವಪ್ರಾಣಿಗಳಲ್ಲಿ ನನಗೆ ಭಕ್ತನಾದವನು ದ್ವೇಷ್ಯನಾಗುವುದಿಲ್ಲ ಅಭಕ್ತನು ನನಗೆ ಪ್ರೀತಿಪಾತ್ರನೂ ಆಗುವುದಿಲ್ಲ ಆದಕಾರಣ ಸಮನು ನಾನು ಭಕ್ತರಲ್ಲಿ ದ್ವೇಷವನ್ನು ಅಭಕ್ತರಲ್ಲಿ ಪ್ರೀತಿಯನ್ನು ಮಾಡಿದರೇನೇ ವಿಷಮನಾಗುವೆನು ಹೀಗೆ ಇಲ್ಲವಷ್ಟೆ ಅವರವರ ಭಕ್ತಿಯನ್ನು ಅನುಸರಿಸಿಯೇ ಫಲವನ್ನು ಕೊಡುವವನು, ನನ್ನ ಲ್ಲಿಪ್ರೀತಿ ಮಾಡುವವರಿಗೆ ಅನುಗ್ರಹ ಮಾಡುತ್ತಿರುತ್ತೇನೆ ॥ ೨೯ ॥

ಭಾ ॥ (೧) ತರ್ಹಿ ಸ್ನೇಹಾದಿಮತ್ತ್ವಾದಲ್ಪಭಕ್ತಸ್ಯಾಪಿ ಕಸ್ಯಚಿದ್ಬಹುಫಲಂ ದದಾಸಿ । ವಿಪರೀತಸ್ಯಾಪಿ ಕಸ್ಯಚಿದ್ವಿಪರೀತಮಿತ್ಯತ ಆಹ । ಸಮೋಽಹಮಿತಿ ॥ (೨) ತರ್ಹಿ ನ ಭಕ್ತಿಃ ಪ್ರಯೋಜನಮಿತ್ಯತ ಆಹ । ಯೇ ಭಜಂತೀತಿ ॥ (೩) ಮಯಿ ತೇ ತೇಷು ಚಾಪ್ಯಹಮಿತಿ ಮಮ ತೇ ವಶಾಸ್ತೇಷಾಮಹಂ ವಶ ಇತಿ ॥ (೪) ಉಕ್ತಂ ಚ ಪ್ಸಿಂಗಿಖಿಲೇಷು ಯೇ ವೈ ಭಜಂತೇ ಪರಮಂ ಪುಮಾಂಸಂ ತೇಷಾಂ ವಶಃ ಸ ತು ತೇ ತದ್ವಶಾಶ್ಚೇತಿ ॥ (೫) ತದ್ವಶಾ ಏವ ತೇ ಸರ್ವೇ ಸರ್ವದಾ । ತಥಾಽಪಿ ಬುದ್ಧಿಪೂರ್ವಕತ್ವಾಬುದ್ಧಿಪೂರ್ವಕತ್ವೇನ ಭೇದಃ । ಉದ್ಧವಾದಿವಚ್ಛಿಶುಪಾಲಾದಿವಚ್ಚ ॥ (೬) ತಚ್ಚೋಕ್ತಂ ತತ್ರೈವ ಅಬುದ್ಧಿಪೂರ್ವಂ ಯೋಽವಶಸ್ತಸ್ಯ ಧ್ಯಾನಾತ್ಪುನರ್ಜಶೋ ಭವತೇ ಬುದ್ಧಿಪೂರ್ವಮಿತಿ ॥ ೨೯ ॥

ಆ ॥ (೧) **ಭಕ್ತ್ಯುಪಹೃತಮಶ್ನಾಮಿ** ಎಂದು ಹೇಳಿದ ಪ್ರಕಾರ ಭಕ್ತರಿಗೆ ಪ್ರಿಯನೆಂದಾದರೆ ದ್ವೇಷಿಗಳಿಗೆ ಅಪ್ರಿಯನೆಂದೂ ಆಗುವಿ ಅಂತೂ ಭಕ್ತರಲ್ಲಿ ಸ್ನೇಹವೂ ದ್ವೇಷಿಗಳಲ್ಲಿ ದ್ವೇಷವೂ ಉಳ್ಳವನಾಗಿರುವುದರಿಂದ ಅಲ್ಪ ಭಕ್ತನಾದವನೊಬ್ಬನಿಗೂ ಸುಖರೂಪ ಬಹುಫಲವನ್ನು ಕೊಡುತ್ತಿ ಅತಿ ದ್ವೇಷ ಮಾಡುವವನೊಬ್ಬನಿಗೂ ದುಃಖರೂಪ ಬಹುಫಲವನ್ನು ಕೊಡುತ್ತಿ ಎಂದಾಗುವುದು (ಇದರಿಂದ ನಿನಗೆ ವೈಷಮ್ಯ ನೈರ್ಘೃಣ್ಯಗಳೆಂಬುವ ದೋಷಗಳು ಬರಬೇಕಾಗುವವು) ಎಂದರೆ **ಸಮೋಽಹಂ** ಎಂಬುದರಿಂದ ಸಮಾಧಾನವನ್ನು ಹೇಳುತ್ತಾರೆ (೨) ಹಾಗಾದರೆ— ಭಕ್ತಿಯಿಂದ ಪ್ರಯೋಜನವಿಲ್ಲವೆಂದಾಗುವುದೆಂದರೆ **ಯೇ ಭಜಂತಿ** ಎಂದು ಹೇಳಿರುತ್ತಾರೆ (ಅಂದರೆ ನಿನಗೆ ಪ್ರಿಯನಿಲ್ಲವೆಂದಾದರೆ **ಮೋಕ್ಷರೂಪ** ಪ್ರಯೋಜನಕ್ಕೆ ಭಕ್ತಿಯು ಪ್ರಯೋಜಕವಲ್ಲವೆಂದಾಗುವದು ಏವಂಚ **ಪತ್ರಂ ಪುಷ್ಪಂ** ಇತ್ಯಾದಿಗಳಿಂದ ಭಕ್ತಿಯಿಂದಲೇ ನಾನು ತೃಪ್ತಿಯನ್ನು ಹೊಂದುವವನು ಎಂದು ಭಕ್ತಿಯು ಪ್ರಯೋಜಕವೆಂದು ಹೇಳಿದ್ದು ಅಯುಕ್ತವಾಗುವುದು) (೩) **ಮಯಿ ತೇ ತೇಷು ಚಾಪ್ಯಹಂ** ಎಂಬುವುದಕ್ಕೆ ಆ ಭಕ್ತರು ನನ್ನ ಅಧೀನರು, ಅವರಿಗೆ ನಾನು ಅಧೀನನು (ಅವರಿಗೆ ನಾನು ಅನುಗ್ರಹವನ್ನು ಮಾಡುತ್ತಿರುವೆನು ಎಂದರ್ಥವು.) (೪) (ಹೀಗೆ ಏಕೆ ಅರ್ಥವನ್ನು ಮಾಡಬೇಕೆಂದರೆ–)ಯಾರು ಸರ್ವೋತ್ತಮನಾದ ಪುರುಷನೆನಿಸಿಕೊಂಡ ಶ್ರೀಪರಮಾತ್ಮನನ್ನು ಸೇವಿಸುತ್ತಾರೋ ಅವರಿಗೆ ಆ ಶ್ರೀಪರಮಾತ್ಮನು ಅಧೀನನಾಗಿಯೇ ಇರುವನು ಆ ಭೃತ್ಯರು ನನ್ನ (ಶ್ರೀಹರಿಯ) ಅಧೀನರೇ, ಎಂದು ಪೈಂಗಿಲಿಲ ಗ್ರಂಥಗಳಲ್ಲಿ ಹೇಳಿದೆ (೫) ಯದ್ಯಪಿ ಎಲ್ಲಾ ಪ್ರಾಣಿಗಳೂ ಸರ್ವದಾ ಶ್ರೀಪರಮಾತ್ಮನ ಅಧೀನರಾಗಿಯೇ ಇರುತ್ತಾರೆ ಆದರೂ ಉದ್ಧವಾದಿಗಳಂತೆ ಶ್ರೀಪರಮಾತ್ಮನ ಮುಖ್ಯ ಭಕ್ತರು ಸರ್ವರೂ ಪರಮಾತ್ಮನ ಅಧೀನರು ಅವನ ಪರಿವಾರರು, ಎಂದು ತಿಳಿದುಕೊಂಡಿದ್ದರೂ ಶಿಶುಪಾಲಾದಿಗಳಂತೆ ಅಭಕ್ತರು ಸರ್ವರೂ ಶ್ರೀಪರಮಾತ್ಮನ ಭೃತ್ಯರಲ್ಲ ಅವನ ಅಧೀನರಲ್ಲ, ಎಂದು ತಿಳಿದುಕೊಂಡಿದ್ದಾರೆ ಹೀಗೆ ಬುದ್ಧಿಪೂರ್ವಕತ್ವೇನ ಅಬುದ್ಧಿಪೂರ್ವಕತ್ವೇನ ಭೇದವು ಅಂದರೆ ಭಕ್ತರು ಸರ್ವರೂ ಶ್ರೀಹರಿಯ ವಶರೆಂದು ತಿಳಿದುಕೊಳ್ಳುತ್ತಿದ್ದಾರೆ ಇತರರು ಹಾಗೆ ತಿಳಿದುಕೊಳ್ಳುವುದಿಲ್ಲ, ಹೀಗೆ ಭೇದವು (ಯಾರು ಬುದ್ಧಿಯಿಲ್ಲದೆ ತಾನು ಶ್ರೀಹರಿಯ ವಶನೆಂದು ತಿಳಿದುಕೊಳ್ಳಲಿಲ್ಲವೋ ಅವನು ಶ್ರೀಹರಿಯ ಧ್ಯಾನದಿಂದ ತಿರುಗಿ ಬುದ್ಧಿಪೂರ್ವಕವಾಗಿ ಶ್ರೀಹರಿಯ ವಶನಾಗುತ್ತಾನೆ) (ನಾನು ಶ್ರೀಹರಿಯ ಅಧೀನನೇ ಎಂದು ತಿಳಿದುಕೊಳ್ಳುತ್ತಾನೆ) (೬) ಯಾರು ಅಬುದ್ಧಿಪೂರ್ವಕವಾಗಿ ಶ್ರೀಹರಿಯ ಅಧೀನನಲ್ಲವೋ (ಶ್ರೀಹರಿಯ ಅಧೀನನೆಂದು ತಿಳಿದುಕೊಳ್ಳಲಿಲ್ಲವೊ)ಅಂತಹವನು ಆ ಶ್ರೀಹರಿಯ ಧ್ಯಾನದ ಮಹಿಮೆಯಿಂದ ಪುನಃ ಬುದ್ಧಿಪೂರ್ವಕವಾಗಿ ಶ್ರೀಹರಿಯ ಅಧೀನನಾಗುತ್ತಾನೆ (ಶ್ರೀಹರಿಯ ಅಧೀನನೆಂದು ತಿಳಿದುಕೊಳ್ಳುತ್ತಾನೆ) ಎಂದು ಪೈಂಗಿಲಿಲವೆಂಬುವ ಗ್ರಂಥದಲ್ಲಿಯೇ ಹೇಳಿದೆ ॥ ೯೯ ॥

ಪೀ— ಭಕ್ತನನ್ನು ಕೊಗಳುತ್ತಾರೆ -

ಗೀ ॥ ಅಪಿ ಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥ ೩೦ ॥

ಆ ॥ ಸುದುರಾಚಾರೋಽಪಿ=ಭಗವದ್ಭಕ್ತನಾದವನು ಯಾವನಾದರೊಬ್ಬನು ದೇವಾಂಶನಾಗಲೀ ಋಷ್ಯಾದಿಗಳಾಗಲೀ ದುರದೃಷ್ಟದಿಂದ ಅತ್ಯಂತ ದುರಾಚಾರವುಳ್ಳವನಾದಾಗ್ಯೂ, ಅನನ್ಯಭಾಕ್= ಬ್ರಹ್ಮರುದ್ರಾದಿಗಳನ್ನು ಸ್ವತಂತ್ರರೆಂದು ಭಜಿಸದಿರುವವನಾಗಿ, ಮಾಂ= ನನ್ನನ್ನು, ಭಜತೇ ಚೇತ್= ಭಜಿಸಿದ ಪಕ್ಷದಲ್ಲಿ ಸಃ= ಚಂದ್ರ ಮತ್ತು ಸೂರ್ಯಾದಿಗಳ ಅಂಶನಾದವನು ಸಮ್ಯಗ್ವ್ಯವಹಿತಃ ಹಿ=ಸಮಾಚೀನವಾದ ಭಗವದ್ವಿಷಯಕ ತತ್ವನಿಶ್ಚಯವುಳ್ಳವನಾದುದರಿಂದ, ಸಾಧುರೇವ= ಸಜ್ಜನ (ಶ್ರೇಷ್ಠ) ನೆಂದೇ ಮಂತವ್ಯಃ= ತಿಳಿಯಬೇಕು ॥ ೩೦ ॥

ಭಾ ॥ ನ ಭವತ್ಯೇವ ಪ್ರಾಯಸ್ತದ್ಭಕ್ತೋ ದುರಾಚಾರಸ್ತಥಾಽಪಿ ಬಹುಪುಣ್ಯೇನ ಯದಿ ಕಥಂಚಿದ್ಭವತಿ ತರ್ಹಿ ಸ ಸಾಧುರೇವ ಮಂತವ್ಯಃ ॥ ೩೦ ॥

ಅ ॥ ವಿಷ್ಣುಭಕ್ತನಾದವನು ಪ್ರಾಯಶಃ ಅತ್ಯಂತ ದುರಾಚಾರವುಳ್ಳವನಾಗುವುದೇ ಇಲ್ಲ. ಆದರೂ ತನ್ನ ಯೋಗ್ಯತೆಗಿಂತ ಹೆಚ್ಚು ಸಂಪಾದಿತವಾದ ಪುಣ್ಯವಿದ್ದರೆ ಆದರ ಹ್ರಾಸಕ್ಕಾಗಿ **ಸ್ವಾಧಿಕಾರಾಧಿಕೋ ಯತ್ನಃ ಕಥಂ ಚಿನ್ನೋಪಪದ್ಯತೇ । ಕಥಂಚಿದಧಿಕೇ ಯತ್ನೇ ದೋಷಃ ಕಶ್ಚಿತ್ಸನಾಪತೇತ್, ಏಧಮಾನದ್ವಿಟ್** ಇತ್ಯಾದಿ ಹೇಳಿದ ಪ್ರಕಾರ ಕಥಂಚಿತ್ ದುರಾಚಾರವು ಆತನಲ್ಲಿ ಕಂಡರೂ ಆತನು ಸಜ್ಜನನೆಂದೇ ತಿಳಿಯಲ್ಪಡಬೇಕು. ॥ ೩೦ ॥

ಪೀ—ತತ್ವನಿಶ್ಚಯವುಳ್ಳವನಾದರೂ ದುರಾಚಾರಿಯಾದರೆ ಆತನನ್ನು ಸಜ್ಜನನೆಂದು ಏಕೆ ತಿಳಿದುಕೊಳ್ಳಬೇಕೆಂದರೆ—

ಗೀ ॥ ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥ ೩೧ ॥

ಅ ॥ (ದುರಾಚಾರವುಳ್ಳ ಭಗವದ್ವಿಷಯಕ ತತ್ವಜ್ಞಾನವುಳ್ಳವನು) (ದೇವತೆಗಳು, ಅವರ ಅಂಶ ಭೂತರು, ಮತ್ತು ಋಷ್ಯಾದಿಗಳು ಜೆನ್ನಾಗಿ ಭಗವದ್ವಿಷಯಕ ತತ್ವಜ್ಞಾನವುಳ್ಳವರಾದುದರಿಂದ) ಕ್ಷಿಪ್ರಂ= ಶೀಘ್ರವಾಗಿ, ಧರ್ಮಾತ್ಮಾ ಭವತಿ=ಸದ್ಧರ್ಮ ಸದಾಚಾರಗಳಲ್ಲಿಯೇ ಮನಸ್ಸುಳ್ಳವನಾಗುತ್ತಾನೆ ಶಶ್ವತ್ ಶಾಂತಿಂ=ಶಾಶ್ವತವಾದ ಮೋಕ್ಷವನ್ನು, ನಿಗಚ್ಛತಿ=ಜೆನ್ನಾಗಿ ಹೊಂದುತ್ತಾನೆ, ಕೌಂತೇಯ= ಅರ್ಜುನನೇ, ಪ್ರತಿಜಾನೀಹಿ=ಜೆನ್ನಾಗಿ ತಿಳಿದುಕೊಳ್ಳು, ಮೇ=ನನ್ನ, ಭಕ್ತಃ=ಭಕ್ತನಾದವನು (ದುರಾಚಾರವುಳ್ಳವನಾದಾಗ್ಯೂ,) ನ ಪ್ರಣಶ್ಯತಿ=ಸರ್ವಥಾ ನರಕಾದ್ಯನರ್ಥಗಳನ್ನು ಹೊಂದುವುದಿಲ್ಲ (ಇದು ದೇವತೆಗಳು ದೇವಾಂಶ ಸಂಭೂತರು, ಋಷ್ಯಾದಿಗಳು. ಇವರ ವಿಷಯಕವೇ, ಮನುಷ್ಯವಿಷಯಕವಲ್ಲ) ॥ ೩೧ ॥

ಪೀ—**ಭಕ್ತ್ಯುಪಹೃತಂ ಅಶ್ನಾಮಿ** ಎಂದು ಭಕ್ತನಿಗೆ ಪ್ರಿಯನೆಂದು ಹೇಳಿದೆ ಹಾಗಾದರೆ ಅಭಕ್ತರಲ್ಲಿ ಅಪ್ರೀತಿಯು ಬರಬೇಕಾಗುವುದು ಆದರಿಂದ ಶ್ರೀಪರಮಾತ್ಮನಿಗೆ ವೈಷಮ್ಯವು ಬಂದಂತೆ ಆಗುವುದು ಎಂದರೆ **ಸಮೋಽಹಂ** ಎಂದು ಶ್ಲೋಕವು ಹೊರಟಿದೆ ಆದರ ಅರ್ಥವನ್ನು ಸ್ಪಷ್ಟವಾಗಿ ಹೇಳುತ್ತಾರೆ—

ತಾ ॥ ನಾಸ್ಯ ಭಕ್ತೋಽಪಿ ಯೋ ದ್ವೇಷ್ಯೋ ನ ಚಾಭಕ್ತೋಽಪಿ ಯಃ ಪ್ರಿಯಃ । ಕಿಂ ತು ಭಕ್ತ್ಯನುಸಾರೇಣ ಫಲದೋಽತಃ ಸಮೋ ಹರಿರಿತಿ ಪಾದ್ಮೇ । ಪ್ರೀತ್ಯಾ ಮಯಿ ತೇ ॥ ॥ ೨೯,೩೦,೩೧ ॥

ಅ ॥ ಶ್ರೀಹರಿಯ ಭಕ್ತನಾದವನು ಯಾವನೊಬ್ಬನೂ ಶ್ರೀಹರಿಯ ದ್ವೇಷಕ್ಕೆ ಪಾತ್ರನಾದವನು ಇಲ್ಲ. ಅಭಕ್ತನಾದವನು ಯಾವನೊಬ್ಬನೂ, ಶ್ರೀಹರಿಗೆ ಪ್ರಿಯನಾದವನೂ ಇಲ್ಲ ಅಂದರೆ ಅವರವರ ಭಕ್ತಿ ದ್ವೇಷಾನುಸಾರವಾಗಿಯೇ ಶುಭ ಅಶುಭ ಫಲಗಳನ್ನು ಕೊಡುವವನಾದುದರಿಂದ (ಅಂದರೆ ಭಕ್ತರಲ್ಲಿಯೇ ಪ್ರೀತಿಯನ್ನು ಮಾಡುತ್ತೇನೆ ಅಭಕ್ತರಲ್ಲಿಯೇ ಅಪ್ರೀತಿಯನ್ನು ಮಾಡುತ್ತೇನೆ. ಭಕ್ತರಲ್ಲಿ ದ್ವೇಷವನ್ನೂ ಅಭಕ್ತರಲ್ಲಿ ಪ್ರೀತಿಯನ್ನೂ ಮಾಡಿದರೇನೇ ವಿಷಮನಾಗುವೆನು. ಹಾಗೆ ಮಾಡುವುದಿಲ್ಲ) ಆದಕಾರಣ ಶ್ರೀಹರಿಯು ಸಮನೇ (ವಿಷಮನಲ್ಲ) ಭಕ್ತರು ನನ್ನಲ್ಲಿ ಪ್ರೀತಿಯಿಂದ ಇರುತ್ತಾರೆ ॥ ೨೯,೩೦,೩೧ ॥

ಗೀ ॥ ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಂ ॥ ೩೨ ॥

ಅ ॥ ಪಾರ್ಥ = ಅರ್ಜುನನೇ, ಯೇಽಪಿ = ಯಾವ, ಪಾಪಯೋನಯಃ = (ಸ್ವತಃ ಉತ್ತಮವರ್ಣದವರೂ ಕೂಡ) ಪಾಪದಿಂದ ನೀಚಯೋನಿಯಲ್ಲಿ ಹುಟ್ಟಿದವರು, (ಸ್ವತಃ ಪುರುಷರಾದಾಗ್ಯೂ) ಸ್ತ್ರಿಯಃ = (ಪಾಪಕರ್ಮದಿಂದ ಸುದ್ಯುಮ್ನನಿಗೆ ಇಳಾ ಎಂಬುವ ಸ್ತ್ರೀತ್ವವು ಬಂದಂತೆಯೇ) ಸ್ತ್ರೀತ್ವವನ್ನು ಹೊಂದಿದವರು ವೈಶ್ಯಾಃ = ಸ್ವತಃ ಬ್ರಾಹ್ಮಣಾದಿಗಳೂ ಕೂಡ ಪಾಪಕರ್ಮದಿಂದ ವೈಶ್ಯ ಮೊದಲಾದ ನಿಕೃಷ್ಟವರ್ಣ ಭಾವವನ್ನು ಹೊಂದಿದವರು, ತಥಾ = ಹಾಗೆಯೇ, ಶೂದ್ರಾ ಅಪಿ = ಶೂದ್ರತ್ವವನ್ನು ಹೊಂದಿದವರು ಕೂಡ, ಮಾಂ = ನನ್ನನ್ನು, ವ್ಯಪಾಶ್ರಿತ್ಯ = ಆಶ್ರಯಿಸಿಕೊಂಡು, ಸ್ಯುಃ = ನನ್ನಲ್ಲಿ ಭಕ್ತಿಯುಳ್ಳವರು ಆಗುತ್ತಾರೋ, ತೇಽಪಿ = ಅವರೆಲ್ಲರೂ, ಪರಾಂ ಗತಿಂ = ಉತ್ತಮವಾದ ಗತಿಯನ್ನು (ಮೋಕ್ಷನನ್ನ) ಯಾಂತಿ = ಹೊಂದುತ್ತಾರೆ ಹಿ = ನಿಶ್ಚಯವು ॥ ೩೨ ॥

ಗೀ ॥ ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ ।
ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಂ ॥ ೩೩ ॥

ಅ ॥ ಭಕ್ತಾಃ = ಪರಮಾತ್ಮನ ಭಕ್ತರಾದ, ಪುಣ್ಯಾಃ = ಪುಣ್ಯವಂತರು, ಬ್ರಾಹ್ಮಣಾಃ = ಸ್ವರೂಪತಃ ಶೂದ್ರ ಮೊದಲಾದ ಹೀನವರ್ಣದವರಾದಾಗ್ಯೂ ಪುಣ್ಯವಶದಿಂದ ಬ್ರಾಹ್ಮಣರಾಗಿ ಹುಟ್ಟಿದವರೂ, ತಥಾ = ಹಾಗೆಯೇ ರಾಜರ್ಷಯಃ = ರಾಜರಾಗಿಯೂ ಋಷಿಗಳಾಗಿಯೂ ಹುಟ್ಟಿದವರು ಮೋಕ್ಷವನ್ನು ಹೊಂದುತ್ತಾರೆ. ಕಿಂ ಪುನಃ = ಹೀಗೆ ಇರಲು ಪರಮಾತ್ಮನ ಭಕ್ತರಾದವರು ಸ್ವಾಭಾವಿಕರಾದ ಸ್ತ್ರೀವೈಶ್ಯಾದಿಗಳು ಮೋಕ್ಷನನ್ನು ಹೊಂದುತ್ತಾರೆಂದು ಹೇಳತಕ್ಕದ್ದೇನಿದೆ (ಭಕ್ತಿಯು ಸಾಧನಗಳಲ್ಲಿ ಉತ್ತಮವಾಗಿರುವುದರಿಂದಲೇ) ಅನಿತ್ಯಂ = ನಶ್ವರವಾದ, ಅಸುಖಂ = ಸುಖವಿಲ್ಲದ ಇಮಂ = ಭಕ್ತ್ಯಾದಿಗಳಿಗೆ ಸಾಧನವಾದ, ಲೋಕಂ = ಮನುಷ್ಯದೇಹವನ್ನು ಭೂಲೋಕವನ್ನಾಗಲಿ, ಪ್ರಾಪ್ಯ = ಹೊಂದಿ, ಮಾಂ = ನನ್ನನ್ನು ಭಜಸ್ವ = ಶೀಘ್ರವಾಗಿ ಸೇವಿಸು ॥ ೩೩ ॥

ಗೀ ॥ ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ ॥ ೩೪ ॥

ಅ ॥ ಮನ್ಮನಾಃ ಭವ = ನನ್ನಲ್ಲಿಯೇ ಮನಸ್ಸುಳ್ಳವನಾಗು, ಮದ್ಭಕ್ತಃ = ನನ್ನ ಭಕ್ತನಾಗು, ಮದ್ಯಾಜೀ = ನನ್ನನ್ನು ಪೂಜಿಸುವವನಾಗು ಮಾಂ = ನನ್ನನ್ನು, ನಮಸ್ಕುರು = ನಮಸ್ಕರಿಸು, ಏವಂ = ಈ ಪ್ರಕಾರವಾಗಿ ಮತ್ಪರಾಯಣಃ = ನನ್ನನ್ನೇ ಮುಖ್ಯಾಶ್ರಯನನ್ನಾಗಿ ತಿಳಿದುಕೊಂಡು, ಆತ್ಮಾನಂ = ಮನಸ್ಸನ್ನು, ಮಯಿ = ನನ್ನಲ್ಲಿ, ಯುಕ್ತ್ವಾ = ಇರಿಸಿ, ಮಾಮೇವ = ನನ್ನನ್ನೇ, ಏಷ್ಯಸಿ = ಹೊಂದುವಿ. (ಅಂದರೆ ಮೋಕ್ಷವನ್ನು ಹೊಂದುವಿ) ॥ ೩೪ ॥

ಗೀ ॥ ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗ
ಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ರಾಜವಿದ್ಯಾರಾಜಗುಹ್ಯಯೋಗೋ
ನಾಮ ನವಮೋಽಧ್ಯಾಯಃ ॥ ೯ ॥

ಅ ॥ ಹೀಗೆ ಶ್ರೀಮದ್ಭಗವದ್ಗೀತೆಯಲ್ಲಿ ಬ್ರಹ್ಮವಿದ್ಯೆಯಲ್ಲಿ ಯೋಗಶಾಸ್ತ್ರದಲ್ಲಿ ಶ್ರೀಕೃಷ್ಣಾರ್ಜುನರ ಸಂವಾದದಲ್ಲಿ ರಾಜವಿದ್ಯಾರಾಜಗುಹ್ಯಯೋಗವೆಂಬ ಒಂಭತ್ತನೇ ಅಧ್ಯಾಯವು ಮುಗಿಯಿತು. ॥ ೯ ॥

ಭಾ ॥ (೧) ಕುತಃ । ಕ್ಷಿಪ್ರಂ ಭವತಿ ಧರ್ಮಾತ್ಮಾ ॥ (೨) ದೇವದೇವಾಂಶಾದಿಷ್ವೇವಂ ಚೈತದ್ಭವತಿ ॥ (೩) ಉಕ್ತಂ ಚ ಶಾಂಡಿಲ್ಯಶಾಖಾಯಾಂ । ನಾವಿರತೋ ದುಶ್ಚರಿತಾನ್ನಾಭಕ್ತೋ ನಾಸಮಾಹಿತಃ । ಸಮ್ಯಗ್ಭಕ್ತೋ ಭವೇತ್ಕಶ್ಚಿದ್ವಾಸುದೇವೇಽಮಲಾಶಯಃ । ದೇವರ್ಷಯಸ್ತದಂಶಾಶ್ಚ ಭವಂತಿ ಕ್ವ ಚ ಜಾತ್ಯನತ ಇತಿ ॥ (೪) ಅತೋಽನ್ಯಃ ಕಶ್ಚಿದ್ಭವತಿ ಚೇದ್ದಾಂಭಿಕತ್ವೇನ ಸೋಽನುಮೇಯಃ ॥ (೫) ಸಾಧಾರಣಪಾಪಾನಾಂ ತು ಸತ್ಸಂಗಾನ್ಮಹತ್ಯಪಿ ಕಥಂಚಿದ್ಭಕ್ತಿರ್ಭವತಿ । ಸಾಧಾರಣಭಕ್ತಿರ್ವೇತರೇಷಾಂ ॥ (೬) ಸ ಶರಮತಿರುಪಯಾತಿ ಯೋಽರ್ಥತೃಷ್ಣಾಂ ತಮಧಮಚೇಷ್ಟಮವೈಹಿ ನಾಸ್ಯ ಭಕ್ತಮಿತಿ ಹಿ ಶ್ರೀವಿಷ್ಣುಪುರಾಣೇ ॥ ೧ ॥

ಅ ॥ (೧) ಜೆನ್ನಾಗಿ ಭಗವದ್ವಿಷಯಕ ತತ್ವನಿಶ್ಚಯವಿದ್ದರೂ ಅತ್ಯಂತ ದುರಾಚಾರಿಯನ್ನು ಸಜ್ಜನನೆಂದು ಏತಕ್ಕೆ ತಿಳಿದುಕೊಳ್ಳುವುದೆಂದರೆ ಜೆನ್ನಾಗಿ ಯಥಾರ್ಥಜ್ಞಾನವುಳ್ಳವನಾದುದರಿಂದ ಶೀಘ್ರದಲ್ಲಿ ಸದ್ಧರ್ಮಾನುಷ್ಠಾನದಲ್ಲಿ ಮನಸ್ಸುಳ್ಳವನಾಗುತ್ತಾನೆ (೨) ಶ್ರೀಹರಿಯ ಭಕ್ತಿಯೂ ಅತ್ಯಂತ ದುರಾಚಾರವೂ, ಎರಡೂ ಒಟ್ಟಿಗೆ ಸೇರಿದರೆ ಅವನು ಸಜ್ಜನನೆಂದು ಹೇಳಿದ್ದು ಮನುಷ್ಯರಿಗೆ ಸಂಬಂಧಪಟ್ಟದ್ದಲ್ಲ ಮತ್ತೆ § ಚಂದ್ರ ಮೊದಲಾದ ದೇವತೆಗಳೂ, ದೇವತೆಗಳ ಅಂಶಭೂತರಾದ ಸುಗ್ರೀವಾದಿಗಳೂ, ವಿಶ್ವಾಮಿತ್ರಾದಿಋಷಿಗಳೂ ಇವರ ವಿಷಯದಲ್ಲಿಯೇ ಎಂದು ತಿಳಿಯತಕ್ಕದ್ದು (೩) ಈ ವಿಷಯವು ಶಾಂಡಿಲ್ಯ ಶಾಖೆಯಲ್ಲಿ ಹೇಳಿದೆ. ದುರಾಚಾರವನ್ನು ಬಿಡದಿರುವವನು, ಅಂದರೆ ಸದಾ ದುರಾಚಾರವುಳ್ಳವನು, ಮನುಷ್ಯನು ಯಾವನಾದರೊಬ್ಬನು ಸ್ವಚ್ಛಾಂತಃಕರಣವುಳ್ಳವನಾಗಿ ಶ್ರೀಪರಮಾತ್ಮನಲ್ಲಿ ಜೆನ್ನಾಗಿ ಭಕ್ತನಾಗಲಾರನು ಹಾಗೆಯೇ ಅಭಕ್ತನು ಅಂದರೆ **ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ । ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ । ಏವಂ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ ।** ಎಂಬುವ ಭಕ್ತಿಲಿಂಗವಿಲ್ಲದವನು ಯಾವನಾದರೊಬ್ಬನು ಸ್ವಚ್ಛಾಂತಃಕರಣವುಳ್ಳವನಾಗಿ ಶ್ರೀಹರಿಯಲ್ಲಿ ಭಕ್ತನಾಗಲಾರನು ಮತ್ತು ವಿಷಯಗಳಲ್ಲಿಯೇ ಮನಸ್ಸನ್ನು ಇಟ್ಟವನೂ, ಯಾವನಾದರೊಬ್ಬನೂ ಸ್ವಚ್ಛಾಂತಃಕರಣವನ್ನು ಹೊಂದಿ ಶ್ರೀಕೃಷ್ಣನಲ್ಲಿ ಭಕ್ತನಾಗಲಾರನು. ಆದರೆ ದೇವತೆಗಳು ಋಷಿಗಳು ದೇವತೆಗಳ ಅಂಶದಿಂದ ಹುಟ್ಟಿದವರು ಕೆಲವು ಕಡೆ ಹಿಂದೆ ಹೇಳಿದ ಪ್ರಕಾರ ಕದಾಚಿತ್ ದುರಾಚಾರಿಗಳೂ, ಶ್ರವಣ ಕೀರ್ತನ ಮೊದಲಾದ ಭಕ್ತಿಲಿಂಗವಿಲ್ಲದವರೂ ವಿಷಯಗಳಲ್ಲಿಯೇ ಮನಸ್ಸನ್ನು ಇಟ್ಟವರಾದಾಗ್ಯೂ ಶ್ರೀಪರಮಾತ್ಮನ ತತ್ವಜ್ಞಾನವುಳ್ಳವರಾದುದರಿಂದ ಶ್ರೀಪರಮಾತ್ಮನ ಭಕ್ತರೇ ಆಗಿರುತ್ತಾರೆ (೪) **(ಯೇ ಕಂಠಲಗ್ನತುಳಸೀನಲಿನಾಕ್ಷಮಾಲಾ ಯೇ ಬಾಹುಮೂಲಪರಿಚಿಹ್ನಿತಶಂಖಚಕ್ರಾಃ । ಯೇ ವಾ ಲಲಾಟಫಲಕೇ ಋಜವೂರ್ಧ್ವಪುಂಡ್ರಾಸ್ತೇ ವೈಷ್ಣವಾ ಭುವನಮಾಶು ಪವಿತ್ರಯಂತಿ** ಇತ್ಯಾದಿ ಪ್ರಮಾಣಗಳಿಂದ ಶಂಖಚಕ್ರಾದಿ ಚಿಹ್ನೆಗಳನ್ನು ಬಾಹುಮೂಲಗಳಲ್ಲಿ ಧರಿಸಿರುವರು ದೇವಾದಿಗಳಲ್ಲದ ಮನುಷ್ಯರೂ ಕೂಡ ದುರಾಚಾರಿಗಳಾಗಿ ಕಂಡರೂ ಶ್ರೀಹರಿಯ

---

§ ಚಂದ್ರನಿಗೆ ತನಗಿಂತ ಉತ್ತಮವಾದ ಬೃಹಸ್ಪತ್ಯಾಚಾರ್ಯರ ಪತ್ನೀ ಸಂಭೋಗ, ಸುಗ್ರೀವನಿಗೆ ತನ್ನ ಅಗ್ರಜನಾದ ವಾಲಿಯ ಪತ್ನೀಸಂಭೋಗ ವಿಶ್ವಾಮಿತ್ರಋಷಿಗಳಿಗೆ ಮೇನಕಾ ಊರ್ವಶೀ ಎಂಬ ಅಪ್ಸರೆ ಸ್ತ್ರೀಸಂಭೋಗ, ತ್ರಿಶಂಕ್ವಾದ್ಯರಾಜ್ಯರಿಂದ ಯಾಗ ಮಾಡಿಸಿದ್ದು ಇತ್ಯಾದಿರೂಪವಾದ ದುರಾಚಾರವು ಕಂಡದೆ

ಭಕ್ತರಾಗಿಯೇ ಕಾಣುವುದರಿಂದ ದೇವಋಷ್ಯಾದಿಗಳು ಮಾತ್ರ ದುರಾಚಾರಿಗಳಾದರೂ ಹರಿಭಕ್ತರೆಂದು ಹೇಳಿದ್ದು ಹೇಗೆ? ಎಂದರೆ—) ದೇವಋಷ್ಯಾದಿಗಳಲ್ಲದ ಯಾವನಾದರೊಬ್ಬ ಮನುಷ್ಯನು ಅತ್ಯಂತ ದುರಾಚಾರವುಳ್ಳವನೂ ಶ್ರವಣಕೀರ್ತನಾದಿರೂಪ ಭಕ್ತಿಚಿಹ್ನೆಗಳುಳ್ಳವನಾದರೂ, ಅತನು ಡಾಂಭಿಕ (ಶ್ರೀಪರಮಾತ್ಮನ ಅಭಕ್ತ)ನೆಂದು ತಿಳಿಯಬೇಕು (೫) (ತಮ್ಮಿಂದ ಉತ್ತಮ ಸ್ತ್ರೀಯರ ಸಂಭೋಗ, ಹರಿ ಗುರು ಸಚ್ಛಾಸ್ತ್ರಗಳ ನಿಂದಾದಿರೂಪವಾದ ಅತ್ಯಂತ ದುರಾಚಾರವುಳ್ಳವನು ಭಕ್ತನಾಗುವುದು ಬೇಡ ಅಗಮ್ಯಾಗಮನ ಅಭಕ್ಷ್ಯಭಕ್ಷಣ ಮೊದಲಾದ ಮಧ್ಯಮ ದುರಾಚಾರವುಳ್ಳವನು ಶಂಖ ಚಕ್ರ ಮೊದಲಾದ ಭಕ್ತಿಲಿಂಗವುಳ್ಳವನಾದರೆ ಅವನನ್ನು ಹೇಗೆ? ಎಂದರೆ—) ಅಲ್ಪ ಪಾಪಿಷ್ಠರಿಗೆ ಸತ್ಸಹವಾಸದಿಂದ ಕಥಂಚಿತ್ ಮಹಾಭಕ್ತಿಯು ಹುಟ್ಟುತ್ತದೆ (ಅತ್ಯಂತ ದುರಾಚಾರಿಗಳಿಗೂ ಭಗವಂತನಲ್ಲಿಯೇ ಸ್ನೇಹರೂಪ ಭಕ್ತಿಯು ಅನುಭವಸಿದ್ಧವಾಗಿರುವುದರಿಂದ ಡಾಂಭಿಕನು (ಅಭಕ್ತನು) ಎನ್ನುವದು ಹೇಗೆ ಕೂಡುತ್ತದೆ ಎಂದರೆ—) ಅತ್ಯಂತ ದುರಾಚಾರವುಳ್ಳ, ಶ್ರೀಹರಿಯ ಭಕ್ತಿಯುಳ್ಳವರಿಗೆ ಅಲ್ಪ ಭಕ್ತಿಯು ಹುಟ್ಟುತ್ತದೆ (ಮಹಾಭಕ್ತಿಯು ಹುಟ್ಟುವುದಿಲ್ಲವೆಂದು ಭಾವವು) (೬) (ಅತ್ಯಂತ ದುರಾಚಾರವುಳ್ಳವನಾದಾರ್ಯ ಶ್ರವಣಾದಿರೂಪ ಭಕ್ತಿಲಿಂಗವುಳ್ಳವನು ಮಹಾಭಕ್ತನೇ ಆಗಲಿ ಡಾಂಭಿಕನು ಅಂದರೆ ಮಹಾಭಕ್ತಿಯಿಲ್ಲದವನು ಎಂದು ಏಕೆ ಕಲ್ಪಿಸುವುದು ಎಂದರೆ—)ಯಾವನು ವಿಷಯಗಳಲ್ಲಿಯೇ ಆಶೆಯನ್ನು ಮಾಡುತ್ತನೋ, ಅವನು ಡಂಭಬುದ್ಧಿಯುಳ್ಳವನು ಅಂತಹನನ್ನು ಅಧಮವ್ಯಾಪಾರವುಳ್ಳವನನ್ನಾಗಿ ತಿಳಿ. ಇಂತಹವನಿಗೆ ಮಹಾಭಕ್ತಿಯು ಹುಟ್ಟುವುದಿಲ್ಲ ಎಂದು ಶ್ರೀವಿಷ್ಣುಪುರಾಣದಲ್ಲಿ ಹೇಳಿದೆ ॥ ೧ ॥

ಪೀ—ಮಹಾಭಕ್ತಿಯು ದುರಾಚಾರಪರಿಹಾರಕ್ಕೆ ಕಾರಣವೆಂದು ಹೇಳಿದ್ದರಿಂದ ದುರಾಚಾರವೂ ಮಹಾಭಕ್ತಿಯೂ ಎರಡೂ ಏಕತ್ರ ಕೂಡುವುದಿಲ್ಲವೆನ್ನುತ್ತಾರೆ—

ಭಾ ॥ (೧) ಸಾ ಶ್ರದ್ಧಧಾನಸ್ಯ ವಿವರ್ಧಮಾನಾ ವಿರಕ್ತಿಮನ್ಯತ್ರ ಕರೋತಿ ಪುಂಸಾಮಿತಿ ಚ ॥
(೨) ವೇದಾಸ್ತ್ವಧೀತಾ ಮಮ ಲೋಕನಾಥ ತಪ್ತಂ ತಪೋ ನಾನೃತಮುಕ್ತಪೂರ್ವಂ । ಪೂಜಾಂ ಗುರೂಣಾಂ ಸತತಂ ಕರೋಮಿ ವರಸ್ಯ ಗುಹ್ಯಂ ನ ಚ ಭಿನ್ನಪೂರ್ವಂ । ಗುಪ್ತಾನಿ ಚತ್ವಾರಿ ಯಥಾಽಗಮಂ ಮೇ ಶಕ್ತ್ಯಾ ಚ ಮಿತ್ರೇ ಚ ಸಮೋಽಸ್ಮಿ ನಿತ್ಯಂ । ತಂ ಚಾಪಿ ದೇವಂ ಶರಣಂ ಪ್ರಪನ್ನ ಏಕಾಂತಭಾವೇನ ಭಜಾಮ್ಯಜಸ್ರಂ । ಏತೈರ್ವಿಶೇಷೈಃ ಪರಿಶುದ್ಧಸತ್ತ್ವಃ ಕನಾನ್ನ ಪಶ್ಯೇಯಮನಂತಮೇನಮಿತಿ ಮೋಕ್ಷಧರ್ಮೇ ಆಚಾರಸ್ಯ ಸಾಧನತ್ವೋಕ್ತೇರ್ಚ । ಜ್ಞಾನಾಭಾವೇ ಚ ಸಮ್ಯಗ್ಭಕ್ತ್ಯಭಾವಾತ್ ॥
(೩) (1) ತಥಾ ಹಿ ಗೌತಮವಿಲೇಷು । ವಿನಾ ಜ್ಞಾನಂ ಕುತೋ ಭಕ್ತಿಃ ಕುತೋ ಭಕ್ತಂ ವಿನಾ ಚ ತದಿತಿ । (2) ಭಕ್ತಿಃ ಪರೇ ಸ್ವಾನುಭವೋ ವಿರಕ್ತಿರನ್ಯತ್ರ ಚೈತತ್ತ್ರಿಕಮೇಕಕಾಲಮಿತಿ ಭಾಗವತೇ ॥ ೨ ॥ ॥ ೫೧—೩೪ ॥

ಅ ॥ (೧) ಹರಿಭಕ್ತಿಯು ಶ್ರದ್ಧೆಯನ್ನು ಹೊಂದಿರುವ ಪುರುಷನಿಗೆ ವಿಶೇಷವಾಗಿ ಅಭಿವೃದ್ಧಿಯನ್ನು ಹೊಂದಿ ವಿಷಯಗಳಲ್ಲಿ ವಿರಕ್ತಿಯನ್ನುಂಟುಮಾಡುತ್ತದೆ (೨) ಸರ್ವಲೋಕಕ್ಕೆ ಸ್ವಾಮಿಯಾದವನೇ, ನಾನು ವೇದಗಳನ್ನು ವಿಧಿಪೂರ್ವಕವಾಗಿ ಅಧ್ಯಯನಮಾಡಿರುತ್ತೇನೆ, ತಪಸ್ಸನ್ನು ಮಾಡಿದ್ದೇನೆ, ಅನೃತವನ್ನು (ಸುಳ್ಳು ಮಾತನ್ನು) ಯಾವಾಗಲೂ ಹೇಳಲಿಲ್ಲ, ನಿರಂತರದಲ್ಲಿಯೂ ಗುರುಗಳ ಪೂಜೆಯನ್ನು ಮಾಡುತ್ತಿರುತ್ತೇನೆ, ಇನ್ನೊಬ್ಬನ ಗೋಪ್ಯ ವಿಷಯವನ್ನು ರಾಜಾದಿಗಳಲ್ಲಿ ಸೂಚಿಸುವುದಿಲ್ಲ ಉಪಸ್ಥ, ಉದರ, ಪಾಣಿ ವಾಕ್ ಎಂಬೀ ನಾಲ್ಕು ಕರ್ಮೇಂದ್ರಿಯಗಳು ಶಾಸ್ತ್ರಾನುಸಾರ ರಕ್ಷಿಸಲ್ಪಟ್ಟವೆ.

(ಅಂದರೆ (1) **ಉಪಸ್ಥಗುಪ್ತಿ** ಎಂದರೆ ಇತರ ಸ್ತ್ರೀಸಂಪರ್ಕ ಮಾಡದೆ ವಿಹಿತ ಕಾಲದಲ್ಲಿ ತನ್ನ ಪತ್ನಿಯನ್ನು ಸಂತೋಷಗೊಳಿಸುವುದು (2) **ಉದರಗುಪ್ತಿಃ**= ಮಿತಾಹಾರದಿಂದ ಇರುವುದು. (3) **ಬಾಹುಗುಪ್ತಿಃ**=ದ್ಯೂತ, ಸ್ತೇಯ ಪರತಾಡನ ಇವುಗಳನ್ನು ಮಾಡದಿರುವುದು (4) **ವಾಗ್ಗುಪ್ತಿಃ**=ಮಿತವಾದ ವಚನವು. ವ್ಯರ್ಥವಾಗಿ ಮಾತನಾಡದೆ ಇರುವುದು. ನಾನು ಶತ್ರುವಿನಲ್ಲಿಯೂ ಮಿತ್ರನಲ್ಲಿಯೂ ನಿತ್ಯದಲ್ಲಿಯೂ ಸಮನಾಗಿರುತ್ತೇನೆ · ನಿಗೃಹೀತವಾದ ಮನಸ್ಸಿನಿಂದ ಕ್ರೀಡಾದಿ ಗುಣವಿಶಿಷ್ಟನಾದ ರಕ್ಷಕನಾದ ಶ್ರೀಪರಮಾತ್ಮನನ್ನು ಶರಣು ಹೊಂದಿ ನಿರಂತರದಲ್ಲಿಯೂ ಭಜಿಸುತ್ತಿದ್ದೇನೆ ಹಿಂದೆ ಹೇಳಿದ ಸದಾಚಾರ ರೂಪ ಉಪಾಯಗಳಿಂದ ಪರಿಶುದ್ಧವಾದ ಅಂತಃಕರಣವುಳ್ಳವನಾಗಿ ನಾಶವಿಲ್ಲದ ಶ್ರೀಪರಮಾತ್ಮನನ್ನು ಏಕೆ ನೋಡಲಾರೆನು, ಎಂದು ಮೋಕ್ಷಧರ್ಮದಲ್ಲಿ ಸದಾಚಾರವು ಜ್ಞಾನಕ್ಕೆ ಸಾಧನವೆಂದು ಹೇಳಿದೆ ಯಥಾರ್ಥಜ್ಞಾನವು ಇಲ್ಲವಾದರೆ ಸಮ್ಯಕ್ ಭಕ್ತಿಯು ಹುಟ್ಟುವುದಿಲ್ಲ. (೩) (1) ಗೌತಮಮಿಲಗಳಲ್ಲಿ ಹೀಗೆಯೇ ಹೇಳಿದೆ ಮಾಹಾತ್ಮ್ಯಜ್ಞಾನವು ಇಲ್ಲದೆ ಸುದೃಢ ಭಕ್ತಿಯು ಹುಟ್ಟುವುದಿಲ್ಲ. ಭಕ್ತಿಯು ಇಲ್ಲದೆ ಅಪರೋಕ್ಷ ಜ್ಞಾನವು ಹುಟ್ಟುವುದಿಲ್ಲ (2)ಭಕ್ತಿಯು, ಸರ್ವೋತ್ತಮನಾದ ಶ್ರೀಪರಮಾತ್ಮನ ಜ್ಞಾನವಿಶೇಷವು ವಿಷಯಗಳಲ್ಲಿ ವಿರಕ್ತಿಯು ಇವು ಮೂರು ಏಕಕಾಲದಲ್ಲಿರುತ್ತವೆ, ಎಂದು ಭಾಗವತದಲ್ಲಿದೆ. ॥ ೨ ॥ ॥ ೩೧-೩೪ ॥

ಭಾ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ಭಾಷ್ಯೇ ನವಮೋಽಧ್ಯಾಯಃ ॥ ೯ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಶ್ರೀಭಗವದ್ಗೀತಾ ಭಾಷ್ಯದಲ್ಲಿ ಒಂಭತ್ತನೇ ಅಧ್ಯಾಯವು ಮುಗಿಯಿತು ॥ ೯ ॥

ಪೀ—ಸತ್ಪಾಧಿಕಃ ಪುಲ್ಕಸೋಽಪಿ ಯಸ್ತು ಭಾಗವತಸ್ಸದಾ ಇತ್ಯಾದಿ ಪ್ರಮಾಣಗಳಿಂದ ಶ್ರೀಪರಮಾತ್ಮನನ್ನ ಆಶ್ರಯಿಸಿಕೊಂಡಿರುವವರು ಎಲ್ಲರೂ ಪುಣ್ಯವಂತರೇ ಆಗಿರುತ್ತಾರೆ ಆದಕಾರಣ **ಮಾಂ ಹಿ ಪಾರ್ಥ** ಎಂಬುವಲ್ಲಿ ಸ್ತ್ರೀ ವೈಶ್ಯ ಶೂದ್ರರಲ್ಲಿ **ಪಾಪಯೋನಯಃ** ಎಂಬುವ ವಿಶೇಷಣವು ಬ್ರಾಹ್ಮಣ ರಾಜರ್ಷಿಗಳಲ್ಲಿ **ಪುಣ್ಯಾಃ** ಎಂಬುವ ವಿಶೇಷಣವು ಹೇಳಿದ್ದು ಹೇಗೆ ಕೂಡುತ್ತದೆಂದರೆ—

ತಾ ॥ (೧) ಪಾಪಾದಿಕಾರಿತಾಶ್ಚೈವ ಪುಂಸಾಂ ಸ್ವಾಭಾವಿಕಾ ಅಪಿ । ವಿಪ್ರತ್ವಾದ್ಯಾಸ್ತತ್ರ ಪುಣ್ಯಾಃ ಸ್ವಾಭಾವ್ಯಾ ಏವ ಮುಕ್ತಿಗಾಃ ॥ (೨) ಯಾಂತಿ ಸ್ತ್ರೀತ್ವಂ ಪುಮಾಂಸೋಽಪಿ ಪಾಪತಃ ಕಾಮತೋಽಪಿ ವಾ ॥ (೩) ನ ಸ್ತ್ರಿಯೋ ಯಾಂತಿ ಪುಂಸ್ತ್ವಂ ತು ಸ್ವಭಾವಾದೇವ ಯಾಃ ಸ್ತ್ರಿಯಃ ॥ (೪) ಪುಂಸಾ ಸಹೈವ ಪುಂದೇಹೇ (ಹ)ಸ್ಥಿತಿಃ ಸ್ಯಾದ್ವರದಾನತಃ । ತಜ್ಜನ್ಮನಿ ॥ (೫) ವರಾಃ ಪಾಪಜಾತಾಭ್ಯೋ ನಿಜಸಶ್ಚಿಸ್ತ್ರಿಯಃ ॥ (೬) ಸರ್ವೇಷಾಮಪಿ ಜೀವಾನಾಮಂತ್ಯದೇಹೋ ಯಥಾ ನಿಜಃ । ಮುಕ್ತೌ ತು(ಚ) ನಿಜಭಾವಃ ಸ್ಯಾತ್ಕರ್ಮಭೋಗಾಂಸ್ತಥೋಽಪಿ ಚೇತಿ ಭವಿಷ್ಯತ್ಪರ್ವವಚನಾತ್ಪಾಪಯೋನಯಃ ಪುಣ್ಯಾ ಇತಿ ವಿಶೇಷಣಂ ॥ ೩೨,೩೩,೩೪ ॥

ಅ ॥ (೧) ಪುರುಷರಿಗೆ ವಿಪ್ರ ಮೊದಲಾದ ವರ್ಣಗಳು ಸ್ವಾಭಾವಿಕಗಳು ಪಾಪಪುಣ್ಯರೂಪ ಉಪಾಧಿ ನಿಮಿತ್ತಕಗಳಾಗಿಯೂ ಇರುತ್ತವೆ. (ಅಂದರೆ– ಬ್ರಾಹ್ಮಣಾದ್ಯುತ್ತಮವರ್ಣದವರಿಗೆ ಕ್ಷತ್ರಿಯಮೊದಲಾದ ಅಧಮವರ್ಣದ ಪ್ರಾಪ್ತಿಯು ಪಾಪಕರ್ಮದಿಂದ, ಸ್ವತಃ ಶೂದ್ರಮೊದಲಾದ ಅಧಮವರ್ಣದವರಿಗೆ ವೈಶ್ಯ

ಮೊದಲಾದ ಉತ್ತಮವರ್ಣಪ್ರಾಪ್ತಿಯು ಪುಣ್ಯಕರ್ಮದಿಂದ ಆದರಲ್ಲಿ ಸ್ವಾಭಾವಿಕಗಳೇ ಆದ ಬ್ರಾಹ್ಮಣ ತ್ವಾದಿಗಳು ಪುಣ್ಯನಿಮಿತ್ತಕಗಳೆನಿಸುತ್ತವೆ ಮುಕ್ತಿಯಲ್ಲಿ ಉಳಿಯುವ ಬ್ರಾಹ್ಮಣತ್ವಾದಿಗಳು ಸ್ವಾಭಾವಿಕ ಗಳು (೨) (ಹೇಗೆ ಸ್ವತಃ ಬ್ರಾಹ್ಮಣಾದಿಗಳಿಗೆ ಕ್ಷತ್ರಿಯತ್ವಾದಿಗಳು, ಸ್ವತಃ ಕ್ಷತ್ರಿಯಾದಿಗಳಿಗೆ ಬ್ರಾಹ್ಮಣ ತ್ವಾದಿಗಳು ಬರುತ್ತವೋ, ಹಾಗೆಯೇ ಸ್ವಾಭಾವಿಕ ಪುರುಷರಿಗೆ ಪಾಪದಿಂದ ಸ್ತ್ರೀಜನ್ಮವು, ಸ್ವಾಭಾವಿಕ ಸ್ತ್ರೀಯರಿಗೆ ಪುರುಷ ಜನ್ಮವು ಬರುವುದೋ ಏನು? ಎಂದರೆ—) ಪುರುಷರೂ ಕೂಡ ಪಾಪಕರ್ಮದಿಂದ ಅಥವಾ ಕಾಮದಿಂದ ಸ್ತ್ರೀತ್ವವನ್ನು ಹೊಂದುತ್ತಾರೆ (ಅಂದರೆ ಸುದ್ಯುಮ್ನನು ವಾಪಕರ್ಮದಿಂದ ಇಳಾ ಎಂಬುವ ಸ್ತ್ರೀಯಾಗಿಯೂ ಅಗ್ನಿ ಪುತ್ರರು ಕಾಮದಿಂದ ಅಪ್ಸರ ಸ್ತ್ರೀಯರಾಗಿಯೂ ಹುಟ್ಟಿರುತ್ತಾರೆ) (೩) (ಇಳಾ ಎಂಬುವಳು ಸುದ್ಯುಮ್ನನೆಂಬುವ ಪುರುಷನಾಗಿ ಹುಟ್ಟಿರುವುದರಿಂದ ಸ್ತ್ರೀಯರು ಪುರುಷರಾಗು ವುದಿಲ್ಲ, ಎಂಬುವುದು ಹೇಗೆಂದರೆ–) ಸ್ವಾಭಾವಿಕವಾಗಿಯೇ ಯಾರು ಸ್ತ್ರೀಯರೋ, ಅಂತಹ ಸ್ತ್ರೀಯರು ಪುರುಷರಾಗಿ ಹುಟ್ಟುವುದಿಲ್ಲ (೪) (ಸ್ವಾಭಾವಿಕವಾಗಿಯೇ ಸ್ತ್ರೀಯಳಾದ ಅಂಬಾದೇವಿಯು ಸ್ಥೂಣಾಕರ್ಣ ನೆಂಬುವ ಗಂಧರ್ವನ ವರದಿಂದ ಶಿಖಂಡಿಯಾಗಿ ಹುಟ್ಟಿದ್ದಾಳೆ, ಎಂದರೆ–) (ಅಂಬಾದೇವಿಯು) ಸ್ಥೂಣಾ ಕರ್ಣನ ವರದಿಂದ ಸ್ಥೂಣಾಕರ್ಣನ ದೇಹದಲ್ಲಿ ಸ್ಥೂಣಾಕರ್ಣನಿಂದ ಕೂಡಿಕೊಂಡೇ ಆ ಜನ್ಮದಲ್ಲಿ ಇದ್ದುದು ಮಾತ್ರ (ಅವಳಿಗೆ ಸ್ವತಂತ್ರವಾಗಿ ಪುರುಷ ದೇಹವು ಬರಲೇ ಇಲ್ಲ)(೫) (ಸ್ವಭಾವತಃ ಪುರುಷರಿಗೆ ಪಾಪಕರ್ಮದಿಂದ ಸ್ತ್ರೀ ಜನ್ಮವು ಬಂದರೆ ಅಂತಹ ಸ್ತ್ರೀಯರೂ ಸ್ವಾಭಾವಿಕ ಸ್ತ್ರೀಯರೂ ಇವರ ಮಧ್ಯದಲ್ಲಿ ಶ್ರೇಷ್ಠರು ಯಾರು? ಎಂದರೆ) ಪಾಪಕರ್ಮಗಳಿಂದ ಹುಟ್ಟಿದ ಸ್ತ್ರೀಯರಿಗಿಂತ ಸ್ವಾಭಾವಿಕರೂ, ನಿರ್ದುಷ್ಟರೂ ಆದ ಸ್ತ್ರೀಯರು ಶ್ರೇಷ್ಠರು (೬) ಸ್ವಾಭಾವಿಕ ದೇಹವು ಉಳಿಯಲಿಕ್ಕೆ ಮುಕ್ತಿಕಾಲಕ್ಕಿಂತ ಬೇರೆ ಕಾಲವಿದೆ ಎನ್ನುತ್ತಾರೆ–) ಎಲ್ಲಾ ಜೀವರಿಗೂ ಚರಮದೇಹವು ಸ್ವಭಾವವನ್ನ ನುಸರಿಸಿಕೊಂಡಿರುವುದು ಮೋಕ್ಷದಲ್ಲಿ ಸ್ವಾಭಾವಿಕವಾದ ಬ್ರಾಹ್ಮಣತ್ವಾದಿಭಾವವು ಪ್ರಾರಬ್ಧಕರ್ಮವು ಮುಗಿದ ಮೇಲೆ ಚರಮದೇಹದಿಂದ ಹೊರಟು ಸಾಂತಾನಿಕ ಲೋಕದಲ್ಲಿ ಆವಾಸ ಮಾಡುವ ಸಮಯದಲ್ಲಿ ಅಥವಾ ಸ್ವತಃ ವ್ಯಕ್ತಾದಿ ಜೀವರಿಗೆ ಮನುಷ್ಯತ್ವಾದಿಗಳನ್ನು ಹೊಂದಿಸಿಕೊಡುವ ಕರ್ಮಭೋಗಾನಂತರದಲ್ಲಿ ಬರುವುದು, ಎಂಬುವ ಭವಿಷ್ಯ ತ್ಪರ್ವದ ವಚನವನ್ನನುಸರಿಸಿ ಅವಿರುದ್ಧವಾಗಿ ಅರ್ಥ ಹೇಳಲಿಕ್ಕೆ ಬರುವುದರಿಂದ **ಪಾಪಯೋನಯಃ ಪುಣ್ಯಾಃ** ಎಂಬುವ ವಿಶೇಷಣವು ಯುಕ್ತವು (ಏವಂಚ ನೀಚ ಯೋನಿಯಲ್ಲಿ ಹುಟ್ಟಿರುವ ಅಸ್ವಾಭಾವಿಕ ರಾದ ಸ್ತ್ರೀಯರೂ, ವೈಶ್ಯರೂ, ಶೂದ್ರರೂ, ಬ್ರಾಹ್ಮಣರೂ, ರಾಜರ್ಷಿಗಳೂ ಎಲ್ಲರೂ ಉತ್ತಮ ಗತಿಯನ್ನು ಹೊಂದುತ್ತಾರೆಂದನ್ನುವಾಗ ಪುಣ್ಯವಂತರಾದ ಸ್ವಾಭಾವಿಕರೇ ಆದ ಸ್ತ್ರೀಯರು ವೈಶ್ಯ ಮೊದಲಾದವರು ಮೋಕ್ಷವನ್ನು ಹೊಂದುತ್ತಾರೆಂದು ಹೇಳತಕ್ಕುದೇನಿದೆ?) ಎಂದು ಹೇಳಿದಂತೆ ಆಯಿತು ॥ ೩೨,೩೩ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ತಾತ್ಪರ್ಯನಿರ್ಣಯೇ ನವಮೋಽಧ್ಯಾಯಃ ॥ ೯ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಭಗವದ್ಗೀತಾ ತಾತ್ಪರ್ಯನಿರ್ಣಯದಲ್ಲಿ ಶ್ರೀಮಹಿಮಾವರ್ಣನ ರೂಪವಾದ (ಭಕ್ತಿಯೋಗ ಎಂಬುವ) ಒಂಭತ್ತನೇ ಅಧ್ಯಾಯವು ಮುಗಿಯಿತು. ॥ ೯ ॥

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಹತ್ತನೇ ಅಧ್ಯಾಯವು.

ಪೀ—ಒಂಭತ್ತನೇ ಅಧ್ಯಾಯದಲ್ಲಿ ಧ್ಯಾನಯೋಗವನ್ನು ಹೇಳಿರುವರು ಆ ಧ್ಯಾನಕ್ಕಾಗಿ ಶ್ರೀಪರಮಾತ್ಮನ ವಿಭೂತಿರೂಪಗಳನ್ನು ಈ ಅಧ್ಯಾಯದಲ್ಲಿ ಹಂತತೇ ಕಥಯಿಷ್ಯಾಮಿ ಇತ್ಯಾದಿಗಳಿಂದ ಮುಂದಕ್ಕೆ ಹೇಳುವರು ಆದಿಯಲ್ಲಿ ಈಗ ದೇವತೆಗಳನ್ನೂ ಮಹರ್ಷ್ಯಾದಿಗಳನ್ನೂ ಸಾಮರ್ಥ್ಯಾತಿಶಯದಿಂದ ಕೂಡಿದವರನ್ನಾಗಿ ಮಾಡೋಣರೂಪವಾದ ಮಹಿಮಾತಿಶಯವನ್ನು ಶ್ರೀಪರಮಾತ್ಮನಿಗೆ ಹೇಳುತ್ತಾರೆ—

ಗೀ ॥ ॥ ಶ್ರೀಭಗವಾನುವಾಚ ॥

ಓಂ ॥ ಭೂಯ ಏವ ಮಹಾಬಾಹೋ ಶೃಣು ಮೇ ಪರಮಂ ವಚಃ ।
ಯತ್ತೇಽಹಂ ಪ್ರೀಯಮಾಣಾಯ ವಕ್ಷ್ಯಾಮಿ ಹಿತಕಾಮ್ಯಯಾ ॥ ೧ ॥

ಅ ॥ ಶ್ರೀಭಗವಾನ್=ಶ್ರೀಕೃಷ್ಣಪರಮಾತ್ಮನು, ಉವಾಚ=ಉಪದೇಶಮಾಡುತ್ತಾನೆ ಮಹಾಬಾಹೋ=ಅರ್ಜುನನೇ, ಭೂಯ ಏವ=ಮತ್ತು, ಯತ್=ಯಾವ ಮಾತನ್ನು, ಅಹಂ=ನಾನು, ಪ್ರೀಯಮಾಣಾಯ=ನನ್ನ ಮಾತನ್ನು ಕೇಳಿ ಸಂತೋಷವನ್ನು ಹೊಂದತಕ್ಕ, ತೇ=ನಿನಗೋಸ್ಕರ, ಹಿತಕಾಮ್ಯಯಾ=ಹಿತವನ್ನುಂಟುಮಾಡುವುದೆಂಬುವ ಇಚ್ಛೆಯಿಂದ, ವಕ್ಷ್ಯಾಮಿ=ಹೇಳುವೆನೋ, ಮೇ=ನನ್ನ, ಪರಮಂ ವಚಃ=ಅಂತಹ ಉತ್ತಮಮಾಹಾತ್ಮ್ಯಪ್ರತಿಪಾದಕವಾದ ಮಾತನ್ನು, ಶೃಣು=ಕೇಳಿ ಅದರಲ್ಲಿ ಆಸಕ್ತಿಯನ್ನು ಮಾಡು ॥೧॥

ಭಾ ॥ ಓಂ ॥ ಉಪಾಸನಾರ್ಥಂ ವಿಭೂತೀರ್ವಿಶೇಷಕಾರಣತ್ವಂ ಚ ಕೇಷಾಂಚಿದನೇನಾಧ್ಯಾಯೇನಾಹ ॥ ಪ್ರೀಯಮಾಣಾಯ । ಶ್ರುತ್ವಾ ಸಂತೋಷಂ ಪ್ರಾಪ್ನುವತೇ ॥ ೧ ॥

ಅ ॥ ಉತ್ತಮಾಧಿಕಾರಿಗಳಿಗೆ ಶ್ರೀಪರಮಾತ್ಮನನ್ನು ವಿಶೇಷತಃ ಉಪಾಸನಮಾಡುವುದಕ್ಕಾಗಿ ಶ್ರೀಪರಮಾತ್ಮನ ವಿಭೂತಿರೂಪಗಳನ್ನು ಮತ್ತು ಶ್ರೀಪರಮಾತ್ಮನು ಬುದ್ಧಿಮೊದಲಾದವುಗಳಿಗೂ ಮಹರ್ಷ್ಯಾದಿಗಳಿಗೂ ವಿಶೇಷಕಾರಣನೆಂಬುವುದನ್ನು ಈ ಅಧ್ಯಾಯದಲ್ಲಿ ವಿವರಿಸುತ್ತಾರೆ. ಪ್ರೀಯಮಾಣಾಯ=ಕೇಳಿ ಸಂತೋಷವನ್ನು ಹೊಂದತಕ್ಕ ನಿನಗೆ ॥ ೧ ॥

ಪೀ—ಶ್ರೀಪರಮಾತ್ಮನ ಮಹಿಮೆಯನ್ನು ಹೇಳುತ್ತಾನೆ—

ಗೀ ॥ ನ ಮೇ ವಿದುಃ ಸುರಗಣಾಃ ಪ್ರಭವಂ ನ ಮಹರ್ಷಯಃ ।
ಅಹಮಾದಿರ್ಹಿ ದೇವಾನಾಂ ಮಹರ್ಷೀಣಾಂ ಚ ಸರ್ವಶಃ ॥ ೨ ॥

ಅ ॥ ಸುರಗಣಾಃ=ದೇವತೆಗಳ ಸಮೂಹಗಳು, ಮಹರ್ಷಯಃ=ಮಹರ್ಷಿಗಳೂ, ಮೇ=ನನ್ನ ಪ್ರಭವಂ—ಮಹಿಮೆಯನ್ನು, ನ ವಿದುಃ=ತಿಳಿಯಲಾರರು ಚ=ಮತ್ತು, ಪ್ರಭವಂ=ದೇವತೆಗಳೇ ಮೊದಲಾದ ಜಗತ್ತಿಗೆ ನನ್ನಿಂದ ಆಗತಕ್ಕ ಉತ್ಪತ್ತಿಯನ್ನು, ನ ವಿದುಃ=ತಿಳಿಯುವುದಿಲ್ಲ ಹಿ=ಏಕೆ ಅವರು ತಿಳಿಯಲಾರರೆಂದರೆ, ಅಹಂ=ನಾನು ದೇವಾನಾಂ=ಬ್ರಹ್ಮಾದಿ ದೇವತೆಗಳಿಗೂ, ಮಹರ್ಷೀಣಾಂ=ಮಹರ್ಷಿಗಳಿಗೂ, ಸರ್ವಶಃ=ಮನುಷ್ಯ ಮೊದಲಾದವರಿಗೆಲ್ಲರಿಗೂ, ಆದಿಃ=ಕಾರಣನು ॥ ೨ ॥

ಭಾ ॥ (೧) ಪ್ರಭವಂ ಪ್ರಭಾವಂ । ಮದೀಯಾಂ ಜಗದುತ್ಪತ್ತಿಂ ವಾ । ತದ್ವಶತ್ವಾತ್ತಸ್ಯೇ-ತ್ಯುಚ್ಯತೇ ॥ (೨) ಯದ್ಯಸ್ತಿ ತರ್ಹಿ ದೇವಾದಯೋ ಜಾನಂತಿ ಸರ್ವಜ್ಞತ್ವಾದತೋ ನಾಸ್ತೀತಿ ಭಾವಃ ॥ (೩) ಅಹಮಾದಿರ್ಹೀತಿ ತೂತ್ಪತ್ತಿರಪಿ ಯಸ್ಯ ವಶಾ ಕುತಸ್ತಸ್ಯ ಜನಿರಿತಿ ಜ್ಞಾಪನಾರ್ಥಂ ॥ (೪) ಅಹಂ ಸರ್ವಸ್ಯ ಜಗತಃ ಪ್ರಭವಃ ಪ್ರಲಯಸ್ತ-ಥೇತಿ ಚೋಕ್ತಂ ॥ (೫) ಉಕ್ತಂ ಚೈತತ್ಸರ್ವಮನ್ಯತ್ರಾಪಿ । ಕೋ ಅದ್ಧಾ ವೇದ ಕ ಇಹ ಪ್ರವೋಚತ್ । ಕುತ ಆಜಾತಾ ಕುತ ಇಯಂ ವಿಸೃಷ್ಟಿಃ । ಅರ್ವಾ-ಗ್ದೇವಾ ಅಸ್ಯ ವಿಸರ್ಜನೇನಾಥಾ ಕೋ ವೇದ ಯತ ಆ ಬಭೂವೇತಿ ॥ (೬) ನ ತತ್ಪ್ರ-ಭಾವಮೃಷಯಶ್ಚ ದೇವಾ ವಿದುಃ ಕುತೋಽನ್ಯೇಽಲ್ಪಧೃತಿಪ್ರಮಾಣಾ ಇತ್ಯೃಗ್ವೇದಖಿ-ಲೇಷು ॥ (೭) ಅನ್ಯಸ್ತ್ವರ್ಥೋ ಯೋ ಮಾಮಜಮಿತಿ ವಾಕ್ಯಾದೇವ ಜ್ಞಾಯತೇ ॥ ೨ ॥

ಅ ॥ (೧) ಪ್ರಭವಂ=ಮಹಿಮೆಯನ್ನು, ಮತ್ತ ಸಾಮರ್ಥ್ಯಾತಿಶಯವನ್ನು, ಅಥವಾ ನಾನು ಮಾಡತಕ್ಕ ಬ್ರಹ್ಮರುದ್ರಾದಿ ಜಗತ್ತಿನ ಉತ್ಪತ್ತಿಯನ್ನು (ಮೇ ಜಗದುತ್ಪತ್ತಿಃ=ನನ್ನ ಜಗತ್ತಿನ ಉತ್ಪತ್ತಿಯು ಎಂಬುದು ಹೇಗೆ ಕೂಡುತ್ತದೆ ಎಂದರೆ—) (ಜಗದುತ್ಪತ್ತಿಯು) ಶ್ರೀಪರಮಾತ್ಮನ ಅಧೀನದಲ್ಲಿದ್ದ ಪ್ರಯುಕ್ತ, ತಸ್ಯ=ಅವನದ್ದು (ಮೇ=ನನ್ನದ್ದು) ಎಂದು ಹೇಳಲ್ಪಡುತ್ತದೆ. (೨) ಶ್ರೀಪರಮಾತ್ಮನ ಮಹಿಮೆಯಂತೆಯೂ, ಜಗತ್ತಿನ ಉತ್ಪತ್ತಿಯಂತೆಯೂ, ಶ್ರೀಪರಮಾತ್ಮನಿಗೂ ಉತ್ಪತ್ತಿಯು ಇರುತ್ತಿದ್ದರೆ ಸರ್ವಜ್ಞರಾದುದರಿಂದ ದೇವಾದಿಗಳೂ ಸಾವಾನ್ಯವಾಗಿಯಾದರೂ ತಿಳಿಯುತ್ತಿದ್ದರು ದೇವಾದಿಗಳು ಸಾಮಾನ್ಯವಾಗಿಯೂ ಶ್ರೀಹರಿಯ ಉತ್ಪತ್ತಿಯನ್ನು ತಿಳಿಯುವುದೇ ಇಲ್ಲ ಆದಕಾರಣ ಶ್ರೀಹರಿಯ ಉತ್ಪತ್ತಿಯು ಸರ್ವಥಾ ಎಲ್ಲಿಯೂ ತೋರದಿರುವುದರಿಂದ ಶ್ರೀಪರಮಾತ್ಮನಿಗೆ ಸರ್ವಥಾ ಉತ್ಪತ್ತಿಯು ಇಲ್ಲವೇ ಇಲ್ಲ (ಅಂದರೆ ಶ್ರೀಹರಿಯ ಮಹಿಮಾದಿಗಳನ್ನು ಸಾಮಾನ್ಯತಃ ತಿಳಿದಿದ್ದರೂ ವಿಶೇಷವಾಗಿಯೇ ತಿಳಿಯುವುದಿಲ್ಲ) (೩) ಸರ್ವಜಗತ್ತಿಗೆ ಅವಾಂತರಕಾರಣರೆಂದು ಪ್ರಸಿದ್ಧರಾದ ಬ್ರಹ್ಮಾದಿಗಳ ಉತ್ಪತ್ತಿಯೂ ಯಾವ ಶ್ರೀಪರಮಾತ್ಮನ ಅಧೀನವಾಗಿದೆಯೋ, ಅಂತಹ ಶ್ರೀಪರಮಾತ್ಮನಿಗೆ ಉತ್ಪತ್ತಿಯು ಯಾರಿಂದಾಗುವುದು? ಅಂದರೆ (ಅಂತಹ ಶ್ರೀಪರಮಾತ್ಮನಿಗೆ ಜನಕನು ಯಾರು? ಜನಕನು ಯಾರೊಬ್ಬನೂ ಇಲ್ಲ ಎಂದು ತಿಳಿಸುವುದಕ್ಕಾಗಿ **ಅಹಮಾದಿರ್ಹಿ** ಎಂದು ಹೇಳಿದ್ದು) (೪) (**ಅಹಮಾದಿಃ** ಎಂಬುವಲ್ಲಿ ಸರ್ವಜಗತ್ತಿನ ಉತ್ಪತ್ತಿಯು ಶ್ರೀಹರಿಯ ಅಧೀನವೆಂದು ಹೇಳುವುದಿಲ್ಲ ಮತ್ತೆ ದೇವಾದಿಗಳ ಉತ್ಪತ್ತಿಯು ಮಾತ್ರ ಭಗವದಧೀನವೆಂದು ಹೇಳುತ್ತದೆ, ಎಂದರ **ದೇವಾನಾಂ ಮಹರ್ಷೀಣಾಂ ಚ** ಎಂಬುವ ಶಬ್ದದಿಂದ ಚೇತನ ಅಚೇತನ ನಿಖಿಲ ಜಗತ್ತನ್ನು ಇಟ್ಟುಕೊಳ್ಳಬೇಕು ಏಕೆ ಹೀಗೆ ಅರ್ಥವನ್ನು ಇಟ್ಟುಕೊಳ್ಳಬೇಕೆಂದರೆ–) ನಾನು ಚೇತನಾಚೇತನ ನಿಖಿಲ ಜಗತ್ತಿಗೆ ಉತ್ಪಾದಕನು, ವಿನಾಶಕನು, ಎಂದೂ ಹೇಳಿದೆ. (೫) ಶ್ರೀಹರಿಯ ಮಹಿಮೆಯನ್ನು ವಿಶೇಷವಾಗಿ ತಿಳಿಯದಿರುವುದು ಶ್ರೀಹರಿಯಿಂದಾಗುವ ಜಗದುತ್ಪತ್ತಿಯನ್ನು ವಿಶೇಷವಾಗಿ ತಿಳಿಯದಿರುವುದು, ಶ್ರೀಹರಿಗೆ ಉತ್ಪತ್ತಿಯೇ ಇಲ್ಲ ಎಂಬುವುದು, ಎಂಬೀ ಮೂರು ಅರ್ಥಗಳು ಬೇರೆ ಕಡೆಯಲ್ಲಿಯೂ ಹೇಳಲ್ಪಟ್ಟವೆ ಈ ಬಹು ವಿಧವಾದ ಜಗತ್ಸೃಷ್ಟಿಯು ಯಾವ ಕಾರಣದಿಂದ ಆಯಿತು? ಯಾವ ಪುರುಷನು ಯಾವ ಪ್ರಮಾಣದಿಂದ ವಿಶೇಷಾಕಾರವಾಗಿ ತಿಳಿಯುತ್ತಾನೆ ಯಾವನು ಈ ಲೋಕದಲ್ಲಿ ಉಪದೇಶಿಸಿರುವನು? (ಯಾರೊಬ್ಬನೂ ಇದನ್ನು ಚೆನ್ನಾಗಿ ತಿಳಿಯಲಿಲ್ಲ) ಏಕೆಂದರೆ ದೇವತೆಗಳು ಶ್ರೀಪರಮಾತ್ಮನ ಸೃಷ್ಟಿಕ್ರಿಯೆಯಿಂದಲೇ ಈಗಿನವರು ದೇಹವುಳ್ಳವರಾಗಿ ಹುಟ್ಟಿರುತ್ತಾರೆ ಮತ್ತು ಯಾವ ಶ್ರೀಹರಿಯಿಂದ ಜಗತ್ತು ಹುಟ್ಟಿತೋ

ಅಂತಹ ಶ್ರೀಪರಮಾತ್ಮನೇ ಜೆನ್ನಾಗಿ ತಿಳಿದಿರುತ್ತಾನೆ (೬) ಶ್ರೀಹರಿಯ ಮಹಿಮೆಯನ್ನು ಋಷಿಗಳೂ ದೇವತೆಗಳೂ ಸಹ ತಿಳಿಯುವುದಿಲ್ಲ ಅಲ್ಪವಾದ ಧೈರ್ಯ ಜ್ಞಾನವುಳ್ಳ ಮನುಷ್ಯಾದಿಗಳು ಹೇಗೆ ತಿಳಿದಾರು? ಎಂದು ಋಗ್ವೇದಖಿಲಗಳಲ್ಲಿ ಹೇಳಿದೆ. (೭) ಶ್ರೀಪರಮಾತ್ಮನಿಗೆ ಉತ್ಪತ್ತಿಯಿಲ್ಲವೆಂಬುವ ಅರ್ಥವು **ಯೋ ಮಾಮಜಂ** ಎಂಬುವ ವಾಕ್ಯದಿಂದಲೇ ತಿಳಿಯುತ್ತದ ॥ ೨ ॥

ಪೀ—೬ನೇ ಅಧ್ಯಾಯದಲ್ಲಿ ಧ್ಯಾನವನ್ನು ಹೇಳಿದ್ದಾರೆ--ಆದರಲ್ಲಿ ಧ್ಯಾನಮಾಡುವುದಕ್ಕಾಗಿ ಶ್ರೀಪರಮಾತ್ಮನ ವಿಭೂತಿರೂಪಗಳನ್ನು ಈ ಅಧ್ಯಾಯದಲ್ಲಿ ಹೇಳುತ್ತಾರೆ. ಅದರಲ್ಲಿ **ನ ಮೇ ವಿದುಃ** ಎಂಬುವಲ್ಲಿ ನನ್ನ ಮಹಿಮೆಯನ್ನು ದೇವತೆಗಳು ಋಷಿಗಳು ತಿಳಿಯಲಾರರೆಂದೇ ಹೇಳಿದ್ರಿಂದ ಗಂಧರ್ವಾದಿಗಳು ತಿಳಿಯುತ್ತಾರೆಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ತಾ ॥ ಓಂ ॥ ಉಪಲಕ್ಷಣಾರ್ಥಂ ಸುರಗಣಾ ಇತ್ಯಾದಿ ॥ ೧,೨ ॥

ಅ ॥ ಸುರಗಣಾಃ ಮಹರ್ಷಯಃ ಎಂಬುವ ಎರಡು ಪದಗಳಿಂದ ಚೇತನ ಅಚೇತನ ನಿಖಿಲ ವಸ್ತುಗಳನ್ನು ಇಟ್ಟುಕೊಳ್ಳಬೇಕು (ದೇವಾದಿಗಳೇ ಶ್ರೀಹರಿಯ ಮಹಿಮೆಯನ್ನು ತಿಳಿಯದಿದ್ದ ಮೇಲೆ ಅವರಿಂದ ಕೆಳಗಿನ ಗಂಧರ್ವಾದಿಗಳು ಸುತರಾಂ ತಿಳಿಯಲಾರರಷ್ಟೆ) ॥ ೧ ೨, ॥

ಪೀ—ತನ್ನ ಜ್ಞಾನದಿಂದ ಮೋಕ್ಷವಾಗುತ್ತದೆನ್ನುತ್ತಾರೆ—

ಗೀ ॥ ಯೋ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಂ ।
ಅಸಮ್ಮೂಢಃ ಸ ಮರ್ತ್ಯೇಷು ಸರ್ವಪಾಪೈಃ ಪ್ರಮುಚ್ಯತೇ ॥ ೩ ॥

ಅ ॥ ಯಃ=ಯಾವ ಅಧಿಕಾರಿಯು, **ಮಾಂ**=ನನ್ನನ್ನು, **ಅಜಂ**=ಉತ್ಪತ್ತಿರಹಿತನನ್ನಾಗಿಯೂ **ಅನಾದಿಂ**=ಸರ್ವ ಜಗಚ್ಚೇಷ್ಟಕನನ್ನಾಗಿಯೂ ಸರ್ವ ಜಗತ್ತಿಗೆ ಕಾರಣನನ್ನಾಗಿಯೂ, ಅಥವಾ ಮುಖ್ಯ ಪ್ರಾಣನಿಗೆ ಕಾರಣನನ್ನಾಗಿಯೂ **ಲೋಕಮಹೇಶ್ವರಂ**=ಸಮಸ್ತ ಲೋಕಗಳಿಗೆ ಮಹಾಸ್ವಾಮಿಯನ್ನಾಗಿಯೂ, **ವೇತ್ತಿ**=ತಿಳಿಯುತ್ತಾನೆಯೋ, **ಸಃ**=ಆ ಮನುಷ್ಯನು, **ಮರ್ತ್ಯೇಷು**=ಮನುಷ್ಯರಲ್ಲಿ, **ಅಸಮ್ಮೂಢಃ**=ಭ್ರಾಂತಿಯಿಲ್ಲದವನಾಗಿ, **ಸರ್ವಪಾಪೈಃ**=ಸಮಸ್ತ ಪಾಪಗಳಿಂದ, **ಪ್ರಮುಚ್ಯತೇ**=ಮುಕ್ತನಾಗುತ್ತಾನೆ. (ಮೋಕ್ಷವನ್ನು ಹೊಂದುತ್ತಾನೆ) ॥ ೩ ॥

ಭಾ ॥ ಅನಶ್ಚೇಷ್ಟಯಿತಾ ಸರ್ವಸ್ಯೇತ್ಯನಾದಿಃ । ಅಜತ್ವೇನ ಸಿದ್ಧೇರಿತರಸ್ಯ ॥ ೩ ॥

ಅ ॥ (ಅನಾದಿಂ) ಅನಃ=ಸರ್ವರಿಂದಲೂ ಚೇಷ್ಟೆಯನ್ನು (ವ್ಯಾಪಾರವನ್ನು) ಮಾಡಿಸುವವನು **ಆದಿಃ**=ಸರ್ವ ಜಗತ್ತಿಗೂ ಕಾರಣಭೂತನು, ಸರ್ವಥಾ ಉತ್ಪತ್ತಿಯಿಲ್ಲವೆಂದು ಹೇಳಿದ್ರಿಂದ ಶ್ರೀಪರಮಾತ್ಮನಿಗೆ ಯಾವುದೊಂದು ಕಾರಣವೂ ಇಲ್ಲವೆಂದು ಸಿದ್ಧವಾಗುತ್ತದೆ (ಅಂದರೆ ಪರಮಾತ್ಮನಿಗೆ ಉತ್ಪಾದಕನು ಇಲ್ಲವೇ ಇಲ್ಲ) ॥ ೩ ॥

ತಾ ॥ ಅನಸ್ಯಾಪ್ಯಾದಿರನಾದಿಃ ॥ ೩ ॥

ಅ ॥ ಸರ್ವಚೇಷ್ಟಕನಾದ ಮುಖ್ಯಪ್ರಾಣನಿಗೂ ಕಾರಣನು ಅನಾದಿಯು ॥ ೩ ॥

ಪೀ—ಭಕ್ತರಿಗೆ ಬುದ್ಧ್ಯಾದಿಗಳನ್ನು ಕೊಡತಕ್ಕವನು ಶ್ರೀಪರಮಾತ್ಮನೇ ಎನ್ನುತ್ತಾರೆ—

ಗೀ ॥ ಬುದ್ಧಿರ್ಜ್ಞಾನಮಸಮ್ಮೋಹಃ ಕ್ಷಮಾ ಸತ್ಯಂ ದಮಃ ಶಮಃ ।
ಸುಖಂ ದುಃಖಂ ಭವೋ ಭಾವೋ ಭಯಂ ಚಾಭಯಮೇವ ಚ ॥೪॥

ಅ ॥ ಬುದ್ಧಿಃ=ಅಂತಃಕರಣವು, ಅಥವಾ ಕಾರ್ಯಾಕಾರ್ಯ ನಿಶ್ಚಯವು, ಜ್ಞಾನಂ=ಜ್ಞಾನ ಸಾಮಾನ್ಯವು, ಅಸಮ್ಮೋಹಃ=ಅಕಾರ್ಯವನ್ನು ಮಾಡುವುದರಲ್ಲಿ ಇಚ್ಛೆಯಿಲ್ಲದಿರುವುದು, ಅಥವಾ ಮಿಥ್ಯಾ ಜ್ಞಾನವಿಲ್ಲದಿರುವುದು, ಕ್ಷಮಾ=ತಾನು ಸಿಟ್ಟನ್ನು ಮಾಡಿಕೊಳ್ಳದೆ ಅಪಕಾರ ಮಾಡಿದವರಿಗೆ ತಿರುಗಿ ಪ್ರತ್ಯಪಕಾರವನ್ನುಮಾಡದಿರುವುದು, ಸತ್ಯಂ=ನಿಜವಾಗಿ ತಿಳಿದುಕೊಂಡು ಕರ್ಮ ಮಾಡುವುದು, ಅಥವಾ ಯಥಾರ್ಥವಾಗಿ ಮಾತನ್ನಾಡುವುದು, ದಮಃ=ಇಂದ್ರಿಯಗಳನ್ನು ವಶಪಡಿಸಿಕೊಳ್ಳುವುದು, ಶಮಃ=ಶ್ರೀಪರಮಾತ್ಮನಲ್ಲಿ ಮನಸ್ಸನ್ನು ಇಡುವುದು, ಸುಖಂ=ಸುಖವು, ದುಃಖಂ=ದುಃಖವು, (ಪ್ರತಿಕೂಲವೆಂದು ತಿಳಿಯಲರ್ಹವು) ಭವಃ=ಉತ್ಪತ್ತಿಯು, ಭಾವಃ=ಸರ್ವ ಪದಾರ್ಥಗಳ ಸ್ಥಿತಿಯು, ಭಯಂ ಚ=ಹೆದರಿಕೆಯು, ಅಭಯಂ ಚ=ಹೆದರದಿರುವುದು (ಇವುಗಳೆಲ್ಲವೂ ನನ್ನಿಂದಲೇ ಆಗುತ್ತವೆ) ॥ ೪ ॥

ಭಾ ॥ (೧) ತತ್ರ್ಪಥಯತಿ । ಬುದ್ಧಿರಿತ್ಯಾದಿನಾ । ಕಾರ್ಯಾಕಾರ್ಯವಿನಿಶ್ಚಯೋ ಬುದ್ಧಿಃ ।
ಜ್ಞಾನಂ ಪ್ರತೀತಿಃ । ಜ್ಞಾನಂ ಪ್ರತೀತಿರ್ಬುದ್ಧಿಸ್ತು ಕಾರ್ಯಾಕಾರ್ಯವಿನಿರ್ಣಯ
ಇತ್ಯಭಿಧಾನಂ ॥ (೨)ದಮ ಇಂದ್ರಿಯನಿಗ್ರಹಃ । ಶಮಃ ಪರಮಾತ್ಮನಿಷ್ಠತಾ । ಶಮೋ
ಮನ್ನಿಷ್ಠತಾ ಬುದ್ಧೇರ್ದಮ ಇಂದ್ರಿಯನಿಗ್ರಹ ಇತಿ ಭಾಗವತೇ ॥ ೪ ॥

ಅ ॥ (೧) ಶ್ರೀಪರಮಾತ್ಮನು ಸರ್ವಕ್ಕೂ ಕಾರಣನೆಂಬುವುದನ್ನು **ಬುದ್ಧಿರ್ಜ್ಞಾನಂ** ಇತ್ಯಾದಿಗಳಿಂದ ವಿವರಿಸುತ್ತಾರೆ ಇದು ಕಾರ್ಯವು, ಇದು ಅಕಾರ್ಯವು ಎಂಬುವ ವಿನಿಶ್ಚಯವು **ಬುದ್ಧಿ**ಯೆನಿಸುತ್ತದೆ ಜ್ಞಾನಂ=ಪ್ರತೀತಿಯು, (ಆದುದರಿಂದ ಜ್ಞಾಯತೇ ಅನೇನೇತಿ ಜ್ಞಾನಂ=ಶಾಸ್ತ್ರವು ಎಂಬುವ ವ್ಯುತ್ಪತ್ಯಾನವು ಆಯುಕ್ತವು) (ಏಕೆಂದರೆ ಬುದ್ಧಿ ಮೊದಲಾದ ಆಂತರ ಧರ್ಮಗಳನ್ನು ಹೇಳುವಾಗ ಜ್ಞಾನಶಬ್ದದಿಂದ ಶಾಸ್ತ್ರವನ್ನು ತೆಗೆದುಕೊಳ್ಳುವುದು ಯುಕ್ತವಲ್ಲ ಜ್ಞಾನಂ=ಪ್ರತೀತಿಯು ಬುದ್ಧಿಯು ಕಾರ್ಯಾಕಾರ್ಯ ವಿನಿಶ್ಚಯವು ಎಂದು ಅಭಿಧಾನವು (೨) (ದಮಃ=ಬಾಹ್ಯೇಂದ್ರಿಯಗಳನ್ನು ನಿಗ್ರಹಿಸಿಕೊಳ್ಳುವುದು, ಶಮಃ=ಅಂತಃಕರಣವನ್ನು ನಿಗ್ರಹಿಸಿಕೊಳ್ಳುವುದು. ಎಂದು ಕೆಲವರು. ಇನ್ನಿತರರು ದಮಃ=ಗುರು ಮೊದಲಾದವರಿಗೆ ಪೂಜಾದಿಗಳನ್ನು ಮಾಡುವ ವಿಷಯದಲ್ಲಿ ವಿನಯವು ಶಮಃ=ಬಾಹ್ಯವಸ್ತುಗಳ ವಿಷಯದಲ್ಲಿ ಅಂತಃಕರಣವನ್ನು ನಿಗ್ರಹಿಸಿಕೊಳ್ಳುವುದು, ಹೀಗೆ ಹೇಳುತ್ತಾರೆ ಇವೆರಡೂ ಆಯುಕ್ತವೆನ್ನುತ್ತಾರೆ–) ದಮಃ=ಎಲ್ಲಾ ಇಂದ್ರಿಯಗಳನ್ನು ತನ್ನ ವಶದಲ್ಲಿ ಇಟ್ಟುಕೊಳ್ಳುವುದು ಶಮಃ=ಶ್ರೀಪರಮಾತ್ಮನಲ್ಲಿ ಬುದ್ಧಿಯನ್ನು ಇಡುವುದು (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ–) ಬುದ್ಧಿಗೆ ನನ್ನಲ್ಲಿಯೇ ಆಸಕ್ತಿಯು **ಶಮ**ವೆನಿಸುತ್ತದೆ ಎಲ್ಲಾ ಇಂದ್ರಿಯಗಳನ್ನೇ ನಿಗ್ರಹಿಸಿಕೊಳ್ಳುವುದು **ದಮ**ವೆನಿಸುತ್ತದೆ, ಎಂದು ಭಾಗವತದಲ್ಲಿ ಹೇಳಿದೆ ॥ ೪ ॥

ಪೀ–ಬುದ್ಧಿ ಜ್ಞಾನ ಶಬ್ದಗಳಿಗೆ ಬೇರೆ ಬೇರೆ ಅರ್ಥಗಳಿವೆ ಎಂಬುವಲ್ಲಿ ಸ್ಮೃತಿಪ್ರಮಾಣ ಹೇಳುತ್ತಾರೆ–

ತಾ ॥ ಬುದ್ಧಿರ್ಬೋಧನಿಧಿತ್ವಾತ್ತದಂತಃಕರಣಮುಚ್ಯತ ಇತಿ ಶಬ್ದನಿರ್ಣಯೇ ॥ ೪ ॥

ಅ ॥ ಜ್ಞಾನಕ್ಕೆ ಆಶ್ರಯವಾಗಿರುವುದರಿಂದ ಅಂತಃಕರಣವು ಬುದ್ಧಿಯೆನಿಸುತ್ತದೆ ॥ ೪ ॥

ಗೀ ॥ ಅಹಿಂಸಾ ಸಮತಾ ತುಷ್ಟಿಸ್ತಪೋ ದಾನಂ ಯಶೋಽಯಶಃ ।
ಭವಂತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ ॥ ೫ ॥

ಅ ॥ ಅಹಿಂಸಾ = ಬೇರೆ ಪ್ರಾಣಿಗಳಿಗೆ ಪೀಡೆಯನ್ನುಂಟುಮಾಡದಿರುವುದು, ಸಮತಾ = ಶೀತೋಷ್ಣಾದಿ ದ್ವಂದ್ವ ನಿಮಿತ್ತಕ ವಿಕಾರವಿಲ್ಲದಿರುವುದು, ತುಷ್ಟಿಃ = ವಿಷಯಗಳಲ್ಲಿ ಅಲಂಬುದ್ಧಿಯು, ತಪಃ = ಬ್ರಹ್ಮಚರ್ಯ ಮೊದಲಾದುದು, ದಾನಂ = ಧರ್ಮದಿಂದ ಸಂಪಾದಿತವಾದ ದ್ರವ್ಯವನ್ನು ಸತ್ಪಾತ್ರದಲ್ಲಿ ದಾನ ಕೊಡುವುದು, ಯಶಃ = ಕೀರ್ತಿಯು, ಅಯಶಃ = ಅಪಕೀರ್ತಿಯು, (ಹೀಗೆ) ಪೃಥಗ್ವಿಧಾಃ = ನಾನಾ ವಿಧಗಳಾದ, ಏತೇ ಭಾವಾಃ = ಹಿಂದೆ ಹೇಳಿದ ಧರ್ಮಗಳು, ಭೂತಾನಾಂ = ಪ್ರಾಣಿಗಳಿಗೆ, ಮತ್ತ ಏವ = ನನ್ನಿಂದಲೇ, ಭವಂತಿ = ಆಗುತ್ತವೆ ॥ ೫ ॥

ಭಾ ॥ ತುಷ್ಟಿರಲಂಬುದ್ಧಿಃ । ಅಲಂಬುದ್ಧಿಸ್ತಥಾ ತುಷ್ಟಿರಿತ್ಯಭಿಧಾನಾತ್ ॥ ೫ ॥

ಅ ॥ ಅಲಂಬುದ್ಧಿಃ, ತುಷ್ಟಿಃ ಎಂಬವುಗಳು ಪರ್ಯಾಯಪದವು ಈ ಕೋಶದಿಂದ ತುಷ್ಟಿಃ = ಅಲಂಬುದ್ಧಿಯು. ॥ ೫ ॥

ಪೀ — ಸಮಸ್ತ ಪ್ರಾಣಿಗಳ ಬುದ್ಧ್ಯಾದಿ ಧರ್ಮಗಳು ಮಾತ್ರ ನನ್ನಿಂದ ಆಗುವುದೆಂದಲ್ಲ ಮತ್ತೆ ಸಮಸ್ತ ಪ್ರಾಣಿಗಳು ಸಹ ನನ್ನಿಂದಲೇ ಹುಟ್ಟುತ್ತವೆನ್ನುತ್ತಾರೆ—

ಗೀ ॥ ಮಹರ್ಷಯಃ ಸಪ್ತ ಪೂರ್ವೇ ಚತ್ವಾರೋ ಮನವಸ್ತಥಾ ।
ಮದ್ಭಾವಾ ಮಾನಸಾ ಜಾತಾ ಯೇಷಾಂ ಲೋಕ ಇಮಾಃ ಪ್ರಜಾಃ ॥೬॥

ಅ ॥ ಪೂರ್ವೇ = ಪೂರ್ವಮನ್ವಂತರದಲ್ಲಿದ್ದ, ಸಪ್ತ = ಏಳು ಮಂದಿ, ಮಹರ್ಷಯಃ = ಮರೀಚಿ ಮೊದಲಾದ ಋಷಿಗಳು, ತಥಾ = ಹಾಗೆಯೇ, ಲೋಕೇ = ಲೋಕದಲ್ಲಿ ಇಮಾಃ ಪ್ರಜಾಃ = ಈ ಪ್ರಜೆಗಳು, ಯೇಷಾಂ = ಯಾವ ಮನುಗಳಿಗೆ (ಪುತ್ರ ಪೌತ್ರಾದಿರೂಪದಿಂದ ಹುಟ್ಟುರುತ್ತಾರೋ) ಅಂತಹ, ಮಾನಸಾಃ ಜಾತಾಃ = ಬ್ರಹ್ಮದೇವರ ಮನಸ್ಸಿನಿಂದ ಹುಟ್ಟಿರುವ, ಪೂರ್ವೇ = ಪೂರ್ವಕಲ್ಪದ, ಚತ್ವಾರಃ ಮನವಃ = ಸ್ವಾಯಂಭುವ, ಸ್ವಾರೋಚಿಷ, ರೈವತ, ಉತ್ತಮ, ಎಂಬುವ ನಾಲ್ಕು ಮಂದಿ ಮನುಗಳೂ ಕೂಡ, ಮದ್ಭಾವಾಃ = ಚತುರ್ಮುಖಬ್ರಹ್ಮನಲ್ಲಿ ಅಂತರ್ಯಾಮಿಯಾದ ನನ್ನಿಂದಲೇ ಹುಟ್ಟಿದವರು (ಚತುರ್ಮುಖನು ದ್ವಾರ ಮಾತ್ರ) ॥ ೬ ॥

ಪೀ—ಪ್ರತಿ ಮನ್ವಂತರದಲ್ಲಿ ಬೇರೆ ಬೇರೆ ಸಪ್ತರ್ಷಿಗಳನ್ನು ಹೇಳಿದ್ರಿಂದ ಇಲ್ಲಿ ಯಾವ ಸಪ್ತಋಷಿಗಳನ್ನು ಇಟ್ಟುಕೊಳ್ಳಬೇಕೆಂದರೆ ಪೂರ್ವ ಮನ್ವಂತರದಲ್ಲಿದ್ದವರನ್ನು ಇಟ್ಟುಕೊಳ್ಳಬೇಕೆನ್ನುವ ಅಭಿಪ್ರಾಯದಿಂದ ಅವರನ್ನು ಹೇಳುತ್ತಾರೆ—

ತಾ ॥ (೧) ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ । ವಸಿಷ್ಠಶ್ಚ ಮಹಾತೇಜಾಃ
ಪೂರ್ವೇ ಸಪ್ತರ್ಷಯಃ ಸ್ಮೃತಾ ಇತಿ ಬ್ರಾಹ್ಮೇ ॥ (೨) ಮನವೋ ಬೋಧವೈಶೇ-
ಷ್ಯಾದ್ಬೋವಾ ಬ್ರಹ್ಮಾದಯಃ ಸ್ಮೃತಾಃ । ವಿಪ್ರಾದಿವರ್ಣಭೇದೇನ ಚತ್ವಾರೋ

ಬಹವೋಽಪಿ ತೇ ॥ (೩) ದೀನತ್ವಾದ್ದೇವನಾಮಾನಸ್ತ್ವನ್ಯೇ ಬ್ರಹ್ಮಾದಿನಾಮಕಾಃ ॥ (೪) ಅವೈಷ್ಣವಕೃತೋ ಯಜ್ಞೋ ದೀನೈರ್ದೇವೈಸ್ತು ಭುಜ್ಯತೇ । ವೈಷ್ಣವೈಸ್ತು ಕೃತೋ ಯಜ್ಞೋ ದೇವೈರ್ಹಿ ಮನುನಾಮಕೈಃ ॥ (೫) ಮರೀಚ್ಯಾದ್ಯಾಸ್ತು ತತ್ಪುತ್ರಾ ಮಾನನಾ ನಾಮತಃ ಸ್ಮೃತಾಃ । ತತ್ಪುತ್ರಪೌತ್ರಾ ಮುನಯಸ್ತಥಾ ಮಾನವಮಾನವಾಃ । ತೇಭ್ಯೋ ಮನುಷ್ಯಾ ಇತ್ಯೇಷಾ ಸೃಷ್ಟಿರ್ವಿಷ್ಣೋಃ ಸಮುತ್ಥಿತೇತಿ ಮಹಾವಿಷ್ಣು ಪುರಾಣೇ ॥ ೬ ॥

ಅ ॥ (೧) ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ಮಹಾ ತೇಜಸ್ಸುಳ್ಳ ವಸಿಷ್ಠ ಋಷಿ, ಹೀಗೆ ಪೂರ್ವ ಮನ್ವಂತರದಲ್ಲಿದ್ದವರು ಏಳು ಮಂದಿ ಋಷಿಗಳು ಹೀಗೆ ಬ್ರಹ್ಮಪುರಾಣದಲ್ಲಿ. (೨) (ಗೀತೆಯಲ್ಲಿದ್ದ ಮನು ಶಬ್ದದಿಂದ ಸ್ವಾಯಂಭುವ ಮೊದಲಾದ **ಮನು**ಗಳ ಮಾತ್ರ ವಿವಕ್ಷಿತರಲ್ಲ. ಮತ್ತೆ ಬ್ರಹ್ಮಾದಿದೇವತೆಗಳನ್ನು ಇಟ್ಟುಕೊಳ್ಳಬೇಕು ಬ್ರಹ್ಮಾದಿಗಳಲ್ಲಿ ಬ್ರಾಹ್ಮಣಾದಿ ನಾಲ್ಕು ಜಾತಿ ಇದ್ದುದರಿಂದ **ಚತ್ವಾರಃ** ಎಂದು ಹೇಳಿದ್ದು, ಎಂಬುವ ವಿಶೇಷಾರ್ಥವನ್ನು ಇಟ್ಟುಕೊಳ್ಳಬೇಕೆಂಬುವಲ್ಲಿ ಸ್ಮೃತಿಯನ್ನು ಹೇಳುತ್ತಾರೆ—) ವಿಶೇಷಜ್ಞಾನವಿದ್ದುದರಿಂದ ಮನು ಎನಿಸಿದ ಬ್ರಹ್ಮರುದ್ರಾದಿ ದೇವತೆಗಳು ಬಹು ಮಂದಿ ಇದ್ದಾರ್ಯ್ * ಬ್ರಾಹ್ಮಣಕ್ಷತ್ರಿಯಾದಿ ಭೇದದಿಂದ ನಾಲ್ಕು ಜಾತಿಯವರು ಎಂಬುವ ಅಭಿಪ್ರಾಯವು **ಚತ್ವಾರಃ** ಎದು ಹೇಳಿದ್ದು (೩) ಹೀಗಾದರೆ **ದೇವ** ಎಂಬುವ ಪ್ರಸಿದ್ಧ ಶಬ್ದವನ್ನು ಬಿಟ್ಟು **ಮನು** ಎಂಬುವ ವಿಶೇಷ ಶಬ್ದವನ್ನು ಏಕೆ ಹೇಳಿದ್ದೆಂದರೆ ದುಃಖಯುಕ್ತರಾಗಿರುವುದರಿಂದ **ದೇವ** ಎಂದು ಹೆಸರುಳ್ಳ ಅಸುರರೂ ಬ್ರಹ್ಮರುದ್ರಾದಿ ನಾಮಗಳುಳ್ಳವರು ಇರುತ್ತಾರೆ (ಆಂದರೆ—)ದೇವಾದಿ ಶಬ್ದಗಳು ಅಸುರರಲ್ಲಿಯೂ ಇವೆ **ಮನು** ಶಬ್ದವೇ ದೇವತೆಗಳಲ್ಲಿ ಮುಖ್ಯವಾದುದು ಆದಕಾರಣ ಮನು ಶಬ್ದವನ್ನೇ ಪ್ರಯೋಗಿಸಿದ್ದು. (೪) ವಿಷ್ಣುಭಕ್ತಿಯಿಲ್ಲದವರು ಮಾಡುವ ಯಜ್ಞವನ್ನು ದುಃಖಯುಕ್ತರಾಗಿರುವುದರಿಂದ **ದೇವ** ಎನಿಸಿದ ಬ್ರಹ್ಮಾದಿ ನಾಮಗಳುಳ್ಳ ಅಸುರರು ಭುಜಿಸುತ್ತಾರೆ ವೈಷ್ಣವರು ಮಾಡುವ ಯಜ್ಞವನ್ನು **ಮನು** ಎನಿಸಿದ ದೇವತೆಗಳು ಭುಜಿಸುತ್ತಾರೆ (೫) **ಮನು** ಎನಿಸಿದ ದೇವತೆಗಳ ಪುತ್ರರಾದ ಮರೀಚಿ ಮೊದಲಾದ ಋಷಿಗಳು ಮಾನವರೆನಿಸುತ್ತಾರೆ ಅವರ ಮಕ್ಕಳೂ ಮೊಮ್ಮಕ್ಕಳೂ ಆದ ಮುನಿಗಳು ಮಾನವ ಮಾನವರೆನಿಸುತ್ತಾರೆ ಅವರಿಂದ ಮನುಷ್ಯರು ಹುಟ್ಟುತ್ತಾರೆ ಹೀಗೆ ಶ್ರೀವಿಷ್ಣುವಿನಿಂದ ಸೃಷ್ಟಿಯು ಉಂಟಾಗುತ್ತವೆ, ಎಂದು ಮಹಾವಿಷ್ಣುಪುರಾಣದಲ್ಲಿದೆ ॥ ೬ ॥

ಪೀ—ಹಿಂದೆ ಹೇಳಿದ ಪ್ರಕಾರ ಶ್ರೀಹರಿಯ ಮಹಿಮೆಯನ್ನು ತಿಳಿದುಕೊಂಡರೆ ಅದರ ಫಲವನ್ನು ಹೇಳುತ್ತಾರೆ—

ಗೀ ॥ ಏತಾಂ ವಿಭೂತಿಂ ಯೋಗಂ ಚ ಮಮ ಯೋ ವೇತ್ತಿ ತತ್ತ್ವತಃ ।
ಸೋಽವಿಕಂಪೇನ ಯೋಗೇನ ಯುಜ್ಯತೇ ನಾತ್ರ ಸಂಶಯಃ ॥ ೭ ॥

---

* (1) ವಿಷ್ಣೋರ್ಬ್ರಾಹ್ಮಣಜಂತಿಃ ಸನ್ ಜಜ್ಞೇ ಬ್ರಹ್ಮಾ ಚತುರ್ಮುಖಃ । ಎಂಬುವ ಪ್ರಮಾಣದಿಂದ ಚತುರ್ಮುಖಬ್ರಹ್ಮನು ಬ್ರಾಹ್ಮಣಜಾತಿಯಾಗಿ ಹುಟ್ಟಿದನು. (2) ತಸ್ಮಾತ್ ಕ್ಷತ್ರಜಾತಿರಜಾಯತ । ವಾಯುಃ ಸದಾತಿವೋಽನಂತೋ ಗರುಡಃ ಶಕ್ರಃ । ಇತ್ಯಾದಿಗಳು ಕ್ಷತ್ರಿಯ ಜಾತಿಯವರು (3) ವಿವಸ್ವದಿಂದ್ರವರುಣ ವಿಷ್ಣುಭ್ಯೋಽನ್ಯೇಽದಿತೇಃ ಸುತಾಃ । ರುದ್ರಾದನ್ಯೇ ತಥಾ ರುದ್ರಾಃ ವಾಯೋರನ್ಯೇ ಚ ವಾಯವಃ । ಇತ್ಯಾದಿಗಳು ವೈಶ್ಯಜಾತಿಯವರು ಅತ್ರಿನೌ ಪೃಥಿವೀ ಜೈವ ಕಾಲೋ ಮೃತ್ಯವ ಏವ ಚ । ಕೂದ್ರದೇವಾಃ ಸಮುದ್ದಿಷ್ಟಾಃ ಇತ್ಯಾದಿಗಳು ಶೂದ್ರ ಜಾತಿಯವರು

ಅ ॥ ಯಃ = ಯಾವ ಅಧಿಕಾರಿಯು, ಮಮ = ನನ್ನ, ಏತಾಂ ವಿಭೂತಿಂ = **ನಮೋ ವಿದುಃ ಸುರಗಣಾಃ** ಇತ್ಯಾದಿಗಳಿಂದ ಹೇಳಲ್ಪಟ್ಟ ಮಹಿಮೆಯನ್ನು, ಮತ್ತು ನಾನಾವಿಧ ಅವತಾರವನ್ನು, ಯೋಗಂ ಚ = ಬುದ್ಧ್ಯಾದಿ ಸರ್ವಸ್ರಷ್ಟೃತ್ವರೂಪವಾದ ಸಾಮರ್ಥ್ಯವನ್ನು, ತತ್ವತಃ = ಯಥಾರ್ಥವಾಗಿ, ವೇತ್ತಿ = ತಿಳಿಯುತ್ತಾನೋ, ಸಃ = ಆ ಅಧಿಕಾರಿಯು, ಅವಿಕಂಪೇನ = ದೃಢವಾದ, ಯೋಗೇನ = ಧ್ಯಾನರೂಪವಾದ ಉಪಾಯದಿಂದ, ಯುಜ್ಯತೇ = ಯುಕ್ತನಾಗುತ್ತಾನೆ ಅತ್ರ = ಈ ವಿಷಯದಲ್ಲಿ ಸಂಶಯಃ = ಸಂದೇಹವು, ನ = ಇಲ್ಲ ॥ ೭ ॥

ಪೀ—ಪೂರ್ವೇ ಎಂದು ವಿಶೇಷಣವನ್ನು ಕೊಟ್ಟ ಪ್ರಯುಕ್ತ ಪೂರ್ವ ಮನ್ವಂತರದಲ್ಲಿದ್ದವರನ್ನೇ ತೆಗೆದುಕೊಳ್ಳಬೇಕಾದುದರಿಂದಲೂ, ಮೋಕ್ಷಧರ್ಮವಾಕ್ಯದಿಂದಲೂ ಭೃಗ್ವಾದಿಗಳು ಸಪ್ತರ್ಷಿಗಳೆಂದು ಪರಭಾಷ್ಯದಲ್ಲಿ ಹೇಳಿದ್ದು ಅಯುಕ್ತವೆನ್ನುತ್ತಾರೆ—

ಭಾ ॥ (೧) ಪೂರ್ವೇ ಸಪ್ತ ಋಷಯಃ । ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ। ವಸಿಷ್ಠಶ್ಚ ಮಹಾತೇಜಾ ಇತಿ ಮೋಕ್ಷಧರ್ಮೋಕ್ತಾಃ । ತೇ ಹಿ ಸರ್ವಪುರಾಣೇಷೂಚ್ಯಂತೇ ॥ (೨) ಚತ್ವಾರಃ ಪ್ರಥಮಾಃ ಸ್ವಾಯಂಭುವಾದ್ಯಾಃ । ತೇಷಾಂ ಹೀಮಾಃ ಪ್ರಜಾಃ ನ ಹಿ ಭವಿಷ್ಯತಾಮಿಮಾಃ ಪ್ರಜಾ ಇತಿ ಹ್ಯುಕ್ತಂ ॥ (೩) ವಿಭಾಗಃ ಪ್ರಾಧಾನ್ಯಂ ಚ ಪ್ರಾಥಮಿಕತ್ವಾದೇವ ಭವತಿ ॥ (೪) ಗೌತಮಖಿಲೇಷು ಚೋಕ್ತಂ । ಸ್ವಾಯಂಭುವಂ ರೋಚಿಷಂ ಚ ರೈವತಂ ಚ ತಥೋತ್ತಮಂ । ವೇದ ಯಃ ಸ ಪ್ರಜಾವಾನಿತಿ । ಪೂರ್ವೇಭ್ಯೋ ಹ್ಯುತ್ತರಾ ಜಾಯಂತ ಇತಿ ಚ ತೇಷಾಂ ಪ್ರಾಧಾನ್ಯಂ । ಅಜಾತೇಷು ಚ ಜ್ಯೈಷ್ಠ್ಯಂ ॥ ೧ ॥

ಅ ॥ ಪೂರ್ವ ಮನ್ವಂತರದಲ್ಲಿದ್ದ ಏಳು ಋಷಿಗಳು ಮರೀಚಿ, ಅತ್ರಿ ಅಂಗಿರಸಋಷಿ, ಪುಲಸ್ತ್ಯ ಪುಲಹ, ಕೃತು, ಮಹಾ ತೇಜಸ್ಸುಳ್ಳ ವಸಿಷ್ಠಋಷಿ ಹೀಗೆ ಮೋಕ್ಷಧರ್ಮದಲ್ಲಿ ಹೇಳಲ್ಪಟ್ಟವರು ನಿರುಪಪದವಾದ ಸಪ್ತರ್ಷಿಪದದಿಂದ ಪೂರ್ವಕಲ್ಪದಲ್ಲಿರುತ್ತಿದ್ದ ಆ ಮರೀಚಿ ಋಷಿ ಮೊದಲಾದವರೇ ಎಲ್ಲಾ ಪುರಾಣಗಳಲ್ಲಿಯೂ ಹೇಳಲ್ಪಡುತ್ತಾರೆ (೨) (ಬ್ರಹ್ಮಸಾವರ್ಣ್ಯಃ, ರುದ್ರಸಾವರ್ಣ್ಯಃ, ದಕ್ಷಸಾವರ್ಣ್ಯಃ, ಧರ್ಮಸಾವರ್ಣ್ಯಃ, ಹೀಗೆ ಮುಂದಿನ ಕಲ್ಪದಲ್ಲಿ ನಾಲ್ವರು ಮನುಗಳೆಂದು ಇತರರು ಹೇಳುತ್ತಾರೆ ಅದು ಅಯುಕ್ತವೆನ್ನುತ್ತಾರೆ) ಪ್ರಥಮ ಕಲ್ಪದಲ್ಲಿದ್ದ ಸ್ವಾಯಂಭುವ, ಸ್ವಾರೋಚಿಷ, ರೈವತ, ಉತ್ತಮ, ಎಂಬುವರೇ ನಾಲ್ವರು ಮನುಗಳು ಈಗ ಇರತಕ್ಕ ಪ್ರಜೆಗಳೆಲ್ಲರೂ ಅವರ ಮಕ್ಕಳೇ ಈಗ ಇದ್ದ ಪ್ರಜೆಗಳು ಮುಂದಿನ ಕಲ್ಪದಲ್ಲಿ ಬರತಕ್ಕ ಮನುಗಳ ಮಕ್ಕಳೆಂಬುದು ಕೂಡಲಾರದಪ್ಪಿ (೩) (ಪರರು ಹೇಳುವ ಬ್ರಹ್ಮಸಾವರ್ಣ್ಯ ಮೊದಲಾದ ೪ ಮಂದಿಯಲ್ಲಿ ನಾಮಸಾಮ್ಯವು ಪ್ರತ್ಯೇಕ ಮಾಡಲಿಕ್ಕೆ ಕಾರಣವಿದೆ ನೀವು ಹೇಳಿದ ೧೪ ಮನುಗಳಲ್ಲಿ ಸ್ವಾಯಂಭುವ ಮೊದಲಾದ ೪ ಮನುಗಳನ್ನು ಪ್ರತ್ಯೇಕ ಹೇಳಲಿಕ್ಕೆ ವಿಶೇಷಕಾರಣವಿಲ್ಲವೆಂದರೆ) ಪ್ರಾಧಾನ್ಯವಿದ್ದ ಪ್ರಯುಕ್ತವೇ ವಿಭಾಗವು (ಈ ನಾಲ್ಕು ಮಂದಿಯನ್ನು ಹೇಳಿದ್ದು) ಕೂಡುತ್ತದೆ ಸ್ವಾಯಂಭುವಾದಿಗಳಿಗೆ ಪ್ರಾಧಾನ್ಯ (ಉತ್ತಮತ್ವ)ವಾದರೂ ಪ್ರಾಥಮಿಕತ್ವವಿದ್ದ ಪ್ರಯುಕ್ತವೇ (ಪ್ರಥಮದಲ್ಲಿ ಗಣನೆಮಾಡದ ಪ್ರಯುಕ್ತವೇ) ಕೂಡುತ್ತದೆ (ಏವಂಚ ಪರರು ಹೇಳಿದ ನಾಮಸಾಮ್ಯವು ಬೇರು ಸಾವರ್ಣಿಯಲ್ಲಿಯೂ ಇದ್ದ ಪ್ರಯುಕ್ತ ಅದು ಪ್ರತ್ಯೇಕ ವಿಭಾಗ ಮಾಡಿ ಹೇಳಲಿಕ್ಕೆ ಕಾರಣವೆಂದು ಹೇಳಲಿಕ್ಕೆ ಬರುವುದಿಲ್ಲ) (೪) (ಮತ್ತು ಶ್ರುತಿಯಲ್ಲಿ ಸ್ವಾಯಂಭುವಾದಿಗಳನ್ನೇ ಪ್ರತ್ಯೇಕವಾಗಿ ಹೇಳಿದ ಪ್ರಯುಕ್ತವೂ ಅವರನ್ನೇ ಇಟ್ಟುಕೊಳ್ಳಬೇಕೆನ್ನುತ್ತಾರೆ) ಪ್ರತ್ಯೇಕ ಮಾಡಲಿಕ್ಕೆ ಗೌತಮಃಖಿಲಗಳಲ್ಲಿ

ಫಲವೂ ಹೇಳಲ್ಪಟ್ಟಿದೆ. (1) ಸ್ವಾಯಂಭುವ, ರೋಚಿಷ, ರೈವತ, ಉತ್ತಮ ಈ ನಾಲ್ಕು ಮಂದಿ ಮನುಗಳನ್ನು ತಿಳಿದವನು ಸತ್ಸಂತಾನವುಳ್ಳವನಾಗುತ್ತಾನೆ, ಎಂದು ಫಲವನ್ನು ಹೇಳಿದ್ದಾರೆ (2) (ಪ್ರಾಥಮಿಕತ್ವವಿದ್ದ ಪ್ರಯುಕ್ತವೇ ಪ್ರಾಧಾನ್ಯವಿದೆ, ಎಂಬುವುದನ್ನು ಪಪಾದಿಸುತ್ತಾರೆ- ಆ ಸಂತತಿಯಲ್ಲಿ ಮೊದಲು ಮೊದಲಿನವರಿಂದ ಮೇಲುಮೇಲಿನವರು ಹುಟ್ಟುತ್ತಾರೆ ಹೀಗೆ ಮೊದಲುಮೊದಲಿನವರಿಗೆ ಉತ್ತರೋತ್ತರರಿಗಿಂತ ಉತ್ತಮತ್ವವು (ಆ ಸಂತತಿಯಲ್ಲಿ ಸಾಕ್ಷಾತ್ ಹುಟ್ಟಿದಿರುವ ಸ್ವಾರೋಚಿಷಾದಿಗಳಿಗಿಂತ ಸ್ವಾಯಂಭುವಾದಿಗಳಿಗೆ ಪ್ರಾಧಾನ್ಯವು ಹೇಗೆಂದರೆ-) ಆ ಸಂತತಿಯಲ್ಲಿ ಹುಟ್ಟಿದಿರುವ ಸ್ವಾರೋಚಿಷಾದಿಗಳ ವಿಷಯಗಳಲ್ಲಿ ಸ್ವಾಯಂಭುವಾದಿಗಳಿಗೆ ವಯಸ್ಸಿನಿಂದ ಜ್ಯೇಷ್ಠತ್ವವು ಪ್ರಾಧಾನ್ಯ ಪ್ರಯೋಜಕವು (ಅಂತೂ ಸ್ವಾಯಂಭುವಾದಿಗಳು ವಯೋಜ್ಯೇಷ್ಠರು) ॥ ೧ ॥

ಪೀ—ಪ್ರಥಮದಲ್ಲಿ ಹೇಳಿದವರನ್ನು ಇಟ್ಟುಕೊಳ್ಳುವುದಾದರೆ ಉತ್ತಮನ ಭ್ರಾತನಾದ ನಾಲ್ಕನೆಯವನಾದ ತಾಪಸನು ಗೀತೆಗೆ ಅಭಿಪ್ರೇತನೆಂದು ಏತೆ ಹೇಳಲಿಲ್ಲ ಎಂದರೆ—

ಭಾ ॥ (೧) ತಾಪಸನ್ಯ ಭಗವದವತಾರತ್ವಾದನುಕ್ತಿಃ । ತಚ್ಚ ಭಾಗವತೇ ಪ್ರಸಿದ್ಧಂ ॥ (೨) ಮಾನಸತ್ವಂ ಚ ಸರ್ವೇಷಾಂ ಮನೂನಾಮುಕ್ತಂ ಭಾಗವತೇ । ತತೋ ಮನೂನ್ ಸಸರ್ಜಾಂತೇ ಮನಸಾ ಲೋಕಭಾವನಾನಿತಿ ॥ (೩) ಅನ್ಯಪುತ್ರತ್ವಂ ತ್ವಪರಿತ್ಯಜ್ಯಾಪಿ ಶರೀರಂ ತದ್ಭವತಿ ॥ (೪) ಪ್ರಮಾಣಂ ಚೋಭಯವಿಧವಾಕ್ಯಾನ್ಯಥಾನುಪಪತ್ತಿರೇವ। ಪೂರ್ವ ಇತಿ ವಿಶೇಷಣಾಚ್ಚೈತತ್ಸಿದ್ಧಿಃ ॥ (೫) ಮತ್ತೋ ಭಾವೋ ಯೇಷಾಂ ತೇ ಮದ್ಭಾವಾಃ । ಏತೇ ಬ್ರಹ್ಮಣೋ ಮನಸಾ ಜಾತಾಸ್ತೇ ಮತ್ತ ಏವ ಜಾತಾ ಇತಿ ಭಾವಃ ॥ ೨ ॥ ॥ ೬,೭ ॥

ಅ ॥ (೧) ತಾಪಸನು ಶ್ರೀಪರಮಾತ್ಮನ ಅವತಾರನಾದುದರಿಂದ (ಶ್ರೀಪರಮಾತ್ಮನಲ್ಲಿ **ಮದ್ಭಾವಾಃ ಮಾನಸಾ ಜಾತಾಃ** ಎಂಬುವ ವಿಶೇಷಣಗಳು ಕೂಡದಿರುವುದರಿಂದ) ಅತನನ್ನು ಳನೇ ಮನುವನ್ನಾಗಿ ಹೇಳಲಿಲ್ಲ (ತಾಪಸನು ಶ್ರೀಪರಮಾತ್ಮನ ಅವತಾರನೆಂದು ಹೇಗೆ ತಿಳಿಯುತ್ತದೆಂದರೆ—) **ಚತುರ್ಥ ಉತ್ತಮಭ್ರಾತಾ ಮನುರ್ನಾಮ್ನಾ ಚ ತಾಪಸಃ । ಹರಿರಿತ್ಯಾಹುತೋ ಯೇನ ಗಜೇಂದ್ರೋ ಮೋಚಿತೋ ಗ್ರಹಾತ್** ಇತ್ಯಾದಿ ಪ್ರಮಾಣಗಳಿಂದ ತಾಪಸನು ಶ್ರೀಹರಿಯ ಅವತಾರನೆಂದು ಭಾಗವತದಲ್ಲಿ ಪ್ರಸಿದ್ಧವಾಗಿದೆ (೩)(**ಮಾನಸಾ ಜಾತಾಃ** ಎಂಬುವ ವಿಶೇಷಣವು ಕೂಡದಿರುವುದರಿಂದ ರೈವತನಕ್ಕಿಂತ ಮೊದಲು ನಾಲ್ಕನೇದ್ದಾಗಿ ಪ್ರಾಪ್ತನಾದ ತಾಪಸನನ್ನು ಬಿಟ್ಟಿದ್ದೆಂದರೆ- ಸ್ವಾಯಂಭುವಾದಿಗಳು ಪ್ರಿಯವ್ರತಾದಿಗಳ ಪುತ್ರರಾದುದರಿಂದ ಈ ವಿಶೇಷಣವು ಸ್ವಾಯಂಭುವನನು ಮೊದಲಾದವರಲ್ಲಿಯೂ ತುರ್ಯುಖನ ಮಾನಸಪುತ್ರತ್ವವು ಕೂಡದಿರುವುದರಿಂದ ಅವರನ್ನು ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲವೆಂದರ ಎಲ್ಲಾ ಮನುಗಳೂ ಬ್ರಹ್ಮನ ಮನಸ್ಸಿನಿಂದ ಹುಟ್ಟಿದವರು, ಆ ಮೇಲೆ ಅಂತ್ಯದಲ್ಲಿ ಲೋಕಗಳನ್ನು ಸೃಷ್ಟಿಸುವ ಮನುಗಳನ್ನು ಬ್ರಹ್ಮನು ಮನಸ್ಸಿನಿಂದ ಸೃಷ್ಟಿಸಿದನು ಎಂದು ಭಾಗವತದಲ್ಲಿ ಹೇಳಿದೆ (ಸ್ವಾಯಂಭುವಾದಿಗಳಿಗೆ ಪ್ರಿಯವ್ರತಾದಿಗಳ ಪುತ್ರತ್ವವು ಪ್ರಸಿದ್ಧವಾಗಿರುವುದರಿಂದ ಮನುತ್ವದಶೆಯಲ್ಲಿ ಚತುರ್ಮುಖನ ಮಾನಸಪುತ್ರತ್ವವು ಕೂಡಲಾರದೆಂದರೆ) ಆ ಬ್ರಹ್ಮನ ಮನಸ್ಸಿನಿಂದ ಹುಟ್ಟಿದ ಶರೀರವನ್ನು ಬಿಡದೇನೇ ಸ್ವಾಯಂಭುವಾದಿಮನುಗಳು ಪ್ರಿಯವ್ರತಾದಿಗಳ ಪುತ್ರರಾಗುತ್ತಾರೆ (ಅಂದರೆ ಪ್ರಿಯವ್ರತಾದಿಗಳಿಂದ ಎರಡನೇ ಶರೀರರವುಂಟಾದೊಡನೆ ಆ ಎರಡನೇ ಶರೀರವು ಒಂದೇ ಆಗುತ್ತದೆ) (೪) ಹೀಗೆ ಏಕೆ ಇಟ್ಟುಕೊಳ್ಳಬೇಕೆಂದರೆ ಮನುಗಳು ಬ್ರಹ್ಮದೇವರ ಮನಸ್ಸಿನಿಂದ ಹುಟ್ಟಿದವರೆಂದು ಹೇಳುವ ವಾಕ್ಯವೂ, ಪ್ರಿಯವ್ರತಾ

ದಿಗಳ ಮುಕ್ಯಳೆಂದು ಹೇಳುವ ವಾಕ್ಯವೂ, ಈ ಎರಡು ವಿಧ ವಾಕ್ಯವು ಬೇರೆ ರೀತಿ ಅರ್ಥ ಹೇಳಲಿಕ್ಕೆ ಬಾರ ದಿರುವುದರಿಂದ ಈ ವಾಕ್ಯಾನುಸಾರವಾಗಿ ಹಿಂದೆ ಹೇಳಿದ ರೀತಿಯಿಂದಲೇ ಅರ್ಥವನ್ನು ಹೇಳಬೇಕು. ಮತ್ತು **ಪೂರ್ವೇ** ಎಂಬುವ ವಿಶೇಷಣವಿದ್ದುದರಿಂದಲೂ ಪ್ರಾಥಮಿಕ ನಾಲ್ಕು ಮನುಗಳನ್ನು ತೆಗೆದು ಕೊಳ್ಳಬೇಕೆಂಬುವ ಅರ್ಥವು ಸಿದ್ಧವಾಗುತ್ತದೆ (ಋ) ನನ್ನಿಂದಲೇ ಹುಟ್ಟಿದವರು ಯಾವ ಮನುಗಳು ಬ್ರಹ್ಮನ ಮನಸ್ಸಿನಿಂದ ಹುಟ್ಟಿದ್ದಾರೋ, ಅವರು ಬ್ರಹ್ಮಾಂತರ್ಗತನಾದ ನನ್ನಿಂದಲೇ ಹುಟ್ಟಿದವರು (ಅಂದರೆ ಯಾವ ಮನುಗಳು ಬ್ರಹ್ಮದೇವನ ಮನಸ್ಸಿನಿಂದ ಹುಟ್ಟಿದವರೋ, ಅವರು ನನ್ನಿಂದಲೇ ಹುಟ್ಟಿದವರು ಎಂದು ಅಭಿಪ್ರಾಯವು.) ॥ ೬, ೭ ॥

ಟೀ—ಇಲ್ಲಿ ಕರ್ಮಯೋಗ ಸಮಾಧಿಯೋಗಗಳು ವಿವಕ್ಷಿತವಲ್ಲ, ಎಂಬುವ ಅಭಿಪ್ರಾಯದಿಂದ **ಯೋಗ** ಶಬ್ದದ ಅರ್ಥವನ್ನು ಹೇಳುತ್ತಾರೆ—

ತಾ ॥ ಯುಜ್ಯತೇ ಯೇನ ಯೋಗೋಽಸಾವುಪಾಯಃ ಶಕ್ತಿರೇವ ಚೇತಿ ಚ । ವಿಶಿಷ್ಟಭವನಂ ವಿಭೂತಿಃ । ಮಹತ್ತ್ವಂ ವಿವಿಧಭವನಂ ವಾ । ಯೋಗಃ ನಾಮೈಶ್ವರ್ಯಂ ॥ ೭ ॥

ಅ ॥ ಯಾವುದರಿಂದ ಹೊಂದಲ್ಪಡುತ್ತದೋ ಅದು ಯೋಗವು ಅಂದರೆ ಉಪಾಯವು ಮತ್ತು ಶಕ್ತಿಯು. (ಅಣಿಮಾದ್ಯೈಶ್ವರ್ಯಗಳನ್ನು ಹೇಳದಿದ್ದುದರಿಂದ **ಏತಾಂ ವಿಭೂತಿಂ** ಎಂದದ್ದು ಹೇಗೆಂದರೆ–) **ವಿಭೂತಿಃ** ಸರ್ವೋತ್ಕೃಷ್ಟವಾಗಿ ಇರುವಿಕೆ ಮಹತ್ತ್ವವು ದೇವತೆಗಳ ಸಮೂಹಗಳಿಂದಲೂ ತಿಳಯಲ್ಪಡ ದಿರುವಿಕೆ ಅಥವಾ ನಾನಾವಿಧವಾದ ಅವತಾರವು **ಯೋಗಃ** = ಸಾಮರ್ಥ್ಯವು. ॥ ೭ ॥

ಗೀ ॥ ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ।
ಇತಿ ಮತ್ವಾ ಭಜಂತೇ ಮಾಂ ಬುಧಾ ಭಾವಸಮನ್ವಿತಾಃ ॥ ೮ ॥

ಅ ॥ ಅಹಂ = ನಾನು, ಸರ್ವಸ್ಯ = ಚೇತನಾಚೇತನ ನಿಖಿಲ ಜಗತ್ತಿಗೆ, ಪ್ರಭವಃ = ಉತ್ಪಾದಕನು. ಮತ್ತಃ = ನನ್ನಿಂದಲೇ, ಪ್ರವರ್ತತೇ = ಇಷ್ಟವ್ಯಾಪ್ತಿ ಅನಿಷ್ಟಪರಿಹಾರಗಳಿಗೆ ಅನುಕೂಲವಾದ ವ್ಯಾಪಾರ ವುಳ್ಳದ್ದಾಗುತ್ತದೆ. (ನಾಶ ಮೊದಲಾದುದೂ ನನ್ನ ಅಧೀನವೇ) ಇತಿ = ಹೀಗೆ, ಮತ್ವಾ = ತಿಳಿದು ಕೊಂಡು, ಬುಧಾಃ = ಜ್ಞಾನಿಗಳು, ಭಾವಸಮನ್ವಿತಾಃ = ಭಕ್ತಿಯಿಂದ ಕೂಡಿದವರಾಗಿ, ಮಾಂ = ನನ್ನನ್ನು, ಭಜಂತೇ = ಪತ್ರಪುಷ್ಪಾದಿಗಳಿಂದ ಪೂಜಿಸುತ್ತಾರೆ ಮತ್ತು ಧ್ಯಾನಿಸುತ್ತಾರೆ ॥ ೮ ॥

ಭಾ ॥ ಸಂತಿ ಚ ಭಜಂತಃ ಕೇಚಿದಿತ್ಯಾಹ । ಅಹಮಿತ್ಯಾದಿನಾ ॥ ೮ ॥

ಅ ॥ ಹಿಂದೆ ಹೇಳಿದ ಫಲದಲ್ಲಿ ವಿಶ್ವಾಸ ಹುಟ್ಟುವುದಕ್ಕಾಗಿ, ಹಾಗೆ ಪೂಜಿಸುವವರು ಕೆಲವರು ಇದ್ದಾರೆ, ಎಂದು **ಅಹಂ** ಇತ್ಯಾದಿಗಳಿಂದ ಹೇಳುತ್ತಾರೆ ॥ ೮ ॥

ತಾ ॥ ಭಜಂತೇ ಮಾಮಿತ್ಯನೇನ ಜೀವೇಶ್ವರೈಕ್ಯಾಶಂಕಾಂ ನಿವರ್ತಯತಿ ॥ ೮ ॥

ಅ ॥ **ಭಜತೇ ಮಾಂ** ಎನ್ನುವುದರಿಂದ ಜೀವರಿಗೂ ಶ್ರೀಹರಿಗೂ ಐಕ್ಯವೆಂಬುವ ಶಂಕೆಯನ್ನು ಪರಿ ಹರಿಸುತ್ತಾರೆ ॥ ೮ ॥

ಗೀ ॥ ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯಂತಃ ಪರಸ್ಪರಂ ।
ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ ॥ ೯ ॥

ಅ ॥ ಮಚ್ಚಿತ್ತಾಃ=(ಜ್ಞಾನಿಗಳು) ನನ್ನಲ್ಲಿಯೇ ಸಂಪೂರ್ಣ ಮನಸ್ಸನ್ನು ಇಟ್ಟವರಾಗಿ, ಮದ್ಗತ ಪ್ರಾಣಾಃ=ನನ್ನ ಪ್ರೀತಿಗಾಗಿಯೇ ಎಲ್ಲಾ ವ್ಯಾಪಾರವನ್ನು ಮಾಡುವವರಾಗಿ, ನಿತ್ಯಂ=ನಿರಂತರದಲ್ಲಿಯೂ, ಬೋಧಯಂತಃ=ಶಿಷ್ಯರಿಗೆ ನನ್ನನ್ನು ಪದೇಶಮಾಡುತ್ತಿರುವ, ಪರಸ್ಪರಂ=ಅನ್ಯೋನ್ಯವಾಗಿ, ಮಾಂ= ನನ್ನನ್ನು, ಕಥಯಂತಶ್ಚ = ಸಂಕೀರ್ತನ ಮಾಡುತ್ತಾ, ತುಷ್ಯಂತಿ ಚ = ತೃಪ್ತಿಯುಳ್ಳವರಾಗುತ್ತಾರೆ. (ವಿಷ ಯಗಳಲ್ಲಿ ಅಲಂಬುದ್ಧಿಯುಳ್ಳವರಾಗುತ್ತಾರೆ) ರಮಂತಿ ಚ = ಸುಖವನ್ನೇ ಅನುಭವಿಸುತ್ತಾರೆ ॥ ೯ ॥

ತಾ ॥ ಮದ್ಗತಪ್ರಾಣಾ ಮದ್ವಿಷಯಚೇಷ್ಟಾಃ ॥ ೯ ॥

ಅ ॥ ಮದ್ಗತಪ್ರಾಣಾಃ = ನನ್ನ ವಿಷಯಕ ವ್ಯಾಪಾರವುಳ್ಳವರು ॥ ೯ ॥

ಗೀ ॥ ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಂ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ ॥೧೦॥

ಅ॥ ಸತತಯುಕ್ತಾನಾಂ=ಯಾವಾಗಲೂ ನನ್ನಲ್ಲಿಯೇ ಮನಸ್ಸನ್ನು ಇಟ್ಟಿರುವ, ಪ್ರೀತಿಪೂರ್ವಕಂ= ಸುದೃಢಸ್ನೇಹಪೂರ್ವಕವಾಗಿ, ಮಾಂ = ನನ್ನನ್ನೇ, ಭಜತಾಂ = ಭಜನೆಮಾಡುತ್ತಿರುವ ತೇಷಾಂ=ಅವರಿಗೆ ಯೇನ = ಯಾವ ಬುದ್ಧಿಯೋಗದಿಂದ, ಮಾಂ=ನನ್ನನ್ನು, ಉಪಯಾಂತಿ = ಹೊಂದುತ್ತಾರೋ, ತಂ ಬುದ್ಧಿ ಯೋಗಂ = ಅಂತಹ ಜ್ಞಾನರೂಪವಾದ ಮೋಕ್ಷೋಪಾಯವನ್ನು ದದಾಮಿ = ಕೊಡುತ್ತೇನೆ ॥ ೧೦ ॥

ಗೀ ॥ ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥ ೧೧ ॥

ಅ ॥ ತೇಷಾಂ = ಆ ಭಕ್ತರಿಗೆ, ಅನುಕಂಪಾರ್ಥಮೇವ=ಅನುಗ್ರಹಮಾಡುವುದಕ್ಕಾಗಿಯೇ, (ಯಾವು ದಾದರೊಂದು ಫಲವನ್ನುದ್ದೇಶಿಸಿ ಅಲ್ಲ) ಅಹಂ = ನಾನು, ಅಜ್ಞಾನಜಂ = ಅಜ್ಞಾನದಿಂದ ಹುಟ್ಟಿದ, ತಮಃ = ಸುಖದುಃಖಾದಿಬಂಧವನ್ನು, ಭಾಸ್ವತಾ = ಪ್ರಕಾಶಿಸಿಕೊಂಡಿರುವ, ಜ್ಞಾನದೀಪೇನ = ಜ್ಞಾನ ವೆಂಬುವ ದೀಪದಿಂದ ಆತ್ಮಭಾವಸ್ಥಃ = ಭಕ್ತರ ಮನೋವ್ಯಾಪಾರಕ್ಕೆ ವಿಷಯನಾಗಿ, ನಾಶಯಾಮಿ = ನಾಶಮಾಡುತ್ತೇನೆ ॥ ೧೧ ॥

ಗೀ ॥ ॥ ಅರ್ಜುನ ಉವಾಚ ॥
ಪರಂ ಬ್ರಹ್ಮ ಪರಂ ಧಾಮ ಪವಿತ್ರಂ ಪರಮಂ ಭವಾನ್ ।
ಪುರುಷಂ ಶಾಶ್ವತಂ ದಿವ್ಯಮಾದಿದೇವಮಜಂ ವಿಭುಂ ॥ ೧೨ ॥

ಅ ॥ ಅರ್ಜುನಃ = ಅರ್ಜುನನು, (ಹೀಗೆ ಸಂಕ್ಷೇಪದಿಂದ ಹೇಳಿದ ವಿಭೂತಿಯನ್ನು ಯೋಗವನ್ನು ಕೇಳಿ ವಿಸ್ತಾರವಾಗಿ ತಿಳಿಯಲಿಚ್ಛಿಸಿದವನಾಗಿ ಅದನ್ನು ಸ್ತುತಿಸುತ್ತಾ ಅದನ್ನು ಹೇಳುವುದಕ್ಕಾಗಿ) ಉವಾಚ= ಪ್ರಾರ್ಥಿಸುತ್ತಾನೆ (ಎಲೋ ಶ್ರೀಪರಮಾತ್ಮನೇ) ಭವಾನ್ = ನೀನು, ಪರಂಬ್ರಹ್ಮ = ಸರ್ವೋತ್ಕೃಷ್ಟನಾದ

ಸರ್ವಗುಣಪರಿಪೂರ್ಣನಾದ ಪರಬ್ರಹ್ಮನು, ಪರಂ=ಸರ್ವೋತ್ತಮನಾದ, ಧಾಮ=ಆಶ್ರಯನು, ಪರಮಂ=ಉತ್ತಮನಾದ, ಪವಿತ್ರಂ=ನಿರ್ದೋಷಸ್ವರೂಪನು, ತ್ವಾಂ=ನಿನ್ನನ್ನು. (ವಸಿಷ್ಠಾದಿ ಋಷಿಗಳು), ಶಾಶ್ವತಂ=ವಿಕಾರರಹಿತನನ್ನಾಗಿಯೂ, ದಿವ್ಯಂ=ಲೋಕವಿಲಕ್ಷಣನನ್ನಾಗಿಯೂ, ಆದಿದೇವಂ=ಬ್ರಹ್ಮಾದಿ ದೇವತೆಗಳಿಗೂ ಮುಖ್ಯ ಕಾರಣನನ್ನಾಗಿಯೂ, ಅಜಂ=ಉತ್ಪತ್ತಿರಹಿತನನ್ನಾಗಿಯೂ, ವಿಭುಂ=ಸರ್ವತ್ರ ವ್ಯಾಪಕನನ್ನಾಗಿಯೂ, ಪುರುಷಂ=ಪರಿಪೂರ್ಣಗುಣಗಳುಳ್ಳವನನ್ನಾಗಿಯೂ (ಜ್ಞಾನಿಗಳು ಹೇಳುತ್ತಾರೆ)॥ ೧೨ ॥

ಗೀ॥ ಆಹುಸ್ತ್ವಾಮೃಷಯಃ ಸರ್ವೇ ದೇವರ್ಷಿರ್ನಾರದಸ್ತಥಾ ।
ಅಸಿತೋ ದೇವಲೋ ವ್ಯಾಸಃ ಸ್ವಯಂ ಚೈವ ಬ್ರವೀಷಿ ಮೇ ॥ ೧೩ ॥

ಅ ॥ ದೇವರ್ಷಿಃ=ದೇವರ್ಷಿಗಳಾದ, ನಾರದಃ=ನಾರದಋಷಿಗಳೂ, ಅಸಿತಃ=ಅಸಿತಋಷಿಗಳೂ, ದೇವಲಃ=ದೇವಲಋಷಿಗಳೂ ವ್ಯಾಸಃ=ವೇದವ್ಯಾಸರು, ಸರ್ವೇಋಷಯಃ=ಇನ್ನಿತರ ಎಲ್ಲಾ ಋಷಿಗಳೂ ಕೂಡ, ತಥಾ=ಅದೇ ಪ್ರಕಾರ, ತ್ವಾಂ=ನಿನ್ನನ್ನು, (ಸರ್ವೋತ್ತಮನಾದ ಶ್ರೀಪರಮಾತ್ಮನನ್ನಾಗಿ) ಆಹುಃ=ಹೇಳುತ್ತಾರೆ ಸ್ವಯಂ=ನೀನೂ ಕೂಡ ತಥೈವ=ಅದೇ ಪ್ರಕಾರವೇ, ಮೇ=ನನಗೋಸ್ಕರ, ಬ್ರವೀಷಿ=ಉಪದೇಶಮಾಡುತ್ತಿ. ॥ ೧೩ ॥

ಗೀ॥ ಸರ್ವಮೇತದೃತಂ ಮನ್ಯೇ ಯನ್ಮಾಂ ವದಸಿ ಕೇಶವ ।
ನ ಹಿ ತೇ ಭಗವನ್ವ್ಯಕ್ತಿಂ ವಿದುರ್ದೇವಾ ನ ದಾನವಾಃ ॥ ೧೪ ॥

ಅ ॥ ಕೇಶವ=ಶ್ರೀಪರಮಾತ್ಮನೇ, (ನೀನು) ಯತ್=ಯಾವ ಮಹಿಮೆಯನ್ನು, ಮಾಂ=ನನ್ನನ್ನು ಕುರಿತು, ವದಸಿ=ಹೇಳಿದ್ದಿಯೋ, ಏತತ್ಸರ್ವಂ=ಹಿಂದೆ ಹೇಳಿದ ಎಲ್ಲಾ ಮಹಿಮೆಯನ್ನು ಋತಂ=ಸತ್ಯವನ್ನಾಗಿಯೇ, ಮನ್ಯೇ=ತಿಳಿಯುತ್ತೇನೆ ಭಗವನ್=ಭಗವಂತನೇ, ತೇ=ನಿನ್ನ, ವ್ಯಕ್ತಿಂ=ಸಾಮರ್ಥ್ಯಾತಿಶಯವನ್ನು, ದೇವಾಃ=ದೇವತೆಗಳೂ, ನ ವಿದುಃ=ತಿಳಿಯುವುದಿಲ್ಲ ದಾನವಾಶ್ಚ=ದಾನವರೂ ಕೂಡ, ನ ವಿದುಃ=ತಿಳಿಯುವುದಿಲ್ಲ ಹಿ=ಈ ವಿಷಯವು ನ ಯಸ್ಯೇಂದ್ರೋ ವರುಣೋ ನ ಮಿತ್ರಃ ಇತ್ಯಾದಿ ವೇದಗಳಲ್ಲಿ ಪ್ರಸಿದ್ಧವೇ ಆಗಿದೆ ॥ ೧೪ ॥

ಗೀ॥ ಸ್ವಯಮೇವಾತ್ಮನಾ ತ್ಮಾನಂ ವೇತ್ಥ ತ್ವಂ ಪುರುಷೋತ್ತಮ ।
ಭೂತಭಾವನ ಭೂತೇಶ ದೇವದೇವ ಜಗತ್ಪತೇ ॥ ೧೫ ॥

ಅ ॥ ಭೂತಭಾವನ=ಸಮಸ್ತ ಪ್ರಾಣಿಗಳಿಗೂ ಉತ್ಪತ್ತಿಕಾರಣನಾದ, ಭೂತೇಶ=ಸಮಸ್ತಪ್ರಾಣಿಗಳಿಗೆ ನಿಯಾಮಕನಾದ, ದೇವದೇವ=ಬ್ರಹ್ಮಾದಿಗಳಿಗೆ ಸ್ವಾಮಿಯಾದ, ಜಗತ್ಪತೇ=ಸರ್ವ ಜಗತ್ತನ್ನು ಕಾಪಾಡುವ ಪುರುಷೋತ್ತಮ=ಕ್ಷರಾಕ್ಷರ ಪುರುಷರಿಂದ ಶ್ರೇಷ್ಠನಾದ ಶ್ರೀಕೃಷ್ಣನೇ. ತ್ವಂ=ನೀನು, ಸ್ವಯಮೇವ=ಬೇರೆ ಯಾರನ್ನು ಅಪೇಕ್ಷಿಸದೆ, ಆತ್ಮನಾ=ತನ್ನ ಸಾಮರ್ಥ್ಯದಿಂದ, ಆತ್ಮಾನಂ=ನಿನ್ನನ್ನು. ವೇತ್ಥ—ಚೆನ್ನಾಗಿ ತಿಳಿದಿರುತ್ತಿ ॥ ೧೫ ॥

ಪೀ—ಬ್ರಹ್ಮ ವಿಭುಶಬ್ದಗಳಿಗೆ ಬೇರೆ ಬೇರೆ ಅರ್ಥವನ್ನು ಹೇಳುತ್ತಾರೆ—

ಭಾ ॥ (೧) ಬ್ರಹ್ಮ ಪರಿಪೂರ್ಣಂ । ಅಥ ಕಸ್ಮಾದುಚ್ಯತೇ ಪರಂ ಬ್ರಹ್ಮ ಬೃಹತಿ ಬೃಂಹಯತಿ ಚೇತಿ ಶ್ರುತಿಃ । ಬೃಹ ಬೃಹಿ ವೃದ್ಧಾವಿತಿ ಪರಂತ । ಪರಮಂ ಯೋ ಮಹದ್ಬ್ರಹ್ಮೇತಿ ಚ ॥ (೨) ವಿವಿಧನಾಸೀದಿತಿ ವಿಭುಃ । ತಥಾ ಹಿ ವಾರುಣಶಾಖಾಯಾಂ । ವಿಭುಃಪ್ರಭುಃಪ್ರಧಮಂ ಮೇಪಸಾವತ ಇತಿ । ಸ ಹ್ಯೇವ ಪ್ರಾಭವದ್ವಿವಿಧೋಽಭವದಿತಿ । ಸೋಽಕಾಮಯತ ಬಹು ಸ್ಯಾಂ ಪ್ರಜಾಯೇಯೇತ್ಯಾದೇಶ್ಚ ॥ ೧೨—೧೫ ॥

ಅ ॥ (೧) ಬ್ರಹ್ಮ= ಸರ್ವಗುಣಪರಿಪೂರ್ಣನು ಸರ್ವೋತ್ಕೃಷ್ಟವಾದ ವಸ್ತುವು ಬ್ರಹ್ಮ ಎಂದು ಯಾವುದರಿಂದ ಹೇಳಲ್ಪಡುತ್ತದೆ, ಎಂದರೆ ತಾನು ಸಮಸ್ತಗುಣಗಳಿಂದ ಪೂರ್ಣನಾಗಿದ್ದು ಬೇರೆಯವರನ್ನು ಅವರವರ ಯೋಗ್ಯತಾನುಸಾರ ಗುಣಗಳಿಂದ ಪೂರ್ಣೀಕರಿಸುತ್ತಾನೆ ಎಂದು ವೇದವು ಬೃಹಧಾತುವು ಬೃಹಿಧಾತುವೂ ವೃದ್ಧಿಯೆಂಬುವ ಅರ್ಥದಲ್ಲಿದೆ, ಎಂದು ಅಭಿಜ್ಞರು ಹೇಳುತ್ತಾರೆ ಸರ್ವೋತ್ತಮನಾದವನು ಮಹದ್ಬ್ರಹ್ಮ ಎನಿಸುತ್ತಾನೆ (೨) ಅನೇಕ ರೂಪಗಳನ್ನು ಹೊಂದಿರುವುದರಿಂದ ವಿಭುಃ ಎನಿಸುತ್ತಾನೆ ಅದೇ ಅಭಿಪ್ರಾಯವನ್ನು ವಾರುಣಶಾಖೆಯಲ್ಲಿ ಹೇಳಿದೆ ಭಕ್ತರಿಗೆ ಅಭಿಲಷಿತವಾದುದನ್ನು ಕೊಡುವ ಶ್ರೀಪರಮಾತ್ಮನ ಪ್ರಥಮ ರೂಪವು ವಿಭು ಎಂದೂ ಪ್ರಭು ಎಂದೂ ಆಯಿತು ಹೇಗೆಂದರೆ ಆ ಶ್ರೀಪರಮಾತ್ಮನು ಸರ್ವಸಮರ್ಥನಾದುದರಿಂದ ಪ್ರಭು ಎಂದೂ, ಅನೇಕರೂಪಗಳನ್ನು ಹೊಂದಿರುವುದರಿಂದ ವಿಭುಃ ಎಂದೂ ಆದನು. ಮತ್ತು ಆ ಶ್ರೀಪರಮಾತ್ಮನು ಸೃಷ್ಟಿಯ ಬಹುವಸ್ತುಗಳಲ್ಲಿ ನಿಯಾಮಕ ಬಹುರೂಪಗಳಿಂದ ವ್ಯಕ್ತನಾಗುವೆನು ಎಂದು ಇಚ್ಛಿಸಿದನು. ಇದು ಮೊದಲಾದ ಪ್ರಮಾಣಗಳಿಂದಲೂ (ಶ್ರೀಹರಿಯು ಅನೇಕ ರೂಪಗಳುಳ್ಳವನಾದನು) ॥ ೧೨ ೧೫ ॥

ಪೀ ಅರ್ಜುನನು ಈ ಪ್ರಕಾರ ಸ್ತೋತ್ರಮಾಡಿ ಪ್ರಾರ್ಥಿಸುತ್ತಾನೆ—

ಗೀ ॥ ವಕ್ತುಮರ್ಹಸ್ಯಶೇಷೇಣ ದಿವ್ಯಾ ಹ್ಯಾತ್ಮವಿಭೂತಯಃ ।
ಯಾಭಿರ್ವಿಭೂತಿಭಿರ್ಲೋಕಾನಿಮಾಂಸ್ತ್ವಂ ವ್ಯಾಪ್ಯ ತಿಷ್ಠಸಿ ॥ ೧೬ ॥

ಅ ॥ ತ್ವಂ = ನೀನು ಯಾಭಿಃ=ಯಾವ, ವಿಭೂತಿಭಿಃ= ವಿಭೂತಿರೂಪಗಳಿಂದ ಇಮಾನ್ ಲೋಕಾನ್=ಈ ಲೋಕಗಳನ್ನು, ವ್ಯಾಪ್ಯ = ವ್ಯಾಪಿಸಿಕೊಂಡು, ತಿಷ್ಠಸಿ= ಇರುತ್ತಿಯೋ, (ಯಾಃ= ಯಾವ) ಆತ್ಮ ವಿಭೂತಯಃ= ನಿನ್ನ ರಾಮಕೃಷ್ಣಾದ್ಯನೇಕ ವಿಭೂತಿರೂಪಗಳು, ಅಥವಾ ಆವಾವ ವಸ್ತುಗಳಲ್ಲಿ ನಿನ್ನ ಸನ್ನಿಧಾನವಿಶೇಷದಿಂದ ಅವುಗಳಿಗೆ ಆಯಾವ ಜಾತಿಗಳಲ್ಲಿ ಶ್ರೇಷ್ಠತ್ವವನ್ನು ಹೊಂದಿಸಿಕೊಡವ ವಿಭೂತಿರೂಪಗಳು, ದಿವ್ಯಾಃ=ತೇಜಸ್ಸು ಮಹತ್ವಗಳಿಂದ ಅತ್ಯದ್ಭುತಗಳಾಗಿ ಅಪ್ರಾಕೃತಗಳಾಗಿವೆಯೋ, (ಅಂತಹ ನಿನ್ನ ವಿಭೂತಿರೂಪಗಳನ್ನು) ಅಶೇಷೇಣ = ಸಂಪೂರ್ಣವಾಗಿ, (ನನ್ನ ಯೋಗ್ಯತೆಗೆ ಅನುಗುಣವಾಗಿ) ವಕ್ತುಂ= ಹೇಳುವುದಕ್ಕೆ, ಅರ್ಹಸಿ= ಯೋಗ್ಯನಾಗಿರುತ್ತಿ (ಹೇಳು) ॥ ೧೬ ॥

ಪೀ—ನಿರಂತರದಲ್ಲಿಯೂ ಶ್ರೀಕೃಷ್ಣನನ್ನು ಧ್ಯಾನಿಸಿಕೊಂಡಿರುವುದರಿಂದ ಶ್ರೀಕೃಷ್ಣನ ವಿಭೂತಿರೂಪಗಳನ್ನು ತಿಳಿದಿರುವ ಕಾರಣ ಹೇಳಬೇಕೆಂದು ಪ್ರಾರ್ಥಿಸಿದ್ದು ಏತಕ್ಕೆಂದರೆ—

ಗೀ ॥ ಕಥಂ ವಿದ್ಯಾಮಹಂ ಯೋಗಿಂಸ್ತ್ವಾಂ ಸದಾ ಪರಿಚಿಂತಯನ್ ।
ಕೇಷುಕೇಷು ಚ ಭಾವೇಷು ಚಿಂತ್ಯೋಽಸಿ ಭಗವನ್ಮಯಾ ॥ ೧೭ ॥

ಅ ॥ ಯೋಗಿನ್=ಅನಂತಾನಂತ ಶಕ್ತಿಯುಳ್ಳ ಶ್ರೀಪರಮಾತ್ಮನೇ, ತ್ವಾಂ=ನಿನ್ನನ್ನು, ಸದಾ=ಯಾವಾಗಲೂ, ಪರಿಚಿಂತಯನ್ನಪಿ=ಧ್ಯಾನವಮಾಡುತ್ತಿದ್ದಾಗ್ಯೂ, ಅಹಂ=ನಾನು, (ನಿನ್ನ ಉಪದೇಶವಿಲ್ಲವಾದರೆ) ಕಥಂ=ಹೇಗೆ, (ವಿಭೂತೀಃ=ನಿನ್ನ ವಿಭೂತಿರೂಪಗಳನ್ನು,) ವಿದ್ಯಾಂ=ತಿಳಿದೇನು (ಆದ ಕಾರಣ) ಭಗವನ್=ಶ್ರೀಕೃಷ್ಣನೇ, ಕೇಷುಕೇಷು ಚ ಭಾವೇಷು=ಯಾವ ಯಾವ ಪದಾರ್ಥಗಳಲ್ಲಿ, (ಆಯಾ ಪದಾರ್ಥಗಳಿಗೆ ಆವಾವ ಜಾತಿಗಳಲ್ಲಿ ಉತ್ತಮತ್ವವನ್ನು ಹೊಂದಿಸಿಕೊಟ್ಟು, ಇದ್ದವನಾಗಿ,) (ನಿನ್ನಿಂದ) ಚಿಂತ್ಯಃ=ಧ್ಯಾನಿಸಲ್ಪಡತಕ್ಕವನು, ಅಸಿ=ಆಗುತ್ತಿ ॥ ೦೭ ॥

ಭಾ ॥ ವಿಭೂತಯೋ ವಿವಿಧಭೂತಯಃ ॥ ೧೬,೧೭ ॥

ಅ ॥ ವಿಭೂತಯಃ=ಶ್ರೀ ರಾಮ ಕೃಷ್ಣ ಮೊದಲಾದ ಅನೇಕ ವಿಭೂತಿರೂಪಗಳು. ॥ ೧೬, ೧೭ ॥

ಗೀ ॥ ವಿಸ್ತರೇಣಾತ್ಮನೋ ಯೋಗಂ ವಿಭೂತಿಂ ಚ ಜನಾರ್ದನ ।
ಭೂಯಃ ಕಥಯ ತೃಪ್ತಿರ್ಹಿ ಶೃಣ್ವತೋ ನಾಸ್ತಿ ಮೇಽಮೃತಂ ॥ ೧೮ ॥

ಅ ॥ ಜನಾರ್ದನ=ಶ್ರೀಕೃಷ್ಣನೇ, ಆತ್ಮನಃ=ನಿನ್ನ, ಯೋಗಂ=ಸಾಮರ್ಥ್ಯವನ್ನು, ವಿಭೂತಿಂ ಚ=ನಿನ್ನ ಸನ್ನಿಧಾನ ವಿಶೇಷದಿಂದ ಆವಾವ ಪದಾರ್ಥಗಳಿಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು, ಆವಾವ ವಸ್ತುಗಳಲ್ಲಿ ನಿಯಾಮಕವಾಗಿರುವ ರೂಪಗಳನ್ನು, ಮತ್ತು ನಾನಾ ವಿಧಗಳಾಗಿರುವ ರೂಪಗಳನ್ನು, ವಿಸ್ತರೇಣ=ವಿಸ್ತಾರವಾಗಿ, ಭೂಯಃ=ಮತ್ತು ಮತ್ತು, ಕಥಯ=ಉಪದೇಶಿಸು ತೇ=ನಿನ್ನ, ಅಮೃತಂ=ವಚನಾಮೃತವನ್ನು, ಶೃಣ್ವತಃ=ಕೇಳತಕ್ಕ, ಮೇ=ನನಗೆ, ತೃಪ್ತಿಃ=ಅಲಂಬುದ್ಧಿಯು, ನಾಸ್ತಿ=ಇಲ್ಲ. ಹಿ=ನಿಶ್ಚಯವು. ॥ ೧೮ ॥

ಗೀ ॥ ॥ ಶ್ರೀಭಗವಾನುವಾಚ ॥
ಹಂತ ತೇ ಕಥಯಿಷ್ಯಾಮಿ ದಿವ್ಯಾ ಹ್ಯಾತ್ಮವಿಭೂತಯಃ ।
ಪ್ರಾಧಾನ್ಯತಃ ಕುರುಶ್ರೇಷ್ಠ ನಾಸ್ತ್ಯಂತೋ ವಿಸ್ತರಸ್ಯ ಮೇ ॥ ೧೯ ॥

ಅ ॥ ಶ್ರೀಭಗವಾನ್=ಶ್ರೀಕೃಷ್ಣ ಪರಮಾತ್ಮನು, ಉವಾಚ=ಉಪದೇಶಿಸುತ್ತಾನೆ ಕುರುಶ್ರೇಷ್ಠ=ಅರ್ಜುನನೇ, ದಿವ್ಯಾಃ=ಲೋಕವಿಲಕ್ಷಣಗಳಾದ, ಆತ್ಮವಿಭೂತಯಃ=ವಸ್ತುಗಳಿಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಡುವ ನನ್ನ ವಿಭೂತಿರೂಪಗಳು ಅಥವಾ ಅನೇಕ ವಿಧ ರೂಪಗಳು ಯಾವುವು ಇರುತ್ತವೋ,) ಪ್ರಾಧಾನ್ಯತಃ=ಎಲ್ಲರಿಗಿಂತಲೂ ಶ್ರೇಷ್ಠವಾಗಿರುವ ಅಂತಹ ರೂಪಗಳನ್ನು, ತೇ=ನಿನಗಾಗಿ, ಹಂತ=ಹರ್ಷದಿಂದ, ಕಥಯಿಷ್ಯಾಮಿ=ಹೇಳುವೆನು ಹಿ=ಏಕೆಂದರೆ, ಮೇ=ನನ್ನ, ವಿಸ್ತರಸ್ಯ=ನನ್ನ ಸನ್ನಿಧಾನ ವಿಶೇಷದಿಂದ ವಸ್ತುಗಳಿಗೆ ಉತ್ತಮತ್ವವನ್ನು ಹೊಂದಿಸಿಕೊಡುವ ವಿಭೂತಿರೂಪಗಳ ವಿಸ್ತಾರಕ್ಕೆ ಅಂತಃ=ಸಮಾಪ್ತಿಯು, ನಾಸ್ತಿ=ಇಲ್ಲ (ಆದಕಾರಣ ಸಂಪೂರ್ಣ ಹೇಳಲಿಕ್ಕೆ ಸಾಧ್ಯವೇ ಇಲ್ಲ.) ॥ ೧೯ ॥

ಗೀ ॥ ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।
ಅಹಮಾದಿಶ್ಚ ಮಧ್ಯಂ ಚ ಭೂತಾನಾಮಂತ ಏವ ಚ ॥ ೨೦ ॥

ಅ ॥ ಗುಡಾಕೇಶ=ನಿದ್ದೆಯನ್ನು ವಶಪಡಿಸಿಕೊಂಡಿರುವ ಅರ್ಜುನನೇ, ಅಹಂ=ನಾನು, ಆತ್ಮಾ=ವ್ಯಾಪ್ತನಾದಾಗ್ಯೂ, (ಸಮಸ್ತ ಪ್ರಾಣಿಗಳ ವ್ಯಾಪಾರಗಳಿಗೆ ಪ್ರವರ್ತಕನಾಗಿ) ಸರ್ವಭೂತಾಶಯಸ್ಥಿತಃ=ಎಲ್ಲಾ ಪ್ರಾಣಿಗಳ ಹೃದಯಗುಹೆಯಲ್ಲಿ ನಿಯಾಮಕನಾಗಿರುತ್ತೇನೆ ಅಹಂ=ನಾನೇ, ಭೂತಾನಾಂ=ಪ್ರಾಣಿಗಳನ್ನು, ಆದಿಶ್ಚ=ಸೃಷ್ಟಿಮಾಡುವವನು ಮಧ್ಯಂ ಚ=ಇರುವಂತೆ ಮಾಡಿ ರಕ್ಷಿಸಿಕೊಂಡಿರುವವನು, ಅಂತ ಏವ ಚ=ನಾಶಗೊಳಿಸುವವನು. ॥ ೨೦ ॥

ಪೀ—ಅರ್ದ ಗತೌ ಯಾಚನೇ ಚ ಎಂಬುವ ವಚನದಿಂದ ಅಸುರಜನರಿಗೆ ನರಕಾದಿಗಳನ್ನು ಹೊಂದಿಸಿಕೊಡುವುದರಿಂದಲೂ ಜನರಿಂದ ಪ್ರಾರ್ಥಿಸಿಕೊಳ್ಳಲ್ಪಡುವುದರಿಂದಲೂ **ಜನಾರ್ದನಃ** ಎನಿಸುತ್ತಾನೆಂದು ಪರಭಾಷ್ಯದಲ್ಲಿ ಹೇಳಿದ್ದು ಅಯುಕ್ತವೆನ್ನುತ್ತಾರೆ—

ಭಾ ॥ ನ ಜಾಯತೇಽರ್ದಯತಿ ಚ ಸಂಸಾರಮಿತಿ ಜನಾರ್ದನಃ । ತಥಾ ಚ ಬಾಭ್ರವ್ಯ-ಶಾಖಾಯಾಂ । ಸ ಭೂತಃ ಸ ಜನಾರ್ದನ ಇತಿ ಸ ಹ್ಯಾಸೀತ್ಸ ನಾಸೀತ್ಸ್ಸೋಽರ್ದಯತೀತಿ ॥ ೧೪, ೧೯, ೨೦ ॥

ಅ ॥ ತಾನು ಹುಟ್ಟದಿದ್ದು ಭಕ್ತರ ಜನನ ಮರಣಾದಿ ದುಃಖ ಪ್ರಚುರವಾದ ಸಂಸಾರವನ್ನು ಹೋಗಲಾಡಿಸಿ ಮೋಕ್ಷವನ್ನು ಕೊಡುವುದರಿಂದ ಜನಾರ್ದನಃ ಎನಿಸುತ್ತಾನೆ ಅದೇ ಅಭಿವ್ರಾಯವನ್ನು ಬಾಭ್ರವ್ಯ ಶಾಖೆಯಲ್ಲಿ ಹೇಳಿದೆ ಆ ಶ್ರೀಹರಿಯು ಅನಾದಿಕಾಲವನ್ನಾರಂಭಿಸಿ ಇರುವವನು ಅವನು **ಜನಾರ್ದನಃ** ಎನಿಸುತ್ತಾನೆ ಏಕೆಂದರೆ ಆ ಜನಾರ್ದನನು ಅನಾದಿಕಾಲವನ್ನಾರಂಭಿಸಿ ಸದಾ ಏಕಪ್ರಕಾರನು ಅವನು ಹುಟ್ಟುವವನಲ್ಲ ಆ ಶ್ರೀಹರಿಯು ಸಂಸಾರವನ್ನು ನಾಶಗೊಳಿಸಿ ಮೋಕ್ಷಾದಿರೂಪ ಪುರುಷಾರ್ಥವನ್ನು ಕೊಡುವವನು ॥ ೧೪, ೧೯, ೨೦ ॥

ಪೀ– ಶ್ರೀಪರಮಾತ್ಮನ ವಿಭೂತಿರೂಪವು, ಪ್ರತ್ಯಕ್ಷ, ತಿರೋಹಿತ ಎಂದು ಎರಡು ಪ್ರಕಾರವು ಅದರಲ್ಲಿ ವಿಷ್ಣು, ಕಪಿಲ, ವ್ಯಾಸ ರಾಮ ಮೊದಲಾದ ರೂಪವು **ಪ್ರತ್ಯಕ್ಷವೆನಿಸುತ್ತದೆ** ಪದಾರ್ಥಗಳಲ್ಲಿದ್ದು ಅವುಗಳಿಗೆ ಉತ್ತಮತ್ವವನ್ನು ಹೊಂದಿಸಿಕೊಡುವ ರೂಪವು **ತಿರೋಹಿತವೆನಿಸುತ್ತದೆ** ಅಂತಹ ಎರಡು ವಿಧ ವಿಭೂತಿರೂಪಗಳನ್ನು ಹೇಳುತ್ತಾರೆ

ಗೀ ॥ ಆದಿತ್ಯಾನಾಮಹಂ ವಿಷ್ಣುರ್ಜ್ಯೋತಿಷಾಂ ರವಿರಂಶುಮಾನ್ ।
ಮರೀಚಿರ್ಮರುತಾಮಸ್ಮಿ ನಕ್ಷತ್ರಾಣಾಮಹಂ ಶಶೀ ॥ ೨೧ ॥

ಅ ॥ ಅಹಂ=ನಾನು, ಆದಿತ್ಯಾನಾಂ=ಹನ್ನೆರಡು ಆದಿತ್ಯರ ಮಧ್ಯದಲ್ಲಿ, ವಿಷ್ಣುಃ=(ಸರ್ವತ್ರ ವ್ಯಾಪಿಸಿಕೊಂಡಿರುವುದರಿಂದಲೂ ಸರ್ವರಲ್ಲಿ ಪ್ರವೇಶಿಸಿಕೊಂಡಿರುವುದರಿಂದಲೂ,) ವಿಷ್ಣುವೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ. (ಇದು ಪ್ರತ್ಯಕ್ಷರೂಪವು) **(ಕೇಷು ಕೇಷು ಚ ಭಾವೇಷು ಚಿಂತ್ಯೋಽಸಿ** ಎಂಬ ಅರ್ಜುನನ ಪ್ರಶ್ನೆಗೆ ಉತ್ತರ ಹೇಳುತ್ತಾರೆ—) ಅಹಂ=ನಾನು, ಜ್ಯೋತಿಷಾಂ=ಪ್ರಕಾಶಿಸುವ ವಸ್ತುಗಳ ಮಧ್ಯದಲ್ಲಿ, ಅಂಶುಮಾನ್=ಜಗತ್ತಿನಲ್ಲಿ ವ್ಯಾಪಿಸಿಕೊಂಡಿರುವ ಕಿರಣಗಳುಳ್ಳ ರವಿ=ಸೂರ್ಯನಿಗೆ ನಿಯಾಮಕನಾಗಿ ಪ್ರಕಾಶವುಳ್ಳ ಬೇರೆ ವಸ್ತುಗಳಿಗಿಂತ ಸೂರ್ಯನಿಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು **ವೇದಗಳಿಂದ** ತಿಳಿಯಲ್ಪಡುವುದರಿಂದ **ರವಿ** ಎಂದು ಹೆಸರುಳ್ಳವನಾಗಿ ರವಿಯಲ್ಲಿ ಸನ್ನಿಹಿತನು, ಅಸ್ಮಿ=ಆಗಿ

ರುತ್ತೇನೆ **ಮರುತಾಂ**=ನಲ್ವತ್ತೊಂಭತ್ತು ವಾಯುಗಳ ಮಧ್ಯದಲ್ಲಿ, **ಮರೀಚಿಃ**=ಮರೀಚಿ ಎಂಬುವ ವಾಯುವಿಗೆ ನಿಯಾಮಕನಾಗಿ ಬೇರೆ ವಾಯುಗಳಿಗಿಂತ ಮರೀಚಿ ಎಂಬ ವಾಯುವಿಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಜಲಭರಿತವಾದ ಮೇಘವನ್ನು ಚಲಿಸುವಂತೆ ಮಾಡುವದರಿಂದ **ಮರೀಚಿ** ಎಂದು ಹೆಸರುಳ್ಳವನಾಗಿ ಮರೀಚಿ ಎಂಬುವ ವಾಯುವಿನಲ್ಲಿ ಸನ್ನಿಹಿತನು, **ಅಸ್ಮಿ**=ಆಗಿರುತ್ತೇನೆ **ಅಹಂ**=ನಾನು, **ನಕ್ಷತ್ರಾಣಾಂ**=ನಕ್ಷತ್ರಗಳ ಮಧ್ಯದಲ್ಲಿ, **ಶಶೀ**=ಚಂದ್ರನಿಗೆ ನಿಯಾಮಕನಾಗಿ ನಕ್ಷತ್ರಗಳಿಗಿಂತ (ಅಹ್ಲಾದವನ್ನುಂಟು ಮಾಡುವ ವಸ್ತುಗಳಿಗಿಂತ) ಚಂದ್ರನಿಗೆ ಶ್ರೇಷ್ಠತ್ವವನ್ನು ಕೊಡುತ್ತಾ ಅತಿಶಯ ಸುಖವುಳ್ಳವನಾದುದರಿಂದ **ಶಶೀ** ಎಂದು ಹೆಸರುಳ್ಳವನಾಗಿ ಚಂದ್ರನಲ್ಲಿ ನಿಯಾಮಕನಾಗಿ, **ಅಸ್ಮಿ**=ಇರುತ್ತೇನೆ (ಹೀಗೆಯೇ ಎಲ್ಲಾ ಕಡೆಗಳಲ್ಲಿಯೂ ಪರಮಾತ್ಮನ ತಿರೋಹಿತರೂಪಗಳಲ್ಲಿ ಅರ್ಥವನ್ನು ಇಟ್ಟುಕೊಳ್ಳಬೇಕು) ॥ ೨೧ ॥

ಗೀ ॥ ವೇದಾನಾಂ ಸಾಮವೇದೋಽಸ್ಮಿ ದೇವಾನಾಮಸ್ಮಿ ವಾಸವಃ ।
ಇಂದ್ರಿಯಾಣಾಂ ಮನಶ್ಚಾಸ್ಮಿ ಭೂತಾನಾಮಸ್ಮಿ ಚೇತನಾ ॥ ೨೨ ॥

ಅ ॥ ಅಹಂ=ನಾನು, ವೇದಾನಾಂ=ವೇದಗಳ ಮಧ್ಯದಲ್ಲಿ, ಸಾಮವೇದಃ=ಸಾಮವೇದಕ್ಕೆ ನಿಯಾಮಕನಾಗಿದ್ದು, ಬೇರೆ ವೇದಗಳಿಗಿಂತ ಸಾಮವೇದಕ್ಕೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು, ಸಾಮವೇದದಲ್ಲಿದ್ದು ಎಲ್ಲಾ ಕಡೆ ಸಮನಾಗಿರುವುದರಿಂದಲೂ ಎಲ್ಲವನು, ತಿಳಿದವನಾಗಿರುವುದರಿಂದಲೂ ಸಾಮವೇದವೆಂದುಹೆಸರುಳ್ಳವನು, **ಅಸ್ಮಿ**=ಆಗಿರುತ್ತೇನೆ ದೇವಾನಾಂ=ದೇವತೆಗಳ ಮಧ್ಯದಲ್ಲಿ, ವಾಸವಃ=ಇಂದ್ರನಿಗೆ ನಿಯಾಮಕನಾಗಿ ಇಂದ್ರನಲ್ಲಿದ್ದು ಬೇರೆ ದೇವತೆಗಳಿಗಿಂತ ಇಂದ್ರನಿಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಸರ್ವ ದೇಶಗಳಲ್ಲಿ ನಿಯಾಮಕನಾಗಿದ್ದುದರಿಂದ ವಾಸವಃ ಎಂದು ಹೆಸರುಳ್ಳವನು, **ಅಸ್ಮಿ**=ಆಗಿರುತ್ತೇನೆ ಇಂದ್ರಿಯಾಣಾಂ=ಇಂದ್ರಿಯಗಳ ಮಧ್ಯದಲ್ಲಿ, ಮನಃ=ಮನಸ್ಸಿಗೆ ನಿಯಾಮಕನಾಗಿ ಮನಸ್ಸಿನಲ್ಲಿದ್ದು ಬೇರೆ ಇಂದ್ರಿಯಗಳಿಗಿಂತ ಮನಸ್ಸೆಂಬ ಇಂದ್ರಿಯಕ್ಕೆ ಶ್ರೇಷ್ಠತ್ವವನ್ನು ಕೊಟ್ಟು, ಜ್ಞಾನಸ್ವರೂಪನಾದುದರಿಂದ **ಮನಃ** ಎಂದು ಹೆಸರುಳ್ಳವನು, **ಅಸ್ಮಿ**=ಆಗಿರುತ್ತೇನೆ ಭೂತಾನಾಂ=ಪ್ರಾಣಿಗಳ ಮಧ್ಯದಲ್ಲಿ ಚೇತನಾ=ಬಹುಸ್ಮರಣಶಕ್ತಿಗೆ ನಿಯಾಮಕನಾಗಿ ಸ್ಮೃರೂಪದಿಂದ ಚೇತನಾದಲ್ಲಿದ್ದುದರಿಂದ **ಚೇತನಾ** ಎಂದು ಹೆಸರುಳ್ಳವನು, **ಅಸ್ಮಿ**=ಆಗಿರ ತ್ತೇನೆ ॥ ೨೨ ॥

ಗೀ ॥ ರುದ್ರಾಣಾಂ ಶಂಕರಶ್ಚಾಸ್ಮಿ ವಿತ್ತೇಶೋ ಯಕ್ಷರಕ್ಷಸಾಂ ।
ವಸೂನಾಂ ಪಾವಕಶ್ಚಾಸ್ಮಿ ಮೇರುಃ ಶಿಖರಿಣಾಮಹಂ ॥ ೨೩ ॥

ಅ ॥ ರುದ್ರಾಣಾಂ=೧೧ ರುದ್ರರ ಮಧ್ಯದಲ್ಲಿ, ಶಂಕರಶ್ಚ=ಶಂಕರನೆಂಬುವ ರುದ್ರನಿಗೆ ನಿಯಾಮಕನಾಗಿ ಶಂಕರನಲ್ಲಿದ್ದು ಇತರ ರುದ್ರರಿಗಿಂತ ಶಂಕರನಿಗೆ ಉತ್ತಮತ್ವವನ್ನು ಹೊಂದಿಸಿಕೊಟ್ಟು ಸುಖಕ್ಕೆ ಕಾರಣನಾಗಿರುವುದರಿಂದ **ಶಂಕರ** ಎಂದು ಹೆಸರುಳ್ಳವನು ಅಸ್ಮಿ=ಆಗಿರುತ್ತೇನೆ ಯಕ್ಷರಕ್ಷಸಾಂ=ಯಕ್ಷರೂ ರಾಕ್ಷಸರೂ ಇವರ ಮಧ್ಯದಲ್ಲಿ, ವಿತ್ತೇಶಃ=ಕುಬೇರನಿಗೆ ನಿಯಾಮಕನಾಗಿ ಕುಬೇರನಲ್ಲಿದ್ದು ಯಕ್ಷ ರಾಕ್ಷಸರಿಗಿಂತ ಕುಬೇರನಿಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು, ಧನಕ್ಕೆ ಸ್ವಾಮಿಯಾಗಿರುವುದರಿಂದ **ವಿತ್ತೇಶ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ವಸೂನಾಂ=ಅಷ್ಟವಸುಗಳ ಮಧ್ಯದಲ್ಲಿ, ಪಾವಕಶ್ಚ=ಅಗ್ನಿಗೆ ನಿಯಾಮಕನಾಗಿ ಅಗ್ನಿಯಲ್ಲಿದ್ದು ೭ ವಸುಗಳಿಗಿಂತ ಈತನಿಗೆ ಆಧಿಕ್ಯವನ್ನು ಹೊಂದಿಸಿಕೊಟ್ಟು ಎಲ್ಲಾ ವಸ್ತುಗಳನ್ನು ಶುದ್ಧೀಕರಿಸುವುದರಿಂದ **ಪಾವಕ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಅಹಂ=ನಾನು, ಶಿಖರಿಣಾಂ=ಪರ್ವತಗಳ ಮಧ್ಯದಲ್ಲಿ ಮೇರುಃ=ಮೇರುಪರ್ವತಕ್ಕೆ ನಿಯಾ

ಮಕನಾಗಿ ಮೇರುಪರ್ವತದಲ್ಲಿದ್ದು ಬೇರೆ ಪರ್ವತಗಳಿಗಿಂತ ಮೇರುಪರ್ವತಕ್ಕೆ ಶ್ರೇಷ್ಠತ್ವವನ್ನು ಹೊಂದಿಸಿ ಕೊಟ್ಟು, ತನಗೆ ಇನ್ನೊಬ್ಬ ಪ್ರೇರಕನು ಸರ್ವಥಾ ಇಲ್ಲದಿರುವುದರಿಂದ **ಮೇರು** ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ. ॥ ೨೩ ॥

ಗೀ ॥ ಪುರೋಧಸಾಂ ಚ ಮುಖ್ಯಂ ಮಾಂ ವಿದ್ಧಿ ಪಾರ್ಥ ಬೃಹಸ್ಪತಿಂ ।
ಸೇನಾನೀನಾಮಹಂ ಸ್ಕಂದಃ ಸರಸಾಮಸ್ಮಿ ಸಾಗರಃ ॥ ೨೪ ॥

ಅ ॥ ಪಾರ್ಥ=ಅರ್ಜುನನೇ, ಮಾಂ=ನನ್ನನ್ನು, ಪುರೋಧಸಾಂ ಚ=ಪುರೋಹಿತರ ಮಧ್ಯದಲ್ಲಿ, ಮುಖ್ಯಂ=ಶ್ರೇಷ್ಠನಾದ, ಬೃಹಸ್ಪತಿಂ=ಬೃಹಸ್ಪತ್ಯಾಚಾರ್ಯರಿಗೆ ನಿಯಾಮಕನಾಗಿ, ಬೃಹಸ್ಪತ್ಯಾಚಾರ್ಯರಲ್ಲಿದ್ದು ಎಲ್ಲಾ ಪುರೋಹಿತರಿಗಿಂತಲೂ ಬೃಹಸ್ಪತ್ಯಾಚಾರ್ಯರಿಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಶ್ರೇಷ್ಠರಾದ ಬ್ರಹ್ಮರುದ್ರಾದಿಗಳಿಗೆ ಸ್ವಾಮಿಯಾಗಿರುವುದರಿಂದ **ಬೃಹಸ್ಪತಿ** ಎಂದು ಹೆಸರುಳ್ಳವನನ್ನಾಗಿ, ವಿದ್ಧಿ=ತಿಳಿ ಅಹಂ=ನಾನು, ಸೇನಾನೀನಾಂ=ಸೇನಾಧಿಪತಿಗಳ ಮಧ್ಯದಲ್ಲಿ ಸ್ಕಂದಃ=ಸ್ಕಂದನಿಗೆ ನಿಯಾಮಕನಾಗಿ ಸ್ಕಂದನಲ್ಲಿದ್ದು ಬೇರೆ ಸೇನಾಧಿಪತಿಗಳಿಗಿಂತ ಸ್ಕಂದನಿಗೆ ಉತ್ತಮತ್ವವನ್ನು ಹೊಂದಿಸಿ ಕೊಟ್ಟು ಪ್ರಲಯಕಾಲದಲ್ಲಿ ತನ್ನಲ್ಲಿರುವ ಜಗತ್ತನ್ನು ಸೃಷ್ಟಿಕಾಲದಲ್ಲಿ ಹೊರಪಡಿಸುವುದರಿಂದ **ಸ್ಕಂದ** ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಸರಸಾಂ=ಸರೋವರಗಳ ಮಧ್ಯದಲ್ಲಿ, ಸಾಗರಃ=ಸಮುದ್ರಕ್ಕೆ ನಿಯಾಮಕನಾಗಿ ಸಮುದ್ರದಲ್ಲಿದ್ದು ಸರೋವರಾದಿಗಳಿಗಿಂತ ಸಮುದ್ರಕ್ಕೆ ಉತ್ತಮತ್ವವನ್ನು ಹೊಂದಿಸಿಕೊಟ್ಟು ಸಮಸ್ತ ರಸ್ತುಗಳ ಸಾರಭೋಕ್ತನಾದುದರಿಂದ **ಸಾಗರ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ॥ ೨೪ ॥

ಗೀ ॥ ಮಹರ್ಷೀಣಾಂ ಭೃಗುರಹಂ ಗಿರಾಮಸ್ಮ್ಯೇಕಮಕ್ಷರಂ ।
ಯಜ್ಞಾನಾಂ ಜಪಯಜ್ಞೋಽಸ್ಮಿ ಸ್ಥಾವರಾಣಾಂ ಹಿಮಾಲಯಃ ॥೨೫॥

ಅ ॥ ಅಹಂ=ನಾನು, ಮಹರ್ಷೀಣಾಂ=ಮಹರ್ಷಿಗಳ ಮಧ್ಯದಲ್ಲಿ, ಭೃಗುಃ=ಭೃಗುಋಷಿಗೆ ನಿಯಾಮಕನಾಗಿ ಭೃಗುಋಷಿಯಲ್ಲಿದ್ದು ಬೇರೆ ಮಹರ್ಷಿಗಳಿಗಿಂತ ಭೃಗುಋಷಿಗೆ ಶ್ರೇಷ್ಠತ್ವವನ್ನು ಹೊಂದಿಸಿ ಕೊಟ್ಟು, ವಿರೋಧಿಗಳನ್ನು ಸುಡುವುದರಿಂದ (ಅಂದರೆ ಸಂಹರಿಸುವುದರಿಂದ) **ಭೃಗು** ಎಂದು ಹೆಸರುಳ್ಳವನು, (ಆಗಿರುತ್ತೇನೆ) ಗಿರಾಂ=ವಾಕ್ಯಗಳ ಮಧ್ಯದಲ್ಲಿ ಏಕಂ ಅಕ್ಷರಂ=ಮುಖ್ಯವಾದ ಓಂ ಎಂಬುವ ಪ್ರಣವಕ್ಕೆ ನಿಯಾಮಕನಾಗಿ, ಪ್ರಣವದಲ್ಲಿದ್ದು ಓಂ ಎಂಬುವುದಕ್ಕೆ ಬೇರೆ ಅಕ್ಷರಗಳಿಗಿಂತ ಉತ್ತಮತ್ವವನ್ನು ಹೊಂದಿಸಿಕೊಟ್ಟು ಸರ್ವರಿಗಿಂತ ಮುಖ್ಯನಾದುದರಿಂದಲೂ ನಾಲ್ಕುವಿಧ ನಾಶಗಳಿಲ್ಲದಿರುವವನಾದುದರಿಂದಲೂ, **ಏಕಂ** ಎಂದೂ **ಅಕ್ಷರ**ನೆಂದೂ ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಯಜ್ಞಾನಾಂ=ಯಜ್ಞಗಳ ಮಧ್ಯದಲ್ಲಿ, ಜಪಯಜ್ಞಃ=ಜಪವೆಂಬುವ ಯಜ್ಞಕ್ಕೆ ನಿಯಾಮಕನಾಗಿ ಜಪವೆಂಬುವ ಯಜ್ಞದಲ್ಲಿದ್ದು ಬೇರೆ ಎಲ್ಲಾ ಯಜ್ಞಗಳಿಗಿಂತಲೂ ಇದಕ್ಕೆ ಆಧಿಕ್ಯವನ್ನು ಹೊಂದಿಸಿಕೊಟ್ಟು ಹುಟ್ಟಿದವರಲ್ಲರನ್ನು ರಕ್ಷಿಸುವುದರಿಂದಲೂ, ಬ್ರಹ್ಮಾದಿಗಳಿಂದ ಪೂಜಿಸಲ್ಪಡುವುದರಿಂದಲೂ **ಜಪಯಜ್ಞ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಸ್ಥಾವರಾಣಾಂ=ಹಂದಾಡದಿರುವ ವಸ್ತುಗಳ ಮಧ್ಯದಲ್ಲಿ, ಹಿಮಾಲಯಃ=ಹಿಮಾಲಯ ಪರ್ವತಕ್ಕೆ ನಿಯಾಮಕನಾಗಿ ಹಿಮಾಲಯ ಪರ್ವತದಲ್ಲಿದ್ದು ಬೇರೆ ಪರ್ವತಗಳಿಗಿಂತ ಹಿಮವತ್ಪರ್ವತಕ್ಕೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಹ್ರೀ, ಶ್ರೀ ಎಂಬುವ ಎರಡು ಲಕ್ಷ್ಮೀರೂಪಗಳಿಗೆ ಆಶ್ರಯನಾಗಿರುವುದರಿಂದ **ಹಿಮಾಲಯ**ನೆಂದು ಹೆಸರುಳ್ಳವನು ಅಸ್ಮಿ=ಆಗಿರುತ್ತೇನೆ ॥ ೨೫ ॥

ಪೀ—ಪ್ರತ್ಯಕ್ಷ ತಿರೋಹಿತ ಎಂದು ವಿಭೂತಿರೂಪವು ಎರಡು ವಿಧವು ಅದರಲ್ಲಿ ವಿಷ್ಣ್ವಾದಿಗಳು ಪ್ರತ್ಯಕ್ಷ ವಿಭೂತಿರೂಪವೆಂದು ತಿಳಿಸುವುದಕ್ಕಾಗಿ ವಿಷ್ಣು ಮೊದಲಾದ ಶಬ್ದಗಳಿಗೆ ಅರ್ಥವನ್ನು ಹೇಳುತ್ತಾ **ಆದಿತ್ಯಾನಾಮಹಂ ವಿಷ್ಣುಃ** ಎಂಬುವಲ್ಲಿದ್ದ ವಿಷ್ಣು ಶಬ್ದಕ್ಕೆ ಅರ್ಥವನ್ನು ಹೇಳುತ್ತಾರೆ—

ಭಾ ॥ (೧) ವಿಷ್ಣುಃ ಸರ್ವವ್ಯಾಪಿತ್ವಪ್ರವೇಶಿತ್ವಾದೇಃ । ವಿಷ್ಲೃ ವ್ಯಾಪ್ತೌ ವಿಶ ಪ್ರವೇಶನ ಇತಿ ಚ ಪರಂತಿ ॥ (೨) ಗತಿಶ್ಚ ಸರ್ವಭೂತಾನಾಂ ಪ್ರಜಾನಾಂ ಚಾಪಿ ಭಾರತ । ವ್ಯಾಪ್ತೌ ಮೇ ರೋದಸೀ ಪಾರ್ಥ ಕಾಂತಿಶ್ಚಾಭ್ಯಧಿಕಾ ಮಮ ॥ (೩) ಅಧಿಭೂತ-ನಿವಿಷ್ಟಶ್ಚ ತದಿಚ್ಛುಶ್ಚಾಸ್ಮಿ ಭಾರತ । ಕ್ರಮಣಾಚ್ಚಾಪ್ಯಹಂ ಪಾರ್ಥ ವಿಷ್ಣುರಿತ್ಯಭಿ-ಸಂಜ್ಞಿತ ಇತಿ ಮೋಕ್ಷಧರ್ಮೇ ॥ ೨೧—೨೫ ॥

ಅ ॥ (೧) ಸರ್ವತ್ರ ವ್ಯಾಪ್ತಿ, ಎಲ್ಲವನ್ನು ಪ್ರವೇಶಿಸಿಕೊಂಡಿರುವುದು, ಇದು ಮೊದಲಾದವುಗಳಿಂದ **ವಿಷ್ಣುಃ** ಎನಿಸುತ್ತಾನೆ ವಿಷ್ಲೃ ಧಾತುವು ವ್ಯಾಪ್ತಿ (ಸರ್ವತ್ರ ವ್ಯಾಪಿಸಿಕೊಂಡಿರುವುದು) ಎಂಬುವ ಅರ್ಥದಲ್ಲಿದೆ. ವಿಶ್ ಧಾತುವು ಪ್ರವೇಶ (ಸರ್ವವನ್ನು ಪ್ರವೇಶಿಸಿಕೊಂಡಿರುವುದು) ಎಂಬುವ ಅರ್ಥದಲ್ಲಿದೆ, ಎಂದು (ಪ್ರಾಜ್ಞರು ಹೇಳುತ್ತಾರೆ) (೨) (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ-)ಭರತಕುಲೋತ್ಪನ್ನನೇ ಪೃಥಿವೀ ಮೊದಲಾದ ಭೂತಗಳಿಗೂ, ಬ್ರಹ್ಮರುದ್ರಾದಿ ಪ್ರಜೆಗಳಿಗೂ ನಾನು ಗತಿಪ್ರದನು ಎಲೋ ಕುಂತೀಪುತ್ರನೇ ನಾನು ಸ್ವರ್ಗ ಭೂಮಿಗಳನ್ನು ವ್ಯಾಪಿಸಿಕೊಂಡಿದ್ದೇನೆ ನನಗೆ ಅತ್ಯಧಿಕವಾದ ಕಾಂತಿಯೂ ಇದೆ (೩) ಎಲೋ ಕುಂತೀಪುತ್ರನೇ ನಾನು ದೇಹಸಹಿತರಾದ ಜೀವರಿಗೆ ಉಪಕಾರಕಗಳಾದ ವಸ್ತುಗಳಲ್ಲಿ ಪ್ರವಿಷ್ಟನಾಗಿದ್ದೇನೆ ಅಧಿಭೂತಗಳಿಗೆ ಜನ್ಮಾದಿಗಳನ್ನು ಇಚ್ಛಿಸುವವನೂ ಆಗಿದ್ದೇನೆ (ಜನ್ಮಾದಿಗಳನ್ನು ಕೊಡುತ್ತೇನೆ) ನಾನು ಸರ್ವ ಜಗತ್ತನ್ನು ತ್ರಿವಿಕ್ರಮರೂಪದಿಂದ ಮೂರು ಲೋಕಗಳನ್ನು ಆಕ್ರಮಿಸಿಕೊಂಡಿದ್ದುದರಿಂದಲೂ **ವಿಷ್ಣು** ಎಂದು ಹೆಸರುಳ್ಳವನು ಎಂದು ಮೋಕ್ಷಧರ್ಮದಲ್ಲಿದೆ ॥ ೨೧—೨೫ ॥

ಗೀ ॥ ಅಶ್ವತ್ಥಃ ಸರ್ವವೃಕ್ಷಾಣಾಂ ದೇವರ್ಷೀಣಾಂ ಚ ನಾರದಃ ।
ಗಂಧರ್ವಾಣಾಂ ಚಿತ್ರರಥಃ ಸಿದ್ಧಾನಾಂ ಕಪಿಲೋ ಮುನಿಃ ॥ ೨೬ ॥

ಅ ॥ **ಸರ್ವವೃಕ್ಷಾಣಾಂ**=ಎಲ್ಲಾ ವೃಕ್ಷಗಳ ಮಧ್ಯದಲ್ಲಿ, **ಅಶ್ವತ್ಥಃ**=ಅಶ್ವತ್ಥ ವೃಕ್ಷಕ್ಕೆ ನಿಯಾಮಕನಾಗಿ **ಅಶ್ವತ್ಥ** ವೃಕ್ಷದಲ್ಲಿದ್ದು ಬೇರೆ ಎಲ್ಲಾ ವೃಕ್ಷಗಳಿಗಿಂತಲೂ **ಅಶ್ವತ್ಥ**ವೃಕ್ಷಕ್ಕೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಕುದುರೆಯಂತೆ ಇರುವವನಾದುದರಿಂದ ಅಂದರೆ ಹಯಗ್ರೀವರೂಪ ಅಥವಾ ವಡವಾವಕ್ತ್ರ ಮೊದಲಾದ ಹಯರೂಪವುಳ್ಳವನಾದುದರಿಂದ **ಅಶ್ವತ್ಥಃ** ಎಂದು ಹೆಸರುಳ್ಳವನು. ಅಸ್ಮಿ=ಆಗಿರುತ್ತೇನೆ **ದೇವರ್ಷೀಣಾಂ ಚ**=ದೇವರ್ಷಿಗಳ ಮಧ್ಯದಲ್ಲಿ, **ನಾರದಃ**=ನಾರದಋಷಿಗೆ ನಿಯಾಮಕನಾಗಿ ನಾರದ ಋಷಿಗಳಲ್ಲಿದ್ದು ಬೇರೆ ದೇವರ್ಷಿಗಳಿಗಿಂತ ನಾರದರಿಗೆ ಉತ್ತಮತ್ವವನ್ನು ಹೊಂದಿಸಿಕೊಡುವವನಾಗಿ ಮನುಷ್ಯರಿಗೆ ಅಪೇಕ್ಷಿತವಾದ ಜ್ಞಾನವನ್ನು ಕೊಡುವವನಾದುದರಿಂದ **ನಾರದ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ **ಗಂಧರ್ವಾಣಾಂ**=ಗಂಧರ್ವರ ಮಧ್ಯದಲ್ಲಿ, **ಚಿತ್ರರಥಃ**=ಚಿತ್ರರಥನೆಂಬುವ ಗಂಧರ್ವನಿಗೆ ನಿಯಾಮಕನಾಗಿ ಆತನಲ್ಲಿದ್ದು ಬೇರೆ ಗಂಧರ್ವರಿಗಿಂತ ಚಿತ್ರರಥನಿಗೆ ಉತ್ತಮತ್ವವನ್ನು ಹೊಂದಿಸಿಕೊಡುವವನಾಗಿ ವಿಚಿತ್ರರಾದ ಅಧಿದೇವತಾದಿಗಳು ರಥಸ್ಥಾನೀಯರಾಗಿ ಉಳ್ಳವನಾದುದರಿಂದ **ಚಿತ್ರರಥ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ **ಸಿದ್ಧಾನಾಂ**=ಸಿದ್ಧರ

ಮಧ್ಯದಲ್ಲಿ, ಮುನಿಃ=ಮನನಸ್ವಭಾವವುಳ್ಳ, ಕಪಿಲಃ=ಆನಂದ ಸ್ವರೂಪನಾಗಿರುವುದರಿಂದಲೂ, ಜಗತ್ತನ್ನು ರಕ್ಷಿಸುತ್ತಿರುವುದರಿಂದಲೂ, ಜಗತ್ತನ್ನು ತನ್ನಲ್ಲಿಯೇ ಪ್ರಲಯಕಾಲದಲ್ಲಿ ಇರಿಸಿಕೊಳ್ಳುವುದರಿಂದಲೂ **ಕಪಿಲ**ನೆಂದು ಹೆಸರುಳ್ಳವನು ಅಥವಾ ಕ್ರೀಡೆಯಿಂದ ಆನಂದವನ್ನೇ ಸರ್ವದಾ ಅನುಭವಿಸಿಕೊಂಡಿರುವುದರಿಂದಲೂ **ಕಪಿಲ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ॥ ೨೬ ॥

ಗೀ ॥ ಉಚ್ಚೈಃಶ್ರವಸಮಶ್ವಾನಾಂ ವಿದ್ಧಿ ಮಾಮಮೃತೋದ್ಭವಂ ।
ಐರಾವತಂ ಗಜೇಂದ್ರಾಣಾಂ ನರಾಣಾಂ ಚ ನರಾಧಿಪಂ ॥ ೨೭ ॥

ಅ ॥ ಮಾಂ=ನನ್ನನ್ನು, ಅಶ್ವಾನಾಂ=ಕುದುರೆಗಳ ಮಧ್ಯದಲ್ಲಿ, ಅಮೃತೋದ್ಭವಂ=ಕ್ಷೀರಸಮುದ್ರದಲ್ಲಿ ಹುಟ್ಟಿದ, ಉಚ್ಚೈಃಶ್ರವಸಂ=ಉಚ್ಚೈಃಶ್ರವಾಃ ಎಂಬುವ ಕುದುರೆಗೆ ನಿಯಾಮಕನಾಗಿ ಆ ಅಶ್ವದಲ್ಲಿದ್ದು ಬೇರೆ ಕುದುರೆಗಳಿಗಿಂತ ಆ ಉಚ್ಚೈಃಶ್ರವಾಃ ಎಂಬುವ ಕುದುರೆಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಅತ್ಯುತ್ಕೃಷ್ಟವಾದ ಕೀರ್ತಿಯುಳ್ಳವನಾದುದರಿಂದ **ಉಚ್ಚೈಃಶ್ರವಾಃ** ಎಂದು ಹೆಸರುಳ್ಳವನನ್ನಾಗಿ ವಿದ್ಧಿ=ತಿಳಿ ಮಾಂ=ನನ್ನನ್ನು, ಗಜೇಂದ್ರಾಣಾಂ=ಶ್ರೇಷ್ಠ ಆನೆಗಳ ಮಧ್ಯದಲ್ಲಿ, ಐರಾವತಂ=ಐರಾವತವೆಂಬುವ ಇಂದ್ರನ ಆನೆಗೆ ನಿಯಾಮಕನಾಗಿ, ಆ ಆನೆಯಲ್ಲಿದ್ದ ಬೇರೆ ಆನೆಗಳಿಗಿಂತ **ಐರಾವತ**ವೆಂಬುವ ಆನೆಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಡುವವನಾಗಿ ಮೋಕ್ಷವಲ್ಲಿರುವ ಲಕ್ಷ್ಮ್ಯಾತ್ಮಕವಾದ ಐರವೆಂಬುವ ಸರೋವರವನ್ನು ರಕ್ಷಿಸುವವನಾದುದರಿಂದ ಐರಾವತನೆಂದು ಹೆಸರುಳ್ಳವನನ್ನಾಗಿ, ವಿದ್ಧಿ=ತಿಳಿ ನರಾಣಾಂ=ಮನುಷ್ಯರ ಮಧ್ಯದಲ್ಲಿ, ನರಾಧಿಪಂ=ಚಕ್ರವರ್ತಿಗೆ ನಿಯಾಮಕನಾಗಿ ಅವನಲ್ಲಿದ್ದು ಬೇರೆ ರಾಜರಿಗಿಂತ ಚಕ್ರವರ್ತಿಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಮನುಷ್ಯರಿಗೆ ನಿಯಾಮಕನಾದುದರಿಂದ **ನರಾಧಿಪ**ನೆಂದು ಹೆಸರುಳ್ಳವನನ್ನಾಗಿ, ವಿದ್ಧಿ=ತಿಳಿ ॥ ೨೭ ॥

ಗೀ ॥ ಆಯುಧಾನಾಮಹಂ ವಜ್ರಂ ಧೇನೂನಾಮಸ್ಮಿ ಕಾಮಧುಕ್ ।
ಪ್ರಜನಶ್ಚಾಸ್ಮಿ ಕಂದರ್ಪಃ ಸರ್ಪಾಣಾಮಸ್ಮಿ ವಾಸುಕಿಃ ॥ ೨೮ ॥

ಅ ॥ ಅಹಂ=ನಾನು, ಆಯುಧಾನಾಂ=ಆಯುಧಗಳ ಮಧ್ಯದಲ್ಲಿ, ವಜ್ರಂ=ವಜ್ರಾಯುಧಕ್ಕೆ ನಿಯಾಮಕನಾಗಿ, ಇಂದ್ರಾಯುಧದಲ್ಲಿದ್ದವನಾಗಿ ಬೇರೆ ಎಲ್ಲಾ ಆಯುಧಗಳಿಗಿಂತಲೂ ವಜ್ರಾಯುಧಕ್ಕೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು, ದೋಷಲೇಶರಹಿತನಾದುದರಿಂದ ಅಥವಾ ಶತ್ರುಗಳು ಶ್ರೀಹರಿಯನ್ನು ಬಿಟ್ಟಿರುವುದರಿಂದ **ವಜ್ರ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಧೇನೂನಾಂ=ಧೇನುಗಳ ಮಧ್ಯದಲ್ಲಿ, ಕಾಮಧುಕ್=ಕಾಮಧೇನುವಿಗೆ ನಿಯಾಮಕನಾಗಿ ಕಾಮಧೇನುವಿನಲ್ಲಿದ್ದವನಾಗಿ ಬೇರೆ ಎಲ್ಲಾ ಗೋವುಗಳಿಗಿಂತಲೂ ಕಾಮಧೇನುವಿಗೆ ಶ್ರೇಷ್ಠತ್ವವನ್ನು ಕೊಟ್ಟು ಇಚ್ಛಿಸುವ ವಸ್ತುಗಳನ್ನೆಲ್ಲಾ ಕೊಡುವವನಾದುದರಿಂದ **ಕಾಮಧುಕ್** ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಪ್ರಜನಃ=ಪ್ರಕೃಷ್ಟವಾದ ಉತ್ಪತ್ತಿಗೆ ಕಾರಣನಾದ, ಕಂದರ್ಪಶ್ಚ=ಮನ್ಮಥನಿಗೆ ನಿಯಾಮಕನಾಗಿ ಮನ್ಮಥನಲ್ಲಿದ್ದು ಆನಿರುದ್ಧಾದಿಗಳಿಗಿಂತ ಶ್ರೇಷ್ಠತ್ವವನ್ನು ಕೊಟ್ಟು ಬಹುಪ್ರಕಾರಗಳಾದ ಆನಂದ ವಿಶೇಷಗಳನ್ನು ಸರ್ವದಾ ಅನುಭವಿಸುವವನಾದುದರಿಂದ **ಕಂದರ್ಪ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಸರ್ಪಾಣಾಂ=ಒಂದು ಶಿರಸ್ಸುಳ್ಳ ಸರ್ಪಗಳ ಮಧ್ಯದಲ್ಲಿ, ವಾಸುಕಿಃ=ವಾಸುಕಿ ಎಂಬ ಸರ್ಪಕ್ಕೆ ನಿಯಾಮಕನಾಗಿ ವಾಸುಕಿಯಲ್ಲಿದ್ದವನಾಗಿ ಬೇರೆ ಒಂದು ತಲೆಯುಳ್ಳ ಸರ್ಪಗಳಿಗಿಂತ ವಾಸುಕಿಗೆ ಶ್ರೇಷ್ಠತ್ವವನ್ನು ಕೊಟ್ಟು, ತನ್ನ ಲೋಕದಲ್ಲಿ ಆವಾಸಮಾಡುವವರಿಗೆ ಅತಿಶಯ ಸುಖವನ್ನು ಕೊಡುವವನಾದುದರಿಂದ **ವಾಸುಕಿ** ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ॥ ೨೮ ॥

ಗೀ ॥ ಅನಂತಶ್ಚಾಸ್ಮಿ ನಾಗಾನಾಂ ವರುಣೋ ಯಾದಸಾಮಹಂ ।
ಪಿತೃಣಾಮರ್ಯಮಾ ಚಾಸ್ಮಿ ಯಮಃ ಸಂಯಮತಾಮಹಂ ॥ ೨೯ ॥

ಅ ॥ ನಾಗಾನಾಂ = ಬಹು ಶಿರಸ್ಸುಗಳುಳ್ಳ ಸರ್ಪಗಳ ಮಧ್ಯದಲ್ಲಿ, **ಅನಂತಶ್ಚ** = ಶೇಷನಿಗೆ ನಿಯಾಮಕನಾಗಿ ಶೇಷನಲ್ಲಿದ್ದು ಶೇಷನಿಗೆ ಬಹುಶಿರಸ್ಸುಗಳುಳ್ಳ ಬೇರೆ ಸರ್ಪಗಳಿಗಿಂತ ಶ್ರೇಷ್ಠತ್ವವನ್ನು ಕೊಟ್ಟು ಸರ್ವದೇಶಕಾಲಗಳಲ್ಲಿ ವ್ಯಾಪಿಸಿಕೊಂಡಿದ್ದು ಸರ್ವಗುಣಪರಿಪೂರ್ಣನಾದುದರಿಂದ **ಅನಂತನೆಂದು** ಹೆಸರುಳ್ಳವನು, ಅಸ್ಮಿ = ಆಗಿರುತ್ತೇನೆ ಅಹಂ = ನಾನು, ಯಾದಸಾಂ = ನೀರಿನಲ್ಲಿರುವ ಪ್ರಾಣಿಗಳ ಮಧ್ಯದಲ್ಲಿ, ವರುಣಃ = ವರುಣನಿಗೆ ನಿಯಾಮಕನಾಗಿ ವರುಣನಲ್ಲಿದ್ದವನಾಗಿ ಬೇರೆ ಜಲಚರ ಪ್ರಾಣಿಗಳಿಗಿಂತ ವರುಣನಿಗೆ ಶ್ರೇಷ್ಠತ್ವವನ್ನು ಕೊಟ್ಟು ಉತ್ಕೃಷ್ಟವಾದ ಆನಂದವನ್ನು ಕೊಡುವವನಾದುದರಿಂದ **ವರುಣನೆಂದು** ಹೆಸರುಳ್ಳವನು, ಅಸ್ಮಿ = ಆಗಿರುತ್ತೇನೆ ಪಿತೃಣಾಂ = ಪಿತೃದೇವತೆಗಳ ಮಧ್ಯದಲ್ಲಿ ಅರ್ಯಮಾ ಚ = ಅರ್ಯಮಾ ಎಂಬುವ ಪಿತೃದೇವತೆಗೆ ನಿಯಾಮಕನಾಗಿ ಆ ಅರ್ಯಮಾ ಎಂಬುವ ಪಿತೃದೇವತೆಯಲ್ಲಿದ್ದು ಬೇರೆ ಪಿತೃದೇವತೆಗಳಿಗಿಂತ ಈತನಿಗೆ ಶ್ರೇಷ್ಠತ್ವವನ್ನು ಕೊಡುತ್ತಾ ತಿಳಿಯಲು ಯೋಗ್ಯವಾದುದೆಲ್ಲವನ್ನು ತಿಳಿಯುವವನಾದುದರಿಂದ **ಅರ್ಯಮಾ** ಎಂದು ಹೆಸರುಳ್ಳವನು, ಅಸ್ಮಿ = ಆಗಿರುತ್ತೇನೆ ಅಹಂ = ನಾನು, ಸಂಯಮತಾಂ = ನಿಗ್ರಹ ಮಾಡುವವರ ಮಧ್ಯದಲ್ಲಿ, ಯಮಃ = ಯಮನಿಗೆ ನಿಯಾಮಕನಾಗಿ ಯಮನಲ್ಲಿದ್ದು ನಿಯಮಸಮಾಡುವವರಿಲ್ಲರಿಗಿಂತಲೂ ಯಮನಿಗೆ ಶ್ರೇಷ್ಠತ್ವವನ್ನು ಕೊಟ್ಟು ನಿಯಮನಕ್ಕೆ ಕಾರಣನಾಗಿರುವುದರಿಂದ **ಯಮನೆಂದು** ಹೆಸರುಳ್ಳವನಾಗಿ **ಯಮ** ಎಂಬುವ **ಅಹಿಂಸಾ ಸತ್ಯಮಸ್ತೇಯಂ** ಇತ್ಯಾದಿ ಶ್ರೇಷ್ಠಗಳಾದ ಧರ್ಮಗಳನ್ನು ಕೊಡುವವನು, ಅಸ್ಮಿ = ಆಗಿರುತ್ತೇನೆ ॥ ೨೯ ॥

ಗೀ ॥ ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ ಕಾಲಃ ಕಲಯತಾಮಹಂ ।
ಮೃಗಾಣಾಂ ಚ ಮೃಗೇಂದ್ರೋಽಹಂ ವೈನತೇಯಶ್ಚ ಪಕ್ಷಿಣಾಂ ॥ ೩೦ ॥

ಅ ॥ ದೈತ್ಯಾನಾಂ = ದೈತ್ಯರ ಮಧ್ಯದಲ್ಲಿ, ಪ್ರಹ್ಲಾದಶ್ಚ = ಪ್ರಹ್ಲಾದನೆಂಬುವ ದೈತ್ಯನಿಗೆ ನಿಯಾಮಕನಾಗಿ ಅತನಲ್ಲಿದ್ದು ಎಲ್ಲಾ ದೈತ್ಯರಿಗಿಂತಲೂ ಪ್ರಹ್ಲಾದನಿಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಸರ್ವೋತ್ಕೃಷ್ಟವಾದ ಆನಂದವುಳ್ಳವನಾಗಿರುವುದರಿಂದ ಪ್ರಹ್ಲಾದನೆಂದು ಹೆಸರುಳ್ಳವನಾಗಿ ಅಸ್ಮಿ = ಆಗಿರುತ್ತೇನೆ ಕಲಯತಾಂ = ಚೆನ್ನಾಗಿ ತಿಳಿದುಕೊಳ್ಳುವವರಿಗೆ ಅಥವಾ ಬಂಧನವೇ ಮೊದಲಾದವುಗಳನ್ನು ಮಾಡುವವರಿಗೆ, ಕಾಲಃ = ನಿಯಾಮಕನಾಗಿ ಕಾಲದಲ್ಲಿದ್ದು ಬಂಧನಾದಿಗಳನ್ನು ಮಾಡುವ ಇತರರಿಗಿಂತ ಕಾಲಕ್ಕೆ ಶ್ರೇಷ್ಠತ್ವವನ್ನು ಕೊಡುತ್ತಾ ಸಮಸ್ತವನ್ನು ಚೆನ್ನಾಗಿ ತಿಳಿದುಕೊಳ್ಳುವವನಾದುದರಿಂದ **ಕಾಲನೆಂದು** ಹೆಸರುಳ್ಳವನು, ಅಸ್ಮಿ = ಆಗಿರುತ್ತೇನೆ ಅಹಂ = ನಾನು, ಮೃಗಾಣಾಂ ಚ = ಮೃಗಗಳ ಮಧ್ಯದಲ್ಲಿ, ಮೃಗೇಂದ್ರಃ = ಸಿಂಹಕ್ಕೆ ನಿಯಾಮಕನಾಗಿ ಸಿಂಹದಲ್ಲಿದ್ದು ಎಲ್ಲಾ ಮೃಗಗಳಿಗಿಂತಲೂ ಸಿಂಹಕ್ಕೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಭಕ್ತಿಪೂರ್ವಕವಾಗಿ ಪರಮಾತ್ಮನನ್ನು ಹುಡುಕುವ ಭಕ್ತರಿಗೆ ಅಧಿಪತಿಯಾಗಿರುವುದರಿಂದ **ಮೃಗೇಂದ್ರನೆಂದು** ಹೆಸರುಳ್ಳವನು, ಅಸ್ಮಿ = ಆಗಿರುತ್ತೇನೆ ಪಕ್ಷಿಣಾಂ = ಹಕ್ಕಿಗಳ ಮಧ್ಯದಲ್ಲಿ ವೈನತೇಯಶ್ಚ = ಗರುಡನಿಗೆ ನಿಯಾಮಕನಾಗಿ ಗರುಡನಲ್ಲಿದ್ದು ಎಲ್ಲಾ ಹಕ್ಕಿಗಳಿಗಿಂತಲೂ ಗರುಡನಿಗೆ ಶ್ರೇಷ್ಠತ್ವವನ್ನು ಕೊಟ್ಟು ವಿಶೇಷವಾಗಿ ನಮಸ್ಕರಿಸುವ ಭಕ್ತರಿಗೆ ಆಶ್ರಯನಾಗಿರುವುದರಿಂದ **ವೈನತೇಯನೆಂದು** ಹೆಸರುಳ್ಳವನು, ಅಸ್ಮಿ = ಆಗಿರುತ್ತೇನೆ. ॥ ೩೦ ॥

ಪೀ—ಸಿದ್ಧಾನಾಂ ಕಪಿಲೋ ಮುನಿಃ ಎಂಬುವಲ್ಲಿದ್ದ ಕಪಿಲಶಬ್ದದ ಅರ್ಥವನ್ನು ಹೇಳುತ್ತಾರೆ—

ಭಾ ॥ (೧) ಸುಖರೂಪಃ ಪಾಲ್ಯತೇ ಲೀಯತೇ ಚ ಜಗದನೇನೇತಿ ಕಪಿಲಃ । ಪ್ರೀತಿಸ್ಸುಖಂ ಕಮಾನಂದ ಇತ್ಯಭಿಧಾನಾತ್ ॥ (೨) ಪ್ರಾಣೋ ಬ್ರಹ್ಮ ಕಂ ಬ್ರಹ್ಮ ಖಂ ಬ್ರಹ್ಮೇತಿ ಚ ॥ (೩) ಋಷಿಂ ಪ್ರಸೂತಂ ಕಪಿಲಂ ಯಸ್ತಮಗ್ರೇ ಜ್ಞಾನೈರ್ಬಿಭರ್ತಿ ಜಾಯಮಾನಂ ಚ ಪಶ್ಯೇತ್ । ಸುಖಾದನಂತಾತ್ಪಾಲನಾಲ್ಲಾಪನಾಚ್ಚ ಯಂ ವೈದೇವಂ ಕಪಿಲಮುದಾಹರಂತೀತಿ ಬಾಭ್ರವ್ಯಶಾಖಾಯಾಂ ॥ ೨೬—೩೦ ॥

ಅ ॥ (೧) ಶ್ರೀಹರಿಯು ಆನಂದರೂಪನು ಜಗತ್ತಿಗೆ ಪಾಲಕನು, ಜಗತ್ತಿಗೆ ನಾಶಕನು ಈ ನಿಮಿತ್ತದಿಂದ **ಕಪಿಲ** ಎನಿಸುತ್ತಾನೆ (ಕ ಶಬ್ದಕ್ಕೆ ಸುಖವೆಂಬುವ ಅರ್ಥವಿದೆ ಎಂಬುವಲ್ಲಿ ಅಭಿಧಾನವನ್ನು ಪ್ರಯೋಗವನ್ನು ಹೇಳುತ್ತಾರೆ) ಪ್ರೀತಿ ಸುಖ, ಕ ಆನಂದ ಇವು ಪರ್ಯಾಯಪದವು ಎಂದು ಕ ಶಬ್ದವು ಸುಖ ಎಂಬುವ ಅರ್ಥವನ್ನು ಹೇಳುತ್ತದೆ, ಎಂದಭಿದಾನವು (೨) ಸರ್ವಜೇಷ್ಠಕನಾದ ಶ್ರೀಪರಮಾತ್ಮನು ಪೂರ್ಣಸುಖಸ್ವರೂಪನು ಪೂರ್ಣ ಜ್ಞಾನಸ್ವರೂಪನು (೩) (ಹಿಂದೆ ಹೇಳಿದ ಎಲ್ಲಾ ಅರ್ಥಗಳಲ್ಲಿ ಶ್ರುತಿಯನ್ನು ಹೇಳುತ್ತಾರೆ-) ಯಾವಾತನು ಪೂರ್ವಕಲ್ಪಗಳಲ್ಲಿ ಹುಟ್ಟಿದ, ಈಗ ಹುಟ್ಟುತ್ತಿರುವ, ಮುಂದಿನ ಕಲ್ಪಗಳಲ್ಲಿ ಹುಟ್ಟಲಿರುವ ಜಗತ್ತನ್ನು ಮೊದಲು ಜ್ಞಾನಗಳಿಂದ ತಿಳಿಯುತ್ತಾನೋ, ಅಂತಹ ಪರಮಾತ್ಮನನ್ನು ಸರ್ವಜ್ಞನಾಗಿರುವುದರಿಂದ ಋಷಿಯನ್ನಾಗಿ ತಿಳಿಯಬೇಕು ಅವಿನಾಶಿಯಾದ ಆನಂದದಿಂದಲೂ ಸರ್ವ ಜಗತ್ತನ್ನು ರಕ್ಷಿಸುವುದರಿಂದಲೂ ಸರ್ವ ಜಗತ್ತನ್ನು ಪ್ರಳಯಕಾಲದಲ್ಲಿ ನಾಶಗೊಳಿಸುವುದರಿಂದಲೂ ಕ್ರೀಡಾವಿಶಿಷ್ಟನಾದ ಶ್ರೀಹರಿಯನ್ನು ಕಪಿಲನನ್ನಾಗಿ ಹೇಳುತ್ತಾರೆ, ಎಂದು ಬಾಭ್ರವ್ಯಶಾಖೆಯಲ್ಲಿ ಹೇಳಿದೆ ॥ ೨೬ – ೩೦ ॥

ಗೀ ॥ ಪವನಃ ಪವತಾಮಸ್ಮಿ ರಾಮಃ ಶಸ್ತ್ರಭೃತಾಮಹಂ ।
ಝಷಾಣಾಂ ಮಕರಶ್ಚಾಸ್ಮಿ ಸ್ರೋತಸಾಮಸ್ಮಿ ಜಾಹ್ನವೀ ॥ ೩೧ ॥

ಅ ॥ ಪವತಾಂ=ಶೋಧಕ ಪದಾರ್ಥಗಳ ಮಧ್ಯದಲ್ಲಿ ಅಥವಾ ವೇಗವುಳ್ಳ ಪದಾರ್ಥಗಳ ಮಧ್ಯದಲ್ಲಿ, ಪವನಃ=ವಾಯುವಿಗೆ ನಿಯಾಮಕನಾಗಿ ವಾಯುವಿನಲ್ಲಿದ್ದವನಾಗಿ, ಶೋಧಕ ಅಥವಾ ವೇಗವುಳ್ಳ ಎಲ್ಲಾ ಪದಾರ್ಥಗಳಿಗಿಂತಲೂ ವಾಯುವಿಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಜಗದ್ರಕ್ಷಕರಾದ ದೇವತೆಗಳಿಂದ ಪೂಜಿಸಲ್ಪಡುವುದರಿಂದ **ಪವನಃ** ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಅಹಂ=ನಾನು, ಶಸ್ತ್ರಭೃತಾಂ=ಶಸ್ತ್ರಧಾರಿಗಳ ಮಧ್ಯದಲ್ಲಿ, ರಾಮಃ=ತಾನು ಯಾವಾಗಲೂ ಸಂತೋಷವನ್ನು ಹೊಂದಿಕೊಂಡಿರುವುದರಿಂದಲೂ ಲೋಕವನ್ನು ಸಂತೋಷಗೊಳಿಸುವುದರಿಂದಲೂ **ರಾಮಃ** ಎಂದು ಹೆಸರುಳ್ಳವನು ನಾನು ಝಷಾಣಾಂ=ಮೀನುಗಳ ಮಧ್ಯದಲ್ಲಿ, ಮಕರಶ್ಚ=ಮೊಸಳೆಗೆ ನಿಯಾಮಕನಾಗಿ ಮೊಸಳೆಯಲ್ಲಿದ್ದವನಾಗಿ ಬೇರೆ ಮೀನುಗಳಿಗಿಂತ ಮೊಸಳೆಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಸಾಧಾರಣ ಜನರಿಗೆ ಅಲ್ಪ ಜ್ಞಾನವನ್ನುಂಟುಮಾಡುವುದರಿಂದ **ಮಕರ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಸ್ರೋತಸಾಂ=ನದಿಗಳ ಮಧ್ಯದಲ್ಲಿ, ಜಾಹ್ನವಿ=ಭಾಗೀರಥಿಗೆ ನಿಯಾಮಕನಾಗಿ ಭಾಗೀರಥಿಯಲ್ಲಿದ್ದವನಾಗಿ ಬೇರೆ ನದಿಗಳಿಗಿಂತ ಭಾಗೀರಥಿಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಸಂಸಾರವು ನಿಸ್ಸಾರವೆಂದು ತಿಳಿದು ಸಂಸಾರವನ್ನು ಬಿಡುವ ಭಕ್ತರನ್ನು ರಕ್ಷಿಸುವವನಾದುದರಿಂದ **ಜಾಹ್ನವೀ** ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ॥ ೩೧ ॥

ಗೀ ॥ ಸರ್ಗಾಣಾಮಾದಿರಂತಶ್ಚ ಮಧ್ಯಂ ಚೈವಾಹಮರ್ಜುನ ।
ಅಧ್ಯಾತ್ಮವಿದ್ಯಾ ವಿದ್ಯಾನಾಂ ವಾದಃ ಪ್ರವದತಾಮಹಂ ॥ ೩೨ ॥

ಅ ॥ ಅರ್ಜುನ=ಅರ್ಜುನನೇ, ಸರ್ಗಾಣಾಂ=ಸೃಷ್ಟಿಸಲ್ಪಡುವ ಪ್ರಾಣಿಗಳಿಗೆ, ಅಹಮೇವ=ನಾನೇ, ಆದಿಃ=ಕಾರಣನು, ಅಂತಶ್ಚ=ನಾಶಮಾಡುವವನು, ಮಧ್ಯಂ ಚ=ಸ್ಥಿತಿಕರ್ತನು, (ಅಂದರೆ ಸೃಷ್ಟಿ ಸ್ಥಿತಿ ಸಂಹಾರಗಳಿಗೆ ಕಾರಣನು ನಾನೇ) ವಿದ್ಯಾನಾಂ=ವಿದ್ಯೆಗಳ ಮಧ್ಯದಲ್ಲಿ, ಅಧ್ಯಾತ್ಮವಿದ್ಯಾ=ಸರ್ವೋತ್ಕೃಷ್ಟವಾದ ಬ್ರಹ್ಮವಿದ್ಯೆಗೆ ನಿಯಾಮಕನಾಗಿ ಬ್ರಹ್ಮವಿದ್ಯೆಯಲ್ಲಿರುವವನಾಗಿ ಬೇರೆ ವಿದ್ಯೆಗಳಿಗಿಂತ ಬ್ರಹ್ಮವಿದ್ಯೆಗೆ ಶ್ರೇಷ್ಠತ್ವವನ್ನು ಕೊಟ್ಟು ಸಮಸ್ತ ಜೀವರಿಗೆ ಅಧಿಪತಿಯಾಗಿರುವುದರಿಂದಲೂ ಜ್ಞಾನಸ್ವರೂಪನಾಗಿರುವುದರಿಂದಲೂ. ಅಧ್ಯಾತ್ಮವಿದ್ಯಾ ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಅಹಂ=ನಾನು, ಪ್ರವದತಾಂ=ವಾದ ಜಲ್ಪ ವಿತಂಡಾ ಕಥೆಗಳನ್ನು ಮಾಡುವ ಜನರಲ್ಲಿ, ನಡೆಯಲ್ಪಡುವ, ವಾದಃ=ವಾದವೆಂಬುವ ಕಥೆಗೆ ನಿಯಾಮಕನಾಗಿ ವಾದ ಕಥೆಯಲ್ಲಿದ್ದು ಬೇರೆ ಕಥೆಗಳಿಗಿಂತ ವಾದ ಕಥೆಗೆ ಶ್ರೇಷ್ಠತ್ವವನ್ನು ಕೊಟ್ಟು ವೇದಗಳಿಂದ ವಾಚ್ಯನಾಗಿರುವುದರಿಂದ **ವಾದ** ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ॥ ೩೨ ॥

ಗೀ॥ ಅಕ್ಷರಾಣಾಮಕಾರೋಽಸ್ಮಿ ದ್ವಂದ್ವಃ ಸಾಮಾಸಿಕಸ್ಯ ಚ ।
ಅಹಮೇವಾಕ್ಷಯಃ ಕಾಲೋ ಧಾತಾಽಹಂ ವಿಶ್ವತೋಮುಖಃ॥ ೩೩ ॥

ಅ ॥ ಅಕ್ಷರಾಣಾಂ=ಅಕ್ಷರಗಳ ಮಧ್ಯದಲ್ಲಿ, ಅಕಾರಃ=ಅ ಎಂಬುವ ಅಕ್ಷರಕ್ಕೆ ನಿಯಾಮಕನಾಗಿ ಅ ಎಂಬುವ ಅಕ್ಷರದಲ್ಲಿದ್ದು ಬೇರೆ ಅಕ್ಷರಗಳಿಗಿಂತ ಅ ಎಂಬುವ ಅಕ್ಷರಕ್ಕೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಅ ಎಂದು ಕರೆಯಲ್ಪಡುವವನಾದುದರಿಂದ **ಅ** ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಸಾಮಾಸಿಕಸ್ಯ=ಸಮಾಸಸಮೂಹದಲ್ಲಿ, ದ್ವಂದ್ವಃ=ದ್ವಂದ್ವಸಮಾಸಕ್ಕೆ ನಿಯಾಮಕನಾಗಿ ದ್ವಂದ್ವ ಸಮಾಸದಲ್ಲಿದ್ದು ಬೇರೆ ಸಮಾಸಗಳಿಗಿಂತ ದ್ವಂದ್ವಸಮಾಸಕ್ಕೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಸರ್ವ ಪದಾರ್ಥಗಳಲ್ಲಿಯೂ ಹೊರಗೂ ಒಳಗೂ ಎರಡು ರೂಪಗಳಿಂದ ಇರುವುದರಿಂದ **ದ್ವಂದ್ವ** ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಅಹಮೇವ=ನಾನೇ ಅಕ್ಷಯಃ=ನಾಶವಿಲ್ಲದಿರುವುದರಿಂದ **ಅಕ್ಷಯ** ನೆಂದು ಹೆಸರುಳ್ಳವನು, ಕಾಲಃ=ಪ್ರಳಯಕಾಲದಲ್ಲಿ ಜಗತ್ತನ್ನು ಸಂಹಾರಮಾಡುವುದರಿಂದ **ಕಾಲ** ನೆಂದು ಹೆಸರುಳ್ಳವನೂ ಆಗಿ ಅಕ್ಷಯಕಾಲದಲ್ಲಿರುವವನು (ಅಂದರೆ ಭೂತ ಭವಿಷ್ಯತ್ ವರ್ತಮಾನಗಳೆಂಬುವ ಮೂರು ಕಾಲಗಳಲ್ಲಿಯೂ ಇರುವವನು,) ಆಗಿರುತ್ತೇನೆ ಧಾತಾ=ಜಗತ್ತಿನ ಧಾರಣ ಪೋಷಣಗಳನ್ನು ಮಾಡುವವನು, ವಿಶ್ವತೋಮುಖಃ=ಸಮಸ್ತ ದಿಕ್ಕುಗಳಲ್ಲಿಯೂ ಮುಖಗಳುಳ್ಳವನಾದುದರಿಂದ **ವಿಶ್ವತೋಮುಖ**ನೆಂದು ಹೆಸರುಳ್ಳವನಾಗಿ ಚತುರ್ಮುಖನಲ್ಲಿ ನಿಯಾಮಕನಾಗಿರುವವನು, ಅಥವಾ ಎಲ್ಲಾ ಕಡೆಗಳಲ್ಲಿಯೂ ಇರುವ ಮುಖ ಮೊದಲಾದ ಸಮಸ್ತ ಅವಯವಗಳುಳ್ಳವನು (ಆಗಿರುತ್ತೇನೆ) ॥ ೩೩ ॥

ಗೀ ॥ ಮೃತ್ಯುಃ ಸರ್ವಹರಶ್ಚಾಹಮುದ್ಭವಶ್ಚ ಭವಿಷ್ಯತಾಂ ।
ಕೀರ್ತಿಃ ಶ್ರೀರ್ವಾಕ್ಚ ನಾರೀಣಾಂ ಸ್ಮೃತಿರ್ಮೇಧಾ ಧೃತಿಃ ಕ್ಷಮಾ॥೩೪॥

ಅ ॥ ಅಹಂ=ನಾನು ಸರ್ವಹರಃ=ಎಲ್ಲವನ್ನು ಸಂಹಾರಮಾಡುವವನಾದುದರಿಂದ, ಮೃತ್ಯುಃ=ಮೃತ್ಯುವೆಂದು ಹೆಸರುಳ್ಳವನಾಗಿ ಮೃತ್ಯುವಿಗೆ ನಿಯಾಮಕನಾಗಿ, ಮೃತ್ಯುವಿನಲ್ಲಿರುವವನು. ಭವಿಷ್ಯ

ತಾಂ=ಮುಂದೆ ಹುಟ್ಟುವವರ, ಉದ್ಭವಶ್ಚ=ಹುಟ್ಟುವಿಕೆಗೆ ನಿಯಾಮಕನಾಗಿ ಹುಟ್ಟುವಂತೆ ಮಾಡುವುದರಿಂದ **ಉದ್ಭವ** ಎಂದು ಹೆಸರುಳ್ಳವನಾಗಿ, ಉದ್ಭವದಲ್ಲಿರುವವನು ಆಗಿರುತ್ತೇನೆ ನಾರೀಣಾಂ=ಸ್ತ್ರೀಯರ, ಕೀರ್ತಿಃ=ಕೀರ್ತಿಗೆ ನಿಯಾಮಕನಾಗಿ ಕೀರ್ತಿಯಲ್ಲಿದ್ದು ಸ್ತುತಿಸಲ್ಪಡುವುದರಿಂದ **ಕೀರ್ತಿ** ಎಂದು ಹೆಸರುಳ್ಳವನು ಶ್ರೀಃ=ಕಾಂತಿಗೆ ನಿಯಾಮಕನಾಗಿ ಕಾಂತಿಯಲ್ಲಿದ್ದು ಕಾಂತಿಗೆ ಆಶ್ರಯನಾಗಿರುವುದರಿಂದ **ಶ್ರೀಃ** ಎಂದು ಹೆಸರುಳ್ಳವನು ವಾಕ್=ವಾಕ್ಯಗಳಿಗೆ ನಿಯಾಮಕನಾಗಿ ವಾಕ್ಯದಲ್ಲಿದ್ದು ಸರ್ವವನ್ನು ಹೇಳುವವನಾದುದರಿಂದ **ವಾಕ್** ಎಂದು ಹೆಸರುಳ್ಳವನು ಸ್ಮೃತಿಃ=ಸ್ಮರಿಸುವುದಕ್ಕೆ ನಿಯಾಮಕನಾಗಿ ಸ್ಮರಿಸುವುದರಲ್ಲಿದ್ದು ಸ್ಮರಿಸಿಕೊಳ್ಳಲಿಕ್ಕೆ ಯೋಗ್ಯನಾಗಿರುವುದರಿಂದ **ಸ್ಮೃತಿ** ಎಂದು ಹೆಸರುಳ್ಳವನು, ಮೇಧಾ=ಜ್ಞಾನವಿಶೇಷಕ್ಕೆ (ಧಾರಣಶಕ್ತಿಯುಳ್ಳ ಬುದ್ಧಿಗೆ) ನಿಯಾಮಕನಾಗಿ ಮೇಧಾದಲ್ಲಿದ್ದು **ಮೇಧಾಸ್ವರೂಪ**ನಾಗಿರುವುದರಿಂದ **ಮೇಧಾ** ಎಂದು ಹೆಸರುಳ್ಳವನು ಧೃತಿಃ=ಧೈರ್ಯಕ್ಕೆ ನಿಯಾಮಕನಾಗಿ ಧೈರ್ಯದಲ್ಲಿದ್ದು ಸರ್ವ ಜಗತ್ತನ್ನು ತಾನೇ ಧರಿಸುವುದರಿಂದ **ಧೃತಿ** ಎಂದು ಹೆಸರುಳ್ಳವನು. ಕ್ಷಮಾ=ಸಹನೆಗೆ (ತಾಳ್ಮೆಗೆ) ನಿಯಾಮಕನಾಗಿ ಕ್ಷಮೆಯಲ್ಲಿದ್ದು ಕ್ಷಮಾಸ್ವರೂಪನಾದುದರಿಂದ **ಕ್ಷಮಾ** ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ॥ ೩೪ ॥

ಗೀ ॥ ಬೃಹತ್ಸಾಮ ತಥಾ ಸಾಮ್ನಾಂ ಗಾಯತ್ರೀ ಛಂದಸಾಮಹಂ ।
ಮಾಸಾನಾಂ ಮಾರ್ಗಶೀರ್ಷೋಽಹಮೃತೂನಾಂ ಕುಸುಮಾಕರಃ॥೩೫॥

ಅ ॥ ಸಾಮ್ನಾಂ=ರಥಂತರ ವೈರೂಪ, ವೈರಾಜ ಶಾಕ್ವರ ಮೊದಲಾದ ಸಾಮಗಳ ಮಧ್ಯದಲ್ಲಿ, ಅಹಂ=ನಾನು, ಬೃಹತ್ಸಾಮ=ಬೃಹತ್ಸಾಮಕ್ಕೆ ನಿಯಾಮಕನಾಗಿ ಬೃಹತ್ಸಾಮದಲ್ಲಿದ್ದು ಬೇರೆ ಎಲ್ಲಾ ಸಾಮಗಳಿಗಿಂತ ಬೃಹತ್ಸಾಮಕ್ಕೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು, ಸರ್ವಗುಣಪರಿಪೂರ್ಣನೂ ಸರ್ವೋತ್ತಮನೂ ಸಂಪೂರ್ಣ ತಿಳಿಯಲಶಕ್ಯನೂ ಆದುದರಿಂದ **ಬೃಹತ್ಸಾಮ**ನೆಂದು ಹೆಸರುಳ್ಳವನು, ತಥಾ=ಹಾಗೆಯೇ, ಅಹಂ=ನಾನು, ಛಂದಸಾಂ=ತ್ರಿಷ್ಟುಪ್ ಜಗತೀ ಮೊದಲಾದ ಛಂದಸ್ಸುಗಳ ಮಧ್ಯದಲ್ಲಿ, ಗಾಯತ್ರೀ=ಗಾಯತ್ರೀ ಛಂದಸ್ಸಿಗೆ ನಿಯಾಮಕನಾಗಿ ಗಾಯತ್ರೀ ಛಂದಸ್ಸಿನಲ್ಲಿದ್ದು ಬೇರೆ ಎಲ್ಲಾ ಛಂದಸ್ಸುಗಳಿಗಿಂತ ಗಾಯತ್ರೀ ಛಂದಸ್ಸಿಗೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ತನ್ನ ಸ್ತುತಿಯನ್ನು ಮಾಡುವವರನ್ನು ರಕ್ಷಿಸುವುದರಿಂದ **ಗಾಯತ್ರೀ** ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಮಾಸಾನಾಂ=ಚೈತ್ರ ಮೊದಲಾದ ಮಾಸಗಳ ಮಧ್ಯದಲ್ಲಿ, ಮಾರ್ಗಶೀರ್ಷಃ=ಮಾರ್ಗಶೀರ್ಷ ಮಾಸಕ್ಕೆ ನಿಯಾಮಕನಾಗಿ ಮಾರ್ಗಶೀರ್ಷಮಾಸದಲ್ಲಿದ್ದು ಚೈತ್ರಾದಿ ಮಾಸಗಳಿಗಿಂತ ಮಾರ್ಗಶೀರ್ಷಮಾಸಕ್ಕೆ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಅರ್ಚಿರಾದಿ ಮಾರ್ಗಗಳಿಗೆ ಅಂತಿಮನಾಗಿ ಶೀರ್ಷಸ್ಥಾನನಾಗಿರುವುದರಿಂದ **ಮಾರ್ಗಶೀರ್ಷ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಋತೂನಾಂ=ಋತುಗಳ ಮಧ್ಯದಲ್ಲಿ, ಕುಸುಮಾಕರಃ=ವಸಂತಋತುವಿಗೆ ನಿಯಾಮಕನಾಗಿ ವಸಂತಋತುವಿನಲ್ಲಿದ್ದು ಬೇರೆ ಋತುಗಳಿಗಿಂತ ವಸಂತಋತುವಿಗೆ ಶ್ರೇಷ್ಠತ್ವವನ್ನು ಕೊಟ್ಟು ಕುತ್ಸಿತವಾದ ಜ್ಞಾನವನ್ನು ಯಥಾರ್ಥವಾದ ಜ್ಞಾನವನ್ನುಂಟುಮಾಡುವುದರಿಂದ **ಕುಸುಮಾಕರ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ॥ ೩೫ ॥

ಗೀ ॥ ದ್ಯೂತಂ ಛಲಯತಾಮಸ್ಮಿ ತೇಜಸ್ತೇಜಸ್ವಿನಾಮಹಂ ।
ಜಯೋಽಸ್ಮಿ ವ್ಯವಸಾಯೋಽಸ್ಮಿ ಸತ್ತ್ವಂ ಸತ್ತ್ವವತಾಮಹಂ ॥ ೩೬ ॥

ಅ ॥ ಛಲಯತಾಂ=ಕಪಟವನ್ನು ಮಾಡುವುದರಲ್ಲಿರುವ, ದ್ಯೂತಂ=ಜೂಜಾಟಕ್ಕೆ ನಿಯಾಮಕನಾಗಿ ಜೂಜಾಟದಲ್ಲಿದ್ದು ಕ್ರೀಡೆಯಲ್ಲಿ ಆಸಕ್ತನಾಗಿರುವುದರಿಂದ **ದ್ಯೂತ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರು

ತ್ತೇನೆ. ಅಹಂ=ನಾನು, ತೇಜಸ್ವಿನಾಂ=ತೇಜಸ್ಸುಳ್ಳವರ ಮಧ್ಯದಲ್ಲಿ, ತೇಜಃ=ತೇಜಸ್ಸಿಗೆ ನಿಯಾಮಕನಾಗಿ ತೇಜಸ್ಸಿನಲ್ಲಿದ್ದು ಪ್ರಕಾಶಪಡಿಸುವನಾದುದರಿಂದ ತೇಜಃ ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ. (ಜಯಿನಾಂ=ಜಯವುಳ್ಳವರಿಗೆ) ಜಯಃ=ಜಯಕ್ಕೆ ನಿಯಾಮಕನಾಗಿ ಜಯದಲ್ಲಿದ್ದು ಜಯರೂಪ ಶ್ರೇಷ್ಠಧರ್ಮವನ್ನು ಕೊಡತಕ್ಕವನಾದುದರಿಂದ **ಜಯ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ವ್ಯವಸಾಯಃ=ನಿಶ್ಚಯಜ್ಞಾನಕ್ಕೆ ನಿಯಾಮಕನಾಗಿ ನಿಶ್ಚಯಜ್ಞಾನದಲ್ಲಿದ್ದು ನಿಶ್ಚಯಜ್ಞಾನವುಳ್ಳವರಿಗೆ ವ್ಯವಸಾಯ (ನಿಶ್ಚಯ) ರೂಪವಾದ ಶ್ರೇಷ್ಠಧರ್ಮವನ್ನು ಕೊಡತಕ್ಕವನಾದುದರಿಂದ ವ್ಯವಸಾಯನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ. ಅಹಂ=ನಾನು, ಸತ್ವವತಾಂ=ಬಲವುಳ್ಳವರಲ್ಲಿ, ಸತ್ವಂ=ಬಲಕ್ಕೆ ನಿಯಾಮಕನಾಗಿ ಬಲದಲ್ಲಿದ್ದು ಸತ್ವರೂಪಶ್ರೇಷ್ಠಧರ್ಮವನ್ನು ಕೊಡತಕ್ಕವನಾದುದರಿಂದ **ಸತ್ವ**ನೆಂದು ಹೆಸರುಳ್ಳವನು ಅಸ್ಮಿ=ಆಗಿರುತ್ತೇನೆ ॥ ೩೬ ॥

ಪೀ—ರಾಮಃ ಶಸ್ತ್ರಭೃತಾಮಹಂ ಎಂಬುವಲ್ಲಿದ್ದ ರಾಮಶಬ್ದಾರ್ಥವನ್ನು ಹೇಳುತ್ತಾರೆ—

ಭಾ ॥ (೧) ಆನಂದರೂಪತ್ವಾತ್ಪೂರ್ಣತ್ವಾಲ್ಲೋಕರಮಣತ್ವಾಚ್ಚ ರಾಮಃ ॥ (೨) ಆನಂದ-ರೂಪೋ ನಿಷ್ಪರಿಮಾಣ ಏಷ ಲೋಕಶ್ಚೈತಸ್ಮಾದ್ರಮತೇ ತೇನ ರಾಮ ಇತಿ ಶಾಂಡಿಲ್ಯ-ಶಾಖಾಯಾಂ । ರಶ್ಚಾಮಶ್ಚೇತಿ ವ್ಯುತ್ಪತ್ತಿಃ ॥ ೩೧—೩೬ ॥

ಅ ॥ (೧) ಆನಂದರೂಪನಾಗಿರುವುದರಿಂದಲೂ, ಸರ್ವಗುಣಪರಿಪೂರ್ಣನಾದುದರಿಂದಲೂ ಮತ್ತು ಎಲ್ಲಾ ಲೋಕಗಳನ್ನು ಸಂತೋಷಗೊಳಿಸುವುದರಿಂದಲೂ, ರಾಮಃ ಎನಿಸುತ್ತಾನೆ (೨) ಆನಂದ ರೂಪನು, ಪರಿಮಿತಿಯಿಲ್ಲದವನು. (ಸರ್ವ ಗುಣಪರಿಪೂರ್ಣನು) ಎಲ್ಲಾ ಲೋಕಕ್ಕೆ ಸಂತೋಷಕಾರಣನೂ ಆಗಿರುತ್ತಾನೆ ಅದರಿಂದ ರಾಮನೆನಿಸುತ್ತಾನೆ, ಎಂದು ಶಾಂಡಿಲ್ಯಶಾಖೆಯಲ್ಲಿ (ಸುಖರೂಪನು ಗುಣಪರಿಪೂರ್ಣನು ಎಂಬುವ ಅರ್ಥದಲ್ಲಿ ವಿಗ್ರಹ ತೋರಿಸುತ್ತಾರೆ.) ಸುಖಸ್ವರೂಪನು ಪರಿಮಿತಿಯಿಲ್ಲದವನುಎಂದು ವ್ಯುತ್ಪತ್ತಿಯು ॥ ೩೧—೩೬ ॥

ಗೀ ॥ ವೃಷ್ಣೀನಾಂ ವಾಸುದೇವೋಽಸ್ಮಿ ಪಾಂಡವಾನಾಂ ಧನಂಜಯಃ ।
ಮುನೀನಾಮಪ್ಯಹಂ ವ್ಯಾಸಃ ಕವೀನಾಮುಶನಾಃ ಕವಿಃ ॥ ೩೭ ॥

ಅ ॥ ಅಹಂ=ನಾನು, ವೃಷ್ಣೀನಾಂ=ಯಾದವರಲ್ಲಿ, ವಾಸುದೇವಃ=ಸರ್ವವನ್ನು ಮರೆಮಾಡಿಕೊಂಡಿದ್ದ ಪ್ರಯುಕ್ತವೂ, ಸರ್ವರನ್ನು ಆವಾಸಗೊಳಿಸುವುದರಿಂದಲೂ ತಾನು ಸರ್ವ ದೇಶ ಕಾಲಗಳಲ್ಲಿ ಆವಾಸಮಾಡಿಕೊಂಡಿರುವುದರಿಂದಲೂ **ವಾಸು** ಎಂದೂ ಕ್ರೀಡಾದಿಗುಣವಿಶಿಷ್ಟನಾದುದರಿಂದ **ದೇವ**ನೆಂದೂ, ಹೀಗೆ **ವಾಸುದೇವ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ (ಇದು ಶ್ರೀಪರಮಾತ್ಮನ ಪ್ರತ್ಯಕ್ಷ ವಿಭೂತಿ ರೂಪವು) ಪಾಂಡವಾನಾಂ=ಪಾಂಡವರ ಮಧ್ಯದಲ್ಲಿ, ಧನಂಜಯಃ=ಅರ್ಜುನನಿಗೆ ನಿಯಾಮಕನಾಗಿ ಅರ್ಜುನನಲ್ಲಿದ್ದು ಭೀಮಸೇನನನ್ನು ಬಿಟ್ಟು, ಬೇರೆ ಧರ್ಮರಾಜಾದಿಗಳಿಗಿಂತ ಅರ್ಜುನನಿಗೆ ಶ್ರೇಷ್ಠತ್ವವನ್ನು ಕೊಟ್ಟು ಧನಕ್ಕಾಗಿ ಸರ್ವರಾಜರನ್ನು ಗೆಲ್ಲುವವನಾದುದರಿಂದ **ಧನಂಜಯ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಅಹಂ=ನಾನು ಮುನೀನಾಮಪಿ=ಋಷಿಗಳ ಮಧ್ಯದಲ್ಲಿ **ವ್ಯಾಸ**ಃ=ಸರ್ವೋತ್ಕೃಷ್ಟನೂ ಸರ್ವತ್ರವ್ಯಾಪ್ತನೂ ಆದುದರಿಂದ **ವ್ಯಾಸ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ (ಇದೂ ಪ್ರತ್ಯಕ್ಷ ವಿಭೂತಿರೂಪವು) ಕವೀನಾಂ=ಕವಿಗಳ ಮಧ್ಯದಲ್ಲಿ, ಉಶನಾಃ ಕವಿಃ=ಶುಕ್ರಾಚಾರ್ಯ

ರಿಗೆ ನಿಯಾಮಕನಾಗಿ ಶುಕ್ರಾಚಾರ್ಯರಲ್ಲಿದ್ದು ಬೇರೆ ಕವಿಗಳಿಗಿಂತ ಶ್ರೇಷ್ಠತ್ವವನ್ನು ಹೊಂದಿಸಿಕೊಟ್ಟು ಜಗತ್ತಿಗೆ ಸೃಷ್ಟ್ಯಾದಿಗಳನ್ನು ಮಾಡಬೇಕೆಂದು ಇಚ್ಛೆಯುಳ್ಳವನಾದುದರಿಂದ **ಉಶನಾಃ** ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ॥ ೩೭ ॥

ಗೀ ॥ ದಂಡೋ ದಮಯತಾಮಸ್ಮಿ ನೀತಿರಸ್ಮಿ ಜಿಗೀಷತಾಂ ।
ಮೌನಂ ಚೈವಾಸ್ಮಿ ಗುಹ್ಯಾನಾಂ ಜ್ಞಾನಂ ಜ್ಞಾನವತಾಮಹಂ ॥ ೩೮ ॥

ಅ ॥ ದಮಯತಾಂ=ಶಿಕ್ಷಿಸುವವರ ಮಧ್ಯದಲ್ಲಿ ದಂಡಃ=ಶಿಕ್ಷೆಗೆ ನಿಯಾಮಕನಾಗಿ, ಶಿಕ್ಷೆಯಲ್ಲಿದ್ದು ದುಷ್ಟರನ್ನು ಶಿಕ್ಷಿಸುತ್ತಿರುವುದರಿಂದ ದಂಡನೆಂದು ಹೆಸರುಳ್ಳವನು ಶಿಕ್ಷೆಯನ್ನು ಮಾಡುವವರಿಗೆ ಶಿಕ್ಷಾರೂಪಧರ್ಮವನ್ನು ಕೊಡುವವನು, ಅಸ್ಮಿ=ಆಗಿರುತ್ತೇನೆ ಜಿಗೀಷತಾಂ=ಜಯವನ್ನು ಹೊಂದಲಿಚ್ಛಿಸುವವರಲ್ಲಿ, ನೀತಿಃ=ನೀತಿರೂಪಧರ್ಮಕ್ಕೆ ನಿಯಾಮಕನಾಗಿ ನೀತಿಯಲ್ಲಿದ್ದು ನೀತಿರೂಪ ಶ್ರೇಷ್ಠಧರ್ಮವನ್ನು ಕೊಡುವವನಾದುದರಿಂದ **ನೀತಿ** ಎಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಗುಹ್ಯಾನಾಂ=ಗೋಪ್ಯಗಳಾದ ವಸ್ತುಗಳ ಮಧ್ಯದಲ್ಲಿ, ಮೌನಂ ಚ=ಮೌನಕ್ಕೆ ನಿಯಾಮಕನಾಗಿ, ಮೌನದಲ್ಲಿದ್ದು ಸರ್ವದಾ ಮುನಿಗಳಿಂದ ಪೂಜಿಸಿಕೊಳ್ಳಲ್ಪಡುವವನಾದುದರಿಂದ **ಮೌನ**ನೆಂದು ಹೆಸರುಳ್ಳವನು ಅಸ್ಮಿ=ಆಗಿರುತ್ತೇನೆ ಅಹಂ=ನಾನು ಜ್ಞಾನವತಾಂ=ಜ್ಞಾನವುಳ್ಳವರಲ್ಲಿ ಜ್ಞಾನಂ=ಜ್ಞಾನಕ್ಕೆ ನಿಯಾಮಕನಾಗಿ ಜ್ಞಾನದಲ್ಲಿದ್ದು ಜ್ಞಾನಿಗಳಿಗೆ ಜ್ಞಾನನೆಂಬುವ ಸಾರಧರ್ಮವನ್ನು ಕೊಡುತ್ತಾ ಜ್ಞಾನರೂಪನಾದುದರಿಂದ **ಜ್ಞಾನ**ನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ॥ ೩೮ ॥

ಹೀ—ವೃಷ್ಣೀನಾಂ ವಾಸುದೇವೋಽಸ್ಮಿ ಎಂಬುವಲ್ಲಿದ್ದ ವಾಸುದೇವ ಶಬ್ದದ ಅರ್ಥ ಹೇಳಲಿಕ್ಕೆ ಇಚ್ಛಿಸುತ್ತಾ **ವಾಸು** ಎಂಬುವ ಶಬ್ದದ ಅರ್ಥವನ್ನು ಹೇಳುತ್ತಾರೆ—

ಭಾ ॥ (೧) ಆಚ್ಛಾದಯತಿ ಸರ್ವಂ ವಾಸಯತಿ ವಸತಿ ಸರ್ವತ್ರೇತಿ ವಾಸುಃ । ದೇವಶಬ್ದಾರ್ಥ ಉಕ್ತಃ ಪುರಸ್ತಾತ್ ॥ (೨) ಛಾದಯಾಮಿ ಜಗದ್ವಿಶ್ವಂ ಭೂತ್ವಾ ಸೂರ್ಯ ಇವಾಂಶುಭಿಃ । ಸರ್ವಭೂತಾಧಿವಾಸಶ್ಚ ವಾಸುದೇವಸ್ತತೋ ಹ್ಯಹಮಿತಿ ಮೋಕ್ಷಧರ್ಮೇ ॥ (೩) ವಿಶಿಷ್ಟಃ ಸರ್ವಸ್ಮಾದಾ ಸಮಂತಾತ್ಸ ಏನೇತಿ ವ್ಯಾಸಃ ॥ (೪) ತಥಾ ಚಾಗ್ನೇಯಶಾಖಾಯಾಂ । ಸ ವ್ಯಾಸೋ ವೀತಿ ತಮಬ್ವೈವಿ ಸೋಽಧಸ್ತಾತ್ಸ ಉತ್ತರತಃ ಸ ಪಶ್ಚಾತ್ಸ ಪೂರ್ವಸ್ಮಾತ್ಸ ದಕ್ಷಿಣತಃ ಸ ಉತ್ತರತ ಇತೀತಿ ॥ (೫) ಯಚ್ಚ ಕಿಂಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ । ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತ ಇತಿ ಚ ॥ ೩೯,೩೮ ॥

ಅ ॥ (೧) ಎಲ್ಲಾ ವಸ್ತುಗಳನ್ನು ಮರೆಮಾಡುತ್ತಾನೆ ಸರ್ವರನ್ನು ಆವಾಸಗೊಳಿಸುತ್ತಾನೆ ತಾನು ಸರ್ವ ದೇಶ ಕಾಲಗಳಲ್ಲಿ ಸರ್ವರಿಗೂ ನಿಯಾಮಕನಾಗಿ ಆವಾಸಮಾಡುತ್ತಾನೆ ಈ ಕಾರಣಗಳಿಂದ **ವಾಸುಃ** ಎನಿಸುತ್ತಾನೆ ಕ್ರೀಡಾದಿಗುಣವಿಶಿಷ್ಟನಾದ ಪ್ರಯುಕ್ತ **ದೇವ** ಎನಿಸುತ್ತಾನೆಂದು ಮೊದಲೇ ಹೇಳಿದೆ ಹೀಗೆ **ವಾಸುದೇವ**ನೆಂದು ಹೆಸರುಳ್ಳವನು (೨) (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ನಾನು ಸಂಪೂರ್ಣ ಜಗತ್ತನ್ನು ಮರೆಮಾಡುತ್ತೇನೆ, ಸಮಸ್ತ ಪ್ರಾಣಿಗಳನ್ನು ಆವಾಸಮಾಡಿಸುವವನು, ಮತ್ತು ಸೂರ್ಯನು ಕಿರಣಗಳಿಂದ ಜಗತ್ತನ್ನು ವ್ಯಾಪಿಸುವಂತೆ ಸಮಸ್ತ ಪ್ರಾಣಿಗಳಲ್ಲಿ ವ್ಯಾಪಿಸಿ

ಕೊಂಡು ನಿಯಾಮಕನಾಗಿ ಆವಾಸಮಾಡುವವನು. ಆದಕಾರಣ **ವಾಸು** ಎನಿಸುತ್ತೇನೆ (ಕ್ರೀಡಾದಿ ಗುಣವಿಶಿಷ್ಟನಾದ ಪ್ರಯುಕ್ತ ದೇವನು.) ಹೀಗೆ **ವಾಸುದೇವನೆಂದು** ಹೆಸರುಳ್ಳವನು, ಎಂದು ಮೋಕ್ಷ ಧರ್ಮದಲ್ಲಿದೆ (೩) ಸರ್ವರಿಗಿಂತ ಉತ್ತಮನೂ ಜೀನ್ನಾಗಿ ಸರ್ವತ್ರ ವ್ಯಾಪಿಸಿಕೊಂಡಿರುವವನೂ ಆದುದ ರಿಂದ **ವ್ಯಾಸನೆಂದು** ಹೆಸರುಳ್ಳವನು. (೪) ಹಾಗೆಯೇ ಅಗ್ನಿವೇಶ್ಯಶಾಖೆಯಲ್ಲಿ ಹೇಳಿದೆ ಆ ಶ್ರೀಹರಿಯು ವಿ (ವಿಶೇಷ, ಸರ್ವೋತ್ತಮತ್ವ ನಿಮಿತ್ತವಾಗಿ) ವಿ ಎನಿಸುತ್ತಾನೆ ವಿ ಶಬ್ದಕ್ಕೆ **ತಮಸ್** ಪ್ರತ್ಯಯದ ಅರ್ಥವು. ಮತ್ತು ಶ್ರೀಹರಿಯು ಕೆಳಗೂ ಮೇಲೆಯೂ ಹಿಂದುಗಡೆಯೂ ಮುಂದುಗಡೆಯೂ ಬಲಭಾಗ ದಲ್ಲಿಯೂ ಎಡಭಾಗದಲ್ಲಿಯೂ ಸರ್ವತ್ರ ಇರುತ್ತಾನೆ. ಆದಕಾರಣ **ಅಸ** ಎನಿಸುತ್ತಾನೆ ಹೀಗೆ ಸರ್ವೋತ್ತಮತ್ವ ಸರ್ವತ್ರ ವ್ಯಾಪ್ತತ್ವರೂಪನಿಮಿತ್ತಗಳಿಂದ **ವ್ಯಾಸನೆನಿಸಿಕೊಳ್ಳುತ್ತಾನೆ**) (೫) (ಶ್ರೀಪರ ಮಾತ್ಮನು ಸರ್ವತ್ರವ್ಯಾಪ್ತನು ಎಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ಯಾವುದು ಯಾವುದು ಜಗ ತ್ತೆಲ್ಲವೂ ಕಾಣಲ್ಪಡುತ್ತದೋ, ಕೇಳಲ್ಪಡುತ್ತದೋ, ಅವೆಲ್ಲವನ್ನೂ ಶ್ರೀನಾರಾಯಣನು ಒಳಗೂ ಹೊರಗೂ ವ್ಯಾಪಿಸಿಕೊಂಡು ಇದ್ದಾನೆ. ॥ ೩೭, ೩೮ ॥

ಗೀ ॥ ಯಚ್ಚಾಪಿ ಸರ್ವಭೂತಾನಾಂ ಬೀಜಂ ತದಹಮರ್ಜುನ ।
ನ ತದಸ್ತಿ ವಿನಾ ಯತ್ಸ್ಯಾನ್ಮಯಾ ಭೂತಂ ಚರಾಚರಂ ॥ ೩೯ ॥

ಅ ॥ ಅರ್ಜುನ = ಅರ್ಜುನನೇ, ಸರ್ವಭೂತಾಂ = ಸಮಸ್ತ ಪ್ರಾಣಿಗಳಿಗೆ, ಯತ್ = ಯಾವುದು, ಬೀಜಂ = ಕಾರಣವಿದೆಯೋ, ತದಪಿ = ಅದೂ ಕೂಡ, ಅಹಂ = ನಾನೇ, (ಅಂದರೆ ಆ ಕಾರಣಕ್ಕೂ ನಿಯಾ ಮಕನಾಗಿ ಕಾರಣದಲ್ಲಿದ್ದು ಇತರ ವಸ್ತುಗಳಿಗಿಂತ ಕಾರಣಕ್ಕೆ ಶ್ರೇಷ್ಠತ್ವವನ್ನು ಕೊಟ್ಟು ಕಾರಣನೆನಿಸಿ ಕೊಂಡವನು ನಾನೇ) (ಶ್ರೀಪರಮಾತ್ಮನು ಸರ್ವಗತನೆಂದು ಯಾವ ಪ್ರಮಾಣದಿಂದ ತಿಳಿಯುತ್ತದೆ ಎಂದರೆ–) ಮಯಾ ವಿನಾ = ಸರ್ವಪ್ರೇರಕನಾದ ನಾನು ಹೊರತು, ಚರಾಚರಂ = ಚೇತನಾಚೇತನಾತ್ಮಕ ವಾದ, ಯತ್ = ಯಾವ ಭೂತಂ = ವಸ್ತುವು, ಸ್ಯಾತ್ = ಇರುವುದೋ, ತತ್ = ಅಂತಹ ವಸ್ತುವು, (ನಾನು ಪ್ರೇರಕನಾಗದೆ) ನಾಸ್ತಿ = ಇಲ್ಲ. (ಅಂದರೆ ನಾನು, ಭೂತ ಭವಿಷ್ಯದ್ವರ್ತಮಾನ ಕಾಲಗಳ ಲ್ಲಿಯೂ ಸರ್ವ ದೇಶಗಳಲ್ಲಿಯೂ ಸರ್ವರಿಗೂ ನಿಯಾಮಕನೇ ಆಗಿರುತ್ತೇನೆ) ॥ ೩೯ ॥

ಪೀ — ಸಂಕ್ಷೇಪತಃ ಹೇಳಲಿಕ್ಕೆ ಕಾರಣವನ್ನು ತೋರಿಸುತ್ತಾ ಉಪಸಂಹಾರಮಾಡುತ್ತಾರೆ—

ಗೀ ॥ ನಾಂತೋಽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ ।
ಏಷ ತೂದ್ದೇಶತಃ ಪ್ರೋಕ್ತೋ ವಿಭೂತೇರ್ವಿಸ್ತರೋ ಮಯಾ ॥ ೪೦ ॥

ಅ ॥ ಪರಂತಪ = ಶತ್ರುಗಳಿಗೆ ಸಂತಾಪಕಾರಿಯಾದ ಅರ್ಜುನನೇ, ಮಮ = ನನ್ನ, ದಿವ್ಯಾನಾಂ = ಅಲೌಕಿಕಗಳಾದ (ಅಂದರೆ ಅಪ್ರಾಕೃತಗಳಾದ) ವಿಭೂತೀನಾಂ = ವಿಭೂತಿರೂಪಗಳಿಗೆ, ಅಂತಃ = ಪರ್ಯಾ ವಸಾನವು, ನಾಸ್ತಿ = ಇಲ್ಲ. ಏಷಃತು = **ಆದಿತ್ಯಾನಾಮಹಂ ವಿಷ್ಣುಃ** ಇತ್ಯಾದಿಗಳಿಂದ ಇಷ್ಟರವರೆಗೆ ಹೇಳಿದ ವಿಭೂತಿರೂಪಗಳ ಸಂಕ್ಷೇಪವು, ಉದ್ದೇಶತಃ = ಇದು ಎಂದು ಸ್ಪಷ್ಟವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ನಿರ್ದೇಶಮಾಡಿ ಮಯಾ = ನನ್ನಿಂದ, ಪ್ರೋಕ್ತಃ = ಹೇಳಲ್ಪಡುತ್ತದೆ ಏಷಃ = ಮುಂದೆ ಹೇಳುವ, ವಿಭೂತೇಃ = ವಿಭೂತಿರೂಪಗಳ ವಿಸ್ತರಃ = ವಿಸ್ತಾರವು, ಪ್ರೋಕ್ತಃ = ಲಕ್ಷಣವನ್ನು ಹೇಳಿ ಹೇಳಲ್ಪಡುತ್ತದೆ ॥ ೪೦ ॥

ಭಾ ॥೯(೧) ಮಯೂ ವಿನಾ ಯದ್ಭೂತಂ ಸ್ಯಾನ್ನ ತನ್ನಾಸ್ತಿ ॥ (೨) ವಿಶ್ವರೂಪ ಅನಂತಗತಿ-ರನಂತಭಾಗ ಅನಂತಗತ ಅನಂತ ಇತ್ಯಾದಿ ಮೋಕ್ಷಧರ್ಮೇ ॥ ೩೯,೪೦ ॥

ಅ ॥ (೧) ನನ್ನ ಸಂಬಂಧವಿಲ್ಲದಿರುವುದು ಯಾವುದೂ ಇರುವುದಿಲ್ಲ (ಅಂದರೆ ನಾನು ಅನಂತ ರೂಪಗಳಿಂದ ಸರ್ವ ಪದಾರ್ಥಗಳನ್ನು ವ್ಯಾಪಿಸಿಕೊಂಡಿದ್ದೇನೆ) (೨) (ಶ್ರೀಪರಮಾತ್ಮನು ಅನಂತರೂಪಗಳಿಂದ ಸರ್ವ ಪದಾರ್ಥಗಳನ್ನು ವ್ಯಾಪಿಸಿಕೊಂಡಿದ್ದಾನೆಂಬುವಲ್ಲಿ ಪ್ರಮಾಣವನು ಹೇಳುತ್ತಾರೆ—) ಸಂಪೂರ್ಣ ಜಗತ್ತೂ ಪ್ರತಿಮೆಯಾಗಿ ಉಳ್ಳವನು (ಅಂದರೆ ಸರ್ವತ್ರ ವ್ಯಾಪಿಸಿಕೊಂಡಿದ್ದೇನೆ) ಅನಂತ ಜೀವರಿಗೆ ಆಶ್ರಯನು, ಅನಂತಾನಂತ ಅವತಾರಗಳುಳ್ಳವನು, ಅನಂತ ಪದಾರ್ಥಗಳನ್ನು ಹೊಂದಿದವನು ಸರ್ವ ದೇಶ ಕಾಲಗಳಲ್ಲಿ ವ್ಯಾಪ್ತನು ಗುಣಪರಿಪೂರ್ಣನು ಇತ್ಯಾದಿ ಪ್ರಮೇಯವು ಮೋಕ್ಷಧರ್ಮದಲ್ಲಿ ಹೇಳಿದೆ ॥ ೩೯ ೪೦ ॥

ಪೀ – ವಕ್ತುಮರ್ಹ್ಯಶೇಷೇಣ ದಿವ್ಯಾ ಹ್ಯಾತ್ಮ ವಿಭೂತಯಃ (ಶ್ಲೋ ೧೬) ಎಂದು ವಿಭೂತಿ ರೂಪಗಳನ್ನು ಹೇಳಬೇಕೆಂದು ಅರ್ಜುನನು ಪ್ರಾರ್ಥಿಸಿದಾಗ ಶ್ರೀಕೃಷ್ಣನು **ಜ್ಯೋತಿಷಾಂ ರವಿರಂಶು ಮಾನ್** (ಶ್ಲೋ ೨೧) ಇತ್ಯಾದಿಗಳಿಂದ ವಿಭೂತಿರೂಪಗಳನ್ನು ಉಪದೇಶಿಸುತ್ತಾನೆ ಅದರಲ್ಲಿ ಅವಾವ ಜಾತ್ಯಾದಿಗಳಿಂದ ಕೂಡಿದ ವಸ್ತುಗಳೇ ಶ್ರೀಪರಮಾತ್ಮನ ವಿಭೂತಿರೂಪಗಳೆಂದು ಪರರು ಹೇಳುವುದು ಅಯುಕ್ತವೆಂದು ಸ್ಮೃತಿಪ್ರಮಾಣದಿಂದಲೇ ತೋರಿಸುತ್ತಾರೆ—

ತಾ ॥ (೧) ಯೇಷಾಂ ವಿಷ್ಣು ಸ್ವರೂಪಾಣಾಂ ಸನ್ನಿಧೇರನ್ಯವಸ್ತುಷು । ವಿಶಿಷ್ಟತ್ವಂ ಸ್ವಜಾತೇಃ ಸ್ಯಾದ್ವಿಭೂತ್ಯಾಖ್ಯಾನಿ ತಾನಿ ತು ॥ (೨) ಬ್ರಹ್ಮನಾಮಾ ಬ್ರಹ್ಮಗತಃ ಸರ್ವದೈವತಸಂ-ಚಯಾತ್ । ಆಧಿಕ್ಯಹೇತುರ್ಭಗವಾನಾಸ್ಯಮಸ್ಥಃ ಸಾಮನಾಮಕಃ । ಆಧಿಕ್ಯಹೇತು-ರ್ವೇದೇಭ್ಯಸ್ತಥಾಶ್ವತ್ಥಸ್ಥಿತೋ ಹರಿಃ । ಉತ್ಕರ್ಷಹೇತುರ್ವೃಕ್ಷೇಭ್ಯೋ ಯ ಏವಾ-ಶ್ವತ್ಥನಾಮಕ ಇತ್ಯಾದಿ ವಿಭೂತಿತತ್ತ್ವೇ ॥ (೩) ಕೇಷುಕೇಷು ಚ ಭಾವೇಷ್ವಿತ್ಯುಕ್ತ-ತ್ವಾಚ್ಚ ಬ್ರಹ್ಮಾದಿಜೀವೇಭ್ಯೋಽನ್ಯದೇವ ವಿಭೂತಿರೂಪಂ ॥ (೪) ದ್ವಿವಿಧಂ ವೈಭವಂ ರೂಪಂ ಪ್ರತ್ಯಕ್ಷಂ ಚ ತಿರೋಹಿತಂ । ಕಪಿಲವ್ಯಾಸಕೃಷ್ಣಾದ್ಯಂ ಪ್ರತ್ಯಕ್ಷಂ ವೈಭವಂ ಸ್ಮೃತಂ । ಭಿನ್ನಂ ಬ್ರಹ್ಮಾದಿಜೀವೇಭ್ಯೋ ಜಡೇಭ್ಯಶ್ಚಾಪಿ ತದ್ಗತಂ । ಸ್ವಜಾತ್ಯಾಧಿ-ಕ್ಯೇದಂ ತೇಷಾಂ ತತ್ತಿರೋಹಿತವೈಭವಮಿತ್ಯಾದಿ ಚ ॥ ೧ ॥

ಅ ॥ (೧) ಬೇರೆ ಪದಾರ್ಥಗಳಲ್ಲಿ ಯಾವ ಭಗವತ್ಸ್ವರೂಪಗಳ ಸನ್ನಿಧಾನವಿಶೇಷದಿಂದ ಆ ಪದಾರ್ಥಗಳು ಅವಾವ ಜಾತಿಯ ಪದಾರ್ಥಗಳಲ್ಲಿ ಶ್ರೇಷ್ಠಗಳಾಗುತ್ತವೋ, ಆ ಭಗವತ್ಸ್ವರೂಪಗಳು **ವಿಭೂತಿರೂಪಗಳೆನಿಸುತ್ತವೆ** (೨) (ಅದನ್ನೇ ವಿವರಿಸುತ್ತಾರೆ—) ಶ್ರೀಪರಮಾತ್ಮನು ಸಮಸ್ತ ದೇವತೆಗಳ ಸಮೂಹಕ್ಕಿಂತ ಚತುರ್ಮುಖ ಬ್ರಹ್ಮನಿಗೆ ಉತ್ತಮತ್ವಕ್ಕೆ ಕಾರಣನಾಗಿ ಚತುರ್ಮುಖನಲ್ಲಿದ್ದವನಾಗಿ ಬ್ರಹ್ಮನೆಂದು ಹೆಸರುಳ್ಳವನು. ಹಾಗೆಯೇ ಸಮಸ್ತ ವೇದಗಳ ದೆಶೆಯಿಂದ ಸಾಮವೇದಕ್ಕೆ ಶ್ರೇಷ್ಠತ್ವಕ್ಕೆ ಕಾರಣನಾಗಿ ಸಾಮವೇದದಲ್ಲಿ ಪ್ರೇರಕನಾಗಿ ಇದ್ದವನಾಗಿ **ಸಾಮ** ಎಂದು ಹೆಸರುಳ್ಳವನು ಹಾಗೆಯೇ ಎಲ್ಲಾ ವೃಕ್ಷಗಳಿಗಿಂತ ಅಶ್ವತ್ಥ ವೃಕ್ಷವು ಶ್ರೇಷ್ಠವಾಗಲಿಕ್ಕೆ ಕಾರಣನಾಗಿ ಶ್ರೀಹರಿಯು ಅಶ್ವತ್ಥವೃಕ್ಷದಲ್ಲಿ ನಿಯಾಮಕನಾಗಿ ಇದ್ದವನಾಗಿ **ಅಶ್ವತ್ಥ** ಎಂದು ಹೆಸರುಳ್ಳವನು, ಇತ್ಯಾದಿ ಪ್ರಮೇಯವು ವಿಭೂತಿತತ್ತ್ವ ವೆಂಬುವ ಗ್ರಂಥದಲ್ಲಿದೆ (೩) (ರವಿ ಮೊದಲಾದವರೇ ಶ್ರೀಪರಮಾತ್ಮನ ವಿಭೂತಿರೂಪಗಳಲ್ಲ ಮತ್ತೆ

ಆ ಸೂರ್ಯಾದಿಗಳಲ್ಲಿ ನಿಯಾಮಕವಾಗಿರುವ ಶ್ರೀಪರಮಾತ್ಮನ ರೂಪವೇ ವಿಭೂತಿರೂಪವೆನ್ನುತ್ತಾರೆ—) **ಕೇಷು ಕೇಷು ಚ ಭಾವೇಷು** ಯಾವ ಯಾವ ವಸ್ತುಗಳಲ್ಲಿ ನಿನ್ನನ್ನು ಧ್ಯಾನಿಸಬೇಕು ಎಂದು ಹೇಳಿದ್ರಿಂದ ಶ್ರೀಪರಮಾತ್ಮನ ವಿಭೂತಿರೂಪವು ಬ್ರಹ್ಮ ಮೊದಲಾದ ಜೀವರಿಗಿಂತಲೂ ಜಡಪದಾರ್ಥಗಳಿಗಿಂತಲೂ ಬೇರೆಯೇ ಎಂದು ಹೇಳಿದಂತೆಯೇ ಆಯಿತು. (ಅಂದರೆ ಇಲ್ಲಿ ಸೂರ್ಯ ಮೊದಲಾದವರೇ ವಿಭೂತಿ ರೂಪವು, ಸೂರ್ಯನಲ್ಲಿ ಅಂತರ್ಗತವಾದುದು ಅಲ್ಲವೆಂದಾಗಿದ್ದರೆ—ಆಗ **ಕೇಷು ಕೇಷು ಚ ಭಾವೇಷು ಚಿಂತ್ಯಃ** ಎಂಬ ವಿಭೂತಿರೂಪಾಶಯತ್ವವನ್ನು ಹೇಳಿದ್ದು ಆಯುಕ್ತವಾಗುವುದು. (ಆವಾವ ಪದಾರ್ಥ ಗಳಲ್ಲಿದ್ದು ದೇ ವಿಭೂತಿರೂಪವೆಂದಾಗಿದ್ದರೆ—(1) **ಸಿದ್ಧಾನಾಂ ಕಪಿಲೋ ಮುನಿಃ** (2) **ಮುನೀನಾಮು ಷ್ಯಹಂ ವ್ಯಾಸಃ** (3) **ವೃಷ್ಣೀನಾಂ ವಾಸುದೇವೋಽಸ್ಮಿ**, (4) **ರಾಮಃ ಶಸ್ತ್ರಭೃತಾಮಹಂ** (5) **ಆದಿ ತ್ಯಾನಾಮಹಂ ವಿಷ್ಣುಃ** ಎಂದು ಹೇಳಲ್ಪಟ್ಟ, ಕಪಿಲಾದಿಗಳಲ್ಲಿ ಅಂತರ್ಗತ ಭಗವದ್ರೂಪಗಳಾಗದೆ ಹೋಗುವವು, ಎಂಬುವ ಆಶಂಕೆಯನ್ನು ಸ್ಮೃತಿಯಿಂದಲೇ ಪರಿಹರಿಸುತ್ತಾರೆ) (೪) ಶ್ರೀಪರಮಾತ್ಮನ ವಿಭೂತಿರೂಪವು ಪ್ರತ್ಯಕ್ಷ ತಿರೋಹಿತ ಎಂದು ಎರಡು ವಿಧವು ಆದರಲ್ಲಿ (1) ಕಪಿಲ ವ್ಯಾಸ ಕೃಷ್ಣ ಮೊದಲಾದ ಶ್ರೀಪರಮಾತ್ಮನ ರೂಪವು ಪ್ರತ್ಯಕ್ಷ ವಿಭೂತಿರೂಪ ಎನಿಸುತ್ತದೆ ಬ್ರಹ್ಮರುದ್ರ ಮೊದಲಾದ ಜೀವ ರಿಂದಲೂ ಜಡಪದಾರ್ಥಗಳಿಂದಲೂ ಭಿನ್ನವಾದುದು, ಅವರಿಗೆ ನಿಯಾಮಕವಾದುದು ಆ ವಸ್ತುಗಳಿಗೆ ಆ ಜಾತಿಯ ವಸ್ತುಗಳಿಗಿಂತ ಶ್ರೇಷ್ಠತ್ವವನ್ನು ಹೊಂದಿಸಿಕೊಡುವುದು ಶ್ರೀಪರಮಾತ್ಮನ ರೂಪವು ತಿರೋಹಿತ ವಿಭೂತಿರೂಪವೆನಿರುತ್ತದೆ, ಇತ್ಯಾದಿ ಪ್ರಮೇಯವು ಉಕ್ತವಾಗಿದೆ ॥ ೧ ॥

ಪೀ—ಆವಾವ ವಸ್ತುಗಳಲ್ಲಿ ನಿಯಾಮಕವಾಗಿದ್ದು ಆವಾವ ನಾಮಧೇಯವುಳ್ಳದ್ದು ವಿಭೂತಿರೂಪವು, ಎಂದುಕ್ತವಾಗಿದೆ ಆದರಲ್ಲಿ ಆ ವಿಭೂತಿರೂಪಗಳಿಗೆ ಆವಾವ ಪದಾರ್ಥಗಳಿಂದ (ಅಂದರೆ ರವಿ ಮೊದಲಾದವ ರಿಂದ) ಐಕ್ಯವಿಲ್ಲವಾದರೆ—ರವಿ ಮೊದಲಾದ ನಾಮಧೇಯವು ಕೂಡಲಾರದು, ಎಂದರೆ ಅವಯವ ಶಕ್ತಿ ಯಿಂದ ಆ ವಿಭೂತಿರೂಪಗಳಿಗೆ ಆವಾವ ನಾಮಧೇಯವು ಕೂಡುತ್ತದೆ, ಎಂಬುವುದನ್ನು ಸ್ಮೃತಿಯಿಂದಲೇ ತೋರಿಸುತ್ತಾರೆ—

ತಾ ॥ (೧) ಆತ್ಮಾಽತತ ಗುಣತ್ವೇನ ರವಚ್ಛ್ಲೇಯೋ ಯತೋ ರವಿಃ । ಉದವನ್ಮೇಘ-ಚಲನಾನ್ಮರೀಚಿಃ ಸಾಮ್ಯ ಸಾಮ್ಯತಃ । (೨) ಸುಖಾತ್ಸುಖತ್ವಾತ್ತು ಶಶೀ ವೇದೋ ವೇದ-ನತೋ ಹರಿಃ । ವಾಸವರ್ತೀ ವಾಸವೋಽಸೌ ಚೇತೋನೇತಾ ತು ಚೇತನಾ । (೩) ಪಾಲ-ಕೈರ್ವನನೀಯತ್ವಾತ್ಪವನೋ ಬೋಧನಾನ್ಮನಃ । ಪಾವಕಃ ಶೋಧನಾನ್ಮೇರುರೀರೋ-ಯನ್ಮಾಽಸ್ಯ ಸಾಗರಃ । (೪) ಸಾರಸ್ಯ ಗರಣಾತ್ಕ್ಷ್ಮಾಂದೋ ಜಗತಃ ಸ್ಕಂದನಾದ್ಭೃಗುಃ । ಭರ್ಜನಾಜ್ಜಪ ಯಜ್ಞಶ್ಚ ಜಾತಪೋ ಯಾಜ್ಯ ಏವ ಚ । (೫) ಅಶ್ವಾಕಾರಶ್ಚಿತೋಽಶ್ವಸ್ಥೋ ಐರಂ ಶ್ರೇಶ್ಚ ತದಾಶ್ರಯಃ । ಐರಾವತೋ ನರಾಣಾಂ ಯದ್ದ ದ್ಯಾತ್ಸರ್ವಂ ಸ ನಾರದಃ । (೬) ಹ್ರೀ ಶ್ರೀ ಸಮಾಶ್ರಯತ್ವಾಚ್ಚ ಹಿಮಾಲಯ ಇತೀರಿತಃ । ವರ್ಜ್ಯತ್ವಾದರಿರ್ವಜ್ರೋ ವೈನತೇಯೋ ನತಾಸ್ಪದಃ । ವಾಸುಕಿರ್ವಾಸಸುಖದಃ ಕಂದರ್ಪಃ ಸುಖಭೇದಪಃ ॥ ೨ ॥

ಅ ॥ (೧) ಶ್ರೀಹರಿಯು ಸರ್ವತ್ರವ್ಯಾಪ್ತಗಳಾದ ಪೂರ್ಣಗುಣಗಳುಳ್ಳವನಾದುದರಿಂದ **ಆತ್ಮಾ** ಎನಿಸುತ್ತಾನೆ. ವೇದರೂಪಶಬ್ದಗಳಿಂದ ತಿಳಿಯಲ್ಪಡುವವನಾದುದರಿಂದ **ರವಿಃ** ಎನಿಸುತ್ತಾನೆ ಜಲಭರಿತ ವಾದ ಮೇಘವನ್ನು ಚಲಿಸುವಹಾಗೆ ಮಾಡುವುದರಿಂದ **ಮರೀಚಿಃ** ಎನಿಸುತ್ತಾನೆ. ಲಕ್ಷ್ಮ್ಯಾದಿಗಳ ಸ್ವರೂಪ

ಸುಖದಿಂದಲೂ ಅತಿಶಯ ಸುಖಸ್ವರೂಪನಾದುದರಿಂದ **ಶಶೀ** ಎನಿಸುತ್ತಾನೆ (೨) ಸರ್ವತ್ರ ಸಮನಾಗಿರುವುದರಿಂದ **ಸಾಮ** ಎನಿಸುತ್ತಾನೆ. ಶ್ರೀಹರಿಯು ಸರ್ವವನ್ನು ತಿಳಿಯುವವನಾದುದರಿಂದ **ವೇದನೆ**ನಿಸುತ್ತಾನೆ ಈ ರೀತಿ **ಸಾಮವೇದವೆ**ನಿಸಿಕೊಂಡವನು ಶ್ರೀಹರಿಯು ಸರ್ವ ದೇಶ ಕಾಲಗಳಲ್ಲಿ ವ್ಯಾಪಿಸಿಕೊಂಡಿದ್ದುದರಿಂದ **ವಾಸವ**ನೆನಿಸುತ್ತಾನೆ. ಸರ್ವರ ಮನಸ್ಸಿಗೆ ಪ್ರೇರಕನಾದುದರಿಂದ **ಚೇತನಾ** ಎನಿಸುತ್ತಾನೆ (೩) ಜಗದ್ರಕ್ಷಕರಾದ ಬ್ರಹ್ಮರುದ್ರಾದಿಗಳಿಂದ ಸೇವಿಸಲ್ಪಡುವುದರಿಂದ **ಪವನಃ** ಎನಿಸುತ್ತಾನೆ. ಸರ್ವವನ್ನು ತಿಳಿಯುವವನಾದುದರಿಂದ **ಮನಃ** ಎನಿಸುತ್ತಾನೆ ಸರ್ವವಸ್ತುಗಳನ್ನು ಶುದ್ಧೀಕರಿಸುವುದರಿಂದ **ಪಾವಕಃ** ಎನಿಸುತ್ತಾನೆ. ಶ್ರೀಪರಮಾತ್ಮನಿಗೆ ಪ್ರೇರಕನು ಇನ್ನೊಬ್ಬನಿಲ್ಲದಿರುವುದರಿಂದ **ಮೇರುಃ** ಎನಿಸುತ್ತಾನೆ. (೪) ಸರ್ವ ಪದಾರ್ಥಗಳ ಸಾರವಿಷಯವನ್ನು ಭೋಗಿಸುವವನಾದುದರಿಂದ **ಸಾಗರಃ** ಎನಿಸುತ್ತಾನೆ. ಪ್ರಳಯಕಾಲದಲ್ಲಿ ಹೊಟ್ಟೆಯೊಳಗೆ ಇಟ್ಟುಕೊಂಡಿದ್ದ ಜಗತ್ತನ್ನು ಸೃಷ್ಟಿಕಾಲದಲ್ಲಿ ಹೊರಗೊಳಿಸುವವನಾದುದರಿಂದ **ಸ್ಕಂದಃ** ಎನಿಸುತ್ತಾನೆ ವಿರೋಧಿಗಳನ್ನು ನಾಶಗೊಳಿಸುವವನಾದುದರಿಂದ **ಭೃಗುಃ** ಎನಿಸುತ್ತಾನೆ. ಹುಟ್ಟದವರೆಲ್ಲರನ್ನು ರಕ್ಷಿಸುವುದರಿಂದ **ಜಪ**ನೆಂದೂ ಬ್ರಹ್ಮಾದಿಗಳಿಂದ ಪೂಜಿಸಲ್ಪಡುವವನಾದುದರಿಂದ **ಯಜ್ಞ**ನೆಂದು ಏವಂ ಚ **ಜಪಯಜ್ಞ**ನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ (೫) ಅಶ್ವದಂತೆ ಇರುವವನಾದುದರಿಂದ ಅಂದರೆ—ಹಯಗ್ರೀವರೂಪದಿಂದ ಅಥವಾ **ವಡವಾ**ವಕ್ತ್ರರೂಪದಿಂದ ಇರುವವನಾದುದರಿಂದ **ಅಶ್ವತ್ಥ**ನೆನಿಸಿಕೊಂಡವನು. ಮತ್ತು ಮುಕ್ತಿಯೋಗ್ಯರಾದ ಅಶ್ವಾಕಾರರಾದ ಜೀವರಲ್ಲಿ ಶ್ರೀಪರಮಾತ್ಮನು ಬಿಂಬರೂಪನಾಗಿ ಅಶ್ವಾಕಾರನಾಗಿಯೇ ಇದ್ದಾನೆ ಆದುದರಿಂದಲೂ **ಅಶ್ವತ್ಥ**ನೆನಿಸುತ್ತಾನೆ, (**ತದ್ವೈರಂ ಮದೀಯಂ ಸರಃ** ಶ್ವೇತದ್ವೀಪದಲ್ಲಿ ಮದಕರವಾದ ಲಕ್ಷ್ಮೀಸ್ವರೂಪವಾದ ಸರೋವರವಿದೆ, ಇತ್ಯಾದಿ ಪ್ರಮಾಣಗಳಿಂದ) **ಐರ** ಎನಿಸಿಕೊಂಡವಳು ಲಕ್ಷ್ಮೀದೇವಿಯು ಅವಳಿಗೆ ಆಶ್ರಯನಾಗಿ ಆ ಲಕ್ಷ್ಮೀದೇವಿಯನ್ನು ರಕ್ಷಿಸಿಕೊಂಡಿರುವುದರಿಂದ **ಐರಾವ**ತನೆನಿಸಿಕೊಂಡವನು ಶ್ರೀಹರಿಯು ಮನುಷ್ಯರಿಗೆ ಅಪೇಕ್ಷಿತವಾದ ತತ್ವಜ್ಞಾನಾದಿಗಳನ್ನು ಕೊಡುವವನಾದುದರಿಂದ ಶ್ರೀಹರಿಯು **ನಾರದ**ನೆನಿಸಿಕೊಂಡಿರುತ್ತಾನೆ (೬) ಹ್ರೀ, ಶ್ರೀ, ಎಂದು ಎರಡು ರೂಪಗಳುಳ್ಳ ಲಕ್ಷ್ಮೀದೇವಿಗೆ ಆಶ್ರಯನಾಗಿರುವುದರಿಂದ ಶ್ರೀಹರಿಯು ಹಿಮಾಲಯನೆಂದು ಹೆಸರುಳ್ಳವನು ಶತ್ರುಗಳಿಂದ ಬಿಡಲ್ಪಟ್ಟಿರುವವನಾದುದರಿಂದ **ವಜ್ರ**ನೆಂದು ಹೆಸರುಳ್ಳವನು ವಿಶೇಷವಾಗಿ ನವಿಮ್ರಾಭೂತರಾದ ದೇವಾದಿಗಳಿಗೆ ಆಶ್ರಯನಾಗಿರುವುದರಿಂದ **ವೈನತೇಯ**ನೆಂದು ಹೆಸರುಳ್ಳವನು. ವಾಸಮಾಡಲಿಕ್ಕೆ ಅತ್ಯಧಿಕಸುಖವನ್ನು ಹೃದಯದೊಳಗೆ ಅನಿರುದ್ಧರೂಪದಿಂದ ಇದ್ದು ಕೊಡುವುದರಿಂದ **ವಾಸುಕಿ** ಎಂದು ಹೆಸರುಳ್ಳವನು ಸುಖಪ್ರಭೇದಗಳನ್ನು (ಅಂದರೆ ನಿರವಧಿಕ ಆನಂದಗಳನ್ನ)ನುಭವಿಸುವವನಾದುದರಿಂದ **ಕಂದರ್ಪ**ನೆನಿಸುತ್ತಾನೆ ॥ ೨ ॥

ತಾ ॥ (೧) ಅರ್ಯಮಾ ಜ್ಞೇಯಮಾತೃತ್ವಾತ್ಕಾಲ ಆಕಲನಾದಪಿ । ವರುಣೋ ವರಣಾದ್ವ್ಯಂದ್ಯೋ ದ್ವಿರೂಪೋಽಂತರ್ಬಹಿರ್ಯತಃ ॥ (೨) ಮಕರೋ ನೂನಕರ್ತೃತ್ವಾದ್ಯನುಃ ಸಂಯಮನಾದ್ವಿಭುಃ । ಪ್ರಹ್ಲಾದಃ ಸ ಮಹಾನಂದೋ ಮೃಗೇಂದ್ರೋ ಮೃಗಯತ್ಪತಿಃ ॥ (೩) ಜಾಹ್ನವೀ ಜಹತಾಂ ಸ್ಥಾನಮುಧ್ಯಾತ್ಮಂ ಚಾತ್ಮನಾಂ ಪತಿಃ । ವಿದ್ಯಾಜ್ಞಪ್ತಿಸ್ವರೂಪತ್ವಾದ್ವಾದೋ ವಾಚ್ಯತ್ವತೋ ಹರಿಃ ॥ (೪) ಕೀರ್ತ್ಯೋ(ರ್ತ್ಯ)ವಕ್ತಾಶ್ರಯಃ ಕೀರ್ತಿರ್ವಾಕ್ ಶ್ರೀರಿತಿ ಚ ನಾಮಕಃ(ತಃ) । ಸ್ಮರಣೀಯಃ ಸ್ಮೃತಿರ್ಮೇಧಾ ಕ್ಷಮಾರೂಪಸ್ತಧೇರ್ಯತೇ ॥ (೫) ದ್ಯೂತಂ ಕ್ರೀಡಾಪರತ್ವಾಚ್ಚ ಗಾಯತ್ರೀ ತ್ರಾತಿ ಗಾಯಕಾನ್ । ಸತ್ತ್ವಂ ಸಾಧುಗುಣತ್ವಾಚ್ಚ ದಂಡನಾದ್ದಂಡ ಉಚ್ಯತೇ ॥ ೩ ॥

ಅ ॥ (೧) ಜ್ಞೇಯವಾದುದೆಲ್ಲವನ್ನು ತಿಳಿಯುವವನಾದುದರಿಂದ ಅರ್ಯಮಾ ಎನಿಸುತ್ತಾನೆ ಜ್ಞಾನಸ್ವರೂಪನಾದುದರಿಂದ **ಕಾಲಃ** ಎನಿಸುತ್ತಾನೆ ಅತ್ಯುತ್ಕೃಷ್ಟ ಆನಂದವುಳ್ಳವನಾದುದರಿಂದ **ವರುಣ**

ಎನಿಸುತ್ತಾನೆ ಅಥವಾ ಭಕ್ತರನ್ನಾಗಿ ಸ್ವೀಕರಿಸುವುದರಿಂದ **ವರುಣಃ** ಎನಿಸುತ್ತಾನೆ ಒಳಗೂ ಹೊರಗೂ ಎರಡು ರೂಪಗಳಿಂದ ವ್ಯಾಪಿಸಿಕೊಂಡಿದ್ದುದರಿಂದ **ದ್ವಂದ್ವಃ** ಎನಿಸುತ್ತಾನೆ. (೨) ಸಾಮಾನ್ಯ ಜನರಿಗೆ ಅಲ್ಪ ಜ್ಞಾನವನ್ನುಂಟುಮಾಡುವವನಾದುದರಿಂದ **ಮಕರಃ** ಎನಿಸುತ್ತಾನೆ ಶ್ರೀಪರಮಾತ್ಮನು ಚೆನ್ನಾಗಿ ನಿಗ್ರಹಿಸುವವನಾದುದರಿಂದ **ಯಮು**ನೆನಿಸುತ್ತಾನೆ ಮಹಾ ಆನಂದವುಳ್ಳವನಾದುದರಿಂದ ಪ್ರಹ್ಲಾದನೆನಿಸುತ್ತಾನೆ ಸರ್ವಸ್ವಾಮಿಯಾದ ಶ್ರೀಪರಮಾತ್ಮನು ಭಕ್ತಿಪೂರ್ವಕವಾಗಿ ತನ್ನನ್ನು ಹುಡುಕುವ ಭಕ್ತರಿಗೆ ಅಧಿಪತಿಯಾಗಿರುವವನಾದುದರಿಂದ **ನೃಗೇಂದ್ರ**ನೆನಿಸುತ್ತಾನೆ (೩) ಜನನಮರಣಾದಿರೂಪವಾದ ಸಂಸಾರವು ನಿಸ್ಸಾರವೆಂದು ತಿಳಿದು ಸಂಸಾರವನ್ನು ಬಿಡುವ ಭಕ್ತರಿಗೆ ಆಶ್ರಯನಾಗಿರುವವನಾದುದರಿಂದ **ಜಾಹ್ನವೀ** ಎನಿಸುತ್ತಾನೆ. ಜೀವರಿಗೆಲ್ಲಾ ಅಧಿಪತಿಯಾಗಿರುವವನಾದುದರಿಂದ **ಅಧ್ಯಾತ್ಮ**ನೆಂದೂ ಜ್ಞಾನಸ್ವರೂಪನಾಗಿರುವುದರಿಂದ **ವಿದ್ಯಾ** ಎಂದೂ ಹೀಗೆ **ಅಧ್ಯಾತ್ಮವಿದ್ಯಾ** ಎನಿಸುತ್ತಾನೆ ಶ್ರೀಹರಿಯು ವೇದಗಳಿಂದ ಹೇಳಲ್ಪಡುವವನಾದುದರಿಂದ **ವಾದಃ** ಎನಿಸುತ್ತಾನೆ. (೪) ಸ್ತುತಿಸಲ್ಪಡುವವನಾದುದರಿಂದ **ಕೀರ್ತಿಃ**, ಎಂದೂ ಸರ್ವವನ್ನು ಹೇಳುವವನಾದುದರಿಂದ **ವಾಕ್** ಎಂದೂ, ಸೇವಕರಿಗೆ ಫಲವನ್ನು ಕೊಟ್ಟು ಅನುಗ್ರಹಿಸುವವನಾದುದರಿಂದ **ಶ್ರೀಃ** ಎಂದೂ, ಹೆಸರುಳ್ಳವನು ಆಗಿರುತ್ತಾನೆ ಭಕ್ತರಿಂದ ಸ್ಮರಿಸಲ್ಪಡುವವನಾದುದರಿಂದ **ಸ್ಮೃತಿ** ಎಂದೂ ವಿಶೇಷಜ್ಞಾನಸ್ವರೂಪನಾದುದರಿಂದ **ಮೇಧಾ** ಎಂದೂ ಭಕ್ತರ ಅಪರಾಧವನ್ನು ಕ್ಷಮಿಸುವ ಸ್ವಭಾವವುಳ್ಳವನಾದುದರಿಂದ **ಕ್ಷಮಾ** ಎಂದೂ ಹೇಳಲ್ಪಡುತ್ತಾನೆ (೫) ಕ್ರೀಡೆಯಲ್ಲಿ ಆಸಕ್ತನಾಗಿರುವುದರಿಂದ **ದ್ಯೂತ**ನೆಂದೂ ತನ್ನನ್ನು ಗಾನಮಾಡುವವರನ್ನು ರಕ್ಷಿಸುವವನಾದುದರಿಂದ **ಗಾಯತ್ರೀ** ಎಂದೂ ಸಾಧುಗುಣಗಳ ಸ್ವರೂಪನಾದುದರಿಂದ **ಸತ್ವ**ನೆಂದು ಹೇಳಲ್ಪಡುತ್ತಾನೆ (ಅಂದರೆ ಸಾಧು ಗುಣಗಳುಳ್ಳವಂಗೆ ನಾನು ಸಾಧು ಗುಣನು ಅಂದರೆ ಅವರಿಗೆ ಅನುಗುಣವಾದ ಬಿಂಬಭೂತವಾದ ಸಾಧುಗುಣಸ್ವರೂಪನು ಏವಂಚ ಅವರಿಗೆ ಸಾಧುಗುಣ ಸ್ವರೂಪವಾದ ಸಾರಥರ್ಮವನ್ನು ಕೊಡುವವನು) ದುಷ್ಟರನ್ನು ಶಿಕ್ಷಿಸುವವನಾದುದರಿಂದ **ದ್ವಂದ್ವ**ನೆಂದೂ ಹೇಳಲ್ಪಡುತ್ತಾನೆ ॥ ೩ ॥

ತಾ ॥ (೧) ಬೃಹತ್ಸಾರೋಽಪ್ಯಮೇಯಶ್ಚ ಬೃಹತ್ಸಾಮೋಶನೋಶತೇಃ । ಶುಭಾಶುಭಜ್ಞಾನಕರಃ ಕುಸುಮಾಕರ ಈರಿತಃ ॥ (೨) ಜ್ಞಾನಂ ಜ್ಞಾನಾತ್ಮತೋ ಮೌನಂ ಮುನೀ-ಡೋ ನೀತಿರಾನಯನ್ । ಮಾರ್ಗಾಣಾಮಂತಗತ್ವಾತ್ತು ಮಾರ್ಗಶೀರ್ಷಃ ಪ್ರಕೀರ್ತಿತಃ ॥(೩) ಸುಖಂ ಪಿಬನ್ ಲೀಲಯೈವ ಕಪಿಲೋ ವ್ಯಾಸ ಏವ ಚ । ವಿಶಿಷ್ಟತ್ವಾದ್ವಿಷ್ಣುನಾಮಾ ವಿಶಿಷ್ಟಪ್ರಾಣಸೌಖ್ಯಕೃತಃ ॥ (೪) ಏವಂ ನಾನಾಗುಣೈರ್ವಿಷ್ಣುರ್ನಾನಾನಾಮಭಿರೀರಿತಃ । ನಾನಾಪ್ರಾಣ್ಯಾದಿಸಂಸ್ಥಶ್ಚ ವಿಭೂತಿರಿತಿ ಶಬ್ದಿತಃ ॥೪॥

ಆ ॥ (೧) ಶ್ರೇಷ್ಠರಾದ ಬ್ರಹ್ಮಾದಿಗಳಿಗೂ ಶ್ರೇಷ್ಠನಾಗಿರುವುದರಿಂದ **ಬೃಹತ್ಸ**ನೆಂದೂ, ಹೀಗೆಯೇ ಇದ್ದಾನೆಂದು ತಿಳಿಯಲಶಕ್ಯನಾದುದರಿಂದ **ಅಮ**ನೆಂದೂ, ಹೀಗೆ **ಬೃಹತ್ಸಾಮ**ನೆನಿಸುತ್ತಾನೆ ಜಗತ್ಸೃಷ್ಟ್ಯಾದಿಗಳನ್ನು ಮಾಡಬೇಕೆಂದು ಇಚ್ಛೈಯುಳ್ಳವನಾದುದರಿಂದ **ಉಶನಾ** ಎನಿಸುತ್ತಾನೆ ಸಜ್ಜೀವರಿಗೆ ಶುಭಜ್ಞಾನವನ್ನೂ ಅಶುಭರಿಗೆ ಅಶುಭ ಜ್ಞಾನವನ್ನೂ ಹುಟ್ಟಿಸುವವನಾದುದರಿಂದ **ಕುಸುಮಾಕರ**ನೆಂದು ಹೇಳಲ್ಪಡುತ್ತಾನೆ (೨) ಜ್ಞಾನವೆಂಬುವ ಗುಣಸ್ವರೂಪನಾದುದರಿಂದಲೂ **ಜ್ಞಾನಾತ್ಮಾ** ಎಂಬುವ ರೂಪವಿಶೇಷವಿದ್ದುದರಿಂದಲೂ **ಜ್ಞಾನ**ನೆನಿಸುತ್ತಾನೆ ಮುನಿಗಳಿಂದ ಸ್ತುತಿಸಲ್ಪಡುವವನಾದುದರಿಂದ **ಮೌನಂ** ಎನಿಸುತ್ತಾನೆ ನೀತಿರೂಪವಾದ ಸಾರಥರ್ಮವನ್ನು ಕೊಡುವವನಾದುದರಿಂದಲೂ, ಸುಪ್ತಿಯಲ್ಲಿಯೂ ಮುಕ್ತಿಯಲ್ಲಿಯೂ ಜೀವನನ್ನು ತನ್ನ ಸಮೀಪಕ್ಕೆ ಕರೆದುಕೊಳ್ಳುವುದರಿಂದಲೂ **ನೀತಿ** ಎಂದು ಹೆಸರುಳ್ಳ

ವನು **ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಂ** ಎಂಬ ವೇದಪ್ರಮಾಣ ದಿಂದ ಅರ್ಚಿರಾದಿ ಮಾರ್ಗಗಳಿಗೆ ಶ್ರೀವಿಷ್ಣುವು ಅಂತದಲ್ಲಿದ್ದ ಪ್ರಯುಕ್ತ ಶಿರಃಸ್ಥಾನೀಯನಾದುದರಿಂದ **ಮಾರ್ಗಶೀರ್ಷಃ**ನೆಂದು ಹೆಸರುಳ್ಳವನು (೩) ವಿಶಿಷ್ಟವಾದ ಸುಖವನ್ನು ಕ್ರೀಡೆಯಿಂದಲೇ ಅನುಭವಿಸು ವವನಾದುದರಿಂದ **ಕಪಿಲಃ**ನೆಂದು ಹೆಸರುಳ್ಳವನು ಸರ್ವೋತ್ಕೃಷ್ಟನೂ ಸರ್ವತ್ರವ್ಯಾಪ್ತನೂ ಆದುದರಿಂದ ವ್ಯಾಸಃ ಎನಿಸುತ್ತಾನೆ. ಅಥವಾ ಸರ್ವೋತ್ಕೃಷ್ಟನಾಗಿ ಇರುವವನಾದುದರಿಂದ **ವ್ಯಾಸಃ** ಎನಿಸುತ್ತಾನೆ (**ಷಕಾರಃ ಪ್ರಾಣಾ ಆತ್ಮಾ ಣಶ್ಚ ನಿರ್ವೃತಿವಾಚಕಃ** ಎಂಬುವ ಪ್ರಮಾಣಗಳಿಂದ ಜೀನ್ನಾಗಿ ಸರ್ವರಿಗೆ ಪ್ರೇರಕನೂ ವಿಶಿಷ್ಟ ಆನಂದ ಸ್ವರೂಪನೂ ಆಗಿರುವುದರಿಂದ **ವಿಷ್ಣುಃ** ಎನಿಸುತ್ತಾನೆ) (೪) ಹಿಂದೆ ಹೇಳಿದ ಪ್ರಕಾರ ಶ್ರೀವಿಷ್ಣುವು ನಾನಾ ಗುಣಗಳಿಂದ ರವಿ ಮೊದಲಾದ ಬಹು ವಿಧ ನಾಮಗಳಿಂದ ಹೇಳಿಸಿಕೊಳ್ಳ ಲ್ಪಡುತ್ತಾ ಅನೇಕ ಪ್ರಾಣ್ಯಾದಿಗಳಲ್ಲಿದ್ದು ನಿಯಾಮಕನಾಗಿದ್ದವನು, **ವಿಭೂತಿ** ಎಂದು ಹೇಳಲ್ಪಡುತ್ತಾನೆ ॥ ೪ ॥

ತಾ ॥ (೧) ಶಶ್ಯಾದಿಷು ವಿಜಾತೀಯಸ್ವಾಮ್ಯದಃ ಸಾರದಃ ಕ್ವಚಿತ್ । ಶರ್ವಾದಿಷು ಸಜಾತೀಯಶ್ರೈಷ್ಠ್ಯದತ್ವೇನ ಸಂಸ್ಥಿತಃ ॥ (೨) ಶಕ್ರೋಽಶನಾರ್ಜುನಾದ್ಯೇಷು ಸಜಾತೀಯೈಕದೇಶತಃ । ದೇವೇಷ್ವಪ್ಯ(ಭ್ಯ)ಧಿಕೋ ಬ್ರಹ್ಮಾ ಯತೋ ವಿಷ್ಣೋರನಂತರಃ ॥ (೩) ಕವಿತ್ವಾದಿಗುಣೇಷ್ವೇವ (ವಂ) ಯತ್ಸಮೋ ನಾಸ್ತಿ ಕಶ್ಚನ । ತಥಾ ಭೀಮಶ್ಚ ಪಾರ್ಥೇಷು ಜ್ಞಾನಂ ಯಜ್ಞೇಷು ಚೋತ್ತಮಂ । ಸುದರ್ಶನಂ ಚಾ(ನಶ್ಚಾ)-ಯುಧೇಷು ವೇದೇಷ್ವೃಗ್ವೇದ ಉಚ್ಯತ (ಏವ ಚ) ಇತ್ಯಾದಿ ವಿಭೂತಿತತ್ತ್ವೇ ॥ (೪) ಕ್ವಚಿತ್ಸಾಮ್ನ ಆಧಿಕ್ಯಮಭಿಮಾನ್ಯಪೇಕ್ಷಯಾ । ಋಚಃ ಶ್ರೀರ್ಗಿರುಮಾದ್ಯಾಶ್ಚ ಸಾ-ಮ್ನಃ ಪ್ರಾಣಶಿನಾದಯ ಇತ್ಯಾದ್ಯಭಿಮಾನಿಭೇದಾತ್ । ತತ್ರಾಪಿ ಯಥಾಯೋಗ್ಯಂ॥ ॥ ೫ ॥ ॥ ೧೦—೪೦ ॥

ಆ ॥ (೧) ಚಂದ್ರಾದಿಗಳಲ್ಲಿನ್ದ ಪರಮಾತ್ಮನು ಚಂದ್ರಾದಿಗಳಿಗೆ ವಿಜಾತೀಯಗಳಾದ ನಕ್ಷತ್ರಾದಿ ಗಳನ್ನು ಕುರಿತು ಸ್ವಾಮಿತ್ವವನ್ನು ಕೊಡತಕ್ಕವನು **ಸತ್ವಂ ಸತ್ವವತಾಮಹಂ** ಇತ್ಯಾದಿಗಳಲ್ಲಿ ಬಲ ವುಳ್ಳವರಿಗೆ ಸತ್ವರೂಪ ಸಾರಧರ್ಮವನ್ನು ಕೊಡುವವನು **ರುದ್ರಾಣಾಂ ಶಂಕರಶ್ಚಾಸ್ಮಿ** ಇತ್ಯಾದಿಗಳಲ್ಲಿ ಶಂಕರಾದಿಗಳಿಗೆ ಸಜಾತೀಯ ಇತರ ರುದ್ರಾದಿಗಳಿಗಿಂತ ಶ್ರೇಷ್ಠತ್ವವನ್ನು ಕೊಡುವವನು (೨) **ದೇವಾನಾಮಸ್ಮಿ ವಾಸವಃ । ಕವೀನಾಮುಶನಾಃ ಕವಿಃ, ಪಾಂಡವಾನಾಂ ಧನಂಜಯಃ, ಯಜ್ಞಾನಾಂ ಜಪ ಯಜ್ಞೋಽಸ್ಮಿ, ಆಯುಧಾನಾಮಹಂ ವಜ್ರಂ ವೇದಾನಾಂ ಸಾಮವೇದೋಽಸ್ಮಿ** ಇತ್ಯಾದಿಗಳಲ್ಲಿ ಇಂದ್ರಾದಿಗಳಿಗೆ ಸಜಾತಿಯರಲ್ಲಿ ಏಕದೇಶದಿಂದ ಶ್ರೇಷ್ಠತ್ವವನ್ನು ಕೊಡುವವನು (ಇಂದ್ರಾದಿಗಳಿಗೆ ಸಜಾತಿಯರಲ್ಲಿ ಏಕದೇಶದಿಂದಲೇ ಶ್ರೇಷ್ಠತ್ವವೆಂದು ಏಕೆ ಹೇಳಬೇಕು ಎಂದರೆ—)ವಿಷ್ಣುವು ಹೊರತು ದೇವತೆಗಳಲ್ಲಿ ಅಧಿಕನಾದವನು ಬ್ರಹ್ಮನೇ ವಿಷ್ಣುವು ಸರ್ವೋತ್ತಮನು (ಅಂದರೆ ದೇವಾದಿಗಳಲ್ಲಿ ಬ್ರಹ್ಮಾದಿಗಳೇ ಶ್ರೇಷ್ಠರಾದುದರಿಂದ ಇಂದ್ರಾದಿದೇವತೆಗಳಿಗೆ ಸಜಾತೀಯರಾದ ಅನಿರುದ್ಧಾದಿ ಏಕದೇಶ ದಿಂದಲೇ ಶ್ರೇಷ್ಠತ್ವವೆಂದು ಹೇಳಬೇಕು) (೩) ಕವಿತ್ವ ಮೊದಲಾದ ಗುಣಗಳಲ್ಲಿಯೇ ಯಾರೊಬ್ಬನೂ ಶುಕ್ರಾಚಾರ್ಯರಿಗೆ ಸಮಾನಿಕನು ಇಲ್ಲವೇ ಇಲ್ಲ. ಪಾಂಡವರಲ್ಲಿ ಭೀಮಸೇನನು ಶ್ರೇಷ್ಠನು ಯಜ್ಞ ಗಳಲ್ಲಿ ಜ್ಞಾನವು ಶ್ರೇಷ್ಠವು ಆಯುಧಗಳಲ್ಲಿ ಸುದರ್ಶನವು ಶ್ರೇಷ್ಠವು ವೇದಗಳಲ್ಲಿ ಋಗ್ವೇದವು ಶ್ರೇಷ್ಠವು ಇತ್ಯಾದಿ ಪ್ರಮೇಯವು ವಿಭೂತಿತತ್ವದಲ್ಲಿದೆ (೪) (ಕೆಲವು ಕಡೆ ಸಾಮವೇದಕ್ಕೆ ಋಗ್ವೇದಾ

ದಿಗಳಿಂದ ಆಧಿಕ್ಯವನ್ನು ಹೇಳಿದ್ದು ಅಭಿಮಾನಿದೇವತೆಯನ್ನು ಇಟ್ಟುಕೊಂಡು (ವೇದಸ್ವರೂಪವನ್ನು ಇಟ್ಟು ಕೊಂಡು ಹೇಳಿದ್ದಲ್ಲ) ಋಗ್ವೇದಕ್ಕೆ ಲಕ್ಷ್ಮೀ ಸರಸ್ವತೀ ಭಾರತೀ ಪಾರ್ವತ್ಯಾದಿಗಳು ಅಭಿಮಾನಿಯರು. ಸಾಮವೇದಕ್ಕೆ ಪ್ರಾಣ ರುದ್ರಾದಿದೇವತೆಗಳು ಅಭಿಮಾನಿಗಳು ಇತ್ಯಾದಿ ಪ್ರಕಾರ ಅಭಿಮಾನಿಗಳು ಬೇರೆ ಬೇರೆ ಅಲ್ಲಿಯೂ ಯಥಾಯೋಗ್ಯವಾಗಿ ಇಟ್ಟುಕೊಳ್ಳಬೇಕು

ವಿ ॥ ಸಾಮವೇದಕ್ಕೆ ಅಭಿಮಾನಿಗಳಾದ ಪ್ರಾಣಶಿವಾದಿಗಳಿಗೆ ಋಗ್ವೇದಕ್ಕೆ ಅಭಿಮಾನಿಗಳಾದ ಲಕ್ಷ್ಮ್ಯಾದಿಗಳಿಗಿಂತ ಶ್ರೇಷ್ಠತ್ವವಿಲ್ಲದಿರುವುದರಿಂದ ಸಾಮವೇದಕ್ಕೆ ಋಗ್ವೇದಕ್ಕಿಂತ, ಅಭಿಮಾನಿ ವಿವಕ್ಷೆಯಿಂದಲಾದರೂ ಆಧಿಕ್ಯ ಹೇಳಿದ್ದು ಹೇಗೆ ಕೂಡುತ್ತದೆ ಎಂದರೆ – ಸಾಮವೇದಕ್ಕೆ ಋಗ್ವೇದಕ್ಕಿಂತ ಆಧಿಕ್ಯವನ್ನು ಎಲ್ಲಿ ಹೇಳಿದ್ದಾರೋ ಆಗ ಸಾಮವೇದಕ್ಕೆ ಮುಖ್ಯಪ್ರಾಣನು ಅಭಿಮಾನಿಯೆಂದೂ ಋಗ್ವೇದಕ್ಕೆ ಲಕ್ಷ್ಮೀದೇವಿಯನ್ನು ಬಿಟ್ಟು ಭಾರತೀ ಸರಸ್ವತೀ ಪಾರ್ವತ್ಯಾದಿಗಳು ಅಭಿಮಾನಿಗಳೆಂದೂ ಇಟ್ಟುಕೊಳ್ಳಬೇಕು ಸಾಮವೇದಕ್ಕೆ ರುದ್ರನನ್ನು ಅಭಿಮಾನಿಯೆಂದು ಇಟ್ಟುಕೊಂಡರೆ – ಋಗ್ವೇದಕ್ಕೆ ಅಭಿಮಾನಿನಿಯಾದ ಪಾರ್ವತಿಗಿಂತ ಅಧಿಕ್ಯವನ್ನು ಇಟ್ಟುಕೊಂಡು ಹೇಳಿದ್ದೆಂದು ತಿಳಿಯಬೇಕು. ಅಂದರೆ ಋಗ್ವೇದಕ್ಕೆ ಅಭಿಮಾನಿನಿಯಾದ ಲಕ್ಷ್ಮೀದೇವಿಯನ್ನು ಬಿಟ್ಟು ಭಾರತೀ ಪಾರ್ವತ್ಯಾದಿಗಳಿಗಿಂತ ಸಾಮವೇದಾಭಿಮಾನಿಗಳಾದ ಪ್ರಾಣಶಿವಾದಿಗಳಿಗೆ ಆಧಿಕ್ಯದಿಂದ ಹೇಳಿದ್ದೆಂದು ತಿಳಿಯಬೇಕು ಋಗ್ವೇದಕ್ಕೆ ಲಕ್ಷ್ಮೀದೇವಿಯು ಅಭಿಮಾನಿನಿ ಎಂದು ಇಟ್ಟುಕೊಂಡರೆ ಆಗ ಋಗ್ವೇದವೇ ಸರ್ವಪ್ರಕಾರದಿಂದಲೂ ವೇದಗಳಲ್ಲಿ ಶ್ರೇಷ್ಠವೇ ಆಗಿದೆ. ॥ ೫ ॥ ॥ ೧೦ – ೪೦ ॥

ಪೀ—ಶ್ರೀಪರಮಾತ್ಮನ ವಿಭೂತಿರೂಪಗಳ ವಿಸ್ತಾರಕ್ಕೆ ಲಕ್ಷಣವನ್ನು ಹೇಳುತ್ತಾರೆ—

ಗೀ ॥ ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಂ ॥ ೪೦ ॥

ಅ ॥ ಯದ್ಯತ್ ಸತ್ತ್ವಂ = ಯಾವ ಯಾವ ಪದಾರ್ಥವು, ವಿಭೂತಿಮತ್ = ಆವಾವ ಜಾತೀಯ ಪದಾರ್ಥಗಳಿಗಿಂತ ಶ್ರೇಷ್ಠವಾಗಿದೆಯೋ, ಶ್ರೀಮತ್ = ಸಂಪತ್ತಿನಿಂದ ಕೂಡಿಕೊಂಡಿದೆಯೋ, ಊರ್ಜಿತಮೇವ = ಅಭಿವೃದ್ಧಿವುಳ್ಳದ್ದು ಆಗಿದೆಯೋ, ತತ್ತತ್ = ಆವಾವ ಪದಾರ್ಥವನ್ನು, ಮಮ = ನನ್ನ, ತೇಜೋಽಂಶ ಸಂಭವಮೇವ = ಪ್ರಕಾಶರೂಪವಾದ ಅಂಶದಿಂದೊಡಗೂಡಿರುವುದನ್ನಾಗಿಯೇ, ತ್ವಂ = ನೀನು, ಅವಗಚ್ಛ = ತಿಳಿದುಕೊಳ್ಳು. ॥ ೪೧ ॥

ಭಾ ॥ (೧) ಯದ್ಯದ್ವಿಭೂತಿಮದಿತಿ ವಿಸ್ತರಃ । ವಿಷ್ಣ್ವಾದೀನಿ ತತ್ಸ್ವರೂಪಾಣ್ಯೇವ । ಅನ್ಯಾನಿ ತು ತೇಜೋಯುಕ್ತಾನಿ ॥ (೨) ತಥಾ ಚ ಪೈಂಗಿಖಿಲೇಷು । ವಿಶೇಷಕಾ ರುದ್ರವೈನ್ಯೇಂದ್ರದೇವರಾಜನ್ಯಾದ್ಯಾ ಅಂಶಯುತಾ ಅನ್ಯಜೀವಾಃ । ಕೃಷ್ಣವ್ಯಾಸೌ ರಾಮಕೃಷ್ಣೌ ಚ ರಾಮಕಪಿಲೌ ಯಜ್ಞಪ್ರಮುಖಾಃ ಸ್ವಯಂ ಸ ಇತಿ ॥ (೩) ಸ ಏವೈಕೋ ಭಾರ್ಗವದಾಶರಥಿಕೃಷ್ಣಾದ್ಯಾಸ್ತ್ವಂಶಯುತಾ ಅನ್ಯಜೀವಾ ಇತಿ ಗೌತಮಖಿಲೇಷು ॥ (೪) ಋಷಯೋ ಮನವೋ ದೇವಾ ಮನುಪುತ್ರಾ ಮಹೌಜಸಃ । ಕಲಾಃ ಸರ್ವೇ ಹರೇರೇವ ಸಪ್ರಜಾಪತಯಃ ಸ್ಮೃತಾಃ । ಏತೇ ಸ್ವಾಂಶಕಲಾಃ ಪುಂಸಃ ಕೃಷ್ಣಸ್ತು ಭಗವಾನ್ ಸ್ವಯಮಿತಿ ಭಾಗವತೇ ॥ (೫) ಋಷ್ಯಾದೀನಂಶ.

ಯುಕ್ತತ್ವೇನೋಕ್ತ್ವಾ ವರಾಹಾದೀನ್ ಸ್ವರೂಪತ್ವೇನಾಹ । ತುಶಬ್ದ ಏವಾರ್ಥೇ । ಅನ್ಯಸ್ತು ವಿಶೇಷೋ ನ ಕುತ್ರಾಪ್ಯವಗತಃ । ಅಂಶತ್ವಂ ತತ್ರಾಪ್ಯವಗತಂ । ಉದ್ಬುಬರ್ಹಾತ್ಮನಃ ಕೇಶಾವಿತಿ ॥ (೬) ಮೃಡಯಂತೀತಿ ಬಹುವಚನಂ ಚಾಯುಕ್ತಂ । ನ ಹ್ಯಂತರಾಽನ್ಯದುಕ್ತ್ವಾ ಪೂರ್ವಮುಪರಾಮೃಶ್ಯ ತತ್ಕ್ರಿಯೋಚ್ಯಮಾನಾ ದೃಷ್ಟಾ ಕುತ್ರಚಿತ್ ॥ ೪೧ ॥

ಅ ॥ (೧) **ಯದ್ಯದ್ವಿಭೂತಿಮತ್** ಎಂಬುವುದು **ಏಷಃ ವಿಭೂತೇಃ ವಿಸ್ತರಃ** ಎಂದು ಹೇಳಿದ ವಿಭೂತಿ ರೂಪಗಳ ವಿಸ್ತಾರರೂಪವು ಆದರಲ್ಲಿ **ಆದಿತ್ಯಾನಾಮಹಂ ವಿಷ್ಣುಃ** ಇದು ಮೊದಲಾದವುಗಳು ಶ್ರೀಪರಮಾತ್ಮನ ಸ್ವರೂಪಗಳೇ (ತೇಜೋರೂಪವಾದ ಅಂಶದಿಂದ ಕೂಡಿದವುಗಳಲ್ಲ) **ಜ್ಯೋತಿಷಾಂ ರವಿರಂಶುಮಾನ್** ಇತ್ಯಾದಿಗಳಲ್ಲಿ ಹೇಳಿದ ಸೂರ್ಯ ಮೊದಲಾದವರು ಪರಮಾತ್ಮನ ತೇಜೋರೂಪವಾದ ಅಂಶದಿಂದ ಕೂಡಿದವರು (೨) ಈ ಪ್ರಮೇಯವನ್ನು ವೈಂಗಿಬಿಲ ಎಂಬುವ ಗ್ರಂಥದಲ್ಲಿ ಹೇಳಿದೆ ಗರುಡ, ಶೇಷ, ಬ್ರಹ್ಮ, ರುದ್ರ, ವೈನ್ಯ (ಪೃಥುರಾಜ) ಇಂದ್ರ, ಇತರದೇವತೆಗಳು, ರಾಜರುಂದಕ್ಷತ್ರಿಯರೇ ಮೊದಲಾದ ಬೇರೆ ಜೀವರು ಶ್ರೀಪರಮಾತ್ಮನ ಅಂಶದಿಂದ ಕೂಡಿದವರು ಯಮಧರ್ಮನ ಪುತ್ರನಾದ ಶ್ರೀಕೃಷ್ಣ, ವೇದ ವ್ಯಾಸ, ದಶರಥ ಪುತ್ರನಾದ ಶ್ರೀರಾಮ, ಯಾದವ ಕೃಷ್ಣ ಪರಶುರಾಮ, ಕಪಿಲ, ಯಜ್ಞ ಮೊದಲಾದವರು ಸಾಕ್ಷಾತ್ ಶ್ರೀಪರಮಾತ್ಮನ ಸ್ವರೂಪಭೂತರೇ (ಅಂಶದಿಂದ ಕೂಡಿದವರಲ್ಲ) (೩) ಪರಶುರಾಮ, ದಶರಥನ ಪುತ್ರನಾದ ಶ್ರೀರಾಮ, ಶ್ರೀಕೃಷ್ಣ ಮೊದಲಾದ ವ್ಯಾಸ ಕಪಿಲಾದಿಗಳೂ ಸಾಕ್ಷಾತ್ ಶ್ರೀನಾರಾಯಣ ಸ್ವರೂಪರೇ. ಬ್ರಹ್ಮ ಮೊದಲಾದ ಬೇರೆ ಎಲ್ಲಾ ಜೀವರಾದರೂ ಶ್ರೀಪರಮಾತ್ಮನ ಅಂಶದಿಂದ ಕೂಡಿದವರು ಹೀಗೆ ಗೌತಮಬಿಲ ಗ್ರಂಥಗಳಲ್ಲಿ ಹೇಳಿದೆ (೪) ಋಷಿಗಳು, ಮನುಗಳು, ದೇವತೆಗಳು ಮಹಾಸಾಮರ್ಥ್ಯವುಳ್ಳ ಮನುಪುತ್ರರು ದಕ್ಷಪ್ರಜಾಪತಿಯಿಂದ ಸಹಿತರಾದವರೆಲ್ಲರೂ ಶ್ರೀಪರಮಾತ್ಮನ ಅಂಶಯುಕ್ತರೇ (ಪರಮಾತ್ಮನ ಸ್ವರೂಪಭೂತರಲ್ಲ) ಶ್ರೀಪರಮಾತ್ಮನ ಸ್ವರೂಪಾಂಶಭೂತರಾದ ವರಾಹಾದ್ಯವತಾರಗಳು ಸರ್ವೋತ್ತಮನಾದ ನೀಲಮೇಘಶ್ಯಾಮನಾದ ಮೂಲರೂಪಿಯಾದ ಶ್ರೀನಾರಾಯಣನೇ (**ಕೃಷ್ಣೋ ಮುಕ್ತೈರಿಜ್ಯತೇ ವೀತನೋಹ್ಯೈಃ** ಎಂದು ಮೂಲರೂಪದಲ್ಲಿಯೂ **ಕೃಷ್ಣ** ವೆಂಬುವ ಶಬ್ದ ಪ್ರಯೋಗವಿದ್ದುದರಿಂದ ಇಲ್ಲಿದ್ದ **ಕೃಷ್ಣ** ಶಬ್ದದಿಂದ ಮೂಲರೂಪನನ್ನೇ ಇಟ್ಟುಕೊಳ್ಳಬೇಕು. ಶ್ರೀಪರಮಾತ್ಮನ ಕೃಷ್ಣಕೇಶಾವತಾರನಾದ ಯಾದವಕೃಷ್ಣನನ್ನು ಇಟ್ಟುಕೊಳ್ಳಬಾರದು) ಎಂದು ಭಾಗವತದಲ್ಲಿದೆ (೫) ಋಷಿ ಮೊದಲಾದವರನ್ನು ಶ್ರೀಹರಿಯ ಅಂಶಯುಕ್ತರೆಂದು ಹೇಳಿ ವರಾಹಾದಿಗಳನ್ನು ಶ್ರೀಹರಿಯ ಸ್ವರೂಪಗಳೆಂದು ಹೇಳಿರುತ್ತಾರೆ. **ಕೃಷ್ಣಸ್ತು** ಎಂಬುವಲ್ಲಿದ್ದ **ತು** ಶಬ್ದಕ್ಕೆ ಏವ ಶಬ್ದದ ಅರ್ಥವು. ಸ್ವಯಂ ತು = ಮೂಲರೂಪಿಯೇ ಎಂದೇ ಅರ್ಥ) (ಹೀಗೆ ಅರ್ಥವನ್ನು ಮಾಡದಿದ್ದರೆ **ಕೃಷ್ಣೋವ್ಯಾಸೌ** ಇತ್ಯಾದಿ ಪ್ರಮಾಣಗಳ ವಿರೋಧವು ಬರುವುದು ಈ ಅರ್ಥವನ್ನು ಹೊರತು ಬೇರೆ ಅರ್ಥವನ್ನು ಹೇಳುವ ಪ್ರಮಾಣವೂ ಇಲ್ಲವೆನ್ನುತ್ತಾರೆ) ವರಾಹಾದಿ ಅವತಾರಗಳು ಶ್ರೀಪರಮಾತ್ಮನ ಅಂಶಭೂತರು, ಶ್ರೀಯಾದವ ಕೃಷ್ಣನು ಮಾತ್ರ ಅಂಶಿಯು ಎಂಬೀ ವಿಶೇಷವು ಎಲ್ಲಿ ಯಾವ ಪ್ರಮಾಣದಲ್ಲಿಯೂ ಹೇಳಲಿಲ್ಲ ಮತ್ತು **ಉದ್ಬುಬರ್ಹಾತ್ಮನಃ ಕೇಶೌ ಕೃಷ್ಣಕೇಶೋ ಹಿ ಯಾದವಃ** ಶ್ರೀಮೂಲರೂಪಿಯ ಕೃಷ್ಣಕೇಶದಿಂದ ಯಾದವಕೃಷ್ಣನು ಆದನೆಂದು ಹೇಳಿದೆ ಇದರಿಂದ ಶ್ರೀಕೃಷ್ಣನಲ್ಲಿಯೂ ಶ್ರೀಪರಮಾತ್ಮನ ಅಂಶತ್ವವೇ ತಿಳಿಯಲ್ಪಟ್ಟಿದೆ (೬) ಮತ್ತು **ಇಂದ್ರಾರಿವ್ಯಾಕುಲಂ ಲೋಕಂ ಮೃಡಯಂತಿ ಯುಗೇಯುಗೇ** ಎಂದು ಹೇಳಿದ ಬಹುವಚನವು ವರಾಹಾದಿಗಳನ್ನು ಶ್ರೀಪರಮಾತ್ಮನ ಸ್ವರೂಪಾಂಶರೆಂದು ಇಟ್ಟುಕೊಳ್ಳದೆ ಶ್ರೀ ಯಾದವಕೃಷ್ಣನನ್ನು ಮಾತ್ರ ಇಟ್ಟು

ಕೊಂಡರೆ ಬಹುವಚನವೂ ಕೂಡದೆ ಹೋಗುವುದು (ವ್ಯಪಡಯಂತಿ ಎಂಬುವಲ್ಲಿ ವರಾಹಾದಿಗಳನ್ನು ಇಟ್ಟುಕೊಳ್ಳುತ್ತೇವೆಂದರೆ **ಕೃಷ್ಣಸ್ತು ಭಗವಾನ್ ಸ್ವಯಂ** ಎಂದು ಹೇಳಿದ ಪ್ರಕಾರ ಕೃಷ್ಣನನ್ನು ಇಟ್ಟುಕೊಳ್ಳುವುದಿಲ್ಲವೆಂದು ಹೇಳಕೂಡದು. ಏಕೆಂದರೆ ವರಾಹಾದ್ಯವತಾರಗಳನ್ನು ಸಮಾಪದಲ್ಲಿ ಹೇಳದಿರುವುದರಿಂದ ಅಸನ್ನಿಹತದಿಂದ ಅನ್ವಯವು ಎಲ್ಲಿಯೂ ಕಂಡುಬರುವುದಿಲ್ಲ, ಎಂಬುವ ಅಭಿಪ್ರಾಯದಿಂದ ಹೇಳುತ್ತಾರೆ—) ಮಧ್ಯದಲ್ಲಿ ಇನ್ನೊಂದು ವಿಷಯವನ್ನು ಹೇಳಿ ಮೊದಲು ಹೇಳಿದ್ದನ್ನು ಇಟ್ಟುಕೊಳ್ಳದೆ ಅದರ ಕ್ರಿಯೆಯನ್ನು ಉತ್ತರತ್ರ ಹೇಳುತ್ತದೆ, ಎಂಬುವುದು ಎಲ್ಲಿಯೂ ಕಂಡು ಬರಲಿಲ್ಲ (ಆದುದರಿಂದ ವರಾಹಾದಿ ಸ್ವರೂಪಾಂಶರು, ಸರ್ವೋತ್ತಮನಾದ ನೀಲಮೇಘ ಶ್ಯಾಮನಾದ ಮೂಲರೂಪಿಯಾದ ಶ್ರೀನಾರಾಯಣನೇ ಎಂಬುವ ಅರ್ಥವನ್ನು ಇಟ್ಟುಕೊಳ್ಳಬೇಕು ॥ ೪೧ ॥

ತಾ ॥ ಮಮ ತೇಜೋಂಶೇನ ಸಂಯುಕ್ತಂ ಭವತಿ ॥ ೪೧ ॥

ಅ ॥ ನನ್ನ ಪ್ರಕಾಶರೂಪವಾದ ಅಂಶದಿಂದ ಯುಕ್ತವಾಗುತ್ತದೆ, ಎಂದು ತೇಜೋಽಂಶಸಂಭವಂ ಎಂಬುವುದು ಅರ್ಥವು ತೇಜಸ್ಸಿನ ಅಂಶದಿಂದ ಹುಟ್ಟಿದೆಂದು ಅರ್ಥವಲ್ಲ ॥ ೪೧ ॥

ಪೀ—ಆವಾವ ವಸ್ತುಗಳಲ್ಲಿದ್ದ ವಿಭೂತಿರೂಪಗಳ ವಿಸ್ತಾರದಿಂದಲೂ ಹೆಚ್ಚು ವಿಭೂತಿ ವಿಸ್ತಾರವನ್ನು ಹೇಳುತ್ತಾರೆ—

ಗೀ ॥ ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ ।
ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ ॥ ೪೨ ॥

ಅ ॥ ಅಥವಾ=ಅಥವಾ, ಅರ್ಜುನ—ಅರ್ಜುನನೇ, ಏತೇನ ಬಹುನಾ=ಮೊದಲು ಹೇಳಿದ ವಿಭೂತ್ಯಾದಿಗಳಿಂದ ಯುಕ್ತರಾದ ಸೂರ್ಯಾದಿಗಳಿಗೆ ನಿಯಾಮಕಗಳಾದ ಸೂರ್ಯಾದಿಗಳಲ್ಲಿರತಕ್ಕ ಪರಿಚ್ಛಿನ್ನಗಳಾದ ವಿಭೂತಿರೂಪಗಳ ವಿಸ್ತಾರದಿಂದ, ಜ್ಞಾತೇನ=ತಿಳಿಯೋಣದರಿಂದ, ತವ=ನಿನಗೆ, ಕಿಂ=ಏನು ಪ್ರಯೋಜನವು? ಅಂದರೆ ಇನ್ನು ಮುಂದೆ ಹೇಳುವ ವ್ಯಾಪ್ತಭಗವದ್ರೂಪಗಳ ಜ್ಞಾನದಿಂದುಂಟಾಗುವ ಫಲಕ್ಕಿಂತಲೂ ಹಿಂದೆ ಹೇಳಿದ ಸೂರ್ಯಾದಿಗಳಲ್ಲಿ ನಿಯಾಮಕವಾಗಿರುವ ಶ್ರೀಪರಮಾತ್ಮನ ವಿಭೂತಿರೂಪಗಳ ಜ್ಞಾನದಿಂದುಂಟಾಗುವ ಫಲವು ಕಡಿಮೆ ಎಂದೇ ತಾತ್ಪರ್ಯವು ಹೊರತು ಫಲವಿಲ್ಲವೆಂದರ್ಥವಲ್ಲ (ಹಾಗಾದರೆ ಯಾವುದನ್ನು ತಿಳಿಯಬೇಕೆಂದರೆ—) ಅಹಂ=ನಾನು, ಇದಂ=ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸಿದ್ಧವಾಗಿರುವ ಕೃತ್ಸ್ನಂ ಜಗತ್=ಎಲ್ಲಾ ಜಗತ್ತನ್ನು, ಏಕಾಂಶೇನ=ಅನಂತಾನಂತ ಅಂಶಗಳ ಮಧ್ಯದಲ್ಲಿ ಒಂದು ಅಂಶದಿಂದಲೇ, ವಿಷ್ಟಭ್ಯ=ವ್ಯಾಪಿಸಿಕೊಂಡು ಸ್ಥಿತಃ=ಇರುತ್ತೇನೆ

ವಿ ॥ (1) (ಸರ್ವಾಂಶದಿಂದ ವ್ಯಾಪಿಸಲಿಕ್ಕೆ ಸಾವಿರಾರು ಜಗತ್ತೂ ಸಾಕಾಗದು ಅದಕಾರಣ ಅಂತಹ ಅಪರ್ಯವಸಿತ ವ್ಯಾಪ್ತಿಯುಳ್ಳವನು ನಾನು. ಸರ್ವತ್ರ ವ್ಯಾಪ್ತನೆಂದು ನನ್ನ ಜ್ಞಾನವು ಆವಶ್ಯಕವು (2) ಹಾಗಾದರೆ ಇಂತಹ ಜ್ಞಾನದಿಂದಲೇ ಮೋಕ್ಷವು ಸಿದ್ಧವಾಗುವಾಗ ಹಿಂದೆ ಹೇಳಿದ ಪರಿಚ್ಛಿನ್ನ ವಿಭೂತಿರೂಪಗಳ ಜ್ಞಾನವು ವ್ಯರ್ಥವೆಂದರೆ—**ಅಜಾಜ್ಞೈವಂ** ಇತ್ಯಾದಿ ಪ್ರಮಾಣಗಳಿಂದ ಅವುಗಳ ಜ್ಞಾನವೂ ಸಾಧಾರಣ ಜನರಿಗೆ ಆವಶ್ಯಕವೇ (3) ನೀನು ಮಹಾಫಲದಲ್ಲಿ ಅಧಿಕಾರವುಳ್ಳವನಾದುದರಿಂದ ನಿನಗೆ ಎರಡು ವಿಧ ವಿಭೂತಿರೂಪಗಳ ಜ್ಞಾನವೂ ಆವಶ್ಯಕವೇ ವಿಶೇಷಜ್ಞಾನಮಾತ್ರವು ಸಾಕಾಗದು ಈ ಅಭಿಪ್ರಾಯದಿಂದಲೇ **ತವ ಏತೇನ ಜ್ಞಾತೇನ ಕಿಂ** ಎಂದು ಹೇಳಿದ್ದು ॥ ೪೨ ॥

ಗೀ ॥ ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗ ಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ವಿಭೂತಿಯೋಗೋ ನಾಮ ದಶಮೋಽಧ್ಯಾಯಃ ॥ ೧೦ ॥

ಅ ॥ ಹೀಗೆ ಶ್ರೀಮದ್ಭಗವದ್ಗೀತೆಯಲ್ಲಿ ಬ್ರಹ್ಮವಿದ್ಯೆಯಲ್ಲಿ ಯೋಗಶಾಸ್ತ್ರದಲ್ಲಿ ಶ್ರೀಕೃಷ್ಣಾರ್ಜುನರ ಸಂವಾದದಲ್ಲಿ ವಿಭೂತಿಯೋಗವೆಂಬ ಹತ್ತನೇ ಅಧ್ಯಾಯವು ಮುಗಿಯಿತು ॥ ೧೦ ॥

ಭಾ ॥ (೧) ಕಿಮಿತಿ ವಕ್ಷ್ಯಮಾಣಪ್ರಾಧಾನ್ಯಜ್ಞಾಪನಾರ್ಥಂ । ನ ತೂಕ್ತನಿಷ್ಫಲತ್ವಜ್ಞಾಪನಾಯ । ತಥಾಸತಿ ನೋಚ್ಯೇತ ॥ (೨) ಅಜ್ಞಾತ್ವೈನಂ ಸರ್ವವಿಶೇಷಯುಕ್ತಂ ದೇವಂ ವರಂ ಕೋ ವಿಮುಚ್ಯೇತ ಬಂಧಾದಿತಿ ಚ ಋಗ್ವೇದಖಿಲೇಷು ॥ (೩) ತ್ವಂ ತು ಬಹುಫಲಪ್ರಾಪ್ತಿಯೋಗ್ಯ ಇತಿ ತವೇತಿ ವಿಶೇಷಣಂ ॥ (೪) ಅನ್ಯಸ್ತುತ್ಯರ್ಥತ್ವೇನ ಪ್ರಸಿದ್ಧಶ್ಚೇತ್ಕಥಂ ರಾಗದ್ವೇಷೌ ಯದಿ ನ್ಯಾತಾಂ ತವಸಾ ಕಿಂ ಪ್ರಯೋಜನಂ । ತಾವುಭೌ ಯದಿ ನ ಸ್ಯಾತಾಂ ತವಸಾ ಕಿಂ ಪ್ರಯೋಜನಮಿತ್ಯಾದೌ । ಪ್ರಾಧಾನ್ಯಂ ಚ ಪ್ರಸಿದ್ಧಮೇಕತ್ರ ದರ್ಶನಾತ್ಸರ್ವತ್ರ ಭಗವದ್ದರ್ಶನಸ್ಯ ಯೋ ಮಾಂ ಪಶ್ಯತಿ ಸರ್ವತ್ರೇತ್ಯಾದೌ ॥ ೪೨ ॥

ಅ ॥ (೧) **ಬಹುನೈತೇನ ಕಿಂ ಜ್ಞಾತೇನ** ಎಂಬುವಲ್ಲಿದ್ದ ಕಿಂ ಎಂಬುವ ಆಕ್ಷೇಪವು ಮುಂದೆ ಹೇಳುವ ಸರ್ವತ್ರವ್ಯಾಪ್ತಗಳಾದ ಭಗವದ್ರೂಪಗಳ ಜ್ಞಾನವು ಹಿಂದೆ ಹೇಳಿದ ಸೂರ್ಯನೇ ಮೊದಲಾದ ಪರಿಚ್ಛಿನ್ನಗಳಾದ ವಸ್ತುಗಳಲ್ಲಿರುವ ಶ್ರೀಪರಮಾತ್ಮನ ವಿಭೂತಿರೂಪಗಳ ಜ್ಞಾನಕ್ಕಿಂತ ಪ್ರಧಾನವು, ಎಂದು ತಿಳಿಸುವುದಕ್ಕಾಗಿಯೇ ಹಿಂದೆ ಹೇಳಿದ ವಿಶೇಷಜ್ಞಾನವು ನಿಷ್ಫಲವೆಂದು ತಿಳಿಸುವುದಕ್ಕಾಗಿಲ್ಲ ನಿಷ್ಫಲವಾಗಿದ್ದರೆ ಅದನ್ನು ಹೇಳದೇನೇ ಇರುತ್ತಿದ್ದರು (೨) (ವ್ಯಾಪ್ತಜ್ಞಾನದಿಂದಲೇ ಮೋಕ್ಷವು ಸಿಗುವುದರಿಂದ ವಿಶೇಷಜ್ಞಾನವು ವ್ಯರ್ಥವೆಂದು ಏಕೆ ಆಗಲಾರದು, ಎಂದರೆ—) ವಿಭೂತಿರೂಪಗಳಾದ ಸಮಸ್ತ ವಿಶೇಷಗಳಿಂದ ಕೂಡಿದ ಕ್ರೀಡಾದಿಗುಣವಿಶಿಷ್ಟನಾದ ಸರ್ವೋತ್ತಮನಾದ ಶ್ರೀಪರಮಾತ್ಮನನ್ನು ತಿಳಿಯದೆ ಸಂಸಾರಬಂಧದಿಂದ ಯಾವನು ಮುಕ್ತನಾಗುವನು? ಎಂದು ಋಗ್ವೇದಖಿಲದಲ್ಲಿ ಹೇಳಿದೆ (೩) ನೀನು (ಮಹಾ ಫಲದಲ್ಲಿ ಅಧಿಕಾರಿಯಾದುದರಿಂದ) ಬಹುಫಲವನ್ನು ಹೊಂದಲಿಕ್ಕೆ ಯೋಗ್ಯನು, (ಆದಕಾರಣ ನಿನಗೆ ವಿಶೇಷ ಜ್ಞಾನವು ಮಾತ್ರ ಸಾಕಾಗದು, ಎಂದು ತಿಳಿಸುವುದಕ್ಕಾಗಿ) ತವ ಎಂದು ವಿಶೇಷಣವು (೪) ಇನ್ನೊಂದನ್ನು ಸ್ತೋತ್ರಮಾಡುವುದಕ್ಕಾಗಿಯೇ ಕೆಲವು ಕಡೆ ಕಿಂ ಶಬ್ದ ಪ್ರಯೋಗವೂ ಪ್ರಸಿದ್ಧವಾಗಿದೆ (ನಿಷ್ಫಲತ್ವವನ್ನು ತಿಳಿಸಿಕೊಡುವುದಿಲ್ಲ) (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ರಾಗದ್ವೇಷಗಳು ಇದ್ದರೆ ತಪಸ್ಸಿನಿಂದ ಪ್ರಯೋಜನವೇನು? ಅವುಗಳು ಇಲ್ಲವಾದರೂ ತಪಸ್ಸಿನಿಂದ ಪ್ರಯೋಜನವೇನು (ಅಂದರೆ ರಾಗ ದ್ವೇಷಗಳ ಪರಿಹಾರಸ್ತುತಿಗಾಗಿಯೇ ಹೀಗೆ ಹೇಳಿದ್ದು ತಪಸ್ಸಿಗೆ ನಿಷ್ಫಲತ್ವವನ್ನು ಹೇಳಲಿಕ್ಕೆ ಹೋಗಿದ್ದಲ್ಲ) ಇತ್ಯಾದಿಗಳಲ್ಲಿ ಪ್ರಸಿದ್ಧವಾಗಿದೆ (೫) (ಪರಿಚ್ಛಿನ್ನಜ್ಞಾನಕ್ಕಿಂತ ವ್ಯಾಪ್ತಜ್ಞಾನಕ್ಕೆ ಪ್ರಾಧಾನ್ಯವು ಎಲ್ಲಿ ಕಂಡಿದೆ ಎಂದರೆ—) **ಯೋ ಮಾಂ ಪಶ್ಯತಿ ಸರ್ವತ್ರ** ಇತ್ಯಾದಿಗಳಲ್ಲಿ **ಯೋ ಮಾಂ** ಎಂಬುವಲ್ಲಿ ವಿಶಿಷ್ಟ ಫಲವನ್ನು ಹೇಳಿದ್ದರಿಂದ ಏಕತ್ರ ವಿಭೂತಿರೂಪವನ್ನು ತಿಳಿದುಕೊಳ್ಳುವುದಕ್ಕಿಂತ ಸರ್ವತ್ರವ್ಯಾಪ್ತ ಭಗವದ್ರೂಪವನ್ನು ತಿಳಿದುಕೊಳ್ಳುವುದು ಪ್ರಧಾನವೆಂದು ಸಿದ್ಧವೇ ಆಗಿದೆ ॥ ೪೨ ॥

ಭಾ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ಭಾಷ್ಯೇ ದಶಮೋಽಧ್ಯಾಯಃ ॥ ೧೦ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಶ್ರೀಭಗವದ್ಗೀತಾ ಭಾಷ್ಯದಲ್ಲಿ ಹತ್ತನೇ ಅಧ್ಯಾಯವು ಮುಗಿಯಿತು. ॥ ೧೦ ॥

ಪೀ—ಅಲ್ಲಿ ಹೇಳಿದ ಬಹಳವಾಗಿ ತಿಳಿದುಕೊಳ್ಳುವುದರಿಂದ ಯಾವುದೂ ಫಲವಿಲ್ಲ, ಎಂಬುವ ಅನ್ಯಥಾ ಪ್ರತೀತಿಯನ್ನು ನಿರಾಕರಿಸುತ್ತಾರೆ—

ತಾ ॥ (೧) ಕಿಂ ಜ್ಞಾತೇನೇತಿ ವಕ್ಷ್ಯಮಾಣಸ್ಯಾಧಿಕಫಲತ್ವಜ್ಞಾಪಕಮೇವ । ಅನ್ಯಥೋಕ್ತೇರೇವ ವೈಯರ್ಥ್ಯಾತ್ ॥ (೨) ಅನ್ಯಾಧಿಕ್ಯಜ್ಞಾಪನಾರ್ಥಂ ಶುಭಂ ಚಾಪ್ಯಸ್ಮೃತೇ ಕ್ವಚಿತ್ । ನ ತಾವತಾಽಸ್ಯ ನಿಂದ್ಯತ್ವಂ ಜ್ಞೇಯಮೈನಾನ್ಯವರಿಷ್ಯತಾ । ಉಭಯಂ ಮಿಲಿತಂ ಚೈವ ತತೋಽಪ್ಯಧಿಕಶೋಭನಮಿತಿ ಚ ॥ ೪೨ ॥

ಅ ॥ (೧) ಕಿಂ ಜ್ಞಾತೇನ ಎಂಬುವ ವಚನವು ಹಿಂದೆ ಹೇಳಿದ ಜ್ಞಾನಕ್ಕಿಂತಲೂ ಮುಂದೆ ಹೇಳುವ ವ್ಯಾಪ್ತಭಗಪದ್ರೂಪಗಳ ಜ್ಞಾನಕ್ಕೆ ಅಧಿಕ ಫಲವಿದೆ, ಎಂದು ತಿಳಿಸುವುದಕ್ಕಾಗಿಯೇ ಅಲ್ಲದೆ ಹಿಂದಿನ ಜ್ಞಾನವು ನಿಷ್ಫಲವೆಂದು ಹೇಳತಕ್ಕದಲ್ಲ ಹಾಗಿದ್ದರೆ ಅದನ್ನು ಹೇಳಿದ್ದೇ ವ್ಯರ್ಥವಾಗುವುದು (೨) (ಈ ವಿಷಯದಲ್ಲಿ ಸ್ಮೃತಿಯನ್ನು ಹೇಳುತ್ತಾರೆ-) ಇತರವಾದುದಕ್ಕೆ ಆಧಿಕ್ಯವಿದೆ, ಎಂದು ತಿಳಿಸುವುದಕ್ಕಾಗಿಯೇ ಕ್ವಚಿತ್ ಶುಭವೂ ಕೂಡ ಆಕ್ಷಿಪ್ತವಾಗುತ್ತದೆ ಅಷ್ಟರಿಂದ ಹಿಂದೆ ಹೇಳಿದ್ದಕ್ಕೆ ನಿಂದ್ಯತ್ವವೂ ಹೇಯತ್ವವೂ ತಿಳಿಯಕೂಡದು. ಇನ್ನೊಂದು ಶ್ರೇಷ್ಠವೆಂದೇ ತಿಳಿಯಬೇಕು ಶ್ರೇಷ್ಠವಾದುದು ಲಭಿಸಿದೊಡನೆ ಅಲ್ಪವಾದುದನ್ನು ಬಿಡಕೂಡದು. ಎರಡೂ ಸೇರಿದರೇನೇ ಅತ್ಯಧಿಕ ಮಂಗಲವಾಗುತ್ತದೆ (ಅತ್ಯಧಿಕ ಫಲವು ಲಭಿಸುತ್ತದೆ) ॥ ೪೨ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ತಾತ್ಪರ್ಯನಿರ್ಣಯೇ ದಶಮೋಽಧ್ಯಾಯಃ ॥ ೧೦ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಭಗವದ್ಗೀತಾ ತಾತ್ಪರ್ಯನಿರ್ಣಯದಲ್ಲಿ ಹತ್ತನೇ ಅಧ್ಯಾಯವು ಮುಗಿಯಿತು ॥ ೧೦ ॥

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಹನ್ನೊಂದನೇ ಅಧ್ಯಾಯವು.

ಪೀ—ಹಿಂದಿನ ಅಧ್ಯಾಯದ ಅಂತ್ಯದಲ್ಲಿ **ವಿಷ್ಟಭ್ಯಾಹಮಿದಂ ಕೃತ್ಸ್ನಂ** ಎಂದು ಸಂಕ್ಷೇಪದಿಂದ ಹೇಳಿದ ವ್ಯಾಪ್ತರೂಪೋಪಾಸನವು ಬುದ್ಧಿಯಲ್ಲಿ ನಿಲ್ಲಲು ಅಶಕ್ಯವಾಗಿರುವುದರಿಂದ ಆ ಧ್ಯಾನಸೌಕರ್ಯಕ್ಕಾಗಿ ಮೊದಲು ಸಂಕ್ಷೇಪದಿಂದ ಹೇಳಿದುದನ್ನು ಈ ಅಧ್ಯಾಯದಲ್ಲಿ ವಿಸ್ತಾರವಾಗಿ ಹೇಳುತ್ತಾರೆ—

ಗೀ ॥ ॥ ಅರ್ಜುನ ಉವಾಚ ॥

ಓಂ ॥ ಮದನುಗ್ರಹಾಯ ಪರಮಂ ಗುಹ್ಯಮಧ್ಯಾತ್ಮಸಂಜ್ಞಿತಂ ।
ಯತ್ತ್ವಯೋಕ್ತಂ ವಚಸ್ತೇನ ಮೋಹೋಽಯಂ ವಿಗತೋ ಮಮ ॥೧॥

ಅ ॥ ಅರ್ಜುನಃ=(ಶ್ರೀಹರಿಯ ವಿಶ್ವರೂಪವನ್ನು ತಿಳಿಯುವುದಕ್ಕಾಗಿ ಅದನ್ನು ಪ್ರಶ್ನೆಮಾಡಲಿಕ್ಕೆ ಇಚ್ಛಿಸಿದ) ಅರ್ಜುನನು, ಉವಾಚ=(ಹಿಂದೆ ಹೇಳಿದುದನ್ನು) ಅನುವಾದಮಾಡುತ್ತಾನೆ ಪರಮಂ ಗುಹ್ಯಂ=ಅತಿಗೋಪ್ಯವಾದ, ಅಧ್ಯಾತ್ಮಸಂಜ್ಞಿತಂ=ಪರಮಾತ್ಮನ ಸ್ವರೂಪವನ್ನು ಬೋಧಿಸುವುದರಿಂದ ಅಧ್ಯಾತ್ಮ ಎಂದು ಹೆಸರುಳ್ಳ ಯದ್ವಚಃ=ಯಾವ ಮಾತು ತ್ವಯಾ=ನಿನ್ನಿಂದ, ಮದನುಗ್ರಹಾಯ=ನನಗೆ ಅನುಗ್ರಹ ಮಾಡುವುದಕ್ಕಾಗಿ, ಉಕ್ತಂ=ಹೇಳಲ್ಪಟ್ಟಿದೋ, ತೇನ=ಆ ಮಾತಿನಿಂದ, ಮಮ=ನನ್ನ, ಅಯಂ ಮೋಹಃ=ಬಂಧುಸ್ನೇಹಾದಿರೂಪವಾದ ಈ ಮೋಹವು ವಿಗತಃ=ನಷ್ಟವಾಯಿತು, ॥೧॥

ಗೀ ॥ ಭವಾಪ್ಯಯೌ ಹಿ ಭೂತಾನಾಂ ಶ್ರುತೌ ವಿಸ್ತರಶೋ ಮಯಾ ।
ತ್ವತ್ತಃ ಕಮಲಪತ್ರಾಕ್ಷ ಮಾಹಾತ್ಮ್ಯಮಪಿ ಚಾವ್ಯಯಂ ॥ ೨ ॥

ಅ ॥ ಕಮಲಪತ್ರಾಕ್ಷ=ಕಮಲದಳಗಳಂತೆ ವಿಶಾಲಗಳಾದ ಕಣ್ಣುಗಳುಳ್ಳ ಶ್ರೀಕೃಷ್ಣನೇ, ತ್ವತ್ತಃ=ನಿನ್ನಿಂದ ಆಗುವ, ಭೂತಾನಾಂ=ಸಮಸ್ತಪ್ರಾಣಿಗಳಿಗೆ, ಭವಾಪ್ಯಯೌ=ಉತ್ಪತ್ತಿನಾಶಗಳು, ವಿಸ್ತರಶಃ=(ಅಹಂ ಕೃತ್ಸ್ನಸ್ಯ ಜಗತಃ ಇತ್ಯಾದಿ ೭ನೇ ಅಧ್ಯಾಯಾದಿಗಳಲ್ಲಿ ಹೇಳಿದ ಪ್ರಕಾರ) ವಿಸ್ತಾರವಾಗಿ, ಶ್ರುತೌ=ಕೇಳಲ್ಪಟ್ಟವು ಚ=ಮತ್ತು, ಅವ್ಯಯಂ=ಅವಿನಾಶಿಯಾದ, (ಅಂದರೆ ಶಾಶ್ವತವಾದ), ಮಾಹಾತ್ಮ್ಯಮಪಿ=ಮಹಿಮೆಯೂ ಕೂಡ, (ಶ್ರುತಂ)ಚ=ಕೇಳಲ್ಪಟ್ಟಿತು ಹಿ=ಪ್ರಸಿದ್ಧವು. ॥ ೨ ॥

ಪೀ—ಶ್ರೀಕೃಷ್ಣನ ಮಾತನ್ನು ಸ್ತುತಿಸುತ್ತಾ ತಿಳಿಯಲು ಇಚ್ಛಿಸುವ ವಿಶ್ವರೂಪವನ್ನು ತೋರಿಸಬೇಕೆಂದು ಪ್ರಾರ್ಥಿಸುತ್ತಾನೆ—

ಗೀ ॥ ಏವಮೇತದ್ಯಥಾssತ್ಥ ತ್ವಮಾತ್ಮಾನಂ ಪರಮೇಶ್ವರ ।
ದ್ರಷ್ಟುಮಿಚ್ಛಾಮಿ ತೇ ರೂಪಮೈಶ್ವರಂ ಪುರುಷೋತ್ತಮ ॥ ೩ ॥

ಅ ॥ ಪರಮೇಶ್ವರ=ಸರ್ವೋತ್ತಮನಾದ ಶ್ರೀಕೃಷ್ಣನೇ, ತ್ವಂ=ನೀನು, ಆತ್ಮಾನಂ=ಶ್ರೀಪರಮಾತ್ಮನಾದ ನಿನ್ನನ್ನು, ಯಥಾ=ಯಾವಪ್ರಕಾರದಿಂದ, ಆತ್ಥ=ಹೇಳುತ್ತಿಯೋ, ಏತತ್=ಈ ಮಾತು, ಏವಂ=

ಹೀಗೆಯೇ, (ಸತ್ಯವೇ) ಪುರುಷೋತ್ತಮ=ಕ್ಷರಾಕ್ಷರ ಪುರುಷರಿಂದುತ್ತಮನಾದ ಶ್ರೀಕೃಷ್ಣನೇ, ತೇ=ನಿನ್ನ, ಐಶ್ವರಂ=ಈಶ್ವರ ಸಂಬಂಧಿಯಾದ, (ಅಂದರೆ ಆಲೋಚಿಸಲಿಕ್ಕೂ ಅಶಕ್ಯವಾದ ಸಾಮರ್ಥ್ಯವುಳ್ಳ) ರೂಪಂ=ವಿಶ್ವರೂಪವನ್ನು, ದ್ರಷ್ಟುಂ=ನೋಡುವುದಕ್ಕಾಗಿ, ಇಚ್ಛಾಮಿ=ಇಚ್ಛಿಸುತ್ತೇನೆ. ॥ ೩ ॥

ಪೀ—ಈ ಅಧ್ಯಾಯದಲ್ಲಿ ಹೇಳತಕ್ಕ ಅರ್ಥವನ್ನು ಹೇಳುತ್ತಾರೆ—

ಭಾ ॥ ಓಂ ॥ ಯಥಾಶ್ರುತೇ ಧ್ಯಾನಂ ಶಕ್ಯಂ ತಥಾ ಸ್ವರೂಪಸ್ಥಿತಿರನೇನಾಧ್ಯಾಯೇನೋಚ್ಯತೇ ॥ ೧೨,೩ ॥

ಅ ॥ ೧೦ನೇ ಅಧ್ಯಾಯದ ಅಂತ್ಯದಲ್ಲಿ ವಿಷ್ಟಭ್ಯಾಹಮಿದಂ ಕೃತ್ಸ್ನಂ ಎಂದು ವ್ಯಾಪ್ತವಾದ ಭಗವದ್ರೂಪೋಪಾಸನೆಯನ್ನು ಸಂಕ್ಷೇಪದಿಂದ ಹೇಳಿರುವರು ಸಂಕ್ಷೇಪದಿಂದ ಹೇಳಿದ್ದು ಬುದ್ಧಿಯಲ್ಲಿ ಸ್ಥಿರವಾಗಿ ನಿಲ್ಲದಿರುವುದರಿಂದ ಧ್ಯಾನಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಆದಕಾರಣ ಸರ್ವತ್ರವ್ಯಾಪ್ತವಾದ ರೂಪವನ್ನು ಹೇಗೆ ವಿಸ್ತಾರವಾಗಿ ಕೇಳಿದರೆ ಧ್ಯಾನಮಾಡಲಿಕ್ಕೆ ಸುಲಭದಿಂದ ಸಾಧ್ಯವಾಗುತ್ತದೋ, ಹಾಗೆಯೇ (ಅರ್ಜುನನಿಗೆ ತೋರಿಸಿದ ವ್ಯಾಪ್ತರೂಪವನ್ನು ಅನುವಾದ ಮಾಡಿಕೊಂಡು) ಆ ರೀತಿಯಲ್ಲಿ ವ್ಯಾಪ್ತವಾಗಿರುವ ಪರಮಾತ್ಮನ ವಿಶ್ವರೂಪವನ್ನು ಈ ೧೧ನೇ ಅಧ್ಯಾಯದಿಂದ ಹೇಳುತ್ತಾರೆ ॥ ೧—೩ ॥

ಗೀ ॥ ಮನ್ಯಸೇ ಯದಿ ತಚ್ಛಕ್ಯಂ ಮಯಾ ದ್ರಷ್ಟುಮಿತಿ ಪ್ರಭೋ ।
ಯೋಗೇಶ್ವರ ತತೋ ಮೇ ತ್ವಂ ದರ್ಶಯಾತ್ಮಾನಮವ್ಯಯಂ ॥ ೪ ॥

ಅ ॥ ಪ್ರಭೋ=ಸರ್ವಸಮರ್ಥನಾದ ಶ್ರೀಕೃಷ್ಣನೇ, ತದ್ರೂಪಂ=ನಿನ್ನ ವಿಶ್ವರೂಪವು, ಮಯಾ=ನನ್ನಿಂದ, ದ್ರಷ್ಟುಂ=ನೋಡಲಿಕ್ಕೆ, ಶಕ್ಯಮಿತಿ=ಸಾಧ್ಯವಾದುದೆಂದು, ಯದಿ ಮನ್ಯಸೇ=ನೀನು ತಿಳಿದರೆ, ತತ್=ಆ ಪಕ್ಷದಲ್ಲಿ, ಯೋಗೇಶ್ವರ=ಎಲ್ಲಾ ಉಪಾಯಗಳಿಗೂ ಅಧಿಪತಿಯಾದ ಶ್ರೀಕೃಷ್ಣನೇ, ತ್ವಂ=ನೀನು, ಅವ್ಯಯಂ=ನಾಶವಿಲ್ಲದೆ ಶಾಶ್ವತವಾಗಿರುವ, ಆತ್ಮಾನಂ=ನಿನ್ನ ವಿಶ್ವರೂಪವನ್ನು, ಮೇ=ನನಗೆ, ದರ್ಶಯ=ತೋರಿಸು (ಎಂದು ಅರ್ಜುನನು ಪ್ರಾರ್ಥಿಸಿದನು ಶ್ರೀಕೃಷ್ಣನು ಅತಿಶಯವಾಗಿ ಸರ್ವಸಮರ್ಥನಾದುದರಿಂದ ಅತನ ಶಕ್ತಿಯಿಂದಲೇ ಅತೀಂದ್ರಿಯವಾದ ವಿಶ್ವರೂಪ ದರ್ಶನವೂ ಅರ್ಜುನನಿಗೆ ಕೂಡಬಹುದೆಂದು ತಿಳಿಸುವುದಕ್ಕಾಗಿ ಪ್ರಭೋ ಎಂದು ಹೇಳಿದ್ದು) ॥ ೪ ॥

ಗೀ ॥ ॥ ಶ್ರೀಭಗವಾನುವಾಚ ॥
ಗೀ ॥ ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ ।
ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ ॥ ೫ ॥

ಅ ॥ ಶ್ರೀಭಗವಾನ್=(ವಿಶ್ವರೂಪವನ್ನು ನೋಡಲಿಕ್ಕೆ ಅತಿ ಲವಲವಿಕೆ ಹೊಂದಿಕೊಂಡಿರುವ ಅರ್ಜುನನಿಂದ ಪ್ರಾರ್ಥಿಸಿಕೊಳ್ಳಲ್ಪಟ್ಟ) ಶ್ರೀಕೃಷ್ಣನು, ಉವಾಚ=(ಅರ್ಜುನನಿಗೆ ವಿಶ್ವರೂಪವನ್ನು ತೋರಿಸಲಿಚ್ಛಿಸುತ್ತಾ ಅರ್ಜುನನೇ ನೀನು ವಿಶ್ವರೂಪವನ್ನು ನೋಡೆಂದು) ಹೇಳಿದನು. ಪಾರ್ಥ=ಎಲೋ ಅರ್ಜುನನೇ, (ನೀನು) ಮೇ=ನನ್ನ, ನಾನಾವಿಧಾನಿ=ಅನೇಕ ಪ್ರಕಾರಗಳಾದ, ಅಂದರೆ ನಾನಾವರ್ಣಾಕೃತೀನಿ=ಶುಕ್ಲನೀಲಾದ್ಯನೇಕ ವರ್ಣಗಳೂ ಅನೇಕ ಆಕಾರವಿಶೇಷಗಳೂ ಇರುವ, ದಿವ್ಯಾನಿ ಚ=ಜಡಪ್ರಕೃತಿ ಸಂಬಂಧವಿಲ್ಲದಿರುವ, (ಅಲೌಕಿಕಗಳಾದ) ಶತಶಃ=ನೂರಾರು ಸಂಖ್ಯಾಕಗಳಾದ, ಅಥ=ಮತ್ತು, ಸಹ

ಸ್ರಶಃ= ಸಾವಿರಾರು ಸಂಖ್ಯಾಕಗಳಾದ, ರೂಪಾಣಿ=ರೂಪಗಳನ್ನು (ಅಂದರೆ ಅಪರಿಮಿತ ರೂಪಗಳನ್ನು) ಪಶ್ಯ= ನೋಡು (ಅಂದರೆ ಶ್ರೀಹರಿಯ ಒಂದೇ ರೂಪವು ಶ್ರೀಹರಿಯ ಅಚಿಂತ್ಯ ಶಕ್ತಿಯಿಂದಲೂ ವಿಶೇಷ ಬಲದಿಂದಲೂ ಅನಂತರೂಪವೂ ಆಗುತ್ತದೆ) ॥ ೫ ॥

ಗೀ॥ ಪಶ್ಯಾದಿತ್ಯಾನ್ವಸೂನ್ರುದ್ರಾನಶ್ವಿನೌ ಮರುತಸ್ತಥಾ ।
ಬಹೂನ್ಯದೃಷ್ಟಪೂರ್ವಾಣಿ ಪಶ್ಯಾssಶ್ಚರ್ಯಾಣಿ ಭಾರತ ॥ ೬ ॥

ಅ ॥ ಭಾರತ=ಭರತಕುಲೋತ್ಪನ್ನನಾದ ಅರ್ಜುನನೇ ಆದಿತ್ಯಾನ್=೧೨ ಸೂರ್ಯರನ್ನು, ವಸೂನ್= ೮ ವಸುಗಳನ್ನು, ರುದ್ರಾನ್=೧೧ ರುದ್ರರನ್ನು, ಅಶ್ವಿನೌ=೨ ಅಶ್ವಿನೀ ದೇವತೆಗಳನ್ನು, ಮರುತಃ=ಮುಖ್ಯ ಪ್ರಾಣನಿಂದ ಕೂಡಿಹಂ ವಾಯುಗಳನ್ನು, ಪಶ್ಯ=ನೋಡು ತಥಾ=ಹಾಗೆಯೇ, ಅದೃಷ್ಟಪೂರ್ವಾಣಿ=ಇಷ್ಟರ ವರೆಗೂ ಸರ್ವಥಾ ಕಾಣಲ್ಪಡದಿರುವ ಬಹೂನಿ=ಅನೇಕ ವಿಧಗಳಿಂದ, ಆಶ್ಚರ್ಯಾಣಿ=ಆಶ್ಚರ್ಯಭರಿತ ಗಳಾದ ವಸ್ತುಗಳನ್ನು, ಪಶ್ಯ=ನೋಡು ॥ ೬ ॥

ಗೀ॥ ಇಹೈಕಸ್ಥಂ ಜಗತ್ಕೃತ್ಸ್ನಂ ಪಶ್ಯಾದ್ಯ ಸಚರಾಚರಂ ।
ಮಮ ದೇಹೇ ಗುಡಾಕೇಶ ಯಚ್ಚಾನ್ಯದ್ದ್ರಷ್ಟುಮಿಚ್ಛಸಿ ॥ ೭ ॥

ಅ ॥ ಗುಡಾಕೇಶ=ನಿದ್ದೆಯನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುವ ಅರ್ಜುನನೇ, ಕೃತ್ಸ್ನಂ= ಸಮಸ್ತವಾದ, ಅಂದರೆ ಸಚರಾಚರಂ=ಚೇತನಾಚೇತನ ನಿಖಿಲ ವಸ್ತುಗಳಿಂದ ಕೂಡಿರುವ ಜಗತ್=ಜಗತ್ತನ್ನು, ಇಹ=ನಿನಗೆ ತೋರಿಸಲಿಕ್ಕೆ ಯೋಗ್ಯವಾದ ಮಮ=ನನ್ನ, ದೇಹೇ=ಶರೀರದಲ್ಲಿ ಏಕಸ್ಥಂ= ನನ್ನ ಏಕದೇಶದಲ್ಲಿರುವುದನ್ನಾಗಿ, ಆದ್ಯ=ಈಗ, ಪಶ್ಯ=ನೋಡು ಯಚ್ಚ=ಯಾವುದು ಅನ್ಯತ್= ಇದಕ್ಕಿಂತ ಬೇರೆಯಾದುದನ್ನು, ದ್ರಷ್ಟುಂ=ನೋಡಲಿಕ್ಕೆ, ಇಚ್ಛಸಿ=ಇಚ್ಛಿಸುತ್ತಿಯೋ, (ಅವೆಲ್ಲವನ್ನು ನನ್ನ ದೇಹದಲ್ಲಿ ನೋಡು) ॥ ೭ ॥

ಗೀ॥ ನ ತು ಮಾಂ ಶಕ್ಯಸೇ ದ್ರಷ್ಟುಮನೇನೈವ ಸ್ವಚಕ್ಷುಷಾ ।
ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಂ ॥ ೮ ॥

ಅ ॥ (ಎಲೋ ಅರ್ಜುನನೇ ನೀನು ನನ್ನ ವಿಶ್ವರೂಪವನ್ನು ನೋಡಲಿಚ್ಛಿಸುತ್ತಿ, ನಾನೂ ನೋಡೆಂದು ಹೇಳುತ್ತೇನೆ) ತು=ಆದರೂ ಅನೇನ ಸ್ವಚಕ್ಷುಷಾ ಏವ=ಈ ನಿನ್ನ ಲೌಕಿಕವಾದ ಕಣ್ಣಿನಿಂದಲೇ, ಮಾಂ=ನನ್ನನ್ನು, ದ್ರಷ್ಟುಂ=ನೋಡಲಿಕ್ಕೆ, ನ ಶಕ್ಯಸೇ= (ನೀನು) ಸಮರ್ಥನಾಗುವುದಿಲ್ಲ (ಆದಕಾರಣ) ತೇ=ನಿನಗಾಗಿ, ದಿವ್ಯಂ=ಲೋಕವಿಲಕ್ಷಣವಾದ, ಚಕ್ಷುಃ=ಕಣ್ಣನ್ನು, ದದಾಮಿ=ಕೊಡುತ್ತೇನೆ (ಅಂದರೆ ನೋಡಲಾವಶ್ಯಕವಾದ ಶಕ್ತಿಯನ್ನು ಕೊಡುತ್ತೇನೆ) ಮೇ=ನನ್ನ, ಐಶ್ವರಂ= ಈಶ್ವರನ ಸಂಬಂಧಿಯಾದ ಅಚಿಂತ್ಯವಾದ, ಯೋಗಂ=ಸಾಮರ್ಥ್ಯವನ್ನು, ಪಶ್ಯ=ನೋಡು ॥ ೮ ॥

ಭಾ॥ ಪ್ರಭುಃ ಸಮರ್ಥಃ । ನಾಸ್ತಿ ತಸ್ಮಾತ್ಪರಂ ಭೂತಂ ಪುರುಷಾದ್ವೈ ಸನಾತನಾದಿತಿ
ವೋಕ್ಷಧರ್ಮೇ । ಪ್ರಭುರೀಶಃ ಸಮರ್ಥಶ್ಚೇತ್ಯಭಿಧಾನಂ ॥ ೪—೮ ॥

ಅ ॥ ಮನ್ಯಸೇ ಯದಿ ಎಂಬುವಲ್ಲಿದ್ದ ಪ್ರಭು ಶಬ್ದಕ್ಕೆ ಸ್ವಾಮಿಯೆಂದು ಮಾತ್ರ ಅರ್ಥವಲ್ಲ. ಮತ್ತೆ ಶ್ರೀಕೃಷ್ಣನೇ ನೀನು ಅತಿ ಸಮರ್ಥನಾದ ಪ್ರಯುಕ್ತ ನಿನ್ನ ಸಾಮರ್ಥ್ಯದಿಂದಲೇ ಅತೀಂದ್ರಿಯವಾದ (ಅಂದರೆ ನಿನ್ನ ಅನುಗ್ರಹವಿಲ್ಲದೆ ಸಾಮಾನ್ಯ ಜನರಿಗೆ ನೋಡಲಶಕ್ಯವಾದ) ನಿನ್ನ ವಿಶ್ವರೂಪ ದರ್ಶನವು ಕೂಡಬಹುದೆಂಬುವ ಅಭಿಪ್ರಾಯದಿಂದಲೇ ಪ್ರಭುಃ ಎಂಬುವ ಶಬ್ದವನ್ನು ಹೇಳಿರುವರು) ಪ್ರಭುಃ= ಸರ್ವಸಮರ್ಥನು, ಶಶ್ವದೇಕ ಪ್ರಕಾರನಾದ ಶ್ರೀಪರಮಾತ್ಮನಿಂದ ಬೇರೆ ಸರ್ವೋತ್ಕೃಷ್ಟನಾದವನು, ಸಮರ್ಥನಾದವನು ಯಾವನೊಬ್ಬನೂ ಇಲ್ಲ, ಎಂದು ಮೋಕ್ಷಧರ್ಮದಲ್ಲಿ ಹೇಳಿದೆ. (ಪ್ರಭುಶಬ್ದಕ್ಕೆ ಸಮರ್ಥವೆಂಬುವ ಅರ್ಥವಿದೆ ಎಂಬುವಲ್ಲಿ ಕೋಶವನ್ನು ಹೇಳುತ್ತಾರೆ—) ಪ್ರಭುಃ ಈಶಃ ಸಮರ್ಥಃ ಈ ಪದಗಳು ಪರ್ಯಾಯ (ಒಂದೇ ಅರ್ಥವನ್ನು ಹೇಳುವ) ಪದಗಳೆಂದು ಕೋಶವಿದೆ ॥ ೪—೯ ॥

ಗೀ ॥ ॥ ಸಂಜಯ ಉವಾಚ ॥

ಏವಮುಕ್ತ್ವಾ ತತೋ ರಾಜನ್ಮಹಾಯೋಗೇಶ್ವರೋ ಹರಿಃ ।
ದರ್ಶಯಾಮಾಸ ಪಾರ್ಥಾಯ ಪರಮಂ ರೂಪಮೈಶ್ವರಂ ॥ ೯ ॥

ಅ ॥ ಸಂಜಯಃ= ಸಂಜಯನು, ಉವಾಚ=(ಧೃತರಾಷ್ಟ್ರನಿಗೆ ಮುಂದೆ ನಡಿಯುತ್ತಿರುವ ವೃತ್ತಾಂತವನ್ನು) ಹೇಳಿದನು. ರಾಜನ್= ಎಲೋ ಧೃತರಾಷ್ಟ್ರರಾಜನೇ, ಮಹಾಯೋಗೇಶ್ವರಃ=ಅತ್ಯಂತ ಶ್ರೇಷ್ಠಗಳಾದ ಉಪಾಯಗಳಿಗೂ ಅನಂತಾನಂತ ಶಕ್ತಿಗಳಿಗೂ ಸ್ವಾಮಿಯಾದ, ಹರಿಃ= ಸಮಸ್ತ ಯಜ್ಞಾದಿಗಳ ಭಾಗವನ್ನು ಸ್ವೀಕರಿಸುವುದರಿಂದ ಹರಿ ಎನಿಸಿಕೊಂಡ ಶ್ರೀಕೃಷ್ಣನು, ಏವಂ= ಪಶ್ಯ ಮೇ ಪಾರ್ಥ ರೂಪಾಣಿ ಇತ್ಯಾದಿ ಪ್ರಕಾರ, ಉಕ್ತ್ವಾ= ಹೇಳಿ. ತತಃ= ಆ ಮೇಲೆ, ಪಾರ್ಥಾಯ=ಅರ್ಜುನನಿಗೋಸ್ಕರ, ಪರಮಂ=ಅನೇಕ ವಿಭವ (ಸಾಮರ್ಥ್ಯಾದಿಗಳು) ಗಳಿಂದ ಯುಕ್ತವಾದ, ಐಶ್ವರಂ= ಸರ್ವರಿಗೂ ಸ್ವಾಮಿಯಾದ ಶ್ರೀಪರಮಾತ್ಮನದ್ದಾದ, ರೂಪಂ= ವಿಶ್ವರೂಪವನ್ನು, ದರ್ಶಯಾಮಾಸ= ತೋರಿಸಿದನು ॥ ೯ ॥

ಪೀ—ಆ ರೂಪವನ್ನು ಹೇಳುತ್ತಾರೆ—

ಗೀ ॥ ಅನೇಕವಕ್ತ್ರನಯನಮನೇಕಾದ್ಭುತದರ್ಶನಂ ।
ಅನೇಕದಿವ್ಯಾಭರಣಂ ದಿವ್ಯಾನೇಕೋದ್ಯತಾಯುಧಂ ॥ ೧೦ ॥

ಅ ॥ ಅನೇಕವಕ್ತ್ರನಯನಂ=ಅನಂತ ಮುಖಗಳೂ, ಕಣ್ಣುಗಳೂ, ಉಳ್ಳದ್ದು, ಅನೇಕಾದ್ಭುತದರ್ಶನಂ=ತನ್ನಲ್ಲಿ ಅತ್ಯಾಶ್ಚರ್ಯಕರಗಳಾದ, ಅನಂತ ಪದಾರ್ಥಗಳನ್ನು ತೋರಿಸುವಂತಾದ್ದು, ಅನೇಕ ದಿವ್ಯಾಭರಣಂ=ಅನಂತಗಳಾದ ಲೋಕವಿಲಕ್ಷಣಗಳಾದ (ಅಪ್ರಾಕೃತಗಳಾದ) ಆಭರಣಗಳುಳ್ಳದ್ದು, ದಿವ್ಯಾನೇಕೋದ್ಯತಾಯುಧಂ= ದಿವ್ಯಗಳಾದ ಅನಂತ ಸನ್ನದ್ಧಗಳಾದ ಆಯುಧಗಳುಳ್ಳದ್ದು (ಇಂತಹ ರೂಪವನ್ನು ತೋರಿಸಿದನು.) ॥ ೧೦ ॥

ಪೀ—ಮಹಾಯೋಗೇಶ್ವರೋ ಹರಿಃ ಎಂಬುವಲ್ಲಿದ್ದ ಹರಿ ಶಬ್ದಕ್ಕೆ ಪ್ರಕೃತೋಪಯುಕ್ತವಾದ ಅರ್ಥವನ್ನು ಹೇಳುತ್ತಾರೆ—

ಭಾ ॥ ಹರಿಃ ಸರ್ವಯಜ್ಞಾದಿಭಾಗಹಾರಿತ್ವಾತ್ । ಇಡೋಪಹೂತಂ ಗೇಹೇಷು ಹರೇ ಭಾಗಂ ಕ್ರತುಷ್ವಹಂ । ವರ್ಣೋ ಮೇ ಹರಿತಃ ಶ್ರೇಷ್ಠಸ್ತಸ್ಮಾದ್ಧರಿರಿತಿ ಸ್ಮೃತ ಇತಿ ಮೋಕ್ಷಧರ್ಮೇ ॥ ೯,೧೦ ॥

ಅ ॥ ಸಮಸ್ತ ಯಜ್ಞಗಳ ಭಾಗಗಳನ್ನು ಸ್ವೀಕರಮಾಡುವವನಾದುದರಿಂದ ಹರಿಃ ಎನಿಸುತ್ತಾನೆ ಇಷ್ಟಿಗೃಹಗಳಲ್ಲಿ ಜ್ಯೋತಿಷ್ಟೋಮಾದಿ ಯಾಗಗಳಲ್ಲಿ ಇಡಾ ಎಂಬುವ ಮಂತ್ರವಿಶೇಷಗಳಲ್ಲಿ ಪ್ರತಿಪಾದ್ಯವಾದ ಸ್ವಭಾಗವನ್ನು, ಅಥವಾ ಯಜ್ಞದಲ್ಲಿ ಕೊಡಲ್ಪಟ್ಟ ತನ್ನ ಭಾಗವನ್ನು, ಸ್ವೀಕರಿಸುತ್ತಾ, ಮತ್ತು ನನಗೆ ಸರ್ವೋತ್ಕೃಷ್ಟವಾದ ಅಪ್ರಾಕೃತವಾದ ಹಸುರು ಬಣ್ಣವು ಇದೆ ಈ ಕಾರಣದಿಂದಲೂ ಹರಿಃ ಎನಿಸಿಕೊಳ್ಳುತ್ತೇನೆ, ಎಂದು ಮೋಕ್ಷಧರ್ಮದಲ್ಲಿದೆ

ವಿ ॥ ಅಪ್ರಾಕೃತವಿಗ್ರಹವುಳ್ಳ ಶ್ರೀಪರಮಾತ್ಮನು ಅನಂತಪೂಜಾಸ್ಥಾನಗಳಲ್ಲಿ ಸ್ವರೂಪದಿಂದಲೇ ಏಕಕಾಲದಲ್ಲಿ ಸನ್ನಿಹಿತನಾಗಿ ಆಯಾಯ ಪೂಜೆಯನ್ನು ಸ್ವೀಕರಿಸುವುದರಿಂದಲೇ ಮಹಾಯೋಗೇಶ್ವರನೆಂದು ಸಿದ್ಧವಾಗುತ್ತದೆ. ॥ ೯, ೧೦ ॥

ಗೀ ॥ ದಿವ್ಯಮಾಲ್ಯಾಂಬರಧರಂ ದಿವ್ಯಗಂಧಾನುಲೇಪನಂ ।
ಸರ್ವಾಶ್ಚರ್ಯಮಯಂ ದೇವಮನಂತಂ ವಿಶ್ವತೋಮುಖಂ ॥ ೧೧ ॥

ಅ ॥ ದಿವ್ಯಮಾಲ್ಯಾಂಬರಧರಂ = ಲೋಕವಿಲಕ್ಷಣ (ಅಪ್ರಾಕೃತ)ಗಳಾದ ಮಾಲಿಕೆಗಳೂ ಪೀತಾಂಬರವೂ ಇವುಗಳನ್ನು ಧರಿಸುತ್ತಿರುವ, ದಿವ್ಯಗಂಧಾನುಲೇಪನಂ=ಲೋಕವಿಲಕ್ಷಣ ಗಂಧವನ್ನು ಚೆನ್ನಾಗಿ ಹಚ್ಚಿಕೊಂಡಿರುವ, ಸರ್ವಾಶ್ಚರ್ಯಮಯಂ = ಸರ್ವರಿಗೂ ಆಶ್ಚರ್ಯಸ್ವರೂಪವಾದುದು, ದೇವಂ = ಕ್ರೀಡಾದಿ ಗುಣಗಳುಳ್ಳ, ಅನಂತಂ = ಸರ್ವದೇಶಗಳಲ್ಲಿ ವ್ಯಾಪಿಸಿಕೊಂಡಿರುವುದು, ಸರ್ವಕಾಲಗಳಲ್ಲಿರುವುದು, ಸರ್ವಗುಣಪರಿಪೂರ್ಣವಾದುದು, ವಿಶ್ವತೋಮುಖಂ = ಸರ್ವದಿಕ್ಕುಗಳಲ್ಲಿಯೂ ಮುಖ ಮೊದಲಾದ ಎಲ್ಲಾ ಅವಯವಗಳುಳ್ಳ, (ಇಂತಹ ರೂಪವನ್ನು ತೋರಿಸಿದನು) ॥ ೧೧ ॥

ಭಾ ॥ ಸರ್ವಾಶ್ಚರ್ಯಮಯಂ ಸರ್ವಾಶ್ಚರ್ಯಾತ್ಮಕಂ ॥ ೧೧ ॥

ಅ ॥ ಸರ್ವಾಶ್ಚರ್ಯಮಯಂ = ಸಮಸ್ತ ಲೋಕಗಳಲ್ಲಿ ಎಲ್ಲಾ ವಸ್ತುಗಳಿಗಿಂತಲೂ ಅತ್ಯಾಶ್ಚರ್ಯಭೂತಗಳಾದ ಯಾವ ಗುಣಗಳು ಇವೆಯೋ, ಆ ಗುಣಸ್ವರೂಪವಾದುದು ॥ ೧೧ ॥

ಗೀ ॥ ದಿವಿ ಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ ।
ಯದಿ ಭಾಃ ಸದೃಶೀ ಸಾ ಸ್ಯಾದ್ಭಾಸಸ್ತಸ್ಯ ಮಹಾತ್ಮನಃ ॥ ೧೨ ॥

ಅ ॥ ದಿವಿ = ಆಕಾಶದಲ್ಲಿ (ಏಕಕಾಲದಲ್ಲಿ ಉದಯಿಸಿದ್ದಾದರೆ ಅಂತಹ), ಸೂರ್ಯಸಹಸ್ರಸ್ಯ = ಅನಂತಾನಂತ ಸೂರ್ಯರ, ಭಾಃ = ಕಾಂತಿಯು, ಯುಗಪತ್ = ಏಕಕಾಲದಲ್ಲಿ, ಉತ್ಥಿತಾ ಭವೇತ್ ಯದಿ=ಉದಯಿಸಿದ ಪಕ್ಷದಲ್ಲಿ, ಸಾ=ಆ ಕಾಂತಿಯು, ತಸ್ಯ ಮಹಾತ್ಮನಃ=ಆ ಮಹಾಮಹಿಮೆಯುಳ್ಳ ವಿಶ್ವರೂಪದ, ಭಾಸಃ = ಕಾಂತಿಗೆ, ಸದೃಶೀ = ಸಮಾನವಾದುದು ಸ್ಯಾತ್ = ಆಗುವುದು, (ಬೇರೆ ಯಾವುದೂ ಇದಕ್ಕೆ ಸದೃಶವಾದುದು ಇಲ್ಲ) ॥ ೧೨ ॥

ಗೀ ॥ ತತ್ರೈಕಸ್ಥಂ ಜಗತ್ಕೃತ್ಸ್ನಂ ಪ್ರವಿಭಕ್ತಮನೇಕಧಾ ।
ಅಪಶ್ಯದ್ದೇವದೇವಸ್ಯ ಶರೀರೇ ಪಾಂಡವಸ್ತದಾ ॥ ೧೩ ॥

ಅ ॥ ಪಾಂಡವಃ=ಅರ್ಜುನನು, (ಶ್ರೀಕೃಷ್ಣನು ವಿಶ್ವರೂಪವನ್ನು ತೋರಿಸುತ್ತಿರಲು) ತದಾ=ಆಗ, ದೇವದೇವಸ್ಯ=ಬ್ರಹ್ಮಾದಿದೇವತೆಗಳಿಗೆ ಸ್ವಾಮಿಯಾದ ಶ್ರೀಕೃಷ್ಣನ, ಶರೀರೇ=ವಿಶ್ವರೂಪದಲ್ಲಿ, ಅನೇಕಧಾ=ದೇವತೆಗಳು ದಾನವರು ಮನುಷ್ಯರು ಮೊದಲಾಗಿ ಅನೇಕ ಪ್ರಕಾರವಾಗಿ, ಪ್ರವಿಭಕ್ತಂ=ವಿಭಾಗವಾಗಿರುವ, ಕೃತ್ಸ್ನಂ=ಸಮಸ್ತವಾದ, ಜಗತ್=ಜಗತ್ತನ್ನು, ಏಕಸ್ಥಂ=ಏಕದೇಶದಲ್ಲಿರುವುದನ್ನಾಗಿ, ಅಪಶ್ಯತ್=ಕಂಡನು. ॥ ೧೩ ॥

ಗೀ ॥ ತತಃ ಸ ವಿಸ್ಮಯಾವಿಷ್ಟೋ ಹೃಷ್ಟರೋಮಾ ಧನಂಜಯಃ ।
ಪ್ರಣಮ್ಯ ಶಿರಸಾ ದೇವಂ ಕೃತಾಂಜಲಿರಭಾಷತ ॥ ೧೪ ॥

ಅ ॥ ತತಃ=ಆ ವಿಶ್ವರೂಪವನ್ನು ನೋಡಿದ ಮೇಲೆ, ವಿಸ್ಮಯಾವಿಷ್ಟಃ=ಅತ್ಯಾಶ್ಚರ್ಯದಿಂದ ಕೂಡಿರುವ, ಹೃಷ್ಟರೋಮಾ=ಸಂತುಷ್ಟವಾದ ರೋಮಗಳುಳ್ಳ, (ಅಂದರೆ ರೋಮಾಂಚಗಳುಳ್ಳ) ಸಃ ಧನಂಜಯಃ= ಆ ಅರ್ಜುನನು, ದೇವಂ=ಕ್ರೀಡಾದಿ ಗುಣವಿಶಿಷ್ಟನಾದ ಶ್ರೀ ಪರಮಾತ್ಮನನ್ನು, ಶಿರಸಾ=ಶಿರಸ್ಸಿನಿಂದ, ಪ್ರಣಮ್ಯ=ಭಕ್ತಿಪೂರ್ವಕವಾಗಿ ನಮಸ್ಕರಿಸಿ, ಕೃತಾಂಜಲಿಃ=ಕೈಜೋಡಿಸಿ ನಮಸ್ಕರಿಸಿದವನಾಗಿ, ಅಭಾಷತ=ಮಾತನಾಡಿದನು. ॥ ೧೪ ॥

ಪೀ—ಕಂಡ ವಿಶ್ವರೂಪವನ್ನು ಅನುವಾದಮಾಡುತ್ತಾ ಸ್ತೋತ್ರಮಾಡಿದನೆನ್ನುತ್ತಾರೆ—

ಗೀ ॥ ॥ ಅರ್ಜುನ ಉವಾಚ ॥
ಪಶ್ಯಾಮಿ ದೇವಾಂಸ್ತವ ದೇವ ದೇಹೇ
ಸರ್ವಾಂಸ್ತಥಾ ಭೂತವಿಶೇಷಸಂಘಾನ್ ।
ಬ್ರಹ್ಮಾಣಮೀಶಂ ಕಮಲಾಸನಸ್ಥ-
ಮೃಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾನ್ ॥ ೧೫ ॥

ಅ ॥ ಅರ್ಜುನಃ=ಅರ್ಜುನನು, ಉವಾಚ=ಹೇಳಿದನು, ದೇವ=ಶ್ರೀಕೃಷ್ಣನೇ, ತವ=ನಿನ್ನ, ದೇಹೇ=ಶರೀರದಲ್ಲಿ, ಸರ್ವಾನ್ ದೇವಾನ್=ಎಲ್ಲಾ ದೇವತೆಗಳನ್ನು, ತಥಾ=ಹಾಗೆಯೇ, ಭೂತವಿಶೇಷ ಸಂಘಾನ್=ಪ್ರಾಣಿವಿಶೇಷಗಳ ಸಮೂಹಗಳನ್ನು, ಬ್ರಹ್ಮಾಣಂ=ಚತುರ್ಮುಖ ಬ್ರಹ್ಮನನ್ನು, ಕಮಲಾಸನಸ್ಥಂ=ಚತುರ್ಮುಖ ಬ್ರಹ್ಮನ ತೊಡೆಯ ಮೇಲೆ ಇರುವ, ಈಶಂ=ರುದ್ರನನ್ನೂ, ಚ=ಮತ್ತು, ಸರ್ವಾನ್ ಋಷೀನ್=ಎಲ್ಲಾ ಋಷಿಗಳನ್ನು, ದಿವ್ಯಾನ್=ಅತ್ಯಾಶ್ಚರ್ಯಕರಗಳಾದ, ಉರಗಾಂಶ್ಚ=ಸರ್ಪಗಳನ್ನು ಕೂಡ, ಪಶ್ಯಾಮಿ=ನೋಡುತ್ತೇನೆ. ॥ ೧೫ ॥

ಪೀ—ದಿವಿ ಸೂರ್ಯಸಹಸ್ರಸ್ಯ ಎಂಬುವಲ್ಲಿ ವಿಶ್ವರೂಪಕ್ಕೆ ಸಹಸ್ರಸೂರ್ಯರಿಗೆ ಸದೃಶವಾದ ಕಾಂತಿಯಿರುತ್ತದೆಂದು ಹೇಳಿಯಾಯಿತು. ಗೀತೆಯಲ್ಲಿರುವ ಸಹಸ್ರ ಶಬ್ದಕ್ಕೆ ಹತ್ತುನೂರು ಎಂಬುವ ಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ಭಾ ॥ (೧) ಸಹಸ್ರಶಬ್ದೋಽನಂತವಾಚೀ । ತದಪಿ ಪಾಕಶಾಸನವಿಕ್ರಮ ಇತ್ಯಾದಿವತ್ಪ್ರತ್ಯಾ-
ಯನಾರ್ಥಮೇವ ॥ (೨) ತಥಾ ಹ್ಯೃಗ್ವೇದಖಿಲೇಷು । ಅನಂತಶಕ್ತಿಃ ಪರಮೋನಂ-

ತವೀರ್ಯಃ ಸೋಽನಂತತೇಜಾಶ್ಚ ತತಸ್ತತೋಽಪೀತಿ ॥ (೩) ಮಹಾತಾತ್ಪರ್ಯಾಚ್ಚ ಪ್ರಾಬಲ್ಯಂ । ನ ಚ ಪರಿಮಾಣೋಕ್ತ್ಯಾ ಕಿಂಚಿತ್ಪ್ರಯೋಜನಂ ॥ ೧೨—೧೫ ॥

ಅ ॥ (೧) ಸಹಸ್ರಶಬ್ದಕ್ಕೆ ಅನಂತವೆಂದರ್ಥವು (ಅನಂತಸೂರ್ಯರಿಗೆ ಸದೃಶವಾದ ಕಾಂತಿಯಿದೆ ಎಂಬುವುದೂ ಕೂಡ ಶ್ರೀಪರಮಾತ್ಮನಿಗೆ ಅಸ್ಪೇ ಕಾಂತಿಯಿರುವುದೆಂದು ತಾತ್ಪರ್ಯವಲ್ಲ ಏಕೆಂದರೆ ಶ್ರೀಪರಮಾತ್ಮನಿಗೆ ಅಸದೃಶವಾದ ಕಾಂತಿಯಿದೆ ಆದಕಾರಣ ಶ್ರೀಪರಮಾತ್ಮನಿಗೆ ಉಪಮಾನವೇ ಇಲ್ಲ ಹಾಗಾದರೆ ಹಾಗೆ ಹೇಳಿದ್ದು ಏತಕ್ಕೆಂದರೆ—) ದಶರಥಪುತ್ರನಾದ ಶ್ರೀರಾಮನಿಗೆ ಇಂದ್ರನ ಪರಾಕ್ರಮಕ್ಕೆ ಸದೃಶವಾದ ಪರಾಕ್ರಮವಿದೆ. ಇತ್ಯಾದಿಗಳಲ್ಲಿ ಹೇಳಿದಂತೆ ಅಲ್ಪಜನರಿಗೆ ತಿಳಿಸುದಕ್ಕಾಗಿ ಮಾತ್ರ ಹೇಳಿದ್ದು (೨) (ಸಹಸ್ರಶಬ್ದಕ್ಕೆ ಪ್ರಸಿದ್ಧವಾದ ಅರ್ಥವನ್ನು ಬಿಡುವದು ಏತಕ್ಕೆಂದರೆ-) ಶ್ರೀಪರಮಾತ್ಮನು ಅನಂತಾನಂತ ಸಾಮರ್ಥ್ಯವುಳ್ಳವನು, ಸರ್ವೋತ್ತಮನು, ಪರಿಮಿತಿಯಿಲ್ಲದ ಪರಾಕ್ರಮವುಳ್ಳವನು. ಅನಂತ ತೇಜಸ್ಸುಳ್ಳವನು, ಆದಕಾರಣ ಸೂರ್ಯಾದಿಗಳಿಂದಲೂ ಅತ್ಯಂತ ವಿಲಕ್ಷಣ ಪ್ರಕಾಶವುಳ್ಳವನು, ಹೀಗೆ ಋಗ್ವೇದಖಿಲಗಳಲ್ಲಿ ಹೇಳಿದೆ (ಏವಂಚ ಶ್ರುತಿಯು ನಿರವಕಾಶವಾದ ಪ್ರಯುಕ್ತ ಪ್ರಬಲವು ಗೀತಾವಾಕ್ಯವು ಸಾವಕಾಶವು ಆದಕಾರಣ ಶ್ರುತ್ಯನುಸಾರವಾಗಿಯೇ ಸಹಸ್ರಶಬ್ದಕ್ಕೆ ಅನಂತ ಎಂದು ಅರ್ಥ ಹೇಳುವುದು ಯುಕ್ತವು) (೩) ಎಲ್ಲಾ ಆಗಮಗಳಿಗೂ ಮೋಕ್ಷರೂಪ ಮಹಾ ಪ್ರಯೋಜನಕ್ಕಾಗಿ ಶ್ರೀಪರಮಾತ್ಮನಲ್ಲಿಯೇ ಮಹಾತಾತ್ಪರ್ಯವು ಪ್ರಮಿತವಾಗಿದೆ ಅದಕ್ಕೆ ಅನುಕೂಲವಾದ ಅನಂತ ಸಾಮರ್ಥ್ಯಾದಿಗಳನ್ನು ಹೇಳುವ ಶ್ರುತಿಯು ಪ್ರಬಲವಾಗಿದೆ ಆ ಶ್ರುತಿಗೆ ಅನುಕೂಲವಾಗಿ ಗೀತೆಯಲ್ಲಿದ್ದ ಸಹಸ್ರಶಬ್ದಕ್ಕೂ ಅನಂತ ಎಂದೇ ಅರ್ಥವನ್ನು ಹೇಳಬೇಕು ಮತ್ತು ಹೀಗೆ ಶ್ರುತಿಪ್ರಮಿತವಾದ ಅಪರಿಮಿತ ಪ್ರಭೆಯುಳ್ಳ ಶ್ರೀಪರಮಾತ್ಮನಿಗೆ ಸಹಸ್ರಸೂರ್ಯರ ಕಾಂತಿಯಿರುವುದೆಂದು ಇಷ್ಟು ಮಾತ್ರ ಹೇಳಿದರೆ ಸಕಲ ಶ್ರುತಿ ಸ್ಮೃತಿ ಇತಿಹಾಸ ಪುರಾಣಾದಿಗಳಿಂದ ವಿರೋಧವೂ ಬರುತ್ತದೆ ಆದಕಾರಣ ಮಹಾಮಹಿಮೆಯುಳ್ಳ ಶ್ರೀಪರಮಾತ್ಮನಿಗೆ ಅಲ್ಪ ಪರಿಮಾಣವನ್ನು ಹೇಳಿದರೆ ಯಾವುದೊಂದು ಪ್ರಯೋಜನವೂ ಸಿದ್ಧವಾಗಲಾರದು ಮಹಾಪ್ರಯೋಜನವೂ ಸುತರಾಂ ಸಿದ್ಧವಾಗಲಾರದು ॥ ೧೨—೧೫ ॥

ಪೀ—ಈ ಅಧ್ಯಾಯದಲ್ಲಿ ಶ್ರೀಪರಮಾತ್ಮನನ್ನು ಧ್ಯಾನಿಸುವುದಕ್ಕಾಗಿ ವಿಶ್ವರೂಪ ಸ್ಥಿತಿಯು ಹೇಳಲ್ಪಡುತ್ತದೆ, ಎಂದು ಅಧ್ಯಾಯದಲ್ಲಿ ಹೇಳಲ್ಪಡಕ್ಕೆ ಅರ್ಥವು ಸ್ಪಷ್ಟವಾಗಿ ತೋರುವುದರಿಂದ ಅದನ್ನು ಇಲ್ಲಿ ಹೇಳಲಿಲ್ಲ ಅದರಲ್ಲಿ ವಿಶ್ವರೂಪವನ್ನು ತೋರಿಸುವುದಕ್ಕಿಂತ ಮೊದಲು ಮೇಲೆಯೂ ಅದು ಕಾಣದಿರುವುದರಿಂದ ಆ ವಿಶ್ವರೂಪವನ್ನು ತೋರಿಸುವ ಕಾಲದಲ್ಲಿಯೇ ಯತ್ಕಿಂಚಿತ್ ಜಡಪ್ರಕೃತ್ಯಾದಿಗಳನ್ನು ಉಪಾದಾನ (ಪರಿಣಾಮ) ಕಾರಣವನ್ನಾಗಿ ಇಟ್ಟುಕೊಂಡು ಶ್ರೀಕೃಷ್ಣನು ನಿರ್ಮಾಣಮಾಡಿ ಅರ್ಜುನನಿಗೆ ವಿಶ್ವರೂಪವನ್ನು ತೋರಿಸಿ ನಾಶಪಡಿಸಿದ್ದಾನೆ, ಎಂಬುವ ಶಂಕೆಯನ್ನು ನಿವಾರಣೆಮಾಡುತ್ತಾರೆ--

ತಾ ॥ ಓಂ ॥ (೧) ಆತ್ಮಾನಮವ್ಯಯಂ । ಪರಮಂ ರೂಪಮೈಶ್ವರಂ ॥ (೨) ಸರ್ವಾಶ್ಚರ್ಯಮಯಂ ದೇವಮನಂತಂ ವಿಶ್ವತೋಮುಖಮಿತ್ಯಾದಿರೂಪವಿಶೇಷಣಾಚ್ಚ ರೂಪಸ್ಯೇಶ್ವರಸಾಕ್ಷಾತ್ಸ್ವರೂಪತ್ವಂ ನಿತ್ಯತ್ವಂ ತತ ಏವ ಚಿದಾನಂದಾದ್ಯಾತ್ಮಕತ್ವಂ ಚ ಸಿದ್ಧಂ ॥ (೩) ಮನು ದೇಹ ಇತ್ಯುಕ್ತತ್ವಾಚ್ಚಾದಿತ್ಯಾದೀನಾಂ ಭೇದಃ ಸಿದ್ಧಃ ॥ (೪) ಮೇ ರೂಪಾಣಿ ಸರ್ವತೋಽನಂತರೂಪಮಿತ್ಯಾದೇಃ ದ್ರಷ್ಟುಮಿಚ್ಛಾಮಿ ತೇ ರೂಪಮಿತ್ಯಾದೇಶ್ಚೈಕಸ್ಯೈವಾಭಿನ್ನಾನಂತರೂಪತ್ವಂ ಚ ॥ ೧ ॥

ಅ ॥ **ದರ್ಶಯಾತ್ಮಾನಮವ್ಯಯಂ** (ಶ್ಲೋ. ೪.) ಇತ್ಯಾದಿಗಳಿಂದ ನಿನ್ನ ರೂಪವನ್ನು ತೋರಿಸು ಎಂದು ಪ್ರಾರ್ಥಿಸಿದ ಮೇಲೆ **ದರ್ಶಯಾಮಾಸ ಪಾರ್ಥಾಯ ಪರಮಂ ರೂಪಮೈಶ್ವರಂ** (ಶ್ಲೋ. ೯.) ಎಂದು ವಿಶ್ವರೂಪವನ್ನು ತೋರಿಸಿದನೆಂದು ಹೇಳಿದ ಸ್ರಯುಕ್ತ ವಿಶ್ವರೂಪವು ಸಾಕ್ಷಾತ್ ಈಶ್ವರ ಸ್ವರೂಪವೆಂದು ಸಿದ್ಧವಾಯ್ತು. (ವಿಶ್ವರೂಪವು ಸಾಕ್ಷಾತ್ ಈಶ್ವರಸ್ವರೂಪವಲ್ಲ, ಉತ್ಪತ್ತಿಯುಳ್ಳದ್ದು. ನಾಶವುಳ್ಳದ್ದೆಂದಾದರೆ ಅವ್ಯಯಂ=ನಾಶವಿಲ್ಲದಿರುವ ರೂಪವನ್ನು ತೋರಿಸು, ಎಂದು ಹೇಳಿದ ಪ್ರಾರ್ಥನೆಗೆ ಅನುಗುಣವಾಗದೆ ಹೋಗುವುದು,) (೨) **ಸರ್ವಾಶ್ಚರ್ಯಮಯಂ ದೇವಮನಂತಂ ವಿಶ್ವತೋಮುಖಂ** (ಶ್ಲೋ. ೧೧.) ಎಂಬುವಲ್ಲಿ **ದೇವಂ** ಎಂದು ಹೇಳಿದ್ರಿಂದ ಸಾಕ್ಷಾತ್ ಈಶ್ವರನ ಸ್ವರೂಪವೆಂದು ಸಿದ್ಧವಾಯ್ತು. ಮತ್ತು **ಅವ್ಯಯಂ ಪರಮಂ, ಸರ್ವಾಶ್ಚರ್ಯಮಯಂ, ಅನಂತಂ ವಿಶ್ವತೋಮುಖಂ** ಇತ್ಯಾದಿಗಳು ಶ್ರೀಹರಿಯ ಅಸಾಧಾರಣಗಳಾದ ಧರ್ಮಗಳನ್ನು ವಿಶ್ವರೂಪಕ್ಕೆ ಹೇಳಿದ್ರಿಂದಲೂ ಆ ವಿಶ್ವರೂಪವು ಸಾಕ್ಷಾತ್ ಶ್ರೀಹರಿಯ ಸ್ವರೂಪವೆಂದು ಸಿದ್ಧವಾಯಿತು ಸಾಕ್ಷಾತ್ ಈಶ್ವರಸ್ವರೂಪತ್ವ ಸಿದ್ಧವಾದ ಮೇಲೆ (ಶ್ರೀಪರಮಾತ್ಮನು ನಿತ್ಯನೂ ಚಿದಾನಂದಾದ್ಯಾತ್ಮಕನೂ ಆದುದರಿಂದವಿಶ್ವರೂಪಕ್ಕೂ) ನಿತ್ಯತ್ವವೂ, ಚಿದಾನಂದಾದ್ಯಾತ್ಮಕತ್ವವೂ ಸಿದ್ಧವಾಯಿತು. (ಆದಕಾರಣ ವಿಶ್ವರೂಪವನ್ನು ಅಚೇತನ ಪ್ರಕೃತಿಯನ್ನು ಪಾದಾನಕಾರಣವನ್ನಾಗಿ ಇಟ್ಟುಕೊಂಡು ತತ್ಕಾಲದಲ್ಲಿ ನಿರ್ಮಾಣಮಾಡಿದ್ದೆಂದು ಹೇಳಿದ್ದು ಅಯುಕ್ತವು.) (೩) **ಶಶಿಸೂರ್ಯನೇತ್ರಂ** ಇತ್ಯಾದಿ ಗೀತಾವಾಕ್ಯಗಳಿಂದ **ವಿಶ್ವಮೇವ ರೂಪಂ** ವಿಶ್ವರೂಪಂ ಜಗತ್ತೇ ರೂಪವೆಂದೂ ತೋರುತ್ತದೆ. ಆದಕಾರಣ ವಿಶ್ವರೂಪವು ಸಾಕ್ಷಾತ್ ಭಗವತ್ಸ್ವರೂಪವೇ ಎಂದದ್ದು ಹೇಗೆ ಎಂದರೆ-) **ಪಶ್ಯಾದಿತ್ಯಾನ್ ವಸೂನ್ ರುದ್ರಾನ್** (ಶ್ಲೋ ೬) ಆದಿತ್ಯಾದಿ ನಿಖಿಲ ಜಗತ್ತನ್ನು, **ಮಮ ದೇಹೇ ಗುಡಾಕೇಶ** (ಶ್ಲೋ ೭) ನನ್ನ ದೇಹದಲ್ಲಿ ನೋಡು, ಎಂದು ಸಂಪೂರ್ಣ ಜಗತ್ತು ವಿಶ್ವರೂಪವನ್ನಾಶ್ರಯಿಸಿಕೊಂಡಿದೆ ಎಂದು ಹೇಳಿದ್ರಿಂದ ಸೂರ್ಯಾದಿ ಜಗತ್ತಿನಿಂದ ವಿಶ್ವರೂಪನು ಭಿನ್ನನೆಂದು ಸಿದ್ಧವಾಗುವುದರಿಂದ ಸೂರ್ಯಾದಿ ಜಗತ್ತಿನ ಭೇದವು ಕೂಡುವುದಿಲ್ಲ ಆದ ಕಾರಣ ವಿಶ್ವರೂಪವು ಸಾಕ್ಷಾದ್ಭಗವತ್ಸ್ವರೂಪವೆಂದು ಹೇಳುವುದು ಯುಕ್ತವು (ಶಶಿಸೂರ್ಯನೇತ್ರಂ= ಎಂಬುವುದಕ್ಕೆ ಚಂದ್ರಸೂರ್ಯರಿಗೆ ಆಶ್ರಯವಾದ ಕಣ್ಣು ಉಳ್ಳವನೆಂದರ್ಥವು) (೪) (ಹಾಗಾದರೆ ವಿಶ್ವರೂಪವು ಅನಂತರೂಪಗಳ ಸಮುದಾಯವಾದುದರಿಂದ ಭಗವತ್ಸ್ವರೂಪವೆಂಬುವುದು ಯುಕ್ತವಲ್ಲ ಏಕೆಂದರೆ ಒಂದು ರೂಪಕ್ಕೆ ಅನೇಕ ರೂಪಗಳಿಂದ ಅಭೇದವು ವಿರುದ್ಧವಷ್ಟೆ, ಎಂದರೆ—) (ವಿಶ್ವರೂಪವು ಅನಂತರೂಪಗಳ ಸಮುದಾಯವಾಗಿರುವುದರಿಂದ ಪರಮಾತ್ಮನ ರೂಪವಲ್ಲವೆಂದು ಹೇಳಕೂಡದು) (1) **ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ,** (ಶ್ಲೋ ೫) (2) **ಪಶ್ಯಾಮಿ ತ್ವಾಂ ಸರ್ವತೋಽನಂತರೂಪಂ** (ಶ್ಲೋ ೧೬.) ಇತ್ಯಾದಿ ಗೀತಾವಾಕ್ಯಗಳಿಂದ ಶ್ರೀಪರಮಾತ್ಮನು ಅನಂತ ರೂಪಗಳನ್ನು ತೋರಿಸಿದ್ದಾನೆಂದು ತಿಳಿದು ಬರುವುದರಿಂದಲೂ, (೩) **ದ್ರಷ್ಟುಮಿಚ್ಛಾಮಿ ತೇ ರೂಪಂ** (ಶ್ಲೋ ೩) ಇತ್ಯಾದಿಗಳಿಂದ ಒಂದು ರೂಪವನ್ನು ತೋರಿಸು ಎಂದೇ ಪ್ರಾರ್ಥಿಸಿದ್ದಾನೆಂದು ತಿಳಿದು ಬರುವುದರಿಂದಲೂ ತನ್ನ ಅಚಿಂತ್ಯಾದ್ಭುತ ಶಕ್ತಿಯಿಂದ ಒಬ್ಬನೇ ಅನಂತರೂಪಗಳನ್ನು ಹೊಂದಿದ್ದಾನೆಂದೂ ಆ ಅನಂತರೂಪಗಳು ಪರಸ್ಪರ ಅಭಿನ್ನಗಳೆಂದೂ ಸಿದ್ಧಗಳಾಗುತ್ತವೆ ॥ ೧ ॥

ಪೀ—ಅನಂತರೂಪಗಳು ಅಭಿನ್ನಗಳೆಂದು ಹೇಳಿದ್ದು ಯುಕ್ತವಲ್ಲ ರೂಪಗಳಿಗೆ ಐಕ್ಯವಿದ್ದರೆ ಅನಂತತ್ವವು ಕೂಡಲಾರದು, ಎಂಬುವ ಆಶಂಕೆಯನ್ನು ಬ್ರಹ್ಮತರ್ಕವಾಕ್ಯದಿಂದ ಪರಿಹರಿಸುತ್ತಾರೆ—

ತಾ ॥ (೧) ಏಕಂ ರೂಪಂ ಹರೇರ್ನಿತ್ಯಮಚಿಂತ್ಯೈಶ್ವರ್ಯಯೋಗತಃ। ಬಹುಸಂಖ್ಯಾಗೋಚರಂ ಚ ವಿಶೇಷಾದೇವ ಕೇವಲಂ ॥ (೨) ಅಭಾವೋ ಯತ್ರ ಭೇದಸ್ಯ ಪ್ರಮಾಣಾ-

ವಸಿತೋ ಭವೇತ್ । ವಿಶೇಷೋ ನಾಮ ತತ್ರೈವ ವಿಶೇಷವ್ಯವಹಾರನಾನ್ ॥ (೩)
ವಿಶೇಷೋಽಪಿ ಸ್ವರೂಪಂ ಸ ಸ್ವನಿರ್ವಾಹಕ ಏವ ಚ ॥ ೨ ॥

ಅ ॥ (೧) ಅಘಟ್ಯಘಟಕವಾದ ಅಚಿಂತ್ಯ ಐಶ್ವರ್ಯಯೋಗದಿಂದ ಶ್ರೀಹರಿಯ ಒಂದು ರೂಪವು ಅನಂತವೆಂಬುವ ವ್ಯವಹಾರಕ್ಕೆ ವಿಷಯವಾಗುತ್ತದೆ ಮತ್ತು ಭೇದವಿಲ್ಲದಿದ್ದರೂ ಭೇದಪ್ರತಿನಿಧಿಯಾದ ವಿಶೇಷದಿಂದಲೇ ಭೇದವ್ಯವಹಾರಕ್ಕೂ ವಿಷಯವಾಗುತ್ತದೆ (೨) (ಭೇದವು ಇಲ್ಲವಾದರೆ-ವಿಶೇಷಮಾತ್ರದಿಂದ ವ್ಯವಹಾರವಿಶೇಷವು ಹೇಗೆ ಕೂಡುತ್ತದೆ ಎಂದರೆ—) ಯಾವ ವಸ್ತುವಿನಲ್ಲಿ ಭೇದವಿಲ್ಲವೆಂಬುವುದು ಪ್ರಮಾಣಗಳಿಂದ ನಿಶ್ಚಿತವಾಗುತ್ತದೋ, ಅಲ್ಲಿ ಭೇದವು ಇಲ್ಲದಿದ್ದರೂ ಭೇದಪ್ರತಿನಿಧಿಯಾದ ಭೇದ ವ್ಯವಹಾರ ನಿರ್ವಾಹಕವಾಗಿಯೇ ಇರುವ ವಿಶೇಷವು ಸಿದ್ಧವಾಗುತ್ತದೆ (ಆದಕಾರಣ ಭಗವದ್ರೂಪಗಳಲ್ಲಿ ಭೇದವಿಲ್ಲವೆಂದು ಪ್ರಮಾಣದಿಂದ ನಿಶ್ಚಿತವಾದ ಪ್ರಯುಕ್ತ ವಿಶೇಷದಿಂದಲೇ ಅಂತಹ ಭಗವದ್ರೂಪಗಳಲ್ಲಿ ವ್ಯವಹಾರವಿಶೇಷವು ಕೂಡುತ್ತದೆ) (ಭಗವದ್ರೂಪಗಳಿಗೆ ಭೇದವಿಲ್ಲದಿದ್ದರೂ ವಿಶೇಷದಿಂದಲೇ ಭಗವದ್ರೂಪಗಳಲ್ಲಿ ವ್ಯವಹಾರವಿಶೇಷವು ಆಗುತ್ತದೆ, ಎಂದಾದರೆ ಗೋವು, ಕುದುರೆ ಮೊದಲಾದುವುಗಳಲ್ಲಿಯೂ ವಿಶೇಷದಿಂದಲೇ ಭೇದವ್ಯವಹಾರ ವಿಶೇಷವು ಆಗುವುದೆಂದಾದರೆ—) ಎಲ್ಲಿ ಭೇದವಿಲ್ಲವೆಂದು ಪ್ರಮಾಣದಿಂದ ನಿಶ್ಚಿತವಾಗುತ್ತದೋ, ಅಲ್ಲಿಯೇ ವಿಶೇಷವು ಭೇದವ್ಯವಹಾರವಿಶೇಷವನ್ನು ಮಾಡುತ್ತದೆ ಎಂದು ಅಂಗೀಕರಿಸುತ್ತೇವೆ (ಗೋವು ಕುದುರೆ ಮೊದಲಾದುವುಗಳಲ್ಲಿ ಆದರೂ ಭೇದವೇ ಪ್ರಮಾಣದಿಂದ ನಿಶ್ಚಿತವಾದ ಪ್ರಯುಕ್ತ. ಗವಾಶ್ವಾದಿಗಳಲ್ಲಿದ್ದ ಭೇದವ್ಯವಹಾರವು ಭೇದಪ್ರಯುಕ್ತವೇ ಹೊರತು ವಿಶೇಷ (ಭೇದವಿಲ್ಲದಿದ್ದರೂ ಭೇದಕಾರ್ಯನಿರ್ವಾಹಕವಾದುದು) ಪ್ರಯುಕ್ತವಲ್ಲ (೩) (ಈ ವಿಶೇಷವೂ ವಿಶೇಷಿಯಿಂದ (1) ಭಿನ್ನವೋ (2) ಅಭಿನ್ನವೋ. (1) ಭಿನ್ನವೆಂದಾದರೆ ಭೇದವು ಭೇದಿಗಳಿಂದ ಭಿನ್ನವೋ ಅಭಿನ್ನವೋ, ಇತ್ಯಾದಿ ಪ್ರಕಾರ ಭೇದಪರಂಪರೆಯಿಂದ ಹೇಗೆ ಅನವಸ್ಥಾದೋಷವು ಬರುತ್ತದೋ, ಹಾಗೆಯೇ ವಿಶೇಷಪರಂಪರೆಯಿಂದಲೂ ಅನವಸ್ಥಾದೋಷವು (2) ಅಭಿನ್ನವೆಂದಾದರೆ ವಿಶೇಷ ವಿಶೇಷಿ ಎಂಬುವ ವ್ಯವಹಾರವೇ ಕೂಡಲಾರದು, ಎಂದರೆ—) ವಿಶೇಷವೂ ವಿಶೇಷಿಯ ಸ್ವರೂಪವೇ. (ಆದಕಾರಣ ವಿಶೇಷಪರಂಪರೆಯಿಂದ ಅನವಸ್ಥಾದೋಷವಿಲ್ಲ ಭೇದವಿಲ್ಲದಿದ್ದರೂ ವಿಶೇಷದಿಂದಲೇ ವಿಶೇಷ ವಿಶೇಷಿ ವ್ಯವಹಾರವು ಸಿದ್ಧವಾಗುತ್ತದೆ) ವಿಶೇಷವೂ ತಾನೇ ತನ್ನಲ್ಲಿ ಸ್ವನಿರ್ವಾಹಕವಾಗಿರುವುದರಿಂದ ತನ್ನಲ್ಲಿ ಬೇರೆ ವಿಶೇಷವಿಲ್ಲದಿದ್ದರೂ ವ್ಯವಹಾರ ವಿಶೇಷವನ್ನು ಮಾಡುತ್ತದೆ ಆದುದರಿಂದ (ಮತ್ತೊಂದು ವಿಶೇಷವನ್ನು ಅಂಗೀಕರಿಸದಿರುವುದರಿಂದ ವಿಶೇಷಪರಂಪರೆಯಿಂದ ಅನವಸ್ಥಾದೋಷವೂ ಇಲ್ಲ) ॥ ೨ ॥

ಹೀ—ಆ ವಿಶೇಷವನ್ನೇ ವಿಭಾಗಮಾಡಿ ತೋರಿಸುತ್ತಾರೆ--

ತಾ ॥ (೧) ದ್ರವ್ಯಾತ್ಮನಾ ಸ ನಿತ್ಯೋಽಪಿ ವಿಶೇಷಾತ್ಕೈರ್ಯವ ಜಾಯತೇ । ನಿತ್ಯಾ ಏವ
ವಿಶೇಷಾಶ್ಚ ಕೇಚಿದೇವಂ ದ್ವಿಧೈವ ಸಃ ॥ (೨) ವಸ್ತುಸ್ವರೂಪಮಸ್ಯೇವೇತ್ಯೇವ-
ಮಾದಿಷ್ವಭೇದಿನಃ ॥ ೩ ॥

ಅ ॥ (೧) (ಚೇತನಾಚೇತನ ಸಮಸ್ತವಸ್ತುಗಳಲ್ಲಿಯೂ ಈ ವಿಶೇಷವದೆ ಈ ವಿಶೇಷವು ಹುಟ್ಟತಕ್ಕದ್ದು ನಿತ್ಯವಾದುದು, ಎಂದು ಎರಡು ವಿಧವು ಹೇಗೆಂದರೆ—) ಚೇತನದಲ್ಲಿ ಕೆಲವು ವಿಶೇಷವು ಹುಟ್ಟುತ್ತದೆ ಕೆಲವು ನಿತ್ಯವು, ಎಂದು ವಿಶೇಷವು ಎರಡು ವಿಧವು ಆ ವಿಶೇಷಕ್ಕೆ ಚೇತನ ದ್ರವ್ಯರೂಪದಿಂದ ಉತ್ಪತ್ತಿಯಿಲ್ಲದಿದ್ದರೂ ಅಭವ್ಯಕ್ತಿವಿಶೇಷವನ್ನು ಇಟ್ಟುಕೊಂಡು ಹುಟ್ಟುತ್ತದೆಂಬುವುದು ವ್ಯವಹಾರವು

ಕೂಡುತ್ತದೆ.) (ಅಜೇತನದಲ್ಲಿಯೂ ಯಾವ ದ್ದ್ರವ್ಯಭಾವಿ, ಅಯಾವದ್ದ್ರವ್ಯಭಾವಿ, ಎಂದು ವಿಶೇಷವು ಎರಡು ವಿಧವು ಅಂದರೆ ಅಜೇತನದಲ್ಲಿ ಧರ್ಮಿಭೂತ ಚೂತಫಲಾದಿಗಳು ಆಗಂತುಕವಾದ ಪೀತ ರೂಪಕ್ಕೆ ಉಪಾದಾನ ಕಾರಣವಾಗಿರುವುದರಿಂದ) ಪೀತಾದಿರೂಪವಾದ ವಿಶೇಷವು ಉಪಾದಾನವಿಶೇಷಿ ದ್ರವ್ಯರೂಪದಿಂದ ದ್ರವ್ಯವಿರುವ ಪರ್ಯಂತ ಇರುತಕ್ಕುದಾಗ್ಯೂ ಕಾರ್ಯರೂಪದಿಂದ ಕೆಲವು ವಿಶೇಷವು ಹುಟ್ಟುತ್ತದೆ (ಅಂದರೆ ಯಾವದ್ದ್ರವ್ಯಭಾವಿಯಲ್ಲ) ಚೂತಫಲತ್ವಾದಿರೂಪ ವಿಶೇಷವು ನಿತ್ಯವು (ಅಂದರೆ ಯಾವ ದ್ದ್ರವ್ಯಭಾವಿಯು) ಹೀಗೆ ವಿಶೇಷವು ಎರಡು ವಿಧವು (೨) (ಚೇತನಾಚೇತನಗಳಲ್ಲಿ ಪ್ರತ್ಯೇಕವಾಗಿ ಎರಡುವಿಧ ವಿಶೇಷಗಳನ್ನು ಆವಾವ ಸ್ಥಳಗಳಲ್ಲಿ ಉದಾಹರಿಸುತ್ತಾರೆ-) ವಸ್ತುಸ್ವರೂಪವು ಇದ್ದೇ ಇದೆ, ಇತ್ಯಾದಿಗಳಲ್ಲಿ ಅಭಿನ್ನಗಳು. ಅಂದರೆ ಚೇತನವಾದ ವಸ್ತುವಿನ ಸ್ವರೂಪವು ಇದೆ, ಎಂಬುವಲ್ಲಿ ಚೇತನತ್ವ, ವಸ್ತುತ್ವ, ಸ್ವರೂಪತ್ವ ಅಸ್ತಿತ್ವ ವಿಶೇಷಗಳು ನಿತ್ಯದಲ್ಲಿಯೂ ಅಭಿವ್ಯಕ್ತಗಳಾಗಿವೆ. ಚೇತನಃ ಕರೋತಿ ಭುಂಕ್ತೇ ಗಚ್ಛತಿ, ಎಂಬುವಲ್ಲಿ ಕರಣ ಗಮನ ಭೋಜನವಿಶೇಷಗಳು ಶಕ್ತಿ ರೂಪದಿಂದ ನಿತ್ಯಗಳು, ವ್ಯಕ್ತಿರೂಪದಿಂದ ಹುಟ್ಟುತ್ತವೆ ಆದಕಾರಣ ವ್ಯಕ್ತ್ಯವ್ಯಕ್ತಿವುಳ್ಳವುಗಳು ಹೀಗೆ ಎರಡು ವಿಧವಾಗಿ ಇರುವ ವಿಶೇಷಗಳು ದ್ರವ್ಯರೂಪವಾದ ವಿಶೇಷಿಯಿಂದ ಅತ್ಯಂತಾಭಿನ್ನ ಗಳು ಹಾಗೆಯೇ ಚೂತಫಲಸ್ವರೂಪವಿದೆ, ಎಂಬುವಲ್ಲಿ ಚೂತತ್ವ ಫಲತ್ವ ಮೊದಲಾದ ವಿಶೇಷಗಳು ದ್ರವ್ಯವಿರುವ ಪರ್ಯಂತ ಇರುವವುಗಳಾಗಿ ದ್ರವ್ಯರೂಪವಿಶೇಷಿಯಿಂದ ಅತ್ಯಂತಾಭಿನ್ನಗಳು **ಪೀತಂ ಚೂತಫಲಂ** ಎಂಬುವಲ್ಲಿ ಹೆಸರುಬಣ್ಣ ಹೋಗಿ ಬೇರೆ ಬಣ್ಣವು ಬರುವುದರಿಂದ ಫಲದಲ್ಲಿರತಕ್ಕ ಪೀತತ್ವಾದಿ ವಿಶೇಷಗಳು ಕದಾಚಿತ್ ಇರತಕ್ಕವುಗಳಾದುದರಿಂದ ದ್ರವ್ಯದಿಂದ (ಚೂತಫಲದಿಂದ) ಭಿನ್ನಾಭಿನ್ನಗಳು ॥ ೩ ॥

ಪೀ—ಇಂತಹ ವಿಶೇಷವಿದೆ, ಎಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ—

ತಾ ॥ (೧) ವಿಶೇಷೋಽನುಭವಾದೇವ ಜ್ಞಾಯತೇ ಸರ್ವವಸ್ತುಷು ॥ (೨) ನ ಚಾವಿಶೇಷಿತಂ ಕಿಂಚಿದ್ವಾಚ್ಯಂ ಲಕ್ಷ್ಯಂ ತಥಾಽಮಿತಂ ॥ (೩) ವಿಶಿಷ್ಟಸ್ಯ ಸ್ವತೋಽನ್ಯತ್ವೇ ಸ್ವಸ್ಯಾಮೇಯತ್ವಹೇತುತಃ । ನೈವ ಜ್ಞೇಯಂ ವಿಶಿಷ್ಟಂ ಚ ॥ (೪) ಮಾನಾಭಾವಾಚ್ಚ ನೋ ಭವೇತ್ ॥ (೫) ಸ್ವಯಮಿತ್ಯಪಿ ಹಿ ಸ್ವತ್ವವಿಶೇಷೇಣ ವಿವರ್ಜಿತಂ । ನ ಜ್ಞೇಯಂ ತದ್ವಿಶೇಷ್ಯಂ ಚ ತಥೈವೇತ್ಯನವಸ್ಥಿತಿಃ ॥ ೪ ॥

ಆ ॥ (೧) ಸಮಸ್ತವಸ್ತುಗಳಲ್ಲಿಯೂ ವಿಶೇಷವಿದೆ, ಎಂಬುವುದು ಸಾಕ್ಷ್ಯನುಭವದಿಂದಲೇ ತಿಳಿಯುತ್ತದೆ. (ಬೇರೆ ಪ್ರಮಾಣವನ್ನು ಹುಡುಕಬೇಕಾಗಿಲ್ಲ.) (೨) (ಸರ್ವ ವಸ್ತುಗಳಲ್ಲಿಯೂ ವಿಶೇಷವೆಂಬುವ ಪದಾರ್ಥವು ಅನುಭವಸಿದ್ಧವಾಗಿದೆ, ಎಂಬುವುದನ್ನೇ ಸೃಷ್ಟೀಕರಿಸುತ್ತಾರೆ-) ವಾಚ್ಯಂ=ಶಕ್ತಿವೃತ್ತಿಯಿಂದ ತಿಳಿಯಲ್ಪಡತಕ್ಕುದು, ಲಕ್ಷ್ಯಂ=ಲಕ್ಷಣಾವೃತ್ತಿಯಿಂದ ತಿಳಿಯಲ್ಪಡತಕ್ಕುದು, ಹೀಗೆ ಶಾಬ್ದಜ್ಞಾನಕ್ಕೆ ವಿಷಯವಾದುದು, ಹಾಗೆಯೇ ಮಿತಂ=ಸಾಕ್ಷಾತ್ಕಾರ ಮತ್ತು ಅನುಮಿತಿಗೆ ವಿಷಯವಾದುದು ಯಾವುದೊಂದು ವಸ್ತುವೂ ಕೂಡ ವಿಶೇಷರಹಿತವಾಗಿ ಅನುಭವಕ್ಕೆ ವಿಷಯವು ಸರ್ವಥಾ ಆಗುವುದೇ ಇಲ್ಲ (ಮತ್ತೆ ವಿಶೇಷಸಹಿತವಾಗಿಯೇ (ಅಂದರೆ ಧರ್ಮವಿಶಿಷ್ಟವಾಗಿಯೇ) ಶಾಬ್ದಬೋಧಗ್ರಾಹಕವಾದ ಸಾಕ್ಷಿಗೆ ಅನುಭವವು ಬರುವುದು. ನಿರ್ವಿಶೇಷವಾದ ವಸ್ತುವಿನ ಜ್ಞಾನವು ಸಾಕ್ಷಿಗೆ ಬರುವುದಿಲ್ಲ (೩) (ವಸ್ತುವಿನಲ್ಲಿದ್ದ ಅಸ್ತಿತ್ವ ಚೂತತ್ವ ಮೊದಲಾದ ವಿಶೇಷಗಳಿಂದ ಕೂಡಿದ ವಿಶಿಷ್ಟಾಕಾರವೆಲ್ಲವೂ ವಿಶೇಷ್ಯಸ್ವರೂಪದಿಂದ ಬೇರೆಯಾದ ಪ್ರಯುಕ್ತ ಆ ವಿಶೇಷ್ಯಸ್ವರೂಪದಲ್ಲಿ ವಿಶೇಷವಿಲ್ಲದಿರುವುದರಿಂದ ಸಮಸ್ತವಸ್ತುಗಳಲ್ಲಿಯೂ ವಿಶೇಷವುಂಟೆಂದು ಹೇಳುವುದು ಹೇಗೆ ಕೂಡುತ್ತದೆ? ಎಂದರೆ—) (ವಿಶಿಷ್ಟವು ವಿಶೇಷ್ಯಸ್ವರೂಪ

ಕ್ಕಿಂತ ಬೇರೆ ಎಂದಾದರೆ – ಇದು ಕೂಡಬಹುದು ವಿಶಿಷ್ಟವು ವಿಶೇಷ್ಯಸ್ವರೂಪದಿಂದ ಬೇರೆಯಲ್ಲ) ವಿಶಿಷ್ಟವು ವಿಶೇಷ್ಯಸ್ವರೂಪದಿಂದ ಬೇರೆಯೆಂದಾದರೆ ವಿಶಿಷ್ಯಸ್ವರೂಪವು ತಿಳಿಯಲ್ಪಡದೆ ಹೋಗುವುದು (ವಿಶೇಷವಿದ್ದುದರಲ್ಲಿಯೇ ಪ್ರಮಾಣವು ಪ್ರವೃತ್ತವಾಗುವುದು) ವಿಶೇಷ್ಯಜ್ಞಾನವಿಲ್ಲವಾದರೆ ವಿಶಿಷ್ಟವೂ ತಿಳಿಯಲ್ಪಡದೆ ಹೋಗುವುದು (೪) (ವಿಶೇಷ್ಯಸ್ವರೂಪವು ಪ್ರಮಾಣಕ್ಕೆ ವಿಷಯವಲ್ಲವೆಂದಾದರೆ ಇನ್ನೊಂದು ಬಾಧಕವನ್ನು ಹೇಳುತ್ತಾರೆ–) ಪ್ರಮಾಣಗಳಿಂದಲೇ ವಸ್ತುವು ಸಿದ್ಧಿಸಬೇಕಾದುದರಿಂದ ವಿಶೇಷ್ಯಸ್ವರೂಪವು ಪ್ರಮಾಣದಿಂದ ತಿಳಿಯಲ್ಪಡದೆ ಹೋದರೆ ಅಪ್ರಾಮಾಣಿಕವಾದ ಶಶವಿಷಾಣಾದಿಗಳಂತೆ ಆ ವಸ್ತುವೇ ಇಲ್ಲವೆಂದೇ ಆಗಬೇಕಾಗುವುದು (೫) (ಹೇತ್ವಂತರದಿಂದಲೂ ವಿಶೇಷ್ಯಸ್ವರೂಪವು ನಿರ್ವಿಶೇಷವಲ್ಲವೆನ್ನುತ್ತಾರೆ-) ವಿಶೇಷ್ಯಸ್ವರೂಪದಲ್ಲಿ ವಿಶೇಷ್ಯಸ್ವರೂಪತ್ವರೂಪ ವಿಶೇಷವನ್ನಾದರೂ ಅಂಗೀಕರಿಸಲೇಬೇಕು ವಿಶೇಷ್ಯದಲ್ಲಿ ವಿಶೇಷ್ಯಸ್ವರೂಪತ್ವರೂಪ ವಿಶೇಷವಿಲ್ಲವಾದರೆ ಆ ವಿಶೇಷ್ಯವನ್ನು ವಿಶೇಷ್ಯಸ್ವರೂಪವೆಂದು ತಿಳಿಯಲಿಕ್ಕೂ ವ್ಯವಹರಿಸಲಿಕ್ಕೂ ಅಶಕ್ಯವೇ ಆಗುವುದು ಆದಕಾರಣ ವಿಶೇಷ್ಯಸ್ವರೂಪವೂ ನಿರ್ವಿಶೇಷವಲ್ಲ (ಹಾಗಾದರೆ ಯಾವುದು ವಿಶೇಷ್ಯಸ್ವರೂಪತ್ವರೂಪ ವಿಶೇಷದಿಂದ ಕೂಡಿಯದೋ, ಅಂತಹ ವಿಶಿಷ್ಟದಲ್ಲಿ ಯಾವುದು ವಿಶೇಷ್ಯಸ್ವರೂಪವಿದೆಯೋ ಅದು ವಿಶಿಷ್ಟದಿಂದ ಭಿನ್ನವೇ ಆದಕಾರಣ ಅದು ನಿರ್ವಿಶೇಷವೇ, ಎಂದರೆ –) ಆ ವಿಶಿಷ್ಟದಲ್ಲಿ ಯಾವುದು ವಿಶೇಷ್ಯಸ್ವರೂಪವೋ ಅದು ವಿಶಿಷ್ಟದಿಂದ ಬೇರೆಯಾದಾಗ್ಯೂ ವಿಶೇಷ್ಯಸ್ವರೂಪತ್ವರೂಪ ವಿಶೇಷದಿಂದ ಯುಕ್ತವೇ ಆಗಿದೆ ಆದಕಾರಣ ನಿರ್ವಿಶೇಷವಲ್ಲ ಆ ವಿಶಿಷ್ಟದಲ್ಲಿಯೂ ಯಾವುದು ವಿಶೇಷ್ಯಸ್ವರೂಪವೋ ಅದೂ ವಿಶಿಷ್ಟದಿಂದ ಭಿನ್ನವೇ ಆದ ಕಾರಣ ಅದು ನಿರ್ವಿಶೇಷವು ಎಂದಂಗೀಕರಿಸಿದರೆ ಅನವಸ್ಥಾದೋಷವು ಬರುತ್ತದೆ ॥ ೪ ॥

ಪೀ—ವಿಶಿಷ್ಟಕ್ಕೂ ವಿಶೇಷ್ಯಸ್ವರೂಪಕ್ಕೂ ಭೇದವನ್ನು ಅಂಗೀಕರಿಸಿದರೆ ಹೇಗೆ ಅನವಸ್ಥಾದೋಷವು ಹೇಳಲ್ಪಡುತ್ತದೋ ಹಾಗೆಯೇ ಅವುಗಳಿಗೆ ಅಭೇದವನ್ನು ಅಂಗೀಕರಿಸಿದರೂ ಅನವಸ್ಥಾದೋಷವು ಬರುವುದು ಆ ಪಕ್ಷವನ್ನು ಬಿಡಬೇಕಾಗುವುದು ವಿಶಿಷ್ಟಕ್ಕೂ ವಿಶೇಷ್ಯಸ್ವರೂಪಕ್ಕೂ ಅಭೇದವಿದ್ದರೆ (ಅವು ಒಂದೇ ಆದರೆ) ವಿಶೇಷ್ಯಸ್ವರೂಪವನು ತಿಳಿದರೆ ವಿಶಿಷ್ಟಾಕಾರವೂ ತಿಳಿಯಲ್ಪಡುವುದರಿಂದ ವಿಶೇಷ್ಯಸ್ವರೂಪವನ್ನು ಅನುವಾದಮಾಡಿಕೊಂಡು ವಿಶಿಷ್ಟಾಕಾರ ಪ್ರಶ್ನೆಯೇ ಕೂಡದೆ ಹೋಗುವುದು, ಎಂದರೆ—

ತಾ ॥ (೧) ಅಭೇದೇ ನ ವಿರೋಧೋಽಸ್ತಿ ಜ್ಞಾತಾಜ್ಞಾತಂ ಯತೋಽಖಿಲಂ । ತದೇವ ಜ್ಞಾತರೂಪೇಣ ಜ್ಞಾತಮಜ್ಞಾತಮನ್ಯಥಾ ॥ (೨) ಅಭಿನ್ನಸ್ಯ ವಿಶಿಷ್ಟತ್ವಾನ್ನ ದೋಷದ್ವಯಮಪ್ಯುತ ॥ (೩) ಏಕತ್ವಾನುಭವಾಚ್ಚೈವ ವಿಶೇಷಾನುಭವಾದಪಿ । ತಜ್ಞಾನಾನುಭವಾಚ್ಚೈವ ನ ದೋಷದ್ವಯಸಂಭವಃ ॥ (೪) ಭೇದಾಭೇದೌ ಚ ತೌ (ತೇ) ನೈವ (೫) ಕರ್ತೃಭೋಕ್ತೃವಿಶೇಷಣೇ । ಮದನ್ಯ ಇತ್ಯನುಭವೋ ಯತೋ ನೈವಾಸ್ತಿ ಕಸ್ಯಚಿತ್ ॥ ॥ ೫ ॥

ಆ ॥ (೧) ವಿಶಿಷ್ಟಾಕಾರಕ್ಕೆ ವಿಶೇಷ್ಯಸ್ವರೂಪದಿಂದ ಅಭೇದವನ್ನು ಹೇಳಿದರೆ ವಿಶೇಷಜ್ಞಾನವು ಬಂದೊಡನೆ ವಿಶಿಷ್ಟಾಕಾರಜ್ಞಾನವೂ ಬರುವುದರಿಂದ ವಿಶೇಷ್ಯಸ್ವರೂಪವನ್ನು ಅನುವಾದಮಾಡಿಕೊಂಡು ವಿಶಿಷ್ಟಾಕಾರ ಪ್ರಶ್ನೆಯು ಕೂಡಲಾರದೆಂಬುವ ಬಾಧಕವೂ ಇಲ್ಲ ಏಕೆಂದರೆ ಒಂದೇ ವಸ್ತುವು ಒಂದು ರೂಪದಿಂದ ಜ್ಞಾತವಾದರೂ ರೂಪಾಂತರದಿಂದ ಅಜ್ಞಾತವಾಗಿಯೂ ಇರಬಹುದು ಆದಕಾರಣ ಎಲ್ಲಾ ವಸ್ತುಗಳಿಗೆ ಪ್ರತ್ಯೇಕವಾಗಿ ಜ್ಞಾತತ್ವ ಅಜ್ಞಾತತ್ವಗಳು ಕೂಡುವುದರಿಂದ ಹಿಂದೆ ಹೇಳಿದ ಪ್ರಶ್ನಾನುಪಪತ್ತಿಯು ಇಲ್ಲ. (೩) ವಿಶಿಷ್ಟವು ವಿಶೇಷ್ಯದಿಂದ ಅಭಿನ್ನವಾಗಿರುವುದರಿಂದ ಭೇದಪರಂಪರೆಯಿಂದ ಅನವಸ್ಥಾದೋಷವೂ

ಮತ್ತು ಒಂದೇ ವಸ್ತುವಿಗೆ ರೂಪಭೇದದಿಂದ ಜ್ಞಾತತ್ವ ಅಜ್ಞಾತತ್ವವೂ ಕೂಡುವುದರಿಂದ ಅನವಸ್ಥಾ, ಪ್ರಶ್ನಾನುಪಪತ್ತಿ ಎಂಬುವ ಎರಡು ದೋಷಗಳೂ ಬರುವುದಿಲ್ಲ (೩) (ವಿಶಿಷ್ಟಕ್ಕೂ ವಿಶೇಷ್ಯಕ್ಕೂ ಅತ್ಯಂತಾಭೇದವಿದ್ದರೆ ಧರ್ಮಭೇದದಿಂದಲೂ ಜ್ಞಾತತ್ವ ಅಜ್ಞಾತತ್ವಗಳು ಹೇಗೆ ಕೂಡುತ್ತವೆ? ಎಂಬುವ ಆಶಂಕೆಯನ್ನು ಪರಿಹರಿಸಿಕೊಂಡು ಹಿಂದೆ ಹೇಳಿದುದನ್ನು ವಿವರಿಸುತ್ತಾರೆ–) ವಿಶಿಷ್ಟಕ್ಕೆ ವಿಶೇಷ್ಯದಿಂದ ಅಭೇದಾನುಭವವಿದ್ದುದರಿಂದ ಭೇದಪರಂಪರಾರೂಪವಾದ ಅನವಸ್ಥಾದೋಷವು ಇಲ್ಲ. ವಿಶಿಷ್ಟ ವಿಶೇಷ್ಯಗಳಿಗೆ ಅಭೇದವಿದ್ದರೂ ಅನುಭವಸಿದ್ಧವಾದ ವಿಶೇಷಬಲದಿಂದ ಜ್ಞಾತತ್ವ ಅಜ್ಞಾತತ್ವಗಳೂ ಅನುಭವಸಿದ್ಧವಾಗಿರುವುದರಿಂದ ಪ್ರಶ್ನೆಯು ಕೂಡುವುದಿಲ್ಲವೆಂಬುವ ದೋಷವೂ ಕೂಡ ಇಲ್ಲ. (೪) (ಹಾಗಾದರೆ ವಿಶಿಷ್ಟ ವಿಶೇಷ್ಯಗಳಿಗೆ ಭೇದಾಭೇದಗಳೆಂದು ಹೇಳಿದರೆ–ಭೇದದಿಂದ ಪ್ರಶ್ನೆಯು ಕೂಡುವುದಿಲ್ಲವೆಂಬುವ ದೋಷವು ಇಲ್ಲವೆಂದಾಗುತ್ತದೆ. ಅಭೇದದಿಂದ ಅನವಸ್ಥಾದೋಷವನ್ನು ಪರಿಹಾರಮಾಡಲಿಕ್ಕೆ ಬರುತ್ತದೆ ಆದುದರಿಂದ ವಿಶಿಷ್ಟ ವಿಶೇಷ್ಯಗಳಿಗೆ ಭೇದಾಭೇದವೇ ಎಂದರೆ ಅವುಗಳಿಗೆ ಕ್ವಚಿತ್ ಭೇದಾಭೇದಗಳನ್ನು ಹೇಳುವುದೋ, ಎಲ್ಲಾ ಕಡೆಗಳಲ್ಲಿಯೂ ಭೇದಾಭೇದಗಳನ್ನು ಹೇಳುವುದೋ, ವಿಶಿಷ್ಟಾಕಾರವು ಅಯಾವದ್ದ್ರವ್ಯಭಾವಿಯಾದ ಸ್ಥಳದಲ್ಲಿ ಭೇದಾಭೇದಗಳನ್ನು ನಾವೂ ಒಪ್ಪುತ್ತೇವೆ. ಯಾವದ್ದ್ರವ್ಯಭಾವಿಯಾದ ವಿಶಿಷ್ಟಾಕಾರಕ್ಕೆ ವಿಶೇಷ್ಯದಿಂದ ಭೇದಾಭೇದಗಳನ್ನು ಅಂಗೀಕರಿಸಲಿಕ್ಕೆ ಬರುವುದಿಲ್ಲವೆನ್ನುತ್ತಾರೆ–) ಪರರು ಅಂಗೀಕರಿಸಿರುವ ಭೇದಾಭೇದಗಳನ್ನು ವಿಶಿಷ್ಟವಿಶೇಷ್ಯಗಳಿಗೆ ಸರ್ವತ್ರ ಅಂಗೀಕರಿಸಲಿಕ್ಕೆ ಬರುವುದಿಲ್ಲ. (೫) (ಏಕೆಂದರೆ–) ಕರ್ತೃತ್ವ ಭೋಕ್ತೃತ್ವ ಮೊದಲಾದ, ದ್ರವ್ಯವಿರುವಪರ್ಯಂತವಿರುವ ವಿಶೇಷಣಗಳಿಂದ ವಿಶಿಷ್ಟವಿಷಯದಲ್ಲಿ ಕರ್ತೃತ್ವವಿಶಿಷ್ಟನೂ ಭೋಕ್ತೃತ್ವವಿಶಿಷ್ಟನೂ, ವಿಶೇಷ್ಯಭೂತನಾದ ನನಗಿಂತ ಭಿನ್ನನು, ಅಭಿನ್ನನು, ಎಂದು ಭೇದಾಭೇದಾನುಭವವು ಯಾರಿಗೂ ಇಲ್ಲವೇ ಇಲ್ಲ. (ಆದುದರಿಂದ ಅಂತಹ ಯಾವದ್ದ್ರವ್ಯಭಾವಿಯಾದ ವಿಶಿಷ್ಟಸ್ಥಳದಲ್ಲಿ ಹಿಂದೆ ಹೇಳಿದ ಪ್ರಕಾರ ಭೇದಾಭೇದಾನುಭವವು ಇಲ್ಲದಿರುವ ಪ್ರಯುಕ್ತ ಭೇದಾಭೇದಗಳನ್ನು ಅಂಗೀಕರಿಸಲಿಕ್ಕೆ ಬರುವುದಿಲ್ಲ) ॥ ೫ ॥

ಪೀ—ಜೇತನದಲ್ಲಿ ನಿತ್ಯದಲ್ಲಿಯೂ ಅಭಿವ್ಯಕ್ತಗಳಾದ ಸ್ವರೂಪತ್ವ ಮೊದಲಾದ ಧರ್ಮಗಳಿಗೆ ಅಭೇದವನ್ನು ಸಾಧಿಸುತ್ತಾರೆ—

ತಾ ॥ (೧) ಭೇದೋ ವಿಶೇಷಣಸ್ಯಾಪಿ ನ ॥ (೨) ಆಂತರಸ್ಯ ಕ್ವಚಿದ್ಭವೇತ್ ॥ (೩) ಶುದ್ಧ-ಸ್ವರೂಪ ಇತ್ಯಾದಾವಭೇದಸ್ಯೈವ ದರ್ಶನಾತ್ ॥ (೪) ಅಪೃಥಗ್ದೃಷ್ಟಿನಿಯಮಾ-ದ್ಬಲಜ್ಞಾನಾದಿಕಸ್ಯ ಚ । ಐಕ್ಯಂ ॥ ೬ ॥

ಅ ॥ (೧) ಜೇತನದಲ್ಲಿ ವಿಶೇಷಣವಾದ, ನಿತ್ಯದಲ್ಲಿಯೂ ಅಭಿವ್ಯಕ್ತವಾಗಿರುವ ಸ್ವರೂಪತ್ವಾದಿರೂಪವಾದ ಧರ್ಮಕ್ಕೆ ವಿಶೇಷ್ಯಭೂತನಾದ ಜೇತನದಿಂದ ಭೇದವಿಲ್ಲ. (೨) (ಜೇತನವಿಶೇಷಣಕ್ಕೆ ವಿಶೇಷಿಯಿಂದ ಭೇದವಿಲ್ಲ, ಎಂದೇ ಸಾಕಾಗುವುದರಿಂದ **ಆಂತರಸ್ಯ** ಎಂಬುವುದು ವ್ಯರ್ಥವು. ಮತ್ತು ಶುದ್ಧಸ್ವರೂಪತ್ವಾದಿಗಳು ಒಳಗೂ ಹೊರಗೂ ವ್ಯಾಪಿಸಿಕೊಂಡು ಜೇತನದಲ್ಲಿದ್ದ ಪ್ರಯುಕ್ತ ಜೇತನದಲ್ಲಿ ಅಂತರ್ಗತವು ಹೇಗೆ ಆಗುವುದು ಎಂದರೆ—) (ವಸ್ತ್ರದಲ್ಲಿ ಮಣ್ಣು ಹಿಡಿದರೆ ಕೃಷ್ಣಂ ವಸ್ತ್ರಂ=ವಸ್ತ್ರವು ಕಪ್ಪಾಗಿದೆ, ಎಂದು ಪರಂಪರಾ ಸಂಬಂಧದಿಂದ ಹೇಗೆ ಬಟ್ಟೆಯಲ್ಲಿ **ಕಾರ್ಷ್ಣ್ಯ**ವಿದೆ, ಎಂದು ಹೇಳಲ್ಪಡುತ್ತದೋ, ಕಾರ್ಷ್ಣ್ಯವು ಬಟ್ಟೆಯಲ್ಲಿದ್ದುದಲ್ಲ, ಹೀಗೆಯೇ **ಕೃಷ್ಣೋಽಹಂ** ಎಂಬುವಲ್ಲಿ ದೇಹಸಂಬಂಧಿಯಾದ ಕಾರ್ಷ್ಣ್ಯವು ಆತ್ಮನಲ್ಲಿ ಹೇಳಲ್ಪಡುತ್ತದೆ. ಆ ಕಾರ್ಷ್ಣ್ಯವು ಜೇತನದಲ್ಲಿದ್ದುದಲ್ಲ. ತಥಾ ಚ ಪರಂಪರಾಸಂಬಂಧದಿಂದ ಜೇತನದಲ್ಲಿ ವ್ಯವಹರಿಸಲ್ಪಡುವ ಕಾರ್ಷ್ಣ್ಯಾದಿಗಳನ್ನು ಬಿಟ್ಟು) ಜೇತನದಲ್ಲಿರತಕ್ಕ ಮನಃಪರಿಣಾಮರೂಪಗಳಾದ

ಜ್ಞಾನಾದಿಗಳಿಗೆ ಚೇತನದಿಂದ ಭೇದವಿದೆ (ಚೇತನನಿಗೆ ಆ ಜ್ಞಾನಾದಿಗಳಿಂದ ಅಭೇದವಿಲ್ಲ) (೩) (ಯಾವ ವಸ್ತುಗಳಿಗೆ ಯಾವುದರಿಂದ ಅಭೇದದರ್ಶನವೆಂದರೆ—) ಚೇತನಃ ಶುದ್ಧಸ್ವರೂಪಃ ಮುಕ್ತಃ ಇತ್ಯಾದಿ ಪ್ರಯೋಗಗಳಿಂದ ಸಿದ್ಧವಾದ ಶುದ್ಧಸ್ವರೂಪತ್ವ ಚೇತನತ್ವ ಮೊದಲಾದ ಧರ್ಮಗಳಿಗೆ ವಿಶೇಷ್ಯ ಭೂತನಾದ ಚೇತನದಿಂದ ಅಭೇದವೇ ಅನುಭವಸಿದ್ಧವಾಗಿರುವುದರಿಂದ ಆ ನಿತ್ಯಾಭಿವ್ಯಕ್ತಗಳಾದ ಶುದ್ಧತ್ವ, ಸ್ವರೂಪತ್ವ, ಚೇತನತ್ವ ಮೊದಲಾದ ಧರ್ಮಗಳಿಗೆ ವಿಶೇಷ್ಯಭೂತ ಚೇತನದಿಂದ ಅತ್ಯಂತಾಭೇದವನ್ನೇ ಅಂಗೀಕರಿಸಬೇಕು (೪) (ಆವಿರ್ಭಾವತಿರೋಭಾವವುಳ್ಳ ಕರ್ತೃತ್ವ ಮೊದಲಾದ ವಿಶೇಷಗಳಿಗೆ ವಿಶೇಷಿ ಚೈತನ್ಯದಿಂದ ಐಕ್ಯವೆಂದು ಪೂರ್ವದಲ್ಲಿ ಅರ್ಥಾತ್ ಸಿದ್ಧವಾಗಿದೆ ಈಗ ಅಂತಹ ಜ್ಞಾನಾದಿಗುಣಗಳನ್ನೇ ಪರರು ಗುಣಗಳೆಂದು ಅಂಗೀಕರಿಸಿರುವುದರಿಂದ ಅವುಗಳಿಗೂ ವಿಶೇಷ್ಯದಿಂದ ಐಕ್ಯವನ್ನು ಸಾಧಿಸುತ್ತಾರೆ-) ಆವಿರ್ಭಾವ ತಿರೋಭಾವವುಳ್ಳ ಕರ್ತೃತ್ವ ಬಲ ಜ್ಞಾನ ಮೊದಲಾದ ಸ್ವರೂಪಭೂತ ಧರ್ಮಗಳಿಗೆ ನಿಯಮದಿಂದ ಅಭೇದಾನುಭವವೇ ಇರುವುದರಿಂದ ಆ ಧರ್ಮಗಳಿಗೆ ಚೇತನದಿಂದ ಅತ್ಯಂತಾಭೇದವನ್ನೇ ಒಪ್ಪಬೇಕು ॥೬॥

ಪೀ— ಚೇತನೋಽಹಂ ಶುದ್ಧಸ್ವರೂಪಃ, ಕರ್ತಾ, ಭೋಕ್ತಾ, ಇತ್ಯಾದಿ ಸಾಮಾನಾಧಿಕರಣ್ಯಾನುಭವವಿದ್ದುದರಿಂದ ಚೇತನತ್ವ, ಶುದ್ಧತ್ವ, ಮೊದಲಾದ ಧರ್ಮಗಳಿಗೆ ಚೇತನದಿಂದ ಅತ್ಯಂತಾಭೇದವನ್ನು ಅಂಗೀಕಾರಮಾಡಿದರೆ ಕೃಷ್ಣೋಽಹಂ ಸ್ಥೂಲೋಽಹಂ ಇತ್ಯಾದಿ ಸಾಮಾನಾಧಿಕರಣ್ಯಾನುಭವವಿದ್ದುದರಿಂದ ದೇಹೋಪಾಧಿಕಗಳಾದ ಕಾರ್ಷ್ಣ್ಯಾದಿ ಧರ್ಮಗಳಿಗೂ ಚೇತನದಿಂದ ಐಕ್ಯವು ಬರಬೇಕಾಗುವುದು ಎಂದರೆ—

ತಾ ॥ (೧) ಬಾಹ್ಯವಿಶೇಷಾಣಾಂ ಪೃಥಗ್ದೃಷ್ಟೇಶ್ಚ ತನ್ನ ತು ॥ (೨) ವಿಶೇಷಹೇತ್ವಭಾವೇಽಪಿ ದ್ವೈವಿಧ್ಯಂ ಕಲ್ಪ್ಯತೇ ಯದಿ । ಕಲ್ಪನಾಗೌರವಾದ್ಯಾಸ್ತು ದೋಷಾಸ್ತತ್ರಾತಿಸಂಗದಾಃ ॥ (೩) ನೈಕತ್ವಂ ನಾ(ನಾಽ)ಪಿ ನಾನಾತ್ವಂ ನಿಯಮಾದಸ್ಯಚೇತನೇ । ಭೇದಾಭೇದಾನುಭವಾದತಸ್ತತ್ರಾನ್ಯಥಾ ಗತೇಃ ॥ (೪) ಏಕೋಽಹಮ(ಮದ)ನ್ಯತೋಽನ್ಯಶ್ಚೇತ್ಯೇವಮೇವ ವ್ಯವಸ್ಥಿತೌ । ಭೇದಾಭೇದೌ ಚೇತನೇಷು ತಸ್ಮಾನ್ನೈಕಪ್ರಕಾರತಾ ॥೭॥

ಅ ॥ (೧) ಬಾಹ್ಯವಿಶೇಷಗಳು ಪ್ರತ್ಯೇಕವಾಗಿ ಕಾಣುವುದರಿಂದಲೇ ಅವುಗಳಿಗೆ ಐಕ್ಯವಿಲ್ಲ (ಅಂದರೆ ನಾವು ಕೇವಲ ಸಾಮಾನಾಧಿಕರಣ್ಯಾನುಭವವೇ ಅಭೇದಸಾಧಕವೆಂದು ಹೇಳುವುದಿಲ್ಲ ಮತ್ತೆ ಭೇದ ಪ್ರತೀತಿಯಿಲ್ಲದಿದ್ದು ಸಾಮಾನಾಧಿಕರಣ್ಯಾನ ಭವವೇ ಅಭೇದಸಾಧಕವೆಂದು ಹೇಳಿದ್ದು ದೇಹೋಪಾಧಿಕಗಳಾದ ಸ್ಥೌಲ್ಯ ಕಾರ್ಷ್ಣ್ಯಾದಿಧರ್ಮಗಳಿಗೆ ಚೇತನದಿಂದ ಭೇದಾನುಭವವಿದ್ದುದರಿಂದ ಕೇವಲ ಸಾಮಾನಾಧಿಕರಣ್ಯ ವ್ಯವಹಾರವಾತ್ರದಿಂದ ಆ ಧರ್ಮಗಳಿಗೆ ಅಭೇದವನ್ನು ಹೇಳಲಿಕ್ಕೆ ಬರುವುದಿಲ್ಲ) (೨) (ಶುದ್ಧಸ್ವರೂಪತ್ವ ಮೊದಲಾದ ನಿತ್ಯಾಭಿವ್ಯಕ್ತಗಳಾದ ವಿಶೇಷಗಳಿಗೆ ಮಾತ್ರ ಚೇತನದಿಂದ ಐಕ್ಯವು ಜೀವರಲ್ಲಿರುವ ಕರ್ತೃತ್ವ ಮೊದಲಾದ ಧರ್ಮಗಳಿಗೆ ಚೈತನ್ಯದಿಂದ ಐಕ್ಯವಿಲ್ಲ, ಎಂದು ಕೆಲವರು ಹೇಳುವದನ್ನು ನಿರಾಕರಿಸಿಸುತ್ತಾರೆ-) ಶುದ್ಧಸ್ವರೂಪತ್ವ ಮೊದಲಾದ ವಿಶೇಷಗಳಿಗೂ ಕರ್ತೃತ್ವಾದಿವಿಶೇಷಗಳಿಗೂ ವಿಶೇಷನಿಮಿತ್ತವಿಲ್ಲದಿದ್ದರೂ ಶುದ್ಧಸ್ವರೂಪತ್ವಾದಿಗಳಿಗೇನೇ ಚೈತನ್ಯದಿಂದ ಅಭೇದವು, ಕರ್ತೃತ್ವಾದಿಗಳಿಗೆ ಚೈತನ್ಯದಿಂದ ಐಕ್ಯವಿಲ್ಲ ಮತ್ತೆ ಭೇದವು, ಎಂದು ಎರಡು ರೀತಿಯಾಗಿ ಕಲ್ಪಿಸಿದರೆ ಅಪ್ರಾಮಾಣಿಕ ಬಹು ಕಲ್ಪನಾರೂಪ ಕಲ್ಪನಾಗೌರವ ಮೊದಲಾದವು ಅಲ್ಲಿ ಸ್ಪಷ್ಟವಾಗಿ ಬರುವವು (೩) (ಈಗ ಆಯಾವದ್ದ್ರವ್ಯ

ಭಾವಿಯಾದ ವಿಶೇಷಕ್ಕೆ ವಿಶೇಷ್ಯದಿಂದ ಹಿಂದೆ ಹೇಳಿದ ಭೇದಾಭೇದಗಳನ್ನು ಸಮರ್ಥಿಸುತ್ತಾರೆ—) ಅಜೀತನದಲ್ಲಿ ನಿಯಮವಾಗಿ ಐಕ್ಯವೂ ಇಲ್ಲ ಭೇದವೂ ಇಲ್ಲ ಹೀಗೆ ಒಂದೊಂದು ಇಲ್ಲದಿರುವುದರಿಂದಲೂ (ಅಂದರೆ ಕೇವಲ ಭೇದವಾಗಲೀ ಕೇವಲ ಅಭೇದವಾಗಲೀ ಇಲ್ಲದಿರುವುದರಿಂದಲೂ) ಭೇದಾಭೇದಗಳ ಅನುಭವವಿದ್ದುದರಿಂದಲೂ, ಭೇದಾಭೇದಗಳನ್ನು ಒಡಂಬಡದೆ ಬೇರೆ ಗತಿಯು ಇಲ್ಲದಿರುವುದರಿಂದಲೂ ಅಭೇದವಿಲ್ಲ ಭೇದವೂ ಇಲ್ಲ ಅಂದರೆ ಚೂತಫಲದಲ್ಲಿರುವ ಶ್ಯಾಮತ್ವ ಪೀತತ್ವಾದಿಧರ್ಮಗಳಿಂದ ನಿಯಮದಿಂದ ಅಭೇದವಾಗಲೀ ಭೇದವಾಗಲೀ ಇಲ್ಲ (ಮತ್ತೆ ಶ್ಯಾಮರೂಪ ಹೋಗಿ ರೂಪಾಂತರ ಬರುವುದರಿಂದ ಭೇದಾಭೇದಗಳ ಅನುಭವವೇ ಇರುವುದರಿಂದ ಭೇದಾಭೇದಗಳನ್ನೇ ಹೇಳಬೇಕು) (೪) (ಭೇದಾಭೇದಾನುಭವವಿದ್ದುದರಿಂದ ಅಜೀತನದಲ್ಲಿರುವ ಶ್ಯಾಮತ್ವಾದಿ ಕೆಲವು ಧರ್ಮಗಳಿಂದ ಭೇದಾಭೇದಗಳನ್ನು ಹೇಳುವುದಾದರೆ ಚೇತನದಲ್ಲಿಯೂ ಕೂಡ ನಾನು ನನ್ನಿಂದ ಅಭಿನ್ನನು, ಘಟಾದಿಗಳಿಂದ ಭಿನ್ನನು, ಎಂದು ಭೇದಾಭೇದಾನುಭವವು ಇದೆ. ಆದುದರಿಂದ ಅಜೀತನದಲ್ಲಿ ಮಾತ್ರ ಕೆಲವು ಧರ್ಮಗಳಿಂದ ಭೇದಾಭೇದಗಳು ಇವೆ, ಎಂದು ಹೇಳಿದ್ದು ಹೇಗೆಂದರೆ—) (ಅಜೀತನದಲ್ಲಿ ಶ್ಯಾಮತ್ವಾದಿರೂಪವಾದ ಧರ್ಮದಿಂದಲೇ ಭೇದಾಭೇದಾನುಭವವು ಇದೆ ಹೀಗೆ ಚೇತನದಲ್ಲಿ ಯಾವುದಾದರೂ ಒಂದೇ ಧರ್ಮದಿಂದ ಬೇದಾಭೇದಾನುಭವವು ಇಲ್ಲ ಮತ್ತೆ) ಚೇತನಕ್ಕೆ ತನ್ನಿಂದ ಅಭೇದಾನುಭವವೂ, ಘಟಾದಿಗಳಿಂದ ಭೇದಾನುಭವವೂ, ಹೀಗೆ ಭಿನ್ನ ಭಿನ್ನ ವಸ್ತುಗಳಿಂದಲೇ ಭೇದಾಭೇದಾನುಭವವು ಇರುವುದು. ಹೀಗೆ ಭೇದಾಭೇದಗಳು ವ್ಯವಸ್ಥಿತಗಳಾಗಿವೆ ಆದುದುರಿಂದ (ಅಂದರೆ ಅಜೀತನಗಳಲ್ಲಿದ್ದ ಅಯಾವದ್ದ್ರವ್ಯ ಭಾವಿ ಧರ್ಮಗಳಿಂದ ಭೇದಾಭೇದಗಳನ್ನು ಹೇಳಿದಂತೆ ಚೇತನದಲ್ಲಿ ಹೇಳಲಿಕ್ಕೆ ಬಾರದಿರುವುದರಿಂದ) ಚೇತನಕ್ಕೂ ಅಜೀತನಕ್ಕೂ ಏಕಪ್ರಕಾರತ್ವವಿಲ್ಲ. ॥ ೭ ॥

ಪೀ—ಅಜೀತನದಲ್ಲಿ ಭೇದಾಭೇದಗಳು ಅನುಭವಸಿದ್ಧಗಳಾಗಿವೆ, ಎಂಬುವ ವಿಷಯವನ್ನು ಉದಾಹರಣೆಕೊಟ್ಟು ಹೇಳುತ್ತಾರೆ—

ತಾ ॥ (೧) ಏಕಮಿತ್ಯೇವ ಯಜ್ಜ್ಞಾನಂ ಬಹುತ್ವೇನೈವ ತತ್ಪುನಃ । ಪಟಾದ್ಯಂ ಜ್ಞಾಯತೇ ಯಸ್ಮಾದ್ಭೇದಾಭೇದೌ ಕುತೋ ನ ತತ್ ॥ (೨) ತಂತುಭ್ಯೋಽನ್ಯಃ ಪಟಃ ಸಾಕ್ಷಾತ್ ಕಸ್ಯ ದೃಷ್ಟಿಪಥಂ ಗತಃ । ಅನನ್ಯಶ್ಚೇತ್ತಂತುಭಾವೇ ಪಟಾಭಾವಃ ಕುತೋ ಭವೇತ್ ॥ (೩) ನ ಚಾತ್ಮನಿ ವಿಶೇಷೋಽತ್ರ ದೃಷ್ಟಾಂತತ್ವಂ ಗಮಿಷ್ಯತಿ । ಶುದ್ಧೋಽಹಂಪ್ರತ್ಯಯೋ ಯಸ್ಮಾತ್ತತ್ರಾಭೇದಪ್ರದರ್ಶಕಃ ॥ (೪) ಅತ್ರಾವಯವಭೇದೇನ ಸ್ಯಾದೇವ ಹ್ಯನವಸ್ಥಿತಿಃ ॥ ೮ ॥

ಅ ॥ (೧) ಪಟ ಮೊದಲಾದುದು ಯಾವುದು ಇದೆಯೋ ಆ ಪಟರೂಪದಿಂದ ತಂತುಗಳಿಗೆ ಅಭೇದವೆಂದು ತಿಳಿಯಲ್ಪಡುತ್ತದೆ. ಅಂದರೆ ತಂತುಗಳು ಪಟದಿಂದ ಅಭಿನ್ನಗಳೆಂದು ತಿಳಿಯಲ್ಪಡುತ್ತವೆ ಅವುಗಳೇ ಪುನಃ ಪರಸ್ಪರವಾಗಿ ಭೇದದಿಂದ ಅನುಭೂತಗಳಾಗುತ್ತವೆ. ಆದಕಾರಣ ಒಂದೊಂದು ತಂತುವಿಗೆ ಪಟದಿಂದ ಭೇದಾಭೇದಗಳು ಏಕೆ ಇಲ್ಲ (ಅಂದರೆ ಆ ಕಡೆ ಈ ಕಡೆ ಹರಡಿಸಿದ ನೂಲುಗಳೇ ಬಟ್ಟೆಯಲ್ಲದೆ ನೂಲುಗಳಿಲ್ಲದೆ ಬರಿ ಬಟ್ಟೆಯೆಂಬುವುದು ಇಲ್ಲವಷ್ಟೆ ಆ ನೂಲುಗಳ ಸಮುದಾಯರೂಪವಾದ ಬಟ್ಟೆಯಿಂದ ನೂಲುಗಳಿಗೆ ಅಭೇದವೂ, ಪರಸ್ಪರವಾಗಿ ನೂಲುಗಳಿಗೆ ಭೇದವೂ ಅನುಭವಸಿದ್ಧವಾಗಿರುವುದರಿಂದ ಒಂದೊಂದು ನೂಲುಗಳಿಂದ ಬಟ್ಟೆಗೆ ಭೇದಾಭೇದಗಳು ಅನುಭವಸಿದ್ಧವಾಗಿವೆ (ಒಂದೊಂದು ನೂಲುವಿಗೆ ಬಟ್ಟೆಯಿಂದ ಅತ್ಯಂತಾಭೇದವೆಂದು ಇಟ್ಟುಕೊಂಡರೆ-ಪರಸ್ಪರ ಅವುಗಳಿಗೆ ಭೇದವಿದೆ ಎಂಬುವ

ಅನುಭವವು ಕೂಡಲಾರದು) (೨) ನೆಯಿದ ನೂಲುಗಳೇ ಬಟ್ಟೆಯು ಅಂತಹ ನೂಲುಗಳಿಂದ ಬೇರೆ ಯಾಗಿ ಬರಿ ಬಟ್ಟೆಯು ಯಾರಿಗೆ ದೃಗ್ಗೋಚರವಾಗುವುದು, (ಯಾರಿಗೂ ಕಾಣಲಾರದು) ನೂಲುಗಳಿಂದ ಬಟ್ಟೆಯು ಅಭಿನ್ನ ವೆಂದಾದರೆ (ನೂಲೇ ಬಟ್ಟೆಯು ಎಂದಾದರೆ) ಒಂದೊಂದು ತಂತುವಿನಲ್ಲಿ ಪಟಾ ಭಾವವು ಹೇಗೆ ಆಗುವುದು? (ಅಂದರೆ ಪರಸ್ಪರ ಸಂಯೋಗರೂಪವಾದ ಅವಸ್ಥಾವಿಶೇಷವನ್ನು ಹೊಂದಿದ ನೂಲುಗಳ ಸಮುದಾಯದಿಂದ ವ್ಯತಿರಿಕ್ತವಾಗಿ ಬರಿಬಟ್ಟೆಯು ಯಾವಾಗಲೂ ಅನ ಭವಸಿದ್ಧವಾಗಲಿಲ್ಲ ಸಂಯೋಗರೂಪ ಅವಸ್ಥಾವಿಶೇಷವನ್ನು ಹೊಂದದಿದ್ದ ಬರಿನೂಲಿನಿಂದ ಬಟ್ಟೆಗೆ ಅಭೇದವಿಲ್ಲ ಅದರಿಂದ ಅಭೇದವನ್ನು ಹೇಳಿದರೆ ಕೇವಲ ತಂತುರೂಪದಿಂದಲೇ ನೂಲು ಇರುವ ಕಾಲದಲ್ಲಿ ಬಟ್ಟೆಯಿಲ್ಲವೆಂದು ಹೇಗೆ ಹೇಳುವುದು ಅಂದರೆ ಆವಾಗಲೂ ಬರಿ ನೂಲನ್ನು ಬಟ್ಟೆಯೆಂದೇ ಹೇಳಬೇಕಾದೀತು ಆದ ಕಾರಣ ನೇಯಿದ ನೂಲುಗಳ ಸಮುದಾಯವೇ ಬಟ್ಟೆಯು ಒಂದೊಂದು ನೂಲನ್ನು ಬಟ್ಟೆಯೆಂದು ಹೇಳಲಿಕ್ಕೆ ಆಗುವುದಿಲ್ಲ ಆದುದರಿಂದ ಇಂತಹ ಸ್ಥಳದಲ್ಲಿ ಭೇದಾಭೇದಗಳು ಸರ್ವರಿಗೂ ಅನುಭವಸಿದ್ಧ ವಾಗಿದೆ) (೩) (ಆತ್ಮನಲ್ಲಿರುವ ಕರ್ತೃತ್ವಾದಿ ವಿಶೇಷಗಳಿಗೆ ಬಹುತ್ವವಿದ್ದರೂ ಒಬ್ಬ ಆತ್ಮನಿಂದ ಹೇಗೆ ಅಭೇದವಿದೆಯೋ, ಹಾಗೆಯೇ ಬಹು ನೂಲುಗಳಿಗೆ ಬಟ್ಟೆಯಿಂದ ಅತ್ಯಂತಾಭೇದವು ಏಕೆ ಇರ ಲಾರದೆಂದರೆ—) ಆತ್ಮನಲ್ಲಿರುವ ಕರ್ತೃತ್ವಾದಿ ಧರ್ಮವಿಶೇಷಗಳು ನೂಲುಗಳಿಗೆ ಬಟ್ಟೆಯಿಂದ ಅತ್ಯಂತಾ ಭೇದವನ್ನು ಹೇಳಬೇಕೆಂಬುದಲ್ಲಿ ದೃಷ್ಟಾಂತವಾಗಲಾರದು ಆತ್ಮನಲ್ಲಿರುವ ಕರ್ತೃತ್ವಾದಿ ವಿಶೇಷದಲ್ಲಿ ಅಬಾಧಿತವಾದ ಅಹಂ ಕರ್ತಾ ಇತ್ಯಾದಿ ಪ್ರತ್ಯಯವು ಅನ್ಯಗಳಿಗೆ ಅಭೇದವನ್ನು ತೋರಿಸುವಂಥಾದ್ದು ಇದೆ ಇಲ್ಲಿ ಅಂತಹುದು ಇಲ್ಲ (ಅಂದರೆ ಅಲ್ಲಿ ಕರ್ತಾಽಹಂ ಭೋಕ್ತಾಽಹಂ ಎಂದು ಕರ್ತೃತ್ವ ಭೋಕ್ತೃತ್ವಾದಿಗಳಿಗೆ ಅತ್ಯಂತಾಭೇದವು ಅನುಭವಸಿದ್ಧವಾದ ಹಾಗೆ ಇಲ್ಲಿ ಕೇವಲ ನೂಲುಗಳಿಂದ ಬಟ್ಟೆಗೆ ಅತ್ಯಂತಾಭೇದವು ಅನುಭವಸಿದ್ಧವಾಗಲಿಲ್ಲ ಆದಕಾರಣ ನೂಲು ಬಟ್ಟೆಗಳಿಗೆ ಭೇದಾಭೇದ ಗಳನ್ನು ಹೇಳಬೇಕು (೪) (ಹಾಗಾದರೆ ಇಲ್ಲಿ ಅಚೇತನವಾದ ಬಟ್ಟೆ ಮೊದಲಾದ ಅಂತ್ಯಾವಯವಿಯ ಲ್ಲಿಯೇ ಅವಯವಾವಯವಿಗಳಿಗೆ ಭೇದಾಭೇದಗಳೋ ಎಂದರೆ ಅಲ್ಲವೆನ್ನುತ್ತಾರೆ —) ಅಚೇತನವಾದ ಬಟ್ಟೆಗೂ ಬಟ್ಟೆಯ ಅವಯವಗಳಿಗೂ ಭೇದಾಭೇದಗಳು ಆ ಬಟ್ಟೆಯ ಅವಯವಕ್ಕೂ, ಆ ಅವಯವದ ಅವಯವಕ್ಕೂ ಭೇದಾಭೇದಗಳು ಹೀಗೆ ಸರ್ವತ್ರ ಭೇದಾಭೇದಗಳೇ ಹೀಗೆ ಅವಯವ ಪರಂಪರೆಗೂ ಭೇದಾಭೇದಪರಂಪರೆಗೂ ಪರ್ಯವಸಾನವೇ ಇಲ್ಲ ॥ ೮ ॥

ಹೀ ಹಾಗಾದರೆ ಪರಮಾಣುವಿಗೆ ಅವಯವಗಳು ಇಲ್ಲದಿರುವುದರಿಂದ ಪರಮಾಣುವಿನಲ್ಲಿ ಪರ್ಯ ವಸಾನವು ಕೂಡುವ ಪ್ರಯುಕ್ತ ಅವಯವಪರಂಪರೆಗೆ ಪರ್ಯವಸಾನವು ಇಲ್ಲವೆಂದದ್ದು ಹೇಗೆಂದರೆ—

ತಾ ॥ (೧) ನ ಚಾನವಯವಂ ವಸ್ತು ಕ್ವಚಿತ್ಸ್ಯಾನ್ನಾನಗೋಚರಂ ॥ (೨) ಪೂರ್ವಾಪ-
ರಾದಿಭೇದೇನ ಯತೋಽಂಶೋಽಸ್ಯಾವಗಮ್ಯತೇ ॥ (೩) ಉಪಾಧಿರಪ್ಯೇಕದೇಶಸಂ-
ಬದ್ಧಃ ಸಂತಮೇವ ಹಿ । ಜ್ಞಾಪಯೇದ್ಭೇದಂ ॥ (೪) ಅಖಿಲಂ ಗ್ರಸನ್ನ ವಿಭಜೇ-
ತ್ಕಥಂ ॥ (೫) ತಸ್ಮಾದ್ಧ್ಯಣಾದಿಕಮಪಿ ನಾಸ್ತ್ಯನಂಶತಯಾ ಕ್ವಚಿತ್ ॥ ೯ ॥

ಅ ॥ (೧) ಅವಯವವಿಲ್ಲದಾಗಿ ಇರುವ ಯಾವುದೊಂದು ವಸ್ತುವೂ ಕೂಡ (ಆಕಾಶಾದಿಗಳೂ ಕೂಡ) ಪ್ರಮಾಣವಿಷಯವಾದುದು ಇಲ್ಲವೇ ಇಲ್ಲ. (ಅಂದರೆ ನಿರಂಶವಾದ ವಸ್ತುವೇ ಇಲ್ಲ) (೨) (ಪರಮಾಣುವಿಗೆ ಅವಯವವು ಇಲ್ಲವೆಂಬುವಲ್ಲಿ ಪ್ರಮಾಣವು ಇಲ್ಲ ಪರಮಾಣುವಿಗೆ ಅವಯವಗಳಿವೆ ಎಂಬುವುದು ಪ್ರಮಾಣ ಸಿದ್ಧವಾಗಿದೆ ಎನ್ನುತ್ತಾರೆ —) ಪೂರ್ವಭಾಗ ಅಪರಭಾಗ ಇತ್ಯಾದಿ ಭೇದದಿಂದ ಪರಮಾಣುವಿಗೂ ಅಂಶ

ವಿದೆ ಎಂದು ತಿಳಿಯುತ್ತದೆ. (೩) (ಪರಮಾಣುವಿಗೆ ಸ್ವಾಭಾವಿಕ ಅಂಶಗಳಿಲ್ಲದಿದ್ದರೂ ಪೂರ್ವಾದಿ ದಿಗ್ಭಾಗವಾದ ಉಪಾಧಿಸಂಬಂಧದಿಂದ ಮಾಡಲ್ಪಟ್ಟ ಅವಯವಗಳು ಇದ್ದ ಪ್ರಯುಕ್ತ ಆ ಔಪಾಧಿಕ ಅಂಶವೇ ಇರುವುದು ಎಂದರೆ—(1) ಅಂಶವನ್ನು ತಿಳಿಸುವ ಉಪಾಧಿಯು ಪರಮಾಣುವಿನ ಏಕದೇಶವನ್ನು ಸಂಬಧಿಸುತ್ತದೋ, (2) ಅಥವಾ ಸಂಪೂರ್ಣ ಪರಮಾಣುವನ್ನು ಸಂಬಂಧಿಸುತ್ತದೋ, ಅದರಲ್ಲಿ (1) ನೇದ್ದು ಕೂಡುವುದಿಲ್ಲವೆನ್ನುತ್ತಾರೆ—) ಉಪಾಧಿಯು ಪರಮಾಣುವಿನ ಏಕದೇಶವನ್ನು ಸಂಬಂಧಿಸುತ್ತದೆ ಎಂದಾದರೆ—ಆ ಏಕದೇಶವು ಉಪಾಧಿಸಂಬಂಧದಿಂದ ಮೊದಲೇ ಇದ್ದ ಪ್ರಯುಕ್ತ, ಮೊದಲೇ ಇದ್ದ ಅವಯವ ಭೇದವನ್ನು ತಿಳಿಸುತ್ತದೆ, ಎಂದೇ ಆಗುವುದು (ಅಂತೂ ಅಂಶವು ಸ್ವಾಭಾವಿಕವೆಂದೇ ಆಗುವುದು) (೪) (2)ನೇದ್ದು ಕೂಡುವುದಿಲ್ಲವೆನ್ನುತ್ತಾರೆ- ಸಂಪೂರ್ಣವನ್ನು ಉಪಾಧಿಯು ಸಂಬಂಧಿಸಿದರೆ ಆ ಉಪಾಧಿಯು ಪೂರ್ವ ಅಪರ ಎಂದು ವಿಭಾಗವನ್ನು ಹೇಗೆ ತಿಳಿಸುತ್ತದೆ (ಅಂದರೆ ಅಂಶಭೇದಕ್ಕೆ ಜ್ಞಾಪಕವೇ ಆಗಲಾರದು.) (೫) (ಗುಣಾದಿಗಳಿಗೆ ಅವಯವಗಳು ಇಲ್ಲದಿರುವುದರಿಂದ **ನ ಚಾನವಯವಂ ವಸ್ತು** ಎಂದದ್ದು ಹೇಗೆ? ಎಂದರೆ—)ಪೂರ್ವ ಅಪರಾದಿಭಾಗಭೇದದಿಂದ ಅಂಶವಿದೆ, ಎಂದು ತಿಳಿದು ಬರುವುದರಿಂದಲೂ ಔಪಾಧಿಕ ಅಂಶವಿದೆ, ಎಂದು ಹೇಳುವುದು ಕೂಡದಿರುವುದರಿಂದಲೂ ಗುಣ ಮೊದಲಾದುದು ಯಾವುದೊಂದೂ ಕೂಡ ಅಂಶವಿಲ್ಲದಿದ್ದುದು ಇಲ್ಲವೇ ಇಲ್ಲ (ಎಲ್ಲವೂ ಸಾಂಶವೇ) ॥ ೯ ॥

ಪೀ—ಹೀಗೆ ಅವಯವ ಅವಯವಿಗಳಿಗೆ ಭೇದಾಭೇದವನ್ನು ಸಮರ್ಥಿಸಿದುದರಿಂದ ಫಲವು ಹುಟ್ಟುವುದಕ್ಕಿಂತ ಮೊದಲು ನೂಲುಗಳಲ್ಲಿ ಪಟತ್ವವಿಲ್ಲದಿರುವುದರಿಂದ ಪಟತ್ವ ಮೊದಲಾದ ಯಾವದ್ದ್ರವ್ಯಭಾವಿಗಳಾದ ವಿಶೇಷಗಳಿಗೆ ತಂತು ಮೊದಲಾದ ವಿಶೇಷಿಗಳಿಂದ ಭೇದಾಭೇದಗಳನ್ನು ಸಮರ್ಥಿಸಿರುವರು. ಈಗ ಗುಣಾದಿಗಳೆಂದು ಪರರು ಅಂಗೀಕರಿಸಿರುವ ಯಾವದ್ದ್ರವ್ಯಭಾವಿಗಳಾಗದೆ ಇದ್ದ ರೂಪ ಮೊದಲಾದ ವಿಶೇಷಗಳಿಗೆ ತಂತು ಮೊದಲಾದ ವಿಶೇಷಿಗಳಿಂದ ಭೇದಾಭೇದಗಳನ್ನು ಸಾಧಿಸುತ್ತಾರೆ –

ತಾ ॥ (೧) ಭಾವಾಭಾವವ್ಯವಹೃತೇರ್ವಿದ್ಯಮಾನೇಽಪಿ ವಸ್ತುನಿ । ಭೇದಾಭೇದೌ ಗುಣಾದೇಶ್ಚ ಜಡೇ ವಸ್ತುನಿ ಸಂಸ್ಥಿತೌ ॥ (೨) ಚೇತನೇ ಶಕ್ತಿರೂಪೇಣ ಗುಣಾದೇರ್ಭಾವ ಇಷ್ಯತೇ । ಸುಪ್ತೋಽಯಂ ಬಲವಾನ್ವಿದ್ವಾನಿತ್ಯಾದಿವ್ಯವಹಾರತಃ ॥ (೩) ನ ಚೈವಂ ಶಕ್ತಿರೂಪೇಣ ಜಡೇ ವ್ಯವಹೃತಿಃ ಕ್ವಚಿತ್ ॥ ೧೦ ॥

ಆ ॥ (೧) ಜಡವಾದ ವಸ್ತುವಿನಲ್ಲಿ ಗುಣ ಕ್ರಿಯಾ ಶಕ್ತಿ ಸಾದೃಶ್ಯ ವಿಶಿಷ್ಟ ಮೊದಲಾದ ಯಾವದ್ದ್ರವ್ಯ ಭಾವಿಗಳಾಗದೆ ಇದ್ದ ವಿಶೇಷಗಳಿಗೆ ವಸ್ತುವು (ತಾನು) ಇರುವಾಗ ಭೇದಾಭೇದಗಳೇ ಯುಕ್ತಗಳು **ನೀಲಂ ಫಲಂ ಚಲತಿ** ಇತ್ಯಾದಿಗಳಲ್ಲಿ ನೀಲತ್ವ ಫಲತ್ವ ಚಲನಾದಿಗಳಿಗೆ ಸಾಮಾನಾಧಿಕರಣ್ಯದಿಂದ ಫಲದಲ್ಲಿ ನೀಲತ್ವ ಚಲನಾದಿಗಳು ಇವೆ, ಎಂದು ಹೇಳುವುದರಿಂದ ಅಭೇದವನ್ನು ಅಂಗೀಕರಿಸಬೇಕು ಆಶ್ರಯವಾದ ಫಲವು ಇದ್ದರೂ ಕೆಲವು ವೇಳೆ ಫಲವು ನೀಲವಲ್ಲ, ಎಂದು ನೈಲ್ಯಾಭಾವವ್ಯವಹಾರವಿದ್ದ ಪ್ರಯುಕ್ತ ನೈಲ್ಯದಿಂದ ಭೇದವನ್ನು ಅಂಗೀಕರಿಸಬೇಕು (ನೈಲ್ಯಾದಿರೂಪವಾದ ಅಯಾವದ್ದ್ರವ್ಯಭಾವಿ ಧರ್ಮದಿಂದ ಅತ್ಯಂತಾಭೇದವೆಂದು ಹೇಳುವುದಾದರೆ ಫಲರೂಪವಾದ ವಸ್ತುವು ಇರುವಾಗ ನೈಲ್ಯಾದಿಗಳ ವಿನಾಶವು ಕೂಡಲಾರದು. ವಿನಾಶಾನಂತರದಲ್ಲಿ ಭೇದವೇ ಎಂದು ತಿಳಿಯಬೇಕು ತಾನೇ ಇಲ್ಲದಿದ್ದಮೇಲೆ ಅಭೇದವು ಕೂಡಲಾರದು) (೨) (ಹಾಗಾದರೆ ಸುಷುಪ್ತಿಮೂರ್ಚ್ಛೆಕಾಲಗಳಲ್ಲಿ ಬಲ, ಸ್ವರೂಪಜ್ಞಾನಾದಿಗಳು ಇಲ್ಲವಾದರೂ ಅವುಗಳಿಗೆ ಚೇತನದಿಂದ ಅತ್ಯಂತಾಭೇದವು ಹೇಗೆ ಇದೆಯೋ, ಹಾಗೆಯೇ ಇಲ್ಲಿಯೂ ಕೂಡ ಅಂತ್ಯಂತಾಭೇದವೇ ಏಕೆ ಆಗಲಾರದು ಎಂದರೆ —) ಸುಪ್ತನಾದವನು, ಬಲಿಷ್ಠನು, ವಿದ್ವಾಂಸನು,

ಇದು ಮೊದಲಾದ ವ್ಯವಹಾರಬಲದಿಂದ ಸುಪ್ತಿ ಮೂರ್ಚ್ಛೆಗಳಲ್ಲಿಯೂ ಬಲಜ್ಞಾನಾದಿಗಳು ಶಕ್ತಿರೂಪದಿಂದ ಇವೆ, ಎಂದು ಸಿದ್ಧಿಸುವುದರಿಂದ ಜೀವನದಿಂದ ಆ ಬಲ ಜ್ಞಾನಾದಿಗಳಿಗೆ ಅತ್ಯಂತಾಭೇದವು ಯುಕ್ತವು (ಶ್ಯಾಮತ್ವಾದಿಗಳು ನಾಶಹೊಂದುವುದರಿಂದ ಅವುಗಳಿಗೆ ಅತ್ಯಂತಾಭೇದವಿಲ್ಲ.) (೩) (ಶ್ಯಾಮತ್ವಾದಿಗಳೂ ಕೂಡ ಶಕ್ತಿರೂಪದಿಂದ ಇವೆ, ಎಂದು ಏಕೆ ಆಗಲಾರದೆಂದರೆ—) ಶ್ಯಾಮತ್ವಾದಿಗಳು ಶಕ್ತಿರೂಪದಿಂದ ಜಡದಲ್ಲಿ ಇವೆ, ಎಂದು ಎಲ್ಲಿಯೂ ವ್ಯವಹಾರವು ಇಲ್ಲ. (ಅಂದರೆ ಬಲಾದಿಗಳು ಶಕ್ತಿರೂಪದಿಂದ ಇವೆ ಎಂದು ವ್ಯವಹಾರವು ಇದ್ದಂತೆ ನೀಲತ್ವಾದಿಗಳು ಶಕ್ತಿರೂಪದಿಂದ ಇವೆ ಎಂದು ವ್ಯವಹಾರವು ಇಲ್ಲ) ॥ ೧೦ ॥

ಪೀ—ಶ್ರೀಪರಮಾತ್ಮನ ಒಂದು ರೂಪವು ವಿಶೇಷಬಲದಿಂದ ಬಹಳರೂಪಗಳು, ಎಂಬುವ ವ್ಯವಹಾರ ವಿಷಯಗಳಾಗುತ್ತವೆ ಆ ರೂಪಗಳಿಗೆ ಶ್ರೀಹರಿಯಿಂದ ಅಭೇದವೇ, ಎಂಬುವಲ್ಲಿ ಪ್ರಮಾಣಗಳನ್ನು ಹೇಳುತ್ತಾರೆ—

ತಾ ॥ (೧) ಏಕಮೇವಾದ್ವಿತೀಯಂ ತನ್ನೇಹ ನಾನಾಽಸ್ತಿ ಕಿಂಚನ । ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ ॥ (೨) ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತಿ । ಏವಂ ಧರ್ಮಾನ್ಪೃಥಕ್ಪಶ್ಯಂಸ್ತಾನೇವಾನುವಿಧಾವತಿ ॥ (೩) ಇತ್ಯಾದಿಶ್ರುತಿಮಾನಾಚ್ಚ ಪರಮೈಶ್ವರ್ಯತಸ್ತಥಾ । ಸರ್ವಂ ತು ಘಟತೇ ವಿಷ್ಣೌ ಯತ್ಕಲ್ಯಾಣಗುಣಾತ್ಮಕಮಿತ್ಯಾದಿ ಬ್ರಹ್ಮತರ್ಕೇ ॥ (೪) ಕಮಲಾಸನೇ ಬ್ರಹ್ಮಣಿ ಸ್ಥಿತಂ ರುದ್ರಂ ॥ (೫) ವಿಷ್ಣುಂ ಸಮಾಶ್ರಿತೋ ಬ್ರಹ್ಮಾ ಬ್ರಹ್ಮಣೋಽಂಗತೋ ಹರಃ । ಹರಸ್ಯಾಂಗವಿಶೇಷೇಷು ದೇವಾಃ ಸರ್ವೇಽಪಿ ಸಂಸ್ಥಿತಾ ಇತಿ ಪಾದ್ಮೇ ॥ ೧೧ ॥ ॥ ೧೧—೧೫ ॥

ಅ ॥ (೧) ಸರ್ವೋತ್ತಮನಾದವನು ಒಬ್ಬನೇ ಆತನಲ್ಲಿ ರೂಪಭೇದಾದಿಗಳು ಇಲ್ಲ ಆವನಿಗೆ ಸಮನೂ ಉತ್ತಮನೂ ಆದವನು ಎರಡನೆಯವನು ಇಲ್ಲ ಭಗವದ್ರೂಪಾದಿಗಳಲ್ಲಿ ಭೇದವೂ ಭೇದಾಭೇದವೂ ಇಲ ಯಾವನು ಈ ಭಗವದ್ರೂಪಗಳಲ್ಲಿ ಭೇದವನ್ನು ಸ್ವಲ್ಪವಾಗಿಯಾದರೂ ತಿಳಿಯುತ್ತಾನೋ, ಆತನು ನರಕಾದ್ಯನರ್ಘವನ್ನು ಹೊಂದುತ್ತಾನೆ (೨) ಹೇಗೆ ಎತ್ತರಪ್ರದೇಶದಲ್ಲಿ ಸುರಿದ ನೀರು ತಗ್ಗು ಪ್ರದೇಶಕ್ಕೆ ಹೋಗುತ್ತದೋ, ಹೀಗೆಯೇ ಭಗವದ್ಧರ್ಮಗಳನ್ನು ಶ್ರೀಪರಮಾತ್ಮನಿಂದ ಭಿನ್ನಗಳನ್ನಾಗಿ ತಿಳಿದವನು ನೀಚನೀಚ ಸ್ಥಾನಗಳನ್ನೇ ಹೊಂದುತ್ತಾನೆ (೩) ಇದು ಮೊದಲಾದ ವೇದರೂಪ ಪ್ರಮಾಣದಿಂದಲೂ ಮಂಗಲಗುಣಸ್ವರೂಪವಾದುದೆಲ್ಲವೂ, ಸಾಮಾನ್ಯತಃ ದುರ್ಘಟವಾಗಿ ತೋರಿದರೂ ಶ್ರೀವಿಷ್ಣುವಿನಲ್ಲಿ ಅಘಟ್ಯಘಟಕವಾದ ಪರಮೈಶ್ವರ್ಯವಿದ್ದುದರಿಂದಲೂ, ಕೂಡಿಯೇ ಕೂಡುತ್ತದೆ (ಹೀಗೆಯೇ ಒಡಂಬಡಬೇಕು ಜೀವಬ್ರಹ್ಮೈಕ್ಯಾದಿಗಳನ್ನು ಸರ್ವಥಾ ಒಡಂಬಡಕೂಡದು) ಐಕ್ಯವನ್ನು ಹೇಳಿದರೆ ಶ್ರೀಹರಿಗೆ ಪರಮೈಶ್ವರ್ಯವೇ ಕೂಡಲಾರದು, ಇತ್ಯಾದಿ ಪ್ರಮೇಯವು ಬ್ರಹ್ಮತರ್ಕದಲ್ಲಿ ಹೇಳಿದೆ. (೪) **(ಪಶ್ಯಾಮಿ ದೇವಾನ್** ಎಂಬುವ (ಶ್ಲೋ ೧೫) ಲ್ಲಿದ್ದ **ಕಮಲಾಸನಸ್ಥಂ** ಎಂಬುದಕ್ಕೆ ಕಮಲರೂಪವಾದ ಆಸನದಲ್ಲಿರತಕ್ಕ ಚತುರ್ಮುಖನನ್ನು ಎಂದು ಪರರು ಅರ್ಥ ಹೇಳಿರುವರು ಆಗ ರುದ್ರನು ಚತುರ್ಮುಖನನ್ನು ಆಶ್ರಯಿಸಿಕೊಂಡಿದ್ದಾನೆಂಬ ಅರ್ಥವಿಶೇಷವು ತೋರದಿರುವುದರಿಂದ ವಿಶೇಷ ಅರ್ಥವು ಸಿಗುವುದಕ್ಕಾಗಿ **ಕಮಲಾಸನಸ್ಥ** ಪದಕ್ಕೆ ಸರಿಯಾದ ಆರ್ಥವನ್ನು ಹೇಳುತ್ತಾರೆ—) ಚತುರ್ಮುಖಬ್ರಹ್ಮನ ತೊಡೆಯಲ್ಲಿ ಆಶ್ರಯಿಸಿಕೊಂಡಿರುವ ರುದ್ರನನ್ನು (೫) (ರುದ್ರನು ಬ್ರಹ್ಮನ ತೊಡೆಯಲ್ಲಿದ್ದಾನೆಂಬುವಲ್ಲಿ

ಪ್ರಮಾಣವನ್ನು ಹೇಳುತ್ತಾರೆ—) ಚತುರ್ಮುಖಬ್ರಹ್ಮನು ಶ್ರೀವಿಷ್ಣುವನ್ನು ಆಶ್ರಯಿಸಿಕೊಂಡಿದ್ದಾನೆ. ಆ ಬ್ರಹ್ಮನ ತೊಡೆಯಲ್ಲಿ ರುದ್ರನು ಆಶ್ರಯಿಸಿಕೊಂಡಿದ್ದಾನೆ. ರುದ್ರನ ಅಂಗವಿಶೇಷಗಳಲ್ಲಿ ಎಲ್ಲಾ ದೇವತೆಗಳು ಆಶ್ರಯಿಸಿಕೊಂಡಿರುತ್ತಾರೆ, ಎಂದು ಪಾದ್ಮಪುರಾಣದಲ್ಲಿ ಹೇಳಿದೆ. ॥ ೧೧ ॥ ॥ ೧೫ ॥

ಗೀ॥ ಅನೇಕಬಾಹೂದರವಕ್ತ್ರನೇತ್ರಂ
ಪಶ್ಯಾಮಿ ತ್ವಾಂ ಸರ್ವತೋಽನಂತರೂಪಂ ।
ನಾಂತಂ ನ ಮಧ್ಯಂ ನ ಪುನಸ್ತವಾದಿಂ
ಪಶ್ಯಾಮಿ ವಿಶ್ವೇಶ್ವರ ವಿಶ್ವರೂಪ ॥ ೧೬ ॥

ಅ ॥ ವಿಶ್ವೇಶ್ವರ = ಸಮಸ್ತ ಜಗತ್ತಿಗೆ ಸ್ವಾಮಿಯಾದ ಶ್ರೀಕೃಷ್ಣನೇ, ಅನೇಕಬಾಹೂದರವಕ್ತ್ರನೇತ್ರಂ = ಅನಂತಗಳಾದ ತೋಳುಗಳೂ ಹೊಟ್ಟೆಗಳೂ ಮುಖಗಳೂ ಕಣ್ಣುಗಳೂ ಉಳ್ಳ ಸರ್ವತಃ = ಎಲ್ಲಾದೇಶಗಳಲ್ಲಿಯೂ, ಅನಂತರೂಪಂ = ಅಪರಿಮಿತಗಳಾದ ರೂಪಗಳುಳ್ಳ, ತ್ವಾಂ = ನಿನ್ನನ್ನು ಪಶ್ಯಾಮಿ = ನೋಡುತ್ತೇನೆ. ವಿಶ್ವರೂಪ = ಸರ್ವತ್ರ ವ್ಯಾಪ್ತವಾದ ರೂಪವುಳ್ಳ ಶ್ರೀಕೃಷ್ಣನೇ, ತವ = ನಿನಗೆ, ಆದಿಂ = ದೇಶದಿಂದ ಆದಿ (ಉತ್ಪತ್ತಿ)ಯನ್ನು (ಅಪರಿಚ್ಛಿನ್ನನನ್ನಾಗಿ) ನ ಪಶ್ಯಾಮಿ = ನೋಡುವುದಿಲ್ಲ. ಮಧ್ಯಂ = ಮಧ್ಯವನ್ನು, ನ = ನೋಡುವುದಿಲ್ಲ ಪುನಃ = ತಿರುಗಿ, ಅಂತಂ = ಅವಸಾನವನ್ನು, ನ = ನೋಡುವುದಿಲ್ಲ ॥ ೧೬ ॥

ಪೀ—ಅನೇಕಬಾಹೂದರವಕ್ತ್ರನೇತ್ರಂ ಇತ್ಯಾದಿಗಳಲ್ಲಿದ್ದ ಅನೇಕ ಶಬ್ದದ ಅರ್ಥವನ್ನು ಹೇಳುತ್ತಾರೆ—

ಭಾ ॥ (೧) ಅನೇಕಶಬ್ದೋಽನಂತವಾಚೀ । ಅನಂತಬಾಹುಮಿತಿ ಚ ವಕ್ಷ್ಯತಿ ॥ (೨) ಸರ್ವತಃ ಪಾಣಿಪಾದಂ ತದಿತ್ಯಾದಿ ಚ ॥ (೩) ವಿಶ್ವತಶ್ಚಕ್ಷುರುತ ವಿಶ್ವತೋಮುಖೋ ವಿಶ್ವತೋ ಬಾಹುರುತ ವಿಶ್ವತಸ್ಪಾತ್ । ಸಂಬಾಹುಭ್ಯಾಂ ಧಮತಿ ಸಂಪತತ್ರೈರ್ದ್ಯಾವಾಭೂಮೀ ಜನಯನ್ದೇವ ಏಕ ಇತ್ಯೃಗ್ವೇದೇ ॥ ವಿಶ್ವತಶ್ಚಕ್ಷುರುತ ವಿಶ್ವತೋಮುಖೋ ವಿಶ್ವತೋ ಹಸ್ತ ಉತ ವಿಶ್ವತಸ್ಪಾತ್ ॥ ಸಂಬಾಹುಭ್ಯಾಂ ನಮತಿ ಸಂಪತತ್ರೈರ್ದ್ಯಾವಾಪೃಥಿವೀ ಜನಯನ್ದೇವ ಏಕ ಇತಿ ಯಜುರ್ವೇದೇ । ವಿಶ್ವಶಬ್ದಶ್ಚಾನಂತವಾಚೀ । ಸರ್ವಂ ಸಮಸ್ತಂ ವಿಶ್ವಂ ಚ ಅನಂತಂ ಪೂರ್ಣಮೇವ ಚೇತ್ಯಭಿಧಾನಾತ್ ॥ ೧ ॥

ಅ ॥ (೧) ಅನೇಕಶಬ್ದಕ್ಕೆ ಅನಂತವೆಂದರ್ಥವು (ಏಕೆಂದರೆ—) ೧೯ನೇ ಶ್ಲೋಕದಲ್ಲಿ ಅನಂತ ಬಾಹುಂ = ಅನಂತಬಾಹುಗಳುಳ್ಳವನು (ಎಂದು ಹೇಳಿದ್ದಾರೆ-) (**ಸರ್ವತಃ ಪಾಣಿಪಾದಾದಿರ್ಯತಃ ಪಾಣ್ಯಾದಿಶಕ್ತಿಮಾನ್ । ಕೇಶಾದಿಷ್ವಪಿ ಸರ್ವತ್ರ ಕೃಷ್ಣಕೇಶೋ ಹಿ ಯಾದವಃ । ಅಣೋರಣುತರೈಃ ರೂಪೈಃ ಪಾಣಿಪಾದಾದಿಸಂಯುತೈಃ । ಸರ್ವತ್ರ ಸಂಸ್ಥಿತತ್ವಾದ್ವಾ ಸರ್ವತಃ ಪಾಣಿಪಾದವಾನ್** ಇತ್ಯಾದಿ ಪ್ರಮಾಣಪ್ರಕಾರ ಕೇಶ ಮೊದಲಾದ ಎಲ್ಲಾ ಅವಯವಗಳಲ್ಲಿಯೂ ಹಸ್ತ ಪಾದಾದಿಗಳ ಶಕ್ತಿಯುಳ್ಳವನಾದುದರಿಂದ) ಎಲ್ಲಾ ಅವಯವಗಳಲ್ಲಿಯೂ ಪಾಣಿ ಪಾದ ಮೊದಲಾದ ಅವಯವಗಳುಳ್ಳವನು, ಇತ್ಯಾದಿ ಪ್ರಮೇಯವನ್ನು ಮುಂದಕ್ಕೆ ಹೇಳುವರು (ಇದರಿಂದ ಶ್ರೀಹರಿಗೆ ಅನಂತ ಪಾಣಿ ಪಾದಾದಿಗಳಿವೆ ಎಂದು ಸಿದ್ಧಿಸುತ್ತದೆ) (೨) ಅನಂತ ಕಣ್ಣುಗಳುಳ್ಳವನು, ಮತ್ತು ಅನಂತ ಮುಖಗಳು

ಳ್ಳವನು, ಅನಂತ ತೋಳುಗಳುಳ್ಳವನು, ಮತ್ತು ಅನಂತ ಪಾದಗಳುಳ್ಳವನು, ಸರ್ವೋತ್ತಮನಾದ ಶ್ರೀಮನ್ನಾರಾಯಣನು, ಪ್ರಧಾನಗಳಾದ ಎರಡು ತೋಳುಗಳಿಂದ ಗಂಗಳಿಗೆ ಸದೃಶಗಳಾದ ಬೇರೆ ತೋಳುಗಳಿಂದ ಸ್ವರ್ಗಭೂಮ್ಯಾದಿಗಳನ್ನು ಸೃಷ್ಟಿಮಾಡಿದವನಾಗಿ ಆ ಸೃಷ್ಟಿಗಾಗಿ ಅಗ್ನಿ ಮೊದಲಾದ ಪಂಚಭೂತಗಳನ್ನು ಕೂಡಿಸುತ್ತಾನೆ (ತ್ರಿವೃತ್ಕರಣಮಾಡುತ್ತಾನೆ) (ಪೃಥಿವ್ಯಪ್ತೇಜಸ್ಸುಗಳನ್ನು ಒಟ್ಟು ಸೇರಿಸುತ್ತಾನೆ.) ಹೀಗೆ ಋಗ್ವೇದಖಿಲಗಳಲ್ಲಿ ಹೇಳಿದೆ (ಇದೇ ಅರ್ಥವನ್ನು ಯಜುರ್ವೇದದಲ್ಲಿಯೂ ಹೇಳಿದ್ದಾರೆ) (೪) ಅನಂತಕಣ್ಣುಗಳುಳ್ಳವನು,... ಅನಂತ ಕೈಗಳುಳ್ಳವನೂ . ..ಸಂನಮತಿ=ತ್ರಿವೃತ್ಕರಣಮಾಡುತ್ತಾನೆ, ಎಂದು ಯಜುರ್ವೇದದಲ್ಲಿಯೂ ಇದೆ (೫) (ಅನೇಕ ಶಬ್ದಕ್ಕೆ ಅನಂತವೆಂಬುವ ಅರ್ಥವಿದೆ, ಎಂಬುವ ವಿಷಯದಲ್ಲಿ ಈ ಮಂತ್ರಗಳ ಉದಾಹರಣೆಯು ಹೇಗೆ ಕೂಡುತ್ತದೆಂದರೆ—) ಈ ಶ್ರುತಿಯಲ್ಲಿದ್ದ ವಿಶ್ವಶಬ್ದವೂ ಅನಂತವೆಂಬುವ ಅರ್ಥವನ್ನೇ ಹೇಳುತ್ತದೆ ಸರ್ವ, ಸಮಸ್ತ, ವಿಶ್ವ, ಅನಂತ, ಪೂರ್ಣ, ಇವು ಪರ್ಯಾಯಪದಗಳೆಂದು ಅಭಿಧಾನವಿದೆ ॥ ೧ ॥

ಪೀ—ಶ್ರೀಪರಮಾತ್ಮನಿಗೆ ಅನಂತ ತೋಳು ಮೊದಲಾದುವುಗಳು ಇವೆ, ಎಂಬುವಲ್ಲಿ ಸ್ಪಷ್ಟ ಶ್ರುತಿಯನ್ನು ಹೇಳುತ್ತಾರೆ—

ಭಾ ॥ (೧) ಅನಂತಪಾದಂ ತಮನಂತಬಾಹುಮನಂತವಕ್ತ್ರಂ ಪುರುಷಂ ರೂಪಮೇಕಮಿತಿ ಬಾಭ್ರವ್ಯಶಾಖಾಯಾಂ ॥ (೨) ಮಹತ್ಪಾದ್ಯುಕ್ತಿಸ್ತು ತದಾತ್ಮಕತ್ವೇನಾಪಿ ಭವತಿ ॥ (೩) ಅನ್ಯಥಾऽನಾದಿ ಮತ್ಪರಂ ಬ್ರಹ್ಮೇತ್ಯಾದ್ಯಯುಕ್ತಂ ಸ್ಯಾತ್ ॥ (೪) ಏಕತ್ರಾನಂತಾನ್ಯಸ್ಯ ರೂಪಾಣೀತ್ಯನಂತರೂಪಃ । ಅನ್ಯತ್ರ ತ್ವಪರಿಮಾಣ ಇತಿ ॥ (೫) ಉಕ್ತಂ ಹ್ಯುಭಯಮಪಿ । ಪರಾತ್ಪರಂ ಯನ್ಮಹತೋ ಮಹಾಂತಂ ಯದೇಕಮವ್ಯಕ್ತಮನಂತರೂಪಮಿತಿ ಯಜುರ್ವೇದೇ ॥ ೨ ॥

ಅ ॥ (೧) ಅನಂತ ತೋಳುಗಳುಳ್ಳವನು, ಅನಂತ ಪಾದಗಳುಳ್ಳವನು, ಅನಂತ ರೂಪಗಳುಳ್ಳವನು, ಅನಂತ ಮುಖಗಳುಳ್ಳವನು ಸರ್ವೋತ್ತಮನು ಎಂದು ಬಾಭ್ರವ್ಯಶಾಖೆಯಲ್ಲಿ ಹೇಳಿದೆ (೨) (ಶ್ರೀಇತರ ಮಾತ್ಮನಿಗೆ ಅನಂತ ಬಾಹ್ವಾದಿಗಳು ಇದ್ದರೆ ಆಗ ಪರಮ ಮಹತ್ಪರಿಮಾಣವು ಇರಬೇಕಾಗುವುದು ಅದು ಯುಕ್ತವಲ್ಲ ಏಕೆಂದರೆ **ರೂಪಂ ಮಹತ್ತೇ** ಎಂದು ಮಹತ್ತ್ವಮಾತ್ರವನ್ನು ಹೇಳಿದ್ದಾರೆ ಹಾಗೆಯೇ **ಬಹುವಕ್ತ್ರನೇತ್ರಂ** ಎಂದು ಬಹುತ್ವಮಾತ್ರ ಹೇಳಿದ್ದಾರೆ ಆದಕಾರಣ ಅನಂತ ಬಾಹ್ವಾದಿಗಳು ಇವೆ, ಎಂದು ಹೇಳಿದ್ದು ಕೂಡಲಾರದು. ಎಂದರೆ—) ಭಗವದ್ರೂಪಗಳಿಗೆ ಮಹತ್ತ್ವಮಾತ್ರ ಹೇಳಿದ್ದು ಆತನ ಅವಯವಗಳಿಗೆ ಬಹುತ್ವ ಮಾತ್ರ ಹೇಳಿದ್ದು ಎರಡಾಗಿದ್ದರೆ ವಿರೋಧವು ಬರುತ್ತಿತ್ತು ಹಾಗೆ ಹೇಳುವುದಿಲ್ಲ ಮತ್ತೆ ಮಹತ್ವಾದಿಗಳನ್ನು ಹೇಳಿದ್ದು ಪರಮ ಮಹತ್ವ ವಿದ್ದುದರಿಂದಲೂ, ಬಹುತ್ವ ಹೇಳಿದ್ದು ಅನಂತಾನಂತ ಅವಯವಗಳಿದ್ದುದರಿಂದಲೂ, ಕೂಡುತ್ತದೆ (ಪರಮ ಮಹತ್ತಿನಲ್ಲಿ ಮಹತ್ತ್ವವೂ ಅನಂತದಲ್ಲಿ ಬಹುತ್ವವೂ ಸೇರುತ್ತದೆ) (೩) (ಪರಮ ಮಹತ್ತ್ವಾದಿಗಳನ್ನು ಇಟ್ಟುಕೊಳ್ಳದೆ ಅವಾಂತರ ಮಹತ್ತ್ವಾದಿಗಳನ್ನು ಇಟ್ಟುಕೊಂಡರೆ ದೋಷವೇನೆಂದರೆ—) ಶ್ರೀಪರಮಾತ್ಮನಿಗೆ ಪರಮ ಮಹತ್ವಾದಿಗಳನ್ನು ಹೇಳದಿದ್ದರೆ **ಅನಾದಿಮತ್ಪರಂ ಬ್ರಹ್ಮ** ಎಂಬುವಲ್ಲಿ ಪರಮ ಮಹತ್ತ್ವವನ್ನು ಹೇಳಿದ್ದು, ಅನಂತಾವಯವಗಳಿವೆ, ಎಂದು ಹೇಳಿದ್ದು ಅಯುಕ್ತವಾಗುವುದು (೪) (೫) (**ಪಶ್ಯಾಮಿ ತ್ವಾಂ ಸರ್ವತೋऽನಂತರೂಪಂ** (ಶ್ಲೋ ೧೬) **ತ್ವಯಾ ತತಂ ವಿಶ್ವಮನಂತರೂಪ** (೩೮) ಈ ಎರಡು ಶ್ಲೋಕಗಳಲ್ಲಿದ್ದ ಎರಡು **ಅನಂತ** ಶಬ್ದಗಳಿಗೆ, ಶ್ರೀಪರಮಾತ್ಮನಿಗೆ ಮಾಹಾತ್ಮ್ಯಾತಿಶಯವು ಸಿದ್ಧಿಸುವುದಕ್ಕಾಗಿ ಬೇರೆ ಬೇರೆ

ಅರ್ಥಗಳನ್ನು ಹೇಳುತ್ತಾರೆ—) ಒಂದು ಕಡೆ ಇದ್ದ ಅನಂತ ಶಬ್ದಕ್ಕೆ ಶ್ರೀಹರಿಗೆ ಅನಂತ ರೂಪಗಳು ಇದ್ದುದರಿಂದ ಆತನು ಅನಂತರೂಪನು ಎಂದರ್ಥವು. ಮತ್ತೊಂದುಗಡೆ ಇದ್ದು ಅನಂತ ಶಬ್ದಕ್ಕೆ ಅಪರಿಚ್ಛಿನ್ನ ನೆಂದರ್ಥವು. (ಅಂದರೆ ಸರ್ವ ದೇಶಗಳಲ್ಲಿ ವ್ಯಾಪಿಸಿಕೊಂಡಿರುವವನು, ಸರ್ವಕಾಲಗಳಲ್ಲಿರುವವನು, ಸರ್ವಗುಣಪರಿಪೂರ್ಣನು ಎಂದರ್ಥವು) (೫) ಅನಂತಶಬ್ದಕ್ಕೆ ಈ ಎರಡು ಅರ್ಥವೂ ಪ್ರಾಮಾಣಿಕವೆಂದು ತಿಳಿಸುವುದಕ್ಕಾಗಿ ಪ್ರಮಾಣವನ್ನು ಹೇಳುತ್ತಾರೆ. ಬ್ರಹ್ಮನು ರುದ್ರಾದಿಗಳಿಂದುತ್ತಮರಾದ ಬ್ರಹ್ಮಾದಿಗಳಿಂದಲೂ ಉತ್ತಮನು ಮಹತಃ ಮಹಾಂತಂ=ಅಪರಿಚ್ಛಿನ್ನ ಪರಿಮಾಣವುಳ್ಳ ರೂಪವುಳ್ಳವನು ಏಕಂ=ಸರ್ವ ವಸ್ತುಗಳಿಂದ ಭಿನ್ನನಾದಾಗ್ಯೂ, ಅನಂತರೂಪಂ=ಅನಂತ ಸಂಖ್ಯೆಗಳುಳ್ಳ ರೂಪಗಳುಳ್ಳವನು, ಎಂದು ಯಜುರ್ವೇದದಲ್ಲಿದೆ (ಇದು ಶ್ರೀಪರಮಾತ್ಮನಿಗೆ ಅಪರಿಚ್ಛಿನ್ನ ಪರಿಮಾಣವದೆ, ಎಂಬುವಲ್ಲಿಯೂ, ಅನಂತರೂಪಗಳವೆ ಎಂಬುವಲ್ಲಿಯೂ ಪ್ರಮಾಣವು) ॥ ೨ ॥

ಹೀ—ಹಾಗಾದರೆ **ಮಹತೋ ಮಹಾಂತಂ** ಎಂದು ಮಹತ್ತತ್ತ್ವದಿಂದ ಮಹತ್ತ್ವವೇ ಹೇಳಲ್ಪಡುತ್ತದೆ ಅನಂತತ್ವವು ಹೇಳಲ್ಪಡುವುದಿಲ್ಲ ಅಂತೂ **ಯದೇಕಮವ್ಯಕ್ತಂ** ಎಂದು ಅವ್ಯಕ್ತವನ್ನು ವ್ಯಾಪಿಸಿಕೊಂಡಿದ್ದಾನೆಂದು ಹೇಳಿದ್ರಿಂದ ಅವ್ಯಕ್ತಸಾಮ್ಯವೇ ಸಿದ್ಧವಾಗುತ್ತದೆ, ಎಂದರೆ—

ಭಾ ॥ (೧) ಅವ್ಯಕ್ತಸ್ಯಾನಂತತ್ವಾದೇವ ಮಹತೋ ಮಹತ್ತ್ವೇಽಪರಿಮೇಯತ್ವಂ ಸಿದ್ಧ್ಯತಿ ॥ (೨) ಮಹಾಂತಂ ಚ ಸಮಾವೃತ್ಯ ಪ್ರಧಾನಂ ಸಮವಸ್ಥಿತಂ। ಅನಂತಸ್ಯ ನ ತಸ್ಯಾಂತಃ ಸಂಖ್ಯಾನಂ ಚಾಪಿ ವಿದ್ಯತ ಇತ್ಯಾದಿತ್ಯಪುರಾಣೇ ॥ (೩) ತಾನಿ ಚೈಕೈಕಾನಿ ರೂಪಾಣ್ಯನಂತಾನಿ ಚೈಕತ್ರ ಭವಂತಿ ॥ (೪) ಅಸಂಖ್ಯಾತಾ ಜ್ಞಾನಕಾಸ್ತಸ್ಯ ದೇಹಾಃ ಸರ್ವೇ ಪರೀಮಾಣವಿವರ್ಜಿತಾಶ್ಚೇತ್ಯೃಗ್ವೇದಖಿಲೇಷು ॥ ೩ ॥

ಅ ॥ (೧) ಅವ್ಯಕ್ತತತ್ವಕ್ಕೆ ಅಪರಿಚ್ಛಿನ್ನ ಪರಿಮಾಣವಿದ್ದುದರಿಂದಲೇ ಮಹತ್ತತ್ತ್ವದಿಂದ ಮಹತ್ತ್ವ ಹೇಳಿದರೂ ಅವ್ಯಕ್ತತತ್ವವನ್ನು ವ್ಯಾಪಿಸಿಕೊಂಡಿದ್ದಾನೆಂದು ಹೇಳಿದರೂ, ಶ್ರೀಹರಿಗೆ ಅಪರಿಮಿತ ಪರಿಮಾಣವು ಸಿದ್ಧವಾಗುತ್ತದೆ. (೨) (ಅವ್ಯಕ್ತತತ್ವಕ್ಕೆ ಅಪರಿಚ್ಛಿನ್ನ ಪರಿಮಾಣವಿದೆ, ಎಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ಮಹತ್ತತ್ತ್ವವನ್ನು ವ್ಯಾಪಿಸಿಕೊಂಡು ಪ್ರಧಾನವು ಇರುತ್ತದೆ ಅಪರಿಚ್ಛಿನ್ನನಾದ ವಿಷ್ಣುವಿಗೆ ಪ್ರತಿಮಾಸ್ಥಾನೀಯವಾದ ಜಡಪ್ರಕೃತಿಗೆ ಪರಿಮಿತಿಯೂ ಅದರ ಕಾರ್ಯದ ಸಂಖ್ಯಾಪರಿಮಿತಿಯೂ ಇಲ್ಲ. (ಅವ್ಯಾಕೃತಾಕಾಶದಂತೆಯೇ ಮೂಲ ಪ್ರಕೃತಿಗೂ ಪರಮ ಮಹತ್ತ್ವವು ಇದೆ ಎಂದು ಸೂಚಿತವಾಯಿತು.) ಎಂದು ಆದಿತ್ಯಪುರಾಣದಲ್ಲಿದೆ (೩) (ರೀತ್ಯಂತರದಿಂದ **ಅನಂತರೂಪ** ಎಂಬುವ ಎರಡು ಕಡೆ ಇರುವ ಶಬ್ದಗಳಿಗೆ ಬೇರೆ ಬೇರೆ ಅರ್ಥಗಳನ್ನು ಹೇಳುತ್ತಾರೆ) (**ಅನಂತರೂಪ** ಎಂದು ಒಂದು ಕಡೆ ಇದ್ದ ಅನಂತ ಶಬ್ದಕ್ಕೆ ಅನಂತಸಂಖ್ಯಾರೂಪವಾದ ಅರ್ಥವು ಸಿದ್ಧವಾಗುತ್ತಿರಲು) ಇನ್ನೊಂದು ಕಡೆ ಇರುವ ಅನಂತರೂಪಶಬ್ದದಲ್ಲಿ ಆ ಅನಂತ ಶಬ್ದಕ್ಕೆ ಅಪರಿಚ್ಛಿನ್ನ ಪರಿಮಾಣವುಳ್ಳವನು, ಎಂಬುವ ಅರ್ಥವು ಸಿದ್ಧವಾಗುತ್ತದೆ. (೪) (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ—)।ಶ್ರೀಹರಿಯ ದೇಹಗಳು ಜ್ಞಾನಾನಂದಾತ್ಮಕಗಳು, ಸಂಖ್ಯೆಯಿಲ್ಲದವುಗಳು, ಪರಿಮಾಣವಿಲ್ಲದವುಗಳು, ಎಂದು ಋಗ್ವೇದಖಿಲಗಳಲ್ಲಿ ಹೇಳಿದೆ ॥ ೩ ॥

ಭಾ ॥ (೧) ಯೋವಾನ್ವಾ ಅಯಮಾಕಾಶಸ್ತಾವಾನೇಷೋಽಂತರ್ಹೃದಯ ಆಕಾಶಃ ಉಭೇ ಅಸ್ಮಿನ್ ದ್ಯಾವಾಪೃಥಿವೀ ಅಂತರೇವ ಸಮಾಹಿತೇ । ಉಭಾವಗ್ನಿಶ್ಚ ವಾಯುಶ್ಚ

ಸೂರ್ಯಾಚಂದ್ರಮಸಾವುಭಾವಿತಿ ॥ (೨) ಕೃಷ್ಣಸ್ಯ ಗರ್ಭಜಗತೋಽತಿಭರಾವಸನ್ನ ಪಾರ್ಷ್ಣಿಪ್ರಹಾರಪರಿರುಗ್ಣಫಣಾತಪತ್ರಮಿತಿ ಚ ಭಾಗವತೇ ॥ (೩) ನ ಚೈತದಯುಕ್ತಂ । ಅಚಿಂತ್ಯಶಕ್ತಿತ್ವಾದೀಶ್ವರಸ್ಯ ॥ (೪) ಅಚಿಂತ್ಯಾಃ ಖಲು ಯೇ ಭಾವಾ ನ ತಾಂಸ್ತರ್ಕೇಣ ಯೋಜಯೇದಿತಿ ಶ್ರೀವಿಷ್ಣುಪುರಾಣೇ ॥ ೪ ॥

ಅ ॥ (೧) ಹೊರಗೆ ವ್ಯಾಪಿಸಿಕೊಂಡಿರುವ ಶ್ರೀಪರಮಾತ್ಮನು ಎಷ್ಟು ಪರಿಮಾಣವುಳ್ಳವನೋ, ಹೃದಯದೊಳಗೆ ಇರುವ ಶ್ರೀಪರಮಾತ್ಮನೂ ಅಷ್ಟು ಪರಿಮಾಣವುಳ್ಳವನು ಈ ಶ್ರೀಹರಿಯ ಒಳಗೆ ಸ್ವರ್ಗ ಭೂಮಿಗಳು ಆಶ್ರಿತಗಳಾಗಿವೆ ಅಗ್ನಿ ವಾಯುಗಳಿಬ್ಬರೂ ಸೂರ್ಯಚಂದ್ರರಿಬ್ಬರೂ ಶ್ರೀಹರಿಯನ್ನು ಆಶ್ರಯಿಸಿರುತ್ತಾರೆ (೨) ೧೪ ಲೋಕಗಳನ್ನು ಹೊಟ್ಟೆಯೊಳಗೆ ಧರಿಸಿಕೊಂಡಿರುವ ಶ್ರೀಕೃಷ್ಣನ ಅತಿ ಭಾರದಿಂದ ಬಗ್ಗಿಹೋದ ಕಾಲು ಹರಡಿನ ಕೆಳಭಾಗದ ಹೊಡೆತದಿಂದ ಖಿನ್ನಗಳಾದ ಛತ್ರಗಳಂತಿರುವ ಫಣಗಳುಳ್ಳ (ಅಹಿರಾಜನನ್ನು ನೋಡಿ ಅವನ ಹೆಂಡಂದಿಯರು ಸಮಾಪಿಸಿದರು,) ಎಂದು ಭಾಗವತದಲ್ಲಿದೆ (೧೪ ಲೋಕಗಳನ್ನು ಗರ್ಭದಲ್ಲಿಟ್ಟುಕೊಂಡದ್ದರಿಂದ ಶ್ರೀಕೃಷ್ಣನಿಗೆ ಅಪರಿಚ್ಛಿನ್ನ ಪರಿಮಾಣವಿದೆ, ಎಂದು ತಿಳಿಯುತ್ತದೆ) (೩) ಶ್ರೀಹರಿಗೆ ಅಚಿಂತ್ಯವಾದ ಅಘಟಿತಘಟನಾರೂಪ ಶಕ್ತಿಯಿದ್ದುದರಿಂದ ಹಿಂದೆ ಹೇಳಿದ್ದು ಯಾವುದೂ ಕೂಡ ಅಸಂಭಾವಿತವು ಸರ್ವಥಾ ಆಗಲಾರದು (೪) (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ-) ಸರ್ವಥಾ ಮನಸ್ಸಿನಿಂದ ಆಲೋಚಿಸಲಿಕ್ಕೂ ಅಶಕ್ಯಗಳಾದ ಯಾವ ಭಗವದ್ಧರ್ಮವಿಶೇಷಗಳು ಇದ್ದಾವೋ, ಅವುಗಳ ವಿಷಯದಲ್ಲಿ ಯುಕ್ತಿಯನ್ನು ಸಾಧಕವೆಂದಾಗಲೀ ಬಾಧಕವೆಂದಾಗಲೀ ಉಪಯೋಗಿಸಬಾರದು, ಎಂದು ಶ್ರೀವಿಷ್ಣುಪುರಾಣದಲ್ಲಿದೆ ॥ ೪ ॥

ಹೀ—ಇದೇ ವಿಷಯದಲ್ಲಿ ಪ್ರಮಾಣಾಂತರವನ್ನು ಹೇಳುತ್ತಾರೆ—

ಭಾ ॥ (೧) ನೈಷಾ ತರ್ಕೇಣ ಮತಿರಾಪನೇಯೇತಿ ಚ ಶ್ರುತಿಃ ॥ (೨) ಅತಿಪ್ರಸಂಗಸ್ತು ಮಹಾತಾತ್ಪರ್ಯವಶಾದ್ಯುಕ್ತಬಲಾಚ್ಚಾಪನೇಯಃ ॥ (೩) ನ ಹಿ ಘಟವತ್ಕಶ್ಚಿದಪಿ ಪದಾರ್ಥೋ ನ ದೃಷ್ಟ ಇತ್ಯೇತಾವತಾ ಪ್ರಮಾಣದೃಷ್ಟಃ ಸ ನಿರಾಕ್ರಿಯತೇ ॥ ೫ ॥

ಅ ॥ (೧) ಈ ಪರಬ್ರಹ್ಮವಿಷಯಕವಾದ ಬುದ್ಧಿಯನ್ನು ಯುಕ್ತಿಯಿಂದ ಹೊಂದಲಿಕ್ಕೂ ನಿರಾಕರಿಸಲಿಕ್ಕೂ ಸಾಧ್ಯವಿಲ್ಲ, ಎಂದು ಶ್ರುತಿಯು (೨) (ಶ್ರೀಹರಿಯು ವಿರುದ್ಧಗಳಾದ ಅಣುತ್ವ ಮಹತ್ತ್ವ ಪರಿಮಾಣಗಳಿಂದ ಕೂಡಿದವನೆಂದಾದರೆ ಆಗ ಶ್ರೀಹರಿಯು ನಿರ್ದುಃಖನು, ಮತ್ತು ದುಃಖವುಳ್ಳವನು ಆಗಲಿ, ಎಂದು ಅತಿಪ್ರಸಂಗವು ಬರುವುದೆಂದರೆ ಲೋಕಪ್ರಸಿದ್ಧ ಪದಾರ್ಥಗಳಿಗೂ ಶ್ರೀಪರಮಾತ್ಮನಿಗೂ ವಿಶೇಷವಿಲ್ಲವೆಂದು ಇಟ್ಟುಕೊಂಡು ಹೇಳಿದ ಈ ಅತಿಪ್ರಸಂಗವನ್ನು, ಮಹಾತಾತ್ಪರ್ಯದಿಂದಲೂ (ಅಂದರೆ ಶ್ರೀಪರಮಾತ್ಮನು ನಿರ್ದೋಷ ಅನಂತಗುಣ ಪರಿಪೂರ್ಣನು ಎಂಬುವಲ್ಲಿಯೇ ಶ್ರುತಿಗಳಿಗೆ ಮಹಾ ತಾತ್ಪರ್ಯವಿರುವುದರಿಂದಲೂ, ಶ್ರೀಹರಿಗೆ ದುಃಖಾದಿಗಳಿವೆ, ಎಂಬುವುದಕ್ಕೆ ತಾತ್ಪರ್ಯವೇ ಇಲ್ಲದಿರುವುದರಿಂದಲೂ, ಅಣುತ್ವ ಮಹತ್ವಗಳೆಂಬ ಪರಿಮಾಣಗಳು ಎರಡು ಇವೆ ಎಂಬುವುದಕ್ಕೆ ಮಹಾ ತಾತ್ಪರ್ಯ ವಿರೋಧವಿಲ್ಲದಿರುವುದರಿಂದಲೂ ಶ್ರೀಹರಿಗೆ ದುಃಖಾದಿಗಳಿವೆ, ಎಂಬುವಲ್ಲಿ ಪ್ರಮಾಣವಿಲ್ಲದಿರುವುದರಿಂದಲೂ) ಅಣುತ್ವ ಮಹತ್ತ್ವಗಳಿವೆ ಎಂಬುವುದು, ಹಿಂದೆ ಹೇಳಿರುವ ಪ್ರಮಾಣ, ಮುಂದೆ ಹೇಳುವ ಪ್ರಮಾಣಗಳ ಬಲದಿಂದ ಸಿದ್ಧವಾಗುವ ಪ್ರಯುಕ್ತವೂ ನಿರಾಕರಿಸಬೇಕು (ಅಂದರೆ ಪ್ರಮಾಣಸಿದ್ಧವಾದ ಅರ್ಥದಲ್ಲಿ ಹಿಂದೆ ಹೇಳಿದ ಪ್ರಕಾರ ಕ್ಷುದ್ರವಾದ ಅತಿಪ್ರಸಂಗವನ್ನು ಹೇಳಿದರೆ ಅದು ಅತ್ಯಂತ ಅನಾದರ

ಣೀಯವೇ ಆಗುತ್ತದೆ, ಹೊರತು ಪ್ರಾಮಾಣಿಕಾರ್ಥ ಸಾಧನೆಗೆ ಅದು ಬಾಧಕವಾಗಲಾರದು. (೩) (ಮತ್ತು ಲೋಕದಲ್ಲಿ ಒಂದೇ ವಸ್ತುವಿನಲ್ಲಿ ಅಣುತ್ವ ಮಹತ್ತ್ವ ಮೊದಲಾದ ವಿರುದ್ಧ ಧರ್ಮಗಳು ಕಾಣದಿರುವುದರಿಂದ ಪರಮಾತ್ಮನಲ್ಲಿಯೂ ಅಣುತ್ವ ಮಹತ್ತ್ವಾದಿಗಳು ಕೂಡಲಾರವೆಂದರೆ—) ಲೋಕದಲ್ಲಿ ಮಡಿಕೆಯಂತೆ ಬಟ್ಟೆಯು ಮಡಿಕೆಯ ಆಕಾರವುಳ್ಳದ್ದಾಗಿ ತೋರದಿದ್ದ ಮಾತ್ರದಿಂದ ಮಡಿಕೆಯಲ್ಲಿ ಪ್ರತ್ಯಕ್ಷ ಪ್ರಮಾಣಸಿದ್ಧವಾದ ಮಡಿಕೆಯ ಆಕಾರವನ್ನು ಹೇಗೆ ನಿರಾಕರಿಸಲಿಕ್ಕೆ ಬರುವುದಿಲ್ಲವೋ, ಹಾಗೆಯೇ ಬೇರೆ ಕಡೆ ಪ್ರಮಾಣಸಿದ್ಧವಾಗದಿರುವ ಅಣುತ್ವ ಮಹತ್ತ್ವಾದಿ ಧರ್ಮಗಳು ಶ್ರೀಪರಮಾತ್ಮನಲ್ಲಿ **ಅಣೋರಣೀಯಾನ್ ಮಹತೋ ಮಹೀಯಾನ್** ಇತ್ಯಾದಿ ಶ್ರುತಿಗಳಿಂದ ಪ್ರಮಿತಗಳಾಗಿರುವುದರಿಂದ ಅವುಗಳನ್ನು ಸರ್ವಥಾ ನಿರಾಕರಿಸಲಿಕ್ಕೆ ಬರುವುದಿಲ್ಲ ॥ ೫ ॥

ಪೀ—ಹೀಗಾದರೆ ಪ್ರಾಣಾದಿಗಳ ವಿಷಯದಲ್ಲಿ **(1) ಪ್ರಾಣ ಏವಾಧಸ್ತಾತ್ ಪ್ರಾಣ ಉಪರಿಷ್ಟಾತ್,** (2) **ಅಣುನ್ಯೇತತ್ಸ್ಯಜ್ಜಾಯತೇ ಪ್ರಾಣೋ ವಾ ಅಣುಃ,** ಎಂದು ಅಣುತ್ವ ಮಹತ್ತ್ವಾದಿಗಳನ್ನು ಹೇಳುವ ವಾಕ್ಯಗಳಿಗೆ ವಿರೋಧ ಪರಿಹಾರಕ್ಕಾಗಿ **ಸವಾ ಏಷ ಪ್ರಾಣ ಅಣುರ್ಮಹಾನ್** ಎಂಬುವ ವಾಕ್ಯದಿಂದ ಪ್ರಾಮಾಣ್ಯವ್ಯವಸ್ಥೆಯನ್ನು ಮಾಡಿದ್ದು ಏಕೆಂದರೆ—

ಭಾ ॥ (೧) **ಕೇಷುಚಿತ್ಪದಾರ್ಥೇಷು ವಾಕ್ಯವ್ಯವಸ್ಥಾ ಅಚಿಂತ್ಯಶಕ್ತಿತ್ವಾಭಾವಾದಂಗೀಕ್ರಿಯತೇ ॥ (೨) ಗುಣಾಃ ಶ್ರುತಾಃ ಸುವಿರುದ್ಧಾಶ್ಚ ದೇವೇ ಸಂತ್ಯಶ್ರುತಾ ಅಪಿ ನೈವಾತ್ರ ಶಂಕಾ । ಚಿಂತ್ಯಾ ಅಚಿಂತ್ಯಾಶ್ಚ ತಥೈವ ದೋಷಾಃ ಶ್ರುತಾಶ್ಚ ನಾಜ್ಞೈರ್ಹಿ ತಥಾ ಪ್ರತೀತಾಃ ॥ (೩) ಏವಂ ಪರೇಽನ್ಯತ್ರ ಶ್ರುತಾಶ್ರುತಾನಾಂ ಗುಣಾಗುಣಾನಾಂ ಚ ಕ್ರಮಾದ್ವ್ಯವಸ್ಥೇತಿ ಜಾಬಾಲಖಿಲಶ್ರುತೇಶ್ಚ ॥ (೪) ಉಪಚಾರತ್ವಪರಿಹಾರಾಯ ನ ಮಧ್ಯಮಿತಿ । ಅನ್ಯಥಾಽದ್ಯಂತಾಭಾವೇನೈವ ತತ್ಸಿದ್ಧೇಃ । ವಿಶ್ವರೂಪಃ ಪೂರ್ಣರೂಪಃ । ಸ ವಿಶ್ವರೂಪೋಽನೂನರೂಪೋ ಯತೋಽಯಂ ಸೋಽನಂತರೂಪೋ ನಹಿ ನಾಶೋಽಸ್ತಿ ತಸ್ಯೇತಿ ಶಾಂಡಿಲ್ಯಶಾಖಾಯಾಂ ॥ ೬ ॥** ॥ ೧೬ ॥

ಅ ॥ (೧) ಪ್ರಾಣ ಮೊದಲಾದ ಕೆಲವು ಪದಾರ್ಥಗಳಲ್ಲಿ **ಸ ವಾ ಏಷಃ ಪ್ರಾಣಃ ಅಣುರ್ಮಹಾನ್** ಎಂಬುವ ವಾಕ್ಯದಿಂದ ವ್ಯವಸ್ಥೆಯು (ಪ್ರಾಣಾದಿಗಳಿಗೆ ಶ್ರೀಪರಮಾತ್ಮನಂತೆ ಅಚಿಂತ್ಯ ಶಕ್ತಿಯಿಲ್ಲದಿರುವುದರಿಂದ ಅಂಗೀಕೃತವಾಗುತ್ತದೆ) (೨) (ಶ್ರೀಪರಮಾತ್ಮನಿಗೆ ಒಂದೇ ಕಾಲದಲ್ಲಿ ಅಣುತ್ವ ಮಹತ್ತ್ವಾದಿ ವಿರುದ್ಧಧರ್ಮಗಳಿವೆ, ಎಂಬುವ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ಶ್ರೀಪರಮಾತ್ಮನಲ್ಲಿ ವೇದಗಳಲ್ಲಿ ಹೇಳಲ್ಪಟ್ಟವುಗಳೂ, ಹೇಳಲ್ಪಡದಿದ್ದವುಗಳೂ ಶ್ರೀಹರಿಗೆ ಮಾತ್ರ ಪ್ರತ್ಯಕ್ಷಸಿದ್ಧಗಳಾದವುಗಳೂ, ಬೇರೆ ಕಡೆ ಕಾಣದಿರುವುದರಿಂದ ಲೋಕದೃಷ್ಟಿಯಿಂದ ವಿರುದ್ಧಗಳಾದವುಗಳೂ ವಸ್ತುತಃ ಅವಿರುದ್ಧಗಳೂ ರಮಾದಿಗಳಿಂದ ಧ್ಯಾನಿಸಲಿಕ್ಕೆ ಶಕ್ಯಗಳೂ ಸಂಪೂರ್ಣ ಧ್ಯಾನಿಸಲಿಕ್ಕೆ ಅಶಕ್ಯಗಳೂ ಆದ ಗುಣಗಳು ಇರುತ್ತವೆ ಈ ವಿಷಯದಲ್ಲಿ ಶಂಕಾವಾಡಕೂಡದು ಹಾಗೆಯೇ ಶ್ರೀಹರಿಗೆ ಗುಣಗಳಂತೆ ದೋಷಗಳು ವೇದಗಳಲ್ಲಿ ಹೇಳಿದವುಗಳಾಗಲೀ ಬೇರೆ ಪ್ರಮಾಣಗಳಿಂದ ಸಿದ್ಧಗಳಾದವುಗಳೂ ಯಾವುದೂ ಇಲ್ಲವೇ ಇಲ್ಲ (ಅಂದರೆ ಶ್ರೀಹರಿಗೆ ದೋಷಗಳನ್ನು ಯಾವ ಪ್ರಮಾಣಗಳಲ್ಲಿಯೂ ಹೇಳಲೇ ಇಲ್ಲ. ಆದರೆ ಮಿಥ್ಯಾಜ್ಞಾನಿಗಳಿಂದ ದೋಷಗಳು ಇವೆ, ಎಂದು ತಿಳಿಯಲ್ಪಟ್ಟಿವೆ. (ಅಂದರೆ ವೇದಗಳ ಸರಿಯಾದ ತಾತ್ಪರ್ಯವನ್ನು ತಿಳಿಯದಿರುವ ಮಿಥ್ಯಾಜ್ಞಾನಿಗಳು ಕೆಲವು ವಾಕ್ಯಗಳು ಶ್ರೀಹರಿಗೆ ದೋಷಗಳನ್ನು ಹೇಳುತ್ತವೆ, ಎಂದು ತಿಳಿಯುತ್ತಾರೆ) (೩) ಹೀಗೆ ಸರ್ವೋತ್ತಮನಾದ ಶ್ರೀಪರಮಾತ್ಮನಲ್ಲಿ ಸ್ಥಿತಿಯು (ಅಂದರೆ ಶ್ರೀಪರಮಾತ್ಮನಿಗೆ

ಅನಂತಾನಂತ ಗುಣಗಳು ಇವೆ ಯಾವ ದೋಷವೂ ಇಲ್ಲ, ಎಂದು ವ್ಯವಸ್ಥೆಯು) ಶ್ರೀಹರಿಯಿಂದ ಬೇರೆಯವರಲ್ಲಿ ವೇದಸಿದ್ಧಗಳಾದ ಹಾಗೆಯೇ ಪ್ರಮಾಣಾಂತರಸಿದ್ಧಗಳಾದ ಗುಣ ದೋಷಗಳ ವ್ಯವಸ್ಥೆಯು. (ಅದು ಕ್ರಮವಾಗಿ ಉತ್ತಮರಲ್ಲಿ ಗುಣಗಳು ಹೆಚ್ಚು, ದೋಷಗಳು ಕಡಿಮೆ, ಮಧ್ಯಮರಲ್ಲಿ ಗುಣ ದೋಷಗಳೆರಡು ಸಮವು ಅಧಮರಲ್ಲಿ ದೋಷಗಳು ಹೆಚ್ಚು ಗುಣಗಳು ಕಡಿಮೆ) ಹೀಗೆ ಶ್ರೀಪರ ಮಾತ್ಮನಿಗೆ ಸರ್ವದಾ ದೋಷವಿಲ್ಲವೆಂದು ಜಾಬಾಲಖಿಲ ಶ್ರುತಿಯಿಂದ ಸಿದ್ಧವಾಗುತ್ತದೆ (೪) (ಹಿಂದೆ ಹೇಳಿದ ಪ್ರಕಾರ ಶ್ರೀಪರಮಾತ್ಮನಲ್ಲಿ ಅಪರಿಚ್ಛಿನ್ನ ಪರಿಮಾಣಾದಿಗಳನ್ನು ಹೇಳಿದರೆ ಯಾವ ದೋಷವೂ ಇಲ್ಲದಿರುವುದರಿಂದ ಅಪರಿಚ್ಛಿನ್ನ ಪರಿಮಾಣವುಳ್ಳವನೆಂದು ಹೇಳಿದ್ದು ಔಪಚಾರಿಕವೆಂದು ಕಲ್ಪಿಸಕೂಡದು, ಎನ್ನುತ್ತಾರೆ—) **ನಾಂತಂ ನ ಪುನಸ್ತವಾದಿಂ ಪಶ್ಯಾಮಿ** ಎಂದು ಆದ್ಯಂತಗಳು ಇಲ್ಲವೆಂದು ಹೇಳಿದ್ದು ಔಪಚಾರಿಕವಲ್ಲವೆಂದು ತಿಳಿಸುವುದಕ್ಕಾಗಿ **ನ ಮಧ್ಯಂ** ಎಂದು ಹೇಳಿರುತ್ತಾರೆ) (ಮಧ್ಯಾವಸ್ಥೆಯನ್ನು ನಿರಾಕರಿಸುವುದಕ್ಕಾಗಿಯೇ ಹೇಳಿದ್ದೆಂದು ಏಕೆ ಆಗಲಾರದೆಂದರೆ—) ಔಪಚಾರಕತ್ವವನ್ನು ಪರಿಹರಿಸುವುದಕ್ಕಾಗಿ ಹೇಳಿದ್ದೆಂದು ಆಗದೆ ಹೋದರೆ ಆದ್ಯಂತಗಳು ಇಲ್ಲ ಎಂದು ಹೇಳಿದ್ರಿಂದಲೇ (ಅಂದರೆ ಪರಿಚ್ಛಿನ್ನ ಪರಿಮಾಣವಿಲ್ಲವೆಂದು ಹೇಳಿದ್ರಿಂದಲೇ) ಮಧ್ಯಾವಸ್ಥೆಯೂ ಇಲ್ಲವೆಂದು ಸಿದ್ಧವಾಗುವುದರಿಂದ (**ನ ಮಧ್ಯಂ** ಎಂದು ಹೇಳಿದ್ದು ವ್ಯರ್ಥವಾಗುವುದು) (೫) (**ವಿಶ್ವರೂಪಃ** ಎಂಬುವುದಕ್ಕೆ ಮಹದಾದಿಗಳೇ ಸ್ವರೂಪವಾಗಿವುಳ್ಳವನು, ಎಂಬುವ ಪ್ರತೀತಿಯನ್ನು ಪ್ರಮಾಣಕೊಟ್ಟು ನಿರಾಕರಿಸುತ್ತಾರೆ-) ವಿಶ್ವರೂಪಃ = ಸರ್ವ ಗುಣಪರಿಪೂರ್ಣವಾದ ಸ್ವರೂಪವುಳ್ಳವನು, ಆ ಶ್ರೀಹರಿಯು ವಿಶ್ವರೂಪನು, ಅಂದರೆ ಅಪರಿಪೂರ್ಣ ಗುಣಸ್ವರೂಪನಲ್ಲ ಆದಕಾರಣ ಆ ಈ ಶ್ರೀಹರಿಯು ಅನಂತರೂಪನು, ಅಂದರೆ ಆ ಶ್ರೀಹರಿಗೆ ಅನಿತ್ಯತ್ವಾದಿರೂಪವಾದ ನಾಲ್ಕು ವಿಧ ನಾಶವೂ ಇಲ್ಲ ಎಂದು ಶಾಂಡಿಲ್ಯಶಾಖೆಯಲ್ಲಿ ಹೇಳಿದ್ದಾರೆ ॥ ೬ ॥ ॥ ೧೬ ॥

ಗೀ ॥ ಕಿರೀಟಿನಂ ಗದಿನಂ ಚಕ್ರಿಣಂ ಚ
ತೇಜೋರಾಶಿಂ ಸರ್ವತೋ ದೀಪ್ತಿಮಂತಂ ।
ಪಶ್ಯಾಮಿ ತ್ವಾಂ ದುರ್ನಿರೀಕ್ಷ್ಯಂ ಸಮಂತಾತ್
ದೀಪ್ತಾನಲಾರ್ಕದ್ಯುತಿಮಪ್ರಮೇಯಂ ॥ ೧೭ ॥

ಅ ॥ ಕಿರೀಟಿನಂ = ಕಿರೀಟಧಾರಿಯೂ, ಗದಿನಂ = ಗದಾಧಾರಿಯೂ, ಚಕ್ರಿಣಂ ಚ = ಚಕ್ರಧಾರಿಯೂ, ತೇಜೋರಾಶಿಂ = ತೇಜಸ್ಸಿನ ಸಮುದಾಯರೂಪನೂ, ಸರ್ವತಃ = ಎಲ್ಲೆಡೆಯಲ್ಲಿಯೂ ದೀಪ್ತಿಮಂತಂ = ಪ್ರಕಾಶವುಳ್ಳವನೂ, ಸಮಂತಾತ್ = ಸುತ್ತುಮುತ್ತಲೂ, ದುರ್ನಿರೀಕ್ಷ್ಯಂ = ಸಾಮಾನ್ಯ ಜನರಿಗೆ ನೋಡಲಶಕ್ಯನೂ, ದೀಪ್ತಾನಲಾರ್ಕದ್ಯುತಿಂ = ಪ್ರಕಾಶಿಸಿಕೊಂಡಿರುವ ಅಗ್ನಿ ಸೂರ್ಯರ ಪ್ರಕಾಶದಂತೆ ಪ್ರಕಾಶವುಳ್ಳವನೂ, ಅಪ್ರಮೇಯಂ = ಅಪರಿಮಿತ ಪ್ರಕಾಶವುಳ್ಳವನೂ, ಆದ, ತ್ವಾಂ = ನಿನ್ನನ್ನು ಪಶ್ಯಾಮಿ = ನೋಡುತ್ತೇನೆ ॥ ೧೭ ॥

ಗೀ ॥ ತ್ವಮಕ್ಷರಂ ಪರಮಂ ವೇದಿತವ್ಯಂ
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಂ ।
ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ
ಸನಾತನಸ್ತ್ವಂ ಪುರುಷೋ ಮತೋ ಮೇ ॥ ೧೮ ॥

ಅ ॥ (ಶ್ರೀಕೃಷ್ಣನೇ) ತ್ವಂ = ನೀನು, ಅಕ್ಷರಂ = ನಾಲ್ಕು ವಿಧ ನಾಶರಹಿತನೂ, ಪರಮಂ = ಸರ್ವೋತ್ತಮನೂ, ತ್ವಂ = ನೀನು, ಅಸ್ಯ ವಿಶ್ವಸ್ಯ = ಈ ಎಲ್ಲಾ ಜಗತ್ತಿಗೆ, ಪರಂ ನಿಧಾನಂ = ಮುಖ್ಯಾಶ್ರಯನು, ತ್ವಂ = ನೀನು, ಅವ್ಯಯಃ = ಹ್ರಾಸವಿಲ್ಲದವನು, ಶಾಶ್ವತಧರ್ಮಗೋಪ್ತಾ = ಅನಾದಿಪರಂಪರೆಯಿಂದ ಬಂದಿರುವ ಧರ್ಮಗಳನ್ನು ಕಾಪಾಡುವವನು, ಸನಾತನಃ = ಅನಾದಿ ನಿತ್ಯನು, ಪುರುಷಃ = ಸರ್ವಗುಣ ಪರಿಪೂರ್ಣನು, ಮತ್ತು ಸರ್ವರ ಹೃದಯದೊಳಗೆ ಇರುವವನು, ವೇದಿತವ್ಯಂ = ಮುಮುಕ್ಷುಗಳಿಂದ ತಿಳಿದು ಕೊಳ್ಳಲಿಕ್ಕೆ ಅರ್ಹನು, ಅಥವಾ ಸರ್ವ ವೇದಗಳಿಂದ ತಿಳಿಯಲು ಯೋಗ್ಯನು, ಇತಿ = ಹೀಗೆ, ಮೇ = ನನಗೆ, ಮತಃ = ಸಮ್ಮತನು. ॥ ೧೪ ॥

ಭಾ ॥ ಅನಲಾರ್ಕದ್ಯುತಿಮಿತ್ಯುಕ್ತೇ ಮಿತತ್ವಶಂಕಾಮಪಾಕರೋತಿ । ಅಪ್ರಮೇಯಮಿತಿ ॥ ॥ ೧೬,೧೪ ॥

ಅ ॥ ಅಗ್ನಿ ಸೂರ್ಯರ ಪ್ರಕಾಶದಂತೆ ಪ್ರಕಾಶವುಳ್ಳವನು, ಎಂದು ಹೇಳಿದಾಗ ಅದರಿಂದ ಶ್ರೀಹರಿಗೆ ಪರಿಮಿತ ಕಾಂತಿಯೇ ಇರುವುದೆಂದು ಶಂಕೆಯು ಹುಟ್ಟುತ್ತದೆ ಅಂತಹ ಶಂಕೆಯನ್ನು ಅಪ್ರಮೇಯಂ ಎಂಬುವುದರಿಂದ ಪರಿಹರಿಸುತ್ತಾರೆ (ವಸ್ತುತಃ ಶ್ರೀಹರಿಗೆ ಅಪರಿಮಿತವಾದ ಕಾಂತಿಯೇ ಇರುವುದು) ॥ ೧೬, ೧೪ ॥

ಗೀ ॥ ಅನಾದಿಮಧ್ಯಾಂತಮನಂತವೀರ್ಯ-
ಮನಂತಬಾಹುಂ ಶಶಿಸೂರ್ಯನೇತ್ರಂ ।
ಪಶ್ಯಾಮಿ ತ್ವಾಂ ದೀಪ್ತಹುತಾಶವಕ್ತ್ರಂ
ಸ್ವತೇಜಸಾ ವಿಶ್ವಮಿದಂ ತಪಂತಂ ॥ ೧೯ ॥

ಅ ॥ ಅನಾದಿಮಧ್ಯಾಂತಂ = ಗುಣಗಳಿಂದ ಆದಿ ಮಧ್ಯ ಅಂತವಿಲ್ಲದವನು, (ಅಂದರೆ ಅಪರಿಮಿತ ಗುಣಗಳುಳ್ಳವನು) ಅನಂತವೀರ್ಯಂ = ಅಪರಿಮಿತ ಪರಾಕ್ರಮವುಳ್ಳವನು, ಅನಂತಬಾಹುಂ = ಅಪರಿಮಿತ ತೋಳುಗಳುಳ್ಳವನು, ಶಶಿಸೂರ್ಯನೇತ್ರಂ = ಚಂದ್ರ ಸೂರ್ಯರನ್ನು ಹುಟ್ಟಿಸುವ ಕಣ್ಣುಗಳುಳ್ಳವನು, ದೀಪ್ತಹುತಾಶ ವಕ್ತ್ರಂ = ಪ್ರಕಾಶಿಸಿಕೊಂಡಿರುವ ಅಗ್ನಿಯನ್ನು ಸೃಷ್ಟಿಸಿರುವ ಮುಖವುಳ್ಳವನು, ಸ್ವತೇಜಸಾ = ತನ್ನ ಪ್ರಕಾಶದಿಂದ, ಇದಂ ವಿಶ್ವಂ = ಈ ಸಂಪೂರ್ಣ ಜಗತ್ತನ್ನು, ತಪಂತಂ = ದಹಿಸುವವನು ಇಂತಹ, ತ್ವಾಂ = ನಿನ್ನನ್ನು, ಪಶ್ಯಾಮಿ = ನೋಡುತ್ತೇನೆ ॥ ೧೯ ॥

ಭಾ ॥ (೧) ಶಶಿಸೂರ್ಯನೇತ್ರಮಿತ್ಯಪ್ಯಹಂ ಕ್ರತುರಿತ್ಯಾದಿವತ್ ॥ (೨) ತದಂಗಜಾಸ್ಸರ್ವ-
ಸುರಾದಯೋಽಪಿ ತಸ್ಮಾತ್ತದಂಗೇತ್ಯೃಷಿಭಿಃ ಸ್ತುತಾಸ್ತ ಇತ್ಯಗ್ವೇದಖಿಲೇಷು ॥ (೩)
ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತೇತ್ಯಾದಿ ಚ ॥ (೪)
ಬಹುರೂಪತ್ವಾದ್ಬಹ್ವಾಶ್ರಯತ್ವಂ ಚ ತೇಷಾಂ ಯುಕ್ತಂ ॥ ೧೯ ॥

ಅ ॥ (೧) ಶಶಿಸೂರ್ಯನೇತ್ರಂ ಎಂಬುವುದನ್ನು ಕೂಡ ಅಹಂ ಕ್ರತುಃ ಇತ್ಯಾದಿಗಳಂತೆ ವ್ಯಾಖ್ಯಾನವಾಡಬೇಕು (ಅಂದರೆ ಚಂದ್ರಸೂರ್ಯರನ್ನು ಹುಟ್ಟಿಸಿದ ಕಣ್ಣುಗಳುಳ್ಳವನು, ಅಥವಾ ಚಂದ್ರ ಸೂರ್ಯರಿಗೆ ಆಶ್ರಯಗಳಾದ ಕಣ್ಣುಗಳುಳ್ಳವನು, ಎಂದರ್ಥವು (ಚಂದ್ರಸೂರ್ಯರೇ ಕಣ್ಣುಗ

ಳೆಂದು ಅರ್ಥವಲ್ಲ) (೨) (ಏಕೆ ಹೀಗೆ ಅರ್ಥಮಾಡಬೇಕೆಂದರೆ—) ದೇವತೆಗಳೇ ಮೊದಲಾದವರೆಲ್ಲರೂ ಶ್ರೀ ಪರಮಾತ್ಮನ ಅಂಗದಿಂದಲೇ ಹುಟ್ಟಿದವರು ಆದಕಾರಣ ಆ ದೇವಾದಿಗಳನ್ನು ಅವಾವ ಅಂಕಗಳೆಂದು ಋಷಿಗಳು ಸ್ತುತಿಸಿರುತ್ತಾರೆ, ಎಂದು ಋಗ್ವೇದಮಿಲಗಳಲ್ಲಿ ಹೇಳಿದೆ (೩) (ಚಂದ್ರ ಸೂರ್ಯರೇ ಕಣ್ಣುಗಳೆಂದು ಅಭೇದ ಹೇಳಿದರೆ ಬಾಧಕಪ್ರಮಾಣವನ್ನು ಹೇಳುತ್ತಾರೆ—) ಚಂದ್ರನು ಮನಸ್ಸಿನಿಂದ ಹುಟ್ಟಿದನು ಸೂರ್ಯನು ಕಣ್ಣಿನಿಂದ ಹುಟ್ಟಿದನು, ಎಂದು ದೇವತೆಗಳಿಗೆ ಶ್ರೀಹರಿಯ ಅವಾವ ಅಂಗ ಮೊದಲಾದುವುಗಳಿಂದ ಉತ್ಪತ್ತಿಯನ್ನು ಹೇಳುವ ಶ್ರುತಿಯಿದೆ (೪) (ಹಾಗಾದರೆ ಈ ಶ್ರುತಿಯಲ್ಲಿ ಚಂದ್ರನು ಮನಸ್ಸಿನಿಂದ ಹುಟ್ಟಿದನೆಂದೂ ಮನಸ್ಸನ್ನು ಆಶ್ರಯಿಸಿದ್ದಾನೆಂದೂ ಹೇಳುತ್ತದೆ ಭಗವದ್ಗೀತೆಯಲ್ಲಿ ಕಣ್ಣಿನಿಂದ ಹುಟ್ಟಿದನೆಂದೂ ಕಣ್ಣನ್ನು ಆಶ್ರಯಿಸಿಕೊಂಡಿದ್ದಾನೆಂದೂ ಹೇಳುತ್ತದೆ ಹಾಗೆಯೇ ಬೇರೆ ಕಡೆ ಕೋರೆಹಲ್ಲಿನಿಂದ ಹುಟ್ಟಿದವನೆಂದೂ ಹೇಳುತ್ತದೆ ಇವೆಲ್ಲವೂ ಹೇಗೆ ಕೂಡುತ್ತವೆ? ಎಂದರೆ—) ದೇವತೆಗಳಿಗೆ ಬಹುರೂಪಗಳು ಇರುವುದರಿಂದ ಬಹು ಅಂಗಗಳನ್ನು ಆಶ್ರಯಿಸಿಕೊಂಡಿದ್ದರೆಂದು ಹೇಳಿದ್ದು ಕೂಡುತ್ತದೆ. ॥ ೧೯ ॥

ಗೀ ॥ ದ್ಯಾವಾಪೃಥಿವ್ಯೋರಿದಮಂತರಂ ಹಿ
ವ್ಯಾಪ್ತಂ ತ್ವಯೈಕೇನ ದಿಶಶ್ಚ ಸರ್ವಾಃ ।
ದೃಷ್ಟ್ವಾದ್ಭುತಂ ರೂಪಮುಗ್ರಂ ತವೇದಂ
ಲೋಕತ್ರಯಂ ಪ್ರವ್ಯಥಿತಂ ಮಹಾತ್ಮನ್ ॥ ೨೦ ॥

ಅ ॥ ಮಹಾತ್ಮನ್=ಮಹಾನುಭಾವನಾದ ಶ್ರೀಕೃಷ್ಣನೇ, ದ್ಯಾವಾಪೃಥಿವ್ಯೋಃ=ಸ್ವರ್ಗಭೂಮಿಗಳ, ಇದಂ ಅಂತರಂ=ಈ ಮಧ್ಯಪ್ರದೇಶವು, ಏಕೇನ=ಒಂದು ರೂಪದಿಂದ, ತ್ವಯಾ=ನಿನ್ನಿಂದ, ವ್ಯಾಪ್ತಂ=ವ್ಯಾಪಿಸಲ್ಪಟ್ಟಿದೆ ಸರ್ವಾ ದಿಶಃ=ಎಲ್ಲಾ ದಿಕ್ಕುಗಳು, (ರೂಪಾಂತರಗಳಿಂದ ವ್ಯಾಪಿಸಲ್ಪಟ್ಟವೆ) ತವ=ನಿನ್ನ, ಇದಂ=ಈ, ಉಗ್ರಂ=ಭಯಂಕರವಾದ, ಅದ್ಭುತಂ=ಆಶ್ಚರ್ಯವನ್ನುಂಟುಮಾಡುವ, ರೂಪಂ=ರೂಪವನ್ನು, ದೃಷ್ಟ್ವಾ=ನೋಡಿ, ಲೋಕತ್ರಯಂ=ಮೂರು ಲೋಕಗಳಲ್ಲಿದ್ದ ಭಕ್ತವರ್ಗವನ್ನು, ಪ್ರವ್ಯಥಿತಂ=ಬಹಳ ಹೆದರಿದ್ದನ್ನಾಗಿ, ಪಶ್ಯಾಮಿ=ನೋಡುತ್ತೇನೆ ಹಿ=ನಿಶ್ಚಯವು ॥ ೨೦ ॥

ಗೀ ॥ ಅಮೀ ಹಿ ತ್ವಾಂ ಸುರಸಂಘಾ ವಿಶಂತಿ
ಕೇಚಿದ್ಭೀತಾಃ ಪ್ರಾಂಜಲಯೋ ಗೃಣಂತಿ ।
ಸ್ವಸ್ತೀತ್ಯುಕ್ತ್ವಾ ಮಹರ್ಷಿಸಿದ್ಧಸಂಘಾಃ
ಸ್ತುವಂತಿ ತ್ವಾಂ ಸ್ತುತಿಭಿಃ ಪುಷ್ಕಲಾಭಿಃ ॥ ೨೧ ॥

ಅ ॥ ಅಮೀ=ಈ ದಾನವ, ಸುರಸಂಘಾಃ=ಮುಕ್ತರಾದ ದೇವತೆಗಳ ಸಮೂಹಗಳು ತ್ವಾಂ=ನಿನ್ನನ್ನು, ವಿಶಂತಿ=ಪ್ರವೇಶಮಾಡುತ್ತಾರೆ ಹಿ=ನಿಶ್ಚಯವು ಕೇಚಿತ್=ಕೆಲವರು, ಭೀತಾಃ=ಹೆದರಿದವರಾಗಿ, ಪ್ರಾಂಜಲಯಃ=ಕೈಜೋಡಿಸಿಕೊಂಡು ನಮಸ್ಕರಿಸಿದವರಾಗಿ, ಗೃಣಂತಿ=ಸ್ತುತಿಮಾಡುತ್ತಾರೆ ಮಹರ್ಷಿಸಿದ್ಧಸಂಘಾಃ=ಮಹರ್ಷಿಗಳೂ ಸಿದ್ಧರೂ ಇವರ ಸಮೂಹಗಳು, ಸ್ವಸ್ತೀತ್ಯುಕ್ತ್ವಾ=ಜಗತ್ತಿಗೆ ಕಲ್ಯಾಣವಾಗಲಿ, ಎಂದು ಹೇಳಿ, ಪುಷ್ಕಲಾಭಿಃ=ಶ್ರೀಹರಿಗೆ ಗುಣಪರಿಪೂರ್ಣತ್ವವನ್ನು ಹೇಳುವ, ಸ್ತುತಿಭಿಃ=ಸ್ತೋತ್ರಗಳಿಂದ, ಸ್ತುವಂತಿ=ಸ್ತೋತ್ರಮಾಡುತ್ತಾರೆ ॥ ೨೧ ॥

ಗೀ ॥ ರುದ್ರಾದಿತ್ಯಾ ವಸವೋ ಯೇ ಚ ಸಾಧ್ಯಾ
ವಿಶ್ವೇಽಶ್ವಿನೌ ಮರುತಶ್ಚೋಷ್ಮಪಾಶ್ಚ ।
ಗಂಧರ್ವಯಕ್ಷಾಸುರಸಿದ್ಧಸಂಘಾ
ವೀಕ್ಷಂತೇ ತ್ವಾಂ ವಿಸ್ಮಿತಾಶ್ಚೈವ ಸರ್ವೇ ॥ ೨೨ ॥

ಅ ॥ ಯೇ ಚ = ಯಾವ, ರುದ್ರಾದಿತ್ಯಾಃ = ರುದ್ರರು ಆದಿತ್ಯರೂ, ಚ = ಮತ್ತು, ವಸವಃ = ಅಷ್ಟ ವಸುಗಳು, ಸಾಧ್ಯಾಃ = ಸಾಧ್ಯರೂ, ವಿಶ್ವೇ = ವಿಶ್ವೇದೇವತೆಗಳು, ಅಶ್ವಿನೌ = ಅಶ್ವಿನೀ ದೇವತೆಗಳೂ, ಮರುತಶ್ಚ = ಮರುದ್ಗಣಗಳೂ, ಊಷ್ಮಪಾಶ್ಚ = ಪಿತೃಗಳೂ, ಗಂಧರ್ವಯಕ್ಷಾಸುರಸಿದ್ಧಸಂಘಾಃ = ಗಂಧರ್ವರೂ, ಯಕ್ಷರೂ, ಅಸುರರೂ ಸಿದ್ಧರೂ ಇವರ ಸಮೂಹಗಳೂ, ಸರ್ವೇ = ಇವರೆಲ್ಲರೂ, ತ್ವಾಮೇವ = ನಿನ್ನನ್ನೇ, ವಿಸ್ಮಿತಾಶ್ಚೈವ = ಆತ್ಯಾಶ್ಚರ್ಯ ಹೊಂದಿದವರಾಗಿಯೇ, ವೀಕ್ಷಂತೇ = ನೋಡುತ್ತಿದ್ದಾರೆ ॥೨೨॥

ಗೀ ॥ ರೂಪಂ ಮಹತ್ತೇ ಬಹುವಕ್ತ್ರನೇತ್ರಂ
ಮಹಾಬಾಹೋ ಬಹುಬಾಹೂರುಪಾದ ।
ಬಹೂದರಂ ಬಹುದಂಷ್ಟ್ರಾಕರಾಲಂ
ದೃಷ್ಟ್ವಾ ಲೋಕಾಃ ಪ್ರವ್ಯಥಿತಾಸ್ತಥಾಽಹಂ ॥ ೨೩ ॥

ಅ ॥ ಮಹಾಬಾಹೋ = ಶ್ರೀಕೃಷ್ಣನೇ, ತೇ = ನಿನ್ನ, ಬಹುವಕ್ತ್ರನೇತ್ರಂ = ಅನಂತ ಮುಖಗಳೂ ಕಣ್ಣುಗಳೂ ಇವುಗಳುಳ್ಳ, ಬಹೂದರಂ = ಅನಂತ ಹೊಟ್ಟೆಗಳುಳ್ಳ, ಬಹುಬಾಹೂರುಪಾದಂ = ಅನಂತ ತೋಳುಗಳೂ, ತೊಡೆಗಳೂ ಪಾದಗಳೂ ಇವುಗಳುಳ್ಳ, ಬಹುದಂಷ್ಟ್ರಾಕರಾಲಂ = ಅನಂತ ಕೋರೆ ಹಲ್ಲುಗಳಿಂದ ವಿರೂಪವಾಗಿ ಭಯಪಡಿಸುವ, ಮಹದ್ರೂಪಂ = (ನಿನ್ನ) ಅತಿ ದೊಡ್ಡ ರೂಪವನ್ನು, ಲೋಕಾಃ = ಭಕ್ತವರ್ಗದವರು, ದೃಷ್ಟ್ವಾ = ನೋಡಿ, ಪ್ರವ್ಯಥಿತಾಃ = ಹೆದರಿ ವ್ಯಾಕುಲಚಿತ್ತರಾಗಿ ಕಂಗೆಡುತ್ತಾ ಇದ್ದಾರೆ ತಥಾ ಅಹಂ = ಹಾಗೆಯೇ ನಾನೂ ಹೆದರಿ ಕಂಗೆಡುತ್ತಾ ಇದ್ದೇನೆ ॥ ೨೩ ॥

ಗೀ ॥ ನಭಃಸ್ಪೃಶಂ ದೀಪ್ತಮನೇಕವರ್ಣಂ
ವ್ಯಾತ್ತಾನನಂ ದೀಪ್ತವಿಶಾಲನೇತ್ರಂ ।
ದೃಷ್ಟ್ವಾ ಹಿ ತ್ವಾಂ ಪ್ರವ್ಯಥಿತಾಂತರಾತ್ಮಾ
ಧೃತಿಂ ನ ವಿಂದಾಮಿ ಶಮಂ ಚ ವಿಷ್ಣೋ ॥ ೨೪ ॥

ಅ ॥ ವಿಷ್ಣೋ = ಸರ್ವತ್ರ ವ್ಯಾಪ್ತನಾದ ಶ್ರೀಪರಮಾತ್ಮನೇ, ನಭಃಸ್ಪೃಶಂ = ಆಕಾಶವನ್ನು ಮುಟ್ಟಿ ಕೊಂಡಿರುವ, ದೀಪ್ತಂ = ಪ್ರಕಾಶಿಸುತ್ತಿರುವ, ಅನೇಕವರ್ಣಂ = ಬಹು ವಿಧವರ್ಣಗಳುಳ್ಳ, ವ್ಯಾತ್ತಾನನಂ = ಚೆನ್ನಾಗಿ ತೆರೆಯಲ್ಪಟ್ಟ ಮುಖಗಳುಳ್ಳ, ದೀಪ್ತವಿಶಾಲನೇತ್ರಂ = ಪ್ರಕಾಶಿಸಿಕೊಂಡಿರುವ ವಿಶಾಲಗಳಾದ ಕಣ್ಣುಗಳುಳ್ಳ, ತ್ವಾಂ = ನಿನ್ನನ್ನು, (ನಾನು) ದೃಷ್ಟ್ವಾ = ನೋಡಿ, ಪ್ರವ್ಯಥಿತಾಂತರಾತ್ಮಾ = ಚೆನ್ನಾಗಿ ಕಂಗೆಡುತ್ತಿದ್ದ ಮನಸ್ಸುಳ್ಳವನಾಗಿ, ಧೃತಿಂ = ಧೈರ್ಯವನ್ನು, ಶಮಂ ಚ = ಮನಶ್ಶಾಂತತೆಯನ್ನು ಸುಖವನ್ನು ಕೂಡ ನ ವಿಂದಾಮಿ = ಹೊಂದುವುದಿಲ್ಲ. ಹಿ = ನಿಶ್ಚಯವು. ॥ ೨೪ ॥

ಗೀ॥ ದಂಷ್ಟ್ರಾಕರಾಲಾನಿ ಚ ತೇ ಮುಖಾನಿ
ದೃಷ್ಟ್ವೈವ ಕಾಲಾನಲಸನ್ನಿಭಾನಿ ।
ದಿಶೋ ನ ಜಾನೇ ನ ಲಭೇ ಚ ಶರ್ಮ
ಪ್ರಸೀದ ದೇವೇಶ ಜಗನ್ನಿವಾಸ ॥ ೨೫ ॥

ಅ॥ ಜಗನ್ನಿವಾಸ=ಸರ್ವ ಜಗತ್ತಿಗೆ ಆಶ್ರಯನಾದ, ದೇವೇಶ=ಬ್ರಹ್ಮಾದಿ ನಿಖಿಲ ದೇವತೆಗಳಿಗೆ ಸ್ವಾಮಿಯಾದ ಶ್ರೀಕೃಷ್ಣನೇ, ತೇ=ನಿನ್ನ, ದಂಷ್ಟ್ರಾಕರಾಳಾನಿ=ಕೋರೆ ಹಲ್ಲುಗಳಿಂದ ಹೆದರಿಸುತ್ತಿರುವ, ಕಾಲಾನಲಸನ್ನಿಭಾನಿ ಚ=ಪ್ರಲಯಕಾಲದ ಅಗ್ನಿಗೆ ಸದೃಶ ಪ್ರಭೆಯುಳ್ಳ, ಮುಖಾನಿ=ಮೋರೆಗಳನ್ನು, ದೃಷ್ಟ್ವೈವ=ನೋಡಿದೊಡನೆಯೇ, ದಿಶಃ=ದಿಕ್ಕುಗಳನ್ನು, ನ ಜಾನೇ=ಕಾಣಲಾರೆನು ಶರ್ಮಂ ಚ=ಸುಖವನ್ನು ಕೂಡ, ನ ಲಭೇ=ಹೊಂದುವುದಿಲ್ಲ ಪ್ರಸೀದ=ನನ್ನ ಮೇಲೆ ದಯೆಯಿಟ್ಟು ಸಂತುಷ್ಟನಾಗು ॥ ೨೫ ॥

ಗೀ॥ ಅಮೀ ಚ ತ್ವಾಂ ಧೃತರಾಷ್ಟ್ರಸ್ಯ ಪುತ್ರಾಃ
ಸರ್ವೇ ಸಹೈವಾವನಿಪಾಲಸಂಘೈಃ ।
ಭೀಷ್ಮೋ ದ್ರೋಣಃ ಸೂತಪುತ್ರಸ್ತಥಾಸೌ
ಸಹಾಸ್ಮದೀಯೈರಪಿ ಯೋಧಮುಖ್ಯೈಃ ॥ ೨೬ ॥

ಅ॥ ಅಮೀ=ಈ ದಾನವ, ಸರ್ವೇ=ಎಲ್ಲಾ ಧೃತರಾಷ್ಟ್ರಸ್ಯ ಪುತ್ರಾಃ=ಧೃತರಾಷ್ಟ್ರನ ಪುತ್ರರಾದ ದುರ್ಯೋಧನಾದಿಗಳು, ಅವನಿಪಾಲಸಂಘೈಃ=ಭೂಪಾಲಕರಾದ ರಾಜರ ಸಮುದಾಯಗಳಿಂದ, ಸಹೈವ=ಕೂಡಿಕೊಂಡೇ, ತ್ವಾಂ=ನಿನ್ನನ್ನು, (ಪ್ರವೇಶಿಸುತ್ತಾರೆ) ತಥಾ=ಹಾಗೆಯೇ, ಭೀಷ್ಮಃ=ಭೀಷ್ಮಾಚಾರ್ಯರು, ದ್ರೋಣಃ=ದ್ರೋಣಾಚಾರ್ಯರೂ, ಅಸೌ ಸೂತಪುತ್ರಃ=ಸೂತಪುತ್ರನಾದ ಈ ಕರ್ಣನೂ, (ಇವರೆಲ್ಲರೂ) ಯೋಧಮುಖ್ಯೈಃ=ಯುದ್ಧಮಾಡುವ ಭಟರಲ್ಲಿ ಪ್ರಮುಖರಾದ, ಅಸ್ಮದೀಯೈರಪಿ=ನಮ್ಮವರಿಂದಲೂ, ಸಹ=ಕೂಡಿಕೊಂಡು, (ನಿನ್ನಲ್ಲಿ ಪ್ರವೇಶಿಸುತ್ತಿದ್ದಾರೆ.) ॥ ೨೬ ॥

ಗೀ॥ ವಕ್ತ್ರಾಣಿ ತೇ ತ್ವರಮಾಣಾ ವಿಶಂತಿ
ದಂಷ್ಟ್ರಾಕರಾಲಾನಿ ಭಯಾನಕಾನಿ ।
ಕೇಚಿದ್ವಿಲಗ್ನಾ ದಶನಾಂತರೇಷು
ಸಂದೃಶ್ಯಂತೇ ಚೂರ್ಣಿತೈರುತ್ತಮಾಂಗೈಃ ॥ ೨೭ ॥

ಅ॥ ತೇ=ಆ ದುರ್ಯೋಧನಾದಿಗಳೂ ದಂಷ್ಟ್ರಾಕರಾಲಾನಿ=ಕೋರೆಹಲ್ಲುಗಳಿಂದ ವಿಕಾರಗಳಾದ, ಭಯಾನಕಾನಿ=ಭಯವನ್ನು ಹುಟ್ಟಿಸುವ, ವಕ್ತ್ರಾಣಿ=ನಿನ್ನ ಮುಖಗಳನ್ನು, ತ್ವರಮಾಣಾಃ=ಅತಿವೇಗ ಯುಕ್ತರಾಗಿ ವಿಶಂತಿ=ಪ್ರವೇಶವಾಡುತ್ತಾರೆ (ವಸ್ತುತಸ್ತು ಶ್ರೀಪರಮಾತ್ಮನೇ ಅನಂತ ಮುಖಗಳಿಂದ ೨ ಸೇನೆಗಳಲ್ಲಿರತಕ್ಕ ಭಟರನ್ನು ಸಂಹರಿಸಿಕೊಂಡಿರುತ್ತಾನೆ) ಕೇಚಿತ್=ಕೆಲವರು, (ಆ ಮುಹೂರ್ತದಲ್ಲಿಯೇ ಸಾಯವವರೂ) ಕೇಚಿತ್=ಕೆಲವರು ದಶನಾಂತರೇಷು=ಹಲ್ಲುಗಳ ಮಧ್ಯದಲ್ಲಿ, ವಿಲಗ್ನಾಃ=ಸಿಕ್ಕಿಬಿದ್ದವರಾಗಿ, ಚೂರ್ಣಿತೈಃ ಉತ್ತಮಾಂಗೈಃ=ಚೂರ್ಣೀಕೃತಗಳಾದ ಶಿರಸ್ಸುಗಳೊಡನೆ ಕೂಡಿಕೊಂಡಿ

ರುವವರಾಗಿ. ಸಂದೃಶ್ಯಂತೇ = ನನ್ನಿಂದ ಕಾಣಲ್ಪಡುತ್ತಿದ್ದಾರೆ (ಅಲ್ಪ ಜ್ಞಾನಿಗಳಿಗೆ ಹಾಗೆ ಕಾಣದಿದ್ದರೂ ಅರ್ಜುನನಿಗೆ ದಿವ್ಯದೃಷ್ಟಿಯುಳ್ಳವನಾದುದರಿಂದ ಅವನಿಗೆ ಹಾಗೆ ಕಾಣುತ್ತದೆಂಬುವುದು ಕೂಡುತ್ತದೆ)
॥ ೨೭ ॥

ಗೀ ॥ ಯಥಾ ನದೀನಾಂ ಬಹವೋಽಂಬುವೇಗಾಃ
ಸಮುದ್ರಮೇವಾಭಿಮುಖಾ ದ್ರವಂತಿ ।
ತಥಾ ತವಾಮೀ ನರಲೋಕವೀರಾ
ವಿಶಂತಿ ವಕ್ತ್ರಾಣ್ಯಭಿವಿಜ್ವಲಂತಿ ॥ ೨೮ ॥

ಅ ॥ ನದೀನಾಂ=ಗಂಗಾದಿ ನದಿಗಳ, ಬಹವಃ ಅಂಬುವೇಗಾಃ = ನಾನಾ ಪ್ರಕಾರಗಳಾದ ನೀರಿನ ಪ್ರವಾಹಗಳು, ಸಮುದ್ರಮೇವಾಭಿಮುಖಾಃ=ಸಮುದ್ರಕ್ಕೆ ಅಭಿಮುಖಗಳಾಗಿಯೇ, ಯಥಾ = ಹೇಗೆ, ಸಮುದ್ರಮೇವ=ಸಮುದ್ರವನ್ನೇ, ದ್ರವಂತಿ = ಶೀಘ್ರವಾಗಿ ಹೋಗಿ ಪ್ರವೇಶಿಸುತ್ತವೋ, ತಥಾ=ಹಾಗೆಯೇ, ಅಮೀ ನರಲೋಕವೀರಾಃ = ಭೂಲೋಕದಲ್ಲಿ ಮಹಾ ಪರಾಕ್ರಮಶಾಲಿಗಳಾದ, ಈ ರಾಜರು, ಅಭಿವಿಜ್ವಲಂತಿ = ಚೆನ್ನಾಗಿ ಸುತ್ತಲೂ ಪ್ರಜ್ವಲಿಸಿಕೊಂಡಿರುವ, ತವ = ನಿನ್ನ, ವಕ್ತ್ರಾಣಿ=ಬಾಯಿಗಳನ್ನು, ವಿಶಂತಿ = ಹೊಕ್ಕುತ್ತಿದ್ದಾರೆ
॥ ೨೮ ॥

ಗೀ ॥ ಯಥಾ ಪ್ರದೀಪ್ತಂ ಜ್ವಲನಂ ಪತಂಗಾ
ವಿಶಂತಿ ನಾಶಾಯ ಸಮೃದ್ಧವೇಗಾಃ ।
ತಥೈವ ನಾಶಾಯ ವಿಶಂತಿ ಲೋಕಾ-
ಸ್ತವಾಪಿ ವಕ್ತ್ರಾಣಿ ಸಮೃದ್ಧವೇಗಾಃ ॥ ೨೯ ॥

ಅ ॥ ಪತಂಗಾಃ = ಚಿಟ್ಟೆಹುಳಗಳು, ಸಮೃದ್ಧವೇಗಾಃ = ಹೆಚ್ಚು ವೇಗದಿಂದ ಕೂಡಿದವುಗಳಾಗಿ, ನಾಶಾಯ = ಮರಣಕ್ಕೋಸ್ಕರ, ಪ್ರದೀಪ್ತಂ ಜ್ವಲನಂ = ಜ್ವಲಿಸುತ್ತಿರುವ ಬೆಂಕಿಯನ್ನು, ಯಥಾ = ಹೇಗೆ, ವಿಶಂತಿ=ಪ್ರವೇಶಿಸುತ್ತವೋ, ತಥೈವ=ಹಾಗೆಯೇ, ಸಮೃದ್ಧವೇಗಾಃ=ಹೆಚ್ಚು ವೇಗಗಳುಳ್ಳ, ಲೋಕಾ ಅಪಿ= ದುರ್ಯೋಧನಾದಿಗಳೆಲ್ಲರೂ, ನಾಶಾಯ = ಮರಣಕ್ಕೋಸ್ಕರ, ತವ = ನಿನ್ನ, ವಕ್ತ್ರಾಣಿ = ಮುಖಗಳನ್ನು, ವಿಶಂತಿ = ಪ್ರವೇಶಿಸುತ್ತಾರೆ.
॥ ೨೯ ॥

ಗೀ ॥ ಲೇಲಿಹ್ಯಸೇ ಗ್ರಸಮಾನಃ ಸಮಂತಾತ್
ಲೋಕಾನ್ಸಮಗ್ರಾನ್ವದನೈರ್ಜ್ವಲದ್ಭಿಃ ।
ತೇಜೋಭಿರಾಪೂರ್ಯ ಜಗತ್ಸಮಗ್ರಂ
ಭಾಸಸ್ತವೋಗ್ರಾಃ ಪ್ರತಪಂತಿ ವಿಷ್ಣೋ ॥ ೩೦ ॥

ಅ ॥ (ನೀನು) ಜ್ವಲದ್ಭಿಃ = ಪ್ರಜ್ವಲಿಸುತ್ತಿರುವ, ವದನೈಃ = ಬಾಯಿಗಳಿಂದ, ಸಮಂತಾತ್ = ಸುತ್ತುಮುತ್ತಲೂ, ನಾಲ್ಕುದಿಕ್ಕುಗಳಿಂದಲೂ, ಸಮಗ್ರಾನ್ = ಎಲ್ಲಾ, ಲೋಕಾನ್ = ದುರ್ಯೋಧನಾದಿಗಳನ್ನು, ಗ್ರಸಮಾನಃ=ಮುಖದಲ್ಲಿ ಹಾಕಿಕೊಂಡವನಾಗಿ, ಲೇಲಿಹ್ಯಸೇ = ನಾಲಿಗೆಯಿಂದ ಆಸ್ವಾದನ ಮಾಡುತ್ತಿದ್ದಿ (ಅಂದರೆ ದುರ್ಯೋಧನಾದಿಗಳ ಸಂಹಾರದಿಂದ ಸಂತೋಷಗೊಳ್ಳುತ್ತಿದ್ದಿ.) ವಿಷ್ಣೋ =

ಶ್ರೀಕೃಷ್ಣನೇ, ತವ = ನಿನ್ನ, ಉಗ್ರಾಃ = ತೀಕ್ಷ್ಣಗಳಾದ, ಭಾಸಃ = ಕಾಂತಿಗಳೂ, ತೇಜೋಭಿಃ = ತೇಜಸ್ಸುಗಳಿಂದ, ಸಮಗ್ರಂ ಜಗತ್ = ಎಲ್ಲಾ ಜಗತ್ತನ್ನು, ಆಪೂರ್ಯ = ವ್ಯಾಪಿಸಿ, ಪ್ರತಪಂತಿ = ಸುಡುತ್ತಿದ್ದಾವೆ. ॥ ೩೦ ॥

ಪೀ—ದ್ಯಾವಾಪೃಥಿವ್ಯೋರಿದಮಂತರಂ ಹಿ (ಶ್ಲೋ. ೨೦) ಎಂಬುವಲ್ಲಿ **ತ್ವಯಾ** ಎಂಬುವ ಏಕವಚನದಿಂದಲೇ ಏಕತ್ವವು ಸಿದ್ಧವಾಗುವುದರಿಂದ ಮರಳಿ **ಏಕೇನ** ಎಂದದ್ದು ಏತಕ್ಕೆಂದರೆ—ಏಕೇನ = ಏಕ ರೂಪದಿಂದ ಎಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ–

ಭಾ ॥ (೧) ಮಾತಾಪಿತ್ರೋರಂತರಂಗಃ ಸ ಏಕರೂಪೇಣ ಚಾನ್ಯೈಃ ಸರ್ವಗತಃ ಸ ಏಕ ಇತಿ ವಾರುಣಶ್ರುತೇಃ ಏಕೇನೈವ ರೂಪೇಣ ದ್ಯಾವಾಪೃಥಿವ್ಯೋರಂತರಂ ವ್ಯಾಪ್ತೋ ಭವತಿ ॥ (೨) ಪಶ್ಯ ಮೇ ಪಾರ್ಥ ರೂಪಾಣೀತಿ ಬಹೂನಿ ಹಿ ರೂಪಾಣಿ ಪ್ರತಿಜ್ಞಾತಾನಿ ॥ (೩) ಮಾತಾಪಿತರೌ ಚ ಪೃಥಿವೀದ್ಯಾವೌ । ಮಾ ನೋ ಮಾತಾ ಪೃಥಿವೀ ದುರ್ಮತೌ ಧಾತ್ । ಮಧು ದ್ಯೌರಸ್ತು ನಃ ಪಿತೇತ್ಯಾದಿಪ್ರಯೋಗಾತ್ ॥ (೪) ನ ತು ನಿಯಮತೋ ಭಯಪ್ರದಂ ತತ್ಸ್ವರೂಪಂ । ನಾರದಸ್ಯ ತದಭಾವಾತ್ । ಕೇಷಾಂಚಿತ್ತಥಾ ದರ್ಶಯತಿ ಭಗವಾನ್ ॥ (೫) ಪ್ರೀಯಂತಿ ಕೇಚಿತ್ತಸ್ಯ ರೂಪಸ್ಯ ದೃಷ್ಟ್ವಾ ಬಿಭೇತಿ ಕಶ್ಚಿದಭ್ಯಸೇ ಸರ್ವತೃಪ್ತಿರಿತಿ ವಾರುಣಶಾಖಾಯಾಂ ॥ (೬) ನ ತು ತಂ ಸರ್ವೇ ಪಶ್ಯಂತಿ ॥ (೭) ಅದೃಷ್ಟ್ವಾಪಿ ತನ್ನಿರೂಪ್ಯ ಭಯೇ ದ್ರಷ್ಟುಸ್ತಥಾ ಪ್ರತಿಭಾತಿ ॥ (೮) ತಥಾ ಚ ಗೌತಮಖಿಲೇಷು । ದೃಷ್ಟ್ವಾ ದೇವಂ ನೋದಮಾನಾ ಅದೃಷ್ಟ್ವಾಪ್ಯೇತದ್ಭಯಾದ್ಬಿಭೃತೋ ದೃಷ್ಟವತ್ತೇ । ಪಶ್ಯಂತಿ ತನ್ನ್ಯಸ್ತಚಕ್ಷುರ್ಮಖಾಂಸ್ತು ತಸ್ಮಿನ್ನೇವೈತೇ ಮನಸೋ ಗತತ್ವಾದಿತಿ ॥ ೨೦—೩೦ ॥

ಅ ॥ (೧) ಆ ಶ್ರೀಹರಿಯು ಒಂದೇ ರೂಪದಿಂದ ಸ್ವರ್ಗಭೂಮಿಗಳ ಮಧ್ಯವನ್ನು ವ್ಯಾಪಿಸಿಕೊಂಡಿರುವನು ಆ ಶ್ರೀಹರಿಗೆ ಅನಂತರೂಪಗಳಿದ್ದರೂ ಆ ರೂಪಗಳಿಂದ ಭೇದವಿಲ್ಲದವನು ಅನಂತರೂಪಗಳಿಂದ (ಎಲ್ಲಾ ದಿಕ್ಕುಗಳೂ ವ್ಯಾಪ್ತಗಳಾಗಿವೆ. ಆದುದರಿಂದ) ಶ್ರೀಹರಿಯು ಸರ್ವತ್ರವಾಪ್ತನು, ಎಂಬುವ ವಾರುಣಶ್ರುತಿಯಿಂದ ಒಂದೇ ರೂಪದಿಂದ ಸ್ವರ್ಗಭೂಮಿಗಳ ಮಧ್ಯವನ್ನು ವ್ಯಾಪಿಸಿಕೊಂಡಿದ್ದಾನೆ (೨) (**ದ್ರಷ್ಟುಮಿಚ್ಛಾಮಿ ತೇ ರೂಪಂ** ಇತ್ಯಾದಿಗಳಿಂದ ವಿಶ್ವರೂಪವು ಒಂದೇ ರೂಪವೆಂದು ತಿಳಿದುಬರುವುದರಿಂದ, ರೂಪಾಂತರಗಳಿಂದ ಎಂದು ಹೇಳಿದ್ದು ಹೇಗೆ ಕೂಡುತ್ತದೆ? ಎಂದರೆ—) **ಪಶ್ಯ ಮೇ ಪಾರ್ಥ ರೂಪಾಣಿ**(ಶ್ಲೋ ೫) ಎಂಬುವಲ್ಲಿ ಅನಂತರೂಪಗಳನ್ನು ನೋಡೆಂದು ಶ್ರೀಕೃಷ್ಣನು ಹೇಳಿರುವನು (ಶ್ರೀಹರಿಗೆ ಅನಂತರೂಪಗಳಿದ್ದರೂ ಆ ರೂಪಗಳಿಗೆ ಭೇದವಿಲ್ಲವೆಂದು ತೋರಿಸುವುದಕ್ಕಾಗಿ **ದ್ರಷ್ಟುಮಿಚ್ಛಾಮಿ ತೇ ರೂಪಂ** (ಶ್ಲೋ ೩) ಎಂಬುವಲ್ಲಿ ರೂಪಂ ಎಂದು ಏಕವಚನ ಪ್ರಯೋಗವು (೩) (ಹಿಂದೆ ಹೇಳಿದ ಪ್ರಮಾಣದಲ್ಲಿರುವ **ಮಾತಾಪಿತ್ರೋಃ** ಎಂಬುವುದಕ್ಕೆ ಅರ್ಥವನ್ನು ಹೇಳುತ್ತಾರೆ) ಮಾತಾಪಿತರೌ = ಪೃಥಿವೀ ಸ್ವರ್ಗಗಳು (ಅಂದರೆ ಪೃಥಿವಿಯು **ಮಾತಾ** ಎಂದೂ, ಸ್ವರ್ಗವು ಪಿತಾ ಎಂದೂ ಅನಿಸಿಕೊಳ್ಳುತ್ತದೆ) (ಈ ವಿಷಯದಲ್ಲಿ ಪ್ರಮಾಣವನು ಹೇಳುತ್ತಾರೆ-) ಮಾತಾ = ಪೃಥಿವಿಯು, (ಪೃಥಿವ್ಯಭಿಮಾನಿದೇವತೆಯು) ನಮ್ಮನ್ನು ದುರ್ಬುದ್ಧಿಯಲ್ಲಿ ಪ್ರೇರೇಪಿಸಬಾರದು ಪಿತಾ = ಸ್ವರ್ಗವು (ಸ್ವರ್ಗಾಭಿಮಾನಿದೇವತೆಯು) ನಮಗೆ ಸುಖಕ್ಕೆ ಕಾರಣವಾಗಲಿ, (ಎಂದು ಈ ಶ್ರುತಿಯಲ್ಲಿ ಪೃಥಿವಿಯನ್ನು

ಮಾತಾ ಎಂದೂ, ಸ್ವರ್ಗವನ್ನು **ಪಿತಾ** ಎಂದೂ) ಪ್ರಯೋಗಿಸಿದೆ. (೪) (**ದೃಷ್ಟ್ವಾದ್ಭುತಂ ಇತ್ಯಾದಿ**ಗಳಿಂದ ಸರ್ವರಿಗೂ ವಿಶ್ವರೂಪದರ್ಶನದಿಂದ ಭಯವು ಹುಟ್ಟುವುದಿಲ್ಲ ಮತ್ತೆ ಕೆಲವು ಭಕ್ತರಿಗೆ ಕೆಲವು ವೇಳೆಯೇ ಕಾರಣವಿಶೇಷದಿಂದಲೇ ಭಯವುಂಟಾಗುತ್ತದೆನ್ನುತ್ತಾರೆ—) ವಿಶ್ವರೂಪದರ್ಶನವು ಸರ್ವರಿಗೂ ನಿಯಮವಾಗಿ ಭಯವನ್ನು ಹುಟ್ಟಿಸತಕ್ಕುದ್ದಲ್ಲ. (ಏಕೆಂದರೆ--) ನಾರದರಿಗೆ ವಿಶ್ವರೂಪದರ್ಶನದಿಂದ ಭಯವು ಹುಟ್ಟಲೇ ಇಲ್ಲ ಕೆಲವರಿಗೆ ಮಾತ್ರ ಶ್ರೀಕೃಷ್ಣನು ಉಗ್ರರೂಪವನ್ನು ತೋರಿಸಿ ಭಯವು ಹುಟ್ಟುವಂತೆ ಮಾಡಿರುತ್ತಾನೆ. (೫) ಕೆಲವರು ಆ ವಿಶ್ವರೂಪವನ್ನು ನೋಡಿದಾಗ ಸಂತೋಷಪಡುತ್ತಾರೆ ಕೆಲವರು ಹೆದರುತ್ತಾರೆ ಆ ವಿಶ್ವರೂಪವನ್ನು ಮತ್ತೂ ಮತ್ತೂ ನೋಡುತ್ತಿರಲು ಸರ್ವರಿಗೂ ಆನಂದೋದ್ರೇಕವಾಗುತ್ತದೆ, ಎಂದು ವಾರುಣಶಾಖೆಯಲ್ಲಿ ಹೇಳಿದೆ. (೬) (ಹೀಗೆ ವಿಶ್ವರೂಪದರ್ಶನದಿಂದ ಸರ್ವರಿಗೆ ಭಯವುಂಟಾಗುವುದಿಲ್ಲವೆಂದು ಹೇಳಿ ಮೂರು ಲೋಕಗಳಲ್ಲಿ ಎಲ್ಲರಿಗೂ ವಿಶ್ವರೂಪದರ್ಶನವಾಗುವುದಿಲ್ಲವೆನ್ನುತ್ತಾರೆ—)ಮೂರು ಲೋಕಗಳಲ್ಲಿದ್ದವರಿಲ್ಲರೂ ಆ ಶ್ರೀಹರಿಯನ್ನು ನೋಡುವುದಿಲ್ಲ. (ಮತ್ತೆ **ತ್ರಿಲೋಕೇಷು ಸ್ಥಿತೈರ್ಭಕ್ತೈಃ** ಎಂದು ಹೇಳಿದ ಪ್ರಕಾರ ಯೋಗ್ಯತೆಯುಳ್ಳ ಕೆಲವು ಭಕ್ತರು ಮಾತ್ರ ಅರ್ಜುನನಿಗೆ ತೋರಿಸಿದ ರೂಪವನ್ನು ನೋಡಿರುತ್ತಾರೆ) (೭) (**ಲೋಕತ್ರಯಂ** ಎಂಬುವುದರ ಅಭಿಪ್ರಾಯವನ್ನು ಹೇಳುತ್ತಾರೆ-) ವಿಶ್ವರೂಪವನ್ನು ನೋಡುವುದಕ್ಕಾಗಿ ಪ್ರಯತ್ನಪಡುತ್ತಿದ್ದ ಮೂರು ಲೋಕಗಳಲ್ಲಿರುವ ಪುರುಷರ ಮಧ್ಯದಲ್ಲಿ ಯೋಗ್ಯತೆಯಿಲ್ಲದವರು ಆ ವಿಶ್ವರೂಪವನ್ನು ನೋಡದಿದ್ದರೂ ಅದನ್ನೇ ಮನಸ್ಸಿನಲ್ಲಿ ಧ್ಯಾನಮಾಡಿಕೊಂಡು ಇದ್ದವರಿಗೆ ಭಯವುಂಟಾದಾಗ ಭಯಗ್ರಸ್ತನಾದ ಅರ್ಜುನನಿಗೆ ಇವರೆಲ್ಲರೂ ಈ ವಿಶ್ವರೂಪವನ್ನು ನೋಡಿ ನನ್ನಂತೆ ಹೆದರಿದ್ದಾರೆ, ಎಂದು ಅರ್ಜುನನಿಗೆ ತೋರುವುದರಿಂದ, **ಲೋಕತ್ರಯಂ ದೃಷ್ಟ್ವಾ ಪ್ರವ್ಯಥಿತಂ** ಎಂದು ಅರ್ಜುನನು ಹೇಳಿರುತ್ತಾನೆ (೮) (ಈ ವಿಷಯದಲ್ಲಿ ವೇದಪ್ರಮಾಣವನ್ನು ಹೇಳುತ್ತಾರೆ—) ವಿಶ್ವರೂಪವನ್ನು ನೋಡದಿದ್ದರೂ ಅದನ್ನೇ ಮನಸ್ಸಿನಲ್ಲಿಟ್ಟುಕೊಂಡು ಧ್ಯಾನಿಸಿದ್ರಿಂದುಂಟಾದ ಭಯದಿಂದ ಭಯಚಿಹ್ನೆಯನ್ನು ಹೊಂದಿದ, ಮತ್ತು ಆ ವಿಶ್ವರೂಪದಲ್ಲಿಯೇ ವಿಶ್ವರೂಪವನ್ನು ನೋಡತಕ್ಕ ಕೆಲವು ಜನರು ಹೆದರಿದಂತೆ ಧ್ಯಾನಿಸತಕ್ಕ ಭಕ್ತರೂ ಭಯಪಡುತ್ತಾರೆಂದು, ಮನಸ್ಸು ಹೋಗುವುದರಿಂದ ಆ ವಿಶ್ವರೂಪದಲ್ಲಿಯೇ ಕಣ್ಣುಗಳನ್ನು ಮುಖವನ್ನು ಇಟ್ಟಿರುವ, ವಿಶ್ವರೂಪವನ್ನು ಧ್ಯಾನಿಸುತ್ತಿರುವ ಭಕ್ತಜನರನ್ನು, ವಿಶ್ವರೂಪವನ್ನು ನೋಡಿ ಸಂತೋಷಪಡುತ್ತಿರುವ ಅರ್ಜುನಾದಿಗಳು ನೋಡುತ್ತಾರೆ, ಎಂದು ಗೌತಮಖಿಲಗಳಲ್ಲಿ ಹೇಳಿದೆ ॥ ೨೦—೩೦ ॥

ಪೀ—ದ್ಯಾವಾಪೃಥಿವ್ಯೋಃ (ಶ್ಲೋ. ೨೦) ಎಂಬುವಲ್ಲಿ **ತ್ವಯಾ** ಎಂಬುವುದರಿಂದಲೇ ಒಬ್ಬನೆಂದು ಸಿದ್ಧವಾಗುವ ಪ್ರಯುಕ್ತ ಪುನಃ **ಏಕೇನ** ಎಂದು ಹೇಳಿದ್ದಕ್ಕೆ ಪ್ರಯೋಜನವನ್ನು ಹೇಳುತ್ತಾರೆ--

ತಾ ॥ (೧) ದ್ಯಾವಾಪೃಥಿವ್ಯೋರಂತರಮೇಕೇನೈವ ರೂಪೇಣ ವ್ಯಾಪ್ತಂ ॥ (೨) ನಾಂತಂ ನ ಮಧ್ಯಮಿತ್ಯುಕ್ತತ್ವಾತ್ ॥ (೩) ಪುನರನಾದಿಮಧ್ಯಾಂತಮಿತಿ ಗುಣಾನಂತ್ಯಾಪೇಕ್ಷಯಾ।ತ್ವಯಾ ತತಂ ವಿಶ್ವಮನಂತರೂಪೇತಿ ಕಾಲಾಪೇಕ್ಷಯಾ॥ (೪) ಸ್ವಯಮಂತಂ ವಿದ್ಯಮಾನಮಪಿ ನ ಪಶ್ಯತೀತ್ಯಾಶಂಕ್ಯ ತ್ವಯಾ ತತಂ ವಿಶ್ವಮನಂತ ಮಿತ್ಯಾಹ ॥ (೫) ಅನ್ಯತ್ತಾತ್ಪರ್ಯಜ್ಞಾಪನಾಯಾಭ್ಯಾಸರೂಪಂ । ಸರ್ವಂ ಸಮಾಪ್ನೋಷಿ ತತೋಽಸಿ ಸರ್ವ ಇತಿ ಸರ್ವಂ ಖಲ್ವಿದಂ ಬ್ರಹ್ಮೇತ್ಯಾದಿಷು ಸರ್ವಶಬ್ದವ್ಯಾಖ್ಯಾನ ರೂಪಂ ॥ ೧ ॥

ಅ ॥ (೧) ಸ್ವರ್ಗ ಭೂಮಿಗಳ ಮಧ್ಯಪ್ರದೇಶವು ಒಂದೇ ರೂಪದಿಂದ ವ್ಯಾಪ್ತವಾಗಿದೆ (೨) (**ಅನಾದಿನಮಧ್ಯಾಂತಂ** (ಶ್ಲೋ ೧೯) ಎಂಬುವುದರಿಂದ ಪರಿಮಾಣಾನಂತ್ಯವು ಹೇಳಲ್ಪಡುತ್ತದೆ, ಎಂಬುವ

ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ–) ಪರಿಮಾಣಾನಂತ್ಯವು **ನಾಂತಂ ನ ಮಧ್ಯಂ** (ಶ್ಲೋ ೧೬) ಎನ್ನುವುದರಿಂದ ಹೇಳಲ್ಪಟ್ಟ ಪ್ರಯುಕ್ತ (ಅನಾದಿಮಧ್ಯಾಂತಂ ಎಂಬುವಲ್ಲಿ ಪರಿಮಾಣದಿಂದ ಇತರ ಗಳಾದ ಗುಣಗಳ ಅನಂತ್ಯವೇ ಹೇಳಲ್ಪಡುತ್ತದೆ **ಪರಿಮಾಣಾನಂತ್ಯವು** ಹೇಳಲ್ಪಡುವುದಿಲ್ಲ.) (೩) ಶ್ರೀಪರಮಾತ್ಮನಿಗೆ ಅನಂತಗುಣಗಳೆಂದು ಇಟ್ಟುಕೊಂಡು ತಿರುಗಿ **ಅನಾದಿಮಧ್ಯಾಂತಂ** ಎಂದು ಹೇಳಿದ್ದು. (೪) (**ನಾಂತಂ ನ ಮಧ್ಯಂ** ಎಂದು ಪರಿಮಾಣಾನಂತ್ಯವನ್ನು **ಅನಾದಿಮಧ್ಯಾಂತಂ** ಎಂಬುವುದರಿಂದ ಗುಣಾನಂತ್ಯವನ್ನು ಹೇಳಿದ್ರಿಂದ **ತ್ವಯಾ ತತಂ ವಿಶ್ವಮನಂತರೂಪ** (ಶ್ಲೋ ೩೮) ಎಂಬುವಲ್ಲಿ **ಅನಂತ ರೂಪ** ಎಂದು ಪುನಃ ಹೇಳಿದ್ದು ಏಕೆ ಎಂದರೆ—) ತ್ವಯಾ ತತಂ ವಿಶ್ವಮನಂತರೂಪ ಎಂಬುವುದು ಕಾಲ ವನ್ನು ಇಟ್ಟುಕೊಂಡು ಹೇಳಿದ್ದು (ಅಂದರೆ ದೇಶಾನಂತ್ಯವನ್ನು ಗುಣಾನಂತ್ಯವನ್ನು ಹಿಂದೆ ಹೇಳಿದ್ದಾರೆ. ಕಾಲಾನಂತ್ಯವನ್ನೇ ಸರ್ವಕಾಲದಲ್ಲಿರುವವನು ಎಂದು ಹೇಳುವುದಕ್ಕಾಗಿ **ಅನಂತರೂಪ** ಎಂದು ಹೇಳಿದ್ದು) (ಏವಂಚ **ನಾಂತಂ ನ ಮಧ್ಯಂ** ಎಂಬುವಲ್ಲಿ ಪರಿಮಾಣಾನಂತ್ಯವು, **ಅನಾದಿಮಧ್ಯಾಂತಂ** ಎಂಬುವಲ್ಲಿ ವೀರ್ಯಾದಿಗುಣಗಳ ಅನಂತ್ಯವು **ಅನಂತರೂಪ** ಎಂಬುವಲ್ಲಿ ಕಾಲಾನಂತ್ಯವು ಹೇಳಲ್ಪಡುತ್ತದೆ) (೪) (**ನಾಂತಂ ನ ಮಧ್ಯಂ ನ ಪುನಸ್ತವಾದಿಂ** (ಶ್ಲೋ ೧೬)ಎಂಬುವಲ್ಲಿ ಪರಿಮಾಣಾನಂತ್ಯವನ್ನು ಹೇಳಿದ್ರಿಂದ **ತ್ವಯಾ ತತಂ ವಿಶ್ವಂ** ಎಂದು ತಿರುಗಿ ಏಕೆ ಹೇಳಿದ್ದು ಎಂದರೆ—) ನಾಶವು ಇದ್ದಾಗ್ಯೂ ತಾನು (ಅರ್ಜುನನು) ಅಂತವನ್ನು ನೋಡುವುದಿಲ್ಲ, ಎಂದು ತೋರುವುದರಿಂದ **ಅಂತಂ ನ ಪಶ್ಯಾಮಿ** ಎಂದು ಹೇಳಿದರೆ ಶ್ರೀಹರಿಗೆ ಪರಿಮಾಣಾನಂತ್ಯವು ಸಿದ್ಧಿಸುವುದಿಲ್ಲ, ಎಂದಾಶಂಕಿಸಿಕೊಂಡು **ತ್ವಯಾ ತತಂ ವಿಶ್ವಂ** ಎಂದು ಹೇಳಿರುತ್ತಾರೆ (ಅಂದರೆ ಆ ಆಶಂಕೆಯನ್ನು ನಿವೃತ್ತಿಗೊಳಿಸುವುದಕ್ಕಾಗಿ ನಾನು ಮಾತ್ರ ನೋಡುವುದಿಲ್ಲ ವೆಂದಲ್ಲ ಮತ್ತೆ **ತ್ವಯಾ ತತಂ ವಿಶ್ವಂ** ಎಂದು ಹೇಳಿದ್ರಿಂದ ಶ್ರೀಪರಮಾತ್ಮನಿಗೆ ಸರ್ವತ್ರ ವ್ಯಾಪ್ತತ್ವವು ವಾಸ್ತವವಾಗಿ ಇದೆ, ಎಂದು ಹೇಳಿದ್ರಿಂದ ಪುನರುಕ್ತಿದೋಷವಿಲ್ಲ) (೫) (ಆದಾಗ್ಯೂ **ಪಶ್ಯಾಮಿ ತ್ವಾಂ ಸರ್ವತೋಽನಂತರೂಪಂ** (ಶ್ಲೋ ೧೬) ಎಂಬುವುದು, **ದ್ಯಾವಾಪೃಥಿವ್ಯೋರಿದಮಂತರಂ** (ಶ್ಲೋ ೨೦) ಇತ್ಯಾದಿಗಳನ್ನು ಹೇಳಿದ್ರಿಂದ ಪುನರುಕ್ತವಾಯಿತೆಂದರೆ—) ಶ್ರೀಪರಮಾತ್ಮನು ಸರ್ವದೇಶಗಳ ಲ್ಲಿಯೂ ವ್ಯಾಪ್ತನು, ಸರ್ವಕಾಲಗಳಲ್ಲಿಯೂ ಇರುವವನು, ಸರ್ವಗುಣಪರಿಪೂರ್ಣನು, ಎಂಬುವಲ್ಲಿಯೇ ಗೀತೆಗೆ ಮಹಾತಾತ್ಪರ್ಯವು, ಎಂದು ತಿಳಿಸುವುದಕ್ಕಾಗಿ ಒಂದೇ ಅರ್ಥವುಳ್ಳ ವಾಕ್ಯಗಳನ್ನು ಅನೇಕ ಸಲ ಹೇಳಿದ್ದು (೬) (**ಅನಂತವೀರ್ಯಾಮಿತವಿಕ್ರಮಸ್ತ್ವಂ ಸರ್ವಂ ಸಮಾಪ್ನೋಷಿ** (ಶ್ಲೋ ೪೦)ಎಂದು ಆದರಾತಿಶಯದಿಂದ ಹೇಳಿದ ಪ್ರಯುಕ್ತ ಪುನರುಕ್ತಿದೋಷವಿಲ್ಲವಾದರೂ ಅದಕ್ಕೆ ಪ್ರಯೋಜನಾಂತರ ವನ್ನು ಹೇಳುತ್ತಾರೆ—) ಸಮಸ್ತ ಜಗತ್ತನ್ನು ವ್ಯಾಪಿಸಿಕೊಂಡಿದ್ದಿ ಆದಕಾರಣ **ಸರ್ವ** ಎನಿಸಿಕೊಂಡಿದ್ದಿ, ಎಂಬುವುದು, **ಸರ್ವಂ ಖಲ್ವಿದಂ ಬ್ರಹ್ಮ** ಇತ್ಯಾದಿ ಶ್ರುತಿಗಳಲ್ಲಿದ್ದ ಸರ್ವಶಬ್ದಕ್ಕೆ (ಪರಬ್ರಹ್ಮನು ಸಮಸ್ತ ಜಗತ್ತನ್ನು ವ್ಯಾಪಿಸಿಕೊಂಡಿದ್ದಾನೆ, ಇತ್ಯಾದ್ಯರ್ಥವೆಂದು) ವ್ಯಾಖ್ಯಾನರೂಪವು (ಅಂದರೆ **ಸರ್ವಂ ಖಲ್ವಿದಂ ಬ್ರಹ್ಮ** ಇತ್ಯಾದಿ ಶ್ರುತಿಗಳಿಗೆ ಸರ್ವಜಗತ್ತೂ ಪರಬ್ರಹ್ಮಸ್ವರೂಪವೆಂದರ್ಥವಲ್ಲ ಮತ್ತೆ ಆ ಶ್ರುತಿಯಲ್ಲಿರತಕ್ಕ ಸರ್ವಶಬ್ದಕ್ಕೆ ಪರಬ್ರಹ್ಮನು ಸರ್ವತ್ರವ್ಯಾಪ್ತನಾದ ಪ್ರಯುಕ್ತ **ಸರ್ವ** ಎನಿಸಿಕೊಂಡಿದ್ದಾನೆ, ಎಂದೇ ಅರ್ಥವು) ॥ ೧ ॥

ಪೀ --ಸುಖಮಾತ್ಯಂತಿಕಂ ಯತ್ತತ್ (ಅಧ್ಯಾ ೬ ಶ್ಲೋ ೨೧) ಇತ್ಯಾದಿಗಳಲ್ಲಿ ಭಗವದ್ದರ್ಶನವು ಪರಮಾನಂದಕ್ಕೆ ಕಾರಣವೆಂದು ಹೇಳಿದ್ರಿಂದ ವಿಶ್ವರೂಪದರ್ಶನವು ವ್ಯರ್ಥಕ್ಕೆ ಕಾರಣವೆಂದು ಹೇಳಿದ್ದು ಹೇಗೆ ಎಂದರೆ—

ತಾ ॥ (೧) ತ್ರಿಲೋಕೇಷು ಸ್ಥಿತೈರ್ಭಕ್ತೈರರ್ಜುನಾಯ ಪ್ರದರ್ಶಿತಂ । ದೃಷ್ಟಂ ವಿಷ್ಣೋರ್ವಿಶ್ವರೂಪಂ ಸ್ವಯೋಗ್ಯತ್ವಾನುರೂಪತಃ । ಪ್ರಾಯುಸ್ಸಹೈವ ಹಾರ್ದೇನ ಪ್ರಾಯೋ

ಭೀತಾಶ್ಚ ತೇಽಖಿಲಾಃ ॥ (೨) ದರ್ಶನಾಭ್ಯಾಸತೋ ದೃಷ್ಟಿರಾನಂದೋದ್ರೇಕದಾ ಭವೇತ್ ॥ (೩) ತಸ್ಮಿನ್ನಾಲೇ ತು ಭೂಮೇಶ್ಚ ಭಾರಹಾರಾರ್ಥಮುದ್ಯಮಾತ್ । ಉಗ್ರತ್ವಮಿವ ಸರ್ವತ್ರ ನ ಭೀತಿರ್ಬ್ರಹ್ಮದರ್ಶಿನಾಂ ॥ (೪) ಅರ್ಜುನಾದಧಿಕಾ ಯೇ ತು ತೇಷಾಂ ಭೀತಿರ್ನ ಚಾಭವತ್ । ಶ್ರೀಬ್ರಹ್ಮರುದ್ರಪೂರ್ವಾಣಾಂ ಕೃಷ್ಣಯಾ ಭೀಮರಾಮಯೋರಿತ್ಯಾಗ್ನೇಯವಚನಾದ್ದೃಷ್ಟ್ವಾಽದ್ಭುತಂ ರೂಪಮಿತ್ಯಾದಿ ಯುಜ್ಯತೇ ॥ (೫) ಮುಕ್ತಾಃ ಸುರಸಂಘಾ ವಿಶಂತಿ । ಪ್ರವೇಶೋ ನಿರ್ಗಮಶ್ಚೈವ ಮುಕ್ತಾನಾಂ ಸ್ವೇಚ್ಛಯಾ ಭವೇದಿತಿ(ಹಿಂ) ಬ್ರಹ್ಮಾಂಡೇ ॥ ೨ ॥

ಅ ॥ (೧) ೩ ಲೋಕಗಳಲ್ಲಿರತಕ್ಕ ಭಕ್ತರು ಅರ್ಜುನನಿಗೆ ತೋರಿಸಿದ ಶ್ರೀವಿಷ್ಣುವಿನ ವಿಶ್ವರೂಪವನ್ನು ತಂತಮ್ಮ ಯೋಗ್ಯತಾನುಸಾರವಾಗಿ ಪ್ರಾಯಶಃ ನೋಡಿರುವರು ಆಗ ಅವರೆಲ್ಲರೂ ಅರ್ಜುನನಿಂದ ಕೂಡಿಯೇ ಆ ರೂಪವನ್ನು ನೋಡಿ ಪ್ರಾಯಶಃ ಹೆದರಿರುವರು (೨) (ವಿಶ್ವರೂಪ ದರ್ಶನವು ಸದಾ ಭಯಂಕರವಲ್ಲ. ಏಕೆಂದರೆ—) ಅದೇ ವಿಶ್ವರೂಪದರ್ಶನವು ಬಹಳಾವರ್ತಿ ಆದರೆ ಆನಂದಾತಿಶಯವೇ ಆಗುತ್ತದೆ (೩) ಆದರೂ ಆ ಕಾಲದಲ್ಲಿ ಭೂಮಿಗೆ ಭಾರಭೂತರಾದ ದುಷ್ಟಜನರನ್ನು ನಾಶಗೊಳಿಸುವುದಕ್ಕಾಗಿ ಶ್ರೀಕೃಷ್ಣನ ಉದ್ಯೋಗವಿರುವುದರಿಂದಲೇ ಶ್ರೀಹರಿಯ ವಿಶ್ವರೂಪದರ್ಶನವು ಭಯಕ್ಕೆ ಕಾರಣವಾಯಿತು. ಆದರೂ ಸರ್ವಕಾಲದಲ್ಲಿಯೂ ಸರ್ವದೇಶದಲ್ಲಿಯೂ ವಿಶ್ವರೂಪ ಹೊರತಾದ ಸರ್ವ ಭಗವತ್ಸ್ವರೂಪಗಳನ್ನು ನೋಡುತ್ತಿರುವವರಿಗೆ ಭಯವುಂಟಾಗುವುದಿಲ್ಲ (೪) (ಸರ್ವರಿಗೂ ಭಯವುಂಟಾಗುವುದರಿಂದ **ಪ್ರಾಯೋ ಭೀತಾಃ** ಎಂದದ್ದು ಹೇಗೆ? ಎಂದರೆ—) ಅರ್ಜುನನಿಗಿಂತ ಉತ್ತಮರು ಯಾರು ಇದ್ದಾರೋ ಅವರಿಗೆ ವಿಶ್ವರೂಪದರ್ಶನದಿಂದ ಭಯವೇ ಉಂಟಾಗುವುದಿಲ್ಲ (ಅಧಮರಲ್ಲಿ ನಾರದರಿಗೆ ಮಾತ್ರ ಭಯವುಂಟಾಗಲಿಲ್ಲ ಉತ್ತಮರಿಗೆಲ್ಲರಿಗೂ ಭಯವುಂಟಾಗಲಿಲ್ಲ) ಲಕ್ಷ್ಮೀ ಬ್ರಹ್ಮ, ರುದ್ರ, ಮೊದಲಾದವರಿಗೂ ದ್ರೌಪದೀದೇವಿಗೂ, ಭೀಮ, ಬಲರಾಮ, ಇವರಿಗೂ ಭಯವುಂಟಾಗಲಿಲ್ಲ, ಎಂಬುವ ಆಗ್ನೇಯವಚನದಿಂದ (ಅರ್ಜುನನಿಗಿಂತ ಉತ್ತಮರಾದ ಲಕ್ಷ್ಮ್ಯಾದಿಗಳನ್ನು ಅಧಮರಾದ ನಾರದಋಷಿಗಳನ್ನು, ಬಿಟ್ಟು ಬೇರೆ ಎಲ್ಲಾ ಜನರಿಗೆ ಭಯವುಂಟಾಗಿರುವುದರಿಂದ **ದೃಷ್ಟ್ವಾಽದ್ಭುತಂ ರೂಪಂ** ಇತ್ಯಾದಿ (ಶ್ಲೋ ೨೦) ಹೇಳಿದ್ದು ಕೂಡುತ್ತದೆ) (೫)(**ಪಶ್ಯಾಮಿ ದೇವಾಂಸ್ತವ ದೇವ ದೇಹೇ** (ಶ್ಲೋ ೧೫) ಎಂದು ಹೇಳಿದ್ರಿಂದ **ಅಮೀ ಹಿ ತ್ವಾ ಸುರಸಂಘಾ ವಿಶಂತಿ** (ಶ್ಲೋ ೨೧) ಎಂದು ದೇವತೆಗಳಿಗೆ ಪ್ರವೇಶವು ಹೇಳಿದ್ದು ಏಕೆ ಎಂದರೆ—) ಮುಕ್ತರಾದ ದೇವತೆಗಳ ಸಮೂಹಗಳು, ಪ್ರವೇಶಮಾಡುತ್ತಾರೆ (ಅಂದರೆ **ಅಮೀ ಹಿ ತ್ವಾಸುರ ಸಂಘಾಃ**(ಶ್ಲೋ. ೨೧) ಎಂಬುವಲ್ಲಿ ಪರೋಕ್ಷವಾಗಿ ನಿರ್ದಿಷ್ಟರಾದವರು ಮುಕ್ತರು **ಪಶ್ಯಾಮಿ ದೇವಾನ್** (ಶ್ಲೋ ೧೫) ಎಂಬುವಲ್ಲಿ ಅಮುಕ್ತರು ಆದಕಾರಣ ಪೌನರುಕ್ತ್ಯವಿಲ್ಲ) (ಮುಕ್ತರಿಗೇನೇ ಸ್ವೇಚ್ಛೆಯಿಂದ ಪರಮಾತ್ಮನಲ್ಲಿ ಪ್ರವೇಶವಿದೆ, ಎಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ಮುಕ್ತರಿಗೆ ಪರಮಾತ್ಮನಲ್ಲಿ ಪ್ರವೇಶವೂ ನಿರ್ಗಮವೂ ಕೂಡ ತಮ್ಮ ತಮ್ಮ ಇಚ್ಛೆಯಿಂದಲೇ ಆಗುವುದು, ಎಂದು ಬ್ರಹ್ಮಾಂಡದಲ್ಲಿ ಹೇಳಿದೆ ॥ ೨ ॥

ಪೀ—ಧೃತರಾಷ್ಟ್ರಪುತ್ರಾದಿಗಳಿಗೆ ಶ್ರೀಪರಮಾತ್ಮನ ಮುಖಪ್ರವೇಶದಲ್ಲಿ ಉದ್ಯುಕ್ತವಾದ ಚೇಷ್ಟೆಯಿಲ್ಲದಿರುವುದರಿಂದ **ಅಮೀ ಚ ತ್ವಾ ಧೃತರಾಷ್ಟ್ರಸ್ಯ ಪುತ್ರಾಃ** (ಶ್ಲೋ ೨೬) ಇತ್ಯಾದಿಗಳನ್ನು ಹೇಳಿದ್ದು ಹೇಗೆ ಕೂಡುತ್ತದೆ ಎಂದರೆ—

ತಾ ॥ (೧) **ಅನ್ಯಚೇಷ್ಟಾಂ ಕುರ್ವತಾಮಪಿ ಭಗವಚ್ಚೇಷ್ಟಯೈವ ಪ್ರಲಯೋದಕೇ** (ಪ್ರಲಯೇ) **ಪ್ರಜಾನಾಂ ಪ್ರವೇಶವತ್ಪ್ರವೇಶೋ ಯುಜ್ಯತೇ** ॥(೨) **ಸೇನಾಮುಧ್ಯತೋ ಭಗ-**

ವನ್ಮುಖಾನಾಮುಭಯೂಭಿಮುಖತ್ವಾಚ್ಚೋಭೇ ಸೇನೇ ತತ್ರ ಪ್ರವಿಶತಃ ॥ ಯೇ ತು ತಸ್ಮಿನ್ಮ್(ನ್ನೇವ ಮು)ಹೂರ್ತೇ ಮರಿಷ್ಯಂತಿ ತೇಷಾಂ ದಶನಾಂತರೇಷುಚೂರ್ಣಿತ-ಮಪಿ ಶಿರಃ ಸೂಕ್ಷ್ಮದೃಷ್ಟಿಗೋಚರತ್ವಾನ್ನಾನುಷದೃಷ್ಟ್ಯಾ ತಥಾ ನ ದೃಶ್ಯತೇ ॥ (೪) ಯಥಾ ಭಿನ್ನಮಪಿ ಘಟಾದಿಕಂ ಯಾವತ್ಪೃಥಜ್ನ ಪತತಿ ತಾವನ್ನಂದದೃಷ್ಟೀನಾಂ ನ ಜ್ಞಾಯತೇ ॥ (೫) ಯಥಾ ಪುರೂರವಸೋ ಜರಾಽಶ್ವಿಭ್ಯಾಮೇವ ದೃಷ್ಟಾ ॥ ೩ ॥

॥ ೧೬—೩೦ ॥

ಆ ॥(೧) ಪ್ರಲಯೋದಕಪ್ರವೇಶಕ್ಕೆ ಅನುಕೂಲವಾಗದ ವ್ಯಾಪಾರವುಳ್ಳ ಪ್ರಜೆಗಳಿಗೆ ಶ್ರೀಹರಿಯ ಜೇಷ್ಟೆಯಿಂದಲೇ ಪ್ರಲಯೋದಕದಲ್ಲಿ ಹೇಗೆ ಪ್ರವೇಶವಾಗುವುದೋ ಅದರಂತೆ ಭಗವನ್ಮುಖಪ್ರವೇಶಕ್ಕೆ ಅನುಕೂಲವಾದ ವ್ಯಾಪಾರವಿಲ್ಲದಿರುವ ದುರ್ಯೋಧನಾದಿಗಳಿಗೆ ಶ್ರೀಭಗವಂತನ ಮುಖಜೇಷ್ಟೆಯಿಂದಲೇ ಶ್ರೀಕೃಷ್ಣನ ಮುಖದಲ್ಲಿ ಪ್ರವೇಶವು ಕೂಡುತ್ತದೆ (೨) (ಶ್ರೀಪರಮಾತ್ಮನ ಮುಖಜೇಷ್ಟೆಯಿಂದಲೇ ಭಗವನ್ಮುಖದಲ್ಲಿ ಪ್ರವೇಶವೆಂದಾದರೆ ದುರ್ಯೋಧನಾದಿಗಳೇ ಶ್ರೀಪರಮಾತ್ಮನಿಗೆ ಅಭಿಮುಖರಾಗಿರುವುದರಿಂದ ಅವರಿಗೇನೇ ಶ್ರೀಕೃಷ್ಣನ ಮುಖದಲ್ಲಿ ಪ್ರವೇಶವಾಗುವದು ಆದಕಾರಣ **ಸಹಾಸ್ಮದೀಯೈರಪಿ** (ಶ್ಲೋ ೨೬) ಎಂದು— ಎರಡು ಸೇನೆಯವರಿಗೂ ಪ್ರವೇಶ ಹೇಳಿದ್ದು **ಹೇಗೆ** ಎಂದರೆ —) ೨ ಸೇನೆಗಳ ಮಧ್ಯದಲ್ಲಿ ಶ್ರೀಕೃಷ್ಣನ ಮುಖಗಳು ಕುರುಸೈನ್ಯ, ಪಾಂಡವಸೈನ್ಯ, ಹೀಗೆ ಎರಡು ಸೈನ್ಯಗಳಿಗೂ ಅಭಿಮುಖಗಳಾಗಿರುವುದರಿಂದ ಆ ಎರಡು ಸೈನ್ಯಗಳೂ ಶ್ರೀಕೃಷ್ಣನ ಮುಖದಲ್ಲಿ ಪ್ರವೇಶಿಸುತ್ತವೆ (೩) (ಹಾಗಾದರೆ ಬೇರೆ ಯಾರಿಗೂ ಕಾಣದಿದ್ದದು ಯುದ್ಧದ ಉಪಕ್ರಮದಲ್ಲಿಯೇ ಶತ್ರುಗಳ ಶಿರಸ್ಸುಗಳೆಲ್ಲವೂ ಚೂರ್ಣಗಳಾಗಿವೆ ಎಂಬುದು ನಾನು ಕಾಣುತ್ತೇನೆಂದು **ಕೇಚಿದ್ಬಿಲಗ್ನಾ ದಶನಾಂತರೇಷು(ಶ್ಲೋ.೨೭)** ಇತ್ಯಾದಿಗಳಿಂದ ಅರ್ಜುನನು ಹೇಳಿದ್ದು **ಹೇಗೆ** ಕೂಡುತ್ತದೆ ಎಂದರೆ -) ಯಾರು ಆದೇ ಮುಹೂರ್ತದಲ್ಲಿ ಸಾಯುತ್ತಾರೋ, ಅವರ ಶಿರಸ್ಸು ಶ್ರೀಕೃಷ್ಣನ ಹಲ್ಲುಗಳ ಮಧ್ಯದಲ್ಲಿ ನುಚ್ಚು ನೂರಾದಾಗ್ಯೂ) **ಸೂಕ್ಷ್ಮ** ದೃಷ್ಟಿ ಇದ್ದವರಿಗೆ ಮಾತ್ರ ಗೋಚರವಾಗಿರುವುದರಿಂದ **ಮನುಷ್ಯರ** ದೃಷ್ಟಿಗೆ **ಹಾಗೆ ಕಾಣುವದಿಲ್ಲ** (ಅಂದರೆ ಯುದ್ಧೋಪಕ್ರಮದಲ್ಲಿಯೇ ಸಾಯುವವರನ್ನೇ ಇಲ್ಲಿ ಇಟು ಕೊಂಡದ್ದರಿಂದ ಯುದ್ಧೋಪಕ್ರಮದಲ್ಲಿಯೇ ಹೀಗೆ ಹೇಳಿದ್ದು ಕೂಡುತದೆ ನುಚ್ಚು ನೂರಾಗಿ ಬಿದ್ದುದು ಸೂಕ್ಷ್ಮಜ್ಞಾನಿಗಳಿಗೆ ಮಾತ್ರ ಗೋಚರವಾಗಿರುವುದರಿಂದ ಬೇರೆಯವರಿಗೆ ಹಾಗೆ ಕಾಣದಿರುವುದು ಕೂಡತ್ತದೆ **ದಿವ್ಯಂ ದದಾಮಿ ತೇ ಚಕ್ಷುಃ** (ಶ್ಲೋ ೮) ಎಂದು ಹೇಳಿದ್ರಿಂದ ಅರ್ಜುನನಿಗೆ ದಿವ್ಯ ದೃಷ್ಟಿಯಿದ್ದುದರಿಂದ ಬೇರೆಯವರಿಗೆ ಕಾಣದಿದ್ದುದು ಅರ್ಜುನನು ನೋಡಿದನೆಂದು ಹೇಳಿದ್ದು ಕೂಡುತ್ತದೆ (೪) (ಬೇರೆಯವರಿಗೆ ಹಾಗೆ ಕಾಣದಿರುವಲ್ಲಿ ದೃಷ್ಟಾಂತ ಹೇಳುತ್ತಾರೆ-) ಘಟಪಟಾದಿಗಳು ಭಿನ್ನಗಳಾದಾಗ್ಯೂ ಪ್ರತ್ಯೇಕವಾಗಿ ಬೀಳುವ ಪರ್ಯಂತ ಮಂದದೃಷ್ಟಿಗೆ ಭಿನ್ನವಾಗಿದೆ, ಎಂದು ತಿಳಿಯುವುದಿಲ್ಲ (೫) (ಬೇರೆಯವರು ಕಾಣದಿದ್ದರೂ ದಿವ್ಯದೃಷ್ಟಿಯುಳ್ಳ ಅರ್ಜುನನು ಕಾಣುತ್ತಾನೆಂಬುವ ವಿಷಯದಲ್ಲಿ ದೃಷ್ಟಾಂತ ಹೇಳುತ್ತಾರೆ—) ಹೇಗೆಂದರೆ ಪುರೂರವರಾಜನ ಮುದಿತನವು ಬೇರೆಯವರಿಗೆ ತಿಳಿಯದಿದ್ದರೂ ಅಶ್ವಿನೀದೇವತೆಗಳಿಂದಲೇ ಕಾಣಲ್ಪಟ್ಟಿದೆ

ವಿ ॥ (1) ಪುರೂರವರಾಜನ ರೂಪಾತಿಶಯವನ್ನು ಕೇಳಿ ಅದನ್ನು ನೋಡುವುದಕ್ಕಾಗಿ ಬಂದಿರತಕ್ಕ ಅಶ್ವಿನೀದೇವತೆಗಳನ್ನು ಕುರಿತು ಮನೆಯೊಳಗೆ ಇರುತ್ತಿದ್ದ ರಾಜನು ಈಗ ತೈಲಾಭಿಷಿಕ್ತನಾಗಿದೆನೆ ಸ್ನಾನಮಾಡಿ ಆಭರಣಗಳನ್ನು ಧರಿಸಿಕೊಂಡು ಬರುತ್ತೇನೆಂದು ಹೇಳಲು ಸ್ನಾನಮಾಡುವುದಕ್ಕಿಂತ ಮೊದಲೂ ಮೇಲೆಯೂ ನಿನ್ನ ರೂಪವನ್ನು ನೋಡಬೇಕು ಶೀಘ್ರದಲ್ಲಿ ಬರಬೇಕೆಂದು ಅಶ್ವಿನೀದೇವತೆಗಳು ಉತ್ತರವನ್ನು ಕೊಡುತ್ತಿರಲು ಹೊರಗೆ ಬಂದ ರಾಜನನ್ನು ಅಶ್ವಿನೀದೇವತೆಗಳು ನೋಡಿದರು ಆ

ಮೇಲೆ ಸ್ನಾನಮಾಡಿ ಅಲಂಕರಿಸಿಕೊಂಡು ತಿರುಗಿ ಬಂದನು ಅವನನ್ನು ನೋಡಿ ಅಶ್ವಿನೀದೇವತೆಗಳು ನಕ್ಕರು. ನೆಗಾಡಲಿಕ್ಕೆ ಕಾರಣವೇನೆಂದು ರಾಜನು ಅಶ್ವಿನೀದೇವತೆಗಳ ಹತ್ತಿರ ಕೇಳಿದಾಗ **ಶೃಣು ಭೂಪಾಲ ಸಕಲಮಾವಯೋರ್ಹಾಸಕಾರಣಂ । ಯುಷ್ಮದ್ದರ್ಶನಸಂಭೂತಂ ಪ್ರಣಾಪನಯ ಹೇತುಕಂ । ಅಸ್ನಾತಸ್ಯಾಭವತ್ಪೂರ್ವಂ ಯಾದೃಶೀ ತೇ ಸುರೂಪತಾ । ಸಾಂಪ್ರತಂ ತಾದೃಶೀ ನೇಯಂ ಭೂಷಿತಸ್ಯಾಪಿ ಭೂಷಣೈಃ ॥** ಇತ್ಯಾದಿಗಳಿಂದ ವಿಷ್ಣುಧರ್ಮವಿಸ್ತರದಲ್ಲಿ ಸವಿಸ್ತಾರವಾಗಿ ಹೇಳಲ್ಪಟ್ಟಿದೆ ॥೧೬—೩೦ ॥

ಪೀ—ಭಗವತ್ಸ್ವರೂಪವನ್ನೂ ಶ್ರೀಹರಿಯ ಸಾಮಾನ್ಯ ಗುಣ ಕರ್ಮಗಳನ್ನೂ ತಿಳಿದವನಾದಾಗ್ಯೂ ಅರ್ಜುನನು ತಿಳಿಯದಿರುವ ಗುಣಕರ್ಮಗಳ ವಿಶೇಷ ಜ್ಞಾನಕ್ಕಾಗಿ ಪ್ರಶ್ನಿಸುತ್ತಾನೆ—

ಗೀ ॥ ಆಖ್ಯಾಹಿ ಮೇ ಕೋ ಭವಾನುಗ್ರರೂಪೋ
ನಮೋಽಸ್ತು ತೇ ದೇವವರ ಪ್ರಸೀದ ।
ವಿಜ್ಞಾತುಮಿಚ್ಛಾಮಿ ಭವಂತಮಾದ ಂ
ನ ಹಿ ಪ್ರಜಾನಾಮಿ ತವ ಪ್ರವೃತ್ತಿಂ ॥ ೩೧ ॥

ಅ ॥ ಉಗ್ರರೂಪಃ=ಭಯಂಕರ ಸ್ವರೂಪವುಳ್ಳ, ಭವಾನ್=ನೀನು, ಕಃ=ಎಂತಹ ಧರ್ಮಗಳು ಳ್ಳವನು? ಭಯಂಕರ ರೂಪವನ್ನು ಏತಕ್ಕೆ ತಾಳಿಕೊಂಡದ್ದು? ಮೇ=ನನಗೆ, ಆಖ್ಯಾಹಿ=ಹೇಳು, ದೇವ ವರ=ದೇವಶ್ರೇಷ್ಠನೇ, ತೇ=ನಿನಗೆ, ನಮಃ=ನಮಸ್ಕಾರವು, ಅಸ್ತು=ಆಗಲಿ ಪ್ರಸೀದ=ಸಂತುಷ್ಟ ನಾಗು ಆದ್ಯಂ=ಆದಿಪುರುಷನಾದ, ಭವಂತಂ=ನಿನ್ನನ್ನು, ವಿಜ್ಞಾತುಂ=ವಿಶೇಷವಾಗಿ ಸರಿಯಾಗಿ ತಿಳಿ ದುಕೊಳ್ಳುವುದಕ್ಕೋಸ್ಕರ, ಇಚ್ಛಾಮಿ=ಇಚ್ಛಿಸುತ್ತೇನೆ ಹಿ=ನಿಶ್ಚಯವು ತವ=ನಿನ್ನ, ಪ್ರವೃತ್ತಿಂ=ವ್ಯಾಪಾರವನ್ನು, ನ ಪ್ರಜಾನಾಮಿ=ಚೆನ್ನಾಗಿ ತಿಳಿಯುವುದಿಲ್ಲ ॥ ೩೧ ॥

ಪೀ—ಭಗವತ್ಸ್ವರೂಪವನ್ನೇ ತಿಳಿಯದೆ ಸ್ವರೂಪವನ್ನೇ ಪ್ರಶ್ನೆಮಾಡುತ್ತಾನೆ ಅಥವಾ ಸ್ವರೂಪ ಜ್ಞಾನವಿದ್ದರೂ ಭಗವದ್ಧರ್ಮಗಳನ್ನು ತಿಳಿಯದಿರುವುದರಿಂದ ಭಗವದ್ಧರ್ಮಗಳನ್ನು ಪ್ರಶ್ನೆಮಾಡುತ್ತಾನೆ, ಎಂಬೀ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ಭಾ ॥ (೧) ಧರ್ಮಾಂತರಜ್ಞಾನಾರ್ಥಮೇವ ಕೋ ಭವಾನಿತಿ ಪೃಚ್ಛತಿ । ಯಥಾ ಕಶ್ಚಿತ್ ಕಿಂಚಿನ್ನಾಮಾದಿಕಂ ಜಾನನ್ನಪಿ ಜಾತಿಜ್ಞಾನಾರ್ಥಂ ಪೃಚ್ಛತಿ ಕಸ್ತ್ವಮಿತಿ ॥ (೨) ಯದಿ ತಮೇವ ನ ಜಾನಾತಿ ತರ್ಹಿ ವಿಷ್ಣವಿತ್ಯೇವಂ ಸಂಬೋಧನಂ ನ ಸ್ಯಾತ್ । ತ್ವಮಕ್ಷರಮಿತ್ಯಾದಿ ಚ ॥ ೩೧ ॥

ಅ ॥ (೧) ವಿಶ್ವರೂಪದಲ್ಲಿದ್ದ ಕೆಲವು ಧರ್ಮಗಳನ್ನು ತಿಳಿದಿದ್ದರೂ ವಿಶೇಷ ಧರ್ಮಗಳನ್ನು ತಿಳಿದು ಕೊಳ್ಳುವುದಕ್ಕಾಗಿಯೇ ಕೋ ಭವಾನ್ ಎಂದು ಪ್ರಶ್ನೆ ಮಾಡಿರುತ್ತಾನೆ ಹೇಗೆ ಬೇರೆಯವರ ವ್ಯವಹಾರ ಗಳಿಂದ ಒಬ್ಬ ಮನುಷ್ಯನ ಹೆಸರನ್ನು ಪ್ರತ್ಯಕ್ಷದಿಂದ ರೂಪ (ಶರೀರ) ಮೊದಲಾದವುಗಳನ್ನು ತಿಳಿದವನಾ ದಾಗ್ಯೂ ಜಾತಿಯನ್ನು ತಿಳಿದುಕೊಳ್ಳುವುದಕ್ಕಾಗಿ ಒಬ್ಬನು ಇನ್ನೊಬ್ಬನೊಡನೆ ನೀನು ಯಾರು ಎಂದು ಹೇಗೆ ಪ್ರಶ್ನೆಮಾಡುತ್ತಾನೋ, (ಹಾಗೆಯೇ ಅರ್ಜುನನು ಶ್ರೀಪರಮಾತ್ಮನನ್ನು ಪರಮಾತ್ಮನ ಸಾಮಾನ್ಯ

ಧರ್ಮಗಳನ್ನು ತಿಳಿದವನಾದರೂ ಧರ್ಮಾಂತರಗಳನ್ನು ತಿಳಿದುಕೊಳ್ಳುವುದಕ್ಕಾಗಿ ನೀನು ಯಾರು ಎಂದೇ ಪ್ರಶ್ನಿಸುತ್ತಾನೆ. (೨) (ಭಯಂಕರ ರೂಪವನ್ನು ನೋಡಿ, ಇವನು ರುದ್ರನೋ ಯಮನೋ, ಎಂದು ಸ್ವರೂಪದಲ್ಲಿಯೇ ಸಂಶಯಪಟ್ಟವನಾಗಿ ಪ್ರಶ್ನೆ ಮಾಡಿದ್ದೆಂದು ಏಕೆ ಆಗಲಾರದೆಂದರೆ—) ಶ್ರೀಪರಮಾತ್ಮನ ಸ್ವರೂಪವನ್ನೇ ತಿಳಿಯಲಿಲ್ಲವೆಂದಾದರೆ **ಭಾಸಸ್ತವೋಗ್ರಾಃ ಪ್ರತಪಂತಿ ವಿಷ್ಣೋ**(ಶ್ಲೋ ೩೦)**ವಿಷ್ಣೋ** ಎಂದುಸಂಬೋಧನೆ ಮಾಡಿದ್ದೇ ಕೂಡದೆ ಹೋಗುವುದು (ಭಗವದ್ಧರ್ಮಗಳನ್ನು ಸಾಮಾನ್ಯತಃ ತಿಳಿಯಲಿಲ್ಲವೆಂದಾದರೆ–) **ತ್ವಮಕ್ಷರಂ ಪರಮಂ**(ಶ್ಲೋ ೧೮)ಇತ್ಯಾದಿಗಳನ್ನು ಹೇಳಿದ್ದು ಕೂಡದೆ ಹೋಗುವುದು (ಆದಕಾರಣ ಶ್ರೀಪರಮಾತ್ಮನನ್ನೂ ಶ್ರೀಪರಮಾತ್ಮನ ಧರ್ಮಗಳಾದ ಅಕ್ಷರತತ್ವಾದಿಗಳನ್ನೂ ತಿಳಿದು ಅಕ್ಷರತತ್ವಾದಿಗಳಿಂದ ಇತರಗಳಾದ ಧರ್ಮಗಳನ್ನು ತಿಳಿದುಕೊಳ್ಳುವುದಕ್ಕಾಗಿಯೇ ಪ್ರಶ್ನೆಮಾಡಿದ್ದು, ಎಂದೇ ಯುಕ್ತವು) ॥ ೩೧ ॥

ಪೀ—**ಆಖ್ಯಾಹಿ ಮೇ ಕೋ ಭವಾನ್** (ಶ್ಲೋ ೩೧) ಎಂಬುವಲ್ಲಿ ನೀನು ಯಾವ ದೇವತೆಯು, ಎಂದು ಪ್ರಶ್ನೆಮಾಡುತ್ತಾನೆಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ತಾ ॥ ವಿಶೇಷಗುಣಕರ್ಮವಿಷಯ ಏವ ಪ್ರಶ್ನಃ । ವಿಷ್ಣವಿತಿ ಸಂಬೋಧನಾತ್ ॥ ೩೧ ॥

ಅ ॥ (ಗುಣಾದಿಗಳನ್ನು ತಾನೇ ಹೇಳಿದ್ರಿಂದ ಪುನಃ ಪ್ರಶ್ನೆಯು ಏತಕ್ಕೆಂದರೆ—) ತಾನು ತಿಳಿಯದಿರುವ ವಿಶೇಷ ಗುಣಕರ್ಮ ವಿಷಯದಲ್ಲಿಯೇ ಪ್ರಶ್ನೆಯು (ಸ್ವರೂಪವಿಷಯದಲ್ಲಿಯೇ ಪ್ರಶ್ನೆಯೆಂದು ಏಕೆ ಆಗಲಾರದೆಂದರೆ—) **ಭಾಸಸ್ತವೋಗ್ರಾಃ ಪ್ರತಪಂತಿ ವಿಷ್ಣೋ** (ಶ್ಲೋ ೩೦) ಎಂದು ಅರ್ಜುನನು ಶ್ರೀಕೃಷ್ಣನನ್ನು **ವಿಷ್ಣೋ** ಸಂಬೋಧಿಸಿದ್ರಿಂದ ವಿಷ್ಣುವೆಂದು ಮೊದಲೇ ತಿಳಿದಿರುವುದರಿಂದ ವಿಶೇಷ ಗುಣಕರ್ಮಾದಿಗಳ ವಿಷಯದಲ್ಲಿಯೇ ಈ ಪ್ರಶ್ನೆಯು ಈ ಪ್ರಶ್ನೆಯು ಸ್ವರೂಪ ಮಾತ್ರ ವಿಷಯಕವಲ್ಲ ॥೩೧॥

ಪೀ—ಹೀಗೆ ಅರ್ಜುನನಿಂದ ಪ್ರಾರ್ಥಿಸಲ್ಪಟ್ಟ ಶ್ರೀಕೃಷ್ಣನು ತನ್ನ ಗುಣಾದಿಗಳನ್ನು ಹೇಳುತ್ತಾನೆ—

ಗೀ ॥ ॥ ಶ್ರೀಭಗವಾನುವಾಚ ॥

ಕಾಲೋಽಸ್ಮಿ ಲೋಕಕ್ಷಯಕೃತ್ಪ್ರವೃದ್ಧೋ
ಲೋಕಾನ್ಸಮಾಹರ್ತುಮಿಹ ಪ್ರವೃತ್ತಃ ।
ಋತೇಽಪಿ ತ್ವಾಂ ನ ಭವಿಷ್ಯಂತಿ ಸರ್ವೇ
ಯೇಽವಸ್ಥಿತಾಃ ಪ್ರತ್ಯನೀಕೇಷು ಯೋಧಾಃ ॥ ೩೨ ॥

ಅ ॥ ಶ್ರೀಭಗವಾನ್=ಶ್ರೀಕೃಷ್ಣನು, ಉವಾಚ=ಉಪದೇಶಿಸುತ್ತಾನೆ. (ನಾನು) ಕಾಲಃ=ಷಡ್ಗುಣ ಪರಿಪೂರ್ಣನು ಅಥವಾ ಜಗತ್ತಿಗೆ ಬಂಧನ ಸಂಹಾರ ಜ್ಞಾನ ಮೊದಲಾದವುಗಳನ್ನು ಮಾಡುತ್ತಾ ಇರುವುದರಿಂದ ಕಾಲನೆಂದು ಹೆಸರುಳ್ಳವನು, ಅಸ್ಮಿ=ಆಗಿರುತ್ತೇನೆ ಲೋಕಕ್ಷಯಕೃತ್=ಸರ್ವ ಜಗತ್ತನ್ನು ನಾಶಪಡಿಸುವವನು, ಪ್ರವೃದ್ಧಃ=ಸರ್ವದೇಶಗಳಲ್ಲಿ ವ್ಯಾಪಿಸಿಕೊಂಡಿರುವವನು, ಸರ್ವ ಕಾಲಗಳಲ್ಲಿಯೂ ಇರುವವನು, ಅಥವಾ ಅನಾದಿನಿತ್ಯನು, ಅಸ್ಮಿ=ಆಗಿರುತ್ತೇನೆ ಜಗತ್ತನ್ನು ನಾಶಗೊಳಿಸುವ ನಾನು, ಇಹ=ರಣಾಂಗಣದಲ್ಲಿ ಯುದ್ಧಕ್ಕಾಗಿ ಸನ್ನದ್ಧರಾಗಿ ನಿಂತಿರುವ ಜನಾನ್=ಜನರನ್ನು, ಸಮಾಹರ್ತುಂ=ಪ್ರತ್ಯಕ್ಷವಾಗಿಯೇ ಸಂಹರಿಸುವುದಕ್ಕಾಗಿ ಪ್ರವೃತ್ತಃ=ಪ್ರವೃತ್ತಿಮಾಡಿರುತ್ತೇನೆ (ಹಾಗಾದರೆ ಶ್ರೀಕೃಷ್ಣನು

ಪಾಂಡವರನ್ನು ಸಂಹರಿಸುವುದಕ್ಕಾಗಿ ಪ್ರವೃತ್ತಿ ಮಾಡಿದ್ದಾನೋ, ಏನು? ಎಂದರೆ-) ತ್ವಾಮಪಿ=(ಎಲೋ ಅರ್ಜುನನೇ) ನಿನ್ನನ್ನೂ, ಧರ್ಮರಾಜ ಮೊದಲಾದವರನ್ನೂ ಕೃಪಾಚಾರ್ಯ, ಅಶ್ವತ್ಥಾಮ, ಕೃತವರ್ಮರನ್ನೂ ಬಿಟ್ಟು ಪ್ರತ್ಯನೀಕೇಷು = ಪರಸ್ಪರ ಪ್ರತಿಸ್ಪರ್ಧೆಯಿಂದ ಯುದ್ಧಕ್ಕಾಗಿ ನಿಂತಿರುವ ಎರಡು ಸೈನ್ಯಗಳ ಮಧ್ಯದಲ್ಲಿ, ಯೇ=ಯಾವ,ಯೋಧಾಃ=ಯುದ್ಧ ಮಾಡುವವರು, ಅವಸ್ಥಿತಾಃ=ನಿಂತಿರುವರೋ, ತೇ ಸರ್ವೇ= ಅವರೆಲ್ಲರೂ, ನ ಭವಿಷ್ಯಂತಿ = ಇರುವುದೇ ಇಲ್ಲ (ಅಂದರೆ— ಪಂಚ ಪಾಂಡವರೂ ಅಶ್ವತ್ಥಾಮ ಕೃತವರ್ಮ, ಕೃಪಾಚಾರ್ಯರು ಇವರು ಹೊರತು ಎಲ್ಲರೂ ಮರಣಹೊಂದುವರು ॥ ೩೨ ॥

ಪೀ— ಕಾಲ ಶಬ್ದವು ಸಂಪೂರ್ಣ ಸದ್ಗುಣಾದಿಗಳನ್ನು ಹೇಳುತ್ತದೆ, ಎಂಬುವ ಅಭಿಪ್ರಾಯದಿಂದ ಸ್ಮೃತಿಯನ್ನು ಹೇಳುತ್ತಾರೆ—

ಕಾ ॥ (೧) ಕಾಲಃ ಕಲಿತಸಂಪೂರ್ಣಸದ್ಗುಣತ್ವಾಜ್ಜನಾರ್ದನಃ । ಸಂಹಾರಾತ್ಸರ್ವವಿ-ತ್ತ್ವಾದ್ವಾ ಸರ್ವವಿದ್ರಾವಣೇನ ವೇತಿ ಮಹಾವಾ(ವ)ರಾಹೇ ॥ (೨) ಅಪಿಶಬ್ದೇನ ಭ್ರಾತ್ರಾದೀನಪ್ಯೃತೇ ॥ ೩೨ ॥

ಅ ॥ (೧) ಶ್ರೀಹರಿಯಾತ್ಮನು ತನ್ನಿಂದ ಸಂಬದ್ಧಗಳಾದ ಸಂಪೂರ್ಣ ಸದ್ಗುಣಗಳುಳ್ಳವನಾದುದರಿಂದಲೂ ಸರ್ವ ಜಗತ್ತನ್ನು ಸಂಹರಿಸುವುದರಿಂದಲೂ, ಸಮಸ್ತವನ್ನು ತಿಳಿದವನಾದುದರಿಂದಲೂ, ಸರ್ವವನ್ನು ಓಡಿಸುವುದರಿಂದಲೂ **ಕಾಲಃ** ಎನಿಸುತ್ತಾನೆ, ಎಂದು ಮಹಾವಾರಾಹದಲ್ಲಿದೆ (೨) ಇಲ್ಲಿ ಅರ್ಜುನನು ಒಬ್ಬನು ಹೊರತು ಎಲ್ಲರೂ ಸಾಯುತ್ತಾರೆಂದು ಅರ್ಥವಲ್ಲ, ಮತ್ತೆ ಅರ್ಜುನನು, ಅರ್ಜುನನ ಸಹೋದರರೂ ಅಶ್ವತ್ಥಾಮಾದಿಗಳೂ ಹೊರತು ಬೇರೆಯವರೆಲ್ಲರೂ ಸಾಯುತ್ತಾರೆಂದರ್ಥವು ಅಪಿಪದದಿಂದ ಅವರಷ್ಟು ಮಂದಿಯನ್ನು ಇಟ್ಟುಕೊಳ್ಳಬೇಕು ॥ ೩೨ ॥

ಪೀ—೨ನೇ ಅಧ್ಯಾಯದಲ್ಲಿ ಅರ್ಜುನನು ತನಗೆ ಜಯವು ಲಭಿಸುವುದೋ, ಸೋಲು ಬರುವುದೋ, ಎಂದು ಸಂಶಯಪಟ್ಟಿದ್ದಕ್ಕೆ ಶ್ರೀಕೃಷ್ಣನು ಸಂದೇಹವಿದ್ದರೂ ಯುದ್ಧ ಮಾಡುವುದೇ ಪ್ರಶಸ್ತವು ಯುದ್ಧದಲ್ಲಿ ಜಯಿಸಿದರೆ ರಾಜ್ಯಲಾಭವಾಗುವುದು ಮರಣ ಹೊಂದಿದರೆ ಸ್ವರ್ಗವು ಲಭಿಸುವುದು, ಎಂದುತ್ತರವನ್ನು ಹೇಳಿರುವನು ಈಗ ನಿನಗೆ ಪರಾಜಯ ಶಂಕೆಯೂ ಇಲ್ಲ ನಿಶ್ಚಯವಾಗಿಯೂ ಜಯವೇ ಲಭಿಸುವುದು, ಆದುದರಿಂದ ಯುದ್ಧ ಮಾಡು ಎಂದು ಶ್ರೀಕೃಷ್ಣನು ಹೇಳುತ್ತಾನೆ—

ಗೀ ॥ ತಸ್ಮಾತ್ತ್ವಮುತ್ತಿಷ್ಠ ಯಶೋ ಲಭಸ್ವ
ಜಿತ್ವಾ ಶತ್ರೂನ್ಭುಂಕ್ಷ್ವ ರಾಜ್ಯಂ ಸಮೃದ್ಧಂ ।
ಮಯೈವೈತೇ ನಿಹತಾಃ ಪೂರ್ವಮೇವ
ನಿಮಿತ್ತಮಾತ್ರಂ ಭವ ಸವ್ಯಸಾಚಿನ್ ॥ ೩೩ ॥

ಅ ॥ ತಸ್ಮಾತ್ = ನಾನೇ ಸಮಸ್ತ ಲೋಕಗಳನ್ನು ವಿನಾಶ ಪಡಿಸಲಿಕ್ಕೆ ಪ್ರವೃತ್ತಿಮಾಡಿರುವುದರಿಂದ ವಿಜಯವು ಬರಲಿಕ್ಕೆ ಸಂಶಯವೇ ಇಲ್ಲದಿರುವ ಪ್ರಯುಕ್ತ, ಉತ್ತಿಷ್ಠ = ಯುದ್ಧಕ್ಕೆ ಸನ್ನದ್ಧನಾಗಿ ನಿಲ್ಲು, ಶತ್ರೂನ್ = ಶತ್ರುಗಳನ್ನು ॥ ಜಿತ್ವಾ = ಗೆದ್ದು, ಯಶಃ = ಕೀರ್ತಿಯನ್ನು, ಲಭಸ್ವ = ಹೊಂದು, ಸಮೃದ್ಧಂ=ಕೋಶಾದಿ (ಸಂಪದಾದಿ)ಗಳಿಂದ ತುಂಬಿರುವ ರಾಜ್ಯಂ=ಸಾಮ್ರಾಜ್ಯವನ್ನು, ಭುಂಕ್ಷ್ವ = ಅನು

ಭಾವಿಸು. ಏತೇ = ಯುದ್ಧಕ್ಕೆ ಸನ್ನದ್ಧರಾಗಿ ನಿಂತವರೆಲ್ಲರೂ, ಮಯೈವ = ನನ್ನಿಂದಲೇ, ಪೂರ್ವಮೇವ = ಮೊದಲೇ, ನಿಹತಾಃ = ಸಂಹೃತವ್ಯಾಯರು (ಅಂದರೆ ಅವರ ಆಯುಷ್ಯವನ್ನು ನಾನೇ ಕಳೆದಿರುವುದರಿಂದ ಅವರು ಮರಣಹೊಂದಲಿಕ್ಕೆ ಸನ್ನದ್ಧರಾಗಿ ನಿಂತಿದ್ದಾರೆ) ಸವ್ಯಸಾಚಿನ್ = ಅರ್ಜುನನೇ, ನಿಮಿತ್ತ ಮಾತ್ರಂ ಭವ = ಆ ಶತ್ರುಗಳನ್ನು ಪ್ರತ್ಯಕ್ಷವಾಗಿ ಕೊಲ್ಲಲಿಕ್ಕೆ ನಿಮಿತ್ತಮಾತ್ರನಾಗು (ಅಂದರೆ ಅರ್ಜುನನು ಸಂಹರಿಸಿದನು, ಎಂದು ಹೆಸರು ಪಡಿಯಲಿಕ್ಕೆ ಮಾತ್ರ ಕಾರಣನಾಗು ಮುಂದೆಯೂ ನಾನೇ ನಿನ್ನಲ್ಲಿದ್ದು ಶತ್ರುಗಳನ್ನು ಸಂಹರಿಸುವೆನು) ॥ ೩೩ ॥

ಭಾ ॥ (೧) ಕಾಲಶಬ್ದೋ ಜಗದ್ಬಂಧನಚ್ಛೇದನಜ್ಞಾನಾದಿಸರ್ವಭಗವದ್ಧರ್ಮವಾಚೀ । ಕಲ ಬಂಧನೇ ಕಲ ಛೇದನೇ ಕಲ ಜ್ಞಾನೇ ಕಲ ಕಾಮಧೇನುರಿತಿ ಚ ಪರಂತಿ ॥ (೨) ಪ್ರಸಿದ್ಧಶ್ಚ ಸ ರಬ್ದೋ ಭಗವತಿ । ನಿಯತಂ ಕಾಲಪಾಶೇನ ಬದ್ಧಂ ಶಕ್ರ ವಿಕ-ತ್ಥಸೇ । ಅಯಂ ಸ ಪುರುಷಃ ಶ್ಯಾಮೋ ಲೋಕಸ್ಯ ಹರತಿ ಪ್ರಜಾಃ । ಬಧ್ವಾ ತಿಷ್ಠತಿ ಮಾಂ ರೌದ್ರಃ ಪಶೂಪ್ರತನಯಾ ಯಧೇತಿ ಮೋಕ್ಷಧರ್ಮೇ ವಿಷ್ಣುನಾ ಒದ್ಧೋ ಬಲಿರ್ವಕ್ತಿ ॥ ವಿಷ್ಣೌ ಚಾಧೀಶ್ವರೇ ಚಿತ್ತಂ ಧಾರಯನ್ಕಾಲವಿಗ್ರಹ ಇತಿ ಭಾಗವತೇ॥ ಪ್ರವೃದ್ಧಃ ಪರಿಪೂರ್ಣೋಽನಾದಿರ್ವಾ । ಋತಂ ಚ ಸತ್ಯಂ ಚಾಭೀದ್ಧಾದಿತಿ ಹಿ ಶ್ರುತಿಃ । ಏತನ್ಮಪದ್ಧೃತಮನಂತಮಿತಿ ಚ ॥ ೧ ॥

ಅ ॥ (೧) ಕಾಲಶಬ್ದವು ಜಗತ್ತನ್ನು ಬಂಧಿಸುವುದು ಜಗತ್ತನ್ನು ನಾಶಗೊಳಿಸುವುದು, ಜಗತ್ತಿಗೆ ಜ್ಞಾನವನ್ನು ಹುಟ್ಟಿಸುವುದು, ಮೊದಲಾದ ಎಲ್ಲಾ ಭಗವದ್ಧರ್ಮ ವಿಶೇಷಗಳನ್ನು ಹೇಳುತ್ತದೆ (ಇದು ಹೇಗೆ ಎಂದರೆ-) ಕಲಧಾತುವು ಜಗತ್ತನ್ನು ಬಂಧಿಸುವುದೆಂಬುವ ಅರ್ಥದಲ್ಲಿಯೂ, ಜಗತ್ತನ್ನು ನಾಶಗೊಳಿಸುವುದೆಂಬುವ ಅರ್ಥದಲ್ಲಿಯೂ, ಜ್ಞಾನವೆಂಬುವ ಅರ್ಥದಲ್ಲಿಯೂ ಇದೆ ಕಾಮಧೇನುವು ಹೇಗೆ ಸರ್ವಾರ್ಥಗಳನ್ನು ಕೊಡುತ್ತದೋ, ಹಾಗೆಯೇ ಈ ಕಲಧಾತುವು ಸರ್ವಾರ್ಥಗಳನ್ನು ಹೇಳುತ್ತದೆ, ಎಂದು ಹೇಳುತ್ತಾರೆ (೨) (ಈ ಕಲಧಾತುವು ಬಂಧನ ಮೊದಲಾದ ಧರ್ಮ ವಿಶೇಷವುಳ್ಳ ವಸ್ತುವನ್ನು ಹೇಳುತ್ತದೆಂದಾಗಲೀ ಬೇರೆ ಕಡೆಯೇ ರೂಢವಾಗಿರುವುದರಿಂದ ಶ್ರೀಪರಮಾತ್ಮನನ್ನು ಹೇಳುತ್ತದೆಂಬುವುದು ಹೇಗೆ ಎಂದರೆ-) ಕಾಲಶಬ್ದವು ಶ್ರೀಪರಮಾತ್ಮನಲ್ಲಿ ಪ್ರಸಿದ್ಧವೇ ಆಗಿದೆ (ಹೇಗೆಂದರೆ) ದೇವೇಂದ್ರನೇ ನಿಯಮವಾಗಿ ಕಾಲ ಎನಿಸಿದ ಶ್ರೀಹರಿಯ ಪಾಶದಿಂದ ಬದ್ಧನಾದ ನನ್ನನ್ನು ಕುರಿತು ತನ್ನ ಸ್ತುತಿಯನ್ನೇ ಮಾಡಿಕೊಳ್ಳುತ್ತಿ ನೀಲಮೇಘಶ್ಯಾಮವರ್ಣನಾದ ಶ್ರೀಗುಣಪೂರ್ಣನಾದ ಪರಮಾತ್ಮನು ಲೋಕದ ಪ್ರಜಗಳನ್ನು ನಾಶಗೊಳಿಸುತ್ತಾನೆ ಜಗತ್ತಿಗೆ ಭಯವನ್ನುಂಟುಮಾಡುವ ಶ್ರೀಪರಮಾತ್ಮನು ಹಗ್ಗದಿಂದ ಪಶುವನ್ನು ಕಟ್ಟಿದಂತೆ ನನ್ನನ್ನು ಬಂಧಿಸಿಕೊಂಡು ಇರುತ್ತಾನೆ, ಎಂದು ಮೋಕ್ಷಧರ್ಮದಲ್ಲಿ ಶ್ರೀವಿಷ್ಣುವಿನಿಂದ ಬದ್ಧನಾದ ಬಲಿಚಕ್ರವರ್ತಿಯು (ಲೋಕಬಂಧಕತ್ವ, ಲೋಕಸಂಹಾರಕತ್ವ ಶ್ಯಾಮತ್ವ ಮೊದಲಾದ ವಿಶೇಷಗುಣಗಳಿಂದ ಕಾಲ ಶಬ್ದದಿಂದ ಹೇಳಲ್ಪಡತಕ್ಕವನು ಶ್ರೀಪರಮಾತ್ಮನು ಎಂದು) ಹೇಳುತ್ತಾನೆ (೩) ಕಾಲನಾಮಕ ಶರೀರವುಳ್ಳ ಸರ್ವೇಶ್ವರನಾದ ಶ್ರೀವಿಷ್ಣುವಿನಲ್ಲಿ ಮನಸ್ಸನ್ನು ಇಡುವವನಾಗಿ ಇರುತ್ತಾನೆಂದು ಭಾಗವತದಲ್ಲಿಯೂ (ಕಾಲಶಬ್ದ ಪ್ರಯೋಗವು ಶ್ರೀವಿಷ್ಣುವಿನಲ್ಲಿದೆ ಪ್ರವೃದ್ಧಃ= ಸರ್ವಗುಣಪರಿಪೂರ್ಣನು, ಅಥವಾ ಅನಾದಿಸಿದ್ಧನು, (ಪ್ರವೃದ್ಧ ಶಬ್ದಕ್ಕೆ ಬೆಂಬೆ ಹೇಳಿದ ಅರ್ಥವು ಇದೆ ಎಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ-) ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಽಧ್ಯಜಾಯತ । ಸರ್ವಕಾಲದಲ್ಲಿರುವ, ವಿಶೇಷ ಪ್ರಕಾಶವುಳ್ಳ ಶ್ರೀಪರಮಾತನಿಂದ ಯಥಾರ್ಥಜ್ಞಾನವೂ, ಯಥಾರ್ಥಜ್ಞಾನ

ಪೂರ್ವಕವಾದ ಜಗತ್ಸೃಷ್ಟಿಯೂ ಆಯಿತು ಸರ್ವೋತ್ತಮನಾದ ಶ್ರೀಪರಮಾತ್ಮನು ಸರ್ವ ಕಾಲದಲ್ಲಿಯೂ ಇರತಕ್ಕವನು (ಇದರಂತೆಯೇ ಪ್ರವೃದ್ಧಶಬ್ದಕ್ಕೂ ಪರಿಪೂರ್ಣ, ಅನಾದಿನಿತ್ಯಗಳೆಂಬುವ ಅರ್ಥಗಳು ಸಿದ್ಧಿಸುತ್ತವೆ) ॥ ೧೫ ॥

ಹೀ—(ಇದ್ಧಾತ್ ಭೂತಂ ಎಂಬುವಲ್ಲಿಯೂ, ಅತೀತಾರ್ಥಕ ತ ಪ್ರತ್ಯಯವಿದ್ದರೂ ಸಾರ್ವಕಾಲಿಕ ದೀಪ್ತಿಯೂ ಸಾರ್ವಕಾಲಿಕಸ್ಥಿತಿಯೂ ಶ್ರೀಪರಮಾತ್ಮನಿಗೆ ನಿಶ್ಚಯವಾಗುವುದಿಲ್ಲ, ಎಂದರೆ—) ಶ್ರೀಪರಮಾತ್ಮನ ದೀಪ್ತಿಯೂ ಸಾರ್ವಕಾಲಿಕಸ್ಥಿತಿಯೂ ಶ್ರೀಪರಮಾತ್ಮನಿಗೆ ಸರ್ವ ಕಾಲದಲ್ಲಿದ್ದೂ ಇರತಕ್ಕುದು, ಎಂಬುವ ವಿಷಯದಲ್ಲಿ ವೇದಪ್ರಮಾಣವನ್ನು ಹೇಳುತ್ತಾರೆ—

ಭಾ ॥ (೧) ಪ್ರವಿಷ್ಣುರಸ್ತು ತವಸಸ್ತವೀಯಾನ್ತ್ವೇಷಂ ಹ್ಯಸ್ಯ ಸ್ಥವಿರಸ್ಯ ನಾಮೇತಿ ಚ । ನ ತು ವರ್ಧನಂ ॥ (೨) ನಾಸೌ ಜಜಾನ ನ ಮರಿಷ್ಯತಿ ನೈಧತೇಽಸಾವಿತಿ ಭಾಗವತೇ ॥ (೩) ಯಸ್ಯ ದಿವ್ಯಂ ಹಿ ತದ್ರೂಪಂ ಕ್ಷೀಯತೇ ವರ್ಧತೇ ನ ಚೇತಿ ಮೋಕ್ಷಧರ್ಮೇ ॥ (೪) ನ ಕರ್ಮಣೇತಿ ತು ಕರ್ಮಣಾಽಪಿ ನ ಕಿಮು ಸ್ವಯಮಿತಿ ॥ (೫) ಲೋಕಾನ್ ಸಮಾಹರ್ತುಮಿಹ ವಿಶೇಷೇಣ ಪ್ರವೃತ್ತಃ ॥ (೬) ಭ್ರಾತ್ರಾದೀಂಶ್ಚರ್ತ ಇತ್ಯಪಿಶಬ್ದಃ। ಪ್ರತ್ಯನೀಕತ್ವಂ ತು ಪರಸ್ಪರತಯಾ । ಸರ್ವೇಽಪಿ ನ ಭವಿಷ್ಯಂತಿ । ಅಕ್ಷೌಹಿಣ್ಯಾದಿ-ಭೇದೇನ ಬಹುವಚನಂ ಚ ಯುಕ್ತಂ ॥ ೨ ॥ ॥ ೩೨,೩೩ ॥

ಅ ॥ (೧)ಸರ್ವೋತ್ತಮನಾದ ಶ್ರೀವಿಷ್ಣುವು ಕೆಲವು ದೇಶ ಕೆಲವು ಕಾಲಗಳಲ್ಲಿರತಕ್ಕ ಸೂರ್ಯಾದಿಗಳ ತೇಜಸ್ಸಿಗಿಂತ ಹೆಚ್ಚು ತೇಜೋರೂಪನಾಗಿರುತ್ತಾನೆ ಎಲ್ಲರಿಗಿಂತಲೂ ಅತಿಶಯಿತ ತೇಜೋರೂಪತ್ವ ವಿದ್ದುದರಿಂದಲೇ ಅನಾದಿಕಾಲೀನನಾದ ಸರ್ವ ಕಾಲದಲ್ಲಿಯೂ ಇರತಕ್ಕ ಶ್ರೀಪರಮಾತ್ಮನಿಗೆ ತ್ವೇಷಂ ಎಂದು ಹೆಸರು (ಅಂದರೆ ಪರಮಾತ್ಮನ ಪ್ರಕಾಶವು ಸೂರ್ಯಾದಿಗಳ ತೇಜಸ್ಸಿಗಿಂತ ಅತಿಶಯಿತವಾಗಿರುವುದರಿಂದ ಶ್ರೀಪರಮಾತ್ಮನಿಗೇನೇ ಅಸಾಧಾರಣವಾಗಿ ತ್ವೇಷಂ ಎಂದು ಹೆಸರು) ಶ್ರೀಹರಿಗೆ ತಾತ್ಕಾಲಿಕ ಅಭಿವೃದ್ಧಿರೂಪವಿಕಾರವು ಇಲ್ಲ (೨) ಶ್ರೀಪರಮಾತ್ಮನು ಹುಟ್ಟುವುದಿಲ್ಲ, ಸಾಯುವುದಿಲ್ಲ ಮೊದಲು ಅಲ್ಪನಾಗಿದ್ದು ಮತ್ತೆ ಅಭಿವೃದ್ಧಿರೂಪವಾದ ವಿಕಾರವನ್ನು ಹೊಂದುವುದಿಲ್ಲ ಯಾವಾಗಲೂ ಸರ್ವಗುಣ ಪರಿಪೂರ್ಣನೇ ಆಗಿರುತ್ತಾನೆ, ಎಂದು ಭಾಗವತದಲ್ಲಿದೆ (೩) (ಶ್ರೀಪರಮಾತ್ಮನಿಗೆ ಉತ್ಪತ್ತಿ, ಅಭಿವೃದ್ಧಿ ಮೊದಲಾದ ವಿಕಾರಗಳು ಇಲ್ಲದಿರುವುದರಿಂದ ಮೂಲರೂಪಿಪರಮಾತ್ಮನಿಗೆ ವಿಕಾರರೂಪ ವೃದ್ಧಿಯಿಲ್ಲದಿದ್ದರೂ ಕೃಷ್ಣರಾಮಾದಿ ಅವತಾರರೂಪಗಳಿಗೆ ವೃದ್ಧಿ ಮೊದಲಾದ ವಿಕಾರಗಳು ಇರಬಹುದಷ್ಟೆ ಎಂದರೆ-) ಯಾವ ಶ್ರೀಪರಮಾತ್ಮನ ಅವತಾರರೂಪವು ಆಪ್ರಾಕೃತವೆಂದು ಪ್ರಸಿದ್ಧವಾಗಿದೆಯೋ, ಆ ಅವತಾರರೂಪಕ್ಕೂ ಕೂಡ ಹ್ರಾಸವು ವೃದ್ಧಿ ಮೊದಲಾದ ಯಾವ ವಿಕಾರವೂ ಇಲ್ಲ (ಹೀಗೆ ಅವತಾರರೂಪಕೂ ಸಹ ನೃದ್ಧ್ಯಾದಿರೂಪ ವಿಕಾರವಿಲ್ಲವೆಂದು) ಮೋಕ್ಷಧರ್ಮದಲ್ಲಿದೆ (೪) **(ನ ಕರ್ಮಣಾ ವರ್ಧತೇ ನೋ ಕನೀಯಾನ್** ಎಂಬುವ ಶ್ರುತಿಯಲ್ಲಿ ಕರ್ಮನಿಮಿತ್ತಕವಾದ ವೃದ್ಧಿವಿಶೇಷವನ್ನು ನಿಷೇಧಮಾಡಿದ್ರಿಂದ ವೃದ್ಧಿಸಾಮಾನ್ಯವಿಲ್ಲವೆಂದು ಆಗುವುದಿಲ್ಲವೆಂದರೆ-) ನ ಕರ್ಮಣಾ ಎಂಬುವ ಶ್ರುತಿಯಲ್ಲಿ ವಿಶೇಷ ನಿಷೇಧ ಮಾಡಿದ್ದು ವೃದ್ಧಿರೂಪವಿಕಾರಕ್ಕೆ ಕಾರಣವಾಗಿ ಪ್ರಸಿದ್ಧವಾದ ಯಾವ ಕರ್ಮದಿಂದಲೂ ಯಾವಾಗ ವೃದ್ಧಿಯಿಲ್ಲವೋ, ಆಗ ತಾನಾಗಿ ಕರ್ಮ ಹೊರತು ಅಭಿವೃದ್ಧನಾಗುವುದಿಲ್ಲವೆಂಬುವುದು ಸ್ವತರಾಂ ಸಿದ್ಧವೆಂದು ವೃದ್ಧಿರೂಪವಿಕಾರ ಕಾರಣವಿಶೇಷವನ್ನು ಮಾತ್ರ ನಿಷೇಧಿಸುವದಕ್ಕಾಗಿ ಕೈಮುತ್ಯ ಹೇಳಿದ್ದು (ಸಾಮಾನ್ಯತಃ ಅಭಿವೃದ್ಧಿ ಇರಬಹುದೆಂಬುವ ಅಭಿಪ್ರಾಯದಿಂದ ಅಲ್ಲ) (೫) (ಸರ್ವತ್ರ ಶ್ರೀಪರಮಾತ್ಮನೇ

ಸರ್ವಲೋಕಗಳನ್ನು ಸಂಹರಿಸುವವನು. ಆದಕಾರಣ ಇಹ ಎಂದು ವಿಶೇಷತಃ ಹೇಳಿದ್ದು ಏಕೆ? ಎಂದರೆ–) ಇಹ = ರಣಾಂಗಣದಲ್ಲಿ ಯುದ್ಧಕ್ಕಾಗಿ ಸನ್ನದ್ಧರಾದ ಬಹು ಮಂದಿ ಜನರನ್ನು ಏಕಕಾಲದಲ್ಲಿಯೇ ಪ್ರತ್ಯಕ್ಷ ರೂಪದಿಂದಲೇ ಸಂಹರಿಸುವುದಕ್ಕಾಗಿಯೇ ಪ್ರವೃತ್ತಿ ಮಾಡಿರುವನೆಂಬ ವಿಶೇಷವನ್ನು ತಿಳಿಸುವುದಕ್ಕಾಗಿ ಇಹ ಎಂದು ಹೇಳಿದ್ದು (೬) (ಧರ್ಮರಾಜಾದಿಗಳೂ ಯುದ್ಧದಲ್ಲಿ ಉಳಿದಿರುವುದರಿಂದ **ತ್ವಾನ್ಮೃತೇ** ನಿನ್ನನ್ನು (ಅರ್ಜುನನ್ನು) ಹೊರತು ಎಂದೇ ಹೇಳಿದ್ದು ಹೇಗೆ ಕೂಡುತ್ತದೆ ಎಂದರೆ–) ಸಹೋದರರಾದ ಧರ್ಮರಾಜಾದಿಗಳನ್ನು ಹೊರತು, ಎಂದು **ಅಪಿ** ಶಬ್ದವು ತೋರಿಸುತ್ತದೆ ಪ್ರತಿಕೂಲ (ವಿರೋಧಿ) ವಾದ ಸೈನ್ಯದಲ್ಲಿರ ತಕ್ಕ ಯೋಧರು ಮೃತರಾಗುತ್ತಾರೆಂದು ಹೇಳಿದರೆ ಪಾಂಡವರಿಗೆ ಮರಣಶಂಕೆಯೇ ಬಾರದಿರುವುದರಿಂದ ಪಾಂಡವರನ್ನು **ಬಿಟ್ಟು** ಎಂದು ಹೇಳಿದ್ದು ಏಕೆ? ಎಂದರೆ) ವಿರೋಧಿ ಸೈನ್ಯವೆಂದು ಹೇಳಿದ್ದರಿಂದ ಪಾಂಡವರ ಸೈನ್ಯವು ಕೌರವರಿಗೆ ವಿರೋಧಿಯು ಕೌರವರ ಸೈನ್ಯವು ಪಾಂಡವರಿಗೆ ವಿರೋಧಿಯಾದುದರಿಂದ **ಪ್ರತ್ಯ ನೀಕ** ಶಬ್ದದಿಂದ ಕುರು ಪಾಂಡವ ಎರಡು ಸೇನೆಗಳಿಗೂ ಗ್ರಹಣವು ಬರುವುದರಿಂದ ಪಾಂಡವರೂ ಸಂಹೃತ ರಾಗುವರು ಎಂಬುವ ಶಂಕೆಯು ಬರಬಹುದು, ಏಕೆ ಹೀಗೆ ಅರ್ಥ ಹೇಳಬೇಕೆಂದರೆ–) ಎರಡು ಸೈನ್ಯಗಳಲ್ಲಿ ರುವವರೂ ಕೂಡ ಉಳಿಯುವುದಿಲ್ಲ (ಅಂದರೆ ಪಾಂಡವರ ಸೈನ್ಯಗಳಲ್ಲಿ ಪಂಚಪಾಂಡವರು ಹೊರತು ಯಾರೂ ಉಳಿಯುವುದಿಲ್ಲ ಕೌರವರ ಸೈನ್ಯಗಳಲ್ಲಿ ಕೃಪ ಅಶ್ವತ್ಥಾಮ ಕೃತವರ್ಮ ಈ ಮೂವರು ಹೊರತು ಯಾರೂ ಉಳಿಯುವುದಿಲ್ಲ.) (ಪರಸ್ಪರ ವಿರೋಧಿಗಳಾಗಿ ಇರುವವುಗಳು ಎರಡು ಸೈನ್ಯಗಳಾದ ಪ್ರಯುಕ್ತ **ಪ್ರತ್ಯನೀ-ಕಯೋಃ** ಎಂದು ದ್ವಿವಚನವನ್ನು ಹೇಳಬೇಕಿತ್ತು **ಪ್ರತ್ಯನೀಕೇಷು** ಎಂದು ಬಹುವಚನವು ಹೇಗೆ ಕೂಡುತ್ತದೆ ಎಂದರೆ-)ಕೌರವರದ್ದು ೧೧ ಅಕ್ಷೌಹಿಣೀ ಸೈನ್ಯವು ಪಾಂಡವರದ್ದು ೭ ಅಕ್ಷೌಹಿಣೀ ಸೈನ್ಯವು ಒಂದು ಅಕ್ಷೌಹಿಣಿಗೆ ೨೧೮೭೦ ಆನೆಗಳೂ ರಥಗಳೂ, ೬೫೬೧೦ ಕುದುರೆಗಳೂ, ೧೦೯೩೫೦ ಕಾಲಾಳುಗಳೂ ಆವಶ್ಯಕವೆಂದು ಪ್ರಮಾಣಿಸಿದ್ದವು. ಹೀಗೆ ಅಕ್ಷೌಹಿಣಿಗಳು ಹೆಚ್ಚು ಇದ್ದ ಪ್ರಯುಕ್ತ ಪ್ರತ್ಯನೀಕೇಷು ಎಂದು ಬಹುವಚನ ಹೇಳಿದ್ದು ಕೂಡುತ್ತದೆ. ॥ ೨ ॥ ॥ ೩೨,೩೩ ॥

ಪೀ – ಪರಶುರಾಮ ದೇವರಿಂದ ದಿವ್ಯಾಸ್ತ್ರಗಳನ್ನು ಪಡೆದಿರುವ ದ್ರೋಣಾಚಾರ್ಯರು, ಧನುರ್ವಿದ್ಯೆಗೆ ಗುರುಗಳು, ಪಿತಾಮಹರಾದ ಭೀಷ್ಮಾಚಾರ್ಯರೂ ತಮ್ಮ ಇಚ್ಛೆಯಿಂದಲೇ ಮರಣಹೊಂದತಕ್ಕ ಶಕ್ತಿಯುಳ್ಳವರು, ಸೈಂಧವನ ಶಿರಸ್ಸನ್ನು ಭೂಮಿಯಲ್ಲಿ ಕೆಡಹಾಕಿದವನ ಶಿರಸ್ಸು ಸಹಸ್ರತುಂಡಾಗಲಿ, ಎಂದು ತಂದೆಯು ವರದಿಂದ ಸೈಂಧವನು ಮಹಾಬಲಿಷ್ಠನು. ಕರ್ಣನು ಇಂದ್ರನಿಂದ ಶಕ್ತ್ಯಾಖ್ಯ ಆಯುಧ ವನ್ನು ಪಡೆದಿರುವುದರಿಂದ ಮಹಾಬಲಿಷ್ಠನು ಹೀಗೆಯೇ ಬೇರೆ ರಾಜಾದಿಗಳೂ ವರಾದಿಗಳಿಂದ ಮಹಾ ಬಲಿಷ್ಠರಾಗಿರುತ್ತಾರೆ ಇಂತಹವರನ್ನೆಲ್ಲಾ ನಾನು ಹೇಗೆ ಗೆಲ್ಲುವುದೆಂದರೆ—

ಗೀ ॥ ದ್ರೋಣಂ ಚ ಭೀಷ್ಮಂ ಚ ಜಯದ್ರಥಂ ಚ
ಕರ್ಣಂ ತಥಾಽನ್ಯಾನಪಿ ಯೋಧವೀರಾನ್ ।
ಮಯಾ ಹತಾಂಸ್ತ್ವಂ ಜಹಿ ಮಾ ವ್ಯಥಿಷ್ಠಾ
ಯುಧ್ಯಸ್ವ ಜೇತಾಽಸಿ ರಣೇ ಸಪತ್ನಾನ್ ॥ ೩೪ ॥

ಅ ॥ ದ್ರೋಣಂ=ದ್ರೋಣಾಚಾರ್ಯರನ್ನು, ಭೀಷ್ಮಂ ಚ=ಭೀಷ್ಮಾಚಾರ್ಯರನ್ನು, ಜಯದ್ರಥಂ ಚ= ಜಯದ್ರಥನನ್ನು ಕರ್ಣಂ ಚ = ಕರ್ಣನನ್ನು, ತಥಾ = ಹಾಗೆಯೇ, ಅನ್ಯಾನಪಿ = ಇವರಿಗಿಂತ ಬೇರೆಯವ ರಾದ ಯೋಧವೀರಾನ್ = ಯುದ್ಧಮಾಡಲಿಕ್ಕೆ, ಸನ್ನದ್ಧರಾದ ಶ್ರೇಷ್ಠ ಭಟರೆಲ್ಲರನ್ನೂ ಮಯಾ=ನನ್ನಿಂದ, ಹತಾನ್ = ಸಂಹೃತವಾಯರಾದವರನ್ನೇ, ತ್ವಂ = ನೀನು, ಜಹಿ = ಸಂಹರಿಸು ಮಾ ವ್ಯಥಿಷ್ಠಾಃ = ವ್ಯಥೆ

ಮಾಡಬೇಡ. ಯುಧ್ಯಸ್ವ = ಯುದ್ಧಮಾಡು, ರಣೇ = ರಣಾಂಗಣದಲ್ಲಿ ಸಪತ್ನಾನ್ = ಶತ್ರುಗಳನ್ನ, ಜೇತಾಽಸಿ = ಗೆಲ್ಲುತ್ತಿ ॥ ೩೪ ॥

ಪೀ— **ದ್ರೋಣಂ ಚ ಭೀಷ್ಮಂ ಚ** ಎಂಬುವ ಶ್ಲೋಕದಲ್ಲಿ ಜಯದ್ರಥನಿಗೆ ದ್ರೋಣಾದಿಗಳಷ್ಟು ಸಾಮರ್ಥ್ಯವಿಲ್ಲದಿರುವುದರಿಂದ ಜಯದ್ರಥನನ್ನು ದ್ರೋಣಾದಿಗಳಂತೆ ವಿಶೇಷತಃ ಹೇಳಿದ್ದು ಏತಕ್ಕೆಂದರೆ–

ತಾ ॥ (೧) ಜಯದ್ರಥಸ್ಯ ಪಿತುರ್ವರಾದೇವ ವಿಶೇಷಃ ॥ (೨) ನಿಹತಾ ನಿಹತಪ್ರಾಯಾಃ ।
ಪಶ್ಚಾದರ್ಜುನೇಽಪಿ ಸ್ಥಿತ್ವಾ ಸ ಏವ ಹನಿಷ್ಯತಿ ॥ ೩೩,೩೪ ॥

ಅ ॥ (೧) ಜಯದ್ರಥನಿಗೆ ತಂದೆಯು ಕೊಟ್ಟಿರತಕ್ಕ ಅತಿ ಬಲಿಷ್ಠವಾದ ವರವಿದ್ದುದರಿಂದಲೇ ವಿಶೇಷವು (ಅಂದರೆ ಯಾವನು ಈ ಜಯದ್ರಥನ ಶಿರಸ್ಸನ್ನು ಛೇದಿಸಿ ಭೂಮಿಯಲ್ಲಿ ಕೆಡಹಾಕುವನೋ, ಆತನ ಶಿರಸ್ಸೂ ನುಚ್ಚುನೂರಾಗಲಿ ಎಂದು ತಂದೆಯು ಕೊಟ್ಟಿರುವ ಅತಿ ಬಲಿಷ್ಠವಾದ ವರವಿದ್ದುದರಿಂದಲೇ ಈ ಜಯದ್ರಥನನ್ನು ವಿಶಿಷ್ಯವಾಗಿ ಹೇಳಿದ್ದು ಅಲ್ಲದೆ ದ್ರೋಣಾದಿಗಳಂತೆ ಸಾಮರ್ಥ್ಯ ವಿಶೇಷವಿದ್ದ ಪ್ರಯುಕ್ತವಲ್ಲ. ಜಯದ್ರಥನಿಗೆ ರುದ್ರದೇವರು **ತಪಸಾ ಶಿವಮಾರಾಧ್ಯ ವರ್ಮೇ ಪಾಂಡವ ರೋಧನಂ** ಎಂದು ಪಾಂಡವರನ್ನು ತಡೆಯುವ ವರವನ್ನು ಮಾತ್ರ ಕೊಟ್ಟದ್ದು ಆದಕಾರಣ ತಂದೆಯು ಕೊಟ್ಟ ವರವೇ ಪ್ರಬಲವಾಗಿರುವುದರಿಂದ **ಪಿತುರ್ವರಾದೇವ** ಎಂದು ಹೇಳಿದ್ದು) (೨) ದುರ್ಯೋಧನಾದಿಗಳು ಜೀವಿಸಿಕೊಂಡು ಇರುವ ಕಾಲಕ್ಕೆನೇ **ಮಯ್ಯೆವೈತೇ ನಿಹತಾಃ** (ಶ್ಲೋ ೩೩) ಎಂದು ಹೇಳಿದ್ದು ಹೇಗೆ ಕೂಡುತ್ತದೆ? ಅಲ್ಲದೆ ಸಂಹೃತರಾಗಿದ್ದರೆ **ಜೇತಾಽಸಿ** (ಶ್ಲೋ ೩೪) ಎಂದದ್ದು ಹೇಗೆ ಎಂದರೆ–) ನಿಹತಾಃ = ಸಂಹೃತಪ್ರಾಯರು. (ಅಂದರೆ ಆವರ ಆಯುಷ್ಯವನ್ನು ಕಳೆದಿರುವುದರಿಂದ ಮರಣ ಹೊಂದಲಿಕ್ಕೆ ಸನ್ನದ್ಧರಾಗಿರುತ್ತಾರೆ, ಎಂದರ್ಥವು) (ಶ್ರೀಕೃಷ್ಣನು ದುರ್ಯೋಧನಾದಿಗಳ ಪ್ರಾಣಗಳನ್ನು ವಿಯೋಜಿಸದಿದ್ದರೆ ಹಂತಾ ಭವ = ಕೊಲ್ಲುವವನಾಗು, ಎಂದೇ ಹೇಳಬೇಕಿತ್ತು ನಿಮಿತ್ತ **ಮಾತ್ರಂಭವ** ಎಂದು ಹೇಳಿದ್ದು ಹೇಗೆ? ಎಂದರೆ–) ಆ ಮೇಲೆಯೂ ಅರ್ಜುನನಲ್ಲಿಯೂ ಶ್ರೀಕೃಷ್ಣನೇ ಇದ್ದು ಕರ್ಣಾದಿಗಳನ್ನು ಸಂಹರಿಸುವನು ॥ ೩೩—೩೪ ॥

ಗೀ ॥ ॥ ಸಂಜಯ ಉವಾಚ ॥

ಏತಚ್ಛ್ರುತ್ವಾ ವಚನಂ ಕೇಶವಸ್ಯ
ಕೃತಾಂಜಲಿರ್ವೇಪಮಾನಃ ಕಿರೀಟೀ ।
ನಮಸ್ಕೃತ್ವಾ ಭೂಯ ಏವಾಽಹ ಕೃಷ್ಣಂ
ಸಗದ್ಗದಂ ಭೀತಭೀತಃ ಪ್ರಣಮ್ಯ ॥ ೩೫ ॥

ಅ ॥ ಸಂಜಯಃ = ಸಂಜಯನು ಉವಾಚ = (ರಣಾಂಗಣದಲ್ಲಿ ನಡೆದ ವೃತ್ತಾಂತವನ್ನು ಧೃತರಾಷ್ಟ್ರನಿಗೆ) ಹೇಳಿದನು ಕಿರೀಟೀ = ಕಿರೀಟಧಾರಿಯಾದ ಅರ್ಜುನನು, ಕೇಶವಸ್ಯ = ಶ್ರೀಕೃಷ್ಣನ, ಏತತ್ ವಚನಂ = ಇಷ್ಟರ ವರೇಗೆ ಹೇಳಿದ ಮಾತನ್ನು, ಶ್ರುತ್ವಾ = ಕೇಳಿ, ವೇಪಮಾನಃ = ಹೆದರಿಕೆಯಿಂದ ನಡುಗುವ ಕರ ಚರಣಾದ್ಯವಯವಗಳುಳ್ಳವನಾಗಿ, ಕೃತಾಂಜಲಿಃ = ಕೈಗಳನ್ನು ಜೋಡಿಸಿಕೊಂಡವನಾಗಿ, ನಮಸ್ಕೃತ್ವಾ = ಭಕ್ತಿಪೂರ್ವಕ ನಮಸ್ಕಾರ ಮಾಡಿ, ಭೂಯ ಏವ = ಮತ್ತು, ಕೃಷ್ಣಂ = ಶ್ರೀಕೃಷ್ಣನನ್ನು, ಭೀತಭೀತಃ = ಅತ್ಯಂತ ಭಯಗ್ರಸ್ತನಾಗಿ, ಪ್ರಣಮ್ಯ = ಭಕ್ತಿಪೂರ್ವಕವಾಗಿ ಬಗ್ಗಿಕೊಂಡು, ಸಗದ್ಗದಂ = ಮಾತಿನ ನಡುಕದಿಂದ ಕೂಡಿದ್ದಾಗಿ, ಆಹ = ಹೇಳುತ್ತಾನೆ ॥ ೩೫ ॥

ಪೀ—ದ್ರೋಣಾಚಾರ್ಯರು ಧನುರ್ವಿದ್ಯೆಗೆ ಗುರುಗಳಾಗಿರುವುದರಿಂದಲೂ, ಭೀಷ್ಮಾಚಾರ್ಯರು ತನ್ನ ಇಚ್ಛೆಯಿಂದಲೇ ಮರಣ ಹೊಂದುವವರಾದುದರಿಂದಲೂ ಅಂತಹವರನ್ನು ಜಯಿಸುವುದು ಹೇಗೆ ಎಂದು ಸಂಶಯವು ಬರಬಹುದಾದುದರಿಂದ ಯೋಧವೀರರಿಂದ ಅವರನ್ನು **ದ್ರೋಣಂ ಚ ಭೀಷ್ಮಂ ಚ** ಎಂಬ ಶ್ಲೋಕದಲ್ಲಿ, ಪ್ರತ್ಯೇಕಿಸಿ ಹೆಸರೆತ್ತಿ ಹೇಳಿದ್ದು ಕೂಡಬಹುದು ಆದರೆ ಜಯದ್ರಥನನ್ನು ಕರ್ಣನನ್ನು ಭೀಷ್ಮದ್ರೋಣರಂತೆ ಹೆಸರೆತ್ತಿ ಹೇಳಲು ಕಾರಣವೇನು? ಎಂದರೆ—

ಭಾ ॥ (೧) ಯೋಽಸ್ಯ ಶಿರಶ್ಛಿನ್ನಂ ಭೂಮೌ ಪಾತಯತಿ ತಚ್ಛಿರೋ ಭೇತ್ಸ್ಯತೀತಿ ತಪ್ತಿತು-ರ್ವರಾಜ್ಞಯದ್ರಥೋಽಪಿ ವಿಶೇಷೇಣೋಕ್ತಃ ॥ (೨) ಸವರಾ ವಾಸವೀ ಶಕ್ತಿರಿತಿ ಕರ್ಣಃ ॥ ॥ ೩೪,೩೫ ॥

ಅ ॥ (೧) ಈ ಜಯದ್ರಥನ ಶಿರಸ್ಸನ್ನು ಛೇದಿಸಿ ಯಾವನು ಭೂಮಿಗೆ ಕೆಡಹಾಕುತ್ತಾನೋ, ಛೇದಿಸಿದವನ ಶಿರಸ್ಸು ಕೂಡ ನುಚ್ಚುನೂರಾಗಿ ಬೀಳುವದು, ಎಂದು ಜಯದ್ರಥನ ತಂದೆಯ ವರಬಲವೆಂಬ ವಿಶೇಷವಿದ್ದುದರಿಂದ ಬಲಿಷ್ಠನಾಗಿರುವುದರಿಂದ ಆತನನ್ನು ವಿಶಿಷ್ಯ ಹೇಳಿದ್ದು (೨) ಕರ್ಣನಿಗೆ ವರ ಸಹಿತವಾದ, ದೇವೇಂದ್ರನು ಕೊಟ್ಟ ಶಕ್ತ್ಯಾಖ್ಯ ಆಯುಧವಿದ್ದುದರಿಂದ ಕರ್ಣನನ್ನು ವಿಶಿಷ್ಯ ಹೇಳಿದೆ.
॥ ೩೪ ॥ ೩೫ ॥

ಗೀ ॥ ॥ ಅರ್ಜುನ ಉವಾಚ ॥

ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ
ಜಗತ್ಪ್ರಹೃಷ್ಯತ್ಯನುರಜ್ಯತೇ ಚ ।
ರಕ್ಷಾಂಸಿ ಭೀತಾನಿ ದಿಶೋ ದ್ರವಂತಿ
ಸರ್ವೇ ನಮಸ್ಯಂತಿ ಚ ಸಿದ್ಧಸಂಘಾಃ ॥ ೩೬ ॥

ಅ ॥ ಅರ್ಜುನಃ=ಅರ್ಜುನನು, ಉವಾಚ=ಶ್ರೀಕೃಷ್ಣನೊಡನೆ ಪ್ರಾರ್ಥಿಸಿಕೊಳ್ಳುತ್ತಾನೆ ಹೃಷೀಕೇಶ=ಸರ್ವೇಂದ್ರಿಯಗಳಿಗೆ ಪ್ರೇರಕನಾದ ಶ್ರೀಕೃಷ್ಣನೇ, ತವ=ನಿನ್ನ, ಪ್ರಕೀರ್ತ್ಯಾ=ಮಹಿಮೆಯನ್ನು ಕೊಂಡಾಡುವುದರಿಂದ, ಆಥವಾ ನಿನ್ನ ಕೀರ್ತಿಯನ್ನು ಕೇಳಿದ್ರಿಂದ, ಜಗತ್=ಪ್ರಪಂಚವು ಪ್ರಹೃಷ್ಯತಿ=ಸಂತೋಷಗೊಳ್ಳುತ್ತದೆ ಅನುರಜ್ಯತೇ ಚ=ಪ್ರೀತಿಯನ್ನು ಮಾಡುತ್ತದೆ ರಕ್ಷಾಂಸಿ=ರಾಕ್ಷಸರು, ಭೀತಾನಿ=ಭಯಶಟ್ಟವರಾಗಿ, ದಿಶಃ=ದಿಕ್ಕುಗಳನ್ನು ಕುರಿತು, ದ್ರವಂತಿ=ಓಡಿಹೋಗುತ್ತಾರೆ ಸರ್ವೇ=ಎಲ್ಲಾ, ಸಿದ್ಧಸಂಘಾಃ=ಸಿದ್ಧರ ಸಮುದಾಯಗಳು, ನಮಸ್ಯಂತಿ ಚ=ನಮಸ್ಕರಿಸುತ್ತವೆ (ಇವೆಲ್ಲವೂ) ಸ್ಥಾನೇ=ಯುಕ್ತವು. ॥ ೩೬ ॥

ಭಾ ॥ (೧) ಯದೇತದ್ಭಕ್ಷ್ಯಮಾಣಂ ತತ್ಸ್ಥಾನೇ ಯುಕ್ತಮೇವೇತ್ಯರ್ಥಃ ॥ (೨) ಅಗ್ನೀ-ಷೋಮಾದ್ಯಂತರ್ಯಾಮಿತಯಾ ಜಗದ್ಧರ್ಷಣಾದೇರ್ಹೃಷೀಕೇಶಃ॥ ಕೇರವತ್ವಂ ತ್ವಂ-ಶೂನಾಂ ತನ್ನಿಯತತ್ವಾದೇಃ । ಪ್ರಮಾಣಂ ತು ॥ (೩) ರವಿಸೂರ್ಯನೇತ್ರಮಿತ್ಯ-ತ್ರೋಕ್ತಂ । ಹೃಷೀಕಾಣಾಮಿಂದ್ರಿಯಾಣಾಮಿಶತ್ವಾಚ್ಚ ಹೃಷೀಕೇಶಃ ॥ (೪) ತೇ-ಷಾಂ ವಿಶೇಷತ ಈಶತ್ವಂ ಚ ಯಃ ಪ್ರಾಣೇ ತಿಷ್ಠನ್ನಿತ್ಯಾದೌ ಸಿದ್ಧಂ ॥ (೫) ನ ಮೇ ಹೃಷೀಕಾಣಿ ಪತಂತ್ಯಸತ್ಪಥ ಇತ್ಯಾದಿಪ್ರಯೋಗಾಚ್ಚ ॥ (೬) ಇತರೋಽರ್ಥೋ

ಮೋಕ್ಷಧರ್ಮೇಷು ಸಿದ್ಧಃ । ಸೂರ್ಯಾಚಂದ್ರಮಸೌ ಶಶ್ವತ್ಕೇಶೈರ್ಮೇ ಅಂಶುಸಂ-ಜ್ಞೈಃ । ಬೋಧಯನ್ನಾಸ್ಥಪಯಂಶ್ಚೈವ ಜಗದುತ್ಪದ್ಯತೇ ಪೃಥಕ್ । ಬೋಧನಾತ್ ಸ್ಥಾಪನಾಚ್ಚೈವ ಜಗತೋ ಹರ್ಷಸಂಭವಾತ್ । ಅಗ್ನೀಷೋಮಕೃತೈರೇಭಿಃ ಕರ್ಮ-ಭಿಃ ಪಾಂಡುನಂದನ । ಹೃಷೀಕೇಶೋಽಹಮಿಾಶಾನೋ ವರದೋ ಲೋಕಭಾವನ ಇತಿ ॥ ೩೬ ॥

ಆ ॥ (೧) ಮುಂದೆ ಹೇಳುವುದು ಯಾವುದಿದೆಯೋ, ಅದು ಯುಕ್ತವೇ (೨) (ಹೃಷೀಕೇಶ ಶಬ್ದಕ್ಕೆ ಪ್ರಕೃತೋಪಯುಕ್ತವಾದ ಅಪೂರ್ವವಾದ ಅರ್ಥವನ್ನು ಹೇಳುತ್ತಾರೆ—)ಶ್ರೀಪರಮಾತ್ಮನು ಅಗ್ನಿ, ಚಂದ್ರ, ಸೂರ್ಯಾದಿಗಳಲ್ಲಿ ಅಂತರ್ಯಾಮಿಯಾಗಿದ್ದು, ತನ್ನ ಕೇಶಗಳ ಅಧೀನಗಳೂ ಕೇಶಗಳಿಂದ ಹುಟ್ಟಿದವುಗಳೂ, ಕೇಶಗಳನ್ನಾಶ್ರಯಿಸಿದವುಗಳೂ ಆಗಿರುವುದರಿಂದ ಶ್ರೀಪರಮಾತ್ಮನ ಕೇಶಗಳೆನಿಸಿಕೊಳ್ಳುವ ಅಗ್ನ್ಯಾದಿಗಳ ಕಿರಣಗಳಿಂದ (ಜಗತ್ತಿಗೆ ಜ್ಞಾನವನ್ನು ಹುಟ್ಟಿಸುವುದು ರಕ್ಷಿಸುವುದು ಇವುಗಳಿಂದ) ಜಗತ್ತಿಗೆ ಸಂತೋಷವನ್ನು ಹುಟ್ಟಿಸುವುದರಿಂದ ಹೃಷ್ಯಃ ಕೇಶಾಃ ಯಸ್ಯ ಎಂಬುವ ವ್ಯುತ್ಪತ್ತಿಯಿಂದ ಜಗತ್ತಿಗೆ ಸಂತೋಷವನ್ನು ಹುಟ್ಟಿಸುವ ಕೇಶಗಳುಳ್ಳವನಾದುದರಿಂದ **ಹೃಷೀಕೇಶಃ** ಎನಿಸುತ್ತಾನೆ (ಸೂರ್ಯಾದಿಗಳ ಕಿರಣಗಳು ಶ್ರೀಪರಮಾತ್ಮನ ಕೇಶಗಳು ಆಗುವುದು ಹೇಗೆ? ಎಂದರೆ—) ಸೂರ್ಯಾದಿಗಳ ಕಿರಣಗಳು ಹಿಂದೆ ಹೇಳಿದ ಪ್ರಕಾರ ಪರಮಾತ್ಮನ ಕೇಶಗಳಿಂದ ಹುಟ್ಟಿದವುಗಳೂ, ಕೇಶಗಳ ಅಧೀನಗಳೂ, ಕೇಶಗಳನ್ನಾಶ್ರಯಿಸಿದವುಗಳೂ ಆಗಿರುವುದರಿಂದ **ಕೇಶ**ಗಳೆನಿಸಿಕೊಳ್ಳುತ್ತವೆ ಏನಂಚ ಜಗತ್ತಿಗೆ ಸಂತೋಷವನ್ನು ಹುಟ್ಟಿಸುವ ಸೂರ್ಯಾದಿಗಳ ಕಿರಣಗಳನ್ನು ಹುಟ್ಟಿಸುವ ಕೇಶಗಳುಳ್ಳವನಾದುದರಿಂದ ಹೃಷೀಕೇಶನೆನಿಸುತ್ತಾನೆ (೩) **ಶಶಿಸೂರ್ಯನೇತ್ರಂ** (ಶ್ಲೋ ೧೯)ಎಂಬುವುದನ್ನು ವ್ಯಾಖ್ಯಾನಮಾಡುವ ಕಾಲದಲ್ಲಿ ಚಂದ್ರ ಸೂರ್ಯಾಗ್ನಿಗಳು ಪರಮಾತ್ಮನ ಅಂಗಗಳಿಂದ ಹುಟ್ಟಿದವರು ಎಂಬುವ ವಿಷಯದಲ್ಲಿ **ತದಂಗಜಾ ಸ್ಸರ್ವ ಸುರಾದಯೋಽಪಿ** ಎಂದು ಪ್ರಮಾಣವನ್ನು ಹೇಳಿದ್ದಾರೆ (ಇದಲ್ಲದೆ ಸರ್ವತ್ರ ಪ್ರಸಿದ್ಧವಾದ ಅರ್ಥವನ್ನು ಹೇಳುತ್ತಾರೆ—)ಮತ್ತು ಎಲ್ಲಾ ಇಂದ್ರಿಯಗಳಿಗೆ ಅಧಿಪತಿಯಾಗಿರುವುದರಿಂದಲೂ ಶ್ರೀಪರಮಾತ್ಮನು **ಹೃಷೀಕೇಶ**ನೆನಿಸುತ್ತಾನೆ (೪) (ಸರ್ವ ಜಗತ್ತಿಗೆ ನಿಯಾಮಕನಾಗಿದ್ದವನು ಇಂದ್ರಿಯಗಳಿಗೆ ನಿಯಾಮಕನೆಂದು ವಿಶಿಷ್ಯ ಹೇಳಿದ್ದು ಹೇಗೆ? ಎಂದರೆ—)ಚಕ್ಷುರಾದಿ ಜ್ಞಾನೇಂದ್ರಿಯಗಳಿಗೆ ಪುರುಷಾರ್ಥೋಪಯುಕ್ತ ಜ್ಞಾನ ಶಕ್ತಿಗೆ ಪ್ರೇರಕನಾಗಿಯೂ ವಾಗಾದಿ ಕರ್ಮೇಂದ್ರಿಯಗಳಿಗೆ ಪುರುಷಾರ್ಥೋಪಯುಕ್ತ ಕರ್ಮಶಕ್ತಿಗೆ ಪ್ರೇರಕನಾಗಿಯೂ ಹೀಗೆ ವಿಶಿಷ್ಯನಿಯಾಮಕತ್ವವಿದ್ದುದರಿಂದ **ಯಃ ಪ್ರಾಣೇ ತಿಷ್ಠನ್** ಯಾವನು ಘ್ರಾಣೇಂದ್ರಿಯಾಭಿಮಾನಿಯಲ್ಲಿ ನಿಯಾಮಕನಾಗಿ ಇರುತ್ತಾನೆ, ಇತ್ಯಾದಿ ಶ್ರುತಿಗಳಲ್ಲಿ ಪ್ರಸಿದ್ಧವೇ ಆಗಿದೆ (೫) ನನ್ನ ಇಂದ್ರಿಯಗಳು ದುರ್ಮಾರ್ಗದಲ್ಲಿ ಬೀಳುವುದಿಲ್ಲ ಇತ್ಯಾದಿ ಪ್ರಮಾಣಗಳಿಂದ ಹೃಷೀಕೇಶ ಶಬ್ದವು ಇಂದ್ರಿಯವಾಚಕವೆಂದು ಪ್ರಸಿದ್ಧವೇ ಆಗಿದೆ (೬) ಶ್ರೀಪರಮಾತ್ಮನು ಸೂರ್ಯಾದಿಗಳಲ್ಲಿ ಅಂತರ್ಯಾಮಿಯಾಗಿದ್ದು ಜಗತ್ತನ್ನು ಸಂತೋಷಗೊಳಿಸುವ ಸೂರ್ಯಚಂದ್ರಾದಿ ಕಿರಣಗಳಿಗೆ ನಿಯಾಮಕಗಳಾದ ಕೇಶಗಳುಳ್ಳವನೆಂಬುವ ಅರ್ಥವು ಮೋಕ್ಷಧರ್ಮದಲ್ಲಿ ಸಿದ್ಧವಾಗಿದೆ, ಎಲೋ ಪಾಂಡುಪುತ್ರನಾದ ಧರ್ಮರಾಜನೇ ಜಗತ್ತಿಗೆ ಜ್ಞಾನವನ್ನು ಹುಟ್ಟಿಸುವುದರಿಂದಲೂ ಜಗತ್ತನ್ನು ರಕ್ಷಿಸುವುದರಿಂದಲೂ ಜಗತ್ತಿಗೆ ಸಂತೋಷ ಕೊಡುವುದರಿಂದಲೂ ಅಂಶು ಎಂದು ಹೆಸರುಳ ತನ್ನ ಕೇಶಗಳಿಂದ ಸೂರ್ಯ ಚಂದ್ರ ಅಗ್ನಿಗಳು ಯಾವಾಗಲೂ ಜಗತ್ತನ್ನು ಬೋಧಿಸುವವರಾಗಿ ರಕ್ಷಿಸುವವರಾಗಿ ಹುಟ್ಟುವ ಕಾಲವು ಬರುವಾಗ ನನ್ನ ಕೇಶಗಳಿಂದ ಉತ್ಪತ್ತಿಯನ್ನು ಹೊಂದುತ್ತಾರೆ ಹಾಗೆಯೇ ಅಗ್ನಿ ಸೂರ್ಯ ಚಂದ್ರ ಇವರಿಂದ ಮಾಡಲ್ಪಟ್ಟ ಜಗತ್ತಿಗೆ ಹರ್ಷಕರಗಳಾದ ಕರ್ಮಗಳಿಂದ ನಿಯಾಮಕರಾದ ಬ್ರಹ್ಮಾದಿಗಳಿಗೂ ನಿಯಾಮಕನೂ ಭಕ್ತರಿಗೆ ಅಭೀಷ್ಟಪ್ರದನೂ

ಸರ್ವಜಗತ್ತನ್ನು ಸೃಷ್ಟಿಸುವವನೂ ಆದ ನಾನು ಹರ್ಷಜನಕಗಳಾದ ಅಗ್ನಿ ಸೂರ್ಯ ಚಂದ್ರ ಇವರ ಕಿರಣಗಳನ್ನು ಹುಟ್ಟಿಸುವ ಕೇಶಗಳುಳ್ಳವನಾದುದರಿಂದ ಹೃಷೀಕೇಶಃ ಎನಿಸಿಕೊಳ್ಳುತ್ತಾನೆಂದು ಮೋಕ್ಷದರ್ಮದಲ್ಲಿದೆ ॥ ೩೬ ॥

ಗೀ ॥ ಕಸ್ಮಾಚ್ಚ ತೇ ನ ನಮೇರನ್ಮಹಾತ್ಮನ್
ಗರೀಯಸೇ ಬ್ರಹ್ಮಣೋಽಪ್ಯಾದಿಕರ್ತ್ರೇ ।
ಅನಂತ ದೇವೇಶ ಜಗನ್ನಿವಾಸ
ತ್ವಮಕ್ಷರಂ ಸದಸತ್ತತ್ಪರಂ ಯತ್ ॥ ೩೭ ॥

ಅ ॥ ಹೇ ಮಹಾತ್ಮನ್=ಪರಿಪೂರ್ಣವಾದ ಅಸ್ತಿ ಮೊದಲಾದುವುಗಳುಳ್ಳವನೇ, ಅಂದರೆ-ಹೊಂದುವುದು ಆದಾನ (ತೆಗೆದುಕೊಳ್ಳುವುದು) ವಿಷಯಗಳ ಸಾರವನ್ನು ಅನುಭವಿಸುವುದು, ನಿತ್ಯಸ್ಥಿತಿಗಳುಳ್ಳವನೇ, ಗರೀಯಸೇ=ಅತ್ಯಂತ ಶ್ರೇಷ್ಠನಾದ ಬ್ರಹ್ಮಣೋಽಪಿ=ಚತುರ್ಮುಖ ಬ್ರಹ್ಮನನ್ನು ಕೂಡ ಆದಿಕರ್ತ್ರೇ=ಸೃಷ್ಟಿಸಿರುವ ತೇ=ನಿನಗೋಸ್ಕರ, ಕಸ್ಮಾಚ್ಚ=ಯಾವ ಕಾರಣದಿಂದ, ನ ನಮೇರನ್=ನಮಸ್ಕರಿಸದೆ ಇದ್ದಾರು (ಅಂದರೆ ಇಂತಹ ಮಹಾಮಹಿಮೆಯುಳ್ಳ ನಿನಗೆ ಸಮಸ್ತ ದೇವತೆಗಳೂ ಸರ್ವದಾ ನಮಸ್ಕರಿಸಿಕೊಂಡೇ ಇರುತ್ತಾರೆ) ಅನಂತ=ನಾಶವಿಲ್ಲದಿರುವ, ದೇವೇಶ=ಸಮಸ್ತ ದೇವತೆಗಳಿಗೆ ಸ್ವಾಮಿಯಾದ, ಜಗನ್ನಿವಾಸ=ಸರ್ವ ಜಗತ್ತಿಗೆ ಆಶ್ರಯನಾದ, ಶ್ರೀಕೃಷ್ಣನೇ, ಯತ್ ಸದಸತ್=ಭಾವಾಭಾವ ಅಥವಾ ಕಾರ್ಯಕಾರಣರೂಪವಾದ ಯಾವ ಜಗತ್ತು ಇದೆಯೋ, ತತ್ಪರಂ=ಅಂತಹ ಚೇತನಾಚೇತನಾತ್ಮಕ ನಿಖಿಲ ಜಗತ್ತಿಗಿಂತ ಉತ್ತಮನಾದವನು, ಅಕ್ಷರಂ=ನಾಶರಹಿತನಾದವನು, ತ್ವಮೇವ=ನೀನೇ ॥ ೩೭ ॥

ಗೀ ॥ ತ್ವಮಾದಿದೇವಃ ಪುರುಷಃ ಪುರಾಣಃ
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಂ ।
ವೇತ್ತಾಽಸಿ ವೇದ್ಯಂ ಚ ಪರಂ ಚ ಧಾಮ
ತ್ವಯಾ ತತಂ ವಿಶ್ವಮನಂತರೂಪ ॥ ೩೮ ॥

ಅ ॥ ಅನಂತರೂಪ=ಸರ್ವಕಾಲದಲ್ಲಿಯೂ, ಒಂದೇ ವಿಧವಾದ ರೂಪವುಳ್ಳ ಶ್ರೀಕೃಷ್ಣನೇ, ತ್ವಂ=ನೀನು, ಆದಿದೇವಃ=ಬ್ರಹ್ಮಾದಿ ಸಮಸ್ತದೇವತೆಗಳಿಗೂ ಆದಿಭೂತನು ಪುರುಷಃ=ಪಡ್ಗುಣ ಪರಿಪೂರ್ಣನು ಪುರಾಣಃ=ಅನಾದಿಯಾದವನು, ಅಸ್ಯ ವಿಶ್ವಸ್ಯ=ಈ ಜಗತ್ತಿಗೆಲ್ಲಾ, ಪರಂ ನಿಧಾನಂ=ಮುಖ್ಯಾಶ್ರಯನು ವೇತ್ತಾ=ಸಮಸ್ತ ಪ್ರಪಂಚವನ್ನು ತಿಳಿದವನು ಅಸಿ=ಆಗಿರುತ್ತಿ ವೇದ್ಯಂ ಚ=ಸಮಸ್ತ ವೇದಾದಿಗಳಿಂದ ತಿಳಿದುಕೊಳ್ಳಲಿಕ್ಕೆ ಯೋಗ್ಯನೂ ನೀನೇ ಪರಂ ಚ ಧಾಮ=ಸರ್ವೋತ್ಕೃಷ್ಟವಾದ ತೇಜಸ್ಸ್ವರೂಪನೂ ನೀನೇ, ತ್ವಯಾ=ನಿನ್ನಿಂದ, ವಿಶ್ವಂ=ಸಮಸ್ತ ಜಗತ್ತೂ, ತತಂ=ವ್ಯಾಪ್ತವಾಗಿದೆ. (ಅಂದರೆ ಸಮಸ್ತ ಜಗತ್ತನ್ನು ನೀನೇ ವ್ಯಾಪಿಸಿಕೊಂಡಿದ್ದಿ.) ॥ ೩೮ ॥

ಪೀ—ಇನ್ನು ಅನೇಕ ಗುಣಗಳುಳ್ಳವನೆಂದು ಪುನಃ ಸ್ತೋತ್ರಮಾಡುತ್ತಾರೆ—

ಗೀ ॥ ವಾಯುರ್ಯಮೋಽಗ್ನಿರ್ವರುಣಃ ಶಶಾಂಕಃ
ಪ್ರಜಾಪತಿಸ್ತ್ವಂ ಪ್ರಪಿತಾಮಹಶ್ಚ ।

ನಮೋನಮಸ್ತೇಽಸ್ತು ಸಹಸ್ರಕೃತ್ವಃ
ಪುನಶ್ಚ ಭೂಯೋಽಪಿ ನಮೋನಮಸ್ತೇ ॥ ೩೯ ॥

ಅ ॥ (ಶ್ರೀಕೃಷ್ಣನು) ತ್ವಂ = ನೀನು, ವಾಯುಃ=ಬಲಜ್ಞಾನ ಸ್ವರೂಪನು, ಯಮಃ = ದೋಷ ಲೇಶ ವಿಲ್ಲದವನು, ಅಥವಾ ನಿಯಮಿಸುವವನು, ಅಗ್ನಿಃ=ಸ್ವತಃ ಗಮನಶಕ್ತಿಯಿಲ್ಲದಿರುವ ಜಗತ್ತಿಗೆ ಪ್ರೇರಕನು, ವರುಣಃ=ಭಕ್ತರನ್ನಾಗಿ ಅಂಗೀಕರಿಸಿ ಅನುಗ್ರಹಿಸುವವನು, ಶಶಾಂಕಃ=ಅತಿಶಯಿತ ಸುಖ ಸ್ವರೂಪನು, ಪ್ರಜಾಪತಿಃ = ಪ್ರಜೆಗಳನ್ನು ರಕ್ಷಿಸುವವನು, ಪ್ರಪಿತಾಮಹಶ್ಚ=ಸಮಸ್ತ ಪ್ರಜೆಗಳನ್ನು ಸೃಷ್ಟಿಸುವ ಚತುರ್ಮುಖನಿಗೂ ಸೃಷ್ಟಿಕರ್ತನು, ತೇ=ಇಂತಹ ನಿನಗೆ, ಸಹಸ್ರಕೃತ್ವಃ=ಸಾವಿರಾರು ಆವರ್ತಿ, ನಮೋನಮಃ ಅಸ್ತು = ನಮಸ್ಕಾರ ನಮಸ್ಕಾರವಾಗಲಿ. ತೇ = ನಿನಗೆ, ಪುನಶ್ಚ = ಮತ್ತೂ ಮತ್ತೂ, ಭೂಯೋಽಪಿ= ಬಹು ಸಲ, ನಮೋನಮಃ=ನಮಸ್ಕಾರ ನಮಸ್ಕಾರವು ॥ ೩೯ ॥

ಟೀ - ವಾಯುರ್ಯಮೋಽಗ್ನಿಃ ಇತ್ಯಾದಿ ಅರ್ಜುನನು ಸ್ತುತಿಸುವ ವಾಕ್ಯದಲ್ಲಿ ಶ್ರೀಪರಮಾತ್ಮನಿಗೆ ವಾಯು ಮೊದಲಾದವರಿಂದ ಅಭೇದವು ಹೇಳಲ್ಪಡುತ್ತದೆ, ಎಂಬುವ ಅನ್ಯಥಾ ಪ್ರತೀತಿಯನ್ನು ಹೋಗ ಲಾಡಿಸುವುದಕ್ಕಾಗಿ ವಾಯು ಮೊದಲಾದ ಶಬ್ದಗಳಿಗೆ ಅರ್ಥವನ್ನು ಸ್ಮೃತಿಪ್ರಮಾಣ ಹೇಳಿ ತೋರಿಸುತ್ತಾರೆ–

ತಾ ॥ ವಾಯುರ್ಬಲಜ್ಞಾನಯೋಗಾಚ್ಚಶಾಂಕೋಽತಿಸುಖಾಂಕಿತಃ। ಇಂದ್ರಃ ಸ ಪರಮೈ-
ಶ್ವರ್ಯಾದಿತಿ ನಾನಾಭಿಧೋ ಹರಿರಿತಿ ಚ ॥ ೩೫—೩೯ ॥

ಅ ॥ ಶ್ರೀಪರಮಾತ್ಮನು ಪೂರ್ಣಬಲಜ್ಞಾನಗಳು ಇರುವವನಾದುರಿಂದ ವಾಯುಃ ಎನಿಸುತ್ತಾನೆ ಪೂರ್ಣಸುಖವುಳ್ಳವನಾದುದರಿಂದ ಶಶಾಂಕಃ ಎನಿಸುತ್ತಾನೆ ಪರಮೈಶ್ವರ್ಯ ಸಂಪನ್ನನಾಗಿರುವುದರಿಂದ ಇಂದ್ರಃ ಎನಿಸುತ್ತಾನೆ ಹೀಗೆ ಶ್ರೀಪರಮಾತ್ಮನು ನಾನಾಶಬ್ದಗಳಿಂದ ವಾಚ್ಯನಾಗಿರುತ್ತಾನೆ ॥ ೩೫-೩೯ ॥

ಗೀ॥ ನಮಃ ಪುರಸ್ತಾದಥ ಪೃಷ್ಠತಸ್ತೇ
ನಮೋಽಸ್ತು ತೇ ಸರ್ವತ ಏವ ಸರ್ವ ।
ಅನಂತವೀರ್ಯಾಮಿತವಿಕ್ರಮಸ್ತ್ವಂ
ಸರ್ವಂ ಸಮಾಪ್ನೋಷಿ ತತೋಽಸಿ ಸರ್ವ ॥ ೪೦ ॥

ಅ ॥ ಸರ್ವ = ಸರ್ವಗುಣಪರಿಪೂರ್ಣನಾದ ಶ್ರೀಕೃಷ್ಣನೇ, ತೇ = ನಿನಗೆ, ಪುರಸ್ತಾತ್ = ಪೂರ್ವ ಭಾಗದಲ್ಲಿಯೂ, ನಮಃ = ನಮಸ್ಕಾರವು. ಅಥ=ಹಾಗೆಯೇ ಪೃಷ್ಠತಶ್ಚ=ಹಿಂದುಗಡೆಯಲ್ಲಿಯೂ, ನಮಃ= ನಮಸ್ಕಾರವು, ಅಸ್ತು = ಆಗಲಿ, ಸರ್ವತ ಏವ = ದಕ್ಷಿಣ ಉತ್ತರ ಮೊದಲಾದ ಎಲ್ಲಾ ದಿಕ್ಕುಗಳಲ್ಲಿಯೂ ತೇ = ನಿನಗೆ, ನಮಃ = ನಮಸ್ಕಾರವು, ಅಸ್ತು = ಆಗಲಿ ಅನಂತವೀರ್ಯಾಮಿತ ವಿಕ್ರಮಃ=ಅನಂತವಾದ ವೀರ್ಯವೂ ಅಪರಿಮಿತವಾದ ಪರಾಕ್ರಮವೂ ಇವುಗಳುಳ್ಳ, ತ್ವಂ = ನೀನು ಅಥವಾ ಅನಂತ ವೀರ್ಯ = ಅಪರಿಮಿತ ಸಾಮರ್ಥ್ಯವುಳ್ಳ ಶ್ರೀಕೃಷ್ಣನೇ ಅಪರಿಮಿತ ಪರಾಕ್ರಮವುಳ್ಳ ನೀನು, ಸರ್ವಂ = ಸಂಪೂರ್ಣ ಜಗತ್ತನ್ನು, ಸಮಾಪ್ನೋಷಿ=ವ್ಯಾಪಿಸಿಕೊಂಡಿರುತ್ತಿ, ತತಃ=ಆದಕಾರಣ (ಸಮಸ್ತ ಜಗತ್ತನ್ನು ವ್ಯಾಪಿಸಿಕೊಂಡ ದ್ರಿಂದ ಸರ್ವಂ ಖಲ್ವಿದಂ ಬ್ರಹ್ಮ ಪುರುಷ ಏವೇದಂ ಸರ್ವಂ ಇತ್ಯಾದಿಗಳಲ್ಲಿದ್ದ) ಸರ್ವಃ = ಸರ್ವ ಎನಿಸಿಕೊಂಡವನು, ಅಸಿ=ಆಗಿರುತ್ತಿ ॥ ೪೦ ॥

ಪೀ—ಇಂತಹ ಮಹಾಮಹಿಮೆಯುಳ್ಳ ಭಗವಂತನಲ್ಲಿ ಪ್ರಮಾದದಿಂದ ಮಾಡಿದ ನನ್ನ ಅಪರಾಧವನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುತ್ತಾನೆ—

ಗೀ ॥ ಸಖೇತಿ ಮತ್ವಾ ಪ್ರಸಭಂ ಯದುಕ್ತಂ
ಹೇ ಕೃಷ್ಣ ಹೇ ಯಾದವ ಹೇ ಸಖೇತಿ ।
ಅಜಾನತಾ ಮಹಿಮಾನಂ ತವೇದಂ
ಮಯಾ ಪ್ರಮಾದಾತ್ಪ್ರಣಯೇನ ವಾಽಪಿ ॥ ೪೧ ॥

ಅ ॥ ತವ=ನಿನ್ನ, ಇದಂ=ಹಿಂದೆ ಹೇಳಿದ ಪ್ರತ್ಯಕ್ಷಸಿದ್ಧವಾದ, ಮಹಿಮಾನಂ=ಜಗತ್ಸೃಷ್ಟ್ಯಾದಿ ಸರ್ವೋತ್ತಮತ್ವ ಮೊದಲಾದ ಮಹಿಮೆಯನ್ನು, ಅಜಾನತಾ=ತಿಳಿಯದಿರುವ, ಮಯಾ=ನನ್ನಿಂದ, ಪ್ರಮಾದಾತ್=ಪರಾಧೀನತೆಯಿಂದಲಾಗಲೀ, ಅಥವಾ ಪರಮಾತ್ಮನ ಅವತಾರದ ಮರೆಯುವಿಕೆಯಿಂದಲಾಗಲೀ, ಪ್ರಣಯೇನ ವಾಪಿ=ಸ್ನೇಹದಿಂದಲಾಗಲೀ, ಸಖೇತಿ ಮತ್ವಾ=ಸಮಾನವಯಸ್ಕನಾದುದರಿಂದ ಗೆಳೆಯನೆಂದು ಭಾವಿಸಿಕೊಂಡು, ಹೇ ಕೃಷ್ಣ=ಕಪ್ಪುಬಣ್ಣವುಳ್ಳವನೇ, ಹೇ ಯಾದವ=ರಾಜ್ಯಕ್ಕೆ ಅನರ್ಹನಾದ ಎಲೋ ಯದುಕುಲೋತ್ಪನ್ನನೇ, ಹೇ ಸಖೇತಿ=ಎಲೋ ಮಿತ್ರನೇ ಎಂತ, ಪ್ರಸಭಂ=ಯಥೇಚ್ಛವಾಗಿ ಬಹುಮಾನನಮಾಡದೆ, ಅವಮಾನಿಸಿ, ಯತ್=ಯಾವುದು ಉಕ್ತಂ=ಹೇಳಲ್ಪಟ್ಟಿದೋ, (ಅಂತಹುದೆಲ್ಲವನ್ನು ಕ್ಷಮಿಸಬೇಕೆಂದು ನಿನ್ನನ್ನು ಪ್ರಾರ್ಥಿಸುತ್ತೇನೆ) ॥ ೪೧ ॥

ಭಾ ॥ (೧) ಕಥಂ ಸ್ಥಾನ ಇತಿ ತದಾಹ । ಕಸ್ಮಾದಿತ್ಯಾದಿನಾ ॥ (೨) ಪೂರ್ಣಶ್ಚಾಸಾವಾತ್ಮಾ ಚೇತಿ ಮಹಾತ್ಮಾ ॥ (೩) ಆತ್ಮಶಬ್ದಶ್ಚೋಕ್ತೋ ಭಾರತೇ । ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ । ಯಚ್ಚಾಸ್ಯ ಸಂತತೋ ಭಾವಸ್ತಸ್ಮಾದಾತ್ಮೇತಿ ಭಣ್ಯತ ಇತಿ ॥ (೪) ತತ್ಪರಂ ಸದಸತೋಃ ಪರಂ । ಅಸಚ್ಚ ಸಚ್ಚೈವ ಚ ಯದ್ವಿಶ್ವಂ ಸದಸತಃ ಪರಮಿತಿ ಚ ಭಾರತೇ ॥ ೩೭–೪೧ ॥

ಅ ॥ (೧) ಸ್ಥಾನೇ ಎಂದು ಹೇಳಿದ್ದು ಹೇಗೆ ಕೂಡುತ್ತದೆ ಎಂದರೆ **ಕಸ್ಮಾಚ್ಚ ತೇ** ಎಂಬುವುದರಿಂದ ಆ ಶಂಕೆಗೆ ಉತ್ತರವನ್ನು ಹೇಳುತ್ತಾರೆ (೨) (ಮಹಾತ್ಮನ್=ಎಂಬುವುದಕ್ಕೆ ಅಕ್ಷುದ್ರ ಚಿತ್ ಎಂಬುವ ಅರ್ಥವು ಅಯುಕ್ತವೆನ್ನುತ್ತಾರೆ—)ಸರ್ವಗುಣಪರಿಪೂರ್ಣನು ಆಪ್ತ್ಯಾದಿಗಳನ್ನು ಹೊಂದಿದವನು **ಮಹಾತ್ಮಾ** ಎನಿಸುತ್ತಾನೆ) (೩) (ಆತ್ಮನೆಂಬುವುದಕ್ಕೆ ಜೀವನೆಂಬುವ ಅರ್ಥವು ಯುಕ್ತವಲ್ಲವೆನ್ನುತ್ತಾರೆ—)ಸಮಸ್ತ ಇಷ್ಟವನ್ನು ಹೊಂದಿದವನು ಅಂದರೆ ಆಪ್ತಕಾಮನು ದೇಹದಲ್ಲಿದ್ದು ವಿಷಯಗಳ ಸಾರಭೋಕ್ತನು ನಿತ್ಯ ಸತ್ತಾಗಿರುವವನು ಅಂದಗೆ ಸರ್ವತ್ರ ವ್ಯಾಪಿಸಿಕೊಂಡಿರುವವನು ಆದುದರಿಂದ ಆತ್ಮಾ ಎನಿಸಿಕೊಳ್ಳುತ್ತಾನೆ, ಎಂದು ಭಾರತದಲ್ಲಿ ಆತ್ಮಶಬ್ದಾರ್ಥವು ಹೇಳಲ್ಪಟ್ಟಿದೆ (೪) ತತ್ಪರಂ=ಸದಸದ್ರೂಪವಾದ ಅಂದರೆ ಭಾವ ಅಭಾವರೂಪವಾದ ಕಾರ್ಯಕಾರಣರೂಪವಾದ ಜಗತ್ತಿಗೆ ಸ್ಥಿತಿಪಾಲನಾದಿಗಳನ್ನು ಕೊಡತಕ್ಕವನಾದುದರಿಂದ ಅಂತಹ ಭಾವ ಅಭಾವ ಜಗತ್ತಿಗಿಂತ ಶ್ರೇಷ್ಠನು (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ಅಸತ್ ಕಾರಣ ಅಭಾವ ಸತ್ ಕಾರ್ಯ, ಭಾವ ಯಾವ ಜಗತ್ತು ಇದೆಯೋ, ಅದಕ್ಕಿಂತ ಶ್ರೇಷ್ಠನು ಎಂದು ಭಾಗವತದಲ್ಲಿದೆ ॥ ೩೭—೪೧ ॥

ಗೀ ॥ ಯಚ್ಚಾವಹಾಸಾರ್ಥಮಸತ್ಕೃತೋಽಸಿ
ವಿಹಾರಶಯ್ಯಾಸನಭೋಜನೇಷು ।
ಏಕೋಽಥ ವಾಽಪ್ಯಚ್ಯುತ ತತ್ಸಮಕ್ಷಂ
ತತ್ಕ್ಷಾಮಯೇ ತ್ವಾಮಹಮಪ್ರಮೇಯಂ ॥ ೪೨ ॥

ಅ ॥ ಅಥವಾ = ಮತ್ತು ಇಷ್ಟು ಮಾತ್ರವಲ್ಲದೆ, ಅಚ್ಯುತ = ಎಲ್ಲಾ ಗುಣಗಳಿಗೂ ಚ್ಯುತಿಯಿಲ್ಲದಿರುವ ಶ್ರೀಕೃಷ್ಣನೇ, ವಿಹಾರಶಯ್ಯಾಸನಭೋಜನೇಷು = ಜಲಕ್ರೀಡೆಯೂ ಒಂದೇ ಹಾಸಿಗೆ ಏಕತ್ರ ಕೂತು ಕೊಳ್ಳುವಿಕೆ, ಮೊದಲು ಉಣ್ಣುವುದು, ಇತ್ಯಾದಿಗಳ ವಿಷಯದಲ್ಲಿಯೂ, ತ್ವಂ = ನೀನು, ಏಕೋಽಪಿ = ಸರ್ವೋತ್ತಮನಾದಾಗ್ಯೂ (ಅಂದರೆ ತಿರಸ್ಕಾರಕ್ಕೆ ಸರ್ವಥಾ ಅರ್ಹನಾಗದಿದ್ದರೂ) ಅಪಹಾಸಾರ್ಥಂ = ಪರಿಹಾಸಕ್ಕಾಗಿ, ಅಸತ್ಕೃತೋಽಸೀತಿ ಯತ್ = ನನ್ನಿಂದ ಅವಮಾನಿಸಲ್ಪಟ್ಟಿರುತ್ತಿ ಎಂಬುದು ಯಾವುದಿದೆಯೋ, ತತ್ = ಆ ಅಪಮಾನಾದಿಗಳನ್ನು ಮಾಡಿದ್ದಕ್ಕಾಗಿ, ಅಪ್ರಮೇಯಂ = ಅಪರಿಮಿತ ಮಹಿಮೆಯು ಇದ್ದುದರಿಂದ ತಿಳಿಯಲಶಕ್ಯನಾದ, ತ್ವಾಂ = ನಿನ್ನನ್ನು, ಅಹಂ = ನಾನು, ಸಮಕ್ಷಂ = ನಿನ್ನ ಎದುರಿನಲ್ಲಿಯೇ ಮತ್ತು ಸರ್ವ ಜನರ ಸಮಕ್ಷದಲ್ಲಿಯೇ, ಕ್ಷಾಮಯೇ = ಅಪರಾಧಗಳನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ॥ ೪೨ ॥

ಭಾ ॥ ಏಕಸ್ತ್ವಮೇವ ಕಾರಯಿತಾ ನಾನ್ಯೋಽಸ್ಯೇತ್ಯಥಾಪಿ ॥ ೪೨ ॥

ಅ ॥ ಏಕಃ = (ಏ =) ನೀನು ಒಬ್ಬನೇ, (ಕಃ =) ಸಮಸ್ತವನ್ನು ಮಾಡಿಸುವವನು, ಬೇರೆ ಯಾರೂ ಒಬ್ಬರೂ ಇಲ್ಲ ಅಂದರೆ ಅಸಾಹಯನಾಗಿ ಸರ್ವವನ್ನು ಮಾಡಿಸುವವನು ಇಲ್ಲ ಅಥಾಪಿ = ಆದಕಾರಣ ಅವಮಾನಿಸಿಕೊಳ್ಳಲಿಕ್ಕೆ ಸರ್ವಥಾ ಯೋಗ್ಯನಲ್ಲದಿದ್ದರೂ ನನ್ನಿಂದ ಅವಮಾನಿಸಲ್ಪಟ್ಟಿರುತ್ತಿ ॥ ೪೨ ॥

ತಾ ॥ ಏಕಃ ಸರ್ವೋತ್ತಮೋಽಪ್ಯಸಹ್ಯತಃ । ಏಕಃ ಸರ್ವಾಧಿಕೋ ಜ್ಞೇಯ ಏಕ ಏವ(ಷ) ಕರೋತಿ ಯದಿತಿ ಚ ॥ ೪೨ ॥

ಅ ॥ ಏಕಃ = ಸರ್ವೋತ್ತಮನಾದಾಗ್ಯೂ ನನ್ನಿಂದ ಅವಮಾನಿಸಲ್ಪಟ್ಟಿರುತ್ತಿ. ಒಬ್ಬನೇ ಸರ್ವವನ್ನು ಮಾಡುವವನಾದುದರಿಂದ ಸರ್ವೋತ್ತಮನೆಂದು ತಿಳಿಯಬೇಕು. ಅಥವಾ ಏಕಶಬ್ದವು ಸರ್ವೋತ್ತಮನೆಂಬುವ ಅರ್ಥವನ್ನು ಹೇಳುತ್ತದೆ. ಮತ್ತು ಅಸಹಾಯನಾಗಿ ಸರ್ವಕರ್ತೃತ್ವವನ್ನು ಹೇಳುತ್ತದೆ ॥ ೪೨ ॥

ಪೀ — ಸರ್ವಥಾ ಅವಮಾನಿಸಿಕೊಳ್ಳಲಿಕ್ಕೆ ಅನರ್ಹನು ಎಂಬುವುದನ್ನೇ ಗುಣಾಂತರವನ್ನು ಹೇಳಿ ಪ್ರಕಟೀಕರಿಸುತ್ತಾರೆ —

ಗೀ ॥ ಪಿತಾಽಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ।
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ
ಲೋಕತ್ರಯೇಽಪ್ಯಪ್ರತಿಮಪ್ರಭಾವಃ ॥ ೪೩ ॥

ಅ ॥ ಅಪ್ರತಿಮಪ್ರಭಾವ=ಅಸದೃಶವಾದ ಐಶ್ವರ್ಯವುಳ್ಳ ಶ್ರೀಕೃಷ್ಣನೇ, ತ್ವಂ=ನೀನು ಅಸ್ಯ=ಈ ದಾವ, ಚರಾಚರಸ್ಯ=ಚೇತನಾಚೇತನಾತ್ಮಕವಾದ, ಲೋಕಸ್ಯ=ಜಗತ್ತಿಗೆ, ಪಿತಾ=ಜನಕನೂ, ಪೂಜ್ಯಶ್ಚ=ಜಗತ್ತಿನಿಂದ ಪೂಜಿಸಿಕೊಳ್ಳಲ್ಪಟ್ಟವನೂ, ಗರೀಯಾನ್=ಅತ್ಯಂತ ಶ್ರೇಷ್ಠನಾದ, ಗುರುಃ=ಉಪದೇಶಕನೂ, ಅಸಿ=ಆಗಿರುತ್ತಿ ಲೋಕತ್ರಯೇಽಪಿ=ಮೂರು ಲೋಕಗಳಲ್ಲಿಯೂ, ತ್ವತ್ಸಮಃ=ನಿನಗೆ ಸದೃಶನಾದವನು, ಅನ್ಯಃ=ಇನ್ನೊಬ್ಬನು, ನಾಸ್ತಿ=ಇಲ್ಲವೇ ಇಲ್ಲ ಅಭ್ಯಧಿಕಃ=ನಿನಗಿಂತಲೂ ಶ್ರೇಷ್ಠನಾಗಿರತಕ್ಕವನು, ಕುತಃ=ಹೇಗೆ ಇರುವನು (ಸರ್ವಥಾ ಶ್ರೇಷ್ಠನು ಇಲ್ಲವೇ ಇಲ್ಲ.) ॥ ೪೩ ॥

ಗೀ॥ ತಸ್ಮಾತ್ಪ್ರಣಮ್ಯ ಪ್ರಣಿಧಾಯ ಕಾಯಂ
ಪ್ರಸಾದಯೇ ತ್ವಾಮಹಮೀಶಮೀಡ್ಯಂ ।
ಪಿತೇವ ಪುತ್ರಸ್ಯ ಸಖೇವ ಸಖ್ಯುಃ
ಪ್ರಿಯಃ ಪ್ರಿಯಾಯಾರ್ಹಸಿ ದೇವ ಸೋಢುಂ ॥ ೪೪ ॥

ಅ ॥ ತಸ್ಮಾತ್=ಹಿಂದೆ ಹೇಳಿದ ಪ್ರಕಾರ ಮಹಾಮಹಿಮೆಯುಳ್ಳವನಾದುದರಿಂದ, ಕಾಯಂ=ಶರೀರವನ್ನು, ಪ್ರಣಿಧಾಯ=ಚೆನ್ನಾಗಿ ಬಗ್ಗಿಸಿಕೊಂಡು, ಈಶಂ=ಸರ್ವರಿಗೂ ಸ್ವಾಮಿಯಾದ, ಈಡ್ಯಂ=ಬ್ರಹ್ಮರುದ್ರಾದಿಗಳಿಂದ ಸ್ತೋತ್ರಮಾಡಿಸಿಕೊಳ್ಳಲಿಕ್ಕೆ ಯೋಗ್ಯನಾದ, ತ್ವಾಂ=ನಿನ್ನನ್ನು, ಅಹಂ=ನಾನು, ಪ್ರಣಮ್ಯ=ಭಕ್ತಿಪೂರ್ವಕವಾಗಿ ಚೆನ್ನಾಗಿ ಸಾಷ್ಟಾಂಗನಮಸ್ಕಾರವನ್ನು ಮಾಡಿ, ಪ್ರಸಾದಯೇ=ಸಂತೋಷಗೊಳಿಸಿ ಅನುಗ್ರಹಿಸಬೇಕೆಂದು ಬೇಡಿಕೊಳ್ಳುವೆನು ದೇವ=ಕ್ರೀಡಾದಿಗುಣಗಳುಳ್ಳ ಶ್ರೀಪರಮಾತ್ಮನೇ, ಪಿತಾ=ತಂದೆಯು, ಪುತ್ರಸ್ಯ=ಮಗನ, ಅಪರಾಧಮಿವ=ಅಪರಾಧವನ್ನು ಸಹಿಸುವಂತೆಯೇ, ಸಖಾ=ಗೆಳೆಯನು, ಸಖ್ಯುಃ=ಸ್ನೇಹಿತನ, ಅಪರಾಧಮಿವ=ಅಪರಾಧವನ್ನು ಸಹಿಸುವಂತೆಯೇ, ಪ್ರಿಯಃ=ಗಂಡನು, ಪ್ರಿಯಾಯಾಃ—ಪ್ರಿಯಳಾದ ಪತ್ನಿಯ ಅಪರಾಧಮಿವ=ಅಪರಾಧವನ್ನು ಸಹಿಸುವಂತೆ, ಅಂದರೆ ಪ್ರಿಯನಾದ ಪತಿಯು ತನ್ನ ಪ್ರಾಣಕಾಂತೆಯ ಮೇಲಣ ಪ್ರೀತಿಗಾಗಿ ಆಕೆಯ ಅಪರಾಧವನ್ನು ಸಹಿಸುವಂತೆಯೇ (ನನ್ನ ಸರ್ವಾಪರಾಧವನ್ನು) ಸೋಢುಂ=ಸಹಿಸುವುದಕ್ಕೆ, ಅರ್ಹಸಿ=ಯೋಗ್ಯನಾಗಿರುತ್ತಿ ॥ ೪೪ ॥

ಪೀ—ಈ ಪ್ರಕಾರ ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಹೇಳುತ್ತಾ ಪ್ರಾರ್ಥಿಸುತ್ತಾನೆ—

ಗೀ ॥ ಅದೃಷ್ಟಪೂರ್ವಂ ಹೃಷಿತೋಽಸ್ಮಿ ದೃಷ್ಟ್ವಾ
ಭಯೇನ ಚ ಪ್ರವ್ಯಥಿತಂ ಮನೋ ಮೇ ।
ತದೇವ ಮೇ ದರ್ಶಯ ದೇವ ರೂಪಂ
ಪ್ರಸೀದ ದೇವೇಶ ಜಗನ್ನಿವಾಸ ॥ ೪೫ ॥

ಅ ॥ ದೇವ=ಶ್ರೀಕೃಷ್ಣನೇ, ಅದೃಷ್ಟಪೂರ್ವಂ=ಇಷ್ಟರ ವರೆಗೆ ಕಾಣದಿರುವ, ರೂಪಂ=ನಿನ್ನ ವಿಶ್ವರೂಪವನ್ನು, ದೃಷ್ಟ್ವಾ=ನೋಡಿ, ಹೃಷಿತಃ ಅಸ್ಮಿ=ಸಂತೋಷವನ್ನು ಹೊಂದಿದವನು ಆಗಿರುತ್ತೇನೆ ಮೇ=ನನ್ನ, ಮನಃ=ಮನಸ್ಸು, ಭಯೇನ ಚ=ಭಯದಿಂದ, ಪ್ರವ್ಯಥಿತಂ=ವಿಶೇಷವಾಗಿ ವ್ಯಾಕುಲತನವನ್ನು ಹೊಂದಿರುತ್ತದೆ (ಆದಕಾರಣ) ದೇವೇಶ=ಬ್ರಹ್ಮಾದಿ ದೇವತೆಗಳಿಗೆ ನಿಯಾಮಕನಾದ, ಜಗನ್ನಿವಾಸ=ಸರ್ವಜಗತ್ತಿಗೆ ಆಶ್ರಯನಾದ, ದೇವ=ಕ್ರೀಡಾದಿ ಗುಣವಿಶಿಷ್ಟನಾದ ಶ್ರೀಪರಮಾತ್ಮನೇ, ತದೇವ ರೂಪಂ=ಮೊದಲು ತೋರಿಸಿದ ರೂಪವನ್ನೇ, ಮೇ=ನನಗೆ, ದರ್ಶಯ=ತೋರಿಸು ಪ್ರಸೀದ=ಸಂತುಷ್ಟನಾಗು ॥೪೫॥

ಗೀ ॥ ಕಿರೀಟಿನಂ ಗದಿನಂ ಚಕ್ರಹಸ್ತ-
ಮಿಚ್ಛಾಮಿ ತ್ವಾಂ ದ್ರಷ್ಟುಮಹಂ ತಥೈವ ।
ತೇನೈವ ರೂಪೇಣ ಚತುರ್ಭುಜೇನ
ಸಹಸ್ರಬಾಹೋ ಭವ ವಿಶ್ವಮೂರ್ತೇ ॥ ೪೬ ॥

ಅ ॥ ಅಹಂ=ನಾನು, ತಥೈವ=ನಿನ್ನ ವಿಶ್ವರೂಪವನ್ನು ಮೊದಲು ಹೇಗೆ ನೋಡಿರುವೆನೋ ಹಾಗೆಯೇ, ತೇನೈವ=ಮೊದಲು ನೋಡಿರುವ, ಚತುರ್ಭುಜೇನ ರೂಪೇಣ=ನಾಲ್ಕು ಭುಜಗಳುಳ್ಳ ರೂಪದಿಂದ, ಕಿರೀಟಿನಂ=ಕಿರೀಟವನ್ನು ಧರಿಸಿಕೊಂಡಿರುವ, ಗದಿನಂ=ಗದಾಧಾರಿಯಾದ, ಚಕ್ರಹಸ್ತಂ=ಕೈಯಲ್ಲಿ ಚಕ್ರಾಯುಧವನ್ನು ಧರಿಸಿಕೊಂಡಿರುವ ತ್ವಾಂ=ನಿನ್ನನ್ನು, ದ್ರಷ್ಟುಂ=ನೋಡಲಿಕ್ಕೆ, ಇಚ್ಛಾಮಿ=ಇಚ್ಛಿಸುತ್ತೇನೆ. ಸಹಸ್ರಬಾಹೋ=ಅನಂತ ಬಾಹುಗಳುಳ್ಳ, ವಿಶ್ವಮೂರ್ತೇ=ಸಮಸ್ತ ಜಗತ್ತಿನಲ್ಲಿ ವ್ಯಾಪಿಸಿಕೊಂಡಿರುವ, ಅಥವಾ ಸರ್ವಗುಣ ಪರಿಪೂರ್ಣ ಶರೀರವುಳ್ಳ ಶ್ರೀಕೃಷ್ಣನೇ, ಭವ=ನಾಲ್ಕು ಭುಜಗಳುಳ್ಳ ರೂಪದಿಂದ ಯುಕ್ತವಾಗಿರುವ ರೂಪವನ್ನು ತೋರಿಸು ॥ ೪೬ ॥

ಪೀ—ತೇನೈವ ರೂಪೇಣ ಭವ ಎಂದು ಅರ್ಜುನನು ಪ್ರಾರ್ಥಿಸುವ ವಾಕ್ಯದಲ್ಲಿ ವಿಶ್ವರೂಪವನ್ನು ಬಿಟ್ಟು ಮುಂಚಿನ ನಿಜ ರೂಪವನ್ನೇ ತೆಗೆದುಕೊಳ್ಳು ಎಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ತಾ ॥ ತೇನೈವ ರೂಪೇಣ ಭವೇತ್ಯನಂತರೂಪಗೋಪನೇನ ತದೇವ ಪ್ರಕಾಶಯೇತ್ಯರ್ಥಃ ।
ಪಂಚಾನನಂ ಚಿಂತ್ಯಮಚಿಂತ್ಯರೂಪಂ ಪದ್ಮಾಸನಂ ಗೋಪಿತವಿಶ್ವರೂಪಮಿತಿ (ಹಿಂ)
ವೈಹಾಯಸಸಂಹಿತಾಯಾಂ ॥ ೪೬ ॥

ಅ ॥ ಆ ನಾಲ್ಕು ಭುಜಗಳುಳ್ಳ ರೂಪದಿಂದಲೇ ಆಗು ಎಂದು ಹೇಳಿದ್ರಿಂದ ನಿನ್ನ ನಿಜವಾದ ಅನಂತ ರೂಪಗಳನ್ನು ಮರೆ ಮಾಡಿ ಆದನ್ನೇ ನಾಲ್ಕು ಭುಜಗಳುಳ್ಳ ರೂಪವನ್ನಾಗಿ ಪ್ರಕಾಶಗೊಳಿಸು ಎಂದರ್ಥವು (ರೂಪಾಂತರವು ತೋರಿದಾಗ ವಿಶ್ವರೂಪವನ್ನು ಬಿಟ್ಟಿದ್ದೆಂದೇ ಏಕೆ ಆಗಲಾರದು ಅದನ್ನು ಮರೆ ಮಾಡಿದ್ದೆಂದು ಏಕೆ ಹೇಳಬೇಕು ಎಂದರೆ—) ಮನಸ್ಸಿನಿಂದ ಆಲೋಚಿಸಲಿಕ್ಕೂ ಅಶಕ್ಯವಾದ ಸ್ವರೂಪವುಳ್ಳ ಕಮಲನೇ ಆಸನವಾಗಿವುಳ್ಳ, ವಿಶ್ವರೂಪವನ್ನು ಮರೆಮಾಡಿಕೊಂಡಿರುವ ನರಸಿಂಹರೂಪವನ್ನು ವಿಶೇಷತಃ ಧ್ಯಾನಿಸಬೇಕು. ಎಂದು ವೈಹಾಯಸ ಸಂಹಿತೆಯಲ್ಲಿದೆ (ಇದರಿಂದ ವಿಶ್ವರೂಪಕ್ಕೆ ಅಂತರ್ಧಾನವನ್ನೇ ಹೇಳಿದ್ದಾರೆ. ಹೊರತು ತ್ಯಾಗವನ್ನು ಹೇಳಲಿಲ್ಲ) ॥ ೪೬ ॥

ಗೀ ॥ ॥ ಶ್ರೀಭಗವಾನುವಾಚ ॥

ಮಯಾ ಪ್ರಸನ್ನೇನ ತವಾರ್ಜುನೇದಂ
ರೂಪಂ ಪರಂ ದರ್ಶಿತಮಾತ್ಮಯೋಗಾತ್ ।
ತೇಜೋಮಯಂ ವಿಶ್ವಮನಂತಮಾದ್ಯಂ
ಯನ್ಮೇ ತ್ವದನ್ಯೇನ ನ ದೃಷ್ಟಪೂರ್ವಂ ॥ ೪೭ ॥

ಅ ॥ ಶ್ರೀಭಗವಾನ್=ಶ್ರೀಕೃಷ್ಣನು, ಉವಾಚ=(ಅರ್ಜುನನಿಗೆ ಹೆಚ್ಚು ಭಕ್ತಿಯು ಹುಟ್ಟುವುದ ಕ್ಕಾಗಿ ವಿಶ್ವರೂಪ ದರ್ಶನವು ಅತಿ ದುರ್ಲಭವೆಂದು) ಹೇಳುತ್ತಾನೆ ಅರ್ಜುನ=ಅರ್ಜುನನೇ, ಪ್ರಸನ್ನೇನ= ಸಂತುಷ್ಟನಾದ, ಮಯಾ=ನನ್ನಿಂದ, ಆತ್ಮಯೋಗಾತ್=ಸ್ವರೂಪಭೂತವಾದ ಸಾಮರ್ಥ್ಯವಿಶೇಷದಿಂದ, ತೇಜೋಮಯಂ=ಪ್ರಚುರತೇಜಸ್ವರೂಪವಾದ, ವಿಶ್ವಂ=ಪೂರ್ಣವಾದ, ಅನಂತಂ=ಸರ್ವ ದೇಶಗಳ ಲ್ಲಿಯೂ ಸಮಸ್ತ ಕಾಲಗಳಲ್ಲಿಯೂ ಇರುವ ಸರ್ವಗುಣಪರಿಪೂರ್ಣವಾದ, ಆದ್ಯಂ=ಎಲ್ಲಾ ವಸ್ತುಗಳಿಗೂ ಆದಿಭೂತವಾದ, ಮೇ=ನನ್ನ, ಯತ್=ಯಾವುದು ಪರಂ=ಸರ್ವೋತ್ಕೃಷ್ಟವಾದ, ರೂಪಂ=ವಿಶ್ವರೂಪವು, ತವ=ನಿನಗಾಗಿ, ದರ್ಶಿತಂ=ತೋರಿಸಲ್ಪಟ್ಟಿದೋ, ಇದಂ=ಇಂತಹ ರೂಪವು, ತ್ವದನ್ಯೇನ=ನೀನು ಹೊರತು ಬೇರೆ ಯಾವ ನಿಕೃಷ್ಟಪುರುಷನಿಂದಲೂ, ನ ದೃಷ್ಟಪೂರ್ವಂ=ನಿನ್ನ ಹಾಗೆ ಮೊದಲು ಕಾಣಲ್ಪ ಡಲೇ ಇಲ್ಲ ॥ ೪೭ ॥

ಟೀ—ಮಯಾ ಪ್ರಸನ್ನೇನ ಎಂಬುವ ಶ್ಲೋಕದಲ್ಲಿ **ತೇಜೋಮಯಂ ವಿಶ್ವಂ** ಎಂದು ಭಗವಂತ ನಿಗೆ ಜಗದಾತ್ಮಕತ್ವವನ್ನು ಹೇಳಿದ್ದಾರೆ, ಎಂಬುವ ಅನ್ಯಥಾಪ್ರತೀತಿಯನ್ನು ಸ್ಮೃತಿಪ್ರಮಾಣವನ್ನು ಹೇಳಿ ಹೋಗಲಾಡಿಸುತ್ತಾರೆ—

ತಾ ॥ (೧) ವಿಶ್ವನಾಮಾ ಸ ಭಗವಾನ್ಯತಃ ಪೂರ್ಣಗುಣಃ ಪ್ರಭುರಿತಿ ಪಾದ್ಮೇ ॥ (೨) ತ್ವದನ್ಯೇನ ನ ದೃಷ್ಟಪೂರ್ವಮಿತ್ಯನೇನ ತೇನೈವೇಂದ್ರರೀರೇಣ ದೃಷ್ಟಮಿತಿ ಜ್ಞಾಯತೇ। ತ್ವದನ್ಯೇನೇತಿ ತ್ವದವರಾಪೇಕ್ಷಯಾ । ತೈರಪಿ ತದ್ವನ್ನ ದೃಷ್ಟಮಿತ್ಯೇವ ॥ (೩) ವಿಶ್ವರೂಪಂ ಪ್ರಥಮತೋ ಬ್ರಹ್ಮಾಽಪಶ್ಯಚ್ಚತುರ್ಮುಖಃ । ತಚ್ಛತಾಂಶೇನ ರುದ್ರಸ್ತು ತಚ್ಛತಾಂಶೇನ ವಾಸವಃ। ಯಥೇಂದ್ರೇಣ ಪುರಾ ದೃಷ್ಟಮಪಶ್ಯತ್ಸೋಽರ್ಜುನೋಽಪಿ ಸನ್ । ತದನ್ಯೇ ಕ್ರಮಯೋಗೇನ ತಚ್ಛತಾಂಶಾದಿದರ್ಶನ ಇತಿ ಬ್ರಹ್ಮಾಂಡೇ ॥೪೭॥

ಅ ॥ (೧) ಶ್ರೀಪರಮಾತ್ಮನು ಪೂರ್ಣಗುಣಗಳುಳ್ಳವನಾದುದರಿಂದ ವಿಶ್ವ ಎಂದು ಹೆಸರುಳ್ಳವನು, ಎಂದು ವಾದ್ಮದಲ್ಲಿದೆ ಆದಕಾರಣ ಇಲ್ಲಿದ್ದ ವಿಶ್ವಶಬ್ದಕ್ಕೆ ಪೂರ್ಣಗುಣಗಳುಳ್ಳವನೆಂದೇ ಅರ್ಥವು ಜಗದಾತ್ಮಕನೆಂದರ್ಥವಲ್ಲ (೨) (**ತ್ವದನ್ಯೇನ ನ ದೃಷ್ಟಪೂರ್ವಂ** ಎಂದು ಅರ್ಜುನನು ಹೊರತು ಬೇರೆ ಯವರು ವಿಶ್ವರೂಪವನ್ನು ಕಾಣಲಿಲ್ಲವೆಂದು ತೋರುತ್ತದೆ, ಎಂಬುವ ಅನ್ಯಥಾಪ್ರತೀತಿಯನ್ನು ಹೋಗ ಲಾಡಿಸುತ್ತಾರೆ-) **ತ್ವದನ್ಯೇನ ನ ದೃಷ್ಟಪೂರ್ವಂ** ಎಂಬುವುದರಿಂದ ಅರ್ಜುನನಿಂದಲೇ ತನ್ನ ಅಂಶಿಯಾದ ಇಂದ್ರ ಶರೀರದಿಂದ ಕಾಣಲ್ಪಟ್ಟಿದೆ, ಎಂದು ತಿಳಿಯುತ್ತದೆ (ಅಂದರೆ ವಿಶ್ವರೂಪವನ್ನು ಅರ್ಜುನನು ಹೊರತು ಬೇರೆಯವರು ಕಾಣುವುದಲ್ಲವೆಂದು ಹೇಳುವುದಿಲ್ಲ, ಮತ್ತೆ ಅರ್ಜುನನೇ ತನ್ನ ಮೂಲರೂಪಿ ಯಾದ ಇಂದ್ರನ ಶರೀರದಿಂದ ನೋಡಿರುತ್ತಾನೆಂದು ತಿಳಿಯುತ್ತದೆ ಅರ್ಜುನನಿಂದ ಭಿನ್ನರಾದ (ಬ್ರಹ್ಮಾದಿಗಳೂ ನೋಡಲಿಲ್ಲವೆಂದು ಶಂಕಿಸಕೂಡದು ಮತ್ತೆ) ತ್ವದನ್ಯೇನ ಎಂಬುವುದು ನಿನಗಿಂತ ಅವರರನ್ನು ಇಟ್ಟುಕೊಂಡು ಹೇಳಿದ್ದು ಆದರೆ ಅಧಮರಿಂದಲೂ ಅರ್ಜುನನಂತೆ ಕಾಣಲ್ಪಡಲಿಲ್ಲ, ಎಂದೇ ಅರ್ಥ ಹೇಳಬೇಕು (ಅಧಮರು ನೋಡಲೇ ಇಲ್ಲವೆಂದರ್ಥವಲ್ಲ) (೩) (ಈ ವಿಶ್ವರೂಪವನ್ನು ಬ್ರಹ್ಮಾದಿಗಳೂ ನೋಡಿದ್ದಾರೆ ಅರ್ಜುನನಂತೆ ಇಂದ್ರನೂ ನೋಡಿದ್ದಾನೆ ಅರ್ಜುನನಿಗಿಂತ ಕೆಳಗಿನವರೂ ನೋಡಿ ದ್ದರೂ ಅರ್ಜುನನಂತೆ ನೋಡಲಿಲ್ಲವೆಂಬುವ ಈ ವಿಷಯದಲ್ಲಿ ಪ್ರಮಾಣ ಹೇಳುತ್ತಾರೆ—) ಚತುರ್ಮುಖ ಬ್ರಹ್ಮನು ಪ್ರಥಮತಃ ವಿಶ್ವರೂಪವನ್ನು ನೋಡಿದನು ಬ್ರಹ್ಮನು ನೋಡಿದಕ್ಕಿಂತ ೧೦೦ ಪಾಲು ಕಡಿಮೆ ರುದ್ರನೂ, ರುದ್ರನಿಗಿಂತ ೧೦೦ ಪಾಲು ಕಡಿಮೆ ಇಂದ್ರನೂ ನೋಡಿದನು ಮೊದಲು ಇಂದ್ರನು ಹೇಗೆ

ನೋಡಿದ್ದಾನೋ, ಆ ಇಂದ್ರನು ಅರ್ಜುನನಾಗಿಯೇ ಹಾಗೆಯೇ ನೋಡಿದ್ದಾನೆ. ಇಂದ್ರನಿಗಿಂತ ಕೆಳಗಿನವರು ಕ್ರಮವಾಗಿ ೧೦೦, ೧೦೦ ಪಾಲು ಕಡಿಮೆ ಪ್ರಕಾಶಾದಿಗಳುಳ್ಳದ್ದನ್ನಾಗಿ ನೋಡಿರುತ್ತಾರೆ, ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ. ॥ ೪೭ ॥

ಪೀ—ಅರ್ಜುನನಿಗಿಂತ ಕೆಳಗಿನವರು ಸ್ವತಃ ಅರ್ಜುನನಂತೆ ವಿಶ್ವರೂಪವನ್ನು ನೋಡದಿದ್ದರೂ ಅವರ (ಅಧಮ)ರಾದವರೇ ವೇದ ಮೊದಲಾದ ಸಾಧನಗಳಿಂದ ಅರ್ಜುನನಂತೆ ಕಾಣಬಹುದಷ್ಟೆ ಎಂದರೆ—

ಗೀ ॥ ನ ವೇದಯಜ್ಞಾಧ್ಯಯನೈರ್ನ ದಾನೈ-
ರ್ನ ಚ ಕ್ರಿಯಾಭಿರ್ನ ತಪೋಭಿರುಗ್ರೈಃ ।
ಏವಂರೂಪಃ ಶಕ್ಯ ಅಹಂ ನೃಲೋಕೇ
ದ್ರಷ್ಟುಂ ತ್ವದನ್ಯೇನ ಕುರುಪ್ರವೀರ ॥ ೪೮ ॥

ಅ ॥ ಕುರುಪ್ರವೀರ=ಕುರುವಂಶದಲ್ಲಿ ಬಹು ಪರಾಕ್ರಮಶಾಲಿಯಾದ ಅರ್ಜುನನೇ, ಏವಂರೂಪಃ=ಮೊದಲು ನಿನಗೆ ತೋರಿಸಿದ ವಿಶ್ವರೂಪವುಳ್ಳ, ಅಹಂ=ನಾನು, ನೃಲೋಕೇ=ಮನುಷ್ಯಲೋಕದಲ್ಲಿ, ತ್ವದನ್ಯೇನ=ನೀನು ಹೊರತು ಬೇರೆಯವರಿಂದ, ವೇದಯಜ್ಞಾಧ್ಯಯನೈಃ=ವೇದಾದಿ ಶಾಸ್ತ್ರಗಳ ಅಧ್ಯಯನ, ಜ್ಯೋತಿಷ್ಟೋಮಾದಿ ಯಜ್ಞಾನುಷ್ಠಾನ, ಇವುಗಳಿಂದ, ದ್ರಷ್ಟುಂ=ನೋಡಲಿಕ್ಕೆ, ನ ಶಕ್ಯಃ=ಶಕ್ಯನಲ್ಲ, ದಾನೈಃ=ಮಹಾ ದಾನಗಳಿಂದಲೂ, ನ=ನೋಡಲು ಶಕ್ಯನಲ್ಲ. ಕ್ರಿಯಾಭಿಃ=ಅಗ್ನಿಹೋತ್ರಾದಿ ಕ್ರಿಯೆಗಳಿಂದ, ನ ಚ=ಶಕ್ಯನಲ್ಲ ಉಗ್ರೈಃ=ಕ್ರೂರಗಳಾದ, ತಪೋಭಿಃ=ಕೃಚ್ಛ್ರಚಾಂದ್ರಾಯಣ ಮೊದಲಾದ ತಪಸ್ಸುಗಳಿಂದಲೂ, ನ ಚ ಶಕ್ಯಃ=ಶಕ್ಯನಲ್ಲ. ॥ ೪೮ ॥

ಪೀ—ಬೇರೆಯವರಿಗೂ ವಿಶ್ವರೂಪದರ್ಶನವು ಆಗುವುದಾದರೆ ನ ವೇದಯಜ್ಞಾಧ್ಯಯನೈಃ ಎಂದು ಹೇಳಿದ್ದು ವಿರುದ್ಧವಾಗುವುದೆಂದರೆ—

ತಾ ॥ (೧) ವೇದಾದಿಭಿರಪಿ ತ್ವದವರೈರ್ನೈವಂ ದ್ರಷ್ಟುಮಶಕ್ಯಃ ॥ (೨) ಅನ್ಯಥಾ ದೃಷ್ಟ್ವಾಽ-
ದ್ಭುತಂ ರೂಪಮಿತ್ಯಾದಿವಿರೋಧಃ ॥ ೪೮ ॥

ಅ ॥ (೧) ವೇದಾದಿಗಳಿಂದಲೂ ನಿನಗಿಂತ ಕೆಳಗಿನವರಿಗೆ ಇಂತಹ ರೂಪವನ್ನು ನೋಡಲು ಶಕ್ಯವಲ್ಲ. (ಅಂದರೆ ಅರ್ಜುನನಿಗಿಂತ ಬೇರೆಯವರಿಗೆ ವಿಶ್ವರೂಪದರ್ಶನವೇ ಇಲ್ಲವೆಂದು ಹೇಳುವುದಿಲ್ಲ ಮತ್ತೆ ನಿನಗಿಂತ ಕೆಳಗಿನವರು ನಿನ್ನಂತೆ ನೋಡಲಿಲ್ಲವೆಂದೇ ಅರ್ಥವು ಅವರು ಸ್ವತಃ ಹಾಗೆ ನೋಡದಿದ್ದರೂ ವೇದಾದಿ ಸಾಧನಗಳಿಂದ ಹಾಗೆ ಕಾಣಬಹುದಷ್ಟೆ ಎಂದರೆ) ವೇದಾದಿ ಸಾಧನಗಳಿಂದಲೂ ನಿನಗಿಂತ ಕೆಳಗಿನವರು ನಿನ್ನಂತೆ ನೋಡಲು ಶಕ್ಯರಾಗುವುದೇ ಇಲ್ಲ ಎಂದೇ ಅಭಿಪ್ರಾಯವು) (೨) ವಿಶ್ವರೂಪವನ್ನು ಅರ್ಜುನನಿಗಿಂತ ಬೇರೆಯವರು ನೋಡಲೇ ಇಲ್ಲವೆಂದು ಹೇಳಿದರೆ ಹಿಂದೆ ಹೇಳಿದ ಬ್ರಹ್ಮಾಂಡಪ್ರಮಾಣವಿರೋಧಮಾತ್ರವಲ್ಲದೆ ದೃಷ್ಟ್ವಾಽದ್ಭುತಂ ರೂಪಂ (ಶ್ಲೋ ೨೦) ಇತ್ಯಾದಿ ಹಿಂದೆ ಹೇಳಿದ ಗೀತಾವಾಕ್ಯ ವಿರೋಧವೂ ಬರುವುದು. ॥ ೪೮ ॥

ಪೀ—**ಅದೃಷ್ಟರೂಪಂ** ಇತ್ಯಾದಿಗಳಿಂದ ಅರ್ಜುನನು ಪ್ರಾರ್ಥಿಸಿದ್ದಕ್ಕೆ ಉತ್ತರವನ್ನು ಹೇಳುತ್ತಾನೆ—

ಗೀ ॥ ಮಾ ತೇ ವ್ಯಥಾ ಮಾ ಚ ವಿಮೂಢಭಾವೋ
ದೃಷ್ಟ್ವಾ ರೂಪಂ ಘೋರಮೀದೃಙ್ಮಮೇದಂ ।
ವ್ಯಪೇತಭೀಃ ಪ್ರೀತಮನಾಃ ಪುನಸ್ತ್ವಂ
ತದೇವ ಮೇ ರೂಪಮಿದಂ ಪ್ರಪಶ್ಯ ॥ ೪೯ ॥

ಅ ॥ ಮಮ = ನನ್ನ, ಘೋರಂ = ಸಂಹಾರಕ ಸ್ವರೂಪವಾದ, ಈದೃಕ್ ರೂಪಂ = ಹಿಂದೆ ಹೇಳಿದ ಪ್ರಕಾರ ಅನಂತಬಾಹು ಅನಂತಶಿರಸ್ಸು ಮೊದಲಾದುವುಗಳುಳ್ಳ ರೂಪವನ್ನು, ದೃಷ್ಟ್ವಾ = ನೋಡಿ, ತೇ = ನಿನಗೆ, ವ್ಯಥಾ = ಮನಸ್ಸಿನಲ್ಲಿ ಚಿಂತೆಯು, ಮಾಸ್ತು = ಬೇಡ ವಿಮೂಢಭಾವಶ್ಚ = ವಿಶೇಷವಾಗಿ ಮೂಢಭಾವವೂ, ಮಾಸ್ತ = ಬೇಡ. ತ್ವಂ = ನೀನು, ವ್ಯಪೇತಭೀಃ = ಭಯವನ್ನು ಕಳೆದುಕೊಂಡವನಾಗಿ, ಪ್ರೀತಮನಾಃ = ಸಂತುಷ್ಟವಾದ ಮನಸ್ಸುಳ್ಳವನಾಗಿ, ಪುನಃ = ತಿರುಗಿ, ಮೇ = ನನ್ನ, ತದೇವ ಇದಂ ರೂಪಂ = ಮೊದಲು ನೋಡಿದ್ದೇ ಆದ ಆ ಕೃಷ್ಣರೂಪವನ್ನು, ಪ್ರಪಶ್ಯ = ಭಕ್ತಿಪೂರ್ವಕವಾಗಿ ಚೆನ್ನಾಗಿ ನೋಡು ॥ ೪೯ ॥

ಗೀ ॥ ॥ ಸಂಜಯ ಉವಾಚ ॥
ಇತ್ಯರ್ಜುನಂ ವಾಸುದೇವಸ್ತಥೋಕ್ತ್ವಾ
ಸ್ವಕಂ ರೂಪಂ ದರ್ಶಯಾಮಾಸ ಭೂಯಃ ।
ಆಶ್ವಾಸಯಾಮಾಸ ಚ ಭೀತಮೇನಂ
ಭೂತ್ವಾ ಪುನಃ ಸೌಮ್ಯವಪುರ್ಮಹಾತ್ಮಾ ॥ ೫೦ ॥

ಅ ॥ ಹೀಗೆ ಶ್ರೀಕೃಷ್ಣನು ಹೇಳಿ ತನ್ನ ರೂಪವನ್ನೇ ಅರ್ಜುನನಿಗೆ ತೋರಿಸಿದನೆಂದು, ಸಂಜಯಃ = ಸಂಜಯನು, ಉವಾಚ = (ಆ ಮೇಲೆ ನಡೆದ ವೃತ್ತಾಂತವನ್ನು ತಿಳಿಯಲಿಚ್ಛಿಸಿದ ಧೃತರಾಷ್ಟ್ರನ ಮನಸ್ಸಿನ ಅಭಿಪ್ರಾಯವನ್ನು ತಿಳಿದುಕೊಂಡು ಧೃತರಾಷ್ಟ್ರನಿಗೆ) ಹೇಳಿದನು ವಾಸುದೇವಃ = ಶ್ರೀಕೃಷ್ಣನು, ಇತಿ = ಹಿಂದೆ ಹೇಳಿದ ಪ್ರಕಾರ, ಅರ್ಜುನಂ = ಅರ್ಜುನನನ್ನು ಕುರಿತು, ಉಕ್ತ್ವಾ = ಹೇಳಿ, ಭೂಯಃ = ತಿರುಗಿ, ಸ್ವಕಂ ರೂಪಂ = ತನ್ನ ದ್ವಾಗಿ ತೋರಿಸಲಿಕ್ಕೆ ಯೋಗ್ಯವಾದ ಶ್ರೀಕೃಷ್ಣರೂಪವನ್ನು, ತಥಾ = ಹಾಗೆ, ದರ್ಶಯಾಮಾಸ = ತೋರಿಸಿದನು ಮಹಾತ್ಮಾ = ಸರ್ವೋತ್ತಮನಾದ ಶ್ರೀಕೃಷ್ಣನು ಪುನಃ = ತಿರುಗಿ, ಸೌಮ್ಯವಪುಃ = ಅತಿ ಶಾಂತ ಶರೀರವುಳ್ಳವನು, ಭೂತ್ವಾ = ಆಗಿ, ಭೀತಂ = ವಿಶೇಷವಾಗಿ ಭಯಪಟ್ಟಿರುವ, ಏನಂ = ಈ ಅರ್ಜುನನನ್ನು, ಭೂಯಃ = ತಿರುಗಿ, ಆಶ್ವಾಸಯಾಮಾಸ ಚ = ಸಮಾಧಾನ ಪಡಿಸಿದನು ॥ ೫೦ ॥

ಪೀ **ಸ್ವಕಂ ರೂಪಂ ದರ್ಶಯಾಮಾಸ** (ಶ್ಲೋ ೫೦) ಎಂದು ಶ್ರೀಕೃಷ್ಣನ ರೂಪವನ್ನು ವಿಶಿಷ್ಯ ಸ್ವೀಯವೆಂದು (ತನ್ನದ್ದೆಂದು) ಹೇಳಿದ್ರಿಂದ ವಿಶ್ವರೂಪವು ಸಾಕ್ಷಾತ್ ಈಶ್ವರಸ್ವರೂಪವಲ್ಲವೆಂದರಿ—

ತಾ ॥ (೧) ಸ್ವವತ್ ಕ್ರಿಯತ ಇತಿ ಸ್ವಕಂ ರೂಪಂ ॥ (೨) ವಿಶ್ವರೂಪಮಜ್ಞಾನಾಂ ಸ್ವರೂಪವನ್ನ ದರ್ಶಯತಿ । ಏತದಜ್ಞಾನಾಮಪಿ ತಥೈವ ದರ್ಶಯತೀತಿ ವಿಶೇಷಃ ॥ (೩) ಅನ್ಯಥಾ ದ್ರಷ್ಟುಮಿಚ್ಛಾಮಿ ತೇ ರೂಪಮಿತಿ ವಿರುದ್ಧಂ ಸ್ಯಾತ್ ॥ (೪) ಪರಾವರವಿಭೇದಸ್ತು ಮುಗ್ಧದೃಷ್ಟಿಮಪೇಕ್ಷ್ಯ ತು । ಪ್ರಾದುರ್ಭಾವಸ್ವರೂಪಾಣಾಂ ವಿಶ್ವರೂ-

ಪಸ್ಯ ಚ ಪ್ರಭೋಃ ॥ (೫) ಅನ್ಯಥಾ ನ ವಿಶೇಷೋಽಸ್ತಿ ವ್ಯಕ್ತಿರ್ಹ್ಯಜ್ಞಾವ್ಯಪೇಕ್ಷ-ಯೇತಿ ಚ ॥ ೫೦ ॥

ಅ ॥ (೧) ಇಲ್ಲಿ ಶ್ರೀಕೃಷ್ಣನ ರೂಪಕ್ಕೆ ಸ್ವಕಶಬ್ದದಿಂದ ಸ್ವಕೀಯತ್ವವು ಹೇಳಲ್ಪಡುವುದಿಲ್ಲ ಮತ್ತೆ ತನ್ನ ರೂಪದಂತೆ ತೋರಿಸಲ್ಪಡುತ್ತದೆ, ಅಂದರೆ ತನ್ನದ್ದಾಗಿ ತೋರಿಸುವುದು ಮಾತ್ರವೇ (೨) (ಎರಡು ರೂಪಗಳೂ ಶ್ರೀಕೃಷ್ಣನ ರೂಪಗಳೇ ಆದರೆ ಶ್ರೀಕೃಷ್ಣ ರೂಪಕ್ಕೇನೇ ಸ್ವಕಂ ಎಂದು ವಿಶಿಷ್ಯ ಹೇಳಿದ್ದು ಏಕೆ? ಎಂದರೆ—) ವಿಶ್ವರೂಪವನ್ನು ಅಜ್ಞಾನಿಗಳಿಗೆ ತನ್ನ ರೂಪದಂತೆ ತೋರಿಸುವುದಿಲ್ಲ. ಶ್ರೀಕೃಷ್ಣರೂಪವನ್ನು ಅಜ್ಞಾನಿಗಳಿಗೂ ತನ್ನದ್ದೆಂದೇ ತೋರಿಸುತ್ತಾನೆ (ಹೀಗೆ ಅಜ್ಞರ ವಿವಕ್ಷೆಯಿಂದ ಸ್ವಕಂ ಎಂದು ವಿಶೇಷವಾಗಿ ಹೇಳಿದ್ದು) ಎಂದು ವಿಶೇಷವು (೩) ವಿಶ್ವರೂಪವು ಶ್ರೀಕೃಷ್ಣನ ರೂಪದಂತೆ ಶ್ರೀಕೃಷ್ಣನ ಸ್ವರೂಪಭೂತವಾಗದಿದ್ದರೆ **ದೃಷ್ಟುಮಿಚ್ಛಾಮಿ ತೇ ರೂಪಂ** ಎಂದು ಅರ್ಜುನನು ಹೇಳಿದ್ದು ವಿರುದ್ಧವಾಗುವುದು (೪) **(ಪರಮಂ ರೂಪಂ ದರ್ಶಯಾಮಾಸ** ಎಂದು ವಿಶ್ವರೂಪಕ್ಕೆ ಸರ್ವೋತ್ತಮತ್ವವನ್ನು ಹೇಳಿದ್ರಿಂದ ಕೃಷ್ಣರೂಪಕ್ಕೆ ಉತ್ತಮತ್ವವಿಲ್ಲವೆಂಬುವ ಶಂಕೆಯನ್ನು ಸ್ಮೃತಿಪ್ರಮಾಣವನ್ನು ಹೇಳಿ ನಿರಾಕರಿಸುತ್ತಾರೆ—) ಶ್ರೀಪರಮಾತ್ಮನ ಅವತಾರ ರೂಪಗಳಿಗೂ ವಿಶ್ವರೂಪಕ್ಕೂ ಉತ್ತಮತ್ವ ಅವರತ್ವವೆಂಬುವ ವಿಭೇದವು ಅಜ್ಞದೃಷ್ಟಿಯನ್ನು ಇಟ್ಟುಕೊಂಡೇ ಹೇಳಿದ್ದು (೫) ಸ್ವಭಾವತಃ ಆ ರೂಪಗಳಿಗೆ ಸ್ವಲ್ಪವೂ ವಿಶೇಷವಿಲ್ಲ ಅಜ್ಞರು ವಿಶ್ವರೂಪವನ್ನು ಉತ್ತಮವೆಂದು ತಿಳಿದಂತೆ ಅವತಾರ ರೂಪಗಳಲ್ಲಿ ಪರತ್ವವನ್ನು ತಿಳಿಯದಿರುವುದರಿಂದ ಪರವೆಂದು ಹೇಳಿದ್ದು (ಅಂದರೆ ವಿಶ್ವರೂಪದಲ್ಲಿ ಉತ್ತಮತ್ವವಿದೆ ಅವತಾರರೂಪಗಳಲ್ಲಿಯೂ ಪರತ್ವವಿಲ್ಲವೆಂದಲ್ಲ) (ಬ್ರಹ್ಮಾದಿ ದೇವತೆಗಳಿಗೆ ವಿಶ್ವರೂಪದಂತೆ ಕೃಷ್ಣಾದ್ಯವತಾರ ರೂಪಗಳಲ್ಲಿಯೂ ಉತ್ತಮತ್ವಜ್ಞಾನವೇ ಇದೆ) ॥ ೫೦ ॥

ಗೀ ॥ ॥ ಅರ್ಜುನ ಉವಾಚ ॥

ದೃಷ್ಟ್ವೇದಂ ಮಾನುಷಂ ರೂಪಂ ತವ ಸೌಮ್ಯಂ ಜನಾರ್ದನ ।
ಇದಾನೀಮಸ್ಮಿ ಸಂವೃತ್ತಃ ಸಚೇತಾಃ ಪ್ರಕೃತಿಂ ಗತಃ ॥ ೫೧ ॥

ಅ ॥ ಅರ್ಜುನಃ=ಅರ್ಜುನನು, ಉವಾಚ=(ವಿಶ್ವರೂಪವನ್ನು ಮರೆಮಾಡಿ, ಕೃಷ್ಣರೂಪವನ್ನು ತೋರಿಸಿದುದರಿಂದ ಸಂತುಷ್ಟನಾಗಿದ್ದೇನೆಂದು ಶ್ರೀಕೃಷ್ಣನೊಡನೆ) ಹೇಳಿದನು ಜನಾರ್ದನ=ದುಷ್ಟ ಸಂಹಾರಕನಾದ ಶ್ರೀಕೃಷ್ಣನೇ, ತವ=ನಿನ್ನ, ಇದಂ=ಈ, ಸೌಮ್ಯಂ=ಕ್ರೂರವಲ್ಲದ, ಶಾಂತವಾದ, ಮಾನುಷಂ ರೂಪಂ=ಮನುಷ್ಯನ ರೂಪದಂತೆ ಕಾಣತಕ್ಕ ರೂಪವನ್ನು, ದೃಷ್ಟ್ವಾ=ನೋಡಿ, ಇದಾನೀಂ=ಈಗ, ಸಚೇತಾಃ=ಅತಿಪ್ರಸನ್ನವಾದ ಮನಸ್ಸುಳ್ಳವನಾಗಿ, ಸಂವೃತ್ತಃ ಅಸ್ಮಿ=ಆಗಿರುತ್ತೇನೆ. ಪ್ರಕೃತಿಂ ಗತಃ=ಪೂರ್ವದ ಸ್ವಭಾವವನ್ನು (ಸ್ವಸ್ಥತೆಯನ್ನು) ಹೊಂದಿರುತ್ತೇನೆಂದು ಹೇಳಿದನು ॥ ೫೧ ॥

ಪೀ—ದೃಷ್ಟ್ವೇದಂ ಮಾನುಷಂ ರೂಪಂ (ಶ್ಲೋ ೫೧) ಎಂಬುವುದರಿಂದ ಶ್ರೀಕೃಷ್ಣರೂಪವು ಮಾನುಷವೆಂದು ಹೇಳಿದುದರಿಂದ ಜ್ಞಾನಾನಂದಾದ್ಯಾತ್ಮಕ ಅಪ್ರಾಕೃತ ದಿವ್ಯ ದೇಹವುಳ್ಳವನೆಂದು ಹೇಳುವುದು ಹೇಗೆ ಎಂದರೆ—

ತಾ ॥ ಕಿಂಚಿನ್ಮನುಷ್ಯವದ್ದೃಶ್ಯಮಾನತ್ವಾನ್ಮಾನುಷಂ ॥ ೫೧ ॥

ಅ ॥ ಮನುಷ್ಯನ ಶರೀರದಂತೆ ಸ್ವಲ್ಪ ಕಾಣಲ್ಪಡುವುದರಿಂದ ಮಾನುಷವೆಂದು ಹೇಳಿದ್ದು. ವಸ್ತುತಃ ಮನುಷ್ಯನ ಶರೀರದಂತೆ ಪಾಂಚಭೌತಿಕವಾದುದಲ್ಲ ॥ ೫೧ ॥

ಗೀ ॥ ॥ ಶ್ರೀಭಗವಾನುವಾಚ ॥

ಸುದುರ್ದರ್ಶಮಿದಂ ರೂಪಂ ದೃಷ್ಟವಾನಸಿ ಯನ್ಮಮ ।
ದೇವಾ ಅಪ್ಯಸ್ಯ ರೂಪಸ್ಯ ನಿತ್ಯಂ ದರ್ಶನಕಾಂಕ್ಷಿಣಃ ॥ ೫೨ ॥

ಅ ॥ ಶ್ರೀಭಗವಾನ್ = ಶ್ರೀಕೃಷ್ಣನು, (ಭಯಂಕರವಾದ ರೂಪವನ್ನು ಏಕೆತೋರಿಸಿದ್ದೆಂದರೆ ಆ ವಿಶ್ವರೂಪದರ್ಶನದ ಮಹಿಮೆಯನ್ನು) ಉವಾಚ = ಹೇಳಿದನು ಮಮ = ನನ್ನ, ಯತ್ ರೂಪಂ ದೃಷ್ಟವಾನಸಿ = ಯಾವ ರೂಪವನ್ನು ನೋಡಿರುವಿಯೋ, ಅಸ್ಯ ರೂಪಸ್ಯ = ಈ ರೂಪವನ್ನು, ನಿತ್ಯಂ = ಯಾವಾಗಲೂ, ದರ್ಶನಕಾಂಕ್ಷಿಣಃ = ನೋಡಲಿಚ್ಛಿಸುವ, ದೇವಾ ಅಪಿ = ದೇವತೆಗಳೂ ಕೂಡ (ಯಾವುದನ್ನು ನೋಡಿರುವರೋ,) ಇದಂ ರೂಪಂ = ಈ ರೂಪವು, ಸುದುರ್ದರ್ಶಂ = ಸರ್ವಸಾಧಾರಣವಾಗಿ ಎಲ್ಲರಿಗೆ ನೋಡಲಿಕ್ಕೆ ಶಕ್ಯವಲ್ಲ (ಅಂದರೆ ವಿಶ್ವರೂಪದರ್ಶನ ಯೋಗ್ಯತೆಯುಳ್ಳವರಿಗೆ ಮಾತ್ರ ನೋಡಲು ಶಕ್ಯನಾದುದು) (ಈ ರೂಪವನ್ನು ನೋಡಲಿಕ್ಕೆ ದೇವತೆಗಳೂ ಅಪೇಕ್ಷಿಸಿಕೊಂಡಿರುವುದರಿಂದ ಶತ್ರುಗಳನ್ನು ಕೊಲ್ಲಲಿಕ್ಕೆ ಅರ್ಜುನನು ನಿಮಿತ್ತಮಾತ್ರನೆಂದು ತಿಳಿಸುವುದಕ್ಕಾಗಿ ಈ ಭಯಂಕರ ರೂಪವನ್ನು ಅರ್ಜುನನಿಗೆ ತೋರಿಸಿದ್ದು) ॥ ೫೨ ॥

ಪೀ—ಅತಿ ದುರ್ಲಭವಾದ ಈ ವಿಶ್ವರೂಪದರ್ಶನವು ನಿನಗೆ ನನ್ನ ಅನುಗ್ರಹದಿಂದಲೇ ಆಯಿತೆನ್ನುತ್ತಾನೆ -

ಗೀ ॥ ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ ।
ಶಕ್ಯ ಏವಂವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ ॥ ೫೩ ॥

ಅ ॥ ಮಾಂ = ನನ್ನನ್ನು, ಯಥಾ = ಯಾವ ಪ್ರಕಾರವಾಗಿ ದೃಷ್ಟವಾನಸಿ = ನೋಡಿರುತ್ತಿಯೋ, ಏವಂವಿಧಃ = ಇಂತಹ ವಿಶ್ವರೂಪವುಳ್ಳ, ಅಹಂ = ನಾನು, ವೇದೈಃ = ಋಗಾದಿ ವೇದಾಧ್ಯಯನಾದಿಗಳಿಂದಲೂ, ದ್ರಷ್ಟುಂ = ನೋಡುವುದಕ್ಕೆ, ನ ಶಕ್ಯಃ = ಶಕ್ಯನಲ್ಲ, ತಪಸಾ = ಕೃಚ್ಛ್ರಚಾಂದ್ರಾಯಣಾದಿ ತಪಸ್ಸನ್ನು ಮಾಡೋಣದರಿಂದಲೂ ನ = ಶಕ್ಯನಲ್ಲ, ದಾನೇನ = ಭೂದಾನಾದಿಗಳಿಂದಲೂ, ನ = ಶಕ್ಯನಲ್ಲ, ಇಜ್ಯಯಾ = ಜ್ಯೋತಿಷ್ಟೋಮಾದಿಯಾಗಗಳನ್ನು ಮಾಡೋಣದರಿಂದಲೂ, ದ್ರಷ್ಟುಂ = ನೋಡುವುದಕ್ಕೆ, ನ ಚ ಶಕ್ಯಃ = ಶಕ್ಯನಲ್ಲ ॥ ೫೩ ॥

ಪೀ—ಹಾಗಾದರೆ ಯಾವ ಉಪಾಯದಿಂದ ನೋಡಲು ಶಕ್ಯನೆಂದರೆ -

ಗೀ ॥ ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥ ೫೪ ॥

ಅ ॥ ಪರಂತಪ = ಶತ್ರುಗಳಿಗೆ ಸಂತಾಪಕಾರಿಯಾದ, ಅರ್ಜುನ = ಅರ್ಜುನನೇ, ಏವಂವಿಧಃ = ಹಿಂದೆ ಹೇಳಿದ ವಿಶ್ವರೂಪವುಳ್ಳ ಅಹಂ = ನಾನು, ಅನನ್ಯಯಾ = ಇತರಾಸಾಧಾರಣವಾದ, (ಸರ್ವಸಾಧಾರಣವಾಗಿ ಬೇರೆಯವರಿಗೆ ಸರ್ವಥಾ ನೋಡಲಿಕ್ಕೆದೊರಕದಿರುವ) ಭಕ್ತ್ಯಾ ತು = ನಿರವಧಿಕವಾದ ವಿಶೇಷವಾದ ಭಕ್ತಿಯಿಂದಲೇ, ತತ್ತ್ವೇನ = ಯಥಾರ್ಥವಾಗಿ, ಜ್ಞಾತುಂ = ತಿಳಿದುಕೊಳ್ಳುವುದಕ್ಕೂ, ದ್ರಷ್ಟುಂ ಚ = ನೋಡುವುದಕ್ಕೂ, ಪ್ರವೇಷ್ಟುಂ ಚ = ಸಾಯುಜ್ಯರೂಪವಾದ ಮೋಕ್ಷವನ್ನು ಹೊಂದುವುದಕ್ಕೂ, ಶಕ್ಯಃ = ಶಕ್ಯನಾಗಿರುತ್ತೇನೆ ॥ ೫೪ ॥

ಗೀ ॥ ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ ।
ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ ॥ ೫೫ ॥

ಅ ॥ ಪಾಂಡವ = ಅರ್ಜುನನೇ, ಯಃ = ಯಾವನು, ಮತ್ಕರ್ಮಕೃತ್ = ನನ್ನ ಪ್ರೀತಿಗಾಗಿಯೇ ಶಾಸ್ತ್ರಗಳಲ್ಲಿ ವಿಹಿತಗಳಾದ ಸತ್ಕರ್ಮಗಳನ್ನು ಮಾಡುವವನೋ, ಮತ್ಪರಮಃ = ನಾನೇ ಸರ್ವೋತ್ತಮ ನೆಂದು ತಿಳಿದುಕೊಂಡಿರುವವನೋ, ಮದ್ಭಕ್ತಃ = ನನ್ನಲ್ಲಿ ವಿಶೇಷವಾಗಿ ಭಕ್ತಿಯನ್ನು ಮಾಡಿಕೊಂಡಿರು ವವನೋ, ಸಂಗವರ್ಜಿತಃ = ಪುತ್ರಮಿತ್ರ ಕಳತ್ರಾದಿ ಸಕಲ ವಿಷಯಗಳಲ್ಲಿ ಆಸಕ್ತಿಯನ್ನು ಬಿಟ್ಟವನೋ ಅಥವಾ ಕರ್ಮಗಳ ಫಲೇಚ್ಛೆಯನ್ನು ತೊರೆದುಬಿಟ್ಟವನೋ, ಸರ್ವಭೂತೇಷು = ಸಮಸ್ತ ಪ್ರಾಣಿಗಳಲ್ಲಿ, ನಿರ್ವೈರಃ = ವೈರವಿಲ್ಲದವನೋ, ಸಃ = ಅಂತಹವನು, ಮಾಂ = ನನ್ನನ್ನು, ಏತಿ = ಹೊಂದುತ್ತಾನೆ ॥೫೫॥

ಗೀ ॥ ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗ ಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ವಿಶ್ವರೂಪದರ್ಶನಯೋಗೋ ನಾಮ ಏಕಾದಶೋಽಧ್ಯಾಯಃ ॥ ೧೧ ॥

ಅ ॥ ಹೀಗೆ ಶ್ರೀಮದ್ಭಗವದ್ಗೀತೆಯಲ್ಲಿ ಬ್ರಹ್ಮವಿದ್ಯೆಯಲ್ಲಿ ಯೋಗಶಾಸ್ತ್ರದಲ್ಲಿ ಶ್ರೀಕೃಷ್ಣಾರ್ಜುನರ ಸಂವಾದದಲ್ಲಿ ವಿಶ್ವರೂಪದರ್ಶನಯೋಗವೆಂಬ ಹನ್ನೊಂದನೇ ಅಧ್ಯಾಯವು ಮುಗಿಯಿತು ॥ ೧೧ ॥

ಭಾ ॥ ಸ್ವಕಂ ರೂಪಂ ತು ಭ್ರಾಂತಪ್ರತೀತ್ಯಾ । ಅನ್ಯಥಾ ತದಪಿ ಸ್ವಕಮೇವ । ಪ್ರಮಾ-ಣಾನಿ ತೂಕ್ತಾನಿ ಪುರಸ್ತಾತ್ ॥ ೫೦—೫೫ ॥

ಅ ॥ ಶ್ರೀಕೃಷ್ಣನ ರೂಪವೇ ಸ್ವಾಭಾವಿಕವಾದುದು ವಿಶ್ವರೂಪವು ಸ್ವಾಭಾವಿಕವಾದುದಲ್ಲವೆಂದು ಲೋಕದ ಜನರು ಭ್ರಮೆಗೊಂಡಿರುವುದರಿಂದ **ಸ್ವಕಂ** ಎಂದು ಹೇಳಿದ್ದು ವಸ್ತುತಸ್ತು ೨ನೇ ಅಧ್ಯಾಯದ ಅಂತ್ಯದಲ್ಲಿ **ಪರಿಪೂರ್ಣಾನಿ ಸರ್ವಾಣಿ** ಇದುಮೊದಲಾದ ಪ್ರಮಾಣಗಳನ್ನು ಹೇಳಿದ್ರಿಂದ ಆ ವಿಶ್ವರೂ ಪವೂ ಸ್ವಾಭಾವಿಕವೆಂದೇ ಸಿದ್ಧಿಸುತ್ತದೆ ॥ ೫೦—೫೫ ॥

ಭಾ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ಭಾಷ್ಯೇ ಏಕಾದಶೋಽಧ್ಯಾಯಃ ॥ ೧೧ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಶ್ರೀಭಗವದ್ಗೀತಾ ಭಾಷ್ಯದಲ್ಲಿ ಹನ್ನೊಂದನೇ ಅಧ್ಯಾಯವು ಮುಗಿಯಿತು ॥ ೧೧ ॥

ಪೀ—ಸುದುರ್ದರ್ಶಮಿದಂ ರೂಪಂ ಎಂಬುವಲ್ಲಿ ದೇವತೆಗಳೂ ಕೂಡ ಸರ್ವದಾ ನೋಡಲಿಚ್ಛಿಸಿ ಕೊಂಡೇ ಇದ್ದಾರೆ. ನೋಡುವುದಿಲ್ಲವೆಂದು ಹೇಳಿದ್ರಿಂದ ಅರ್ಜುನನಿಗಿಂತ ಉತ್ತಮರೂ ಅಧಮರೂ ವಿಶ್ವರೂಪವನ್ನು ನೋಡಿರುತ್ತಾರೆಂದು ಹಿಂದೆ ಹೇಳಿದ್ದು ಹೇಗೆ? ಎಂದರೆ--

ತಾ ॥ ಯೇ ದರ್ಶನಕಾಂಕ್ಷಿಣಸ್ತೈರಪೀದಾನೀಂ ದೃಷ್ಟಂ ಪ್ರಾಯಃ ॥ ೫೨—೫೫ ॥

ಅ ॥ ನನ್ನ ರೂಪವನ್ನು ನೋಡಬೇಕೆಂದು ಯಾರು ಇಚ್ಛಿಸಿಕೊಂಡಿರುತ್ತಾರೋ ಅಂತಹ ದೇವತೆಗಳಿಂದಲೂ ಈಗ ಪ್ರಾಯಶಃ ಆ ವಿಶ್ವರೂಪವು ಕಾಣಲ್ಪಟ್ಟಿದೆ ॥ ೫೨—೫೫ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾತಾತ್ಪರ್ಯನಿರ್ಣಯೇ ಏಕಾದಶೋಽಧ್ಯಾಯಃ ॥ ೧೧ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಭಗವದ್ಗೀತಾತಾತ್ಪರ್ಯನಿರ್ಣಯದಲ್ಲಿ ಹನ್ನೊಂದನೇ ಅಧ್ಯಾಯವು ಮುಗಿಯಿತು ॥ ೧೧ ॥

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಹದಿನೆರಡನೇ ಅಧ್ಯಾಯವು.

ಪೀ—ಶ್ರೀಪರಮಾತ್ಮನ ಉಪಾಸನ, ಲಕ್ಷ್ಮೀಯ ಉಪಾಸನ ಇವುಗಳ ಮಧ್ಯದಲ್ಲಿ ಶ್ರೀಹರಿಯ ಉಪಾಸನೆಯು ಶ್ರೇಷ್ಠವಾಗಿರುವುದರಿಂದ ಅದಕ್ಕಾಗಿ ಶ್ರೀಹರಿಯ ಉಪಾಸನೆಯನ್ನು ಈ ಅಧ್ಯಾಯದಲ್ಲಿ ಹೇಳುತ್ತಾರೆ—

ಗೀ ॥ ॥ ಅರ್ಜುನ ಉವಾಚ ॥

ಓಂ ॥ ಏವಂ ಸತತಯುಕ್ತಾ ಯೇ ಭಕ್ತಾಸ್ತ್ವಾಂ ಪರ್ಯುಪಾಸತೇ ।
ಯೇ ಚಾಪ್ಯಕ್ಷರಮವ್ಯಕ್ತಂ ತೇಷಾಂ ಕೇ ಯೋಗವಿತ್ತಮಾಃ ॥ ೧ ॥

ಅ ॥ ಅರ್ಜುನಃ=ಅರ್ಜುನನು, ತಮೇವಂ ವಿದ್ವಾನ್ ಇತ್ಯಾದಿಗಳಲ್ಲಿ ಶ್ರೀಪರಮಾತ್ಮನ ಉಪಾಸನೆಯು ಮೋಕ್ಷಕ್ಕೆ ಕಾರಣವೆಂದು ಹೇಳಿದಂತೆಯೇ ಶ್ರಿಯಂ ವಸಾನಾಃ ಇತ್ಯಾದಿ ವೇದಗಳಲ್ಲಿ ಲಕ್ಷ್ಮೀಯ ಉಪಾಸನೆಯೂ ಮೋಕ್ಷಕ್ಕೆ ಕಾರಣವೆಂದು ತಿಳಿಯುವುದರಿಂದ ಸಂಶಯಗ್ರಸ್ತನಾಗಿ ಭಗವದುವಾಸನೆಯೇ ಶ್ರೇಷ್ಠವೆಂಬುವಲ್ಲಿ ವಿಶೇಷ ಯುಕ್ತಿಯನ್ನು ತಿಳಿಯಲಿಚ್ಛೆಯಿಂದ ಉವಾಚ=ಪ್ರಶ್ನಿಸುತ್ತಾನೆ ಯೇ ಭಕ್ತಾಃ=ಯಾವ ಭಕ್ತರು, ಸತತಯುಕ್ತಾಃ=ಸರ್ವಕಾಲದಲ್ಲಿಯೂ ಧ್ಯಾನಯೋಗ ಕರ್ಮಯೋಗಗಳಿಂದ ಕೂಡಿದವರಾಗಿ, ಏವಂ ತ್ವಾಂ=ಪೂರ್ವದಲ್ಲಿ ಪ್ರತ್ಯಕ್ಷವಾಗಿ ಕೇಳಿಯೂ ನೋಡಿಯೂ ಇರುವ, ನಿನ್ನನ್ನು (ಕೃಷ್ಣನನ್ನು) ಏವಂ=ಹಿಂದೆ ಹೇಳಿದ ಪ್ರಕಾರ, ಪರ್ಯುಪಾಸತೇ=ಚೆನ್ನಾಗಿ ಉಪಾಸನೆ ಮಾಡುತ್ತಾರೋ, ಯೇಽಪಿ ಚ=ಯಾರು, ಅಕ್ಷರಂ=ದೇಹನಾಶವಿಲ್ಲದಿರುವುದರಿಂದ ಅಕ್ಷರಂ ಎಂದು ಹೆಸರುಳ್ಳ ಅವ್ಯಕ್ತಂ=ಚಿತ್ಪ್ರಕೃತಿಯನ್ನು (ಲಕ್ಷ್ಮೀದೇವಿಯನ್ನು) ಪರ್ಯುಪಾಸತೇ=ಶ್ರದ್ಧೆಯಿಂದ ಭಕ್ತ್ಯಾದಿಪೂರ್ವಕವಾಗಿ ಉಪಾಸನೆ ಮಾಡುತ್ತಾರೋ, ತೇಷಾಂ=ಆ ಇಬ್ಬರನ್ನುಪಾಸನೆ ಮಾಡುವವರ ಮಧ್ಯದಲ್ಲಿ, ಕೇ=ಯಾರು, ಯೋಗವಿತ್ತಮಾಃ=ಮೋಕ್ಷೋಪಾಯವನ್ನು ತಿಳಿದವರಲ್ಲಿ ಶ್ರೇಷ್ಠರು, ಎಂದು ಅರ್ಜುನನು ಪ್ರಶ್ನೆ ಮಾಡಿದನು ॥ ೧ ॥

ಪೀ—ಲಕ್ಷ್ಮೀದೇವಿಯನ್ನು ಪಾಸನೆ ಮಾಡುವವರಿಗಿಂತ ನನ್ನನ್ನು (ಶ್ರೀಕೃಷ್ಣನನ್ನು) ಉಪಾಸನೆ ಮಾಡುವವರೇ ಶ್ರೇಷ್ಠರೆನ್ನುತ್ತಾನೆ—

ಗೀ ॥ ॥ ಶ್ರೀಭಗವಾನುವಾಚ ॥

ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ ॥ ೨ ॥

ಅ ॥ ಶ್ರೀಭಗವಾನ್=ಶ್ರೀಕೃಷ್ಣನು ಉವಾಚ=ಉಪದೇಶವನ್ನು ಮಾಡಿದನು, ಯೇ=ಯಾರು, ಮಯಿ=ನನ್ನಲ್ಲಿ, ಮನಃ=ಮನಸ್ಸನ್ನು, ಆವೇಶ್ಯ=ಚೆನ್ನಾಗಿ ಇಟ್ಟು, ನಿತ್ಯಯುಕ್ತಾಃ=ನಿರಂತರದಲ್ಲಿಯೂ ಕರ್ಮಯೋಗ ಧ್ಯಾನಯೋಗಗಳಿಂದ ಕೂಡಿದವರಾಗಿ, ಪರಯಾ ಶ್ರದ್ಧಯಾ=ಅತ್ಯುತ್ಕೃಷ್ಟವಾದ ಆಸ್ತಿಕ್ಯ ಬುದ್ಧಿಯಿಂದ ಕೂಡಿದವರಾಗಿ, ಮಾಂ=ನನ್ನನ್ನು, ಉಪಾಸತೇ=ಉಪಾಸನೆ ಮಾಡುತ್ತಾರೋ, ತೇ=

ಅವರು, ಯುಕ್ತತಮಾ ಇತಿ = ಮೋಕ್ಷೋಪಾಯವನ್ನು ತಿಳಿದವರಲ್ಲಿ ಶ್ರೇಷ್ಠರೆಂದು, ಮೇ = ನನಗೆ, ಮತಾಃ = ಸಮ್ಮತರು. ॥ ೨ ॥

ಪೀ—ಈ ಅಧ್ಯಾಯದಲ್ಲಿ ಹೇಳತಕ್ಕ ಅರ್ಥವನ್ನು ಹೇಳುತ್ತಾರೆ—

ಭಾ ॥ ಓಂ ॥ (೧) ಅವ್ಯಕ್ತೋಪಾಸನಾದ್ಭಗವದುಪಾಸನಸ್ಯೋತ್ತಮತ್ವಂ ಪ್ರದರ್ಶ್ಯ ತದುಪಾಯಂ ಪ್ರದರ್ಶಯತ್ಯಸ್ಮಿನ್ನಧ್ಯಾಯೇ ॥ (೨) ತದುಪಾಸನಮಪಿ ಮೋಕ್ಷಸಾಧನಂ ಪ್ರತೀಯತೇ ॥ (೩) ಶ್ರಿಯಂ ವಸಾನಾ ಅಮೃತತ್ವಮಾಯನ್ನಿವಂತಿ ಸತ್ಯಾ ಸಮಿಥಾ ಮಿತದ್ರ್ಯಾವಿತಿ ॥ (೪) ಅನಾದ್ಯನಂತಂ ಮಹತಃ ಪರಂ ಧ್ರುವಂ ನಿಚಾಯ್ಯ ತಂ ಮೃತ್ಯುಮುಖಾತ್ಪ್ರಮುಚ್ಯತ ಇತಿ ಚ ॥ (೫) ಅವ್ಯಕ್ತಂ ಚ ಮಹತಃ ಪರಂ । ಮಹತಃ ಪರಮವ್ಯಕ್ತಮಿತ್ಯುಕ್ತಪರಾಮರ್ಶೋಽಪಪತ್ತೇಃ ॥ ೧ ॥

ಅ ॥ (೧) ಕೇವಲ ಲಕ್ಷ್ಮೀದೇವಿಯನ್ನು ಪಾಸನೆ ಮಾಡುವುದಕ್ಕಿಂತ ಶ್ರೀಪರಮಾತ್ಮನನ್ನು ಪಾಸನೆ ಮಾಡುವುದು ಉತ್ತಮವೆಂದು ತೋರಿಸಿ ಆ ಶ್ರೀಪರಮಾತ್ಮನನ್ನು ಪಾಸನೆ ಮಾಡತಕ್ಕ ಉಪಾಯವನ್ನು ಈ ಅಧ್ಯಾಯದಲ್ಲಿ ತೋರಿಸುತ್ತಾರೆ (೨) ಶ್ರೀಪರಮಾತ್ಮನ ಉಪಾಸನದಂತೆ ಲಕ್ಷ್ಮೀದೇವಿಯ ಉಪಾಸನೆಯೂ ಮೋಕ್ಷಸಾಧನವೆಂದು ಪ್ರಮಾಣಪ್ರಮಿತವಾಗಿದ್ದರೆ ಭಗವದುಪಾಸನೆಗೆ ಆಧಿಕ್ಯ ನಿರ್ಧಾರಣಾರ್ಥವಾದ ಅರ್ಜುನನ ಪ್ರಶ್ನೆಯು ಕೂಡಬಹುದಿತ್ತು ಹಾಗಲ್ಲ, ಮತ್ತೆ ಲಕ್ಷ್ಮಿಯ ಉಪಾಸನಾ, ಭಗವದುಪಾಸನಾ ಇವುಗಳಿಂದ ಸಾಧ್ಯ ಫಲಗಳ ಮಧ್ಯದಲ್ಲಿ ಯಾವ ಫಲವು ಶ್ರೇಷ್ಠವೆಂದು ಸಾಧ್ಯಕ್ಕೆ ಉತ್ತಮತ್ವವನ್ನು ನಿರ್ಣಯಿಸುವುದಕ್ಕಾಗಿಯೇ ಪ್ರಶ್ನೆಯು ಬಂದರೆ (ಪರಮಾತ್ಮನ ಉಪಾಸನೆಯು ಮೋಕ್ಷ ಸಾಧನವೆಂದು ತೋರಿದಂತೆ) ಆ ಲಕ್ಷ್ಮೀದೇವಿಯ ಉಪಾಸನೆಯೂ ಕೂಡ ಮೋಕ್ಷಸಾಧನವೆಂದು ಪ್ರಮಾಣಗಳಿಂದ ತೋರುತ್ತದೆ (೩) (ಲಕ್ಷ್ಮೀದೇವಿಯ ಉಪಾಸನೆಯಿಂದ ಮೋಕ್ಷವಾಗುತ್ತದೆಂದು ಹೇಳುವ ಶ್ರುತಿಗಳನ್ನು ಹೇಳುತ್ತಾರೆ—) ಲಕ್ಷ್ಮೀದೇವಿಯನ್ನು ಪಾಸನೆ ಮಾಡುವವರು ಮೋಕ್ಷವನ್ನು ಹೊಂದುವರು ಕ್ಷೀರಸಮುದ್ರದಲ್ಲಿರುವ ಲಕ್ಷ್ಮಿಯ, ಉಪಾಸಕರಾದ ಆ ಮುಕ್ತರ ಇಷ್ಟಗಳಾದವುಗಳು ಸತ್ಯಗಳೇ ಆಗುತ್ತವೆ (೪) (ಶ್ರೀ ಶಬ್ದವು ಭಾರತೀ, ಶಚೀ, ಶ್ಯಾಮಲಾ, ಉಷಾದೇವಿಯರಲ್ಲಿಯೂ ಇದ್ದ ಪ್ರಯುಕ್ತ ಕೇವಲ ಲಕ್ಷ್ಮೀವಿಷಯಕವೇ ಆದ ಶ್ರುತ್ಯಂತರವನ್ನು ಹೇಳುತ್ತಾರೆ—) ಮಹತ್ತತ್ವಾಭಿಮಾನಿಯಾದ ಚತುರ್ಮುಖನಿಂದ ಉತ್ತಮಳಾದ, ಆದ್ಯಂತವಿಲ್ಲದಿರುವ ಲಕ್ಷ್ಮೀದೇವಿಯನ್ನು ಚೆನ್ನಾಗಿ ಪೂಜಿಸಿ ವ್ಯತ್ಯಭಯದಿಂದ ಮುಕ್ತನಾಗುತ್ತಾನೆ, (ಅಂದರೆ ಮೋಕ್ಷವನ್ನು ಹೊಂದುತ್ತಾನೆ) ಎಂದೂ ಇದೆ (೫) ಅವ್ಯಕ್ತತತ್ವಾಭಿಮಾನಿನಿಯಾದ ಲಕ್ಷ್ಮೀದೇವಿಯೇ ಮಹತ್ತತ್ವಾಭಿಮಾನಿಯಾದ ಚತುರ್ಮುಖನಿಗಿಂತ ಶ್ರೇಷ್ಠಳು ಅವ್ಯಕ್ತಶಬ್ದದಿಂದ ಲಕ್ಷ್ಮೀದೇವಿಯನ್ನು ಇಟ್ಟುಕೊಂಡರೇನೇ **ಮಹತಃ ಪರಮವ್ಯಕ್ತಂ** ಎಂಬ ಹೇಳಿದ ಪರಾಮರ್ಶವು ಕೂಡುತ್ತದೆ ಅಂದರೆ**ಮಹತಃ ಪರಮವ್ಯಕ್ತಂ** ಎಂಬುವಲ್ಲಿ ಮಹತ್ತತ್ವಾಭಿಮಾನಿಯಾದ ಚತುರ್ಮುಖ ಬ್ರಹ್ಮನಿಂದ ಸಾಕ್ಷಾತ್ ಉತ್ತಮಳಾದ ಲಕ್ಷ್ಮೀದೇವಿಗೇನೇ ಪರಾಮರ್ಶವು ಯುಕ್ತವು (ಅವ್ಯಕ್ತದಿಂದಲೂ ಉತ್ತಮನಾದ ಪರಮಾತ್ಮನಿಗೆ ಪರಾಮರ್ಶವೆಂದು ಹೇಳಕೂಡದು) (ಪರಮಾತ್ಮನಾದರೂ ಮಹತ್ತತ್ವದಿಂದಮಾತ್ರ ಪರನೆಂದು ಹೇಳಿಸಿಕೊಳ್ಳುದಲ್ಲ ಮತ್ತೆ **ಅವ್ಯಕ್ತಾತ್ಪುರುಷಃ ಪರಃ** ಎಂದು ಹೇಳಿದ ಪ್ರಕಾರ ಅವ್ಯಕ್ತ ಎನಿಸಿದ ಲಕ್ಷ್ಮೀದೇವಿಯಿಂದಲೂ ಉತ್ತಮನು) ॥ ೧ ॥

ಪೀ—ಇದೇ ವಿಷಯದಲ್ಲಿಯೇ **ಶ್ರಿಯಂ ವಸಾನಾಃ ಅನಾದ್ಯನಂತಂ** ಎಂಬುವ ಎರಡು ಶ್ರುತಿಗಳ ಅರ್ಥವನ್ನು ಸಂಗ್ರಹಿಸತಕ್ಕದ್ದೂ, ಸ್ಪಷ್ಟವೂ ಆದ ಶ್ರುತಿಯನ್ನು ಹೇಳುತ್ತಾರೆ—

ಭಾ ॥ (೧) ಉಪಾಸ್ಯ ತಾಂ ಶ್ರಿಯಮವ್ಯಕ್ತಸಂಜ್ಞಾಂ ಭಕ್ತ್ಯಾ ಮರ್ತ್ಯೋ ಮುಚ್ಯತೇ ಸರ್ವಬಂಧೈರಿತಿ ಸಾಮವೇದೇ ಆಗ್ನಿವೇಶ್ಯಶಾಖಾಯಾಂ ॥ (೨) ಮಹಚ್ಚ ಮಾಹಾತ್ಮ್ಯಂ ತಸ್ಯಾ ವೇದೇಷೂಚ್ಯತೇ ।(1)ಚತುಷ್ಕರ್ದಾ ಯುವತಿಃ ಸುಪೇಶಾ ಘೃತಪ್ರತೀಕಾ ವಯುನಾನಿ ವಸ್ತೇ । ತಸ್ಯಾಂ ಸುಪರ್ಣಾ ವೃಷಣಾ ನಿಷೇದತುರ್ಯತ್ರ ದೇವಾ ದಧಿರೇ ಭಾಗಧೇಯಮಿತಿ । (2) ಚತುಶ್ಶಿಖಂಡಾ ಯುವತಿಃ ಸುಪೇಶಾ ಘೃತಪ್ರತೀಕಾ ವಯುನಾನಿ ವಸ್ತ ಇತಿ ಚ ॥ (೩)ಅಹಂ ರುದ್ರೇಭಿರ್ವಸುಭಿಶ್ಚರಾಮ್ಯಹಮಾದಿತ್ಯೈರುತ ವಿಶ್ವದೇವೈರಿತ್ಯಾದ್ಯಾರಭ್ಯ ಅಹಂ ರಾಷ್ಟ್ರೀ ಸಂಗಮನೀ ವಸೂನಾಂ ಚಿಕಿತುಷೀ ಪ್ರಥಮಾ ಯಜ್ಞಿಯಾನಾಂ । ತಾಂ ಮಾ ದೇವಾ ವ್ಯದಧುಃ ಪುರುತ್ರಾ ಭೂರಿಸ್ಥಾತ್ರಾಂ ಭೂರ್ಯಾವೇಶಯಂತೀಂ । ಮಯಾ ಸೋ ಅನ್ನಮತ್ತಿ ಯೋ ವಿಪಶ್ಯತಿ ಯಃ ಪ್ರಾಣಿತಿ ಯ ಈಂ ಶೃಣೋತ್ಯುಕ್ತಂ ॥ ೨ ॥

ಅ ॥ (೧) ಯೋಗ್ಯ ಮನುಷ್ಯನು ಅವ್ಯಕ್ತ ಎಂದು ಹೆಸರುಳ್ಳ ಆ ಲಕ್ಷ್ಮೀದೇವಿಯನ್ನು ಭಕ್ತಿಯಿಂದ ಉಪಾಸನಾಮಾಡಿ ಸಮಸ್ತ ಸಂಸಾರಬಂಧೆಗಳಿಂದ ಬಿಡುಗಡೆ ಹೊಂದುತ್ತಾನೆ, ಎಂದು ಸಾಮವೇದದಲ್ಲಿ ಆಗ್ನಿವೇಶ್ಯಶಾಖೆಯಲ್ಲಿ ಹೇಳಿದೆ (೨) ಬ್ರಹ್ಮಾದಿಗಳಿಗಿಂತಲೂ ಆ ಲಕ್ಷ್ಮೀದೇವಿಗೆ ಮಹಾಮಾಹಾತ್ಮ್ಯವು ವೇದಗಳಲ್ಲಿ ಹೇಳಲ್ಪಟ್ಟಿದೆ (1) ಯಾವ ಲಕ್ಷ್ಮೀದೇವಿಯು ನಾಲ್ಕು ವೇಣಿಗಳುಳ್ಳವಳೋ, (ನಾಲ್ಕು ಜಟಾಬಂಧೆಗಳುಳ್ಳವಳೋ)ನಿತ್ಯಯೌವನಳೋ, ಸೌಂದರ್ಯವುಳ್ಳವಳೋ, ಸುರೂಪವುಳ್ಳವಳೋ, ಪ್ರಕಾಶಮಾನವಾದ ಅಂಗವುಳ್ಳವಳೋ, ಜ್ಞಾನ ಆನಂದಗಳಿಂದ ಅಲಂಕೃತಗಳಾಗಿರುತ್ತಾಳೋ, ಯಾವ ಲಕ್ಷ್ಮೀದೇವಿಯಿಂದ ದೇವತೆಗಳು ಸ್ವಸ್ವಪದಪ್ರಾಪ್ತಿರೂಪ ಭಾಗ್ಯವನ್ನು ಹೊಂದಿರುವರೋ, ಅಂತಹ ಲಕ್ಷ್ಮೀದೇವಿಯಲ್ಲಿ ಚೆನ್ನಾಗಿ ಪರಮಾನಂದಗಳನ್ನೀ ಅನುಭವಿಸುತ್ತಿರುವ, ಭಕ್ತರಿಗೆ ಅಭೀಷ್ಟವನ್ನು ಕೊಡುವ ಆತ್ಮಾ ಅಂತರಾತ್ಮಾ ಎಂಬುವ ಎರಡು ಭಗವದ್ರೂಪವಿಶೇಷಗಳು ಅಭೀಷ್ಟವನ್ನು ಕೂಡುತ್ತಾ ಇರುತ್ತವೆ. (೩) ಲಕ್ಷ್ಮೀದೇವಿಯು ನಾಲ್ಕು ಜಟಾಬಂಧೆಗಳುಳ್ಳವಳೂ, ನಿತ್ಯಯೌವನಳೂ, ಚಲೋ ರೂಪವುಳ್ಳವಳೂ, ವಿಶೇಷವಾಗಿ ಪ್ರಕಾಶಿಸಿಕೊಂಡಿರುವ ಅಂಗಗಳುಳ್ಳವಳೂ, ಜ್ಞಾನಾನಂದಗಳಿಂದ ಅಲಂಕೃತಳೂ ಆಗಿರುತ್ತಾಳೆ (ಅಂತಹ ಲಕ್ಷ್ಮೀದೇವಿಗೆ ಆತ್ಮಾ ಅಂತರಾತ್ಮಾ ಎಂಬುವ ಎರಡು ಭಗವದ್ರೂಪ ವಿಶೇಷಗಳು ಸ್ವಾಮಿಯಾಗಿಯೂ ನಿಯಾಮಕವಾಗಿಯೂ ಇದ್ದು ಅಭೀಷ್ಟವನ್ನು ಹೊಂದಿಸಿಕೊಡುತ್ತವೆ) (ಅಂತೂ ಲಕ್ಷ್ಮೀದೇವಿಗೆ ಈ ಎರಡು ಶ್ರುತಿಗಳಲ್ಲಿ ನಿತ್ಯ ಯೌವನವೂ ಜ್ಞಾನಮಯತ್ವವೂ, ಬ್ರಹ್ಮಾದಿ ಸಮಸ್ತ ದೇವತಾಪೂಜ್ಯತ್ವವೂ ತೋರುತ್ತದೆ) (೩) (ಇದು ಲಕ್ಷ್ಮೀದೇವಿಯ ಮಾತು)ನಾನು ೧೧ ರುದ್ರರಿಂದಲೂ, ೮ ವಸುಗಳಿಂದಲೂ, ಶ್ರೀವಿಷ್ಣು ಹೊರತಾದ ೧೧ ಆದಿತ್ಯರಿಂದಲೂ, ವಿಶ್ವದೇವತೆಗಳಿಂದಲೂ ಕೂಡಿಕೊಂಡು ಸಂಚರಿಸುತ್ತಿರುತ್ತೇನೆ, ಎಂದಾರಂಭಿಸಿ, ನಾನು ವಿಶೇಷವಾಗಿ ಪ್ರಕಾಶಿಸಿಕೊಂಡಿರುವವಳು, ಯಜ್ಞಕ್ಕೆ ಉಪಯುಕ್ತಗಳಾದ ಪದಾರ್ಥಗಳನ್ನು ಅಥವಾ ಯಜ್ಞಾಭಿಮಾನಿ ದೇವತೆಗಳನ್ನು ಯಜಮಾನನಿಗೆ ಹೊಂದಿಸಿಕೊಡುವವಳು. ಅನಾದಿ ಕಾಲವನ್ನಾರಂಭಿಸಿ ಸರ್ವತ್ರ ಆವಾಸವಮಾಡುತ್ತಿರುವವಳು ಅಂತಹ ಸ್ವತಃ ಬಹುಸ್ಥಾನಗಳಲ್ಲಿ ನಿಯಾಮಕಳಾಗಿ ಇರುವ ಮತ್ತು ಬಹುಸ್ಥಾನಗಳಲ್ಲಿ ದೇವತೆಗಳನ್ನು ಇರಿಸುವ ನನ್ನನ್ನು ದೇವತೆಗಳು ಬಹುಸ್ಥಾನಗಳಲ್ಲಿ ಪೂಜೆಗೋಸ್ಕರ ಪ್ರತಿಷ್ಠಾಮಾಡಿದರು (೪) ಯಾವನು ಭೋಗ್ಯವಾದ ವಸ್ತುವನ್ನು ಭೋಗಿಸುತ್ತಾನೋ ಯಾವನು ಉತ್ತಮ ವಸ್ತುವನ್ನು ನೋಡುತ್ತಾನೋ, ಯಾವನು ಉತ್ತಮವಾದ ವ್ಯಾಪಾರವನ್ನು ಮಾಡುತ್ತಾನೋ, ಯಾವನು ಭಗವತ್ತತ್ವಾದಿಗಳನ್ನು ಕೇಳುತ್ತಾನೋ, ಅವನು ನನ್ನ ಪ್ರೇರಣೆಯಿಂದಲೇ ಈ ಮಹಾ ಕಾರ್ಯಗಳನ್ನು ಮಾಡುತ್ತಾನೆ ॥ ೨ ॥

ಭಾ ॥ (೧) ಅಮುಂತವೋ ಮಾಂ ತ ಉಪಕ್ಷಿಯಂತಿ ಶ್ರುಧಿ ಶ್ರುತ ಶ್ರದ್ಧಿವಂ ತೇ ವದಾಮಿ॥ (೨) ಯಂ ಕಾಮಯೇ ತಂ ತಮುಗ್ರಂ ಕೃಣೋಮಿ ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಂ ॥ (೩) ಅಹಂ ರುದ್ರಾಯ ಧನುರಾತನೋಮಿ ಬ್ರಹ್ಮದ್ವಿಷೇ ಶರವೇ ಹಂತವಾ ಉ ॥ (೪) ಅಹಂ ಸುವೇ ಪಿತರಮಸ್ಯ ಮೂರ್ಧನ್ಮಮ ಯೋನಿರಪ್ಸ್ವಂ೧-ತಃ ಸಮುದ್ರೇ ॥ (೫) ಪರೋ ದಿವಾ ಪರ ಏನಾ ಪೃಥಿವ್ಯೈತಾವತೀ ಮಹಿನಾ ಸಂಬಭೂವೇತ್ಯಾದಿ ಚ ॥ ೩ ॥

ಅ ॥ (೧) ಜೀವಬ್ರಹ್ಮೈಕ್ಯಾದಿಗಳನ್ನು ತಿಳಿಯೋಣ ಮೊದಲಾದ ಅಪರಾಧ ಮಾಡದಿದ್ದವರೆಲ್ಲರೂ ನನ್ನ ಸಮಾಪದಲ್ಲಿ ಅವಾಸ ಮಾಡುತ್ತಾರೆ ಪ್ರಸಿದ್ಧನಾದವನೇ ವಿಶ್ವಾಸಹೊಂದಲು ಯೋಗ್ಯವಾದ ವಸ್ತುವನ್ನು ನಾನು ನಿನಗಾಗಿ ಹೇಳುತ್ತೇನೆ ಅದನ್ನು ಕೇಳು (೨) ಯಾರನ್ನು ರುದ್ರನನ್ನಾಗಿ ಮಾಡಬೇಕೆಂದು ಇಚ್ಛಿಸುತ್ತೇನೋ, ಅವರವರನ್ನು ರುದ್ರಪದಯೋಗ್ಯನನ್ನಾಗಿ ಮಾಡುತ್ತೇನೆ, ಯಾರು ಯಾರನ್ನು ಚತುರ್ಮುಖಬ್ರಹ್ಮನನ್ನಾಗಿ ಮಾಡಬೇಕೆಂದು ಇಚ್ಛಿಸುತ್ತೇನೋ, ಅವರವರನ್ನು ಚತುರ್ಮುಖಬ್ರಹ್ಮನನ್ನಾಗಿ ಮಾಡುತ್ತೇನೆ ಹೀಗೆಯೇ ಋಷಿಪದಯೋಗ್ಯರನ್ನು ಋಷಿಗಳನ್ನಾಗಿಯೂ, ಜ್ಞಾನಯೋಗ್ಯರನ್ನು ಮಹಾ ಜ್ಞಾನಿಗಳನ್ನಾಗಿಯೂ, ಮಾಡುವೆನು (೩) ನಾನು ಸಂಹಾರ ಕಾಲದಲ್ಲಿ ಬ್ರಾಹ್ಮಣ ಮೊದಲಾದ ಸಮಸ್ತ ಪ್ರಾಣಿಗಳನ್ನು ಸಂಹರಿಸುವ, ದುಷ್ಟ ಸಂಹಾರಕನಾದ, ಅಥವಾ ಬ್ರಹ್ಮದ್ವೇಷಿಗಳಿಗೆ ಘಾತುಕನಾದ, ರುದ್ರನನ್ನು ಕೊಲ್ಲುವುದಕ್ಕಾಗಿಯೇ ಧನುಸ್ಸನ್ನು ವಿಸ್ತರಿಸುತ್ತೇನೆ (೪) ನಾನು ಸಮಸ್ತ ಪ್ರಪಂಚಕ್ಕೆ ತಂದೆಯಾದ ಚತುರ್ಮುಖಬ್ರಹ್ಮನನ್ನು ಸರ್ವರಿಗಿಂತ ಶ್ರೇಷ್ಠನನ್ನಾಗಿ ಸೃಷ್ಟಿಸಿರುವೆನು ನನಗೆ ಕಾರಣನಾದವನು ಶ್ರೀಹರಿಯು ಕ್ಷೀರಸಾಗರದ ಮಧ್ಯದಲ್ಲಿದ್ದಾನೆ (೫) ನಾನು ಸ್ವರ್ಗಾಭಿಮಾನಿದೇವತೆಗಿಂತ ಮಿಗಿಲಾದವಳು.ಈ ಪೃಥಿವ್ಯಭಿಮಾನಿ ದೇವತೆಗಿಂತಲೂ ಮಿಗಿಲಾದವಳು ಮಹಾ ಮಹಿಮೆಯಿಂದ ಲಕ್ಷ್ಮೀ ಎನಿಸಿಕೊಂಡ ನಾನು ಬ್ರಹ್ಮರುದ್ರಾದಿ ನಿಖಿಲ ಜಗತ್ತನ್ನು ಸೃಷ್ಟಿಸುವ ಶಕ್ತಿ ಉಳ್ಳವಳಾಗಿರುವೆನು, ಇದುಮೊದಲಾದ ಪ್ರಮೇಯವು ವೇದಾದಿಗಳಲ್ಲಿ ಹೇಳಲ್ಪಟ್ಟಿದೆ ॥ ೩ ॥

ಭಾ ॥ (೧) ತ್ವಯಾ ಜುಷ್ಟಃ ಸ ಋಷಿರ್ಭವತಿ ದೇವಿ ತ್ವಯಾ ಬ್ರಹ್ಮಾ ಗತಶ್ರೀರುತ ತ್ವಯಾ ಇತಿ ಚ । ಇತಿ ಶಂಕಾ ಕಸ್ಯಚಿದ್ಭವತಿ । ಅತೋ ಜಾನನ್ನಪಿ ಸೂಕ್ಷ್ಮಯುಕ್ತಿಜ್ಞಾನಾರ್ಥಂ ಪೃಚ್ಛತಿ । ಏವಮಿತಿ ॥ (೨) ಏವಂಶಬ್ದೇನ ದೃಷ್ಟಶ್ರುತರೂಪಂ ಮತ್ಕರ್ಮಕೃದಿತ್ಯಾದಿಪ್ರಕಾರಶ್ಚ ಪರಾಮೃಶ್ಯತೇ । ಅವ್ಯಕ್ತಂ ಪ್ರಕೃತಿಃ । ಮಹತಃ ಪರಮವ್ಯಕ್ತಮಿತಿ ಪ್ರಯೋಗಾತ್ ॥ (೩) ಯತ್ತತ್ತ್ರಿಗುಣಮವ್ಯಕ್ತಂ ನಿತ್ಯಂ ಸದಸದಾತ್ಮಕಂ । ಪ್ರಧಾನಂ ಪ್ರಕೃತಿಂ ಪ್ರಾಹುರವಿಶೇಷಂ ವಿಶೇಷವದಿತಿ ಭಾಗವತೇ ॥ (೪) ಅಕ್ಷರಂ ಚ ತತ್ । ಅಕ್ಷರಾತ್ಪರತಃ ಪರ ಇತಿ ಶ್ರುತೇಃ ॥ (೫) ಪರಂ ತು ಬ್ರಹ್ಮ ನಹಿ ಭಗವತೋಽನ್ಯತ್ ॥ (೬) ಆನಂದಮಾನಂದವನೋವನಾನೇ ಸರ್ವಾತ್ಮಕೇ ಬ್ರಹ್ಮಣಿ ವಾಸುದೇವ ಇತಿ ಭಾಗವತೇ ॥ ೪ ॥

ಆ ॥ (೧) (ವೇದಪುರುಷನ ಮಾತು) ಎಲೋ ಲಕ್ಷ್ಮೀ ದೇವಿಯೇ ನಿನ್ನಿಂದ ಅನುಗ್ರಹಿಸಲ್ಪಟ್ಟವನು ನಿನ್ನ ಪ್ರೀತಿಪಾತ್ರನಾದವನು ಋಷಿಯಾಗಿರುತ್ತಾನೆ ಹಾಗೆಯೇ ನಿನ್ನಿಂದ ಅನುಗ್ರಹಿಸಲ್ಪಟ್ಟವ ಪ್ರೀತಿ

ಪಾತ್ರನಾದವನೇ ಚತುರ್ಮುಖ ಬ್ರಹ್ಮನಾಗುತ್ತಾನೆ, ನಿನ್ನಿಂದಲೇ ನಿನ್ನ ಪ್ರೀತಿಪಾತ್ರನಾದವನು ಸಂಪತ್ತನ್ನು ಹೊಂದುತ್ತಾನೆ. (ಹೀಗೆಯೇ ಬ್ರಾಹ್ಮಣಾದಿವರ್ಣಗಳು ನಿನ್ನಿಂದಲೇ ಆಗುತ್ತವೆ) ಹೀಗೆ ಲಕ್ಷ್ಮೀದೇವಿಗೆ ಮಹಾ ಮಹಿಮೆಯು ಶ್ರುತಿಗಳಲ್ಲಿ ಹೇಳಿರುವುದರಿಂದ ಪರಮಾತ್ಮನ ಉಪಾಸನೆಯಂತೆ ಲಕ್ಷ್ಮ್ಯುಪಾಸನೆಯು ಕೂಡ ಮೋಕ್ಷಸಾಧನವೆಂದು ತೋರುವ ಕಾರಣ ಈ ಎರಡು ಮಾರ್ಗಗಳಿಂದ ಮೋಕ್ಷರೂಪವಾದ ಒಂದೇ ಫಲವನ್ನು ಅಪೇಕ್ಷಿಸುವ ಉಪಾಸಕರ ಮಧ್ಯದಲ್ಲಿ ಶ್ರೇಷ್ಠರು ಯಾರೆಂದು ತತ್ವ ತಿಳಿಯದಿರುವವರಿಗೆ ಸಂದೇಹವು ಹುಟ್ಟುತ್ತದೆ ಅದುದರಿಂದ ಅಂತಹವರಿಗೆ ಅನುಗ್ರಹಿಸಬೇಕೆಂಬುವ ಇಚ್ಛೆಯಿಂದ ಅವರಿಬ್ಬರಲ್ಲಿ ಭಗವದುಪಾಸಕರೇ ಶ್ರೇಷ್ಠರು ಎಂದು ಅರ್ಜುನನು ತಿಳಿದಾಗ್ಯೂ ಪ್ರಶ್ನೆ ಮಾಡುತ್ತಾನೆ ಅಥವಾ ಅರ್ಜುನನು ತಿಳಿದಾಗ್ಯೂ ತಾನು ತಿಳಿಯದಿರುವ ಅತಿ ಸೂಕ್ಷ್ಮಗಳಾದ ಯುಕ್ತಿ ವಿಶೇಷಗಳನ್ನು ತಿಳಿದುಕೊಳ್ಳುವುದಕ್ಕಾಗಿ ಪರರಿಗೆ ಬರಬಹುದಾದ ಸಂಶಯವನ್ನು ತಾನು ಮನದಲ್ಲಿ ಅಲೋಚಿಸಿ **ಏವಂ ಸತತಯುಕ್ತಾಃ** ಇತ್ಯಾದಿಗಳಿಂದ ಪ್ರಶ್ನೆಮಾಡುತ್ತಾನೆ (೨) ಏವಂ ಎಂಬ ಶಬ್ದದಿಂದ ಮೊದಲು ಎಂತಹ ಮಾಹಾತ್ಮೆಯುಳ್ಳ ಪರಬ್ರಹ್ಮನ ರೂಪವನ್ನು ನೋಡಿದ್ದೇವೋ, ಕೇಳಿದ್ದೇವೋ, ಅಂತ ಹುದನ್ನು ಇಟ್ಟುಕೊಳ್ಳಬೇಕು ಮತ್ತು ಮತ್ಕರ್ಮಕೃತ್ ಇತ್ಯಾದಿಗಳಲ್ಲಿ ಹೇಳಿದ ಪ್ರಕಾರವೂ ಇಟ್ಟುಕೊಳ್ಳಬೇಕು ಮಹತ್ತತ್ವದಿಂದ ಅವ್ಯಕ್ತ ತತ್ತ್ವಾಭಿಮಾನಿಯಾದ ಲಕ್ಷ್ಮೀದೇವಿಯು ಶ್ರೇಷ್ಠಳು, ಎಂದು ಲಕ್ಷ್ಮೀದೇವಿಯಲ್ಲಿ ಅವ್ಯಕ್ತ ಶಬ್ದಪ್ರಯೋಗವು ನೇದದಲ್ಲಿ ಇದ್ದುದರಿಂದ ಹಿಂದೆ ಹೇಳಿದ ಶ್ರುತಿಯಲ್ಲಿರುವ ಅವ್ಯಕ್ತ ಶಬ್ದದಿಂದ ಪ್ರಕೃತಿ ತತ್ವಕ್ಕೆ ಅಭಿಮಾನಿನಿಯಾದ ಲಕ್ಷ್ಮೀದೇವಿಯನ್ನು ಇಟ್ಟುಕೊಳ್ಳಬೇಕು (೩) ಯಾವುದು ಸತ್ವರಜಸ್ತಮೋಗುಣಗಳಿಗೆ ಅಭಿಮಾನಿಯಾಗಿರುವುದರಿಂದ ತ್ರಿಗುಣ ಎಂದೂ ಕಾರ್ಯಕಾರಣಗಳಿಗೆ ಅಭಿಮಾನಿಯಾಗಿರುವುದರಿಂದ ಸದಸದಾತ್ಮಕವೆಂದೂ ನಿತ್ಯವಾದ ಅವ್ಯಕ್ತ ಎನಿಸಿಕೊಂಡ ಶ್ರೀತತ್ವವು ಇದೆಯೋ, ಅದನ್ನು ಪ್ರಧಾನವೆಂದೂ, ಪ್ರಕೃತಿಯೆಂದೂ ಅಕಾರ್ಯವನ್ನಾಗಿಯೂ, ಕಾರ್ಯವನ್ನು ಹುಟ್ಟಿಸತಕ್ಕದ್ದನ್ನಾಗಿಯೂ ಹೇಳುತ್ತಾರೆ, ಎಂದು ಭಾಗವತದಲ್ಲಿ ಅವ್ಯಕ್ತ ಶಬ್ದವು ಲಕ್ಷ್ಮೀದೇವಿಯಲ್ಲಿ ಪ್ರಯುಕ್ತವಾಗಿದೆ (೪) ಬ್ರಹ್ಮಾದಿಗಳಿಂದ ಉತ್ತಮಳಾದ ಅಕ್ಷರಶಬ್ದ ವಾಚ್ಯಳಾದ ಲಕ್ಷ್ಮೀದೇವಿಯಿಂದ ಶ್ರೀಪರಮಾತ್ಮನು ಅತ್ಯುತ್ತಮನು, ಎಂಬುವ ಶ್ರುತಿಯಿಂದ ಆ ಲಕ್ಷ್ಮೀದೇವಿಯು ಅಕ್ಷರಳು ಎನಿಸುತ್ತಾಳೆ (೫) (ಯಾರು ನಿನ್ನನ್ನು ಭಗವಂತನೆನಿಸಿದ ವಾಸುದೇವನನ್ನು ಸಗುಣ ಬ್ರಹ್ಮನನ್ನಾಗಿ ಉಪಾಸನೆಮಾಡುತ್ತಾರೋ, ಯಾರು ಅಕ್ಷರನೆನಿಸಿದ ಅವ್ಯಕ್ತನೆಂಬುವ ಪರಬ್ರಹ್ಮನನ್ನು ಅಂದರೆ ನಿರ್ಗುಣ ಬ್ರಹ್ಮನನ್ನಾಗಿ ಉಪಾಸನೆಮಾಡುತ್ತಾರೋ, ಅವರಲ್ಲಿ ಶ್ರೇಷ್ಠರು ಯಾರು, ಹೀಗೆ ಪ್ರಶ್ನವಾಕ್ಯದ ಅರ್ಧವೆಂದು ಇತರರು ಹೇಳುತ್ತಾರೆ ಅದು ಅಯುಕ್ತವೆನ್ನುತ್ತಾರೆ --) ಪರಬ್ರಹ್ಮನು ಪರಮಾತ್ಮನಾದ ನಿನ್ನಿಂದ ಬೇರೆಯಲ್ಲ (೬) **ವಿಜ್ಞಾನತತ್ವಂ ಗುಣಸನ್ನಿರೋಧಂ ತೇನಾऽऽತ್ಮನಾऽऽತ್ಮಾನಮುಪೈತಿ ಶಾಂತಿಂ । ಆನಂದಂ ಏತಾಂ ಗತಿಂ ಭಾಗವತೋ ಗತೋ ಯಃ** ವಿಜ್ಞಾನತತ್ವದಲ್ಲಿರುವ ಶ್ರೀಪರಮಾತ್ಮನಿಂದ ಸತ್ವಾದಿಗುಣಗಳಿಲ್ಲದಿರುವ ಸಮಸ್ತಕ್ಕೂ ಮೂಲಕಾರಣನಾದ ಮಹತ್ತತ್ವಾಭಿಮಾನಿಯಾದ ವಿರಿಂಚನಲ್ಲಿರುವ ವಿಜ್ಞಾನನಾಮಕನಾದ ಶ್ರೀಹರಿಯನ್ನು ಹೊಂದುತ್ತಾನೆ ಹೀಗೆ ಸರ್ವಾಂತರ್ಯಾಮಿ ರೂಪಗಳಿಂದ ಏಕೀಭೂತನಾದ ಮಹತ್ತತ್ವಾಂತರ್ಯಾಮಿಯಾದ ವಿಜ್ಞಾನನಾಮಕ ಹರಿಯು ವಿರಂಚನಿಂದ ಕೂಡಿಕೊಂಡು ಚಿತ್ಪ್ರಕೃತಿಯಲ್ಲಿರುವ ಆನಂದನಾಮಕ ಹರಿಯನ್ನು ಹೊಂದುತ್ತಾನೆ ಆ ಪೂರ್ಣಾನಂದನಾದ ಆನಂದನಾಮಕನಾದ ಮಹತ್ತತ್ವದಲ್ಲಿದ್ದ ಶ್ರೀವಿಷ್ಣುವು ದ್ವಿಪರಾರ್ಧಾವಸಾನಕಾಲದಲ್ಲಿ ಸರ್ವಾತ್ಮಕನಾದ ಸರ್ವಾಂತರ್ಯಾಮಿಯಾದ ಗುಣಪರಿಪೂರ್ಣನಾದ ವಾಸುದೇವನಲ್ಲಿ (ಜೀವರ ಸಮುದಾಯವು ತಮ್ಮತಮ್ಮ ಯೋಗ್ಯತಾನುಸಾರ ಗುಣಪೂರ್ಣರಾದುದರಿಂದ ಕ್ರೀಡಿಸುತ್ತಿರುತ್ತದೆ) (ಇಲ್ಲಿ ಪರಬ್ರಹ್ಮನೇ ಸಗುಣಬ್ರಹ್ಮನೆಂದು ಹೇಳಿದ್ದಾರೆ ಆದಕಾರಣ ಸಗುಣಬ್ರಹ್ಮ ನಿರ್ಗುಣಬ್ರಹ್ಮ ಎಂದು ಬ್ರಹ್ಮಭೇದವಿರುವುದಿಲ್ಲ ಎಂದು ಭಾಗವತದಲ್ಲಿದೆ

॥ ೪ ॥

ಹೀ—ಸಗುಣಬ್ರಹ್ಮನು ಕರಚರಣಾದಿಗಳುಳ್ಳ ಶರೀರವುಳ್ಳವನು ಅಶಬ್ದಮಸ್ಪರ್ಶಮರೂಪಮವ್ಯಯಂ ಇತ್ಯಾದಿ ಪ್ರಮಾಣಗಳಿಂದ ನಿರ್ಗುಣ ಬ್ರಹ್ಮನಿಗೆ ಇಂತಹ ರೂಪವಿಲ್ಲ ಆದಕಾರಣ ಕರಚರಣಾದಿಗಳುಳ್ಳ ಸಗುಣ ಬ್ರಹ್ಮನೇ ಪರಬ್ರಹ್ಮನು ನಿರ್ಗುಣ ಬ್ರಹ್ಮನೆಂದು ಹೇಳುವುದು ಹೇಗೆ ಎಂದರೆ—

ಭಾ ॥ (೧) ರೂಪಂ ಚೇದ್ಯಶಂ ಸಾಧಿತಂ ಪುರಸ್ತಾತ್ । ಉಪಾಸನಂ ಚ ತಥೈವ ಕಾರ್ಯಂ॥ (೨) ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾದಿತ್ಯಾರಭ್ಯ ತಮೇವಂ ವಿದ್ವಾನಮೃತ ಇಹ ಭವತಿ ನಾನ್ಯಃ ಪಂಥಾ ಅಯನಾಯ ವಿದ್ಯತ ಇತಿ ಹಿ ಸಾಭ್ಯಾಸಾ ॥ (೩) ಆದಿತ್ಯವರ್ಣತ್ವಾದಿಶ್ಚ ನ ವೃಥೋಪಚಾರತ್ವೇನಾಂಗೀಕಾರ್ಯಃ ॥ (೪) ತಥಾಚ ಸಾಮವೇದೇ ಸೌಕರಾಯಣಶ್ರುತಿಃ । ಸ್ಥಾಣುರ್ಪದ್ಮೇ ಪ್ರಾಜಾಪತ್ಯಃ ಸ ಪ್ರಜಾಪತಿಂ ಪಿತರಮೇತ್ಯೋವಾಚ। ಮುಮುಕ್ಷ್ವಭೀರಾಧುಭಿಃ(ಭಿಸ್ಸಾಧುಭಿಃ)ಪೂತಪಾಪ್ಮೈಃ ಕಮುಪ ವೈತಾರಕಂ ತಾರಪಾಚ್ಮಂ । ಧ್ಯಾನಂ ಚ ತಸ್ಯಾಽವ್ತರುಚೇಃ ಕಥಂ ಸ್ಯಾದ್ಪ್ರೀಯಶ್ಚೈಕಃ ಪುರುಷೋಽಲೋಮಪಾದ ಇತಿ । ತಂ ಹೋವಾಚ । ಏಷ ವಿಷ್ಣುಸ್ತಾರಕೋಽಲೋಮಪಾದೋ ಧ್ಯಾನಂ ಚ ತಸ್ಯಾಽವ್ತರುಚೇರ್ವದಾಮಿ ॥ (೫) ಸೋಽನಂತಶೇಷೋರೋಹುವರ್ಣಃ ಸುವರ್ಣೋ ಧ್ಯೇಯಃ ಸರ್ವೈ ಲೋಹಿತಾದಿತ್ಯವರ್ಣಃ । ಶ್ಯಾಮೋಽಥ ವಾ ಹೃದಯೇ ಸೋಽಷ್ಟಬಾಹೂರನಂತವೀರ್ಯೋಽನಂತಬಲಃ ಪುರಾಣ ಇತಿ ॥ (೬) ಅರೂಪತ್ವಾದೇಸ್ತು ಗತಿರುಕ್ತಾ ಪುರಸ್ತಾತ್ । ಪುರುಷಭೇದಶ್ಚ ಪ್ರಶ್ನಾದೌ ಪ್ರತೀಯತೇ । ತ್ವಾಂ ವಯರ್ಯುಪಾಸತೇ ಯೇ ಚಾವ್ಯಕ್ತರಮಿತ್ಯಾದೌ ॥ ೫ ॥ ॥ ೧,೨ ॥

ಅ ॥ (೧) ಪರಬ್ರಹ್ಮನಿಗೂ ಇಂತಹ ಅವ್ಯಾಕೃತರೂಪವಿದೆ ಎಂದು ಹಿಂದೆಯೇ ಸಾಧಿಸಲ್ಪಟ್ಟಿದೆ ಹಾಗೆಯೇ ಅನೇಕಬಾಹೂದರವಕ್ತ್ರನೇತ್ರಂ ಇತ್ಯಾದಿ ಪ್ರಕಾರ ಸಾಕಾರನೆಂದೇ ಪರಬ್ರಹ್ಮನ ಉಪಾಸನೆಯನ್ನು ಮಾಡಬೇಕು (ನಿರಾಕಾರನೆಂದು ಉಪಾಸನೆ ಮಾಡಕೂಡದು) (ಅಂದರೆ ಪರಬ್ರಹ್ಮನು ನಿರ್ಗುಣನು ನಿರಾಕಾರನು, ಎಂಬುವ ಉಪಾಸನೆಯು ಮಿಥ್ಯೋಪಾಸನೆಯಾಗಿರುವುದರಿಂದ ಅದರಿಂದ ಅನರ್ಥವುಂಟಾಗುವಪ್ರಯುಕ್ತ ಕರಚರಣಾದ್ಯವಯವಗಳಿಲ್ಲದವನೆಂದು ಉಪಾಸನಾಮಾಡಕೂಡದು) (೨) (ಆ ಪರಬ್ರಹ್ಮನು ಅವಯವಗಳುಳ್ಳವನೆಂದು ಏಕೆ ಒಡಂಬಡಬೇಕೆಂದರೆ) ಶ್ರೀಪರಮಾತ್ಮನು ಅಪ್ರಾಕೃತ ಅನಂತಶಿರಸ್ಸುಗಳುಳ್ಳವನು ಗುಣಪರಿಪೂರ್ಣನು, ಅನಂತಕಣ್ಣುಗಳುಳ್ಳವನು, ಅನಂತಪಾದಗಳುಳ್ಳವನು ಎಂದಾರಂಭಿಸಿ ಆ ಪರಮಾತ್ಮನನ್ನು ಹಿಂದೆ ಹೇಳಿದ ಪ್ರಕಾರ ಅಪ್ರಾಕೃತ ದಿವ್ಯಕರಚರಣಾದ್ಯಾಕಾರಗಳುಳ್ಳವನೆಂದು ತಿಳಿದವನು ಮುಕ್ತನಾಗುತ್ತಾನೆ ಮುಕ್ತಿಗೆ ಇಂತಹ ಜ್ಞಾನದಿಂದ ಬೇರೆ ಯಾವ ಮಾರ್ಗವೂ ಇಲ್ಲವೇ ಇಲ್ಲ ಹೀಗೆ ಶ್ರೀಪರಮಾತ್ಮನಿಗೆ ಆಕಾರವಿದೆ, ಎಂಬುವ ಉಪಾಸನೆಯಿಂದ ನಿಯಮವಾಗಿ ಮೋಕ್ಷಾಖ್ಯ ಫಲವು ಆಗುತ್ತದೆಂದು ಶ್ರುತಿಯು ಹೇಳುತ್ತದೆ (೩) ಆದಿತ್ಯವರ್ಣಂ ತಮಸಸ್ತು ಪಾರೇ ಇತ್ಯಾದಿಗಳಲ್ಲಿ ಶ್ರೀಪರಮಾತ್ಮನಿಗೆ ಆದಿತ್ಯನಂತೆ ವರ್ಣಾದಿಗಳು ಇವೆ ಎಂದು ಹೇಳಿದ್ದು ಅಂಧಕಾರಾದಿ ದೋಷಗಳು ಇಲ್ಲದಿರುವುದರಿಂದಲೇ ಹೇಳಿದ್ದು ವಸ್ತುತಃ ಪರಮಾತ್ಮನಿಗೆ ಶುಕ್ಲನೀಲಾದಿ ವರ್ಣಗಳು ಇಲ್ಲವೆಂದು ಬಾಧಕವಿಲ್ಲದೆ ಅಪಾರ್ಥವನ್ನು ಅಂಗೀಕರಿಸಕೂಡದು (೪) (ಪರಮಾತ್ಮನಿಗೆ ಆದಿತ್ಯನಂತೆ ವರ್ಣಾದಿಗಳು ಇವೆ, ಎಂಬುವಲ್ಲಿ ಸ್ಪಷ್ಟವಾದ ಶ್ರುತಿಯನ್ನು ಹೇಳುತ್ತಾರೆ—) ಚತುರ್ಮುಖಬ್ರಹ್ಮನ ಮಗನಾದ ರುದ್ರನು ಪ್ರಜೆಗಳಿಗೆ ತಂದೆಯಾದ ಚತುರ್ಮುಖ ಬ್ರಹ್ಮನ ಬಳಿಗೆ ಹೋಗಿ ಪ್ರಶ್ನೆಮಾಡಿದನು ಮೋಕ್ಷವನ್ನು ಹೊಂದಲಿಚ್ಛಿಸುವ, ಪಾಪಗಳನ್ನು ಕಳೆದು

ಕೊಂಡಿರುವ ಮೋಕ್ಷಸಾಧಕರಾದ ಉಪಾಸಕರಿಂದ ಉಪಾಸ್ಯವಾದುದು ಧ್ಯೇಯವಾದುದು ಯಾವುದು? ಓಂಕಾರವಾಚ್ಯವಾದುದು ಸಂಸಾರವನ್ನು ದಾಟಿಸಿ ಮೋಕ್ಷವನ್ನು ಹೊಂದಿಸಿಕೊಡುವುದು ಯಾವುದು? ವ್ಯಾಪ್ತ ತೇಜಸ್ಸುಳ್ಳ ಆ ಶ್ರೀಹರಿಯ ಧ್ಯಾನವನ್ನು ಯಾವ ಪ್ರಕಾರದಿಂದ ಮಾಡಬೇಕು ಕೇಶಾಂತ ಪಾದ ಮೊದಲಾದ ಪ್ರಾಕೃತ ಅವಯವಗಳಿಲ್ಲದಿರುವ ಗುಣಪರಿಪೂರ್ಣನಾದವನು ಯಾವನು? ಎಂಬುವುದನ್ನು ಹೇಳು, ಹೀಗೆ ಪ್ರಶ್ನೆ ಮಾಡಿದ ರುದ್ರನಿಗೆ ಚತುರ್ಮುಖಬ್ರಹ್ಮನು ಉಪದೇಶಿಸಿದನು ಪ್ರಾಕೃತ ಕೇಶಾಂತ ಪಾದಾದ್ಯವಯವಗಳಿಲ್ಲದಿರುವ ಶ್ರೀಪರಮಾತ್ಮನು ಸಂಸಾರವನ್ನು ದಾಟಿಸುವವನು, ವ್ಯಾಪ್ತವಾದ ತೇಜಸ್ಸುಳ್ಳ ಶ್ರೀಪರಮಾತ್ಮನ ಧ್ಯಾನಮಾಡುವ ಪ್ರಕಾರವನ್ನು ಹೇಳುತ್ತೇನೆ. (೫) ಆ ಶ್ರೀಪರಮಾತ್ಮನು ಅನಂತ ಅಪ್ರಾಕೃತ ದಿವ್ಯ ಶಿರಸ್ಸುಗಳುಳ್ಳವನು, ಶುಕ್ಲರೂಪನೊದಲಾದ ಅನೇಕ ವರ್ಣಗಳುಳ್ಳವನು, ಸುವರ್ಣದಂತೆ ವರ್ಣಗಳುಳ್ಳವನು, ಆ ಶ್ರೀಪರಮಾತ್ಮನೇ ಲೋಹಿತನಾದ ಆದಿತ್ಯನಂತೆ ವರ್ಣವುಳ್ಳವನು, ಅಥವಾ ಹೃದಯದಲ್ಲಿ ಇರುವ ಶ್ರೀಪರಮಾತ್ಮನು ಶ್ಯಾಮವರ್ಣನು, ಎಂಟು ಬಾಹುಗಳುಳ್ಳವನು, ಅನಂತ ವೀರ್ಯಗಳುಳ್ಳವನು ಅಪರಿಮಿತ ಬಲವುಳ್ಳವನು ಪುರಾತನನು (ಶಶ್ವದೇಕಪ್ರಕಾರನು) ಹೀಗೆ ಇರುವವನೆಂದು ಧ್ಯಾನಿಸಬೇಕು (ಅಂದರೆ ಮುಮುಕ್ಷುಗಳು ಯಾರನ್ನು ಧ್ಯಾನಿಸಬೇಕು ಎಂಬುವ ಪ್ರಶ್ನೆಗೂ ಓಂಕಾರವಾಚ್ಯವಾದ ತಾರಕ ವಸ್ತುವು ಯಾವುದು ಎಂಬುವ ಪ್ರಶ್ನೆಗೂ ವಿಷ್ಣುಃ ಎಂದೇ ಉತ್ತರವು ಪರಮಾತ್ಮನನು, ಹೇಗೆ ಧ್ಯಾನಿಸಬೇಕೆಂಬುವ 3ನೇ ಪ್ರಶ್ನೆಗೂ ಅಪ್ರಾಕೃತ ದಿವ್ಯ ಕರಚರಣಾದ್ಯಾಕಾರವುಳ್ಳವನೆಂದೇ ಧ್ಯಾನಿಸಬೇಕೆಂದೇ ಉತ್ತರವು) (೬) (ಪರಮಾತ್ಮನಿಗೆ ರೂಪಾದಿಗಳು ಇವೆ ಎಂದು ಒಡಂಬಟ್ಟರೆ **ಅಶಬ್ದಮಸ್ಪರ್ಶಮರೂಪಮವ್ಯಯಂ** ಇತ್ಯಾದಿ ಪ್ರಮಾಣ ವಿರೋಧವು ಬರುವುದಂದರೆ—) **ಅರೂಪಂ** ಇತ್ಯಾದಿಗಳಿಗೆ ಪ್ರಾಕೃತರೂಪಾದಿಗಳಿಲ್ಲ, ಅಪ್ರಾಕೃತ ದಿವ್ಯರೂಪವಿದೆ ಇತ್ಯಾದಿ ರೂಪವಾದ ಅರ್ಥವನ್ನೇ ಹೇಳಬೇಕೆಂದು ಹಿಂದೆ ಹೇಳಿದೆ (ಹೇತ್ವಂತರದಿಂದಲೂ ಸಗುಣ ನಿರ್ಗುಣೋಪಾಸನೆಯು ಯುಕ್ತವಲ್ಲವೆಂದು ಹೇಳುತ್ತಾರೆ–) ಪರರು ಪ್ರಥಮತಃ ಸಗುಣ ಬ್ರಹ್ಮನನ್ನು ಪಾಸನಾಮಾಡಿ ಶುದ್ಧಾಂತಃಕರಣರಾಗಿ ಆ ಶ್ರೀಹರಿಯನ್ನೇ ನಿರಾಕಾರನನ್ನಾಗಿಯೂ ನಿರ್ಗುಣನನ್ನಾಗಿಯೂ ಉಪಾಸನೆ ಮಾಡುತ್ತಾರೆಂದು ಒಬ್ಬ ಬ್ರಹ್ಮನಿಗೇನೇ ಕ್ರಮದಿಂದ ಧ್ಯಾನದಲ್ಲಿ ಎರಡು ಪ್ರಕಾರಗಳನ್ನು ಹೇಳುತ್ತಾರೆ ಗೀತಾದಲ್ಲಿ **ತ್ವಾಂ ಪರ್ಯುಪಾಸತೇ ಯೇ ಚಾಪ್ಯಕ್ಷರಮವ್ಯಕ್ತಂ** ಇತ್ಯಾದಿಗಳಲ್ಲಿ ಪ್ರಶ್ನಾದಿಗಳಲ್ಲಿ ಉಪಾಸನಾ ಮಾಡತಕ್ಕ ಪುರುಷರ ಭೇದವೂ, ಪರಮಾತ್ಮ ಲಕ್ಷ್ಮೀ ಎಂದು ಧ್ಯೇಯ ವಸ್ತುಗಳೆರಡೂ ತೋರುತ್ತವೆ ಈ ಹೇತುಗಳಿಂದ ಪರರು ಹೇಳಿದ ಅರ್ಥವು ಯುಕ್ತವಲ್ಲ ॥ ೫ ॥ ॥ ೧, ೨ ॥

ಹೀ— ಲಕ್ಷ್ಮೀದೇವಿಯನ್ನು ಪಾಸನೆ ಮಾಡುವವರಿಗೆ ಮೋಕ್ಷವಿಲ್ಲವೆಂದು ಹೇಳಿದರೆ **ಕ್ಷಯಂ ವಸಾನಾಃ** ಇತ್ಯಾದಿ ಶ್ರುತಿವಿರೋಧವು ಬರುವುದು ಲಕ್ಷ್ಮೀದೇವಿಯ ಉಪಾಸನೆಯಿಂದಲೂ ಮೋಕ್ಷವು ಸಿಗುವುದಾದರೆ ಶ್ರೀಕೃಷ್ಣನ ಉಪಾಸಕರಿಗೇನೇ ಉತ್ತಮೋತ್ತಮವು ಹೇಗೆ? ಎಂದರೆ—

ಗೀ ॥ ಯೇ ತ್ವಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ ।
ಸರ್ವತ್ರಗಮಚಿಂತ್ಯಂ ಚ ಕೂಟಸ್ಥಮಚಲಂ ಧ್ರುವಂ ॥ ೩ ॥
ಸನ್ನಿಯಮ್ಯೇಂದ್ರಿಯಗ್ರಾಮಂ ಸರ್ವತ್ರ ಸಮಬುದ್ಧಯಃ ।
ತೇ ಪ್ರಾಪ್ನುವಂತಿ ಮಾಮೇವ ಸರ್ವಭೂತಹಿತೇ ರತಾಃ ॥ ೪ ॥

ಅ ॥ (೧) ಯೇತು=ಯಾರು, ಅಕ್ಷರಂ=ಶರೀರ ನಾಶವಿಲ್ಲದಿರುವುದರಿಂದ ಅಕ್ಷರ ಶಬ್ದವಾಚ್ಯಳಾದ, ಅನಿರ್ದೇಶ್ಯಂ=ಸಾಕಲ್ಯೇನ ವೇದಾದಿಗಳಿಂದ ತಿಳಿಯಲಿಕ್ಕೆ ಅಶಕ್ಯಗಳಾದ, ಸರ್ವತ್ರಗಂ=ಸರ್ವತ್ರ

ವ್ಯಾಪ್ತಳಾಗಿರುವ, ಅಚಿಂತ್ಯಂ = ಹೆಚ್ಚು ಗುಣಗಳಿರುವುದರಿಂದ ತಿಳಿದುಕೊಳ್ಳಲಶಕ್ಯಳಾದ, ಕೂಟಸ್ಥಂ = ಅವ್ಯಾಕೃತಾಕಾಶದಲ್ಲಿ ಅಭಿಮಾನಿನಿಯಾಗಿರುವ, ಅಚಲಂ = ಯಾವಾಗಲೂ ತನ್ನ ಪದವಿಯಿಂದ ಕದಲದಿರುವ ಧ್ರುವಂ = ವಿಕಾರವಿಲ್ಲದಿರುವ, ಅವ್ಯಕ್ತಂ = ಜಗತ್ತಿಗೆ ಉಪಾದಾನ ಕಾರಣವಾದ ಪ್ರಕೃತಿಗೆ ಅಭಿಮಾನಿಯಾಗಿರುವುದರಿಂದ ಅವ್ಯಕ್ತ ಎಂದು ಹೆಸರುಳ್ಳ ಲಕ್ಷ್ಮೀದೇವಿಯನ್ನು, ಇಂದ್ರಿಯಗ್ರಾಮಂ = ಚಕ್ಷುರಾದಿ ಇಂದ್ರಿಯಗಳ ಸಮೂಹವನ್ನು, ಸನ್ನಿಯಮ್ಯ = ವಿಷಯಗಳಲ್ಲಿ ಹೋಗದಿದ್ದಂತೆ ಮಾಡಿ ಜನ್ಮಾಗಿ ತನ್ನ ವಶದಲ್ಲಿಯೇ ಇಟ್ಟುಕೊಂಡು, ಸರ್ವತ್ರ = ಎಲ್ಲಾ ಪ್ರಾಣಿಗಳಲ್ಲಿಯೂ, ಸಮಬುದ್ಧಯಃ = ನಿರ್ದೋಷನಾದ ಪರಬ್ರಹ್ಮನು ಲಕ್ಷ್ಮೀ ಸಮೇತನಾಗಿಯೇ ಇರುತ್ತಾನೆಂದು ಬುದ್ಧಿಯುಳ್ಳವರಾಗಿ, ಸರ್ವಭೂತಹಿತೇ = ಸಮಸ್ತ ಪ್ರಾಣಿಗಳಿಗೂ ಹಿತವಾಗಬೇಕೆಂಬುವಲ್ಲಿಯೇ, ರತಾಃ = ಆಸಕ್ತರಾದವರಾಗಿ, ಪರ್ಯುಪಾಸತೇ = ವಿಷ್ಣುಭಕ್ತಿ ವಿಷ್ಣೂತ್ಪತ್ತಿ ಮತ್ತು ಜ್ಞಾನಾದಿ ಪೂರ್ವಕವಾಗಿಯೇ, ಉಪಸನಾ ಮಾಡುತ್ತಾರೆ, ತೇ = ಅಂತಹವರು, ಮಾಮೇವ = ನನ್ನನ್ನೇ, ವ್ರಾಪ್ನುವಂತಿ = ಹೊಂದುತ್ತಾರೆ ॥ ೩, ೪ ॥

ಭಾ ॥ (೧) ಭವಂತು ತ್ವದುಪಾಸಕಾ ಏವೋತ್ತಮಾಃ । ಇತರೇಷಾಂ ತು ಕಿಂ ಫಲಮಿತ್ಯತ ಆಹ । ಯೇ ತ್ವಿತ್ಯಾದಿನಾ ॥ (೨) ಅನಿರ್ದೇಶ್ಯತ್ವಂ ಚೋಕ್ತಂ ಭಾಗವತೇ ಮಾಯಾಯಾಃ । ಅಪ್ರತಕ್ರ್ಯಾದ್ಯನಿರ್ದೇಶ್ಯಾದಿತಿ ಕೇಷ್ವಪಿ ನಿಶ್ಚಯ ಇತಿ । ಈಶ್ವರಸ್ತು ದೈವಶಬ್ದೇನೋಕ್ತೋ ದೈವಮನ್ಯೇ ಪರ ಇತ್ಯತ್ರ ॥ (೩) ಉಕ್ತಂ ಚ ಸಾಮುಷೇದೇ ಕಾಷಾಯಣಶ್ರುತೌ । ನಾಸದಾಸೀನ್ನೋ ಸದಾಸೀತ್ತದಾನೀಮಿತಿ ನ ಮಹಾಭೂತಂ ನೋಪಭೂತಂ ತದಾಽಽಸೀದಿತ್ಯಾದ್ಯಾರಭ್ಯ ತಮ ಆಸೀತ್ತಮಸಾ ಗೂಳ್ಹಮಗ್ರ ಇತಿ । ತಮೋ ಹ್ಯವ್ಯಕ್ತಮಜರಮನಿರ್ದೇಶ್ಯಮೇಷಾ ಹ್ಯೇವ ಪ್ರಕೃತಿರಿತಿ ॥ (೪) ಸರ್ವಗಾಽಚಿಂತ್ಯಾದಿಲಕ್ಷಣಾ ಚ ಸಾ ॥ ೧ ॥

ಅ ॥ (೧) ನಿನ್ನನ್ನು ಉಪಾಸನೆ ಮಾಡುವವರೇ ಉತ್ತಮರಾಗಲಿ, ಬೇರೆಯವರನ್ನು ಉಪಾಸನಾಮಾಡುವವರಿಗೆ ಯಾವುದು ಫಲವು? ಎಂದರೆ— **ಯೇ ತ್ವಕ್ಷರಂ** ಇತ್ಯಾದಿಗಳಿಂದ ಸಮಾಧಾನವನ್ನು ಹೇಳುತ್ತಾರೆ (ಅಂದರೆ ಲಕ್ಷ್ಮೀದೇವಿಯನ್ನು ಉಪಾಸನೆ ಮಾಡುವವರಿಗೆ ಮೋಕ್ಷರೂಪ ಫಲವಿಲ್ಲವಾದರೆ **ಶ್ರಿಯಂ ವಸಾನಾಃ** ಇತ್ಯಾದಿ ಶ್ರುತಿವಿರೋಧವು ಮೋಕ್ಷರೂಪ ಫಲವಿದ್ದರೆ ಭಗವದುಪಾಸಕರಿಗೇನೇ ಉತ್ತಮತ್ವವು ಹೇಗೆ ಎಂದು ಆಕ್ಷೇಪವು) (೨) (ಅನಿರ್ದೇಶ್ಯತ್ವಾದಿ ವಿಶೇಷಣಗಳು ಪರಬ್ರಹ್ಮನಿಗೆ ಕೂಡುವಂತೆಯೇ ಲಕ್ಷ್ಮೀದೇವಿಗೂ ಕೂಡುತ್ತವೆನ್ನುತ್ತಾರೆ—) ಭಾಗವತದಲ್ಲಿ ಲಕ್ಷ್ಮೀದೇವಿಗೆ ಅನಿರ್ದೇಶ್ಯತ್ವವು (ಸಂಪೂರ್ಣವಾಗಿ ಶಬ್ದಗಳಿಂದ ಹೇಳಲ್ಪಡದಿರುವಿಕೆಯು) ಹೇಳಲ್ಪಟ್ಟಿದೆ ಸರ್ವತ್ರನಾ ಅನುಮಾನಕ್ಕೆ ವಿಷಯವಾಗದಿರುವುದರಿಂದ ಪ್ರಧಾನದ್ವೇಶಿಯಿಂದ ಕ್ಷೇತ್ರಪರಂಪರೆಯಿಂದ ಸಮಸ್ತ ಜೀವರೂ ಪ್ರಕೃತಿಯಿಂದ ಅಚ್ಛಾದಿತರಾಗಿರುವುದರಿಂದ ಎಂದು ಕೆಲವು ಜನರ ನಿಶ್ಚಯವು ಭಾವರೂಪ ಅಜ್ಞಾನದ್ವೇಶಿಯಿಂದ ಎಂದು ಮಾಯಾವಾದಿಗಳ ನಿಶ್ಚಯವು ಎಲೋ ರಾಜಶ್ರೇಷ್ಠನೇ ಈ ಪಕ್ಷಗಳಲ್ಲಿ ಶ್ರುತಿಸ್ಮೃತ್ಯನುಕೂಲವಾದುದನ್ನು ವಿಚಾರ ಮಾಡು ಇತ್ಯಾದಿ ವೃಷಭರೂಪನಾದ ಧರ್ಮನಾದ ನನಗೆ ಪಾದಭಂಗವಾಯಿತು ಇತ್ಯಾದಿಗಳಿಂದ ಭಾಗವತದಲ್ಲಿ ಲಕ್ಷ್ಮೀದೇವಿಗೆ ಅನಿರ್ದೇಶ್ಯತ್ವವನ್ನು ಹೇಳಿದೆ (೩) ಇಲ್ಲಿದ್ದ ಅನಿರ್ದೇಶ್ಯಪದದಿಂದ ಶ್ರೀಹರಿಯನ್ನು ಏಕೆ ತೆಗೆದುಕೊಳ್ಳಬಾರದೆಂದರೆ-) **ಕೇಚಿದ್ವೈಕಲ್ಪ್ಯವಚಸಾ ಆಹುರಾತ್ಮನಮಾತ್ಮನಃ । ದೈವಮನ್ಯೇಪರೇ ಕರ್ಮಸ್ವಭಾವಮಪರೇ ಪ್ರಭುಂ** ಎಂಬುವ ವಾಕ್ಯದಲ್ಲಿ **ದೈವ**ಶಬ್ದದಿಂದ ಶ್ರೀಹರಿಯು ಪೂರ್ವದಲ್ಲಿ ಹೇಳಲ್ಪಟ್ಟಿದ್ದಾನೆ (೩) ಮಹಾಲಕ್ಷ್ಮಿಗೆ ಅನಿರ್ದೇಶ್ಯತ್ವವಿದೆ ಎಂಬುವಲ್ಲಿ ಸ್ಪಷ್ಟಪ್ರಮಾಣವನ್ನು ಹೇಳುತ್ತಾರೆ—)

ಸಾಮವೇದದಲ್ಲಿ ಕಾಷಾಯಣ ಶ್ರುತಿಯಲ್ಲಿ ಸ್ಪಷ್ಟವಾಗಿ ಈ ಪ್ರಮೇಯವು ಹೇಳಲ್ಪಟ್ಟಿದೆ ಪ್ರಲಯ ಕಾಲದಲ್ಲಿ ಅಸತ್ತು (ಕಾರಣವೂ) ಇರಲಿಲ್ಲ ಸತ್ತೂ (ಕಾರ್ಯವೂ) ಇರಲಿಲ್ಲ ಪ್ರಲಯಕಾಲದಲ್ಲಿ ಆಕಾಶ ವಾಯು ರೂಪವಾದ ಮಹಾಭೂತವೂ ಇರಲಿಲ್ಲ ತೇಜಸ್ಸು ಜಲ ಭೂರೂಪವಾದ ಉಪಭೂತವೂ ಇರಲಿಲ್ಲ, ಇತ್ಯಾದಿಗಳನ್ನಾರಂಭಿಸಿ ಪ್ರಳಯಕಾಲದಲ್ಲಿ ತಮಸ್ಸು ಇತ್ತು (ತನೋಭಿಮಾನಿಯಾದ ದುರ್ಗಾ ದೇವಿಯು) ಇರುತ್ತಿದ್ದಳು ಪ್ರಳಯಕಾಲದಲ್ಲಿ ಅಂತಹ ತಮಸ್ಸಿನಿಂದ ಎಲ್ಲವೂ ಆಚ್ಛಾದಿತವಾಗಿತ್ತು ಲಕ್ಷ್ಮೀದೇವಿಯು ಅವ್ಯಕ್ತವೆನಿಸುತ್ತಾಳೆ ಮುದಿತನವಿಲ್ಲದಿರುವವಳು ಶಬ್ದಕ್ಕೆ ಅಗೋಚರವು ಅವ್ಯಕ್ತತ ತ್ವಾಭಿಮಾನಿಯೇ ಚಿತ್ಪ್ರಕೃತಿಯಾದ ಮಹಾಲಕ್ಷ್ಮೀದೇವಿಯು (೪) ಆ ಲಕ್ಷ್ಮೀದೇವಿಯು ಸರ್ವತ್ರವ್ಯಾಪ್ತಳು ಹೀಗೆಯೇ ಇರುವವಳೆಂದು ಆಲೋಚಿಸಲಿಕ್ಕೂ ಅಶಕ್ಯಳು, ಇತ್ಯಾದಿ ಲಕ್ಷಣಗಳುಳ್ಳವಳು ॥ ೧ ॥

ಭಾ ॥ (೧) ತಥಾ ಹಿ ಮೋಕ್ಷಧರ್ಮೇ। ನಾರಾಯಣಗುಣಾಶ್ರಯಾದಜರಾದತೀಂದ್ರಿಯಾದಗ್ರಾಹ್ಯಾದಸಂಭವತಃ ಅಸಕ್ಕಾದಹಿಂಸ್ರಾಲ್ಲಲಾಮಾ ದ್ವಿತೀಯಪ್ರವೃತ್ತಿವಿಶೇಷಾದ ವೈರಾದಕ್ಷಯಾದಮರಾದಮೂರ್ತಿತಃ ಸರ್ವನ್ಯಾಃ ಸರ್ವಕರ್ತುಃ ಶಾಶ್ವತತಮಸ ಇತಿ ॥ (೨) ಆಸೀದಿದಂ ತಮೋಭೂತಮಪುಜ್ಞಾತಮಲಕ್ಷಣಂ। ಅಪ್ರತರ್ಕ್ಯಮವಿಜ್ಞೇಯಂ ಪ್ರಸುಪ್ತಮಿವ ಸರ್ವತ ಇತಿ ಮಾನವೇ ॥ (೩) ಕೂಟಸ್ಥೋಽಕ್ಷರ ಉಚ್ಯತ ಇತಿ ವಕ್ಷ್ಯತಿ। ಕೂಟೆ ಆಕಾಶೇ ಸ್ಥಿತಾ ಕೂಟಸ್ಥಾ। ಆಕಾಶೇ ಸಂಸ್ಥಿತಾ ಹ್ಯೇಷಾ ತತಃ ಕೂಟಸ್ಥಿತಾ ಮತೇತ್ಯೃಗ್ವೇದಖಿಲೇಷು ॥ (೪) ಸಾ ಸರ್ವಗಾ ನಿಶ್ಚಲಾ ಲೋಕಯೋನಿಃ ಸಾ ಚಾಕ್ಷರಾ ವಿಶ್ವಗಾ ವಿರಜಸ್ಕೇತಿ ಸಾಮವೇದೇ ಗೌಪವನಶಾಖಾಯಾಂ ॥ ೨ ॥

॥ ೩,೪ ॥

ಅ ॥ (೧) ಇದೇ ಅಭಿಪ್ರಾಯವನ್ನು ಮೋಕ್ಷಧರ್ಮದಲ್ಲಿ ಹೇಳಿಗೆ ಶ್ರೀನಾರಾಯಣನ ಗುಣಗಳಾದ ಇಚ್ಛಾದಿ ಗುಣಗಳೇ ಆಶ್ರಯಗಳಾಗಿ ಉಳ್ಳವಳು, ಮುದಿತನ ಇಲ್ಲದಿರುವವಳು, ಇಂದ್ರಿಯಗಳಿಗೆ ಅಗೋಚರಳು, ಮನಸ್ಸಿನಿಂದಲೂ ಸ್ವೀಕರಿಸಲಿಕ್ಕೆ ಅಶಕ್ಯಳು, ಉತ್ಪತ್ತಿಯಿಲ್ಲದಿರುವವಳು, ಪ್ರಳಯ ಕಾಲದಲ್ಲಿರತಕ್ಕವಳು, ಘಾತುಕಳಾಗದಿರುವವಳು, ಬ್ರಹ್ಮಾದಿಗಳಿಗಿಂತ ಶ್ರೇಷ್ಠಳು ಕೇವಲ ಪರಮಾತ್ಮಾಧೀನವಾದ ಪೃವೃತ್ತಿ ವಿಶೇಷವುಳ್ಳವಳು, ವೈರವಿಲ್ಲದವಳು, ಕ್ಷೀಣಳಾಗದಿರುವವಳು, ಮರಣವಿಲ್ಲದಿರುವವಳು, ದೇಹನಾಶವಿಲ್ಲದಿರುವವಳು ಪ್ರಾಕೃತ ದೇಹವಿಲ್ಲದಿರುವವಳು ಸರ್ವತ್ರ ವ್ಯಾಪ್ತಳು, ಸರ್ವ ಜಗತ್ತನ್ನು ಸೃಷ್ಟಿಸಿದವಳು, ಇಂತಹ ಸತ್ವರಜಸ್ತಮೋಗುಣಾತ್ಮಕ ಪ್ರಕೃತಿಗೆ ಅಭಿಮಾನಿಯಾಗಿರುವುದರಿಂದ ಶಾಶ್ವತತಮಃ ಎನಿಸಿಕೊಂಡ ಲಕ್ಷ್ಮೀದೇವಿಯಿಂದ (ಚತುರ್ಮುಖಿ ಬ್ರಹ್ಮನು ಹುಟ್ಟಿದನು) (ಈ ಶ್ರುತಿಯಿಂದ ಲಕ್ಷ್ಮೀದೇವಿಗೆ ಸರ್ವಗತತ್ವ ಅಚಿಂತ್ಯತ್ವಾದಿ ಲಕ್ಷಣಗಳಿವೆ ಎಂದು ತಿಳಿದು ಬರುತ್ತದೆ) (೨) ಈ ಪ್ರಸಿದ್ಧಳಾದ ಮಾಯಾರೂಪಳಾದ ಲಕ್ಷ್ಮೀದೇವಿಯು ಯಾವಾಗಲೂ ಹುಟ್ಟಿದಿರುವವಳು, ಪ್ರತ್ಯಕ್ಷ, ಅನುಮಾನ, ಆಗಮಗಳಿಂದ ತಿಳಿಯಲ್ಪಡದಿರುವವಳು, ಇನ್ನೊಬ್ಬರಿಂದ ತಿಳಿಯಲಶಕ್ಯ ಲಕ್ಷಣಗಳುಳ್ಳವಳು, ಇತರರಿಂದ ತಿಳಿಯಲಶಕ್ಯ ಲಕ್ಷಣಗಳುಳ್ಳವಳಾದುದರಿಂದ ಹೀಗೆಯೇ ಇರುತ್ತಾಳೆಂದು ಊಹಿಸಲಿಕ್ಕೆ ಅಶಕ್ಯಳು, ಸಾಕಲ್ಯೇನ ತಿಳಿಯಲಶಕ್ಯಳು, ಇಂತಹಳು ಪ್ರಲಯಕಾಲದಲ್ಲಿ ಸರ್ವತ್ರ ನಿರ್ವ್ಯಾಪಾರಳಾಗಿ ಇರುತ್ತಿದ್ದಳು, ಎಂದು ಮಾನವ ಧರ್ಮಶಾಸ್ತ್ರದಲ್ಲಿದೆ (೩) ಕೂಟಸ್ಥಳು ಅಕ್ಷರಳೆನಿಸುತ್ತಾಳೆ, ಎಂದು ಗೀತೆಯಲ್ಲಿ ಹೇಳುವರು ಆಕಾಶದಲ್ಲಿ ನಿಯಾಮಕಳಾಗಿರುವವಳು ಕೂಟಸ್ಥಳು ಆಕಾಶದಲ್ಲಿ ನಿಯಾಮಕಳಾಗಿರುವ ಲಕ್ಷ್ಮೀದೇವಿಯು ಕೂಟಸ್ಥಿತಾ ಎನಿಸುತ್ತಾಳೆ, ಎಂದು ಋಗ್ವೇದಖಿಲಗಳಲ್ಲಿ

ಹೇಳಿದೆ (೪) ಆ ಲಕ್ಷ್ಮೀದೇವಿಯು ಸರ್ವತ್ರ ವ್ಯಾಪ್ತಳು. ತನ್ನ ಪದವಿಯಿಂದ ಕದಲದವಳು. ಸರ್ವ ಜಗತ್ತಿಗೂ ಕಾರಣೀಭೂತಳು. ನಾಶವಿಲ್ಲದವಳು ಸರ್ವಜಗತ್ತಿಗೆ ಆಶ್ರಯಭೂತಳು, ರಜೋಗುಣವಿಲ್ಲ ದವಳು, ಎಂದು ಸಾಮವೇದದಲ್ಲಿ ಗೌಪವನಶಾಖೆಯಲ್ಲಿ ಹೇಳಿದೆ ॥ ೨ ॥ ॥ ೩, ೪ ॥

ಹೀ—ಲಕ್ಷ್ಮೀದೇವಿಯನ್ನು ಪಾಸನೆ ಮಾಡುವವರಿಗೂ ನಿನ್ನ ಪ್ರಾಪ್ತಿರೂಪವಾದ ಮೋಕ್ಷವು ಸಿಗು ವುದಾದರೆ ನಿನ್ನನ್ನು ಪಾಸನೆ ಮಾಡುವವರಿಗೇನೇ ಉತ್ತಮತ್ವವು ಹೇಗೆಂದರೆ—

ಗೀ ॥ ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಂ ।
ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ ॥ ೫ ॥

ಅ ॥ ಅವ್ಯಕ್ತಾಸಕ್ತಚೇತಸಾಂ = ಪರಮಾತ್ಮನಲ್ಲಿ ಮನಸ್ಸನ್ನು ಇಡದೆ (ಅಂದರೆ ಪರಮಾತ್ಮನನ್ನು ಸರ್ವೋತ್ತಮನೆಂದು ತಿಳಿದುಕೊಳ್ಳದೆ) ಕೇವಲ ಲಕ್ಷ್ಮೀದೇವಿಯಲ್ಲಿಯೇ ಮನಸ್ಸನ್ನು ಇಟ್ಟಿರುವ, ತೇಷಾಂ = ಲಕ್ಷ್ಮಿಯ ಉಪಾಸಕರಿಗೆ, ಕ್ಲೇಶಃ = ಕಷ್ಟವು, ಅಧಿಕತರಃ = ಅತ್ಯಂತಾಧಿಕವು ಅವ್ಯಕ್ತಾ ಹಿ ಗತಿಃ = ಲಕ್ಷ್ಮೀದೇವಿಯ ಉಪಾಸನೆಯಿಂದುಂಟಾಗುವ ಭಗವತ್ಪ್ರಾಪ್ತಿಮಾರ್ಗವು, ದುಃಖಂ = ದುಃಖವು ಹೇಗೆ ಉಂಟಾಗುವುದೋ, ಹಾಗೆಯೇ, ದೇಹವದ್ಭಿಃ = ಜನರಿಂದ, ಅವಾಪ್ಯತೇ = ಹೊಂದಲ್ಪಡುತ್ತದೆ. ಹಿ = ಪ್ರಮಾಣಪ್ರಸಿದ್ಧವು

ವಿ ॥ ಸರ್ವತ್ರ ಸಮಬುದ್ಧಿಯಿರಬೇಕು, ಸಮಸ್ತ ಪ್ರಾಣಿಗಳಿಗೆ ಹಿತವನ್ನುಂಟುಮಾಡಬೇಕು, ಸದಾ ಚಾರವಿರಬೇಕು. ಇವುಗಳಿಲ್ಲದ ಲಕ್ಷ್ಮೀದೇವಿಯ ಪ್ರಸಾದವಾಗಲಾರದು ಅದಿಲ್ಲದೆ ಶ್ರೀಹರಿಯ ಪ್ರಸಾದವಾಗಲಾರದು ಶ್ರೀಹರಿಯ ಪ್ರಸಾದವಾಗದೆ ಭಗವತ್ಪ್ರಾಪ್ತಿಯಾಗಲಾರದು, ಹೀಗೆ ಲಕ್ಷ್ಮಿಯ ಉಪಾಸನಾಪೂರ್ವಕವಾದ ಭಗವತ್ಪ್ರಾಪ್ತಿಮಾರ್ಗವು ಅತಿ ಕಷ್ಟಸಾಧ್ಯವು ॥ ೫ ॥

ಭಾ ॥ (೧) ಕಥಂ ತರ್ಹಿ ತ್ವದುಪಾಸಕಾನಾಮುತ್ತಮತ್ವಮಿತ್ಯತ ಆಹ । ಕ್ಲೇಶ ಇತಿ ॥ (೨) ಅವ್ಯಕ್ತಾ ಗತಿರ್ದುಃಖಂ ಹ್ಯವಾಪ್ಯತೇ । ಗತಿರ್ಮಾರ್ಗಃ । ಅವ್ಯಕ್ತೋಪಾಸನದ್ವಾರಕೋ ಮತ್ಪ್ರಾಪ್ತಿಮಾರ್ಗೋ ದುಃಖಮಾಪ್ಯತ ಇತ್ಯರ್ಥಃ ॥ (೩) ಅತಿಶಯೋಪಾಸನಸಮೈರ್ಮನೋಽಕ್ಷಿಯಮನಸರ್ವತ್ರಸಮಬುದ್ಧಿತ್ವಸರ್ವಭೂತಹಿತೇರತತ್ವಾತಿಸುಷ್ಠ್ವಾಚಾರಸಮ್ಯಗ್ವಿಷ್ಣು ಭಕ್ತ್ಯಾದಿಸಾಧನಸಂದರ್ಭಮೃತೇ ನಾವ್ಯಕ್ತಾಪರೋಕ್ಷ್ಯಂ। ತದ್ಧೇತೇ ಚ ನ ವಿಷ್ಣು ಪ್ರಸಾದಃ । ಸತ್ಯಪಿ ತಸ್ಮಿನ್ನ ಸಮ್ಯಗ್ಭಗವದುಪಾಸನಮ್ಯತೇ । ನರ್ತೇ ಚ ತಂ ಮೋಕ್ಷಃ । ವಿನಾಽವ್ಯಕ್ತೋಪಾಸನಂ ಭವತ್ಯೇವ ಭಗವದುಪಾಸಕಾನಾಂ ಮೋಕ್ಷ ಇತಿ ಕ್ಲೇಶಿಷ್ಯೋಽಯಂ ಮಾರ್ಗ ಇತಿ ಭಾವಃ ॥ (೪) ತಥಾಽಪ್ಯಪರೋಕ್ಷೀಕೃತಾವ್ಯಕ್ತಾನಾಂ ಸುಕರಂ ಭಗವದುಪಾಸನಮಿತ್ಯೇತಾವತ್ತ್ವಯೋಜನಂ॥ ॥ ೧ ॥

ಅ ॥ (೧) ಲಕ್ಷ್ಮೀದೇವಿಯನ್ನು ಪಾಸನೆಮಾಡುವವರಿಗೂ ಮೋಕ್ಷವು ಸಿಗುವುದಾದರೆ ಭಗವಂತ ನನ್ನು ಪಾಸನಾಮಾಡುವವರಿಗೇನೇ ಉತ್ತಮತ್ವವು ಹೇಗೆ ಎಂದರೆ ಕ್ಲೇಶೋಽಧಿಕತರಃ ಎಂದು ಹೇಳಿರುವರು (೨) (ಉತ್ತರಾರ್ಧದಲ್ಲಿರತಕ್ಕ ಪದಗಳಿಗೆ ಯೋಜನವಾಡಿ ಅನ್ವಯವನ್ನು ತಿಳಿಸುತ್ತಾರೆ—)

ಅವ್ಯಕ್ತಾ ಗತಿಃ ದುಃಖಮವಾಪ್ಯತೇ ಇಲ್ಲಿದ್ದ ಗತಿಶಬ್ದಕ್ಕೆ ಮಾರ್ಗವು ಎಂದರ್ಥವು. ಲಕ್ಷ್ಮೀದೇವಿಯ ಉಪಾಸನವಮಾಡಿ ಭಗವತ್ಪ್ರಾಪ್ತ್ಯುಪಾಯವು ಅಂದರೆ ಭಗವಂತನನ್ನು ಹೊಂದತಕ್ಕ ಮೋಕ್ಷಮಾರ್ಗ ಅಂದರೆ ಲಕ್ಷ್ಮೀದೇವಿಯ ಉಪಾಸನನೇ ಉಪಾಯವಾಗಿವುಳ್ಳ ಭಗವತ್ಪ್ರಾಪ್ತಿ ಮಾರ್ಗವು ದುಃಖವಾಗುವಂತೆ ಹೊಂದಲ್ಪಡುತ್ತದೆ ಅಂತೂ ಇಂದ್ರಿಯನಿಯಮನಾದಿ ಬಹು ಪ್ರಯತ್ನದಿಂದ ಲಕ್ಷ್ಮೀದೇವಿಯನ್ನು ಪಾಸನಾ ಮಾಡಿದರೂ ಪುನಃ ಪರಮಾತ್ಮನನ್ನು ಪಾಸನಾ ಮಾಡಿಯೇ ಮೋಕ್ಷವನ್ನು ಹೊಂದತಕ್ಕದ್ದು ಭಗವಂತನನ್ನು ಪಾಸನೆ ಮಾಡದೆ ಕೇವಲ ಲಕ್ಷ್ಮೀದೇವಿಯ ಉಪಾಸನದಿಂದ ಮೋಕ್ಷವಾಗಲಾರದು (ಲಕ್ಷ್ಮೀದೇವಿಯ ಉಪಾಸನಾ ಮಾರ್ಗವು ಅತಿ ಕ್ಲೇಶಸಾಧ್ಯವೆಂಬುವುದನ್ನು ವಿವರಿಸುತ್ತಾರೆ—) ಅತ್ಯಧಿಕವಾಗಿ ಲಕ್ಷ್ಮೀದೇವಿಯ ಉಪಾಸನೆಯೂ ಸಮಸ್ತ ಇಂದ್ರಿಯಗಳನ್ನು ಅತ್ಯಂತವಾಗಿ ತನ್ನ ವಶಪಡಿಸಿಕೊಳ್ಳುವುದು ೬ನೇ ಅಧ್ಯಾಯದಲ್ಲಿ ಹೇಳಿದ ಪ್ರಕಾರ ಸರ್ವತ್ರ ಸಮಬುದ್ಧಿಯೂ, ಸಮಸ್ತ ಪ್ರಾಣಿಗಳಿಗೆ ಹಿತವಾಗಬೇಕೆಂಬುವಲ್ಲಿಯೇ ಆಸಕ್ತಿಯೂ ಅತ್ಯಂತವಾಗಿ ಸದಾಚಾರವೂ, ಚೆನ್ನಾಗಿ ವಿಷ್ಣು ಭಕ್ತಿಯೂ, ಇದು ಮೊದಲಾದ ಸಾಧನ ಸಂದರ್ಭಗಳು ಹೊರತು ಲಕ್ಷ್ಮೀದೇವಿಯು ಪ್ರತ್ಯಕ್ಷಳಾಗುವುದಿಲ್ಲ ಲಕ್ಷ್ಮೀದೇವಿಯ ಪ್ರಸಾದವೂ ಆಗುವುದಿಲ್ಲ ಆ ಲಕ್ಷ್ಮೀದೇವಿಯ ಪ್ರಸಾದವಾಗದೆ ವಿಷ್ಣುವಿನ ಪ್ರಸಾದವು ಉಂಟಾಗಲಾರದು. ಲಕ್ಷ್ಮೀದೇವಿಯ ಪ್ರಸಾದ, ಪ್ರತ್ಯಕ್ಷಗಳು ಇದ್ದರೂ ಪರಮಾತ್ಮನನ್ನು ಉಪಾಸನಾ ಮಾಡದಿದ್ದರೆ ವಿಷ್ಣುಪ್ರಸಾದವು ಚೆನ್ನಾಗಿ ಆಗಲಾರದು ಆ ವಿಷ್ಣುವಿನ ಪ್ರಸಾದವಾಗದೆ ಮೋಕ್ಷವಾಗಲಾರದು ಲಕ್ಷ್ಮೀದೇವಿಯನ್ನು ಪಾಸನಾಮಾಡತಕ್ಕ ಮಾರ್ಗವನ್ನು ಬಿಟ್ಟೇ ಭಗವಂತನನ್ನು ಪಾಸನಾ ಮಾಡತಕ್ಕವರಿಗೆ ಮೋಕ್ಷವು ಆಗಿಯೇ ಆಗುತ್ತದೆ ಹೀಗೆ ಈ ಲಕ್ಷ್ಮೀ ಉಪಾಸನೆ ಮಾಡಿ ಪರಮಾತ್ಮನನ್ನು ಪಾಸನಮಾಡಿ ಹೊಂದತಕ್ಕ ಮೋಕ್ಷಮಾರ್ಗವು ಬಹುಕ್ಲೇಶಸಾಧ್ಯವು ಎಂದು ಭಾವವು (೪) (ಹೀಗಾದರೆ ಲಕ್ಷ್ಮೀದೇವಿಯ ಉಪಾಸನದಿಂದ ಪ್ರಯೋಜನವಿಲ್ಲವೋ ಎಂದರೆ—) ಕ್ಲೇಶದಿಂದ ಲಕ್ಷ್ಮೀದೇವಿಯನ್ನು ಪಾಸನಮಾಡಿ ಅವಳನ್ನು ಪ್ರತ್ಯಕ್ಷೀಕರಿಸಿಕೊಂಡವರಿಗೆ ಭಗವಂತನ ಉಪಾಸನವು ಸುಲಭ ಸಾಧ್ಯವಾಗುತ್ತದೆ, ಎಂದಿಷ್ಟೇ ಪ್ರಯೋಜನವಿದೆ ॥೧॥

ಪೀ—ಹೀಗಾದರೆ ಲಕ್ಷ್ಮ್ಯಾ ಉಪಾಸನಮಾರ್ಗ, ಭಗವದುಪಾಸನಮಾರ್ಗಗಳಿಗೆ ಸಾಮ್ಯವೇ ಪ್ರಾಪ್ತವಾಯಿತು ಅವ್ಯಕ್ತೋಪಾಸನದ್ವಾರಕ ಮಾರ್ಗದಲ್ಲಿಯೂ ಕ್ಲೇಶವಿಲ್ಲವೆಂದಾಯಿತು ತಥಾಚ ಭಗವದುಪಾಸನೆಗೆ ಸಮಸ್ತ ವಿಘ್ನಗಳೂ ಲಕ್ಷ್ಮ್ಯಾ ಉಪಾಸನೆಯಿಂದ ಪರಿಹಾರವಾಗುವುದರಿಂದ ಸೌಕರ್ಯವುಂಟಾಗುವುದರಿಂದ ಕ್ಲೇಶಪರಿಹಾರವಾಗುವುದು ಎಂದರೆ—

ಭಾ ॥ (೧) ತತ್ರಾಪಿ ಯೋಽವ್ಯಕ್ತಾಪರೋಕ್ಷೋಯೇ ಪ್ರಯಾಸಃ ತಾವತಾ ಪ್ರಯತ್ನೇನ ಯದಿ ಭಗವಂತಮುಪಾಸ್ತೇ ಊನೇನ ವಾ ತದಾ ಭಗವದಾಪರೋಕ್ಷ್ಯಮೇವ ಭವತೀತಿ ದ್ವಿತೀಯಮುಧಿಕಂ ॥ (೨) ಇಂದ್ರಿಯಸಂಯಮಾದ್ಯೂನಭಾವೇ ಸತ್ಯುಪಾಸಕಸ್ಯಾಪಿ ದೇವೀ ನಾತಿಪ್ರಸಾದಮೇತೀತಿ । ದೇವಸ್ತು ತಾನಿ ಸಾಧನಾನಿ ಭಕ್ತಿಮತಃ ಸ್ವಯಮೇವಾಪ್ರಯತ್ನೇನ ದದಾತೀತಿ ಚಾತಿಸೌಕರ್ಯಮಿತಿ ಭಕ್ತಾನಾಂ ಭಗವದುಪಾಸನೇ ಇತರತ್ರ ಕ್ಲೇಶೋಽಧಿಕತರಃ । ತದೇತತ್ಸರ್ವಂ ಪರ್ಯುಪಾಸತೇ ॥ (೩) ಸನ್ನಿಯಮ್ಯಾಧಿಕತರ ಇತಿ ಪರಿಸಂತರಪ್ಶಬ್ದೇನ ಪ್ರತೀಯತೇ ॥ (೪) ಸಾಮವೇದೇ ಮಾಧುಚ್ಛಂದಸಶಾಖಾಯಾಂ ಚೋಕ್ತಂ । ಭಕ್ತಾಶ್ಚ ಯೇಽತೀವ ವಿಷ್ಣುವತೀನ ಜಿತೇಂದ್ರಿಯಾಃ ಸಮ್ಯಗಾಚಾರಯುಕ್ತಾಃ । ಉಪಾಸತೇ ತಾಂ ಸಮುಬುದ್ಧಯಶ್ಚ

ತೇಷಾಂ ದೇವೀ ದೃಶ್ಯತೇ ನೇತರೇಷಾಂ ॥ (೫) ದೃಷ್ಟಾ ಚ ಸಾ ಭಕ್ತಿಮತೀವ ವಿಷ್ಣೌ ದತ್ತ್ವೋಪಾಸ್ತೌ ಸರ್ವವಿಘ್ನಾಂಶ್ಚಿನತ್ತಿ । ಉಪಾಸ್ಯ ತಂ ವಾಸುದೇವಂ ವಿದಿತ್ವಾ ತತಸ್ತತಃ ಶಾಂತಿಮತ್ಯಂತನೇತೀತಿ ॥ ೨ ॥

ಅ ॥ (೧) ಲಕ್ಷ್ಮೀದೇವಿಯನ್ನುಪಾಸನೆ ಮಾಡಿ ಲಕ್ಷ್ಮಿಯನ್ನು ಪ್ರತ್ಯಕ್ಷೀಕರಿಸಿಕೊಂಡರೆ ಪರಮಾತ್ಮನನ್ನುಪಾಸನಾಮಾಡಿ ಪ್ರತ್ಯಕ್ಷೀಕರಿಸಿಕೊಳ್ಳಲಿಕ್ಕೆ ಸೌಕರ್ಯವಿದ್ದರೂ ಲಕ್ಷ್ಮೀದೇವಿಯನ್ನುಪಾಸನಾ ಮಾಡಿ ಪ್ರತ್ಯಕ್ಷೀಕರಿಸಲಿಕ್ಕೆ ಎಷ್ಟು ಪ್ರಯಾಸವಿದೆಯೋ, ಅಷ್ಟು ಪ್ರಯಾಸದಿಂದ ಯಾವನು ಶ್ರೀಪರಮಾತ್ಮನನ್ನು ಪಾಸನೆ ಮಾಡುತ್ತಾನೋ ಅಥವಾ ಲಕ್ಷ್ಮೀದೇವಿಯನ್ನು ಪ್ರತ್ಯಕ್ಷೀಕರಿಸಲಿಕ್ಕೆ ಎಷ್ಟು ಪ್ರಯಾಸವಿದೆಯೋ, ಅದಕ್ಕಿಂತ ಸ್ವಲ್ಪ ಕಡಿಮೆಯಾದ ಪ್ರಯಾಸದಿಂದ ಉಪಾಸನಾ ಮಾಡುತ್ತಾನೋ, ಆಗ ಶ್ರೀಪರಮಾತ್ಮನ ಪ್ರತ್ಯಕ್ಷವೇ ಆಗುತ್ತದೆ (1) ಆದುದರಿಂದ ಲಕ್ಷ್ಮಿಯ ಉಪಾಸನಾ ದ್ವಾರಕ ಮಾರ್ಗಕ್ಕಿಂತ ಸಾಕ್ಷಾತ್ಪರಮಾತ್ಮನನ್ನು ಉಪಾಸನಾ ಮಾಡತಕ್ಕ ಮಾರ್ಗದಲ್ಲಿ ಅಯಾಸವು ಕಡಿಮೆಯಾಗಿರುವುದರಿಂದ ಭಗವದುಪಾಸನಾ ಮಾರ್ಗವೇ ಶ್ರೇಷ್ಠವು) (೨) (ಅವ್ಯಕ್ತೋಪಾಸನದ್ವಾರಕವಾದ ಮಾರ್ಗದಲ್ಲಿ ಭಗವದುಪಾಸನಕ್ಕಿಂತ ಹೆಚ್ಚು ಕ್ಲೇಶವಿದೆ ಎನ್ನುತ್ತಾರೆ--) (ಭಗವದುಪಾಸನೆಗೆ ಅದಕ್ಕೆ ಅನುಕೂಲವಾದುದೇ ಒಂದು ಪ್ರಯತ್ನವು (ಅವ್ಯಕ್ತೋಪಾಸನದಲ್ಲಿ ಮೊದಲು ಅದಕ್ಕೆ ಅನುಕೂಲವಾದ ಪ್ರಯತ್ನವು ಆ ಮೇಲೆ ಭಗವಂತನನ್ನು ಪಾಸನಾ ಮಾಡಲಿಕ್ಕೆ ಯತ್ನವು ಹೀಗೆ ಎರಡು ಯತ್ನಗಳು ಅದಕಾರಣ ಕ್ಲೇಶಾಧಿಕ್ಯವು ಎನ್ನುತ್ತಾರೆ-) ಇಂದ್ರಿಯ ನಿಯಮನಾದಿ ಸಾಧನಗಳು ಕಡಿಮೆ ಆದರೆ ಹೆಚ್ಚು ಲಕ್ಷ್ಮಿಯನ್ನು ಉಪಾಸನ ಮಾಡಿದವನಿಗೂ ಲಕ್ಷ್ಮೀದೇವಿಯು ಅತ್ಯಂತ ಅನುಗ್ರಹವನ್ನು ಮಾಡುವುದಿಲ್ಲ ಶ್ರೀಪರಮಾತ್ಮನಾದರೂ ಅಂತಹ ಸಾಧನಗಳನ್ನು ಭಕ್ತಿಯಿದ್ದವನಿಗೆ ತಾನೇ ಪ್ರಯತ್ನವಿಲ್ಲದೆ ಕೊಡುತ್ತಾನೆ ಈ ಪ್ರಕಾರ ಭಕ್ತರಿಗೆ ಪರಮಾತ್ಮನನ್ನು ಪಾಸನಾ ಮಾಡಲಿಕ್ಕೆ ಸೌಕರ್ಯವಿದೆ ಲಕ್ಷ್ಮಿಯ ಉಪಾಸನದಲ್ಲಿ ಆದರೂ ಅತ್ಯಧಿಕವಾದ ಕ್ಲೇಶವೇ ಇದೆ ಅತಿಶಯವಾಗಿ ಉಪಾಸನವು ಇದು ಮೊದಲಾದುದೆಲ್ಲವೂ **ಪರ್ಯುಪಾಸತೇ** ಸನ್ನಿಯಮ್ಯ, ಅಧಿಕತರಃ ಎಂಬುದರಿಂದ ಸಿದ್ಧವಾಗುತ್ತದೆ ಅಂದರೆ **ಪರಿ** ಎಂಬುದರಿಂದ ಉಪಾಸಕನಿಗೆ ಅತಿಶಯವು, **ಸಮ್** ಎಂಬುದರಿಂದ ಅತಿಶಯವಾಗಿ ಇಂದ್ರಿಯ ನಿಗ್ರಹವು, ತರಪ್‌ಪ್ರತ್ಯಯದಿಂದ ಅತ್ಯಂತ ಸದಾಚಾರಾದಿಗಳೂ ಬೇಕೆಂದು ತೋರುತ್ತದೆ. (೪) ಸಾಮವೇದದಲ್ಲಿ ಮಾಧುಚ್ಛಂದಸಶಾಖೆಯಲ್ಲಿಯೂ ಈ ವಿಷಯವು ಹೇಳಲ್ಪಟ್ಟಿದೆ ಯಾರು ವಿಷ್ಣುವಿನಲ್ಲಿ ಅತ್ಯಂತ ಭಕ್ತರಾಗಿರುತ್ತಾರೋ, ಅತ್ಯಂತವಾಗಿ ಇಂದ್ರಿಯಗಳನ್ನು ನಿಗ್ರಹಿಸಿಕೊಂಡಿರುತ್ತಾರೋ ಚನ್ನಾಗಿ ಸದಾಚಾರಗಳಿಂದ ಯುಕ್ತರಾದವರೋ ಮತ್ತು ಸರ್ವತ್ರ ಸಮಬುದ್ಧಿಗಳಾಗಿರುತ್ತಾರೋ, ಅಂತಹವರು ಆ ಲಕ್ಷ್ಮೀದೇವಿಯನ್ನು ಪಾಸನಾ ಮಾಡುತ್ತಾರೆ ಅಂತಹ ಸದಾಚಾರ ಸಂಪನ್ನರಿಗೇನೇ ಲಕ್ಷ್ಮೀದೇವಿಯು ಪ್ರತ್ಯಕ್ಷಳಾಗುತ್ತಾಳೆ. ಸದಾಚಾರಾದಿಗಳಿಲ್ಲದಿರುವವರಿಗೆ ಲಕ್ಷ್ಮೀದೇವಿಯು ಪ್ರತ್ಯಕ್ಷಳಾಗುವುದಿಲ್ಲ (೫) ಪ್ರತ್ಯಕ್ಷಳಾದ ಲಕ್ಷ್ಮೀದೇವಿಯು ತನ್ನನ್ನು ಪಾಸನಮಾಡಿದವನಿಗೆ ವಿಷ್ಣುವಿನಲ್ಲಿ ಹೆಚ್ಚು ಭಕ್ತಿಯನ್ನು ಕೊಟ್ಟು, ವಿಷ್ಣುವನ್ನು ಪಾಸನೆ ಮಾಡುವುದರಲ್ಲಿ ಬರುವ ಸಮಸ್ತ ವಿಘ್ನಗಳನ್ನು ಪರಿಹರಿಸುತ್ತಾಳೆ ಆ ಪರಮಾತ್ಮನನ್ನು ಪಾಸನೆ ಮಾಡಿ ಅಪರೋಕ್ಷೀಕರಿಸಿಕೊಂಡ ಮೇಲೆ ಪ್ರಸನ್ನನಾದ ಶ್ರೀಪರಮಾತ್ಮನಿಂದ ಅತ್ಯಂತ ಶಾಂತಿಯನ್ನು (ಮೋಕ್ಷವನ್ನು) ಹೊಂದುತ್ತಾನೆ, ಎಂದುಕ್ತವಾಗಿದೆ ॥ ೨ ॥

ಭಾ ॥ (೧) **ಉಕ್ತಂ ಚ ಸಾಮವೇದೇ ಅಯಾಸ್ಯಶಾಖಾಯಾಂ । ಪ್ರಸನ್ನೋ ಭವಿತಾ ದೇವಃ ಸೋಽವ್ಯಕ್ತೇನ ಸಹೈವ ತು । ಯಾವತಾ ತತ್ಪ್ರಸಾದೋ ಹಿ ತಾವತ್ಯೈವ ನ ಸಂಶಯಃ ।**

ನ ತತ್ಪ್ರಸಾದಮಾತ್ರೇಣ ಪ್ರೀಯತೇ ಸ ಮಹೇಶ್ವರಃ । ತಸ್ಮಿನ್ಪ್ರೀತೇ ತು ಸರ್ವಸ್ಯ ಪ್ರೀತಿಸ್ತು ಭವತಿ ಧ್ರುವಂ ॥ (೨) ಯದ್ಯಪ್ಯುಪಾಸನಾಧಿಕ್ಯಂ ತಥಾಽಪಿ ಗುಣದೋ ಹಿಂ ಸಃ । ಮುಕ್ತಿದಶ್ಚ ಸ ಏವೈಕೋ ನಾನ್ಯಕ್ತಾದಿಸ್ತು ಕಶ್ಚನೇತಿ । ಮಮಾತ್ಮಭಾವಮಿ-ಚ್ಛಂತೋ ಯತಂತೇ ಪರಮಾತ್ಮನ ಇತಿ ಚ ॥ (೩) ಮೋಕ್ಷಧರ್ಮೇ ಶ್ರೀವಚನಂ । ಧರ್ಮನಿತ್ಯೇ ಮಹಾಬುದ್ಧೌ ಬ್ರಹ್ಮಣ್ಯೇ ಸತ್ಯವಾದಿನಿ । ಪ್ರಶ್ರಿತೇ ದಾನಶೀಲೇ ಚ ಸದೈವ ನಿವಸಾಮ್ಯಹಮಿತಿ ಚ ॥ (೪) ಮಹತಃ ಪರಂ ತು ಬ್ರಹ್ಮೈವ । ತಥಾಹಿ ಭಗ-ವತಾ ಸಯುಕ್ತಿಕಮಭಿಹಿತಂ । ವದತೀತಿ ಚೇನ್ನ ಪ್ರಾಜ್ಞೋ ಹಿಂ । ತ್ರಯಾಣಾಮೇವ ಚೈವಮುಪನ್ಯಾಸಃ ಪ್ರಶ್ನಶ್ಚೈತ್ಯಾದಿ ॥ (೫) ತಮಿತಿ ಪುಲ್ಲಿಂಗಾಚ್ಚೈತಸ್ಸಿದ್ಧಿಃ । ಮಹತಃ ಪರತ್ವಂ ತ್ವವ್ಯಕ್ತಪರಸ್ಯ ಭವತ್ಯೇವ ॥ ೩ ॥

ಅ ॥ (೧) ಸಾಮವೇದದಲ್ಲಿ ಅಯಾಸ್ಯಶಾಖೆಯಲ್ಲಿ ಹೇಳಿದೆ ಆ ಶ್ರೀಪರಮಾತ್ಮನು ಲಕ್ಷ್ಮೀದೇವಿ ಯಿಂದ ಕೂಡಿಕೊಂಡೇ ಸಂತುಷ್ಟನಾಗುವನು ಎಷ್ಟು ಸಾಧನಗಳನ್ನು ಮಾಡಿದರೆ ಲಕ್ಷ್ಮೀದೇವಿಯು ಪ್ರತ್ಯಕ್ಷಳಾಗಿ ಅವಳ ಅನುಗ್ರಹವಾಗುತ್ತದೋ, ಅಷ್ಟೇ ಸಾಧನಗಳಿಂದ ಪರಮಾತ್ಮನನ್ನು ಪಾಸನ ಮಾಡಿ ದರೆ ಪರಮಾತ್ಮನು ಪ್ರತ್ಯಕ್ಷನಾಗಿ ಲಕ್ಷ್ಮೀದೇವಿಯಿಂದ ಕೂಡಿಕೊಂಡು ಪ್ರಸನ್ನನಾಗುತ್ತಾನೆ ಸಂದೇಹ ವಿಲ್ಲ. ಪರಮಾತ್ಮನನ್ನು ಪಾಸನಾಮಾಡಿ ಅತನನ್ನು ಪ್ರತ್ಯಕ್ಷೀಕರಿಸದೆ ಲಕ್ಷ್ಮೀದೇವಿಯ ಅನುಗ್ರಹಮಾತ್ರ ದಿಂದ ಶ್ರೀಪರಮಾತ್ಮನು ಪ್ರೀತನಾಗುವುದಿಲ್ಲ ಆ ಪರಮಾತ್ಮನು ಪ್ರೀತನಾಗಿ ಪ್ರಸನ್ನನಾದರೆ ರಮಾ ಬ್ರಹ್ಮಾದಿಗಳೆಲ್ಲಾ ದೇವತೆಗಳ ಅನುಗ್ರಹವೂ ಈ ಅಧಿಕಾರಿಗೆ ನಿಶ್ಚಯವೂ ಆಗುವುದು (೨) ಯದ್ಯಪಿ ಲಕ್ಷ್ಮೀದೇವಿಯನ್ನು ಪಾಸನಾಮಾಡುವುದರಲ್ಲಿ ಇಂದ್ರಿಯನಿಯಮನಾದಿಗಳನ್ನು ಬಹಳವಾಗಿ ಮಾಡಬೇಕಾ ಗಿರುವುದರಿಂದ ಪ್ರಯತ್ನಾಧಿಕ್ಯವಿದೆ ಆದರೂ ಈ ಕ್ಲೇಶಸಾಧ್ಯವಾದ ಲಕ್ಷ್ಮೀದೇವಿಯ ಉಪಾಸನೆಯು ಪರಮಾತ್ಮನ ಉಪಾಸನೆಗೆ ಬರತಕ್ಕ ವಿಘ್ನಗಳನ್ನು ನಿವೃತ್ತಿಗೊಳಿಸಿ ಪರಮಾತ್ಮನ ಉಪಾಸನೆಗೆ ಸೌಕರ್ಯ ವನ್ನುಂಟುಮಾಡುತ್ತದೆ ಲಕ್ಷ್ಮೀದೇವಿಯ ಉಪಾಸನೆಗೆ ಬೇಕಾದ ಇಂದ್ರಿಯನಿಯಮನಾದಿಗಳಿಂದ ಸ್ವಲ್ಪ ಕಡಿಮೆಯಾದ ಇಂದ್ರಿಯನಿಯಮನಾದಿಗಳಿಂದಲೂ ಪರಮಾತ್ಮನನ್ನು ಪಾಸನಾಮಾಡಿದರೆ ಪರಮಾ ತ್ಮನ ಪ್ರತ್ಯಕ್ಷವಾಗುತ್ತದೆ ಮತ್ತು ಉಪಾಸನಾಧಿಕ್ಯವುಂಟಾಗುತ್ತದೆ ಆದರೂ ಶ್ರೀಹರಿಯು ಜ್ಞಾನಾದಿ ಗುಣಾಧಿಕ್ಯವನ್ನು ಕೊಡುವವನು. ಆ ಶ್ರೀಹರಿಯೇ ಮೋಕ್ಷವನ್ನು ಕೊಡುವವನು ಲಕ್ಷ್ಮ್ಯಾದಿಗಳು ಸ್ವತಂತ್ರವಾಗಿ ಮೋಕ್ಷವನ್ನು ಕೊಡುವವರಲ್ಲ ಪರಮಾತ್ಮನೇ ಸ್ವತಂತ್ರವಾಗಿ 'ಮೋಕ್ಷ ಕೊಡುವವನು (೩) ನನ್ನ ಉಪಾಸನದಿಂದ ಮೋಕ್ಷವನ್ನು ಇಚ್ಛಿಸುವವರೂ ಕೂಡ ಪರಮಾತ್ಮನ ಪ್ರೀತಿಯನ್ನು ಹೊಂದು ವುದಕ್ಕೆ ಪ್ರಯತ್ನಮಾಡುತ್ತಾರೆ ನನ್ನ ಉಪಾಸನಮಾತ್ರದಿಂದ ಮೋಕ್ಷವಾಗುವುದಿಲ್ಲವೆಂದು ಲಕ್ಷ್ಮೀ ದೇವಿಯ ವಚನವೇ ಮೋಕ್ಷಧರ್ಮದಲ್ಲಿ ಇದೆ (ಲಕ್ಷ್ಮೀದೇವಿಯ ಪ್ರಸಾದವು ಮಹಾ ಪ್ರಯತ್ನ ಸಾಧ್ಯ ವೆಂಬುವಲ್ಲಿ ಪ್ರಮಾಣಾಂತರವನ್ನು ಹೇಳುತ್ತಾರೆ—) (೪) ನಿಯತಧರ್ಮನುಳ್ಳ ಮಹಾ ಬುದ್ಧಿಯುಳ್ಳ, ಬ್ರಾಹ್ಮಣಪ್ರಿಯನಾದ, ಸತ್ಯವನ್ನು ನುಡಿಯುವ, ವಿನಯವುಳ್ಳ ದಾನಶೀಲನಾದ ಭಕ್ತನಲ್ಲಿ ಸದಾ ನಾನು ಅವಾಸ ಮಾಡುತ್ತೇನೆ (ಪ್ರಸನ್ನ ಳಾಗುತ್ತೇನೆ) ಎಂದೂ ಲಕ್ಷ್ಮೀದೇವಿಯ ಮಾತು (೫) (ಹಿಂದೆ ಲಕ್ಷ್ಮೀ ದೇವಿಯ ಪರವಾಗಿ ಉದಾಹರಿಸಿರುವ ವಾಕ್ಯಗಳಲ್ಲಿ **ಮಹತಃ ಪರಂ** ಎಂಬುವ ವಾಕ್ಯ ಒಂದು ಮಾತ್ರ ಪರಬ್ರಹ್ಮಪರವು, ಲಕ್ಷ್ಮೀದೇವಿಯ ಪರವಲ್ಲ, ಎಂದು ಹೇಳುತ್ತಾರೆ–) **ಅನಾದ್ಯನಂತಂ ಮಹತಃ ಪರಂ** ಎಂಬುವ ವಾಕ್ಯಪ್ರತಿಪಾದ್ಯನಾದವನು ಪರಬ್ರಹ್ಮನೇ ಅದನ್ನು ಶ್ರೀನೇದವ್ಯಾಸರು ಸಯುಕ್ತಿಕವಾಗಿ ಹೇಳಿದ್ದಾರೆಂದು ಹೇಳುತ್ತಾರೆ (1) **ಮಹತಃ ಪರಂ** ಎಂಬುವ ಶ್ರುತಿಯು ಮೋಕ್ಷವಾಗುವುದಕ್ಕಾಗಿ

ಪ್ರಧಾನಕ್ಕೂ ಜ್ಞೇಯತ್ವವನ್ನು ಹೇಳುತ್ತದೆ, ಎಂದರೆ-- ಈ ವಾಕ್ಯ ಸಾಮರ್ಥ್ಯದಿಂದ ಮೋಕ್ಷವಾಗುವುದ ಕ್ಕಾಗಿ ಪ್ರಧಾನಕ್ಕೆ ಜ್ಞೇಯತ್ವವನ್ನು ಹೇಳುತ್ತದೆಂದು ತಿಳಿಯಕೂಡದು ಆ ವಾಕ್ಯದಲ್ಲಿಯೂ ಪ್ರಾಜ್ಞ ರೂಪಿ ಶ್ರೀಪರಮಾತ್ಮನೇ ಹೇಳಲ್ಪಡುತ್ತಾನೆ ಪ್ರಧಾನವಲ್ಲ (1) ಪಿತೃಸೌಮನಸ್ಯವನ್ನು ಪ್ರಥಮ ವರವನ್ನಾಗಿಯೂ, (2) ಸ್ವರ್ಗಸಾಧನೀಭೂತವಾದ ಅಗ್ನಿಯನ್ನು ತಿಳಿಸು ಎಂದು ಸ್ವರ್ಗಾಗ್ನಿವಿಷಯಕ ಎರ ಡನೇ ವರವನ್ನೂ (3) ಮೋಕ್ಷಸಾಧನ ಜ್ಞಾನ ವಿಷಯಿಭೂತನಾದ ಮೃತ ಮುಕ್ತ ಜೀವನಿಯಾಮಕ ಪರ ಮಾತ್ಮಸ್ವರೂಪವನ್ನು ಮೂರನೇ ವರವನ್ನಾಗಿಯೂ ನಚಿಕೇತಸರು ಬೇಡಿಕೊಂಡರು. ಆಗ ಯಮನು ಮೂರೇ ವರಗಳನ್ನು ಕೊಟ್ಟನು ಪ್ರಧಾನ ವಿಷಯದಲ್ಲಿ ಪ್ರಶ್ನೆಯನ್ನು ಮಾಡಲಿಲ್ಲ **ಮಹತಃ ಪರಂ** ಎಂಬುವ ವಾಕ್ಯದಲ್ಲಿ ಪ್ರಧಾನವನ್ನು ಹೇಳಲೂ ಇಲ್ಲ (೪) (ಈ ವಿಷಯದಲ್ಲಿ ಯುಕ್ತಿಯನ್ನು ಹೇಳು ತ್ತಾರೆ--) **ಮಹತಃ ಪರಂ ಧ್ರುವಂ ನಿಚಾಯ್ಯ ತಂ** ಎಂದು **ತಂ** ಎಂದು ಪುಲ್ಲಿಂಗವಿದ್ದ ಪ್ರಯುಕ್ತವೂ ಈ ವಾಕ್ಯಪ್ರತಿಪಾದ್ಯನು ಪರಮಾತ್ಮನೇ ಎಂದು ಸಿದ್ಧವಾಗುತ್ತದೆ ಮಹತ್ತತ್ತ್ವಾಭಿಮಾನಿ ಚತುರ್ಮುಖ ನಿಂದುತ್ತಮನಾದ ಅವ್ಯಕ್ತ ತತ್ತ್ವಾಭಿಮಾನಿ ಲಕ್ಷ್ಮೀದೇವಿಯಿಂದಲೂ ಉತ್ತಮನಾದ ಶ್ರೀಪರಮಾತ್ಮನಿಗೆ ಮಹತ್ ಸರತ್ವವೂ ಕೂಡುತ್ತದೆ ॥ ೩ ॥

ಪೀ ಬೇರೆ ಶ್ರುತಿಗಳಲ್ಲಿ ಹೀಗೆ ವ್ಯಾಖ್ಯಾನಮಾಡಿದುದರಿಂದಲೂ ಈ ವಾಕ್ಯಕ್ಕೆ ಹೀಗೆಯೇ ಅರ್ಥ ವಾಗಬೇಕೆನ್ನುತ್ತಾರೆ—

ಭಾ ॥ (೧) ತಥಾ ಚಾಗ್ನಿವೈಶ್ಯಶಾಖಾಯಾಂ । ಅನಾದ್ಯನಂತಂ ಮಹತಃ ಪರಂ ಧ್ರುವ-ಮಿತಿ । ಪರೋ ಹಿ ದೇವಃ ಪುರುಷೋತ್ತಮೋ ಮಹತ್ತ ಇತಿ ॥ (೨) ನ ಚಾವ್ಯಕ್ತಸ್ಯ-ರೂಪಂ ಭಗವತಾ ನಿಷಿದ್ಧಂ । ಭಾರತಾದೌ ಸಾಧಿತತ್ವಾತ್ ॥ (೩) ಶರೀರರೂಪಕ-ವಿನ್ಯಸ್ತಗೃಹೀತೇರಿತ್ಯಾದೌ ನಾಂಖ್ಯಪ್ರಸಿದ್ಧಂ ಪ್ರಧಾನಂ ನಿಷಿಧ್ಯ ವೈದಿಕಮವ್ಯಕ್ತ-ಮೇವೋಕ್ತಂ ॥ (೪) ತಥಾ ಚ ಸೌಕರಾಯಣಶ್ರುತಿಃ । ಶರೀರರೂಪಿಕಾ ಸಾಽಶರೀ-ರಸ್ಯ ವಿಷ್ಣೋರ್ಯತಃ ಪ್ರಿಯಾ ಸಾ ಜಗತಃ ಪ್ರಸೂತಿರಿತಿ । (೫) ಸುವ್ರತಾನಾಂ ಪ್ರಿಯಾಂ ಮಹದ್ಯಶೋವರ್ಣಂ ದದೀ ದದಾತಿ ನ ಬೀವ ಇತಿ ವಿಶೇಷಃ ॥ (೬) ಸುವರ್ಣವರ್ಣಾಂ ಪದ್ಮಶರಾಂ ಚ ದೇವೀಂ ಸರ್ವೇಶ್ವರೀಂ ವ್ಯಾಪ್ತಜಟಾಂ ಚ ಬುಧ್ವಾ । ಸೈವೇತಿ ಸೈ ಸುವ್ರತಾನಾಂ ತು ಮೋಸಾನ್ಮಹಾವಿಭೂತಿಂ ಶ್ರೀಸ್ತು ದದ್ಯಾನ್ನ ದೇವ ಇತ್ಯೈಗ್ವೇ-ದಖಿಲೇಷು ॥ ೪ ॥ ॥ ೫ ॥

ಅ ॥ (೧) ಹಾಗೆಯೇ ಅಗ್ನಿವೈಶ್ಯಶಾಖೆಯಲ್ಲಿ ಹೇಳಿದೆ ಉತ್ಪತ್ತಿ ನಾಶಗಳಿಲ್ಲದಿರುವ, ಶಾಶ್ವತನಾದ ಮಹತ್ತತ್ತ್ವಾಭಿಮಾನಿ ಚತುರ್ಮುಖನಿಂದುತ್ತಮನಾದ ಶ್ರೀಪರಮಾತ್ಮನನ್ನು ತಿಳಿದು, (ಮುಕ್ತನಾಗು ತ್ತಾನೆ) (ಈ ವಾಕ್ಯವನ್ನು ಶ್ರುತಿಯೇ ವ್ಯಾಖ್ಯಾನ ಮಾಡುತ್ತದೆ) ಬ್ರಹ್ಮರುದ್ರಾದಿ ದೇವತೆಗಳಿಂದ ಯಜ್ಞಾದಿಗಳಲ್ಲಿ ಕರೆಯಲ್ಪಟ್ಟವನು ಕ್ರೀಡಾದಿಗುಣವಿಶಿಷ್ಟನಾದ ಶ್ರೀಪರಮಾತ್ಮನು ಮಹತ್ತತ್ತ್ವಾಭಿ ಮಾನಿಯಾದ ಚತುರ್ಮುಖನಿಂದುತ್ತಮನು (೨) (ಅವ್ಯಕ್ತತತ್ವವನ್ನೇ **ಆನುಮಾನಿಕಂ** ಎಂಬುವ ಸೂತ್ರ ದಲ್ಲಿ ಸೂತ್ರಕಾರರು ನಿಷೇಧಮಾಡಿದ್ರಿಂದ **ಅವ್ಯಕ್ತಾತ್ಪುರುಷಃ ಪರಃ** ಎಂಬುವಲ್ಲಿ ಅವ್ಯಕ್ತ ತತ್ತ್ವಾಭಿಮಾನಿನಿ ಯಾದ ಲಕ್ಷ್ಮೀದೇವಿಯಿಂದ ಪರಮಾತ್ಮನು ಶ್ರೇಷ್ಠನೆಂದು ವ್ಯಾಖ್ಯಾನಮಾಡಿದ್ದು ಹೇಗೆಂದರೆ) ಅವ್ಯಕ್ತ ತತ್ವವನ್ನಾಗಲೀ ಅವ್ಯಕ್ತತತ್ವಾಭಿಮಾನಿ ದೇವತೆಯನ್ನಾಗಲೀ ಸೂತ್ರಕಾರರು ನಿಷೇಧಮಾಡಲೇ ಇಲ್ಲ

ಭಾರತ ಭಾಗವತಾದಿಗಳಲ್ಲಿ ಅವ್ಯಕ್ತತತ್ವವನ್ನು, ತದಭಿಮಾನಿ ದೇವತೆಯನ್ನು ಹೇಳಿದ್ದಾರೆ) (೩) ಪ್ರಸಿದ್ಧ ಶರೀರವು ಹೇಗೆ ಪುರುಷನ ಅಧೀನವೋ, ಹಾಗೆಯೇ ಅವ್ಯಕ್ತವೂ ಪರಮಾತ್ಮನ ಅಧೀನವಾಗಿರುವುದರಿಂದ ಶರೀರಕ್ಕೆ ಸದೃಶವಾದ ಪ್ರಧಾನಾದಿಗಳಲ್ಲಿರುವಕ್ಕ ಶ್ರೀಪರಮಾತ್ಮನು ಅವ್ಯಕ್ತ ಮೊದಲಾದ ಶಬ್ದಗಳಿಂದ ವಾಚ್ಯನೆಂದು ಅಂಗೀಕರಿಸಿದೆ ಹಾಗೆಯೇ ಶ್ರೀಪರಮಾತ್ಮನೂ ಪ್ರಧಾನಾದಿಗಳಲ್ಲಿ ನಿಯಾಮಕನಾಗಿದ್ದುದರಿಂದ ಅವ್ಯಕ್ತಾದಿ ಶಬ್ದಗಳಿಂದ ವಾಚ್ಯನೆನ್ನುವ ವಿಷಯವನ್ನು **ಅವ್ಯಕ್ತಮಚಲಂ** ಎಂಬುವ ಶ್ರುತಿಯೂ, **ಅವ್ಯಕ್ತೋಽಕ್ಷರಃ** ಎನ್ನುವ ಸ್ಮೃತಿಯೂ ತಿಳಿಸುತ್ತದೆ, ಇತ್ಯಾದಿಗಳಲ್ಲಿ ಸಾಂಖ್ಯಮತದಲ್ಲಿ ಪ್ರಸಿದ್ಧವಾದ ಪ್ರಧಾನವನ್ನು ನಿಷೇಧಿಸಿ, ಭಗವದಧೀನವೇ ಆದ ಅವ್ಯಕ್ತ ತತ್ವವೇ ಹೇಳಲ್ಪಟ್ಟಿದೆ (ಅಂದರೆ **ಆನುಮಾನಿಕಂ** ಎಂಬುವ ಸೂತ್ರದಲ್ಲಿ ಸಾಂಖ್ಯಮತ ಪ್ರಸಿದ್ಧವಾದ ಸ್ವತಂತ್ರವಾದ ಜಡ ಪ್ರಕೃತಿಯು **ಅವ್ಯಕ್ತಾತ್ಪುರುಷಃ ಪರಃ** ಎಂಬುವ ವಾಕ್ಯದಲ್ಲಿ ಪ್ರತಿಪಾದಿಸಲ್ಪಡುವುದಿಲ್ಲವೆಂದು ಹೇಳಿ ಪರಮ ಮುಖ್ಯವೃತ್ತಿಯಿಂದ ಶ್ರೀಪರಮಾತ್ಮನೇ ಇಲ್ಲಿದ್ದ ಅವ್ಯಕ್ತ ಶಬ್ದದಿಂದ ಹೇಳಲ್ಪಡುತ್ತಾನೆ ಆತನ ಅಧೀನವಾದ ಅವ್ಯಕ್ತ ತತ್ತ್ವವೂ ಅಮುಖ್ಯವೃತ್ತಿಯಿಂದ ಹೇಳಲ್ಪಡುತ್ತದೆಂದು ಹೇಳಿದ್ದಾರೆ, ಹೊರತು ಅವ್ಯಕ್ತ ತತ್ತ್ವವನ್ನು ನಿಷೇಧಮಾಡಲಿಲ್ಲ (೪) ಹಾಗೆಯೇ ಸೌಕರಾಯಣ ಶ್ರುತಿಯಿದೆ. ಪ್ರಾಕೃತ ಶರೀರವಿಲ್ಲದಿರುವ ವಿಷ್ಣುವಿಗೆ, ಪ್ರಸಿದ್ಧ ಶರೀರವು ಪುರುಷನ ಅಧೀನವಾದಂತೆ ಪರಮಾತ್ಮನ ಅಧೀನವೇ ಆದ ಸ್ವಕೃತ್ಯಾಭಿಮಾನಿನಿಯಾದ ವಿಷ್ಣುವಿನ ಪ್ರಿಯಳಾದ ಲಕ್ಷ್ಮೀದೇವಿಯು ಜಗದುತ್ಪಾದಕಳು ಅವಳಿಂದ ನಿಯಮ್ಯವಾದ ಜಡಪ್ರಕೃತಿಯು ಜಗತ್ತಿಗೆ ಉಪಾದಾನ ಕಾರಣವು (೫) (ಹಿಂದೆ ಲಕ್ಷ್ಮೀದೇವಿಯನ್ನು ಪ್ರತ್ಯಕ್ಷೀಕರಿಸಿಕೊಂಡವರಿಗೆ ಶ್ರೀಪರಮಾತ್ಮನನ್ನು ಪ್ರತ್ಯಕ್ಷೀಕರಿಸಿಕೊಳ್ಳಲಿಕ್ಕೆ ಸೌಕರ್ಯವಿದೆ ಎಂಬುವ ಪ್ರಯೋಜನವನ್ನು ಹೇಳಿದ್ದಾರೆ ಈಗ ಸಪ್ರಮಾಣವಾಗಿ ಇನ್ನೊಂದು ಪ್ರಯೋಜನವನ್ನು ಹೇಳುತ್ತಾರೆ) ಜೆನ್ನಾಗಿ ವ್ರತಗಳನ್ನು ಮಾಡಿಕೊಂಡು ಇಂದ್ರಿಯನಿಗ್ರಹಾದಿಗಳನ್ನು ಮಾಡಿಕೊಂಡು ಲಕ್ಷ್ಮೀದೇವಿಯನ್ನು ಪಾಸನಾ ಮಾಡಿದವರಿಗೆ ಅಂತಹ ಲಕ್ಷ್ಮೀದೇವಿಯು ಶೀಘ್ರವಾಗಿ ಮಹಾ ಐಶ್ವರ್ಯವನ್ನು ಕೊಡುತ್ತಾಳೆ ಪರಮಾತ್ಮನು ಹಾಗೆ ಶೀಘ್ರವಾಗಿ ಕೊಡುವುದಿಲ್ಲ, ಎಂದು ವಿಶೇಷವು (೬) (ಈ ವಿಷಯದಲ್ಲಿ ಪ್ರಮಾಣ ಹೇಳುತ್ತಾರೆ—) ಬಂಗಾರಿನಂತೆ ಬಣ್ಣವುಳ್ಳ, ಕೈಯಲ್ಲಿ ಕಮಲವನ್ನು ಧರಿಸಿರುವ, ಸರ್ವರಿಗೂ ಸ್ವಾಮಿಯಾದ, ವ್ಯಾಪ್ತವಾದ ಜಟೆಯುಳ್ಳ ಲಕ್ಷ್ಮೀದೇವಿಯನ್ನು ತಿಳಿದು ಯಾರು ಉಪಾಸನ ಮಾಡುವವರೋ ಅಂತಹ ಚೆನ್ನಾಗಿ ಉಪಾಸನೆ ಮಾಡುವವರಿಗೆ ಲಕ್ಷ್ಮೀದೇವಿಯು ಒಂದು ಮಾಸದೊಳಗೆ ಮಹದೈಶ್ವರ್ಯವನ್ನು ಕೊಡುವಳು ಪರಮಾತ್ಮನು ಶೀಘ್ರದಲ್ಲಿ ಮಹದೈಶ್ವರ್ಯವನ್ನು ಕೊಡಲಾರನು, ಎಂದು ಋಗ್ವೇದಖಿಲಗಳಲ್ಲಿ ಹೇಳಿದೆ ॥ ೫ ॥

ಪೀ—ನನ್ನನ್ನು ಪಾಸನ ಮಾಡಿದವರಿಗೆ ಅಂತಹ ಕ್ಲೇಶವಿಲ್ಲವೆನ್ನುತ್ತಾರೆ—

ಗೀ ॥ ಯೇ ತು ಸರ್ವಾಣಿ ಕರ್ಮಾಣಿ ಮಯಿ ಸನ್ನ್ಯಸ್ಯ ಮತ್ಪರಾಃ ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥ ೬ ॥
ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನಚಿರಾತ್ಪಾರ್ಥ ಮಯ್ಯಾವೇಶಿತಚೇತಸಾಂ ॥ ೭ ॥

ಅ ॥ ಪಾರ್ಥ = ಅರ್ಜುನನೇ, ಯೇ ತು = ಯಾರು, ಸರ್ವಾಣಿ ಕರ್ಮಾಣಿ = ಎಲ್ಲಾ ಕರ್ಮಗಳನ್ನು ಮಯಿ = ನನ್ನಲ್ಲಿ, ಸನ್ನ್ಯಸ್ಯ = ಸಮರ್ಪಿಸಿ, (ಅಂದರೆ ಸರ್ವ ಸ್ವತಂತ್ರನಾದ ಶ್ರೀಹರಿಯೇ ನನ್ನಲ್ಲಿದ್ದುನನ್ನಿಂದ ತನ್ನ ಪೂಜಾರೂಪವಾಗಿ ಸಮಸ್ತ ಕರ್ಮಗಳನ್ನು ಮಾಡಿಸುತ್ತಾನೆಂದು ಅನುಸಂಧಾನ ಮಾಡಿ

ಕೊಂಡು,) ಮತ್ಪರಾಃ=ನಾನೇ ಸರ್ವೋತ್ತಮನೆಂದು ತಿಳಿದವರಾಗಿ, ಅನನ್ಯೇನೈವ ಯೋಗೇನ=ಲಕ್ಷ್ಮೀದೇವಿಯನ್ನು ಪಾಸನ ಮಾಡದೆ, ಕೇವಲ ಭಗವದ್ವಿಷಯಕವೇ ಆದ ಧ್ಯಾನದಿಂದಲೇ (ಪರಮಾತ್ಮನನ್ನು ಧ್ಯಾನಿಸುವುದರಿಂದಲೇ) ಮಾಂ=ನನ್ನನ್ನು ಧ್ಯಾಯಂತಃ=ಧ್ಯಾನಮಾಡುವವರಾಗಿ, ಉಪಾಸತೇ=ಉಪಾಸನೆ ಮಾಡುತ್ತಾರೋ, ಅಥವಾ ಲಕ್ಷ್ಮೀ ಬ್ರಹ್ಮಾದಿಗಳು ಭಗವಂತನ ಅಧೀನರು, ಶ್ರೀಪರಮಾತ್ಮನ ಪರಿವಾರರು, ಎಂದು ತಿಳಿದುಕೊಂಡು ಪರಮಾತ್ಮನು ಸರ್ವೋತ್ತಮನೆಂದು ತಿಳಿದು ಧ್ಯಾನಿಸುವುದರಿಂದ ನನ್ನನ್ನು ಧ್ಯಾನಿಸುತ್ತಾ ಉಪಾಸನ ಮಾಡುತ್ತಾರೋ ಮಯಿ=ನನ್ನಲ್ಲಿ, ಆವೇಶಿತಚೇತಸಾಂ=ಸಂಪೂರ್ಣ ಮನಸ್ಸನ್ನು ಇಟ್ಟಿರುವ, ತೇಷಾಂ=ಅಂತಹವರನ್ನು, ಮೃತ್ಯುಸಂಸಾರಸಾಗರಾತ್=ಮೃತ್ಯುರೂಪವಾದ ಸಂಸಾರವೆಂಬುವ ಸಮುದ್ರದಿಂದ, ನ ಚಿರಾತ್=ಶೀಘ್ರವಾಗಿ, ಸಮುದ್ಧರ್ತಾ=ದಾಟಿಸುವವನು, ಭವಾಮಿ=ಆಗುತ್ತೇನೆ (ಮೋಕ್ಷವನ್ನು ಹೊಂದಿಸಿಕೊಡುತ್ತೇನೆ) ॥ ೬, ೭ ॥

ಪೀ--ಈ ಅಧ್ಯಾಯದಲ್ಲಿ ಹೇಳತಕ್ಕ ಅರ್ಥವನ್ನು ಹೇಳುತ್ತಾರೆ—

ತಾ ॥ ಓಂ ॥ (೧) ಸಾಧನನಿರ್ಣಯೋಽತ್ರ ॥ (೨) ಶ್ರಿಯೇ ಜಾತಃ ಶ್ರಿಯ ಆನಿರಿಯಾಯ ಶ್ರಿಯಂ ವಯೋ ಜರಿತೃಭ್ಯೋ ದಧಾತಿ । ಶ್ರಿಯಂ ವಸಾನಾ ಅಮೃತತ್ವಮಾಯನ್ ಭವಂತಿ ಸತ್ಯಾ ಸಮಿಧಾ ಮಿತದ್ರೌ । (೩)ಉಪಾಸಿತಾ ಮುಕ್ತಿದಾ ಸದ್ಯ ಏವ ದ್ಯಸ್ಯೇಶಾನಾ ಜಗತೋ ವಿಷ್ಣುಪತ್ನೀ । ಯಾ ಶ್ರೀರ್ಲಕ್ಷ್ಮೀರಾವಲಾ ಚಾಂಬಿಕೇತಿ ಹ್ರೀಶ್ಚೇತ್ಯುಕ್ತಾ ಸಂವಿದಗ್ರ್ಯಾ ಸುವಿದ್ಯೇತ್ಯಾದಿಶ್ರುತಿಭ್ಯಃ ॥ (೪) ಶ್ರೀಸ್ತುಷ್ಟಾ ಹರೇಸ್ತೋಷಂ ಜನ(ಗಮ)ಯೇತ್ ಕ್ಷಿಪ್ರಮೇವ ತು । ಅತುಷ್ಟಾ ತದತುಷ್ಟಿಂ ಚ ತಸ್ಮಾದ್ದೈವೀಯೈವ ಸಾ ಸದಾ ॥ (೫) ಅವ್ಯಕ್ತಂ ವ್ಯಕ್ತಿಂ ಪ್ರಾಹುಃ ಕೂಟಸ್ಥಂ ಚಾಕ್ಷರಂ ಚ ತಾಂ । ಪ್ರಧಾನಮಿತಿ ಚ ಪ್ರಾಹುರ್ಮಹಾವುರುಷ ಇತ್ಯಪಿ । ತಾಂ ಬ್ರಹ್ಮಮಹದಿತ್ಯಾಹುಃ ಪರಂ ಜೀವಂ ಪರಾಂ ಚಿತಿಂ ॥ ೧ ॥

ಅ ॥ (೧) ಮೋಕ್ಷಕ್ಕೆ ಸಾಧನಗಳಾದ ಅವ್ಯಕ್ತೋಪಾಸನ, ಭಗವದುಪಾಸನಗಳ ಮಧ್ಯದಲ್ಲಿ ಭಗವಂತನ ಉಪಾಸನೆಯೇ ಶ್ರೇಷ್ಠವೆಂದು ಈ ಅಧ್ಯಾಯದಲ್ಲಿ ನಿರ್ಣಯಿಸಲ್ಪಡುತ್ತದೆ (೨) (ಭಗವಂತನ ಉಪಾಸನದಂತೆಯೇ ಲಕ್ಷ್ಮೀದೇವಿಯ ಉಪಾಸನೆಯೂ ಕೂಡ ಮೋಕ್ಷಸಾಧನವೆಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ಯಾವ ಪುರುಷನು ಲಕ್ಷ್ಮೀದೇವಿಯನ್ನು ಚೆನ್ನಾಗಿ ಪೂಜಿಸುವುದಕ್ಕಾಗಿಯೇ ಹುಟ್ಟಿರುವನೋ, ಅದಕ್ಕಾಗಿಯೇ ಮನೆಯಿಂದ ಹೊರಟಿರುವನೋ, ಉಪದೇಶಿಸತಕ್ಕ ಗುರುಗಳಿಂದಲೇ ತನಗೆ ಸಂಪತ್ತನ್ನೂ ಆಯುಷ್ಯವನ್ನೂ ಅಧಿಕ ಸಂಪಾದಿಸಿಕೊಳ್ಳುತ್ತಾನೋ, ಲಕ್ಷ್ಮೀದೇವಿಯನ್ನು ಉಪಾಸನೆ ಮಾಡಿದ ಪುರುಷರು ಮೋಕ್ಷವನ್ನು ಹೊಂದುತ್ತಾರೆ ಅಂತಹ ಗುರು ಶಿಷ್ಯರಿಬ್ಬರ ಅಭೀಷ್ಟಗಳು ಸತ್ಯಗಳಾಗುತ್ತವೆ (೩) ಯಾರು ಶ್ರೀಃ, ಲಕ್ಷ್ಮೀಃ, ಔಪಲಾ, ಅಂಬಿಕಾ, ಹ್ರೀಃ, ಸಂವಿತ್, ಆಗ್ರ್ಯಾ, ಸುವಿದ್ಯಾ ಇತ್ಯಾದಿ ಪ್ರಕಾರ ಹೇಳಿಸಿಕೊಳ್ಳಲ್ಪಟ್ಟಿದ್ದಾಳೋ, ಅಂತಹ ಲಕ್ಷ್ಮೀದೇವಿಯು ಉಪಾಸನೆಗೂ ಮೋಕ್ಷಸಾಧನತ್ವವು ಉಕ್ತವಾಗಿದೆ ಈ ಜಗತ್ತಿಗೆ ನಿಯಾಮಕಳಾದ ವಿಷ್ಣುವಿನ ಪ್ರಿಯಪತ್ನಿಯಾದ ಅಂತಹ ಲಕ್ಷ್ಮೀದೇವಿಯು ಉಪಾಸನೆಮಾಡಲ್ಪಟ್ಟರೆ ಉಪಾಸಕನಿಗೆ ತತ್ಕ್ಷಣದಲ್ಲಿ ಮೋಕ್ಷವನ್ನು ಕೊಡುತ್ತಾಳೆ ಇತ್ಯಾದಿ ಶ್ರುತಿಗಳಿಂದ (೪)(ಲಕ್ಷ್ಮ್ಯಾಯ ಉಪಾಸನೆಯು ಸ್ವತಂತ್ರವಾಗಿ ಮೋಕ್ಷಸಾಧನವಲ್ಲ, ಮತ್ತೆ ಲಕ್ಷ್ಮೀದೇವಿಯ ಪ್ರಸಾದವಾಗಿ ಆ ಮೇಲೆ ಭಗವಂತನ ಪ್ರಸಾದವಾಗಿಯೇ ಮೋಕ್ಷವು ಎನ್ನುತ್ತಾರೆ—)

ಲಕ್ಷ್ಮೀದೇವಿಯು ಚೆನ್ನಾಗಿ ಸಂತುಷ್ಟಳಾಗಿ ಶೀಘ್ರವಾಗಿಯೇ ಶ್ರೀಪರಮಾತ್ಮನಿಗೆ ಸಂತೋಷವನ್ನು ಹುಟ್ಟುಸುತ್ತಾಳೆ (ಪರಮಾತ್ಮನ ಅನುಗ್ರಹವು ಉಪಾಸಕರಿಗೆ ಆಗುವಂತೆ ಮಾಡುತ್ತಾಳೆ.) ಲಕ್ಷ್ಮೀದೇವಿಯು ಸಂತುಷ್ಟಳಾಗದಿದ್ದರೆ ಪರಮಾತ್ಮನಿಗೂ ಸಂತೋಷವನ್ನು ಹೊಂದಿಸುವುದಿಲ್ಲ (ಶ್ರೀ ಪರಮಾತ್ಮನ ಅನುಗ್ರಹವಾಗುವಂತೆ ಮಾಡುವುದಿಲ್ಲ) ಆದಕಾರಣ ಸದಾ ಆ ಲಕ್ಷ್ಮೀದೇವಿಯನ್ನು ಧ್ಯಾನಿಸಲೇ ಬೇಕು (೫) (ಲಕ್ಷ್ಮೀ ಪ್ರಸಾದವು ಭಗವತ್ಪ್ರಸಾದವನ್ನು ಹುಟ್ಟಸುತ್ತದೆಂಬುವುದು ಹೇಗೆ? ಎಂದರೆ–) ಲಕ್ಷ್ಮೀದೇವಿಗೆ ಅತಿ ಮಹಿಮೆಯನ್ನು ಹೇಳುತ್ತಾರೆ ಆ ಲಕ್ಷ್ಮೀದೇವಿಯನ್ನು ಅವ್ಯಕ್ತಳೆಂದೂ ಪ್ರಕೃತಿಯೆಂದೂ ಕೂಟಸ್ಥಳೆಂದೂ, ಅಕ್ಷರಳೆಂದೂ, ಪ್ರಧಾನಳೆಂದೂ, ಮಹಾಪುರುಷಳೆಂದೂ, ಮಹದ್ಬ್ರಹ್ಮಳೆಂದೂ ಪರಜೀವಳೆಂದೂ ಪರಚಿತಿ ಎಂದೂ ಹೇಳುತ್ತಾರೆ ॥ ೧ ॥

ಪೀ—ಲಕ್ಷ್ಮೀದೇವಿಗೆ ಇಂತಹ ಮಹಾಮಹಿಮೆಯು ಇದ್ದರೆ ಲಕ್ಷ್ಮೀದೇವಿಯ ಪ್ರಸಾದವು ತನ್ನಷ್ಟಕ್ಕೇನೇ ಮೋಕ್ಷಾದಿ ಪುರುಷಾರ್ಥಕ್ಕೆ ಕಾರಣವು ಏಕೆ ಆಗಲಾರದು ಅದು ಶ್ರೀಪರಮಾತ್ಮನ ಪ್ರಸಾದಕ್ಕೆ ಸಾಧನವೆಂದು ಏಕೆ ಹೇಳುವುದೆಂದರೆ—

ತಾ ॥ (೧) ತಸ್ಮಾತ್ತು ಪರಮೋ ವಿಷ್ಣುರ್ಯೋ ಬ್ರಹ್ಮ ಪರಮಂ ಮಹದಿತಿ ಬ್ರಹ್ಮಾಂಡವಚನಾಚ್ಚಾವ್ಯಕ್ತೋಪಾಸನಾನ್ಮೋಕ್ಷಾಶಂಕಯಾ ಪ್ಯಚ್ಛತಿ ॥ (೨) ಕೂಟಸ್ಥೋಽಕ್ಷರ ಉಚ್ಯತ ಇತ್ಯುತ್ತರವಚನಾತ್ಕೂಟಸ್ಥಮಚಲಮಿತ್ಯತ್ರಾಪ್ಯುಕ್ತೇರವ್ಯಕ್ತಶಬ್ದಶ್ಚಿತ್ಪ್ರಕೃತಿವಾಚೀ ॥ (೩) ಅನ್ಯಥಾ ಯೇ ತ್ವಾಂ ವರ್ಯುಪಾಸತೇ ಯೇ ಚಾಪ್ಯಕ್ಷರಂ ತೇಷಾಂ ಕೇ ಯೋಗವಿತ್ತಮಾ ಇತಿ ಭೇದೇನ ಪ್ರಶ್ನಾನುಪಪತ್ತಿಃ ॥ (೪) ಪರಂ ಬ್ರಹ್ಮ ಪರಂ ಧಾಮ ಪವಿತ್ರಂ ಪರಮಂ ಭವಾನಿತಿ ತೈರ್ನೈರ್ವೋಕ್ತತ್ವಾತ್ ॥ ೨ ॥

ಆ ॥ (೧) ಆ ಲಕ್ಷ್ಮೀದೇವಿಯಿಂದಲೂ ಶ್ರೀವಿಷ್ಣುವು ಸರ್ವೋತ್ತಮನು ಪರಮಮಹದ್ಬ್ರಹ್ಮನು, ಎಂದು ಬ್ರಹ್ಮಾಂಡಪುರಾಣವಚನದ್ದೆಶಿಯಿಂದ ಲಕ್ಷ್ಮೀದೇವಿಯನ್ನು ಪಾಸನೆ ಮಾಡಿದುದರಿಂದ ಮೋಕ್ಷವಾಗಬಹುದೆಂಬುವ ಶಂಕೆಯಿಂದ ಪ್ರಶ್ನೆಮಾಡುತ್ತಾನೆ (ಅಂದರೆ (1) ಲಕ್ಷ್ಮೀದೇವಿಗಿಂತಲೂ ಶ್ರೀವಿಷ್ಣುವು ಉತ್ತಮನಾದುದರಿಂದ ಲಕ್ಷ್ಮೀದೇವಿಯ ಪ್ರಸಾದವು ಸ್ವತಂತ್ರವಾಗಿ ಮೋಕ್ಷಕ್ಕೆ ಸಾಧನವಲ್ಲ, ಮತ್ತೆ ವಿಷ್ಣುವಿನ ಪ್ರಸಾದನವನ್ನು ಹುಟ್ಟಿಸಿಯೇ ಮೋಕ್ಷಸಾಧನವಾಗುವುದು (2) ಹೀಗೆ ಶ್ರುತಿಪುರಾಣವಾಕ್ಯಗಳಿಂದ ವಿಷ್ಣುವಿನ ಉಪಾಸನದಂತೆ ಲಕ್ಷ್ಮೀದೇವಿಯ ಉಪಾಸನೆಯೂ ಮೋಕ್ಷಸಾಧನವೆಂಬುವ ಪ್ರತೀತಿಯಿಂದ, ಭಗವದುಪಾಸನವು ಮೋಕ್ಷಸಾಧನವೋ ಲಕ್ಷ್ಮೀದೇವಿಯ ಉಪಾಸನವು ಮೋಕ್ಷಸಾಧನವೋ ಎಂಬುವ ಶಂಕೆಯಿಂದ ಇವುಗಳಲ್ಲಿ ಯಾವುದು ಶ್ರೇಷ್ಠವೆಂದು ಪ್ರಶ್ನಿಸುತ್ತಾನೆ) (೨) (ಭಗವದುಪಾಸನದಂತೆ ಲಕ್ಷ್ಮೀದೇವಿಯ ಉಪಾಸನೆಯೂ ಮೋಕ್ಷಸಾಧನವಾಗುವುದಾದರೆ ಲಕ್ಷ್ಮೀದೇವಿಯ ವಿಷಯದಲ್ಲಿಯೇ ಪ್ರಶ್ನೆ ಮಾಡಬೇಕಿತ್ತು ಅವ್ಯಕ್ತೋಪಾಸನ ವಿಷಯದಲ್ಲಿ ಪ್ರಶ್ನೆ ಮಾಡಿದ್ದು ಏಕೆ ಎಂದರೆ-) **ಕೂಟಸ್ಥೋಽಕ್ಷರ ಉಚ್ಯತೇ** ಎಂಬುವ ಉತ್ತರವಾಕ್ಯದಿಂದ **ಕೂಟಸ್ಥಮಚಲಂ** ಎಂಬುವ ಉಕ್ತಿಯಿದ್ದುದರಿಂದ ಅವ್ಯಕ್ತಶಬ್ದವು ಅಚೇತನ ಪ್ರಕೃತ್ಯಭಿಮಾನಿನಿಯಾದ ಲಕ್ಷ್ಮೀದೇವಿಯನ್ನು ಹೇಳುತ್ತದೆ (ಅಂದರೆ– **ಕೂಟಸ್ಥೋಽಕ್ಷರ ಉಚ್ಯತೇ** ಎಂಬೀ ಮೇಲಿನ ವಾಕ್ಯದಲ್ಲಿ ಲಕ್ಷ್ಮೀದೇವಿಯಲ್ಲಿಯೇ ಸ್ಪಯುಕ್ತವಾದ ಕೂಟಸ್ಥ ಅಕ್ಷರ ಶಬ್ದಗಳು ಇಲ್ಲಿಯೂ ಅವ್ಯಕ್ತದಲ್ಲಿ ಪ್ರಯೋಗಿಸಿರುವುದರಿಂದ ಅವ್ಯಕ್ತ ಶಬ್ದದಿಂದ ಚಿತ್ಪ್ರಕೃತಿಯನ್ನೇ ಇಟ್ಟುಕೊಳ್ಳಬೇಕು ಆದಕಾರಣ ಚಿತ್ಪ್ರಕೃತ್ಯುಪಾಸನವು ಮೋಕ್ಷಸಾಧನವೆಂದು ತೋರುವುದರಿಂದ ಅವ್ಯಕ್ತೋಪಾಸನ ವಿಷಯದಲ್ಲಿ ಪ್ರಶ್ನೆ ಮಾಡಿದ್ದು ಯುಕ್ತವು) (೩) (ಅವ್ಯಕ್ತಾದಿಶಬ್ದಗಳು ಪರ

ಬ್ರಹ್ಮನಲ್ಲಿ ಮುಖ್ಯಗಳಾಗಿರುವುದರಿಂದ ಪರಬ್ರಹ್ಮನನ್ನು ಏಕೆ ಇಟ್ಟುಕೊಳ್ಳಬಾರದೆಂದರೆ—) ಹೀಗೆ ಹೇಳಿದ್ದರೆ **ಯೇ ತ್ವಾಂ ಪರ್ಯುಪಾಸತೇ, ಯೇ ಚಾಪ್ಯಕ್ಷರಂ, ತೇಷಾಂ ಕೇ ಯೋಗವಿತ್ತಮಾಃ** ಎಂದು ಭೇದದಿಂದ ಪ್ರಶ್ನೆ ಮಾಡಿದ್ದು ಕೂಡದೆ ಹೋಗುವುದು (ಅಂದರೆ—ಅವ್ಯಕ್ತ ಶಬ್ದದಿಂದ ಪರಬ್ರಹ್ಮನನ್ನು ಇಟ್ಟುಕೊಂಡರೆ ಭಗವದುಪಾಸಕ, ಲಕ್ಷ್ಮೀದೇವಿಯ ಉಪಾಸಕ, ಇವರ ಮಧ್ಯದಲ್ಲಿ ಉತ್ತಮನು ಯಾರು, ಎಂದು ಪರಮಾತ್ಮನಿಗೂ ಅವ್ಯಕ್ತಕ್ಕೂ ಭೇದದಿಂದ ಅರ್ಜುನನು ಪ್ರಶ್ನೆ ಮಾಡಿದ್ದು ಕೂಡದೆ ಹೋಗುವುದು) (೪) (ಏಕೆ ಕೂಡಲಾರದೆಂದರೆ ಶ್ರೀಕೃಷ್ಣನು ಪರಬ್ರಹ್ಮನೆಂದು ಅರ್ಜುನನೇ ಹೇಳಿರುತ್ತಾನೆನ್ನುತ್ತಾರೆ-) ಶ್ರೀಕೃಷ್ಣನೇ ನೀನು ಸರ್ವೋತ್ತಮನು, ಸರ್ವಗುಣಪರಿಪೂರ್ಣನು, ಉತ್ತಮಾಶ್ರಯನು, ಸರ್ವರನ್ನು ಪವಿತ್ರೀಕರಿಸುವವನು, ಎಂದು ಅರ್ಜುನನೇ ಶ್ರೀಕೃಷ್ಣನನ್ನು ಸ್ತುತಿಸಿರುತ್ತಾನೆ ॥ ೨ ॥

ಪೀ—ಕೆಲವರು ಅವ್ಯಕ್ತಪದದಿಂದ ಶೂನ್ಯ ಎಂಬುವ ನಿರ್ಗುಣಬ್ರಹ್ಮನು ಹೇಳಲ್ಪಡುತ್ತಾನೆಂದು ತಿಳಿದುಕೊಂಡು ನಿರ್ಗುಣಬ್ರಹ್ಮ ಸಗುಣಬ್ರಹ್ಮ ಉಪಾಸಕರಲ್ಲಿ ಯಾರು ಶ್ರೇಷ್ಠರೆಂದು ಪ್ರಶ್ನೆಯು ಅರ್ಥವನ್ನು ಕಲ್ಪಿಸಿಕೊಂಡು ಅಂತಹ ನಿರ್ಗುಣಬ್ರಹ್ಮೋಪಾಸಕರಿಗೇನೇ ಆಧಿಕ್ಯವೆಂದು ಗೀತಾಭಿಪ್ರಾಯವೆಂದು ಹೇಳುವವರನ್ನು ನಿರಾಕರಿಸುತ್ತಾರೆ—

ತಾ ॥ (೧) ಯೇ ತು ತೇ ಮೇ ಯುಕ್ತತಮಾ ಮತಾಃ ಮಯ್ಯೇವ ಮನ ಆಧತ್ಸ್ವೇತ್ಯಾದೌ ಭಗವತೋಽಕ್ಷೇಽಪ್ಯವ್ಯಕ್ತೋಪಾಸಕಾನಾಮಾಧಿಕ್ಯಂ ವದಂತಿ ತೇ ತ್ವಪಲಾಪಕತ್ವಾದತೀವ(ದೇವಾತಿ)ಸಾಹಸಿಕಾ ಇತಿ ಸುಶೋಚ್ಯಾ ಏವ ॥ (೨) ನ ಚಲೇತ್ಪ್ರಾಪ್ತಪದಾದ್ಯಸ್ಮಾದಚಲಾ ಶ್ರೀಸ್ತತೋ ಮತೇತ್ಯಾಗ್ನೇಯೇ । (೩) ಸೂಕ್ಷ್ಮತ್ವಾದಪ್ರಸಿದ್ಧತ್ವಾದ್ಗುಣಬಾಹುಲ್ಯತಸ್ತಥಾ ॥ ಅನಿರ್ದೇಶ್ಯೌ ತಥಾವ್ಯಕ್ತಾವಚಿಂತ್ಯೌ ಶ್ರೀಶ್ಚ ಮಾಧವ ಇತಿ ನಾರದೀಯೇ ॥ ೩ ॥ ॥ ೧—೭ ॥

ಆ ॥ (೧) ತೇ ಮೇ ಯುಕ್ತತಮಾ ಮತಾಃ ಎಂದು ಶ್ರೀಕೃಷ್ಣನು ತನ್ನನ್ನು ಪಾಸನಮಾಡುವವರಿಗೆ ಉತ್ತಮತ್ವವನ್ನು ಹೇಳಿ **ಮಯ್ಯೇವ ಮನ ಆಧತ್ಸ್ವ** ಎಂದು ನನ್ನನ್ನು ಪಾಸನೆಮಾಡುವವರೇ ಉತ್ತಮರಾಗಿರುವುದರಿಂದ ನನ್ನನ್ನೇ ಉಪಾಸನೆ ಮಾಡು ಎಂದು ಸ್ಪಷ್ಟವಾಗಿ ಶ್ರೀಕೃಷ್ಣನು ಹೇಳಿದರೂ ಯಾರು ನಿರ್ಗುಣೋಪಾಸಕರಿಗೆ ಆಧಿಕ್ಯವನ್ನು ಹೇಳುತ್ತಾರೋ, ಅವರು ಅಪರಾಧಮಾಡತಕ್ಕವರಾದುದರಿಂದ ಅತ್ಯಂತ ಸಾಹಸಕರ್ಮಮಾಡುವವರು ಅದಕಾರಣ ನಾಶಹೊಂದುವರೆಂದು ಶೋಕಾರ್ಹರೇ (ಸಮಾಧಾನವನ್ನು ಹೇಳಲಿಕ್ಕೆ ಪ್ರತಿವಾದಿತನವನ್ನು ಹೊಂದಲಿಕ್ಕೂ ಯೋಗ್ಯರಲ್ಲ) (೨)(ವ್ಯಾಪಾರವನ್ನು ಮಾಡುತ್ತಿರುವ ಲಕ್ಷ್ಮೀದೇವಿಗೆ **ಅಚಲಂ ಧ್ರುವಂ** ಎಂದು ಅಚಲತ್ವ ಹೇಳಿದ್ದು ಹೇಗೆ? ಎಂದರೆ-) ಲಕ್ಷ್ಮೀದೇವಿಯು ತನ್ನ ಪದವಿಯಿಂದ ಯಾವಾಗಲೂ ಕದಲದಿರುವುದರಿಂದ **ಅಚಲಾ** ಎನಿಸುತ್ತಾಳೆ, ಎಂದು ಆಗ್ನೇಯಪುರಾಣದಲ್ಲಿದೆ (೩) ಲಕ್ಷ್ಮೀದೇವಿಯೂ ಶ್ರೀಪರಮಾತ್ಮನೂ ಇಬ್ಬರೂ ಸೂಕ್ಷ್ಮರಾಗಿರುವುದರಿಂದ ಅವ್ಯಕ್ತರೆಂದೂ, ಅಪ್ರಸಿದ್ಧರಾಗಿರುವುದರಿಂದ ಅಂದರೆ ಸಾಕಲ್ಯೇನ ತಿಳಿಯಲಿಕ್ಕೆ ಅಶಕ್ಯರಾದುದರಿಂದ ಅನಿರ್ದೇಶ್ಯರಿಂದೂ ಗುಣಗಳು ಅನಂತಗಳಾಗಿರುವುದರಿಂದ ಅಚಿಂತ್ಯರೆಂದೂ ಹೇಳಲ್ಪಡುತ್ತಾರೆ, ಎಂದು ನಾರದೀಯ ಪುರಾಣದಲ್ಲಿದೆ ॥ ೩ ॥ ॥ ೧—೭ ॥

ಪೀ—ಹಿಂದೆ ಹೇಳಿದ ಪ್ರಕಾರ ಭಗವದುಪಾಸನೆಯೇ ಶ್ರೇಷ್ಠವಾಗಿರುವುದರಿಂದ ಅದನ್ನೇ ಮಾಡು ಅದನ್ನು ಮಾಡಲಿಕ್ಕೆ ಶಕ್ತಿಯಿಲ್ಲವಾದರೆ ಅದರ ಸಿದ್ಧಿಗಾಗಿ ಬೇರೆ ಉಪಾಯಗಳನ್ನು ಸಂಪಾದಿಸು ಎನ್ನುತ್ತಾರೆ—

ಗೀ ॥ ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥ ೮ ॥

ಅ ॥ ಮಯ್ಯೇವ = ನನ್ನ ಲ್ಲಿಯೇ, ಮನಃ = ಮನಸ್ಸನ್ನು, ಆಧತ್ಸ್ವ = ಇಡು (ನನ್ನನ್ನೇ ಉಪಾಸನೆಮಾಡು) (ಉಪಾಸನೆ ಮಾಡಲಿಕ್ಕೆ ಸಾಧ್ಯವಾಗದಿದ್ದರೆ) ಮಯಿ = ನನ್ನ ಲ್ಲಿ, ಬುದ್ಧಿಂ = ಜ್ಞಾನವನ್ನು, ನಿವೇಶಯ = ಇಡು. (ನನ್ನ ವಿಷಯಕ ಜ್ಞಾನವನ್ನು ಸಂಪಾದಿಸು) ಅತ ಊರ್ಧ್ವಂ = ನನ್ನ ಜ್ಞಾನವನ್ನು ಸಂಪಾದಿಸಿದ ಮೇಲೆ, ಮಯ್ಯೇವ = ನನ್ನ ಲ್ಲಿಯೇ, ನಿವಸಿಷ್ಯಸಿ = ನಿರ್ದುಃಖಾನಂದಾನುಭವರೂಪವಾದ ಸ್ಥಿತಿಯನ್ನು ಹೊಂದುವಿ. (ಮೋಕ್ಷವನ್ನು ಹೊಂದುವಿ) ಸಂದೇಹವಿಲ್ಲ ॥ ೮ ॥

ಗೀ ॥ ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಂ ।
ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಂ ಧನಂಜಯ ॥ ೯ ॥

ಅ ॥ ಧನಂಜಯ = ಅರ್ಜುನನೇ, ಮಯಿ = ನನ್ನ ಲ್ಲಿ, ಸ್ಥಿರಂ = ಸ್ಥಿರವಾಗುವ ಹಾಗೆ, ಚಿತ್ತಂ = ಮನಸ್ಸನ್ನು, ಸಮಾಧಾತುಂ = ಇರಿಸುವುದಕ್ಕೆ, ನ ಶಕ್ನೋಷಿ = ಸಮರ್ಥನಾಗದಿದ್ದರೆ, ತತಃ = ನನ್ನ ಲ್ಲಿ ಮನಸ್ಸನ್ನು ಇಡಲಿಕ್ಕೆ ಸಮರ್ಥನಾಗದಿರುವುದರಿಂದ, ಅಭ್ಯಾಸಯೋಗೇನ = ಬೇರೆ ಕಡೆ ಮನಸ್ಸನ್ನು ಹೋಗದಿದ್ದಂತೆ ಮಾಡಿ ಮತ್ತು ಮತ್ತು ಪರಮಾತ್ಮನಲ್ಲಿಯೇ ಮನಸ್ಸನ್ನು ಸ್ಥಿರವಾಗಿ ಇಡುವಿಕೆ, ಎಂಬುವ ಅಭ್ಯಾಸರೂಪವಾದ ಉಪಾಯದಿಂದ, ಮಾಂ = ನನ್ನನ್ನು, ಆಪ್ತುಂ = ತಿಳಿದು ಹೊಂದಲಿಕ್ಕೆ. ಇಚ್ಛ = ಇಚ್ಛಿಸು ॥ ೯ ॥

ಗೀ ॥ ಅಭ್ಯಾಸೇಽಪ್ಯಸಮರ್ಥೋಽಸಿ ಮತ್ಕರ್ಮಪರಮೋ ಭವ ।
ಮದರ್ಥಮಪಿ ಕರ್ಮಾಣಿ ಕುರ್ವನ್ಸಿದ್ಧಿಮವಾಪ್ಸ್ಯಸಿ ॥ ೧೦ ॥

ಅ ॥ ಅಭ್ಯಾಸೇಽಪಿ = ಹಾಗೆ ಅಭ್ಯಾಸ ಮಾಡಲಿಕ್ಕೂ, ಅಸಮರ್ಥಃ ಅಸಿ = ಸಾಮರ್ಥ್ಯವಿಲ್ಲದವನೆಂದಾಗಿದ್ದರೆ, ಮತ್ಕರ್ಮಪರಮಃ = ನನ್ನ ಪ್ರೀತಿಗಾಗಿ ನನ್ನ ವಿಷಯಕ ಕರ್ಮಗಳನ್ನು ಮಾಡುವುದೇ ಉತ್ತಮವೆಂದು ತಿಳಿದವನು, ಭವ = ಆಗು, ಮದರ್ಥಮಪಿ = ನನ್ನ ಉದ್ದೇಶದಿಂದ ನನ್ನ ಪ್ರೀತಿಗಾಗಿ ಕರ್ಮಾಣಿ = ಕರ್ಮಗಳನ್ನು, ಕುರ್ವನ್ನಪಿ = ಮಾಡುವವನಾಗಿಯೂ ಸಿದ್ಧಿಂ = ಜ್ಞಾನಸಿದ್ಧಿಯನ್ನು, ಆವಾಪ್ಸ್ಯಸಿ = ಹೊಂದುವಿ. ॥ ೧೦ ॥

ಗೀ ॥ ಅಥೈತದಪ್ಯಶಕ್ತೋಽಸಿ ಕರ್ತುಂ ಮದ್ಯೋಗಮಾಶ್ರಿತಃ ।
ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್ ॥ ೧೧ ॥

ಅ ॥ ಅಥ = ಅಥವಾ, ಏತದಪಿ = ನನ್ನ ಪ್ರೀತಿಗಾಗಿ ಎಲ್ಲಾ ಜಪ ಪೂಜಾ ಯಜ್ಞ ಮೊದಲಾದ ಕರ್ಮಗಳ ಅನುಷ್ಠಾನವನ್ನು ಕೂಡ, ಕರ್ತುಂ = ಮಾಡುವುದಕ್ಕೆ, ಅಶಕ್ತಃ ಅಸಿ ಅಥ = ಅಸಮರ್ಥನೇ ಆಗಿದ್ದರೆ, ಮದ್ಯೋಗಮಾಶ್ರಿತಃ = ಬೇರೆ ದೇವತೆಗಳನ್ನು ದ್ವೇಶಿಸಿ ಕರ್ಮಗಳನ್ನು ಮಾಡಿ ಅಂತ್ಯದಲ್ಲಿ ನನ್ನಲ್ಲಿ ಸಮರ್ಪಣರೂಪವಾದ ಉಪಾಯವನ್ನು ಸಮಸ್ತ ಕರ್ಮಗಳನ್ನು ವಿಷ್ಣುವಿಷಯಕವಾಗಿ ಮಾಡಲಿಕ್ಕೆ ಯಾವುದು ಉಪಾಯವೋ ಅಂತಹ ಉಪಾಯವನ್ನು ಆಶ್ರಯಿಸಿದವನಾಗು ತತಃ = ಅವರಿಂದ, ಯತಾ

ತ್ಮವಾನ್ = ಮನಸ್ಸನ್ನು ಸ್ವಾಧೀನೀಕರಿಸಿಕೊಂಡವನಾಗಿ, ಸರ್ವಕರ್ಮಫಲತ್ಯಾಗಂ = ಎಲ್ಲಾ ಕರ್ಮಗಳಿಂದುಂಟಾಗುವ ಕ್ಷುದ್ರಫಲಗಳ ಅಪೇಕ್ಷೆಯ ಪರಿತ್ಯಾಗವನ್ನು, ಕುರು = ಮಾಡು (ಸಮಸ್ತ ಪ್ರಕಾರಗಳಿಂದ ನನ್ನ ಉಪಾಸನವನ್ನೇ ಮಾಡಬೇಕು) ॥ ೧೧ ॥

ಪೀ—ಅವ್ಯಕ್ತೋಪಾಸಕರಿಗೆ ಗೀತೆಯಲ್ಲಿ ಕ್ಲೇಶಾತಿಶಯವು ತೋರುತ್ತದೆ ಭಗವದುಪಾಸಕರಿಗಾದರೂ ದುಃಖಾಭಾವವು ತೋರುವುದಿಲ್ಲ. ಆದಕಾರಣ **ತದೇತತ್ಸರ್ವಂ** ಎಂದು ಹೇಳಿದ್ದು ಹೇಗೆ ಕೂಡುತ್ತದೆ ಎಂದರೆ—

ಭಾ ॥ (೧) ಮದುಪಾಸಕಾನಾಂ ಭಕ್ತಾನಾಂ ನ ಕಶ್ಚಿತ್ಕ್ಲೇಶ ಇತಿ ದರ್ಶಯತಿ । ಯೇ ತ್ವಿತ್ಯಾದಿನಾ ॥ (೨) ಉಕ್ತಂ ಚ ಸೌಕರಾಯಣಶ್ರುತೌ । ಉಪಾಸತೇ ಯೇ ಪುರುಷಂ ವಾಸುದೇವಮವ್ಯಕ್ತಾದೇರೀಪ್ಸಿತಂ ಕಿಂ ನು ತೇಷಾಮಿತಿ ॥ (೩) ತೇಷಾಮೇಕಾಂತಿನಃ ಶ್ರೇಷ್ಠಾಸ್ತೇ ಚೈವಾನನ್ಯದೈವತಾಃ । ಅಹಮೇವ ಗತಿಸ್ತೇಷಾಂ ನಿರಾಶೀಃ ಕರ್ಮಕಾರಿಣಾಮಿತಿ ಮೋಕ್ಷಧರ್ಮೇ ॥ ೬—೧೧ ॥

ಆ ॥ (೧) ನನ್ನನ್ನು ಉಪಾಸನ ಮಾಡತಕ್ಕ ಭಕ್ತರಿಗೆ ಯಾವುದೊಂದು ಕ್ಲೇಶವೂ ಇಲ್ಲವೆಂದು **ಯೇ** ತು ಇತ್ಯಾದಿಗಳಿಂದ ತೋರಿಸುತ್ತಾರೆ (೨) ಸೌಕರಾಯಣ ಶ್ರುತಿಯಲ್ಲಿ ಈ ಪ್ರಮೇಯವು ಹೇಳಲ್ಪಟ್ಟಿದೆ ಯಾರು ಗುಣಪರಿಪೂರ್ಣನಾದ ವಾಸುದೇವನನ್ನು ಉಪಾಸನೆಮಾಡುತ್ತಾರೋ, ಅಂತಹವರಿಗೆ ಅವ್ಯಕ್ತಾದಿಗಳಿಂದ ಅಪೇಕ್ಷಿಸತಕ್ಕುದು ಯಾವ ಫಲವೂ ಇರುವುದಿಲ್ಲ ಮತ್ತೆ ಎಲ್ಲಾ ಇಷ್ಟ ಫಲವೂ ಶ್ರೀಪರಮಾತ್ಮನಿಂದಲೇ ಲಭಿಸುತ್ತದೆ. (೩) ಆರ್ತಾ(ದುಃಖಿತಾ)ದಿಗಳ ಮಧ್ಯದಲ್ಲಿ ಏಕಾಂತಭಕ್ತರು ಶ್ರೇಷ್ಠರು ಅಂತಹವರು ಶ್ರೀವಿಷ್ಣುವು ಹೊರತು ಬೇರೆಯವರು ಸರ್ವೋತ್ತಮರೆಂದು ತಿಳಿಯುವುದಿಲ್ಲ. ಫಲೇಚ್ಛೆಯನ್ನು ತೊರೆದು ಕರ್ಮಕಾರಿಗಳಾದ ಅಂತಹವರಿಗೆ ನಾನೇ ಸಾಧನಾದಿಗಳನ್ನು ಸಂಪಾದಿಸಿಕೊಡುವವನು. ॥ ೬-೧೧ ॥

ಪೀ—**ಮಯಿ ಸರ್ವಾಣಿ** ಇತ್ಯಾದಿಗಳಿಂದ ಹೇಳಲ್ಪಟ್ಟ ಧ್ಯಾನವು ಲಭಿಸದಿದ್ದರೆ ಜ್ಞಾನವು, ಜ್ಞಾನವುಂಟಾಗದಿದ್ದರೆ ಅಭ್ಯಾಸಯೋಗವು, ಎಂಬುವುದನ್ನು ಸಮರ್ಥಿಸುತ್ತಾರೆ—

ಗೀ ॥ ಶ್ರೇಯೋಹಿ ಜ್ಞಾನಮಭ್ಯಾಸಾಜ್ಜ್ಞಾನಾದ್ಧ್ಯಾನಂ ವಿಶಿಷ್ಯತೇ ।
ಧ್ಯಾನಾತ್ಕರ್ಮಫಲತ್ಯಾಗಸ್ತ್ಯಾಗಾಚ್ಛಾಂತಿರನಂತರಂ ॥ ೧೨ ॥

ಅ ॥ ಅಭ್ಯಾಸಾತ್ = ಅಜ್ಞಾನಪೂರ್ವಕವಾದ ಧ್ಯಾನವನ್ನು ಸಂಪಾದಿಸಲಿಕ್ಕೆ ಉಪಯುಕ್ತವಾದ ಅಭ್ಯಾಸಕ್ಕಿಂತಲೂ, ಜ್ಞಾನಂ = ಜ್ಞಾನವು, ಶ್ರೇಯಃ — ಶ್ರೇಯಸ್ಕರವು ಹಿ = ಪ್ರಸಿದ್ಧವು ಜ್ಞಾನಾತ್ = ಧ್ಯಾನವಿಲ್ಲದ ಕೇವಲ ಜ್ಞಾನಕ್ಕಿಂತಲೂ, ಧ್ಯಾನಂ = ಜ್ಞಾನಪೂರ್ವಕವಾದ ಧ್ಯಾನವು, ವಿಶಿಷ್ಯತೇ = ಶ್ರೇಯಸ್ಕರವಾದುದು ಧ್ಯಾನಾತ್ = ಜ್ಞಾನಪೂರ್ವಕವಾದ ಸಕಾಮ ಧ್ಯಾನಕ್ಕಿಂತಲೂ, ಕರ್ಮಫಲತ್ಯಾಗಃ = ಕರ್ಮಫಲತ್ಯಾಗಪೂರ್ವಕ ಧ್ಯಾನವು, (ಶ್ರೇಯಸ್ಕರವು) (ಇಂತಹ ಸಕಾಮ ಧ್ಯಾನಕ್ಕಿಂತಲೂ ಕರ್ಮಫಲತ್ಯಾಗದಿಂದ ಕೂಡಿದ ನಿಷ್ಕಾಮಧ್ಯಾನವು ಶ್ರೇಯಸ್ಕರವು) ತ್ಯಾಗಾತ್ = ಕರ್ಮಫಲವನ್ನು ತ್ಯಾಗಮಾಡಿ ಜ್ಞಾನಪೂರ್ವಕವಾದ ನಿಷ್ಕಾಮಧ್ಯಾನಕ್ಕಿಂತಲೂ (ಅಪರೋಕ್ಷಜ್ಞಾನವು ಶ್ರೇಯಸ್ಕರವು) ಅನಂತರಂ = ಆ ಮೇಲೆ, ಶಾಂತಿಃ = ಮೋಕ್ಷವು. ॥ ೧೨ ॥

ಹೀ—ಮಯ್ಯೇವ ಇತ್ಯಾದಿಗಳಿಂದ ನನ್ನನ್ನು ಪಾಸನಮಾಡುವವರೇ ಉತ್ತಮರೆಂದು ಹೇಳಲ್ಪಡುತ್ತದೆ ಭಗವಂತನನ್ನು ಪಾಸನಮಾಡುವವರಂತೆ ಅವ್ಯಕ್ತೋಪಾಸಕರಿಗೂ ಮೋಕ್ಷವಿದ್ದ ಪ್ರಯುಕ್ತ ಭಗವದುಪಾಸಕರಿಗೇನೇ ಉತ್ತಮತ್ವವು ಹೇಗೆ ಎಂದರೆ ಅವ್ಯಕ್ತೋಪಾಸಕರಿಗೆ ಮೋಕ್ಷವಾಗುತ್ತದೆಂದು ಒಡಂಬಟ್ಟು ಭಗವದುಪಾಸಕರಿಗೇನೇ ಉತ್ತಮತ್ವವು ಯೇ ತ್ವಕ್ಷರಂ ಎನ್ನುವುದರಿಂದ ಹೇಳಲ್ಪಡುತ್ತದೆ. ಮಯ್ಯೇವ ಇತ್ಯಾದಿಗಳ ಅರ್ಥವನ್ನು ಶ್ರುತಿಯಿಂದಲೇ ಹೇಳುತ್ತಾರೆ—

ತಾ ॥ (೧) ಅವಿಷ್ಣು ಜ್ಞಿ ರತದ್ಭಕ್ತ್ಯೈ ಸ್ತದುಪಾಸಾವಿವರ್ಜಿತೈಃ । ಶಪೇದುಪಾಸಿತಾಽಪ್ಯೇಷಾ ಶ್ರೇಸ್ತಾಂ ತದ್ಧರಿತತ್ತ್ವವಿತ್ । ತದ್ಭಕ್ತಸ್ತಮುಪಾಸ್ಯೈವ ಶ್ರಿಯಂ ಧ್ಯಾಯಿತಾ ನಿತ್ಯದಾ । ತೇನ ತುಷ್ಟಾ ತು ಸಾಽಚ್ಚಿದ್ರಂ ದದ್ಯಾದ್ವಿಷ್ಣೋರುಪಾಸನಂ । ತತಸ್ತದ್ದರ್ಶನಾನ್ಮುಕ್ತಿಂ ಯಾತ್ಯಸೌ ನಾತ್ರ ಸಂಶಯಃ ॥ (೨) ತಥಾಽಪಿ ಸರ್ವಪರಮಾಂ ಸರ್ವದೋಷವಿವರ್ಜಿತಾಂ । ಜ್ಞಾತ್ವಾ ಶ್ರಿಯಂ ತತ್ಪರಮಂ ತತ್ಪತಿಂ ಪುರುಷೋತ್ತಮಂ । ವಿಜ್ಞಾಯೋಪಾಸತೇ ನಿತ್ಯಂ ಕೇ ಹಿ ಯುಕ್ತತಮಾ ಮತಾಃ ॥ (೩) ಯತಃ ಕ್ಲೇಶೋಽಧಿಕಸ್ತೇಷಾಂ ಪೃಥಕ್ ಶ್ರಿಯಮುಪಾಸತಾಂ ॥ ೧ ॥

ಅ ॥ (೧) ಭಗವಂತನನ್ನು ಸರ್ವೋತ್ತಮನೆಂದು ತಿಳಿಯದಿರುವವರು ಭಗವದ್ಭಕ್ತರಾಗದಿದ್ದವರು, ಪರಮಾತ್ಮನನ್ನು ಪಾಸನಾಮಾಡದಿದ್ದವರು, ಯಾರೋ ಇಂತಹವರು ಲಕ್ಷ್ಮೀದೇವಿಯನ್ನು ಪಾಸನೆ ಮಾಡಿದರೂ ಅಂತಹವರಿಗೆ ಅವಳು ಶಪಿಸುವಳು ಆದಕಾರಣ ಭಗವತ್ತತ್ತ್ವವನ್ನು ತಿಳಿದ ಭಗವದ್ಭಕ್ತನು ಆ ಶ್ರೀಹರಿಯನ್ನು ಪಾಸನೆಮಾಡಿಯೇ ನಿರಂತರದಲ್ಲಿಯೂ ಲಕ್ಷ್ಮೀದೇವಿಯನ್ನು ಧ್ಯಾನಿಸುತ್ತಿರಬೇಕು ಆ ಧ್ಯಾನದಿಂದ ಸಂತುಷ್ಟಳಾದ ಆ ಲಕ್ಷ್ಮೀದೇವಿಯು ಸಂಪೂರ್ಣವಾಗಿ ವಿಷ್ಣುವಿನ ಉಪಾಸನೆಯನ್ನು ಧ್ಯಾನಿಸುವವರಿಗೆ ಕೊಡುವಳು ಆ ಮೇಲೆ ಅಧಿಕಾರಿಯು ಭಗವದ್ದರ್ಶನದಿಂದ ಮೋಕ್ಷವನ್ನು ಹೊಂದುತ್ತಾನೆ. ಈ ವಿಷಯದಲ್ಲಿ ಸಂದೇಹವಿಲ್ಲ. (೨) (ಅವ್ಯಕ್ತೋಪಾಸನವು ಮೋಕ್ಷಸಾಧನವಾದುದಾಗ್ಯೂ ಅದನ್ನೇ ಉತ್ತಮವೆಂದು ತಿಳಿಯಕೂಡದೆನ್ನುತ್ತಾರೆ—) ಆದರೂ ಬ್ರಹ್ಮರುದ್ರಾದಿಗಳಿಲ್ಲರಿಂದಲೂ ಉತ್ತಮಳೂ, ಸಮಸ್ತದೋಷವಿರಹಿತಳೂ, ಆದ ಲಕ್ಷ್ಮೀದೇವಿಯನ್ನು ತಿಳಿದುಕೊಂಡು ಆ ಲಕ್ಷ್ಮೀದೇವಿಗಿಂತಲೂ ಉತ್ತಮನೂ, ಲಕ್ಷ್ಮೀಪತಿಯೂ, ಕ್ಷರಾಕ್ಷರಪುರುಷರಿಂದುತ್ತಮನೂ, ಆದ ಲಕ್ಷ್ಮೀದೇವಿಯಿಂದ ಕೂಡಿದ ಶ್ರೀಪರಮಾತ್ಮನನ್ನು ತಿಳಿದುಕೊಂಡು ಉಪಾಸನಮಾಡುತ್ತಾರೆ ಅಂತಹವರು ಕೇವಲ ಲಕ್ಷ್ಮೀದೇವಿಯನ್ನು ಪಾಸನಾಮಾಡುವವರಿಗಿಂತ ಶ್ರೇಷ್ಠರು (೩) (ಏಕೆ ಹೀಗೆ ಹೇಳಬೇಕೆಂದರೆ—) ಪರಮಾತ್ಮನನ್ನು ಬಿಟ್ಟು ಲಕ್ಷ್ಮೀದೇವಿಯನ್ನು ಮಾತ್ರ ಪ್ರತ್ಯೇಕವಾಗಿ ಉಪಾಸನಾಮಾಡುವವರಿಗೆ ಹಿಂದೆ ಹೇಳಿದ ಪ್ರಕಾರ ಹೆಚ್ಚು ಕ್ಲೇಶವೇ ಉಂಟಾಗುತ್ತದೆ

ವಿ ॥ ಸಮಸ್ತ ಇಂದ್ರಿಯಗಳನ್ನು ತನ್ನ ವಶಪಡಿಸಿಕೊಳ್ಳುವುದು, ಸರ್ವತ್ರ ಸಮಬುದ್ಧಿತ್ವವು, ಸಮಸ್ತ ಪ್ರಾಣಿಗಳಿಗೆ ಹಿತವಾಗುವುದರಲ್ಲಿಯೇ ಆಸಕ್ತಿಯು, ಸದಾಚಾರ, ಇವುಗಳು ಇಲ್ಲದೆ, ಲಕ್ಷ್ಮೀದೇವಿಯ ಜೊತ್ತಾಗಿ ಉಪಾಸನೆಯಿಂದ ಲಕ್ಷ್ಮೀದೇವಿಯ ಪ್ರಸಾದವಾಗಲಾರದು, ಪರಮಶ್ರದ್ಧೆ ಮಾತ್ರ ಇದ್ದವರಿಗೆ ಸದಾಚಾರಾದಿಗಳು ಸ್ವಲ್ಪ ಕಡಿಮೆಯಾದರೂ ಭಗವಂತನ ಪ್ರಸಾದವುಂಟಾಗುವುದರಿಂದ ಲಕ್ಷ್ಮೀದ್ವಾರಕ ಮಾರ್ಗದಲ್ಲಿ ಹೆಚ್ಚು ಕ್ಲೇಶವುಂಟಾಗುತ್ತದೆ. ॥ ೧ ॥

ಹೀ—ಭಗವಂತನನ್ನು ಉಪಾಸನ ಮಾಡಿದರೆ ಶೀಘ್ರದಲ್ಲಿ ಮೋಕ್ಷವಾಗುವಪ್ರಯುಕ್ತವೂ ಭಗವದುಪಾಸನವೇ ಶ್ರೇಷ್ಠವೆನ್ನುತ್ತಾರೆ—

ತಾ ॥ (೧) ವಿಷ್ಣುನಾ ಸಹಿತಾ ಧ್ಯಾತಾ ಸಾ ಹಿ(ಽಪಿ) ತುಷ್ಟಿಂ ಪರಾಂ ವ್ರಜೇತ್ । ಅನ್ಯಥಾ ತು ಪುನರ್ವಿಷ್ಣೋಃ ಶ್ರೀಪತಿತ್ವೇನ ಚಿಂತನಂ । ಅಚ್ಚಿದ್ರಮೇವ ಕರ್ತವ್ಯಮಿತಿ ಮು. ಕ್ತಿಶ್ಚಿರಾದ್ಭವೇತ್ । ತಸ್ಮಾದಕ್ಲೇಶತೋ ಮುಕ್ತಿಃ ಕ್ಷಿಪ್ರಂ ವಿಷ್ಣುಮುಪಾಸತಾಮಿತಿ ಪರಮಶ್ರುತಿಃ ॥ (೨) ಯುಕ್ತತಮಾಃ ಸಾಧಕತಮಾಃ । ವಿಷ್ಣೋರನ್ಯಂ ನ ಸ್ಮರೇದ್ಯೋ ವಿನಾ ತತ್ಪರಿವಾರತಾಂ । ತದಧೀನತಾಂ ವಾಽನನ್ಯಯೋಗೀ ಸ ಪರಿಕೀರ್ತಿತ ಇತಿ ಚ ॥ (೩) ಅಂತವತ್ತು ಫಲಂ ತೇಷಾಮಿತ್ಯಾದಿನಾಽನ್ಯದೇವತೊ(ವೊ)ಪಾಸನಾಯಾಃ ಪೂರ್ವಂ(ರ್ವಮೇವ) ನಿಂದಿತತ್ವಾತ್ ॥ ೨ ॥

ಆ ॥ (೧) ಶ್ರೀವಿಷ್ಣುವಿನಿಂದ ಸಹಿತಳಾಗಿ ಲಕ್ಷ್ಮೀದೇವಿಯು ಧ್ಯಾನಿಸಲ್ಪಟ್ಟರೂ ಉತ್ಕೃಷ್ಟವಾದ ತೋಷವನ್ನು ಹೊಂದುವಳು ಶ್ರೀಪರಮಾತ್ಮನನ್ನು ಪಾಸನಮಾಡದೆ ಲಕ್ಷ್ಮೀದೇವಿಯನ್ನು ಮಾತ್ರ ಉಪಾಸನ ಮಾಡಿದರೆ ಪುನಃ ಲಕ್ಷ್ಮೀಪತಿಯೆಂದು ಶ್ರೀವಿಷ್ಣುವನ್ನು ನಿರಂತರದಲ್ಲಿಯೂ ಎಡೆಬಿಡದೆ ಉಪಾಸನ ಮಾಡಬೇಕು ಆ ಮೇಲೆ ಮುಕ್ತಿಯು ಹೀಗೆ ಸಾವಕಾಶವಾಗಿ ಮುಕ್ತಿಯಾಗುವುದು, ಆದಕಾರಣ ಶ್ರೀವಿಷ್ಣುವನ್ನುಪಾಸನಾಮಾಡುವವರಿಗೆ ಕ್ಲೇಶವಿಲ್ಲದೆ ಶೀಘ್ರದಲ್ಲಿ ಮೋಕ್ಷವಾಗುವುದು ಎಂದು ಪರಮಶ್ರುತಿಯು (ಅಂದರೆ ಲಕ್ಷ್ಮೀದೇವಿಯಿಂದ ಸಹಿತನಾದ ಭಗವಂತನನ್ನು ವಾಸನಾಮಾಡಿದರೆ ಇಬ್ಬರದ್ದು ಪರಮಪ್ರಸಾದವು ಆಗುವುದರಿಂದ ಶೀಘ್ರದಲ್ಲಿ ಮೋಕ್ಷವಾಗುವುದು ಪರಮಾತ್ಮನನ್ನು ಬಿಟ್ಟು ಪ್ರತ್ಯೇಕವಾಗಿ ಲಕ್ಷ್ಮೀದೇವಿಯನ್ನು ಮಾತ್ರ ಉಪಾಸನನಮಾಡಿದರೆ ಭಗವದುಪಾಸನನನ್ನು ಸ್ವಲ್ಪ ಮಾಡಿ ಬಹುಕಾಲದಲ್ಲಿ ಪ್ರತ್ಯೇಕವಾಗಿ ಲಕ್ಷ್ಮೀದೇವಿಯನ್ನು ಪಾಸನಾಮಾಡಿ ಮರಳಿ ನಿರಂತರದಲ್ಲಿ ಲಕ್ಷ್ಮೀಸಮೇತನಾದ ಭಗವಂತನನ್ನು ಪಾಸನೆ ಮಾಡಬೇಕು ಆ ಮೇಲೆ ಮೋಕ್ಷನ್ನು ಹೀಗೆ ಸಾವಕಾಶವಾಗಿ ಮೋಕ್ಷವಾಗುವುದು. ಆದಕಾರಣ ಭಗವದುಪಾಸನನೇ ಶ್ರೇಷ್ಠವು) (೨) ಯುಕ್ತತಮಾಃ=ಅತಿಶಯವಾಗಿ ಯೋಗಯುಕ್ತರು. ಅಂದರೆ ಮೋಕ್ಷಸಾಧನಗಳನ್ನು ಮಾಡುವವರ ಮಧ್ಯದಲ್ಲಿ ಶ್ರೇಷ್ಠರು (**ಯೇ ತು ಸರ್ವಾಣಿ** ಎಂಬುವಲ್ಲಿ ಅನನ್ಯಯೋಗದಿಂದ (ಂದರೆ ಭಗವದಧೀನವಾಗಿಯೂ ಕೇವಲ ಲಕ್ಷ್ಮಿಯು ಉಪಾಸನ ಮಾಡದೆ ಪ್ರಥಮದಲ್ಲಿಯೇ ಭಗವಂತನಲ್ಲಿ ಮಾಡತಕ್ಕ ಧ್ಯಾನಮಾರ್ಗದಿಂದ) ಭಗವದುಪಾಸನಕ್ಕೆ ಉತ್ತಮತ್ವವು ಹೇಳಲ್ಪಡುತ್ತದೆ ಆದಕಾರಣ ಲಕ್ಷ್ಮೀದೇವಿಸಮೇತನಾಗಿ ಭಗವಂತನನ್ನು ಪಾಸನೆ ಮಾಡುವುದು ಶ್ರೇಷ್ಠವೆಂದು ಹೇಳುವುದು ಹೇಗೆ ಎಂದರೆ—) ಯಾವನು ವಿಷ್ಣುವಿನಿಂದ ಇತರರಾದ ಬ್ರಹ್ಮಾದಿಗಳನ್ನು ವಿಷ್ಣುವಿನ ಪರಿವಾರರೆಂದೂ ವಿಷ್ಣುವಿನ ಅಧೀನರೆಂದೂ ತಿಳಿದು ಅವರನ್ನು ಸರ್ವೋತ್ತಮರೆಂದು ಸ್ಮರಣೆಮಾಡುವುದಿಲ್ಲವೋ, ಅವನು ಅನನ್ಯಯೋಗೀ ಎನಿಸಿಕೊಳ್ಳುತ್ತಾನೆ (೩) (ಇತರ ದೇವತೆಗಳನ್ನು ಪಾಸನಾ ಮಾಡಬಾರದೆಂದರೆ ಲಕ್ಷ್ಮಿಯ ಉಪಾಸನದಂತೆ **ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ, ಹರಿಂ ಹರಂ ವಿರಿಂಚಂ ಚ ಜ್ಞಾತ್ವಾ ಮುಚ್ಯೇತ ಸಂಸೃತೇಃ** ಇತ್ಯಾದಿಗಳಲ್ಲಿ ಅನ್ಯ ದೇವತೋಪಾಸನೆಯಿಂದಲೂ ಮೋಕ್ಷವಾಗುತ್ತದೆಂದು ಹೇಳಿದ್ದಿಂದ ಆ ವಿಷಯದಲ್ಲಿ ಏಕೆ ಪ್ರಶ್ನೆಮಾಡಲಿಲ್ಲ ಎಂದರೆ—) **ಅಂತವತ್ತು ಫಲಂ ತೇಷಾಂ** ಇತ್ಯಾದಿಗಳಿಂದ ಅನ್ಯದೇವತೋಪಾಸನೆಯು ಪೂರ್ವದಲ್ಲಿಯೇ ನಿಂದಿತವಾಗಿದೆ (ಅಂದರೆ ಅನ್ಯ ದೇವತೋಪಾಸನೆಯಿಂದ ಮೋಕ್ಷವಾಗುವುದಿಲ್ಲವೆಂದು ಮೊದಲೇ ಹೇಳಿದ ಕಾರಣ ವೇದಾದಿಗಳಲ್ಲಿ ಆಪಾತತಃ ಹೇಳಿದ್ದಕ್ಕೆ ಅರ್ಥಾಂತರವಿರುವುದರಿಂದ ಲಕ್ಷ್ಮಿಯ ಉಪಾಸನವಿಷಯದಲ್ಲಿಯೇ ಪ್ರಶ್ನೆಮಾಡಿದ್ದು. ಬೇರೆ ದೇವತೆಗಳ ಉಪಾಸನಾ ವಿಷಯದಲ್ಲಿ ಪ್ರಶ್ನೆಮಾಡಲಿಲ್ಲ) ॥ ೨ ॥

ಪೀ—ಹಾಗಾದರೆ—ಸಾಮಾನ್ಯವಾಗಿ ಭಗವಂತನಿಂದ ಇತರರಾದವರ ಉಪಾಸನವು ಮೋಕ್ಷಸಾಧನವಲ್ಲವೆಂದು ಹೇಳಿದುದರಿಂದ ಅನ್ಯಕ್ಕೋಪಾಸನವೂ ಮೋಕ್ಷಸಾದನನಲ್ಲವೆಂದು ಪ್ರಾಪ್ತವಾಗುವುದರಿಂದ ಲಕ್ಷ್ಮ್ಯುಪಾಸನವಿಷಯದಲ್ಲಿ ಪ್ರಶ್ನೆಮಾಡಿದ್ದು ಏಕೆ? ಎಂದರೆ—

ತಾ ॥ (೧) ಲಕ್ಷ್ಮ್ಯಾಸ್ತ್ವತಿಸಾಮೀಪ್ಯಾದ್ವಿಶೇಷಮಾರಂಕ್ಯ ತದುಪಾಸನಾವಿಷಯ ಏವ ಪ್ರಶ್ನಃ ಕೃತಃ ॥ (೨) ವೈಷ್ಣವಾನ್ಯೇವ ಕರ್ಮಾಣಿ ಯಃ ಕರೋತಿ ಸದಾ ನರಃ । ಜಪಾರ್ಚಾದೀನಿ ಸ್ವಾಶ್ರಮೋಕ್ತಾನಿ ಯಾನಿ ಚ । ಸ ತಚ್ಛರ್ಮೇತಿ ವಿಜ್ಞೇಯೋ ಯೋಽನ್ಯದೇವಾದಿಪೂಜನಂ । ಕೃತ್ವಾ ಪರಾವರ್ತಯತಿ ಸ ತು ತದ್ಯೋಗಮಾತ್ರವಾನ್ ॥ (೩) ತತ್ರ ಪೂರ್ವೋ ವಿಶಿಷ್ಟಃ ಸ್ಯಾದಾದಿಮಧ್ಯಾಂತತಃ ಸ್ಮೃತೇಃ । ಅವಾಂತರೇ ಚ ನಿಯಮಾದ್ವಿಷ್ಣೋಸ್ತದ್ದಾ ಸತಾಽಸ್ಯ ಯತ್ । ಮನಸಾ ವರ್ತತೇಽನ್ಯೋಽಪಿ ಯಥಾಶಕ್ತಿ ಹರಿಸ್ಮೃತೇಃ । ಪೂರ್ವೋಕ್ತಯೋಗ್ಯೋ ಭವತಿ ಯದಿ ನಿತ್ಯಂ ತದಿಚ್ಛತಿ ॥ (೪) ಅಸಮ್ಯಗ್ಜ್ಞಾನಿನೋ ಧ್ಯಾನಾಜ್ಜ್ಞಾನಮೇವ ವಿಶಿಷ್ಯತೇ । ಜ್ಞಾತ್ವಾ ಧ್ಯಾನಂ ತತಸ್ತಸ್ಮಾತ್ತತ್ಪಲೇಚ್ಛಾವಿವರ್ಜಿತಂ । ತಸ್ಮಾಜ್ಜ್ಞಾನಾದ್ಫಲೇನ್ಮುಕ್ತಿಸ್ತ್ಯಾಗಾದ್ಧ್ಯಾನಯುತಾ ಸ್ಫುಟಮಿತಿ ಚ । ಶಾಂತಿರ್ಮುಕ್ತಿಃ ॥ ೩ ॥ ೩—೧೨ ॥

ಅ ॥ (೧) ಸಾಮಾನ್ಯವಾಗಿ ಪರಮಾತ್ಮನು ಹೊರತು ಬೇರೆಯವರ ಉಪಾಸನವು ಮೋಕ್ಷಸಾಧನವಾಗುವುದಿಲ್ಲವೆಂದು ಹೇಳಿದಾಗ್ಯೂ ಲಕ್ಷ್ಮೀದೇವಿಯು ಪರಮಾತ್ಮನಿಗೆ ಅತ್ಯಂತ ಪ್ರಿಯಳಾದುದರಿಂದ ಅವಳಿಗೆ ಇತರರಿಗಿಂತ ವಿಶೇಷವಿದ್ದ ಪ್ರಯುಕ್ತ ಲಕ್ಷ್ಮೀದೇವಿಯ ಉಪಾಸನೆಗೆ ಮೋಕ್ಷಸಾಧನತ್ವವು ಕೂಡಬಹುದಾದುದರಿಂದಲೂ ವಿಶೇಷ ಪ್ರಮಾಣಗಳು ಇದ್ದ ಪ್ರಯುಕ್ತವೂ ಅರ್ಜುನನು ಲಕ್ಷ್ಮೀದೇವಿಯು ಹೊರತು ಬೇರೆಯವರ ಉಪಾಸನಾ ವಿಷಯದಲ್ಲಿ ಪ್ರಶ್ನೆ ಮಾಡದೆ ಇದ್ದರೂ ಲಕ್ಷ್ಮೀದೇವಿಯ ಉಪಾಸನಾ ವಿಷಯದಲ್ಲಿಯೇ ಪ್ರಶ್ನೆ ಮಾಡಿರುವನು (೨) (ಭಗವದುಪಾಸನವೇ ಶ್ರೇಷ್ಠವಾಗಿರುವುದರಿಂದ ಅದನ್ನೇ ಮಾಡಬೇಕು ಅದು ಆಗದಿದ್ದರೆ ಭಗವಂತನನ್ನು ತಿಳಿಯಬೇಕು ಅದೂ ಸಾಧ್ಯವಾಗದಿದ್ದರೆ— ಅಭ್ಯಾಸಯೋಗದಿಂದ ತಿಳಿಯಬೇಕು ಅದೂ ಆಗದಿದ್ದರೆ ಭಗವದ್ವಿಷಯಕ ಕರ್ಮ ಮಾಡಬೇಕು ಅದನ್ನು ಮಾಡಲಿಕ್ಕೂ ಶಕ್ತಿಯಿಲ್ಲವಾದರೆ ಭಗವದ್ಯೋಗವನ್ನಾಶ್ರಯಿಸಿ ಕರ್ಮಫಲ ತ್ಯಾಗಮಾಡಬೇಕೆಂದು **ಮಯ್ಯೇವ** ಇತ್ಯಾದಿ ಶ್ಲೋಕಗಳಿಂದ ಹೇಳುತ್ತಾರೆ ಅದರಲ್ಲಿ ಭಗವದ್ವಿಷಯಕ ಕರ್ಮಮಾಡುವುದೇ ಭಗವದ್ಯೋಗವು, ಅದಕಾರಣ ಇದೆಲ್ಲಾ ಹೇಳಿದ್ದು ಹೇಗೆ ಕೂಡುತ್ತದೆ? ಎಂದರೆ ಸ್ಮೃತಿಪ್ರಮಾಣದಿಂದಲೇ ಅದರ ಅರ್ಥವನ್ನು ಹೇಳುತ್ತಾರೆ) ಯಾವ ಮನುಷ್ಯನು ಸದಾ ಜಪ ಪೂಜಾ ಪ್ರತಿಮೆಗಳಿಗೆ ಅಭಿಷೇಕ ಮಾಡುವುದು, ಧ್ಯಾನ ಮೊದಲಾದ ಆಯಾಯ ಆಶ್ರಮಗಳಿಗೆ ಉಚಿತಗಳಾದವುಗಳು ಯಾವವು ವಿಷ್ಣುವಿಗೆ ಪ್ರೀತಿಕರಗಳಾದ ಕರ್ಮಗಳು ಇರುತ್ತವೋ, ಅಂತಹ ಸಮಸ್ತ ಕರ್ಮಗಳನ್ನು ವಿಷ್ಣುವಿಷಯಕಗಳನ್ನಾಗಿ ಶ್ರೀವಿಷ್ಣುವಿಗೆ ಪ್ರೀತಿಯಾಗುವಂತೆಯೇ ಶ್ರೀವಿಷ್ಣುವಿಗೇನೇ ಅರ್ಪಣೆಯನ್ನು ಮಾಡುತ್ತಾನೋ, ಅದನ್ನೇ ಭಗವತ್ಕರ್ಮವೆಂದು ತಿಳಿಯಬೇಕು ಯಾರು ಬೇರೆ ದೇವಾದಿಗಳಿಗೆ ಪೂಜಾದಿಗಳನ್ನು ಮಾಡಿ ಶ್ರೀಪರಮಾತ್ಮನಲ್ಲಿ ಅರ್ಪಿಸುತ್ತಾನೋ, ಆತನು ವಿಷ್ಣುವಿಷಯಕ ಕರ್ಮಗಳನ್ನು ಮಾಡಲಿಕ್ಕೆ ಬೇಕಾದ ಉಪಾಯ ಮಾತ್ರವುಳ್ಳವನು (೩) ಭಗವದ್ವಿಷಯಕ ಕರ್ಮಮಾಡುವವರು, ಅದಕ್ಕೆ ಬೇಕಾದ ಉಪಾಯವುಳ್ಳವರು ಇವರಿಬ್ಬರ ಮಧ್ಯದಲ್ಲಿ, ಭಗವದ್ವಿಷಯಕ ಕರ್ಮಮಾಡುವವನೇ ಶ್ರೇಷ್ಠನು ಏಕೆಂದರೆ ಕರ್ಮಾರಂಭದಲ್ಲಿ ಸಂಕಲ್ಪಮಾಡುವ ಕಾಲದಲ್ಲಿಯೂ, ಕರ್ಮವನ್ನು ಮಾಡುವ ಮಧ್ಯ ಕಾಲದಲ್ಲಿಯೂ, ಕರ್ಮಸಮಾಪ್ತಿಯಾಗುವಾಗ ಭಗವಂತನಿಗೆ ಅರ್ಪಿಸುವ ಕಾಲದಲ್ಲಿಯೂ, ಅವಾಂತರಕಾಲದಲ್ಲಿಯೂ ಪ್ರತಿಕ್ರಿಯೆಮಾಡುವಾಗಲೂ ಕರ್ಮವನ್ನು ಮಾಡುವ ಕಾಲದಲ್ಲಿ ವಿಹಿತವಾದ ನಿಯಮವನ್ನನುಸರಿಸಿ ನಿಯಮದಿಂದ ವಿಷ್ಣುವಿನ ಸ್ಮರಣೆಯಿದ್ದ ಪ್ರಯುಕ್ತವೂ, ಭಗವದ್ವಿಷಯಕ ಕರ್ಮಮಾಡುವವನು ತಾನು ಪರಮಾತ್ಮನ ದಾಸನೆಂಬುವುದು ಸರ್ವದಾ ಮನಸ್ಸಿನಲ್ಲಿ ಅನುಸಂಧಾನ ಮಾಡಿಕೊಂಡಿರುವುದರಿಂದಶ್ರೇಷ್ಠನು ಇವನಿಗಿಂತ ಭಿನ್ನನಾದ

ಭಗವದ್ವಿಷಯಕ ಕರ್ಮಮಾಡಲಿಕ್ಕೆ ಬೇಕಾದ ಉಪಾಯವುಳ್ಳವನೂ ಕೂಡ ಅನ್ಯದೇವತೆಯ ಪೂಜೆಯನ್ನು ಮಾಡಿ ಅಂತ್ಯದಲ್ಲಿ ಸಮರ್ಪಿಸುವಾಗ ಶಕ್ತ್ಯನುಸಾರ ಹರಿಸ್ಮರಣ ಮಾಡುವುದರಿಂದ ಯೋಗಫಲವಾಗಿ ಪರಮಾತ್ಮನಿಗೆ ಪ್ರೀತಿಯಾಗಬೇಕೆಂದು ಇಚ್ಛಿಸುತ್ತಾನೆ ಹಾಗೆ ಇದ್ದರೇನೇ ಹಿಂದೆ ಹೇಳಿದ ಭಗವದ್ವಿಷಯಕ ಕರ್ಮಕ್ಕೆ ಯೋಗ್ಯನಾಗುತ್ತಾನೆ (೪) ಜೇನಾಗಿ ಜ್ಞಾನವಿಲ್ಲದವನ ಧ್ಯಾನಕ್ಕಿಂತ ಜ್ಞಾನವೇ ಶ್ರೇಷ್ಠವು ಜ್ಞಾನಕ್ಕಿಂತ ಧ್ಯಾನವು ಶ್ರೇಷ್ಠವು ಇದಕಾರಣ ಫಲೇಚ್ಛೆಯನ್ನು ಬಿಡಬೇಕೆಂದು ಹೇಳಿದ್ರಿಂದ ಸಕಾಮಧ್ಯಾನಕ್ಕಿಂತ ಫಲೇಚ್ಛೆಯನ್ನು ಬಿಟ್ಟು ತಿಳಿದು ಮಾಡುವ ಧ್ಯಾನವು ಶ್ರೇಷ್ಠವು ಫಲತ್ಯಾಗಮಾಡಿ ಧ್ಯಾನದಿಂದ ಕೂಡಿದ ಜ್ಞಾನದಿಂದ ಹುಟ್ಟಿದ ಅಪರೋಕ್ಷಜ್ಞಾನದಿಂದ ಮೋಕ್ಷವು ಆಗುವುದು (ತ್ಯಾಗದ್ದೆಶೆಯಿಂದ ಶಾಂತಿಯು ಫಲವೆಂದು ಹೇಳಿದ್ರಿಂದ ಮೋಕ್ಷವು ಫಲವೆಂದು ಹೇಳಿದ್ದು ಹೇಗೆ? ಎಂದರೆ—) ಶಾಂತಿಃ= ಮೋಕ್ಷವು ॥ ೧೨ ॥

ಪೀ—ಯೇ ತು ಸರ್ವಾಣಿ ಕರ್ಮಾಣಿ ಎಂದು ಹೇಳಿದುದನ್ನು ವಿವರಿಸುತ್ತಾರೆ—

ಗೀ ॥ ಅದ್ವೇಷ್ಟಾ ಸರ್ವದುಃಖಾನಾಂ ಮೈತ್ರಃ ಕರುಣ ಏವ ಚ ।
ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ ॥ ೧೩ ॥
ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ ।
ಮಯ್ಯರ್ಪಿತಮನೋಬುದ್ಧಿರ್ಯೋ ಮೇ ಭಕ್ತಃ ಸ ಮೇ ಪ್ರಿಯಃ॥೧೪॥

ಅ ॥ ಯಃ= ಯಾವನು, ಸರ್ವಭೂತಾನಾಂ= ಸಮಸ್ತ ಪ್ರಾಣಿಗಳಿಗೂ ಅದ್ವೇಷ್ಟಾ= ಅನಿಷ್ಟವನ್ನು ಮಾಡದಿರುವವನೋ, ಮೈತ್ರಃ= ದುಃಖವುಂಟಾಗುವ ಕಾಲದಲ್ಲಿ ಅದರ ಕಾರಣವನ್ನು ತಿಳಿಸಿ ದುಃಖದಿಂದ ರಕ್ಷಿಸುವವನೋ ಕರುಣಃ= ಕೃಪೆಯುಳ್ಳವನೋ, ನಿರ್ಮಮಃ= ಈ ವಸ್ತುವು ನನ್ನದೆಂದು ವಸ್ತುಗಳಲ್ಲಿ ಸ್ವಾತಂತ್ರ್ಯಾಭಿಮಾನವನ್ನು ತೊರೆದವನೋ, ನಿರಹಂಕಾರಃ= ತನ್ನಲ್ಲಿಲ್ಲದಿರುವ ಗುಣಗಳು ತನ್ನಲ್ಲಿ ಇವೆ, ಎಂಬುವ ಅಭಿಮಾನ ಇಲ್ಲದವನೋ, ಸಮದುಃಖಸುಖಃ= ದುಃಖವು ಹೇಗೆ ಬಿಡಲರ್ಹವೋ ಹಾಗೆಯೇ ಸ್ಪರ್ಶಂದನ ವನಿತಾದಿ ವಿಷಯಗಳಿದುಂಟಾಗುವ ಸುಖವೂ ಅತ್ಯಲ್ಪವಾಗಿರುವುದರಿಂದ ಹೇಯವೇ ಎಂದು ತಿಳಿದುಕೊಂಡವನೋ, ಕ್ಷಮೀ= ಎಲ್ಲವನ್ನೂ ಸಹಿಸಿಕೊಳ್ಳುವವನೋ, ಸತತಂ= ನಿರಂತರದಲ್ಲಿಯೂ, ಸಂತುಷ್ಟಃ= ಅಲಂಬುದ್ಧಿಯುಳ್ಳವನೋ, ಯೋಗೀ= ಕರ್ಮ ಧ್ಯಾನರೂಪಗಳಾದ ಜ್ಞಾನೋಪಾಯಗಳುಳ್ಳವನೋ, ಯತಾತ್ಮಾ= ಮನಸ್ಸನ್ನು ವಿಷಯಗಳಲ್ಲಿ ಹೋಗದಿದ್ದಂತೆ ಮಾಡಿಕೊಂಡವನೋ, ದೃಢನಿಶ್ಚಯಃ= ಶ್ರೀವಿಷ್ಣುವು ಸರ್ವೋತ್ತಮನೆಂಬುವ ಜ್ಞಾನದಲ್ಲಿ ಅಸ್ಪ್ರಾಮಾಣ್ಯ ಸಂದೇಹವಿಲ್ಲದೆ ಶ್ರೀವಿಷ್ಣುವೇ ಸರ್ವೋತ್ತಮನೆಂಬುವ ತತ್ವನಿಶ್ಚಯವುಳ್ಳವನೋ, ಮಯಿ= ನನ್ನಲ್ಲಿಯೇ, ಅರ್ಪಿತ ಮನೋಬುದ್ಧಿಃ= ಮನಸ್ಸನ್ನು ಬುದ್ಧಿಯನ್ನು ಸಂಪೂರ್ಣ ಇಟ್ಟವನೋ, ಮದ್ಭಕ್ತಃ= ನನ್ನಲ್ಲಿಯೇ ಭಕ್ತಿಯನ್ನು ಮಾಡಿಕೊಂಡಿರುವವನೋ, ಸಃ= ಅತನು, ಮೇ= ನನಗೆ, ಪ್ರಿಯಃ= ಪ್ರೀತಿಪಾತ್ರನು ॥ ೧೩, ೧೪ ॥

ಗೀ ॥ ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ ।
ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಃ ಸ ಚ ಮೇ ಪ್ರಿಯಃ॥
॥ ೧೫ ॥

ಅ ॥ ಲೋಕಃ= ಜನರು, ಯಸ್ಮಾತ್= ಯಾರಿಂದ, ನೋದ್ವಿಜತೇ= ಭಯಪಡುವುದಿಲ್ಲವೋ, (ಯಾರು ಜನರಿಗೆ ಭಯಕಾರಣನಾಗುವುದಿಲ್ಲವೋ,) ಯಶ್ಚ= ಯಾವನು, (ಸರ್ವವೂ ಪರಮಾತ್ಮನ ಅಧೀ

ನವೆಂದು ತಿಳಿದುಕೊಂಡು) ಲೋಕಾತ್ = ಜನರಿಂದ ನೋದ್ವಿಜತೇ = ಭಯಪಡುವುದಿಲ್ಲವೋ, ಯಃ = ಯಾವಾತನು, ಹರ್ಷಾಮರ್ಷಭಯೋದ್ವೇಗೈಃ ಹರ್ಷ = ಮದದೆಶೆಯಿಂದ ಅಧರ್ಮದಲ್ಲಿ ಮನಸ್ಸಿನ ಪ್ರವೃತ್ತಿಯು, ಅಮರ್ಷ = ಕೋಪವು, ಭಯ = ಹೆದರುವಿಕೆ, ಉದ್ವೇಗ = ಮನಸ್ಸಿನಲ್ಲಿರತಕ್ಕ ಕಂಪವಿಶೇಷವೂ ಇವುಗಳಿಂದ, ಮುಕ್ತಃ = ಬಿಡಲ್ಪಟ್ಟಿರುವನೋ, ಸಃ = ಅಂತಹ ಭಕ್ತನು, ಮೇ = ನನಗೆ, ಪ್ರಿಯಃ = ಪ್ರೀತಿಪಾತ್ರನು. ॥ ೧೫ ॥

ಹೀ — ಜ್ಞಾನವು (ಶ್ರವಣ ಮನನಗಳಿಂದುಂಟಾಗತಕ್ಕ ತತ್ವನಿರ್ಣಯವು) ಶಾಸ್ತ್ರಾಭ್ಯಾಸಕ್ಕೆ ಕಾರಣವು ಆದಕಾರಣ ಜ್ಞಾನವು ಅಭ್ಯಾಸಕ್ಕಿಂತ ಶ್ರೇಷ್ಠವು ಹೇಗೆ ಎಂದರೆ—

ಭಾ ॥ (೧) ಅಜ್ಞಾನಪೂರ್ವಾದಭ್ಯಾಸಾಜ್ಜ್ಞಾನಮೇವ ವಿಶಿಷ್ಯತೇ । ಜ್ಞಾನಮಾತ್ರಾತ್ಸ-ಜ್ಞಾನಂ ಧ್ಯಾನಂ ॥ (೨) ತಥಾ ಚ ಸಾಮವೇದೇ ಅನಭಿಮ್ಲಾನಶಾಖಾಯಾಂ । ಅಧಿಕಂ ಕೇವಲಾಭ್ಯಾಸಾಜ್ಜ್ಞಾನಂ ತತ್ಸಹಿತಂ ತತಃ । ಧ್ಯಾನಂ ತತಶ್ಚಾಪರೋಕ್ಷ್ಯಂ ತತಃ ಶಾಂತಿರ್ಭವಿಷ್ಯತೀತಿ ॥ (೩) ಧ್ಯಾನಾತ್ಕರ್ಮಫಲತ್ಯಾಗ ಇತಿ ಸ್ತುತಿಃ । ಅನ್ಯಥಾ ಕಥಮಸಮರ್ಥೋಽಸೀತ್ಯುಚ್ಯೇತ ॥ (೪) ತಯೋಸ್ತು ಕರ್ಮಸನ್ನ್ಯಾಸಾತ್ಕರ್ಮ-ಯೋಗೋ ವಿಶಿಷ್ಯತ ಇತಿ ಚೋಕ್ತಂ ॥ ೧ ॥

ಅ ॥ (೧) ಧ್ಯಾನಪ್ರಕಾರವನ್ನು ತಿಳಿಯದೆ ಮಾಡಿದ ಧ್ಯಾನಕ್ಕಿಂತ ಕೇವಲ ಧ್ಯಾನಪ್ರಕಾರ ಜ್ಞಾನವೇ ಶ್ರೇಷ್ಠವು ಕೇವಲ ಜ್ಞಾನಮಾತ್ರಕ್ಕಿಂತ ಜ್ಞಾನಸಹಿತವಾದ ಧ್ಯಾನವು ಶ್ರೇಷ್ಠವು (೨) (ಈ ಅರ್ಥವನ್ನು ಶ್ರುತಿಯಿಂದಲೂ ದೃಢೀಕರಿಸುತ್ತಾರೆ—) ಇದೇ ಅಭಿಪ್ರಾಯವನ್ನು ಸಾಮವೇದದಲ್ಲಿ ಅನಭಿಮ್ಲಾನ ಶಾಖೆಯಲ್ಲಿ ಹೇಳಿದೆ ಅಜ್ಞಾನಪೂರ್ವಕವಾದ ಧ್ಯಾನವನ್ನು ಸಂಪಾದಿಸಲಿಕ್ಕೆ ಉಪಯುಕ್ತವಾದ ಅಭ್ಯಾಸಕ್ಕಿಂತಲೂ ಧ್ಯಾನಪ್ರಕಾರ ಜ್ಞಾನವು ಶ್ರೇಷ್ಠವು ಇಂತಹ ಕೇವಲ ಜ್ಞಾನದಿಂದ ಜ್ಞಾನಸಹಿತವಾದ ಧ್ಯಾನವು ಶ್ರೇಷ್ಠವು ಧ್ಯಾನವಿಲ್ಲದ ಕೇವಲ ಜ್ಞಾನಕ್ಕಿಂತ, ಜ್ಞಾನಪೂರ್ವಕ ಧ್ಯಾನವು ಶ್ರೇಷ್ಠವು ನಿಷ್ಕಾಮಧ್ಯಾನಮಾತ್ರಕ್ಕಿಂತಲೂ ಅಪರೋಕ್ಷ ಜ್ಞಾನವು ಶ್ರೇಷ್ಠವು ಆ ಮೇಲೆ ಅದರಿಂದ ಮೋಕ್ಷವು ಲಭಿಸುವುದು, ಎಂದು ಹೇಳಿದೆ (೩) (ಧ್ಯಾನದ್ವೆಶೆಯಿಂದ ಕರ್ಮಫಲತ್ಯಾಗವು ಶ್ರೇಷ್ಠವೆಂಬುವ ಅನ್ಯಥಾ ಪ್ರತೀತಿಯನ್ನು ಹೋಗಲಾಡಿಸುವುದಕ್ಕಾಗಿ ವ್ಯಾಖ್ಯಾನಮಾಡುತ್ತಾರೆ—) ಧ್ಯಾನದೆಶೆಯಿಂದ ಕರ್ಮಫಲತ್ಯಾಗವು ಶ್ರೇಷ್ಠವೆಂಬುದು ಸ್ತುತಿಯು (ಅಂದರೆ ತ್ಯಾಗವು ಪ್ರಶಸ್ತವೆಂಬುವಲ್ಲಿಯೇ ತಾತ್ಪರ್ಯವು ಯಥಾಶ್ರುತಾರ್ಥದಲ್ಲಿ ತಾತ್ಪರ್ಯವಿಲ್ಲ ಏಕೆಂದರೆ—) ಹೀಗೆ ಆಲ್ಲವಾದರೆ **ಅಥೈತದಪ್ಯಶಕ್ತೋಽಸಿ ಕರ್ತುಂ** ಎಂದು ಧ್ಯಾನಕ್ಕಿಂತಲೂ ಅತ್ಯಂತ ನೀಚವಾದ ಕರ್ಮಯೋಗದಲ್ಲಿಯೂ ಅಶಕ್ತನಾದವನಿಗೆ ಕರ್ಮಫಲತ್ಯಾಗಕ್ಕೆ ಧ್ಯಾನದ್ವೆಶೆಯಿಂದ ಅಧಿಕ್ಯವಿದ್ದರೆ ಕರ್ಮಫಲತ್ಯಾಗವನ್ನು ಉಪದೇಶಿಸಿದ್ದು ಅಯುಕ್ತವಾಗುವುದು (ಅಂತೂ ಧ್ಯಾನದಿಂದಲೂ ನೀಚವಾದ ಕರ್ಮಯೋಗದಿಂದಲೂ ಕಡಿಮೆಯಾದ ಕರ್ಮಫಲತ್ಯಾಗವು ಧ್ಯಾನಕ್ಕಿಂತ ಶ್ರೇಷ್ಠವಾಗಲಾರದು) (೪) ಕಾಮಾದಿ ವರ್ಜನರೂಪವಾದ ಸನ್ಯಾಸ, ಭಗವಂತನಿಗೆ ಅರ್ಪಿತವಾಗಲಿ, ಎಂಬುವ ಬುದ್ಧಿಯಿಂದ ಕರ್ಮಾನುಷ್ಠಾನರೂಪವಾದ ಕರ್ಮಯೋಗ ಇವುಗಳ ಮಧ್ಯದಲ್ಲಿ ಆದರೂ ಕರ್ಮಫಲದಲ್ಲಿ ಅನುರಾಗಪರಿತ್ಯಾಗ ದೆಶೆಯಿಂದ ಧ್ಯಾನದಿಂದ ನಿಕೃಷ್ಟವಾದ ಕರ್ಮಯೋಗವೂ ಕೂಡ ಶ್ರೇಷ್ಠವೆಂದು ಹೇಳಿದ್ದಾರೆ (ಹೀಗಿರಲು ಧ್ಯಾನಯೋಗವು ಕರ್ಮಫಲತ್ಯಾಗದಿಂದ ಶ್ರೇಷ್ಠವೆಂದು ಸುತರಾಂ ಸಿದ್ಧವು ಎಂದೂ ಹೇಳಿದೆ.) ॥ ೧ ॥

ಭಾ ॥ (೧) ಸರ್ವಾಧಿಕಂ ಧ್ಯಾನಮುದಾಹರಂತಿ ಧ್ಯಾನಾಧಿಕೇ ಜ್ಞಾನಭಕ್ತೀ ಪರಾತ್ಮನ್ । ಕರ್ಮಾಫಲಾಕಾಂಕ್ಷಮಥೋ ವಿರಾಗಸ್ತ್ಯಾಗಶ್ಚ ನ ಧ್ಯಾನಕಲಾಫಲಾರ್ಹ ಇತಿ ಕಾ-ಷಾಯಣಶಾಖಾಯಾಂ ॥ (೨) ವಾಕ್ಯಸಾಮ್ಯೇಽಪ್ಯಸಮರ್ಥವಿಷಯತ್ವೋಕ್ತೇ-ಸ್ತಾತ್ಪರ್ಯಾಭಾವ ಇತರತ್ರ ಪ್ರತೀಯತೇ ॥ (೩) ಧ್ಯಾನಾದಿಪ್ರಾಪ್ತಿಕಾರಣತ್ವಾಚ್ಚ ತ್ಯಾಗಸ್ತುತಿರ್ಯುಕ್ತಾ ॥ (೪) ಕೇವಲಧ್ಯಾನಾತ್ಫಲತ್ಯಾಗಯುಕ್ತಂ ಧ್ಯಾನಮುಧಿಕಂ । ಧ್ಯಾನಯುಕ್ತಸ್ಯಾಗ ಏವಾತ್ರೋಕ್ತಃ । ಅನ್ಯಥಾ ಕಥಂ ತ್ಯಾಗಾಚ್ಛಾಂತಿರನಂತರಮಿ-ತ್ಯುಚ್ಯತೇ । ಕಥಂ ಚ ಧ್ಯಾನಾದಾಧಿಕ್ಯಂ ॥ (೫) ತಥಾ ಚ ಗೌಪವನಶಾಖಾಯಾಂ । ಧ್ಯಾನಾತ್ತು ಕೇವಲಾತ್ಯಾಗಯುಕ್ತಂ ತದಧಿಕಂ ಭವೇದಿತಿ । ನಹಿ ತ್ಯಾಗಮಾತ್ರಾ-ನಂತರಮೇವ ಮುಕ್ತಿರ್ಭವತಿ । ಭವತಿ ಚ ಧ್ಯಾನಯುಕ್ತಾತ್ । ಕೇವಲತ್ಯಾಗಸ್ತುತಿ-ರೇವಮಪಿ ಭವತಿ । ಯಥಾಽನೇನ ಯುಕ್ತೋ ಜೇತಾ ನಾನ್ಯಧೇತ್ಯುಕ್ತೇ॥೧೨–೧೫॥

ಅ॥ (೧) ಧ್ಯಾನವನ್ನು ಕರ್ಮಾದಿ ಎಲ್ಲದಕ್ಕಿಂತಲೂ ಶ್ರೇಷ್ಠವನ್ನಾಗಿಯೇ ಹೇಳುತ್ತಾರೆ ಪರಮಾತ್ಮನ ವಿಷಯದಲ್ಲಿ ಜ್ಞಾನಭಕ್ತಿಗಳು ಧ್ಯಾನಕ್ಕಿಂತಲೂ ಶ್ರೇಷ್ಠಗಳು ಫಲವನ್ನವೇಕ್ಷಿಸದೆ ಕರ್ಮಮಾಡುವುದು, ವಿರಾಗವು (ಅಂದರೆ ವಿಷಯಗಳಲ್ಲಿ ಶುಭಗಳೆಂದು ಆರೋಪವಿಲ್ಲದಿರುವುದು,) ಕರ್ಮಫಲತ್ಯಾಗವು ಇವುಗಳೆಲ್ಲವೂ ಜ್ಞಾನದ ಏಕ ದೇಶದ ಫಲವನ್ನು ಸಹ ಹೊಂದತಕ್ಕುದಲ್ಲ, ಎಂದು ಕಾಷಾಯಣಶಾಖೆಯಲ್ಲಿ ಹೇಳಿದೆ (ಆದಕಾರಣ ಧ್ಯಾನಕ್ಕಿಂತ ಕರ್ಮಫಲತ್ಯಾಗವು ಶ್ರೇಷ್ಠವಾಗಲಾರದು) (೨) (ತಯೋಸ್ತು **ಸರ್ವಾಧಿಕಂ** ಎಂಬುವ ವಾಕ್ಯದಂತೆ **ಧ್ಯಾನಾತ್** ಎಂಬುವ ವಾಕ್ಯವೂ ಪ್ರಮಾಣವಾಕ್ಯವಾಗಿರುವುದರಿಂದ' ಅವುಗಳ ವಿರೋಧದಿಂದ **ಧ್ಯಾನಾತ್** ಎಂಬುವ ವಾಕ್ಯಕ್ಕೆ ಸ್ವಾರ್ಥದಲ್ಲಿ ತಾತ್ಪರ್ಯವಿಲ್ಲವೆಂಬುದು ಹೇಗೆ ಎಂದರೆ—) ಪ್ರಮಾಣವಾಕ್ಯವಾಗಿರುವುದರಿಂದ ಅವುಗಳಿಗೆ ಸಾಮ್ಯವಿದ್ದರೂ **ತಯೋಸ್ತು** ಇತ್ಯಾದಿ ವಾಕ್ಯಗಳಿಗೆ ಉಪಪತ್ತಿ ಸಾಹಿತ್ಯವಿದ್ದುದರಿಂದ ಪ್ರಾಬಲ್ಯವಿದ್ದ **ಪ್ರಯುಕ್ತ ಧ್ಯಾನಾತ್** ಎಂಬುವ ವಾಕ್ಯಕ್ಕೆ ಅನುಪಪನ್ನಾರ್ಥವಿಷಯತ್ವವು ಇರುವುದರಿಂದ **ಧ್ಯಾನಾತ್** ಎಂಬುವ ವಾಕ್ಯಕ್ಕೆ ಆಪಾತತಃ ತೋರುವ ಅರ್ಥದಲ್ಲಿ ತಾತ್ಪರ್ಯವಿಲ್ಲವೆಂದು ನಿಶ್ಚಯವಾಗುತ್ತದೆ (೩) (ಇದೇ ವಿಷಯದಲ್ಲಿ ಬೇರೆ ಯುಕ್ತಿಯನ್ನು ಹೇಳುತ್ತಾರೆ—) ಧ್ಯಾನಾದಿಗಳ ಪ್ರಾಪ್ತಿಗೆ ಕಾರಣವಾಗಿರುವುದರಿಂದಲೂ ತ್ಯಾಗಸ್ತುತಿಯು ಕೂಡುತ್ತದೆ (ಅಂದರೆ ಧ್ಯಾನ, ಜ್ಞಾನ ನಿವೃತ್ತಕರ್ಮಾನುಷ್ಠಾನ ಇವುಗಳು ಪ್ರಾಪ್ತಿಯಲ್ಲಿ **ಪರೀಕ್ಷ್ಯ ಲೋಕಾನ್** ಇತ್ಯಾದಿಗಳಲ್ಲಿ ಫಲತ್ಯಾಗವು ಕಾರಣವೆಂದು ಹೇಳಿದ್ರಿಂದ ತ್ಯಾಗಸ್ತುತಿಯು ಕೂಡುತ್ತದೆ ತ್ಯಾಗಸಾಧ್ಯವಾದ ಧ್ಯಾನಾದಿರೂಪ ಫಲಕ್ಕಿಂತ ಅದಕ್ಕೆ ಸಾಧನವಾದ ಫಲತ್ಯಾಗವು, ಅದರಿಂದ ಶ್ರೇಷ್ಠವಾಗಲಿಕ್ಕಿಲ್ಲ ಆದುದರಿಂದಲೂ ಇದು ಸ್ತುತಿಯೆಂದೇ ಹೇಳಬೇಕು (೪) (ಬೇರೆ ಪ್ರಕಾರದಿಂದಲೂ ಅರ್ಥ ಹೇಳುತ್ತಾರೆ—) ತ್ಯಾಗವಿಲ್ಲದಿರುವ ಕೇವಲ ಧ್ಯಾನಕ್ಕಿಂತ ಫಲತ್ಯಾಗದಿಂದ ಕೂಡಿದ ಧ್ಯಾನವು ಶ್ರೇಷ್ಠವು. ಧ್ಯಾನಯುಕ್ತವಾದ ತ್ಯಾಗವೇ ಧ್ಯಾನಾತ್ ಎಂಬುವಲ್ಲಿ ಹೇಳಲ್ಪಟ್ಟದ್ದು ಧ್ಯಾನಬಿಟ್ಟು ಕೇವಲ ತ್ಯಾಗಮಾತ್ರವನ್ನಂಗೀಕರಿಸಿದರೆ **ತ್ಯಾಗಾತ್ ಶಾಂತಿರನಂತರಂ** ಎಂದು ಹೇಳಿದ್ದು ಹೇಗೆ ಕೂಡತ್ತದೆ ಮತ್ತು ಕೇವಲ ತ್ಯಾಗವನ್ನು ಒಡಂಬಟ್ಟರೆ ಅದಕ್ಕೆ ಧ್ಯಾನಕ್ಕಿಂತ ಆಧಿಕ್ಯವೂ ಹೇಗೆ ಕೂಡುತ್ತದೆ (೫) ಈ ಅರ್ಥವನ್ನು ಗೌಪವನ ಶಾಖೆಯಲ್ಲಿಯೂ ಹೇಳಿದ್ದಾರೆ ಕೇವಲ ಧ್ಯಾನದಿಂದ ತ್ಯಾಗಯುಕ್ತವಾದ ಧ್ಯಾನವು ಅಧಿಕವಾಗುವುದು ತ್ಯಾಗಮಾತ್ರಾನಂತರದಲ್ಲಿಯೇ ಮುಕ್ತಿಯಾಗುವುದಿಲ್ಲ ಧ್ಯಾನಯುಕ್ತವಾದ ತ್ಯಾಗದಿಂದೆಯಿಂದ ಮುಕ್ತಿಯಾಗುತ್ತದೆ ಈ ಸಮರ್ಥನಾದ ಭೃತ್ಯನಿಂದ ಕೂಡಿಹೋದ ರಾಜನು ಶತ್ರುಗಳನ್ನು ಗೆಲ್ಲುತ್ತಾನೆ ಇಲ್ಲವಾದರೆ ಗೆಲ್ಲಲಾರನೆಂದು ಹೇಳಿದರೆ ರಾಜನ ಸಹಾಯಕ ಭೃತ್ಯನಿಗೂ ಹೇಗೆ ಸ್ತುತಿಯು ಲಭಿಸು

ಶ್ರದ್ಧೋ, ಹೀಗೆಯೇ ಧ್ಯಾನಕ್ಕೆ ಧ್ಯಾನಾಂತರದಿಂದ ಆಧಿಕ್ಯ ಬರುವುದರಲ್ಲಿ ಕಾರಣವಾದ ಕರ್ಮಫಲ ತ್ಯಾಗಕ್ಕೆ ಸ್ತುತಿಯೂ ಲಭಿಸುವುದು ॥ ೧೮ ॥ ॥ ೧೩—೧೫ ॥

ಗೀ॥ ಅನಪೇಕ್ಷಃ ಶುಚಿರ್ದಕ್ಷ ಉದಾಸೀನೋ ಗತವ್ಯಥಃ ।
ಸರ್ವಾರಂಭಪರಿತ್ಯಾಗೀ ಯೋ ಮದ್ಭಕ್ತಃ ಸ ಮೇ ಪ್ರಿಯಃ ॥ ೧೬ ॥

ಅ ॥ ಯಃ=ಯಾವಾತನು, ಅನಪೇಕ್ಷಃ=ಭಗವಂತನ ಪ್ರೀತಿಹೊರತು ಬೇರೆ ಯಾವ ಫಲದಲ್ಲಿಯೂ ಅಪೇಕ್ಷೆಯಿಲ್ಲದವನೋ, ಶುಚಿಃ=ಬಾಹ್ಯಾಂತರ ಶುದ್ಧಿಯುಳ್ಳವನೋ, ದಕ್ಷಃ=ಪರಮಾತ್ಮನಿಗೆ ಪ್ರೀತಿಕರ ಗಳಾದ ಕರ್ಮಗಳನ್ನು ಮಾಡುವುದರಲ್ಲಿ ಸಮರ್ಥನೋ, ಉದಾಸೀನಃ=ಮಾಡಲಹರ್ಹಗಳಾದ ಉಪಕಾರ ಅಪಕಾರಗಳನ್ನು ಪೇಕ್ಷಿಸುವವನೋ, ಗತವ್ಯಥಃ=ಪರರು ಮಾಡಿದ ಅಪಕಾರಗಳಿಂದ ಮನಸ್ಸಿನಲ್ಲಿ ಕ್ಲೇಶ ವನ್ನು ಹೊಂದದಿರುವವನೋ, ಸರ್ವಾರಂಭಪರಿತ್ಯಾಗೀ=ವಿಷ್ಣುವಿಗೆ ಪ್ರೀತಿಕರಗಳಾಗದ ಸಮಸ್ತ ಕರ್ಮ ಗಳನ್ನು ತ್ಯಜಿಸಿರುವವನೋ ಸಮಸ್ತ ಕರ್ಮಗಳ ಆರಂಭದಲ್ಲಿ ಅಭಿಮಾನವನ್ನು ತೊರೆದವನೋ, ಸಮಸ್ತ ಕರ್ಮ ಫಲವನ್ನು ಬಿಟ್ಟಿರುವನೋ, ಪರಮಾತ್ಮನಲ್ಲಿ ಸಮಸ್ತ ಕರ್ಮಗಳನ್ನು ಸಮರ್ಪಿಸುವವನೋ, ಮದ್ಭಕ್ತಃ=ನನ್ನಲ್ಲಿ ಭಕ್ತಿಯುಳ್ಳವನೋ, ಸಃ=ಆತನು, ಮೇ=ನನಗೆ, ಪ್ರಿಯಃ=ಪ್ರೀತಿಪಾತ್ರನು ॥ ೧೬ ॥

ಗೀ॥ ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ ।
ಶುಭಾಶುಭಪರಿತ್ಯಾಗೀ ಭಕ್ತಿಮಾನ್ಯಃ ಸ ಮೇ ಪ್ರಿಯಃ ॥ ೧೭ ॥

ಅ ॥ ಯಃ=ಯಾವಾತನು, ನ ಹೃಷ್ಯತಿ=ಒಂದು ಪದಾರ್ಥವು ಸಿಕ್ಕಿದೊಡನೆ ಸಂತೋಷವನ್ನು ಯಾವಾಗಲೂ ಹೊಂದುವುದಿಲ್ಲವೋ, ನ ದ್ವೇಷ್ಟಿ=ಒಂದು ವಸ್ತುವು ಸಿಗದಿದ್ದರೆ ಯಾವಾಗಲೂ ದ್ವೇಷಿಸು ವುದಿಲ್ಲವೋ, ನ ಶೋಚತಿ=ಯಾವಾಗಲೂ ದುಃಖಿಸುವುದಿಲ್ಲವೋ, ನ ಕಾಂಕ್ಷತಿ=ಯಾವಾಗಲೂ ಫಲ ವನ್ನು ಇಚ್ಛಿಸುವುದಿಲ್ಲವೋ, ಶುಭಾಶುಭಪರಿತ್ಯಾಗೀ=ಭಗವದ್ವಿಷಯಕ ಜ್ಞಾನ ಭಕ್ತಿ ವೈರಾಗ್ಯಾದಿಗಳಿಂದ ಇತರಗಳಾದ ಶುಭಗಳನ್ನು, ಎಲ್ಲಾ ಅಶುಭಗಳನ್ನು, ಬಿಟ್ಟಿರುವನೋ, ಭಕ್ತಿಮಾನ್=ನನ್ನಲ್ಲಿ ವಿಶೇಷ ವಾಗಿ ಭಕ್ತಿಯುಳ್ಳವನೋ, ಸಃ=ಆತನು, ಮೇ=ನನಗೆ ಪ್ರಿಯಃ=ಪ್ರಿಯನು ॥ ೧೭ ॥

ಗೀ॥ ಸಮಃ ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ ।
ಶೀತೋಷ್ಣಸುಖದುಃಖೇಷು ಸಮಃ ಸಂಗವಿವರ್ಜಿತಃ ॥ ೧೮ ॥
ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್ ।
ಅನಿಕೇತಃ ಸ್ಥಿರಮತಿರ್ಭಕ್ತಿಮಾನ್ಮೇ ಪ್ರಿಯೋ ನರಃ ॥ ೧೯ ॥

ಅ ॥ ಶತ್ರೌ ಚ=ಶತ್ರುವಿನಲ್ಲಿಯೂ ಮಿತ್ರೇ ಚ=ಗೆಳೆಯನಲ್ಲಿಯೂ, ಸಮಃ=ಉತ್ಸೇಕ ಅನುತ್ಸೇಕ ಗಳಿಲ್ಲದವನು, (ದ್ವೇಷಾತಿಶಯವಾಗಲೀ ಪ್ರೀತ್ಯತಿಶಯವಾಗಲೀ ಇಲ್ಲದಿರುವವನು.) ತಥಾ=ಹಾಗೆಯೇ, ಮಾನಾಪಮಾನಯೋಃ=ತನಗೆ ವಿಶೇಷವಾಗಿ ಮರ್ಯಾದೆಯು ಲಭಿಸಿದರೂ ಅವಮಾನವಾದರೂ, ಸಮಃ= ವಿಕಾರವಿಲ್ಲದವನು ಶೀತೋಷ್ಣಸುಖದುಃಖೇಷು=ಶೀತ ಉಷ್ಣಾದಿಗಳನ್ನು ಹೊಂದಿದರೂ, ಶೀತೋಷ್ಣಾದಿ ವಿಷಯಗಳಿಂದುಂಟಾಗುವ ಸುಖ ದುಃಖಗಳನ್ನು ಹೊಂದಿದರೂ, ಸಮಃ=ನೀಚೋಚ್ಚಭಾವವನ್ನು ಹೊಂದದೆ ನಿರ್ವಿಕಾರನಾಗಿ ಇರುವವನು, ಸಂಗವಿವರ್ಜಿತಃ=ಫಲಸ್ಪೃಹವನ್ನು ತೊರೆದವನು, ತುಲ್ಯ

ನೆಂದಾಸ್ತುತಿಃ = ಜನರು ತನ್ನನ್ನು ಸ್ತೋತ್ರಮಾಡಿದರೆ ಸಂತೋಷವನ್ನು, ನಿಂದಿಸಿದರೆ ದುಃಖವನ್ನು ಹೊಂದದೆ ಒಂದೇ ರೀತಿಯಾಗಿರುವವನು, ಮೌನೀ=ಪ್ರಯೋಜನವಿಲ್ಲದೆ ಮಾತನಾಡದಿರುವವನು, ಯೇನ ಕೇನಚಿತ್=ಭಗವಂತನ ಪ್ರೇರಣೆಯಿಂದ ಹೊಂದಿದ ಯಾವುದಾದರೊಂದು ವಸ್ತುವಿನಿಂದಲೂ, ಸಂತುಷ್ಟಃ= ಸಂತೋಷವನ್ನು ಹೊಂದಿದವನು, ಅನಿಕೇತಃ = ನಿಯತಸ್ಥಾನವಿಲ್ಲದವನು, ಅಥವಾ ಅ ಎನಿಸಿದ ಭಗವಂತನನ್ನು ಆಶ್ರಯಿಸಿದವನು, ಸ್ಥಿರಮತಿಃ = ಕುತರ್ಕಗಳಿಂದ ಕದಲದೆ ದೃಢವಾದ ಜ್ಞಾನವುಳ್ಳವನು, ಭಕ್ತಿಮಾನ್ = ಭಕ್ತಿಯುಳ್ಳವನು, ನರಃ = ಮನುಷ್ಯನು, ಮೇ = ನನಗೆ, ಪ್ರಿಯಃ = ಪ್ರೀತಿಪಾತ್ರನು ॥ ೧೮, ೧೯ ॥

ಪೀ — ಪುನರುಕ್ತಿದೋಷವನ್ನಾಶಂಕಿಸಿಕೊಂಡು ಪರಿಹರಿಸುತ್ತಾರೆ —

ಭಾ ॥ (೧) ಸರ್ವಾರಂಭಪರಿತ್ಯಾಗೀ ಶುಭಾಶುಭಪರಿತ್ಯಾಗೀತ್ಯಾದೇಃ ಸಾಮಾನ್ಯವಿಶೇಷ-ವ್ಯಾಖ್ಯಾನವ್ಯಾಖ್ಯೇಯಭಾವೇನಾಪುನರುಕ್ತಿಃ ॥ (೨) ಹರ್ಷಾದಿಭಿರ್ಯುಕ್ತ ಇತ್ಯುಕ್ತೇ ಕಾದಾಚಿತ್ಕಮಪಿ ಭವತೀತಿ ಯೋ ನ ಹೃಷ್ಯತೀತ್ಯಾದಿ ॥ (೩) ಉಪಚಾರಪರಿಹಾರಾರ್ಥಂ ಪೂರ್ವಂ ॥ (೪) ಅಧಿಕ್ಯಜ್ಞಾಪನಾರ್ಥಂ ಭಕ್ತ್ಯಭ್ಯಾಸಃ ॥ (೫) ಯೇ ತು ಸರ್ವಾಣಿ ಕರ್ಮಾಣೀತ್ಯಾದೇಃ ಪ್ರಪಂಚ ಏಷಃ ॥ ೧೬—೧೯ ॥

ಅ ॥ (೧) (1) **ಸರ್ವಾರಂಭಪರಿತ್ಯಾಗೀ, ಶುಭಾಶುಭಪರಿತ್ಯಾಗೀ** ಇತ್ಯಾದಿಗಳಲ್ಲಿ, ಮತ್ತು **ಅದ್ವೇಷ್ಟಾ ಸರ್ವಭೂತಾನಾಂ ಸಮಃ ಶತ್ರೌ ಚ ಮಿತ್ರೇ ಚ** ಇತ್ಯಾದಿಗಳಲ್ಲಿ ಸಾಮಾನ್ಯ ವಿಶೇಷ ಭಾವವು (2) **ಸಂತುಷ್ಟಃ ಸತತಂ ಸಂತುಷ್ಟೋ ಯೇನ ಕೇನಚಿತ್** ಮತ್ತು **ಕ್ಷಮಿಣಾ, ಸಮದುಃಖ ಸುಖಃ** ಇತ್ಯಾದಿಗಳಲ್ಲಿಯೂ ವ್ಯಾಖ್ಯಾನ ವ್ಯಾಖ್ಯೇಯಭಾವವು ಆದಕಾರಣ ಇಂತಹ ಸ್ಥಳಗಳಲ್ಲಿ ಪುನರುಕ್ತಿದೋಷವಿಲ್ಲ (೨) (**ಹರ್ಷಾಮರ್ಷಭಯೋದ್ವೇಗೈರ್ಯುಕ್ತಃ, ಯೋ ನ ಹೃಷ್ಯತಿ** ಎಂಬುವಲ್ಲಿ ಹಿಂದೆ ಹೇಳಿದ ಸಾಮಾನ್ಯ ವಿಶೇಷಭಾವವಾಗಲೀ ವ್ಯಾಖ್ಯಾನ ವ್ಯಾಖ್ಯೇಯ ಭಾವವಾಗಲೀ ಎರಡು ಪ್ರಕಾರಗಳು ಕೂಡುವುದಿಲ್ಲ. ಎಂದರೆ—) ಹರ್ಷಾದಿಗಳಿಂದ ಬಿಡಲ್ಪಟ್ಟಿದ್ದಾನ ಎಂದು ಹೇಳಿದರೆ (ಭೂತಕಾಲಿಕವಾದ **ಕ್ತ** ಪ್ರತ್ಯಯದಿಂದ) ಕಾಲಾಂತರದಲ್ಲಿ ಹರ್ಷಾದಿಗಳು ಇರಬಹುದೆಂದೇ ಶಂಕೆಯು ಬರುವುದು, ಅಂತಹ ಆಶಂಕೆಯು ಬರಬಾರದೆಂಬುವುದಕ್ಕಾಗಿ **ಯೋ ನ ಹೃಷ್ಯತಿ** ಎಂದು ಹೇಳಿದ್ದು ನಿತ್ಯದಲ್ಲಿಯೂ ಹರ್ಷವಿಲ್ಲವೆಂಬುವ ಅರ್ಥವು ಸಿಗುತ್ತದೆ ಇದರಿಂದ **ಮುಕ್ತಃ** ಎಂಬುವುದಕ್ಕೆ ನಿರಂತರದಲ್ಲಿಯೂ ಹರ್ಷಾದಿಗಳು ಇಲ್ಲದವನೆಂದು ಅರ್ಥವು ಸಿದ್ಧವಾಯ್ತು (೩) (ಹಾಗಾದರೆ **ಯೋ ನ ಹೃಷ್ಯತಿ** ಎಂಬುವುದೇ ಸಾಕು **ಹರ್ಷಾಮರ್ಷಭಯೋದ್ವೇಗೈಃ ಮುಕ್ತಃ** ಎಂಬುವುದು ಏತಕ್ಕೆ ಎಂದರೆ—) **ಯೋ ನ ಹೃಷ್ಯತಿ** ಎಂಬುವುದರಿಂದಲೇ ಸರ್ವ ಕಾಲದಲ್ಲಿಯೂ ಹರ್ಷವಿಲ್ಲವೆಂಬುವ ಅರ್ಥವು ಸಿದ್ಧವಾಗುವುದಾದರೂ ಪುನಃ **ಹರ್ಷಾದಿಭಿರ್ಮುಕ್ತಃ** ಎಂದು ಹೇಳಿದ್ದು **ಯೋ ನ ಹೃಷ್ಯತಿ** ಎಂಬುದು ಔಪಚಾರಿಕವಲ್ಲ, ಮತ್ತೆ ಸರ್ವ ಕಾಲದಲ್ಲಿಯೂ ಹರ್ಷಪ್ರವೃತ್ತಿ (ಮದದಿಂದ ಅಥರ್ವದಲ್ಲಿ ಮನಃ ಪ್ರವೃತ್ತಿಯು) ಇಲ್ಲವೆಂಬುವ ಅರ್ಥದಲ್ಲಿ ಮುಖ್ಯ ತಾತ್ಪರ್ಯವಿದೆ ಎಂದು ತಿಳಿಸುವುದಕ್ಕಾಗಿ (೪) (**ಯೋ ಮದ್ಭಕ್ತಃ** ಎಂದು ಭಕ್ತಿಯನ್ನು ಮತ್ತು ಮತ್ತು ಹೇಳಿದ್ದಕ್ಕೆ ಪ್ರಯೋಜನವನ್ನು ಹೇಳುತ್ತಾರೆ–) ಅದ್ವೇಷ್ಟಾ ಇತ್ಯಾದಿಗಳಿಂದ ಹೇಳಲ್ಪಟ್ಟ ಸಮಸ್ತ ಧರ್ಮಗಳಲ್ಲಿ ಭಕ್ತಿಗೆ ಶ್ರೇಷ್ಠತ್ವವನ್ನು ತಿಳಿಸುವುದಕ್ಕಾಗಿ ಭಕ್ತಿಯು ಅವಶ್ಯಕವೆಂದು ಅನೇಕಸಲ ಹೇಳಿದ್ದು (೫) (**ಅದ್ವೇಷ್ಟಾ** ಇತ್ಯಾದಿಗಳಿಗೆ ಸಂಗತಿಯನ್ನು ತೋರಿಸುತ್ತಾರೆ—) **ಅದ್ವೇಷ್ಟಾ** ಇತ್ಯಾದಿಗಳು **ಯೇ ತು ಸರ್ವಾಣಿ ಕರ್ಮಾಣಿ** ಇತ್ಯಾದಿಗಳದ್ದು ವಿಸ್ತಾರವು (ಅಂದರೆ **ಯೇ ತು**

ಎಂಬುವ ವಾಕ್ಯದಲ್ಲಿ ಉಪಾಸಕರಿಗೆ ಹೇಳಿದ ವೈತ್ರೀ ಮೊದಲಾದ ಎಲ್ಲಾ ಧರ್ಮಗಳನ್ನು ಸ್ಪಷ್ಟವಾಗಿ ಹೇಳಿದಂತೆ ಆಯಿತು) ॥ ೧೬—೧೯ ॥

ಪೀ—ಹಿಂದೆ ಹೇಳಿದ ಎಲ್ಲಾ ಧರ್ಮಗಳನ್ನು ಒಟ್ಟುಕೂಡಿಸಿ ಹೇಳುತ್ತಾರೆ--

ಗೀ ॥ ಯೇ ತು ಧರ್ಮ್ಯಾಮೃತಮಿದಂ ಯಥೋಕ್ತಂ ಪರ್ಯುಪಾಸತೇ ।
ಶ್ರದ್ದಧಾನಾ ಮತ್ಪರಮಾ ಭಕ್ತಾಸ್ತೇಽತೀವ ಮೇ ಪ್ರಿಯಾಃ ॥ ೨೦ ॥

ಅ ॥ ಯೇ ತು = ಯಾರಾದರೂ, ಧರ್ಮ್ಯಾಮೃತಂ = ಸರ್ವಧಾರಕನಾದ ಶ್ರೀವಿಷ್ಣುವಿನ ಉಪಾಸನಕ್ಕೆ ಅಂಗವಾಗಿರುವುದರಿಂದ ಧರ್ಮಸಾಧನವೂ, ಮೋಕ್ಷಸಾಧನವೂ ಆದ, ಯಥೋಕ್ತಂ = ಅದ್ವೇಷ್ಟಾ ಇತ್ಯಾದಿಗಳಿಂದ ಹೇಳಲ್ಪಟ್ಟ, ದ್ವೇಷಪರಿತ್ಯಾಗ ಮೊದಲಾದ, ಇದಂ = ಪ್ರೀತಿಸಾಧನವಾದುದೆಲ್ಲವನ್ನು, ಶ್ರದ್ಧಧಾನಾಃ = ಆಸ್ತಿಕ್ಯಬುದ್ಧಿಯುಳ್ಳವರಾಗಿ, ಮತ್ಪರಮಾಃ = ನಾನೇ (ಶ್ರೀಕೃಷ್ಣನೇ) ಸರ್ವೋತ್ತಮನೆಂದು ತಿಳಿದುಕೊಂಡವರಾಗಿ, ಪರ್ಯುಪಾಸತೇ = ಚೆನ್ನಾಗಿ ಉಪಾಸನೆ ಮಾಡುತ್ತಾರೋ, ತೇ ಭಕ್ತಾಃ = ಅಂತಹ ಭಕ್ತರಾದವರು, ಮೇ = ನನಗೆ, ಅತೀವ ಪ್ರಿಯಾಃ = ಅತ್ಯಂತವಾಗಿ ಪ್ರೀತಿಗೆ ಪಾತ್ರರಾದವರು ॥ ೨೦ ॥

ಗೀ ॥ ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಭಕ್ತಿಯೋಗೋ ನಾಮ ದ್ವಾದಶೋಽಧ್ಯಾಯಃ ॥ ೧೨ ॥

ಅ ॥ ಹೀಗೆ ಶ್ರೀಮದ್ಭಗವದ್ಗೀತೆಯಲ್ಲಿ ಬ್ರಹ್ಮವಿದ್ಯೆಯಲ್ಲಿ ಯೋಗಶಾಸ್ತ್ರದಲ್ಲಿ ಶ್ರೀಕೃಷ್ಣಾರ್ಜುನರ ಸಂವಾದದಲ್ಲಿ ಭಕ್ತಿಯೋಗವೆಂಬ ಹದಿನೆರಡನೇ ಅಧ್ಯಾಯವು ಮುಗಿಯಿತು ॥ ೧೨ ॥

ಭಾ ॥ (೧) ಪಿಂಡೀಕೃತ್ಯೋಪಸಂಹರತಿ । ಯೇ ತು ಧರ್ಮ್ಯಾಮೃತಮಿತಿ ॥ (೨) ಧರ್ಮೋ ವಿಷ್ಣುಸ್ತದ್ವಿಷಯಂ ಧರ್ಮ್ಯಂ । ಧರ್ಮ್ಯಂ ಮೃತ್ಯಾದಿಸಂಸಾರನಾಶಕಂ ಚೇತಿ ಧರ್ಮ್ಯಾಮೃತಂ ॥ (೩) ಶ್ರದ್ದಾಸ್ತಿಕ್ಯಂ । ಶ್ರನ್ನಾಮಾಸ್ತಿಕ್ಯಮುಚ್ಯತ ಇತ್ಯಭಿಧಾನಾತ್ । ತದ್ದಧಾನಾಃ ಶ್ರದ್ದಧಾನಾಃ ॥ ೨೦ ॥

ಅ ॥ (೧) ಯೇ ತು ಧರ್ಮ್ಯಾಮೃತಂ ಎಂಬುವುದರಿಂದ ಕ್ರೋಡೀಕರಿಸಿಕೊಂಡು ಹೇಳುತ್ತಾರೆ (೨) (ಧರ್ಮ್ಯಾಮೃತಂ ಎಂಬುವಲ್ಲಿರುವ) ಧರ್ಮ್ಯ ಶಬ್ದದ ಅರ್ಥವನ್ನು ಹೇಳುತ್ತಾರೆ-) ಸರ್ವಧಾರಕನಾದುದರಿಂದ ಧರ್ಮಃ = ಅಂದರೆ ವಿಷ್ಣುವು ವಿಷ್ಣುವಿಷಯಕವಾದುದು ಅಂದರೆ ವಿಷ್ಣುವಿನ ಉಪಾಸನಕ್ಕೆ ಅಂಗವಾದುದು, ಧರ್ಮ್ಯವು. ಮರಣ ಮೊದಲಾದ ಸಂಸಾರವನ್ನು ನಾಶಗೊಳಿಸುವುದು ಅಮೃತವು ಹೀಗೆ ಧರ್ಮ್ಯಾಮೃತ ಶಬ್ದದ ಅರ್ಥವು. (೩) (ಶ್ರದ್ಧಧಾನಾಃ ಎಂಬುವ ಶಬ್ದದ ಅರ್ಥವನ್ನು ಹೇಳುತ್ತಾರೆ -) ಶ್ರತ್ ಅಂದರೆ ಆಸ್ತಿಕ್ಯಬುದ್ಧಿಯು. ಶ್ರತ್ ಎಂದರೆ ಆಸ್ತಿಕ್ಯವೆನಿಸುತ್ತದೆ, ಎಂದು ಅಭಿಧಾನವು ಅಂತಹ ಆಸ್ತಿಕ್ಯವನ್ನು ಧರಿಸಿದವರು ಶ್ರದ್ಧಧಾನಾಃ ಎನಿಸಿಕೊಳ್ಳುತ್ತಾರೆ ॥ ೨೦ ॥

ಭಾ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ಭಾಷ್ಯೇ ದ್ವಾದಶೋಽಧ್ಯಾಯಃ ॥ ೧೨ ॥

ಆ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಶ್ರೀಭಗವದ್ಗೀತಾ ಭಾಷ್ಯದಲ್ಲಿ ಹದಿನೆರಡನೇ ಅಧ್ಯಾಯವು ಮುಗಿಯಿತು ॥ ೧೮॥

ಪೀ -ಯೇ ತು ಸರ್ವಾಣಿ ಕರ್ಮಾಣಿ ಇತ್ಯಾದಿಗಳನ್ನು ಅದ್ವೇಷ್ಟಾ ಇತ್ಯಾದಿಗಳಿಂದ ವಿವರಿಸುತ್ತಾರೆ ಅದರಲ್ಲಿರತಕ್ಕ ಸರ್ವಾರಂಭಪರಿತ್ಯಾಗೀ ಎಂಬುದಕ್ಕೆ ನಾಲ್ಕು ರೀತಿಯಾಗಿ ಅರ್ಥ ಹೇಳುತ್ತಾರೆ–

ತಾ ॥ (೧) ಅವೈಷ್ಣವಸರ್ವಾರಂಭಪರಿತ್ಯಾಗೀ । ಸರ್ವಾರಂಭಾಭಿಮಾನತ್ಯಾಗೇನ ಫಲತ್ಯಾಗೇನ ಭಗವತ್ಸಮರ್ಪಣರೂಪೇಣ ಚ ತ್ಯಾಗೀ ॥ (೨) ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ । ಮಯಿ ಸರ್ವಾಣಿ ಕರ್ಮಾಣಿ ಸನ್ನ್ಯಸ್ಯಾಧ್ಯಾತ್ಮಚೇತಸೇತ್ಯಾದೇಃ ॥' (೩) ಭಕ್ತಿಂ ಜ್ಞಾನಂ ಚ ವೈರಾಗ್ಯಮ್ಯುತೇ ಯೋ ನೇಚ್ಛತಿ ಕ್ವಚಿತ್ । ಶುಭಾಶುಭಪರಿತ್ಯಾಗೀ ವಿದ್ವದ್ಭಿಃ ಕೀರ್ತಿತೋ ಹಿ ಸ ಇತಿ ಚ ॥ (೪) ಪ್ರಾಯಸ್ಸುಖಾದಿಷು ಸಮಃ ಪ್ರಾಯೋ ಹರ್ಷಾದಿವರ್ಜಿತಃ । ತಧೋಚ್ಯತೇ ಯಥಾಽಲ್ಪಸ್ವೋ ನಿಃಸ್ವ ಇತ್ಯುಚ್ಯತೇ ಜನೈಃ (ಬುಧೈಃ) ॥ (೫) ನ ಹಿ ಮುಖ್ಯತಯಾ ಸಾಮ್ಯಂ ಕಸ್ಯಚಿತ್ಸುಖದುಃಖಯೋಃ । ನ ಚ ಹರ್ಷಾದಿಸಂತ್ಯಾಗೋ ಯಾವನ್ಮುಕ್ತಿಃ ಕುತಶ್ಚನೇತಿ ಚ ॥ (೬) ಹೃತಿರ್ಮದಾದಧರ್ಮಾಯ ಹರ್ಷೋ ನಾಮ ಪ್ರಕೀರ್ತಿತ ಇತಿ ಶಬ್ದನಿರ್ಣಯೇ ॥ (೭) ವ್ಯಸ್ತೇನ ಪ್ರಿಯಾಃ ಸಮಸ್ತೇನಾತೀವ ಪ್ರಿಯಾಃ ॥ (೮) ಭಕ್ತಿಸ್ತು ವ್ಯಸ್ತೇಷ್ವಪ್ಯೇಕೈವ । ಯಸ್ಮಾನ್ನೋದ್ವಿಜತ ಇತ್ಯತ್ರಾಪಿ ಸ ಚೇತ್ಯನೇನ ಭಕ್ತಿರನುಷಜ್ಯತೇ । ಧರ್ಮಸಾಧನಂ ಧರ್ಮ್ಯಂ ತದೇವಾಮೃತಸಾಧನಮಮೃತಂ ಧರ್ಮ್ಯಾಮೃತಂ ॥ ೧೩—೨೦ ॥

ಆ ॥ (೧) (1) ವಿಷ್ಣುಪ್ರೀತಿಕರಂಗಳಾಗದ ಸಮಸ್ತ ಕರ್ಮಾರಂಭಗಳನ್ನು ಪರಿತ್ಯಾಗಮಾಡಿದವನು, (2) ಸಮಸ್ತ ಕರ್ಮಾರಂಭಗಳ ಅಭಿಮಾನವನ್ನು ಬಿಟ್ಟವನು (3) ಸಮಸ್ತ ಕರ್ಮಗಳ ಫಲವನ್ನು ಬಿಟ್ಟವನು, (4) ಪರಮಾತ್ಮನಲ್ಲಿ ಸಮಸ್ತ ಕರ್ಮಗಳನ್ನು ಸಮರ್ಪಿಸುವಿಕೆ ಎಂಬ ತ್ಯಾಗವುಳ್ಳವನು, (ಹೀಗೆ ನಾಲ್ಕು ಅರ್ಥಗಳು) (೨) ಜ್ಞಾನಿಗಳು ಸಮಸ್ತಕರ್ಮಗಳ ಫಲತ್ಯಾಗವನ್ನು **ತ್ಯಾಗವೆನ್ನು**ತ್ತಾರೆ ಸರ್ವೋತ್ತಮನಾದ ನನ್ನಲ್ಲಿಯೇ ಮನಸ್ಸನ್ನು ಇಟ್ಟು (ವಿಷ್ಣುಭಕ್ತ್ಯಾದಿಗಳಿಂದ ಇತರಗಳಾದ ಕಾಮನಾಗಳನ್ನು ತೊರೆದವನಾಗಿ) ಸಮಸ್ತ ಕರ್ಮಗಳನ್ನು ನನ್ನಲ್ಲಿಯೇ ಸಮರ್ಪಿಸಿ (ಯುದ್ಧಮಾಡು) ಇದು ಮೊದಲಾದ ವಾಕ್ಯಗಳಿಂದ (ಸರ್ವ ಕರ್ಮಗಳನ್ನು ಶ್ರೀಪರಮಾತ್ಮನಲ್ಲಿ ಅರ್ಪಿಸಬೇಕೆಂಬುವುದು ಸಿದ್ಧವಾಗುತ್ತದೆ) (೩) (**ಸರ್ವಾರಂಭಪರಿತ್ಯಾಗೀ** ಎಂಬುವುದಕ್ಕೆ **ಶುಭಾಶುಭಪರಿತ್ಯಾಗೀ** ಎಂಬುವುದು ವಿಸ್ತರವಾಗಿರುವುದರಿಂದ **ಅವೈಷ್ಣವಾರಂಭಪರಿತ್ಯಾಗೀ** ಇತ್ಯಾದಿ ಪ್ರಕಾರ ಅರ್ಥ ಹೇಳಿದ್ದು ಹೇಗೆ? ಎಂದರೆ ಆ ವಿಷಯದಲ್ಲಿ **ಸ್ಮೃತಿ** ಪ್ರಮಾಣವನ್ನು ಹೇಳುತ್ತಾರೆ—) ಯಾವಾತನು ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಬಿಟ್ಟು ಬೇರೆ ಯಾವುದನ್ನು ಎಲ್ಲಿಯೂ ಇಚ್ಛಿಸುವುದಿಲ್ಲವೋ, (ಮತ್ತು ಅವುಗಳಿಗೆ ಸಾಧನಗಳಾಗಿ **ಅವೈಷ್ಣವಾರಂಭಗಳನ್ನು** ಇಚ್ಛಿಸುವುದಿಲ್ಲವೋ, ಅಂತಹವನು ಶುಭಾಶುಭ ಪರಿತ್ಯಾಗೀ ಎಂದು ಜ್ಞಾನಿಗಳಿಂದ ಹೇಳಲ್ಪಡುತ್ತಾನೆ (೪) (**ಸಮದುಃಖಸುಖಃ, ಹರ್ಷಾಮರ್ಷಭಯೋದ್ವೇಗೈರ್ಮುಕ್ತಃ** ಎಂಬುದಕ್ಕೆ ಅರ್ಥವನ್ನು ಹೇಳುತ್ತಾರೆ—) ಪ್ರಾಯಶಃ ಸುಖಾದಿಗಳಲ್ಲಿ ಸಮನಾದವನು ಹರ್ಷಾದಿಗಳು ಇಲ್ಲದವನೆಂದು ಹೇಳಲ್ಪಡುತ್ತಾನೆ. ಹೇಗೆಂದರೆ ಅಲ್ಪವಾದ ದ್ರವ್ಯವುಳ್ಳವನು ನಿಃಸ್ವನೆಂದು ಜನರಿಂದ ಹೇಳಿಸಿಕೊಳ್ಳಲ್ಪಡುತ್ತಾನೆ.

(ಖ) (**ಮುಖ್ಯಾರ್ಥವೇ ಏಕೆ ಆಗಲಾರದೆಂದರೆ—**) ಯಾರಿಗೂ ಸುಖದುಃಖಗಳಲ್ಲಿ ಮುಖ್ಯವಾಗಿ ಸಾಮ್ಯವು ಇರಲಾರದು ಮುಕ್ತಿಯಾಗುವ ಪರ್ಯಂತ ಯಾವ ರೀತಿಯಿಂದಲೂ ಹರ್ಷ ಮೊದಲಾದವುಗಳ ಸಂಪೂರ್ಣ ಪರಿತ್ಯಾಗವು ಬರಲಾರದು (೬) (ಹರ್ಷವು ಗುಣವಾಗಿರುವುದರಿಂದ ಅದನ್ನು ಬಿಡುವುದು ಹೇಗೆ ಎಂದರೆ ಹರ್ಷ ಶಬ್ದಕ್ಕೆ ಹೇಯಾರ್ಥವಿದೆ, ಎಂದು ಸ್ಮೃತಿಯಿಂದಲೇ ತೋರಿಸುತ್ತಾರೆ-) ಮದದಿಶೆಯಿಂದ ಅಧರ್ಮ ಕ್ಕಾಗಿ ಮನಸ್ಸಿನ ಪ್ರವೃತ್ತಿಯು ಹರ್ಷವೆನಿಸುತ್ತದೆ. ಎಂದು ಶಬ್ದನಿರ್ಣಯದಲ್ಲಿದೆ (೭) (ಅದ್ವೇಷ್ಟಾ ಇತ್ಯಾದಿಗಳಲ್ಲಿ ದ್ವೇಷಾದಿಗಳಿಲ್ಲದವರು ಕೇವಲ ಪ್ರಿಯರೆಂದು ಹೇಳಿ **ಯೋ ತು ಧರ್ಮ್ಯಾಮೃತಂ** ಎಂಬುವಲ್ಲಿ ಶ್ರದ್ಧಾದಿಗಳುಳ್ಳವರು ಅತಿಪ್ರಿಯರೆಂದು ಹೇಳಲು ಕಾರಣವೇನು? ಎಂದರೆ -) **ಅದ್ವೇಷ್ಟಾ** ಇತ್ಯಾದಿಗಳಲ್ಲಿ ಹೇಳಿದ ಕೆಲವು ಕೆಲವು ಸಾಧನ ಮಾತ್ರ ಮಾಡಿದವರು ಪ್ರಿಯರು. **ಯೋ ತು** ಎಂಬುವಲ್ಲಿ ಹೇಳಿದ ದ್ವೇಷಾದಿಗಳ ಪರಿತ್ಯಾಗಾದಿರೂಪಗಳಾದ ಸಮಸ್ತ ಸಾಧನಗಳನ್ನು ಮಾಡಿದವರು ಅತ್ಯಂತ ಪ್ರಿಯರು. (ಒಂದೊಂದನ್ನು ಮಾಡುವವರಿಗಿಂತ ಸಮಸ್ತವನ್ನು ಮಾಡುವವರು ಅತ್ಯಂತಪ್ರಿಯರು) (೮) (ಹಾಗಾದರೆ ಅದ್ವೇಷ್ಟಾ ಇತ್ಯಾದಿಗಳಲ್ಲಿ ದ್ವೇಷಪರಿತ್ಯಾಗಮೊದಲಾದ ಸಾಧನಗಳಿಂದ ಪ್ರಿಯತ್ವವು ಹೇಳಲ್ಪಡುತ್ತದೆ **ಯೋ ತು** ಎಂಬುವಲ್ಲಿ ಭಕ್ತಿಯು ಸಮಸ್ತ ಸಾಧನಗಳಲ್ಲಿ ಉತ್ತಮವಾಗಿರುವುದರಿಂದ ಭಕ್ತಿಯಿಂದ ಅತಿಪ್ರಿಯತ್ವವು ಹೇಳಲ್ಪಡುತ್ತದೆಂದು ಏಕೆ ಆಗಲಾರದೆಂದರೆ—) ವ್ಯಸ್ತ (ಕೆಲವು ಕೆಲವು) ಸಾಧನ ಮಾಡುವವರಲ್ಲಿಯೂ ಭಕ್ತಿಯು ಇದ್ದೇ ಇದೆ. (ಅಂದರೆ - ದ್ವೇಷಪರಿತ್ಯಾಗಾದಿಗಳನ್ನು ಹೇಳಿದರೂ ಭಕ್ತಿಯನ್ನು ಹೇಳಿದ್ರಿಂದ ಈ ವಿಭಾಗವು ಯುಕ್ತವಲ್ಲ) (**ಯಸ್ಮಾನ್ನೋದ್ವಿಜತೇ ಲೋಕಃ** ಎಂದು ವ್ಯಸ್ತ ಸಾಧನಗಳನ್ನು ಹೇಳಿದರೆ ಭಕ್ತಿಯನ್ನು ಹೇಳದಿರುವುದರಿಂದ ಕೆಲವು ಕೆಲವು ಸಾಧನಮಾಡುವವರಲ್ಲಿಯೂ ಭಕ್ತಿಯು ಹೇಳಲ್ಪಟ್ಟದೆ ಎಂಬುದು ಹೇಗೆ? ಎಂದರೆ—) **ಯಸ್ಮಾನ್ನೋದ್ವಿಜತೇ** ಎಂಬುವಲ್ಲಿಯೂ **ಸ ಚ** ಎಂಬುವುದರಿಂದ ಭಕ್ತಿಯು ಹೇಳಲ್ಪಡುತ್ತದೆ (**ಧರ್ಮ್ಯಾಮೃತ**ಶಬ್ದಾರ್ಥವನ್ನು ಹೇಳುತ್ತಾರೆ-)ಧರ್ಮಕ್ಕೆ ಸಾಧನವಾದುದು ಧರ್ಮ್ಯವು, ಅದೇವೇ ಮೋಕ್ಷಕ್ಕೆ ಸಾಧನವಾದುದು ಅಮೃತವು ಹೀಗೆ ಧರ್ಮ್ಯಾಮೃತವೆನಿಸುತ್ತದೆ. ॥ ೧೩ ೨೦ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ತಾತ್ಪರ್ಯನಿರ್ಣಯೇ ದ್ವಾದಶೋಽಧ್ಯಾಯಃ ॥ ೧೨ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಭಗವದ್ಗೀತಾ ತಾತ್ಪರ್ಯನಿರ್ಣಯದಲ್ಲಿ ಹದಿನೆರಡನೇ ಅಧ್ಯಾಯವು ಮುಗಿಯಿತು ॥ ೧೨ ॥

॥ **ಶ್ರೀಕೃಷ್ಣಾರ್ಪಣಮಸ್ತು** ॥

॥ ಶ್ರೀಃ ॥

ಹದಿಮೂರನೇ ಅಧ್ಯಾಯವು.

ಪೀ—ಈ ಅಧ್ಯಾಯದಲ್ಲಿ ಹಿಂದಿನ ೧೨ ಅಧ್ಯಾಯಗಳ ಅರ್ಥವನ್ನು ಸಂಗ್ರಹಿಸಿ ಹೇಳುತ್ತಾರೆ ಅಂದರೆ **ತ್ರೈಗುಣ್ಯವಿಷಯಾ** ಇತ್ಯಾದಿಗಳಿಂದ ೬ ಅಧ್ಯಾಯಗಳು ಮುಗಿಯುವ ಪರ್ಯಂತ ಹೆಚ್ಚಾಗಿ ಜ್ಞಾನ ಸಾಧನವನ್ನೂ ೨ನೇ ಅಧ್ಯಾಯದಲ್ಲಿ **ನ ತ್ವೇವಾಹಂ** ಇತ್ಯಾದಿಗಳಿಂದ ಜೀವರು ಅನಾದಿನಿತ್ಯರೆಂದೂ ೭ನೇ ಅಧ್ಯಾಯ ಮೊದಲುಗೊಂಡು ೧೨ ಅಧ್ಯಾಯ ಪರ್ಯಂತ ಭಗವತ್ಸ್ವರೂಪವನ್ನೂ ೭ನೇ ಅಧ್ಯಾಯದಲ್ಲಿ **ಭೂಮಿರಾಪಃ** ಇತ್ಯಾದಿಗಳಿಂದ ಭಗವದಾವಾಸಸ್ಥಾನವನ್ನೂ, ಹೇಳಿರುವರು ಅಲ್ಲಲ್ಲಿ ಬಿಕ್ಕಿ ಹೇಳಿದ ಈ ವಿಷಯಗಳೆಲ್ಲಾ ಬುದ್ಧಿಯಲ್ಲಿ ದೃಢವಾಗಿ ನಿಲ್ಲುವುದಕ್ಕಾಗಿ ಸಂಕ್ಷೇಪದಿಂದ ಇವುಗಳನ್ನು ಈ ಅಧ್ಯಾಯದಲ್ಲಿ ಹೇಳುತ್ತಾರೆ—

ಗೀ ॥ ॥ ಅರ್ಜುನ ಉವಾಚ ॥

ಓಂ ॥ ಪ್ರಕೃತಿಂ ಪುರುಷಂ ಚೈವ ಕ್ಷೇತ್ರಂ ಕ್ಷೇತ್ರಜ್ಞಮೇವ ಚ ।
ಏತದ್ವೇದಿತುಮಿಚ್ಛಾಮಿ ಜ್ಞಾನಂ ಜ್ಞೇಯಂ ಚ ಕೇಶವ ॥ ೧ ॥

ಅ ॥ ಅರ್ಜುನಃ = ಅರ್ಜುನನು, ಉವಾಚ = ಪ್ರಶ್ನೆ ಮಾಡುತ್ತಾನೆ, ಕೇಶವ = ಬ್ರಹ್ಮರುದ್ರರಿಗೆ ಪ್ರೇರಕನಾದ ಶ್ರೀಕೃಷ್ಣನೇ, ಪ್ರಕೃತಿಂ = ಜೀವತನ ಅಜೀವತನ ಪ್ರಕೃತಿಗಳನ್ನು, ಪುರುಷಂ ಚೈವ = ಜೀವನನ್ನು, ಕ್ಷೇತ್ರಂ = ಪರಮಾತ್ಮನಿಗೆ ಆವಾಸಸ್ಥಾನವಾದ ಕ್ಷೇತ್ರನನ್ನು, ಕ್ಷೇತ್ರಜ್ಞಮೇವ ಚ = ಆ ಕ್ಷೇತ್ರನನ್ನು ಸಂಪೂರ್ಣವಾಗಿ ಪ್ರತ್ಯಕ್ಷೀಕರಿಸುತ್ತಿರುವ ಪರಮಾತ್ಮನನ್ನು, ಜ್ಞಾನಂ = ಪರಬ್ರಹ್ಮ ಜ್ಞಾನಸಾಧನವನ್ನು, ಜ್ಞೇಯಂ ಚ = ಮೋಕ್ಷಕ್ಕಾಗಿ ತಿಳಿಯಲರ್ಹವಾದ, ಸ್ವಮೇಯವನ್ನು, ಏತತ್ = ಇವೆಲ್ಲವನ್ನು, ವೇದಿತುಂ = ತಿಳಿಯಲಿಕ್ಕೆ, ಇಚ್ಛಾಮಿ = ಇಚ್ಛಿಸುತ್ತೇನೆ ॥ ೧ ॥

ಪೀ—ಪರಮಾತ್ಮನ ಸ್ವರೂಪಜ್ಞಾನವೇ ಮೋಕ್ಷಕ್ಕೆ ಕಾರಣವಾಗಿರುವುದರಿಂದ ಭಗವಂತನ ಸ್ವರೂಪವನ್ನು ಹೇಳುವುದು ಯುಕ್ತವು **ಮಹಾಭೂತಾನ್ಯಹಂಕಾರಃ** ಇತ್ಯಾದಿಗಳಿಂದ ಕ್ಷೇತ್ರಸ್ವರೂಪವನ್ನು ಏಕೆ ಹೇಳುವುದು? ಎಂದರೆ— ಅದು ಭಗವಜ್ಞಾನಕ್ಕೆ ಉಪಯುಕ್ತವಾಗಿರುವುದರಿಂದ ಅದನ್ನೆಲ್ಲಾ ಹೇಳಿ ಪರಮಾತ್ಮನೇ ಕ್ಷೇತ್ರಜ್ಞನೆನ್ನುತ್ತಾರೆ—

ಗೀ ॥ ॥ ಶ್ರೀಭಗವಾನುವಾಚ ॥

ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ ।
ಏತದ್ಯೋ ವೇತ್ತಿ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ ॥ ೨ ॥

ಅ ॥ ಶ್ರೀಭಗವಾನ್ = ಶ್ರೀಕೃಷ್ಣನು, ಉವಾಚ = ಉಪದೇಶಿಸಿದನು ಕೌಂತೇಯ = ಅರ್ಜುನನೇ ಇದಂ ಶರೀರಂ = ಈ ಅವ್ಯಕ್ತ, ತತ್ವ ಮಹತ್ತತ್ವ, ಅಹಂಕಾರ ತತ್ವ ಮೊದಲಾದುದೆಲ್ಲವೂ, ಕ್ಷೇತ್ರಮಿತಿ = ಶ್ರೀಪರಮಾತ್ಮನಿಗೆ ಆವಾಸಸ್ಥಾನವಾಗಿರುವುದರಿಂದ, ಕ್ಷೀಯತೇ ಸ್ಫೀಯತೇ ಅತ್ರ ಭಗವತಾ ಎಂಬುವ

ವ್ಯುತ್ಪತ್ತಿಯಿಂದ ಕ್ಷೇತ್ರವೆಂತೆಂದು, ಅಭಿಧೀಯತೇ=ಹೇಳಿಸಿಕೊಳ್ಳಲ್ಪಡುತ್ತದೆ ಏತತ್=ಕ್ಷೇತ್ರವೆನಿಸಿಕೊಂಡ, ಈ ಅವ್ಯಕ್ತ ಮೊದಲಾದುದನ್ನು, ಯಃ=ಯಾವನು, ವೇತ್ತಿ=ಸಂಪೂರ್ಣ ತಿಳಿಯುತ್ತಾನೋ, ತಂ=ಸಮಸ್ತ ಪದಾರ್ಥಗಳನ್ನು ತಿಳಿದುಕೊಂಡಿರತಕ್ಕ ಆತನನ್ನು, ತದ್ವಿದಃ=ಅವ್ಯಕ್ತಾದಿಕ್ಷೇತ್ರಗಳ ಸ್ವರೂಪವನ್ನು ತಿಳಿದವರು, ಕ್ಷೇತ್ರಜ್ಞಮಿತಿ=ಕ್ಷೇತ್ರಜ್ಞನನ್ನಾಗಿ, ಪ್ರಾಹುಃ=ಹೇಳುತ್ತಾರೆ ॥ ೨ ॥

ಪೀ—ಜೀವನಿಗೂ ಸ್ವಲ್ಪ ಕ್ಷೇತ್ರಜ್ಞಾನವಿದ್ದುದರಿಂದ ಜೀವನೂ ಕ್ಷೇತ್ರಜ್ಞನೆನಿಸುತ್ತಾನೋ, ಎಂದರೆ—

ಗೀ ॥ ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ ।
ಕ್ಷೇತ್ರಕ್ಷೇತ್ರಜ್ಞಯೋರ್ಜ್ಞಾನಂ ಯತ್ತಜ್ಜ್ಞಾನಂ ಮತಂ ಮಮ ॥ ೩ ॥

ಅ ॥ ಭಾರತ=ಅರ್ಜುನನೇ ಸರ್ವಕ್ಷೇತ್ರೇಷು ಅಪಿ=ಅವ್ಯಕ್ತ ಮೊದಲಾದ ಸರ್ವ ವಸ್ತುಗಳಲ್ಲಿಯೂ, ಮಾಮಪಿ=ನನ್ನನ್ನೇ, ಕ್ಷೇತ್ರಜ್ಞಂ ಚ=ಕ್ಷೇತ್ರಜ್ಞಾನವುಳ್ಳ ಪರಮಾತ್ಮನನ್ನಾಗಿ, ವಿದ್ಧಿ=ತಿಳಿದುಕೋ, (ಜೀವನನ್ನು ಕ್ಷೇತ್ರಜ್ಞನನ್ನಾಗಿ ತಿಳಿಯಬೇಡ) ಕ್ಷೇತ್ರಕ್ಷೇತ್ರಜ್ಞಯೋಃ=ಪಂಚ ಮಹಾಭೂತವೇ ಮೊದಲಾದುದೂ ಪರಮಾತ್ಮನೂ ಇವರ, ಯತ್ ಜ್ಞಾನಂ=ಯಾವ ಜ್ಞಾನವಿದೆಯೋ, ತತ್ ಜ್ಞಾನಂ=ಆ ಜ್ಞಾನವು, ಮಮ=ನನ್ನ ಸಮ್ಯಕ್ ಜ್ಞಾನವು, ಹೀಗೆ ಮತಂ=ಸಮ್ಮತವು ॥ ೩ ॥

ಪೀ—ಪೂರ್ವಾಧ್ಯಾಯಕ್ಕೆ ಸಂಗತವಾಗಿ ಈ ಅಧ್ಯಾಯದಲ್ಲಿ ಹೇಳತಕ್ಕ ಅರ್ಥವನ್ನು ಹೇಳುತ್ತಾರೆ—

ಭಾ ॥ ಓಂ ॥ ಪೂರ್ವೋಕ್ತಜ್ಞಾನಜ್ಞೇಯಕ್ಷೇತ್ರಪುರುಷಾನ್ಪಿಂಡೀಕೃತ್ಯ ವಿವಿಚ್ಯ ದರ್ಶಯತ್ಯನೇನಾಧ್ಯಾಯೇನ ॥ ೧,೨,೩ ॥

ಅ ॥ ಪೂರ್ವದಲ್ಲಿ ೬ ಅಧ್ಯಾಯ ಸಮಾಪ್ತಿ ಪರ್ಯಂತ ಜ್ಞಾನಸಾಧನವನ್ನು ಹೇಳಿದ್ದಾರೆ ಮೇಲಿನ ೬ ಅಧ್ಯಾಯಗಳಿಂದ ಜ್ಞೇಯವಾದ ಬ್ರಹ್ಮಸ್ವರೂಪವನ್ನು ಹೇಳಿದ್ದಾರೆ ಭೂಮಿರಾಪಃ ಇತ್ಯಾದಿಗಳಿಂದ ಕ್ಷೇತ್ರಸ್ವರೂಪವನ್ನೇ ಹೇಳಿದ್ದಾರೆ ನ ತ್ವೇವಾಹಂ ಇತ್ಯಾದಿಗಳಿಂದ ಪುರುಷಭೇದವೂ ಹೇಳಲ್ಪಟ್ಟಿದೆ ಇವೆಲ್ಲವನ್ನು ಈ ಅಧ್ಯಾಯದಿಂದ ಶ್ರೀ ಕೃಷ್ಣನು ಅಲ್ಲಿ ಅಲ್ಲಿ ಬಿಕ್ಕಿ ಹೇಳಿದ್ದನ್ನು ಏಕೀಕರಿಸಿಕೊಂಡು ಬೇರೆ ಬೇರೆ ಪ್ರಕರಣವನ್ನಾಗಿ ಮಾಡಿ ತೋರಿಸುತ್ತಾನೆ ॥ ೧—೩ ॥

ಪೀ—ಈ ಅಧ್ಯಾಯದಲ್ಲಿ ಹೇಳತಕ್ಕ ಅರ್ಥವನ್ನು ತೋರಿಸುತ್ತಾರೆ—

ತಾ ॥ (೧) ಸರ್ವಾರ್ಥಸಂಕ್ಷೇಪೋಽಯಂ ॥ (೨) ಹಿಂಸಾಹೇತುಶ್ಚ ಜೀವಸ್ಯ ಪರೇಣ ಪ್ರೇರ್ಯತೇಚೇಯತ್ । ಅವ್ಯಕ್ತಾದಿಶರೀರಂ ತು ತ(ತ್ತ)ತ್ಕ್ಷೇತ್ರಂ ಕ್ಷೀಯತೇ ಯತ್ ॥ (೩) ಇಚ್ಛಾ ದ್ವೇಷಃ ಸುಖಂ ದುಃಖಂ ದೇಹೋ ವ್ಯಾಪ್ತಿಶ್ಚ ಚೇತಸಃ । ತದ್ವಿಕಾರಾ ಇತಿ ಜ್ಞೇಯಾಶ್ಚಿದ್ರೂಪೇಚ್ಛಾದಿಮಿಶ್ರಿತಾಃ ॥ (೪) ವಿಕಾರೇಚ್ಛಾದಿನಿರ್ಮುಕ್ತಶ್ಚಿನ್ಮಾತ್ರೇಚ್ಛಾದಿಸಂಯುತಃ । ಮುಕ್ತ ಇತ್ಯುಚ್ಯತೇ ಜೀವೋ ಮುಕ್ತಿಶ್ಚ ದ್ವಿವಿಧಾ ಮತಾ ॥ (೫) ಚಿನ್ಮಾತ್ರದ್ವೇಷದುಃಖೇ ಚ ದೇಹೋ ಮಿಥ್ಯಾದೃಗಾತ್ಮಕಃ । ನಿಷಿದ್ಧೇಚ್ಛಾ ಚ ಯತ್ರ ಸ್ಯುರ್ನಿತ್ಯಾ ಸಾ ಮುಕ್ತಿರಾಸುರೀ ॥ (೬) ಚಿನ್ಮಾತ್ರಾ ವೈಷ್ಣವೀ ಭಕ್ತಿರ್ದೇಹಃ

ಸಮ್ಯಗ್ದರ್ಶನಾತ್ಮಕಃ । ಸುಖವಿಚ್ಛಾನುಕೂಲಾ ಚ ಧೃತಿರ್ದೈವೀತಿ (ತು) ಸಾ ಮತೇತಿ ನಾರಾಯಣಶ್ರುತಿಃ ॥ ೧ ॥

ಅ ॥ (೧) ೧೨ ಅಧ್ಯಾಯಗಳಲ್ಲಿ ಹೇಳಿದ ಅರ್ಥವನ್ನು ಸಂಕ್ಷೇಪದಿಂದ ಈ ಅಧ್ಯಾಯದಲ್ಲಿ ತೋರಿಸುತ್ತಾರೆ (೨) (ಭಗವಜ್ಜ್ಞಾನವೇ ಮೋಕ್ಷಕ್ಕೆ ಕಾರಣವಾಗಿರುವುದರಿಂದ ಭಗವತ್ಸ್ವರೂಪವನ್ನು ಮಾತ್ರ ಹೇಳಬೇಕಿತ್ತು. ಕ್ಷೇತ್ರವನ್ನೂ ಭಗವತ್ಸ್ವರೂಪವನ್ನೂ ಎರಡನ್ನೂ ಏಕೆ ಹೇಳುವುದೆಂಬುವ ಆಶಂಕೆಯನ್ನು **ಇದಂ ಶರೀರಂ** ಎಂಬುವುದರಿಂದ ಪರಿಹರಿಸಿದರು ಆದರಲ್ಲಿ **ಸಂಘಾತಶ್ಚೇತನಾ** ಎಂದು ಕ್ಷೇತ್ರದ ವಿಕಾರವಾಗಿ ಹೇಳಿದ ಶರೀರಕ್ಕೆ ಸಮಸ್ತ ಕ್ಷೇತ್ರತ್ವವನ್ನು ಹೇಳಿದ್ದು ಹೇಗೆ ಎಂಬುವ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಶ್ರುತಿಯಿಂದ ಇದರ ಅರ್ಥವನ್ನು ಹೇಳುತ್ತಾರೆ—) (ಜೀವನು ಸ್ವತಃ ನಿತ್ಯನಾದ ಪ್ರಯುಕ್ತ ದೇಹಾದಿರೂಪವಾಗಿ ಪರಿಣತಗಳಾದ ಈ ಅವ್ಯಕ್ತಾದಿಗಳ ವಿನಾಶದಿಂದಲೇ ಜೀವನು ಕೊಲ್ಲಲ್ಪಟ್ಟನೆಂದು ಹೇಳಿಸಲ್ಪಡುತ್ತಾನೆ) ಅವ್ಯಕ್ತ ಮೊದಲಾದುದು ಜೀವನಿಗೆ ಹಿಂಸಾಕ್ಕೆ ಕಾರಣವಾಗುತ್ತದೆ ಶ್ಯೈ ಹಿಂಸಾಯಾಂ ಎಂಬುವ ಧಾತುವ್ಯಾಖ್ಯಾನದಿಂದ (ಹಿಂಸಾಕ್ಕೆ ಕಾರಣವಾಗಿರುವುದರಿಂದ (ಶರ್) ಪರದಿಂದ (ಈರ) ಪ್ರೇರೇಪಿಸಲ್ಪಡುವುದರಿಂದ ಈ ಕ್ಷೇತ್ರವು ಶರೀರವೆನಿಸುತ್ತದೆ ಕ್ಷೀಯತೇ ಅತ್ರ = ಅವ್ಯಕ್ತಾದಿ ಶರೀರದಲ್ಲಿ ಪರಮಾತ್ಮನು ನಿಯಾಮಕನಾಗಿರುವುದರಿಂದ ಪರಮಾತ್ಮನಿಗೆ ಶರೀರಸ್ಥಾನೀಯವಾದ ಅವ್ಯಕ್ತಾದಿಯು ಕ್ಷೇತ್ರವೆನಿಸುತ್ತದೆ (೩) ಇಚ್ಛೆಯು, ದ್ವೇಷವು, ಸುಖವು, ದುಃಖವು, ದೇಹವು, ಮನಸ್ಸಿನ ವ್ಯಾಪ್ತಿಯು, ಇವುಗಳೆಲ್ಲವೂ ಕ್ಷೇತ್ರವಿಕಾರಗಳು. ಅಚಿದ್ರೂಪಗಳಾದ ಇಚ್ಛಾದಿಗಳು ಕ್ಷೇತ್ರ ವಿಕಾರಗಳೆಂದು ತಿಳಿಯಬೇಕು (ಇದರಿಂದ ಇಚ್ಛಾ ದ್ವೇಷ ಇತ್ಯಾದಿ ಏಳನೇ ಶ್ಲೋಕದ ಅರ್ಥವು ಉಕ್ತವಾಯಿತು) ಅವುಗಳು ಚಿದ್ರೂಪಗಳಾದ ಇಚ್ಛಾದಿಗಳಿಂದ ಮಿಶ್ರಿತಗಳಾಗಿವೆ (೪) (ಇವುಗಳೆಲ್ಲವೂ ಸದಾ ಮಿಶ್ರಗಳಾಗಿಯೇ ಇರುತ್ತವೋ ಎಂದರೆ ಸಂಸಾರದಲ್ಲಿರುವಾಗಲೇ, ಸರ್ವದಾ ಮಿಶ್ರಿತಗಳಲ್ಲ, ಎನ್ನುತ್ತಾರೆ—) ಪ್ರಕೃತಿ ವಿಕಾರಭೂತ ಇಚ್ಛಾದಿಗಳಿಂದ ಬಿಡಲ್ಪಟ್ಟವನು, ಚಿನ್ಮಾತ್ರಗಳಾದ ಇಚ್ಛಾ ದ್ವೇಷಾದಿಗಳಿಂದ ಕೂಡಿದ ಜೀವನು ಮುಕ್ತನೆನಿಸುತ್ತಾನೆ (ಮುಕ್ತಿಯಲ್ಲಿ ದ್ವೇಷ ದುಃಖಾದಿಗಳು ಇಲ್ಲದಿರುವುದರಿಂದ ಚಿನ್ಮಾತ್ರ ಇಚ್ಛಾ ದ್ವೇಷಾದಿಗಳಿಂದ ಕೂಡಿದವನು ಮುಕ್ತನೆಂದು ಹೇಳುವುದು ಹೇಗೆ ಎಂದರೆ—) ಮುಕ್ತಿಯು **ಅಸುರೀ ದೈವೀ** ಎಂದು ಎರಡು ವಿಧವು (೫) ಚಿನ್ಮಾತ್ರಗಳಾದ ದ್ವೇಷ ದುಃಖಗಳೂ ವಿಧ್ಯಾಜ್ಞಾನರೂಪವಾದ ದೇಹವೂ, ನಿಷಿದ್ಧ ಪದಾರ್ಥಗಳಲ್ಲಿ ಇಚ್ಛೆಯೂ ಯಾವ ಮುಕ್ತಿಯಲ್ಲಿ ಇರುತ್ತವೋ, ಅಂತಹುದು ನಿತ್ಯವಾದ ಆಸುರಮುಕ್ತಿಯು ಎನಿಸುತ್ತದೆ (೬) ಚಿನ್ಮಾತ್ರರೂಪವಾದ ವಿಷ್ಣುವಿಷಯಕವಾದ ಸರ್ವೋತ್ತಮತ್ವಜ್ಞಾನಪೂರ್ವಕ ಸ್ನೇಹವು ಕೇವಲ ಜ್ಞಾನಾನಂದಾತ್ಮಕದೇಹವೂ, ಸುಖವೂ, ಪರಮಾತ್ಮನ ಇಚ್ಛೆಗೆ ಅನುಕೂಲವಾದುದು ಇಚ್ಛೆಯು, ಧೈರ್ಯವು, ಇವುಗಳುಯಾವ ಮುಕ್ತಿಯಲ್ಲಿವೆಯೋ ಇಂತಹುದು ದೈವೀಮುಕ್ತಿಯೆನಿಸುತ್ತದೆ, ಎಂದು ನಾರಾಯಣಶ್ರುತಿಯು ॥ ೧ ॥

ಪೀ—ಏತದ್ಯೋ ವೇತ್ತಿ ಎಂಬುವ ಎರಡನೇ ಶ್ಲೋಕವು ಜೀವವಿಷಯಕವೆಂಬುವ ಪ್ರತೀತಿಯನ್ನು ಹೋಗಲಾಡಿಸುವುದಕ್ಕಾಗಿ ವಚನಾಂತರದಿಂದ ವ್ಯಾಖ್ಯಾನಮಾಡುತ್ತಾರೆ—

ತಾ ॥ (೧) ಕ್ಷೇತ್ರಜ್ಞೋ ಭಗವಾನ್ವಿಷ್ಣುರ್ನ ಹ್ಯನ್ಯಃ ಕ್ಷೇತ್ರಮಂಜಸಾ । ವೇತ್ತ್ಯಸೌ ಭಗವಾನ್ ಜ್ಞೇಯೋ ವ್ಯಕ್ತಾವ್ಯಕ್ತವಿಲಕ್ಷಣಃ ॥ (೨) ಸ ತು ಜೀವೇಷು ಸರ್ವೇಷು ಬಹಿಶ್ಚೈವ ವ್ಯವಸ್ಥಿತಃ । ವಿಲಕ್ಷಣಶ್ಚ ಜೀವೇಭ್ಯಃ ಸರ್ವೇಭ್ಯೋಽಪಿ ಸದೈವ ಚ ॥ (೩) ಸರ್ವತಃ ಪಾಣಿಪಾದಾದಿರ್ಯತಃ ಪಾಣ್ಯಾದಿಶಕ್ತಿಮಾನ್ । ಕೇಶಾದಿಷ್ವಪಿ

ಸರ್ವತ್ರ ಕೃಷ್ಣಕೇಶೋ ಹಿ ಯಾದವಃ ॥ (೪) ಅಣೋರಣುತರೈ ರೂಪೈಃ ಪಾಣಿ-ಪಾದಾದಿಸಂಯುತೈಃ । ಸರ್ವತ್ರ ಸಂಸ್ಥಿತತ್ವಾದ್ವಾ ಸರ್ವತಃ ಪಾಣಿಪಾದವಾನ್ । ಸರ್ವೇಂದ್ರಿಯಾಣಾಂ ವಿಷಯಾನ್ವೇತ್ತಿ ॥ (೫) ಸೋಽಪ್ರಾಕೃತೇಂದ್ರಿಯಃ । ಯತೋ-ಽತೋಽನಿಂದ್ರಿಯಃ ಪ್ರೋಕ್ತೋ ಯನ್ನ ಭಿನ್ನೇಂದ್ರಿಯೋಽಥ ವಾ ॥ (೬) ಗುಣೈಃ ಸತ್ತ್ವಾದಿಭಿರ್ಹೀನಃ ಸರ್ವಕಲ್ಯಾಣಮೂರ್ತಿಮಾನ್ । ಅನ್ಯಥಾ ಭಾವರಾಹಿತ್ಯಾ-ದಚರಶ್ಚರ ಏವ ಚ । ಚರಣಾತ್ಸರ್ವದೇಶೇಷು ॥ (೭) ವ್ಯಾಪ್ತೋಽಣುರ್ಮಧ್ಯಮ-ಸ ಥಾ । ಸರ್ವಗತ್ವಾತ್ಸಮೀಪೇ ಚ ದೂರೇ ಚೈವಾಂತರೇ ಚ ಸಃ ॥ (೮) ಅನಂತಾ-ವ್ಯಯಶಕ್ತಿತ್ವಾತ್ತದನ್ಯತ್ರ ವಿರೋಧಿನಃ । ಸಂತಿ ಸರ್ವೇ ಗುಣಾಸ್ತತ್ರ ನ ಚ ತತ್ರ ವಿ-ರೋಧಿನ ಇತಿ ಚ ॥ ೨ ॥

ಅ ॥ (೧) ಸರ್ವೋತ್ತಮನಾದ ಶ್ರೀವಿಷ್ಣುವು ಕ್ಷೇತ್ರಜ್ಞನೆನಿಸುತ್ತಾನೆ (ಕ್ಷೇತ್ರವನ್ನು ತಿಳಿದವರಿಲ್ಲರೂ ಕ್ಷೇತ್ರಜ್ಞರಾಗುವ ಕಾರಣ ವಿಷ್ಣು ಎಂದು ಏಕೆ ಹೇಳಿದ್ದು ಎಂದರೆ—) ಬೇರೆ ಯಾರೊಬ್ಬರೂ ಚೆನ್ನಾಗಿ ಅನ್ಯಕ್ಕಾದಿಗಳನ್ನು ತಿಳಿದವರಿಲ್ಲ. ಪರಮಾತ್ಮನೇ ಚೆನ್ನಾಗಿ ತಿಳಿದವನು (ಇದರಿಂದ **ಸರ್ವೇಂದ್ರಿಯಗುಣಾಭಾಸಂ** ಎಂಬುವ ೧೫ನೇ ಶ್ಲೋಕವು ವ್ಯಾಖ್ಯಾತವಾಯಿತು) ಆದಕಾರಣ ಶ್ರೀಪರಮಾತ್ಮನು ವ್ಯಕ್ತ ಅವ್ಯಕ್ತಗಳಿಂದ ವಿಲಕ್ಷಣನು, ಎಂದು ತಿಳಿಯತಕ್ಕುದು (೨) (ಶ್ರೀಪರಮಾತ್ಮನು ಸರ್ವರ ಸವಿಾಪದಲ್ಲಿಲ್ಲದಿರುವುದರಿಂದ ಪರಮಾತ್ಮನಿಗೆ ಸರ್ವಜ್ಞತ್ವವು ಹೇಗೆ ಎಂದರೆ—) ಶ್ರೀಪರಮಾತ್ಮನು ಸರ್ವ ಜೀವರೊಳಗೂ ಹೊರಗೂ ಇರುತ್ತಾನೆ ಶ್ರೀಪರಮಾತ್ಮನು ಸಮಸ್ತ ಜೀವರಿಂದಲೂ ಸರ್ವದಾ ವಿಲಕ್ಷಣನೇ ಆಗಿರುತಾನೆ (೩) ಪರಮಾತ್ಮನು ಕೇಶ ಮೊದಲಾದ ಎಲ್ಲಾ ಅವಯವಗಳಲ್ಲಿಯೂ ಪಾಣಿ ಪಾದ ಮೊದಲಾದ ಎಲ್ಲಾ ಅವಯವಗಳ ಶಕ್ತಿಯುಳ್ಳವನು, ಆದುದರಿಂದ ಎಲ್ಲಾ ಅವಯವಗಳಲ್ಲಿಯೂ ಪಾಣಿ ಪಾದ ಮೊದಲಾದ ಅವಯವಗಳುಳ್ಳವನು (ಕೇತಾದಿಗಳಲ್ಲಿ ಪಾಣ್ಯಾದಿಗಳ ಶಕ್ತಿಯು ಇದೆ, ಎಂಬುದು ಯುಕ್ತಿ ವಿರುದ್ಧವೆಂದರೆ—) ಯದುಕುಲೋತ್ಪನ್ನನಾದ ಶ್ರೀಕೃಷ್ಣನು ಶ್ರೀಮನ್ನಾರಾಯಣನ ಕೃಷ್ಣಕೇಶರೂಪನು ಅಂತಹ ಶ್ರೀಪರಮಾತ್ಮನ ಕೃಷ್ಣಕೇಶಾವತಾರನಾದ ಶ್ರೀಕೃಷ್ಣನು ಪಾಣಿಪಾದ ಮೊದಲಾದ ಎಲ್ಲಾ ಅವಯವಗಳ ಕಾರ್ಯವನ್ನು ಮಾಡಿರುವುದರಿಂದ ಸರ್ವತ್ರ ಪಾಣಿಪಾದಾದಿಗಳ ಶಕ್ತಿಯುಳ್ಳವನೆಂದು ಹೇಳಿದ್ದು ಯುಕ್ತವು. (ಇದರಿಂದ **ಸರ್ವತಃ** ಎಂಬುವ ೧೪ನೇ ಶ್ಲೋಕವು ವ್ಯಾಖ್ಯಾತವಾಯಿತು) ಅಥವಾ (೪) ಪಾಣಿ ಪಾದಾದಿಗಳಿಂದ ಕೂಡಿರುವ ಅಣುರೂಪಗಳಿಂದಲೂ ಅತ್ಯಣುರೂಪಗಳಿಂದ ಎಲ್ಲಾ ಕಡೆಗಳಲ್ಲಿಯೂ ಇದ್ದ ಪ್ರಯುಕ್ತವಾಗಲೀ ಎಲ್ಲಾ ಕಡೆಗಳಲ್ಲಿಯೂ ಹಸ್ತ ಪಾದ ಮೊದಲಾದ ಎಲ್ಲಾ ಅವಯವಗಳುಳ್ಳವನು ಒಂದೊಂದು ಇಂದ್ರಿಯಗಳಿಂದಲೂ ಸಮಸ್ತ ಇಂದ್ರಿಯಗಳ ವಿಷಯವನ್ನು ತಿಳಿಯುತ್ತಾನೆ (೫) (ಶ್ರೀಪರಮಾತ್ಮನಿಗೆ ಹಸ್ತ ಪಾದಾದಿಗಳು ಇದ್ದರೆ ವೇದಾದಿಗಳಲ್ಲಿ ಇಂದ್ರಿಯಗಳಿಲ್ಲವೆಂದು ಹೇಳಿದ್ದು ಹೇಗೆ ಎಂದರೆ—) ಅಂತಹ ಶ್ರೀಪರಮಾತ್ಮನು ಅಪ್ರಾಕೃತ ದಿವ್ಯ ವಿಗ್ರಹವುಳ್ಳವನು ಶ್ರೀಪರಮಾತ್ಮನು ಅಪ್ರಾಕೃತ ಇಂದ್ರಿಯಗಳುಳ್ಳವನಾದರೂ ಪ್ರಾಕೃತ ಇಂದ್ರಿಯಗಳಿಲ್ಲದಿರುವುದರಿಂದಲೂ ಅಥವಾ ಭಿನ್ನವಾದ ಇಂದ್ರಿಯಗಳು ಇಲ್ಲದಿರುವುದರಿಂದಲೂ ವೇದಾದಿಗಳಲ್ಲಿ ಅನಿಂದ್ರಿಯನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ. (೬) ಸತ್ವ ಮೊದಲಾದ ಗುಣಗಳಿಲ್ಲದವನೂ, ಸಮಸ್ತ ಕಲ್ಯಾಣ ಶರೀರವುಳ್ಳವನೂ, ವ್ಯತ್ಯಾಸವಿಲ್ಲದಿರುವುದರಿಂದ **ಅಚರಃ** ಎನಿಸುತ್ತಾನೆ ಸಮಸ್ತ ದೇಶಗಳಲ್ಲಿ ಸಂಚರಿಸುವುದರಿಂದ **ಚರಃ** ಎನ್ನಿಸುತ್ತಾನೆ (ಇದರಿಂದ **ಅಚರಂ ಚರಮೇವ ಚ** ಎಂಬ ೧೬ನೇ ಶ್ಲೋಕವು ವ್ಯಾಖ್ಯಾತವಾಯಿತು) ವ್ಯಾಪ್ತನು, ಅಣುವು ಹಾಗೆಯೇ ಮಧ್ಯಮನು ಸರ್ವತ್ರ ಇದ್ದ ಪ್ರಯುಕ್ತ ಸವಿಾಪದಲ್ಲಿಯೂ ದೂರದಲ್ಲಿಯೂ ಮಧ್ಯದ

ಲ್ಲಿಯೂ ಇದ್ದಾನೆ (ಇದರಿಂದ **ಸರ್ವಮಾವೃತ್ಯ ತಿಷ್ಠತಿ** ಎಂಬ ೧೪ನೇ ಶ್ಲೋಕವು ವ್ಯಾಖ್ಯಾತವಾಯಿತು) (ಆ) (ವ್ಯಾಪ್ತತ್ವ ಅಣುತ್ವಾದಿಗಳು ವಸ್ತ್ವಂತರದಲ್ಲಿ ಕೂಡಿ ಇಲ್ಲದಿರುವುದರಿಂದ ಪರಮಾತ್ಮನಲ್ಲಿ ಕೂಡಿ ಇರುವುದು ಹೇಗೆ? ಎಂದರೆ –) ಪರಮಾತ್ಮನಿಗೆ ಅಪರಿಮಿತ ನಾಶವಿಲ್ಲದ ಅನಂತಶಕ್ತಿಗಳು ಇದ್ದುದರಿಂದ ಬೇರೆ ಕಡೆ ಒಟ್ಟಿಗೆ ಇಲ್ಲದಿದ್ದವುಗಳೂ ಎಲ್ಲಾ ಗುಣಗಳೂ ಪರಮಾತ್ಮನಲ್ಲಿವೆ ಆ ಪರಮಾತ್ಮನಲ್ಲಿ ವಿರುದ್ಧಗಳಾಗುವುದಿಲ್ಲ ॥ ೨ ॥

ಪೀ— ಕ್ಷೇತ್ರಜ್ಞ ಎಂಬುವ ನಾಮಧೇಯಕ್ಕೆ ಜೀವನಲ್ಲಿ ಪ್ರಸಿದ್ಧಿಯಿಲ್ಲದಿರುವುದರಿಂದ ಇಲ್ಲಿ ಜೀವನು ಹೇಳಿಸಿಕೊಳ್ಳಲ್ಪಡುವುದಿಲ್ಲವೆನ್ನುತ್ತಾರೆ -

ತಾ ॥ (೧) ನ ಜೀವಸ್ಯ ಕ್ಷೇತ್ರಜ್ಞನಾಮ। ಕ್ಷೇತ್ರಜ್ಞ ಏತಾ ಮನಸೋ ವಿಭೂತೀರ್ಜೀವಸ್ಯ ಮಾಯಾರಚಿತಾ ಅನಿತ್ಯಾಃ । ಆನಿರ್ದಿತಾಶ್ಚಾಪಿ ತಿರೋಹಿತಾಶ್ಚ ಶುದ್ಧೋ ವಿಜಷ್ಟೇತ್ಯ(ಹ್ಯ)ವಿಶುದ್ಧಕರ್ತುರಿತಿ (ಹಿ) ಭಾಗವತೇ ॥ (೨) ಅತ ಏತದ್ಯೋ ವೇತ್ತೀತ್ಯುಕ್ತೇ ಜೀವಸ್ಯಾಪಿ ಕಿಂಚಿಜ್ಞಾನಾತ್ತತ್ಪ್ರಷ್ಟೇಸ್ತನ್ನಿರಾಕರ(ವಾರ)ಣಾರ್ಥಂ ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧೀತ್ಯಾಹ ॥ (೩) ಅನ್ಯಥೈತದ್ಯೋ ವೇತ್ತೀತ್ಯುಕ್ತೇನೈವ ಸಿದ್ಧತ್ವಾತ್ಕ್ಷೇತ್ರಜ್ಞಂ ಚಾಪಿ ಮಾಮಿತಿ ವ್ಯರ್ಥಂ ॥ (೪) ಭೇದವತ್ಕ್ಷೇ ತು ನಾಮನಿರುಕ್ತ್ಯರ್ಥಮೇತದ್ಯೋ ವೇತ್ತೀತಿ ॥ (೫) ಸರ್ವಾಭೇದಮಪಿ ಕೇಚಿದ್ವದಂತೀತಿ ಕ್ಷೇತ್ರಂ ಚ ಜ್ಞಶ್ಚೇತಿ ವ್ಯುತ್ಪತ್ತಿಂ ನಿವಾರಯತಿ ॥ (೬) ಕ್ಷೇತ್ರಜ್ಞಂ ಮಾಂ ಸರ್ವಕ್ಷೇತ್ರೇಷು ಸ್ಥಿತತ್ವೇನ ವಿದ್ಧೀತ್ಯರ್ಥಃ ॥ ೩ ॥

ಅ ॥ (೧) ಜೀವನಿಗೆ ಕ್ಷೇತ್ರಜ್ಞ ಎಂಬುವ ನಾಮಧೇಯವೇ ಇಲ್ಲ (ಕ್ವಚಿತ್ ಇದ್ದರೂ ಅದು ಅಮುಖ್ಯವು) (ಶ್ರೀವಿಷ್ಣುವಿನಲ್ಲಿ ಕ್ಷೇತ್ರಜ್ಞ ಎ ಒಬ ನಾಮಧೇಯವು ಪ್ರಸಿದ್ಧ ಎಂಬುವಲ್ಲಿ ಭಾಗವತ ಸಮ್ಮತಿಯನ್ನು ಹೇಳುತ್ತಾರೆ--) ವಾರತಂತ್ರ್ಯ ಮೊದಲಾದ ದೋಷಗಳಿಲ್ಲದಿರುವ ಶ್ರೀವಿಷ್ಣುವು ಅಸ್ವತಂತ್ರಕರ್ತನಾದ ಅಥವಾ ಭ್ರಾಂತಿಯಿಂದ ಕರ್ತನೆಂದು ಅಭಿಮಾನವುಳ್ಳ, ಜೀವನ, ನಿಮಿತ್ತಭೂತ ಈಶ್ವರೇಚ್ಛೆಯಿಂದ ನಿರ್ಮಿಸಲ್ಪಟ್ಟ, ಮತ್ತು ಜಾಗ್ರದವಸ್ಥೆಯಲ್ಲಿ ಅವಿರ್ಭೂತಗಳೂ, ಸ್ವಪ್ನ ಸುಷುಪ್ತ್ಯವಸ್ಥೆಗಳಲ್ಲಿ ತಿರೋಹಿತಗಳೂ ಆದ ಜೀವನ ಮನೋವಿಕಾರಗಳಿಂದ ಬಾಹ್ಯವಿಷಯಾನುಭವ ಸುಖಾದಿಗಳನ್ನು ನೋಡುತ್ತಾನೆ, ಎಂದು ಭಾಗವತದಲ್ಲಿ ಹೇಳಿದೆ (೨) (ಕಾರಣಾಂತರದಿಂದಲೂ **ಏತದ್ಯೋ ವೇತ್ತಿ** ಎಂಬುವುದು ಜೀವನನ್ನು ಹೇಳತಕ್ಕುದಲ್ಲವೆನ್ನುತ್ತಾರೆ--) ಜೀವನು ಇಲ್ಲಿ ವಿವಕ್ಷಿತನಾಗದಿದ್ದ ಪ್ರಯುಕ್ತನೇ **ಏತದ್ಯೋ ವೇತ್ತಿ** ಎಂಬುವಲ್ಲಿ ಶ್ರೀಪರಮಾತ್ಮನು ಹೇಳಿಸಿಕೊಳ್ಳಲ್ಪಡುತ್ತಾನೆ ಎಂಬುವ ಅಭಿಪ್ರಾಯದಿಂದ ಸಾಮಾನ್ಯವಾಗಿ ಕ್ಷೇತ್ರಜ್ಞಶಬ್ದವನ್ನು ಹೇಳಿದುದರಿಂದ ಜೀವನಿಗೂ ಸ್ವಲ್ಪ ಕ್ಷೇತ್ರಜ್ಞತ್ವವು ಇದೆ ಆದುದರಿಂದ ಜೀವನೂ ಕ್ಷೇತ್ರಜ್ಞನೆಂದು ಆಗಬೇಕಾಗಿ ಪ್ರಸಕ್ತಿಯಿದ್ದುದರಿಂದ ಜೀವನಿಗೆ ಕ್ಷೇತ್ರಜ್ಞತ್ವವು ಬರಬಾರದೆಂಬುವುದಕ್ಕಾಗಿ **ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ** ಎಂದು ಹೇಳಿರುತ್ತಾರೆ (೩) ಹೀಗೆ ಅಭಿಪ್ರಾಯವಿಲ್ಲದಿದ್ದರೆ ಶ್ರೀಹರಿಗೆ **ಏತದ್ಯೋ ವೇತ್ತಿ** ಎಂಬುವುದರಿಂದಲೇ ಕ್ಷೇತ್ರಜ್ಞತ್ವವು ಸಿದ್ಧಿಸುವುದರಿಂದ **ಕ್ಷೇತ್ರಜ್ಞಂ ಮಾಂ** ಎಂದು ಮರಳಿ ಕೇಳಿದ್ದು ವ್ಯರ್ಥವಾಗುವುದು (೪) (ಜೀವನೂ ಕ್ಷೇತ್ರಜ್ಞನೂ ಬೇರೆ ಬೇರೆ ಎಂದು ಒಡಂಬಟ್ಟರೆ **ಕ್ಷೇತ್ರಜ್ಞಂ ಚಾಪಿ** ಎನ್ನುವುದರಿಂದಲೇ ಶ್ರೀಹರಿಯೂ ಕ್ಷೇತ್ರಜ್ಞನೆಂದೂ ಸಿದ್ಧಿಸುವ ಪ್ರಯುಕ್ತ **ಏತದ್ಯೋ ವೇತ್ತಿ** ಎಂಬುವುದು ವ್ಯರ್ಥವಾಗುವುದು, ಎಂದರೆ –) ಜೀವನು ಕ್ಷೇತ್ರಜ್ಞನೆಂದು ಹೇಳಿ ಅಂತಹ ಜೀವನಿಗೆ ಶ್ರೀಪರಮಾತ್ಮನಿಂದ ಐಕ್ಯವು ಹೇಳಲ್ಪಡುತ್ತದೆ, ಇತ್ಯಾದಿ ಪರಕೀಯರು

ಹೇಳುವ ಅರ್ಥವನ್ನು ಅಂಗೀಕರಿಸದೆ ಶ್ರೀಹರಿಯೇ ಕ್ಷೇತ್ರಜ್ಞನೆಂದು ಒಡಂಬಟ್ಟರೂ **ಏತದ್ಯೋ ವೇತ್ತಿ** ಎಂಬುವುದರಿಂದ **ಕ್ಷೇತ್ರಜ್ಞ** ಎಂಬುವ ನಾಮವನ್ನು ಶ್ರೀಪರಮಾತ್ಮನಲ್ಲಿ ನಿರ್ವಚನ ಮಾಡುವುದಕ್ಕಾಗಿ **ಏತದ್ಯೋ ವೇತ್ತಿ** ಎಂಬುವುದು ಸಾರ್ಥಕವೇ ಆಗುತ್ತದೆ (೫) (ಕ್ಷೇತ್ರಂ ಜಾನಾತೀತಿ ಕ್ಷೇತ್ರಜ್ಞಃ ಎಂದು ಕ್ಷೇತ್ರಜ್ಞ ಎಂಬುವ ನಾಮನಿರ್ವಚನವು ಪ್ರಸಿದ್ಧವಾಗಿರುವುದರಿಂದ **ಕ್ಷೇತ್ರಜ್ಞಂ ಚಾಪಿ ಮಾಂ** ಎಂದಿಷ್ಟೇ ಸಾಕು. ನಿರ್ವಚನವು ಏತಕ್ಕೆಂದರೆ—) ಕ್ಷೇತ್ರಜ್ಞಂ ಚಾಪಿ **ಮಾಂ** ಎಂದಿಷ್ಟೇ ಹೇಳಿದರೆ— ಕೆಲವರು ಕ್ಷೇತ್ರಂ ಚ ಜ್ಞಶ್ಚ ಎಂದು ಬೇರೆ ವ್ಯುತ್ಪತ್ತಿಯನ್ನು ಇಟ್ಟುಕೊಂಡು ಜೀವ ಜಡಾತ್ಮಕ ಸಮಸ್ತ ಪ್ರಪಂಚದಿಂದಲೂ ಶ್ರೀಪರಮಾತ್ಮನಿಗೆ ಅಭೇದವನ್ನು ಹೇಳುವರು. ಅದನ್ನು ನಿರಾಕರಿಸುವುದಕ್ಕಾಗಿ **ಕ್ಷೇತ್ರಂ ಜಾನಾತೀತಿ ಕ್ಷೇತ್ರಜ್ಞಃ** ಎಂದು ಗೀತೆಯಲ್ಲಿ ಪ್ರಸಿದ್ಧವಾದ ವ್ಯುತ್ಪತ್ತಿಯನ್ನೇ ಹೇಳಿದ್ದು. (೬) (ಕ್ಷೇತ್ರಜ್ಞಂ ಚಾಪಿ ಎಂಬುವ ವಾಕ್ಯಕ್ಕೆ ಸರಿಯಾದ ಯೋಜನೆಯನ್ನು ತೋರಿಸುತ್ತಾರೆ -) ಕ್ಷೇತ್ರಜ್ಞನಾದ ನನ್ನನ್ನೇ ಪ್ರಕೃತಿ ಮೊದಲಾದ ಸಮಸ್ತ ಕ್ಷೇತ್ರಗಳಲ್ಲಿಯೂ ನಿಯಾಮಕನಾಗಿ ಇರುವವನ್ನಾಗಿ ತಿಳಿದುಕೊ, ಎಂದರ್ಥವು (ಅಂದರೆ ಪ್ರಕೃತ್ಯಾದಿಗಳು ಪರಮಾತ್ಮನ ಆವಾಸಸ್ಥಾನಗಳಾಗಿರುವುದರಿಂದಲೂ ಶ್ರೀಪರಮಾತ್ಮನ ಅಧೀನಗಳಾಗಿರುವುದರಿಂದ ಶರೀರಸ್ಥಾನೀಯಗಳಾಗಿರುವುದರಿಂದಲೂ **ಕ್ಷೇತ್ರ**ವೆಂದು ಅನ್ನಿಸಿಕೊಳ್ಳುತ್ತವೆ) ॥ ೩ ॥

ಪೀ—**ಏತದ್ಯೋ ವೇತ್ತಿ** ಎಂದು ಜೀವನಿಗೆ ಕ್ಷೇತ್ರಜ್ಞತ್ವವನ್ನು ಹೇಳಿ **ಕ್ಷೇತ್ರಜ್ಞಂ ಚಾಪಿ ಮಾಂ** ಎನ್ನುವುದರಿಂದ ಶ್ರೀಪರಮಾತ್ಮನಿಗೂ ಕ್ಷೇತ್ರಜ್ಞತ್ವವು ಹೇಳಲ್ಪಡುವ ಕಾರಣ ವೈಯರ್ಥ್ಯವಿಲ್ಲವೆಂದು ಪರರು ಹೇಳುವುದು ಅಯುಕ್ತವೆನ್ನುತ್ತಾರೆ—

ತಾ ॥ (೧) ತತ್ಪಕ್ಷೇ ತು ಯೋ ನೇತ್ತೀತ್ಯುಕ್ತ ಈಶ್ವರಸ್ಯಾಪಿ ಕ್ಷೇತ್ರಜ್ಞತ್ವಂ ಸಿದ್ಧಮೇವ ॥(೨) ಸರ್ವಾಭೇದವಿವಕ್ಷಾಯಾಂ ಚ ಸರ್ವಂ ಕ್ಷೇತ್ರಮಿತಿ ವಕ್ತವ್ಯಂ ಕ್ಷೇತ್ರೇಷ್ವಿತಿ ವ್ಯರ್ಥಂ ॥ (೩) ನ ಚ ತತ್ಪಕ್ಷೇ ಮಾಮಿತ್ಯಸ್ಯ ಕಶ್ಚಿದ್ವಿಶೇಷಃ ॥ (೪) ಕಿಂ ತ್ವೇಕ ಏವ ಕ್ಷೇತ್ರ ಇತಿ ವಕ್ತವ್ಯಂ ॥ ೪ ॥ ॥ ೧,೨,೩ ॥

ಆ ॥ (೧) **ಏತದ್ಯೋ ವೇತ್ತಿ** ಎಂಬುದು ಜೀವವಿಷಯಕವೆಂದು ಹೇಳುವುದಾದರೆ ಕ್ಷೇತ್ರಂ ಜಾನಾತೀತಿ ಕ್ಷೇತ್ರಜ್ಞಃ, ಎಂಬುವ ವ್ಯುತ್ಪತ್ತಿಯು ಜೀವನಲ್ಲಿದ್ದಂತೆ ಶ್ರೀಹರಿಯಲ್ಲಿಯೂ ಇದ್ದು ಪ್ರಯುಕ್ತ **ಏತದ್ಯೋ ವೇತ್ತಿ** ಎಂಬುದರಿಂದಲೇ ಶ್ರೀಪರಮಾತ್ಮನಿಗೂ ಕ್ಷೇತ್ರಜ್ಞತ್ವವು ಸಿದ್ಧವೇ ಆಗುತ್ತದ ಆದಕಾರಣ **ಕ್ಷೇತ್ರಜ್ಞಂ ಚಾಪಿ ಮಾಂ** ಎಂಬುವ ವಾಕ್ಯವು ವ್ಯರ್ಥವೇ ಆಗುವುದು (೨) (ಕ್ಷೇತ್ರಜ್ಞನೆಂದು ಹೇಳಿದ ಜೀವನಿಗೂ ಪ್ರಕೃತಿ ಮೊದಲಾದ ಕ್ಷೇತ್ರಕ್ಕೂ ಶ್ರೀಪರಮಾತ್ಮನಿಂದ ಅಭೇದವನ್ನು ಹೇಳುವುದಕ್ಕಾಗಿ **ಕ್ಷೇತ್ರಜ್ಞಂ ಚಾಪಿ ಮಾಂ** ಎಂಬುದು ಸಾರ್ಥಕವು, ಎಂದು ಪರರು ಹೇಳಿದ್ದೂ ಅಯುಕ್ತವೆನ್ನುತ್ತಾರೆ—) **ಕ್ಷೇತ್ರಜ್ಞಂ ಚಾಪಿ ಮಾಂ** ಎಂಬುವಲ್ಲಿ ಕ್ಷೇತ್ರ ಕ್ಷೇತ್ರಜ್ಞ ಎಲ್ಲದಕ್ಕೂ ಅಭೇದವು ಎಂದು ಹೇಳುವುದಾದರೆ—**ಸರ್ವಕ್ಷೇತ್ರಂ, ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ,** ಎಂದು ಹೇಳಬೇಕಿತ್ತು **ಸರ್ವ ಕ್ಷೇತ್ರೇಷು** ಎಂದು ಸಪ್ತಮಿ ಪ್ರಯೋಗವು ಕೂಡದೆಹೋಗುವುದು. (೩) (ಹಾಗಾದರೆ ಕ್ಷೇತ್ರಜ್ಞನಿಗೇನೇ ಶ್ರೀಪರಮಾತ್ಮನಿಂದ ಅಭೇದವು ಹೇಳಲ್ಪಡಲಿ ಹಾಗೆ ಹೇಳಿದರೆ ಬಾಧಕವಿಲ್ಲವೆಂದರೆ-) ಕ್ಷೇತ್ರಜ್ಞನೆಂದು ಹೇಳಿದ ಜೀವನಿಗೂ ಶ್ರೀಪರಮಾತ್ಮನಿಗೂ ಐಕ್ಯವು ವಿವಕ್ಷಿತವಾಗಿದ್ದರೆ **ಕ್ಷೇತ್ರಜ್ಞಃ ಅಹಂ ಚೈಕ ಏವ** ಎಂದು ಹೇಳಬೇಕಿತ್ತು ಕ್ಷೇತ್ರಜ್ಞನು ಶ್ರೀಪರಮಾತ್ಮನು ಎಂದು ಹೇಳಿದ್ದು ಕೂಡದೆ ಹೋಗಬೇಕಾಗುವುದು ಜೀವನನ್ನು ಇಟ್ಟುಕೊಂಡು **ಮಾಂ** ವಿದ್ಧಿ ಎಂದು ವಿಧಾನಮಾಡಲಿಕ್ಕೆ ಅವರ ಮತದ್ದು ಜೀವನಂತೆ ಶ್ರೀಪರಮಾತ್ಮನೂ ಕಲ್ಪಿತನಾದ ಪ್ರಯುಕ್ತ ವಿಶೇಷವಿಲ್ಲ. ॥ ೧—೩ ॥

ಪೀ—ಕ್ಷೇತ್ರಾದಿಗಳ ಸ್ವರೂಪವನ್ನು ಹೇಳುತ್ತೇನೆನ್ನುತ್ತಾರೆ—

ಗೀ॥ ತತ್ಕ್ಷೇತ್ರಂ ಯಚ್ಚ ಯಾದೃಕ್ಚ ಯದ್ವಿಕಾರಿ ಯತಶ್ಚ ಯತ್ ।
ಸ ಚ ಯೋ ಯತ್ಪ್ರಭಾವಶ್ಚ ತತ್ಸಮಾಸೇನ ಮೇ ಶೃಣು ॥ ೪ ॥

ಅ ॥ ತತ್ ಕ್ಷೇತ್ರಂ= ಪರಮಾತ್ಮನಿಗೆ ಆವಾಸಸ್ಥಾನವೆಂದು ಹೇಳಿದ ಕ್ಷೇತ್ರವು, (ಅಂದರೆ ಜೀವರಿಗೆ ದೇಹದ್ವಾರಾ ಹಿಂಸಾಕ್ಕೆ ಕಾರಣವಾಗಿರುವುದರಿಂದಲೂ (ಜೀವರ ದೇಹಕ್ಕೆ ನಾಶವಿರುವುದು ಜೀವರಿಗೆ ನಾಶವಿಲ್ಲ) ಪರಮಾತ್ಮನಿಂದ ಪ್ರೇರೇಪಿಸಲ್ಪಡುವುದರಿಂದಲೂ ಶರೀರ ಎನಿಸಿಕೊಂಡ ಅವ್ಯಕ್ತ ಮೊದಲಾದುದು,) (1) ಯಚ್ಚ = ಯಾವುದು? ಅದರ ಸ್ವರೂಪವು ಯಾವುದು? (2) ಯಾದೃಕ್ಚ = ಯಾವ ಧರ್ಮವುಳ್ಳದ್ದು? (3) ಯದ್ವಿಕಾರಿ = ಎಂತಹ ವಿಕಾರದಿಂದ ಕೂಡಿದ್ದು (ಯಾವುದಕ್ಕೆ ಉಪಾದಾನಕಾರಣವಾಗುವುದು?) (4) ಯತಃ=ಪ್ರವೃತ್ತಿಗೆ ಅನುಕೂಲವಾದ ಎಂತಹ ಧರ್ಮವಿರುವ ಪುರುಷನಿಂದ, ಯತ್= ಪ್ರವರ್ತಿಸುತ್ತದೆ (5) ಸ ಚ=ಪ್ರವರ್ತಕನಾದ ಪುರುಷನು ಯಃ=ಎಂತಹ ಸ್ವರೂಪವುಳ್ಳವನು? (6) ಯತ್ಪ್ರಭಾವಶ್ಚ=ಎಂತಹ ವಿಶೇಷ ಸಾಮರ್ಥ್ಯವುಳ್ಳವನೋ ತತ್ = ಅಂತಹುದೆಲ್ಲವನ್ನು, ಸಮಾಸೇನ= ಸಂಕ್ಷೇಪದಿಂದ ಮೇ=ನನ್ನಿಂದ, ಶೃಣು = ಕೇಳಿ ಆಸಕ್ತಿಯನ್ನು ಮಾಡು ॥ ೪ ॥

ಪೀ — **ಯದ್ವಿಕಾರಿ** ಎಂಬುವುದಕ್ಕೆ ಯಃ ವಿಕಾರಃ ಯಸ್ಯ ಎಂದು ಪರರು ವ್ಯಾಖ್ಯಾನ ಮಾಡಿದರೆ ಇನ್ ಪ್ರತ್ಯಯವು ವ್ಯರ್ಥವಾಗುವುದರಿಂದ ಇನ್ ಪ್ರತ್ಯಯಕ್ಕೆ ವೈಯರ್ಥ್ಯವು ಬಾರದಂತೆ ಅರ್ಥವನ್ನು ಹೇಳುತ್ತಾರೆ—

ಭಾ ॥ (೧) ಯದ್ವಿಕಾರಿ ಯೇನ ವಿಕಾರೇಣ ಯುಕ್ತಂ । ಯತಶ್ಚ ಯತ್ ಯತೋ ಯಾತಿ ಪ್ರವರ್ತತೇ । ಸ ಚ ಪ್ರವರ್ತಕಃ ॥ (೨) ಯತಶ್ಚ ಯದಿತ್ಯಸ್ಮಾತ್ಪ್ರವರ್ತತೇ । ಕ್ಷೇತ್ರ-ಮಿತಿ ವಚನಂ ॥ (೩) ಸ ಚ ಯ ಇತಿ ಸ್ವರೂಪಮಾತ್ರಂ ॥ ೪ ॥

ಅ ॥ (೧) ಯದ್ವಿಕಾರಿ=ಯಾವ ವಿಕಾರದಿಂದ ಕೂಡಿಕೊಂಡಿದೆಯೋ, (ಇದರಿಂದ ಯಶ್ಚಾಸೌ ವಿಕಾರಶ್ಚ ಯದ್ವಿಕಾರಃ । ಯದ್ವಿಕಾರಃ ಅಸ್ಯಾಸ್ತೀತಿ ಯದ್ವಿಕಾರಿ, ಎಂದು ವಿಗ್ರಹವು ತೋರಿಸಲ್ಪಟ್ಟಿತು) (೨) **(ಯತಶ್ಚ ಯತ್** ಎಂಬುವುದಕ್ಕೆ ಯಾರಿಂದ ಯಾವ ಕಾರ್ಯವು ಹುಟ್ಟುತ್ತದೋ, ಎಂಬುವ ವ್ಯಾಖ್ಯಾನವು ಅಯುಕ್ತವೆಂಬೀ ಅರ್ಥವು ಯದ್ವಿಕಾರಿ ಎಂಬುವುದರಿಂದಲೇ ಸಿಗುತ್ತದೆ ಆದ ಕಾರಣ ಬೇರೆ ರೀತಿಯಾಗಿ ಅರ್ಥವನ್ನು ಹೇಳುತ್ತಾರೆ—) ಯಾರ ಪ್ರೇರಣೆಯಿಂದ ಹೋಗುತ್ತದೋ, ಮತ್ತು ಕಾರ್ಯದಲ್ಲಿ ಪ್ರವರ್ತಿಸುತ್ತದೋ, ಅವನೇ ಪ್ರವರ್ತಕನು (ಜೀವನು ಪ್ರಸ್ತುತನಾಗದಿರುವುದರಿಂದ **ಸ ಚ ಯಃ** ಎಂಬುದು ಜೀವನನ್ನು ಹೇಳುತ್ತದೆಂದು ಪರರು ಹೇಳುವುದು ಅಯುಕ್ತವು) **ಯತಶ್ಚ ಯತ್** ಎಂಬುವ ವಚನವು ಇಂತಹ ಧರ್ಮಗಳಿರುವ ಶ್ರೀಪರಮಾತ್ಮನಿಂದಲೇ ಅವ್ಯಕ್ತಾದಿಗಳು ಪ್ರವರ್ತಿಸುತ್ತವೆ, ಎಂದು ಹೇಳುವುದಕ್ಕೆ ಪ್ರತಿಜ್ಞಾರೂಪವು. **ಸ ಚ ಯಃ** ಎಂಬುವ ವಚನವು ಪ್ರವರ್ತಕನ ಸ್ವರೂಪಮಾತ್ರವನ್ನು ಹೇಳಲಿಕ್ಕೆ ಪ್ರತಿಜ್ಞಾರೂಪವು. ಹೀಗೆ ಭೇದವು ॥ ೪ ॥

ಪೀ - ಕೇಳುವವರಿಗೆ ವಿಶ್ವಾಸವು ಹುಟ್ಟುವುದಕ್ಕಾಗಿ ಹೇಳುವುದೆಲ್ಲವೂ ಪ್ರಾಮಾಣಿಕವೆನ್ನುತ್ತಾರೆ—

ಗೀ॥ ಋಷಿಭಿರ್ಬಹುಧಾ ಗೀತಂ ಛಂದೋಭಿರ್ವಿವಿಧೈಃ ಪೃಥಕ್ ।
ಬ್ರಹ್ಮಸೂತ್ರಪದೈಶ್ಚೈವ ಹೇತುಮದ್ಭಿರ್ವಿನಿಶ್ಚಿತೈಃ ॥ ೫ ॥

ಅ ॥ (ಕ್ಷೇತ್ರಾದಿಗಳ ಸ್ವರೂಪವು) ಋಷಿಭಿಃ=ಋಷಿಗಳಿಂದ, ಬಹುಧಾ=ಬಹುಪ್ರಕಾರ, ಗೀತಂ=(ಮನು ಯಾಜ್ಞವಲ್ಕ್ಯ ಮೊದಲಾದ ಸ್ಮೃತಿಗಳಲ್ಲಿ) ಹೇಳಲ್ಪಟ್ಟಿದೆ ವಿವಿಧೈಃ=ಬಹುವಿಧಗಳಾದ, ಛಂದೋಭಿಃ=ವೇದಗಳಿಂದ, ಪೃಥಕ್=ಪ್ರತ್ಯೇಕವಾಗಿ, ಗೀತಂ=ಹೇಳಲ್ಪಟ್ಟಿದೆ. ಹೇತುಮದ್ಭಿಃ=ಯುಕ್ತಿಗಳಿಂದ ಕೂಡಿರುವ, ಬ್ರಹ್ಮಸೂತ್ರಪದೈಶ್ಚ=ಬ್ರಹ್ಮಸೂತ್ರಪದಗಳಿಂದಲೂ, ವಿನಿಶ್ಚಿತಮೇವ=ನಿಶ್ಚಯಿಸಲ್ಪಟ್ಟಿದ್ದನ್ನೇ, ಶೃಣು=ಕೇಳಲು ಆಸಕ್ತಿಯನ್ನು ಮಾಡು. ॥ ೫ ॥

ಪೀ—ಕ್ಷೇತ್ರಂ ಯಚ್ಚ, ಯಾದೃಕ್ಚ ತತ್ ಶೃಣು ಎಂದು ಪ್ರತಿಜ್ಞಾ ಮಾಡಿದ್ದನ್ನು ಹೇಳುತ್ತಾರೆ—

ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವ ಚ ।
ಇಂದ್ರಿಯಾಣಿ ದಶೈಕಂ ಚ ಪಂಚ ಚೇಂದ್ರಿಯಗೋಚರಾಃ ॥ ೬ ॥

ಅ ॥ ಮಹಾಭೂತಾನಿ=ಪೃಥಿವೀ, ಜಲ, ತೇಜಸ್ಸು, ವಾಯು, ಆಕಾಶ, ಎಂಬುವ ಪಂಚ ಮಹಾಭೂತಗಳೂ, ಅಹಂಕಾರಃ=(ಮಹತ್ತತ್ತ್ವವೂ) ಅಹಂಕಾರತತ್ತ್ವವೂ, ಬುದ್ಧಿಃ=ಅಂತಃಕರಣದ ವ್ಯಾಪಾರವಿಶೇಷವೂ, ಅವ್ಯಕ್ತಮೇವ=ಸತ್ವರಜಸ್ತಮೋಗುಣಾತ್ಮಕವಾದ ಪ್ರಧಾನವೂ, ಇಂದ್ರಿಯಾಣಿ ದಶ ಏಕಂ ಚ=ಚಕ್ಷುಃ ಶ್ರೋತ್ರ, ಘ್ರಾಣ, ರಸನ, ತ್ವಕ್, ಎಂಬೀ ಜ್ಞಾನೇಂದ್ರಿಯಗಳು, ವಾಕ್, ಪಾಣಿ, ಪಾದ, ಪಾಯು, ಉಪಸ್ಥ ಎಂಬುವ ಕರ್ಮೇಂದ್ರಿಯಗಳು ಮನಸ್ಸು, ಹೀಗೆ ೧೧ ಇಂದ್ರಿಯಗಳೂ, ಇಂದ್ರಿಯಗೋಚರಾಃ=ಶ್ರೋತ್ರಮೊದಲಾದ ಇಂದ್ರಿಯಗಳಿಗೆ ಗೋಚರಗಳಾದ, ಪಂಚ ಚ=ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಎಂಬೀ ಐದು ವಿಷಯಗಳೂ, (ಹೀಗೆ ಕ್ಷೇತ್ರವು ಸಂಕ್ಷೇಪವಾಗಿ ಮಹಾಭೂತತ್ವಾದಿ ಪ್ರಕಾರಗಳಿಂದ ಯುಕ್ತವಾದುದೆಂದು ಹೇಳಲ್ಪಟ್ಟಿತು) ॥ ೬ ॥

ಪೀ—ಪರಬ್ರಹ್ಮನನ್ನು ಸೂಚಿಸುವ ವಾಕ್ಯಗಳು ಬ್ರಹ್ಮಸೂತ್ರಗಳು, ಎಂದು ಹೇಳಿದರೆ ಪರಬ್ರಹ್ಮ ಸೂಚಕತ್ವವು ವೇದಗಳಿಗೂ ಋಷಿವಾಕ್ಯಗಳಿಗೂ ಇರುವುದರಿಂದ ಋಷಿಭಿಃ ಇತ್ಯಾದಿಗಳು ವ್ಯರ್ಥವಾಗುವುದೆಂಬುವ ಅಭಿಪ್ರಾಯದಿಂದ ರೂಢಾರ್ಥವನ್ನು ಹೇಳುತ್ತಾರೆ—

ಭಾ ॥ ಬ್ರಹ್ಮಸೂತ್ರಾಣಿ ಶಾರೀರಕಸೂತ್ರಾಣಿ ॥ ೫,೬ ॥

ಅ ॥ ಬ್ರಹ್ಮಸೂತ್ರಾಣಿ=ವೇದವ್ಯಾಸರಿಂದ ನಿರ್ಮಿಸಲ್ಪಟ್ಟ ವೇದಾರ್ಥನಿರ್ಣಾಯಕಗಳಾದ ಸರ್ವರ ಶರೀರಗಳಲ್ಲಿ ನಿಯಾಮಕ ಪರಬ್ರಹ್ಮ ಪ್ರತಿಪಾದಕಗಳಾದ ವಿಮಾಮಾಂಸಾ ಸೂತ್ರಗಳು ॥ ೫ ೬ ॥

ಪೀ—ಕ್ಷೇತ್ರಂ ಯದ್ವಿಕಾರಿ ಎಂದು ಪ್ರತಿಜ್ಞೆ ಮಾಡಿದ ಕ್ಷೇತ್ರದ ವಿಕಾರಗಳನ್ನು ಹೇಳುತ್ತಾರೆ—

ಗೀ॥ ಇಚ್ಛಾ ದ್ವೇಷಃ ಸುಖಂ ದುಃಖಂ ಸಂಘಾತಶ್ಚೇತನಾ ಧೃತಿಃ ।
ಏತತ್ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಂ ॥ ೭ ॥

ಅ ॥ ಇಚ್ಛಾ=ಇಚ್ಛೆಯೂ, ದ್ವೇಷಃ=ದ್ವೇಷವೂ, ಸುಖಂ=ಸುಖವೂ, ದುಃಖಂ=ದುಃಖವೂ, ಸಂಘಾತಃ=ದೇಹವೂ, ಚೇತನಾ=ಮನಸ್ಸಿನ ವ್ಯಾಪ್ತಿಯೂ, ಧೃತಿಃ=ಧೈರ್ಯವೂ, ಏತತ್ ಕ್ಷೇತ್ರಂ=ಈ ಹಿಂದೆ ಹೇಳಿದ ಕ್ಷೇತ್ರವು, ಸವಿಕಾರಂ=ಇಚ್ಛಾ ಮೊದಲಾದ ವಿಕಾರಗಳಿಂದ ಕೂಡಿದ್ದೆಂದು, ಸಮಾಸೇನ=ಸಂಕ್ಷೇಪದಿಂದ, ಉದಾಹೃತಂ=ಹೇಳಲ್ಪಟ್ಟಿದೆ

ವಿ ॥ ಮಹಾಭೂತಾದಿ ಕ್ಷೇತ್ರಾಭಿಮಾನಿಗಳೂ ಆ ಕ್ಷೇತ್ರಗಳ ವಿಕಾರಗಳಾದ ಇಚ್ಛಾದ್ಯಭಿಮಾನಿಗಳೂ ಯಾರಂದರೆ – (1) ಭೂತಾಕಾಶಾಭಿಮಾನಿಯು ವಿಷ್ಣ್ವೀಶನು (2) ವಾಯುವಿಗೆ ಅಭಿಮಾನಿಯು ಮರೀಚಿ ಎನ್ನುವ ಮುಖ್ಯ ವಾಯುಪುತ್ರನು (3) ತೇಜಸ್ಸಿಗೆ ಅಭಿಮಾನಿಯು ವಹ್ನಿಯು. (4) ಜಲಾಭಿಮಾನಿಯು ವರುಣನು (5) ಭೂಮಿಗೆ ಅಭಿಮಾನಿನಿಯು ಧರಾದೇವಿಯು (6) ಅಹಂಕಾರತತ್ವಕ್ಕೆ ಶಿವನು (7) ಮಹತ್ತತ್ವಕ್ಕೆ ಚತುರ್ಮುಖ ಬ್ರಹ್ಮನು (8) ಬುದ್ಧಿಗೆ ಪಾರ್ವತಿಯು (9) ಅವ್ಯಕ್ತಕ್ಕೆ ಲಕ್ಷ್ಮೀದೇವಿಯು. (11) ಮನೋರೂಪವಾದ ಇಂದ್ರಿಯಕ್ಕೆ ಸ್ಕಂದ ಇಂದ್ರ ಅನಿರುದ್ಧರು. (12) ಕಿವಿಗೆ ಚಂದ್ರನು. (13) ತ್ವಗಿಂದ್ರಿಯಕ್ಕೆ ವಾಯುಪುತ್ರನಾದ ಮರುತನು (14) ಕಣ್ಣಿಗೆ ಸೂರ್ಯನು (15) ನಾಲಿಗೆಗೆ ವರುಣನ ರೂಪಾಂತರವು (16) ಘ್ರಾಣೇಂದ್ರಿಯಕ್ಕೆ ಅಶ್ವಿನೀ ದೇವತೆಗಳು (17) ವಾಗಿಂದ್ರಿಯಕ್ಕೆ ಅಗ್ನಿಯು (18) ಹಸ್ತಗಳಿಗೆ ವಾಯುಪುತ್ರರಾದ ಮರುತ್ತ್ಗಳು (19) ಪಾದಗಳಿಗೆ ವಿಷ್ಣುವಿನ ಆವೇಶವುಳ್ಳ ಯಜ್ಞ, ಶಂಭುನಾಮಕರಾದ ಶಚೀಪುತ್ರರು (20) ಗುದಕ್ಕೆ ಯಮನು. (21) ಗುಹ್ಯೇಂದ್ರಿಯಕ್ಕೆ ಶಿವ, ಮನು, ಇವರು, (22) ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಿಗೆ ಐದು ಮಂದಿ ಶಿವ ಪುತ್ರರು ಅಭಿಮಾನಿಗಳು (23) ಇಚ್ಛೆಗೆ ಲಕ್ಷ್ಮೀ ಭಾರತೀಯರು (24) ದ್ವೇಷ ದುಃಖಗಳಿಗೆ ಕಲಿ ದ್ವಾಪರರು ಅಭಿಮಾನಿಗಳು (25) ಸುಖಕ್ಕೆ ಮುಖ್ಯ ವಾಯುವು (26) ಧೃತಿಗೆ ಸರಸ್ವತೀ ಭಾರತೀಯರು (27) ಚೇತನಾಕ್ಕೆ ಲಕ್ಷ್ಮೀದೇವಿಯು (28) ಸಂಘಾತಕ್ಕೆ ಇವರಿಂದ ಭಿನ್ನರಾದ ಚೇತನರು- ॥ ೭ ॥

ಪೀ— ಕ್ಷೇತ್ರವು ಯಾವುದು, ವಿಕಾರಗಳು ಯಾವವು ಎಂದರೆ—

ಭಾ ॥ ಇಚ್ಛಾದಯೋ ವಿಕಾರಾಃ ॥ ೭ ॥

ಅ ॥ ಇಚ್ಛಾ ಮೊದಲಾದವುಗಳು ಪ್ರಕೃತ್ಯಾದಿಗಳ ವಿಕಾರಗಳು, (ಅದಕ್ಕಿಂತ ಮೊದಲಿನ ಶ್ಲೋಕದಲ್ಲಿ ಹೇಳಿದ್ದು ಕ್ಷೇತ್ರವು) ॥ ೭ ॥

ಪೀ—**ತತ್ ಕ್ಷೇತ್ರಂ ಯತ್** (ಶ್ಲೋ ೪) ಎಂದು ಹೇಳಿದ್ರಿಂದ ತಿರುಗಿ **ಯತಶ್ಚ ಯತ್** ಎಂದು ಹೇಳಿದ್ದು ಪುನರುಕ್ತವಾಯಿತು, ಎಂದರೆ—

ತಾ ॥ (೧) ಯತಶ್ಚ ಯತ್ । ಯತಃ ಪರಮೇಶ್ವರಾನುಮತೇರಿದಂ ಯಾತಿ ಪ್ರವರ್ತತೇ ಸ ಚಾನುಮಂತಾ ಯಃ ॥ (೨) ಅನುಸಾರಿಣೀ ಮತಿರನುಮತಿಃ ಪ್ರೇರಣರೂಪಾ । ಪ್ರೇರಣಾಽನುಮತಿಃ ಪ್ರೋಕ್ತಾ ಕ್ವಚಿತ್ಸಂವಾದ ಉಚ್ಯತೇ । ಪ್ರೇರಕತ್ವಾತ್ತು ಭಗವಾನನುಮಂತಾ ಪ್ರಕೀರ್ತಿತ ಇತಿ ಚ ॥ (೩) ಉಪದ್ರಷ್ಟಾನುಮಂತಾ ಚೇತ್ಯನೇನೈವಾನುಮತಿರನುಮಂತಾ ಚೋಕ್ತಃ ॥ (೪) ಜ್ಞೇಯಂ ಯತ್ತದಿತ್ಯಾದಿನಾ ಯತ್ಸಭಾವ ಇತ್ಯಪಿ ॥ (೫) ಚೇತನಾ ಚಿತ್ತವ್ಯಾಪ್ತಿಃ । ಸಂಘಾತೋ ದೇಹ ಉದ್ದಿಷ್ಟಶ್ಚಿತ್ತವ್ಯಾಪ್ತಿಸ್ತು ಚೇತನೇತಿ ಚ ॥ ೪—೭ ॥

ಅ ॥ (೧) ಯತಶ್ಚ = ಯಾವ ಸರ್ವೋತ್ತಮನಾದ ಶ್ರೀಪರಮಾತ್ಮನ ಪ್ರೇರಣೆಯಿಂದ ಅವ್ಯಕ್ತ ಮೊದಲಾದುದು ಪ್ರವರ್ತಿಸುತ್ತದೋ, ಅಂತಹ ಪ್ರೇರಕನು ಯಾವನೋ (ಅವನ ಸ್ವರೂಪವನ್ನು ಹೇಳುತ್ತೇನೆ) (೨) ಕಾರ್ಯೋತ್ಪತ್ತಿಗೆ ಅನುಸಾರಿಯಾದ ಮತಿಯು ಅನುಮತಿಯು ಪ್ರೇರಣರೂಪವಾದುದು (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ.) ಅನುಮತಿಯಿಂದರೆ ಪ್ರೇರಣೆಯು ಕೆಲವು ಕಡೆ ಸಂವಾದವು ಹೇಳಲ್ಪಡುತ್ತದೆ ಶ್ರೀಪರಮಾತ್ಮನು ಸರ್ವಕ್ಕೂ ಪ್ರೇರಕನಾಗಿರುವುದರಿಂದಲೇ **ಅನುಮಂತಾ** ಎನಿಸುತ್ತಾನೆ

(ಖ)(**ಯತಶ್ಚ ಯತ್ ಸ ಚ ಯಃ** ಎಂಬುವುದು ಎರಡು ಪ್ರತಿಜ್ಞೆಗಳಾದರೆ ಅವುಗಳನ್ನು ಹೇಳಬೇಕೆತ್ತು. ಅವು ಎರಡನ್ನು ಹೇಳಲಿಲ್ಲ ಎಂದರೆ –) ಉಪದ್ರಷ್ಟಾ ಅನುಮಂತಾ ಇತ್ಯಾದಿಗಳಿಂದಲೇ ಅನುಮಂತನನ್ನು (ಪ್ರೇರಕ) ಹೇಳಿದ್ರಿಂದ ಅತನ ಧರ್ಮವಾದ ಅನುಮತಿ (ಪ್ರೇರಣೆ) ಯನ್ನು ಹೇಳಿದಂತೆಯೇ ಆಯಿತು. (ಳ) (**ಯತ್ಪ್ರಭಾವಶ್ಚ** ಇತ್ಯಾದಿಗಳಿಂದ ಪ್ರತಿಜ್ಞಾಮಾಡಿದ್ದನ್ನು ಎಲ್ಲಿ ಹೇಳುವುದೆಂದರೆ—) **ಜ್ಞೇಯಂ ಯತ್ತತ್** ಇತ್ಯಾದಿಗಳಿಂದ ಯತ್ಪ್ರಭಾವಃ ಎಂಬುವುದು ಉಕ್ತವಾಯಿತು (ಗ) (ಜೈತನ್ಯಕ್ಕೆ ವಿಕಾರವಿಲ್ಲದಿರುವುದರಿಂದ ವಿಕಾರಗಳಲ್ಲಿ ಚೇತನಾ ಎಂದು ಹೇಳಿದ್ದು ಹೇಗೆ ಎಂದರೆ–) ಚೇತನಾ = ಚಿತ್ತವ್ಯಾಪ್ತಿಯು (ಮಹಾಭೂತಾನಿ ಇತ್ಯಾದಿಗಳಿಂದ ಹೇಳಿದವುಗಳ ಸಮೂಹವು ಕ್ಷೇತ್ರವಾಗಿರುವುದರಿಂದ ಸಂಘಾತವು ಕಾರ್ಯವೆಂದು ಹೇಳಿದ್ದು ಹೇಗೆ ಎಂಬುವ ಆಶಂಕೆಯನ್ನು ಪರಿಹರಿಸಿಕೊಂಡು ಹೇಳಿದ ಅರ್ಧದಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ಸಂಘಾತಃ = ದೇಹವು ಚೇತನಾ = ಚಿತ್ತದ ವ್ಯಾಪ್ತಿಯು, ಎಂದು ಇದೆ. ॥ ೪—೭ ॥

ಪೀ—ಪ್ರತಿಜ್ಞೆಮಾಡಿದ ೬ರ ಮಧ್ಯದಲ್ಲಿ (1) ಯಚ್ಚ (2) ಯಾದೃಕ್ಚ (3) ಯದ್ವಿಕಾರಿ, ಎಂಬೀ ಮೂರನ್ನು ಹೇಳಿ (5) ಸ ಚ ಯಃ (6) ಯತ್ಪ್ರಭಾವಃ, ಎಂಬೀ ಎರಡನ್ನು ಜ್ಞೇಯಂ ಇತ್ಯಾದಿಗಳಿಂದ ಹೇಳುವುದಕ್ಕಾಗಿ ಅಂತಹ ಜ್ಞೇಯವಾದ ಭಗವಜ್ಞಾನದ ಸಾಧನಗಳನ್ನು ೫ ಶ್ಲೋಕಗಳಿಂದ ಹೇಳುತ್ತಾರೆ—

ಗೀ ॥ ಅಮಾನಿತ್ವಮದಂಭಿತ್ವಮಹಿಂಸಾ ಕ್ಷಾಂತಿರಾರ್ಜವಂ ।
ಆಚಾರ್ಯೋಪಾಸನಂ ಶೌಚಂ ಸ್ಥೈರ್ಯಮಾತ್ಮವಿನಿಗ್ರಹಃ ॥ ೮ ॥

ಅ ॥ ಅಮಾನಿತ್ವಂ=ತನ್ನ ನ್ನು ಶ್ಲಾಘನವಾಡಿಕೊಳ್ಳದಿರುವುದು, ಅದಂಭಿತ್ವಂ=ತಾನು ಅತ್ಯಲ್ಪನೆಂದು ತಿಳಿದುಕೊಂಡಿದ್ದರೂ ತಾನು ಮಹಾ ಶ್ರೇಷ್ಠನೆಂದು ತೋರಿಸುವುದು ದಂಭವು, ಹಾಗೆ ತೋರಿಸದೆ ಇರುವಿಕೆಯು, ಅಹಿಂಸಾ = ಬೇರೆಯವರಿಗೆ ಪೀಡೆಯನ್ನು ಕೊಡದಿರುವುದು, ಕ್ಷಾಂತಿಃ = ಸಹಿಸಿಕೊಳ್ಳುವಿಕೆಯು. (ಸುಖ ದುಃಖಾದಿಗಳಲ್ಲಿ ವಿಕಾರವಿಲ್ಲದಿರುವುದು) ಆರ್ಜವಂ=ಸರಳವಾದ ಮಾರ್ಗ(ಸನ್ಮಾರ್ಗ)ದಲ್ಲಿ ಮನಸ್ಸು ವಚನ ಕಾರ್ಯ ಕರ್ಮಗಳಲ್ಲಿ ವ್ಯತ್ಯಾಸವಿಲ್ಲದೆ ಸರಿಯಾಗಿ ಒಂದೇ ರೀತಿಯಾಗಿ ಇರುವುದು, ಆಚಾರ್ಯೋಪಾಸನಂ = ಜ್ಞಾನಿಗಳನ್ನು ಸೇವಿಸುತ್ತಿರುವುದು. ಶೌಚಂ = ಬಾಹ್ಯಾಂತರ ಶುದ್ಧಿಯು, ಸ್ಥೈರ್ಯಂ = ಭಯಾದಿಗಳಿಂದ ತನ್ನ ಧರ್ಮದಿಂದ ಕದಲದೆ ಸ್ಥಿರವಾಗಿ ಇರುವಿಕೆ, ಆತ್ಮವಿನಿಗ್ರಹಃ = ವಿಶೇಷವಾಗಿ ತನ್ನ ಮನಸ್ಸನ್ನು ವಶಪಡಿಸಿಕೊಳ್ಳುವುದು ॥ ೮ ॥

ಗೀ ॥ ಇಂದ್ರಿಯಾರ್ಥೇಷು ವೈರಾಗ್ಯಮನಹಂಕಾರ ಏವ ಚ ।
ಜನ್ಮಮೃತ್ಯುಜರಾವ್ಯಾಧಿದುಃಖದೋಷಾನುದರ್ಶನಂ ॥ ೯ ॥

ಅ ॥ ಇಂದ್ರಿಯಾರ್ಥೇಷು = ಶಬ್ದ ಸ್ಪರ್ಶ ಮೊದಲಾದ ವಿಷಯಗಳಲ್ಲಿ, ವೈರಾಗ್ಯಂ = ಅನುರಾಗ (ಸ್ನೇಹ) ವಿಲ್ಲದಿರುವುದು, ಅನಹಂಕಾರಃ = ತಸ್ಮಿಲ್ಲಿ ಇಲ್ಲದಿರುವ ಗುಣಗಳು ತನಗೆ ಇರುತ್ತವೆ, ಎಂಬುವ ಅಜ್ಞಾನವಿಲ್ಲದಿರುವುದು. ಜನ್ಮಮೃತ್ಯುಜರಾವ್ಯಾಧಿದುಃಖದೋಷಾನುದರ್ಶನಂ = ಉತ್ಪತ್ತಿ, ಸಾವು, ಮುದಿತನ, ರೋಗ, ಇವುಗಳಲ್ಲಿ ದುಃಖವನ್ನು ದೋಷವನ್ನು, ಕಾಣುವುದು, ಅಥವಾ ಇವುಗಳಲ್ಲಿ ದುಃಖ ಸ್ವರೂಪವಾದ ದೋಷವನ್ನು ಪ್ರತಿಕ್ಷಣದಲ್ಲಿ ಅನುಸಂಧಾನಮಾಡಿಕೊಳ್ಳುವುದು, (ಅಂದರೆ ಇವುಗಳಿಂದ ದುಃಖವುಂಟಾಗುತ್ತದೆಂದು ತಿಳಿದುಕೊಳ್ಳುವುದು) ॥ ೯ ॥

ಪೀ—ಹಿಂದೆ ಪ್ರತಿಜ್ಞೆ ಮಾಡಿದ ೬ ಅರ್ಥಗಳಲ್ಲಿ ಅಮಾನಿತ್ವಾದಿಗಳು ಸೇರದಿರುವುದರಿಂದ ಅವುಗಳನ್ನು ಹೇಳುವುದು ಏತಕ್ಕೆ ಎಂದರೆ --

ಭಾ ॥ (೧) ಸ ಚ ಯೋ ಯತ್ಪ್ರಭಾವಶ್ಚೇತಿ ವಕ್ತುಂ ತಜ್ಜ್ಞಾನಸಾಧನಾನ್ಯಾಹ । ಅಮಾನಿತ್ವಮಿತ್ಯಾದಿನಾ ॥ (೨) ಆತ್ಮಾಲ್ಪತ್ವಂ ಜ್ಞಾತ್ವಾಽಪಿ ಮಹತ್ತ್ವಪ್ರದರ್ಶನಂ ದಂಭಃ । ಜ್ಞಾತ್ವಾಽಪಿ ಸ್ವಾತ್ಮನೋಽಲ್ಪತ್ವಂ ದಂಭೋ ಮಾಹಾತ್ಮ್ಯಭಾವನಮಿತಿ ಹ್ಯಭಿಧಾನಂ ॥ (೩) ಆರ್ಜವಂ ಮನೋವಾಕ್ಕಾಯಕರ್ಮಣಾಮವೈಪರೀತ್ಯಂ ॥ ೮,೯ ॥

ಅ ॥ (೧) **ಸ ಚ ಯಃ, ಯತ್ಪ್ರಭಾವಶ್ಚ,** ಎಂದು ಹೇಳಿ ಭಗವತ್ಸ್ವರೂಪವನ್ನು ಹೇಳುವುದಕ್ಕಾಗಿ ಜ್ಞೇಯವಾದ ಭಗವಜ್ಜ್ಞಾನ ಸಾಧನಗಳನ್ನು **ಅಮಾನಿತ್ವಂ** ಇತ್ಯಾದಿಗಳಿಂದ ಹೇಳುತ್ತಾರೆ (೨) ತಾನು ಅಲ್ಪನೆಂದು ತಿಳಿದಿದ್ದರೂ ಶ್ರೇಷ್ಠನೆಂದು ತೋರಿಸುವುದು ದಂಭವು (ಆ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ತನಗೆ ಅಲ್ಪತ್ವವನ್ನು ತಿಳಿದಿದ್ದರೂ ತನಗೆ ಮಾಹಾತ್ಮ್ಯವನ್ನು ತೋರಿಸುವುದು ಡಂಭವು, ಎಂದು ಅಭಿಧಾನವಿದೆ (೩) ಆರ್ಜವಂ=ಮನಸ್ಸು, ವಚನ, ಶರೀರ ಕರ್ಮಗಳಿಗೆ ವ್ಯತ್ಯಾಸವಿಲ್ಲದಿರುವುದು ॥ ೮, ೯ ॥

ಗೀ ॥ ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು ।
ನಿತ್ಯಂ ಚ ಸಮಚಿತ್ತತ್ವಮಿಷ್ಟಾನಿಷ್ಟೋಪಪತ್ತಿಷು ॥ ೧೦ ॥

ಅ ॥ ಪುತ್ರದಾರಗೃಹಾದಿಷು=ಮಕ್ಕಳು, ಪ್ರಿಯಪತ್ನೀ, ಮನೆ ಮೊದಲಾದ ಪ್ರಿಯ ವಸ್ತುಗಳಲ್ಲಿ, ಅಸಕ್ತಿಃ=ಮಮತೆಯಿಲ್ಲದಿರುವುದು, ಅನಭಿಷ್ವಂಗಃ= ಪುತ್ರ ಮಿತ್ರ ಕಳತ್ರಾದಿಗಳ ಸುಖವೇ ತನ್ನ ಸುಖವೆಂದೂ, ಅವರಿಗೆ ಬರತಕ್ಕ ದುಃಖವೇ ತನ್ನ ದುಃಖವೆಂದೂ, ತೋರ್ಪಡಿಸದಿರುವುದು, ಇಷ್ಟಾನಿಷ್ಟೋಪಪತ್ತಿಷು= ಇಷ್ಟವಸ್ತುವಿನ ಪ್ರಾಪ್ತಿಯಾದರೂ, ಅನಿಷ್ಟವಸ್ತುವಿನ ಪ್ರಾಪ್ತಿಯಾದರೂ ಅವುಗಳಲ್ಲಿ, ನಿತ್ಯಂ ಚ=ಯಾವಾಗಲೂ, ಸಮಚಿತ್ತತ್ವಂ= ರಾಗ ದ್ವೇಷಗಳು ಅಥವಾ ಸಂತೋಷ ದುಃಖಗಳು ಇಲ್ಲದೆ ಇರುವಿಕೆ ಎಂಬ ಸಮಚಿತ್ತನಾಗಿರುವಿಕೆಯು ॥ ೧೦ ॥

ಗೀ ॥ ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।
ವಿವಿಕ್ತದೇಶಸೇವಿತ್ವಮರತಿರ್ಜನಸಂಸದಿ ॥ ೧೧ ॥

ಅ ॥ ಮಯಿ ಚ=ನನ್ನಲ್ಲಿ, ಅನನ್ಯಯೋಗೇನ=ಪರವಾಸುದೇವನಿಂದ ಇತರರಾದ ರಮಾ ಬ್ರಹ್ಮಾದಿಗಳು ಸ್ವತಂತ್ರರೆಂದು ತಿಳಿಯದಿರುವುದರಿಂದ, ಅವ್ಯಭಿಚಾರಿಣೀ ಭಕ್ತಿಃ=ನಿರ್ದುಷ್ಟವಾದ ಏಕಾಂತ ಭಕ್ತಿಯು (ಅಂದರೆ ರಮಾದಿಗಳಿಗೆ ಸ್ವಾತಂತ್ರ್ಯವನ್ನು ತಿಳಿಯದೆ ಪರಮಾತ್ಮನಲ್ಲಿಯೇ ಸರ್ವ ಸ್ವಾತಂತ್ರ್ಯ ಜ್ಞಾನಪೂರ್ವಕ ನಿರಂತರ ಸ್ನೇಹಪ್ರವಾಹವು) ವಿವಿಕ್ತದೇಶಸೇವಿತ್ವಂ=ಅಯೋಗ್ಯ ಜನರ ಸಮ್ಮರ್ದವಿಲ್ಲದಿರುವ, ಮತ್ತು, ಮನಸ್ಸಿಗೆ ಸ್ಥೈರ್ಯವನ್ನು ಹೊಂದಿಸಿಕೊಡುವ, ಶುದ್ಧ ಪ್ರದೇಶದಲ್ಲಿ ಇರುವುದು, ಜನಸಂಸದಿ= ಅವಿವೇಕಿಗಳ ಸಭೆಯಲ್ಲಿ, ಅರತಿಃ=ಅನುರಾಗ ಪ್ರೀತಿಯಿಲ್ಲದಿರುವುದು (ಅಂತಹ ಸಭೆಗೆ ಹೋಗುವ ಇಚ್ಛೆಯಿಲ್ಲದಿರುವುದು) ॥ ೧೧ ॥

ಭಾ ॥ ಸಕ್ತಿಃ ಸ್ನೇಹಃ । ಸ ಏವಾತಿಪಕ್ವೋಽಭಿಷ್ವಂಗಃ । ಸ್ನೇಹಃ ಸಕ್ತಿಃ ಸ ಏವಾತಿಪಕ್ವೋಽಭಿಷ್ವಂಗ ಉಚ್ಯತ ಇತ್ಯಭಿಧಾನಂ ॥ ೧೦,೧೧ ॥

ಅ ॥ ಸಕ್ತಿಃ=ಸ್ನೇಹವು. ಸ್ನೇಹವೇ ಅತಿ ಪರಿಪಕ್ವವಾದರೆ ಅಭಿಷ್ವಂಗವೆನಿಸುತ್ತದೆ. (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ-) ಸಕ್ತಿಃ=ಸ್ನೇಹವು. ಅದೇ ಅತಿ ಪರಿಪಕ್ವವಾದರೆ ಅಭಿಷ್ವಂಗವೆನ್ನಿಸುತ್ತದೆ, ಎಂದು ಅಭಿಧಾನವಿದೆ ॥ ೧೦, ೧೧ ॥

ಗೀ ॥ ಅಧ್ಯಾತ್ಮಜ್ಞಾನನಿತ್ಯತ್ವಂ ತತ್ತ್ವಜ್ಞಾನಾರ್ಥದರ್ಶನಂ ।
ಏತಜ್ಜ್ಞಾನಮಿತಿ ಪ್ರೋಕ್ತಮಜ್ಞಾನಂ ಯದತೋಽನ್ಯಥಾ ॥ ೧೨ ॥

ಅ ॥ ಅಧ್ಯಾತ್ಮಜ್ಞಾನನಿತ್ಯತ್ವಂ=ಭಗವದ್ವಿಷಯಕ ಜ್ಞಾನದಲ್ಲಿ ನಿಯಮದಿಂದ ಸ್ಥಿರವಾಗಿ ಇರುವಿಕೆ, ತತ್ತ್ವಜ್ಞಾನಾರ್ಥದರ್ಶನಂ=ಪರಮಾತ್ಮನ ಅಪರೋಕ್ಷ ಜ್ಞಾನವು ಹುಟ್ಟುವುದಕ್ಕಾಗಿ ಋಗಾದಿ ಶಾಸ್ತ್ರಗಳ ವಿಚಾರವು, ಏತತ್=ಅಮಾನಿತ್ವಂ ಇತ್ಯಾದಿಗಳಿಂದ ಹೇಳಲ್ಪಟ್ಟ ೨೦ ಧರ್ಮಗಳ ಸಮುದಾಯವು, ಜ್ಞಾನಮಿತಿ=ಭಗವಜ್ಞಾನ ಸಾಧನವೆಂದು, ಪ್ರೋಕ್ತಂ=ಹೇಳಲ್ಪಟ್ಟಿದೆ ಅತೋಽನ್ಯಥಾ=ಇವುಗಳಿಂದ ಬೇಕೆಯಾದುದು ಯತ್=ಯಾವುದಿದೆಯೋ, (ಅದು) ಅಜ್ಞಾನಂ=ಅಪರೋಕ್ಷಜ್ಞಾನವೂ ಶಾಸ್ತ್ರಪರ್ಯಾಲೋಚನರೂಪವಾದ ಜ್ಞಾನಸಾಧನವೂ ಆಗುವುದಿಲ್ಲವೆಂದು (ಹೇಳಲ್ಪಟ್ಟಿದೆ) ॥ ೧೨ ॥

ಪೀ—ತತ್ತ್ವಜ್ಞಾನಾರ್ಥದರ್ಶನವೆಂದರೆ—ಜ್ಞಾನವೇ. ಆದಕಾರಣ ಅದನ್ನು ಜ್ಞಾನಸಾಧನಗಳಲ್ಲಿ ಹೇಳಿದ್ದು ಹೇಗೆ ಎಂದರೆ—

ಭಾ ॥ ತತ್ತ್ವಜ್ಞಾನಾರ್ಥದರ್ಶನಂ । ಅಪರೋಕ್ಷಜ್ಞಾನಾರ್ಥಂ ಶಾಸ್ತ್ರದರ್ಶನಂ ॥ ೧೨ ॥

ಅ ॥ ತತ್ತ್ವಜ್ಞಾನಾರ್ಥದರ್ಶನಂ=ಪರಮಾತ್ಮನ ಅಪರೋಕ್ಷಜ್ಞಾನಕ್ಕಾಗಿ ಶಾಸ್ತ್ರಗಳ ತಾತ್ಪರ್ಯವನ್ನು ಪರ್ಯಾಲೋಚಿಸುವುದು ॥ ೧೨ ॥

ಪೀ—ಜ್ಞೇಯವನ್ನು ಹೇಳುವುದಕ್ಕಾಗಿ ಅಮಾನಿತ್ವಂ ಎಂಬುವ ಶ್ಲೋಕದಿಂದ ಜ್ಞಾನವು ಹೇಳಲ್ಪಡುತ್ತದೆ. ಅದರಲ್ಲಿ ತತ್ತ್ವಜ್ಞಾನಾರ್ಥದರ್ಶನಂ ಎಂಬುವ ಪದದ ಅರ್ಥವನ್ನು ಹೇಳುತ್ತಾರೆ --

ತಾ ॥ (೧) ತತ್ತ್ವಜ್ಞಾನವಿಷಯಸ್ಯ ವಿಷ್ಣೋರಪರೋಕ್ಷದರ್ಶನಂ ತತ್ತ್ವಜ್ಞಾನಾರ್ಥದರ್ಶನಂ । (೨) ಜ್ಞಾಯತೇಽನೇನೇತಿ ಜ್ಞಾನಂ । ಜ್ಞಪ್ತಿರ್ಜ್ಞಾನಮಿತಿ (ಚ) ವ್ಯುತ್ಪತ್ತ್ಯಾ ಏತಜ್ಜ್ಞಾನಮಿತಿ ಪ್ರೋಕ್ತಮಿತಿ ಜ್ಞಾನಸಾಧನಂ ಜ್ಞಾನಂ ಚೋಕ್ತಂ ॥ ೮-೧೨ ॥

ಅ ॥ (೧) ತತ್ತ್ವಜ್ಞಾನಕ್ಕೆ ವಿಷಯನಾದ ವಿಷ್ಣುವಿನ ಅಪರೋಕ್ಷಜ್ಞಾನವು ತತ್ತ್ವಜ್ಞಾನಾರ್ಥದರ್ಶನವು. (೨) (**ಅಮಾನಿತ್ವಂ** ಇತ್ಯಾದಿಗಳಿಂದ ಜ್ಞಾನಸಾಧನವನ್ನು **ತತ್ತ್ವಜ್ಞಾನಾರ್ಥದರ್ಶನಂ** ಎಂಬುವುದರಿಂದ ಜ್ಞಾನವನ್ನು ಹೇಳಿ ಅಂತ್ಯದಲ್ಲಿ **ಏತಜ್ಜ್ಞಾನಮಿತಿ ಪ್ರೋಕ್ತಂ** ಎಂದು ಹೇಳಿದುದು ಹೇಗೆ ಎಂದರೆ-) ಜ್ಞಾಯತೇ ಅನೇನ ಎಂಬುವ ವ್ಯುತ್ಪತ್ತಿಯಿಂದ ಜ್ಞಾನಸಾಧನವು ಜ್ಞಪ್ತಿಃ, ಜ್ಞಾನವು ಎಂಬುವ ವ್ಯುತ್ಪತ್ತಿಯಿಂದ **ಏತತ್ ಜ್ಞಾನಮಿತಿ ಪ್ರೋಕ್ತಂ** ಎಂಬುವುದರಿಂದ ಜ್ಞಾನಸಾಧನವೂ ಜ್ಞಾನವೂ ಹೇಳಲ್ಪಟ್ಟಿದೆ ॥ ೮-೧೨ ॥

ಪೀ—ತತ್ತ್ವಜ್ಞಾನವನ್ನು ಜ್ಞಾನಸಾಧನವನ್ನು ಹೇಳಿ ಈಗ ಸ ಚ ಯಃ ಯತ್ಪ್ರಭಾವಶ್ಚ ಎಂದು ಪ್ರತಿಜ್ಞಾತವಾದ ಕ್ಷೇತ್ರಜ್ಞ ಸ್ವರೂಪವನ್ನೂ ಆತನ ಸಾಮರ್ಥ್ಯವನ್ನೂ ಹೇಳುತ್ತಾರೆ ಅದರಲ್ಲಿ ಆದರ ಹುಟ್ಟುವುದಕ್ಕಾಗಿ ಆತನ ಜ್ಞಾನಫಲವನ್ನು ಹೇಳುತ್ತಾರೆ—

ಗೀ॥ ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಜ್ಞಾತ್ವಾऽಮೃತಮಶ್ನುತೇ ।
ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ ॥ ೧೩ ॥

ಅ ॥ ಯತ್ = ಯಾವ ಕ್ಷೇತ್ರಜ್ಞನ ಸ್ವರೂಪವನ್ನು, ಜ್ಞಾತ್ವಾ=ತಿಳಿದುಕೊಂಡು, ಅಮೃತಂ= ಮೋಕ್ಷವನ್ನು, ಅಶ್ನುತೇ = ಹೊಂದುತ್ತಾನೋ, ಜ್ಞೇಯಂ = ಮೋಕ್ಷಕ್ಕಾಗಿ ತಿಳಿಯಲಿಕ್ಕೆ ಅತ್ಯಾವಶ್ಯಕವಾದುದು, ಯತ್ = ಯಾವುದಿದೆಯೋ, ತತ್ = ಆ ಭಗವತ್ಸ್ವರೂಪವನ್ನು, ಪ್ರವಕ್ಷ್ಯಾಮಿ = ಸ್ಪಷ್ಟವಾಗಿ ಹೇಳುವೆನು ತತ್ = ಅಂತಹ, ಜ್ಞೇಯಂ=ಜ್ಞೇಯನಾದವನು, ಪರಂ ಬ್ರಹ್ಮ=ಪರಬ್ರಹ್ಮನು (ಪರಂ ಬ್ರಹ್ಮ ಎನ್ನುವುದರಿಂದ ಜ್ಞೇಯಸ್ವರೂಪವು ಉಕ್ತವಾಯಿತು) (**ಸ ಚ ಯಃ ಯತ್ಪ್ರಭಾವಃ** ಎಂದು ಹೇಳಿದ ಅವನ ಸಾಮರ್ಥ್ಯವನ್ನು ಹೇಳುತ್ತಾರೆ) ಪರಂಬ್ರಹ್ಮ=ಪರಬ್ರಹ್ಮನು, ಅನಾದಿಮತ್=ಉತ್ಪತ್ತಿಯುಳ್ಳ ಪ್ರಾಕೃತಗಳಾದ ದೇಹ ಇಂದ್ರಿಯ ಗುಣ ಕರ್ಮಾದಿಗಳು ಇಲ್ಲದವನು, ಸತ್=ವ್ಯಕ್ತ ಎನಿಸಿಕೊಂಡ ಕಾರ್ಯಗಳ ಸಮೂಹದಲ್ಲಿ ಅಂತರ್ಗತನು, ನೇತ್ಯುಚ್ಯತೇ = ಇಲ್ಲವೆನ್ನಿಸಿಕೊಳ್ಳುತ್ತಾನೆ ಅಸತ್ — ಅವ್ಯಕ್ತ ಎನಿಸಿಕೊಂಡ ಕಾರಣದಲ್ಲಿ ಸೇರಿದವನು, ನ = ಇಲ್ಲವೆನಿಸಿಕೊಳ್ಳುತ್ತಾನೆ (ಅಂತೂ ವ್ಯಕ್ತಾವ್ಯಕ್ತ ವಿಲಕ್ಷಣನು ಅಥವಾ ಮೂರ್ತ (ಪೃಥಿವ್ಯಪ್ ತೇಜಸ್ಸು) ಅಮೂರ್ತ (ವಾಯು ಆಕಾಶ) ವಿಲಕ್ಷಣನು, ಎಂದು ವೇದಗಳಲ್ಲಿ ಹೇಳಿಸಿಕೊಳ್ಳಲ್ಪಡುತ್ತಾನೆ) ॥ ೧೩ ॥

ಭಾ ॥ (೧) ಪರಂ ಬ್ರಹ್ಮೇತಿ ಸ ಚ ಯ ಇತಿ ಪ್ರತಿಜ್ಞಾತಮುಚ್ಯತೇ । ಅನ್ಯಚ್ಚ ಪ್ರಭಾವ ಇತಿ ॥ (೨) ಆದಿಮದ್ಭೀಹಾದಿವರ್ಜಿತಮನಾದಿಮತ್ ॥ (೩) ಅನ್ಯಥಾऽನಾದೀತ್ಯೇವ ಸ್ಯಾತ್ ॥ ೧೩ ॥

ಅ ॥ (೧) ಪರಂಬ್ರಹ್ಮ ಎಂಬುದರಿಂದ **ಸ ಚ ಯಃ** ಎಂದು ಪ್ರತಿಜ್ಞಾತವಾದ ಜ್ಞೇಯವು ಹೇಳಲ್ಪಡುತ್ತದೆ **ಅನಾದಿಮತ್** ಇತ್ಯಾದಿಗಳು ಯತ್ಪ್ರಭಾವಃ ಎಂದು ಪ್ರತಿಜ್ಞಾತವಾದ ಪ್ರಭಾವವನ್ನು ಪ್ರತಿಪಾದಿಸುತ್ತವೆ (೨) ಉತ್ಪತ್ತಿಯುಳ್ಳ ದೇಹ, ಇಂದ್ರಿಯ, ಗುಣ ಕ್ರಿಯಾದಿಗಳುಳ್ಳದ್ದು **ಆದಿಮತ್** ಎನಿಸುತ್ತದೆ ಆದಿಲ್ಲದಿರುವ ಪರಬ್ರಹ್ಮನು ಅನಾದಿಮತ್ ಎನಿಸಿಕೊಳ್ಳುತ್ತಾನೆ (೩) (ಹೀಗೆ ಅರ್ಥವನ್ನು ಹೇಳದೆ ಪರಮಾತ್ಮನು ಕಾರಣ ಇಲ್ಲದವನು ಎಂದಿಷ್ಟೇ ಅರ್ಥವು ವಿವಕ್ಷಿತವಾಗಿದ್ದರೆ **ಅನಾದಿ** ಎಂದಿಷ್ಟೇ ಹೇಳಬೇಕಿತ್ತು **ಅನಾದಿಮತ್** ಎಂದುಹೇಳಬೇಕಾಗಿರಲಿಲ್ಲ ॥ ೧೩ ॥

ಪೀ— ಪುನಃ ಆ ಕ್ಷೇತ್ರಜ್ಞನ ಪ್ರಭಾವವನ್ನು ಹೇಳುತ್ತಾರೆ—

ಗೀ॥ ಸರ್ವತಃ ಪಾಣಿಪಾದಂ ತತ್ಸರ್ವತೋऽಕ್ಷಿಶಿರೋಮುಖಂ ।
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥ ೧೪ ॥

ಅ ॥ ತತ್ = ಆ ಪರಬ್ರಹ್ಮನು, ಸರ್ವತಃ = ಎಲ್ಲಾ ಅವಯವಗಳಲ್ಲಿ, ಪಾಣಿಪಾದಂ = ಹಸ್ತ ಪಾದಗಳ ಶಕ್ತಿಯುಳ್ಳವನು (ಅಂದರೆ — ಹಸ್ತ ಪಾದಾದಿಗಳ ಶಕ್ತಿಯುಳ್ಳ ಎಲ್ಲಾ ಅವಯವಗಳೂ ಸರ್ವಾವಯವಗಳ ಶಕ್ತಿಯುಳ್ಳವುಗಳು ಕೃಷ್ಣ ಕೇಶಾವತಾರನಾದ ಶ್ರೀಕೃಷ್ಣನಲ್ಲಿಯೂ, ಬಲರಾಮನಲ್ಲಿ ಆವಿಷ್ಟವಾದ ಶುಕ್ಲಕೇಶದಲ್ಲಿಯೂ ಪಾಣಿ ಪಾದಾದಿಗಳ ಶಕ್ತಿಯು ಕಂಡದೆ) ಸರ್ವತಃ = ಎಲ್ಲಾ ಅವಯವಗಳಲ್ಲಿಯೂ, ಅಕ್ಷಿಶಿರೋಮುಖಂ = ಕಣ್ಣು ಶಿರಸ್ಸು ಮುಖ ಇವುಗಳ ಸಾಮರ್ಥ್ಯವಿದೆ ಸರ್ವತಃ = ಎಲ್ಲಾ

ಅವಯವಗಳಲ್ಲಿಯೂ, ಶ್ರುತಿಮತ್ = ಶ್ರೋತ್ರೇಂದ್ರಿಯದ ಶಕ್ತಿಯು ಇದೆ. (ಅಂದರೆ--ಎಲ್ಲಾ ಇಂದ್ರಿಯ ಗಳ ವಿಷಯಗಳನ್ನೂ ಕರ್ಮಗಳನ್ನೂ ಎಲ್ಲಾ ಇಂದ್ರಿಯಗಳಿಂದ ತಿಳಿಯುತ್ತಾನೆ. ಮಾಡುತ್ತಾನೆ) ಲೋಕೇ=ಜಗತ್ತಿನಲ್ಲಿ, ಸರ್ವಂ=ಎಲ್ಲಾ ವಸ್ತುವನ್ನು ಆವೃತ್ಯ=ಒಳಗೂ ಹೊರಗೂ ವ್ಯಾಪಿಸಿಕೊಂಡು, ತಿಷ್ಠತಿ=ಇರುತ್ತಾನೆ ಅಥವಾ ಸರ್ವ ದೇಶದಲ್ಲಿರತಕ್ಕ ಪರಬ್ರಹ್ಮನು ಹಸ್ತ ಮೊದಲಾದ ಅವಯವ ಗಳಿಂದ ಕೂಡಿದವನಾಗಿ ಲೋಕದಲ್ಲಿ ಸಮಸ್ತುವಸ್ತುವನ್ನು ವ್ಯಾಪಿಸಿಕೊಂಡು ಇರುತ್ತಾನೆ ಅಂದರೆ— ಅಣುಗಳಿಂದಲೂ ಅಣುತರಗಳಾದ ಪಾಣಿಪಾದಾದಿಗಳಿಂದ ಕೂಡಿದ ಅನಂತರೂಪಗಳಿಂದ ಸರ್ವತ್ರ ಇದ್ದ ವನಾಗಿ ವ್ಯಾಪ್ತರೂಪದಿಂದ ಸರ್ವವನ್ನು ವ್ಯಾಪಿಸಿಕೊಂಡು ಇರುತ್ತಾನೆ ॥ ೧೪ ॥

ಗೀ ॥ ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತಂ ।ಅಸಕ್ತಂ ಸರ್ವಭೃಚ್ಚೈವ (ಸರ್ವಭುಕ್ಚೈವ)ನಿರ್ಗುಣಂ ಗುಣಭೋಕ್ತೃ ಚ॥೧೫॥

ಅ ॥ (ಆ ಪರಬ್ರಹ್ಮನು) ಸರ್ವೇಂದ್ರಿಯಗುಣಾಭಾಸಂ=ಚಕ್ಷುಸ್ಸು ಮೊದಲಾದ ಎಲ್ಲಾ ಇಂದ್ರಿಯ ಗಳೂ, ರೂಪ ಮೊದಲಾದ ಇಂದ್ರಿಯ ವಿಷಯಗಳೂ ಇವುಗಳನ್ನು ತಾನು ಸಂಪೂರ್ಣ ತಿಳಿದವನು, ಇತರ ರಿಗೆ ತಿಳಿಸಿಕೊಡುವವನು, ಸರ್ವೇಂದ್ರಿಯವಿವರ್ಜಿತಂ=ಪ್ರಾಕೃತಗಳೂ ತನ್ನಿಂದ ಭಿನ್ನಗಳೂ ಆದ ಇಂದ್ರಿ ಯಗಳು ಇಲ್ಲದವನು (ಅಪ್ರಾಕೃತಗಳಾದ ಚಿದ್ರೂಪಗಳಾದ ಇಂದ್ರಿಯಗಳುಳ್ಳವನು.) ಅಸಕ್ತಂ=ಪುಣ್ಯ ಪಾಪಗಳ ಲೇಪವಿಲ್ಲದವನು ಸರ್ವಭೃಚ್ಚ=ಸರ್ವ ವಸ್ತುವನ್ನು ಧರಿಸುವವನು, ಪೋಷಿಸುವವನು (ಅಥವಾ ಸರ್ವಭುಕ್ಚ=ಸಮಸ್ತ ಪದಾರ್ಥಗಳ ಸಾರವನ್ನುಣ್ಣುವವನು ಅಥವಾ ಸರ್ವ ಸಂಹಾರಕನು) ನಿರ್ಗುಣಂ= ಸತ್ವ ರಜಸ್ತಮೋಗುಣಗಳಿಲ್ಲದವನು ಗುಣಭೋಕ್ತೃ ಚ=ಆನಂದ ಮೊದಲಾದ ಸಮಸ್ತ ಕಲ್ಯಾಣ ಗುಣಗಳನ್ನೇ ಅನುಭವಿಸಿಕೊಂಡಿರುವವನು ॥ ೧೫ ॥

ಗೀ ॥ ಬಹಿರಂತಶ್ಚ ಭೂತಾನಾಮಚರಂ ಚರಮೇವ ಚ ।
ಸೂಕ್ಷ್ಮತ್ವಾತ್ತದವಿಜ್ಞೇಯಂ ದೂರಸ್ಥಂ ಚಾಂತಿಕೇ ಚ ತತ್ ॥ ೧೬ ॥

ಅ ॥ (ಆ ಪರಬ್ರಹ್ಮನು) ಭೂತಾನಾಂ=ಸಮಸ್ತ ಪ್ರಾಣಿಗಳ ಬಹಿಃ=ಹೊರಗೂ, ಅಂತಶ್ಚ=ಒಳಗೂ, (ನಿಯಾಮಕನಾಗಿ ಇರುತ್ತಾನೆ) ಅಚರಂ=ವಿಕಾರಾದಿ ದೋಷಗಳಿಲ್ಲದವನು, ಅಥವಾ ಸರ್ವ ಜ್ಞತ್ವ ಮೊದಲಾದ ಗುಣಗಳಿಂದ ಸರ್ವದಾ ಕದಲದಿರುವವನು (ಅಂದರೆ ಸರ್ವದಾ ಏಕಪ್ರಕಾರ ನಾಗಿಯೇ ಇರುವವನು) ಚರಮೇವ ಚ=ಸರ್ವ ದೇಶಗಳಲ್ಲಿಯೂ ನಿಯಾಮಕನಾಗಿ ಸಂಚರಿಸುವವನು ತತ್=ಬ್ರಹ್ಮನು, ಸೂಕ್ಷ್ಮತ್ವಾತ್=ಪರಮ ಸೂಕ್ಷ್ಮನಾದುದರಿಂದ ಅವಿಜ್ಞೇಯಂ=ಪ್ರಾಕೃತಗಳಾದ ಚಕ್ಷುರಾದಿ ಇಂದ್ರಿಯಗಳಿಂದ ತಿಳಿದುಕೊಳ್ಳಲಿಕ್ಕೆ ಅಶಕ್ಯನು. ತತ್=ಆ ಪರಬ್ರಹ್ಮನು, ದೂರಸ್ಥಂ= ಸರ್ವತ್ರ ವ್ಯಾಪ್ತನಾದುದರಿಂದ ದೂರದಲ್ಲಿಯೂ ಇರುವವನು, ಅಂತಿಕೇ ಚ=ಸರ್ವರ ಸಮೀಪದಲ್ಲಿಯೂ ಇರುವವನು. ॥ ೧೬ ॥

ಗೀ॥ ಅವಿಭಕ್ತಂ ಚ ಭೂತೇಷು (ವಿಭಕ್ತೇಷು) ವಿಭಕ್ತಮಿವ ಚ ಸ್ಥಿತಂ ।
ಭೂತಭರ್ತೃ ಚ ತಜ್ಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ ॥ ೧೭ ॥

ಅ ॥ ತತ್= ಆ ಪರಬ್ರಹ್ಮನು, ವಿಭಕ್ತೇಷು (ಭೂತೇಷು ಚ)=ಪರಸ್ಪರ ಭಿನ್ನಗಳಾಗಿರುವ ನಾನಾ ವಿಧಪ್ರಾಣಿಗಳಲ್ಲಿ, ಅವಿಭಕ್ತಂ ಚ=ಭಿನ್ನನಾಗದೆ ಒಬ್ಬನೇ ಇದ್ದರೂ, (ಅಂದರೆ ಸಮಸ್ತಪ್ರಾಣಿಗಳಿಗೂ

ನಿಯಾಮಕವಾಗಿರುವ ಭಗವದ್ರೂಪಗಳಿಗೆ ಭೇದವಿಲ್ಲದಿದ್ದರೂ) ವಿಭಕ್ತಮಿವ ಸ್ಥಿತಂ=ನಿಯಾಮಕವಾಗಿರುವ ರೂಪವು ಬೇರೆ ಬೇರೆ ಎಂಬುವಂತೆ ಇರುತ್ತದೆ (ಅಂದರೆ ಆಯಾಯ ವಸ್ತುಗಳಿಗೆ ನಿಯಾಮಕಗಳಾಗಿರುವ ಭಗವದ್ರೂಪಗಳಿಗೆ ವಸ್ತುತಃ ಅತ್ಯಲ್ಪ ಭೇದವೂ ಇಲ್ಲದಿದ್ದರೂ ನಿಯಮ್ಯ ವಸ್ತುಗಳಿಗೆ ಭೇದವಿದ್ದುದರಿಂದ ಸ್ಥಾನಭೇದ ಪ್ರಯುಕ್ತವಾಗಿ ಅಜ್ಞರಿಗೆ ಭೇದವುಳ್ಳವನಂತೆ ತೋರುವನು-) ಆ ಪರಬ್ರಹ್ಮನು, ಭೂತ ಭೃತ್=ಸಮಸ್ತ ಪ್ರಾಣಿಗಳನ್ನು ಧರಿಸುವವನು, ಪೋಷಿಸುವವನು, ಗ್ರಸಿಷ್ಣು=ಪ್ರಲಯಕಾಲದಲ್ಲಿ ಸರ್ವ ವಸ್ತುಗಳನ್ನು ಸಂಹರಿಸುವವನು ಪ್ರಭವಿಷ್ಣು ಚ=ಸೃಷ್ಟಿಕಾಲದಲ್ಲಿ ಸಮಸ್ತ ವಸ್ತುಗಳನ್ನು ಸೃಷ್ಟಿಸುವವನು ಇತಿ=ಹೀಗೆ, ಜ್ಞೇಯಂ=ತಿಳಿಯತಕ್ಕದು. ॥ ೧೭ ॥

ಪೀ—**ಅನಾದಿಮತ್ಪರಂ ಬ್ರಹ್ಮ** (ಶ್ಲೋ. ೧೩) ಎಂಬುವಲ್ಲಿ **ಅನಾದಿ** ಎಂದಿಷ್ಟೇ ಸಾಕಾಗುವುದರಿಂದ **ಅನಾದಿಮತ್** ಎಂದು ಹೇಳಿದ್ದು ಏತಕ್ಕೆಂದರೆ—

ತಾ ॥ (೧) ಅನಾದೀತ್ಯುಕ್ತೇ ಸ್ವಯಂ ಕಾರಣಂ ನ ಭವತೀತ್ಯಾಶಂಕಾ ಸ್ಯಾದಿತಿ ತನ್ನಿವೃತ್ತ್ಯರ್ಥಮನಾದಿಮದಿತ್ಯಾಹ ॥ (೨) ಮುಖ್ಯತೋ ಗುಣಪೂರ್ಣತ್ವಾತ್ಪರಂ ಬ್ರಹ್ಮ ಜನಾರ್ದನಃ । ಮೂರ್ತಾಮೂರ್ತವ್ಯತೀತತ್ವಾನ್ನ ಸನ್ನೈವಾಸದುಚ್ಯತ ಇತಿ ಚ ॥ (೩) ಮೂರ್ತಂ ಸದವಗಮ್ಯತ್ವಾದಜ್ಞೇಯತ್ವಾದಸತ್ಪರಂ । ಪುಂಸಾಮಥ್ಯಾದಗಮ್ಯತ್ವಾತ್ಸರ್ವವೇದಪ್ರಸಿದ್ಧಿತಃ । ವಿಲಕ್ಷಣಃ ಸದಸತೋರ್ಭಗವಾನ್ವಿಷ್ಣುರವ್ಯಯ ಇತಿ ಚ ॥ ೧೩—೧೭ ॥

ಅ ॥ (೧) **ಅನಾದಿ** ಎಂದಿಷ್ಟೇ ಹೇಳಿದರೆ ತಾನು ಯಾವುದಕ್ಕೂ ಕಾರಣನಲ್ಲ, ಎಂಬೀ ಆಶಂಕೆಯು ಬರುವುದು ಅದನ್ನು ನಿವೃತ್ತಿಗೊಳಿಸುವುದಕ್ಕಾಗಿ **ಅನಾದಿಮತ್** ಎಂದು ಹೇಳಿದ್ದಾರೆ (ಅಂದರೆ ಈ ಶಂಕೆಯ ನಿವೃತ್ತಿಗಾಗಿಯೂ ಉತ್ಪತ್ತಿಯಾಗಿಲ್ಲ ದೇಹೇಂದ್ರಿಯಾದಿಗಳು ಇಲ್ಲದವನೆಂಬುವ ಅರ್ಥ ವಿಶೇಷವನ್ನು ತಿಳಿಸುವುದಕ್ಕಾಗಿಯೂ **ಅನಾದಿಮತ್** ಎಂದು ಹೇಳಿದ್ದಾರೆ) (೨) (೧೩ನೇ ಶ್ಲೋಕದಲ್ಲಿದ್ದ **ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ** ಎಂಬುವುದಕ್ಕೆ ಪ್ರಮಾಣೋದಾಹರಣಪೂರ್ವಕವಾಗಿ ಅರ್ಥವನ್ನು ಹೇಳುತ್ತಾರೆ) ಜನಾರ್ದನನು ಮುಖ್ಯವಾಗಿ ಸರ್ವಗುಣಗಳಿಂದ ಪರಿಪೂರ್ಣನಾಗಿರುವುದರಿಂದ ಪರಂಬ್ರಹ್ಮ ಎನಿಸುತ್ತಾನೆ ಮೂರ್ತ ಅಮೂರ್ತಗಳಿಂದ ವಿಲಕ್ಷಣನಾದುದರಿಂದ ಸತ್‌ಭಿನ್ನನೆಂದೂ ಅಸತ್‌ಭಿನ್ನನೆಂದೂ ಅನಿಸಿಕೊಳ್ಳುತ್ತಾನೆ (೩) ತಿಳಿಯಲ್ಪಡುವುದರಿಂದ ಮೂರ್ತವು (ಪೃಥಿವೀ ಜಲ ತೇಜಸ್ಸುಗಳು) **ಸತ್** ಎನಿಸಿಕೊಳ್ಳುತ್ತವೆ ಅಮೂರ್ತವು (ವಾಯು ಆಕಾಶಗಳು,) ಬಾಹ್ಯ ಪ್ರತ್ಯಕ್ಷದಿಂದ ತಿಳಿಯಲ್ಪಡದಿರುವುದರಿಂದ ಅಸತ್ ಎನಿಸಿಕೊಳ್ಳಲ್ಪಡುತ್ತವೆ ಷಡ್ಗುಣಪೂರ್ಣನೂ ನಾಶರಹಿತನೂ ಆದ ಶ್ರೇಷ್ಠರ ಮಾತ್ಮನು ಪುರುಷರ ಸಾಮರ್ಥ್ಯದಿಂದ ತಿಳಿಯಲ್ಪಡದಿರುವುದರಿಂದಲೂ ಸಮಸ್ತ ವೇದಗಳಲ್ಲಿ ಪ್ರಸಿದ್ಧನಾಗಿರುವುದರಿಂದಲೂ ಸದಸತ್ತುಗಳಿಂದ ವಿಲಕ್ಷಣನು ಎಂದು ಅನಿಸಿಕೊಳ್ಳುತ್ತಾನೆ ॥ ೧೩—೧೭ ॥

ಗೀ ॥ ಜ್ಯೋತಿಷಾಮಪಿ ತಜ್ಜ್ಯೋತಿಸ್ತಮಸಃ ಪರಮುಚ್ಯತೇ ।
ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿ ಸರ್ವಸ್ಯ ವಿಷ್ಠಿತಂ ॥ ೧೮ ॥

ಅ ॥ ತತ್=ಆ ಪರಬ್ರಹ್ಮನು, ಜ್ಯೋತಿಷಾಮಪಿ=ಸೂರ್ಯ ಮೊದಲಾದ ತೇಜಸ್ಸುಗಳಿಗೂ, ಜ್ಯೋತಿಃ=ಪ್ರಕಾಶಕ ಶಕ್ತಿಯನ್ನು ಕೊಡುವವನು, ತಮಸಃ=ಸತ್ವರಜಸ್ತಮೋಗುಣಾತ್ಮಕವಾದ ಪ್ರಕೃತಿ

ಗಿಂತಲೂ, ಮೃತ್ಯುವಿನ ದೆಶೆಯಿಂದಲೂ ಅಥವಾ ಅಜ್ಞಾನದೆಶೆಯಿಂದಲೂ, ಪರಂ—ಮಿಗಿಲಾದವನೆಂದು, ಉಚ್ಯತೇ=ತಮಸಃ ಪರಸ್ತಾತ್ ಇದು ಮೊದಲಾದ ವೇದಾದಿಗಳಲ್ಲಿ ಹೇಳಿಸಿಕೊಳ್ಳಲ್ಪಡುತ್ತಾನೆ (ಅಂದರೆ-ಪ್ರಕೃತಿಬಂಧವಿಲ್ಲದವನು ಮರಣ ಅಜ್ಞಾನಗಳ ಸಂಬಂಧವೂ ಇಲ್ಲದವನು) ಜ್ಞಾನಂ=ಪ್ರಕಾಶಸ್ವರೂಪರು ಜ್ಞೇಯಂ=ತನ್ನಿಂದಲೇ ತಿಳಿಯಲ್ಪಡತಕ್ಕವನು. ಸ್ವಪ್ರಕಾಶನು (ಅಂದರೆ-ಜೀವರಲ್ಲಿ ಸ್ವಪ್ರಕಾಶತ್ವವಿದ್ದರೂ ಅದು ಶ್ರೀಹರಿಯ ಅಧೀನವಾದುದು ಶ್ರೀಹರಿಯು ಇತರರ ಅಪೇಕ್ಷೆಯಿಲ್ಲದೇನೇ ಸ್ವಪ್ರಕಾಶಸ್ವರೂಪನು) ಜ್ಞಾನಗಮ್ಯಂ=ಅಪರೋಕ್ಷಜ್ಞಾನದಿಂದ ಮೋಕ್ಷದಲ್ಲಿ ಹೊಂದಲ್ಪಡತಕ್ಕವನು ಸರ್ವಸ್ಯ=ಬ್ರಹ್ಮಾದಿ ಎಲ್ಲಾ ಜೀವರ, ಹೃದಿ=ಹೃದಯದಲ್ಲಿಯೂ, ವಿಷ್ಠಿತಂ=ವಿಶೇಷವಾಗಿ ನಿಯಾಮಕನಾಗಿ ಇರುವವನು. ॥ ೧೪ ॥

ಭಾ ॥ ೧ ಸರ್ವೇಂದ್ರಿಯಾಣಿ ಗುಣಾಂಶ್ಚಾಭಾಸಯತೀತಿ ಸರ್ವೇಂದ್ರಿಯಗುಣಾಭಾಸಂ ॥ (೨) ಇಂದ್ರಿಯವರ್ಜಿತತ್ವಾದ್ಯರ್ಥ ಉಕ್ತಃ ಪುರಸ್ತಾತ್ ॥ ೧೫—೧೪ ॥

ಅ ॥ (೧) ಸರ್ವೇಂದ್ರಿಯಗುಣಾಭಾಸಂ=ಸಮಸ್ತ ಚಕ್ಷುರಾದಿ ಇಂದ್ರಿಯಗಳೂ, ರೂಪಾದಿಗುಣಗಳೂ ಇವುಗಳನ್ನು ತಿಳಿಸುವವನು ಮತ್ತು ಸಂಪೂರ್ಣ ತಿಳಿಯುವವನು (೨) ಸರ್ವೇಂದ್ರಿಯವಿವರ್ಜಿತಂ ಇತ್ಯಾದಿಗಳಿಗೆ ಪ್ರಾಕೃತ ಇಂದ್ರಿಯಗಳಿಲ್ಲದವನು, ಇತ್ಯಾದಿ ರೂಪವಾದ ಅರ್ಥವು ಮೊದಲೇ ಹೇಳಲ್ಪಟ್ಟಿದೆ ॥ ೧೫—೧೪ ॥

ಪೀ—೧೪ನೇ ಶ್ಲೋಕದಲ್ಲಿದ್ದ **ಜ್ಞಾನಗಮ್ಯಂ** ಎಂಬುವುದರಿಂದ ಜ್ಞಾನವಿಷಯತ್ವವು ಹೇಳಲ್ಪಟ್ಟಿದೆ, ಎಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ತಾ ॥ (೧) ಜ್ಞಾನೇನ ಮುಕ್ತೌ ಪ್ರಾಪ್ಯತ್ವಾಜ್ಜ್ಞಾನಗಮ್ಯಂ ॥ (೨) ಸ್ವಯಮೇವಾತ್ಮನಾಽಽತ್ಮಾನಂ ವೇತ್ತೀತಿ ಸ್ವಜ್ಞೇಯತ್ವಾಜ್ಜ್ಞೇಯಂ ॥ (೩) ಅನ್ಯಜ್ಞೇಯತ್ವಸ್ಯ ಜ್ಞೇಯಂ ಯತ್ತದಿತಿ ಪೂರ್ವಮೇವ ಸಿದ್ಧತ್ವಾತ್ ॥ (೪) ಕರ್ತೃಕರ್ಮವಿರೋಧವಾದಿಮತಂ ನಿರಾಕರೋತ್ಯುತ್ತರಜ್ಞೇಯಶಬ್ದೇನ ॥ (೫) ಸ್ವವೇತ್ತಾ ವೇದನಂ ಚ ಸ್ವಂ ಸ್ವೇನ ವೇದ್ಯಶ್ಚ ಕೇಶವಃ । ಪರಸ್ಯ ವೇತ್ತಾ ವಿತ್ತಿಶ್ಚ ವೇದ್ಯಶ್ಚ ಸ್ಯಾತ್ಪರೈಃ ಕ್ವಚಿತ್ । ತತ್ತ್ವಸಾದಂ ವಿನಾ ಕಶ್ಚಿನ್ನೈವ(ನಂ) ವೇತ್ತುಂ ಹಿ ಶಕ್ನುಯಾತ್ । ಸ್ವವೇದನೇಽನ್ಯವಿತ್ತೌ ವಾ ನಾಸಾವನ್ಯದಪೇಕ್ಷತೇ । ಸ್ವಪ್ರಕಾಶ ಇತಿ ಪ್ರೋಕ್ತಸ್ತೇನೈಕಃ ಪುರುಷೋತ್ತಮಃ। ಜೀವಾನಾಂ ಸ್ವಪ್ರಕಾಶತ್ವಂ ತತ್ಪ್ರಸಾದಾತ್ಸ್ವವೇದನಮಿತಿ ಚ ॥ ೧೪ ॥

ಅ ॥ (೧) ಅಪರೋಕ್ಷಜ್ಞಾನದಿಂದ ಮೋಕ್ಷದಲ್ಲಿ ಹೊಂದಲ್ಪಡುವುದರಿಂದ ಶ್ರೀಪರಮಾತ್ಮನು ಜ್ಞಾನಗಮ್ಯನು (೨) ೧೪ನೇ ಶ್ಲೋಕದಲ್ಲಿದ್ದ ಜ್ಞೇಯಪದದಿಂದ ಇತರರಿಂದ ಜ್ಞೇಯತ್ವವು ಹೇಳಲ್ಪಡುತ್ತದೆ ಎಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—) ತನ್ನೇ ತನ್ನಿಂದ ತನ್ನನ್ನು ತಿಳಿಯುತ್ತಾನೆ, ಹೀಗೆ ತನ್ನಿಂದ ತಿಳಿಯಲ್ಪಡುವವನಾದುದರಿಂದ ಜ್ಞೇಯನು (೩) (ಬೇರೆಯವರಿಂದ ತಿಳಿಯಲ್ಪಡುವವನೆಂಬುವ ಅರ್ಥವು ಏಕೆ ಆಗಲಾರದೆಂದರೆ-) ಇಲ್ಲಿ ಸ್ವಜ್ಞೇಯತ್ವವೇ ಹೇಳಲ್ಪಡುತ್ತದೆ ಇತರರಿಂದ ಜ್ಞೇಯತ್ವವು ಹೇಳಲ್ಪಡುವುದಿಲ್ಲ ಅನ್ಯಜ್ಞೇಯತ್ವವು ಜ್ಞೇಯಂ ಯತ್ತತ್ ಪ್ರವಕ್ಷ್ಯಾಮಿ (ಶ್ಲೋ ೧೩) ಎಂದು ಉಪಕ್ರಮ ವಾಕ್ಯದಲ್ಲಿಯೇ ಹೇಳಿದ್ರಿಂದ (ಪುನಃ ಹೇಳಿದರೆ ಪುನರುಕ್ತಿದೋಷವು ಬರ

ಬೇಕಾಗುವುದು) (೪) (ಪರಮಾತ್ಮನು ತನ್ನನ್ನು ತಾನು ತಿಳಿಯುತ್ತಾನೆ, ಎಂಬುವ ಅರ್ಥವನ್ನು ಹೇಳಿದ್ರಿಂದ ಪರಮಾತ್ಮನ ಸಾಮರ್ಥ್ಯವನ್ನು ಹೇಳಿದಂತೆ ಆಗುವುದು ಹೇಗೆ? ಎಂದರೆ—) ಜ್ಞೇಯಶಬ್ದದಿಂದ **ಜ್ಞೇಯಂ ಯತ್ತತ್ ಪ್ರವಕ್ಷ್ಯಾಮಿ** ಎಂಬುವ ೧೩ನೇ ಶ್ಲೋಕಕ್ಕಿಂತ ಮೇಲಿನ ೧೮ನೇ ಶ್ಲೋಕದಲ್ಲಿರುವ ಜ್ಞೇಯಶಬ್ದದಿಂದ ಸ್ವಜ್ಞೇಯತ್ವವನ್ನು ಹೇಳಿದರೆ ಜ್ಞಾನಕ್ರಿಯೆಯಲ್ಲಿ ವಿರೋಧವು ಬರುತ್ತದೆ, ಎಂದು ಹೇಳುವ ವಾದಿಗಳ ಮತವನ್ನು ನಿರಾಕರಿಸುತ್ತಾರೆ (ಅಂದರೆ ಒಂದು ಕ್ರಿಯೆಯಲ್ಲಿ ಒಬ್ಬನಿಗೇನೇ ಕರ್ತೃಕರ್ಮಗಳು ಕೂಡದಿದ್ದರೂ ಪರಮಾತ್ಮನಲ್ಲಿ ಆಘಟ್ಯಘಟಕವಾದ ಅಚಿಂತ್ಯಶಕ್ತಿ ಐಶ್ವರ್ಯವಿದ್ದುದರಿಂದ ಶ್ರೀಹರಿಗೆ ತನ್ನ ಜ್ಞಾನದಲ್ಲಿ ಕರ್ತೃಕರ್ಮಭಾವವು ಕೂಡುತ್ತದೆ ಆದಕಾರಣ ಶ್ರೀಪರಮಾತ್ಮನಿಗೆ ಸಾಮರ್ಥ್ಯವನ್ನು ಹೇಳಿದಂತೆ ಆಯಿತು) (೫) (ಶ್ರೀಪರಮಾತ್ಮನು ಸ್ವಜ್ಞೇಯನೆಂಬುವಲ್ಲಿ ಪ್ರಮಾಣಾಂತರವನ್ನು ಹೇಳುತ್ತಾರೆ—) ಸ್ವತಂತ್ರವಾಗಿ ತನ್ನನ್ನು ತಿಳಿಯುವವನು ಪರಾನಧೀನವಾದ (ಸ್ವತಂತ್ರವಾದ) ಜ್ಞಾನರೂಪನು ಶ್ರೀಪರಮಾತ್ಮನು ತನ್ನಿಂದಲೇ ತಾನು ವೇದ್ಯನು ಮತ್ತು ಪರಮಾತ್ಮನು ಇತರರನ್ನು ಸ್ವತಂತ್ರವಾಗಿ ತಿಳಿಯುತ್ತಾನೆ ಸರ್ವ ಸ್ವತಂತ್ರ ಜ್ಞಾನರೂಪನು ಇತರರಿಂದ ಕೆಲವು ಕಡೆ ತಿಳಿಯಲ್ಪಡುತ್ತಾನೆ (ಕ್ವಚಿತ್ ಎಂಬುವುದನ್ನು ವಿವರಿಸುತ್ತಾರೆ–) ಯಾವನೊಬ್ಬನೂ ಶ್ರೀಪರಮಾತ್ಮನ ಅನುಗ್ರಹವಿಲ್ಲದೆ ಶ್ರೀಪರಮಾತ್ಮನನ್ನು ತಿಳಿಯಲಿಕ್ಕೆ ಸಮರ್ಥನಾಗಲಾರನು. (ಪರಮಾತ್ಮನು ಸರ್ವ ಸ್ವತಂತ್ರನಾದುದರಿಂದ) ತನ್ನನ್ನು ತಿಳಿಯುವ ವಿಷಯದಲ್ಲಿಯಾಗಲೀ, ಇತರರನ್ನು ತಿಳಿಯುವ ವಿಷಯದಲ್ಲಿ ಆಗಲೀ ಇತರರನ್ನು ಅಪೇಕ್ಷಿಸುವುದಿಲ್ಲ ಆದುದರಿಂದ ಶ್ರೀಪರಮಾತ್ಮನು ಒಬ್ಬನೇ ಸ್ವಪ್ರಕಾಶನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ ಜೀವರಿಗೆ ಇರುವ, ಸ್ವವಿಷಯಜ್ಞಾನರೂಪತ್ವರೂಪವಾದ ಸ್ವಪ್ರಕಾಶತ್ವವು ಶ್ರೀಪರಮಾತ್ಮನ ಪ್ರಸಾದದಿಂದಲೇ, ಸ್ವತಂತ್ರವಾದುದಲ್ಲ ॥ ೧೪ ॥

ಗೀ ॥ ಇತಿ ಕ್ಷೇತ್ರಂ ತಥಾ ಜ್ಞಾನಂ ಜ್ಞೇಯಂ ಚೋಕ್ತಂ ಸಮಾಸತಃ ।
ಮದ್ಭಕ್ತ ಏತದ್ವಿಜ್ಞಾಯ ಮದ್ಭಾವಾಯೋಪಪದ್ಯತೇ ॥ ೧೯ ॥

ಅ ॥ ಇತಿ=ಹಿಂದೆ ಹೇಳಿದ ಪ್ರಕಾರ, **ಕ್ಷೇತ್ರಂ**=**ಮಹಾಭೂತಾನಿ** ಇತ್ಯಾದಿಗಳಿಂದ ಕ್ಷೇತ್ರವೂ, (ಹಾಗೆಯೇ **ಇಚ್ಛಾ** ಇತ್ಯಾದಿಗಳಿಂದ ಕ್ಷೇತ್ರವಿಕಾರಗಳೂ) **ತಥಾ**=ಹಾಗೆಯೇ, **ಜ್ಞಾನಂ**=(**ಅಮಾನಿತ್ವಂ** ಇತ್ಯಾದಿಗಳಿಂದ ಜ್ಞಾನಸಾಧನವೂ, **ತತ್ವಜ್ಞಾನಾರ್ಥದರ್ಶನಂ** ಎಂಬುವುದರಿಂದ) ಶ್ರೀಪರಮಾತ್ಮನ ಅಪರೋಕ್ಷಜ್ಞಾನವೂ, **ಜ್ಞೇಯಂ ಚ**=(**ಜ್ಞೇಯಂ ಯತ್ತತ್** ಇತ್ಯಾದಿಗಳಿಂದ) ಮೋಕ್ಷಕ್ಕಾಗಿ ತಿಳಿಯಲು ಅತ್ಯಾವಶ್ಯಕನಾದ ಪರಮಾತ್ಮನೂ ಕೂಡ **ಸಮಾಸತಃ**=ಸಂಗ್ರಹಿಸಿ, **ಉಕ್ತಂ**=ಹೇಳಲ್ಪಟ್ಟಿದೆ **ಏತತ್**=ಇವುಗಳನ್ನೆಲ್ಲಾ, **ಮದ್ಭಕ್ತಃ**=ನನ್ನ ಭಕ್ತನು **ವಿಜ್ಞಾಯ**=ತಿಳಿದುಕೊಂಡು, **ಮದ್ಭಾವಾಯ**=ನನ್ನಲ್ಲಿರುವುದಕ್ಕಾಗಿ, (**ಮೋಕ್ಷಕ್ಕಾಗಿ**) ಅಥವಾ ಸಾಯುಜ್ಯರೂಪವಾದ ಮೋಕ್ಷವನ್ನು ಹೊಂದುವುದಕ್ಕೋಸ್ಕರ **ಉಪಪದ್ಯತೇ**=ಯೋಗ್ಯನಾಗುತ್ತಾನೆ (ಅಂದರೆ ಮುಕ್ತನಾಗುತ್ತಾನೆ) ॥ ೧೯ ॥

ಭಾ ॥ (೧) ವಿಕಾರಾಂತರ್ಭಾವಾಜ್ಜ್ಞಾನಸಾಧನಂ ಪ್ರಥಮತ ಉಕ್ತಂ ॥ (೨) ಬಹುತ್ವಾತ್ಸಾಧನಾತ್ಯುಪಯೋಗಾತ್ಪ್ರಭಾವಃ ॥ ೧೯ ॥

ಅ ॥ (೧) ವಿಕಾರಗಳಲ್ಲಿ ಅಂತರ್ಭಾವವನ್ನು ತಿಳಿಸುವುದಕ್ಕಾಗಿ ವಿಕಾರವನ್ನು ಹೇಳಿದ ಮೇಲೆ ಉಪೋದ್ಘಾತಪ್ರಕ್ರಿಯೆಯಿಂದ ಹೇಳಲ್ಪಟ್ಟ, ಅಮಾನಿತ್ವ ಮೊದಲಾದ ಜ್ಞಾನಸಾಧನವು ಜ್ಞೇಯನಾದ ಬ್ರಹ್ಮನನ್ನು ಹೇಳುವುದಕ್ಕಿಂತ ಮೊದಲು ಹೇಳಲ್ಪಟ್ಟಿದೆ (೨) (ಉದ್ದೇಶ ಕ್ರಮವನ್ನನುಸರಿಸಿ **ಯತಶ್ಚ**

ಯತ್ ಎಂಬುವುದನ್ನು ಪ್ರಥಮತಃ ಹೇಳದೆ **ಸ ಚ ಯಃ** । **ಯತ್ಪ್ರಭಾವಶ್ಚ** ಎಂಬುವುದನ್ನು ಮೊದಲು ಏಕೆ ಹೇಳಿದ್ದೆಂದರೆ—) ಪ್ರಭಾವೋಕ್ತಿಯು ಹೆಚ್ಚು ಇದ್ದ ಪ್ರಯುಕ್ತವೂ (ಅಲೌಕಿಕವಾದ ಪ್ರಭಾವವು ಬುದ್ಧಿಯಲ್ಲಿ ಆರೂಢವಾಗಲಿಕ್ಕೆ) ಸಾಧನಗಳು ಅತ್ಯುಪಯುಕ್ತಗಳಾಗಿವೆ, ಎಂದು ತಿಳಿಸುವುದಕ್ಕಾಗಿ ಜ್ಞಾನ ಸಾಧನವನ್ನು ಹೇಳಿದೊಡನೆಯೇ ಅದರ ಪ್ರಸಂಗದಿಂದ ಪ್ರಭಾವವು ಹೇಳಲ್ಪಟ್ಟಿದೆ. ॥ ೧೯ ॥

ಪೀ—**ಮದ್ಭಾವಾಯ** ನನ್ನಲ್ಲಿ ಐಕ್ಯಹೊಂದುವುದಕ್ಕಾಗಿ ಎಂಬುವ ಅನ್ಯಥಾ ಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ತಾ ॥ **ಮದ್ಭಾವಾಯ ಮಯಿ ಭಾವಾಯ** ॥ ೧೯ ॥

ಅ ॥ ಮದ್ಭಾವಾಯ=ವಿಶೇಷವಾಗಿ ನನ್ನ ಅಧೀನವಾದ ಸ್ಥಿತಿಯನ್ನು ಹೊಂದುವುದಕ್ಕಾಗಿ (ಅಂದರೆ ಮೋಕ್ಷವನ್ನು ಹೊಂದುವುದಕ್ಕಾಗಿ) (ನನ್ನಲ್ಲಿ ಐಕ್ಯಹೊಂದುವುದಕ್ಕಾಗಿ ಎಂದರ್ಥವಲ್ಲ.) ॥ ೧೯ ॥

ಪೀ—ಸರ್ವಪ್ರೇರಕನಾದ ಶ್ರೀಪರಮಾತ್ಮನ ಸಾಮುಖ್ಯವನ್ನು ಹೇಳಿದ ಮೇಲೆ ಪ್ರೇಯ್ಯವಾದ ವಸ್ತುವನ್ನು ಅವಶ್ಯವಾಗಿ ತಿಳಿಯಬೇಕಾದುದರಿಂದ ಶ್ರೀಪರಮಾತ್ಮನಿಂದ ಪ್ರೇರಿಸಲ್ಪಡುವ ಪುರುಷಾದಿ ರೂಪವಾದ ಕ್ಷೇತ್ರವನ್ನು ಹೇಳುತ್ತಾರೆ—

ಗೀ ॥ **ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ ।**
ವಿಕಾರಾಂಶ್ಚ ಗುಣಾಂಶ್ಚೈವ ವಿದ್ಧಿ ಪ್ರಕೃತಿಸಂಭವಾನ್ ॥ ೨೦ ॥

ಅ ॥ಪ್ರಕೃತಿಂ=**ಮಹಾಭೂತಾನಿ** ಇತ್ಯಾದಿಗಳಿಂದ ಹೇಳಲ್ಪಟ್ಟ ೨೫ ತತ್ವಗಳನ್ನು, ಪುರುಷಂ=ಜೀವನನ್ನು, ಉಭಾವಪಿ=ಇಬ್ಬರನ್ನು. ಅನಾದೀ=ಉತ್ಪತ್ತಿರಹಿತರನ್ನಾಗಿಯೂ ಕಾರಣರಹಿತರನ್ನಾಗಿಯೂ, ವಿದ್ಧಿ=ತಿಳಿ ಪ್ರಕೃತಿಸಂಭವಾನ್=ಪ್ರಧಾನವೇ ಉಪಾದಾನಕಾರಣವಾಗಿ ಉಳ್ಳ, ವಿಕಾರಾಂಶ್ಚ=ಹಿಂದೆ ಹೇಳಿದ ಇಚ್ಛೆ ಮೊದಲಾದ ಎಲ್ಲಾ ಪ್ರಕೃತಿ ವಿಕಾರಗಳನ್ನೂ, ಗುಣಾಂಶ್ಚೈವ=ಸತ್ವಾದಿ ಗುಣಗಳನ್ನೂ ಕೂಡ, ವಿದ್ಧಿ=ತಿಳಿ. (ಅಂತೂ ಈ ಶ್ಲೋಕದಲ್ಲಿ ಶ್ರೀಪರಮಾತ್ಮನು ಹೊರತು ಬೇರೆ ಎಲ್ಲಾ ಪ್ರೇರೇಪಿಸಲ್ಪಡುವ ಚೇತನ ಅಚೇತನ ಪ್ರಪಂಚವು ಉಕ್ತವಾಯಿತು) ಅಥವಾ ಪ್ರಕೃತಿಂ=ಚೇತನಾಚೇತನ ಪ್ರಕೃತಿಗಳನ್ನು ಪುರುಷಂ=ಜೀವನನ್ನು ಪರಮಾತ್ಮನನ್ನು, ಇಬ್ಬರನ್ನು ಅನಾದಿಗಳನ್ನಾಗಿ ತಿಳಿ ಇಚ್ಛಾದಿ ವಿಕಾರಗಳನ್ನು ಸತ್ವಾದಿಗುಣಗಳನ್ನು ಪ್ರಕೃತಿಯೇ ಉಪಾದಾನಕಾರಣಗಳಾಗಿ ಉಳ್ಳವುಗಳನ್ನಾಗಿ ತಿಳಿ ॥ ೨೦ ॥

ಭಾ ॥ (೧) **ಯತಶ್ಚ ಯದಿತಿ ವಕ್ತುಂ ಪ್ರಕೃತಿವಿಕಾರಪುರಷಾನ್ಸಂಕ್ಷಿಪ್ಯಾಹ** ॥ (೨) **ಗುಣಾಃ ಸತ್ತ್ವಾದಯಃ । ತೇಷಾಮಲ್ಪೋ ವಿಶೇಷೋ ಲಯಾತ್ಸರ್ಗೇ ಇತಿ ವಿಕಾರಾಃ ಪೃಥಗುಕ್ತಾಃ** ॥ (೩) **ಕಾರ್ಯಾಕಾರ್ಯಗುಣಾಸ್ತಿಸ್ರೋ ಯತಃ ಸ್ವಲ್ಪೋದ್ಭವಾ ಜನಾವಿತಿ ಮಾಧುಚ್ಛಂದಸಶಾಖಾಯಾಂ** ॥ ೨೦ ॥

ಅ ॥(೧)**ಯತಶ್ಚ ಯತ್** ಎಂದು ಪ್ರತಿಜ್ಞಾತನಾದ ಪ್ರೇರಕನಾದ ಶ್ರೀಪರಮಾತ್ಮನ ಸ್ವರೂಪವನ್ನು ಹೇಳಲಿಕ್ಕೆ (ಅತನಿಂದ ಪ್ರೇರೇಪಿಸಲ್ಪಡುವ, ಧರ್ಮಗಳಿಂದ ಕೂಡಿರುವ ಕ್ಷೇತ್ರವನ್ನು ನಿರೂಪಿಸುವುದು ಅತ್ಯಾವಶ್ಯಕವಾಗಿರುವುದರಿಂದ) ಪ್ರಕೃತಿ,(೨೪ ತತ್ವಗಳು) ವಿಕಾರ, ಪುರುಷ (ಜೀವ)ರನ್ನು ಸಂಕ್ಷೇಪದಿಂದ

ಹೇಳುತ್ತಾರೆ (ಶ್ರೀಪರಮಾತ್ಮನು ಹೊರತಾದ ಎಲ್ಲಾ ಜೀವನಾಜೀವನ ಸಮುದಾಯವು **ಕ್ಷೇತ್ರ** ವೆನಿಸುತ್ತದೆ) ಕ್ಷೇತ್ರದಲ್ಲಿ ಸೇರಿದ ಗುಣತ್ರಯ ಮೊದಲಾದವುಗಳೂ, ಇಚ್ಛಾದಿಗಳೂ, ಎಲ್ಲಾ ವಿಕಾರಗಳೂ ಇವುಗಳನ್ನು ವಿಕಾರಶಬ್ದದಿಂದ ಇಟ್ಟುಕೊಳ್ಳಬೇಕು) **ಯಾವತ್ಸಂಜಾಯತೇ** ಇತ್ಯಾದಿ ಗಳಿಂದ ಈ ಪ್ರಕೃತ್ಯಾದಿಗಳನ್ನೇ ಮುಂದಕ್ಕೆ ವಿವರಿಸಿ ಹೇಳುವರು) (ಆದಕಾರಣ ಈಗ ಸಂಕ್ಷೇಪದಿಂದ ಹೇಳಿದ್ದು) (೨) (ಕೆಲವರು ಸುಖ ದುಃಖ ಮೋಹಗಳು ಗುಣಗಳೆಂದು ಹೇಳುವರು. ಗುಣಗಳನ್ನು ಕಾರ್ಯ ಕಾರಣ ರೂಪಗಳೆಂದು ಇತರರು ಹೇಳುವರು ಈ ಎರಡನ್ನು ನಿರಾಕರಿಸುತ್ತಾ ಸರಿಯಾದ ಅರ್ಥವನ್ನು ಹೇಳುತ್ತಾರೆ—) ಗುಣಾಃ = ಸತ್ವರಜಸ್ತಮೋಗುಣಗಳು (ಸತ್ವರಜಸ್ತಮೋಗುಣಗಳೂ, ಪ್ರಕೃತಿವಿಕಾರ ಗಳಾಗಿರುವುದರಿಂದ ವಿಕಾರದಲ್ಲಿಯೇ ಗುಣಗಳು ಸೇರುವುದರಿಂದ **ವಿಕಾರಾಂಶ್ಚ ಗುಣಾಂಶ್ಚ** ಎಂದು ಪ್ರತ್ಯೇಕ ಗುಣಗಳನ್ನು ಹೇಳಿದ್ದು ಏಕೆ ಎಂದರೆ-) ಆ ಸತ್ವಾದಿಗುಣಗಳಿಗೆ ಪ್ರಲಯಕಾಲಕ್ಕಿಂತ ಮೊದಲು ಸೃಷ್ಟಿಕಾಲದಲ್ಲಿ ಇಚ್ಛಾದಿಗಳಂತೆ ಸ್ವರೂಪೋತ್ಪತ್ತಿಯಿಲ್ಲದೆ ಅತ್ಯಲ್ಪ ಉತ್ಪತ್ತಿರೂಪವಾದ ವಿಶೇಷವಿರುವುದ ರಿಂದ ಇಚ್ಛಾದಿರೂಪವಿಕಾರಗಳಿಂದ ಪ್ರತ್ಯೇಕ ಹೇಳಿದ್ದು (೩) ಯಾವ ಕಾರಣದಿಂದ ಸೃಷ್ಟಿಕಾಲದಲ್ಲಿ ಸತ್ವಾದಿ ಮೂರು ಗುಣಗಳು ಕಾರ್ಯಗಳೆಂದೂ, ಅಕಾರ್ಯಗಳೆಂದೂ, ಅನ್ನಿಸಿಕೊಳ್ಳುತ್ತವೆ. ಏಕೆಂದರೆ ಸೃಷ್ಟಿಕಾಲದಲ್ಲಿ ಸ್ವಲ್ಪ ಉತ್ಪತ್ತಿಯುಳ್ಳವುಗಳು (ಅಂದರೆ ಸೃಷ್ಟಿಕಾಲದಲ್ಲಿ ಮಹಾ ಭೂತಾದಿಗಳಿಗಿಂತ ಅಲ್ಪ ಉಪಚಯ ರೂಪವಾದ ಸ್ವಲ್ಪ ಉತ್ಪತ್ತಿಯಿದ್ದುದರಿಂದ ಕಾರ್ಯತ್ವವು ಬಹು ಉಪಚಯವಿಲ್ಲದಿರು ವುದರಿಂದ ಅಕಾರ್ಯತ್ವವು, ಎಂದು ಮಾಧುಚ್ಛಂದಸ ಶಾಖೆಯಲ್ಲಿ ಹೇಳಿದೆ ॥ ೨೦ ॥

ಪೀ -ಇಚ್ಛಾದಿವಿಕಾರಗಳೆಲ್ಲವೂ ಪ್ರಕೃತಿಯಿಂದಲೇ ಹುಟ್ಟಿದವುಗಳೆಂಬುದನ್ನು ವಿವರಿಸುತ್ತಾರೆ—

ಗೀ ॥ ಕಾರ್ಯಕಾರಣಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ ।
ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ ॥ ೨೧ ॥

ಅ ॥ ಕಾರ್ಯಕಾರಣಕರ್ತೃತ್ವೇ = ಜೀವನ ದೇಹ, ಇಂದ್ರಿಯ ಇವುಗಳನ್ನು ಸೃಷ್ಟಿ ಮಾಡುವ ವಿಷಯದಲ್ಲಿ, ಪ್ರಕೃತಿಃ = ಚಿತ್ಪ್ರಕೃತಿಯು, ಹೇತುಃ = ಕಾರಣವೆಂದು, ಉಚ್ಯತೇ = ಹೇಳಲ್ಪಡುತ್ತದೆ ಸುಖ ದುಃಖಾನಾಂ ಭೋಕ್ತೃತ್ವೇ = ಪ್ರಕೃತಿವಿಕಾರಗಳಾದ ಸುಖ ದುಃಖಗಳನ್ನು ತನ್ನ ದ್ವಾರಾ ಜೀವನು ಭೋಗಿ ಸುವ ವಿಷಯದಲ್ಲಿ, ಪುರುಷಃ = ಶ್ರೀಪರಮಾತ್ಮನು, ಹೇತುಃ = ಕಾರಣನೆಂದು, ಉಚ್ಯತೇ = ಹೇಳಲ್ಪಡುತ್ತಾನೆ

ವಿ ॥ (1) ಶ್ರೀಪರಮಾತ್ಮನು ಸರ್ವಕ್ಕೂ ಕಾರಣನಾಗಿರುವುದರಿಂದ ಜೀವರ ದೇಹ ಇಂದ್ರಿಯಗಳನ್ನು ಮಾಡುವ ವಿಷಯದಲ್ಲಿಯೂ ಕಾರಣನಾಗಿರುತ್ತಾನೆ ಹಾಗೆಯೇ ಲಕ್ಷ್ಮೀದೇವಿಯು ಜೀವರಿಗೆ ಸುಖ ದುಃಖ ಭೋಗಗಳನ್ನು ಕೊಡಲಿಕ್ಕೆ ಕಾರಣಳಾಗಿರುತ್ತಾಳೆ ಹೀಗೆ ಇರಲು ಕಾರ್ಯಕಾರಣ ಕರ್ತೃತ್ವ ದಲ್ಲಿ ಪ್ರಕೃತಿಯು ಕಾರಣಳೆಂದೂ ಜೀವನು ಸುಖ ದುಃಖಗಳನ್ನು ಭೋಗಿಸುವ ವಿಷಯದಲ್ಲಿ ಶ್ರೀಪರ ಮಾತ್ಮನು ಕಾರಣನೆಂದೂ, ವಿಶಿಷ್ಯ ಹೇಳಿದ್ದು ಹೇಗೆ? ಎಂದರೆ-ಲಕ್ಷ್ಮೀದೇವಿಗೆ ಸುಖ ದುಃಖಗಳ ಭೋಗ ವನ್ನು ಕೊಡುವ ವಿಷಯದಲ್ಲಿ ಅಲ್ಪ ಪ್ರವೃತ್ತಿಯು ಕಾರ್ಯಕಾರಣ ಕರ್ತೃತ್ವದಲ್ಲಿ ಭೋಗವನ್ನು ಕೊಡುವ ಪ್ರವೃತ್ತಿಗಿಂತ ಹೆಚ್ಚು ಪ್ರವೃತ್ತಿಯು ಆದಕಾರಣ ಕಾರ್ಯಕಾರಣ ಕರ್ತೃತ್ವದಲ್ಲಿ ಲಕ್ಷ್ಮಿಯು ಕಾರಣಳೆಂದೂ, ಜೀವನಿಗೆ ಸುಖ ದುಃಖಗಳ ಭೋಗವನ್ನು ಕೊಡುವ ವಿಷಯದಲ್ಲಿ ಪರಮಾತ್ಮನು ಕಾರಣ ನೆಂದೂ, ವಿಶಿಷ್ಯ ಹೇಳಿದ್ದು ಕೂಡುತ್ತದೆ. (2) ಅಥವಾ ದೇಹೇಂದ್ರಿಯಗಳ ಪರಿಣಾಮ ಕ್ರಿಯೆಯಲ್ಲಿ ಜಡ ಪ್ರಕೃತಿಯು ಕಾರಣವು. ಸುಖ ದುಃಖಗಳನ್ನು ಅನುಭವಿಸಲಿಕ್ಕೆ ಜೀವನು ಕರ್ತನು ॥ ೨೧ ॥

ಪೀ—ಪ್ರಕೃತಿಂ ಪುರುಷಂ ಚ ಎಂಬುವ ಉಕ್ತಿಯಿಂದಲೇ **ಉಭೌ** ಎಂದು ಸಿದ್ಧಿಸುವುದರಿಂದ **ಉಭೌ** ಎಂದು ಪುನಃ ಹೇಳಿದ್ದು ಏತಕ್ಕೆಂದರೆ—

ತಾ ॥ (೧) ಪ್ರಕೃತಿಂ ಪುರುಷಂ ಚೇತ್ಯತ್ರ ಪುರುಷಶಬ್ದೇನ ಜೀವಪರಯೋಃ ಪ್ರಕೃತಿಶಬ್ದೇನ ಚೇತನಾಚೇತನಪ್ರಕೃತ್ಯೋಃ ಸ್ವೀಕಾರಾಯೋಭಾವಪೀತಿ ॥ (೨) ವಿಕಾರಾಣಾಂ ಸತ್ತ್ವಾದೀನಾಂ ಚೋಪಾದಾನತ್ವವಿವಕ್ಷಯಾ ಪ್ರಕೃತಿಸಂಭವತ್ವಂ ॥ (೩) ಸ್ವಾತಂ-ತ್ರ್ಯಂ ತು ಪರಮೇಶ್ವರ(ಮು)ಸ್ಯೈವ । ಉಪದ್ರಷ್ಟಾನುಮಂತಾ ಚೇತ್ಯಾದಿ ವಕ್ಷ್ಯ-ಮಾಣತ್ವಾತ್ ॥ (೪) ಗುಣಾನಾಂ ಚ ವಿಕಾರತ್ವೇಽಪ್ಯಧಿಕವಿಕಾರತ್ವಾಪೇಕ್ಷಯಾಽ-ನ್ಯೇಷಾಂ ವಿಕಾರಾಂಶ್ಚ ಗುಣಾಂಶ್ಚೇತಿ ಪೃಥಗುಕ್ತಿಃ ॥ ೧ ॥

ಅ ॥ (೧) ಪ್ರಕೃತಿಂ ಪುರುಷಂ ಚ (ಶ್ಲೋ ೨೦) ಎಂಬುವಲ್ಲಿ ಪುರುಷ ಶಬ್ದದಿಂದ ಜೀವನನ್ನೂ ಪರಮಾತ್ಮನನ್ನೂ, ಪ್ರಕೃತಿ ಶಬ್ದದಿಂದ ಚೇತನ ಅಚೇತನ ಪ್ರಕೃತಿಗಳನ್ನು ಇಟ್ಟಕೊಳ್ಳಬೇಕೆಂದು ತಿಳಿಸು ವುದಕ್ಕಾಗಿ **ಉಭೌ** ಎಂದು ಹೇಳಿದ್ದು ೨) (**ವಿಕಾರಾಂಶ್ಚ ಗುಣಾಂಶ್ಚ** (ಶ್ಲೋ ೨೦) ಎಂಬುವಲ್ಲಿ ವಿಕಾ ರಾದಿಗಳಿಗೆ ಪ್ರಕೃತಿಯು ಸ್ವತಂತ್ರಕಾರಣವು, ಎಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸು ತ್ತಾರೆ—) ಇಚ್ಛಾದಿ ವಿಕಾರಗಳಿಗೂ, ಸತ್ತ್ವಾದಿಗುಣಗಳಿಗೂ ಪ್ರಕೃತಿಯು ಉಪಾದಾನಕಾರಣವು ಎಂಬುವ ಅಭಿಪ್ರಾಯದಿಂದ ವಿಕಾರಗಳೂ ಸತ್ತ್ವಾದಿಗುಣಗಳೂ ಪ್ರಕೃತಿಯಿಂದ ಹುಟ್ಟಿದವುಗಳೆಂದು ಹೇಳಿದ್ದು (೩) (ಪ್ರಕೃತಿಯು ಸ್ವತಂತ್ರಕಾರಣವೆಂದು ಏಕೆ ಹೇಳಬಾರದು ಎಂದರೆ—) ಸರ್ವಕ್ಕೂ ಸ್ವತಂತ್ರಕಾರಣನು ಪರಮಾತ್ಮನೊಬ್ಬನೇ ಏಕೆಂದರೆ—**ಉಪದ್ರಷ್ಟಾ ಅನುಮಂ ತಾ ಚ** (ಶ್ಲೋ ೨೩ರಲ್ಲು) ಪರಮಾತ್ಮ ನಿಗೇನೇ ಸರ್ವ ಸ್ವಾತಂತ್ರ್ಯವನ್ನು ಹೇಳುವುದರಿಂದ ಪ್ರಕೃತಿಗೆ ಸ್ವತಂತ್ರಕಾರಣತ್ವವಿಲ್ಲ ಉಪಾದಾನ (ಪರಿಣಾಮ) ಕಾರಣತ್ವವೇ (೪) (ಇಚ್ಛಾದಿಗಳಂತೆಯೇ ಸತ್ತ್ವಾದಿಗುಣಗಳೂ ವಿಕಾರಗಳಾಗಿರುವುದ ರಿಂದ **ವಿಕಾರಾಂಶ್ಚ ಗುಣಾಂಶ್ಚ** ಎಂದು ಪ್ರತ್ಯೇಕ ಹೇಳಲಿಕ್ಕೆ ಕಾರಣವೇನು? ಎಂದರೆ—) ಸತ್ತ್ವಾದಿಗುಣ ಗಳು ವಿಕಾರಗಳಾದಾಗ್ಯೂ ಸತ್ತ್ವಾದಿಗುಣಗಳಲ್ಲಿ ಅಲ್ಪ ವಿಕಾರಗಳು, ಇಚ್ಛಾದಿಗಳಲ್ಲಿ ಅದಕ್ಕಿಂತ ಹೆಚ್ಚು ವಿಕಾರಗಳು, ಆ ಅಭಿಪ್ರಾಯದಿಂದ **ವಿಕಾರಾಂಶ್ಚ ಗುಣಾಂಶ್ಚ** ಎಂದು ಪ್ರತ್ಯೇಕ ಹೇಳಿದ್ದು ಕೂಡುತ್ತದೆ ॥ ೧ ॥

ಪೀ—**ಕಾರ್ಯಕಾರಣಕರ್ತೃತ್ವೇ** (ಶ್ಲೋ ೨೧) ಎಂಬುವ ಶ್ಲೋಕವು ಜಡಪ್ರಕೃತಿ ಜೀವವಿಷ ಯಕವಮಾತ್ರವಲ್ಲ, ಮತ್ತೆ ಲಕ್ಷ್ಮೀ, ಪರಮಾತ್ಮವಿಷಯಕವೂ ಆಗಿದೆ, ಎಂಬುವ ವಿಷಯದಲ್ಲಿ ಪ್ರಮಾಣ ವನ್ನು ಹೇಳುತ್ತಾರೆ—

ತಾ ॥ (೧) ಸ್ವದೇಹೇಂದ್ರಿಯಹೇತುತ್ವಂ ಯಜ್ಜೀವಸ್ಯ ಸ್ವಕರ್ಮಭಿಃ । ಆವೃತ್ಯ ವಿಷ್ಣು ತತ್ವಂ ತದ್ಧೇತುಶ್ಚಿತ್ಪ್ರಕೃತಿರ್ಮತಾ ॥ (೨) ಜೀವಸ್ಯ ಸುಖದುಃಖಾನಾಂ ಭೋಗಶಕ್ತಿಪ್ರದಃ ಸ್ಸದಾ । ಪರಮಃ ಪುರುಷೋ ವಿಷ್ಣುಃ ॥ (೩) ಸರ್ವಕರ್ತಾಽಪಿ ಸನ್ಸದಾ । ವಿಶೇಷ-ಕರ್ತಾ ಕೇಷಾಂಚಿದುಕ್ತೋ ಯದ್ವದ್ವಿಕುಂಠಪಃ । ಉಚ್ಯತೇ ಸರ್ವಹಾಲೋಽಪಿ ವಿಶೇಷೇಣ ಸ್ವ(ಸ)ಕರ್ಮಣೇತಿ ಚ । (೪) ಪರಮೇಶ್ವರಸ್ಯೈವ ಸರ್ವಕರ್ತೃತ್ವೇಽಪಿ ಭೋಕ್ತೃತ್ವದಾನೇ ದೇವ್ಯಾ ಅಲ್ಪಪ್ರವೃತ್ತಿರಿತಿ ದರ್ಶಯಿತುಮುಚ್ಯತ ಇತಿ ಸ್ಥಾನದ್ಯ-ಯೇಽಪ್ಯುಕ್ತಂ ॥ (೫) ಕರ್ತೃತ್ವೇಽಪಿ ಸ ಏವ ಮುಖ್ಯಹೇತುಃ । ತಥಾಽಪಿ ಭೋಕ್ತೃ-

ತ್ವಾಪೇಕ್ಷಯಾ ತಸ್ಯಾ ಅಧಿಕಪ್ರವೃತ್ತಿರಿತಿ ಕರ್ತೃತ್ವೇ ಹೇತುಃ ಪ್ರಕೃತಿರುಚ್ಯತ ಇತಿ ಸರ್ವಹೇತುತ್ವೇಽಪಿ ವಿಷ್ಣೋಃ ಪ್ರಕೃತೇರ್ಜೀವಂ ಪ್ರತಿ ಭೋಕ್ತೃತ್ವದಾನೇಽಲ್ಪಪ್ರವೃತ್ತಿರಿತಿ ಪುರುಷೋ ಭೋಕ್ತೃತ್ವೇ ಹೇತುರುಚ್ಯತ ಇತಿ ವಿಶೇಷಹೇತೋರೇವಮುಚ್ಯತೇ (ತ ಏವ) । ಮುಖ್ಯತಸ್ತು ಸರ್ವಹೇತುತ್ವಂ ವಿಷ್ಣೋರೇವೇತಿ ಭಾವಃ ॥ (೬) ಪುರುಷಃ ಪ್ರಕೃತಿಸ್ಥ ಇತ್ಯತ್ರ ಪುರುಷಶಬ್ದೋ ಜೀವೇ । ಉಭಯೋರಪಿ ಪುರುಷಶಬ್ದೇನ ಪೂರ್ವಂ ಪ್ರಸ್ತುತತ್ವಾತ್ । ಯಥಾಯೋಗ್ಯಮುಪಪತ್ತೇಃ ॥ ೨ ॥ ।' ೨೧ ॥

ಅ ॥ (೧) ಪೂರ್ವದಲ್ಲಿಯೇ ತನ್ನಿಂದ (ಜೀವನಿಂದ) ಸಂಪಾದಿಸಲ್ಪಟ್ಟ ಸಂಸಾರಬಂಧಕ ಕರ್ಮಗಳಿಂದ ತನ್ನ ಶರೀರ ಇಂದ್ರಿಯಗಳನ್ನು ಕುರಿತು ಜೀವನಿಗೆ ಕಾರಣತ್ವವಿದೆ, ಎಂಬುವ ವಿಷಯದಲ್ಲಿ ಚಿತ್ಪ್ರಕೃತಿಯಾದ ಲಕ್ಷ್ಮೀದೇವಿಯು ಜೀವನಿಗೆ ವಿಷ್ಣುವಿನ ಸ್ವಭಾವತಃ ಇರುವ ಸ್ಥಿತಿಯನ್ನು ತಿಳಿಸದೆ, ಕಾರಣಳು ಆಗಿರುತ್ತಾಳೆ (೨) ಸರ್ವೋತ್ತಮನಾದ ಗುಣಪೂರ್ಣನಾದ ಶ್ರೀಪರಮಾತ್ಮನು ಜೀವರಿಗೆ ಸುಖದುಃಖಗಳ ಭೋಗಶಕ್ತಿಯನ್ನು ಸದಾ ಕೊಡುವವನು (೩) (ಶ್ರೀಪರಮಾತ್ಮನೇ ಸರ್ವಕ್ಕೂ ಕರ್ತನಾದುದರಿಂದ ಜೀವರಿಗೆ ಭೋಗಶಕ್ತಿಯನ್ನು ಕೊಡುವವನೆಂದು ವಿಶೇಷ್ಯ ಹೇಳಿದ್ದ ಹೇಗೆ? ಎಂದರೆ -) ಶ್ರೀಪರಮಾತ್ಮನು ಎಲ್ಲರನ್ನು ರಕ್ಷಿಸುವವನಾದಾಗ್ಯೂ ವೈಕುಂಠಕ್ಕೆ ಮತ್ತೊಬ್ಬ ಪಾಲಕನು ಇಲ್ಲದಿರುವುದರಿಂದ **ವಿಕುಂಠಪ** ಎಂದು ವಿಶೇಷ್ಯ ಶ್ರೀಪರಮಾತ್ಮನು ಹೇಗೆ ಹೇಳಿಸಿಕೊಳ್ಳಲ್ಪಡುತ್ತಾನೋ, ಹಾಗೆಯೇ ಶ್ರೀಪರಮಾತ್ಮನು ಸರ್ವಕರ್ತನಾದಾಗ್ಯೂ ಭೋಕ್ತೃತ್ವ ಮೊದಲಾದವುಗಳಿಗೆ ವಿಶೇಷ ಕಾರಣನಾದುದರಿಂದ ವಿಶೇಷ ಕರ್ತನೆಂದು ವಿಶೇಷವಾದ ತನ್ನ ಪ್ರೇರಣಾದಿರೂಪವಾದ ವ್ಯಾಪಾರದಿಂದಲೇ ಹೇಳಿಸಲ್ಪಡುತ್ತಾನೆ (೪) ಪರಮಾತ್ಮನಿಗೆ ಕಾರ್ಯಕಾರಣ ಕರ್ತೃತ್ವದಲ್ಲಿ ಹೇತುತ್ವವಿದ್ದರೂ, ಜೀವರಿಗೆ ಸುಖದುಃಖಾದಿರೂಪವಾದ ಭೋಗವನ್ನು ಕೊಡಲಿಕ್ಕೆ ಲಕ್ಷ್ಮೀದೇವಿಗೆ ಅಲ್ಪ ಪ್ರವೃತ್ತಿಯು, ಆದಕ್ಕಿಂತ ಕಾರ್ಯಕಾರಣ ಕರ್ತೃತ್ವದಲ್ಲಿ ಹೆಚ್ಚು ಪ್ರವೃತ್ತಿಯು ಆದಕಾರಣ ಲಕ್ಷ್ಮೀದೇವಿಯು ಕಾರ್ಯಕಾರಣ ಕರ್ತೃತ್ವದಲ್ಲಿ ಕಾರಣಳೆಂದು ಹೇಳಿದ್ದುಯುಕ್ತವು ಹಾಗೆಯೇ ಶ್ರೀಪರಮಾತ್ಮನಿಗೆ ಸರ್ವ ಕರ್ತೃತ್ವವಿದ್ದರೂ, ವಿಶೇಷ್ಯ ಭೋಕ್ತೃತ್ವವನ್ನು ಶ್ರೀಪರಮಾತ್ಮನು ಕೊಡುತ್ತಾನೆಂದು ಹೇಳಿದ್ದು ಯ ಕ್ತವು ಭೋಕ್ತೃತ್ವವನ್ನು ಕೊಡಲಿಕ್ಕೆ ಲಕ್ಷ್ಮೀದೇವಿಗೆ ಅಲ್ಪ ಪ್ರವೃತ್ತಿಯು ಶ್ರೀಪರಮಾತ್ಮನಿಗೇನೇ ಹೆಚ್ಚು ಪ್ರವೃತ್ತಿಯು, ಎಂದು ಸೂಚಿಸುವುದಕ್ಕಾಗಿ ಈ ಶ್ಲೋಕದಲ್ಲಿ ಪೂರ್ವಾರ್ಧದಲ್ಲಿಯೂ ಉತ್ತರಾರ್ಧದಲ್ಲಿಯೂ **ಉಚ್ಯತೇ** ಎಂದು ಹೇಳಿದ್ದು (೫) (ಈ ಅರ್ಧವು ಇದರಿಂದ ಹೇಗೆ ಸಿದ್ಧವಾಯಿತೆಂದರೆ—) ಭೋಕ್ತೃತ್ವದಂತೆ ಕರ್ತೃತ್ವದಲ್ಲಿಯೂ ಕೂಡ ಶ್ರೀಪರಮಾತ್ಮನೇ ಮುಖ್ಯ ಕಾರಣನು ಆದರೂ ಜೀವರಿಗೆ ಭೋಕ್ತೃತ್ವವನ್ನು ಕೊಡುವ ಪ್ರವೃತ್ತಿಗಿಂತ ಲಕ್ಷ್ಮೀದೇವಿಗೆ ಕಾರ್ಯಕಾರಣ ಕರ್ತೃತ್ವದಲ್ಲಿ ಹೆಚ್ಚು ಪ್ರವೃತ್ತಿಯು ಇದೆ ಆದಕಾರಣ ಲಕ್ಷ್ಮೀದೇವಿಯು ಕಾರ್ಯಕಾರಣ ಕರ್ತೃತ್ವದಲ್ಲಿ ಕಾರಣಳೆಂದು ಹೇಳಲ್ಪಡುತ್ತಾಳೆ ಹೀಗೆ ಶ್ರೀವಿಷ್ಣುವು ಸಮಸ್ತಕ್ಕೆ ಕಾರಣನಾದಾಗ್ಯೂ ಜೀವನಿಗೆ ಭೋಕ್ತೃತ್ವ ಕೊಡಲಿಕ್ಕೆ ಲಕ್ಷ್ಮೀದೇವಿಗೆ ಅಲ್ಪ ಪ್ರವೃತ್ತಿಯು, ಶ್ರೀಪರಮಾತ್ಮನು ಭೋಕ್ತೃತ್ವ ಕೊಡಲಿಕ್ಕೆ ವಿಶೇಷತಃ ಕಾರಣನು. ಈ ಅಭಿಪ್ರಾಯದಿಂದ ಹೀಗೆ ಹೇಳಿದ್ದು ಮುಖ್ಯವಾಗಿ ಶ್ರೀವಿಷ್ಣುವೇ ಸಮಸ್ತಕ್ಕೂ ಮುಖ್ಯ ಕಾರಣನು ಎಂದು ಭಾವವು. (೬)(**ಪುರುಷಃ ಪ್ರಕೃತಿಸ್ಥಃ** (ಶ್ಲೋ ೨೨) ಎಂಬುವಲ್ಲಿದ್ದ ಪುರುಷ ಶಬ್ದದಿಂದ ಶ್ರೀಪರಮಾತ್ಮನು ಹೇಳಿಸಿಕೊಳ್ಳಲ್ಪಡುತ್ತಾನೆ, ಎಂಬೀ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ) **ಪುರುಷಃ ಪ್ರಕೃತಿಸ್ಥಃ** ಎಂಬುವಲ್ಲಿದ್ದ ಪುರುಷ ಶಬ್ದವು ಜೀವಪರವೇ (**ಪುರುಷಃ ಸುಖದುಃಖಾನಾಂ** (ಶ್ಲೋ ೨೧) ಎಂಬುವಲ್ಲಿದ್ದ ಪುರುಷಶಬ್ದದಿಂದ ಶ್ರೀಪರಮಾತ್ಮನು ಪ್ರಸ್ತುತನಾದುದರಿಂದ ಜೀವನನ್ನು ತೆಗೆದುಕೊಳ್ಳುವುದು ಹೇಗೆಂದರೆ—) ಪುರುಷ ಶಬ್ದದಿಂದ ಜೀವ ಪರಮಾತ್ಮರಿಬ್ಬರೂ ಪೂರ್ವದಲ್ಲಿ ಪ್ರಸ್ತುತರಾಗಿರುತ್ತಾರೆ (ಅಂದರೆ ಯದ್ಯಪಿ ಇಲ್ಲಿ ಪುರುಷ ಶಬ್ದದಿಂದ ಶ್ರೀಪರಮಾತ್ಮನು ಪ್ರಸ್ತುತನಾಗಿರುತ್ತಾನೆ

ಆದರೂ ಪ್ರಕೃತಿಂ ಪುರುಷಂ ಚ ಎಂಬುವಲ್ಲಿ ಪುರುಷ ಶಬ್ದದಿಂದ ಪರಮಾತ್ಮನಂತೆ ಜೀವನೂ ಪ್ರಸ್ತುತನಾಗಿದ್ದಾನೆ ಆದಕಾರಣ ಪುರುಷಃ ಪ್ರಕೃತಿಸ್ಥಃ ಎಂಬುವಲ್ಲಿ ಪುರುಷ ಶಬ್ದದಿಂದ ಜೀವನನ್ನು ತೆಗೆದುಕೊಳ್ಳುವುದು ಯುಕ್ತವು (ಜೀವನು ಪ್ರಸ್ತುತನಾದಾಗ್ಯೂ ಸವಿಾಪದಲ್ಲಿ ಪ್ರಸ್ತುತನಾದ ಪರಮಾತ್ಮನನ್ನು ಬಿಟ್ಟು ದೂರದಲ್ಲಿ ಪ್ರಸ್ತುತನಾದ ಜೀವನನ್ನು ತೆಗೆದುಕೊಳ್ಳುವುದು ಯುಕ್ತವಲ್ಲ ಎಂದರೆ—) (ಶ್ರೀಪರಮಾತ್ಮನು ಸವಿಾಪದಲ್ಲಿ ಪ್ರಸ್ತುತನಾದಾಗ್ಯೂ ಆದನ್ನು ಬಿಟ್ಟು ದೂರ ಪ್ರಸ್ತುತನಾದ ಜೀವನನ್ನು ತೆಗೆದುಕೊಳ್ಳುವುದು ಯುಕ್ತವು ಏಕೆಂದರೆ ಪ್ರಕೃತಿಯುಂದುಂಟಾದ ಗುಣಗಳನ್ನು ಭೋಗಿಸುವವನೆಂದು ತೋರುತ್ತದೆ ಪರಮಾತ್ಮನಿಗೆ ಅದು ಸರ್ವಥಾ ಕೂಡಲಾರದು ಜೀವನಿಗೆ ಆ ಭೋಗವುಕೂಡುತ್ತದೆ ಆದಕಾರಣ ಅರ್ಥವು ಯೋಗ್ಯವಾಗುವಂತೆ ಹೇಳುವುದು ಯುಕ್ತವು ॥ ೨೧ ॥

ಪೀ—ಪ್ರಕೃತಿಯಿಂದ ಮಾಡಲ್ಪಟ್ಟ ದೇಹ ಇಂದ್ರಿಯಗಳ ಸಂಬಂಧದಿಂದ ಜೀವನು ಸುಖದುಃಖಾದಿಗಳನ್ನು ಭೋಗಿಸುವವನು ಲಕ್ಷ್ಮೀನಾರಾಯಣರು ಜೀವರಿಗೆ ನಿಯಾಮಕರು ಎಂದು ಹೇಳಿದ್ದು ಅಯುಕ್ತವು ಏಕೆಂದರೆ – ದೇಹಾದಿಗಳ ಸಂಬಂಧಾದಿಗಳು ಮಿಥ್ಯೆಯಾಗಿವೆ, ಎಂದರೆ-

ಗೀ॥ ಪುರುಷಃ ಪ್ರಕೃಸ್ಥೋ ಹಿ ಭುಂಕ್ತೇ ಪ್ರಕೃತಿಜಾನ್ಗುಣಾನ್ ।
ಕಾರಣಂ ಗುಣಸಂಗೋಽಸ್ಯ ಸದಸದ್ಯೋನಿಜನ್ಮಸು ॥ ೨೨ ॥

ಅ ॥ ಪುರುಷಃ = ಜೀವನು, ಪ್ರಕೃತಿಸ್ಥಃ = ಪ್ರಕೃತಿಯಿಂದುಂಟಾದ ದೇಹಾದಿಗಳಲ್ಲಿ ಇದ್ದು ಪ್ರಕೃತಿಜಾನ್ ಗುಣಾನ್ = ಪ್ರಕೃತಿಯಿಂದ ಹುಟ್ಟಿದ ಸುಖ ದುಃಖಾದಿಗಳನ್ನು, ಭುಂಕ್ತೇ = ಅನುಭವಿಸುತ್ತಾನೆ ಹಿ = ಈ ವಿಷಯವು ಸರ್ವರಿಗೂ ಅನುಭವ ಸಿದ್ಧವು (ಶುದ್ಧನಾದ ಜೀವನು ಪ್ರಕೃತಿಯಲ್ಲಿರಲಿಕ್ಕೆ ಕಾರಣವೇನು? ಎಂದರೆ—) ಅಸ್ಯ = ಈ ಜೀವನಿಗೆ, ಸದಸದ್ಯೋನಿಜನ್ಮಸು = ನಿರ್ದುಷ್ಟಯೋನಿ, ದುಷ್ಟಯೋನಿ ಇವುಗಳಲ್ಲಿ ಉತ್ಪತ್ತಿಯಲ್ಲಿ, ಗುಣಸಂಗಃ = ಸತ್ವಾದಿ ಗುಣಗಳ ಸಂಬಂಧವು, ಕಾರಣಂ = ಕಾರಣವು ॥ ೨೨ ॥

ಪೀ—ಕಾರ್ಯಕಾರಣ ಶಬ್ದಗಳ ಅರ್ಥವನ್ನು ಹೇಳುತ್ತಾರೆ—

ಭಾ ॥ (೧) ಕಾರ್ಯಂ ಶರೀರಂ । ಶರೀರಂ ಕಾರ್ಯಮುಚ್ಯತ ಇತ್ಯಭಿಧಾನಂ । ಕಾರಣಾನೀಂದ್ರಿಯಾಣಿ ॥ (೨) ಭೋಗೋಽನುಭವಃ । ಸ ಹಿ ಚಿದ್ರೂಪತ್ವಾದನುಭವತಿ । ಪ್ರಕೃತಿಶ್ಚ ಜಡತ್ವಾತ್ಪರಿಣಾಮಿನೀ ॥ (೩) ಕಾರ್ಯಕಾರಣಕರ್ತೃತ್ವೇ ಕಾರಣಂ ಪ್ರಕೃತಿಂ ವಿದುಃ । ಭೋಕ್ತೃತ್ವೇ ಸುಖದುಃಖಾನಾಂ ಪುರುಷಂ ಪ್ರಕೃತೇಃ ಪರಮಿತಿ ಭಾಗವತೇ ॥ ೨೧,೨೨ ॥

ಅ ॥ (೧) ಕಾರ್ಯಂ = ಶರೀರವು ಶರೀರವು ಕಾರ್ಯವೆನಿಸುತ್ತದೆ ಎಂದು ಅಭಿಧಾನವು, ಕಾರಣಾನಿ = ಚಕ್ಷುರಾದಿ ಇಂದ್ರಿಯಗಳು ಭೋಗಃ = ತನ್ನದ್ದೆಂಬುವ ಸಾಕ್ಷಾತ್ಕಾರವು (ಭೋಗವು ಪ್ರಕೃತಿಗೇನೇ ಪುರುಷನಿಗೆ ಭೋಗವಿಲ್ಲ ಆದಕಾರಣ ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುಃ ಎಂದದ್ದು ಹೇಗೆ? ಎಂದು ಸಾಂಖ್ಯರು ಹೇಳುವುದನ್ನು ನಿರಾಕರಿಸುತ್ತಾರೆ)ಜೀವನು ಚಿದ್ರೂಪನಾದುದರಿಂದ ಸುಖದುಃಖಗಳನ್ನು ಭೋಗಿಸುತ್ತಾನೆ (ಜಡಪ್ರಕೃತಿಯು ಅಚೇತನವಾಗಿರುವುದರಿಂದ ಸುಖದುಃಖಗಳನ್ನು ಅನುಭವಿಸುವುದಿಲ್ಲ) ಪ್ರಕೃತಿಗೆ ಭೋಗವು ಏಕೆ ಇಲ್ಲ ಎಂದರೆ ಪ್ರಕೃತಿಯು ಜಡವಾಗಿರುವುದರಿಂದ ಪರಿಣಾಮವನ್ನು ಹೊಂದತಕ್ಕುದು (ಅದು ಪರಿಣಾಮ ಕಾರಣವಾಗಿರುವುದರಿಂದ ಅದಕ್ಕೆ ಕರ್ತೃತ್ವವಿದೆ

ಎಂದು ಔಪಚಾರಿಕವು.)(೩)(ಈ ಶ್ಲೋಕಾರ್ಧದಲ್ಲಿ ಪುರಾಣಸಮ್ಮತಿಯನ್ನು ಹೇಳುತ್ತಾರೆ) ಶರೀರ, ಮತ್ತು ಇಂದ್ರಿಯಗಳನ್ನು ಹುಟ್ಟಿಸುವ ವಿಷಯದಲ್ಲಿ ಚಿತ್ಪ್ರಕೃತಿಯಾದ ಲಕ್ಷ್ಮೀದೇವಿಯನ್ನು ಕಾರಣಳನ್ನಾಗಿ ತಿಳಿಯುತ್ತಾರೆ ಸುಖ ದುಃಖಗಳನ್ನು ಜೀವನು ಭೋಗಿಸುವ ವಿಷಯದಲ್ಲಿ ಪ್ರಕೃತಿಯನ್ನು ವಿಾರಿದ (ಅಪ್ರಾಕೃತನಾದ) ಪರಮಾತ್ಮನನ್ನು ಕಾರಣನನ್ನಾಗಿ ತಿಳಿಯುತ್ತಾರೆ, ಎಂದು ಭಾಗವತದಲ್ಲಿದೆ ॥ ೨೧, ೨೨ ॥

ತಾ ॥ (೧) ಕಾರ್ಯಕಾರಣಸಂಬಂಧಂ ಭೋಗಂ ಚ ಮಿಥ್ಯೇತಿ ವದತಾಂ ನಿರಾಕರಣಾಯಾಽಹ । ಪುರುಷಃ ಪ್ರಕೃತಿಸ್ಥೋ ಹೀತಿ । ಹೀತ್ಯನುಭವನಿರೋಧಂ ದರ್ಶಯತಿ ತೇಷಾಂ ॥ (೨) ನ ಹಿ ಜ್ಞಾನಾಜ್ಞಾನಸುಖದುಃಖಾದಿವಿಷಯಸ್ಯಾಂತರಾನುಭವಸ್ಯ ಭ್ರಾಂತಿತ್ವಂ ಕ್ವಚಿದ್ದೃಷ್ಟಂ ॥ (೩) ನ ಚಾಸ್ಯ ಮಿಥ್ಯಾತ್ವೇ ಕಿಂಚಿನ್ಮಾನಂ । ಶರೀರಮಾರಭ್ಯೈವ ಹ್ಯಪರೋಕ್ಷಭ್ರಮೋ ದೃಷ್ಟಃ । ತತ್ರಾಪಿ ಬಲವತ್ಪ್ರಮಾಣವಿರೋಧಾದೇವ ಭ್ರಾಂತಿತ್ವಂ ಕಲ್ಪ್ಯಂ ॥ (೪) ಸಾಕ್ಷಿಸಿದ್ಧಸ್ಯಾಪಿ ಭ್ರಾಂತಿತ್ವಾಂಗೀಕಾರೇ ಯೇನ ಸರ್ವಸ್ಯ ಭ್ರಾಂತಿತ್ವಮಭ್ರಾಂತಿತ್ವಂ ಚಾತ್ಮನೋಽವಗತಂ ತದಪಿ ಪ್ರಮಾಣಮಾತ್ಮೈವ ॥ (೫) ವ್ಯವಹಾರತೋಽಸ್ಯಸ್ತೀತ್ಯತ್ರ ಪ್ರಮಾಣಾಭಾವಾತ್ ॥ ೧ ॥

ಅ ॥ (೧) ದೇಹ ಇಂದ್ರಿಯಾದಿಗಳ ಸಂಬಂಧವೂ ಸುಖ ದುಃಖಾದಿಭೋಗವೂ ವಿಥ್ಯೆಯೆಂದು ಹೇಳುವವರ ಮತವನ್ನು ನಿರಾಕರಿಸುವುದಕ್ಕಾಗಿ **ಪುರುಷಃ ಪ್ರಕೃತಿಸ್ಥೋ ಹಿ** ಎಂದು ಹೇಳಿರುತ್ತಾರೆ **ಹಿ** ಎಂಬುದರಿಂದ **ಕಾರ್ಯಕಾರಣ**ಗಳ ಸಂಬಂಧವೂ ಸುಖ ದುಃಖಾದಿಗಳ ಭೋಗವೂ ಜೀವರಿಗೆ ಅನುಭವಪ್ರಸಿದ್ಧವೆಂದು ಹೇಳಿದ್ದಿಂದ ಅವುಗಳು ಮಿಥ್ಯೆಯೆಂದು **ಹೇಳುವವರಿಗೆ** ಅನುಭವ ವಿರೋಧವನ್ನು ತೋರಿಸುತ್ತಾರೆ (೨) (ಅಹಂ ಸುಖೀ ಇತ್ಯಾದ್ಯನುಭವವು ಭ್ರಮೆಯೆಂದು ಕೂಡುವುದರಿಂದ ಸುಖ ದುಃಖಾದಿಗಳ ಭೋಗವು ಮಿಥ್ಯೆಯೆಂದು ಹೇಳಿದರೆ ಅನುಭವ ವಿರೋಧವು **ಹೇಗೆ** ಎಂದರೆ—) ಜ್ಞಾನ ಅಜ್ಞಾನ ಸುಖ ದುಃಖಾದಿ ವಿಷಯಕವಾದ ಸಾಕ್ಷ್ಯನುಭವವು ಭ್ರಮೆಯೆಂದು ಎಲ್ಲಿಯೂ ಕಂಡುಬರಲಿಲ್ಲ (ಅಂದರೆ ಸಾಕ್ಷ್ಯನುಭವವಾದುದರಿಂದ ಸುಖಾದಿವಿಷಯಕವಾದ ಅನುಭವವು ಭ್ರಮೆಯಲ್ಲ) (೩) (ಬಾಧಕವಿಲ್ಲದಿರುವುದರಿಂದಲೂ ಈ ಸಾಕ್ಷ್ಯನುಭವವು ಭ್ರಮೆಯಲ್ಲ ಎನ್ನುತ್ತಾರೆ-) ಸುಖ ದುಃಖಾದಿ ವಿಷಯಕವಾದ ಅನುಭವವು ಭ್ರಮೆಯೆಂಬುವ ವಿಷಯದಲ್ಲಿ ಯಾವ ಪ್ರಮಾಣವೂ ಇಲ್ಲ (ಜೈನ ಮೊದಲಾದವರು ಆತ್ಮಾದಿಗಳಿಗೆ ಮಧ್ಯಮ ಪರಿಮಾಣವನ್ನುತ್ತಾರೆ ಅವರ ಜ್ಞಾನವು ಭ್ರಮೆಯೆಂದು ನಾವು ಹೇಳಿದ್ದಿಂದ ಆಂತರಾರ್ಥನ ಭವವು ಭ್ರಮೆಯಾಗುವುದಿಲ್ಲವೆಂದು ಹೇಳಿದ್ದು ಹೇಗೆ? ಎಂದರೆ-) ಶರೀರವನ್ನಾರಂಭಿಸಿಯೇ ಅಪರೋಕ್ಷ ಭ್ರಮೆಯು ಕಂಡದೆ (ಅಂದರೆ—ಬಾಹ್ಯಾರ್ಥವಿಷಯಕವಾದ ಅಪರೋಕ್ಷ ಜ್ಞಾನವು ಭ್ರಮೆಯಾಗಿ ಕಂಡದೆ ನಾವು ಕೇವಲ ಆಂತರಾರ್ಥಾನುಭವವು ಭ್ರಮೆಯಾಗುವುದಿಲ್ಲವೆಂದು ಹೇಳುವುದಿಲ್ಲ ಮತ್ತೆ ಆಂತರಾರ್ಥವಿಷಯಕವಾದ ಅಪರೋಕ್ಷಜ್ಞಾನವು ಭ್ರಮೆಯಲ್ಲವೆಂದು ಹೇಳಿದ್ದು ಅಪರೋಕ್ಷಜ್ಞಾನಕ್ಕೆ ಬಾಹ್ಯಾರ್ಥದಲ್ಲಿ ಕದಾಚಿತ್ ಭ್ರಮತ್ವವಿದ್ದರೂ ಆಂತರಾರ್ಥನ ಭವಕ್ಕೆ ಭ್ರಮತ್ವವಿಲ್ಲವೆಂಬುವದೇ ಸಿದ್ಧವಾಗುತ್ತದೆ ಜೈನ ಮೊದಲಾದವರಿಗೆ ಅನುಮಾನಾದಿಗಳಿಂದಲೇ ಆತ್ಮಾದಿಗಳಿಗೆ ಮಧ್ಯಮ ಪರಿಮಾಣತ್ವಾದಿ ಜ್ಞಾನವು ಅದು ಆಂತರಾರ್ಥವಿಷಯಕ ಅಪರೋಕ್ಷಜ್ಞಾನರೂಪವಲ್ಲ) (ಬಾಧಕಪ್ರಮಾಣವಿಲ್ಲದಿದ್ದರೂ ಸುಖಾದ್ಯನುಭವವು ಭ್ರಮೆಯೆಂದು ಏಕೆ ಆಗಲಾರದೆಂದರೆ—) ಯಾವ ಬಾಹ್ಯಾರ್ಥದಲ್ಲಿ ಅನುಭವಕ್ಕೆ ಭ್ರಮತ್ವವಿದೆಯೋ, ಅಲ್ಲಿಯೂ ಅಂದರೆ ಬಾಹ್ಯಾರ್ಥವಿಷಯಕ ಅಪರೋಕ್ಷಾನುಭವಕ್ಕೂ ಪ್ರಬಲ ಪ್ರಮಾಣ ವಿರೋಧದಿಂದಲೇ ಭ್ರಮೆಯೆಂದು ಕಲಿಸಬೇಕು ಆದುದರಿಂದ ಸುಖಾದಿ

ವಿಷಯಕ ಅನುಭವವು ಅಂತರಾರ್ಥ ವಿಷಯಕಾನುಭವವಾದುದರಿಂದಲೂ ಬಾಧಕವಿಲ್ಲದಿರುವುದರಿಂದಲೂ ಅದನ್ನು ಸರ್ವಥಾ ಭ್ರಮೆಯೆಂದು ಹೇಳಕೂಡದು. (೪) (ಹೇತ್ವಂತರದಿಂದಲೂ ಸುಖಾದ್ಯನುಭವಕ್ಕೆ ಭ್ರಮತ್ವವನ್ನು ಹೇಳಬಾರದೆನ್ನುತ್ತಾರೆ-) ಪ್ರಮಾಣಭೂತವಾದ ಸಾಕ್ಷ್ಯನುಭವಸಿದ್ಧವಾದ ಸುಖ ದುಃಖಾದಿಗಳಿಗೂ ಭ್ರಾಂತಿಪರಿಕಲ್ಪಿತತ್ವವನ್ನಂಗೀಕರಿಸಿದರೆ ಸರ್ವವೂ ಮಿಥ್ಯೆಯು. ಆತ್ಮನು ಸತ್ಯನು ಎಂಬೀ ವ್ಯವಸ್ಥೆಯೂ ಸಿದ್ಧಿಸಲಾರದು ಈ ವ್ಯವಸ್ಥೆಯೂ ಕೂಡ ಸಾಕ್ಷ್ಯನುಭವ ಸಿದ್ಧವಾಗಿರುವುದರಿಂದ ಅದೂ ಸುಳ್ಳು ಎಂದೇ ಆಗಬೇಕಾಗುವುದು ಅದುದರಿಂದ ಯಾವುದರಿಂದ ಸಮಸ್ತ ವಸ್ತುಗಳಿಗೆ ಭ್ರಾಂತಿಪರಿಕಲ್ಪಿತತ್ವವೂ ಆತ್ಮನಿಗೆ ಅಭ್ರಾಂತಿಪರಿಕಲ್ಪಿತತ್ವವೂ ತಿಳಿಯಲ್ಪಟ್ಟಿದೊ, ಆ ಪ್ರಮಾಣವೂ ಆತ್ಮರೂಪವಾದ ಸಾಕ್ಷಿಯೇ ಆಗಿರುತ್ತದೆ (ಅದುದರಿಂದ ಸಾಕ್ಷ್ಯನುಭವವು ಅಪ್ರಮಾಣವೆಂದು ಹೇಳುವವರಿಗೆ ಹಿಂದೆ ಹೇಳಿದ ಯಾವ ವ್ಯವಸ್ಥೆಯೂ ಸಿದ್ಧವಾಗಲಾರದು) (೫) (ಆತ್ಮ ಹೊರತಾದುದು ಎಲ್ಲವೂ ಮಿಥ್ಯೆಯು. ಆತ್ಮನೊಬ್ಬನೇ ಸತ್ಯನು, ಎಂಬುವ ವ್ಯವಸ್ಥೆಯೂ ಕೂಡ ವ್ಯಾವಹಾರಿಕವಾಗಿಯೇ ಇರುವುದು ಪಾರಮಾರ್ಥಿಕವಾಗಿ ಈ ವ್ಯವಸ್ಥೆಯೂ ಸಿಗುವುದಿಲ್ಲ. ಆದಕಾರಣ ಈ ವ್ಯವಸ್ಥೆಯು ಸಿದ್ಧಿಸದಿರಬೇಕಾಗುವುದೆಂಬುವುದೂ ನಮಗೆ ಅನಿಷ್ಟವಾಗಲಾರದೆಂದರೆ—) ಸಾಕ್ಷಿಯು ಅಪ್ರಮಾಣವೆಂದು ಹೇಳಿದರೆ ಈ ವ್ಯವಸ್ಥೆಯೂ ವ್ಯಾವಹಾರಿಕವಾಗಿಯೇ ಇದೆ ಪಾರಮಾರ್ಥಿಕವಾಗಿ ಯಾವ ವ್ಯವಸ್ಥೆಯೂ ಇಲ್ಲ ಎಂಬೀ ವಿಷಯದಲ್ಲಿ ಪ್ರಮಾಣವಿಲ್ಲದಿರುವುದರಿಂದ ಸಿದ್ಧವಾಗಲಾರದು ॥ ೧ ॥

ಪೀ—ಸಾಕ್ಷ್ಯನುಭವಕ್ಕೆ ಪ್ರಾಮಾಣ್ಯವನ್ನು ಒಪ್ಪದಿದ್ದರೆ ಒಂದು ಕಂಬವನ್ನು ಗೂಟವೆಂದು ತಿಳಿಯುವುದು ಭ್ರಮೆಯು, ಕಂಬವನ್ನು ಕಂಬವೆಂದು ತಿಳಿಯುವುದು ಭ್ರಮೆಯಲ್ಲ ಎಂದು ಭ್ರಾಂತಿತ್ವ ಅಭ್ರಾಂತಿತ್ವ ವ್ಯವಸ್ಥೆಯೂ ಸಿದ್ಧಿಸುವುದಿಲ್ಲ ಇಂತಹ ವ್ಯವಸ್ಥೆಯೇ ಸಿದ್ಧಿಸದಿದ್ದರೆ ಯಾವ ವ್ಯವಹಾರವೂ ಸಿದ್ಧಿಸಲಿಕ್ಕಿಲ್ಲವೆನ್ನುತ್ತಾರೆ—

ತಾ ॥ (೧) ಭ್ರಾಂತಿರಭ್ರಾಂತಿರ್ವಾ ನ ಕಿಂಚಿತ್ಸಿದ್ಧ್ಯತಿ ॥ (೨) ಅನುಭವೋ ಭ್ರಾಂತ ಇತ್ಯುಕ್ತೇ ಭ್ರಾಂತತ್ವೇ (ತಿತ್ವ)ಪ್ರಮಾಣಂ ತತ್ಪ್ರಾಮಾಣ್ಯಂ ಚ ಕುತಃ ಸಿದ್ಧ್ಯೇತ್ ॥ (೩) ವ್ಯವಹಾರತಃ ಸರ್ವಮಂಗೀಕುರ್ಮ ಇತ್ಯುಕ್ತೇ ವ್ಯವಹಾರೋ ವ್ಯವಹರ್ತಾ ಚ ಕುತಃ ಸಿದ್ಧಃ ॥ (೪) ಪ್ರತೀತಿತ ಇತ್ಯುಕ್ತೇ ಸ್ವೇವ ಕುತಃ ॥ (೫) ಸ್ವತ ಇತ್ಯುಕ್ತೇ ಸ್ವಸ್ಯ ಭ್ರಾಂತಿ(ಸ್ವಸ್ಯಾಭ್ರಾಂತ)ತ್ವೇ ಪ್ರತೀತಿಂ ವಿನೈವ ಪ್ರತೀತಿರಸ್ತೀತಿ ಭ್ರಾಂತಿಃ ಸ್ಯಾತ್ ॥ (೬) ಸ್ವಾಭಾವೋಽಪಿ ಸ್ಯಾತ್ ॥ ೨ ॥

ಆ ॥ (೧) ಇದಂ ರಜತಂ ಎಂಬುವ ಜ್ಞಾನವು ಭ್ರಮೆಯೆಂದೂ, ಅಯಂ ಘಟಃ ಎಂಬುವ ಜ್ಞಾನವು ಯಥಾರ್ಥಜ್ಞಾನವೆಂದೂ, ಎಂಬೀ ವ್ಯವಸ್ಥೆಯನ್ನು ಸಾಕ್ಷಿಯೇ ಗ್ರಹಿಸತಕ್ಕುದಾದುದರಿಂದ ಆ ಸಾಕ್ಷಿಯೇ ಅಪ್ರಮಾಣವೆಂದಾದರೆ-ಭ್ರಮೆಯಾಗಲೀ, ಯಥಾರ್ಥಜ್ಞಾನವೆಂದಾಗಲೀ ಯಾವ ವ್ಯವಸ್ಥೆಯೂ ಅಲ್ಲದೆ ಆತ್ಮಹೊರತಾದುದೆಲ್ಲವೂ ಮಿಥ್ಯೆಯು ಆತ್ಮನೊಬ್ಬನು ಸತ್ಯನು, ಎಂಬೀ ವ್ಯವಸ್ಥೆಯೂ ಸಿದ್ಧಿಸದೆ ಹೋಗುವುದು) (೨) (ಬಾಧಕ ಪ್ರಮಾಣವಿಲ್ಲದಿರುವುದರಿಂದ **ಅಹಂ ಸುಖೀ ದುಃಖೀ** ಇತ್ಯಾದಿ ವಿಷಯಕ ಸಾಕ್ಷ್ಯನುಭವವು ಭ್ರಮೆಯಲ್ಲವೆಂದು ಹೇಳಿದ್ದು ಯುಕ್ತವಲ್ಲ ಏಕೆಂದರೆ—**ವಿಮುಕ್ತಶ್ಚ ವಿಮುಚ್ಯತೇ. ತರತಿ ಶೋಕಮಾತ್ಮವಿತ್** ಇತ್ಯಾದಿ ದುಃಖಾದಿ ಸಂಸಾರಕ್ಕೆ ಮಿಥ್ಯಾತ್ವ, ಶೋಕಾದಿಗಳಿಗೆ ಅವಿದ್ಯಾಕಾರ್ಯತ್ವಾದಿಗಳನ್ನು ಹೇಳುವ ಬಾಧಕ ಪ್ರಮಾಣವಿದೆ ಎಂದರೆ—) ಸುಖಾದಿ ವಿಷಯಕವಾದ ಅನುಭವವು ಭ್ರಮೆಯೆಂದು ಹೇಳಿದರೆ ಭ್ರಾಂತಿಯೆಂಬುವಲ್ಲಿ ಪ್ರಮಾಣವೂ ಆ ಪ್ರಮಾಣಕ್ಕೆ ಪ್ರಾಮಾಣ್ಯವೂ

ಯಾವ ಪ್ರಮಾಣದಿಂದ ಸಿದ್ಧಿಸುವುದು? (ಅಂದರೆ ಸುಖಾದಿವಿಷಯಕವಾದ ಅನುಭವವು ಭ್ರಮೆಯೆಂಬುವುದು **ವಿಮುಕ್ತಶ್ಚ ವಿಮುಚ್ಯತೇ** ಇದು ಮೊದಲಾದ ಪ್ರಮಾಣ ಬಲದಿಂದ ಸಿದ್ಧಿಸುತ್ತದೆಂದು ಹೇಳಿದ್ದು ಕೂಡುವುದಿಲ್ಲ. ಏಕೆಂದರೆ—**ವಿಮುಕ್ತಶ್ಚ ವಿಮುಚ್ಯತೇ** ಎಂಬುವ ವಾಕ್ಯಜ್ಞಾನವೂ ಆ ವಾಕ್ಯದಿಂದುಂಟಾದ ಜ್ಞಾನದ ಪ್ರಾಮಾಣ್ಯವೂ ಸಾಕ್ಷಿಯಿಂದಲೇ ಸಿದ್ಧವಾಗುವುದೆಂದು ಹೇಳಬೇಕು ಸಾಕ್ಷ್ಯನುಭವಕ್ಕೆ ಪ್ರಾಮಾಣ್ಯವನ್ನು ಒಪ್ಪದಿದ್ದರೆ ಹಿಂದೆ ಹೇಳಿದ ಪ್ರಾಮಾಣ್ಯಸಿದ್ಧಿಯೂ ಕೂಡುವುದಿಲ್ಲ ತಥಾ ಚ ಬಾಧಕವಿಲ್ಲದಿರುವುದರಿಂದ ಸಾಕ್ಷ್ಯನುಭವಕ್ಕೆ ಪ್ರಾಮಾಣ್ಯವನ್ನು ಒಪ್ಪಲೇ ಬೇಕು) (೩) (ಸುಖಾದಿವಿಷಯದಲ್ಲಿಯೇ ಸಾಕ್ಷ್ಯನುಭವಕ್ಕೆ ಭ್ರಮತ್ವವು ಪ್ರಮಾಣ ಸ್ವರೂಪಾದಿಗಳಲ್ಲಿ ಭ್ರಮತ್ವವು ಇಲ್ಲವೆಂಬುವುದು ಯುಕ್ತವಲ್ಲ ಹಾಗೆ ಹೇಳಲಿಕ್ಕೆ ವಿಶೇಷ ಪ್ರಮಾಣವಿಲ್ಲ ಹಾಗಾದರೆ ಸಾಕ್ಷ್ಯನುಭವ ಭ್ರಮೆಯಾದರೂ, ಪ್ರಮಾಣ ಸ್ವರೂಪ, ಪ್ರಾಮಾಣ್ಯಗಳು ಲೋಕ ವ್ಯವಹಾರದಿಂದ ಸಿದ್ಧಿಸುತ್ತವೆ, ಎಂದರೆ—) ಲೋಕವ್ಯವಹಾರದಿಂದಲೇ ಎಲ್ಲವನ್ನೂ ಒಡಂಬಡುತ್ತೇವೆ ಎಂದು ಹೇಳಿದರೆ ವ್ಯವಹಾರವೂ (ಮಾತನಾಡುವುದೂ) ವ್ಯವಹಾರ ಮಾಡುವ ಪುರುಷನೂ ಯಾವ ಪ್ರಮಾಣದಿಂದ ಸಿದ್ಧನಾಗುತ್ತಾನೆ. (ಅಂದರೆ ಲೋಕವ್ಯವಹಾರದಿಂದ ಪ್ರಮಾಣಸ್ವರೂಪಾದಿಗಳು ಸಿದ್ಧಿಸುತ್ತವೆ ಎಂದು ಹೇಳಕೂಡದು ಜನರೂ ಜನರ ವ್ಯವಹಾರವೂ ಇವುಗಳನ್ನು ಸಾಕ್ಷಿಯೇ ಗ್ರಹಿಸಬೇಕು ಸಾಕ್ಷಿಯನ್ನು ಭ್ರಾಂತಿಯೆಂದು ಅಂಗೀಕರಿಸಿರುವ ಕಾರಣ ಅವುಗಳು ಸಿದ್ಧಿಸಲಾರವು) (೪) (ಸಾಕ್ಷಿಗೆ ಭ್ರಾಂತಿತ್ವವಿದ್ದರೂ ಲೋಕಪ್ರತೀತಿಯಿಂದಲೇ ವ್ಯವಹಾರ ವ್ಯವಹರ್ತೃಗಳ ಸ್ವರೂಪವು ಸಿದ್ಧಿಸುವುದೆಂದರೆ—) ಲೋಕಪ್ರತೀತಿಯಿಂದಲೇ ವ್ಯವಹಾರಾದಿಗಳು ಸಿದ್ಧಿಸುತ್ತವೆ ಎಂದರೆ— ಪ್ರತೀತಿಯು ಇದೆ ಎಂಬುವುದೇ ಹೇಗೆ ಸಿದ್ಧಿಸುವುದು? (ಪ್ರತೀತಿ ಸಾಧಕವಾದುದು ಯಾವ ಪ್ರಮಾಣವೂ ಇಲ್ಲ) (೫) ಸಾಕ್ಷಿಯಿಂದಲೇ ಪ್ರತೀತಿಯು ಸಿದ್ಧವಾಗುತ್ತದೆ ಎಂದು ಹೇಳಿದರೆ ಸಾಕ್ಷಿಯು ಸುಖಾದಿ ವಿಷಯದಲ್ಲಿ ಭ್ರಮೆಯಾದರೆ ಪ್ರತೀತಿಯು ಇಲ್ಲದೇನೇ ಪ್ರತೀತಿಯು ಇದೆ ಎಂದು ಹೇಳಿದ್ರಿಂದ ಭ್ರಮೆಯಾಗುವುದು (ಅಂದರೆ ಸಾಕ್ಷಿಯಿಂದ ಪ್ರತೀತಿಯು ಸಿದ್ಧಿಸುವುದಿಲ್ಲ ಸಾಕ್ಷಿಯನ್ನು ಸುಖಾದಿಗಳಲ್ಲಿ ಭ್ರಮೆಯೆಂದು ಒಡಂಬಟ್ಟರೆ ಪ್ರತೀತಿಯು ಇದೆ, ಎಂಬುವ ವಿಷಯದಲ್ಲಿಯೂ ಭ್ರಮೆಯೆಂಬುವ ಶಂಕೆಯು ಬರಬಹುದಾದುದರಿಂದ ಸಾಕ್ಷಿಯಿಂದ ಪ್ರತೀತಿಯು ಸಿದ್ಧವಾಗುತ್ತದೆಂಬುವುದೂ ಕೂಡಲಾರದು (೬) (ಹೇತ್ವಂತರದಿಂದಲೂ ಸುಖಾದಿವಿಷಯಕ ಅನುಭವಕ್ಕೆ ಭ್ರಮತ್ವವನ್ನು ಹೇಳಬಾರದೆನ್ನುತ್ತಾರೆ) ಸುಖಾದಿವಿಷಯಕವಾದ ಅನುಭವವು ಭ್ರಮೆಯೆಂದು ಒಡಂಬಟ್ಟರೆ ಆತ್ಮಸಾಧಕ ಪ್ರಮಾಣವು ಇಲ್ಲದಿರುವುದರಿಂದ ಆತ್ಮನೇ ಇಲ್ಲವೆಂದಾಗಬೇಕಾಗುವುದು ॥ ೨ ॥

ಪೀ—**ಅಹಂ ಅಸ್ಮಿ** ಇತ್ಯಾದಿ ಪ್ರತ್ಯಕ್ಷದಿಂದಲೇ ಆತ್ಮನು ತೋರುವುದರಿಂದ ಸಾಧಕ ಪ್ರಮಾಣವು ಇಲ್ಲವೆಂದದ್ದು ಹೇಗೆ? ಎಂದರೆ—

ತಾ ॥ (೧) ಸ್ವಯಮಸ್ತೀತಿ ಚೇ ಭ್ರಮಃ ಸ್ಯಾತ್ ॥ (೨) ನಿರಾಲಂಬನೋ ಭ್ರಮೋ ನೋ. ಪಪದ್ಯತ ಇತ್ಯಸ್ಯಾಪಿ ಭ್ರಮತ್ವೋಪಪತ್ತೇಃ । ತತ್ಪ್ರಮಾಣಮುಪ್ರಮಾಣಮೇವ ॥ (೩) ಪ್ರಮಾಣತ್ವಭ್ರಮ ಇತಿ (ನ ಸಿದ್ಧಮಿತಿ) ನ ಕಿಂಚಿತ್ಸಿದ್ಧ್ಯತಿ ॥ (೪) ಭ್ರಮ ಇತ್ಯಸ್ಯೈವಾಭ್ರಮತ್ವೇಽನ್ಯಸ್ಯಾಭ್ರಮತ್ವಮೇವ ಭವತಿ ॥ (೫) ಸುಖದುಃಖಾದಿವಿಷಯಂ ಜ್ಞಾನಮಾತ್ಮಸ್ವರೂಪಮೇವೇತಿ ತಸ್ಯ ಭ್ರಮತ್ವೇ ಛದ್ಮನಾ ವಿನೈವ ಶೂನ್ಯವಾದೋ ಭವತಿ ॥ (೬) ನ ಹಿ ವೃತ್ತಿಜ್ಞಾನವಿಷಯಮಜ್ಞಾನಾದಿಕಂ ತೇಷಾಮಪಿ ।

ಭ್ರಮಸ್ಯ ಚಾವಿದ್ಯಾಕಾರ್ಯತ್ವಾಂಗೀಕಾರಾತ್ । ಆತ್ಮಸ್ವರೂಪಸ್ಯಾಪ್ಯವಿದ್ಯಾಕಾರ್ಯತ್ವಂ ಸ್ಯಾತ್ ॥ ೩ ॥

ಆ ॥ (೧) ಆತ್ಮನಿದ್ದಾನೆಂಬುವ ಅಹಮಸ್ಮಿ ಇತ್ಯಾದಿ ಸಾಕ್ಷಿ ಪ್ರತೀತಿಯೂ ಕೂಡ ಭ್ರಮೆಯಾಗ ಬೇಕಾಗುವುದು ಅಂದರೆ ಅಹಂ ಎಂಬುವ ಅನುಭವದಿಂದ ಆತ್ಮನು ಸಿದ್ಧಿಸುವುದಿಲ್ಲ ಸುಖಾದಿಗಳಲ್ಲಿ ಅನುಭವಕ್ಕೆ ಭ್ರಾಂತಿತ್ವವನ್ನು ಒಡಂಬಟ್ಟ ಪ್ರಯುಕ್ತ ಆತ್ಮನಲ್ಲಿಯೂ ಭ್ರಮೆಯೆಂಬುವ ಶಂಕೆಯನ್ನು ನಿವಾರಿಸುವುದು ಯಾವುದು ಇಲ್ಲವೇ ಇಲ್ಲ (೨) (ಅಧಿಷ್ಠಾನವಿಲ್ಲದೆ ಭ್ರಮೆಯು ಕೂಡದಿರುವುದರಿಂದ ಸುಖ ದುಃಖಾದಿಗಳ ಭ್ರಮೆಗೆ ಅಧಿಷ್ಠಾನಭೂತನಾದ ಆತ್ಮನು ಇದ್ದಾನೆಂದು ಒಪ್ಪಲೇ ಬೇಕು ಎಂದರೆ—) ನಿರಧಿಷ್ಠಾನವಾದ ಭ್ರಮೆಯು ಕೂಡುವುದಿಲ್ಲ ಎಂಬುವ ತರ್ಕದಿಂದ ಆತ್ಮನು ಸಿದ್ಧಿಸುತ್ತಾನೆಂದು ಹಿಂದೆ ಹೇಳಿದ್ದು ಕೂಡುವುದಿಲ್ಲ ಏಕೆಂದರೆ ಈ ತರ್ಕದಿಂದುಂಟಾಗುವ ಅನುಭವದಲ್ಲಿಯೂ ಸುಖಾದ್ಯನುಭವದಂತೆ ಭ್ರಮತ್ವ ಶಂಕೆಯು ಬಂದರೆ ಪರಿಹಾರಕವು ಯಾವುದೂ ಇರಲಿಲ್ಲ (ಆತ್ಮನು ಇದ್ದಾನೆಂಬುವಲ್ಲಿ ಸಾಕ್ಷಿಯನ್ನು ಪ್ರಮಾಣವೆಂದು ಹೇಳುವುದಿಲ್ಲ ಮತ್ತೆ ವೇದವು ಪ್ರಮಾಣವು ಎನ್ನುತ್ತೇವೆ ಎಂದರೆ—) ವೇದವು ಪ್ರಮಾಣವೆಂದು ಹೇಳಿದರೆ ಆತ್ಮಸಾಧಕವಾದ ವೇದಕ್ಕೂ ಪ್ರಾಮಾಣ್ಯವು ಸಿದ್ಧಿಸುವುದಿಲ್ಲ ಏಕೆಂದರೆ ವೇದವು ಆತ್ಮನಲ್ಲಿ ಪ್ರಮಾಣವೆಂದು ಯಾವುದು ಹೇಳಲ್ಪಡುತ್ತದೋ, ಅಂತಹ ವೇದವು ಪ್ರಮಾಣವೆಂದು ಸಾಧಿಸುವಂತಹ ಪ್ರಮಾಣವು ಇಲ್ಲದಿರುವುದರಿಂದ ವೇದವು ಅಪ್ರಮಾಣವೆಂದು ಹೇಳಲಿಕ್ಕೂ ಬರುವುದರಿಂದ ವೇದದಿಂದ ಆತ್ಮನು ಸಿದ್ಧಿಸುವುದಿಲ್ಲ (೩) (ವೇದವು ಪ್ರಮಾಣವು ಎಂಬೀ ಅನುಭವವು ಸಾಕ್ಷಿಪ್ರತ್ಯಕ್ಷದಿಂದ ಸಿದ್ಧಿಸುವಪ್ರಯುಕ್ತ ವೇದವು ಅಪ್ರಮಾಣವಾಗುವುದು ಹೇಗೆ ಎಂದರೆ—) ಸಾಕ್ಷ್ಯನುಭವದಿಂದ ವೇದಕ್ಕೆ ಪ್ರಾಮಾಣ್ಯವು ಸಿದ್ಧಿಸುವುದಿಲ್ಲ ಸುಖಾನುಭವದಂತೆ ಶ್ರುತಿಪ್ರಾಮಾಣ್ಯಾನುಭವದಲ್ಲಿಯೂ ಭ್ರಮೆಯೆಂಬುವ ಶಂಕೆಯು ಬರಬಹುದಾದುದರಿಂದ ಹಿಂದ ಹೇಳಿದ ಪ್ರಕಾರ ಸಾಕ್ಷ್ಯನುಭವವು ಭ್ರಮೆಯಾದರೆ ಸರ್ವವೂ ಮಿಥ್ಯೆಯು, ಆತ್ಮನು ಸತ್ಯನು, ಎಂಬುವ ವ್ಯವಸ್ಥೆ ಮೊದಲಾದುದು ಯಾವುದೂ ಸಿದ್ಧಿಸುವುದಿಲ್ಲ (೪) (ಸುಖಾದ್ಯನುಭವವು ಭ್ರಮವು, ಎಂಬುವ ಅರ್ಥವನ್ನು ಸಾಧಿಸುವ ವೇದವು ಪ್ರಮಾಣವೆಂದು ಸಿದ್ಧಿಸದಿರುವುದರಿಂದ ಆ ವೇದದಿಂದ ಸುಖಾದ್ಯನುಭವಕ್ಕೆ ಭ್ರಮತ್ವವು ಸಿದ್ಧಿಸುವುದಿಲ್ಲ, ಎಂದು ಉಕ್ತವಾಗಿದೆ ಈಗ ವೇದದಿಂದ ಹುಟ್ಟುವ ಅನುಭವವೂ ಭ್ರಮೆಯೆಂದಾದುದರಿಂದ ಸುಖಾದ್ಯನುಭವವು ಬಾಧಕವಿಲ್ಲದಿರುವುದರಿಂದ ಭ್ರಮೆಯಲ್ಲವೆಂದೇ ಆಗುವುದು ಪರಸ್ಪರ ವಿರುದ್ಧಗಳಲ್ಲಿ ಒಂದನ್ನು ನಿಷೇಧಿಸುವಾಗ ಇನ್ನೊಂದು ಸಿದ್ಧಿಸುತ್ತದೆ, ಎನ್ನುತ್ತಾರೆ ಸುಖಾದ್ಯನುಭವವು ಭ್ರಮೆಯು ಎಂಬುವುದೇ ಭ್ರಮೆಯಂದಾದರೆ-ಸುಖಾದ್ಯನುಭವಕ್ಕೆ ಭ್ರಮತ್ವವಿಲ್ಲವೆಂದೇ ಆಗುವುದು. (೫) (ಹೇತ್ವಂತರದಿಂದಲೂ ಸುಖಾದ್ಯನುಭವಕ್ಕೆ ಭ್ರಮತ್ವವು ಕೂಡಲಾರದೆನ್ನುತ್ತಾರೆ) ಮತ್ತು ಸುಖ ದುಃಖಾದಿವಿಷಯಕವಾದ ಜ್ಞಾನವು ಆತ್ಮಸ್ವರೂಪವೇ ಅದು ಭ್ರಮೆಯೆಂದಾದರೆ – ಕಪಟವಿಲ್ಲದೇನೇ ಶೂನ್ಯವಾದವು ಪ್ರಾಪ್ತವಾಯಿತು (ಅಂದರೆ – ಸುಖಾದ್ಯನುಭವವು ಭ್ರಮೆಯೆಂದಾದರೆ ಪ್ರಚ್ಛನ್ನವಾದ ಬೌದ್ಧಮತವನ್ನೇ ಅಂಗೀಕರಿಸಿದುದನ್ನು ಪ್ರಕಟಿಸಿದಂತೆ ಆಯಿತು ಸುಖಾದಿವಿಷಯಕವಾದ ಅನುಭವವು ಆತ್ಮಸ್ವರೂಪವು (ಅಂತಹ ಅನುಭವವು ಅಪ್ರಮಾಣವೆಂದು ಒಪ್ಪಿದರೆ ಆತ್ಮನಿಲ್ಲವೆಂದು ಆಗುವುದರಿಂದ ಶೂನ್ಯವಾದ ಮತ ಪ್ರವೇಶವೇ ಬರುವುದು) (೬) (ಸುಖಾದಿವಿಷಯಕವಾದ ಅನುಭವವು ಆತ್ಮಸ್ವರೂಪವೇ ಎಂದು ನಿಮ್ಮ (ದ್ವೈತಿಗಳ) ಮತದಲ್ಲಿಯೇ ನಮ್ಮ (ಅದ್ವೈತಿಗಳ) ಮತದಲ್ಲಿ ಇಲ್ಲ ನಾವು ಸುಖಾದಿವಿಷಯಕ ಜ್ಞಾನವನ್ನು ಮನೋವೃತ್ತಿರೂಪವೆನ್ನುತ್ತೇವೆ ಎಂದರೆ—) ಅಜ್ಞಾನ ಮೊದಲಾದುದು ವೃತ್ತಿಜ್ಞಾನವಿಷಯಕವೆಂದು ಅದ್ವೈತಿಗಳೂ ಒಪ್ಪಲಿಲ್ಲ (ಅಂತೂ ಅಜ್ಞಾನವು ಹೇಗೆ ಸಾಕ್ಷಿಸಿದ್ಧವೋ ಅದರಂತೆ ಸುಖಾದಿಗಳೂ ಸಾಕ್ಷಿವಿಷಯಗಳೆಂದೇ ಪ್ರಾಚೀನರು ಒಪ್ಪಿರುವುದರಿಂದ ಸುಖಾದಿವಿಷಯಕ ಜ್ಞಾನವು ಮನೋ

ವೃತ್ತಿರೂಪವೆಂದು ಹೇಳಿದರೆ ನಿಮಗೆ ಅಸಸಿದ್ಧಾಂತವು (ಪೂರ್ವಾಚಾರ್ಯರು ಯಾವುದನ್ನು ಪ್ರಾಮಾಣಿಕವೆಂದು ಒಪ್ಪಿರುತ್ತಾರೋ, ಅದಕ್ಕೆ ವಿರುದ್ಧವಾಗಿ ಅಂಗೀಕರಿಸುವುದು) ತಪ್ಪಿದ್ದಲ್ಲ (ಸುಖಾದ್ಯನುಭವಕ್ಕೆ ಭ್ರಮತ್ವವಿದ್ದರೂ ಆತ್ಮಸ್ವರೂಪತ್ವವೂ ಇರಲಿ. ಆತ್ಮನಿಲ್ಲವೆಂದಾಗುವುದು ಹೇಗೆ? ಎಂದರೆ—) ಸುಖಾದಿ ವಿಷಯಕವಾದ ಅನುಭವವು ಭ್ರಮೆಯೆಂದಾವರೆ – ಅವಿದ್ಯಾಕಾರ್ಯವೆಂದಾಗಬೇಕಾಗುವುದು ಭ್ರಮೆಯು ಅವಿದ್ಯಾಕಾರ್ಯವೆಂದು ಅಂಗೀಕೃತವಾಗಿದೆ ಸುಖಾದಿವಿಷಯಕ ಅನುಭವವೇ ಆತ್ಮಸ್ವರೂಪವಾಗಿರುವುದರಿಂದ ಆತ್ಮನೂ ಅವಿದ್ಯಾಕಾರ್ಯನೆಂದಾಗಬೇಕಾಗುವನು (ಆತ್ಮನು ಅವಿದ್ಯಾಕಾರ್ಯನೆಂದಾದರೆ ಆತ್ಮನಿಗೆ ವಿಧ್ಯಾತ್ವವು ತಪ್ಪಿದ್ದಲ್ಲ) ॥ ೩ ॥

ಪೀ— ಹೀಗೆ ಆತ್ಮನು ಯುಕ್ತಿಯಿಂದ ದುರ್ಘಟನಾಗಲಿ. ಆದರೂ ಆತ್ಮನು ಪ್ರಮಾಣಸಿದ್ಧನಾದುದರಿಂದ ಅದು ಬಾಧಕವಲ್ಲ ಪ್ರಮಾಣಸಿದ್ಧವಾದುದು ಯುಕ್ತಿಯಿಂದ ದುರ್ಘಟನೆಂದಿಷ್ಟುಮಾತ್ರದಿಂದ ಬಾಧವು ಬರಲಾರದೆಂದರೆ—

ತಾ ॥ (೧) ದುರ್ಘಟತ್ವಂ ಭೂಷಣಮಿತ್ಯುಕ್ತೇ ದುರ್ಘಟತ್ವಂ ಸುಘಟತ್ವಂ ಚೋಭಯಂ ಭೂಷಣಮಸ್ಮಾಕಮಿತ್ಯುತ್ತರಂ । (೨) ನ ಹಿ ಪ್ರಮಾಣಸಿದ್ಧಸ್ಯ ದುರ್ಘಟತ್ವೇ ಸುಘಟತ್ವೇ ವಾಽಪವಾದೋ ದೃಷ್ಟಃ ॥ (೩) ದುರ್ಘಟತ್ವಂ ಭೂಷಣಮಿತಿ ವದದ್ಭಿರಾತ್ಮನೋಽಪ್ಯವಿದ್ಯಾತ್ವಮಂಗೀಕೃತ್ಯ(ತಂ ।) ತದಯುಕ್ತಮಿತ್ಯುಕ್ತೇ ತತ್ರಾಪಿ ಭೂಷಣತ್ವಂ ಕಿಮಿತಿ ನಾಂಗೀಕ್ರಿಯತೇ ॥ (೪) ಅತಿಸುಕರತ್ವಾತ್ ॥ (೫) ನ ಚಾತ್ಮನೋಽಸ್ಯವಿದ್ಯಾತ್ವಂ ವದತಾಂ ತೇಷಾಮುತ್ತರಂ । ಅತೋಽನಂತದೋಷದುಷ್ಟತ್ವಾದ್ವೀತಿ ಪ್ರಸಿದ್ಧೈರ್ಯವ ಭಗವತಾ ನಿರಾಕೃತಾಃ ॥ (೬) ಅಸ್ಯ ಜೀವಸ್ಯ ಸದಸದ್ಯೋನಿಜನ್ಮಸು ಕಾರಣಂ ಸತ್ತ್ವಾದಿಗುಣಸಂಗಃ ॥ ೪ ॥ ॥ ೨೨ ॥

ಆ ॥ (೧) ದುರ್ಘಟತ್ವವು ಭೂಷಣವು ಎಂದು ಹೇಳಿದರೆ ದುರ್ಘಟತ್ವವೂ ಸುಘಟತ್ವವೂ ಎರಡೂ ನಮಗೆ ಭೂಷಣವು, ಎಂದುತ್ತರವು (ಅಂದರೆ ಆತ್ಮನು ಪ್ರಮಾಣಸಿದ್ಧನಾದುದರಿಂದ ಯುಕ್ತಿಯಿಂದ ದುರ್ಘಟನಾದಾಗ್ಯೂ ಬಾಧಕವಲ್ಲವೆಂದು ಹೇಳುವುದಾದರೆ ಸುಖಾದಿಗಳಿಗೂ ದುರ್ಘಟತ್ವವೂ ಸುಘಟತ್ವವೂ ಬರಲಿ ಪ್ರಮಾಣಸಿದ್ಧವಾದ ಪ್ರಯುಕ್ತ ಅದು ಬಾಧಕವಲ್ಲವೆಂದು ಹೇಳಬೇಕು (೨) (ಏಕೆಂದರೆ) ಪ್ರಮಾಣಸಿದ್ಧವಾದುದಕ್ಕೆ ದುರ್ಘಟತ್ವವು ಬಂದರೂ ಸುಘಟತ್ವವು ಬಂದರೂ ಎಲ್ಲಿಯೂ ಬಾಧಕವುಕಂಡು ಬರಲಿಲ್ಲ (೩) (ಯುಕ್ತಿಸಿದ್ಧವಾದ ದುರ್ಘಟತ್ವವನ್ನು ಪರಿಹರಿಸದೆ ದುರ್ಘಟತ್ವವು ಬಾಧಕವಲ್ಲವೆಂದು ಹೇಳಿದರೆ ಅತಿಪ್ರಸಂಗವನ್ನು ಹೇಳುತ್ತಾರೆ—) ಯುಕ್ತಿಯಿಂದ ದುರ್ಘಟತ್ವವು ಬಾಧಕವಲ್ಲ, ಮತ್ತೆ ಭೂಷಣವೇ ಎಂದು ಇಟ್ಟುಕೊಂಡು ದುರ್ಘಟವಾದ ಆತ್ಮಾಸ್ತಿತ್ವವನ್ನು (ಆತ್ಮನಿದ್ದಾನೆಂಬುವುದನ್ನು) ಒಡಂಬಟ್ಟರೆ ಆತ್ಮನಿಗೆ ಅವಿದ್ಯಾತ್ವವು ದುರ್ಘಟವಾದುದನ್ನಾದರೂ ಒಡಂಬಡಬೇಕಾಗುವುದು (ಅಂದರೆ ತಾನು ಅಂಗೀಕಾರಮಾಡಿ ಯುಕ್ತಿಯಿಂದ ಅಯುಕ್ತನೆಂದು ಹೇಳಿದರೆ ಅಯುಕ್ತತ್ವರೂಪವಾದ ದುರ್ಘಟತ್ವವು ಭೂಷಣವೇ ಎಂದು ಏಕೆ ಒಪ್ಪಬಾರದು) (೪) (ಪ್ರಮಾಣಸಿದ್ಧವಾದುದು ಯುಕ್ತಿಯಿಂದ ದುರ್ಘಟವಾದರೆ ಬಾಧಕವಲ್ಲ ಆತ್ಮನಿಗೆ ಅವಿದ್ಯಾತ್ವವು ಪ್ರಾಮಾಣಿಕವಲ್ಲ ಅವಿದ್ಯಾತ್ವವು ಪ್ರಾಮಾಣಿಕವಾಗಿದ್ದರೆ ಯುಕ್ತಿಯಿಂದ ದುರ್ಘಟತ್ವವೂ ಬಾಧಕವಲ್ಲವೆಂದು ಹೇಳಬಹುದಿತ್ತು ಎಂದರೆ—) ಆತ್ಮನಿಗೆ ಅವಿದ್ಯಾತ್ವವು ಅಪ್ರಾಮಾಣಿಕವಲ್ಲ. ಏಕೆಂದರೆ ಕೆಲವು ಜೀವತನವು, ಕೆಲವು ಅಜೀವತನವು ಎಂದಂಗೀಕರಿಸಿದರೆ

ಗೌರವವು ಬರುವುದು. ಸರ್ವವೂ ಅಜ್ಞೇತನವು ಎಂದಂಗೀಕರಿಸುವುದೇ ಶ್ರೇಷ್ಠವು, ಎಂಬುವ ಸುಕರ ತ್ವರೂಪ ಯುಕ್ತಿಸಿದ್ಧವಾಗಿದೆ (೫) (ಆತ್ಮನಿಗೆ ಅವಿದ್ಯಾತ್ವವು ಪ್ರಮಾಣವಿರುದ್ಧವು. ಆದಕಾರಣ ಯುಕ್ತಿಯಿಂದ ದುರ್ಘಟತ್ವವು ಬಾಧಕವೇ ಎಂದರೆ—) ಆತ್ಮನಿಗೆ ಅವಿದ್ಯಾತ್ವವಿದ್ದುದರಿಂದ ಮಿಥ್ಯಾತ್ವವನ್ನು ಹೇಳುವ ಪ್ರತಿಪಕ್ಷಿಗಳಿಗೆ ಹಿಂದೆ ಹೇಳಿದ ಪ್ರಕಾರ ಯಾವುದೊಂದು ಪ್ರಮಾಣ ವಿರೋಧವೂ ಇಲ್ಲ (೬) (ಹೀಗೆ ಅನುಭವ ಬಲದಿಂದ ಕಾರ್ಯಕಾರಣ ಸಂಬಂಧಕ್ಕೂ ಸುಖ ದುಃಖಾದಿ ಭೋಗಕ್ಕೂ ಸತ್ಯತ್ವವನ್ನು ಹೇಳುವ ವೇದವ್ಯಾಸರು ಅನುಭವಕ್ಕೆ ಭ್ರಮತ್ವವನ್ನು ಹೇಳುವವರ ಮತವನ್ನು ಏಕೆ ನಿರಾಕರಿಸಲಿಲ್ಲ, ಎಂದರೆ—) ಆದಕಾರಣ ಸುಖಾದಿವಿಷಯಕ ಸಾಕ್ಷ್ಯನುಭವವು ಭ್ರಮೆಯೆಂಬುವುದು ಹಿಂದೆ ಹೇಳಿದ ಪ್ರಕಾರ ಅನಂತದೋಷಗಳಿಂದ ದುಷ್ಟವಾಗಿದೆ, ಎಂದು ತೋರುವುದರಿಂದ ಹಿ ಎಂಬುವುದರಿಂದ ಪ್ರಸಿದ್ಧವೇ ಎಂದು ಹೇಳಿದ್ರಿಂದ ಪ್ರತ್ಯೇಕವಾಗಿ ವೇದವ್ಯಾಸರು ನಿರಾಕರಿಸಲಿಲ್ಲ (ಸ್ವತಃ ಶುದ್ಧನಾದ ಜೀವನಿಗೆ ಸಾಧ್ವಸಾಧುಯೋನಿಗಳಲ್ಲಿ ಜನ್ಮವು ಬರಲಿಕ್ಕೆ ಸತ್ವಾದಿಗುಣ ಸಂಬಂಧವು ಕಾರಣವೆನ್ನು ತ್ತಾರೆ-) ಅಸ್ಯ= ಜೀವನಿಗೆ ಸಾಧ್ವಸಾಧುಯೋನಿಗಳಲ್ಲಿ ಹುಟ್ಟಲಿಕ್ಕೆ ಸತ್ವ ರಜಸ್ತಮೋಗುಣ ಸಂಬಂಧವು ಕಾರಣವು (ಅಂದರೆ–ಜೀವನಿಗೆ ಶರೀರ ಸಂಬಂಧವು ಬರಲಿಕ್ಕೆ ಸತ್ವಾದಿಗುಣಗಳ ಸಂಬಂಧವೇ ಕಾರಣವು ॥೪॥ ॥೨೨॥

ಪೀ – ಸಾಧ್ವಸಾಧುಯೋನಿಗಳಲ್ಲಿ ಹುಟ್ಟಲಿಕ್ಕೆ ಸತ್ವಾದಿಗುಣಸಂಬಂಧವು ನಿಮಿತ್ತಮಾತ್ರಕಾರಣವು ಶ್ರೀಪರಮಾತ್ಮನೇ ಸ್ವತಂತ್ರಕಾರಣನೆನ್ನುತ್ತಾರೆ—

ಗೀ ॥ ಉಪದ್ರಷ್ಟಾನುಮಂತಾ ಚ ಭರ್ತಾ ಭೋಕ್ತಾ ಮಹೇಶ್ವರಃ ।
ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ಪುರುಷಃ ಪರಃ ॥ ೨೩ ॥

ಅ॥ ಅಸ್ಮಿನ್ ದೇಹೇ=ಈ ಶರೀರದಲ್ಲಿರತಕ್ಕ, ಪರಃ=ಸರ್ವೋತ್ತಮನೂ ಶರೀರದಲ್ಲಿರತಕ್ಕ ಜೀವರಿಗಿಂತ ಭಿನ್ನನೂ ಆದ, ಪುರುಷಃ=ಸರ್ವಗುಣ ಪರಿಪೂರ್ಣನಾದ ಶ್ರೀಪರಮಾತ್ಮನು ಉಪದ್ರಷ್ಟಾ=ಎಲ್ಲರಿಗಿಂತಲೂ ಮೇಲೆ ಇದ್ದವನಾಗಿ ಅಂದರೆ ಸರ್ವೋತ್ತಮನಾಗಿ ಜೀವರು ಮಾಡುವ ಎಲ್ಲಾ ವ್ಯಾಪಾರಗಳನ್ನು ನೋಡಿಕೊಂಡಿರುವವನು, ಅನುಮಂತಾ= ಪುನಃಪುನಃ ಕಾರ್ಯಮಾಡುವುದನ್ನು ವಿಶೇಷವಾಗಿ ಆಲೋಚಿಸಿಕೊಂಡಿರುವವನು. ಅಥವಾ ತನಗೆ ಅನುಕೂಲವಾಗಿ ಬುದ್ಧಿಪೂರ್ವಕವಾಗಿ ಜೀವರಿಗೆ ಎಲ್ಲಾ ವ್ಯಾಪಾರಗಳನ್ನು ಪ್ರೇರೇಪಿಸುವವನು ಭರ್ತಾ ಚ= ಬ್ರಹ್ಮಾದಿಗಳನ್ನು ಪೋಷಿಸಿಕೊಂಡಿರುವವನು, ಭೋಕ್ತಾ= ಎಲ್ಲಾ ಕರ್ಮ ಫಲಗಳ ಸಾರವನ್ನು ಭೋಗಿಸಿಕೊಂಡಿರುವವನು ಮಹೇಶ್ವರಃ=ಅಪರಿಮಿತ ಶಕ್ತಿಯುಳ್ಳವನಾದುದರಿಂದ ಸರ್ವರಿಗೂ ಮಹಾಸ್ವಾಮಿಯು, ಪರಮಾತ್ಮೇತಿ ಚ= ಪರಮ ಜೇತನನೆಂದೂ, ಉಕ್ತಃ= ಹೇಳಿಸಿಕೊಳ್ಳಲ್ಪಟ್ಟದ್ದಾನೆ ॥ ೨೩ ॥

ಪೀ—ಜೀವರ ಜನ್ಮಕ್ಕೆ ಕಾರಣವಾದ ಸತ್ವಾದಿಗುಣ ಸಂಬಂಧವು ಜಡವಾದುದರಿಂದ ಸ್ವತಂತ್ರ ಕಾರಣವಾಗಲಾರದು ಆದಕಾರಣ ಸ್ವತಂತ್ರಕಾರಣನು ಯಾರೆಂದರೆ—

ತಾ ॥ (೧) ಸ್ವತಂತ್ರಕಾರಣಂ ತು ಪರಮೇಶ್ವರ (ಪರಮು) ಏನೇತ್ಯಾಹ । ಉಪದ್ರಷ್ಟಾನು-
ಮಂತೇತಿ ॥ (೨) ಸರ್ವೇಭ್ಯ ಉಪರಿ (ರೋ) ದ್ರಷ್ಟಾ ಯದುಪದ್ರಷ್ಟೃನಾಮಕಃ ।
ಸ್ವಾತಂತ್ರ್ಯಾತ್ಸ್ವಾನುಕೂಲ್ಯೇನ ಮತ್ಯಾ ಪ್ರೇರಯತಿ ಸ್ಮ ಯತ್ । ಅನುಮಂತೇತಿ
ಕಥಿತಃ ಸ್ವಯಂ ಪ್ರಭುರಜೋ ಹರಿಃ । ಮಹಾಶಕ್ತಿರ್ಯತೋ ವಿಷ್ಣು ರ್ಮಹೇಶ್ವರ

ಇತೀರಿತಃ । ಪರಮುತ್ವಾಚ್ಚ ತಸ್ಯೈವ ಹ್ಯನುಮಂತೃತ್ವಮುಚ್ಯತೇ । ಸ ಏವ ಸರ್ವದೇಹೇಷು ದೇಹಿನೋಽನ್ಯೋ ವ್ಯವಸ್ಥಿತ ಇತಿ ಚ ॥ (೩) ಮಾಂ ವಿದ್ಧಿ ಸರ್ವಕ್ಷೇತ್ರೇಷ್ವಿತಿ ದೇಹೇಽಪ್ಯುಕ್ತಃ । ತೇನಾಹಮೇವ ಸ ಇತಿ ದರ್ಶಯತಿ ॥ ೨೩ ॥

ಅ ॥ (೧) **ಉಪದ್ರಷ್ಟಾಽನುಮಂತಾ** ಎಂಬುವುದರಿಂದ ಸ್ವತಂತ್ರಕಾರಣನಾದರೂ ಶ್ರೀಪರಮಾತ್ಮನೇ ಎನ್ನುತ್ತಾರೆ (೨) (ಇದರಿಂದ ಶ್ರೀಪರಮಾತ್ಮನು ಸ್ವತಂತ್ರಕಾರಣನೆಂದು ಸಿಗುವುದು ಹೇಗೆಂದರೆ-) ಬ್ರಹ್ಮರುದ್ರಾದಿಗಳಿಗೆಲ್ಲರಿಗಿಂತಲೂ ಮೇಲೆ ಅಂದರೆ ಸರ್ವೋತ್ತಮನಾಗಿ ಜೀವರ ವ್ಯಾಪಾರಗಳನ್ನು ನೋಡುವುದರಿಂದ **ಉಪದ್ರಷ್ಟಾ** ಎಂದು ಹೆಸರುಳ್ಳವನು ಸರ್ವ ಸಮರ್ಥನೂ ಉತ್ಪತ್ತಿರಹಿತನೂ ಆದ ಶ್ರೀಪರಮಾತ್ಮನು ತಾನೇ ಸರ್ವ ಸ್ವಾತಂತ್ರ್ಯದಿಂದ ತನ್ನ ಮನಸ್ಸಿಗೆ ವಿಕ್ಷೇಪರೂಪ ದೋಷವಿಲ್ಲದಿದ್ದವನಾಗಿ ನೆಗಾಡುತ್ತಾ ಬುದ್ಧಿಪೂರ್ವಕವಾಗಿ ಪ್ರೇರಿಸುವವನು **ಅನುಮಂತಾ** ಎನಿಸುತ್ತಾನೆ ಶ್ರೀಪರಮಾತ್ಮನಿಗೆ ಮಹಾ ಶಕ್ತಿಯು ಇದ್ದುದರಿಂದ ಆತನು **ಮಹೇಶ್ವರಃ** ಎನಿಸುತ್ತಾನೆ ಅವನೇ ಸರ್ವೋತ್ಕೃಷ್ಟನಾದುದರಿಂದ ಅಂದರೆ ಪರಮ ಚೇತನನಾದುದರಿಂದ **ಅನುಮಂತಾ** ಎನಿಸುತ್ತಾನೆ. ಆ ಶ್ರೀಪರಮಾತ್ಮನೇ ಬ್ರಹ್ಮಾದಿ ಜೀವರ ಶರೀರಗಳಲ್ಲಿ ನಿಯಾಮಕನಾಗಿದ್ದು ಆ ಜೀವರಿಗಿಂತ ಭಿನ್ನನಾಗಿ ಇರುತ್ತಾನೆ (೩) **ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ** ಎಂದು ಮೊದಲು ಅನುಮಂತನಾಗಿ (ಪ್ರೇರಕನಾಗಿ) ದೇಹದಲ್ಲಿ ಇದ್ದಾನೆಂದು ಹೇಳಿದ್ದಿಂದ **ದೇಹೇಽಸ್ಮಿನ್** ದೇಹದಲ್ಲಿದ್ದಾನೆಂದು ಹೇಳಿದ್ದುಯುಕ್ತವೆ ಆದರಿಂದ ದೇಹದಲ್ಲಿದ್ದ ನಾನೇ ಅನುಮಂತನು (ಸರ್ವ ಪ್ರೇರಕನಾದ ಶ್ರೀಪರಮಾತ್ಮನು) ಎಂದು ತೋರಿಸುತ್ತಾರೆ ॥ ೨೩ ॥

ಪೀ—**ಪ್ರಕೃತಿಂ ಪುರುಷಂ ಚೈವ ವಿದ್ಧಿ** ಎಂದು ಹೇಳಿದ ಅರ್ಧದಲ್ಲಿ ಅಧಿಕಾರಿಗಳಿಗೆ ಆದರಾತಿಶಯವು ಹುಟ್ಟುವುದಕ್ಕಾಗಿ ಅವುಗಳ ಜ್ಞಾನಫಲವನ್ನು ಹೇಳುತ್ತಾರೆ—

ಗೀ॥ ಯ ಏವಂ ವೇತ್ತಿ ಪುರುಷಂ ಪ್ರಕೃತಿಂ ಚ ಗುಣೈಃ ಸಹ ।
ಸರ್ವಥಾ ವರ್ತಮಾನೋಽಪಿ ನ ಸ ಭೂಯೋಽಭಿಜಾಯತೇ ॥ ೨೪ ॥

ಅ ॥ ಯಃ—ಯಾವಾತನು, ಏನಂ ಪುರುಷಂ=ಜೀವ ಪರಮಾತ್ಮರೆಂಬ ಇಬ್ಬರು ಪುರುಷರನ್ನು, ಪ್ರಕೃತಿಂ ಚ=ಅಚೇತನ ಚೇತನವೆಂಬ ವ ಎರಡು ಪ್ರಕೃತಿಗಳನ್ನು ಕೂಡ, ಗುಣೈಃ ಸಹ=ಆವುಗಳಲ್ಲಿರುವ ಗುಣಗಳಿಂದ ಕೂಡಿಕೊಂಡು, ಅಂದರೆ ಜೀವನು ಪ್ರಕೃತಿಗುಣಗಳಿಂದ ಬದ್ಧನಾಗಿ ಸುಖ ದುಃಖಾದಿಗಳನ್ನ ನುಭವಿಸುವವನು ಶ್ರೀಪರಮಾತ್ಮನು ಪ್ರಕೃತಿಸಂಬಂಧವಿಲ್ಲದವನು ಮಹಾ ಶಕ್ತಿಯರುವವನು, ಸರ್ವರಿಗೆ ನಿಯಾಮಕನೂ ಜೀವರಿಗಿಂತ ವಿಲಕ್ಷಣನೂ ಈ ಪ್ರಕಾರ ವೇತ್ತಿ=ಪರೋಕ್ಷವಾಗಿ ತಿಳಿದು ಅಪರೋಕ್ಷವಾಗಿ ತಿಳಿಯುತ್ತಾನೋ, ಸಃ=ಆ ಅಧಿಕಾರಿಯು, ಸರ್ವಥಾವರ್ತಮಾನೋಽಪಿ=ಪ್ರಮಾದದಿಂದ ಅನ್ಯಾಯಕಾರ್ಯಗಳಲ್ಲಿ ಪ್ರವೃತ್ತಿಮಾಡಿದವನಾದಾಗ್ಯೂ, ಭೂಯಃ=ತಿರುಗಿ, ನಾಭಿಜಾಯತೇ=ಹುಟ್ಟುವುದಿಲ್ಲ (ಮುಕ್ತನಾಗುತ್ತಾನೆ) ॥ ೨೪ ॥

ಭಾ ॥ (೧) ಯತಶ್ಚ ಯದಿತ್ಯಾಹ । ಉಪದ್ರಷ್ಟೇತಿ ॥ (೨) ಅನುಮಂತಾ ಅನ್ವನು ವಿಶೇಷತೋ ನಿರೂಪಕಃ ॥ (೩) ಪುರುಷಃ ಸುಖದುಃಖಾನಾಮಿತಿ ಜೀವ ಉಕ್ತಃ । ಪುರುಷಂ ಪ್ರಕೃತಿಂ ಚೇತಿ ಜೀವೇಶ್ವರೌ ಸಹೈವೋಚ್ಯೇತೇ ॥ (೪) ಅನ್ಯತ್ರ ಮಹಾತಾತ್ಪ-

ರ್ಯವಿರೋಧಃ । ಉತ್ಕರ್ಷೇ ಹಿ ಮಹಾತಾತ್ಪರ್ಯಂ ॥ (೫) ತಥಾ ಹಿ ಸೌಕರಾಯಣಶ್ರುತಿಃ । ಅವಾಚ್ಯೋತ್ಕರ್ಷೇ ಮಹತ್ತ್ವಾತ್ಸರ್ವವಾಚಾಂ ಸರ್ವನ್ಯಾಯಾನಾಂ ಚ ಮಹತ್ತತ್ಪರತ್ವಂ । ವಿಷ್ಣೋರನಂತಸ್ಯ ಪರಾತ್ಪರಸ್ಯ ತಚ್ಚಾಪ್ಯಸ್ಯೇವ ನ ಚಾತ್ರ ಶಂಕಾ ॥ ೧ ॥

ಅ ॥ (೧) ಯತಶ್ಚ ಯೇತ್=ಜಗತ್ತು ಯಾರಿಂದ ಕಾರ್ಯಗಳಲ್ಲಿ ಪ್ರವೃತ್ತಿಯನ್ನು ಮಾಡಿತ್ತದೆ, ಎಂದು ಪ್ರತಿಜ್ಞಾತವಾದುದನ್ನು **ಉಪದ್ರಷ್ಟಾ (೨೩)** ಎಂಬುವ ಶ್ಲೋಕದಿಂದ ಹೇಳುತ್ತಾರೆ (೨) (**ಅನುಮಂತಾ** ಎಂಬುವ ಶಬ್ದದ ಅರ್ಥವನ್ನು ಹೇಳುತ್ತಾರೆ-) **ಅನುಮಂತಾ**=ಮತ್ತೂ ಮತ್ತೂ ಕರ್ತವ್ಯವಾದುದನ್ನು ವಿಶೇಷವಾಗಿ ಆಲೋಚಿಸುವವನು ಅಂದರೆ ಈ ಕರ್ಮವು ಇವನಿಗೆ ಮಾಡಲು ಶಕ್ಯವೆಂದು ವಿಮರ್ಶ ಮಾಡತಕ್ಕವನು (೩) (**ಯ ಏನಂ ವೇತ್ತಿ ಪುರುಷಂ** (ಶ್ಲೋ ೨೪) ಎಂಬುವಲ್ಲಿದ್ದ ಪುರುಷ ಶಬ್ದವನ್ನು ವ್ಯಾಖ್ಯಾನಮಾಡಲಿಕ್ಕೆ ಉಪೋದ್ಘಾತವನ್ನು ಹೇಳುತ್ತಾರೆ) **ಪುರುಷಃ ಸುಖದುಃಖಾನಾಂ** (೨೧) ಎಂಬುವಲ್ಲಿ ಸುಖ ದುಃಖಭೋಕ್ತೃತ್ವವು ತೋರುವುದರಿಂದ ಜೀವನು ಹೇಳಲ್ಪಟ್ಟಿದ್ದಾನೆ (**ಉಪದ್ರಷ್ಟಾ** (ಶ್ಲೋ ೨೩) ಎಂಬುವುದರಿಂದ ಶ್ರೀಪರಮಾತ್ಮನು ಹೇಳಲ್ಪಟ್ಟಿದ್ದಾನೆ) (ಹೀಗೆ ಜೀವೇಶ್ವರರಿಬ್ಬರೂ ಪ್ರಸ್ತುತರಾದುದರಿಂದ **ಯ ಏನಂ ವೇತ್ತಿ ಪುರುಷಂ ಪ್ರಕೃತಿಂ** (ಶ್ಲೋ ೨೪) ಎಂಬುವಲ್ಲಿ ಪುರುಷಶಬ್ದದಿಂದ ಜೀವೇಶ್ವರರು ಇಬ್ಬರೂ ಒಟ್ಟಿಗೇನೇ ಹೇಳಲ್ಪಡುತ್ತಾರೆ. (೪) (**ಯ ಏನಂ ವೇತ್ತಿ ಪುರುಷಂ** ಎಂಬುವಲ್ಲಿ ಸಾಕ್ಷಾತ್ ಪರಮಾತ್ಮನೇ ನಾನಾರೂಪಿದ್ದೇನೆಂದು ಇಟ್ಟುಕೊಂಡು ಜೀವಬ್ರಹ್ಮೈಕ್ಯವು ಈ ವಾಕ್ಯದಿಂದ ಸಿದ್ಧವಾಗುತ್ತದೆಂದು ಕೆಲವರು ವ್ಯಾಖ್ಯಾನಮಾಡಿರುವರು ಅದನ್ನು ದೂಷಿಸುತ್ತಾರೆ) ಜೀವಬ್ರಹ್ಮೈಕ್ಯವನ್ನು ಹೇಳಿದರೆ—ಸಮಸ್ತ ವೇದಗಳೂ ಪ್ರಧಾನವಾಗಿ (ಸರ್ವೋತ್ತಮನೆಂದು) ಪರಬ್ರಹ್ಮನನ್ನು ಹೇಳುತ್ತವೆ, ಎಂದು ಹೇಳಿದ್ರಿಂದ ವಿರೋಧವು ಬರುವುದು (ಹೇಗೆಂದರೆ) ಸಮಸ್ತ ವೇದಗಳಿಗೆ ಶ್ರೀಪರಮಾತ್ಮನು ಸರ್ವೋತ್ತಮನು ಸರ್ವಗುಣ ಪರಿಪೂರ್ಣನೆಂಬುವಲ್ಲಿಯೇ ಮುಖ್ಯ ತಾತ್ಪರ್ಯವು (೫) (ಆ ವಿಷಯದಲ್ಲಿ ವೇದಪ್ರಮಾಣವನ್ನು ಹೇಳುತ್ತಾರೆ—) ಆದೇ ಅಭಿಪ್ರಾಯವನ್ನು ಸೌಕರಾಯಣ ಶ್ರುತಿಯು ಹೇಳುತ್ತದೆ ಸರ್ವೋತ್ತಮನೂ ನಾಶರಹಿತನೂ ಆದ ಶ್ರೀಪರಮಾತ್ಮನಿಗೆ ಸರ್ವೋತ್ಕೃಷ್ಟತ್ವವಿದ್ದುದರಿಂದಲೇ ಆತನ ಮಹಿಮೆಯನ್ನು ಸಂಪೂರ್ಣ ಹೇಳಲಿಕ್ಕೆ ಅಶಕ್ಯವಾಗಿರುವುದರಿಂದ ಅವಾಚ್ಯವೆಂದು ಹೇಳಲ್ಪಟ್ಟ ವಿಷ್ಣು ಸರ್ವೋತ್ತಮತ್ವದಲ್ಲಿ ಸಮಸ್ತ ವೇದವಚನಗಳಿಗೂ ಸಮಸ್ತ ನ್ಯಾಯವ್ಯುತ್ಪಾದಕವಾದ ಮೀಮಾಂಸಾ ಶಾಸ್ತ್ರಕ್ಕೂ ಮಹಾ ತಾತ್ಪರ್ಯವು ಉತ್ಕರ್ಷದಲ್ಲಿ ಕೇವಲ ತಾತ್ಪರ್ಯಮಾತ್ರವಲ್ಲ ಉತ್ಕರ್ಷವೂ ಪಾರಮಾರ್ಥಿಕವಾಗಿಯೇ ಇದೆ ಈ ವಿಷಯದಲ್ಲಿ ಶಂಕಾಕ್ಕೆ ಕಾರಣವಾದ ಯಾವ ಬಾಧಕವೂ ಇಲ್ಲ ॥ ೧ ॥

ಹೀ—ಹೇಗೆ ಬಾಧಕವಿಲ್ಲವೆಂದರೆ—

ಭಾ ॥ (೧) ಅತೋ ವಿರುದ್ಧಂ ತು ಯದತ್ರ ಮಾನಂ ತದಕ್ಷಜಾದಾವಥವಾಽಪಿ ಯುಕ್ತಿಃ । ನ ತತ್ಪ್ರಮಾಣಂ ಕವಯೋ ವದಂತಿ ನ ಚಾಪಿ ಯುಕ್ತಿರ್ಹ್ಯನಮತಿರ್ಹಿ ದೃಷ್ಟೇರಿತಿ ॥ (೨) ಅತೋ ಯುಕ್ತಿಭಿರಪ್ಯೇತದಪಲಾಪೋ ನ ಯುಕ್ತಃ ॥ (೩) ಅತೋ ಯಯಾ ಯುಕ್ತ್ಯಾ ವಿದ್ಯಮಾನತ್ವಾದಿ ಕಲ್ಪಯತಿ ಸಾಽಸ್ಯಾಭಾಸರೂಪೇತಿ ಸದೇವ ಮಾಹಾತ್ಮ್ಯಂ ವೇದೈರುಚ್ಯತ ಇತಿ ಸಿದ್ಧ್ಯತಿ ॥ (೪) ಅವಾಂತರಂ ಚ ತಾತ್ಪರ್ಯಂ

ತತ್ರಾಸ್ತಿ॥ (ಃ) ಉಕ್ತಂ ಚ ತತ್ರೈವ। ಅವಾಂತರಂ ತತ್ಪರತ್ವಂ ಚ ಸತ್ತೈವ ಮಹದ್ವ್ಯಪ್ಯೇಕತ್ವಾತ್ತು ತಯೋರನಂತ ಇತಿ ॥ ೨ ॥

ಆ ॥(೧) ಶ್ರೀಪರನಾಮಾತ್ಮನು ಸರ್ವೋತ್ತಮನು ಎಂಬುವಲ್ಲಿ ಯಾವುದು ವಿರುದ್ಧ ಪ್ರಮಾಣವು ಶಂಕಿಸಲ್ಪಡುತ್ತದೋ, ಅದು (1) ಪ್ರತ್ಯಕ್ಷಾಗಮಗಳಲ್ಲಿ ಒಂದೋ (2) ಅಥವಾ ಯುಕ್ತಿಯೋ, ಇವುಗಳಲ್ಲಿ ಒಂದನ್ನೇ ಅಯುಕ್ತವು ನ್ಯಾಯಾಭಿಜ್ಞರು ಪರಮಾತ್ಮನಿಗೆ ಸರ್ವೋತ್ಕೃಷ್ಟತ್ವವಿಲ್ಲವೆಂಬುವ ವಿಷಯದಲ್ಲಿ ಪ್ರತ್ಯಕ್ಷಪ್ರಮಾಣವುಂಟೆಂದಾಗಲೀ ಆಗಮಪ್ರಮಾಣವುಂಟೆಂದಾಗಲೀ ಹೇಳುವುದಿಲ್ಲ ಉಪಜೀವ್ಯವಾದ ವೇದದಿಂದ ವಿರೋಧವಿದ್ದುದರಿಂದಲೂ ಯುಕ್ತಿಯೂ ಪ್ರಮಾಣವಾಗುವುದಿಲ್ಲ. ಯುಕ್ತಿಯು ವೇದಕ್ಕಿಂತ ದುರ್ಬಲವಾದ ಜ್ಞಾನವನ್ನು ಹುಟ್ಟಿಸತಕ್ಕುದು (೨) ಆದಕಾರಣ ಯುಕ್ತಿಗಳಿಂದಲಾಗಲೀ ಬೇರೆ ಯಾವ ಪ್ರಮಾಣಗಳಿಂದಲಾಗಲೀ ಪರಮಾತ್ಮನಿಗೆ ಉತ್ಕರ್ಷವನ್ನು ಅಪಲಾಪಮಾಡಕೂಡದು (೩) (ಹಿಂದೆ ಹೇಳಿದ ಅರ್ಥವನ್ನೇ ವಿವರಿಸುತ್ತಾರೆ—) ಆದುದರಿಂದ ವೇದ ಮೊದಲಾದ ಪ್ರಮಾಣ ವಿರೋಧವಿದ್ದುದರಿಂದ ಯಾವ ಯುಕ್ತ್ಯಾದಿಗಳಿಂದ ಶ್ರೀಪರಮಾತ್ಮನಿಗೆ ಉತ್ಕರ್ಷಾದಿಗಳು ಇಲ್ಲ, ಮತ್ತೆ ಅನಿರ್ವಾಚ್ಯಗಳೆಂದು ಕಲ್ಪಿಸುವುದೋ, ಆ ಯುಕ್ತಿಯೂ ಪ್ರತ್ಯಕ್ಷಾದಿ ಪ್ರಮಾಣಗಳೂ ಉಪಜೀವ್ಯ ವೇದವಿರೋಧದಿಂದ ಆಭಾಸರೂಪವೇ ಆಗಿರುವುದರಿಂದ ಸ್ವಾಭಾವಿಕವಾಗಿಯೇ ಇರುವ ಉತ್ಕರ್ಷಾದಿಗಳನ್ನೇ ವೇದಗಳು ಸದಾ ಶ್ರುತಿವಾದಿಸುತ್ತವೆಂದು ಸಿದ್ಧಿಸುತ್ತದೆ (೪) (ಹೀಗಾದರೆ ಭಗವದುತ್ಕರ್ಷದಲ್ಲಿಯೂ ಉತ್ಕರ್ಷವು ಸತ್ತಾಗಿದೆ ಎಂಬುವಲ್ಲಿಯೂ ವೇದಕ್ಕೆ ತಾತ್ಪರ್ಯವನ್ನು ಅಂಗೀಕರಿಸಿದರೆ ವಾಕ್ಯಭೇದವು ಬರಬೇಕಾಗುವುದು, ಎಂದರೆ—) ಪರಮಾತ್ಮನು ಸರ್ವೋತ್ಕೃಷ್ಟನು ಎಂಬುವಲ್ಲಿ ಮಹಾ ತಾತ್ಪರ್ಯವು ಉತ್ಕರ್ಷವು. ಸತ್ತಾಗಿದೆ ಎಂಬುವಲ್ಲಿ ಅವಾಂತರ ತಾತ್ಪರ್ಯವು ಇದೆ (ಹೀಗೆ ಎರಡು ಕಡೆ ಮಹಾ ತಾತ್ಪರ್ಯವಿಲ್ಲದಿರುವುದರಿಂದ ವಾಕ್ಯಭೇದವಿಲ್ಲ) (೫) (ಈ ಅರ್ಥವು ಹೇಗೆ ಸಿದ್ಧಿಸುವುದೆಂದರೆ) ಆದೇ ಶ್ರುತಿಯಲ್ಲಿ ಅವಾಂತರ ತಾತ್ಪರ್ಯವು ಏನಿದೆ ಎಂದು ಹೇಳಿದೆ ಶ್ರೀ ಪರಮಾತ್ಮನಿಗೆ ಉತ್ಕರ್ಷವಿದೆ, ಎಂಬುವಲ್ಲಿ ಅವಾಂತರ ತಾತ್ಪರ್ಯವು (ಇದು ವಾಕ್ಯಭೇದವಿಲ್ಲವೆಂದಂಗೀಕರಿಸಿ ಹೇಳಿದ್ದು ಪರಸ್ಪರತಸ್ತು ಉತ್ಕರ್ಷವು ಸತ್ತಾಗಿದೆ ಎಂಬುವಲ್ಲಿ ಮಹಾತಾತ್ಪರ್ಯವಿದೆ) (ಅದು ಹೇಗೆಂದರೆ—) ಶ್ರೀಪರವಾತ್ಮನ ಸಂಬಂಧಿಗಳಾದ ಸರ್ವೋತ್ಕರ್ಷವೂ (ಸರ್ವೋತ್ತಮತ್ವ ಸರ್ವಗುಣಪರಿಪೂರ್ಣತ್ವ ಮೊದಲಾದುದು) ಸರ್ವೋತ್ಕರ್ಷವು ಸತ್ತಾಗಿದೆ ಎಂಬುದೂ ಎರಡಕ್ಕೂ ಐಕ್ಯವೇ ಭೇದವಿಲ್ಲ ॥ ೨ ॥

ಪೀ —ಪರಬ್ರಹ್ಮನು ನಿರ್ಗುಣನು ನಿರಾಕಾರನೆಂದೇ ವೇದಾದಿಗಳಲ್ಲಿ ಹೇಳಿದೆ ಆದಕಾರಣ ಎಲ್ಲಾ ವೇದಗಳಿಗೂ ಪರಮಾತ್ಮನು ಸರ್ವಗುಣ ಪರಿಪೂರ್ಣನೆಂಬುವಲ್ಲಿಯೇ ಮಹಾ ತಾತ್ಪರ್ಯವೆಂಬುದು ಹೇಗೆ? ಎಂದರೆ—

ಭಾ ॥ (೧) ಶ್ಯಾಮತ್ವಾದ್ಯಭಿಧಾನಾಚ್ಚ ॥ (೨) ಯುಕ್ತಂ ಚ ಪುರುಷಮತಿಕಲ್ಪಿತಯುಕ್ತ್ಯಾದೇರಾಭಾಸತ್ವಂ। ಅಜ್ಞಾನಸಂಭವಾತ್। ನತು ಸ್ವತಃ ಪ್ರಮಾಣಸ್ಯ ವೇದಸ್ಯಾಭಾಸತ್ವಂ ॥ (೩) ಅದರ್ಶನಂ ಚ ಸಂಭವತ್ಯೇವ ಪುಂಸಾಂ ಬಹೂನಾಮವ್ಯಜ್ಞಾನಾತ್ ॥ (೪) ತಥ್ಯಸ್ಮದನಧೀತಶ್ರುತ್ಯಾದೌ ವಿಪರ್ಯಯೋಽಪಿ ನ್ಯಾಯಿತಿ ವಾಚ್ಯಂ। ಯತಸ್ತತ್ರೈವಾಹ। ನೈತದ್ವಿರುದ್ಧಾ ವಾಚೋ ನೈತದ್ವಿರುದ್ಧಾ ಯುಕ್ತಯ ಇತಿ ಹ ಪ್ರಜಾಪತಿರುವಾಚ ಪ್ರಜಾಪತಿರುವಾಚೇತಿ ॥ (೫) ತದ್ವಿರುದ್ಧಂ ಜೀವನಾಮ್ಯಂ ಆಭಾಸ ಏವ ಚೇತಿ ಚೋಕ್ತಂ ॥ ೩ ॥

ಅ ॥ (೧) **ಶ್ಯಾಮೋಽಥವಾ ಹೃದಯೇ ಸೋಽಷ್ಟಬಾಹುಃ ಧ್ಯೇಯಸ್ಸ ವೈ ಲೋಹಿತಾದಿತ್ಯ ವರ್ಣಃ** ಇತ್ಯಾದಿ ವೇದಗಳಲ್ಲಿ ಶ್ರೀಪರಮಾತ್ಮನಿಗೆ ಶ್ಯಾಮತ್ವಾದಿ ರೂಪಗಳನ್ನು ಅಷ್ಟಬಾಹುವೇ ಮೊದಲಾದ ಆಕಾರವನ್ನು ಹೇಳಿದೆ (ರೂಪಾದಿಗಳು ಇಲ್ಲವೆಂದು ಹೇಳುವ ಶ್ರುತಿಗಳಿಗೆ ಪ್ರಾಕೃತರೂಪಾದಿಗಳು ಇಲ್ಲವೆಂದರ್ಥವು.) (೨) (ವೇದಗಳಿಂದ ವಿರೋಧವಿದ್ದ ಪ್ರಯುಕ್ತ ಯುಕ್ತ್ಯಾದಿಗಳು ಅಪ್ರಮಾಣಗಳೆಂದು ಹೇಳಿದೆ ಇದು ಯುಕ್ತವಲ್ಲ ಹಾಗೆ ಹೇಳಲಿಕ್ಕೆ ನಿಯಾಮಕವಿಲ್ಲ ಯುಕ್ತ್ಯಾದಿಗಳಿಂದ ವಿರೋಧವಿದ್ದ ಪ್ರಯುಕ್ತ ವೇದವೇ ಅಪ್ರಮಾಣವೆಂದು ಹೇಳಬಹುದಷ್ಟೆ ಎಂದರೆ—)ಪುರುಷರ ಅಜ್ಞಾನದಿಂದ ಪರಿಕಲ್ಪಿತವೆಂದು ಕೂಡುವುದರಿಂದ ಪುರುಷರ ಬುದ್ಧಿಯಿಂದ ಕಲ್ಪಿತಗಳಾದ ಯುಕ್ತ್ಯಾದಿಗಳಿಗೇ ಅಭಾಸತ್ವವು ಯುಕ್ತವು ಸಂಭಾವಿತವು ಅಪೌರುಷೇಯವಾಗಿರುವುದರಿಂದ ಪುರುಷರ ಆಪ್ತತ್ವಾದಿ ಗುಣವನ್ನು ಅಪೇಕ್ಷಿಸದೇನೇ ಪ್ರಾಮಾಣ್ಯವುಳ್ಳ ಸ್ವತ ಏವ ಪ್ರಮಾಣವಾಗಿರತಕ್ಕ ವೇದಕ್ಕೆ (ಶುಷ್ಕಯುಕ್ತಿ ವಿರೋಧದಿಂದ ಅಭಾಸತ್ವವು (ಅಪ್ರಾಮಾಣ್ಯವು) ಸರ್ವಥಾ ಯುಕ್ತವಲ್ಲ (೩) (ಯುಕ್ತಿಯು ಅಜ್ಞಾನ ಮೂಲಕವು ಎಂದು ಹೇಳಿದ್ದನ್ನು ಪಪಾದನೆ ಮಾಡುತ್ತಾರೆ-) ಬಹು ಪುರುಷರಿಗೂ ಅಜ್ಞಾನವು ಇರಬಹುದಾದುದರಿಂದ ಅನುಮಾನದಲ್ಲಿ ಬರುವ ವ್ಯಭಿಚಾರಾದಿ ದೋಷಗಳು ಇರುವುದು ಸಂಭಾವಿತವೇ (ಅಂದರೆ—ವೇದಕ್ಕೂ ಯುಕ್ತ್ಯಾದಿಗಳಿಗೂ ಪರಸ್ಪರ ವಿರೋಧವು ಬಂದಲ್ಲಿ ಎರಡೂ ಪ್ರಮಾಣಗಳಾಗಲಾರವು ಮತ್ತೆ ಎರಡರಲ್ಲಿ ಒಂದು ಅಪ್ರಮಾಣವೆಂದು ಕಲ್ಪಿಸಬೇಕು ಆಗ ಯುಕ್ತ್ಯಾದಿಗಳು ಅಜ್ಞಾನ ಮೂಲಕಗಳೆಂದು ಕೂಡುವುದರಿಂದ ಯುಕ್ತ್ಯಾದಿಗಳೇ ಅಪ್ರಮಾಣಗಳೆಂದು ಕಲ್ಪಿಸಬೇಕು ವೇದಕ್ಕೆ ಅಜ್ಞಾನಮೂಲಕತ್ವವು ಕೂಡದಿರುವುದರಿಂದ ವೇದಕ್ಕೆ ಅಭಾಸತ್ವವನ್ನು ಕಲ್ಪಿಸಕೂಡದು) (೪) ವೇದಕ್ಕೆ ಯುಕ್ತಿವಿರೋಧವು ವೇದಗಳಿಗೆ ಅಪ್ರಾಮಾಣ್ಯ ಹೇಳುವುದರಲ್ಲಿ ಕಾರಣನಾಗದಿದ್ದರೂ, ನಾವು ಕಲಿಯದಿರುವ ವೇದಾದಿಗಳಲ್ಲಿ ಭಗವಂತನಿಗೆ ಗುಣೋತ್ಕರ್ಷವು ಇಲ್ಲವೆಂದು ಹೇಳಿದೆ ಎಂದಾಗಬೇಕಾಗುವದೆಂದು ಹೇಳಕೂಡದು ಏಕೆಂದರೆ ಆದೇ ಶ್ರುತಿಯಲ್ಲಿ ಭಗವಂತನು ಸರ್ವಗುಣಪರಿಪೂರ್ಣನು ಸರ್ವೋತ್ತಮನು ಎಂಬುವುದಕ್ಕೆ ವಿರುದ್ಧಗಳಾದ ವಚನಗಳು ಇಲ್ಲವೇ ಇಲ್ಲ ಗುಣೋತ್ಕರ್ಷಕ್ಕೆ ವಿರುದ್ಧಗಳಾದ ಯುಕ್ತಿಗಳು ಇಲ್ಲ, ಎಂದು ಚತುರ್ಮುಖನು ಹೇಳಿರುವನು ಎಂದು ವೇದಪುರುಷನು ಹೇಳಿದ್ದಾನೆ (೫)(ಸಮಸ್ತ ವೇದಗಳಿಗೆ ಭಗವದ್ಗುಣೋತ್ಕರ್ಷದಲ್ಲಿಯೇ ಮಹಾ ತಾತ್ಪರ್ಯವನ್ನು ಹೇಳಿದುದರಿಂದ ಶ್ರೀಪರಮಾತ್ಮನಿಗೆ ಜೀವೈಕ್ಯವು ವೇದಾದಿ ಪ್ರಮಾಣಗಳಿಂದಲೂ ಸೂತ್ರ ಇತಿಹಾಸಾದಿಗಳಿಂದಲೂ ವಿರುದ್ಧವಾಗಿದೆ, ಎನ್ನುತ್ತಾರೆ-) **ರೂಪಂ ರೂಪಂ ಪ್ರತಿರೂಪೋ ಬಭೂವ** ಎಂಬುವ ಶ್ರುತಿಯಿಂದ ಜೀವನು ‡ ಪ್ರತಿಬಿಂಬನಾದುದರಿಂದ ಮತ್ಸ್ಯಾದಿ ಭಗವದ್ರೂಪಗಳಿಗೆ ಸಮಾನನಲ್ಲವೇ ಅಲ್ಲ, (ಇದರಿಂದ ಪರಮಾತ್ಮನಿಂದ ಐಕ್ಯವೂ ನಿಷಿದ್ಧವಾಯ್ತು) ॥ ೩ ॥

ಪೀ—ಜೀವಬ್ರಹ್ಮೈಕ್ಯವು ಕೂಡುವುದಿಲ್ಲವೆಂಬುವಲ್ಲಿ ಭಾರತ ಪ್ರಮಾಣವನ್ನು ದಾಹರಿಸುತ್ತಾರೆ—

ಭಾ ॥ (೧) ಜನಮೇಜಯ ಉವಾಚ । ಬಹವಃ ಪುರುಷಾ ಬ್ರಹ್ಮನ್ನುತಾಹೋ ಏಕ ಏವ ತು । ಕೋ ಹ್ಯತ್ರ ಪುರುಷಶ್ರೇಷ್ಠಸ್ತಂ ಭವಾನ್ವಕ್ತುಮರ್ಹತಿ ॥ ವೈಶಂಪಾಯನ ಉವಾಚ । ನೈತದಿಚ್ಛಂತಿ ಪುರುಷಮೇಕಂ ಕುರುಕುಲೋದ್ವಹ । ಬಹೂನಾಂ ಪುರುಷಾಣಾಂ ಹಿ ಯಥೈಕಾ ಯೋನಿರುಚ್ಯತೇ । ತಥಾ ತಂ ಪುರುಷಂ ವಿಶ್ವಮಾಖ್ಯಾಸ್ಯಾಮಿ ಗುಣಾಧಿಕಮಿತಿ ಮೋಕ್ಷಧರ್ಮೇ ॥ (೨) ನ ಚೈತತ್ಸರ್ವಂ ಸ್ವಪ್ನೇಂದ್ರಜಾಲವತ್ ॥ (೩) ವೈಧರ್ಮ್ಯಾಚ್ಚ ನ ಸ್ವಪ್ನಾದಿವದಿತಿ ಭಗವದ್ವಚನಂ ॥ (೪) ನ ಚ

‡ ಪ್ರತಿಬಿಂಬತ್ವವು ಪರಮಾತ್ಮನ ಅಧೀನನಾಗಿದ್ದು ಪರಮಾತ್ಮನಿಗೆ ಸದೃಶನಾಗಿರುವಿಕೆ.

ಸ್ವಪ್ನಾದಿವದೇಕಜೀವಕಲ್ಪಿತತ್ವೇ ಮಾನಂ ಪಶ್ಯಾಮಃ ॥ (೫) ವಿಪರ್ಯಯೇ ಮಾ ತೂಕ್ತಾ ದ್ವಿತೀಯೇ ॥ ೪ ॥

ಅ ॥ (೧) ಜನಮೇಜಯರಾಜನು ವೈಶಂಪಾಯನಾಚಾರ್ಯರೊಡನೆ ಪ್ರಶ್ನೆ ಮಾಡುತ್ತಾನೆ ಎಲೋ ವೈಶಂಪಾಯನಾಚಾರ್ಯರೇ ಲೋಕದಲ್ಲಿ ಬಹುಮಂದಿ ಪುರುಷರೋ, ಅಥವಾ ಒಬ್ಬನೇ ಪುರುಷನೋ, ಬಹುಮಂದಿ ಚೇತನರೋ ಎಂಬುವ ಪಕ್ಷದಲ್ಲಿಯೂ ಅವರಲ್ಲಿ ಎಲ್ಲರೂ ಸಮಾನಿಕರೋ, ಅಥವಾ ಅವರಲ್ಲಿ ಒಬ್ಬನು ಶ್ರೇಷ್ಠನಿದ್ದಾನೋ, ಶ್ರೇಷ್ಠನಿದ್ದಾನೆಂದಾದರೆ=ಆ ಚೇತನರಲ್ಲಿ ಶ್ರೇಷ್ಠನು ಯಾರು? ಅವನು ಹೇಗೆ ಶ್ರೇಷ್ಠನು ಶ್ರೇಷ್ಠತ್ವನಿಮಿತ್ತವಾದ ಧರ್ಮಗಳಿಂದ ಕೂಡಿದ ಪುರುಷನನ್ನು ಹೇಳಬೇಕು, ಎಂದು ಪ್ರಶ್ನಿಸಿದಾಗ ವೈಶಂಪಾಯನಾಚಾರ್ಯರು ಉತ್ತರ ಹೇಳುತ್ತಾರೆ ಎಲೋ ಜನಮೇಜಯನೇ ಈ ಜಗತ್ತಿನಲ್ಲಿ ಒಬ್ಬನೇ ಚೇತನನೆಂಬುವುದನ್ನು ಜ್ಞಾನಿಗಳು ಒಡಂಬಡುವುದಿಲ್ಲ (ಮತ್ತೆ ಬಹು ಚೇತನರು ಇದ್ದಾರೆ) ಆ ಬಹುಚೇತನರ ಮಧ್ಯದಲ್ಲಿ ಯಾರು ಮುಖ್ಯವಾಗಿ ಸರ್ವರಿಗೂ ಕಾರಣಭೂತನೋ, ಸರ್ವರಿಗಿಂತಲೂ ಶ್ರೇಷ್ಠನೋ ಅಂತಹ ಪುರುಷನೆನಿಸಿದ ಶ್ರೀಪರಮಾತ್ಮನನ್ನು ಸರ್ವತ್ರ ವ್ಯಾಪ್ತನನ್ನಾಗಿಯೂ ಸರ್ವಗುಣಪರಿಪೂರ್ಣನನ್ನಾಗಿಯೂ ನಿನಗಾಗಿಯೂ ಹೇಳುವೆನು, ಎಂದು ಮೋಕ್ಷಧರ್ಮದಲ್ಲಿದೆ. (೨) (ಸಂಪೂರ್ಣ ಜಗತ್ತೂ ಸ್ವಪ್ನದಂತೆ ಒಬ್ಬ ಜೀವನ ಅಜ್ಞಾನದಿಂದ ಕಲ್ಪಿತವಾದದ್ದು, ಎಂದು ಏಕ ಜೀವವಾದಿಗಳು ಹೇಳುತ್ತಾರೆ ಇಂದ್ರಜಾಲದಂತೆ ಅನೇಕ ಜೀವರ ಅಜ್ಞಾನದಿಂದ ಪರಿಕಲ್ಪಿತವೆಂದು ಬಹು ಜೀವವಾದಿಗಳು ಹೇಳುತ್ತಾರೆ ತಥಾಚ ನಿಕೃಷ್ಟವಾದ ಜಗತ್ತು ಸುಳ್ಳಾದುದರಿಂದ ಉತ್ಕೃಷ್ಟನಾದವನು ಸುತರಾಂ ಇರಲಾರನು ಆದಕಾರಣ ಸಮಸ್ತ ವೇದಗಳಿಗೆ ಶ್ರೀಪರಮಾತ್ಮನ ಸರ್ವೋತ್ಕರ್ಷದಲ್ಲಿ ಮಹಾ ತಾತ್ಪರ್ಯವೆಂಬುವುದು ಹೇಗೆ ಕೂಡುವುದು? ಎಂದರೆ—) ಸಂಪೂರ್ಣ ಜಗತ್ತು ಸ್ವಾಪ್ನ ಪದಾರ್ಥದಂತೆ ಒಬ್ಬನ ಅಜ್ಞಾನದಿಂದ ಪರಿಕಲ್ಪಿತವೆಂದೂ, ಇಂದ್ರಜಾಲದಂತೆ ಅನೇಕ ಜೀವರ ಅಜ್ಞಾನದಿಂದ ಕಲ್ಪಿತವೆಂದು ಸರ್ವಥಾ ಹೇಳಕೂಡದು (೩) ಪ್ರತ್ಯಕ್ಷಾದಿ ಪ್ರಮಾಣಗಳಿಂದ ಜಗತ್ತೂ ವಾರವಾರ್ಧಿಕವಾಗಿ ಇದೆ ಎಂದು ಸ್ಪಷ್ಟವಾಗಿ ತಿಳಿದು ಬರುವ ಜಗತ್ತೂ ಸ್ವಾಪ್ನ ಪದಾರ್ಥ, ಹಗ್ಗವನ್ನು ಹಾವು ಎಂದು ತಿಳಿದುಕೊಳ್ಳುವುದು ಇತ್ಯಾದಿಗಳಂತೆ ಸುಳ್ಳು ಎಂದು ಸರ್ವಥಾ ಹೇಳಕೂಡದು ಸ್ವಪ್ನಾದಿಗಳಲ್ಲಿ ಉತ್ತರಕಾಲದಲ್ಲಿ ಇದು ಸ್ವಪ್ನವು ಜಾಗ್ರತ್ಪದಾರ್ಥವಲ್ಲ, ಹಗ್ಗವನ್ನು ನೋಡಿ ಹಾವೆಂದು ತಿಳಿದಲ್ಲಿ ಉತ್ತರಕಾಲದಲ್ಲಿ ಇದು ಹಗ್ಗನೇ, ಹಾವಲ್ಲ, ಇದು ಮೊದಲಾದ ಅನುಭವವು ಇದೆ ಎಂದು ಹೇಳುವ **ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್** ಎಂಬುವ ಭಗವದ್ವಚನದಿಂದಲೂ (ಜಗತ್ತಿಗೆ ಸತ್ಯತ್ವವು ಸಿದ್ಧವಾಗುತ್ತದೆ) (೪) ಸ್ವಾಪ್ನ ಪದಾರ್ಥದಂತೆ ಜಗತ್ತು ಒಬ್ಬ ಜೀವನಿಂದ ಕಲ್ಪಿಸಲ್ಪಟ್ಟದೆಂಬುವ ವಿಷಯದಲ್ಲಿಯೂ (ಇಂದ್ರಜಾಲದಂತೆ ಬಹುಜೀವರಿಂದ ಕಲ್ಪಿಸಟ್ಟದ್ದೆಂಬುವ ವಿಷಯದಲ್ಲಿಯೂ) ಯಾವ ಪ್ರಮಾಣವೂ ಇರುವುದಿಲ್ಲ (೫) ಜಗತ್ತೂ ಸತ್ಯವೇ, ಎಂಬುವ ವಿಷಯದಲ್ಲಿ ಅನೇಕ ಅಧ್ಯಾಯದಲ್ಲಿ ಪು ೞರಲ್ಲು **ವಿಶ್ವಂ ಸತ್ಯಂ ಯಚ್ಚಿಕೇತ ಸತ್ಯಮಿತ್** ಇದು ಮೊದಲಾದ ಅನೇಕ ಪ್ರಮಾಣಗಳು ಹೇಳಲ್ಪಟ್ಟವೆ ॥ ೪ ॥

ಹೀ—ಜಗತ್ತು ಸತ್ಯವೇ ಎಂದಾದರ—**ಅವಿದ್ಯಮಾನೋ ಹ್ಯವಭಾತಿ ಹಿ ದ್ವಯೋ ಧ್ಯಾತುರ್ದಿಯಾ ಸ್ವಪ್ನಮನೋರಥೋ ಯಥಾ** ಎಂದು ಭಾಗವತಾದಿ ಪುರಾಣಗಳಲ್ಲಿ ಜಗತ್ತಿಗೆ ಸ್ವಪ್ನಾದಿಗಳ ಸಾಮ್ಯವು ಹೇಳಲ್ಪಟ್ಟದ್ದು ಹೇಗೆ ಎಂದರೆ –

ಭಾ ॥ (೧) ಉಕ್ತಂ ಚಾಯಾಸ್ವಶಾಖಾಯಾಂ । ಸ್ವಪ್ನೋ ಹ ವಾ ಅಯಂ ಚಂಚಲತ್ವಾನ್ನ ಚ ಸ್ವಪ್ನೋ ನಹಿ ವಿಚ್ಛೇದ ಏತದಿತೀತಿ ॥ (೨) ನಾಯಂ ದೋಷಃ । ನ ಹೀಶ್ವರಸ್ಯ

ಜೀವೈಕ್ಯಮುಚ್ಯತೇ ॥ (೩) ಜೀವಸ್ಯ ಹೀಶ್ವರೈಕ್ಯಮಿತಿ ಧ್ಯೇಯಂ ॥ (೪) ತದಪಿ ನ ನಿರುಪಾಧಿಕಂ । ಅತೋ ನ ಪ್ರತಿಬಿಂಬತ್ವವಿರೋಧೈಕ್ಯಂ ॥ (೫) ತಥಾ ಚ ಮಾಧು-ಚ್ಛಂದಸಶ್ರುತಿಃ । ಐಕ್ಯಂ ಚಾಪಿ ಪ್ರಾತಿಬಿಂಬ್ಯೇನ ವಿಷ್ಣೋರ್ಜೀವಸ್ಯೈವೈತದ್ಧೃದ್ಯ-ಪಯೋ ವದಂತೀತಿ ॥ (೬) ಅಹಂಗ್ರಹೋಪಾಸನೇ ಚ ಫಲಾಧಿಕ್ಯಮಾಗ್ನೀಶ್ಯ-ಶ್ರುತಿಸಿದ್ಧಂ ॥ (೭) ಅಹಂಗ್ರಹೋಪಾಸಕಸ್ಯ ಸಾಮ್ಯಮಭ್ಯಾಶೋ ಹ ವಾ ಅಶ್ನುತೇ ನಾತ್ರ ಶಂಕೇತಿ । ತದೀಯೋಽಹಮಿತಿ ಜ್ಞಾನಮಹಂಗ್ರಹ ಇತೀರಿತ ಇತಿ ವಾಮನೇ॥ (೮) ತದ್ವಶತ್ವಾತ್ತು ಸೋಽಸ್ಮೀತಿ ಭೃತ್ಯೈರೇವ ನತು ಸ್ವತ ಇತಿ ಚ । ಪ್ರಾತಿಬಿಂ-ಬ್ಯೇನ ಸೋಽಸ್ಮಿ ಭೃತ್ಯಶ್ಚೇತಿ ಭಾವನಾ । ತಥಾ ಹ್ಯಯಾಸ್ಯಶಾಖಾಯಾಂ । ಭೃತ್ಯಃ-ಶ್ಚಾಹಂ ಪ್ರಾತಿಬಿಂಬ್ಯೇನ ಸೋಽಸ್ಮೀತ್ಯೇವಂ ಹ್ಯುಪಾಸ್ಯಃ ಪರಮಃ ಪುಮಾನ್ಸ ಇತಿ। ಪ್ರಾತಿಬಿಂಬ್ಯಂ ಚ ತತ್ಸಾಮ್ಯಮೇವ ॥ ಜ ॥ ॥ ೨೩,೨೪ ॥

ಅ ॥ (೧) ಈ ಜಗತ್ತು ಅನಿತ್ಯವಾಗಿರುವುದರಿಂದಲೂ ವಿಕಾರವುಳ್ಳದ್ದಾಗಿರುವುದರಿಂದಲೂ ಸ್ವಪ್ನ ಮನೋರಥದಂತೆ ಎಂದು ಹೇಳಲ್ಪಡುತ್ತದೆ. ವಸ್ತುತಃ ಸ್ವಪ್ನಸದೃಶವಲ್ಲ (ಸುಳ್ಳು ಅಲ್ಲ) ಏಕೆಂದರೆ ಎಚ್ಚೆತ್ತಮೇಲೆ ಈ ವಸ್ತುವು ಕನಸಿನಲ್ಲಿಯೇ ತೋರಿದ್ದು. ಜಾಗೃತ್ಪದಾರ್ಥದಲ್ಲಿ ತೋರಿದ ವಸ್ತುವಲ್ಲ, ಎಂದು ಇತ್ಯಾದಿ ರೀತಿಯಿಂದ ಸ್ವಾಪ್ನಾರ್ಥದಲ್ಲಿ ಬಾಧಜ್ಞಾನವು ಇದ್ದಂತೆಯೇ ಈ ಜಗತ್ತೂ ಇಲ್ಲವೆಂದು ಜಗದ್ವಿಷಯದಲ್ಲಿ ಬಾಧಜ್ಞಾನವಿಲ್ಲ (೨) (**ಅಹಂ ಬ್ರಹ್ಮಾಸ್ಮಿ** ಎಂದು ಜೀವನು ಪರಬ್ರಹ್ಮ ನನ್ನು ಉಪಾಸನಾಮಾಡತಕ್ಕುದು ಜೀವನು ಸರ್ವೋತ್ಕೃಷ್ಟನಲ್ಲ ಅಂತಹ ಜೀವನಿಂದ ಐಕ್ಯಹೊಂದಿದ ಶ್ರೀಪರಮಾತ್ಮನು ಸರ್ವೋತ್ತಮನು ಹೇಗೆ ಆದಾನು ಎಂದರೆ—) ಶ್ರೀಪರಮಾತ್ಮನಿಗೆ ಜೀವನಿಂದ ಐಕ್ಯ ವನ್ನು ಯಾವ ಶ್ರುತಿಯೂ ಹೇಳುವುದಿಲ್ಲ ಆದುದರಿಂದ ಶ್ರೀಪರಮಾತ್ಮನಿಗೆ ಸರ್ವೋತ್ಕರ್ಷವೂ ಕೂಡ ಲಾರದೆಂಬುವ ದೋಷವಿಲ್ಲ (೩) ಯದ್ಯಪಿ ಅಹಂ ಬ್ರಹ್ಮಾಸ್ಮಿ ಎಂಬುವ ಶ್ರುತಿಯಲ್ಲಿ ಜೀವನಿಗೆ ಆವಾತತಃ ಬ್ರಹ್ಮೈಕ್ಯವು ತೋರುವುದರಿಂದ ಅಹಂಗ್ರಹೋಪಾಸ್ತಿಯು ಅವಶ್ಯ ಕರ್ತವ್ಯವೆಂದು ತೋರುತ್ತದೆ (೪) ಆದರೂ ಜೀವನಿಗೆ ಪರಬ್ರಹ್ಮನಿಂದ ತೋರುವ ಐಕ್ಯವು ನಿರುಪಚರಿತವಲ್ಲ ಅಂದರೆ ಸ್ವರೂಪೈಕ್ಯರೂಪ ವಾದ ಮುಖ್ಯೈಕ್ಯವಲ್ಲ ಆದಕಾರಣ ಜೀವನಿಗೆ ಪರಮಾತ್ಮನಿಂದ ಸಾಕ್ಷಾದ್ಭೇದವು ವಿವಕ್ಷಿತವಾಗದಿರುವು ದರಿಂದ **ಅಹಂ ಬ್ರಹ್ಮಾಸ್ಮಿ** ಇತ್ಯಾದಿಗಳಲ್ಲಿ ಹೇಳಲ್ಪಡತಕ್ಕ ಐಕ್ಯವು ಪ್ರತಿಬಿಂಬತ್ವಕ್ಕೆ ವಿರೋಧಿಯಲ್ಲ ಮತ್ತೆ ಆಪಾತತಃ ತೋರುವ ಐಕ್ಯವು ಜೀವನಿಗೆ ಶ್ರೀಪರಮಾತ್ಮನ ಪ್ರತಿಬಿಂಬತ್ವರೂಪವಾದುದೇ (ಪ್ರತಿ ಬಿಂಬತ್ವವೆಂದರೆ ಶ್ರೀಪರಮಾತ್ಮನ ಅಧೀನನಾಗಿದ್ದು ಶ್ರೀಪರಮಾತ್ಮನಿಂದ ಯತ್ಕಿಂಚಿತ್ ಸಾದೃಶ್ಯವಿರು ವುದು.) (೫) (ಸಾಕ್ಷಾತ್ ಐಕ್ಯವೆಂದು ಏಕೆ ಅರ್ಥವಾಗಬಾರದು ಪ್ರತಿಬಿಂಬತ್ವರೂಪವೇ ಎಂದು ಏಕೆ ಹೇಳಬೇಕು ಎಂದರೆ—) ಜೀವನಿಗಾದರೂ ಶ್ರೀವಿಷ್ಣುವಿನಿಂದ ಐಕ್ಯವನ್ನು ಋಷಿಗಳು ಏನು ಹೇಳು ತ್ತಾರೋ, ಅದು ಪ್ರತಿಬಿಂಬರೂಪವಾದ ನಿಮಿತ್ತದಿಂದಲೇ, ಎಂದು ಮಾಧುಛಂದಸ ಶ್ರುತಿಯಲ್ಲಿ ಹೇಳಿದೆ (೬) ನಾನು ಶ್ರೀಪರಮಾತ್ಮನ ದಾಸನಾಗಿದ್ದೇನೆ ಎಂಬೀ ಅಹಂಗ್ರಹೋಪಾಸನೆದಲ್ಲಿ ಅಧಿಕಾರಿಗೆ ಫಲವು ಹೆಚ್ಚು ಇದೆ ಎಂಬುವುದು ಆಗ್ನಿವೈಶ್ಯಶ್ರುತಿಸಿದ್ಧವಾಗಿದೆ ನಾನು ಶ್ರೀಪರಮಾತ್ಮನ ಭೃತ್ಯನೆಂದು ಉಪಾ ಸನಾಮಾಡುವವನು ಶೀಘ್ರವಾಗಿ ಅಲ್ಪಕಾಲದಿಂದಲೇ ಶ್ರೀಪರಮಾತ್ಮನ ಸಾಮ್ಯವನ್ನು ಹೊಂದುತ್ತಾನೆ ಈ ವಿಷಯದಲ್ಲಿ ಸಂದೇಹವಿಲ್ಲ ಅಹಂಗ್ರಹೋಪಾಸನೆಗೆ ಶ್ರೀಪರಮಾತ್ಮನ ಸಾರೂಪ್ಯವೇ ಮುಖ್ಯ ಪ್ರಯೋಜನವು ಮುಖ್ಯವಾಗಿ ಐಕ್ಯವನ್ನೇ ಉಪಾಸನೆಮಾಡುವುದೆಂದಾದರೆ **ತಂ ಯಥಾ ಯಥೋ ಪಾಸತೇ ತದೇವ ಭವತಿ** ಎಂದು ಶ್ರುತಿಯಿದ್ದುದರಿಂದ ಚತುರ್ಭುಜತತ್ವಾದಿರೂಪವಾದ ಪರಮಾತ್ಮನ

ಸಾಮ್ಯಶ್ಯ ಹೇಳಿದ್ದು ಕೂಡದೆ ಹೋಗುವುದು) (ಅಹಂಗ್ರಹಃ ಎಂಬುವ ಉಪಾಸನೆಯು ನಾನೇ ಪರ ಮಾತ್ಮನೆಂಬುವ ಮುಖ್ಯೋಪಾಸನೆಯಲ್ಲ, ಮತ್ತೆ ನಾನು ಶ್ರೀಪರಮಾತ್ಮನ ಅಧೀನನೆಂಬುವ ಜ್ಞಾನವೇ ಅಹಂಗ್ರಹಶಬ್ದಾರ್ಥವು, ಎಂದು ವಾಮನಪುರಾಣದಲ್ಲಿದೆ (ಅ) ಜೀವನು ಶ್ರೀಪರಮಾತ್ಮನ ಅಧೀನದಲ್ಲಿ ದ್ದುದರಿಂದ ಶ್ರೀಪರಮಾತ್ಮನ ಅಧೀನನೇ ನಾನಾಗಿದ್ದೇನೆ, ಎಂದು ಭೃತ್ಯರಿಂದಲೇ ಉಪಾಸನಾಮಾಡಲ್ಪಡ ತಕ್ಕವನು. ಜೀವನಿಗೆ ಪರಬ್ರಹ್ಮನಿಂದ ಸಾಕ್ಷಾತ್ ಐಕ್ಯದಿಂದ ಈ ಉಪಾಸನೆಯೆಂದು ಹೇಳಕೂಡದು ಪರಮಾತ್ಮನ ಅಧೀನನಾಗಿದ್ದು ಪರಮಾತ್ಮನ ಕಿಂಚಿತ್ಸಾದೃಶ್ಯವಿದ್ದುದರಿಂದ **ಸೋಽಹಮಸ್ಮಿ** ಎಂದು ಅಹಂಗ್ರಹೋಪಾಸನೆಯು ಅಂದರೆ ಶ್ರೀಪರಮಾತ್ಮನ ಭೃತ್ಯನೆಂದು ಭಾವನೆಯು ಇದೇ ಅಭಿಪ್ರಾಯ ವನ್ನು ಆಚಾರ್ಯಶಾಖೆಯಲ್ಲಿಯೂ ಹೇಳಿದೆ. ಪರಮಾತ್ಮನಿಗೆ ಸದೃಶನಾಗಿ ಪರಮಾತ್ಮನ ಅಧೀನನಾಗಿ ದ್ದರಿಂದ ನಾನು ಶ್ರೀಪರಮಾತ್ಮನ ಭೃತ್ಯನು, ಎಂಬೀ ಭಾವನೆಯಿಂದ ಸರ್ವೋತ್ತಮನಾದ ಪುರುಷಶಬ್ದ ವಾಚ್ಯನಾದ ಶ್ರೀಪರಮಾತ್ಮನನ್ನು **ಸೋಽಹಮಸ್ಮಿ** ಎಂದು ಉಪಾಸನಾ ಮಾಡಬೇಕು ಪ್ರತಿಬಿಂಬ್ಯ ವೆಂದರೆ—ಶ್ರೀಪರಮಾತ್ಮನ ಕಿಂಚಿತ್ಸಾದೃಶ್ಯವಿದ್ದು ಪರಮಾತ್ಮನ ಅಧೀನತ್ವವೇ, ಎಂದು ತಿಳಿಯಬೇಕು ಸರ್ವಥಾ ಐಕ್ಯರೂಪವಲ್ಲ (ಆದುದರಿಂದ ಶ್ರೀಪರಮಾತ್ಮನಿಗೆ ಜೀವನಿಂದಲಾಗಲೀ ಜೀವನಿಗೆ ಪರಮಾತ್ಮ ನಿಂದಲಾಗಲೀ ಮುಖ್ಯೈಕ್ಯವು ಯಾವ ಶ್ರುತಿಯಲ್ಲಿಯೂ ಹೇಳದಿದ್ದುದರಿಂದ ಶ್ರೀಪರಮಾತ್ಮನಿಗೆ ಸರ್ವೋ ತ್ಕರ್ಷದಲ್ಲಿ ಎಲ್ಲಾ ವೇದಗಳಿಗೆ ತಾತ್ಪರ್ಯವಿದೆ ಎಂದು ಹೇಳಿದ್ದಕ್ಕೆ ಯಾವ ವಿರೋಧವೂ ಇಲ್ಲ) ॥ ೨೩, ೨೪ ॥

ಪೀ—ಶ್ರೀಪರಮಾತ್ಮನ ದರ್ಶನಸಾಧನವನ್ನು ಹೇಳುತ್ತಾರೆ—

ಗೀ ॥ ಧ್ಯಾನೇನಾತ್ಮನಿ ಪಶ್ಯಂತಿ ಕೇಚಿದಾತ್ಮಾನಮಾತ್ಮನಾ ।
ಅನ್ಯೇ ಸಾಂಖ್ಯೇನ ಯೋಗೇನ ಕರ್ಮಯೋಗೇನ ಚಾಪರೇ ॥ ೨೫ ॥

ಅ ॥ ಕೇಚಿತ್=ಶಾಸ್ತ್ರಶ್ರವಣ ಮನನಗಳನ್ನು ಮಾಡಿದ ಕೆಲವು ಅಧಿಕಾರಿಗಳು, ಧ್ಯಾನೇನ=ಧ್ಯಾನದಿಂದ, ಆತ್ಮನಾ=ಬುದ್ಧಿಯಿಂದ, ಆತ್ಮಾನಂ=ಶ್ರೀಪರಮಾತ್ಮನನ್ನು, ಆತ್ಮನಿ=ದೇಹದಲ್ಲಿ ಪಶ್ಯಂತಿ= ನೋಡುತ್ತಾರೆ ಅನ್ಯೇ=ಇನ್ನಿತರರ (ಶಾಸ್ತ್ರಜನ್ಯಜ್ಞಾನವಿಲ್ಲದಿದ್ದ ಶಾಸ್ತ್ರಶ್ರವಣಮಾಡಲಿಕ್ಕೆ ಶಕ್ತಿಯಿದ್ದವರು) ಸಾಂಖ್ಯೇನ ಯೋಗೇನ=ಶಾಸ್ತ್ರಗಳಿಂದುಂಟಾಗತಕ್ಕ ಜ್ಞಾನರೂಪ ಉಪಾಯದಿಂದ (ಅಂದರೆ ವೇದಗಳಲ್ಲಿ ಹೇಳಿದ ಭಗವತ್ಸ್ವರೂಪನ ಪರೋಕ್ಷಜ್ಞಾನರೂಪ ಉಪಾಯದಿಂದ ಮತ್ತು ಧ್ಯಾನ ದಿಂದಲೂ ಕೂಡ) ಆತ್ಮಾನಂ=ಶ್ರೀಪರಮಾತ್ಮನನ್ನು, ಪಶ್ಯಂತಿ=ನೋಡುತಾರೆ ಅಪರೇ=ಪ್ರಸ್ತುತಃ ಶಾಸ್ತ್ರಶ್ರವಣಾದಿಗಳನ್ನು ಮಾಡಲಿಕ್ಕೆ ಶಕ್ತಿಯಿಲ್ಲದವರು, ಕರ್ಮಯೋಗೇನ ಚ=ಕರ್ಮರೂಪವಾದ ಉಪಾಯದಿಂದಲೂ ಪರೋಕ್ಷಜ್ಞಾನದಿಂದಲೂ ಧ್ಯಾನದಿಂದಲೂ, ಆತ್ಮಾನಂ=ಶ್ರೀಪರಮಾತ್ಮನನ್ನು, ಪಶ್ಯಂತಿ=ನೋಡುತ್ತಾರೆ

ವಿ ॥ (1) ಶ್ರವಣಾದಿಗಳಿಲ್ಲದ ಕೆಲವು ಅಧಿಕಾರಿಗಳು ಸಾಧುಕರ್ಮಗಳನ್ನು ಮಾಡಿ ಮನಸ್ಸನ್ನು ವೃಥಪಡಿಸಿಕೊಂಡು ಶ್ರೀಪರಮಾತ್ಮನ ಪ್ರಸಾದವನ್ನು ಕೊಂದಿ, ಶ್ರೀಪರಮಾತ್ಮನ ಅನುಗ್ರಹದಿಂದ ಶ್ರವ ಣಾದಿಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದಿ ಆ ಮೇಲೆ ಶಾಸ್ತ್ರ ಶ್ರವಣ ಮನನಾದಿಗಳನ್ನು ಮಾಡಿ ಭಗವಜ್ಞಾನವನ್ನು ಸಂಪಾದಿಸಿಕೊಂಡು ವಿಶೇಷವಾಗಿ ಭಗವಂತನನ್ನು ಧ್ಯಾನಮಾಡಿ ಶ್ರೀಪರಮಾತ್ಮ ನನ್ನು ನೋಡುತ್ತಾರೆ (2) ಧ್ಯಾನ ಮಾಡಲಿಕ್ಕೆ ಅಶಕ್ತರಾದವರು ಜ್ಞಾನವನ್ನು ಸಂಪಾದನ ಮಾಡಿ ಧ್ಯಾನಮಾಡಿ ಪರಮಾತ್ಮನನ್ನೇ ಅಪರೋಕ್ಷೀಕರಿಸುತ್ತಾರೆ ಧ್ಯಾನಮಾಡಲಿಕ್ಕೂ ಅಶಕ್ಯರಾದವರು ಕರ್ಮೋ

ಪಾಯದಿಂದ ಶ್ರವಣಾದಿಗಳನ್ನು ಮಾಡಿ ಶ್ರೀಪರಮಾತ್ಮನನ್ನು ನೋಡಬೇಕು) ಅಥವಾ ಕೆಲವು ಋಷಿಗಳು ತಮ್ಮ ಪ್ರತಿಭೆಯಿಂದಲೂ ಶಾಸ್ತ್ರ ಶ್ರವಣದಿಂದಲೂ ಶ್ರೀಪರಮಾತ್ಮನನ್ನು ತಿಳಿದು ಮನಸ್ಸಿನಿಂದ ಹೃದಯದಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸುತ್ತಾರೆ ನಾರದಾದಿ ಋಷಿಗಳು ಹೃದಯದೊಳಗೂ ಹೊರಗೂ ನೋಡುತ್ತಾರೆ ದೇವತೆಗಳು ವಿಷ್ಣುವಿನ ಪ್ರಸಾದದಿಂದ ಲಬ್ಧವಾದ ಪ್ರತಿಭಾರೂಪವಾದ ಜ್ಞಾನದಿಂದಲೇ ದೇಹದೊಳಗೂ ಹೊರಗೂ ಶ್ರೀಪರಮಾತ್ಮನನ್ನು ನೋಡುತ್ತಾರೆ ಕ್ಷತ್ರಿಯಶ್ರೇಷ್ಠರಾದ ರಾಜರು ಅಶ್ವಮೇಧ ಮೊದಲಾದ ಕರ್ಮರೂಪ ಉಪಾಯದಿಂದಲೂ, ಶಾಸ್ತ್ರ ಶ್ರವಣದಿಂದಲೂ, ಪ್ರತಿಭೆಯಿಂದಲೂ, ನಿತ್ಯದಲ್ಲಿಯೂ ಶ್ರೀಪರಮಾತ್ಮನನ್ನು ಸ್ಮರಣೆಮಾಡುತ್ತಾ ಯಜ್ಞಮಾಡುವ ಕಾಲದಲ್ಲಿ ಹವಿರ್ಭಾಗವನ್ನು ಸ್ವೀಕರಿಸುವುದಕ್ಕಾಗಿ ಬಂದಿರುವ ಶ್ರೀಪರಮಾತ್ಮನನ್ನು ನೋಡುತ್ತಾರೆ ॥ ೨೫ ॥

ಗೀ ॥ ಅನ್ಯೇ ತ್ವೇವಮಜಾನಂತಃ ಶ್ರುತ್ವಾಽನ್ಯೇಭ್ಯ ಉಪಾಸತೇ ।
ತೇಽಪಿ ಚಾತಿತರಂತ್ಯೇವ ಮೃತ್ಯುಂ ಶ್ರುತಿಪರಾಯಣಾಃ ॥ ೨೬ ॥

ಅ ॥ ಅನ್ಯೇ ತು = ಮನುಷ್ಯರಾದರೂ, ಏವಂ = ಹಿಂದೆ ಹೇಳಿದ ಪ್ರಕಾರ, ತಮ್ಮ ಪ್ರತಿಭೆಯ ಬಲದಿಂದ, ಅಜಾನಂತಃ = ಶ್ರೀಪರಮಾತ್ಮನನ್ನು ತಿಳಿಯದವರಾಗಿ, ಅನ್ಯೇಭ್ಯಃ = ಬೇರೆಯವರಿಂದ, ಶ್ರುತ್ವಾ = ಶಾಸ್ತ್ರಶ್ರವಣ ಮನನಗಳನ್ನು ಮಾಡಿ, ಉಪಾಸತೇ = ಧ್ಯಾನ ಮಾಡುತ್ತಾರೆ (ಆ ಮೇಲೆ ಪ್ರತ್ಯಕ್ಷೀಕರಿಸಿಕೊಳ್ಳುತ್ತಾರೆ) ತೇಽಪಿ ಚ = ಅತ್ಯಲ್ಪ ಪ್ರತಿಭೆಯುಳ್ಳವರೂ ಕೂಡ, ಶ್ರುತಿಪರಾಯಣಾಃ = ಮತ್ತು ಮತ್ತು ಶಾಸ್ತ್ರ ಶ್ರವಣಗಳಲ್ಲಿ ಆಸಕ್ತರಾದವರಾಗಿ ಮೃತ್ಯುಂ = ಜನನ ಮರಣಾದಿರೂಪವಾದ ಸಂಸಾರವನ್ನು, ಅತಿತರಂತ್ಯೇವ = ನಿಶ್ಚಯವಾಗಿಯೂ ದಾಟುತ್ತಾರೆ ॥ ೨೬ ॥

ಪೀ — ಅನ್ಯೇ ಸಾಂಖ್ಯೇನ ಯೋಗೇನ ಎಂಬುವಲ್ಲಿ ಕಾಪಿಲ ತಂತ್ರದಲ್ಲಿ ಹೇಳಿದ ಪ್ರಕೃತಿಪುರುಷರ ವಿವೇಕಜ್ಞಾನವು ಸಾಂಖ್ಯವೆನಿಸುತ್ತದೆ, ಎಂದು ಪರರು ವ್ಯಾಖ್ಯಾನಮಾಡಿದ್ದು ಯುಕ್ತವಲ್ಲ ಏಕೆಂದರೆ ಅವೈದಿಕವಾದ ಕಾಪಿಲತಂತ್ರವನ್ನು ಇಲ್ಲಿ ತೆಗೆದುಕೊಂಡಿದ್ದಾರೆಂಬುದು ಕೂಡಲಾರದು ಮತ್ತೆ ಪ್ರಕೃತಿಪುರುಷ ವಿವೇಕ ಜ್ಞಾನವು ಪರಮಾತ್ಮನನ್ನು ನೋಡಲಿಕ್ಕೆ ಪ್ರಧಾನ ಸಾಧನವೆಂಬುವುದೂ ಕೂಡಲಾರದು ಆದ ಕಾರಣ ಸರಿಯಾದ ಅರ್ಥವನ್ನು ಹೇಳುತ್ತಾರೆ

ಭಾ ॥ (೧) ಸಾಂಖ್ಯೇನ ವೇದೋಕ್ತಭಗವತ್ಸ್ವರೂಪಜ್ಞಾನೇನ ॥ (೨) ಕರ್ಮಿಣಾಮಪಿ ಶ್ರುತ್ವಾ ಜ್ಞಾತ್ವಾ ಧ್ಯಾತ್ವಾ ದೃಷ್ಟಿಃ । ಶ್ರಾವಕಾಣಾಂ ಚ ಜ್ಞಾತ್ವಾ ಧ್ಯಾತ್ವಾ । ಸಾಂಖ್ಯಾನಾಂ ಚ ಧ್ಯಾತ್ವಾ ॥ (೩) ತಥಾ ಚ ಗೌಪವನಶ್ರುತಿಃ । ಕರ್ಮಕೃಚ್ಚಾಪಿ ತಚ್ಛ್ರುತ್ವಾ ಜ್ಞಾತ್ವಾ ಧ್ಯಾತ್ವಾನುಪಶ್ಯತಿ । ಶ್ರಾವಕೋಽಪಿ ತಥಾ ಜ್ಞಾತ್ವಾ ಧ್ಯಾತ್ವಾ ಜ್ಞಾನ್ಯಪಿ ಪಶ್ಯತಿ ॥ (೪) ಅನ್ಯಥಾ ತಸ್ಯ ದೃಷ್ಟಿರ್ಹಿ ಕಥಂಚಿನ್ನೋಪಜಾಯತ ಇತಿ । ಅನ್ಯ ಇತ್ಯಶಕ್ತಾನಾಮುಪಾಯದರ್ಶನಾರ್ಥಂ ॥ ೨೫,೨೬ ॥

ಅ ॥ (೧) ಸಾಂಖ್ಯೇನ = ವೇದದಲ್ಲಿ ಹೇಳಿದ ಭಗವದ್ವಿಷಯಕ ಪರೋಕ್ಷಜ್ಞಾನದಿಂದ (೨) (ಧ್ಯಾನೇನ ಎಂಬುವಲ್ಲಿ ಕೇವಲ ಧ್ಯಾನಾದಿಗಳೇ ಶ್ರೀಪರಮಾತ್ಮನನ್ನು ಅಪರೋಕ್ಷೀಕರಿಸಲಿಕ್ಕೆ ಸಾಧನಗಳೆಂದು ಹೇಳುತ್ತದೆ ಎಂಬೀ ಅನ್ಯಥಾ ಪ್ರತೀತಿಯನ್ನು ಹೋಗಲಾಡಿಸುತ್ತಾರೆ—) ಪ್ರಥಮತಃ ಶಾಸ್ತ್ರ ಶ್ರವಣಮಾಡಿಪೆ ಸತ್ಕರ್ಮಮಾಡಿದವರೂ ಶಾಸ್ತ್ರ ಶ್ರವಣ ಮಾಡಿ ಜ್ಞಾನವನ್ನು ಸಂಪಾದಿಸಿ ಧ್ಯಾನಮಾಡಿ

ಭಗವಂತನನ್ನು ಅಪರೋಕ್ಷೀಕರಿಸಬೇಕು ಪ್ರಥಮತಃ ಶಾಸ್ತ್ರ ಶ್ರವಣಮಾಡಿದವರು ಜ್ಞಾನವನ್ನು ಸಂಪಾದಿಸಿ ಧ್ಯಾನಮಾಡಿ ಅಪರೋಕ್ಷೀಕರಿಸಬೇಕು. ಜ್ಞಾನಿಗಳು ಧ್ಯಾನಮಾಡಿ ಅಪರೋಕ್ಷೀಕರಿಸಬೇಕು ಹಾಗೆಯೇ ಗೌಪವನ ಶ್ರುತಿಯು ಹೇಳುತ್ತದೆ ಸತ್ಕರ್ಮಮಾಡಿದವನು ಶಾಸ್ತ್ರವನ್ನು ಶ್ರವಣಮಾಡಿ ಜ್ಞಾನವನ್ನು ಸಂಪಾದಿಸಿ ಧ್ಯಾನಮಾಡಿ ಶ್ರೀಪರಮಾತ್ಮನನ್ನು ಪ್ರತ್ಯಕ್ಷೀಕರಿಸಿಕೊಳ್ಳುತ್ತಾನೆ. ಹಾಗೆಯೇ ಶಾಸ್ತ್ರಶ್ರವಣಮಾಡಿದವನೂ ಜ್ಞಾನವನ್ನು ಹೊಂದಿ ಧ್ಯಾನಮಾಡಿ ಪ್ರತ್ಯಕ್ಷೀಕರಿಸಿಕೊಳ್ಳುತ್ತಾನೆ ಜ್ಞಾನಿಯೂ ಕೂಡ ಧ್ಯಾನಮಾಡಿ ಪರಮಾತ್ಮನನ್ನು ಅಪರೋಕ್ಷೀಕರಿಸಿಕೊಳ್ಳುತ್ತಾನೆ. ಶಾಸ್ತ್ರಶ್ರವಣಾದಿಗಳನ್ನು ಮಾಡದಿದ್ದರೆ ಆತನಿಗೆ ಭಗವಂತನ ಅಪರೋಕ್ಷಜ್ಞಾನವು ಹೇಗೂ ಉಂಟಾಗಲಾರದು. (೪) (ಕೇಚಿತ್ ಅನ್ಯೇ ಪರೇ ಎಂದು ಹೇಳಿದ್ದಕ್ಕೆ ಪ್ರಯೋಜನವನ್ನು ಹೇಳುತ್ತಾರೆ—) ಅನ್ಯೇ ಇತ್ಯಾದಿಗಳು ಧ್ಯಾನಾದಿಗಳಲ್ಲಿ ಅಶಕ್ತರಾದವರಿಗೂ ಉಪಾಯವನ್ನು ತೋರಿಸುವುದಕ್ಕಾಗಿ ಹೇಳಿದ್ದು.

ವಿ ॥ ಧ್ಯಾನಾದಿಗಳಲ್ಲಿ ಪರೋಕ್ಷಜ್ಞಾನಾದಿಗಳಿಗಿಂತ ಉತ್ತರೋತ್ತರ ಸಾಧನಗಳಲ್ಲಿ (ಅಂದರೆ ಜ್ಞಾನವು ಹುಟ್ಟಿದ ಮೇಲೆ ಧ್ಯಾನವು ಶಾಸ್ತ್ರಶ್ರವಣವಾದ ಮೇಲೆ ಜ್ಞಾನವು ಸತ್ಕರ್ಮಗಳನ್ನ ನುಷ್ಠಾನ ಮಾಡಿದ ಮೇಲೆ ಶಾಸ್ತ್ರ ಶ್ರವಣ ಈ ರೀತಿಯಾದ ಸಾಧನಗಳಲ್ಲಿ) ಸಾಕ್ಷಾತ್ ಅಶಕ್ತರಾದವರಿಗೂ ಆವಾವ ಧ್ಯಾನಾದಿಗಳಿಗೆ ಉಪಾಯಭೂತಜ್ಞಾನಾದಿಗಳನ್ನು ತೋರಿಸುವುದಕ್ಕಾಗಿ ಒಬ್ಬನಿಗೇನೇ ಕರ್ಮಿತ್ವ, ಶಾಸ್ತ್ರಶ್ರವಣ ಜ್ಞಾನಿತ್ವ ಧ್ಯಾನಿತ್ವರೂಪವಾದ ಅವಸ್ಥಾಭೇದವನ್ನಾಶ್ರಯಿಸಿ ಅನ್ಯೇ ಇತ್ಯಾದಿಗಳನ್ನು ಹೇಳಿದ್ದು. ॥ ೨೫, ೨೬ ॥

ಪೀ—ಪ್ರಕೃತಿಂ ಪುರುಷಂ ಚೈವ (ಶ್ಲೋ ೨೦) ಇತ್ಯಾದಿ ಅರ್ಧವನ್ನು ಅವಶ್ಯವಾಗಿ ತಿಳಿಯಬೇಕೆಂಬುವ ಇಚ್ಛೆಯನ್ನು ಹುಟ್ಟಿಸುವುದಕ್ಕಾಗಿ ಅದನ್ನು ತಿಳಿದುಕೊಂಡರೆ ಅದಕ್ಕೆ ಫಲವನ್ನು ಯ ಏನಂ (ಶ್ಲೋ ೨೪) ಎಂಬುವ ಶ್ಲೋಕದಿಂದ ಹೇಳುತ್ತಾರೆ ಪ್ರಮಾಣವಚನದಿಂದ ಅದರ ಅರ್ಥವನ್ನು ಹೇಳುತ್ತಾರೆ—

ತಾ ॥ (೧) ದ್ವಿವಿಧಂ ಪುರುಷಂ ಚೈವ ಪ್ರಕೃತಿಂ ದ್ವಿವಿಧಾಮಪಿ । ಸಹ ತತ್ತದ್ಗುಣೈಸ್ಸಮ್ಯಃ ಗ್ಞಾತ್ವಾ ವಕ್ಷ್ಯತಿ ಯಃ ಪುಮಾನ್ । ಸರ್ವಥಾ ವರ್ತಮಾನೋಽಪಿ ನ ಸ ಭೂಯೋಽಭಿಜಾಯತೇ ॥ (೨) ಅನಾದಿಯೋಗ್ಯತಾಭೇದಾತ್ಪುಂಸಾಂ ದರ್ಶನಸಾಧನಂ । ನಾನೈವ ತತ್ರ ವಿಷ್ಣೋಸ್ತು ಪ್ರಸಾದಾದ್ವೈಷ್ಣವಂ ವಪುಃ । ಸ್ವಯಂ ವಿಜ್ಞಾಯತೇ ಕಿಂಚಿಚ್ಛಾಯತೇ ಕಿಂಚಿದನ್ಯತಃ ॥ (೩) ತಥಾ ಜ್ಞಾತ್ವಾ ಹರಿಂ ಧ್ಯಾತ್ವಾ ನ್ವಾಂತಃ ಪಶ್ಯಂತಿ ಕೇಚನ । ಋಷಯಃ ಕೇಚಿದೃಷಯೋ ನಾರದಾದ್ಯಾ ಬಹಿಸ್ತ್ವಪಿ ॥ (೪) ದೇವಾ ವಿಷ್ಣುಪ್ರಸಾದೇನ ಲಬ್ಧ ಸತ್ವತಿಭಾಬಲಾತ್ । ಸರ್ವಂ ಕ್ರಮೇಣ ವಿಜ್ಞಾಯ ಪ್ರತಿಭಾಸ್ಪಷ್ಟತಾಕ್ರಮಾತ್ । ವಕ್ಷ್ಯಂತಿ ಬಹಿರಂತಶ್ಚ ವಿಷ್ಣುಂ ಧ್ಯಾನಮೃತೇಽಪಿ ತು ॥ ॥ ೧ ॥

ಅ ॥ (೧) ಯಾವ ಅಧಿಕಾರಿಯು ಜೀವ ಪರಮಾತ್ಮರೆಂಬ ಇಬ್ಬರು ಪುರುಷರನ್ನೂ, ಜಡಪ್ರಕೃತಿ, ಚಿತ್ಪ್ರಕೃತಿಯಾದ ಲಕ್ಷ್ಮೀದೇವಿ ಇವರಿಬ್ಬರನ್ನೂ ಅವರವರ ಗುಣಗಳಿಂದ ಕೂಡಿಕೊಂಡು ಜೆನ್ನಾಗಿ ಪರೋಕ್ಷವಾಗಿ ತಿಳಿದುಕೊಂಡು ಅಪರೋಕ್ಷನಾಗಿ ತಿಳಿದುಕೊಳ್ಳುತ್ತಾನೋ, ಆತನು ಪ್ರಮಾದದಿಂದ ಅನ್ಯಾಯ ಮಾರ್ಗದಿಂದ ಇದ್ದರೂ ತಿರುಗಿ ಭೂಲೋಕದಲ್ಲಿ ಹುಟ್ಟುವುದಿಲ್ಲ (ಆತನಿಗೆ ಮೋಕ್ಷವು ನಿಯತವೇ) (೨)

(ಸರ್ವೋತ್ಕೃಷ್ಟನಾದ ಶ್ರೀಮನ್ನಾರಾಯಣ ಮೊದಲಾದವರನ್ನು ನೋಡಲಾವಶ್ಯಕವಾದ ಸಾಧನವನ್ನು ಹೇಳುತ್ತಾರೆ-) ಪುರುಷರಿಗೆ ಅನಾದಿಯಿಂದಿರತಕ್ಕ ಯೋಗ್ಯತಾಭೇದದಿಂದ ಭಗವದ್ದರ್ಶನ ಸಾಧನವಾದುದು **ಅನೇಕವಿಧ** (ಅದು ಯಾವುದೆಂದರೆ—) ಅದರಲ್ಲಿ ಶ್ರೀವಿಷ್ಣುವಿನ ಪ್ರಸಾದದಿಂದ ಪರಬ್ರಹ್ಮಸ್ವರೂಪವು ತನ್ನ ಪ್ರತಿಭೆಯಿಂದಲೇ ಸ್ವಲ್ಪ ತಿಳಿಯಲ್ಪಡುತ್ತದೆ ಸ್ವಲ್ಪ ಇತರರಿಂದ ಕೇಳಲ್ಪಡುತ್ತದೆ (೩) ಶ್ರವಣ, ಪ್ರತಿಭಾ ರೂಪ ಎರಡು ಪ್ರಕಾರಗಳಿಂದ ಕೆಲವು ಋಷಿಗಳು ಶ್ರೀರಮಾತ್ಮನನ್ನು ತಿಳಿದು ಧ್ಯಾನಮಾಡಿ ತಮ್ಮ ಹೃದಯದೊಳಗೆ ನೋಡುತ್ತಾರೆ (ಇದರಿಂದ ಧ್ಯಾನೇನಾತ್ಮನಿ (ಶ್ಲೋ ೨೫) ಎಂಬುವ ಶ್ಲೋಕದ ಅರ್ಥವು ಉಕ್ತವಾಯಿತು) (ಕಂಚಿತ್ ಎಂದು ಹೇಳಿದ್ದಿಂದ ಅಂತಹವರಿಗೆ ಧ್ಯಾನವು ಹೊರತು ಬೇರೆ ಸಾಧನಗಳು ಇದ್ದರೂ ಅವುಗಳು ಅಲ್ಪಗಳಾಗಿರುವುದರಿಂದ ಅವುಗಳನ್ನು ಹೇಳಲಿಲ್ಲ (**ಕೇಚನ** ಎಂದದ್ದು ಏತಕ್ಕೆಂದರೆ) ಕೆಲವು ನಾರದ ಮೊದಲಾದ ಋಷಿಗಳಾದರೂ ಹೃದಯದೊಳಗೂ ಹೊರಗೂ ಕೂಡ ನೋಡುತ್ತಾರೆ. (೪) ದೇವತೆಗಳಾದರೂ ಶ್ರೀವಿಷ್ಣುವಿನ ಪ್ರಸಾದದಿಂದ ಹೊಂದಿದ ನಿರ್ದುಷ್ಟವಾದ ಪ್ರತಿಭಾ ಖ್ಯವಾದ ಜ್ಞಾನಸಾಮರ್ಥ್ಯದಿಂದ ಎಲ್ಲಾಕಾರವಾಗಿ ವಿಷ್ಣುವಿನ ಧ್ಯಾನವಿಲ್ಲದೇನೇ ಕಾಲಕ್ರಮದಿಂದ ತಂತಮಗೆ ಯೋಗ್ಯವಾದುದೆಲ್ಲವನ್ನು ತಿಳಿದು ಪ್ರತಿಭೆಯಿಂದ ಕಾಲಕ್ರಮದಿಂದ ಹೆಚ್ಚೆಚ್ಚು ವಿಷಯಗಳನ್ನು ವಿಷಯೀಕರಿಸುವ ಮೂಲಕ ಶ್ರೀವಿಷ್ಣುವನ್ನು ಹೊರಗೂ ಹೃದಯದೊಳಗೂ ನೋಡುತ್ತಾರೆ ॥೧॥

ಹೀ— ದೇವತೆಗಳಿಗೆ ಧ್ಯಾನವಿಲ್ಲದೆ ಭಗವದ್ದರ್ಶನವಾಗುವುದಾದರೆ— ದರ್ಶನಕ್ಕೆ ವಿರೋಧಿಯಾದ ಧ್ಯಾನವನ್ನು ಏಕೆ ಅವರು ಮಾಡುತ್ತಾರೆ ಎಂದರೆ—

ಕಾ ॥ (೧) ಯೇಷಾಂ ಧ್ಯಾನಮೃತೇ ದೃಷ್ಟಿಸ್ತೇಷಾಂ ಧ್ಯಾನೇಽಪಿ ದರ್ಶನಂ । ನ್ಯಾದೇವ ಸಾಂಖ್ಯಯೋಗಾಸ್ತೇ ದೇವಾಃ ॥ (೨) ಬ್ರಹ್ಮಾಽಥಕೋಽತ್ರ ಚ ॥ (೩) ಕೇಚಿತ್ತು ಕ್ರತ್ವಿಯವರಾ ಅಶ್ವಮೇಧಾದಿಕರ್ಮಭಿಃ । ಯಜಂತೋ ಭಕ್ತಿಮಂತಶ್ಚ ಯಜ್ಞಭಾಗಾರ್ಥಮಾಗತಂ । ಶ್ರವಣಪ್ರತಿಭಾಭ್ಯಾಂ ಚ ಸ್ಮರಂತಃ ವುರುಷೋತ್ತಮಂ । ಪಶ್ಯಂತಿ ॥(೪) ಅನ್ಯೇ ತಥಾನ್ಯೇಭ್ಯಃ ಸರ್ವಂ ಶ್ರುತ್ವಾನುಮತ್ಯ ಚ । ಉವಾಸ್ಯೈವ ತು ಪಶ್ಯಂತಿ ನಾನ್ಯಥಾ ತು ಕಥಂಚನ ॥ (೫) ಋಷೀನಾರ್ಜ್ಜಸ್ತಥಾಽರಭ್ಯ ಪ್ರತಿಭಾಽಭ್ಯಧಿಕಾಕ್ರಮಾತ್ । ಯಾವದ್ಬ್ರಹ್ಮಾ ಬ್ರಹ್ಮಣಸ್ತು ಹ್ಯಾಯೋ ನಾಪ್ರತಿಭಾಸಿತಂ ॥ (೬) ವಿಷ್ಣೋಃ ಶ್ರೀತ್ಯರ್ಥಮೇವಾಸ್ಯ ಶ್ರೋತವ್ಯಂ ವಾಯಶೋ ಹರೇಃ ॥ (೭) ಅನ್ಯೇಷಾಂ ಶ್ರವಣಾಚ್ಚಾನ್ಯಾನಂ ಕ್ರಮಶೋ ಮಾನುಷೋತ್ತರಂ । ಅಶ್ಯಲ್ಪಪ್ರತಿಭಾನತ್ವಾನ್ಮಾನುಷಾಃ ಶ್ರುತವೇದಿನಃ । ಸರ್ವೇ ತೇ ದರ್ಶನಾತ್ತಸ್ಮಾತ್ಸ್ವಯೋಗ್ಯಾನ್ಮುಕ್ತಿಗಾನಿನ ಇತಿ ಚ ॥ ೨ ॥

ಅ ॥ (೧) ಯಾರಿಗೆ ಧ್ಯಾನವಿಲ್ಲದೆ ಭಗವದ್ದರ್ಶನವಾಗುತ್ತದೋ, ಅವರಿಗೆ ಕಂಚಿದ್ಧ್ಯಾನವೂ ದರ್ಶನಕ್ಕೆ ಸಾಧನವಾಗುವುದು ಅಂತಹ ದೇವತೆಗಳು ಸಾಂಖ್ಯಯೋಗರೆನಿಸುತ್ತಾರೆ ಅಂದರೆ ಸಾಂಖ್ಯಂ—ಪ್ರತಿಭೆಯು ಯೋಗಃ=ದರ್ಶನೋಪಾಯವು ಯಾರಿಗೋ ಅವರು ಸಾಂಖ್ಯಯೋಗರೆನಿಸುತ್ತಾರೆ

---

೪ ಪ್ರಜ್ಞಾಂ ನವನವೋನ್ಮೇಷ ಶಾಲಿನೀಂ ಸ್ರತಿಭಾಂ ವಿದುಃ ಶಾಸ್ತ್ರಾನುಸಾರಿ ಕೆಚ್ಚೆಚ್ಚು ಭಗವದ್ವಿಷಯಕ ವಿಶೇಷ ವಿಷಯಗಳನ್ನು ವಿಷಯೀಕರಿಸುವ ಪ್ರಜ್ಞೆಯನ್ನು ಪ್ರತಿಭೆ ಎನ್ನುತ್ತಾರೆ

(ಇದರಿಂದ **ಅನ್ಯೇ ಸಾಂಖ್ಯೇನ** ಎಂಬೀ (೨೫) ಶ್ಲೋಕವು ವ್ಯಾಖ್ಯಾತವಾಯಿತು.) (ಅಂತೂ ಪ್ರತಿಭೆಯು ಪ್ರಚುರವಾಗಿ ದರ್ಶನಕ್ಕೆ ಸಾಧನವಾಗಿದ್ದಾಗ್ಯೂ ಧ್ಯಾನವೂ ದರ್ಶನಕ್ಕೆ ಸಾಧನವೇ ಆಗಿದೆ ಧ್ಯಾನವು ಭಗವದ್ದರ್ಶನಕ್ಕೆ ಪ್ರತಿಬಂಧಕವಲ್ಲ.) (೨) (ಶ್ರೀಪರಮಾತ್ಮನು ಸರ್ವೋತ್ತಮನೆಂಬುವ ಪ್ರತಿಭಾವಿಶೇಷವೂ ದೇವತೆಗಳಲ್ಲಿ ಚತುರ್ಮುಖನಿಗೆ ಮುಖ್ಯವಾದುದೆನ್ನುತ್ತಾರೆ—) ಹೆಚ್ಚೆಚ್ಚು ಪ್ರತಿಭೆಯುಳ್ಳ ದೇವತೆಗಳಲ್ಲಿ ಚತುರ್ಮುಖ ಬ್ರಹ್ಮನು ಶ್ರೇಷ್ಠನು (೩) ಕೆಲವು ಕ್ಷತ್ರಿಯ ಶ್ರೇಷ್ಠರಾದ ರಾಜರು ಅಶ್ವಮೇಧ ಮೊದಲಾದ ಕರ್ಮಗಳಿಂದ ಯಜ್ಞಮಾಡುತ್ತಾ ವಿಶೇಷ ಭಕ್ತಿಯುಳ್ಳವರಾಗಿ, ಶಾಸ್ತ್ರಶ್ರವಣ, ಮತ್ತು ತಂತಮ್ಮ ಪ್ರತಿಭಾವಿಶೇಷ, ಇವುಗಳಿಂದಲೂ ಸದಾ ಕ್ಷರಾಕ್ಷರ ಪುರುಷರಿಂದುತ್ತಮನಾದ ಶ್ರೀಪರಮಾತ್ಮನನ್ನು ಸ್ಮರಣೆಮಾಡುತ್ತಾ (ಯಜ್ಞಗಳನ್ನು ಮಾಡುವ ಕಾಲವಲ್ಲಿ ಯಜ್ಞಭಾಗವನ್ನು ಸ್ವೀಕರಿಸುವೆದಕ್ಕಾಗಿ ಬಂದಿರುವ ಶ್ರೀಪರಮಾತ್ಮನನ್ನು ನೋಡುತ್ತಾರೆ (ಇದರಿಂದ **ಕರ್ಮಯೋಗೇನ ಚಾಪರೇ** ಎಂಬುದು ವ್ಯಾಖ್ಯಾತವಾಯಿತು.) (ಇಲ್ಲಿಯೂ ಶಾಸ್ತ್ರಶ್ರವಣ ಪ್ರತಿಭೆಗಳು ಅಲ್ಪಗಳೆಂದು ತಿಳಿಯಬೇಕು.) (೪) ಹಾಗೆಯೇ ಹಿಂದೆ ಹೇಳಿದವರಿಗಿಂತ ಇತರರಾದ ಮನುಷ್ಯರಾದರೂ ತಮ್ಮಿಂದ ಉತ್ತಮರಾದ ಗುರುಗಳಿಂದ ತಂತಮಗೆ ಯೋಗ್ಯವಾದುದೆಲ್ಲಾ ಶಾಸ್ತ್ರಗಳನ್ನು ಶ್ರವಣಮಾಡಿ ಮನನವನ್ನು ಮಾಡಿ ಶ್ರೀಪರಮಾತ್ಮನನ್ನು ಪಾಸನಮಾಡಿಯೇ ಶ್ರೀಪರಮಾತ್ಮನನ್ನು ಪ್ರತ್ಯಕ್ಷೀಕರಿಸಿಕೊಳ್ಳುತ್ತಾರೆ ಶ್ರವಣಾದಿಗಳನ್ನು ಮಾಡದೆ ಹೇಗೂ ಭಗವದ್ದರ್ಶನವಾಗುವುದಿಲ್ಲ (ಇದರಿಂದ **ಅನ್ಯೇ ತ್ವೇವಂ** ಎಂಬೀ ೨೬ನೇ ಶ್ಲೋಕವು ವ್ಯಾಖ್ಯಾತವಾಯಿತು.) (೫) (ಋಷಿಗಳು, ದೇವತೆಗಳು, ರಾಜರು ಇವರ ಪ್ರತಿಭೆಗೆ ವೈಲಕ್ಷಣ್ಯವಿದೆ, ಎನ್ನುತ್ತಾರೆ—) ಶರೀರದೊಳಗೆ ಮಾತ್ರ ಭಗವಂತನನ್ನು ಉಪಾಸನಾ ಮಾಡತಕ್ಕ ಋಷಿಗಳನ್ನು ರಂಭಿಸಿ ಹಾಗೆಯೇ ರಾಜರನ್ನಾ ರಂಭಿಸಿ ದೇವತೆಗಳಿಗೆ ಚತುರ್ಮುಖಬ್ರಹ್ಮ ಪರ್ಯಂತ ಕ್ರಮವಾಗಿ ಪ್ರತಿಭೆಯು ಅಧಿಕವಾಗಿರುತ್ತದೆ ಚತುರ್ಮುಖಬ್ರಹ್ಮನಿಗೆ ಮಾತ್ರ ವ್ಯಾಯಶಃ ವೇದಾದಿಗಳಲ್ಲಿ ಹೇಳಿದ ತತ್ವದಲ್ಲಿ ತಿಳಿಯದಿರುವ ಅಂಶವು ಇರುವುದಿಲ್ಲ (೬) (ಹಾಗಾದರೆ ಚತುರ್ಮುಖ ಬ್ರಹ್ಮನು ಶ್ರೀಪರಮಾತ್ಮನಿಂದ ಶಾಸ್ತ್ರಶ್ರವಣಮಾಡುವುದು ಏತಕ್ಕೆಂದರೆ—) ಚತುರ್ಮುಖಬ್ರಹ್ಮನಿಗೆ ಶ್ರೀಪರಮಾತ್ಮನಿಂದ ಕೇಳುವ ಯಾವುದು ಪ್ರಮೇಯವು ಇದೆಯೋ, ಅದು ವ್ಯಾಯಶಃ ತಿಳಿದಿದ್ದರೂ ಶ್ರೀಪರಮಾತ್ಮನ ಪ್ರೀತಿಗಾಗಿಯೇ ಶಾಸ್ತ್ರಶ್ರವಣ ಮಾಡುವುದು (ತಿಳಿದುಕೊಳ್ಳುವುದಕ್ಕಾಗಿ ಅಲ್ಲ ತನ್ನ ಪ್ರತಿಭೆಯಿಂದಲೇ ಸಕಲ ವೇದಾದಿಗಳ ಅರ್ಥವನ್ನು ತಿಳಿದಿರುತ್ತಾನೆ.) (೭) (ಜ್ಞಾನವು ಹುಟ್ಟುವುದಕ್ಕಾಗಿ ಯಾರು ಕೇಳುವುದೆಂದರೆ -) ಚತುರ್ಮುಖಬ್ರಹ್ಮನಿಗಿಂತ ಇತರರಾದ ಮನುಷ್ಯರಿಗ ಜ್ಞಾನವು ಹೆಚ್ಚು ಹೇಗಾದೀತೋ ಹಾಗೆ ಯೋಗ್ಯತಾಕ್ರಮದಿಂದಲೂ ಪ್ರತಿಭೆಯು ಅಲ್ಪ ಕ್ರಮಾನುಸಾರವಾಗಿಯೂ ಶಾಸ್ತ್ರಶ್ರವಣದಿಂದ ಜ್ಞಾನವುಂಟಾಗುತ್ತದೆ (ಧ್ಯಾನಾದಿ ಉಪಾಯವುಳ್ಳವರೂ ಶ್ರವಣಾದಿಗಳನ್ನೇ ಮಾಡುವುದಾದರ **ಶ್ರುತವೇದಿನಃ** ಶಾಸ್ತ್ರಗಳನ್ನು ತಿಳಿದವರೆಂದು ಹೇಳಿದ್ದು ಹೇಗೆ? ಎಂದರೆ—) ಅತ್ಯಲ್ಪವಾದ ಪ್ರತಿಭೆಯುಳ್ಳವರಾದುದರಿಂದ ಮನುಷ್ಯರು ಮೊದಲೇ ಶಾಸ್ತ್ರಶ್ರವಣ ಮಾಡಿದವರು ಅವರೆಲ್ಲರೂ ತಂತಮಗೆ ಯೋಗ್ಯವಾದ ಭಗವಂತನ ಅಪರೋಕ್ಷವನ್ನು ಹೊಂದಿ ಮೋಕ್ಷವನ್ನು ಹೊಂದುತ್ತಾರೆ. ॥ ೨ ॥

ಪೀ—ಧ್ಯಾನ ಮೊದಲಾದ ಉಪಾಯವುಳ್ಳವರಿಗೂ ಶಾಸ್ತ್ರಶ್ರವಣಾದಿಗಳು ಇವೆ, ಎಂದು ಹೇಳಿದ್ದು ಯುಕ್ತವಲ್ಲ ಹಾಗೆ ಇದ್ದರೆ **ಶ್ರುತ್ವಾನ್ಯೇಭ್ಯಃ** (ಶ್ಲೋ ೨೬) ಎಂದು ವಿಶಿಷ್ಯ ಹೇಳಿದ್ದು ಕೂಡದೆ ಹೋಗುವುದು ಎಂದರೆ—

ತಾ ॥ (೧) ಅನ್ಯೇಷಾಮಪಿ ಕಿಂಚಿಚ್ಛ್ರವಣೇ ವಿದ್ಯಮಾನೇಽಪಿ ಮನುಷ್ಯಾಣಾಮತ್ಯಲ್ಪ-ಪ್ರತಿಭಾನತ್ವಾಚ್ಛ್ರುತ್ವಾನ್ಯೇಭ್ಯ ಇತಿ ವಿಶೇಷಣಂ ॥ (೨) ಮನುಷ್ಯಾಣಾಂ ಪ್ರತಿ-

ಭಾಮೂಲಪ್ರಮಾಣಾಪೇಕ್ಷಾ ಪ್ರಾಯೋ ನ ಸಮ್ಯಗುತ್ಪದ್ಯತೇಽಲ್ಪಾ ಚೇತಿ ಶ್ರುತಿ-ಪರಾಯಣಾ ಇತಿ ॥ (೩) ಅಶ್ರುತಪ್ರತಿಭಾ ಯಸ್ಯ ಶ್ರುತಿಸ್ಮೃತ್ಯವಿರೋಧಿನೀ । ವಿಶ್ರುತಾ ನೃಷು ಜಾತಂ ಚ ತಂ ವಿದ್ಯಾದ್ದೇವಸತ್ತಮಂ ॥ (೪) ಯಶ್ಚ ಸ್ವಮುಖಮಾನೇನ ನ ವಾಧೋ ದೇಹನಾನ್ಯೂನಾನ್ । ಅಷ್ಟಮಾನವತೀ ಸ್ತ್ರೀ ಚ ಷಣ್ಣವತ್ಯಂಗುಲೌ ಪುನಃ । ದಶತಾಲೌ ಸಪ್ತಪಾದೌ ವಿದ್ಯಾತ್ತೌ ಚ ಸುರೋತ್ತಮೌ ॥ (೫) ಯಾವತ್ಪಂಚಾಂಗುಲೋಽನಂ ತದ್ದೇ(ದೆ)ವಮಾನಂ ಕ್ರಮಾತ್ಪರಂ । ಪಾದೇ ತ್ಪಂಗುಲಮಾತ್ರೋನಂ ॥ (೬) ತದೂನಂ ಚತುರಂಗುಲಂ । ಯಾವದೇವೋಪದೇವಾನಾಂ ಪಾದೇ ಚೋನಾಂಗುಲಂ ಪುನಃ ॥ ೩ ॥

ಅ ॥ (೧) ಧ್ಯಾನ ಮೊದಲಾದ ಉಪಾಯವುಳ್ಳವರಿಗೆ ಕಿಂಚಿತ್ ಶ್ರವಣಾದಿಗಳಿದ್ದರೂ ಮನುಷ್ಯರಿಗೆ ಅತ್ಯಲ್ಪ ಪ್ರತಿಭೆಯಿದ್ದುದರಿಂದ (ಶಾಸ್ತ್ರಶ್ರವಣವು ಹೆಚ್ಚು ಇದ್ದ ಪ್ರಯುಕ್ತ) **ಶ್ರುತ್ಯಾಽಽದ್ಯೈಭ್ಯಃ ಉಪಾಸತೇ** ಎಂದು ವಿಶೇಷವಾದ ಉಕ್ತಿಯು ಕೂಡುತ್ತದೆ (೨) (ಮನುಷ್ಯರಿಗೆ **ಶ್ರುತಿಪರಾಯಣಾಃ** (೨೬) ಎಂದು ಶಾಸ್ತ್ರಶ್ರವಣನೇ ಮುಖ್ಯಾಶ್ರಯವೆಂದು ಹೇಳಿದ್ದಿಂದ ಅತ್ಯಲ್ಪ ಪ್ರತಿಭೆಯಾದರೂ ಹೇಗೆ ಕೂಡುತ್ತದೆ, ಎಂದರೆ—) ಮನುಷ್ಯರಿಗೆ ಅತ್ಯಲ್ಪ ಪ್ರತಿಭೆಯು ಇದ್ದರೂ ಆ ಪ್ರತಿಭೆಗೆ ಪ್ರಾಮಾಣ್ಯನಿಶ್ಚಯಕ್ಕಾಗಿ ಮೂಲ ಪ್ರಮಾಣ ಸಂವಾದಾಪೇಕ್ಷೆಯಿದ್ದುದರಿಂದ ಸ್ವಾತಂತ್ರ್ಯವಿಲ್ಲದಿರುವ ಸ್ವಯುಕ್ತವೂ ಪ್ರಾಯಶಃ ಪ್ರತಿಭೆಯು ಅತ್ಯಲ್ಪವಾಗಿರುವುದರಿಂದಲೂ **ಶ್ರುತಿಪರಾಯಣಾಃ** ಎಂಬುವ ವಿಶೇಷಣವು ಕೂಡುತ್ತದೆ (೩) (ಮನುಷ್ಯರಿಗೆ ಪ್ರತಿಭಾಕ್ಕೆ ಮೂಲವಾದ ಪ್ರಮಾಣಾಪೇಕ್ಷೆಯು ಪ್ರಾಯಶಃ ಚೆನ್ನಾಗಿ ಹುಟ್ಟುವುದಿಲ್ಲ ಅಲ್ಪವೂ ಆಗಿದೆ ಎಂದು, ಹೇಳಿದ್ದು ಯುಕ್ತವಲ್ಲ ಪಾಂಡವಾದಿ ಮನುಷ್ಯರು ಶಾಸ್ತ್ರಾರ್ಥವನ್ನು ಕೇಳದಿದ್ದರೂ ಅವರಿಗೆ ಚೆನ್ನಾಗಿ ಬಹುಪ್ರತಿಭೆಯು ಕಂಡದೆ ಎಂಬೀ ಆಶಂಕೆಯನ್ನು ಪ್ರಮಾಣವಾಕ್ಯವನ್ನು ಹೇಳಿ ಪರಿಹರಿಸುತ್ತಾರೆ—) ಯಾರ ಪ್ರತಿಭೆಯು ಶ್ರುತವಾಗದಿದ್ದ ಶಾಸ್ತ್ರಾರ್ಥವನ್ನು ವಿಷಯೀಕರಿಸುತ್ತದೋ, ಸಮಸ್ತ ವೇದಗಳಿಗೂ ಸ್ಮೃತಿಗಳಿಗೂ ಅವಿರುದ್ಧಗಳಾಗಿವೆಯೋ ಸರ್ವತ್ರ ಕೀರ್ತಿಯಿಂದ ವ್ಯಾಪಿಸಿಕೊಂಡಿದೆಯೋ, ಆತನನ್ನು ದೇವೋತ್ತಮನೇ ಮನುಷ್ಯರಲ್ಲಿ ಅವತಾರಮಾಡಿದವನೆನ್ನಾಗಿ ತಿಳಿಯಬೇಕು (ಎವಂಚ ದೇವತೆಗಳ ಲಕ್ಷಣವಾದ ಅಶ್ರುತ ಪ್ರತಿಭೆಯು ಪಾಂಡವಾದಿಗಳು ಇದ್ದಲ್ಲಿ ಇದ್ದುದರಿಂದ ಪಾಂಡವಾದಿಗಳು ಸರ್ವಸಾಧಾರಣ ಮನುಷ್ಯರಲ್ಲ, ಮತ್ತೆ ದೇವಾಂಶರು) (೪) (ದೇವತೆಗಳ ಲಕ್ಷಣಾಂತರಗಳನ್ನು ಹೇಳುತ್ತಾರೆ-) ಯಾವ ಪುರುಷನಿಗೆ ಕುತ್ತಿಗೆಯಿಂದ ಕೆಳಗಿನ ದೇಹದಲ್ಲಿ ತನ್ನ ಮುಖದ ಪರಿಮಾಣದಿಂದ ಒಂಭತ್ತು ಹೆಚ್ಚು ಪರಿಮಾಣವಿದೆಯೋ ಯಾವ ಸ್ತ್ರೀಯರಿಗೆ ಕುತ್ತಿಗೆಯಿಂದ ಕೆಳಗಿನ ದೇಹದಲ್ಲಿ ಪತಿಯ ಮುಖಪರಿಮಾಣದಿಂದ ಎಂಟು ಹೆಚ್ಚು ಪರಿಮಾಣವಿದೆಯೋ ಆ ಸ್ತ್ರೀಪುರುಷರಿಬ್ಬರೂ ತಂತಮ್ಮ ಅಂಗುಲಿಪರಿಮಾಣದಿಂದ ತೊಂಭತ್ತಾರು (೯೬) ಅಂಗುಲ ಪರಿಮಾಣವುಳ್ಳವರು ತಂತಮ್ಮ § ತಾಲಪರಿಮಾಣದಿಂದ ಹತ್ತು (೧೦) ತಾಲ ಪರಿಮಾಣವುಳ್ಳವರು ತಂತಮ್ಮ ಪಾದ ಪರಿಮಾಣದಿಂದ ಏಳು ಪಾದ (ಹೆಜ್ಜೆ) ಪರಿಮಾಣವುಳ್ಳವರು ಇಂತಹವರನ್ನು ದೇವಶ್ರೇಷ್ಠರನ್ನಾಗಿ ತಿಳಿಯಬೇಕು (ಇದು ಲಕ್ಷ್ಮೀನಾರಾಯಣರು, ಬ್ರಹ್ಮವಾಯುಗಳು ಸ್ವರಸ್ವತೀಭಾರತೀಯರು ಈ ದೇವೋತ್ತಮರ ಲಕ್ಷಣವು) (೫) (ಈಗ ಸರ್ವಸಾಮಾನ್ಯವಾಗಿ ಎಲ್ಲಾ ದೇವತೆಗಳ ಲಕ್ಷಣವನ್ನು ಹೇಳುತ್ತಾರೆ—) ದೇವತೆಗಳಿಗೆ ಹೇಳಿದ ೯೬ ಅಂಗುಲವು ಅಧಮಾಧಮ ದೇವತೆಗಳಲ್ಲಿ ಕ್ರಮದಿಂದ ಹ್ರಾಸವಾಗಿ ೯೧ ಅಂಗುಲ ಪರ್ಯಂತವಾಗಿರುವಿ

§ ಮಧ್ಯ ಬೆರಳಿನ ತುದಿಯಿಂದ ಮಣಿಬಂಧ ಪರ್ಯಂತವಾದ ಹಸ್ತವು ತಾಲವೆನಿಸುತ್ತದೆ

ಕೆಯು ಸಾಮಾನ್ಯವಾಗಿ ಎಲ್ಲಾ ದೇವತೆಗಳ ಪರಿಮಾಣವು ಆಗುತ್ತದೆ (ತಥಾಚ ಸಮಸ್ತ ದೇವತೆಗಳ ಲಕ್ಷಣವು ಕ್ರಮದಿಂದ ಹ್ರಾಸವಾಗಿ ಆಂದರೆ೬ ಅಂಗುಲವನ್ನಾರಂಭಿಸಿ ೯೧ ಅಂಗುಲ ಪರಿಮಾಣವುಳ್ಳವರು) ಪಾದದ ಪರಿಮಾಣವಾದರೂ ಕ್ರಮದಿಂದ ಹ್ರಾಸವಾಗಿ ಒಂದು ಅಂಗುಲ ಮಾತ್ರ ಕಡಿಮೆಯಾಗುತ್ತದ ಆಂದರೆ ದೇವತೆಗಳಲ್ಲಿ ಏಳು ಹೆಚ್ಚೆ ಇದ್ದ ಪರಿಮಾಣವು ಕ್ರಮದಿಂದ ಹ್ರಾಸವಾಗಿ ಒಂದು ಅಂಗುಲ ಮಾತ್ರ ಕಡಿಮೆಯಾಗುತ್ತದೆ) (೬) (ಗಂಧರ್ವಾದಿಗಳ ಲಕ್ಷಣವನ್ನು ಹೇಳುತ್ತಾರೆ—) ಕೆಳಗಿನ ದೇವತೆಗಳಿಗೆ ಹೇಳಿದ ೯೧ ಅಂಗುಲ ಪರಮಾಣವು ಕ್ರಮದಿಂದ ಹ್ರಾಸವಾಗಿ ನಾಲ್ಕು ಅಂಗುಲ ಪರಿಮಾಣವು ಕಡಿಮೆಯಾಗುವುದು ಉಪದೇವತೆಗಳ (ಗಂಧರ್ವರ) ಪರಿಮಾಣವಾಗುತ್ತದೆ ಗಂಧರ್ವ ಶ್ರೇಷ್ಠರಲ್ಲಿ ೯೧ ಪೂರ್ಣಪರಿಮಾಣವಿದ್ದು ಕ್ರಮದಿಂದ ಹ್ರಾಸವಾಗಿ (೮೭) ಎಂಭತ್ತೇಳು ಪರಿಮಾಣದ ವರೆಗೆ ಹ್ರಾಸವಾಗುತ್ತದೆ. (ಆಂದರೆ ೯೧ ಆರಂಭಿಸಿ ೮೭ ಪರ್ಯಂತ ಕ್ರಮದಿಂದ ಹ್ರಸಿತವಾದ ಅಂಗುಲ ಪರಿಮಾಣವುಳ್ಳವರು ಗಂಧರ್ವರು) ದೇವ ಗಂಧರ್ವಾದಿಗಳಿಗೂ ಏಳು ಹೆಚ್ಚೆ ಪರಿಮಾಣವು ಕ್ರಮದಿಂದ ಹ್ರಾಸವಾಗಿ ದೇವತೆಗಳಿಗಿಂತ ಪಾದದಲ್ಲಿ ಪುನಃ ಒಂದು ಅಂಗುಲವು ಕಡಿಮೆಯಾಗುತ್ತದೆ ॥ ೩ ॥

ಪೀ—ಮನುಷ್ಯ ಗಂಧರ್ವರು ರಾಜರು, ಮನುಷ್ಯೋತ್ತಮರು ಇವರ ಲಕ್ಷಣವನ್ನು ಹೇಳುತ್ತಾರೆ—

ತಾ ॥ (೧) ತಾವನ್ಮನುಷ್ಯಮಾನಂ ಸ್ಯಾತ್ ॥ (೨) ತತೋಽಧಸ್ತ್ವಾಸುರಂ ಸ್ಮೃತಂ ॥ (೩) ದ್ವಿಚತ್ವಾರ್ಯಧಿಕಂ ತಸ್ಮಾತ್ ಷಣ್ಣವತ್ಯಂಗುಲಾದಧಃ । ಜ್ಞೇಯಮಂಗುಲಮಾನಂ ತದುಪದೇವಾದಿಷು ಸ್ಫುಟಂ ॥ (೪) ದೇವೇಷ್ವನವಜ್ಞೇಯಮೃಷೀಣಾಂ ಚಕ್ರವರ್ತಿನಾಂ ॥ (೫) ಯಾವದ್ಯಾವತ್ಪ್ರಿಯೋ ವಿಷ್ಣೋಸ್ತಾವತ್ಸ್ತ್ರೀಪುಂಸರೂಪಿಣಃ । ಹರೇಃ ಸಾದೃಶ್ಯಮಸ್ಯ ಸ್ಯಾದನಾದಿಕ್ರಮಸುಸ್ಥಿರಮಿತಿ ಚ ॥ ೪ ॥ ॥ ೨೬ ॥

ಅ ॥ (೧) ೮೭ ಅಂಗುಲ ಪರಿಮಾಣವು ಮನುಷ್ಯ ಗಂಧರ್ವರು, ರಾಜರು, ಮನುಷ್ಯೋತ್ತಮರು, ಇವರ ಪರಿಮಾಣವಾಗುತ್ತದೆ (೨) (ಇಲ್ಲಿ ಅಸುರ ಪದದಿಂದ ಏಕಗುಣೋಪಾಸಕರಾದ ಮನುಷ್ಯ ಪರ್ಯಂತ ಮೋಕ್ಷಯೋಗ್ಯರಿಗಿಂತ ಬೇರೆಯವರನ್ನು ಇಟ್ಟುಕೊಳ್ಳಬೇಕು ಆದರಿಂದ ನಿತ್ಯಸಂಸಾರಿಗಳು ವಿವಕ್ಷಿತರಾಗಿದ್ದಾರೆ, ಇಂತಹ ಅಸುರರಿಗೆ ಲಕ್ಷಣವನ್ನು ಹೇಳುತ್ತಾರೆ—) ಎಂಭತ್ತೇಳು ಅಂಗುಲ ೮೭ ಪರಿಮಾಣಕ್ಕಿಂತ ಕಡಿಮೆ ಆಂಗುಲ ಪರಿಮಾಣವು ಆಸುರ ಪರಿಮಾಣವು (೩) (ದೇವತೆಗಳೂ ಗಂಧರ್ವರೂ ಇವರ ಪರಿಮಾಣವನ್ನು ಒಟ್ಟಿಗೆ ಹೇಳುತ್ತಾರೆ—) ೮೭ ಅಂಗುಲ ಪರಿಮಾಣದಿಂದ ಮೇಲೆ ಇರುವ ದೇವಶ್ರೇಷ್ಠರ ಪರಿಮಾಣವಾದ೯೭ ಅಂಗುಲದೆಶೆಯಿಂದ ಕೆಳಗಿರುವ ಎಂಟು ಅಂಗುಲ ಪರಿಮಾಣವು ಸ್ಪಷ್ಟವಾಗಿ ದೇವತೆಗಳೂ ಗಂಧರ್ವರೂ ಇವರ ಪರಿಮಾಣವೆಂದು ತಿಳಿಯಬೇಕು (೪) (ಮನುಷ್ಯ ಗಂಧರ್ವರಿಗಿಂತ ಶ್ರೇಷ್ಠರಾದ ದೇವಗಂಧರ್ವರು, ಚಿರಪಿತೃಗಳು, ಆಜಾನಜದೇವತೆಗಳು, ಅವರಿಗೆ ಸಮರಾದ ಶತಸಂಖ್ಯಾಕದೇವತೆಗಳು ಇವರ ಲಕ್ಷಣವನ್ನು ಹೇಳಿ ಕರ್ಮಜ ದೇವತೆಗಳಿಗೆ ಸಮರಾದ ಋಷ್ಯಾದಿಗಳ ಲಕ್ಷಣವನ್ನು ಹೇಳ ತ್ತಾರೆ—) ತತ್ಪದೇವತೆಗಳಲ್ಲಿ ಅವರರಾದ ದೇವತೆಗಳಿಗೆ ಹೇಗೆ೯೨ ಅಂಗುಲ ಪರಿಮಾಣ ಲಕ್ಷಣವೋ, ಹಾಗೆಯೇ ಚ್ಯವನ ಉಚಥ್ಯ ಮೊದಲಾದ ಋಷಿಗಳಿಗೂ, ಪೃಥು ವೈಹಯ, ಶಶಿಬಿಂದು ಮೊದಲಾದ ಚಕ್ರವರ್ತಿಗಳಿಗೂ ತಿಳಿದುಕೊಳ್ಳಬೇಕು (೫) (ಈ ಲಕ್ಷಣವು ಹೆಚ್ಚು ಕಡಿಮೆಯಾಗಲಿಕ್ಕೆ ಕಾರಣವನ್ನು ಹೇಳುತ್ತಾರೆ) ಸ್ತ್ರೀ ಪುರುಷ ಸ್ವರೂಪವುಳ್ಳ, ಶ್ರೀವಿಷ್ಣುವಿಗೆ ಹೇಗೆ ಹೇಗೆ ಎಷ್ಟೆಷ್ಟು ಜೀವನು ಪ್ರಿಯನಾಗುತ್ತಾನೋ, ಅಷ್ಟಷ್ಟು ಪ್ರೀತಿಯು ಹೆಚ್ಚು ಕಡಿಮೆಯಿದ್ದುದರಿಂದಲೇ, ಸ್ತ್ರೀ ಪುರುಷ ಸ್ವರೂಪವುಳ್ಳ ಈ ಜೀವನಿಗೆ ಪರಮಾತ್ಮನ ಲಕ್ಷಣಕ್ಕೆ ಸದೃಶವಾದ ಲಕ್ಷಣವು ಬರುವುದು

ಅದು ಅನಾದಿಯಾಗಿರತಕ್ಕ ಯೋಗ್ಯತಾಕ್ರಮದಿಂದ ಸುಸ್ಥಿರವಾಗಿದೆ ಅಂದರೆ ನಾಶವಿಲ್ಲದಿದ್ದುದು ಧರ್ಮ ವಿರುವ ಪರ್ಯಂತ ಇರತಕ್ಕುದು (ಅಂದರೆ-ಯಾವಾಗಲೂ ಇರತಕ್ಕುದು) ॥ ೪ ॥ ॥ ೨೬ ॥

ಪೀ—ತಿರುಗಿ ಪ್ರಕೃತಿ, ಪುರುಷ, ಶ್ರೀಪರಮಾತ್ಮರ ಸ್ವರೂಪವನ್ನು ಬಿಡಿಸಿ ಹೇಳುತ್ತಾರೆ—

ಗೀ ॥ ಯಾವತ್ಸಂಜಾಯತೇ ಕಿಂಚಿತ್ಸತ್ತ್ವಂ ಸ್ಥಾವರಜಂಗಮಂ ।
ಕ್ಷೇತ್ರಕ್ಷೇತ್ರಜ್ಞಸಂಯೋಗಾತ್ತದ್ವಿದ್ಧಿ ಭರತರ್ಷಭ ॥ ೨೭ ॥

ಅ ॥ ಭರತರ್ಷಭ=ಭರತಕುಲದಲ್ಲಿ ಶ್ರೇಷ್ಠನಾದ ಅರ್ಜುನನೇ, ಯಾವತ್=ಯಾವ ಯಾವ, ಸ್ಥಾವರಜಂಗಮಂ=ಸ್ಥಿರ ಚರ ಸ್ವರೂಪವಾದ, ಕಿಂಚಿತ್ ಸತ್ವಂ=ಜೀವರ ಸಮುದಾಯವು, (ಇರುತ್ತದೋ) ತತ್=ಆ ಜೀವರ ಸಮುದಾಯವು ಕ್ಷೇತ್ರಕ್ಷೇತ್ರಜ್ಞಸಂಯೋಗಾತ್=ಚಿತ್ಪ್ರಕೃತಿಯಾದ ಲಕ್ಷ್ಮೀದೇವಿಯು, ಶ್ರೀಪರಮಾತ್ಮ ಇವರ ಸಂಬಂಧದಿಂದ, ಸಂಜಾಯತೇ ಇತಿ=ಹುಟ್ಟುತ್ತದೆ ಎಂದು ವಿದ್ಧಿ=ತಿಳಿ. ॥ ೨೭ ॥

ಪೀ—ಸಾಧ್ವಸಾಧುಯೋನಿಗಳಲ್ಲಿ ಯಥಾಯೋಗ್ಯವಾಗಿ ಸಮಸ್ತ ಜೀವರು ಹುಟ್ಟಲಿಕ್ಕೆ ಶ್ರೀಪರಮಾತ್ಮನೇ ಸ್ವತಂತ್ರಕಾರಣನೆಂದು ಹೇಳಿದುದನ್ನು **ಯಾವತ್ಸಂಜಾಯತೇ** ಎಂಬುವ ಶ್ಲೋಕದಿಂದ ವಿವರಿಸುತ್ತಾರೆ ಅದರಲ್ಲಿ ಕ್ಷೇತ್ರಜ್ಞನಾದ ಶ್ರೀಹರಿಗೆ ಕ್ಷೇತ್ರ ಸಂಯೋಗವೆಂದರೆ—ಜಡದೇಹ ಸಂಬಂಧವು ಎಂಬುವ ಅನ್ಯಥಾಸ್ಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ತಾ॥ (೧) ಕ್ಷೇತ್ರಕ್ಷೇತ್ರಜ್ಞಸಂಯೋಗಾದಿತ್ಯತ್ರ ಕ್ಷೇತ್ರಂ ಶ್ರೀಃ । ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ಗರ್ಭಂ ದಧಾಮ್ಯಹಮಿತಿ ವಕ್ಷ್ಯಮಾಣತ್ವಾತ್ ॥ (೨) ಅವ್ಯಕ್ತಂ ಚ ಮಹದ್ಬ್ರಹ್ಮ ಪ್ರಧಾನಂ ಕ್ಷೇತ್ರಮಿತ್ಯಪಿ । ಉಚ್ಯತೇ ಶ್ರೀಃ ಸದಾ ವಿಷ್ಣೋಃ ಪ್ರಿಯಾ ನಿರ್ದೋಷಚಿದ್ಘನಾ । ಸಾ ಹಿ ನ ವ್ಯಜ್ಯತೇ ವಿಷ್ಣುರತ್ರಕ್ಷೇತಿ ಮಹಾಗುಣಾ । ಜೀವೋತ್ತಮಾ ಚ ತೇನೈತೈಃ ಶಬ್ದೈರೇಕಾಽಭಿಧೀಯತೇ ॥ (೩) ಮಹಾನ್ (ಮಹತ್) ಬ್ರಹ್ಮ ಜೀವಮಹಾನ್ ॥ (೪) ಪರಾತ್ಮಪ್ರೇರಿತಾಃ ಕ್ರಿಯಾಃ । ಅಹಂ ಕರ್ತೇತಿ ಯೇನಾಯಂ ಜೀವೋ ಮುಂಸ್ಯತ್ಯಸೌ ಶಿವಃ । ಅಹಂಕಾರ ಇತಿ ಪ್ರೋಕ್ತೋ ಜೀವಾಹಂಮತಿಕೃದ್ಯತಃ ॥ (೫) ಉಮಾ ಬುದ್ಧಿರಿತಿ ಜ್ಞೇಯಾ ಶಬ್ದಾದಿಜ್ಞಾನದಾಯತಃ ॥ ೧ ॥

ಅ ॥ (೧) (ಯಾವತ್ಸಂಜಾಯತೇ ಎಂಬುದರ ವಿವರಣರೂಪವಾದ **ಮಮ ಯೋನಿಃ** (ಅಧ್ಯಾ ೧೪ ಶ್ಲೋ ೩) ಎಂದು ಮೇಲಿನ ಅಧ್ಯಾಯದಲ್ಲಿರತಕ್ಕ ವಾಕ್ಯದಲ್ಲಿ ಲಕ್ಷ್ಮೀನಾರಾಯಣರ ಸಂಯೋಗದಿಂದ ಸಮಸ್ತ ಪ್ರಾಣಿಗಳೂ ಹುಟ್ಟುತ್ತವೆಂದು ಹೇಳಿದುದರಿಂದ **ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಂ** ಲಕ್ಷ್ಮೀದೇವಿಯು ನನ್ನ ಪತ್ನಿಯು ಅವಳಲ್ಲಿ ಗರ್ಭವನ್ನು ಧರಿಸುತ್ತೇನೆಂದು ಮುಂದೆ ಹೇಳುವುದರಿಂದ **ಕ್ಷೇತ್ರ ಕ್ಷೇತ್ರಜ್ಞಸಂಯೋಗಾತ್** ಎಂಬ ವಲ್ಲಿಯೂ ಕ್ಷೇತ್ರಪದದಿಂದ ಲಕ್ಷ್ಮೀದೇವಿಯೇ ಹೇಳಲ್ಪಡುತ್ತಾಳೆ (೨) (ಕ್ಷೇತ್ರ ಶಬ್ದವು ಲಕ್ಷ್ಮೀವಾಚಕ ಎಂಬುವಲ್ಲಿಯೂ **ಮಹಾಭೂತಾನಿ** (ಶ್ಲೋ. ೬) ಇತ್ಯಾದಿಗಳಲ್ಲಿ ಹೇಳಿದ ಅಹಂಕಾರಾದಿ ಶಬ್ದಗಳು ದೇವತಾವಾಚಕಗಳೆಂಬುವ ವಿಷಯದ

ಲ್ಲಿಯೂ ಪ್ರಮಾಣವನ್ನು ತೋರಿಸುತ್ತಾರೆ—) ಅವ್ಯಕ್ತ, ಮಹದ್ಬ್ರಹ್ಮ, ಪ್ರಧಾನ, ಕ್ಷೇತ್ರ, ಈ ಶಬ್ದಗಳಿಂದ ಶ್ರೀಪರಮಾತ್ಮನಿಗೆ ಪ್ರಿಯಳಾದ ಲಕ್ಷ್ಮೀದೇವಿಯೇ ಸದಾ ಹೇಳಿಸಿಕೊಳ್ಳಲ್ಪಡುತ್ತಾಳೆ ಆ ಲಕ್ಷ್ಮೀದೇವಿಯು ಸದಾ ದೋಷಲೇಶವಿಲ್ಲದವಳು ಪ್ರಾಕೃತ ದೇಹಾದಿಸಂಬಂಧರೂಪಗಳಾದ ದೋಷಗಳಿಲ್ಲದಿರುವ ಚಿದಾನಂದಾತ್ಮಕ ದೇಹವುಳ್ಳವಳು. ಎಲ್ಲರಿಗೆ ಸ್ಪಷ್ಟವಾಗಿ ತೋರದಿರುವುದರಿಂದ **ಅವ್ಯಕ್ತ**ಳೆಂದೂ ಶ್ರೀಪರಮಾತ್ಮನು ಲಕ್ಷ್ಮೀದೇವಿಯಲ್ಲಿ ಕ್ಷೇತಿ ಆವಾಸಮಾಡಿಕೊಂಡಿರುವುದರಿಂದ ಕ್ಷೇತ್ರಳೆಂದೂ, ಬ್ರಹ್ಮಾದಿಗಳಿಂದ ಶ್ರೇಷ್ಠ ಹೆಚ್ಚು ಗುಣಗಳುಳ್ಳವಳಾದುದರಿಂದ **ಮಹದ್ಬ್ರಹ್ಮ** ಎಂದೂ ಬ್ರಹ್ಮಾದಿ ಜೀವರಿಗಿಂತ ಉತ್ತಮಳಾದುದರಿಂದ (ಪ್ರಧಾನ) ಳೆಂದೂ ಹೀಗೆ ಈ ಶಬ್ದಗಳಿಂದ ಮುಖ್ಯವಾಗಿ ಲಕ್ಷ್ಮೀದೇವಿಯು ಹೇಳಲ್ಪಡುತ್ತಾಳೆ (೩) ಚತುರ್ಮುಖ ಬ್ರಹ್ಮನು ಮಹತ್ತತ್ವಕ್ಕೆ ಅಭಿಮಾನಿಯಾಗಿರುವುದರಿಂದ, ಮಹಾನ್ ಎಂದೂ, ಬ್ರಹ್ಮಾ ಎಂದೂ, ಜೀವಮಹಾನ್ ಎಂದೂ, ಅನಿಸಿಕೊಳ್ಳುತ್ತಾನೆ, (೪) ಜೀವನು ಪರಮಾತ್ಮನಿಂದ ಪ್ರೇರೇಪಿಸಲ್ಪಟ್ಟ ಕ್ರಿಯೆಗಳನ್ನು ದ್ವೇತಿಸಿ ನಾನು ಮಾಡುವವನೆಂದು ಯಾವ ರುದ್ರನ ಪ್ರೇರಣೆಯಿಂದ ತಿಳಿದುಕೊಳ್ಳುತ್ತಾನೋ, ಈ ಶಿವನು ಜೀವನಿಗೆ ಅಹಂಕರೋಮಿ ಎಂದು ಅಹಂಕಾರವನ್ನು ಹುಟ್ಟಿಸುವವನಾದುದರಿಂದ **ಅಹಂಕಾರ**ನೆಂದೂ ಹೇಳಲ್ಪಡುತ್ತಾನೆ (೫) ಪಾರ್ವತೀ ದೇವಿಯು ಶಬ್ದಾದಿಗಳ ಜ್ಞಾನವನ್ನು ಹುಟ್ಟಿಸುವವಳಾದುದರಿಂದ (ಬೋಧಯತಿ = ಶಬ್ದಾದಿಗಳ ಜ್ಞಾನವನ್ನು ತಿಳಿಸುತ್ತಾಳೆಂಬುವ ವ್ಯುತ್ಪತ್ತಿಯಿಂದ) ಬುದ್ಧಿ ಎನಿಸುತ್ತಾಳೆ ॥ ೧ ॥

ತಾ ॥ (೧) ಮತಿದೋ ಮನ ಉದ್ದಿಷ್ಟ ಇಂದ್ರಃ ಸ್ಕಂದೋಽಪಿ ತತ್ಸುತಃ । ಶ್ರೋತ್ರಂ ತು ಶ್ರಾವಯಂಶ್ಚಂದ್ರಃ ಸ್ಪರ್ಶೋ ವಾಯುಸುತೋ ಮರುತ್ । ಚಕ್ಷುಃ ಸೂರ್ಯಶ್ಚ ಕ್ರಯತಿ ಜಿಹ್ವಾ ವಾರಿಪತಿರ್ಭ್ಯತೇಃ ॥ (೨) ಅಶ್ವಿನೌ ಘ್ರಾಣಮಾಘ್ರಾತೇರ್ವಾಗಗ್ನಿರ್ವಚನಾದಪಿ । ಹಸ್ತೌ ವಾಯುಸುತೌ ಜ್ಞೇಯೌ ಮರುತೌ ಹಾನಿಲಾಭಯೋಃ । ಪಾದೌ ತು ವಿಷ್ಣುನಾಽವಿಷ್ಟೌ ಯಜ್ಞಶಂಭೂ ಶಚೀಸುತೌ । ಪದನಾದೇವ ಪಾಯುಶ್ಚ ಭಕ್ತಸ್ಯೈವಾಪ್ಯಯಾದ್ಯಮಃ । ಸಂತತ್ಯುಪಸ್ಥಿತಿಕೃತೇರುಪಸ್ಥಃ ಸ ಶಿವೋ ಮನುಃ । ವಿನಾಯಕಸ್ತಥಾಽಽಕಾಶೋ ನಿರಾವೃತ್ಯಾ ಪ್ರಕಾಶನಾತ್ ॥ (೩) ಪ್ರಧಾನ ವಾಯುಜೋ ಭೂತವಾಯುರ್ನಾಮ್ನಾ ಮರೀಚಿಕಃ । ಅಗ್ನಿಶ್ಚ ಪೃಥಿವೀ ಚೈವ ಪ್ರಸಿದ್ಧೌ ॥ (೪) ವರುಣೋ ಜಲಂ । ಅದನಾತ್ಪಥನಾಜ್ಜನ್ಮಲಯಪೇತೋಽಸ್ತಥಾಭಿಧಾಃ ॥ ೨ ॥

ಅ ॥ (೧) ಇಂದ್ರನೂ, ಕಾಮರೂಪನಾದ ಸ್ಕಂದನೂ ಕಾಮಪುತ್ರನಾದ ಅನಿರುದ್ಧನೂ, ಜನರ ಬುದ್ಧಿಗೆ ಪ್ರೇರಕರಾದುದರಿಂದ **ಮನಃ** ಎಂದೂ, ಚಂದ್ರನು ಜನರಿಗೆ ಶಬ್ದವನ್ನು ಕೇಳಿಸುವವನಾದುದರಿಂದ **ಶ್ರೋತ್ರ**ನೆಂದೂ, ವಾಯುವಿನ ಪುತ್ರನಾದ ಪ್ರವಹಾಖ್ಯವಾಯುವು ಸ್ಪರ್ಶವನ್ನು ತಿಳಿಸುವುದರಿಂದ **ಸ್ಪರ್ಶ**ನೆಂದೂ, ಸೂರ್ಯನು ಪದಾರ್ಥಗಳನ್ನು ತೋರಿಸುವವನಾದುದರಿಂದ **ಚಕ್ಷುಃ** ಎಂದೂ, ಜಲಾಧಿಪತಿಯಾದ ವರುಣನು ರಸಗಳ ಸಾಕ್ಷಾತ್ಕಾರಕ್ಕೆ ಕಾರಣನಾದುದರಿಂದ **ಜಿಹ್ವಾ** ಎಂದೂ ಅನಿಸಿಕೊಳ್ಳುತ್ತಾನೆ (೨) ಅಶ್ವಿನೀ ದೇವತೆಗಳು ಸುಗಂಧ ದುರ್ಗಂಧಗಳ ಜ್ಞಾನಕ್ಕೆ ಕಾರಣರಾಗಿರುವುದರಿಂದ **ಘ್ರಾಣಂ** ಎಂದೂ, ಅಗ್ನಿಯು ವಚನಗಳಿಗೆ ಪ್ರವರ್ತಕನಾದುದರಿಂದ **ವಾಕ್** ಎಂದೂ, ವಾಯುಪುತ್ರರಾದ ಮರುತ್ ಗಳು ಹಾನಿ ಲಾಭಗಳ ನಿಮಿತ್ತದಿಂದ **ಹಸ್ತೌ** ಎಂದೂ, ಶಚೀಪುತ್ರರಾದ ಶ್ರೀಪರಮಾತ್ಮನಿಂದ ಆವಿಷ್ಟರಾದ ಯಜ್ಞ ಶಂಭುಗಳು ಸಂಚಾರಪ್ರವರ್ತಕರಾದುದರಿಂದ **ಪಾದೌ** ಎಂದೂ ಅನಿಸಿಕೊಳ್ಳುತ್ತಾರೆ ಯ ಮನು

ಉಂಡದ್ದನ್ನೀ ಹೊರಗೊಳಿಸುವ ಸ್ವಭಾವವುಳ್ಳವನಾದುದರಿಂದ **ಹಾಯುಃ** ಎಂದೂ, ಶಿವನು ಮತ್ತು ಮನುವು ಪುತ್ರಾದಿರೂಪವಾದ ಸಂತತಿಗೆ ಉಪಸ್ಥಿತಿಯನ್ನು ಮಾಡುವುದರಿಂದ (ಅಂದರೆ ಕೊಡುವುದರಿಂದ) ಉಪಸ್ಥನೆಂದೂ, ಗಣಪತಿಯು ಜನರ ಸಂಚಾರಕ್ಕೆ ಪ್ರತಿಬಂಧಕವಾಗದಂತೆ ಅವಕಾಶವನ್ನು ಕೊಡುವವನಾದುದರಿಂದ ಮತ್ತು ಭಕ್ತರ ವಿಘ್ನಗಳನ್ನು ಪರಿಹಂಸತಕ್ಕವನಾದುದರಿಂದ **ಅಕಾಶ**ನೆಂದೂ ಅನಿಸುತ್ತಾನೆ (೩) ಪ್ರಧಾನ ವಾಯುವಿನ ಪುತ್ರನಾದ ಮರೀಚಿನಾಮಕನು ಭೂತ ವಾಯುವಿಗೆ ಅಭಿಮಾನಿಯಾಗಿರುವುದರಿಂದಲೂ ಗಾಳಿ ವೀಜಿಸುವುದಕ್ಕೆ ಕಾರಣನಾಗಿರುವುದರಿಂದಲೂ **ಭೂತವಾಯು** ಎಂದು ಹೆಸರುಳ್ಳವನು **ಸರ್ವಭಕ್ಷಕ**ನಾದುದರಿಂದ ಅಗ್ನಿ ಎನಿಸಿಕೊಂಡವನಿಗೆ ಅಭಿಮಾನಿಯು **ವಹ್ನಿಯು** ಎಂದೂ ವಿಸ್ತೃತವಾಗಿರುವುದರಿಂದ ಪೃಥಿವೀ ಎನಿಸಿಕೊಂಡ ಭೂಮಿದೇವಿಗೆ ಅಭಿಮಾನಿನಿಯು **ಧರಾದೇವಿಯು** ಎಂದೂ ಪ್ರಸಿದ್ಧರು. (೪) ವರುಣನು ಉತ್ಪತ್ತಿಗೂ ನಾಶಕ್ಕೂ ಕಾರಣನಾದುದರಿಂದ **ಜಲ**ನೆನಿಸುತ್ತಾನೆ

ವಿ ॥ (1) ಹುಟ್ಟು ಸಾವುಗಳು ಜಲಾಧೀನವೆಂದು ತೋರುವುದರಿಂದ ಜಲಾಭಿಮಾನಿ ದೇವತೆಗೂ ಜನ್ಮ ಲಯ ಕಾರಣತ್ವವು ಸಿದ್ಧವಾಗಿದೆ. (೭) ರೇತಸ್ಸು ರಕ್ತಗಳು ಜಲಾತ್ಮಕಗಳಾಗಿರುವುದರಿಂದ ಗರ್ಭಿಣೀದೇಹದಲ್ಲಿ ಜಲವೃದ್ಧಿಯಾದ ಮೇಲೆಯೇ ಶೀಘ್ರದಲ್ಲಿ ಪ್ರಸವವಾಗುವುದರಿಂದಲೂ ಉತ್ಪತ್ತಿಯು ಜಲಾಧೀನವು (3) ಶರೀರದಲ್ಲಿ ಶೈತ್ಯವ ಜಾಸ್ತಿಯಾಗಿ ತೇಜಸ್ಸು ನೊಂದಿದಾಗ ಸಾವು ಕಂಡದ್ರಿಂದ ನಾಶವೂ ಜಲಾಧೀನವೆಂದು ತಿಳಿಯಬೇಕು ॥ ೨ ॥

ತಾ ॥ (೧) ಶಬ್ದಾದ್ಯಾಃ ಪಂಚಶಿವಜಾಃ ಶಬ್ದನಾತ್ಸ್ಪರ್ಶನಾದಪಿ । ರೂಪಣಾದ್ರಸನಾಚ್ಚೈವ ಗಂಧನಾಚ್ಚ ತಥಾಭಿಧಾಃ ॥ (೨) ಸುಖಂ ಧೃತಿಶ್ಚೇತನಾ ಚ ಸುಖನಾದ್ವಿಧೃತೇರಪಿ । ಚೇತೋ ನೇತೃತ್ವತಶ್ಚೈವ ಮುಖ್ಯನಾಯುಃ ಸರಸ್ವತೀ । ಶ್ರೀಶ್ಚ ॥ (೩)ಇಚ್ಛಾ ಚೈವ ಸಾ ನಾಯೋಃ ಪತ್ನೀ ಶ್ಚೈವಂ(ವ) ಧೃತಿರ್ಮತಾ । ಇಚ್ಛಾದಾನಾತ್ತು ಸೈವೇಚ್ಛಾ ॥ (೪) ಸ್ಥಾನಭೇದಾತ್ತು ದೇವತಾಃ । ಪೃಥಕ್ಪೃಥಕ್ಚ ಕಥ್ಯಂತೇ ಲಕ್ಷ್ಮ್ಯಾದ್ಯಾ ಉದಿತಾ ಅಪಿ ॥ ೩ ॥

ಅ ॥ (೧) ಶಬ್ದ ಪ್ರವರ್ತಕ, ಸ್ಪರ್ಶಪ್ರವರ್ತಕ, ರೂಪಪ್ರವರ್ತಕ, ರಸಪ್ರವರ್ತಕ, ಗಂಧಪ್ರವರ್ತಕರಾದುದರಿಂದ ಶಿವಪುತ್ರರು ಐದು ಮಂದಿ ಬೃಹಸ್ಪತಿ ಅಪಾನ ಮೊದಲಾದವರು ಶಬ್ದಾದಿನಾಮವುಳ್ಳವರು ಶಬ್ದಾದಿಗಳಿಗೆ ಅಭಿಮಾನಿಗಳು (೨) ಮುಖ್ಯವಾಯುವು ಭಕ್ತರಿಗೆ ಸುಖವನ್ನು ಹೊಂದಿಸಿಕೊಡುವುದರಿಂದ **ಸುಖ**ನೆಂದೂ, ಸರಸ್ವತಿಯು ಧೈರ್ಯವನ್ನು ಕೊಡುವವಳಾದುದರಿಂದ ಧೃತಿಯೆಂದೂ ಲಕ್ಷ್ಮೀದೇವಿಯು ಮನಸ್ಸಿಗೆ ಪ್ರೇರಕಳಾದುದರಿಂದ **ಚೇತನಾ** ಎಂದೂ, ಅನ್ನಿಸಿಕೊಳ್ಳುತ್ತಾರೆ (೩) ಲಕ್ಷ್ಮೀದೇವಿಯ ಇಚ್ಛೆಗೆ ಅಭಿಮಾನಿನಿಯಾಗಿರುವುದರಿಂದ **ಇಚ್ಛಾ** ಎಂದು ಅನಿಸುತ್ತಾಳೆ ಸರಸ್ವತಿಯಂತೆ ಮುಖ್ಯಪ್ರಾಣನ ಪತ್ನಿಯಾದ ಭಾರತಿಯೂ ಕೂಡ ಸರ್ವಧಾರಕಳಾದುದರಿಂದ **ಧೃತಿ**ಯೆನಿಸಿಕೊಳ್ಳುತ್ತಾಳೆ ಆ ಲಕ್ಷ್ಮೀಭಾರತೀಯರೇ ಚೇತನರಿಗೆ ಇಚ್ಛೆಯನ್ನು ಕೊಡುವವರಾದುದರಿಂದ **ಇಚ್ಛಾ** ಎಂದೂ ಎನಿಸುತ್ತಾರೆ (೪)(**ಅವ್ಯಕ್ತ**, ಚೇತನಾ ಇಚ್ಛಾದಿ ಶಬ್ದಗಳಿಂದ **ಲಕ್ಷ್ಮೀದೇವಿಯೂ**, ಅಹಂಕಾರ ಉಪಸ್ಥ ಶಬ್ದಗಳಿಂದ **ಶಿವನೂ**, ಸ್ಪರ್ಶ, ಭೂತವಾಯು ಪದಗಳಿಂದ **ಪ್ರವಹನೂ** ಜಿಹ್ವಾ, ಜಲ, ಪದಗಳಿಂದ ವರುಣನೂ, ವಾಕ್ ಅಗ್ನಿ ಪದಗಳಿಂದ **ಅಗ್ನಿಯೂ**, ಹೇಳಲ್ಪಡುವುದಾದರೆ ಕೆಲವು ಕಡೆ ಅವ್ಯಕ್ತವನ್ನು ಹೇಳಿ ಪುನಃ ಚೇತನಾದಿಗಳನ್ನು ಹೇಳುವುದು ಹೇಗೆ? ಎಂದರೆ—) ಲಕ್ಷ್ಮ್ಯಾದಿದೇವತೆಗಳು ಹೇಳಲ್ಪಟ್ಟರೂ ಸ್ಥಾನಭೇದ ಪ್ರಯುಕ್ತ ರೂಪವಿಶೇಷದಿಂದ ಪುನಃಪುನಃ ಪ್ರತ್ಯೇಕಪ್ರತ್ಯೇಕ ಶಬ್ದಾಂತರಗಳಿಂದ ಹೇಳ

ಲ್ಪಡುತ್ತಾರೆ (ಏವಂಚ ಅವ್ಯಕ್ತ ಎನಿಸಿದ ಲಕ್ಷ್ಮೀದೇವಿಗೂ ಇತರರಿಗೂ ಸ್ವಾನಭೇದ ಪ್ರಯುಕ್ತ ರೂಪ ಭೇದವಿದ್ದುದರಿಂದ ಚೇತನಾದಿ ಪದಗಳಿಂದ ಎರಡನೇ ಸಲ ಹೇಳಿದ್ದು ಯುಕ್ತವು) ॥ ೩ ॥

ತಾ ॥ (೧) ದುಃಖದ್ವೇಷೌ ಕಲಿಶ್ಚೈವ ದ್ವಾಪರೌ ಬ್ರಹ್ಮಣಃ ಸುತೌ । ಪ್ರವರಾವಸುರಾಣಾಂ ತೌ ॥ (೨) ಸಂಘಾತಶ್ಚೇತನಾಃ ಪರೇ ॥(೩) ಏತೈರಭಿಮತಂ ಯಚ್ಚ ತತ್ತನ್ನಾಮ್ನಾಽಭಿಧೀಯತೇ ॥ (೪) ಚೇತನಾಚೇತನಂ ತ್ವೇತತ್ಸರ್ವಂ ಕ್ಷೇತ್ರಮಿತೀರಿತಂ । ಕ್ಷಿತಿರೇತದ್ಭಗವತೋ ಯದತಃ ಕ್ಷೇತ್ರಮಿಾರ್ಯತೇ । ಕ್ಷಿಣೋತಿ ತ್ರಾತಿ ಚೈವೈತದ(ತ್ಸೋ)-ತೋ ವಾ ಕ್ಷೇತ್ರಮುಚ್ಯತೇ । ಕ್ಷಿತಿಂ ಕೃತ್ವಾ ತ್ರಾತಿ ಚೈತದತೋ ವಾ ಕ್ಷೇತ್ರಮಿಾರಿತಂ । ಏತಸ್ಮಾತ್ಕ್ಷೀಣಮೇತೇನ ತ್ರಾತಮಿತ್ಯಥವಾ ಪುನಃ ॥ ೪ ॥

ಆ ॥ (೧) ಕಲಿಯು ದುಃಖ ದ್ವೇಷಗಳಿಗೆ ಅಭಿವಮಾನಿಯು ದ್ವಾಪರನು ದ್ವೇಷಾಭಿವಮಾನಿಯು ಇವರಿಬ್ಬರೂ ಚತುರ್ಮುಖನಿಂದಲೇ ಹುಟ್ಟಿದವರು ಅಸುರರಲ್ಲಿ ಕಲಿಯ ಶ್ರೇಷ್ಠನು ಅಂದರೆ ಹೆಚ್ಚು ದುಃಖವುಳ್ಳವನು ಆ ಮೇಲೆ ದ್ವಾಪರನು **ಅತಃ ಕಲೇರನಂತರಃ ಸ ವಿಪ್ರಚಿತ್ತಿನಾಮಕಃ** ಎಂದು ಕಲಿಯ ಅನಂತರ ವಿಪ್ರಚಿತ್ತಿ ಎಂದು ತಾತ್ಪರ್ಯನಿರ್ಣಯದಲ್ಲಿ ಹೇಳಿದ್ದಿಂದ **ದ್ವಾಪರ ವಿಪ್ರಚಿತ್ತಿ** ಗಳು ಸಮರೆಂದು ತಿಳಿಯಬೇಕು) (೨) ಇತರರಾದ ಜೀವರು ಅವರವರ ದೇಹಗಳಿಗೆ ಅಭಿವಮಾನಿಗಳು ಅಥವಾ **ದೇಹೇಂದ್ರಿಯಪ್ರಾಣಧಿಯಾಂ ತ್ರಿಧೈವ ಹ್ಯಭಿವಮಾನಿನಃ** । ಎಂಬುವ ಪ್ರವಮಾಣದಿಂದ ವೈಶ್ವವ ಮೊದಲಾದ ಚೇತನರು ದೇಹಾಭಿವಮಾನಿಗಳು (೩) (ಅವ್ಯಕ್ತಾದಿ ಶಬ್ದಗಳು ಲಕ್ಷ್ಮ್ಯಾದಿವಾಚಕಗಳೇ ಎಂದಾದರೆ --) ಅವ್ಯಕ ಮೊದಲಾದ ಶಬ್ದಗಳಿಂದ ಜಡಪದಾರ್ಥಗಳು ವಾಚ್ಯಗಳೆಂದು ಹೇಳುವುದು ಹೇಗೆ? ಎಂದರೆ)ಜಡಪ್ರಕೃತಿ ಮೊದಲಾದುವುಗಳು ಅವ್ಯಕ್ತಾದಿ ನಾಮಗಳುಳ್ಳ ಲಕ್ಷ್ಮ್ಯಾದಿ ದೇವತೆಗಳಿಂದ ಅಭಿಮನ್ಯಮಾನಗಳಾಗಿರುವುದರಿಂದ ಜಡವಸ್ತುಗಳೂ ಕೂಡ ಅವ್ಯಕ್ತಾದಿ ಶಬ್ದಗಳಿಂದ ಹೇಳಲ್ಪಡುತ್ತವೆ (೪) (**ಏತತ್ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಂ** (ಶ್ಲೋ ೭) ಎಂಬುವಲ್ಲಿ ಇಚ್ಛಾದಿ ವಿಕಾರಗಳಿಂದ ಕೂಡಿದ ಮಹಾಭೂತಾದಿಗಳು ಕ್ಷೇತ್ರವೆನಿಸುತ್ತವೆ, ಎಂದು ಹೇಳಲಾದದ್ದನ್ನು ವಿವರಿಸುತ್ತಾರೆ --) ಈ ಚೇತನಾಚೇತನವೆಲ್ಲವೂ **ಕ್ಷೇತ್ರ**ವೆನಿಸುತ್ತದೆ (1) ಚೇತನಾಚೇತನವೆಲ್ಲವೂ ಶ್ರೀಪರವಾತ್ಮನಿಗೆ ಕ್ಷಿತಿಃ = ಅವಾಸಭೂಮಿಯಾಗಿದೆ ಆದಕಾರಣ ಎಲ್ಲವೂ ಕ್ಷೇತ್ರವೆನಿಸುತ್ತದೆ (2) ಅಥವಾ ಚೇತನಾಚೇತನಾತ್ಮಕ ಸಮಸ್ತ ಜಗತ್ತನ್ನು ಶ್ರೀಪರವಾತ್ಮನು ಪ್ರಳಯಕಾಲದಲ್ಲಿ ನಾಶಗೊಳಿಸುತ್ತಾನೆ ಸ್ಥಿತಿಕಾಲದಲ್ಲಿ ರಕ್ಷಿಸುತ್ತಾನೆ ಹೀಗೆ ಶ್ರೀಪರವಾತ್ಮನಿಂದ ರಕ್ಷಿಸಲ್ಪಡುವುದರಿಂದಲೂ ನಾಶ ಹೊಂದುವುದರಿಂದಲೂ ಚೇತನಾಚೇತನಾತ್ಮಕ ಜಗತ್ತು ಕ್ಷೇತ್ರವೆನಿಸುತ್ತದೆ (3) ಅಥವಾ ಚೇತನಾಚೇತನ ಸಮಸ್ತ ಜಗತ್ತನ್ನು ತನಗೆ ಅವಾಸಸ್ಥಾನವನ್ನಾಗಿ ಮಾಡಿಕೊಂಡು ಅದನ್ನು ತಾನು ರಕ್ಷಿಸುವುದರಿಂದ ಆ ಜಗತ್ತು ಕ್ಷೇತ್ರವೆನಿಸುತ್ತದೆ (4) ಅಥವಾ ಚೇತನಾಚೇತನವು ಶ್ರೀಪರಮಾತ್ಮನಿಗಿಂತ ಅಧಮವು ಶ್ರೀಪರಮಾತ್ಮನಿಂದ ರಕ್ಷಿಸಲ್ಪಡುತ್ತದೆ ಆದಕಾರಣ ಕ್ಷೇತ್ರವೆನಿಸುತ್ತದೆ ॥ ೪ ॥

ಹೀ—ಮಹಾ ಭೂತಾದಿಗಳಂತೆಯೇ ಇಚ್ಛಾದಿಗಳಿಗೂ ಕ್ಷೇತ್ರ ಎಂದು ಹೆಸರು ಇರುವುದಾದರೆ ಇವುಗಳೂ ಅವುಗಳಲ್ಲಿಯೇ ಸೇರುವುದರಿಂದ ವಿಶಿಷ್ಯ ಇಚ್ಛಾದಿಗಳಿಗೆ ವಿಕಾರಗಳೆಂದು ಹೆಸರು ಹೇಳಿದ್ದು ಏಕೆ ಎಂದರೆ —

ತಾ ॥ (೧) ಇಚ್ಛಾದ್ಯಾನಾಂ ಕ್ಷೇತ್ರನಾಮ್ನಾಮಪಿ ನಾಮಾಂತರಂ ಸ್ಮೃತಂ ॥ (೨) ವಿಕಾರಾ(ಶೇಷಾ) ಇತಿ ಯಸ್ಮಾತ್ತೇ ವಿಶೇಷವಿಕೃತಿಸ್ಥಿತಾಃ । ವಿಶೇಷಾತ್ಕ್ರಿಯತೇ ಯಸ್ಮಾ-

ದ್ವಿಕಾರಂ ಕಾರ್ಯಮಂತಿಮಂ(ತಗಂ) । ವಿಗತಂ ಕಾರಣಂ ಚಾ(ವಾ)ತ್ರ ಪುನರ್ನಾ-
ಶಮ್ಪತೇ ಯತಃ ॥ (೩) ತತ್ಸಂಬಂಧಾದ್ವಿಕಾರಾಖ್ಯಾ ಇಚ್ಛಾದ್ಯಾ ಅಭಿಮಾನಿನಃ ।
ಏತತ್ಸರ್ವಂ ಸರ್ವದೈವ ನಿರ್ದೋಷೇಣೈವ ಚಕ್ಷುಷಾ । ಪ್ರೇರಯನ್ನೇವ ಜಾನಾತಿ
ತ(ಯ)ಶ್ಕ್ಷೇತ್ರಜ್ಞೋ ಹರಿಸ್ತತ ಇತಿ ಚ॥(೪) ಯಸ್ಮಾತ್ಸಾ ಶರೀರಮಿತ್ಯಾದಿಶ್ರುತೇಶ್ಚೇ.
ತನಸ್ಯಾಪೀದಂ ಶರೀರಂ ಕೌಂತೇಯೇತಿ ತರೀರತ್ವೋಕ್ತಿರ್ಯುಜ್ಯತೇ ॥ (೫) ಸತ್ತ್ವಂ
ಜೀವಃ ಕ್ವಚಿತ್ಪ್ರೋಕ್ತಃ ಕ್ವಚಿತ್ಸತ್ತ್ವಂ ಜನಾರ್ದನಃ । ಸತ್ತ್ವಂ ನಾಮ ಗುಣಃ ಕ್ವಾಪಿ
ಕ್ವಚಿತ್ಸಾಧುತ್ವಮುಚ್ಯತ ಇತಿ ಶಬ್ದನಿರ್ಣಯೇ ॥ (೬) ತಯೋರನ್ಯಃ ಪಿಪ್ಪಲಂ ಸ್ವಾ-
ದ್ವತ್ತೀತಿ ॥ (೭) ಸತ್ವಮಿತಿ ಚ ಪೈಂಗಿಶ್ರುತಿಃ । ಜನಿ ಪ್ರಾದುರ್ಭಾವ ಇತಿ ಧಾತೋ
ರ್ಜೀವಸ್ಯಾಪಿ ಶರೀರೇ ವ್ಯಕ್ತ್ಯಪೇಕ್ಷಯಾ ಜನಿರ್ಯುಜ್ಯತೇ ॥ ೫ ॥ ॥ ೨೬ ॥

ಅ ॥ (೧) ಇಚ್ಛಾದಿಗಳು ಮಹದಾದಿಗಳಿಗಿಂತ ಹೆಚ್ಚು ವಿಕಾರವುಳ್ಳವುಗಳಾಗಿರುವುದರಿಂದ ಇಚ್ಛಾದಿ
ಗಳಿಗೆ **ಕ್ಷೇತ್ರ** ಎಂದು ಹೆಸರಿದ್ದರೂ **ವಿಕಾರಾಃ** ಎಂದು ನಾಮಾಂತರವನ್ನು ಹೇಳಿದ್ದಾರೆ (೨)
(ಘಟಾದಿಗಳಲ್ಲಿಯೂ ಇಂತಹುದೇ ವಿಕಾರವೆನ್ನುತ್ತಾರೆ—) ಯಾವ ಕಾರಣದಿಂದ ಮಹದಾದಿಗಳ ದೆಶ
ಯಿಂದ ಅತಿಶಯವಾಗಿ ಮಹದಾದಿಗಳು ಅಸಂಸ್ಪೃಷ್ಟಗಳಾಗಿರುವದರಿಂದ ಅವುಗಳ ಸೂಕ್ಷ್ಮರೂಪವು
ನಿತ್ಯವು, ಘಟಾದಿಗಳು ಸಂಸ್ಪೃಷ್ಟಗಳಾಗಿರುವುದರಿಂದ ಅನಿತ್ಯಗಳು, ಇಂತಹ ವಿಶೇಷದಿಂದ ಅಂತ್ಯವಯವಿ
ಯಾದ ಘಟಾದಿಗಳೇ ದ್ರವ್ಯಾಂತರಕ್ಕೆ ಕಾರಣಗಳಾಗದೆ ಇರುವುದರಿಂದ ತನ್ನ ನಾಶ ಹೊರತು ಆದರಿಂದ
ಮತ್ತೊಂದು ಕಾರ್ಯದ್ರವ್ಯವು ಹುಟ್ಟದಿರುವುದರಿಂದ ವಿಕಾರವೆನಿಸುತ್ತದೆ ಏನಂಚ ಕಾರಣತ್ವವಿಲ್ಲದಿರುವ
ದರಿಂದ ವಿಕಾರ ಎಂದು ಹೆಸರು (೩) (ಅಭಿಮಾನಿ ದೇವತೆಗಳಿಗೂ ಇಚ್ಛಾದಿ ಶಬ್ದವಾಚ್ಯತ್ವವಿದ್ದುದರಿಂದ
ಅವರಿಗೆ ವಿಕಾರತ್ವವು ಹೇಗೆಂದರೆ—) ಇಚ್ಛಾ ಮೊದಲಾದ ಅಭಿಮಾನಿದೇವತೆಗಳಿಗೂ ಆ ವಸ್ತುಗಳಿಗೂ
ನಿಯಮ್ಯ ನಿಯಾಮಕಭಾವ ಸಂಬಂಧವಿದ್ದುದರಿಂದ ದೇವತೆಗಳಿಗೆ **ವಿಕಾರ** ಎಂದು ಹೆಸರು ಇದ ಇದೆ
ಲ್ಲವನ್ನು, ಶ್ರೀಪರಮಾತ್ಮನು ಯಾವಾಗಲೂ ಸರ್ವರಿಗೂ ಪ್ರೇರೇಪಿಸುವವನಾಗಿಯೇ ಪಾರತಂತ್ರ್ಯ ಮೊದ
ಲಾದ ದೋಷಗಳೂ ಇಲ್ಲದಿರುವ ಕಣ್ಣಿನಿಂದಲೇ ನೋಡುತ್ತಾನೆ ಆದಕಾರಣ ಕ್ಷೇತ್ರಜ್ಞನೆನಿಸುತ್ತಾನೆ
(೪) (ಚೇತನಾಚೇತನವೆಲ್ಲವೂ ಕ್ಷೇತ್ರವೆಂದದ್ದು ಯುಕ್ತವಲ್ಲ **ಹಿಂಸಾಹೇತುಶ್ಚ ಜೀವಸ್ಯ** ಎಂದು
ಹೇಳಿದ ಅರ್ಧವು ಚೇತನನಲ್ಲಿ ಕೂಡದಿರುವುದರಿಂದ ಚೇತನನಿಗೆ **ಇದಂ ಶರೀರಂ** ಎಂದು ಹೇಳಿದ ಶರೀ
ರತ್ವವು ಕೂಡಲಾರದೆಂದರೆ -) ಯಾವ ಶ್ರೀಪರಮಾತ್ಮನಿಗೆ ಜೀವನು ಶರೀರಸ್ಥಾನೀಯನು, ಇದು ಮೊದ
ಲಾದ ಶ್ರುತಿಗಳಿಂದ (ಜೀವನಿಗೆ ಹಿಂಸಾಹೇತುರೂಪವಾದ ಶರೀರತ್ವವು ಕೂಡದಿದ್ದರೂ **ಪೃಥಿವ್ಯಾದ್ಯಾ
ದೇವತಾಸ್ತು ದೇಹನದ್ಯದ್ಯಶತ್ವತಃ** ಎಂದು ಹೇಳಿದ ಪ್ರಕಾರ ಭಗವಂತನ ಅಧೀನತ್ವರೂಪವಾದ ಶರೀರ
ತ್ವವು ಕೂಡುವುದರಿಂದ) ಜೀವರಿಗೂ ಕೂಡ **ಇದಂ ಶರೀರಂ ಕೌಂತೇಯ** ಎಂದು ಹೇಳಿದ ಶರೀರತ್ವವು
ಕೂಡುತ್ತದೆ (೫) (**ಯಾವತ್ಸಂಜಾಯತೇ ಕಿಂಚಿತ್** ಎಂಬುವಲ್ಲಿ ಸತ್ವ ಶಬ್ದವು ಜೀವವಾಚಕವೆಂಬು
ವಲ್ಲಿ ಪ್ರಮಾಣ ಹೇಳುತ್ತಾರೆ) ಕೆಲವು ಕಡೆ ಸತ್ವ ಶಬ್ದದಿಂದ ಜೀವನೂ, ಕೆಲವು ಕಡೆ ಶ್ರೀಜನಾರ್ದ
ನನೂ, ಕ್ವಚಿತ್ ಸತ್ವಗುಣವೂ, ಕೆಲವು ಕಡೆ ಸಾಧುತ್ವವೂ, ಹೇಳಲ್ಪಡುತ್ತದೆಂದು ಶಬ್ದನಿರ್ಣಯದಲ್ಲಿವೆ
(೬) ಜೀವ ಪರಮಾತ್ಮರಲ್ಲಿ ಒಬ್ಬನು ದೇಹದಿಂದುಂಟಾದ ಕರ್ಮಫಲವನ್ನು ಅಸ್ವಾದುವಾದಾಗ್ಯೂ ಸ್ವಾದು
ವಾಗಿಯೋ ಉಣ್ಣುತ್ತಾನೆ ಎಂಬುವಲ್ಲಿ ತಯೋರನ್ಯಃ = ಎಂದು ಅಧರ್ವಣದಲ್ಲಿ ಹೇಳಿದ ಜೀವನನ್ನು **ಸತ್ವಂ**
ಎಂದು ಪೈಂಗಿ ಶ್ರುತಿಯಲ್ಲಿ ಹೇಳಿದ್ದಾರೆ (೭) (ಸತ್ವ ಶಬ್ದದಿಂದ ಜೀವನನ್ನು ಇಟ್ಟುಕೊಂಡರೆ ಜೀವನು
ಅನಾದಿಯಾಗಿರುವುದರಿಂದ **ಯಾವತ್ಸಂಜಾಯತೇ** ಎಂದು ಹೇಳಿದ ಉತ್ಪತ್ತಿಯು ಕೂಡಲಾರದೆಂದರೆ-)

ಪ್ರಾದುರ್ಭಾವಾರ್ಥಕವಾದ ಜನಿಧಾತುವಿನಿಂದ ಜೀವನಿಗೂ ಶರೀರದಲ್ಲಿ ಅಭಿವ್ಯಕ್ತಿಯಾಗುವುದರಿಂದ **ಸಂಜಾಯತೇ** ಎಂದು ಹೇಳಿದ ಜನಿಯು ಕೂಡುತ್ತದೆ ॥ ೨೭ ॥

ಪೀ – ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಎಂದು ಶ್ರೀಪರಮಾತ್ಮನು ಸರ್ವರ ಶರೀರದಲ್ಲಿದ್ದಾನೆಂದು ಹೇಳಿದ್ದು ಯುಕ್ತವಲ್ಲ ಹಾಗಿದ್ದರೆ – ಆವಾವ ವಸ್ತುಗಳ ತಾರತಮ್ಯವಿದ್ದ ಪ್ರಯುಕ್ತ ಶ್ರೀಪರಮಾತ್ಮನಿಗೆ ತಾರತಮ್ಯವೂ ಮತ್ತು ದುಃಖಿಗಳೊಂದಿಗೆ ಇದ್ದುದರಿಂದ ಶ್ರೀಪರಮಾತ್ಮನಿಗೆ ದುಃಖವೂ ಬರಬೇಕಾಗುವುದು ಎಂದರೆ—

ಗೀ ॥ ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಂ ।
ವಿನಶ್ಯತ್ಸ್ವವಿನಶ್ಯಂತಂ ಯಃ ಪಶ್ಯತಿ ಸ ಪಶ್ಯತಿ ॥ ೨೮ ॥

ಅ ॥ ಯಃ = ಯಾವ ಅಧಿಕಾರಿಯು ಸರ್ವೇಷು ಭೂತೇಷು = ನೀಚೋಚ್ಚಭಾವವಿರುವ ಎಲ್ಲಾ ಪ್ರಾಣಿಗಳಲ್ಲಿಯೂ, ತಿಷ್ಠಂತಂ = ಇರುವ ಪರಮೇಶ್ವರಂ = ಅಚಿಂತ್ಯ ಶಕ್ತಿಯುಳ್ಳ ಶ್ರೀಪರಮಾತ್ಮನನ್ನು, ಸಮಂ = ನ್ಯೂನಾಧಿಕಭಾವವಿಲ್ಲದಿರುವವನನ್ನಾಗಿಯೂ, ಎಲ್ಲಾ ಪ್ರಾಣಿಗಳಲ್ಲಿ ಇದ್ದರೂ ಸಮಸ್ತ ಸದ್ಗುಣಗಳಿಂದಲೇ ಕೂಡಿದವನನ್ನಾಗಿಯೂ, ಪಶ್ಯತಿ = ನೋಡುತ್ತಾನೋ, ಮತ್ತು ವಿನಶ್ಯತ್ಸು = ಸುಖ ದುಃಖ ಜನನ ಮರಣ ಮೊದಲಾದ ದೋಷಗಳುಳ್ಳ ಪ್ರಾಣಿಗಳಲ್ಲಿರುವ ಶ್ರೀಪರಮಾತ್ಮನನ್ನು, ಅವಿನಶ್ಯಂತಂ = ದುಃಖಾದಿ ದೋಷರಹಿತನನ್ನಾಗಿಯೂ, ಪಶ್ಯತಿ = ತಿಳಿಯುತ್ತಾನೋ, ಸಃ = ಆತನೇ, ಪಶ್ಯತಿ = ಭಗವದ್ವಿಷಯಕ ಯಥಾರ್ಥಜ್ಞಾನವುಳ್ಳವನು ॥ ೨೮ ॥

ಪೀ – ಇಂತಹ ಸಾಮ್ಯಾದಿ ಜ್ಞಾನಕ್ಕೆ ಫಲವನ್ನು ಹೇಳುತ್ತಾರೆ—

ಗೀ ॥ ಸಮಂ ಪಶ್ಯನ್ಹಿ ಸರ್ವತ್ರ ಸಮವಸ್ಥಿತಮೀಶ್ವರಂ ।
ನ ಹಿನಸ್ತ್ಯಾತ್ಮನಾತ್ಮಾನಂ ತತೋ ಯಾತಿ ಪರಾಂ ಗತಿಂ ॥ ೨೯ ॥

ಅ ॥ ಸರ್ವತ್ರ = ಚೇತನ ಅಚೇತನ ನಿಖಿಲ ವಸ್ತುಗಳಲ್ಲಿಯೂ, ಸಮವಸ್ಥಿತಂ = ದುಃಖಾದಿ ದೋಷ ರಹಿತನೂ ಸರ್ವಗುಣಪರಿಪೂರ್ಣನೂ ಆಗಿಯೇ ಚನ್ನಾಗಿ ನಿಯಾಮಕನಾಗಿರುವ, ಈಶ್ವರಂ = ಸರ್ವಸ್ವಾಮಿಯಾದ ಶ್ರೀಪರಮಾತ್ಮನನ್ನು ಸಮಂ = ಸಮಸ್ತವಸ್ತುಗಳಲ್ಲಿಯೂ ನಿರ್ದೋಷನೂ ಸರ್ವಗುಣ ಪರಿಪೂರ್ಣನೂ ಎಂದು ಒಂದೇ ಪ್ರಕಾರ ಇರುವವನನ್ನಾಗಿಯೂ, ಪಶ್ಯನ್ = ತಿಳಿಯುವ ಅಧಿಕಾರಿಯು, ಆತ್ಮನಾ = ಬುದ್ಧಿಯಿಂದ, ಆತ್ಮಾನಂ = ತನ್ನನ್ನು, ನ ಹಿನಸ್ತಿ = ನರಕದಲ್ಲಿ ಕೆಡಹಾಕಿಕೊಳ್ಳುವುದಿಲ್ಲ ತತಃ = ಇಂತಹ ಭಗವದ್ವಿಷಯಕ ಜ್ಞಾನದಿಂದ ಪರಾಂ ಗತಿಂ = ಮುಕ್ತಿಯನ್ನು ಕೂಡ, ಯಾತಿ = ಹೊಂದುತ್ತಾನೆ ॥ ೨೯ ॥

ಭಾ ॥ ಪುನಶ್ಚ ಪ್ರಕೃತಿಪುರುಷೇಶ್ವರಸ್ವರೂಪಂ ಸಾಮ್ಯಾದಿಧರ್ಮಯುಕ್ತಮಾಹ । ಯಾವದಿತ್ಯಾದಿನಾ ॥ ೨೭,೨೮,೨೯ ॥

ಅ ॥ ಯಾವತ್ಸಂಜಾಯತೇ ಇತ್ಯಾದಿಗಳಿಂದ ತಿರುಗಿ ಪ್ರಕೃತಿ ಪುರುಷ ಪರಮಾತ್ಮ ಇವರ ಸ್ವರೂಪವನ್ನು ಸಾಮ್ಯ ಮೊದಲಾದ ಧರ್ಮಗಳಿಂದೊಡಗೂಡಿದುದನ್ನಾಗಿ ಹೇಳುತ್ತಾರೆ (ಅಂದರೆ

ಸಮಸ್ತ ಕಾರ್ಯಗಳ ಉಪಾದಾನಕಾರಣತ್ವವು ಪ್ರಕೃತಿಧರ್ಮವು ಜಡಪ್ರಕೃತಿಯೇ ಉಪಾದಾನಕಾರಣವಾಗಿ ಉಳ್ಳ ದೇಹ ಇಂದ್ರಿಯಾದಿಗಳ ಸಂಬಂಧವು ಜೀವರ ಧರ್ಮವು ಇಂತಹ ಪ್ರಕೃತಿ ಪುರುಷರ ಧರ್ಮಕ್ಕಿಂತ ಶ್ರೀಪರಮಾತ್ಮನ ಧರ್ಮವು ವಿಲಕ್ಷಣವಾದುದು. ಅಂದರೆ ಸರ್ವತ್ರ ಇರತಕ್ಕ ಶ್ರೀಪರಮಾತ್ಮನಿಗೆ ದೋಷಲೇಶವಿಲ್ಲದಿರ-ುವುದರಿಂದಲೂ ಸರ್ವ ಗುಣಪರಿಪೂರ್ಣತ್ವವಿದ್ದುದರಿಂದಲೂ ಸರ್ವತ್ರ ಸಾಮ್ಯವು ಇದು ಶ್ರೀಪರಮಾತ್ಮನ ಧರ್ಮವು ॥ ೨೭—೨೯ ॥

ತಾ ॥ (೧) ಜೀವೇಷು ದುಃಖಯೋಗಾದಿರೂಪೇಣ ವಿನಶ್ಯತ್ಸ್ವಪ್ಯತಥಾಭೂತಂ ।(೨)ದುಃಖಯೋಗಾದಿರೂಪೇಣ ಜೀವೇಷು ವಿನಶತ್ಸ್ವಪಿ । ದುಃಖಯೋಗಾದಿರಹಿತಃ ಸರ್ವಜೀವೇಷ್ವವಸ್ಥಿತಃ ॥ (೩) ಗುಣೈಃ ಸರ್ವೈಃ ಸಮೋ ನಿತ್ಯಂನ ಹೀನೋ ಹೀನಗೋಽಪಿ ಸನ್ । ಇತಿ ಪಶ್ಯತಿ ಯೋ ವಿಷ್ಣುಂ ಸ ಏವ ನತಮೋ ವ್ರಜೇದಿತಿ ಪಾದ್ಮೇ ॥೨೮,೨೯॥

ಅ ॥ (೧) ಜೀವರು ದುಃಖಸಂಬಂಧ ದೇಹಹಾನ್ಯಾದಿರೂಪದಿಂದ ವಿನಾಶ ಹೊಂದಿದರೂ ಶ್ರೀಪರಮಾತ್ಮನು ದುಃಖಾದಿಗಳ ಸಂಬಂಧವಿಲ್ಲದವನು ನಾಶಾದಿಗಳಿಲ್ಲದವನು (೨ ಎರಡು(೨೮. ೨೯)ಶ್ಲೋಕಗಳ ಅರ್ಥವನ್ನು ಸ್ಮೃತಿಪ್ರಮಾಣದಿಂದಲೇ ಹೇಳುತ್ತಾರೆ—) ದುಃಖ ಸಂಬಂಧ ದೇಹವಿಯೋಗರೂಪದಿಂದ ಜೀವರಿಗೆ ನಾಶ ಬಂದರೂ ದುಃಖ ಸಂಬಂಧಾದಿಗಳು ಇಲ್ಲದವನಾಗಿಯೇ ಸಮಸ್ತ ಜೀವರಲ್ಲಿಯೂ ನಿಯಾಮಕನಾಗಿರುತ್ತಾನೆ (೩) ಶ್ರೀಪರಮಾತ್ಮನು ನಿಕೃಷ್ಟ ವಸ್ತುಗಳಲ್ಲಿದ್ದವನಾದಾಗ್ಯೂ ಶ್ರೀಹರಿಯು ಹೀನನಾಗುವುದಿಲ್ಲ ಮತ್ತು ನಿತ್ಯದಲ್ಲಿಯೂ ಸಮಸ್ತ ಗುಣಗಳಿಂದಲೂ ಸರ್ವತ್ರ ಸಮನಾಗಿಯೇ ಇದ್ದಾನೆ ಹೀಗೆ ಯಾವಾತನು ಶ್ರೀವಿಷ್ಣುವನ್ನು ಸದಾ ತಿಳಿಯುತ್ತಾನೋ, ಆತನೇ ಅಂಥಂತಮಸ್ಸನ್ನು ಹೊಂದಲಾರನು, (ಮತ್ತೆ ಮೋಕ್ಷಾದಿ ಪುರುಷಾರ್ಥವನ್ನು ಹೊಂದುತ್ತಾನೆ) ಎಂದು ಪಾದ್ಮಪುರಾಣದಲ್ಲಿದೆ ॥ ೨೮, ೨೯ ॥

ಪೀ—ಶ್ರೀಪರಮಾತ್ಮನು ಆಯಾಯ ಜೀವರು ಮಾಡಿದ ಕರ್ಮಗಳನ್ನು ಅಪೇಕ್ಷಿಸದೇನೇ ಸಾಧ್ಯ ಸಾಧು ಯೋನಿಗಳಲ್ಲಿ ಜೀವರು ಹುಟ್ಟಲಿಕ್ಕೆ ಸ್ವತಂತ್ರ ಕಾರಣನೆಂದಾದರೆ—ಶ್ರೀಪರಮಾತ್ಮನಿಗೆ ವೈಷಮ್ಯಾದಿ ದೋಷವು ಬರಬೇಕಾಗುವುದು ಜೀವರು ಮಾಡಿದ ಕರ್ಮಗಳನ್ನು ಅಪೇಕ್ಷಿಸಿಕೊಂಡು ಕಾರಣನಾಗುವುದಾದರೆ ಶ್ರೀಪರಮಾತ್ಮನಿಗೆ ಸ್ವಾತಂತ್ರ್ಯವು ಇಲ್ಲವೆಂದಾಗಬೇಕಾಗುವುದು, ಎಂದರೆ—

ಗೀ ॥ ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ ।
ಯಃ ಪಶ್ಯತಿ ತಥಾऽऽತ್ಮಾನಮಕರ್ತಾರಂ ಸ ಪಶ್ಯತಿ ॥ ೩೦ ॥

ಅ ॥ ಪ್ರಕೃತ್ಯ=ಅತಿ ಹಿಂದಿನದ್ದಾದ ಜೀವರ ಕರ್ಮವನ್ನುದ್ಬೋಧಿಸಿ ಅದನ್ನು ಅನುಸರಿಸಿ, **ಈಶ್ವರೇಣೈವ ಚ**=ಶ್ರೀಪರಮಾತ್ಮನಿಂದಲೇ **ಕ್ರಿಯಮಾಣಾನಿ**=ಮಾಡಲ್ಪಡತಕ್ಕ, **ಸರ್ವಶಃ**=ಎಲ್ಲಾ, **ಕರ್ಮಾಣಿ**=ಕರ್ಮಗಳನ್ನು, **ಯಃ**=ಯಾವನು **ಪಶ್ಯತಿ**=ತಿಳಿಯುತ್ತಾನೋ, **ತಥಾ**=ಹಾಗೆಯೇ, **ಆತ್ಮಾನಂ**=ಶ್ರೀಪರಮಾತ್ಮನನ್ನು, **ಅಕರ್ತಾರಂ**=ಆತನನ್ನು ಸೃಷ್ಟಿಸುವವನು ಇನ್ನೊಬ್ಬನು ಇಲ್ಲದವನನ್ನಾಗಿ, **ಪಶ್ಯತಿ**=ತಿಳಿಯುತ್ತಾನೋ, **ಸಃ**=ಆತನು, **ಪಶ್ಯತಿ**=ಯಥಾರ್ಥವಾಗಿ ಪರಮಾತ್ಮನನ್ನು ತಿಳಿಯುತ್ತಾನೆ ಅಥವಾ (ಶ್ರೀಪರಮಾತ್ಮನು ಸ್ವತಂತ್ರನೆಂದು ತಿಳಿದುದಕ್ಕೆ ಫಲವನ್ನು ಹೇಳುತ್ತಾರೆ) (ಸ್ವತಂತ್ರಕರ್ತನಾದ ಶ್ರೀಪರಮಾತ್ಮನಿಂದ,) **ಪ್ರಕೃತ್ಯೈವ**=ನಿಮಿತ್ತಭೂತವಾದ ಜಡ ಪ್ರಕೃತಿಯಿಂದ, ಮಾಡಲ್ಪಡತಕ್ಕ ಸಮಸ್ತ

ಕರ್ಮಗಳನ್ನು ಯಾವನು ತಿಳಿಯುತ್ತಾನೋ, ಹಾಗೆಯೇ ತನ್ನನ್ನು ಅಸ್ವತಂತ್ರಕರ್ತನನ್ನಾಗಿ ಯಾವನು ತಿಳಿಯುತ್ತಾನೋ, ಆತನೇ ಶ್ರೀಪರಮಾತ್ಮನನ್ನು ತಿಳಿಯುತ್ತಾನೆ

ವಿ ॥ (1) ಪರಮಾತ್ಮನಿಗೆ ಸೃಷ್ಟಿಕರ್ತನು ಇನ್ನೊಬ್ಬನಿಲ್ಲದಿರುವುದರಿಂದ ಶ್ರೀಪರಮಾತ್ಮನಿಗೆ ಸ್ವಾತಂತ್ರ್ಯವು (2) ತನ್ನ ಅಧೀನದಲ್ಲಿಯೇ ಇರುವ ಆಯಾವ ಜೀವರ ಪೂರ್ವ ಕರ್ಮವನ್ನು ಅಪೇಕ್ಷಿಸಿಕೊಂಡು ಸಮಸ್ತವನ್ನು ಮಾಡುವುದರಿಂದ ವೈಷಮ್ಯಾದಿ ದೋಷವೂ ಇಲ್ಲ ॥ ೩೦ ॥

ಭಾ ॥ ಆತ್ಮಾನಂ ಚಾಕರ್ತಾರಂ ಯಃ ವಶ್ಯತಿ ಸ ಪಶ್ಯತಿ ॥ ೩೦ ॥

ಅ ॥ ಶ್ರೀಪರಮಾತ್ಮನಿಗ ಇನ್ನೊಬ್ಬ ಕರ್ತನಿಲ್ಲನೆಂದು ಯಾವನು ತಿಳಿಯುತ್ತಾನೋ, ಆತನು ಶ್ರೀಪರಮಾತ್ಮನನ್ನು ಯಥಾರ್ಥವಾಗಿ ತಿಳಿಯುತ್ತಾನೆ ॥ ೩೦ ॥

ಪೀ—ಜಡಪ್ರಕೃತಿಯೇ ಸ್ವತಂತ್ರಕರ್ತೃ ಶ್ರೀಪರಮಾತ್ಮನು ಸ್ವತಂತ್ರ ಕರ್ತನಲ್ಲ ಎಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ತಾ ॥ (೧) ಪ್ರಕೃತ್ಯ ಸ್ವಯಮೇವ ಪ್ರಾರಭ್ಯ ವಿಷ್ಣುನಾ ಕ್ರಿಯಮಾಣಾನಿ ॥ (೨) ವಿಷ್ಣೋರ್ನಾನ್ಯಃ ಪೂರ್ವಪ್ರೇರಕ ಇತಿ ॥ (೩) ಪೂರ್ವಂ ತು ಬಾದರಾಯಣೋ ಹೇತುವ್ಯಪದೇಶಾದಿತಿ ಭಗವದ್ವಚನಾತ್ ॥ (೪) ದ್ರವ್ಯಂ ಕರ್ಮ ಚ ಕಾಲಶ್ಚೇತಿ (ಕಾಲಶ್ಚ ಸ್ವಭಾವೋ ಜೀವ ಏವ ಚ । ಯದನುಗ್ರಹತಃ ಸಂತಿ ನಯದುವೇಕ್ಷ್ಯಯೇತಿ) ಚ ॥ (೫) ಸ್ವಯಂ ಪ್ರಕೃತ್ಯ ಭಗವಾನ್ಕರೋತಿ ನಿಖಿಲಂ ಜಗತ್ । ನೈವ ಕರ್ತಾ ಹರೇಃಕಶ್ಚಿದಕರ್ತಾ ತೇನ ಕೇಶವ ಇತಿ (ಚ) ಸ್ಕಾಂದೇ ॥(೬) ತೇನೇತಿ ಪ್ರಸ್ತುತತ್ವಾದೇವ ಸಿದ್ಧಂ ॥ ೧ ॥

ಆ ॥ (೧) ಪ್ರಕೃತ್ಯ = ಪೂರ್ವಕರ್ಮಾದಿಗಳನ್ನು ತಾನೇ ಜೀವನಿಗೆ ಪ್ರಬೋಧಿಸಿ ಅದನ್ನನುಸರಿಸಿ ಶ್ರೀವಿಷ್ಣುವಿನಿಂದ ಮಾಡಲ್ಪಡತಕ್ಕ ಕರ್ಮಗಳು (೨) ಅಂದರೆ ಶ್ರೀವಿಷ್ಣುವಿಗೆ ಇನ್ನೊಬ್ಬನು ಪೂರ್ವ ಪ್ರೇರಕನು ಇಲ್ಲ (ಅಂದರೆ—ಶ್ರೀಪರಮಾತ್ಮನು ಕರ್ಮಗಳನ್ನು ಅಪೇಕ್ಷಿಸಿಕೊಂಡಿದ್ದರೂ ಶ್ರೀಪರಮಾತ್ಮನಿಗೆ ಸ್ವಾತಂತ್ರ್ಯವು ತಪ್ಪುವುದಿಲ್ಲ ಏಕೆಂದರೆ ಶ್ರೀಪರಮಾತ್ಮನು ತಾನೇ ಪೂರ್ವಕರ್ಮಾದಿಗಳನ್ನು ದ್ಯೋತಿಸಿ ಅದನ್ನ ಪೇಕ್ಷಿಸಿ ಈಗ ಕರ್ಮಗಳನ್ನು ಮಾಡಿಸುತ್ತಾನೆ ಕರ್ಮಾದಿಗಳು ಶ್ರೀವಿಷ್ಣುವಿಗೆ ಉದ್ಯೋತಕ (ಪ್ರೇರಕ) ಗಳಲ್ಲ) (೩) (ಈ ಅರ್ಧವು ಹೇಗೆ ಸಿದ್ಧವಾಗುತ್ತದೆಂದರೆ -) ಪೂರ್ವೋಕ್ತನಾದ ಬ್ರಹ್ಮನೇ ಸ್ವತಂತ್ರ ಕರ್ತನಾಗಿ ಸತ್ಕರ್ಮಗಳಿಗೆ ಪ್ರವರ್ತಕನು ಕರ್ಮವು ಬ್ರಹ್ಮನಿಗೆ ಪ್ರವರ್ತಕವಲ್ಲ **ಪುಣ್ಯೇನ ಪುಣ್ಯಂ ಲೋಕಂ ನಯತಿ** ಇತ್ಯಾದಿಗಳಲ್ಲಿ ಪರಬ್ರಹ್ಮನು ಕರ್ತನೆಂದೂ ಕರ್ಮವು ಕರಣವೆಂದೂ ಶ್ರೀ ವೇದವ್ಯಾಸರು ಬ್ರಹ್ಮಸೂತ್ರದಲ್ಲಿ ಹೇಳಿರುವರು (೪) (ಶ್ರೀಪರಮಾತ್ಮನು ಕರ್ಮಾದಿಗಳಿಗೆ ಉದ್ಯೋತಕನು ಕರ್ಮವು ಶ್ರೀಪರಮಾತ್ಮನಿಗೆ ಪ್ರೇರಕವಲ್ಲವೆಂದಾಗಲಿ ಆದರೂ ಶ್ರೀಪರಮಾತ್ಮನಿಗೆ ಕರ್ಮಗಳ ಅಪೇಕ್ಷೆ ಇದ್ದುದರಿಂದ ಸ್ವಾತಂತ್ರ್ಯವಿಲ್ಲವೆಂದಾಗುವುದೆಂದರೆ ಕರ್ಮಾದಿಗಳ ಸ್ಥಿತಿಯೂ ಕೂಡ ಭಗವಂತನ ಅಧೀನವೇ ಆಗಿದೆ ಎಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ಪ್ರಕೃತಿ ಮೊದಲಾದ ತತ್ವಗಳೂ, ಧರ್ಮ, ಅಧರ್ಮಗಳೂ, ಕಾಲವೂ, (ಇತ್ಯಾದಿಗಳೆಲ್ಲವೂ ಶ್ರೀಪರಮಾತ್ಮನ ಅಧೀನಗಳು, ಎಂದು ಶ್ರುತಿಯು) (೫) (ಈ ಹೇಳಿದ ಅರ್ಧದಲ್ಲಿ ಸ್ಮೃತಿಪ್ರಮಾಣವನ್ನು ತೋರಿಸುತ್ತಾರೆ—) ಶ್ರೀಪರಮಾತ್ಮನು ತಾನೇ ಪೂರ್ವಕರ್ಮಾದಿಗಳನ್ನು ದ್ಯೋತಿಸಿ ಸಂಪೂರ್ಣ ಜಗತ್ತನ್ನು (ಅಂದರೆ ಕರ್ಮಗಳೂ,

ಕರ್ಮಾಧೀನ ಶರೀರಗಳೂ, ಶರೀರೋಪಯುಕ್ತವಾದುದೂ, ಶರೀರದಿಂದ ಉಪಭೋಗ್ಯವಾದ ಸುಖ ದುಃಖಾದಿಗಳೂ ಇದು ಮೊದಲಾದ ಜಗತ್ತನ್ನು) ಸೃಷ್ಟಿಸುತ್ತಾನೆ ಯಾವನೊಬ್ಬನೂ ಶ್ರೀಪರಮಾತ್ಮನನ್ನು ಸೃಷ್ಟಿಸುವವನಿಲ್ಲವೇ ಇಲ್ಲ ಆದಕಾರಣ ಶ್ರೀಪರಮಾತ್ಮನು **ಅಕರ್ತಾ** ಎನಿಸುತ್ತಾನೆ, ಎಂದು ಸ್ಕಾಂದಪುರಾಣದಲ್ಲಿದೆ (೬) (**ಈಶ್ವರೇಣ** ಎಂಬುವ ಒಂಬತ್ತನೇ ಶ್ಲೋಕದಲ್ಲಿ ಇಲ್ಲದಿರುವುದರಿಂದ **ಈ** ಅರ್ಥವು ಹೇಗೆ ಸಿದ್ಧಿಸುತ್ತದೆ ಎಂದರೆ—) **ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಂ** ಎಂದು ಶ್ರೀಹರಿಯು ಪ್ರಸ್ತುತನಾದುದರಿಂದಲೇ **ಈಶ್ವರೇಣ** ಎಂದು ಹೇಳದಿದ್ದರೂ ಸಿದ್ಧವಾಗುತ್ತದೆ ॥ ೧ ॥

ಪೀ—**ಅಕರ್ತಾ** ಎಂಬುವ ವಾಕ್ಯಕ್ಕೆ, ಶ್ರೀಪರಮಾತ್ಮನಿಗೆ ಇನ್ನೊಬ್ಬ ಕರ್ತನಿಲ್ಲವೆಂಬೀ ಅರ್ಥವನ್ನು ಏಕೆ ಕಲ್ಪಿಸುವುದು? ಶ್ರೀಪರಮಾತ್ಮನಿಗೆ ಕರ್ತೃತ್ವವೇ ಇಲ್ಲವೆಂಬ ಅರ್ಥವನ್ನು ಏಕೆ ಹೇಳಬಾರದೆಂದರೆ ಹಿಂದೆ ಹೇಳಿದ ಸ್ಮೃತಿವಿರೋಧವನೂ, ವಾಕ್ಯಾಂತರ ವಿರೋಧವನ್ನೂ ತೋರಿಸುತ್ತಾರೆ—

ತಾ ॥ (೧) ಅಹಂ ಸರ್ವಸ್ಯ ಪ್ರಭವಃ । ಸ ಹಿ ಕರ್ತಾ । ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಂ । ಜನ್ಮಾದ್ಯಸ್ಯ ಯತಃ । ಮತ್ತ ಏವೇತಿ ತಾನ್ವಿದ್ಧೀತ್ಯಾದಿಸಕಲಪ್ರಮಾಣವಿರೋಧಶ್ಚಾನ್ಯಥಾ ॥ (೨) ಪ್ರಕೃತ್ಯೈವ ಚೇತಿ ಚಶಬ್ದಾತ್ತೇ(ಚ್ಚೈತೇ)ನೈವೈತಿ ಸಿದ್ಧ್ಯತಿ । ಪ್ರಕೃತೇನ ಕ್ರಿಯಾಯೋಗಂ ಚಶಬ್ದಃ ಕ್ವಚಿದೀಕ್ಷಯೇತ್ । ಕ್ವಚಿತ್ಸಮುಚ್ಚಯಂ ಬ್ರೂಯಾತ್ಕ್ವಚಿದೌರ್ಲಭ್ಯವಾಚಕ ಇತಿ ಶಬ್ದನಿರ್ಣಯೇ ॥ (೩) ಪ್ರಕೃತೇಃ ಕರ್ತೃತ್ವಂ ರಚನಾನುಪಪತ್ತೇಶ್ಚ ನಾನುಮಾನಮಿತ್ಯಾದಿಭಗವದ್ವಚನೇನ (ನಾ ಚ್ಚ) ನಿರಸ್ತಂ ॥ (೪) ನ ಋತೇ ತ್ವತ್ಕ್ರಿಯತೇ ಕಿಂಚನಾರ ಇತಿ ಚ ॥ ೨ ॥

ಅ ॥ (೧) (1) ನಾನು ಸಮಸ್ತ ಜಗತ್ತಿಗೂ ಸೃಷ್ಟಿಕರ್ತನು (ಗೀ) (2) ಆ ಶ್ರೀಪರಮಾತ್ಮನೇ (ಸರ್ವ ಜಗತ್ತಿಗೂ) ಸೃಷ್ಟಿಕರ್ತನು (ಬ್ರ ಉ) (3) ಸೃಷ್ಟಿಕರ್ತನು, ಸರ್ವರಿಗೂ ಸ್ವಾಮಿಯು ಸರ್ವ ಗುಣಪರಿಪೂರ್ಣನು, ಚತುರ್ಮುಖನಿಗೂ ಕಾರಣನು (ಆ ಶ್ರೀಹರಿಯನ್ನು ತಿಳಿದು ಆಧಿಕಾರಿಯು ಮುಕ್ತನಾಗುತ್ತಾನೆ) (ಅಥರ್ವಣ) (4) ಚೇತನಾಚೇತನಾತ್ಮಕ ನಿಖಿಲಜಗತ್ತಿಗೆ ಯಾವ ಶ್ರೀಪರಮಾತ್ಮನಿಂದ ಸೃಷ್ಟಿಸ್ಥಿತ್ಯಾದಿಗಳು ಆಗುತ್ತವೋ (ಆತನು ಪರಬ್ರಹ್ಮನು) (ಬ್ರ ಸೂ) (5) ನನ್ನಿಂದಲೇ ಸೃಷ್ಟಿಸ್ಥಿತ್ಯಾದಿಗಳನ್ನು ತಿಳಿ (ಗೀ) ಇದು ಮೊದಲಾದ ಗೀತಾ ಉಪ, ಬ್ರ ಸೂತ್ರ ಇತ್ಯಾದಿ ಎಲ್ಲಾ ಪ್ರಮಾಣಗಳಿಂದ ಶ್ರೀಪರಮಾತ್ಮನಿಗೆ ಕರ್ತೃತ್ವವನ್ನು, ಒಡಂಬಡದಿದ್ದರೆ ವಿರೋಧವು ಬರುವುದು (೨) ಮತ್ತು **ಪ್ರಕೃತ್ಯೈವ ಚ** ಎಂಬುವಲ್ಲಿದ್ದ **ಚ** ಶಬ್ದದಿಂದ ತೇನೈವ= ಶ್ರೀಪರಮಾತ್ಮನಿಂದಲೇ ಎಂದು ಸಿಗುತ್ತದೆ (ಇದು ಚ ಶಬ್ದದಿಂದ "ಪರಮಾತ್ಮನಿಂದ" ಎಂಬುವ ಅರ್ಥವು ಹೇಗೆ ಸಿದ್ಧವಾಗುವುದೆಂದರೆ—) ಪ್ರಕೃತವಾದ ಕರ್ತೃವಿನಿಂದ ಹೇಳಲ್ಪಡತಕ್ಕ ಕ್ರಿಯೆಯನ್ನು ಪ್ರಕೃತನಾದವನಿಗೆ ಕರ್ತೃತ್ವವನ್ನು ಚ ಶಬ್ದವು ಕ್ವಚಿತ್ ಹೇಳುತ್ತದೆ ಕ್ವಚಿತ್ ಸಮುಚ್ಚಯವನ್ನು ಕ್ವಚಿತ್ ದೌರ್ಲಭ್ಯವನ್ನು ಹೇಳುತ್ತದೆ, ಎಂದು ಶಬ್ದ ನಿರ್ಣಯದಲ್ಲಿದೆ (೩) (ಏವಂಚ ಶ್ರೀಪರಮಾತ್ಮನೇ ಸರ್ವ ಕರ್ತನು, ಎಂದು ಹೇಳತಕ್ಕ ಪ್ರಮಾಣಗಳಿಂದ ವಿರೋಧವು ಬರುವುದರಿಂದ **ಅಕರ್ತಾ** ಎಂಬುವ ವಾಕ್ಯಕ್ಕೆ ಸರ್ವಥಾ ಶ್ರೀಪರಮಾತ್ಮನಿಗೆ ಕರ್ತೃತ್ವವಿಲ್ಲವೆಂಬುವ ಅರ್ಥಗಳನ್ನು ಕಲ್ಪಿಸುವುದು ಯುಕ್ತವಲ್ಲವೆಂದು ಸಿದ್ಧವಾಯಿತು) (ಇದಲ್ಲದೆ ಪ್ರಕೃತಿಗೆ ಕರ್ತೃತ್ವವು ಶ್ರುತ್ಯಾದಿಗಳಿಂದ ನಿಷಿದ್ಧವಾದ ಪ್ರಯುಕ್ತವೂ ಯುಕ್ತವಲ್ಲವೆನ್ನುತ್ತಾರೆ—) ಅಚೇತನಕ್ಕೆ ಸ್ವತಃ ಪ್ರವೃತ್ತಿಯು ಕೂಡದಿರುವುದರಿಂದ ಅನುಮಾನ ಪರಿಕಲ್ಪಿತವಾದ ಪ್ರಕೃತಿಗೆ ಜಗತ್ಕರ್ತೃತ್ವವು ಕೂಡುವುದಿಲ್ಲ ಇದು ಮೊದಲಾದ ಬ್ರಹ್ಮಸೂತ್ರರೂಪವಾದ ಭಗವದ್ವಚನದಿಂದಲೂ ಜಡಪ್ರಕೃತಿಗೆ ಕರ್ತೃತ್ವವು

ನಿಷಿದ್ಧವಾಗಿದೆ (೪) (ಈ ವಿಷಯದಲ್ಲಿ ವೇದಪ್ರಮಾಣವನ್ನು ಹೇಳುತ್ತಾರೆ) ನೀನು ಹೊರತು ಯಾವುದೊಂದೂ ಸಮೀಪದಲ್ಲಿ ಆಗಲೀ, ದೂರದಲ್ಲಿ ಆಗಲೀ, ಯಾವುದೊಂದೂ ನೂಡಲ್ಪಡುವುದಿಲ್ಲ (ನೀನೇ ಸರ್ವಕ್ಕೂ ಸ್ವತಂತ್ರಕರ್ತನು ಸರ್ವ ಸ್ವಾಮಿಯು) ॥ ೨ ॥

ತಾ ॥ (೧) ಕೇವಲಪ್ರಕೃತೇಃ ಕರ್ತೃತ್ವಾಂಗೀಕಾರೇ ಚರಬ್ರೋಽಪಿ ವ್ಯರ್ಥಃ ॥ (೨) ತತ ಏವ ಚ ವಿಸ್ತಾರಮಿತಿ ವಾಕ್ಯಶೇಷವಿರೋಧಶ್ಚ । ಅಹಂ ಬೀಜಪ್ರದಃ ಪಿತೇತಿ ವಕ್ಷ್ಯಮಾಣಮತ್ರಾಪಿ ಕ್ಷೇತ್ರಕ್ಷೇತ್ರಜ್ಞಸಂಯೋಗಾದಿತಿ ಪ್ರಕೃತಮಿತಿ ತೇನಾಪಿ ವಿರೋಧಃ॥ (೩) ಅಚೇತನಂ ಕರೋತೀತಿ ಸ್ವೋಕ್ತಿವಿರೋಧಶ್ಚ । ಇಚ್ಛಾಪೂರ್ವಂ(ರ್ವ)ಕ್ರಿಯಾದಾನಂ ಕರ್ತೃತ್ವಂ ಮುಖ್ಯಮಿಹೋಚಿತಮಿತಿ (ಹಿಂ) ಪೈಂಗಿಶ್ರುತಿಃ ॥ (೪) ವಿಕಾರಲಕ್ಷಣಂ ಕರ್ತೃತ್ವಂ ತು ಪ್ರಕೃತೇರಂಗೀಕೃತಮೇವ । ತಥಾಽಪಿ ಲಕ್ಷ್ಮ್ಯೀಪರಮೇಶ್ವರಮುಕ್ತಚೇಷ್ಟಾಸು ತದಭಾವಾತ್ಸರ್ವಶ ಇತ್ಯಸ್ಯ ಸಂಕೋಚಪ್ರಾಪ್ತಿಃ ॥ (೫) ಅಚೇತನಾಶ್ರಿತಂ ಕರ್ಮ ವಿಕಾರಾತ್ಮಕಮಿಹೋಚಿತಂ । ಯತ್ತು ಕೇವಲಚಿತ್ಸಂಸ್ಥಂ ಪ್ರತ್ಯಭಿಜ್ಞಾಪ್ರಮಾಣತಃ । ಅವಿಕಾರಾತ್ಮಕಂ ಜ್ಞೇಯಂ ತನ್ನ ತತ್ಪ್ರಾಕೃತಂ ಭವೇದಿತಿ ಚ ॥ ॥ ೩ ॥ ॥ ೩೦ ॥

ಅ ॥ (೧) ಕೇವಲ ಜಡಪ್ರಕೃತಿಗೇನೇ ಕರ್ತೃತ್ವವನ್ನಂಗೀಕರಿಸಿದರೆ— **ಪ್ರಕೃತೈಃ ಏವ ಚ** ಎಂಬುವಲ್ಲಿರ್ದ್ದ ಪರಬ್ರಹ್ಮನೇ ಕರ್ತನೆಂದು ತೋರಿಸಿಕೊಡುವ **ಚ** ಶಬ್ದವು ವ್ಯರ್ಥವಾಗಬೇಕಾಗುವುದು (೨) (ಶ್ರೀ ಪರಮಾತ್ಮನು ಸರ್ವಕ್ಕೆ ಸ್ವತಂತ್ರಕರ್ತನಲ್ಲವೆಂದು ಹೇಳಿದರೆ—) **ತತ ಏವಚ ವಿಸ್ತಾರಂ** (ಶ್ಲೋ ೩೧) = ಶ್ರೀಪರಮಾತ್ಮನಿಂದಲೇ ಸರ್ವಕ್ಕೂ ಉತ್ಪತ್ತಿಯನ್ನು ಹೇಳತಕ್ಕ ವಾಕ್ಯಶೇಷದಿಂದ ವಿರೋಧವು ಬರುವುದು (೩) **ಅಹಂ ಬೀಜಪ್ರದಃ ಪಿತಾ** (ಅಧ್ಯಾ ೧೪ ಶ್ಲೋ ೪) ನಾನು ಗರ್ಭಾಧಾನಮಾಡತಕ್ಕ ತಂದೆಯು ಎಂದು ಮುಂದೆ ಹೇಳುವರು. ಇಲ್ಲಿಯೂ **ಯಾವತ್ಸಂಜಾಯತೇ ಕಂಚಿತ್ಸತ್ತ್ವಂ ಕ್ಷೇತ್ರಕ್ಷೇತ್ರಜ್ಞಸಂಯೋಗಾತ್** (ಶ್ಲೋ ೨೭) ಎಂಬುವಲ್ಲಿ ಶ್ರೀಪರಮಾತ್ಮನೇ ಸರ್ವಕ್ಕೂ ಕರ್ತನೆಂದು ಪ್ರಕೃತವಾಗಿದೆ ಆದುದರಿಂದಲೂ ಶ್ರೀಪರಮಾತ್ಮನಿಗೆ ಕರ್ತೃತ್ವವಿಲ್ಲವೆಂಬುವ ವ್ಯಾಖ್ಯಾನವು ವಿರುದ್ಧವಾಯಿತ. (೩) ಅಚೇತನಂ ಕರೋತಿ = ಜಡಪದಾರ್ಥವು ಸೃಷ್ಟಿಸುತ್ತದೆ, ಎಂದು ಹೇಳಿದರೆ **ಅಚೇತನ** ಎಂಬುವ ಶಬ್ದದಿಂದ ಅಚೇತನ ವಸ್ತುಗಳಿಗೆ ಜ್ಞಾನ ಇಚ್ಛಾ ಪ್ರಯತ್ನಾದಿಗಳು ಇಲ್ಲವೆಂದು ಒಪ್ಪಿಕೊಂಡು ಮರಳಿ ಜ್ಞಾನ ಇಚ್ಛಾ ಪ್ರಯತ್ನ ರೂಪವಾದ ಕರ್ತೃತ್ವವನ್ನು ಹೇಳಿದರೆ **ಮೇ ಮಾತಾ ವಂಧ್ಯಾ** ನನ್ನ ತಾಯಿಯು ಬಂಜೆಯು ಎಂಬುವ ವಾಕ್ಯದಂತೆ ತನ್ನ ಮಾತೇ ತನಗೆ ವಿರುದ್ಧವಾಗುವುದು (ತನ್ನ ಮಾತಿನಿಂದ ವಿರೋಧವು ಬರುವುದು ಹೇಗೆಂದರೆ-) ಇಚ್ಛಾಪೂರ್ವಕವಾಗಿ ಕ್ರಿಯೆಯನ್ನು ಮಾಡುವುದು ಮುಖ್ಯವಾಗಿ ಕರ್ತೃತ್ವವೆನಿಸುತ್ತದೆ, ಎಂದು ಪೈಂಗಿಶ್ರುತಿಯು (ಅಂದರೆ ಅಚೇತನವೆಂದರೆ ಇಚ್ಛಾದಿಗಳಿಲ್ಲದಿರುವುದು ಆದಕಾರಣ ಅಚೇವನವೂ ಆಗಿದೆ ಮತ್ತೆ ಕ್ರಿಯೆಯನ್ನು ಮಾಡುತ್ತದೆಂದು ಇಟ್ಟುಕೊಂಡಿಗೆ ಹಿಂದೆ ಹೇಳಿದ ರೀತಿಯಿಂದ ವ್ಯಾಹತಿಯು) (೪) ವಿಕಾರರೂಪವಾದ ಗೌಣಕರ್ತೃತ್ವವಾದರೂ ಪ್ರಕೃತಿಗೆ ಅಂಗೀಕೃತವೇ ಆಗಿದೆ. ಆದರೂ ಲಕ್ಷ್ಮೀ ಪರಮಾತ್ಮ ಮುಕ್ತರ ಚೇಷ್ಟೆಗಳಲ್ಲಿ ಪ್ರಕೃತಿ ಕಾರ್ಯತ್ವವಿಲ್ಲದಿರುವುದರಿಂದ **ಸರ್ವಶಃ** ಎಂಬುವುದಕ್ಕೆ ಅರ್ಧಸಂಕೋಚ ಎಂಬಬೇಕು (ಅಂದರೆ ಯದ್ಯಪಿ ಪ್ರಕೃತಿಗೆ ಪರಿಣಾಮ ರೂಪವಾದ ಕರ್ತೃತ್ವವು ಅಂಗೀಕೃತವೇ ಆಗಿದೆ. ಆದರೂ ಆದಕ್ಕಾಗಿ ಈ ಶ್ಲೋಕವು ಹೊರಟಿದ್ದಲ್ಲ ಈ ಶ್ಲೋಕದಲ್ಲಿ ಸಮಸ್ತ ಕರ್ಮಗಳೂ ಪ್ರಕೃತಿಯಿಂದಲೇ ಮಾಡಲ್ಪಡುತ್ತವೆಂದು ಹೇಳಿದೆ.

ಇದಕ್ಕಾಗಿಯೇ ಪರಮೇಶ್ವರಾದಿಗಳ ಕರ್ಮಗಳಲ್ಲಿ ಪ್ರಕೃತಿವಿಕಾರತ್ವವಿಲ್ಲದಿರುವುದರಿಂದ 'ಸರ್ವಶಃ ಎಂಬುವ ಪದಕ್ಕೆ ಅರ್ಥ ಸಂಕೋಚವನ್ನು ಮಾಡಬೇಕು) (೫) (ಪರಮೇಶ್ವರಾದಿ 'ಕರ್ಮಗಳಿಗೆ ಪ್ರಕೃತಿ ವಿಕಾರತ್ವಾಭಾವವು ಹೇಗೆ ಎಂದರೆ—) ಅಚೇತನವನ್ನಾಶ್ರಯಿಸಿಕೊಂಡಿರುವ ಕರ್ಮವು ಪ್ರಕೃತಿ ವಿಕಾರವೆಂದು ಪ್ರಮಾಣಗಳಲ್ಲಿ ಹೇಳಲ್ಪಟ್ಟಿದೋ, ಯಾವುದು ಕೇವಲ ಚಿದ್ರೂಪರಾದ ಪರಮಾತ್ಮ ಲಕ್ಷ್ಮೀ ಮುಕ್ತರಲ್ಲಿರತಕ್ಕ ಕರ್ಮವೋ, ಅದು ಪ್ರಕೃತಿ ವಿಕಾರಾತ್ಮಕವಾದ ಪ್ರಾಕೃತವಾದುದಲ್ಲ ಎಂದು ತಿಳಿಯಬೇಕು. 'ವಿಕಾರವಿದ್ದರೆ ಅನಿತ್ಯತ್ವವು ಬರಬೇಕಾಗುವುದು ಅನಿತ್ಯತ್ವವಿದ್ದರೆ **ತದೇವೇದಂ ಕರ್ಮ** ಎಂಬುವ ಪ್ರತ್ಯಭಿಜ್ಞೆಯು ಕೂಡಲಾರದು (ಏವಂಚ ಯಾವುದು ಕೇವಲ ಚಿದಾಶ್ರಿತವೋ, ಅದು ನಿತ್ಯವು ಯಾವುದು ನಿತ್ಯವೋ ಅದು ಪ್ರಕೃತಿ ವಿಕಾರಾತ್ಮಕವಲ್ಲ ಅದುದರಿಂದ ವಿಷ್ಣ್ವಾದ್ಯಾಶ್ರಿತವಾದ ಕರ್ಮವು ಪ್ರಕೃತಿಕಾರ್ಯವಾಗುವುದಿಲ್ಲ. ॥ ೩೦ ॥

ಹೀ—ಶ್ರೀಪರಮಾತ್ಮನು ಸರ್ವರಿಗೂ ಪ್ರೇರಕನು ಇತ್ಯಾದಿಗಳನ್ನು ಮಾತ್ರ ತಿಳಿದುಕೊಂಡರೆ ಸಾಲದು, ಮತ್ತೆ ಶ್ರೀಹರಿಯು ಸರ್ವಾಧಾರನು ಇತ್ಯಾದಿ ಶ್ರೀಹರಿಯ ಮಹಿಮೆಯನ್ನು ಅವಶ್ಯವಾಗಿ ತಿಳಿಯತಕ್ಕದ್ದೆನ್ನುತ್ತಾರೆ—

ಗೀ ॥ ಯದಾ ಭೂತಪೃಥಗ್ಭಾವಮೇಕಸ್ಥಮನುಪಶ್ಯತಿ ।
ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ ॥ ೩೧ ॥

ಅ ॥ ಯದಾ=ಯಾವಾಗ, ಭೂತಪೃಥಗ್ಭಾವಂ=ಭೂತ=ಜೀವರ, ಪೃಥಗ್ಭಾವಂ=ನಾನಾ ವಿಧವಾದ ಭೇದವನ್ನು, ಏಕಸ್ಥಂ=ಸರ್ವೋತ್ತಮನಾದ ಶ್ರೀವಿಷ್ಣುವಿನಲ್ಲಿರತಕ್ಕುದುದನ್ನಾಗಿ, ಪಶ್ಯತಿ=ತಿಳಿಯುತ್ತಾನೋ, (ಅಂದರೆ-ಶ್ರೀವಿಷ್ಣುವಿಗೂ ಸಮಸ್ತ ವಸ್ತುಗಳಿಗೂ ಭೇದವು, ಚೇತನಾಚೇತನವಸ್ತುಗಳಿಗೂ ಪರಸ್ಪರ ಭೇದವು, ಇಂತಹ ನಾನಾ ವಿಧ ಭೇದವುಳ್ಳ ಸಮಸ್ತ ಪ್ರಾಣಿಗಳೂ ಸರ್ವೋತ್ತಮನಾದ ಒಬ್ಬ ಶ್ರೀಪರಮಾತ್ಮನನ್ನೇ ಆಶ್ರಯಿಸಿಕೊಂಡಿವೆ, ಎಂದು ಯಾವನು ತಿಳಿಯುತ್ತಾನೋ) ತತ ಏವ=ಆಂತಹ ಶ್ರೀವಿಷ್ಣುವಿನಿಂದಲೇ (ಸಮಸ್ತ ವಸ್ತುಗಳಿಗೆ) ವಿಸ್ತಾರಂ=ಉತ್ಪತ್ತಿಯನ್ನು, ಅನುಪಶ್ಯತಿ=(ತಾರತಮ್ಯದಿಂದ, ಅವರವರ ಯೋಗ್ಯತಾನುಸಾರ) ತಿಳಿಯುತ್ತಾನೋ, ತದಾ=ಆಗ, ಬ್ರಹ್ಮ=ಪರಬ್ರಹ್ಮನನ್ನು, ಸಂಪದ್ಯತೇ=ಹೊಂದುತ್ತಾನೆ (ಅಂದರೆ ಇಂತಹ ಜ್ಞಾನವುಳ್ಳವನೇ ಮೋಕ್ಷವನ್ನು ಹೊಂದುತ್ತಾನೆ) ॥ ೩೧ ॥

ಹೀ—**ಏಕಸ್ಥಂ** ಎಂಬುವುದಕ್ಕೆ ಏಕಮೇವ ತಿಷ್ಠತಿ ಪ್ರಲಯೇ ಎಂಬುವ ವ್ಯುತ್ಪತ್ತಿಯಿಂದ ಏಕಸ್ಥಂ=ಪ್ರಲಯಕಾಲದಲ್ಲಿ ಒಬ್ಬ ಬ್ರಹ್ಮನೇ ಇರುವವನು, ಸರ್ವವೂ ಬ್ರಹ್ಮಾತ್ಮಕವಾದುದು, ಎಂಬೀ ಪರರ ವ್ಯಾಖ್ಯಾನವು ಸರ್ವ ಪ್ರಮಾಣ ವಿರುದ್ಧವೆಂಬುವ ಅಭಿಪ್ರಾಯದಿಂದ ಸರಿಯಾಗಿ ಹೇಳುತ್ತಾರೆ—

ಭಾ ॥ (೧) ಏಕಸ್ಥಮೇಕಸ್ಮಿನ್ನೇವ ವಿಷ್ಣೌ ಸ್ಥಿತಂ ॥ (೨) ತತ ಏವ ಚ ವಿಷ್ಣೋರ್ವಿಸ್ತಾರಂ ॥ ೩೧ ॥

ಅ ॥ (೧) ಏಕಸ್ಥಂ=ಸರ್ವೋತ್ತಮನಾದ ಒಬ್ಬ ಶ್ರೀವಿಷ್ಣುವಿನಲ್ಲಿಯೇ ಇರತಕ್ಕುದನ್ನು (೨) (ತನ್ನಿಂದಲೇ ಜಗತ್ತಿಗೆ ವಿಸ್ತಾರವನ್ನ ಎಂಬೀ ವ್ಯಾಖ್ಯಾನವು ಅಯುಕ್ತವೆನ್ನುತ್ತಾರೆ) ತತ ಏವ ಚ=ಶ್ರೀವಿಷ್ಣುವಿನಿಂದಲೇ, ವಿಸ್ತಾರಂ=(ಜಗತ್ತಿಗೆ) ಉತ್ಪತ್ತಿಯನ್ನು ॥ ೩೧ ॥

ಪೀ— ಪ್ರಮಾಣವನ್ನು ದಾಹರಿಸಿ ಶ್ಲೋಕಾರ್ಧವನ್ನು ಹೇಳುತ್ತಾರೆ—

ತಾ ॥ ಏಕವಿಷ್ಣ್ವಾಶ್ರಿತಾನಾಂ ತು ಜೀವಾನಾಂ ಭೇದಮೇವ ಯಃ । ತತಃ ಪರಸ್ಪರಂ ಚೈವ ತಾರತಮ್ಯೇನ ಪಶ್ಯತಿ । ವಿಷ್ಣೋರೇವ ಚ ವಿಸ್ತಾರಂ ಜಗತಃ ಸ ವಿಮುಚ್ಯತ ಇತಿ ಚ ॥ ೩೧ ॥

ಅ ॥ ಯಾವನು ಸರ್ವೋತ್ತಮನಾದ ಒಬ್ಬ ಶ್ರೀವಿಷ್ಣುವನ್ನು ಆಶ್ರಯಿಸಿಕೊಂಡಿರುವ ಜೀವರಿಗೆ ಭೇದವನ್ನು (ಅಂದರೆ ಶ್ರೀವಿಷ್ಣುವಿಗೂ ಜೀವರಿಗೂ ಪರಸ್ಪರ ಭೇದವನ್ನು) ಜೀವರೊಳಗೆ ಪರಸ್ಪರ ಭೇದವನ್ನೂ ನೀಚೋಚ್ಚಭಾವವನ್ನೂ ತಿಳಿಯುತ್ತಾನೋ, ಶ್ರೀವಿಷ್ಣುವಿನಿಂದಲೇ ಜಗತ್ತಿಗೆ ಉತ್ಪತ್ತಿಯನ್ನೂ ತಿಳಿಯುತ್ತಾನೋ, ಆತನೇ ಮುಕ್ತನಾಗುತ್ತಾನೆ. ॥ ೩೧ ॥

ಪೀ— ಸಮಸ್ತ ಭೂತಗಳಲ್ಲಿ ಶ್ರೀಪರಮಾತ್ಮನು ನಿಯಾಮಕನಾಗಿ ಇದ್ದರೂ ಶ್ರೀಪರಮಾತ್ಮನಿಗೆ ವಿನಾಶವಿಲ್ಲವೆಂದು ಹೇಳಿದೆ ನಶ್ವರ ಶರೀರ ಸಂಬಂಧವಿದ್ದರೆ ನಾಶಾದಿಗಳು ಅವಶ್ಯವಾಗಿ ಬರಲೇಬೇಕು, ಎಂದರೆ ವ್ಯಯ ಪಾಪಲೇಪಾದಿಗಳು ಇಲ್ಲವೆಂಬುವುದನ್ನು ಸಹೇತುಕವಾಗಿ ಹೇಳುತ್ತಾನೆ—

ಗೀ ॥ ಅನಾದಿತ್ವಾನ್ನಿರ್ಗುಣತ್ವಾತ್ಪರಮಾತ್ಮಾಽಯಮವ್ಯಯಃ ।
ಶರೀರಸ್ಥೋಽಪಿ ಕೌಂತೇಯ ನ ಕರೋತಿ ನ ಲಿಪ್ಯತೇ ॥ ೩೨ ॥

ಅ ॥ ಕೌಂತೇಯ = ಅರ್ಜುನನೇ, ಅಯಂ ಪರಮಾತ್ಮಾ = ಈ ಪರಮಾತ್ಮನು, ಶರೀರಸ್ಥೋಽಪಿ = ವಿನಾಶವುಳ್ಳ ದೇಹದಲ್ಲಿದ್ದದವನಾದಾಗ್ಯೂ, ಅನಾದಿತ್ವಾತ್ = ಹುಟ್ಟುವಿಕೆ ಇಲ್ಲದವನಾದುದರಿಂದಲೂ, ನಿರ್ಗುಣತ್ವಾತ್ = ಸತ್ವರಜಸ್ತಮೋಗುಣಗಳ ಸಂಬಂಧವಿಲ್ಲದವನಾದುದರಿಂದಲೂ, ಅವ್ಯಯಃ = ನಾಶ ಮೊದಲಾದ ವ್ಯಯವಿಲ್ಲದವನು ನ ಲಿಪ್ಯತೇ = ಚಿಂತಾ ಸಂತಾಪ ದುಃಖ ಮೊದಲಾದ ದೋಷಗಳಿಂದ ಸಂಬದ್ಧನಾಗುವುದಿಲ್ಲ ನ ಕರೋತಿ ಚ = ಲೌಕಿಕ ಕ್ರಿಯೆಗಳಿಂದ ವಿಲಕ್ಷಣವಾದ ಕ್ರಿಯೆಯುಳ್ಳವನಾದುದರಿಂದ ಸರ್ವಕರ್ತನಾದಾಗ್ಯೂ ಕರ್ಮಗಳನ್ನು ಮಾಡುವವನಲ್ಲ (ಎಂದು ಹೇಳಿಸಲ್ಪಡುತ್ತಾನೆ) ಅಥವಾ ಅಯಂ ಪರಮಾತ್ಮಾ = ಈ ಪರಮಾತ್ಮನು, ಅನಾದಿತ್ವಾತ್ = ದೇಹ ಸಂಬಂಧ ನಿಮಿತ್ತವಾದ ಉತ್ಪತ್ತಿಯಿಲ್ಲದಿರುವುದರಿಂದಲೂ ಸತ್ವಾದಿಗುಣಗಳು ಇಲ್ಲದಿರುವುದರಿಂದಲೂ, ಶರೀರಸ್ಥೋಽಪಿ = ನಶ್ವರ ಶರೀರದಲ್ಲಿ ನಿಯಾಮಕನಾಗಿದ್ದರೂ ಶರೀರಕ್ಕೆ ಅಭಿಮಾನಿಯಾಗಿ ಶರೀರದಲ್ಲಿರತಕ್ಕ ಸುಖ ದುಃಖಾದಿಗಳನ್ನು ಭೋಗಿಸಿಕೊಂಡಿರುವ ಜೀವಸ್ವರೂಪನು ಆಗುವುದಿಲ್ಲ (ಹೀಗಿರಲು ಜಡಾತ್ಮಕನಾಗುವುದಿಲ್ಲವೆಂದು ಸುತರಾಂ ಸಿದ್ಧವಾಗುತ್ತದೆ) ಕರೋತಿ — ಸರ್ವಕರ್ತನಾದ ಪ್ರಯುಕ್ತ ಮಾಡುತ್ತಾನೆನ್ನು ತ್ತಾನೆ ನ ಲಿಪ್ಯತೇ = ದುಃಖಾದಿ ಫಲವನ್ನು ಭೋಗಿಸದಿರುವುದರಿಂದ ಚಿಂತಾದಿಗಳಿಂದ ಸಂಬದ್ಧನಾಗುವುದಿಲ್ಲವೆನ್ನಿಸಿಕೊಳ್ಳುತ್ತಾನೆ ಜೀವನಾದರೂ ಸ್ವಾತಂತ್ರ್ಯವಿಲ್ಲದಿರುವುದರಿಂದ ನ ಕರೋತಿ = ಮಾಡುವವನಲ್ಲ ಲಿಪ್ಯತೇ = ಪರಾಧೀನಕರ್ತೃತ್ವವಿದ್ದ ಪ್ರಯುಕ್ತ ದುಃಖಾದಿಗಳಿಂದ ಲೇಪಿಸಲ್ಪಡುತ್ತಾನೆ. ॥ ೩೨ ॥

ಪೀ—ಶ್ರೀಪರಮಾತ್ಮನಿಗೆ ದುಃಖಾದಿಗಳ ಲೇಪವಿಲ್ಲವೆಂಬುವುದನ್ನು ದೃಷ್ಟಾಂತದಿಂದ ತೋರಿಸುತ್ತಾರೆ—

ಗೀ ॥ ಯಥಾ ಸರ್ವಗತಂ ಸೌಕ್ಷ್ಮ್ಯಾದಾಕಾಶಂ ನೋಪಲಿಪ್ಯತೇ ।
ಸರ್ವತ್ರಾವಸ್ಥಿತೋ ದೇಹೇ ತಥಾಽಽತ್ಮಾ ನೋಪಲಿಪ್ಯತೇ ॥ ೩೩ ॥

ಅ ॥ ಯಥಾ = ಹೇಗೆ, ಆಕಾಶಂ=ಆಕಾಶವು, ಸರ್ವಗತಂ = ಕೆಸರು ಮೊದಲಾದ ಸಮಸ್ತ ಪದಾರ್ಥಗಳ ಸಂಬಂಧವುಳ್ಳದ್ದಾಗ್ಯೂ, ಸೌಕ್ಷ್ಮ್ಯಾತ್=ತಡೆಯಿಲ್ಲದಿರುವ ವಸ್ತುವಾದುದರಿಂದ ಮತ್ತು ಪ್ರಾಣಿಗಳ ಸಂಚಾರಕ್ಕೆ ಅವಕಾಶವನ್ನು ಕೊಡತಕ್ಕ ವಸ್ತುವಾದುದರಿಂದ ನೋಪಲಿಪ್ಯತೇ=ಅವಾವ ವಸ್ತಗಳ ಗುಣ ದೋಷಗಳಿಂದ ಸಂಬಂಧಿಸಲ್ಪಡುವುದಿಲ್ಲವೋ, ತಥಾ=ಹಾಗೆಯೇ, ಆತ್ಮಾ=ಶ್ರೀಪರಮಾತ್ಮನು ಸರ್ವತ್ರ ದೇಹೇ = ನೀಚರೂ ಉತ್ತಮರೂ ಆದ ಸಮಸ್ತ ಜೀವರ ಶರೀರಗಳಲ್ಲಿ, ಅವಸ್ಥಿತಃ = ಇದ್ದರೂ, ನೋಪಲಿಪ್ಯತೇ = ಶರೀರಗಳ ಗುಣ ದೋಷಗಳಿಂದ ಲೇಪಿಸಲ್ಪಡುವುದಿಲ್ಲ ॥ ೩೩ ॥

ಪೀ—ಶ್ರೀಪರಮಾತ್ಮನು ಕ್ಷೇತ್ರಜ್ಞ ನೆಂಬುವುದನ್ನು ದೃಷ್ಟಾಂತದಿಂದ ತೋರಿಸುತ್ತಾರೆ—

ಗೀ ॥ ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ ।
ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ ॥ ೩೪ ॥

ಅ ॥ ಭಾರತ=ಅರ್ಜುನನೇ ಯಥಾ=ಹೇಗೆ, ಏಕಃ ರವಿಃ=ಒಬ್ಬ ಸೂರ್ಯನೇ, ಕೃತ್ಸ್ನಂ = ಸಮಸ್ತವಾದ, ಇಮಂ ಲೋಕಂ=ಈ ಲೋಕವನ್ನು, ಪ್ರಕಾಶಯತಿ=ಪ್ರಕಾಶಗೊಳಿಸುತ್ತಾನೋ, ತಥಾ=ಹಾಗೆಯೇ, ಕ್ಷೇತ್ರೀ=ಕ್ಷೇತ್ರಗಳಲ್ಲಿರುವ ಕ್ಷೇತ್ರ ಸ್ವಾಮಿಯಾದ ಶ್ರೀಪರಮಾತ್ಮನು, ಕೃತ್ಸ್ನಂ ಕ್ಷೇತ್ರಂ = ಚೇತನಾಚೇತನ ರೂಪವಾದ ಸಮಸ್ತವಸ್ತುವನ್ನು, ಪ್ರಕಾಶಯತಿ=ಪ್ರಕಾಶ ಪಡಿಸುತ್ತಾನೆ ॥ ೩೪ ॥

ಪೀ—**ಅವ್ಯಯಃ** ಎಂಬುವುದರಿಂದ ಪಾಪಾದಿಗಳ ಲೇಪವಿಲ್ಲವೆಂದಿಷ್ಟು ಮಾತ್ರ ವಿಹಿತವಾಗುತ್ತದೆ ಎಂಬೀ ಅನ್ಯಥಾ ಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ಭಾ ॥ (೧) ನ ಚ ವ್ಯಯಾದಿಸ್ತಸ್ಯೇತ್ಯಾಹ । ಅನಾದಿತ್ವಾದಿತಿ । ಸಾದಿ ಹಿ ಪ್ರಾಯೋ ವ್ಯಯಿ ಗುಣಾತ್ಮಕಂ ಚ ॥ (೨) ನ ಕರೋತೀತ್ಯಾದೇರರ್ಥ ಉಕ್ತಃ ವುರಸ್ತಾತ್ । ನ ಲೌಕಿಕಕ್ರಿಯಾದಿಸ್ತಸ್ಯ । ಅತೋ ನ ಪ್ರಜ್ಞಮಿತ್ಯಾದಿವದಿತಿ ॥ ೩೨,೩೩,೩೪ ॥

ಅ ॥ (೧) **ಅನಾದಿತ್ವಾತ್** ಎಂಬುವ ಶ್ಲೋಕದಿಂದ ಶ್ರೀಪರಮಾತ್ಮನಿಗೆ ವ್ಯಯ ದುಃಖ ಲೇಪಾದಿಗಳು ಇಲ್ಲವೆನ್ನುತ್ತಾರೆ ಯಾವುದು ವ್ಯಯವುಳ್ಳದ್ದೋ, ಅದು ಪ್ರಾಯಶಃ ಸಾದಿಯೂ ಗುಣಾತ್ಮಕವೂ ಆಗಿದೆ ಶ್ರೀಪರಮಾತ್ಮನು ಅನಾದಿಯೂ ನಿರ್ಗುಣನೂ ಆಗಿರುವುದರಿಂದ ಅವ್ಯಯನು (೨) **ನ ಕರೋತಿ** ಇತ್ಯಾದಿಗಳಿಗೆ ಮೊದಲೇ ಅರ್ಥವು ಹೇಳಲ್ಪಟ್ಟಿದೆ ಅಂದರೆ – ಶ್ರೀಪರಮಾತ್ಮನಿಗೆ ಲೌಕಿಕ ಕ್ರಿಯಾದಿಗಳು ಇಲ್ಲ ಆದಕಾರಣ **ನ ಪ್ರಜ್ಞಂ** ಇತ್ಯಾದಿಗಳಂತೆ ಲೌಕಿಕ ಕ್ರಿಯಾದಿಗಳು ಇಲ್ಲವೆಂದು ಅರ್ಥವನ್ನು ಹೇಳಬೇಕು. ॥ ೩೨ - ೩೪ ॥

ಪೀ—ಶ್ರೀಪರಮಾತ್ಮನು ಸಮಸ್ತ ಚೇತನಾಚೇತನಾತ್ಮಕ ವಸ್ತುಸ್ವರೂಪನಾದುದರಿಂದ ಪರಮಾತ್ಮನಿಂದ ಆ ವಸ್ತುಗಳಿಗೆ ಭೇದವು ಹೇಗೆಂದರೆ–**ಅನಾದಿತ್ವಾತ್** ಎಂಬುವ ಶ್ಲೋಕದಿಂದ ಸಮಾಧಾನ ಹೇಳುತ್ತಾರೆ ಶ್ರೀಪರಮಾತ್ಮನು ಸರ್ವ ಕರ್ತನಲ್ಲವೆಂಬುವ ಪ್ರತೀತಿಯನ್ನು ಹೋಗಲಾಡಿಸುವುದಕ್ಕಾಗಿ ಶರೀರಸ್ಥ ಪದಕ್ಕೆ ಅರ್ಥವನ್ನು ಹೇಳುತ್ತಾರೆ—

ತಾ ॥ (೧) ಶರೀರಸ್ಥೋ ಜೀವಃ । ಸ್ವಪ್ನೇನ ಶಾರೀರಮಭಿಪ್ರಹತ್ಯಾಸುಪ್ತಃ ಸುಪ್ತಾನಭಿಚಾಕಶೀತೀತಿ ಶ್ರುತೇಃ ॥ (೨) ಶರೀರಸ್ಥಸ್ತು ಸಂಸಾರೀ ಶರೀರಾಭಿಮತೇರ್ಮತಃ ।

ವಿಷ್ಣುಃ ಶರೀರಗೋಽಪ್ಯೇಷ ನ ಶರೀರಸ್ಥ ಉಚ್ಯತೇ । ಶರೀರಾಭಿಮತಿರ್ಯಸ್ಮಾನ್ನೈವಾಸ್ಯಾಸ್ತಿ ಕದಾಚನ ॥ (೩) ತದ್ಗತಾನಾಂ ತು ದುಃಖಾನಾಂ ಭೋಗೋಽಭಿಮತಿರುಚ್ಯತೇ । ತದಭಾವಾನ್ನಾಭಿಮಾನೀ ಭಗವಾನ್ಪುರುಷೋತ್ತಮ ಇತಿ ಚ ॥ (೪) ಅನಾದಿತ್ವಾನ್ನಿರ್ಗುಣತ್ವಾತ್ಪರಮಾತ್ಮಾ ಜೀವೋಽಪಿ ನ ಕಿಮುತ ಜಡಂ ನ ಭವತೀತಿ ॥ (೫) ನರೀರೋತ್ಪತ್ತಿಲಕ್ಷಣಮವ್ಯಾದಿಮತ್ತ್ವಂ ಪರಸ್ಯ ನಾಸ್ತೀತಿ ವಿಶೇಷಃ । ಜೀವಸ್ಯ ಹಿ ತದಸ್ತೀತಿ । ಸತ್ತ್ವಾದಿಗುಣಸಂಬಂಧಶ್ಚ ॥ (೬) ಸರ್ವಂ ಕರೋತಿ ಪರಮಾತ್ಮಾ ತಥಾಪಿ ನಲಿಪ್ಯತೇ ॥ (೭) ವಾದಿಪ್ರಸಿದ್ಧತ್ವಾದೇವೇಷ್ಟಾಪೂರ್ತಂ ಮನ್ಯಮಾನಾ ವರಿಷ್ಮಮಿತ್ಯಾದಿವನ್ನಿಷೇಧಃ ॥ ೧ ॥

ಅ ॥ (೧) ಶರೀರಸ್ಥಃ = ಜೀವನು (ಶರೀರಸ್ಥಪದವು ಜೀವವಾಚಕವು ಹೇಗೆಂದರೆ–) ಸ್ಪಷ್ಟವಾಗಿ ಶರೀರದಲ್ಲಿದ್ದ ಜೀವನನ್ನು ಸಂಯೋಜಿಸಿ ಸುಪ್ತಿಯಲ್ಲಿದ್ದ ಶ್ರೀಪರಮಾತ್ಮನು ಗಾಢನಿದ್ರೆ ಹೊಂದಿದ ಜೀವನನ್ನು ಪ್ರಕಾಶಗೊಳಿಸುತ್ತಾನೆ ಎಂದು ಶ್ರುತಿಯು (ಇಲ್ಲಿದ್ದ ಶಾರೀರ ಪದದಿಂದ ಶರೀರದಲ್ಲಿದ್ದ ಜೀವನನ್ನು ತೆಗೆದುಕೊಂಡದ್ರಿಂದ ಶರೀರಸ್ಥ ಪದವು ಜೀವನನ್ನು ಹೇಳುತ್ತದೆಂದು ಸಿದ್ಧವಾಗುವುದು) (೨) (ಜೀವರಂತೆ ಶ್ರೀಪರಮಾತ್ಮನೂ ಶರೀರದಲ್ಲಿದ್ದುದರಿಂದ ಜೀವರನ್ನೇ **ಶರೀರಸ್ಥ** ಪದದಿಂದ ತೆಗೆದುಕೂಳ್ಳಬೇಕೆಂಬುವುದು ಹೇಗೆಂದರೆ—)ಸಂಸಾರಿ ಜೀವರಿಗೇನೇ ನನ್ನ ಶರೀರವೆಂದು ಅಭಿಮಾನವಿದ್ದುದರಿಂದ ಇಲ್ಲಿ ಸಂಸಾರಿಯು ಶರೀರಸ್ಥನೆನಿಸುತ್ತಾನೆ ಶ್ರೀವಿಷ್ಣುವು ಎಲ್ಲರ ಶರೀರದಲ್ಲಿ ನಿಯಾಮಕನಾಗಿದ್ದರೂ ಶ್ರೀವಿಷ್ಣುವಿಗೆ ಯಾವಾಗಲೂ ಶರೀರಾಭಿಮಾನವಿಲ್ಲದಿರುವುದರಿಂದ ಶರೀರಸ್ಥನೆನಿಸುವುದಿಲ್ಲ (೩) (ಸರ್ವರ ಶರೀರದಲ್ಲಿ ನಿಯಾಮಕನಾಗಿದ್ದ ಶ್ರೀವಿಷ್ಣುವಿಗೆ, ಶರೀರಾಭಿಮಾನವು ಏಕೆ ಇಲ್ಲವೆಂದರೆ ಶರೀರಾಭಿಮಾನ ಶಬ್ದಾರ್ಥವನ್ನು ಹೇಳುತ್ತಾರೆ-) ಶರೀರ ನಿಮಿತ್ತಕಗಳಾದ ಮನೋವಿಕಾರಗಳಾದ ದುಃಖಗಳನ್ನು ಕೇವಲ ಅನುಭವಿಸುವುದಕ್ಕೆ ಶರೀರಾಭಿಮಾನವೆಂದು ಹೆಸರು ಅಂತಹ ಅಭಿಮಾನವು ಶ್ರೀಹರಿಗೆ ಇಲ್ಲದಿರುವುದರಿಂದ ಕ್ಷರಾಕ್ಷರ ಪುರುಷರಿಂದ ಉತ್ತಮನಾದ ಶ್ರೀಭಗವಂತನು ಶರೀರಾಭಿಮಾನಿ ಎಂದೆನಿಸಿಕೊಳ್ಳುವುದಿಲ್ಲ (೪) (**ಅನಾದಿತ್ವಾನ್ನಿರ್ಗುಣತ್ವಾತ್** ಎಂಬುವ ಶ್ಲೋಕದ ಅರ್ಧವನ್ನು ಹೇಳುತ್ತಾರೆ) ಜನ್ಮಯಿಲ್ಲದಿರುವುದಾದುದರಿಂದಲೂ, ಸತ್ವರಜಸ್ತಮೋಗುಣಗಳಿಲ್ಲದಿರುವವನಾದುದರಿಂದಲೂ ಶ್ರೀಪರಮಾತ್ಮನು ಜೀವನಿಂದಲೂ ಅತ್ಯಂತ ಭಿನ್ನನು ಜಡದಿಂದ ಭಿನ್ನನೆಂದು ಏನು ಹೇಳಬೇಕು (೫) (ಜೀವನೂ ಸ್ವರೂಪತಃ ಅನಾದಿಯಾಗಿರುವುದರಿಂದ ಶ್ರೀಪರಮಾತ್ಮನಿಗೆ ಮಾತ್ರ ಅನಾದಿಯೆಂದು ವಿಶೇಷಣವನ್ನು ವಿಶಿಷ್ಯ ಹೇಳಲು ಕಾರಣವೇನು ಎಂದರೆ–) ಪರಮಾತ್ಮನಿಗೆ ಶರೀರೋತ್ಪತ್ತಿರೂಪವಾದ ಆದಿಮತ್ವವೂ ಇಲ್ಲವೆಂಬುವ ವಿಶೇಷವಿದ್ದುದರಿಂದ ಅನಾದಿ ಎಂದು ವಿಶಿಷ್ಯ ಹೇಳಿದ್ದು ಜೀವನು ಹುಟ್ಟಿದ್ದರೂ ಜೀವನಿಗೆ ದೇಹೋತ್ಪತ್ತಿಯು ಇದೆ ಜೀವನಿಗೆ ಸತ್ವ ರಜಸ್ತಮೋಗುಣಗಳ ಸಂಬಂಧವೂ ಇದೆ (ಶ್ರೀಪರಮಾತ್ಮನಿಗೆ ಸತ್ವಾದಿ ಗುಣ ಸಂಬಂಧವೇ ಇಲ್ಲ) (೬) (ಜೀವೇಶ್ವರರಿಗೆ ಭೇದವಿದೆ ಎಂಬುವುದಲ್ಲಿ **ಕರೋತಿ ನ ಲಿಪ್ಯತೇ** ಎಂಬೀ ಹೇತ್ವಂತರದ ಅರ್ಧವನ್ನು ಹೇಳುತ್ತಾರೆ–) ಶ್ರೀಪರಮಾತ್ಮನು ಸರ್ವವನ್ನು ಸೃಷ್ಟಿಸುವವನಾದರೂ ದುಃಖಾದಿ ದೋಷಗಳಿಂದ ಲೇಪಿಸಲ್ಪಡುವುದಿಲ್ಲ (೭) ವಾದಿಗಳ ಪ್ರಸಿದ್ಧಿಯನ್ನು ಇಟ್ಟುಕೊಂಡು **ಇಷ್ಟಾಪೂರ್ತಂ ಮನ್ಯಮಾನಾಃ** ಇತ್ಯಾದಿಗಳಂತೆ ನಿಷೇಧವು

ವಿ ॥ (1) ಹೇಗೆ ಶೂನ್ಯತತ್ವವು ಜಗತ್ತಿಗೆ ಕಾರಣವು ಎಂಬುವುದು ಶೂನ್ಯವಾದಿಗಳ ಮತದಲ್ಲಿ ಸಿದ್ಧವಾದ ಪ್ರಯುಕ್ತ **ತದ್ಧೈಕ ಆಹುಃ** ಇತ್ಯಾದಿಗಳಿಂದ ಅದರ ನಿಷೇಧವು ಮಾಡಲ್ಪಡುತ್ತದೋ, ಹಾಗೆಯೇ

ಸಮ್ಯೆಕ್ಯವನ್ನು ಹೇಳುವ ವಾದಿಗಳ ಮತದಿಂದ ಅದೃಷ್ಟವು ಪ್ರಾಪ್ತವಾದ ಪ್ರಯುಕ್ತ ಅದೃಷ್ಟನಿಷೇಧವು ಕೂಡುತ್ತದೆ (2) ಹೇಗೆ ಜ್ಞಾನದ್ವಾರಾ ಮೋಕ್ಷಕ್ಕಾಗಿ ಕರ್ಮಗಳಿಂದ ಶ್ರೀಪರಮಾತ್ಮನೇ ಪೂಜಿಸಲ್ಪಡ ಬೇಕು ಎಂಬುವ ಕರ್ಮಶ್ರುತಿಯ ಅಭಿಪ್ರಾಯವನ್ನು ತಿಳಿಯದಿರುವುದರಿಂದ ಪ್ರಾಪ್ತವಾದ ಕೇವಲ ಕರ್ಮದಿಂದಲೇ ಸ್ವರ್ಗಾದಿ ಪುರುಷಾರ್ಥವು ಸಿಗುತ್ತದೆ, ಎಂಬುವುದಕ್ಕೆ ಇಷ್ಟ್ವಾಪೂರ್ತಂ ಮನ್ಯಮಾನಾಃ ಇತ್ಯಾದಿಗಳಿಂದ ನಿಷೇಧವು ಮಾಡಲ್ಪಡುತ್ತದೋ, ಹಾಗೆಯೇ ಸರ್ವಂ ಖಲ್ವಿದಂ ಬ್ರಹ್ಮ ಇತ್ಯಾದಿ ಶ್ರುತಿಗಳಿಗೆ ಶ್ರೀಪರಮಾತ್ಮನಿಂದ ಸರ್ವವೂ ವ್ಯಾಪ್ತವಾಗಿದೆ, ಎಂದು ಅಭಿಪ್ರಾಯವೆಂದು ತಿಳಿಯದಿರುವುದರಿಂದ ಪ್ರಾಪ್ತವಾದ ಅದೃಷ್ಟಕ್ಕೆ ನಿಷೇಧವು ॥ ೧ ॥

ಪೀ—ಆಪಾತತಃ ತೋರುವ ಅರ್ಥವೇ ಏಕೆ ಆಗಲಾರದೆಂದರೆ—ನಾವು ಹೇಳಿದ ಅರ್ಥವೇ ಆಗ ಬೇಕೆಂಬುವಲ್ಲಿ 'ಪ್ರಮಾಣಾಂತರ ಸಮ್ಮತಿಯನ್ನು ಹೇಳುತ್ತಾರೆ—

ತಾ ॥ (೧) ಕುರ್ವಾಣೋಽಪಿ ಯತಸ್ಸರ್ವಂ ಪುಣ್ಯಪಾಪೈರ್ನ ಲಿಪ್ಯತೇ । ಜನ್ಮಮೃತ್ಯ್ವಾದಿ-ರಹಿತಃ ಸತ್ವಾದಿಗುಣವರ್ಜಿತಃ । ವಿಷ್ಣುಸ್ತದ್ವಿಪರೀತಸ್ತು ಜೀವೋಽತಸ್ತೌ ಪೃಥಕ್ಸ್ಥ-ದೇತಿ ಚ ॥ ೨ ॥ ॥ ೩೨,೩೩,೩೪ ॥

ಅ ॥ (೧) ಶ್ರೀಪರಮಾತ್ಮನೇ ಸಮಸ್ತವನ್ನು ಮಾಡುವವನಾದಾಗ್ಯೂ ಪುಣ್ಯಪಾಪಗಳಿಂದ ಲೇಪಿಸ ಲ್ಪಡುವುದಿಲ್ಲ ಜನನ ಮರಣಾದಿಗಳಿಂದ ವಿರಹಿತನು ಸತ್ವರಜಸ್ತಮೋಗುಣ ವಿರಹಿತನು ಜೀವ ನಾದರೂ ಅದಕ್ಕಿಂತ ವಿಪರೀತನು (ಅಂದರೆ—ಪುಣ್ಯ ಪಾಪಗಳ ಲೇಪವುಳ್ಳವನು ಜನನ ಮರಣಾದಿ ದೋಷಗಳುಳ್ಳವನು. ಸತ್ವಾದಿಗುಣಗಳ ಸಂಬಂಧವುಳ್ಳವನು.) ಅದಕಾರಣ ಜೀವೇಶ್ವರರಿಬ್ಬರೂ ಸದಾ ಪರಸ್ಪರ ಭೇದವುಳ್ಳವರು. (೨) (ಶ್ರೀಪರಮಾತ್ಮನು ಚೇತನಾಚೇತನಗಳಿಂದ ಭಿನ್ನನೆಂಬುವಲ್ಲಿ ಶ್ರುತಿಸಮ್ಮತಿಯನ್ನು ಹೇಳುತ್ತಾರೆ—) ಆ ಈ ಶ್ರೀಪರಮಾತ್ಮನು ಚೇತನರಂತೆಯೂ ಅಲ್ಲ ಅಚೇತನ ಗಳಂತೆಯೂ ಅಲ್ಲ (ಅಂದರೆ-ಜೀವ ಜಡಗಳಿಂದ ಶ್ರೀಪರಮಾತ್ಮನು ಪಾರಮಾರ್ಥಿಕವಾಗಿ ಅತ್ಯಂತ ಭೇದ ವುಳ್ಳವನು.) ॥ ೩೨—೩೪ ॥

ಪೀ—ಫಲವನ್ನು ಹೇಳುತ್ತಾ ಅಧ್ಯಾಯಾರ್ಥವನ್ನು ಕೊನೆಗೊಳಿಸುತ್ತಾರೆ—

ಗೀ ॥ ಕ್ಷೇತ್ರಕ್ಷೇತ್ರಜ್ಞಯೋರೇವಮಂತರಂ ಜ್ಞಾನಚಕ್ಷುಷಾ । ಭೂತಪ್ರಕೃತಿಮೋಕ್ಷಂ ಚ ಯೇ ವಿದುರ್ಯಾಂತಿ ತೇ ಪರಂ ॥ ೩೫ ॥

ಅ ॥ ಏವಂ = ಹಿಂದೆ ಹೇಳಿದ ಪ್ರಕಾರ, ಕ್ಷೇತ್ರಕ್ಷೇತ್ರಜ್ಞಯೋಃ = ಕ್ಷೇತ್ರ ಕ್ಷೇತ್ರಜ್ಞರ, ಅಂತರಂ = ಭೇದವನ್ನು, ಜ್ಞಾನಚಕ್ಷುಷಾ = ವಿವೇಕ ದೃಷ್ಟಿಯಿಂದ, ಯೇ = ಯಾರು, ವಿದುಃ = ತಿಳಿಯುತ್ತಾರೋ, ಭೂತಪ್ರಕೃತಿಮೋಕ್ಷಂ ಚ = ಜೀವರಿಗೆ ಅಚೇತನ ಪ್ರಕೃತಿಯಿಂದ, ಮೋಕ್ಷಕ್ಕೆ (ಬಿಡುಗಡೆಗೆ) ಸಾಧನ ವಾದ ಅಮಾನಿತ್ವ ಮೊದಲಾದುದನ್ನು ಅಥವಾ ಜೀವರಿಗೆ ಭೂತಗಳಿಂದಲೂ ಅಚೇತನ ಪ್ರಕೃತಿಯಿಂದಲೂ ಮೋಕ್ಷವು ಯಾವುದರಿಂದ ಆಗುತ್ತದೋ, ಅಂತಹದನ್ನು ಅಮಾನಿತ್ವ ಮೊದಲಾದ ಹಿಂದೆ ಹೇಳಿದ ಮೋಕ್ಷಸಾಧನವನ್ನು, ಯೇ = ಯಾರು, ವಿದುಃ = ತಿಳಿಯುತ್ತಾರೋ, ತೇ = ಅವರು, ಪರಂ = ಪರಬ್ರಹ್ಮ ನನ್ನು, ಯಾಂತಿ = ಹೊಂದುತ್ತಾರೆ (ಮುಕ್ತರಾಗುತ್ತಾರೆ) ॥ ೩೫ ॥

ಗೀ ॥ ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗ ಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಕ್ಷೇತ್ರಕ್ಷೇತ್ರಜ್ಞಯೋಗೋ ನಾಮ ತ್ರಯೋದಶೋಽಧ್ಯಾಯಃ ॥ ೧೨ ॥

ಅ ॥ ಹೀಗೆ ಶ್ರೀಮದ್ಭಗವದ್ಗೀತೆಯಲ್ಲಿ ಬ್ರಹ್ಮವಿದ್ಯೆಯಲ್ಲಿ ಯೋಗಶಾಸ್ತ್ರದಲ್ಲಿ ಶ್ರೀಕೃಷ್ಣಾರ್ಜುನರ ಸಂವಾದದಲ್ಲಿ ಕ್ಷೇತ್ರಕ್ಷೇತ್ರಜ್ಞಯೋಗವೆಂಬ ಹದಿಮೂರನೇ ಅಧ್ಯಾಯವು ಮುಗಿಯಿತು. ॥ ೧೩ ॥

ಭಾ ॥ ಭೂತೇಭ್ಯಃ ಪ್ರಕೃತೇಶ್ಚ ಮೋಕ್ಷಸಾಧನಂ । ಅಮಾನಿತ್ವಾದಿಕಂ ॥ ೩೫ ॥

ಅ ॥ ಪೃಥಿವ್ಯಾದಿ ಭೂತಗಳ ದೆಸೆಯಿಂದಲೂ ಜಡ ಪ್ರಕೃತಿಯಿಂದಲೂ ಮೋಕ್ಷಕ್ಕೆ ಸಾಧನವಾದ ಅಮಾನಿತ್ವ ಮೊದಲಾದ ಸಾಧನವನ್ನು, ॥ ೩೫ ॥

ಭಾ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ಭಾಷ್ಯೇ ತ್ರಯೋದಶೋಽಧ್ಯಾಯಃ ॥ ೧೩ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಶ್ರೀಭಗವದ್ಗೀತಾ ಭಾಷ್ಯದಲ್ಲಿ ಹದಿಮೂರನೇ ಅಧ್ಯಾಯವು ಮುಗಿಯಿತು ॥ ೧೩ ॥

ತಾ ॥ ಸ ಏಷ ನೇತಿ ನೇತೀತ್ಯಾದಿ ಚ । ಜೀವಾನಾಮಚೇತನಪ್ರಕೃತೇರ್ಮೋಕ್ಷಂ ಭೂತ-ಪ್ರಕೃತಿಮೋಕ್ಷಂ ॥ ೩೫ ॥

ಅ ॥ ಜೀವರಿಗೆ ಅಚೇತನ ಪ್ರಕೃತಿಯ ದೆಶೆಯಿಂದ ಮೋಕ್ಷವು (ಬಿಡುಗಡೆಯು) ಯಾವುದರಿಂದ ಆಗುತ್ತದೋ ಅಂತಹ ಮೋಕ್ಷಕ್ಕೆ ಸಾಧನವಾದ ಅಮಾನಿತ್ವ ಮೊದಲಾದ ಸಾಧನವನ್ನು, ಎಂದು ಭೂತ ಪ್ರಕೃತಿ ಮೋಕ್ಷಂ ಎಂಬುವುದಕ್ಕೆ ಅರ್ಥವು. ॥ ೩೫ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ತಾತ್ಪರ್ಯನಿರ್ಣಯೇ ತ್ರಯೋದಶೋಽಧ್ಯಾಯಃ ॥ ೧೩ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಭಗವದ್ಗೀತಾ ತಾತ್ಪರ್ಯನಿರ್ಣಯದಲ್ಲಿ ಹದಿಮೂರನೇ ಅಧ್ಯಾಯವು ಮುಗಿಯಿತು ॥ ೧೩ ॥

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಹದಿನಾಲ್ಕನೇ ಅಧ್ಯಾಯವು.

ಪೀ—**ಬುದ್ಧಿರ್ಯೋಗೇ ತ್ವಿಮಾಂ ಶೃಣು** ಎಂದು ಎರಡನೇ ಅಧ್ಯಾಯದಲ್ಲಿ ಹೇಳಿ ಒನೇ ಅಧ್ಯಾಯ ಸಮಾಪ್ತಿ ಪರ್ಯಂತ ನಿಷ್ಕಾಮ ಕರ್ಮವು ಮತ್ತು ಧ್ಯಾನರೂಪವಾದುದು ಜ್ಞಾನಸಾಧನವೆಂದು ಹೇಳಿದೆ ಅದರ ಇತಿಕರ್ತವ್ಯತಾಂಶವನ್ನು ೧೪—೧೮ ಪರ್ಯಂತ (೫) ಅಧ್ಯಾಯಗಳಿಂದ ವಿವರಿಸುತ್ತಾರೆ ಶ್ರೋತೃಗಳಿಗೆ ಅದರ ಹುಟ್ಟುವುದಕ್ಕಾಗಿ ಮುಂದೆ ಹೇಳುವ ಪ್ರಮೇಯವನ್ನು ಸ್ತುತಿಸುತ್ತಾರೆ—

ಗೀ ॥ ॥ ಶ್ರೀಭಗವಾನುವಾಚ ॥

ಓಂ ॥ ಪರಂ ಭೂಯಃ ಪ್ರವಕ್ಷ್ಯಾಮಿ ಜ್ಞಾನಾನಾಂ ಜ್ಞಾನಮುತ್ತಮಂ ।
ಯಜ್ಜ್ಞಾತ್ವಾ ಮುನಯಃ ಸರ್ವೇ ಪರಾಂ ಸಿದ್ಧಿಮಿತೋ ಗತಾಃ ॥೧॥

ಅ ॥ ಶ್ರೀಭಗವಾನ್=ಶ್ರೀಕೃಷ್ಣನು, ಉವಾಚ=ಉಪದೇಶಿಸುತ್ತಾನೆ ಯತ್=ಯಾವುದನ್ನು, ಜ್ಞಾತ್ವಾ=ತಿಳಿದುಕೊಂಡು, ಸರ್ವೇಮುನಯಃ=ಎಲ್ಲಾ ಜ್ಞಾನಿಗಳು, ಇತಃ=ಈ ಸಂಸಾರ ದೆಶೆಯಿಂದ (ಸಂಸಾರವನ್ನು ದಾಟಿ) ಪರಾಂ ಸಿದ್ಧಿಂ=ಅತ್ಯುತ್ತಮವಾದ ಮೋಕ್ಷವನ್ನು, ಗತಾಃ=ಹೊಂದಿರುವರೋ, (ಅಂತಹ) ಪರಂ=ಹಿಂದೆ ಹೇಳಿದುದಕ್ಕಿಂತ ಬೇರೆಯಾದ, ಜ್ಞಾನಾನಾಂ=ತಿಳಿಯಲು ಯೋಗ್ಯಗಳಾದ ಪ್ರಮೇಯಗಳ ಮಧ್ಯದಲ್ಲಿ, ಉತ್ತಮಂ ಜ್ಞಾನಂ=ಅತ್ಯುತ್ಕೃಷ್ಟವಾದ ತಿಳಿಯಲು ಯೋಗ್ಯವಾದ ಪರಬ್ರಹ್ಮಾಖ್ಯವಸ್ತುವನ್ನು ಭೂಯಃ=ತಿರುಗಿ, ಪ್ರವಕ್ಷ್ಯಾಮಿ=ನಿನ್ನಾಗಿ ಹೇಳುವೆನು ॥ ೧ ॥

ಗೀ ॥ ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ ।
ಸರ್ಗೇಽಪಿ ನೋಪಜಾಯಂತೇ ಪ್ರಲಯೇ ನ ವ್ಯಥಂತಿ ಚ ॥ ೨ ॥

ಅ ॥ ಇದಂ ಜ್ಞಾನಂ=ಮುಂದೆ ಹೇಳುವ ಪರಬ್ರಹ್ಮ ವಿಷಯಕ ಜ್ಞಾನವನ್ನು, ಉಪಾಶ್ರಿತ್ಯ=ಸಂಪಾದಿಸಿಕೊಂಡು, ಮಮ=ನನ್ನ. ಸಾಧರ್ಮ್ಯಂ=ಸಾರೂಪ್ಯವನ್ನು, ಆಗತಾಃ=ಹೊಂದಿರುತ್ತಾರೆ (ಅಂತಹ ಮುಕ್ತರು) ಸರ್ಗೇಽಪಿ=ಸೃಷ್ಟಿಕಾಲದಲ್ಲಿಯೂ, ನೋಪಜಾಯಂತೇ=ಹುಟ್ಟುವುದಿಲ್ಲ ಪ್ರಲಯೇ=ಪ್ರಳಯಕಾಲದಲ್ಲಿಯೂ, ನ ಚ ವ್ಯಥಂತಿ=ನಾಶಹೊಂದುವುದಿಲ್ಲ ॥ ೨ ॥

ಭಾ ॥ ಓಂ ॥ ಸಾಧನಂ ಹ್ಯಾಧಾನ್ಯೇನೋತ್ತರೈರಧ್ಯಾಯೈರ್ವಕ್ತಿ ॥ ೧,೨ ॥

ಅ ॥ ಮೇಲಿನ ಅಧ್ಯಾಯಗಳಿಂದ ಜ್ಞಾನಸಾಧನವನ್ನು ಪ್ರಧಾನವಾಗಿ ಹೇಳುತ್ತಾರೆ ॥ ೧, ೨ ॥

ಪೀ —ಅಂತಹ ಪ್ರಮೇಯವನ್ನು ಹೇಳುತ್ತಾರೆ—

ಗೀ ॥ ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ಗರ್ಭಂ ದಧಾಮ್ಯಹಂ ।
ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ ॥ ೩ ॥

ಅ ॥ ಭಾರತ=ಅರ್ಜುನನೇ, ಮಹದ್ಬ್ರಹ್ಮ=ಚಿತ್ಪ್ರಕೃತಿಯೆನಿಸಿಕೊಂಡ ಮಹಾ ಲಕ್ಷ್ಮೀದೇವಿಯು, ಮಮ=ನನ್ನ, ಯೋನಿಃ=ಪ್ರಿಯಪತ್ನಿಯು ತಸ್ಮಿನ್=ಆ ಲಕ್ಷ್ಮೀದೇವಿಯಲ್ಲಿ, ಅಹಂ=ನಾನು, ಗರ್ಭಂ=ಗರ್ಭವನ್ನು, ದಧಾಮಿ=ಧರಿಸುತ್ತೇನೆ (ಅಂದರೆ ತನ್ನ ಉದರದೊಳಗಿರುವ ೨೪ ತತ್ವಾಂಶಗಳಿಂದ ಕೂಡಿದ ದೇವತೆಗಳನ್ನೂ ಎಲ್ಲಾ ಜೀವರಾಶಿಯನ್ನೂ ರೇತೋರೂಪದಿಂದ ಹೊರಗೊಳಿಸಿ ಲಕ್ಷ್ಮೀದೇವಿಯ ಉದರದಲ್ಲಿ ಇಡುತ್ತೇನೆ) ತತಃ=ಲಕ್ಷ್ಮೀದೇವಿಯ ಉದರದಲ್ಲಿ ಗರ್ಭವನ್ನು ಇಡುವುದರಿಂದ, ಸರ್ವಭೂತಾನಾಂ=ಸಮಸ್ತ ಪ್ರಾಣಿಗಳಿಗೆ, ಸಂಭವಃ=ಶರೀರ ಸಂಬಂಧರೂಪವಾದ ಉತ್ಪತ್ತಿಯು, ಭವತಿ=ಆಗುತ್ತದೆ ॥ ೩ ॥

ಪೀ—ಈ ಅಧ್ಯಾಯದಲ್ಲಿ ಹೇಳಲ್ಪಡತಕ್ಕ ಅರ್ಥವನ್ನು ತೋರಿಸುತ್ತಾರೆ—

ತಾ ॥ ಓಂ ॥ (೧) ಕ್ಷೇತ್ರಕ್ಷೇತ್ರಜ್ಞ ಸಂಯೋಗಸ್ಯಷ್ಟೀಕರಣಪೂರ್ವಕಂ ತ್ರೈಗುಣ್ಯಂ ವಿವಿಚ್ಯ ದರ್ಶಯತಿ ॥ (೨) ಯೋನಿರ್ಭಾರ್ಯಾ ತಥಾ ಸ್ಥಾನಂ ಯೋನಿಃ ಕಾರಣಮೇವ ಚೇತಿ ಶಬ್ದನಿರ್ಣಯೇ । ಅತ್ರ ಯೋನಿರ್ಭಾರ್ಯಾ । ತಸ್ಮಿನ್ಗರ್ಭಂ ದಧಾಮ್ಯಹಮಿತಿ ವಾಕ್ಯಶೇಷಾತ್ ॥ ೧—೩ ॥

ಅ ॥ (೧) ಕ್ಷೇತ್ರ ಕ್ಷೇತ್ರಜ್ಞರ ಸಂಬಂಧವನ್ನು ಸ್ಪಷ್ಟೀಕರಿಸುತ್ತಾ ತ್ರೈಗುಣ್ಯವನ್ನು ಬಿಡಿಸಿ ತೋರಿಸುತ್ತಾರೆ (ಅಂದರೆ--ಮೇಲಿನ ಅಧ್ಯಾಯಗಳಿಂದ ಪ್ರಧಾನವಾಗಿ ಮೋಕ್ಷಸಾಧನವೇ ಹೇಳಲ್ಪಡುತ್ತದೆ ಅದರಲ್ಲಿ ಬಂಧಪ್ರಕಾರವನ್ನು ತಿಳಿದರೇನೇ ಬಂಧನಿವೃತ್ತಿರೂಪವಾದ ಮೋಕ್ಷ ಸಾಧನವನ್ನು ಮಾಡಲಿಕ್ಕೆ ಸಾಧ್ಯವಾಗುವುದು ಸಂಸಾರಬಂಧವು ಸತ್ತ್ವರಜಸ್ತಮೋಗುಣಾತ್ಮಕವು ಆದಕಾರಣ ಯಾವತ್ಸಂಜಾಯತೇ ಎಂದು ಹೇಳಿದುದನ್ನು ವಿವರಣಮಾಡುತ್ತಾ **ಕಾರಣಂ ಗುಣಸಂಗೋಽಸ್ಯ** ಎಂದು ಹೇಳಿದ ಗುಣಸಂಬಂಧವನ್ನು ವಿವರಿಸಿ ತ್ರಿಗುಣ ವಿಕಾರಸ್ಥಿತಿಯನ್ನೂ ಮತ್ತು ತ್ರಿಗುಣ ವಿಕಾರಗಳ ಪರಿತ್ಯಾಗೋಪಾಯವನ್ನೂ ಈ ಅಧ್ಯಾಯದಿಂದ ತೋರಿಸುತ್ತಾರೆ) (೨) (**ಪರಂ ಭೂಯಃ ಪ್ರವಕ್ಷ್ಯಾಮಿ** (ಶ್ಲೋ ೧) ಎಂದು ಪ್ರತಿಜ್ಞೆಮಾಡಿದುದನ್ನು **ಮಮ ಯೋನಿಃ** ಎಂಬುವುದರಿಂದ ಹೇಳುತ್ತಾರೆ) (ಅದರಲ್ಲಿ **ಯೋನಿ** ಶಬ್ದಕ್ಕೆ ಕಾರಣವೆಂದರ್ಥವು ಎಂಬುವ ಪ್ರತೀತಿಯನ್ನು ಹೋಗಲಾಡಿಸುತ್ತಾ ಪತ್ನೀ ಮೊದಲಾದ ಅರ್ಥವಿದೆ, ಎಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ-) ಯೋನಿಶಬ್ದಕ್ಕೆ ಪತ್ನೀ, ಗುಹ್ಯಸ್ಥಾನ ಕಾರಣ ಎಂಬೀ ಮೂರು ಈ ಅರ್ಥಗಳಿವೆ, ಎಂದು ಶಬ್ದನಿರ್ಣಯದಲ್ಲಿದೆ ಯೋನಿ ಶಬ್ದಕ್ಕೆ ಅನೇಕಾರ್ಥಗಳಿದ್ದರೂ ಇಲ್ಲಿದ್ದ ಯೋನಿ ಶಬ್ದದಿಂದ ಪತ್ನೀ ಎಂಬುವ ಅರ್ಥವನ್ನು ಇಟ್ಟುಕೊಳ್ಳಬೇಕು (ಯೋನಿ ಶಬ್ದಕ್ಕೆ ಅನೇಕಾರ್ಥಗಳಿದ್ದುದರಿಂದ ಇಲ್ಲಿ ಪತ್ನೀ ಎಂಬುವ ಅರ್ಥವನ್ನೇ ಏಕೆ ಇಟ್ಟುಕೊಳ್ಳಬೇಕೆಂದರೆ—) **ತಸ್ಮಿನ್ ಗರ್ಭಂ ದಧಾಮ್ಯಹಂ** ಎಂಬೀ ಶಿಷ್ಯವಾಕ್ಯ ಪರ್ಯಾಲೋಚನೆಯಿಂದ ಇಲ್ಲಿದ್ದ **ಯೋನಿ**ಶಬ್ದಕ್ಕೆ ಪತ್ನೀ ಎಂಬುವ ಅರ್ಥವೆಂದೇ ನಿಶ್ಚಿತವಾಗುತ್ತದೆ ॥ ೧—೩ ॥

ಪೀ—ಆದಿಸೃಷ್ಟಿಯಲ್ಲಿ ಮಾತ್ರ ಲಕ್ಷ್ಮೀನಾರಾಯಣರು ಸರ್ವ ಜಗತ್ಸೃಷ್ಟಿಯಲ್ಲಿ ಕಾರಣರೆಂದಲ್ಲ ಮತ್ತೆ ಸರ್ವದಾ ಕಾರಣರೆನ್ನುತ್ತಾರೆ—

ಗೀ ॥ ಸರ್ವಯೋನಿಷು ಕೌಂತೇಯ ಮೂರ್ತಯಃ ಸಂಭವಂತಿ ಯಾಃ ।
ತಾಸಾಂ ಬ್ರಹ್ಮ ಮಹದ್ಯೋನಿರಹಂ ಬೀಜಪ್ರದಃ ಪಿತಾ ॥ ೪ ॥

ಅ ॥ ಕೌಂತೇಯ=ಅರ್ಜುನನೇ, ಸರ್ವಯೋನಿಷು=ದೇವತೆಗಳು, ಮನುಷ್ಯರು, ತಿರ್ಯಕ್ ಮೊದಲಾದ ಸಮಸ್ತ ಯೋನಿಗಳಲ್ಲಿ, ಯಾಃ ಮೂರ್ತಯಃ=ದೇಹಾದಿರೂಪಗಳಾದ ಯಾವ ಕಾರ್ಯ ವ್ಯಕ್ತಿಗಳು, ಸಂಭವಂತಿ=ಹುಟ್ಟುತ್ತವೋ, ತಾಸಾಂ=ಆ ಕಾರ್ಯ ವ್ಯಕ್ತಿಗಳ ಪ್ರತಿ ಉತ್ಪತ್ತಿಯಲ್ಲಿಯೂ, ಮಹದ್ಬ್ರಹ್ಮ=ಮಹಾ ಲಕ್ಷ್ಮೀದೇವಿಯು, ಯೋನಿಃ=ಕ್ಷೇತ್ರರೂಪಳಾದ ಕಾರಣಳು (ಮಾತೃಸ್ಥಾನೀಯಳು) ಅಹಂ=ನಾನು, ಬೀಜಪ್ರದಃ=ಗರ್ಭಾಧಾನವನ್ನು ಮಾಡುವ, ಪಿತಾ=ತಂದೆಯು ॥ ೪ ॥

ಪೀ—**ಮಹದ್ಬ್ರಹ್ಮ** ಪದದಿಂದ ಜಡಭೂತವಾದ ಅವಿದ್ಯೆಯನ್ನು ಇಟ್ಟುಕೊಳ್ಳಬೇಕೆಂದು ಪರರು ಹೇಳುವುದು ಅಯುಕ್ತವೆನ್ನುತ್ತಾರೆ—

ಭಾ ॥ (೧) ಮಹದ್ಬ್ರಹ್ಮ ಪ್ರಕೃತಿಃ । ಸಾ ಚ ಶ್ರೀಭೂದುರ್ಗೇತಿ ಭಿನ್ನಾ । ಉಮಾಸರಸ್ವತ್ಯಾದ್ಯಾಸ್ತು ತದಂಶಯುತಾ ಅನ್ಯಜೀವಾಃ ॥ (೨) ತಥಾ ಚ ಕಾಷಾಯಣಶ್ರುತಿಃ । ಶ್ರೀರ್ಭೂರ್ದುರ್ಗಾ ಭಗವತೀ ತು ಮಾಯಾ ಸಾ ಲೋಕಸೂತಿರ್ಜಗತೋ ಬಂಧಿಕಾ ಚ । ಉಮಾವಾಗಾದ್ಯಾ ಅನ್ಯಜೀವಾಸ್ತದಂಶಾಸ್ತದಾತ್ಮನಾ ಸರ್ವವೇದೇಷು ಗೀತಾ ಇತಿ ॥ (೩) ಮಮ ಯೋನಿರಿತಿ ಗರ್ಭಾಧಾನಾರ್ಥಾ ಯೋನಿಃ । ನ ತು ಮಾತಾ । ವಾಕ್ಯಶೇಷಾತ್ ॥ (೪) ತಥಾ ಹಿ ಸಾಮವೇದೇ ಶಾರ್ಕರಾಕ್ಷಶ್ರುತೌ । ವಿಷ್ಣೋರ್ಯೋನಿರ್ಗರ್ಭಸಂಧಾರಣಾರ್ಥಾ ಮಹಾಮಾಯಾ ಸರ್ವದುಃಖೈರ್ವಿಹೀನಾ । ತಥಾಽಽತ್ಮಾನಂ ದುಃಖಿವನ್ಮೋಹನಾರ್ಥಂ ಪ್ರಕಾಶಯಂತೀ ಸಹ ವಿಷ್ಣುನಾ ಸೇತಿ॥ (೫) ಅತಃ ಸೀತಾ ದುಃಖಾದಿಕಂ ಸರ್ವಂ ಮೃಷಾ ಪ್ರದರ್ಶನಮೇವ । ತಥಾ ಕೂರ್ಮಪುರಾಣೇ । (೬) ನ ಚೇಯಂ ಭೂಃ ॥ ತಥಾ ಚ ಸೌಕರಾಯಣಶ್ರುತಿಃ । ಅನ್ಯಾ ಭೂರ್ಭೂರಿಯಂ ತಸ್ಯ ಛಾಯಾಭೂತಾವಮೂ ಸಾ ಹಿ ಭೂತ್ಯೈಕಯೋನಿರಿತಿ ॥ (೭) ಅವಾಪ ಸ್ವೇಚ್ಛಯಾ ದಾಸ್ಯಂ ಜಗತಾಂ ಪ್ರಪಿತಾಮಹೀತ್ಯಾದ್ಯನಭಿಮ್ಲಾನಶ್ರುತಿಃ । ಮತ್ಸ್ಯಪುರಾಣೋಕ್ತಮಪಿ ಸ್ವೇಚ್ಛಯೈವ ॥ (೮) ಮಹದ್ಬ್ರಹ್ಮಶಬ್ದವಾಚ್ಯಾ ಪ್ರಕೃತಿರೇವ । ಮಹತೀ ಬ್ರಹ್ಮಣೀ ದ್ವೇ ತು ಪ್ರಕೃತಿಶ್ಚ ಮಹೇಶ್ವರ ಇತಿ ತತ್ರೈವ ॥ ೩,೪ ॥

ಅ ॥ (೧) ಮಹದ್ಬ್ರಹ್ಮ ಶಬ್ದದಿಂದ ಚಿತ್ಪ್ರಕೃತಿ (ಲಕ್ಷ್ಮಿ) ಯನ್ನು ಇಟ್ಟುಕೊಳ್ಳಬೇಕು ಅವಳು ಶ್ರೀ, ಭೂ, ದುರ್ಗಾ, ಎಂದು ಮೂರು ರೂಪವುಳ್ಳವಳು (ಮಹಾ ಲಕ್ಷ್ಮಿಯು ಮಾಹೇಶ್ವರೀ, ಬ್ರಾಹ್ಮೀ, ಇತ್ಯಾದಿ ೭ ರೂಪಗಳುಳ್ಳವಳೆಂದು ಆಗಮದಲ್ಲಿ ಹೇಳಿರುವುದರಿಂದ ಮೂರು ರೂಪಗಳುಳ್ಳವಳೆಂದು ಹೇಳಿದ್ದು ಹೇಗೆಂದರೆ—) ಪಾರ್ವತೀ ಸರಸ್ವತೀ ಮೊದಲಾದವರು ಲಕ್ಷ್ಮೀದೇವಿಯ ಅಂಶದಿಂದ ಕೂಡಿದ್ದು ಲಕ್ಷ್ಮೀದೇವಿಯಿಂದ ಭಿನ್ನರಾದ ಜೀವರು (ದುಃಖಸ್ಪೃಷ್ಟ ಜೀವರು) (೨) ಹಾಗೆಯೇ ಕಾಷಾಯಣ ಶ್ರುತಿಯಿದೆ. ಶ್ರೀಃ, ಭೂಃ, ದುರ್ಗಾ ಎಂಬೀ ಮೂವರು ಮಹಾ ಲಕ್ಷ್ಮೀಸ್ವರೂಪಭೂತರು ಇಚ್ಛಾಸ್ವರೂಪರು, ಜಗತ್ತಿಗೆ ಉತ್ಪಾದಕರು, ಜಗತ್ತನ್ನು ಬಂಧಿಸುವವರು ಪಾರ್ವತೀ ಸರಸ್ವತೀ ಮೊದಲಾದವರು ಲಕ್ಷ್ಮಿಗಿಂತ ಭಿನ್ನರಾದ ಜೀವರು, ಲಕ್ಷ್ಮೀದೇವಿಯ ಅಂಶವಿರುವವರಾದುದರಿಂದ ಲಕ್ಷ್ಮೀದೇವಿಯ ಸ್ವರೂಪರೆಂದು ಗೌಣವಾಗಿ ಎಲ್ಲಾ ವೇದಗಳಲ್ಲಿ ಹೇಳಲ್ಪಟ್ಟಿರುತ್ತಾರೆ. (೩) ಮಮ ಯೋನಿಃ ಎಂಬುದಕ್ಕೆ ಗರ್ಭಾಧಾನಕ್ಕೆ ಅರ್ಹಳಾದ ಪತ್ನಿಯು ಎಂದೇ ಅರ್ಥವು **ತಸ್ಮಿನ್ ಗರ್ಭಂ ದಧಾಮ್ಯಹಂ** ಎಂದು

ಶಿಷ್ಟವಾಕ್ಯವಿದ್ದುದರಿಂದ **ಯೋನಿಃ** ಎಂಬುವುದಕ್ಕೆ ಪತ್ನೀ ಎಂದೇ ಅರ್ಥನಿಶ್ಚಯವಾಗುತ್ತದೆ ಯೋನಿಃ=ಕಾರಣಳು ತಾಯಿ ಯಃ ಎಂದರ್ಥವಲ್ಲ (೪) (ಶ್ರುತಿಬಲದಿಂದಲೂ **ಯೋನಿಶಬ್ದ**ಕ್ಕೆ ಭಾರ್ಯಾ ಎಂದು ಅರ್ಥವೆನ್ನುತ್ತಾರೆ—) ಶ್ರೀವಿಷ್ಣುವಿನ ಪತ್ನಿಯು ಗರ್ಭಧಾರಣೆಯೇ ಪ್ರಯೋಜನವಾಗಿ ಉಳ್ಳವಳು. ಅಯೋಗ್ಯರಿಗೆ ವಹಾ ಮೋಹವನ್ನು ಹೊಂದಿಸುವವಳು ಸರ್ವ ದುಃಖಗಳಿಂದ ವಿರಹಿತಳು. ಆದಾಗ್ಯೂ ಶ್ರೀವಿಷ್ಣುವಿನಿಂದ ಕೂಡಿ ಕೊಂಡಿರತಕ್ಕವಳೇ. ಅಜ್ಞರಿಗೆ ಮೋಹಗೊಳಿಸುವುದಕ್ಕಾಗಿ ತನ್ನನ್ನು ದುಃಖವುಳ್ಳವಳಂತೆ ಪ್ರವರ್ತಿಸುತ್ತಾಳೆ ಎಂದು ಸಾಮವೇದದಲ್ಲಿ ಶಾರ್ಙ್ಗರಾಕ್ಷ ಶ್ರುತಿಯಲ್ಲಿ ಹೇಳಿದೆ (೫) ಆದ ಕಾರಣ ಸೀತಾದೇವಿಯು ದುಃಖ ಮೊದಲಾದುದನ್ನು ಅಯಥಾರ್ಥವಾಗಿಯೇ ತೋರಿಸಿದ್ದು ಹಾಗೆಯೇ ಕೂರ್ಮಪುರಾಣದಲ್ಲಿ ಹೇಳಿದೆ (ಹೇಗೆಂದರೆ – **ದಗ್ಧ್ವಾ ಮಾಯಾಮಯೀಂ ಸೀತಾಂ ಭಗವಾನುಗ್ರ ಹದೀಧಿತಿಃ । ರಾವಣಾಯಾದರ್ತಯತ್ಸೀತಾಂ ಪಾವಕೋಽಸೌ ಸುರಪ್ರಿಯಃ ।** ಇತ್ಯಾದಿ ಪ್ರಕಾರ ಹೇಳಿದೆ) (೬) (ಮಹಾ ಲಕ್ಷ್ಮಿಯು ಶ್ರೀ, ಭೂ, ದುರ್ಗಾ, ಎಂದು ಮೂರು ರೂಪಗಳುಳ್ಳವಳೆಂದು ಹೇಳಿದೆ **ಗೌರ್ಭೂತ್ವಾऽಶ್ರುಮುಖೇ ಖಿನ್ನಾ** ಎಂದು ಭೂದೇವಿಗೆ ದುಃಖವು ತೋರುತ್ತದೆ ಆದಕಾರಣ ಲಕ್ಷ್ಮೀದೇವಿಗೆ ದುಃಖಲೇಶವೂ ಇಲ್ಲದಿರುವುದರಿಂದ ಭೂದೇವಿಯು ಲಕ್ಷ್ಮೀದೇವಿಯು ಆಗುವುದು ಹೇಗೆ ಎಂದರೆ—) ಭೂತಾಭವಿಷ್ಯನ್ನಿನಿಯಾದ ಪ್ರಸಿದ್ಧವಾದ ಈ ಧರಾದೇವಿಯು ಲಕ್ಷ್ಮೀದೇವಿಯ ಸ್ವರೂಪಳಲ್ಲ. ಈ ಭೂದೇವಿಯು (ಧರಾದೇವಿಯು) ಲಕ್ಷ್ಮೀದೇವಿಯಿಂದ ಭಿನ್ನಳೇ (ಏಕೆಂದರೆ—) ಮಹಾ ಲಕ್ಷ್ಮೀ ಸ್ವರೂಪವಾದುದು ಭೂದೇವಿಯು ಬೇರೆ ಈ ಪ್ರಸಿದ್ಧವಾದ ಭೂಮಿಯು ಬೇರೆ ಈ ಪ್ರಸಿದ್ಧಳಾದ ಭೂದೇವಿಯು ಲಕ್ಷ್ಮೀದೇವಿಗೆ ಪ್ರತಿವಾಸ್ತುನೀಯಳು ಧರಾದೇವಿಯು ಪಂಚಭೂತಗಳಲ್ಲಿ ನಿಕೃಷ್ಟಳು ಆ ಭೂರೂಪವಾದ ಲಕ್ಷ್ಮೀದೇವಿಯು ಎಲ್ಲಾ ಪ್ರಾಣಿಗಳಿಗೆ ಮುಖ್ಯಕಾರಣಳು. ಎಂದು ಸೌಕರಾಯಣಶ್ರುತಿಯು. (೭) (ಸಾಕ್ಷಾತ್ಸೀತೆಯೇ ವಾಲ್ಮೀಕಿ ಋಷಿಯ ಭೃತ್ಯಳಾದದ್ದು, ಎಂದು ಮತ್ಸ್ಯಪುರಾಣದಲ್ಲಿ ಹೇಳಿದೆ ಭೃತ್ಯಳೆಂದಾದಮೇಲೆ ದುಃಖವೂ ತಪ್ಪಿದ್ದಲ್ಲ ಆದಕಾರಣ ದುಃಖವುಳ್ಳವಳಲ್ಲ ಎಂದದ್ದು ಹೇಗೆ ಎಂದರೆ-) ಸರ್ವ ಜಗತ್ತಿಗೂ ಪ್ರಪಿತಾಮಹಿಯಾದ ಲಕ್ಷ್ಮೀಸ್ವರೂಪಳಾದ ಸೀತಾದೇವಿಯು ತನ್ನ ಇಚ್ಛೆಯಿಂದಲೇ ವಾಲ್ಮೀಕಿ ಋಷಿಯ ದಾಸ್ಯವನ್ನು ಹೊಂದಿದ್ದು (ಆದಕಾರಣ ಸರ್ವಥಾ ದುಃಖಾನುಭವವು ಇಲ್ಲ) ಎಂದು ಅನಭಿವಜ್ಞಾನ ಶ್ರುತಿಯು ಮತ್ಸ್ಯಪುರಾಣದಲ್ಲಿ ತನ್ನ ಇಚ್ಛೆಯಿಂದಲೇ ವಾಲ್ಮೀಕಿ ಋಷಿಯ ದಾಸ್ಯವನ್ನು ಹೊಂದಿದ್ದೆಂದು ಹೇಳಿದು (೮) ಮಹದ್ಬ್ರಹ್ಮಶಬ್ದವಾಚ್ಯಳೂ ಚಿತ್ಪ್ರಕೃತಿಯಾದ ಲಕ್ಷ್ಮೀದೇವಿಯೇ ಚಿತ್ಪ್ರಕೃತಿಯಾದ ಲಕ್ಷ್ಮೀದೇವಿಯೂ, ಶ್ರೀಪರಮಾತ್ಮನೂ, ಇಬ್ಬರೂ ಮಹದ್ಬ್ರಹ್ಮರೆನಿಸುತ್ತಾರೆ, ಎಂದೂ ಮತ್ಸ್ಯಪುರಾಣದಲ್ಲಿಯೇ ಹೇಳಿದೆ ॥ ೩ ೪ ॥

ಹೀ—ಜೀವರು ಬಂಧನಿವೃತ್ತಿಗಾಗಿ ಸಾಧನವನ್ನು ಮಾಡಬೇಕಾದರೆ ಬಂಧಕಜ್ಞಾನವಾವಶ್ಯಕವಾದುದರಿಂದ ಸತ್ವರಜಸ್ತಮೋಗುಣಗಳಿಂದ ಮಾಡಲ್ಪಟ್ಟ ಬಂಧಪ್ರಕಾರವನ್ನು ಹೇಳುತ್ತಾರೆ—

ಗೀ ॥ ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಂ ॥ ೫ ॥

ಅ ॥ ಹೇ ಮಹಾಬಾಹೋ=ಅರ್ಜುನನೇ, ಪ್ರಕೃತಿಸಂಭವಾಃ=ಸತ್ವರಜಸ್ತಮೋಗುಣಾತ್ಮಕವಾದ ಜಡಪ್ರಕೃತಿಯಿಂದ ಹುಟ್ಟತಕ್ಕ, ಜಡಪ್ರಕೃತಿಯ ಅಂಶಭೂತಗಳಾದ, ಸತ್ವಂ ರಜಸ್ತಮ ಇತಿ ಗುಣಾಃ=ಸತ್ವ ರಜಃ ತಮಃಗಳೆಂಬ ಗುಣಗಳು, ಪ್ರಕೃತಿಸಂಭವಾಃ=ಚಿತ್ಪ್ರಕೃತಿಯಾದ ಲಕ್ಷ್ಮೀದೇವಿಯಿಂದ ಸೃಷ್ಟಿ ಕಾಲದಲ್ಲಿ ವಿಭಾಗಮಾಡಲ್ಪಟ್ಟವುಗಳಾಗಿ, ಮತ್ತು ಸತ್ವ ರಜಸ್ತಮೋಗುಣಗಳಿಗೆ ಅಭಿಮಾನಿನಿಯರಾದ ಸತ್ವ=ಒಳ್ಳೇಗುಣಗಳಿರುವಿಕೆ, (ರಜಃ=) ಸೃಷ್ಟ್ಯಾದಿಗಳನ್ನು ಮಾಡುವಿಕೆ, ತಮಃ=ಜೀವರಿಗೆ

ದುಃಖವನ್ನು ಹೊಂದಿಸಿಕೊಡುವಿಕೆ ಈ ಮೂರು ನಿಮಿತ್ತಗಳಿಂದ ಸತ್ವ ರಜಸ್ತಮಃ ಎನಿಸಿಕೊಂಡ ಶ್ರೀ, ಭೂ, ದುರ್ಗಾ, ಎಂಬೀ ಮೂರು ದೇವಿಯರು ಕೂಡ, ದೇಹೇ = ಶರೀರದಲ್ಲಿರತಕ್ಕ, ಅವ್ಯಯಂ = ಸ್ವರೂಪತಃ ನಾಶವಿಲ್ಲದಿರುವ, ದೇಹಿನಂ = ಜೀವರ ಸಮುದಾಯವನ್ನು ನಿಬಧ್ನಂತಿ = ಬಂಧಿಸುತ್ತವೆ ಬಂಧಿಸುತ್ತಾರೆ.

ವಿ ॥ ಇಲ್ಲಿ ಶ್ರೀ, ಭೂ, ದುರ್ಗಾ ಎಂಬೀ ಮೂರು ದೇವಿಯರೂ ಸಮಸ್ತ ಜೀವರಿಗೂ ಬಂಧಕರಾದಾಗ್ಯೂ ಸತ್ವಾಭಿಮಾನಿನಿಯಾದ ಶ್ರೀದೇವಿಯು ದೇವತೆಗಳಿಗೆ ಬಂಧಕಳು ರಜೋಗುಣಕ್ಕೆ ಅಭಿಮಾನಿನಿಯಾದ ಭೂ ದೇವಿಯು ಮನುಷ್ಯರಿಗೆ ಬಂಧಕಳು ತಮೋಗುಣಕ್ಕೆ ಅಭಿಮಾನಿನಿಯಾದ ದುರ್ಗಾ ದೇವಿಯು ದೈತ್ಯರಿಗೆ ಬಂಧಕಳು. ॥ ೫ ॥

ಪೀ—ಶ್ರೀ ಭೂ ದುರ್ಗಾದೇವಿಯವರು ಮೂರು ರೂಪಗಳಿಂದ ಮಾಡುವ ಮೂರು ವಿಧ ಬಂಧನ ರೀತಿಯನ್ನು ಮೂರು ಶ್ಲೋಕಗಳಿಂದ ವಿವರಿಸಿ ಹೇಳುತ್ತಾರೆ—

ಗೀ ॥ ತತ್ರ ಸತ್ತ್ವಂ ನಿರ್ಮಲತ್ವಾತ್ಪ್ರಕಾಶಕಮನಾಮಯಂ ।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ ॥ ೬ ॥

ಅ ॥ ಅನಘ = ಪಾಪವಿಲ್ಲದಿರುವ ಅರ್ಜುನನೇ ತತ್ರ = ಆ ಸತ್ವ ರಜಸ್ತಮೋಗುಣಗಳಲ್ಲಿಯೂ ಆ ಗುಣಗಳಿಗೆ ಅಭಿಮಾನಿಯರಾದ ಶ್ರೀ ಭೂ ದುರ್ಗಾದೇವಿಯರಲ್ಲಿಯೂ, ಸತ್ವಂ = ಸತ್ವಗುಣವೂ, ಸತ್ವಗುಣಕ್ಕೆ ಅಭಿಮಾನಿನಿಯಾದ ಲಕ್ಷ್ಮೀದೇವಿಯೂ ನಿರ್ಮಲತ್ವಾತ್ = ನಿರ್ದೋಷವಾದುದರಿಂದ ನಿಷ್ಕಲ್ಮಷಳಾಗಿರುವುದರಿಂದ (ದೋಷಲೇಶವಿಲ್ಲದವಳಾದುದರಿಂದ) ಅನಾಮಯಂ = ರೋಗ ವ್ಯಾಧಿ ಮೊದಲಾದ ಉಪದ್ರವಗಳನ್ನು ಹುಟ್ಟದಂತೆ ಮಾಡುವುದಾಗಿ, ಮಾಡವವಳಾಗಿ, ಪ್ರಕಾಶಕಂ = ತತ್ವಜ್ಞಾನವನ್ನು ಹುಟ್ಟಿಸುವುದಾಗಿ, ಹುಟ್ಟಿಸುವವಳಾಗಿ, ಸುಖಸಂಗೇನ = ಸುಖ ಸಂಬಂಧದಿಂದಲೂ ಜ್ಞಾನ ಸಂಗೇನ ಚ = ತತ್ವಜ್ಞಾನ ಸಂಬಂಧದಿಂದಲೂ, ಬಧ್ನಾತಿ = ದೇವತೆಗಳನ್ನು ಬಂಧಿಸುತ್ತದೆ ಬಂಧಿಸುತ್ತಾಳೆ ॥ ೬ ॥

ಭಾ ॥, ಬಂಧಪ್ರಕಾರಂ ದರ್ಶಯತಿ ಸಾಧನಾನುಷ್ಠಾನಾಯ ಸತ್ತ್ವಮಿತ್ಯಾದಿನಾ ॥ ೫,೬ ॥

ಅ ॥ (ಯಾವನು ನಾನು ಸಂಸಾರದಲ್ಲಿ ಬದ್ಧನಾಗಿದ್ದೇನೆಂದು ತಿಳಿಯುತ್ತಾನೋ, ಅವನೇ ಬಂಧನಿವೃತ್ತಿ ಸಾಧನವನ್ನು ವಿಚಾರಮಾಡಿ ತಿಳಿದುಕೊಂಡು ಮಾಡುತ್ತಾನೆ ಆದಕಾರಣ ಸಂಸಾರಬಂಧವನ್ನು ನಿವೃತ್ತಿಗೊಳಿಸಲಿಕ್ಕೆ ಆವಶ್ಯಕವಾದ) ಸಾಧನಗಳನ್ನು ಮಾಡುವುದಕ್ಕಾಗಿ (ಅದನ್ನು ತಿಳಿಸುವುದಕ್ಕಾಗಿ ವಿಶೇಷ ಜಿಜ್ಞಾಸಾವನ್ನು ಹುಟ್ಟಿಸುವುದಕ್ಕಾಗಿ) ಸತ್ವರಜಸ್ತಮೋಗುಣಗಳಿಂದ ಮಾಡಲ್ಪಟ್ಟ ಬಂಧಪ್ರಕಾರವನ್ನು ಸತ್ವಂ ರಜಃ ಇತ್ಯಾದಿ ಶ್ಲೋಕಗಳಿಂದ ತೋರಿಸುತ್ತಾರೆ ॥ ೫, ೬ ॥

ಗೀ ॥ ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಂ ।
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಂ ॥ ೭ ॥

ಅ ॥ ಕೌಂತೇಯ = ಅರ್ಜುನನೇ, ತೃಷ್ಣಾಸಂಗಸಮುದ್ಭವಂ = ತೃಷ್ಣಾ, ಈ ವಸ್ತುವು ನನಗೆ ಸಿಗಲಿ ಆ ವಸ್ತುವು ಸಿಗಲಿ ಎಂಬುವ ಆಶೆಯು, ಸಂಗ ವಸ್ತುಗಳಲ್ಲಿ ಆಸಕ್ತಿಯು, ಇವುಗಳನ್ನು ಹುಟ್ಟಿ

ಸುವ, ರಜಃ=ರಜೋಗುಣವನ್ನು, ರಜೋಗುಣಕ್ಕೆ ಅಭಿಮಾನಿನಿಯಾದ ಭೂದೇವಿಯನ್ನು, ರಾಗಾತ್ಮಕಂ= ಪದಾರ್ಥಗಳ ಸೃಷ್ಟ್ಯಾದಿಗಳನ್ನು ಮಾಡಿ ವಿಶೇಷವಾಗಿ ಅವುಗಳನ್ನು ಪ್ರಕಾಶಗೊಳಿಸುವ ಸ್ವರೂಪವನ್ನಾಗಿ ಸ್ವರೂಪಳನ್ನಾಗಿ, ವಿದ್ಧಿ = ತಿಳಿ ತತ್ = ರಜೋಗುಣವೂ, ರಜೋಗುಣಾಭಿಮಾನಿನಿಯಾದ ಭೂದೇವಿಯೂ, ಕರ್ಮಯೋಗೇನ = ಅವರವರಿಗೆ ಯೋಗ್ಯವಾದ ಕರ್ಮಸಂಬಂಧದಿಂದ, ದೇಹಿನಂ = ಮನುಷ್ಯ ಜೀವನನ್ನು, ನಿಬಧ್ನಾತಿ = ಬಂಧಿಸುತ್ತದೆ ಬಂಧಿಸುತ್ತಾಳೆ ॥ ೭ ॥

ಹೀ ತೃಷ್ಣಾಸಂಗಗಳಿಂದ ಹುಟ್ಟಿದ್ದೆಂದು ಹರರು ಹೇಳುವ ಅರ್ಥವು ಅಯುಕ್ತವೆಂಬುವ ಅಭಿಪ್ರಾಯದಿಂದ ಸರಿಯಾದ ಅರ್ಥವನ್ನು ಹೇಳುತ್ತಾರೆ—

ಭಾ ॥ ತೃಷ್ಣಾ ಸಂಗಯೋಃ ಸಮುದ್ಭವಂ । ತಯೋಃ ಕಾರಣಂ ॥ ೭ ॥

ಅ ॥ ಆಶೆಯು ಮತ್ತು ಸ್ನೇಹಗಳಿಗೆ ಕಾರಣವು ಅಂತೂ ಇವುಗಳನ್ನು ಹುಟ್ಟಿಸುವಂಥಾದ್ದು, ಎಂದೇ ಅರ್ಥವು (ಇವುಗಳಿಂದ ಹುಟ್ಟಿದ್ದೆಂದು ಅರ್ಥವಲ್ಲ) ॥ ೭ ॥

ಗೀ ॥ ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಂ ।
ಪ್ರಮಾದಾಲಸ್ಯನಿದ್ರಾಭಿಸ್ತನ್ನಿಬಧ್ನಾತಿ ಭಾರತ ॥ ೮ ॥

ಅ ॥ ಭಾರತ = ಅರ್ಜುನನೇ, ಅಜ್ಞಾನಜಂ = ಅಜ್ಞಾನ, ವಿಪರೀತ ಜ್ಞಾನಗಳನ್ನು ಹುಟ್ಟಿಸುವ, ತಮಸ್ತು = ತಮೋಗುಣವನ್ನು, ತಮೋಗುಣಕ್ಕೆ ಅಭಿಮಾನಿನಿಯಾದ ದುರ್ಗಾದೇವಿಯನ್ನು, ಸರ್ವ ದೇಹಿನಾಂ = ಸಮಸ್ತ ಜೀವರಿಗೆ, ಮೋಹನಂ = ಮಿಥ್ಯಾಜ್ಞಾನವನ್ನು ಹುಟ್ಟಿಸುವುದನ್ನಾಗಿ ಹುಟ್ಟಿಸುವವಳನ್ನಾಗಿ, ವಿದ್ಧಿ = ತಿಳಿದುಕೊಳ್ಳು ತತ್ = ತಮೋಗುಣವೂ, ಆ ತಮೋಗುಣಾಭಿಮಾನಿನಿಯಾದ ದುರ್ಗಾದೇವಿಯೂ, ಪ್ರಮಾದಾಲಸ್ಯನಿದ್ರಾಭಿಃ = ಪ್ರಮಾದ–ಅವಶ್ಯವಾಗಿ ಮಾಡಬೇಕಾದ ಕಾರ್ಯವನ್ನು ಮರಿಯುವಿಕೆ, ಆಲಸ್ಯ–ಅವಶ್ಯ ಕರ್ತವ್ಯಕರ್ಮವನ್ನು ಮಾಡಲಿಕ್ಕೆ ಪ್ರಯತ್ನ ಪಡದೆ ಔದಾಸೀನ್ಯದಿಂದ ಇರುವಿಕೆ, ನಿದ್ರಾ = ಜಾಗ್ರದವಸ್ಥೆಯಿಲ್ಲದೆ ಸ್ವಪ್ನಸುಷುಪ್ತಿ ಅವಸ್ಥೆಗಳಲ್ಲಿ ಕಾಲವನ್ನು ಕಳೆಯುವುದು, ಇವುಗಳಿಂದ, ನಿಬಧ್ನಾತಿ = ದೈತ್ಯ ಜನರನ್ನು ಬಂಧನಮಾಡುತ್ತದೆ ಚೆನ್ನಾಗಿ ಬಂಧನಮಾಡುತ್ತಾಳೆ. ಏವಂಚ ತಮೋಽಭಿಮಾನಿಯಾದ ದುರ್ಗೆಯೂ ತಮೋಗುಣವೂ ದೈತ್ಯರಿಗೆ ಬಂಧಕಿಯು ॥ ೮ ॥

ಹೀ—ಸತ್ವಾದಿಗುಣಗಳು ಸುಖಾದಿಗಳನ್ನು ಹೊಂದಿಸಿಯೇ ಬಂಧಕಗಳೆಂಬುವ ಹಿಂದೆ ಹೇಳಿದ ಪ್ರಮೇಯವನ್ನು ದೃಢೀಕರಿಸುತ್ತಾರೆ—

ಗೀ ॥ ಸತ್ತ್ವಂ ಸುಖೇ ಸಂಜಯತಿ ರಜಃ ಕರ್ಮಣಿ ಭಾರತ ।
ಜ್ಞಾನಮಾವೃತ್ಯ ತು ತಮಃ ಪ್ರಮಾದೇ ಸಂಜಯತ್ಯುತ ॥ ೯ ॥

ಅ ॥ ಭಾರತ = ಅರ್ಜುನನೇ, ಸತ್ವಂ = ಸತ್ವಗುಣವೂ ಸತ್ವಗುಣಕ್ಕೆ ಅಭಿಮಾನಿನಿಯಾದ ಶ್ರೀದೇವಿಯೂ ಸುಖೇ = ಸಾತ್ವಿಕ ಸುಖವಿಷಯದಲ್ಲಿ ಸಂಜಯತಿ = ಜೀವರಿಗೆ ಪ್ರವೃತ್ತಿಮಾಡುವಂತೆ, ಮಾಡುತ್ತದೆ, ಮಾಡುತ್ತಾಳೆ ರಜಃ = ರಜೋಗುಣವೂ ರಜೋಭಿಮಾನಿನಿಯಾದ ಭೂದೇವಿಯೂ, ಕರ್ಮಣಿ = ಕರ್ಮ ಮಾಡುವ ವಿಷಯದಲ್ಲಿ, ಸಂಜಯತಿ = ಜೀವರು ಪ್ರವರ್ತಿಸುವಂತೆ, ಮಾಡುತ್ತದೆ. ಮಾಡುತ್ತಾಳೆ ತಮಸ್ತು = ತಮೋಗುಣವೂ, ತಮೋಽಭಿಮಾನಿನಿಯಾದ ದುರ್ಗಾದೇವಿಯೂ ಜ್ಞಾನಂ = ಮನಸ್ಸಿಗೆ ಇರುವ

ಉತ್ತಮ ತತ್ವಜ್ಞಾನಶಕ್ತಿಯನ್ನು, ಆವೃತ್ಯ=ತಡೆದು, (ಬಾರದಿದ್ದಂತೆ ಮಾಡಿ) ಪ್ರಮಾದೇ=ಮಹಾತ್ಮರು ಉಪದೇಶಿಸಿದ ಯೋಗ್ಯವಾದ ಅರ್ಥದಲ್ಲಿ ಮನಸ್ಸು ನಿಲ್ಲದೆ ಅಧರ್ಮ ಬುದ್ಧ್ಯಾದಿರೂಪವಾದ ಅರ್ಥದಲ್ಲಿಯೂ, ಉತ=ಅಲಸ್ಯಾದಿಗಳಲ್ಲಿಯೂ, (ಪ್ರವೃತ್ತಿಯಾಗುವಂತೆ) ಸಂಜಯತಿ=ತಗಲಿಸುತ್ತಾ ಇರುತ್ತದೆ ಇರುತ್ತಾಳೆ. (ಈ ರೀತಿಯಾಗಿ ಈ ಮೂರು ದೇವಿಯರು ಮೂರು ಪ್ರಕಾರ ಬಂಧಿಸುತ್ತಾ ಇರುತ್ತಾರೆ) ॥೯॥

ಪೀ—ಸತ್ವ ರಜಸ್ತಮೋಗುಣಗಳಿಗೆ ಮೂರಕ್ಕೂ, ಸರ್ವ ಬಂಧಕತ್ವವು ಸಮಾನವಾಗಿರುವಾಗ ಒಬ್ಬೊಬ್ಬರಲ್ಲಿ ಒಂದೊಂದು ಗುಣಕಾರ್ಯವೇ ಕಾಣುವುದು ಹೇಗೆ? ಎಂದರೆ—

ಗೀ ॥ ರಜಸ್ತಮಶ್ಚಾಭಿಭೂಯ ಸತ್ತ್ವಂ ಭವತಿ ಭಾರತ ।
ರಜಸ್ಸತ್ತ್ವಂ ತಮಶ್ಚೈವ ತಮಸ್ಸತ್ತ್ವಂ ರಜಸ್ತಥಾ ॥ ೧೦ ॥

ಭಾರತ=ಅರ್ಜುನನೇ, ಸತ್ವಂ=ಸತ್ವಗುಣವು (ಶ್ರೀಪರಮಾತ್ಮನ ಇಚ್ಛೆಯಿಂದ ಅತಿಶಯವಾಗಿ) ರಜಃ=ರಜೋಗುಣವನ್ನು, ತಮಶ್ಚ=ತಮೋಗುಣವನ್ನು, ಅಭಿಭೂಯ=ತಿರಸ್ಕರಿಸಿ, ಭವತಿ=ಆಗುತ್ತದೆ (ಅಂದರೆ ರಜಸ್ತಮೋಗುಣಗಳ ಕಾರ್ಯಗಳನ್ನು ಆಗದಿದ್ದಂತೆ ಮಾಡಿ ತನ್ನಿಂದ ಆಗುವಂತಹ ಭಕ್ತಿ ಜ್ಞಾನಾದಿ ಸುಖಗಳನ್ನುಂಟುಮಾಡುವುದರಲ್ಲಿಯೇ ಸಮರ್ಥವಾಗುತ್ತದೆ) ತಥಾ=ಹಾಗೆಯೇ, ರಜಃ=ರಜೋಗುಣವು, (ಶ್ರೀಪರಮಾತ್ಮನ ಇಚ್ಛೆಯಿಂದ ಹೆಚ್ಚಾಗಿ) ಸತ್ವಂ=ಸತ್ವಗುಣವನ್ನು ತಮಶ್ಚ=ತಮೋಗುಣವನ್ನು, ತಿರಸ್ಕರಿಸಿ, (ಅವುಗಳ ಕಾರ್ಯವಾಗದಿದ್ದಂತೆ ಮಾಡಿ ಕರ್ಮಾದಿಗಳಲ್ಲಿ ಆಸಕ್ತ್ಯಾದಿರೂಪವಾದ ತನ್ನ ಕಾರ್ಯವನ್ನುಂಟುಮಾಡುವುದರಲ್ಲಿಯೇ ಸಮರ್ಥವಾಗುತ್ತದೆ) ಹಾಗೆಯೇ, ತಮಃ=ತಮೋಗುಣವು, (ಹೆಚ್ಚಾಗಿ) ಸತ್ವಂ=ಸತ್ವಗುಣವನ್ನು ರಜಃ=ರಜೋಗುಣವನ್ನು ತಿರಸ್ಕರಿಸಿ (ಅಂದರೆ—ಅವುಗಳ ಕಾರ್ಯವಾಗದಿದ್ದಂತೆ ಮಾಡಿ) (ಪ್ರಮಾದ ಆಲಸ್ಯ ನಿದ್ರಾ ಮೊದಲಾದ ತನ್ನ ಕಾರ್ಯವನ್ನುಂಟುಮಾಡುವುದರಲ್ಲಿಯೇ ಸಮರ್ಥವಾಗುತ್ತದೆ. (ಇಲ್ಲಿ ಸತ್ವ ರಜಸ್ತಮೋಗುಣಗಳೇ ಕಾರ್ಯಶಕ್ತಿಗೆ ಪ್ರತಿಬಂಧಕಗಳು ಅಭಿಮಾನಿದೇವತೆಗಳಿಗೆ ಔದಾಸೀನ್ಯವೇ ಎಂದು ತಿಳಿಯಬೇಕು ಏವಂಚ ಎಲ್ಲರಿಗೂ ಸತ್ವ ರಜ ಸ್ತಮೋಗುಣಗಳೂ, ಶ್ರೀ. ಭೂ, ದುರ್ಗಾದೇವಿಯರು ಮೂವರೂ ಬಂಧಕರಾದಾಗ್ಯೂ ಪ್ರಾಬಲ್ಯಾನುಸಾರ ಅವರವರ ಕಾರ್ಯವ್ಯವಹಾರಗಳು ಆಗುತ್ತವೆಂದು ಇಟ್ಟುಕೊಳ್ಳಬೇಕು) ॥ ೧೦ ॥

ಪೀ—ಮುಂದಿನ ಮೂರು ಶ್ಲೋಕಗಳಿಂದ ಸತ್ವಾದಿಗುಣಗಳ ಅಭಿವೃದ್ಧಿಗೆ ಜ್ಞಾಪಕವನ್ನು ಹೇಳುತ್ತಾರೆ—

ಗೀ ॥ ಸರ್ವದ್ವಾರೇಷು ದೇಹೇಸ್ಮಿನ್ಪ್ರಕಾಶ ಉಪಜಾಯತೇ ।
ಜ್ಞಾನಂ ಯದಾ ತದಾ ವಿದ್ಯಾದ್ವಿವೃದ್ಧಂ ಸತ್ತ್ವಮಿತ್ಯುತ ॥ ೧೧ ॥

ಅ ॥ ಅಸ್ಮಿನ್ ದೇಹೇ=ಈ ಶರೀರದಲ್ಲಿ, ಸರ್ವದ್ವಾರೇಷು=ಶ್ರೋತ್ರ ಮೊದಲಾದ ಎಲ್ಲಾ ಇಂದ್ರಿಯಗಳ ದ್ವಾರಗಳಲ್ಲಿಯೂ, ಜ್ಞಾನಂ=ಜೆನ್ನಾಗಿ ಶಬ್ದಾದಿಗಳ ಜ್ಞಾನವೆಂಬುವ ಪ್ರಕಾಶವು, ಉತ=ಸುಖಾದಿಗಳೂ ಕೂಡ, ಯದಾ=ಯಾವಾಗ, ಉಪಜಾಯತೇ=ಹುಟ್ಟುತ್ತವೋ, ತದಾ=ಆಗ, ಸತ್ವಂ=ಸತ್ವಗುಣವು, ವಿವೃದ್ಧಮಿತಿ=ಅಬಿವೃದ್ಧವಾಗಿದೆ ಎಂದು, ವಿದ್ಯಾತ್=ತಿಳಿಯಬೇಕು ॥ ೧೧ ॥

ಗೀ ॥ ಲೋಭಃ ಪ್ರವೃತ್ತಿರಾರಂಭಃ ಕರ್ಮಣಾಮಶಮಃ ಸ್ಪೃಹಾ ।
ರಜಸ್ಯೇತಾನಿ ಜಾಯಂತೇ ವಿವೃದ್ಧೇ ಭರತರ್ಷಭ ॥ ೧೨ ॥

ಅ ॥ ಭರತರ್ಷಭ=ಅರ್ಜುನನೇ, ಲೋಭಃ=ಧನಾದಿಗಳಲ್ಲಿ ಅಭಿಲಾಷೆಯಿಂದ ತ್ಯಾಗಮಾಡಬಾರದೆಂಬುವ ಇಚ್ಛೆಯು, ಪ್ರವೃತ್ತಿಃ=ಕಾರ್ಯವನ್ನು ಮಾಡುವುದರಲ್ಲಿ ವ್ಯರ್ಥವಾದ ಉದ್ಯೋಗವು, ಕರ್ಮಣಾಂ=ಕಾವ್ಯಕರ್ಮಗಳ, ಆರಂಭಃ=ಪ್ರಾರಂಭಮಾಡುವಿಕೆಯು, ಅಶಮಃ=ಮನಸ್ಸಿಗೆ ವಿಷಯಗಳಲ್ಲಿ ಅಲಂಬುದ್ಧಿಯಿಲ್ಲದಿರುವುದು, (ಬಹು ವಿಷಯಗಳನ್ನು ಭೋಗಿಸಿದರೂ ಸಾಕೆಂಬ ಬುದ್ಧಿಯಿಲ್ಲದಿರುವಿಕೆಯು) ಸ್ಪೃಹಾ=ಸರ್ವಥಾ ಸಿಗಲಿಕ್ಕೆ ಅಸಾಧ್ಯಗಳಾದ ವಸ್ತುಗಳಲ್ಲಿ ಅಭಿಲಾಷೆಯು, ಏತಾನಿ=ಇವುಗಳೆಲ್ಲವೂ, ರಜಸಿ=ರಜೋಗುಣವು, ವಿವೃದ್ಧೇ ಸತಿ=ಅಭಿವೃದ್ಧವಾಗುತ್ತಿರಲು, ಜಾಯಂತೇ=ಹುಟ್ಟುತ್ತವೆ (ಈ ಕಾರ್ಯಗಳಿಂದ ರಜೋಗುಣವು ಅಭಿವೃದ್ಧಿಯಾಗಿದೆ ಎಂದು ತಿಳಿದುಕೊಳ್ಳಬೇಕು) ॥ ೧೨ ॥

ಗೀ ॥ ಅಪ್ರಕಾಶೋಽಪ್ರವೃತ್ತಿಶ್ಚ ಪ್ರಮಾದೋ ಮೋಹ ಏವ ಚ ।
ತಮಸ್ಯೇತಾನಿ ಜಾಯಂತೇ ವಿವೃದ್ಧೇ ಕುರುನಂದನ ॥ ೧೩ ॥

ಅ ॥ ಕುರುನಂದನ=ಅರ್ಜುನನೇ, ಅಪ್ರಕಾಶಃ=ಶ್ರೋತ್ರ ಮೊದಲಾದ ಜ್ಞಾನೇಂದ್ರಿಯಗಳಿಂದ ಶಬ್ದ ಮೊದಲಾದ ಗುಣಗಳ ಜ್ಞಾನವು ಹುಟ್ಟದಿರುವುದು, ಅಪ್ರವೃತ್ತಿಶ್ಚ=ಸತ್ಕಾರ್ಯ ಮಾಡುವದರಲ್ಲಿ ಉದ್ಯೋಗವಿಲ್ಲದಿರುವುದು, ಪ್ರಮಾದಃ=ಕಾಲದಲ್ಲಿ ಮಾಡತಕ್ಕ ಕಾರ್ಯಗಳನ್ನು ವಿಚಾರಿಸದೆ ಮೈಮರವೇತನವು (ಅಜಾಗ್ರತೆಯು) ಮೋಹಃ=ವಿಪರೀತಜ್ಞಾನವು, ಏತಾನಿ=ಇವುಗಳು, ತಮಸಿ=ತಮೋಗುಣವು ವಿವೃದ್ಧೇ=ಅಭಿವೃದ್ಧವಾಗುತ್ತಿರಲು, (ಹೆಚ್ಚು-ಯಿರಲಾಗಿ) ಜಾಯಂತೇ=ಹುಟ್ಟುತ್ತವೆ (ಈ ಚಿಹ್ನೆಗಳಿಂದ ತಮೋಗುಣವು ವಿಶೇಷವಾಗಿ ಅಭಿವೃದ್ಧಿಯಾಗಿದೆ, ಎಂದು ತಿಳಿಯಬೇಕು. ॥ ೧೩ ॥

ಪೀ—ಸತ್ವ ಮೊದಲಾದ ಗುಣಗಳು ಅಭಿವೃದ್ಧಿಯಾದಾಗ ಮರಣ ಹೊಂದಿದವರಿಗೆ ಆಗತಕ್ಕ ಗತಿಭೇದವನ್ನು ಹೇಳುತ್ತಾನೆ—

ಗೀ ॥ ಯದಾ ಸತ್ತ್ವೇ ಪ್ರವೃದ್ಧೇ ತು ಪ್ರಲಯಂ ಯಾತಿ ದೇಹಭೃತ್ ।
ತದೋತ್ತಮವಿದಾಂ ಲೋಕಾನಮಲಾನ್ಪ್ರತಿಪದ್ಯತೇ ॥ ೧೪ ॥

ಅ ॥ ಯದಾ=ಯಾವಾಗ, ಸತ್ತ್ವೇ=ಸತ್ವಗುಣವು, ಪ್ರವೃದ್ಧೇ ತು=ಅಭಿವೃದ್ಧಿಯಾದಾಗ, ದೇಹಭೃತ್=ಜೀವನು, ಪ್ರಲಯಂ=ಮರಣವನ್ನು, ಯಾತಿ=ಹೊಂದುತ್ತಾನೋ, (ಮೃತನಾಗುತ್ತಾನೋ,) ತದಾ=ಆಗ ಉತ್ತಮವಿದಾಂ=ವಿಷ್ಣುತತ್ಸಜ್ಞಾನಿಗಳಿಗೆ ಹೊಂದಲು ಯೋಗ್ಯಗಳಾದ, ಅಮಲಾನ್=ನಿರ್ದೋಷಗಳಾದ, ಲೋಕಾನ್=ದೇಹಗಳನ್ನು, ಪ್ರತಿಪದ್ಯತೇ=ಹೊಂದುತ್ತಾನೆ (ಅಂದರೆ ಸಾತ್ವಿಕರ ಕುಲದಲ್ಲಿ ಹುಟ್ಟುತ್ತಾನೆ ॥ ೧೪ ॥

ಗೀ ॥ ರಜಸಿ ಪ್ರಲಯಂ ಗತ್ವಾ ಕರ್ಮಸಂಗಿಷು ಜಾಯತೇ ।
ತಥಾ ಪ್ರಲೀನಸ್ತಮಸಿ ಮೂಢಯೋನಿಷು ಜಾಯತೇ ॥ ೧೫ ॥

ಅ ॥ ರಜಸಿ = ರಜೋಗುಣವು, (ಅಭಿವೃದ್ಧವಾಗುತ್ತಿರಲು,) (ರಜೋಗುಣವು ವೃದ್ಧಿಯಾಗಿದ್ದ ಕಾಲದಲ್ಲಿ) ಪ್ರಲಯಂ = ಮರಣವನ್ನು, ಗತ್ವಾ = ಹೊಂದಿ, ಕರ್ಮಸಂಗಿಷು = ಕಾಮ್ಯಕರ್ಮಗಳನ್ನು ಮಾಡುವವರಲ್ಲಿ, (ಕಾಮ್ಯಕರ್ಮಿಗಳ ಕುಲದಲ್ಲಿ) ಜಾಯತೇ = ಹುಟ್ಟುತ್ತಾನೆ ತಥಾ = ಹಾಗೆಯೇ, ತಮಸಿ = ತಮೋಗುಣವು, (ಅಭಿವೃದ್ಧವಾಗುತ್ತಿರಲು,) (ತಮೋಗುಣವು ಹೆಚ್ಚಿದ್ದ ಕಾಲದಲ್ಲಿ) ಪ್ರಲೀನಃ = ಮರಣಹೊಂದಿದವನು, ಮೂಢಯೋನಿಷು = ದೈತ್ಯರೇ ಮೊದಲಾದ ಕುಲಗಳಲ್ಲಿ, ಜಾಯತೇ = ಹುಟ್ಟುತ್ತಾನೆ ॥ ೧೫ ॥

ಪೀ — ತಮಸ್ತ್ವಜ್ಞಾನಜಂ ಎಂಬುವುದಕ್ಕೆ ಅಜ್ಞಾನದಿಂದ ಹುಟ್ಟಿದ್ದೆಂಬುವ ಅಪವ್ಯಾಖ್ಯಾನವನ್ನು ನಿರಾಕರಿಸುತ್ತಾರೆ —

ಭಾ ॥ ಅಜ್ಞಾನಂ ಜಾಯತೇ ಯತಸ್ತದಜ್ಞಾನಜಂ । ಪ್ರಮಾದಮೋಹೌ ತಮಸ ಇತಿ ವಾಕ್ಯಶೇಷಾತ್ ॥ ೮—೧೫ ॥

ಅ ॥ ಪ್ರಮಾದ ಮೋಹಗಳು ತಮೋಗುಣದಿಂದ ಹುಟ್ಟುತ್ತವೆಂದು ವಾಕ್ಯಶೇಷದಲ್ಲಿ ಅಜ್ಞಾನವು ತಮೋಗುಣದ ಕಾರ್ಯವೆಂದು ಹೇಳಿದ್ದಿಂದ ಅಜ್ಞಾನಜಂ ಎಂಬುವುದಕ್ಕೆ ಅಜ್ಞಾನವು ಯಾವುದರಿಂದ ಹುಟ್ಟುತ್ತದೋ ಅದು ಅಜ್ಞಾನಜವು ಅಜ್ಞಾನಕ್ಕೆ ಕಾರಣವು ಎಂದರ್ಥವು ॥ ೮—೧೫ ॥

ಪೀ — ಸಾತ್ವಿಕರಾಜಸತಾಮಸರ ಕರ್ಮಗಳಿಗೆ ಫಲವನ್ನು ಹೇಳುತ್ತಾರೆ —

ಗೀ ॥ ಕರ್ಮಣಃ ಸುಕೃತಸ್ಯಾಹುಃ ಸಾತ್ವಿಕಂ ನಿರ್ಮಲಂ ಫಲಂ ।
ರಜಸಸ್ತು ಫಲಂ ದುಃಖಮಜ್ಞಾನಂ ತಮಸಃ ಫಲಂ ॥ ೧೬ ॥

ಅ ॥ ಸುಕೃತಸ್ಯ = ಜ್ಞಾನಿಗಳ ಕುಲದಲ್ಲಿ ಹುಟ್ಟಿದವನಿಂದ ಚೆನಾಗಿ ಮಾಡಲ್ಪಟ್ಟ, ಕರ್ಮಣಃ = ಯೋಗ್ಯ ಕರ್ಮಗಳಿಗೆ, ಸಾತ್ವಿಕಂ = ಸತ್ವಗುಣವೇ ಪ್ರಧಾನವಾಗಿ ಉಳ್ಳ, ನಿರ್ಮಲಂ = ದುಃಖಲೇಶವೂ ಇಲ್ಲದ, ಫಲಂ = ಸುಖರೂಪಉತ್ತಮ ಫಲವನ್ನು, ಆಹುಃ = ಹೇಳುತ್ತಾರೆ ರಜಸಸ್ತು = ರಾಜಸಕರ್ಮಕ್ಕಾದರೋ, ದುಃಖಂ = ದುಃಖಮಿಶ್ರವಾದ ಸುಖವನ್ನು, ಫಲವನ್ನಾಗಿ ಹೇಳುತಾರೆ ತಮಸಸ್ತು = ತಾಮಸ ಕರ್ಮಕ್ಕಾದರೂ ಅಜ್ಞಾನಂ = ಅಜ್ಞಾನವನ್ನು, ಅಜ್ಞಾನಕಾರ್ಯವನ್ನು ಫಲಂ = ಫಲವನಾಗಿ ಹೇಳುತ್ತಾರೆ ॥ ೧೬ ॥

ಪೀ — ನಿರ್ಮಲತ್ವಾದಿರೂಪವಾದ ಫಲವನ್ನು ವಿವರಿಸಿ ಹೇಳುತ್ತಾರೆ —

ಗೀ ॥ ಸತ್ತ್ವಾತ್ಸಂಜಾಯತೇ ಜ್ಞಾನಂ ರಜಸೋ ಲೋಭ ಏವ ಚ ।
ಪ್ರಮಾದಮೋಹೌ ತಮಸೋ ಭವತೋಽಜ್ಞಾನಮೇವ ಚ ॥ ೧೭ ॥

ಅ ॥ ಸತ್ವಾತ್ = ಸತ್ವಗುಣದೆಶೆಯಿಂದ, ಜ್ಞಾನಂ = ಪರಾಪರ ತತ್ವವಿಷಯಕ ಜ್ಞಾನವು, ಸಂಜಾಯತೇ = ಹುಟ್ಟುತ್ತದೆ ರಜಸಶ್ಚ = ರಜೋಗುಣದೆಶೆಯಿಂದ, ಲೋಭ ಏವ = ಸ್ವರ್ಗ ಮೊದಲಾದ ವಿಷಯಗಳಲ್ಲಿ ಆಸಕ್ತಿಯೂ, ಸಂಜಾಯತೇ = ಹುಟ್ಟುತ್ತದೆ. ತಮಸಶ್ಚ = ತಮೋಗುಣದೆಶೆಯಿಂದ, ಪ್ರಮಾದ ಮೋಹೌ = ಪ್ರಮಾದವೂ, ಮೂಢಭಾವ ಇವುಗಳೂ, ಭವತಃ = ಆಗುತ್ತವೆ, ಅಜ್ಞಾನಂ ಚ ಅಜ್ಞಾನವೂ ಕೂಡ ಭವತಿ = ಉಂಟಾಗುತ್ತದೆ ॥ ೧೭ ॥

ಪೀ - ಸತ್ವವೊದಲಾದ ಗುಣಗಳ ದೆಶೆಯಿಂದ ಜ್ಞಾನ ಲೋಭ ಪ್ರವೃತ್ತಾದಿಗಳು ಸಾಕ್ಷಾತ್ತಾಗಿ ಹುಟ್ಟುವುದಾದರೂ ಅವುಗಳು ಸ್ವಭಾವತಃ ಸಾಕ್ಷಾತ್ ಸ್ಥಲಗಳಾಗದೆ ಇರುವುದರಿಂದ ಸತ್ವಾದಿ ಗುಣಗಳ ದೆಶೆಯಿಂದುಂಟಾಗತಕ್ಕ ಫಲಗಳನ್ನು ಹೇಳುತ್ತಾರೆ—

ಗೀ ॥ ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ ।
ಜಘನ್ಯಗುಣವೃತ್ತಿಸ್ಥಾ ಅಧೋ ಗಚ್ಛಂತಿ ತಾಮಸಾಃ ॥ ೧೮ ॥

ಅ ॥ ಸತ್ವಸ್ಥಾಃ=ಸಾತ್ವಿಕ ಜನರು, ಜ್ಞಾನೇನ=ಜ್ಞಾನದಿಂದ, ಊರ್ಧ್ವಂ=ಜನೋಲೋಕ ಮೊದಲಾದ ಮೇಲಿನ ಉತ್ತಮ ಲೋಕಗಳನ್ನು, ಗಚ್ಛಂತಿ=ಹೊಂದುತ್ತಾರೆ ರಾಜಸಾಃ=ಕಾಮ್ಯಕರ್ಮಗಳನ್ನು ಮಾಡುವ ಜನರೂ ಮಧ್ಯೇ=ಸ್ವರ್ಗ ಮೊದಲಾದ ಲೋಕಗಳಲ್ಲಿ, ತಿಷ್ಠಂತಿ=ಇರುತ್ತಾರೆ ಜಘನ್ಯಗುಣವೃತ್ತಿಸ್ಥಾಃ=ಸತ್ವಗುಣ ರಜೋಗುಣಗಳಿಗಿಂತ ನಿಕೃಷ್ಟವಾದ ತಮೋಗುಣದ ಪರಿಣಾಮವಾದ ಅಜ್ಞಾನ, ಪ್ರಮಾದ ನಿದ್ರಾ ಆಲಸ್ಯಗಳುಳ್ಳ, ತಾಮಸಾಃ=ತಾಮಸಜನರು, ಅಧಃ ಗಚ್ಛಂತಿ=ನರಕವನ್ನು ಹೊಂದುತ್ತಾರೆ ॥ ೧೮ ॥

ಪೀ - ರಜಸಸ್ತು ಫಲಂ ದುಃಖಂ (ಶ್ಲೋ ೧೬)ಎಂಬುವಲ್ಲಿದ್ದ ದುಃಖಶಬ್ದವು ಕೇವಲ ದುಃಖವಾಚಕವೆಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ಭಾ ॥ (೧) ರಜಸಸ್ತು ಫಲಂ ದುಃಖಮಿತ್ಯಲ್ಪಸುಖಂ ದುಃಖಂ ॥ (೨) ತಥಾ ಚ ಶಾರ್ಕ್ಷ ರಾಕ್ಷಶಾಖಾಯಾಂ । ರಜಸೋ ಹ್ಯೇವ ಜಾಯತೇ ಮೂತ್ರಯೂಥಾ ಸುಖಂ ದುಃಖಂ ತಸ್ಮಾತ್ತಾನ್ಸುಖಿನೋ ದುಃಖಿನ ಇತ್ಯಾಚಕ್ಷತ ಇತಿ ॥ (೩) ಅನ್ಯಥಾ ದುಃಖಸ್ಯಾತಿಕಷ್ಟತ್ವಾತ್ । ತಮೋಧಿಕತ್ವಂ ರಜಸೋ ನ ಸ್ಯಾತ್ ॥ ೧೬,೧೭,೧೮ ॥

ಆ ॥ ರಜಸಸ್ತು ಫಲಂ ದುಃಖಂ ಎಂಬುವಲ್ಲಿದ್ದ ದುಃಖಶಬ್ದದಿಂದ ಅಲ್ಪ ಸುಖಮಿಶ್ರಿತವಾದ ದುಃಖವು ಹೇಳಲ್ಪಡುತ್ತದೆ (೨) (ಅದು ಹೇಗೆಂದರೆ—) ರಜೋಗುಣದಿಂದಲೇ ಅತ್ಯಲ್ಪವಾದ ಸುಖವೂ ಸುಖಕ್ಕಿಂತ ಹೆಚ್ಚು ದುಃಖವೂ ಕೂಡ ಹುಟ್ಟುತ್ತದೆ ಆದಕಾರಣ ರಾಜಸ ಕರ್ಮಿಗಳನ್ನು ಸುಖಿಗಳನ್ನಾಗಿಯೂ, ದುಃಖಿಗಳನ್ನಾಗಿಯೂ ಹೇಳುತ್ತಾರೆ, ಎಂದು ಶಾರ್ಕ್ಷರಾಕ್ಷ ಶಾಖೆಯಲ್ಲಿ ಹೇಳಿದೆ (೩) ಸುಖಮಿಶ್ರಿತ ದುಃಖವೆ ದರ್ಧವನ್ನಂಗೀಕರಿಸದೆ ಕೇವಲ ದುಃಖವೆಂದರ್ಧವನ್ನಂಗೀಕರಿಸಿದರೆ ದುಃಖವು ತಮಸ್ಸಿನ ಫಲವಾದ ಅಜ್ಞಾನಕ್ಕಿಂತಲೂ ನಿಕೃಷ್ಟವಾಗಿರುವುದರಿಂದ ಕೇವಲ ದುಃಖವೇ ಫಲವಾಗಿ ಉಳ್ಳ ರಜೋಗುಣಕ್ಕೆ ತಮೋಗುಣಕಿಂತ ಅಧಿಕ್ಯ ಹೇಳಿದ್ದು ಕೂಡದೆ ಹೋಗುವುದು (ಅಂದರೆ—**ಮಧ್ಯೇ ತಿಷ್ಠಂತಿ ರಾಜಸಾಃ ಅಧೋ ಗಚ್ಛಂತಿ ತಾಮಸಾಃ** ಇತ್ಯಾದಿಗಳನ್ನು ಹೇಳಿದ್ದು ಕೂಡದೆ ಹೋಗುವುದು)॥೧೬-೧೮॥

ಪೀ—ಹೀಗೆ ಸತ್ವ ರಜಸ್ತಮೋಗುಣಗಳನ್ನು ವಿವರಿಸಿ ಅವುಗಳು ಜಗತ್ತಿಗೆ ಬಂಧಕಗಳೆಂದು ಹೇಳಿ ಅವುಗಳಿಂದುಂಟಾಗತಕ್ಕ ಫಲಗಳನ್ನು ಹೇಳಿದರು ಹೀಗೆಯೇ **ಕಾರ್ಯತೇ ಹ್ಯವಶಃ** ಎಂಬುವಲ್ಲಿ ಸಂಕ್ಷೇಪವಾಗಿ ಹೇಳಿದ ತ್ರೈಗುಣ್ಯವನ್ನು ವಿವರಿಸಿ ಹೇಳುವಾಗ ಗುಣಗಳೇ ಸರ್ವೋತ್ಕೃಷ್ಟಗಳು, ಅವುಗಳಿಗಿಂತ ಇನ್ನೊಬ್ಬನು ಸರ್ವೋತ್ಕೃಷ್ಟನಿಲ್ಲ, ಎಂಬ ಶಂಕೆಯು ಬರುವುದು ಆದನ್ನು ಹೋಗಲಾಡಿಸುತ್ತಾರೆ

ಗೀ ॥ ನಾನ್ಯಂ ಗುಣೇಭ್ಯಃ ಕರ್ತಾರಂ ಯದಾ ದ್ರಷ್ಟಾನುಪಶ್ಯತಿ ।
ಗುಣೇಭ್ಯಶ್ಚ ಪರಂ ವೇತ್ತಿ ಮದ್ಭಾವಂ ಸೋಽಧಿಗಚ್ಛತಿ ॥ ೧೯ ॥

ಅ ॥ ದ್ರಷ್ಟಾ=ಜೀವನು, ಯದಾ=ಯಾವಾಗ, ಗುಣೇಭ್ಯಃ=ಸತ್ವಾದಿ ಗುಣಗಳಿಗಿಂತ, ಅನ್ಯಂ=ಇನ್ನೊಂದು, ತರ್ತಾರಂ=ಪರಿಣಾಮಕಾರಣವಾದ ವಸ್ತುವನ್ನು ನಾನುಪಶ್ಯಂತಿ=ನೋಡುವುದಿಲ್ಲವೋ, ಗುಣೇಭ್ಯೆಶ್ಚ=ಸತ್ವಾದಿ ಗುಣಗಳಿಗಿಂತ, ಪರಂ=ಸರ್ವಸ್ವತಂತ್ರನಾದ ಶ್ರೀಪರಮಾತ್ಮನನ್ನು, ವೇತ್ತಿ=ತಿಳಿಯುತ್ತಾನೋ, ಸಃ=ಅಂತಹ ಜ್ಞಾನಿಯು, ಮದ್ಭಾವಂ=ನನ್ನಲ್ಲಿ ಜ್ಞಾನಾನಂದಾತ್ಮಕವಾದ ಸ್ಥಿತಿಯನ್ನು, ಅಧಿಗಚ್ಛತಿ=ಹೊಂದುತ್ತಾನೆ ಅಥವಾ ಯಾವನು ಗುಣಗಳ ದೆಶೆಯಿಂದ ಇನ್ನೊಬ್ಬ ಸ್ವತಂತ್ರ ಕರ್ತನು ಶ್ರೀಪರಮಾತ್ಮನೆಂದು ಯಾವಾಗ ತಿಳಿಯುತ್ತಾನೋ, ಹಾಗೆ ನೋಡುವವನೇ ನಾ=ಜ್ಞಾನಿಯಾದ ಪುರುಷನು (ಇಲ್ಲವಾದರೆ ಪಶುತುಲ್ಯನು) ಗುಣಗಳಿಗಿಂತ ಶ್ರೀಪರಮಾತ್ಮನು ಭಿನ್ನನೆಂದು ನೋಡುವವನು ಮಾತ್ರ ಪುರುಷನೆಂದಲ್ಲ ಮತ್ತೆ ಶ್ರೀಪರಮಾತ್ಮನು ಗುಣಗಳಿಂದ ಉತ್ತಮನೆಂದು ತಿಳಿದವನೂ ಪುರುಷನೆನಿಸುವನು ಏಕೆಂದರೆ— ಹಾಗೆ ತಿಳಿದವನು ಮೋಕ್ಷವನ್ನು ಹೊಂದುತ್ತಾನೆ ॥ ೧೯ ॥

ಪೀ—ಸುಖದುಃಖಾದಿರೂಪವಾದ ಬಂಧಕ್ಕೆ ಸತ್ವ ರಜಸ್ತಮೋಗುಣಗಳು ಕಾರಣಗಳಾಗಿರುವುದರಿಂದ ಆ ಗುಣಗಳನ್ನು ಅತಿಕ್ರಮಿಸಿದರೇ ಸಂಸಾರಬಂಧವು ನಾಶವಾಗುವುದು ಇಲ್ಲವಾದರೆ ನಾಶವಾಗಲಾರದೆನ್ನುತ್ತಾರೆ—

ಗೀ ॥ ಗುಣಾನೇತಾನತೀತ್ಯ ತ್ರೀನ್ದೇಹೀ ದೇಹಸಮುದ್ಭವಾನ್ ।
ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಽಮೃತಮಶ್ನುತೇ ॥ ೨೦ ॥

ಅ ॥ ದೇಹೀ=ಜೀವನು, ದೇಹಸಮುದ್ಭವಾನ್=ಆವಾವ ಗುಣ ಪರಿಣಾಮಗಳಾದ ದೇಹಗಳಲ್ಲಿ ಪ್ರಕಟೀಭೂತಗಳಾದ, ತ್ರೀನ್ ಏತಾನ್ ಗುಣಾನ್=ಈ ಮೂರು ಗುಣಗಳನ್ನು, ಅತೀತ್ಯ=ದಾಟಿಯೇ, ಜನ್ಮಮೃತ್ಯುಜರಾದುಃಖೈಃ=ಅತಿಘೋರ ದುಃಖವಿರುವ ಉತ್ಪತ್ತಿ ಮರಣ ಮುದಿತನ, ದುಃಖಗಳಿಂದ, ವಿಮುಕ್ತಃ=ಬಿಡಲ್ಪಟ್ಟವನಾಗಿ, ಅಮೃತಂ=ಪರಬ್ರಹ್ಮನನ್ನು, ಅಶ್ನುತೇ=ಹೊಂದುತ್ತಾನೆ (ಮುಕ್ತನಾಗುತ್ತಾನೆ) ॥ ೨೦ ॥

ಗೀ ॥ ॥ ಅರ್ಜುನ ಉವಾಚ ॥
ಕೈರ್ಲಿಂಗೈಸ್ತ್ರೀನ್ಗುಣಾನೇತಾನತೀತೋ ಭವತಿ ಪ್ರಭೋ ।
ಕಿಮಾಚಾರಃ ಕಥಂ ಚೈತಾಂಸ್ತ್ರೀನ್ಗುಣಾನತಿವರ್ತತೇ ॥ ೨೧ ॥

ಅ ॥ ಅರ್ಜುನಃ=ಅರ್ಜುನನು, ಉವಾಚ=ಪ್ರಶ್ನಿಸುತ್ತಾನೆ ಪ್ರಭೋ=ಸರ್ವ ಸಮರ್ಥನಾದ ಶ್ರೀಕೃಷ್ಣನೇ, ಏತಾನ್=ಈ ಸರ್ವಬಂಧಕಗಳಾದ, ತ್ರೀನ್ ಗುಣಾನ್=ಸತ್ವ ರಜಸ್ತಮೋ ಮೂರು ಗುಣಗಳನ್ನು, ಅತೀತಃ=ಅತಿಕ್ರಮಿಸಿದ ಪುರುಷನು, ಕೈಃ ಲಿಂಗೈಃ=ಯಾವ ಚಿಹ್ನೆಗಳಿಂದ ಕೂಡಿದವನು, ಭವತಿ=ಆಗುತ್ತಾನೆ (ಗುಣಾತೀತನಿಗೆ ಏನು ಲಕ್ಷಣವು?) (ಗುಣಾತೀತನು) ಕಿಮಾಚಾರಃ=ಎಂತಹ ಆಚಾರವುಳ್ಳವನಾಗುತ್ತಾನೆ ಕಥಂಚ=ಯಾವ ಉಪಾಯದಿಂದ, ಏತಾನ್ ತ್ರೀನ್ ಗುಣಾನ್=ಈ ಸತ್ವ ರಜಸ್ತಮೋ ಮೂರು ಗುಣಗಳನ್ನು, ಅತಿವರ್ತತೇ=ಅತಿಕ್ರಮಿಸುವನು (ಗುಣಾತೀತನಾಗುವುದಕ್ಕೆ ಉಪಾಯವೇನು?) ॥ ೨೧ ॥

ಪೀ—**ನಾನ್ಯಂ ಗುಣೇಭ್ಯಃ ಕರ್ತಾರಂ** ಎಂದು ಗುಣಗಳಿಗೇನೇ ಸ್ವತಂತ್ರ ಕರ್ತೃತ್ವವು ಹೇಳಲ್ಪಡುತ್ತದೆ ಇಶ್ವರರಿಗೆ ಅಲ್ಲ, ಎಂಬೀ ಅಪವ್ಯಾಖ್ಯಾನವನ್ನು ನಿರಾಕರಿಸುತ್ತಾರೆ—

ಭಾ ॥ (೧) ಪರಿಣಾಮಿಕರ್ತಾರಂ ಗುಣೇಭ್ಯೋಽನ್ಯಂ ನ ಪಶ್ಯತಿ ॥ (೨) ಅನ್ಯಥಾ ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮಿತಿ ಶ್ರುತಿ-ವಿರೋಧ ಇತಿ ॥ (೩) ನಾಹಂ ಕರ್ತಾ ನ ಕರ್ತಾ ತ್ವಂ ಕರ್ತಾ ಯಸ್ತು ಸದಾ ಪ್ರಭುರಿತಿ ನೋಕ್ಷಧರ್ಮೇ ॥ ೧೯,೨೦,೨೧ ॥

ಅ ॥ (೧) ಗುಣಗಳಿಗಿಂತ ಇತರವಸ್ತುವನ್ನು ಪರಿಣಾಮ ಕರ್ತನೆಂದು ನೋಡುವುದಿಲ್ಲ (೨) (ಏಕೆಂದರೆ—) ಗುಣಗಳಿಂದ ಬೇರೆ ವಸ್ತುವಿಗೆ ಕರ್ತೃತ್ವವಿಲ್ಲವೆಂದು ಹೇಳುವುದಾದರೆ ಯಾವಾಗ ಜೀವನು ಸುವರ್ಣದಂತೆ ವರ್ಣವುಳ್ಳವನೂ, ಸರ್ವ ಜಗತ್ಕರ್ತನೂ ಸರ್ವ ಸ್ವಾಮಿಯೂ, ಚತುರ್ಮುಖನಿಗೆ ತಂದೆಯೂ ಆದ ಗುಣಪರಿಪೂರ್ಣನಾದ ಶ್ರೀಪರಮಾತ್ಮನನ್ನು ನೋಡುತ್ತಾನೋ, ಇತ್ಯಾದಿ ಶ್ರುತಿಗಳಲ್ಲಿ (ಶ್ರೀಪರಮಾತ್ಮನಿಗೆ ಸರ್ವ ಜಗತ್ಕರ್ತೃತ್ವಾದಿಗಳನ್ನು ಹೇಳಿದ ಕಾರಣ) ಆ ಶ್ರುತಿಗಳಿಂದ ವಿರೋಧವು ಬರುವುದು (೩) ನಾನು ಕರ್ತನಲ್ಲ ನೀನೂ ಕರ್ತನಲ್ಲ ಯಾವನು ಸದಾ ಸರ್ವರಿಗೂ ಸ್ವಾಮಿಯಾಗಿದ್ದಾನೋ ಅವನೇ ಸರ್ವಕರ್ತನು, ಎಂದು ಮೋಕ್ಷಧರ್ಮದಲ್ಲಿ (ಶ್ರೀಪರಮಾತ್ಮನಿಗೆ ಸರ್ವ ಕರ್ತೃತ್ವವನ್ನು ಹೇಳಿದ್ರಿಂದ ಅದರಿಂದ ವಿರೋಧವು) ॥ ೧೯—೨೧ ॥

ಗೀ ॥ ॥ ಶ್ರೀಭಗವಾನುವಾಚ ॥

ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ ।
ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಂಕ್ಷತಿ ॥ ೨೨ ॥

ಅ ॥ ಶ್ರೀಭಗವಾನ್=ಹೀಗೆ ಪ್ರಶ್ನಿಸಲ್ಪಟ್ಟ ಶ್ರೀಕೃಷ್ಣನು, ಉವಾಚ=ಉತ್ತರಕೊಟ್ಟನು (ಸತ್ವಾದಿ ಗುಣಗಳು ಸ್ಥೂಲ ಸೂಕ್ಷ್ಮಗಳೆಂದು ಎರಡು ವಿಧಗಳು ಸ್ಥೂಲಗಳಾದ ಸತ್ವಾದಿಗುಣಗಳ ದೆಶೆಯಿಂದ ಲೌಕಿಕ ಅರ್ಧವಿಷಯಕಗಳಾದ ಪ್ರಕಾಶ, ಪ್ರವೃತ್ತಿ ಮೋಹಗಳು ಹುಟ್ಟುತ್ತವೆ ಸೂಕ್ಷ್ಮಗಳಾದ ಸತ್ವಾದಿ ಗುಣಗಳ ದೆಶೆಯಿಂದ ಪರಮೇಶ್ವರಾದಿ ವಿಷಯಕಗಳಾದ ಪ್ರಕಾಶ ಪ್ರವೃತ್ತಿ ಮೋಹಗಳು ಹುಟ್ಟುತ್ತವೆ) ಪಾಂಡವ=ಎಲೋ ಅರ್ಜುನನೇ, (ಗುಣಾತೀತನು) ಸಂಪ್ರವೃತ್ತಾನಿ=(ಅವುಗಳಲ್ಲಿ ಸ್ಥೂಲಗಳಾದ ಸತ್ವಾದಿಗುಣಗಳ ದೆಶೆಯಿಂದ) ತನಗೆ ಬಂದಿರುವ, ಪ್ರಕಾಶಂ ಚ=ಸತ್ವಗುಣದ ಕಾರ್ಯವಾದ ಲೌಕಿಕ ಅರ್ಧ ವಿಷಯಕವಾದ ಜ್ಞಾನವನ್ನು ಪ್ರವೃತ್ತಿಂ ಚ—ರಜೋಗುಣದ ಕಾರ್ಯವಾದ ಉದ್ಯೋಗವನ್ನು, ಮೋಹಮೇವ ಚ=ತಮೋಗುಣದಿಂದ ಹುಟ್ಟುತಕ್ಕ ಅಜ್ಞಾನ ಮೊದಲಾದುದನ್ನು ಕೂಡ, ಇವುಗಳನ್ನೆಲ್ಲಾ, ನ ದ್ವೇಷ್ಟಿ=ಪ್ರಾಯಶಃ ದ್ವೇಷಮಾಡುವುದಿಲ್ಲ (ಅಂದರೆ—ಬಂಧಕಗಳಾದ ಗುಣಗಳಿಂದ ಇವುಗಳು ಹುಟ್ಟಿರುತ್ತವೆಂದು ಮನಸ್ಸಿನಲ್ಲಿ ದ್ವೇಷಿಸುವುದಿಲ್ಲ) ನಿವೃತ್ತಾನಿ ಚ=ಹೋದುದನ್ನು, ನ ಕಾಂಕ್ಷತಿ=ಇಚ್ಛಿಸುವುದಿಲ್ಲ, (ಇಂತಹವನೇ ಗುಣಾತೀತನೆಂದು ತಿಳಿಯಬೇಕು) ಹಾಗೆಯೇ ಸೂಕ್ಷ್ಮಗಳಾದ ಸತ್ವಾದಿಗುಣಗಳಿಂದುಂಟಾದ ವಿಷ್ಣುವಿಷಯಕ ಪ್ರಕಾಶವನ್ನು ಪ್ರವೃತ್ತಿಯನ್ನು ಇಚ್ಛಿಸುತ್ತಾನೆ ಅಜ್ಞಾನವನ್ನು ದ್ವೇಷಿಸುತ್ತಾನೆ ಅಥವಾ ಇತರ ಪುರುಷರಲ್ಲಿ,ಇರತಕ್ಕ ಪ್ರಕಾಶ ಮೊದಲಾದ ಸಾಧುಗುಣಗಳ ಸಮುದಾಯಗಳಿಂದುಂಟಾದವುಗಳನ್ನು ದ್ವೇಷಿಸುವುದಿಲ್ಲ ಅಪ್ರಾಪ್ತವಾದ ಮೋಹ ಮೊದಲಾದ ಅಸಾಧುಧರ್ಮ ಸಮುದಾಯವನ್ನು ಇಚ್ಛಿಸುವುದಿಲ್ಲ ಅಂದರೆ ಗುಣಾತೀತನು ಇತರರಿಗೆ ಇಷ್ಟವು ಸಿಗಬಾರದೆಂದೂ ಅನಿಷ್ಟವು ಬರಬೇಕೆಂದೂ ಇಚ್ಛಿಸುವುದಿಲ್ಲ ಅಥವಾ ಪಾಂಡವ=ಅರ್ಜುನನೇ, ಪ್ರಕಾಶಂ ಚ=ಭಗವದ್ವಿಷಯಕ ಜ್ಞಾನವನ್ನು, ಪ್ರವೃತ್ತಿಂ ಚ=ಸೂಕ್ಷ್ಮ ರಜಃಕಾರ್ಯಭೂತವಾದ ಪ್ರವೃತ್ತಿಯನ್ನು, ನ ದ್ವೇಷ್ಟಿ=ದ್ವೇಷಿಸುವುದಿಲ್ಲ (ನಿವೃತ್ತವಾದುದನ್ನು) ಕಾಂಕ್ಷತಿ ಚ=ಇಚ್ಛಿಸುತ್ತಾನೆ. ಸೂಕ್ಷ್ಮತಮಸ್ಸಿನ

ಕಾರ್ಯವಾದ ಭಗವದ್ವಿಷಯಕವಾದ ಮೋಹವನ್ನು ಪ್ರವೃತ್ತವಾದುದನ್ನು ದ್ವೇಷಿಸುತ್ತಾನೆ ನಿವೃತ್ತವಾದುದನ್ನು ಇಚ್ಛಿಸುವುದಿಲ್ಲ ಲೌಕಿಕ ವಿಷಯಕವಾದ ಜ್ಞಾನವನ್ನು ಪ್ರವೃತ್ತಿಯನ್ನು ಮೋಹವನ್ನು ಕೂಡ ಪ್ರಾಯಶಃ ದ್ವೇಷಿಸುವುದೂ ಇಲ್ಲ ॥ ೨೨ ॥

ಪೀ—ಗುಣಾತೀತನ ಆಚಾರಗಳನ್ನು ಹೇಳುತ್ತಾರೆ—

ಗೀ ॥ ಉದಾಸೀನವದಾಸೀನೋ ಗುಣೈರ್ಯೋ ನ ವಿಚಾಲ್ಯತೇ ।
ಗುಣಾ ವರ್ತಂತ ಇತ್ಯೇವಂ ಯೋಽವತಿಷ್ಠತಿ ನೇಂಗತೇ ॥ ೨೩ ॥

ಅ ॥ ಯಃ = ಯಾವ ಗುಣಾತೀತನಾದ ಪುರುಷನು, ಉದಾಸೀನವದಾಸೀನಃ = ಉದಾಸೀನನಾದ ಮನುಷ್ಯನಂತೆ ಇರುತ್ತಾನೋ, (ವಸ್ತುತಃ ವೈಷ್ಣವ ಧರ್ಮಗಳನ್ನು ಮಾಡುವವನಾದುದರಿಂದ ಸರ್ವಥಾ ಉದಾಸೀನನಲ್ಲ) ಗುಣೈಃ = ವಿಷ್ಣುವಿಗೆ ಪ್ರೀತಿಕರಗಳಾದ ಧರ್ಮಗಳನ್ನು ಮಾಡುವವನಾದುದರಿಂದ) ಸತ್ವ ಮೊದಲಾದ ಗುಣಗಳಿಂದ ಮತ್ತು ಗುಣ ಕಾರ್ಯಗಳಾದ ಸುಖ ದುಃಖಾದಿಗಳಿಂದ, ನ ವಿಚಾಲ್ಯತೇ = ಆ ನಿಮಿತ್ತದಿಂದ ವಿಕಾರವನ್ನು ಹೊಂದುವದಿಲ್ಲವೋ ಗುಣಾಃ = ಸತ್ವಾದಿಗುಣಗಳು, ವರ್ತಂತ ಏವ = ಶ್ರೀಪರಮಾತ್ಮನ ಇಚ್ಛೆಯಿಂದಲೇ ಪ್ರವರ್ತಿಸುತ್ತವೆ (ಸ್ವತಂತ್ರವಾಗಿ ಪ್ರವರ್ತಿಸುವವುಗಳಲ್ಲ) ಇತಿಃ = ಈ ಪ್ರಕಾರ, ಅವತಿಷ್ಠತಿ = ತಿಳಿದುಕೊಳ್ಳುತ್ತಾನೋ, (ಆತನು) ನೇಂಗತೇ = ವಿಷ್ಣುವಿಗೆ ಪ್ರೀತಿಕರಗಳಾಗದ ಕರ್ಮಗಳನ್ನು ಮಾಡಲಿಕ್ಕೆ ಪ್ರವರ್ತಿಸುವುದಿಲ್ಲ (ಅಂದರೆ—ಶ್ರೀವಿಷ್ಣುವಿಗೆ ಪ್ರೀತಿಕರಗಳಾದ ಕರ್ಮಗಳನ್ನೇ ಮಾಡುತ್ತಾನೆ ಅವೈಷ್ಣವ ಕರ್ಮಗಳನ್ನು ಮಾಡುವುದಿಲ್ಲ) ಇಂತಹ ದು ಗುಣಾತೀತನ ಆಚಾರವು) ॥ ೨೩ ॥

ಪೀ—ಗುಣಾತೀತನ ಬೇರೆ ಆಚಾರಗಳನ್ನು ಹೇಳುತ್ತಾರೆ—

ಗೀ ॥ ಸಮದುಃಖಸುಖಃ ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ ।
ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿಂದಾತ್ಮಸಂಸ್ತುತಿಃ ॥ ೨೪ ॥

ಅ ॥ ಸಮದುಃಖ ಸುಃಖ = ದುಃಖವನ್ನು ಹೇಗೆ ಹೇಯವೆಂದು ತಿಳಿದುಕೊಳ್ಳುತ್ತಾನೋ, ಹಾಗೆಯೇ ವೈಷಯಿಕಸುಖವನ್ನು ಹೇಯವೆಂದು ತಿಳಿದು ಕೊಳ್ಳುವವನು, ಸ್ವಸ್ಥಃ = ಹೆಚ್ಚಾಗಿ ನಿರ್ವಿಕಾರನೂ, ಸಮ ಲೋಷ್ಟಾಶ್ಮಕಾಂಚನಃ = ಮಣ್ಣಿನ ಹೆಂಟೆ ಕಲ್ಲು ಕಾಂಚನಗಳನ್ನು ಸಮವಾಗಿಯೇ ತಿಳಿದುಕೊಂಡವನು ಅಂದರೆ—ಲೋಷ್ಟಾದಿಗಳು ಹೇಗೆ ಹೇಯಗಳೋ ಹಾಗೆಯೇ ಕಾಂಚನದಲ್ಲಿಯೂ ಪ್ರಾಯಶಃ ಹೇಯವೆಂಬುವ ಬುದ್ಧಿಯಿರುವವನು) ತುಲ್ಯಪ್ರಿಯಾಪ್ರಿಯಃ = ಪ್ರಿಯವಸ್ತುವನ್ನು ಅಪ್ರಿಯ ವಸ್ತುಗಳನ್ನು ಸಮವಾಗಿ ತಿಳಿದುಕೊಳ್ಳುವವನು, (ಅಂದರೆ—) ಅಪ್ರಿಯ ವಸ್ತುಗಳು ಹೇಗೆ ಹೇಯಗಳೋ ಹಾಗೆಯೇ ಲೌಕಿಕ ಪ್ರಿಯವಸ್ತುಗಳನ್ನು ಹೇಯವೆಂದು ತಿಳಿದುಕೊಂಡವನು,) ಧೀರಃ = ಧೈರ್ಯವಿರುವವನು ತುಲ್ಯ ನಿಂದಾತ್ಮಸಂಸ್ತುತಿಃ = ಇತರರು ತನ್ನನ್ನು ನಿಂದಿಸುವಾಗ ಹೇಗೆ ಸಂತೋಷಗೊಳ್ಳುವುದಿಲ್ಲವೋ, ಹಾಗೆಯೇ ತನ್ನನ್ನು ಸ್ತುತಿಸುವಾಗಲೂ ಸಂತೋಷಗೊಳ್ಳದಿರುವವನು-

ವಿ ॥ (1) ವಿಷ್ಣು ಭಜನಾದಿಗಳನ್ನು ಮಾಡುವುದರಲ್ಲಿ ದುಃಖವಿದ್ದರೂ ಬಿಟ್ಟರೆ ಸುಖವಿದ್ದರೂ ವಿಷ್ಣು ಭಜನಾದಿಗಳನ್ನು ಏಕಪ್ರಕಾರವಾಗಿಯೇ ಮಾಡುತ್ತಿರುವವನು (2) ಹೀಗೆಯೇ ವಿಷ್ಣು ಭಜನಾದಿಗಳನ್ನು

ಮಾಡಿದರೆ—ಮಣ್ಣಿನ ಹೆಂಟೆ ಕಲ್ಲು ಮೊದಲಾದ ಅನಿಷ್ಟ ಪ್ರಾಪ್ತಿಯಾಗುವುದಾದರೂ, ಬಿಟ್ಟರೆ ಕಾಂಚನ ಮೊದಲಾದುದು ಸಿಗುವುದಾದರೂ, ಶ್ರೀವಿಷ್ಣುವಿನ ಭಜನಾದಿಗಳನ್ನು ಬಿಡದಿರುವವನು ಅಂತೂ ಲೌಕಿಕ ಪುರುಷಾರ್ಥವು ಸಿಕ್ಕಿದರೂ ಸಿಗದಿದ್ದರೂ ವಿಷ್ಣುಭಜನಾದಿಗಸನ್ನು ಬಿಡಕೂಡದೆಂದು ಭಾವವು (3) ಶ್ರೀವಿಷ್ಣುವಿನ ಭಜನಾದಿಗಳ ಅನುಷ್ಠಾನಾನನುಷ್ಠಾನಗಳಿಂದ ಇಷ್ಟಾನಿಷ್ಟಗಳು ಪ್ರಾಪ್ತಗಳಾಗುವುದಾದರೂ ವಿಷ್ಣುಭಜನಾದಿಗಳನ್ನು ಸದಾ ಮಾಡಲೇ ಬೇಕು (4) ಹಾಗೆಯೇ ವಿಷ್ಣುಭಜನಾದ್ಯನುಷ್ಠಾನ ಅನನುಷ್ಠಾನಗಳಿಂದ ತನ್ನ ನಿಂದಾ ಸ್ತುತಿಗಳುಂಟಾಗುವುದಾದರೂ ವಿಷ್ಣುಭಕ್ತ್ಯಾದಿಗಳನ್ನು ಬಿಡದಿರುವವನು. ಏಕೆಂದರೆ--ಆ ಗುಣಾತೀತನು ಧೀರನು ಅಂದರೆ ಶ್ರೀವಿಷ್ಣುವಿನ ವಿಶೇಷ ಮಹಾತ್ಮ್ಯಜ್ಞಾನವುಳ್ಳವನು ಆದುದರಿಂದಲೇ ಶ್ರೀವಿಷ್ಣುವಿನ ಧರ್ಮದಿಂದ ಕದಲದಿರುವವನು ॥ ೨೪ ॥

ಪೀ—ಪ್ರಕಾಶಂ ಚ ಪ್ರವೃತ್ತಿಂ ಚ (ಶ್ಲೋ ೨೨) ಎಂಬುವುದರಿಂದ ಗುಣಾತೀತನಿಗೆ ಸರ್ವಥಾ ಸತ್ವಾದಿಗುಣಗಳ ಕಾರ್ಯಗಳಾದ ಪ್ರಕಾಶಾದಿಗಳಲ್ಲಿ ದ್ವೇಷವೂ ಇಚ್ಛೆಯೂ ಇಲ್ಲ, ಎಂದು ಹೇಳಲ್ಪಡುತ್ತದೆ, ಎಂದು ಪರರು ಹೇಳುವ ಅರ್ಥವು ಅಯುಕ್ತವೆನ್ನುತ್ತಾರೆ—

ಭಾ ॥ (೧) ಪ್ರಾಯೋ ನ ದ್ವೇಷ್ಟಿ ನ ಕಾಂಕ್ಷತಿ ॥ (೨) ತಥಾಹಿ ಸಾಮವೇದೇ ಭಾಲ್ಲವೇಯಶಾಖಾಯಾಂ । ರಜಸ್ತಮಸ್ಸತ್ತ್ವಗುಣಾನ್ಪ್ರವೃತ್ತಾನ್ವಾಯೋ ನ ಚ ದ್ವೇಷ್ಟಿ ನ ಚಾಪಿ ಕಾಂಕ್ಷತೇ । ತಥಾಽಪಿ ಸೂಕ್ಷ್ಮಂ ಸತ್ತ್ವಗುಣಂ ಚ ಕಾಂಕ್ಷೇದ್ಯದಿ ಪ್ರವಿಷ್ಟಂ ಸುತಮಶ್ಚ ಜಹ್ಯಾದಿತಿ ॥ (೩) ನಹಿ ದೇವಾ ಋಷಯಶ್ಚ ಸತ್ತ್ವಸ್ಥಾ ನೃಪಸತ್ತಮ । ಹೀನಾಃ ಸತ್ತ್ವೇನ ಸೂಕ್ಷ್ಮೇಣ ತತೋ ವೈಕಾರಿಕಾ ಮತಾಃ । ಕಥಂ ವೈಕಾರಿಕೋ ಗಚ್ಛೇತ್ಪುರುಷಃ ಪುರುಷೋತ್ತಮಮಿತಿ ಮೋಕ್ಷಧರ್ಮೇ ॥ (೪) ಸಾತ್ತ್ವಿಕಃ ಪುರುಷವ್ಯಾಘ್ರ ಭವೇನ್ಮೋಕ್ಷಾರ್ಥನಿಶ್ಚಿತ ಇತಿ ಚ ॥ ೨೨,೨೩,೨೪ ॥

ಅ ॥ (೧) ಪ್ರಾಯಶಃ ದ್ವೇಷಿಸುವುದಿಲ್ಲ ಇಚ್ಛಿಸುವುದಿಲ್ಲ (ಅಂದರೆ—ಸ್ಥೂಲ ಸೂಕ್ಷ್ಮಗಳೆಂದು ಸತ್ವಾದಿಗುಣಗಳು ಎರಡು ವಿಧಗಳು ಸ್ಥೂಲಗಳ ದೆಶೆಯಿಂದ ಲೌಕಿಕ ಅರ್ಥವಿಷಯಕಗಳಾದ ಪ್ರಕಾಶ ಪ್ರವೃತ್ತಿ ಮೋಹಗಳು ಹುಟ್ಟುತ್ತವೆ ಸೂಕ್ಷ್ಮಗಳಾದ ಸತ್ವಾದಿಗುಣಗಳ ದೆಶೆಯಿಂದ ಭಗವದಾದಿ ವಿಷಯಕಗಳಾದ ಪ್ರಕಾಶ ಪ್ರವೃತ್ತಿ ಮೋಹಗಳು ಹುಟ್ಟುತ್ತವೆ ಆದರಲ್ಲಿ ಸ್ಥೂಲಗಳಾದ ಸತ್ವಾದಿ ಗುಣಗಳಲ್ಲಿ ಗುಣಾತೀತನಿಗೆ ವ್ಯಾಯಶಃ ದ್ವೇಷ ಇಚ್ಛೆಗಳು ಇರುವುದಿಲ್ಲ ಸರ್ವಥಾ ಇಲ್ಲವೆಂದಲ್ಲ. ಏಕೆಂದರೆ—ಗುಣಾತೀತನಾದ ಅಪರೋಕ್ಷ ಜ್ಞಾನಿಗೂ ಪ್ರಾರಬ್ಧಕರ್ಮಾನುಸಾರವಾಗಿ ಕದಾಚಿತ್ ಲೌಕಿಕ ಧರ್ಮ ವಿಷಯಕ ಪ್ರಕಾಶಾದಿಗಳಲ್ಲಿ ಆಕಾಂಕ್ಷಾ ಮೋಹಗಳು ಕಂಡಿವೆ ಭಗವದ್ವಿಷಯಕಗಳಾದ ಸೂಕ್ಷ್ಮ ಸತ್ವಾದಿ ಕಾರ್ಯಗಳಾದ ಪ್ರಕಾಶ ಪ್ರವೃತ್ತಿ ಮೋಹಗಳಲ್ಲಿ ಆಕಾಂಕ್ಷಾದಿಗಳು ಇವೆ ಅಂದರೆ—ಸೂಕ್ಷ್ಮ ಸತ್ವಗುಣ ರಜೋಗುಣಕಾರ್ಯಗಳಾದ ಪರಮಾತ್ಮವಿಷಯಕಗಳಾದ ಪ್ರಕಾಶಪ್ರವೃತ್ತಿಗಳಲ್ಲಿ ಆಕಾಂಕ್ಷೆಯೂ ಸೂಕ್ಷ್ಮ ತಮೋಗುಣದ ಕಾರ್ಯವಾದ ಭಗವದ್ವಿಷಯಕವಾದ ಮೋಹದಲ್ಲಿ ದ್ವೇಷವೂ ಕೂಡ ಸರ್ವಥಾ ಉಂಟೇ ಉಂಟು.) (೨) (ಹೀಗೆ ಏಕೆ ಇಟ್ಟುಕೊಳ್ಳಬೇಕೆಂದರೆ—) ಪ್ರವೃತ್ತಗಳಾದ ರಜೋಗುಣ, ತಮೋಗುಣ, ಸತ್ವಗುಣಗಳನ್ನು ಪ್ರಾಯಶಃ ದ್ವೇಷಿಸುವುದಿಲ್ಲ ಇಚ್ಛಿಸುವುದೂ ಇಲ್ಲ (ಯದ್ಯಪಿ **ನ ದ್ವೇಷ್ಟಿ** ಇತ್ಯಾದಿಗಳನ್ನು ಸಾಮಾನ್ಯತಃ ಹೇಳಿದ್ದು) ಆದಾಗ್ಯೂ (ಅಂದರೆ—ಸ್ಥೂಲ ಸತ್ವಾದಿಕಾರ್ಯ ಲೌಕಿಕಾರ್ಥ ವಿಷಯಕ ಪ್ರಕಾಶ ಪ್ರವೃತ್ತಿ ಮೋಹಗಳಲ್ಲಿ ಪ್ರಾಯಶಃ ಆಕಾಂಕ್ಷಾದಿಗಳು ಇಲ್ಲದಿದ್ದರೂ) ಸೂಕ್ಷ್ಮವಾದ ಸತ್ವಗುಣಕಾರ್ಯವಾದ ಭಗವದ್ವಿಷಯಕ ಪ್ರಕಾಶವನ್ನು (ಸೂಕ್ಷ್ಮರಜೋಗುಣಕಾರ್ಯವಾದ

ಭಗವದ್ವಿಷಯಕವಾದ ಪ್ರವೃತ್ತಿಯನ್ನು) ಇಚ್ಛಿಸುವನು ಭಗವದ್ವಿಷಯದಲ್ಲಿ ಮೋಹವನ್ನು ಹೊಂದಿಸಿಕೊಡುವ ಸೂಕ್ಷ್ಮವಾದ ತಮೋಗುಣವೂ, ಅಥವಾ ಸೂಕ್ಷ್ಮತಮೋಗುಣದಿಂದ ಹುಟ್ಟಿದ ಭಗವದ್ವಿಷಯಕ ಮೋಹವು ದುರದೃಷ್ಟ ವಶದಿಂದ ಗುಣಾತೀತನಾದ ಜ್ಞಾನಿಗೆ ಬಂದರೆ (ಅಂದರೆ—ಸೂಕ್ಷ್ಮತಮೋಗುಣದಿಂದ ಭಗವದ್ವಿಷಯದಲ್ಲಿ ವಿಪರೀತ ಜ್ಞಾನವು ಉಂಟಾದರೆ–) ಶೀಘ್ರದಲ್ಲಿ ವಿಚಾರಮಾಡಿ ಅದನ್ನು ದ್ವೇಷಿಸುತಾ ನೆ, ಎಂದು ಸಾಮವೇದದಲ್ಲಿ ಭಾಲ್ಲವೇಯ ಶಾಖೆಯಲ್ಲಿ ಹೇಳಿದೆ (೩) (ಗುಣಾತೀತರಾದ ಜ್ಞಾನಿಗಳಿಗೆ ಸೂಕ್ಷ್ಮಸತ್ವಗುಣವಿದೆ, ಎಂಬುವಲ್ಲಿ ಭಾರತವಾಕ್ಯವನ್ನು ಪ್ರಮಾಣವಾಗಿ ಹೇಳುತ್ತಾರೆ ದೇವತೆಗಳೂ ಋಷಿಗಳೂ ಕೂಡ ಸೂಕ್ಷ್ಮವಾದ ಸತ್ವಗುಣದಿಂದ ವಿರಹಿತರೆಂದಾದರೆ–) ಆಗ ಸಾತ್ವಿಕಗುಣವುಳ್ಳವರೆಂದು ಹೇಳಲ್ಪಡದೆ ಇರಬೇಕಾಗುವರು ಮತ್ತೆ ಆಗ ಭೌತಿಕ ದೇಹಾದಿಗಳುಳ್ಳವರೆಂದು ಆಗಬೇಕಾಗುವುದು ಅದರಿಂದ ಪಾಂಚಭೌತಿಕ ದೇಹವಿರುವನನು ಪುರುಷೋತ್ತಮನಾದ ಶ್ರೀಪರಮಾತ್ಮನನ್ನು ಹೇಗೆ ಹೊಂದಿಯಾನು. (ಅಂದರೆ– ಅವರಿಗೆ ಮೋಕ್ಷವು ಆಗದೆ ಹೋಗುವುದು ಅದಕಾರಣ ಅವರು ಸೂಕ್ಷ್ಮಸತ್ವಗುಣವುಳ್ಳವರೇ) ಎಂದು ಮೋಕ್ಷಧರ್ಮದಲ್ಲಿ ಹೇಳಿದೆ (೪) ಎಲೋ ರಾಜನೇ ಸೂಕ್ಷ್ಮಸತ್ವಗುಣವುಳ್ಳವನು ಮೋಕ್ಷರೂಪ ಪುರುಷಾರ್ಥದಲ್ಲಿ ನಿಶ್ಚಿತನಾಗುವನು (**ಸ ಸೂಕ್ಷ್ಮಸತ್ವಸಂಯುಕ್ತಃ ಸಂಯುಕ್ತಸ್ತ್ರಿಭಿರಕ್ಷರೈಃ । ಪುರುಷಃ ಪುರುಷಂ ಗಚ್ಛೇನ್ನಿಷ್ಕ್ರಿಯಃ ಪಂಚವಿಂಶಕಃ**, ಎಂದು ಸೂಕ್ಷ್ಮಸತ್ವ ಪ್ರಕರಣವಾಗಿರುವುದರಿಂದ **ಸಾತ್ವಿಕಃ** ಎಂಬುವುದಕ್ಕೆ ಸೂಕ್ಷ್ಮಸತ್ವಗುಣವುಳ್ಳವನೆಂದರ್ಥವು. ॥ ೨೨—೨೪ ॥

ಗೀ ॥ ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ ।
ಸರ್ವಾರಂಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ ॥ ೨೫ ॥

ಅ ॥ ಮಾನಾಪಮಾನಯೋಃ = ಬಹುಮಾನ ಅವಮಾನಗಳು ಪ್ರಾಪ್ತಗಳಾದರೂ, ತುಲ್ಯಃ = ವಿಷ್ಣುಭಕ್ತ್ಯಾದಿಗಳಲ್ಲಿ ಸಮಾನಿಕನೇ (ಸರ್ವಥಾ ವಿಷ್ಣುಭಕ್ತ್ಯಾದಿಗಳನ್ನು ಬಿಡದಿರುವವನು) ಮಿತ್ರಾರಿಪಕ್ಷಯೋಃ = (ವಿಷ್ಣುಭಕ್ತಿ ಕರ್ಮ ಮಾಡುವುದರಲ್ಲಿಯೂ ಮಾಡದಿರುವುದರಲ್ಲಿಯೂ) ಶತ್ರುಗಳ ಪಕ್ಷ ಮಿತ್ರಪಕ್ಷಗಳು ಇದ್ದರೂ, ಉಪಕಾರ ಮಾಡಿದರೂ ಅಪಕಾರ ಮಾಡಿದರೂ ಏನು ಮಾಡಿದರೂ ತುಲ್ಯಃ = ಸಮನು (ಶ್ರೀವಿಷ್ಣುವಿನಪೂಜಾದಿಗಳ ನಿಮಿತ್ತದಿಂದ ಒಬ್ಬನ ಶತ್ರುತ್ವವು ಬಂದರೂ ಮಿತ್ರತ್ವವು ಬಂದರೂ ವಿಷ್ಣುಪೂಜಾ ಭಕ್ತ್ಯಾದಿಗಳನ್ನು ಮಾಡುತ್ತಲೇ ಇರುವವನು) ಸರ್ವಾರಂಭಪರಿತ್ಯಾಗೀ = ಯಾವುದೊಂದು ಪ್ರಯೋಜನ ವಿಶೇಷದಿಂದಲೂ ವಿಷ್ಣುವಿಗೆ ಪ್ರೀತಿಕರಗಳಾಗದ ಸಮಸ್ತ ಕರ್ಮಗಳನ್ನು ಆರಂಭಿಸದಿರುವವನು. ಅಥವಾ ಅತೀ ದೀರ್ಘಗಳಾದ ಅವೈಷ್ಣವ ಕರ್ಮಗಳನ್ನು ತ್ಯಾಗ ಮಾಡಿದವನು, ಸಃ = ಇಂತಹವನು, ಗುಣಾತೀತಃ = ಗುಣಾತೀತನೆಂದು, ಉಚ್ಯತೇ = ಹೇಳಲ್ಪಡುತ್ತಾನೆ ॥ ೨೫ ॥

ಪೀ—ಸಮದುಃಖಸುಖಃ ಇತ್ಯಾದಿಗಳಿಂದ ಸರ್ವಥಾ ಸುಖಾದಿಗಳಲ್ಲಿ ಸಾಮ್ಯಬುದ್ಧಿಯು ಹೇಳಲ್ಪಡುತ್ತದೆ ಎಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ಭಾ ॥ ತುಲ್ಯತ್ವಾರ್ಥ ಉಕ್ತಃ ಪುರಸ್ತಾತ್ ॥ ೨೫ ॥

ಅ ॥ ತುಲ್ಯತ್ವವನ್ನು ಹೇಳುವ ಶಬ್ದದ ಅರ್ಥವು ಅಂದರೆ ದುಃಖವು ಹೇಗೆ ಹೇಯವೋ ಹಾಗೆಯೇ ಲೌಕಿಕ ಸುಖವನ್ನು ಹೇಯವೆಂದು ತಿಳಿಯುವವನು ಎಂಬೀ ಅರ್ಥವು. ಮೊದಲೇ ಪು ೧೮೨ - ೧೮೬ ರಲ್ಲಿ ಹೇಳಿಯಿದೆ ॥ ೨೫ ॥

ಪೀ—ಗುಣಾತೀತನಿಗೆ ಲಕ್ಷಣವನ್ನೂ ಆತನ ಆಚಾರವನ್ನೂ ಹೇಳಿ ಆತನು ಗುಣಗಳನ್ನು ದಾಟುವುದು ಹೇಗೆ ಎಂಬುವ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾನೆ —

ಗೀ ॥ ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।
ಸ ಗುಣಾನ್ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥ ೨೬ ॥

ಅ ॥ ಯಃ = ಯಾವನು, ಅವ್ಯಭಿಚಾರೇಣ ಭಕ್ತಿಯೋಗೇನ = ಯಾವುದೊಂದೂ ವಿಚ್ಛೇದವಿಲ್ಲದಿರುವ (ಅಂದರೆ ನಿತ್ಯದಲ್ಲಿಯೂ) ವಿಷ್ಣುಭಕ್ತಿಯೆಂಬುವ ಉಪಾಯದಿಂದ, ಮಾಂ ಚ = ನನ್ನನ್ನೂ ಕೂಡ, ಸೇವತೇ = ಸೇವಿಸುತ್ತಾನೋ, ಸಃ = ಆ ಅಧಿಕಾರಿಯು, ಏತಾನ್ ಗುಣಾನ್ = ಸತ್ವಾದಿಗುಣಗಳಿಂದಲೂ ಆ ಗುಣಗಳಿಗೆ ಅಭಿಮಾನಿಯರಾದ ಶ್ರೀ ಭೂ ದುರ್ಗಾ ದೇವಿಯರಿಂದಲೂ ಮಾಡಲ್ಪಟ್ಟ ಬಂಧವನ್ನು, ಸಮತೀತ್ಯ = ದಾಟಿ ಬ್ರಹ್ಮಭೂಯಾಯ = ಚಿತ್ಪ್ರಕೃತಿಯಾದ ಲಕ್ಷ್ಮೀದೇವಿಯಂತೆ ಆಗುವುದಕ್ಕಾಗಿ ಕಲ್ಪತೇ = ಸಮರ್ಥನಾಗುತ್ತಾನೆ (ಅಂದರೆ—ಲಕ್ಷ್ಮೀದೇವಿಯು ಹೇಗೆ ಶ್ರೀಪರಮಾತ್ಮನಿಗೆ ಪ್ರಿಯಳಾಗಿರುತ್ತಾಳೋ ಹಾಗೆಯೇ ಗುಣಾತೀತನೂ ಕೂಡ ಶ್ರೀವಿಷ್ಣುವಿಗೆ ಯೋಗ್ಯತಾನುಸಾರ ಪ್ರಿಯನಾಗುತ್ತಾನೆ) ಅಥವಾ ಚಿತ್ಪ್ರಕೃತಿಯಾದ ಲಕ್ಷ್ಮೀದೇವಿಯನ್ನು ಹೊಂದುವುದಕ್ಕಾಗಿ ಶಕ್ತನಾಗುತ್ತಾನೆ ॥ ೨೬ ॥

ಪೀ—**ಬ್ರಹ್ಮಭೂಯಾಯ** ಎಂಬುವುದಕ್ಕೆ ಪರಬ್ರಹ್ಮನಾಗಲಿಕ್ಕೆ ಎಂಬುವ ಅರ್ಥವು ಪ್ರಮಾಣ ವಿರುದ್ಧವೆಂಬುವ ಅಭಿಪ್ರಾಯದಿಂದ ಸರಿಯಾದ ಅರ್ಥವನ್ನು ಹೇಳುತ್ತಾರೆ—

ಭಾ ॥ (೧) ಬ್ರಹ್ಮವತ್ ಪ್ರಕೃತಿವತ್ ಭಗವತ್ಪ್ರಿಯತ್ವಂ ಬ್ರಹ್ಮಭೂಯಂ । ನತು ತಾವತ್ಪ್ರಿಯ-
ತ್ವಂ । ಕಿಂತು ಪ್ರಿಯತ್ವಮಾತ್ರಂ । (೨) ಬದ್ಧೋ ವಾಽಪಿ ತು ಮುಕ್ತೋ ವಾ ನರಮಾ-
ವತ್ಪ್ರಿಯೋ ಹರೇರಿತಿ ಪಾದ್ಮೇ । ಭೂಯಾಯ ಭಾವಾಯ ॥ ೨೬ ॥

ಅ ॥ (೧) (**ಬ್ರಹ್ಮಣೋ ಹಿ ಪ್ರತಿಷ್ಠಾಽಹಂ** ಎಂಬೀ ಉತ್ತರ ವಾಕ್ಯದಲ್ಲಿ ಬ್ರಹ್ಮಶಬ್ದವಾಚ್ಯನಿಗೆ ನಾನು (ಶ್ರೀಕೃಷ್ಣನು) ಆಶ್ರಯನೆಂದು ಹೇಳಿದ್ರಿಂದ ಇಲ್ಲಿದ್ದ ಬ್ರಹ್ಮಶಬ್ದದಿಂದ ಪರಬ್ರಹ್ಮನನ್ನು ಇಟ್ಟುಕೊಳ್ಳಕೂಡದು ಮತ್ತೆ **ಮಮಯೋನಿರ್ಮಹದ್ಬ್ರಹ್ಮ** ಎಂಬುವಲ್ಲಿ ಪ್ರಕೃತಳಾದ ಮಹಾ ಲಕ್ಷ್ಮೀದೇವಿಯನ್ನೇ ಇಟ್ಟುಕೊಳ್ಳಬೇಕು ಏನಂದರೆ) ಬ್ರಹ್ಮವತ್ = ಪ್ರಕೃತಿ ಶಬ್ದವಾಚ್ಯಳಾದ ಮಹಾ ಲಕ್ಷ್ಮೀದೇವಿಯಂತೆ ಭೂಯಂ = ಪರಮಾತ್ಮನಿಗೆ ಪ್ರಿಯನಾಗುವಿಕೆಯು ಬ್ರಹ್ಮಭೂಯವು (ಲಕ್ಷ್ಮೀದೇವಿಯು ಎಷ್ಟು ಪರಮಾತ್ಮನಿಗೆ ಪ್ರಿಯಳೋ,) ಅಷ್ಟು ಗುಣಾತೀತನೂ ಪರಮಾತ್ಮನಿಗೆ ಪ್ರಿಯನಲ್ಲ ಮತ್ತೆ ಯಥಾಯೋಗ್ಯವಾಗಿ ಪ್ರೀತಿಪಾತ್ರನಾಗುತ್ತಾನೆ (೨) (ಈ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ) ಸಂಸಾರದಲ್ಲಿರುವವನಾಗಲೀ ಮೋಕ್ಷವನ್ನು ಹೊಂದಿದವನಾಗಲೀ ಶ್ರೀ ಲಕ್ಷ್ಮೀದೇವಿಯಂತೆ ಶ್ರೀಪರಮಾತ್ಮನಿಗೆ ಪ್ರಿಯನಲ್ಲ (ಮತ್ತೆ ಯಥಾಯೋಗ್ಯವಾಗಿ ಪ್ರೀತಿ ಪಾತ್ರನಾಗುತ್ತಾನೆ) ಎಂದು ಪಾದ್ಮಪುರಾಣದಲ್ಲಿ ಹೇಳಿದೆ (ಇಲ್ಲಿ **ಭೂಯಃ** ಶಬ್ದಕ್ಕೆ ಪ್ರಿಯತ್ವನೆಂದರ್ಥವಲ್ಲ ಮತ್ತು) ಭೂಯಾಯ = ಹೊಂದುವುದಕ್ಕಾಗಿ (ಏವಂಚ ಲಕ್ಷ್ಮೀದೇವಿಯಂತೆ ಪ್ರಿಯತ್ವವನ್ನು ಹೊಂದುವುದಕ್ಕಾಗಿ ಎಂದರ್ಥವು) ॥ ೨೬ ॥

ಪೀ—ಗುಣಾತೀತನಿಗೆ ಶ್ರೀಪರಮಾತ್ಮನ ಪ್ರಾಪ್ತ್ಯಾದಿಗಳನ್ನೇ ಹೇಳಬೇಕು ಲಕ್ಷ್ಮೀದೇವಿಯನ್ನು ಹೊಂದುತ್ತಾನೆಂದು ಏಕೆ ಹೇಳುವುದು ಎಂದರೆ—

ಗೀ ॥ ಬ್ರಹ್ಮಣೋ ಹಿ ಪ್ರತಿಷ್ಠಾಽಹಮಮೃತಸ್ಯಾವ್ಯಯಸ್ಯ ಚ ।
ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾಂತಿಕಸ್ಯ ಚ ॥ ೨೭ ॥

ಅ ॥ ಅಹಂ ಹಿ = ನಾನೇ, ಬ್ರಹ್ಮಣಃ = ಮಹಾ ಲಕ್ಷ್ಮೀದೇವಿಗೂ, ಅವ್ಯಯಸ್ಯ = ನಾಶವಿಲ್ಲದಿರುವ ಅಮೃತಸ್ಯ ಚ = ಮುಕ್ತವರ್ಗಕ್ಕೂ, ಶಾಶ್ವತಸ್ಯ = ಅವಿನಾಶಿ ಫಲವುಳ್ಳ, ಧರ್ಮಸ್ಯ ಚ = ನಿಷ್ಕಾಮ ಧರ್ಮಕ್ಕೂ, ಏಕಾಂತಿಕಸ್ಯ = ಇದಕ್ಕಿಂತ ಇದು ಉತ್ತಮವೆಂದು ಗಣನೆಮಾಡುವಾಗ ಸುಖ ಒಂದೇ ಅಂತ್ಯದಲ್ಲಿ ಪೂರ್ಣವಾಗಿ ಉಳ್ಳ, ಅಂದರೆ ದುಃಖ ಮಿಶ್ರವಾಗದಿರುವ, ಸುಖಸ್ಯ ಚ = ಮೋಕ್ಷಕ್ಕೂ, ಪ್ರತಿಷ್ಠಾ = ಆಧಾರನು. (ಆದಕಾರಣ ನನ್ನಿಂದ ವಿಯೋಗವಿಲ್ಲದಿರುವ ಲಕ್ಷ್ಮೀದೇವಿಯನ್ನು ಹೊಂದಿದವನು ತನ್ನನ್ನೇ ಹೊಂದುತ್ತಾನೆ ಅಂದರೆ ಜೀವನಿಗೆ ಲಕ್ಷ್ಮೀದೇವಿಯು ನನ್ನ (ಶ್ರೀಕೃಷ್ಣನ) ಪ್ರಾಪ್ತಿಯಾಗುವಂತೆ ಮಾಡುವಳು ಏವಂ ಚ ಗುಣಾತೀತನು ಲಕ್ಷ್ಮೀದೇವಿಯ ಸಮಾಪಕ್ಕೆ ಹೋಗಿ ಅವಳ ಅನುಗ್ರಹವನ್ನು ಸಂಪಾದಿಸಿ ಅಮೇಲೆ ಶ್ರೀಪರಮಾತ್ಮನನ್ನು ಹೊಂದುತ್ತಾನೆ ಅಥವಾ ಹಿ = ಯಾವಕಾರಣದಿಂದ, ಅಮೃತಸ್ಯ = ಸರ್ವಥಾ ಮರಣವಿಲ್ಲದಿರುವ, ಅವ್ಯಯಸ್ಯ = ದುಃಖಾದಿರೂಪ ವ್ಯಯವಿಲ್ಲದಿರುವ, ಶಾಶ್ವತಸ್ಯ = ವೃದ್ಧಿಹ್ರಾಸಗಳಿಲ್ಲದಿರುವ, ಧರ್ಮಸ್ಯ = ಮುಕ್ತರಿಗೂ ಧಾರಕಳಾದ, ಬ್ರಹ್ಮಣಃ = ಮಹಾ ಲಕ್ಷ್ಮೀದೇವಿಗೂ, ಅಹಂ = ನಾನೇ, ಪ್ರತಿಷ್ಠಾ = ಆಶ್ರಯನೋ, (ಆದುದರಿಂದ) ಅವ್ಯಯಸ್ಯ = ನಾಶವಿಲ್ಲದಿರುವ, ಅಮೃತಸ್ಯ = ಮುಕ್ತವರ್ಗಕ್ಕೂ ಶಾಶ್ವತಸ್ಯ = ಶಾಶ್ವತ ಫಲವುಳ್ಳ, ಧರ್ಮಸ್ಯ = ಪರೋಕ್ಷ ಜ್ಞಾನವು ಹುಟ್ಟಿದ ಮೇಲೆ ಮಾಡಿದ ಪುಣ್ಯಕ್ಕೂ, ಏಕಾಂತಿಕಸ್ಯ ಸುಖಸ್ಯ ಚ = ಜ್ಞಾನಕರ್ಮಗಳಿಂದ ಅಭಿವ್ಯಕ್ತವಾಗುವ ಆತ್ಯಂತಿಕ ದುಃಖ ನಿವೃತ್ತಿಪೂರ್ವಕ ಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷಕ್ಕೂ, ಪ್ರತಿಷ್ಠಾ = ಆಶ್ರಯನು. ॥ ೨೭ ॥

ಗೀ ॥ ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಗುಣತ್ರಯವಿಭಾಗಯೋಗೋ ನಾಮ ಚತುರ್ದಶೋಽಧ್ಯಾಯಃ ॥ ೧೪ ॥

ಅ ॥ ಹೀಗೆ ಶ್ರೀಮದ್ಭಗವದ್ಗೀತೆಯಲ್ಲಿ ಬ್ರಹ್ಮವಿದ್ಯೆಯಲ್ಲಿ ಯೋಗಶಾಸ್ತ್ರದಲ್ಲಿ ಶ್ರೀಕೃಷ್ಣಾರ್ಜುನರ ಸಂವಾದದಲ್ಲಿ ಗುಣತ್ರಯವಿಭಾಗಯೋಗವೆಂಬ ಹದಿನಾಲ್ಕನೇ ಅಧ್ಯಾಯವು ಮುಗಿಯಿತು ॥ ೧೪ ॥

ಪೀ — ಬ್ರಹ್ಮಣೋ ಹಿ ಎಂಬುವುದಕ್ಕೆ ಪರಬ್ರಹ್ಮನಿಗೆ ಎಂದು ಕೆಲವರು ಅರ್ಥ ಹೇಳಿರುವರು **ಬ್ರಹ್ಮಣಃ ಪ್ರತಿಷ್ಠಾಽಹಂ** ಬ್ರಹ್ಮನಿಗೆ ನಾನು ಆಶ್ರಯನೆಂದು ಹೇಳಿದ್ರಿಂದ ಆ ಅರ್ಥವು ಅಯುಕ್ತವೆನ್ನುತ್ತಾರೆ--

ಭಾ ॥ ಬ್ರಹ್ಮಣೋ ಮಾಯಾಯಾಃ ॥ ೨೭ ॥

ಅ ॥ ಬ್ರಹ್ಮಣಃ = ಎಂಬುವುದಕ್ಕೆ ಮಹಾಲಕ್ಷ್ಮೀದೇವಿಗೆ ಎಂದರ್ಥವು. ॥ ೨೭ ॥

ಭಾ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾಭಾಷ್ಯೇ ಚತುರ್ದಶೋಽಧ್ಯಾಯಃ ॥ ೧೪ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಶ್ರೀಭಗವದ್ಗೀತಾ ಭಾಷ್ಯದಲ್ಲಿ ಹದಿನಾಲ್ಕನೇ ಅಧ್ಯಾಯವು ಮುಗಿಯಿತು ॥ ೧೪ ॥

ಪೀ—ಸತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ । ನಿಬಧ್ನಂತಿ (ಶ್ಲೋ ೫) ಎಂದು ಉಪಕ್ರಮಿಸಿಕೊಂಡು ತತ್ರ ಸತ್ವಂ ನಿರ್ಮಲತ್ವಾತ್ ಇತ್ಯಾದಿಗಳಿಂದ ಸತ್ವ ರಜಸ್ತಮೋಗುಣವಿಕಾರವಾದ ಬಂಧಸ್ವರೂಪವನ್ನು ವಿವರಿಸಿ ಹೇಳಿದಾಗ ಆ ಗುಣಪ್ರಯುಕ್ತ ಬಂಧಕ ಅಜ್ಞಾನಾದಿಗಳಿಗೂ, ಸ್ವರ್ಗಾದಿಲೋಕಗಳ ಪ್ರಾಪ್ತಿಗೂ ಸಾಧ್ವಸಾಧು ಯೋನಿಪ್ರಾಪ್ತಿಗೂ ಸತ್ವ ರಜಸ್ತಮೋಗುಣಗಳು ಕಾರಣಗಳೆಂದು ತಿಳಿಯುತ್ತದೆ ಆಗ ಗುಣಗಳೇ ಸರ್ವೋತ್ತಮಗಳು ಗುಣಗಳನ್ನು ಬಿಟ್ಟು ಇನ್ನೊಬ್ಬನು ಸರ್ವೋತ್ತಮನಿಲ್ಲ ಎಂಬುವ ಶಂಕೆಯು ಬರುವುದು ಆ ಶಂಕೆಯನ್ನು ನಾನ್ಯಂ ಗುಣೇಭ್ಯಃ (ಶ್ಲೋ ೧೯.) ಎಂಬುವ ಶ್ಲೋಕದಿಂದ ಪರಿಹರಿಸಿದರು ಇಲ್ಲಿ ಗುಣಗಳಿಗೇನೇ ಕರ್ತೃತ್ವವು, ಶ್ರೀಪರಮಾತ್ಮನಿಗೆ ಕರ್ತೃತ್ವವೇ ಇಲ್ಲ, ಎಂಬುವ ಅನ್ಯಥಾ ಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ತಾ ॥ (೧) ಏತೇಭ್ಯಃ ಸತ್ವಾದಿಗುಣೇಭ್ಯೋಽನ್ಯಂ ಕರ್ತಾರಮೀಶಂ ಯದಾ ಪಶ್ಯತಿ ತದೈವಾಯಂ ನಾ ವುರುಷಃ । ಅನ್ಯಥಾ ಪಶುಸಮಃ । ನ ಕೇವಲಮನ್ಯತ್ವೇನ ಪಶ್ಯನ್ನಾ । ತಂ ಕರ್ತಾರಂ ವಿಷ್ಣುಂ ಕಂತು ಗುಣೇಭ್ಯ ಉತ್ತಮತ್ವೇನ ಚ । ಕಥಂ ಸ ಏವ ನಾ । ಯಸ್ಮಾನ್ಮದ್ಭಾವಂ ಸೋಽಧಿಗಚ್ಛತಿ ॥ (೨) ಮಹಾಲಕ್ಷ್ಮೀರಿತಿ ಪರಾ ಭಾರ್ಯಾ ನಾರಾಯಣಸ್ಯ ಯಾ । ಪ್ರಕೃತಿರ್ನಾಮ ಸಾ ಜ್ಞೇಯಾ ಪ್ರಕರ್ಷೇಣ ಕರೋತಿ ಯತ್ । ತಸ್ಯಾಸ್ತು ತ್ರೀಣಿ ರೂಪಾಣಿ ॥ (೩) ಸತ್ತ್ವಂ ನಾಮ ರಜಸ್ತಮಃ । ಸೃಷ್ಟಿಕಾಲೇ ವಿಭಜ್ಯಂತೇ ಸತ್ತ್ವಂ ಶ್ರೀಃ ಸದ್ಗುಣಪ್ರಭಾ(ದಾ) ॥ (೪) ರಜೋ ರಂಜನಕರ್ತೃತ್ವಾದ್ಬ್ರಾಃ ಸಾ ಸೃಷ್ಟಿಕರೀ ಯತಃ । ಯದಾವೇಶಾದಿಯಂ ಪೃಥ್ವೀ ಭೂಮಿರಿತ್ಯೇವ ಕಥ್ಯತೇ ॥ (೫) ಜೀವಾನಾಂ ಗ್ಲಪನಾದ್ದುರ್ಗಾ ತಮ ಇತ್ಯೇವ ಕೀರ್ತಿತಾ ॥ ೧ ॥

ಅ ॥ (೧) ಶ್ರೀಪರಮಾತ್ಮನನ್ನು ಈ ಸತ್ವಾದಿಗುಣಗಳ ದೆಶೆಯಿಂದ ಭಿನ್ನನೆಂದೂ ಸರ್ವಜಗತ್ಕರ್ತನೆಂದೂ ಯಾವಾಗ ನೋಡುತ್ತಾನೋ, ಆವಾಗಲೇ ಇವನು, ನಾ=ಜ್ಞಾನಿಯಾದ ಪುರುಷನು ಇಲ್ಲವಾದರೆ ಪಶುವಿಗೆ ಸಮಾನಿಕನು ಸರ್ವಜಗತ್ಕರ್ತನಾದ ಶ್ರೀಪರಮಾತ್ಮನನ್ನು ಕೇವಲ ಗುಣಗಳ ದೆಶೆಯಿಂದ ಭಿನ್ನನೆಂದು ತಿಳಿದವನು ಮಾತ್ರ ಪುರುಷನೆಂದು ಅಲ್ಲ ಮತ್ತೆ ಸರ್ವ ಜಗತ್ಕರ್ತನಾದ ಶ್ರೀವಿಷ್ಣುವನ್ನು ಗುಣಗಳ ದೆಶೆಯಿಂದ ಉತ್ತಮನನ್ನಾಗಿಯೂ ತಿಳಿದವನು ಜ್ಞಾನಿಯಾದ ಪುರುಷನು ಅವನೇ ಪುರುಷನೆನ್ನಿಸುವುದು ಹೇಗೆ? ಎಂದರೆ—ಯಾವ ಕಾರಣ ದೆಶೆಯಿಂದ ಹಾಗೆ ತಿಳಿದವನೇ ನನ್ನಲ್ಲಿ ಜ್ಞಾನಾನಂದಾದಿರೂಪವಾದ ಸ್ಥಿತಿಯನ್ನು (ಅಂದರೆ ಮೋಕ್ಷವನ್ನು) ಹೊಂದುತ್ತಾನೋ ಆದಕಾರಣ ಅವನೇ ಜ್ಞಾನಿಯಾದ ಪುರುಷನು (೨) (ಮಮ ಯೋನಿಃ (ಶ್ಲೋ ೩) ಇತ್ಯಾದಿಗಳ ಅರ್ಧವನ್ನು ಹೇಳುತ್ತಾರೆ) ಶ್ರೀಮನ್ನಾರಾಯಣನ ಪತ್ನಿಯಾದ ಮಹಾ ಲಕ್ಷ್ಮೀದೇವಿಯು ಜಾಂಬವತೀ ಮೊದಲಾದ ೬ ಪತ್ನಿಯರಿಂದ ಉತ್ತಮಳು ಅವಳು ಚೆನ್ನಾಗಿ ಸೃಷ್ಟಿಸುವವಳಾದುದರಿಂದ ಪ್ರಕೃತಿ ಎನಿಸುತ್ತಾಳೆ. ಮಹಾಲಕ್ಷ್ಮೀದೇವಿಯೆಂದು ಪ್ರಸಿದ್ಧವಾದ ಮೂಲರೂಪದಿಂದ ಸೃಷ್ಟಿಕಾಲದಲ್ಲಿ ಬ್ರಹ್ಮಪತ್ನಿಯಾದ ಸರಸ್ವತಿಗಿಂತ ಮುಖ್ಯಗಳಾದ ಸತ್ವ ರಜಃ ತಮಃ ಎಂಬೀ ಮೂರು ರೂಪಗಳು ವಿಭಕ್ತಗಳಾಗುತ್ತವೆ (೩) ಶ್ರೀದೇವಿಯು

ಸದ್ಗುಣಗಳುಳ್ಳವಳಾದುದರಿಂದ **ಸತ್** ಎಂದೂ ತ್ವಿಷ ದೀಪ್ತೌ ಎಂಬೀ ಧಾತು ವ್ಯಾಖ್ಯಾನದಿಂದ ಪ್ರಭಾ (ಕಾಂತಿ) ರೂಪಳಾದುದರಿಂದ **ತ್ವಂ** ಎಂದೂ ಅಥವಾ ಸದ್ಗುಣಗಳನ್ನು ಕೊಡುವವಳಾದುದರಿಂದ **ಸತ್ವಂ** ಎಂದೂ ಅನಿಸುತ್ತಾಳೆ (೪) ಭೂದೇವಿಯು ಜಗತ್ಸೃಷ್ಟಿಯನ್ನು ಮಾಡುತ್ತಾ ಪ್ರಕಾಶವನ್ನು ಪೂಡುವುದರಿಂದ **ರಜಃ** ಎನಿಸುತ್ತಾಳೆ (ಭೂದೇವಿಯು ಮಾಡಿದ ಸೃಷ್ಟಿಯಿಂದ ಮೊದಲು ಅವ್ಯಕ್ತವಾದುದಕ್ಕೆ ಪ್ರಕಾಶವುಂಟಾಗುತ್ತದೆ ಹೀಗೆ ಭೂಶಬ್ದದಿಂದ ಪ್ರಸಿದ್ಧವಾದ ಪಂಚಭೂತಗಳಿಂದ ಅಪರವಾದ ಪೃಥಿವೀ ದೇವತೆಯಾದ ಧರಾದೇವಿಯನ್ನು ಇಟ್ಟುಕೊಳ್ಳುವುದೋ ಎಂದರೆ—) ಲಕ್ಷ್ಮೀರೂಪಳಾದ ಭೂದೇವಿಯ ಆವೇಶದಿಂದ ಈ ಪ್ರಸಿದ್ಧವಾದ ವೃಥಿವಿಗೆ ಅಭಿಮಾನಿನಿಯಾದ ಧರಾದೇವಿಯೂ ಕೂಡ ಅಮುಖ್ಯವಾಗಿ ಭೂಮಿಯೆಂದು ಹೇಳಲ್ಪಡುತ್ತಾಳೆ ಆ ಲಕ್ಷ್ಮೀರೂಪಳಾದ ಭೂದೇವಿಯೇ ಮುಖ್ಯ ವೃತ್ತಿಯಿಂದಲೇ **ಭೂಮಿಯೆನಿಸುತ್ತಾಳೆ** ಜೀವರಿಗೆ ಸಂಸಾರವನ್ನು ಹೊಂದಿಸಿಕೊಟ್ಟು ದುಃಖಪಡಿಸುವುದರಿಂದ ದುರ್ಗಾ ದೇವಿಯು **ತಮಃ** ಎನಿಸುತ್ತಾಳೆ ॥ ೧ ॥

ತಾ ॥ (೧) ಏತಾಭಿಸ್ತಿಸೃಭಿರ್ಜೀವಾಃ ಸರ್ವೇ ಬದ್ಧಾ ಅಮುಕ್ತಿಗಾಃ ॥ (೨) ಸರ್ವಾನ್ಬಧ್ನಂತಿ ಸರ್ವಾಶ್ಚ ತಥಾಽಪಿ ತು ವಿಶೇಷತಃ । ಶ್ರೀರ್ದೇವಬಂಧಿ(ಧ)ಕಾ ನೃಣಾಂ ಭೂರ್ದೈತ್ಯಾನಾಂ ತ(ನಾಮು)ಥಾಪರಾ ॥ (೩) ಏತಾಭ್ಯೋಽನ್ಯಂ ಪರಂ ಚೈವ ವಿಷ್ಣುಂ ಜ್ಞಾತ್ವಾ ವಿಮುಚ್ಯತೇ ॥ (೪) ಸಾಮರ್ಥ್ಯಾತಿಶಯಾದಾಸಾಂ ನೈತಾಭ್ಯೋ ವಿದ್ಯತೇ ಪರಃ । ಇತಿ ಯಾವದ್ವಿಜಾನಾತಿ ತಾವತ್ತಂ ನೃಪಶುಂ ವಿದುಃ । ತಸ್ಮಾದಾಭ್ಯೋಽಧಿಕ ಗುಣೋ ವಿಷ್ಣುರ್ಜ್ಞೇಯಃ ಸದೈವ ಚೇತಿ ಮಹಾವಿಷ್ಣು ಪುರಾಣೇ ॥ ೨ ॥

ಅ ॥ (೧) ಮೋಕ್ಷವನ್ನು ಹೊಂದದಿರುವ ಎಲ್ಲಾ ಜೀವರೂ ಈ ಸತ್ವ ರಜಸ್ತಮೋಗುಣಗಳಿಗೆ ಅಭಿಮಾನಿಯರಾದ ಶ್ರೀ ಭೂ ದುರ್ಗಾದೇವಿಯರಿಂದ ಅಭಿಮನ್ಯಮಾನಗಳಾದ ಸತ್ವಾದಿಗುಣಗಳಿಂದ ಬದ್ಧರಾಗಿರುತ್ತಾರೆ (**ಅಮುಕ್ತಿಗಾಃ** ಎಂಬುದರಿಂದ **ದೇಹೇ ದೇಹಿನಂ** (ಶ್ಲೋ ೫-) ಎಂಬುದರ ಅರ್ಧವು ಉಕ್ತವಾಯಿತು) (೨) (ಯಾರು ಯಾರನ್ನು ಬಂಧಿಸುವವಳೆಂದರೆ) ಶ್ರೀ ಭೂ ದುರ್ಗಾದೇವಿಯರೆಲ್ಲರೂ ಎಲ್ಲರನ್ನೂ ಬಂಧಿಸುತ್ತಾರೆ ಆದರೂ ಶ್ರೀದೇವಿಯು ದೇವತೆಗಳನ್ನು ಬಂಧಿಸುವವಳು ಭೂದೇವಿಯು ಮನುಷ್ಯರನ್ನು ಬಂಧಿಸುವವಳು ದುರ್ಗಾದೇವಿಯು ದೈತ್ಯರನ್ನು ಬಂಧಿಸುವವಳು (ಇದರಿಂದ ತತ್ಸತ್ವಂ (ಶ್ಲೋ ೬.) ಇತ್ಯಾದಿಗಳ ಅಭಿಪ್ರಾಯವು ಉಕ್ತವಾಯಿತು) (೩) (ಹೀಗೆ ಶ್ರೀ ಭೂ ದುರ್ಗಾದೇವಿಯರು ಸರ್ವಬಂಧಕರಾದುದರಿಂದ ಅವರಿಗೆ ಅತಿಸಾಮರ್ಥ್ಯವಿದ್ದ ಪ್ರಯುಕ್ತ ಅವರನ್ನು ಸರ್ವೋತ್ತಮರೆಂದು ತಿಳಿಯಕೂಡದೆನ್ನುತ್ತಾರೆ—) ಈ ಶ್ರೀ ಭೂ ದುರ್ಗಾದೇವಿಯರಿಂದ ಭಿನ್ನನೇ ಆದ ಶ್ರೀ ವಿಷ್ಣುವನ್ನೇ ಸರ್ವೋತ್ತಮನನ್ನಾಗಿಯೇ ತಿಳಿದೇ ಮುಕ್ತನಾಗುತ್ತಾನೆ (೪) ಈ ಶ್ರೀ ಭೂ ದುರ್ಗಾದೇವಿಯರಿಗೆ ಹೆಚ್ಚು ಸಾಮರ್ಥ್ಯವಿದ್ದುದರಿಂದ ಇವರಿಗಿಂತ ಇನ್ನೊಬ್ಬನು ಸರ್ವೋತ್ತಮನಿಲ್ಲವೆಂದು ತಿಳಿದರೆ ಅತನನ್ನು ನೃಪಶುವನ್ನಾಗಿ ತಿಳಿಯುತ್ತಾರೆ (ಅಂದರೆ- ಶ್ರೀವಿಷ್ಣುವನ್ನು ಸರ್ವೋತ್ತಮನೆಂದು ತಿಳಿದವನೇ ಮುಕ್ತನಾಗುವ ಕಾರಣ ಅವನೇ ಜ್ಞಾನಿಯಾದ ಪುರುಷನು ಆದಕಾರಣ ಶ್ರೀ ಭೂ ದುರ್ಗಾದೇವಿಯರಿಗಿಂತ ಇನ್ನೊಬ್ಬನು ಸರ್ವೋತ್ತಮನಿಲ್ಲವೆಂದು ತಿಳಿದವನು ನೃಪಶುವು, ಆದುದರಿಂದ ಈ ಶ್ರೀ ಭೂ ದುರ್ಗಾದೇವಿಯರಿಗಿಂತ ಶ್ರೀವಿಷ್ಣುವು ಸದಾ ಅತ್ಯಧಿಕ ಗುಣಗಳುಳ್ಳವನೆಂದೇ ತಿಳಿಯಬೇಕು, ಎಂದು ಮಹಾವಿಷ್ಣುಪುರಾಣದಲ್ಲಿದೆ ॥ ೨ ॥

ಪೀ—ರಜಸಸ್ತು ಫಲಂ ದುಃಖಂ (ಶ್ಲೋ ೧೬) ಎಂಬುವಲ್ಲಿ ದುಃಖಶಬ್ದವು ಕೇವಲ ದುಃಖಾರ್ಥವು, ಎಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—

ತಾ ॥ (೧) ರಜಸಸ್ತು ಫಲಂ ದುಃಖಮಿತ್ಯತ್ರ ದುಃಖನಿತಿ ದುಃಖಮಿಶ್ರಂ ಸುಖಂ । ದುಃಖಂ ದುರಿತಿ ಸಂಪ್ರೋಕ್ತಂ ಖಂ ನಾಮ ಸುಖಮುಚ್ಯತ ಇತಿ ಶಬ್ದನಿರ್ಣಯೇ ॥ (೨) ಕರ್ಮಣೋ ರಾಜಸಸ್ಯೋಕ್ತಂ ದುಃಖಮಿಶ್ರಂ ಸುಖಂ ಫಲಂ । ಅಜ್ಞಾನಜಂ ತಾಮಸಸ್ಯ ನಿತ್ಯದುಃಖಂ ಫಲಂ ವಿದುರಿತಿ ಸ್ಕಾಂದೇ ॥ (೩) ಲೋಕಸ್ಥಿತಾನ್ರಕಾಶಾದೀನ್ ಪ್ರಾಯೋ ನ ದ್ವೇಷ್ಟಿ ನೇಚ್ಛತಿ ॥ (೪) ಸ್ವಯಂಪ್ರಕಾಶೇ ಮೋಹೋಜ್ಜ್ವಸ್ತಥಾಽಪಿ ಪುನರಿಚ್ಛತಿ । ವಿಷ್ಣೌ ಪ್ರಕಾಶಂ ತಂ ಚಾಪಿ (ಚೈವ) ನಿತ್ಯಭಕ್ತ್ಯಾಽಭಿಸೇವತೇ ॥ ೩ ॥

ಆ ॥ ರಜಸಸ್ತು ಫಲಂ ದುಃಖಂ ಎಂಬುನಲ್ಲಿದ್ದ ದುಃಖ ಶಬ್ದದಿಂದ ದುಃಖಮಿಶ್ರವಾದ ಸುಖವನ್ನು ಇಟ್ಟುಕೊಳ್ಳಬೇಕು (ಈ ಅರ್ಥವು ಹೇಗೆ ಸಿಗುವುದೆಂದರೆ—) **ದುಃ** ಎಂದರೆ ದುಃಖವು **ಖಂ** ಎಂದರೆ ಸುಖವು (ಏವಂಚ **ದುಃಖಂ** ಎಂದರೆ ದುಃಖಮಿಶ್ರ ಸುಖವ) ಎಂದು ಶಬ್ದನಿರ್ಣಯದಲ್ಲಿದೆ (೨) (ರಜೋಗುಣಕ್ಕೆ ದುಃಖಮಿಶ್ರ ಸುಖವ ಫಲವೆಂಬುವಲ್ಲಿ ಸ್ಮೃತಿಪ್ರಮಾಣವಿದ್ದುದರಿಂದ ಇಲ್ಲಿದ್ದ ದುಃಖ ಶಬ ವು ಕೇವಲ ದುಃಖವಾಚಕವಾಗುವುದಿಲವನು ತ್ತಾರೆ) ರಾಜಸಕರ್ಮಕ್ಕೆ ದುಃಖಮಿಶ್ರವಾದ ಸುಖವು ಫಲವ ತಾಮಸಕರ್ಮಕ್ಕೆ ಅಜ್ಞಾನದಿಂದ ಒಟ್ಟಾದ ನಿತ್ಯ ದುಃಖವು ಫಲವು ಎಂದು ತಿಳಿಯುತ್ತಾರೆ. ಹೀಗೆ ಸ್ಕಾಂದಪುರಾಣದಲ್ಲಿ ಹೇಳಿದೆ (ಇದರಿಂದ **ಅಜ್ಞಾನಂ ತಮಸಃ ಫಲಂ** ಎಂಬೀ ೧೬ನೇ ಶ್ಲೋಕವು ವಾ ಖ್ಯಾತವಾಯಿತು) (೩) (ಸತ್ವಾದಿಗುಣಗಳನ್ನು ದಾಟುವ ಉಪಾಯಾದಿಗಳು ಯಾವುವು ಎಂಬುವ ಪ್ರಶ್ನೆಗೆ ಪರಿಹಾರವನ್ನು **ಪ್ರಕಾಶಂ ಚ** (ಶ್ಲೋ ೨೨) ಎಂಬುವ ಶ್ಲೋಕದಿಂದ ಹೇಳುತ್ತಾರೆ ಆದರಲ್ಲಿ ತನ್ನಲ್ಲಿ ಪ್ರಕಾಶವನ್ನು ಇಚ್ಛಿಸುವುದಿಲ್ಲ, ತನ ಲ್ಲಿದ್ದ ಮೋಹವನ್ನು ದ್ವೇಷಿಸ ವುದಿಲ್ಲ ಹಾಗೆಯೇ **ಸಮ ದುಃಖಸುಖಃ** (ಶ್ಲೋ ೨೪) ಇತಾ ದಿಗಳಲ್ಲಿದ ದುಃಖಾದಿಗಳ ಸಾಮ್ಯವೆಂದರೆ ಸ್ಪೃಹಾದಿಗಳು ಇಲದಿರುವುದು ನಾತ, ಹಾಗೆಯೇ **ಸರ್ವಾರಂಭಪರಿತ್ಯಾಗೀ** (ಶ್ಲೋ ೨೫) ಎಂಬುವುದಕೆ, ಎಲ್ಲಾ ಕರ್ಮಗಳಲ್ಲಿಯೂ ಔದಾಸೀನ್ಯವು, ಎಂಬೀ ಅನರ್ಥಾ ಪ್ರತೀತಿಯನ್ನು ಹೋಗಲಾಡಿಸುವುದಕ್ಕಾಗಿ ಪ್ರಮಾಣಾಂತರದಿಂದ ಅದರ ಅರ್ಥವನು ಹೇಳುತ್ತಾರೆ) ಗುಣಾತೀತನು ಬೇರೆ ಪುರುಷರಲ್ಲಿರತಕ್ಕ ಸೂಕ್ಷ್ಮ ಸತ್ವಗುಣ ರಜೋಗುಣಗಳಿಂದುಂಟಾದ ಪ್ರಶಸ್ತ ಪ್ರಕಾಶ ಪ್ರವೃತ್ತಿಗಳನ್ನು ಪ್ರಾಯಶಃ ದ್ವೇಷಿಸುವುದಿಲ್ಲ (ಪ್ರಾರಬ್ಧ ಕರ್ಮಾನುಸಾರ ಕದಾಚಿತ್ ಅವುಗಳಲ್ಲಿ ದ್ವೇಷವೂ ಬರಬಹುದು) ಪುರುಷಾಂತರರಲ್ಲಿರತಕ್ಕ ಲೋಕ ವಿಷಯಕ ಪ್ರಕಾಶ ಪ್ರವೃತ್ತಿ ಮೋಹಗಳು ಸ್ಥೂಲಸತ್ವಾದಿಗುಣಗಳಿಂದುಂಟಾದುವಾಗಳು, ಅಸಮಿಾಚೀನ ಗಳು ಇಂತಹುಗಳನ್ನು ಸೂಕ್ಷ್ಮತಮೋಗುಣದಿಂದ ಹುಟ್ಟಿದ ಅತ್ಯಸಾಧ್ಯವಾದ ಭಗವದ್ವಿಷಯಕ ಮೋಹವನು ಪ್ರಾಯಶಃ ಇಚ್ಛಿಸುವುದಿಲ್ಲ (ಪ್ರಾರಬ್ಧಕರ್ಮಾನುಸಾರ ಕದಾಚಿತ್ ಅವುಗಳ ಇಚ್ಛೆಯು ಬರಬಹುದು) (೪) (ಗುಣಾತೀತನು ಭಗವದ್ವಿಷಯದಲ್ಲಿ ಸೂಕ್ಷ್ಮ ಸತ್ವ ರಜೋಗುಣಗಳಿಂದುಂಟಾದ ಪ್ರಕಾಶಪ್ರವೃತ್ತಿಗಳನ್ನು ಹೊಂದಿರುವುದರಿಂದಲೇ ಮೋಹವಿಲ್ಲದವನಾದುದರಿಂದ ತನ್ನಲ್ಲಿಯೇ ಅವುಗಳ ಇಚ್ಛಾದಿಗಳು ಇಲ್ಲವೆಂದು ಏಕೆ ಆಗಲಾರದೆಂದರೆ—) ಯದ್ಯಪಿ ಗುಣಾತೀತನಿಗೆ ತನ್ನಲ್ಲಿ ಸೂಕ್ಷ್ಮ ಸತ್ವ ಗುಣದಿಂದುಂಟಾದ ಭಗವದ್ವಿಷಯಕ ಪ್ರಕಾಶವಿದೆ ಸೂಕ್ಷ್ಮ ಸ್ಥೂಲ ತಮೋಗುಣಗಳಿಂದುಂಟಾದ ಪರಮಾತ್ಮ, ಲೋಕವಿಷಯಕ ಮೋಹವೂ ಇಲ್ಲ ಆದರೂ ಪುನಃ ಏಷ್ಟು ವಿಷಯಕ ಜ್ಞಾನವನ್ನು ಇಚ್ಛಿಸುತ್ತಾನೆ. ತಿರುಗಿ ಮೋಹವು ಉಂಟಾಗಬಾರದೆಂಬುವುದಕ್ಕಾಗಿ ಮೋಹವನ್ನು ದ್ವೇಷಿಸುತ್ತಾನೆ ಆ ಪ್ರೀ

ಪರಮಾತ್ಮನನ್ನು ನಿತ್ಯದಲ್ಲಿಯೂ ಮಹಾ ಭಕ್ತಿಯಿಂದ ಸೇವಿಸುತ್ತಾ ಇರುತ್ತಾನೆ (ತಂ ಚಾಪಿ (ತಂ ಜೈವ) ಎಂಬುವುದರಿಂದ ಮಾಂ ಚ ಯೋಽವ್ಯಭಿಚಾರೇಣ (೨೬) ಶ್ಲೋಕವು ವ್ಯಾಖ್ಯಾತವಾಯಿತು) ॥ ೩ ॥

ಪೀ— ಸಮದುಃಖಸುಖಃ (ಶ್ಲೋ ೨೪) ಎಂಬುದರ ಅಭಿಪ್ರಾಯವನ್ನು ಹೇಳುತ್ತಾರೆ—

ತಾ ॥ (೧) ಸುಖದುಃಖಾದಿಭಾವೇಽಪಿ ವಿಷ್ಣುಭಕ್ತೌ ಸಮಃ ಸದಾ । ಅರ್ಥಾರ್ಥಂ ವಾ ಪ್ರಿಯಾರ್ಥಂ ವಾ ನಿಂದಾದೀನಾಂ ಭಯಾದಪಿ । ನ ವಿಷ್ಣುಭಕ್ತಿಹ್ರಾಸೋಽಸ್ಯ ಕಿಂತು ಸಾಮ್ಯಮಥೋನ್ನತಿಃ ॥ (೨) ಅನೈಷ್ಣವಾರಂಭವರ್ಜೀ ವಿಷ್ಣುಂ ಯಾತಿ ನ ಸಂಶಯ ಇತಿ ಚ ॥ (೩) ಉದಾಸೀನವದಿತ್ಯುಕ್ತೇಶ್ಚ ನ ಕೇವಲೋದಾಸೀನತ್ವಂ । ನೇಂಗತ ಇತ್ಯುದಾಸೀನ(ಪ್ರ)ವೃತ್ತಿನಿಷೇಧಃ । (೪) ಸರ್ವಾರಂಭಪರಿತ್ಯಾಗೀತಿ ವಿಶೇಷಪ್ರಯೋಜನಾಪೇಕ್ಷಯಾಽಪಿ ನಾನೈಷ್ಣವಾರಂಭ ಇತಿ ॥ (೫) ಇಂಗನಂ ಕ್ಷಣಿಕಂ ಕರ್ಮ ದೀರ್ಘಮಾರಂಭ ಉಚ್ಯತ ಇತಿ ಶಬ್ದನಿರ್ಣಯೇ ॥ ೪ ॥

ಅ ॥ (೧) ವಿಷ್ಣುಭಕ್ತಿಯನ್ನು ಬಿಟ್ಟರೆ ಸುಖವು ಲಭಿಸುವುದಾದರೂ, ವಿಷ್ಣುಭಕ್ತಿಯನ್ನು ಮಾಡಿದರೆ ದುಃಖವುಂಟಾಗುವುದಾದರೂ ವಿಷ್ಣುವಿನಲ್ಲಿ ಭಕ್ತಿಯನ್ನು ಬಿಟ್ಟರೆ ಬಂಗಾರು ಮೊದಲಾದ ಅರ್ಥವು ಪತ್ನೀ ಮೊದಲಾದ ಪ್ರಿಯವಸ್ತು ವೂ, ಇವನು ಶ್ರೇಷ್ಠನೆಂಬುವ ಸ್ತುತಿಯೂ, ಮಾನವೂ, ಮಿತ್ರರು ಮಾಡ ತಕ್ಕ ಸ್ನೇಹವೂ, ಇವುಗಳು ಲಭಿಸುವುದಾದರೂ, ವಿಷ್ಣುಭಕ್ತಿಯನ್ನು ಮಾಡಿದರೆ ಅರ್ಥ ಹಾನಿಯೂ, ಪ್ರಿಯ ವಸ್ತುವಿನ ನಾಶವೂ, ನಿಂದಾ ಅವಮಾನಾದಿ ಪ್ರಯುಕ್ತ ಭಯಗಳು ಪ್ರಾಪ್ತಗಳಾದರೂ ಈ ಗುಣಾತೀತನಿಗೆ ವಿಷ್ಣುಭಕ್ತಿಯ ಹ್ರಾಸವಾಗುವುದಿಲ್ಲ ಮತ್ತೆ ವಿಷ್ಣುಭಕ್ತಿಯು ಸಮವಾಗಿಯೇ ಇರುತ್ತದೆ ಏಕಪ್ರಕಾರವಾಗಿಯೇ ಇರುತ್ತದೆ ಆದಕಾರಣ ಸುಖ ದುಃಖಾದಿಗಳು ಇದ್ದರೂ ವಿಷ್ಣುಭಕ್ತಿಯಲ್ಲಿ ಸಾಮ್ಯವಿದ್ದುದರಿಂದ ಪುನಃ ಭಕ್ತಿಗೆ ಅಧಿಕ್ಯವೇ ಬರುವುದು (ಇದರಿಂದ **ಸಮಲೋಷ್ಟಾಶ್ಮಕಾಂಚನಃ** (ಶ್ಲೋ. ೨೪) ಎಂಬುವುದು ವ್ಯಾಖ್ಯಾತವಾಯಿತು) (೨) ಶ್ರೀವಿಷ್ಣುವಿಗೆ ಪ್ರೀತಿಕರಗಳಾಗದ **ಕರ್ಮ** ಗಳನ್ನು ಬಿಟ್ಟವನು ಶ್ರೀವಿಷ್ಣುವನ್ನು ಹೊಂದುತ್ತಾನೆ ಸಂದೇಹವಿಲ್ಲ, ಎಂದೂ ಹೇಳಿದೆ **(1) ಅನೈಷ್ಣವ** ಎಂಬುವುದರಿಂದ ಸರ್ವಾರಂಭಪರಿತ್ಯಾಗೀ (ಶ್ಲೋ ೨೫) ಎಂಬುವುದು ವ್ಯಾಖ್ಯಾತವಾಯಿತು (2) **ವಿಷ್ಣುಂ ಯಾತಿ** ಎಂಬುವುದರಿಂದ **ಸಗುಣಾನ್ ಸಮತೀತ್ಯ** (ಶ್ಲೋ ೨೪) ಎಂಬುವುದು ವ್ಯಾಖ್ಯಾತವಾಯಿತು (೩) (**ಸರ್ವಾರಂಭಪರಿತ್ಯಾಗೀ** (ಶ್ಲೋ ೨೫) ಎಂಬುವುದರಿಂದ ಸರ್ವತ್ರ ವಿಷ್ಣುಪೂಜಾದಿಗಳಲ್ಲಿಯೂ ಉದಾಸೀನತ್ವವೂ ಹೇಳಲ್ಪಡುವುದಿಲ್ಲ ಏಕೆಂದರೆ **ಉದಾಸೀನವತ್** ಎಂದು ೨೩ನೇ ಶ್ಲೋಕದಲ್ಲಿ ಉದಾಸೀನತ್ವವು ಇಲ್ಲವೆಂದು ಹೇಳಿದೆ. ಇಲ್ಲವಾದರೆ **ಉದಾಸೀನ ವಿವ** ಎಂದು ಹೇಳುತ್ತಿದ್ದರು (**ನೇಂಗತೇ** (ಶ್ಲೋ ೨೩) ಎಂದು ಪೂರ್ವವಾಕ್ಯದಲ್ಲಿ ಕರ್ಮವಿಲ್ಲವೆಂದು ಹೇಳಿದ್ರಿಂದ ವಿಷ್ಣುಪೂಜಾದಿಗಳಲ್ಲಿ ಉದಾಸೀನತ್ವವಿಲ್ಲವೆಂದದ್ದು ಹೇಗೆಂದರೆ –) **ನೇಂಗತೇ** ಎಂಬುವುದರಿಂದ ಯಾವ ಪ್ರವೃತ್ತಿಯೂ ಇಲ್ಲವೆಂದಲ್ಲ ಮತ್ತೆ ಪರಮಾತ್ಮನನ್ನು ಬಿಟ್ಟು ಇದ್ದುದು, ಅಂದರೆ ವಿಷ್ಣುವಿಗೆ ಪ್ರೀತಿಕರಗಳಾಗದ ಕರ್ಮಗಳಿಗೆ ನಿಷೇಧವನ್ನು **ನೇಂಗತೇ** ಎಂಬುವುದರಿಂದ ಮಾಡಿದ್ದು (೪) **ನೇಂಗತೇ** ಎಂಬುವುದರಿಂದಲೇ ಅನೈಷ್ಣವ ಕರ್ಮಗಳನ್ನು ಮಾಡಬಾರದೆಂದು ಹೇಳಿದ್ರಿಂದ ತಿರುಗಿ **ಸರ್ವಾರಂಭಪರಿತ್ಯಾಗೀ** ಎಂದದ್ದು ಆಯುಕ್ತವೆಂದರೆ—) **ಸರ್ವಾರಂಭಪರಿತ್ಯಾಗೀ** ಎಂಬುವುದಕ್ಕೆ ವಿಶೇಷ ಪ್ರಯೋಜನವನ್ನು ಅಪೇಕ್ಷಿಸಿಯೂ ಅನೈಷ್ಣವಕರ್ಮಗಳನ್ನು ಪ್ರಾರಂಭಿಸುವುದಿಲ್ಲವೆಂದು ಹೇಳುತ್ತದೆ (೫) (**ನೇಂಗತೇ**

ಎಂಬುವುದರಿಂದ ಅಲ್ಪವಾಗಿಯೂ ಅವೈಷ್ಣವ ಕರ್ಮದಲ್ಲಿ ಪ್ರವೃತ್ತಿ ಮಾಡಬಾರದೆಂದೂ **ಸರ್ವಾರಂಭ ಪರಿತ್ಯಾಗೀ** ಎಂಬುವುದರಿಂದ ದೀರ್ಘವಾದ ಅವೈಷ್ಣವ ಕರ್ಮದಲ್ಲಿ ಪ್ರವೃತ್ತಿ ಮಾಡಬಾರದೆಂದೂ ಹೇಳಲ್ಪಡುತ್ತದೆ, ಎಂಬುವ ಅಭಿಪ್ರಾಯದಿಂದ **ಇಂಗನೆ** ಶಬ್ದಕ್ಕೆ ಅಲ್ಪಕರ್ಮವೆಂದರ್ಥವು. ಆರಂಭ ಶಬ್ದಕ್ಕೆ ಮಹತ್ಕರ್ಮವೆಂದರ್ಥವು. ಎಂಬುವಲ್ಲಿ ಪ್ರಮಾಣವನ್ನು ಹೇಳುತ್ತಾರೆ—) ಇಂಗನ ಶಬ್ದದಿಂದ ಕ್ಷಣಿಕ ಕರ್ಮವೂ ಆರಂಭ ಶಬ್ದದಿಂದ ದೀರ್ಘಕರ್ಮವೂ ಹೇಳಲ್ಪಡುತ್ತವೆ, ಎಂದು ಶಬ್ದ ನಿರ್ಣಯದಲ್ಲಿದೆ ॥ ೪ ॥

ಪೀ— ಸ ಗುಣಾನ್ ಸಮತೀತ್ಯೈತಾನ್ (ಶ್ಲೋ ೨೬) ಎಂಬುವಲ್ಲಿ ಗುಣಶಬ್ದದಿಂದ ಶ್ರೀ ಭೂ ದುರ್ಗಾದೇವಿಯರು ವಿವಕ್ಷಿತರಾದುದರಿಂದ ಅವರ ಅತಿಕ್ರಮವನ್ನು ಹೇಗೆ ಹೇಳುವುದು ಎಂದರೆ—

ತಾ ॥ (೧) ಲಕ್ಷ್ಮ್ಯಾದಿಭಿಃ ಕೃತೋ ಬಂಧೋ ಯೋಽನಾದಿಃ ಪುರುಷಸ್ಯ ತು । ತಮತ್ಯೇತೀಹ ಯೋ ವಿದ್ವಾನ್ಸ ವಿಜ್ಞೇಯೋ ಗುಣಾತ್ಯಯೀತಿ ಚ ಪ್ರವೃತ್ತೇ ॥ (೨) ತತ್ಪ್ರತಿಬಂಧಾತ್ಯಯಾತ್ತದಧಿಕವಿಷ್ಣು ಪ್ರಾಪ್ತೇಶ್ಚ ತದತ್ಯಯೀತ್ಯುಚ್ಯತೇ ॥ (೩) ಯಥಾ ದ್ವಾರಪಾಲಮತೀತ್ಯ ರಾಜಾನಂ ಗಚ್ಛತೀತಿ ॥ (೪) ಬ್ರಹ್ಮಣಿ ಭೂಯಂ ಬ್ರಹ್ಮಭೂಯಂ । ಬ್ರಹ್ಮೇತಿ ಪ್ರಕೃತಾ ಮಹಾಲಕ್ಷ್ಮ್ಯೀಃ ॥ (೫) ಅತೀತ್ಯ ತ್ರೀಣಿ ರೂಪಾಣಿ ಮಹಾಲಕ್ಷ್ಮೀಂ ಪ್ರಪದ್ಯತೇ । ತಯಾ ತ್ವನುಗೃಹೀತೋಽಸೌ ವೈಷ್ಣವೋ ವಿಷ್ಣುಗೋ ಭವೇತ್।
ಇತಿ ಚ ॥ ೫ ॥

ಅ ॥ (೧) ಜೀವರಿಗೆ ಶ್ರೀ ಭೂ ದುರ್ಗಾದೇವಿಯರಿಂದ ಮಾಡಲ್ಪಟ್ಟದ್ದು ಯಾವುದು ಅನಾದಿಯಾದ ಬಂಧವಿದೆಯೋ, ಅದನ್ನು ಯಾವ ಜ್ಞಾನಿಯು ಅತಿಕ್ರಮಿಸುತ್ತಾನೋ, ಅವನು **ಗುಣಾತ್ಯಯಿ** ಎನಿಸುತ್ತಾನೆ ಲಕ್ಷ್ಮ್ಯಾದಿಗಳ ಅತಿಕ್ರಮವು ವಿವಕ್ಷಿತವಲ್ಲ, ಎಂದು ಪ್ರವೃತ್ತವೆಂಬುವ ಗ್ರಂಥದಲ್ಲಿ ಹೇಳಿದೆ (೨) (ಸ್ಮೃತಿಯಲ್ಲಿ ಹೇಳಿದ ಅರ್ಥವನ್ನು ಹೇಳುತ್ತಾ ಬೇರೆ ಅರ್ಥವನ್ನು ಹೇಳುತ್ತಾರೆ—) ಆ ಲಕ್ಷ್ಮ್ಯಾದಿಗಳು ಮಾಡಿದ ಸಂಸಾರಬಂಧವನ್ನು ಅತಿಕ್ರಮಿಸಿರುವುದರಿಂದಲೂ ಆ ಮೂವರಿಗಿಂತಲೂ ಅತ್ಯುತ್ತಮವಾದ ಶ್ರೀವಿಷ್ಣುವನ್ನು ಹೊಂದಿರುವುದರಿಂದಲೂ ಗುಣಾತ್ಯಯಿ (ಗುಣಾತೀತ)ನೆನಿಸುತ್ತಾನೆ (೩) (ತದತ್ಯಯ ವೆಂದರೆ—ಸತ್ವ, ರಜಸ್ತಮೋಗುಣಗಳ ಸಂಬಂಧಾತಿಕ್ರಮ, ಮತ್ತು ಆ ಗುಣಾಭಿಮಾನಿಯರಿಗಿಂತಲೂ ಉತ್ತಮನಾದ ಶ್ರೀವಿಷ್ಣುವಿನ ಪ್ರಾಪ್ತಿಯು ಎಂಬೀ ಎರಡರ್ಥದಲ್ಲಿ ಪ್ರಯೋಗವನ್ನು ತೋರಿಸುತ್ತಾರೆ—) **ದ್ವಾರಪಾಲಮತೀತ್ಯ ರಾಜಾನಂ ಗಚ್ಛತಿ** ಎಂಬೀ ವಾಕ್ಯದಲ್ಲಿ ಹೇಗೆ ದ್ವಾರಪಾಲಕನು ಕಾಯತಕ್ಕ ಬಾಗಲನ್ನು ದಾಟಿ ರಾಜನನ್ನು ಹೊಂದುವವನು ದ್ವಾರಪಾಲಕನನ್ನು ಅತಿಕ್ರಮಿಸಿ ರಾಜನನ್ನು ಹೊಂದುತ್ತಾನೆಂದು ಹೇಳಲ್ಪಡುತ್ತಾನೋ, ಹೇಗೆ ಯಾವನು ರಾಜನನ್ನು ಹೊಂದುತ್ತಾನೋ ಆತನು ದ್ವಾರಪಾಲಕನನ್ನು ದಾಟಿ ಹೋಗುತ್ತಾನೆ ಎನ್ನಿಸುತ್ತಾನೋ, ಹಾಗೆಯೇ ಸತ್ವಾದಿಗುಣಗಳಿಗೆ ಅಭಿಮಾನಿನಿಯರಾದ ಶ್ರೀ ಭೂ ದುರ್ಗಾದೇವಿಯರಿಂದ ಮಾಡಲ್ಪಟ್ಟ ಬಂಧವನ್ನು ಕಳೆದುಕೊಂಡು ಶ್ರೀಪರವಾತ್ಮನನ್ನು ಹೊಂದುವವನು **ಗುಣಾತೀತ**ನೆನಿಸುತ್ತಾನೆ (೪) (**ಬ್ರಹ್ಮಭೂಯಾಯ** (ಶ್ಲೋ ೨೬) ಎಂಬುವುದಕ್ಕೆ ಬ್ರಹ್ಮತ್ವವನ್ನು ಹೊಂದುವುದಕ್ಕಾಗಿ ಎಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುವುದಕ್ಕಾಗಿ ಹೇಳುತ್ತಾರೆ—) **ಚಿತ್ಪ್ರಕೃತಿ**ಯಲ್ಲಿ ಇರುವುದು ಅಂದರೆ ಚಿತ್ಪ್ರಕೃತಿಯಾದ ಲಕ್ಷ್ಮೀದೇವಿಯನ್ನು ಹೊಂದುವುದು (ಇಲ್ಲಿದ್ದ ಬ್ರಹ್ಮಶಬ್ದದಿಂದ ಶ್ರೀಪರವಾತ್ಮನನ್ನು ಇಟ್ಟುಕೊಳ್ಳಬೇಕೆಂಬುವ ಅನ್ಯಥಾಪ್ರತೀತಿಯನ್ನು ಹೋಗಲಾಡಿಸುತ್ತಾರೆ—) **ಮಮ ಯೋನಿರ್ಮಹದ್ಬ್ರಹ್ಮ** ಎಂದು ಮೂಲರೂಪಳಾದ ಪ್ರಕೃತಿ ಎನಿಸಿದ ಮಹಾಲಕ್ಷ್ಮೀದೇವಿಯೇ ಬ್ರಹ್ಮಶಬ್ದದಿಂದ ಪ್ರಸ್ತುತಳಾಗಿರುವುದರಿಂದ ಇಲ್ಲಿಯೂ ಮಹಾಲಕ್ಷ್ಮೀ

ದೇವಿಯೇ ಹೇಳಲ್ಪಡುತ್ತಾಳೆ. (೫) (ಪ್ರಮಾಣಾಂತರದಿಂದಲೂ ಈ ಅರ್ಥವನ್ನೇ ಸಾಧಿಸುತ್ತಾರೆ.) ವಿಷ್ಣುಭಕ್ತನು ಮಹಾ ಲಕ್ಷ್ಮೀದೇವಿಯ ಮೂರು ರೂಪಗಳನ್ನು (ಅಂದರೆ—ಸತ್ವ ರಜಸ್ತಮೋಗುಣಗಳಿಗೆ ಅಭಿಮಾನಿನಿಯರಾದ ಶ್ರೀ ಭೂ ದುರ್ಗಾದೇವಿಯರಿಂದ ಅಭಿಮನ್ಯಮಾನಗಳಾದ ಮೂರು ಗುಣಗಳನ್ನು) ಅತಿಕ್ರಮಿಸಿ ಮಹಾ ಲಕ್ಷ್ಮೀದೇವಿಯನ್ನು ಹೊಂದುತ್ತಾನೆ ಮೂಲರೂಪಿಯಾದ ಪ್ರಕೃತಿ ಎನಿಸಿದ ಮಹಾ ಲಕ್ಷ್ಮೀದೇವಿಯಿಂದ ಅನುಗೃಹೀತನಾಗಿ ಶ್ರೀವಿಷ್ಣುವನ್ನು (ಮೋಕ್ಷವನ್ನು) ಹೊಂದುತ್ತಾನೆ ॥ ೫ ॥

ಪೀ—ಗುಣಾತೀತನಿಗೆ ಭಗವಂತನ ಪ್ರಾಪ್ತ್ಯಾದಿಗಳನ್ನೇ ಹೇಳಬೇಕು ಲಕ್ಷ್ಮೀಪ್ರಾಪ್ತಿಯಾಗುತ್ತದೆಂದು ಹೇಳಿದ್ದು ಏಕೆ ಎಂದರೆ—

ತಾ ॥ (೧) ಬ್ರಹ್ಮಪ್ರಾಪ್ತೋ ಮತ್ಪ್ರಾಪ್ತ ಏವ ಭವತೀತ್ಯಾಹ । ಬ್ರಹ್ಮಣೋ ಹೀತಿ ॥ (೨) ಮದವಿಯೋಗಾತ್ತಸ್ಯಾ ಅಪಿ ಮತ್ಸ್ಥ ಏವ ಭವತೀತ್ಯರ್ಥಃ ॥ (೩) ತಥಾಪಿ ಮತ್ಪ್ರಾಪ್ತಿ ಕ್ರಮವಿವಕ್ಷಯಾ ತದುಕ್ತಿಃ॥ (೪) ಏಕಾಂತಿಕಸ್ಯ ಸುಖಸ್ಯ ಮೋಕ್ಷಸ್ಯ ॥೬॥ ॥೪-೨೬॥

ಅ ॥ (೧) ಲಕ್ಷ್ಮೀದೇವಿಯನ್ನು ಹೊಂದಿದವನು ನನ್ನನ್ನೇ ಹೊಂದುತ್ತಾನೆಂದು ಬ್ರಹ್ಮಣೋ ಹಿ ಎಂಬುವ ಶ್ಲೋಕದಿಂದ ಹೇಳುತ್ತಾರೆ (೨) (ಇಲ್ಲಿ ಲಕ್ಷ್ಮೀದೇವಿಯು ಶ್ರೀಪರಮಾತ್ಮನನ್ನು ಆಶ್ರಯಿಸಿಕೊಂಡೇ ಇರುತ್ತಾಳೆಂದೇ ಹೇಳುತ್ತದೆ ಲಕ್ಷ್ಮೀಪ್ರಾಪ್ತಿಯಿಂದ ಭಗವಂತನ ಪ್ರಾಪ್ತಿಯು ಹೇಳಲ್ಪಡುವುದಿಲ್ಲ ಎಂದರೆ—) ಲಕ್ಷ್ಮೀದೇವಿಗೆ ನನ್ನಿಂದ (ಶ್ರೀಪರಮಾತ್ಮನಿಂದ) ವಿಯೋಗವು ಇಲ್ಲದಿರುವುದರಿಂದ ಗುಣಾತೀತನು ಲಕ್ಷ್ಮೀದೇವಿಯಲ್ಲಿದ್ದರೆ ನನ್ನಲ್ಲಿ (ಶ್ರೀಪರಮಾತ್ಮನಲ್ಲಿ) ಇದ್ದಾನೆಂದೇ ಆಗುತ್ತದೆ (೩) (ಲಕ್ಷ್ಮೀನಾರಾಯಣರಿಗೆ ವಿಯೋಗವು ಇಲ್ಲವೆಂದಾದರೆ ಗುಣಾತೀತನು ನನ್ನನ್ನು ಹೊಂದುತ್ತಾನೆಂದೇ ಹೇಳಬೇಕಿತ್ತು. ಲಕ್ಷ್ಮೀಪ್ರಾಪ್ತಿಯಾಗಿ ಭಗವಂತನ ಪ್ರಾಪ್ತಿಯಾಗುತ್ತದೆಂದು ಕ್ರಮವನ್ನು ಏಕೆ ಹೇಳಿದ್ದೆಂದರೆ) (ಯದ್ಯಪಿ ಲಕ್ಷ್ಮೀನಾರಾಯಣರಿಗೆ ವಿಯೋಗವು ಸರ್ವಥಾ ಇಲ್ಲವೇ ಇಲ್ಲ.) ಆದರೂ ಲಕ್ಷ್ಮೀದೇವಿಯ ಸಮಿಪವನ್ನು ಹೊಂದಿ ಲಕ್ಷ್ಮೀದೇವಿಯನ್ನು ಪ್ರವೇಶಿಸಿ ತದ್ದ್ವಾರಾ ಲಕ್ಷ್ಮೀದೇವಿಯ ಅನುಜ್ಞೆಯಿಂದ ಶ್ರೀಪರಮಾತ್ಮನ ಪ್ರಾಪ್ತಿಯಾಗುತ್ತದೆ, ಎಂಬುವ ಅಭಿಪ್ರಾಯದಿಂದ ಈ ಕ್ರಮವನ್ನು ಇಟ್ಟುಕೊಂಡು ಪರಂಪರೆ ಹೇಳಿದ್ದು ಯುಕ್ತವು (೪) (**ಸುಖಸ್ಯೈಕಾಂತಿಕಸ್ಯ** ಎಂಬುದರ ಅರ್ಥವನ್ನು ಹೇಳುತ್ತಾರೆ-) ಇದಕ್ಕಿಂತ ಇದು ಶ್ರೇಷ್ಠವೆಂದು ಗಣನೆಮಾಡುವಾಗ ಎಲ್ಲವುಗಳಿಂದಲೂ ಕೊನೆಗೆ ಇರತಕ್ಕುದು. ಇಂತಹ ದುಃಖಮಿಶ್ರವಾಗದಿರುವ, ಜ್ಞಾನಕರ್ಮಗಳಿಂದ ಅಭಿವ್ಯಕ್ತವಾಗುವ ಅನುಭವಿಸಲ್ಪಡತಕ್ಕ ಪರಮಾನಂದ ಸ್ವರೂಪವಾದ ಮೋಕ್ಷಕ್ಕೂ ಎಂದರ್ಥವು ॥ ೬ ॥ ॥ ೪—೨೬ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಗವದ್ಗೀತಾ ತಾತ್ಪರ್ಯನಿರ್ಣಯೇ ಚತುರ್ದಶೋಽಧ್ಯಾಯಃ ॥ ೧೪ ॥

ಅ ॥ ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಭಗವದ್ಗೀತಾ ತಾತ್ಪರ್ಯನಿರ್ಣಯದಲ್ಲಿ ಹದಿನಾಲ್ಕನೇ ಅಧ್ಯಾಯವು ಮುಗಿಯಿತು ॥ ೧೪ ॥

ಶ್ರೀಮಾಧ್ವಭಾಷ್ಯತಾತ್ಪರ್ಯಭಾವಾನುಸರಣಾದೃತಃ ।
ಶ್ರೀಕೃಷ್ಣಭಗವದ್ಗೀತಾಕರ್ಣಾಟವಿವೃತೇಶ್ಶುಭಃ ॥
ಪೂರ್ಣೋ ದ್ವಿತೀಯಭಾಗೋಽಯಂ ಹರೇರ್ಮಧ್ವಗುರೋರ್ಮುದೇ ।
ತಂತ್ರಿನಾರಾಯಣಾಖ್ಯೇನ ಧರಣ್ಯಾ ರಚಿತೋ ಲಸೇತ್ ॥

॥ ಶ್ರೀಕೃಷ್ಣಾರ್ಪಣಮಸ್ತು ॥